ಶಿಕ್ಷಣ ತರಬೇತಿ ಕಲೆ

✍ ಅಫ್ಜಲ್ ಹುಸೈನ್ M.A., L.T.

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

'ಶಿಕ್ಷಣ-ತರಬೇತಿ ಕಲೆ' ಎಂಬ ಈ ಗ್ರಂಥವು ಖ್ಯಾತ ಶಿಕ್ಷಣ ತಜ್ಞರಾಗಿದ್ದ ದಿ|ಮೌಲಾನಾ ಅಫ್ಜಲ್ ಹುಸೈನ್ ಸಾಹೇಬರ 'ಫನ್-ಎ-ತಅ್‌ಲೀಮ್ ವ ತರ್ಬಿಯತ್' ಎಂಬ ಉರ್ದು ಗ್ರಂಥದ ಕನ್ನಡಾನುವಾದವಾಗಿದೆ. ಶಿಕ್ಷಣ ರಂಗದಲ್ಲಿ ಅಪಾರ ಅನುಭವವನ್ನು ಪಡೆದಿದ್ದ ಗ್ರಂಥಕರ್ತರು ಶಾಲಾ-ಕಾಲೇಜುಗಳ ಅಧ್ಯಾಪಕರು-ಉಪನ್ಯಾಸಕರುಗಳಿಗೆ ಅತ್ಯುತ್ತಮ ಮಾರ್ಗದರ್ಶನವನ್ನು ಈ ಕೃತಿಯ ಮೂಲಕ ನೀಡಿದ್ದಾರೆ. ಇದು ಅವರ ಮಹಾಸಾಧನೆ(Master piece) ಎನ್ನಬಹುದು.

ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಣದ ಮಧ್ಯೆ ಅಭೇದ್ಯ ಸಂಬಂಧವಿದೆ. ಅಧ್ಯಾಪಕನ ನೆರವಿಲ್ಲದೆ ಶಿಕ್ಷಣ ಗಳಿಸುವುದು ವಿದ್ಯಾರ್ಥಿಗೆ ಸಾಧ್ಯವಿಲ್ಲ, ಸ್ವ ಪ್ರಯತ್ನದಿಂದ ಶಿಕ್ಷಣ ಗಳಿಸಲಾಗದು. ಆದಕ್ಕೂ ಯಾವುದಾದರೂ ರೀತಿ ಮಾರ್ಗದರ್ಶನ ಬೇಕು. ಇಂದು ಶಿಕ್ಷಣಕ್ಕೆ ಸಹಾಯಕವಾಗಬಲ್ಲ ಅನೇಕ ಕೈಪಿಡಿಗಳು (Guides) ಮಾರುಕಟ್ಟೆಯಲ್ಲಿ ಸಿಗುತ್ತದೆ, ವಿದ್ಯೆಯು ಮಾನವನ ಬುದ್ಧಿಯನ್ನು ವಿಕಾಸಗೊಳಿಸುತ್ತದೆ. ಜೀವನರಂಗದಲ್ಲಿ ಹೋರಾಡಲು ಅವನಿಗೆ ನೆರವಾಗುತ್ತದೆ. ಅವನ ಚಾರಿತ್ರ್ಯದ ಮೇಲೆ ಅದು ಪ್ರಭಾವ ಬೀರುತ್ತದೆ. ಆದ್ದರಿಂದ ಚಾರಿತ್ರ್ಯವನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಶಿಕ್ಷಣದ ಪಾತ್ರ ಬಹಳ ಮಹತ್ವಪೂರ್ಣವಾಗಿದೆ.

ಈ ನಿಟ್ಟಿನಲ್ಲಿ ಅಧ್ಯಾಪಕನ ಪಾತ್ರವು ಈ ರಂಗದಲ್ಲಿ ಬಹು ಮುಖ್ಯವಾಗಿದೆ. ವಿದ್ಯಾರ್ಥಿಗಳ ಶಿಕ್ಷಣ-ತರಬೇತಿಯಲ್ಲಿ ಅಧ್ಯಾಪಕನ ವ್ಯಕ್ತಿತ್ವ ಮತ್ತು ಗುಣ ವಿಶೇಷಗಳು ಬಹಳ ಮಹತ್ವದ್ದಾಗಿದೆ. ವಿದ್ಯಾರ್ಥಿಗಳು ಅಧ್ಯಾಪಕನಿಂದ ತಿಳಿದೋ ತಿಳಿಯದೆಯೋ ಪ್ರಭಾವಿತರಾಗುತ್ತಾರೆ. ಅದನ್ನು ಜೀವಮಾನದಲ್ಲಿಡೀ ಅವರು ಅಳವಡಿಸಿಕೊಳ್ಳುತ್ತಾರೆ. ಅಧ್ಯಾಪಕರು ನುಡಿದಂತೆ ನಡೆವ ಸ್ವಭಾವದವರಾದರೆ ವಿದ್ಯಾರ್ಥಿಗಳೂ ಹಾಗೇ ಆಗುತ್ತಾರೆ. ಇದು ಒಟ್ಟು ಸಮಾಜಕ್ಕೆ ಪ್ರಯೋಜನಕಾರಿಯಾಗುತ್ತದೆ. ಆದ್ದರಿಂದ ಅಧ್ಯಾಪಕರ ಒಳ-ಹೊರಗುಗಳು ಒಂದೇ ರೀತಿಯಲ್ಲಿ ನಿಷ್ಕಳಂಕವಾಗಿರಬೇಕಾದುದು ಅಗತ್ಯ.

ಅಧ್ಯಾಪಕರು ವಿದ್ಯಾರ್ಥಿಗಳನ್ನು ಯಾವ ರೀತಿಯಲ್ಲಿ ನೋಡಿಕೊಳ್ಳಬೇಕು. ಪಾಠ ಮಾಡುವಾಗ ಯಾವ ಅಂಶಗಳ ಕಡೆಗೆ ಗಮನ ಹರಿಸಬೇಕು. ವಿದ್ಯಾರ್ಥಿಗಳನ್ನು ಹೇಗೆ ನಿಯಂತ್ರಿಸಿಕೊಳ್ಳಬೇಕು ಎಂಬಿತ್ಯಾದಿ ವಿಷಯಗಳಲ್ಲಿ ಸೂಕ್ತ ಮಾರ್ಗದರ್ಶನ ಈ ಗ್ರಂಥದಲ್ಲಿದೆ.

ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪೀಕರಣದಲ್ಲಿ ಮಕ್ಕಳ ಹೆತ್ತವರಿಗೂ ಜವಾಬ್ದಾರಿಯಿದೆ. ಅದರಲ್ಲಿ ಅವರ ಪಾತ್ರವೂ ಮುಖ್ಯವಾಗಿದೆ. ಹೆತ್ತವರು ತಮ್ಮ ಮಕ್ಕಳನ್ನು ಅಧ್ಯಾಪಕರಿಗೆ ವಹಿಸಿಕೊಟ್ಟ ಮಾತ್ರಕ್ಕೆ ಅವರ ಕರ್ತವ್ಯ ಮುಗಿಯುವುದಿಲ್ಲ, ಆದ್ದರಿಂದ ಹೆತ್ತವರಿಗೂ ಈ ಗ್ರಂಥದಲ್ಲಿ ಮಾರ್ಗದರ್ಶನ ಮಾಡಲಾಗಿದೆ.

ಮಕ್ಕಳು ಮತ್ತು ಹೆತ್ತವರ ಪರಸ್ಪರ ಸಂಬಂಧ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಂಬಂಧ ಹಾಗೂ ಹೆತ್ತವರು ಮತ್ತು ಅಧ್ಯಾಪಕರ ಸಂಬಂಧಗಳು ಪರಸ್ಪರ ಪೂರಕವಾಗಿರುವುದು ಮಕ್ಕಳ ಬೌದ್ಧಿಕ ಮತ್ತು ವೈಚಾರಿಕ ಬೆಳವಣಿಗೆಗೆ ಅಗತ್ಯವಾಗಿದೆ. ಈ ರಂಗದಲ್ಲಿ ಎಲ್ಲರಿಗೂ ಎದುರಾಗುವ ಸಮಸ್ಯೆಗಳ ಕುರಿತು ಗ್ರಂಥದಲ್ಲಿ ಪರಿಹಾರ ಸೂಚಿಸಲಾಗಿದೆ. ಇದರ ಯಾವ ಮಗ್ಗುಲನ್ನೂ ಚರ್ಚಿಸದೆ ಬಿಟ್ಟಿಲ್ಲ, ಒಟ್ಟಿನಲ್ಲಿ 'ಶಿಕ್ಷಣ-ತರಬೇತಿ ಕಲೆ' ಎಂಬ ಈ ಗ್ರಂಥವು ಅಧ್ಯಾಪಕರನ್ನೇ ಗುರಿಯಾಗಿಟ್ಟುಕೊಂಡು ರಚಿಸಲಾಗಿದ್ದರೂ ವಿದ್ಯಾರ್ಥಿಗಳಿಗೂ ಅವರ ಹೆತ್ತವರಿಗೂ ಇದರಲ್ಲಿ ಮಾರ್ಗದರ್ಶನವಿದೆ. ಇದು ಪ್ರತಿಯೊಂದು ಮನೆಯಲ್ಲಿ ಇರಲೇ ಬೇಕಾದ ಅತ್ಯುತ್ತಮ ಕೈಪಿಡಿಯಾಗಿದೆ. ಇದರ ಪ್ರಯೋಜನವನ್ನು ಎಲ್ಲರೂ ಪಡೆಯಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಪರಮ ದಯಾಮಯನೂ ಕೃಪಾಶೀಲನೂ ಆದ ಅಲ್ಲಾಹನ ನಾಮದಿಂದ

-: ಪ್ರಸ್ತಾವನೆ :-

ಮಕ್ಕಳಿಗೆ ಸರಿಯಾದ ಶಿಕ್ಷಣ-ತರಬೇತಿ ನೀಡುವುದು ಒಂದು ಪ್ರಮುಖ ಧಾರ್ಮಿಕ ಕರ್ತವ್ಯವಾಗಿದೆ. ಅದನ್ನು ಗಂಭೀರವಾಗಿ ಅನುಷ್ಠಾನಕ್ಕೆ ತರಬೇಕಾಗಿದೆ. ಅನ್ಯಥಾ ಪರಿಸ್ಥಿತಿ ಬಿಗಡಾಯಿಸುವ ಸಾಧ್ಯತೆಯಿದೆ. ಈ ಹೊಣೆಗಾರಿಕೆಯಲ್ಲಿ ಪೋಷಕರು ಮತ್ತು ಅಧ್ಯಾಪಕರಂತೆಯೇ ಸಮುದಾಯ, ಸಮಾಜ ಮತ್ತು ಸರಕಾರದ ಪಾತ್ರವೂ ಇದೆ. ಆದರೆ ನೇರವಾದ ಹೊಣೆಗಾರಿಕೆ ಇರುವುದು ಪೋಷಕರು ಮತ್ತು ಅಧ್ಯಾಪಕರ ಮೇಲೆ. ಆದ್ದರಿಂದ ಈ ವಿಷಯವಾಗಿ ಅತಿ ಹೆಚ್ಚು ಚಿಂತಿಸಬೇಕಾದವರೂ ಅವರೇ. ವಿಶೇಷತಃ ಇಂದಿನ ಪರಿಸ್ಥಿತಿಯಲ್ಲಿ ಈ ಬಗ್ಗೆ ತುಸು ಹೆಚ್ಚು ಗಂಭೀರತೆಯಿಂದ ಚಿಂತನೆ ನಡೆಸಬೇಕಾಗಿದೆ. ಏಕೆಂದರೆ ಸಣ್ಣ ತಪ್ಪು ಕೂಡ ಅಸಾಮಾನ್ಯವಾದ ಅಪಾಯಕ್ಕೆ ಕಾರಣವಾಗುವ ಸಾಧ್ಯತೆಯಿದೆ.

ಅಲ್‌ಹಮ್ದುಲಿಲ್ಲಾಹ್! ಪರಿಸ್ಥಿತಿಯ ಗಂಭೀರತೆಯ ಕುರಿತು ಒಂದು ಹಂತದ ವರೆಗೆ ಪ್ರಜ್ಞೆ ಹುಟ್ಟಿಕೊಂಡಿದೆ. ಹಾಗೆಯೇ ಬೇರೆ ಬೇರೆ ಸಂಘ-ಸಂಸ್ಥೆಗಳ ವೈಯಕ್ತಿಕ ಮತ್ತು ಸಾಮೂಹಿಕ ಪ್ರಯತ್ನಗಳ ಫಲವಾಗಿ ಜನರು ಈ ನಿಟ್ಟಿನಲ್ಲಿ ಗಮನ ಹರಿಸತೊಡಗಿದ್ದಾರೆ. ಇಂದು ಅಳಿವಿನ ಅಂಚಿನಲ್ಲಿರುವಂತಹ ಸಂಸ್ಥೆಗಳ ಜೀರ್ಣೋದ್ಧಾರ ಮಾಡಲಾಗುತ್ತಿದೆ. ತಮ್ಮವರ ನಿರ್ಲಕ್ಷ್ಯ ಮತ್ತು ಅನ್ಯರ ಸಂಕುಚಿತ ದೃಷ್ಟಿಗೆ ತುತ್ತಾಗಿದ್ದ ಸಂಸ್ಥೆಗಳನ್ನು ಹೊಸ ರೂಪ ನೀಡಿ ಉದ್ಧರಿಸಲಾಗುತ್ತಿದೆ. ಹೊಸ ಹೊಸ ಸಂಸ್ಥೆಗಳೂ ಹುಟ್ಟಿಕೊಳ್ಳುತ್ತಿವೆ. ಹಗಲು ಶಾಲೆ ಮತ್ತು ರಾತ್ರಿ ಶಾಲೆಗಳನ್ನು ಸ್ಥಾಪಿಸಲಾಗುತ್ತಿದೆ. ಒಟ್ಟಿನಲ್ಲಿ ಈ ರಂಗದಲ್ಲಿ ಜೀವಂತಿಕೆಯ ಲಕ್ಷಣ ಗೋಚರಿಸುತ್ತಿದೆ.

ಸಮುದಾಯದ ಅಗತ್ಯವನ್ನು ಪರಿಗಣಿಸಿ ಇಷ್ಟೆಲ್ಲ ನಡೆಯುತ್ತಿದ್ದರೂ ಅದು ಸದ್ಯಕ್ಕೆ ಸಾಲದು. ಆದರೆ ಸೀಮಿತ ಸಂಪನ್ಮೂಲ ಮತ್ತು ಮಾಧ್ಯಮಗಳನ್ನು ಬಳಸಿ, ಎಡರು-ತೊಡರುಗಳೆಡೆಯಲ್ಲೂ ಮಾಡಲಾಗುತ್ತಿರುವ ಈ ಪ್ರಯತ್ನವು ಏನಿದ್ದರೂ ಘನಕಾರ್ಯವೆಂದೇ ಹೇಳಬೇಕು.

ಸೂಕ್ತ ಶಿಕ್ಷಣ-ತರಬೇತಿಯ ವ್ಯವಸ್ಥೆಯಲ್ಲಿ ಹಲವು ತೊಡಕುಗಳು ಎದುರಾಗುತ್ತವೆ. ಅವುಗಳ ಪೈಕಿ ಪ್ರಮುಖವಾದವುಗಳನ್ನು ಇಲ್ಲಿ ನೀಡುತ್ತಿದ್ದೇವೆ:

- ನೂತನ ಸಂಸ್ಥೆಗಳಿಗೆ ಸೂಕ್ತ ಅಧ್ಯಾಪಕರ ಕೊರತೆ.
- ಸದ್ಯಕ್ಕೆ ಸೇವೆಯಲ್ಲಿರುವ ಅಧ್ಯಾಪಕರಲ್ಲಿ ಶಿಕ್ಷಣ-ತರಬೇತಿಯ ಕುರಿತ ಅಜ್ಞಾನ.
- ಮಕ್ಕಳ ಶಿಕ್ಷಣ-ತರಬೇತಿಯಲ್ಲಿ ಹೆತ್ತವರ ಸಹಕಾರ ಇಲ್ಲದಿರುವುದು.

ಹಾಗಾಗಿ ಸಂಸ್ಥೆಯು ಕಲಿಸಿದ ವಿಷಯಗಳ ಮೇಲೆ ತಣ್ಣೀರೆರಚಿದಂತಾಗುತ್ತದೆ. ಈ

ಸಮಸ್ಯೆಗಳನ್ನು ನಿವಾರಿಸುವ ಮತ್ತು ಶಿಕ್ಷಣ-ತರಬೇತಿಯನ್ನು ಪರಿಣಾಮಕಾರಿಯಾಗಿ ಮಾಡುವ ನಿಟ್ಟಿನಲ್ಲಿ ಈ ಗ್ರಂಥವನ್ನು ರಚಿಸಲಾಗಿದೆ. ಇದರಲ್ಲಿ ಮಕ್ಕಳ ಮಾನಸಿಕತೆ, ಶಿಕ್ಷಣದ ನೀತಿ, ಕಲಿಸುವ ವಿಧಾನ, ತರಬೇತಿಯ ರೀತಿ, ಶಾಲೆಯ ವ್ಯವಸ್ಥೆ, ಸಹಕಾರ ಪಡೆಯುವ ಉಪಾಯ ಇತ್ಯಾದಿ ವಿಷಯಗಳ ಮೇಲೆ ವಿವರವಾಗಿ ಬೆಳಕು ಚೆಲ್ಲಲಾಗಿದೆ. ಜತೆಗೆ ಈ ಕೃತಿಯಲ್ಲಿ-

- ಭಾಷೆಯನ್ನು ಸರಳ, ಸುಲಲಿತ ಮತ್ತು ವಿವರಣೆಯನ್ನು ಸುಲಭಗ್ರಾಹ್ಯಗೊಳಿಸಲು ಪ್ರಯತ್ನಿಸಲಾಗಿದೆ.
- ಅಧ್ಯಾಪಕರಿಗೆ, ಪೋಷಕರಿಗೆ ಮತ್ತು ಶಿಕ್ಷಣ-ತರಬೇತಿಯಲ್ಲಿ ಆಸಕ್ತಿ ಇರುವವರೆಲ್ಲರಿಗೂ ಸಮಾನವಾಗಿ ಆಸಕ್ತಿದಾಯಕಗೊಳಿಸಲು ಪ್ರಯತ್ನಿಸಲಾಗಿದೆ.
- ಶಿಕ್ಷಣ-ತರಬೇತಿಗೆ ಸಂಬಂಧಿಸಿ ಎಲ್ಲ ಪ್ರಮುಖ ವಿಷಯಗಳ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸಲಾಗಿದೆ.
- ಪ್ರತಿಯೊಂದು ವಿಷಯದಲ್ಲೂ ಇಸ್ಲಾಮೀ ದೃಷ್ಟಿಕೋನದಂತೆ ಚರ್ಚಿಸಲು ಪ್ರಯತ್ನಿಸಲಾಗಿದೆ.
- ಸಾದ್ಯಂತ ಪಾರಿಭಾಷಿಕ ಪದಗಳನ್ನು ವಿವರಣಾತ್ಮಕ ಶೈಲಿಯನ್ನು ದೂರವಿರಿಸಲು ಪ್ರಯತ್ನಿಸಲಾಗಿದೆ.
- ಇದರಲ್ಲಿ ನೀಡಲಾಗುವ ಮಾರ್ಗದರ್ಶನ ಮತ್ತು ಸಲಹೆಗಳನ್ನು ಅನುಸರಣಾರ್ಹ ರೀತಿಯಲ್ಲಿ ನಿರೂಪಿಸಲಾಗಿದೆ.
- ಸರಿಯಾದ ಶಿಕ್ಷಣ-ತರಬೇತಿಯ ಪ್ರಜ್ಞೆ ಬೆಳೆಸುವ ಮತ್ತು ಹೊಣೆಗಾರಿಕೆಗಳನ್ನು ಸಂಪೂರ್ಣವಾಗಿ ಪಾಲಿಸುವ ಚಿಂತನೆಯನ್ನು ಬೆಳೆಸಲು ಪ್ರಯತ್ನಿಸಲಾಗಿದೆ.
- ಪೋಷಕರು ಮತ್ತು ಅಧ್ಯಾಪಕರುಗಳ ಪ್ರಯತ್ನಗಳನ್ನು ಪರಿಣಾಮಕಾರಿಯಾಗಿಸಲು ಪ್ರಯತ್ನಿಸಲಾಗಿದೆ.

ಮಕ್ಕಳ ಮೇಲೆ ಅವರ ಸಾಮರ್ಥ್ಯಕ್ಕಿಂತ ಹೆಚ್ಚಿನ ಹೊರೆ ಬೀಳದಂತೆ ನೋಡಿಕೊಳ್ಳಲಾಗಿದೆ.

ಈ ಪ್ರಯತ್ನಗಳಲ್ಲಿ ನಾವು ಎಷ್ಟಂಶ ಯಶಸ್ವಿಯಾಗಿದ್ದೇವೆ ಎಂಬುದನ್ನು ವಾಚಕರೇ ತೀರ್ಮಾನಿಸಬೇಕು. ಅಂತೆಯೇ ಬಲ್ಲವರು ತಮ್ಮ ಸೂಕ್ತ ಸಲಹೆಗಳಿಂದ ನಮ್ಮನ್ನು ವಂಚಿತಗೊಳಿಸಬಾರದು ಎಂದೂ ಕೋರುತ್ತೇವೆ. ಈ ಒಂದು ತುಚ್ಛ ಪ್ರಯತ್ನವನ್ನು ಅಲ್ಲಾಹ್ ಸ್ವೀಕರಿಸಲಿ ಮತ್ತು ಉದ್ದೇಶಿತ ಕಾರ್ಯ ಈಡೇರುವಂತೆ ಅನುಗ್ರಹಿಸಲಿ. ಆಮೀನ್

ದೆಹಲಿ **ಅಫ್ಜಲ್ ಹುಸೈನ್**

10 ಜೂನ್ 1963

-: ಅನುಕ್ರಮಣಿಕೆ :-

★★★

ಅಧ್ಯಾಯ - 1

ಶಿಕ್ಷಣ ಮತ್ತು ತರಬೇತಿ

''ಮಕ್ಕಳು ಸ್ವರ್ಗದ ಪುಷ್ಪಗಳಾಗಿದ್ದಾರೆ.''

''ಮಕ್ಕಳಿಗೆ ಸರಿಯಾದ ಶಿಕ್ಷಣ-ತರಬೇತಿ ನೀಡುವುದೇ ಹೆತ್ತವರು ಅವರಿಗೆ ನೀಡುವ ಅತ್ಯುತ್ತಮ ಉಡುಗೊರೆಯಾಗಿದೆ.''

ಮದುವೆಯಾದ ಬಳಿಕ, ಆದಷ್ಟು ಬೇಗ ಮಡಿಲು ತುಂಬಬೇಕು ಎಂಬುದೇ ಎಲ್ಲ ದಂಪತಿಗಳ ಆಗ್ರಹವಾಗಿರುತ್ತದೆ. ಅದರಲ್ಲಿ ವಿಳಂಬವೇನಾದರೂ ಆದರೆ, ತರತರವಾದ ಪ್ರಯೋಗಕ್ಕೆ ಇಳಿಯುತ್ತಾರೆ, ಕಂಬನಿ ಮಿಡಿಯುತ್ತಾರೆ, ದೇವನಲ್ಲಿ ಮೊರೆಯಿಡುತ್ತಾರೆ, ಪ್ರಾರ್ಥಿಸುತ್ತಾರೆ, ಹರಕೆ ಹೊರುತ್ತಾರೆ, ಇನ್ನೂ ಏನೇನೆಲ್ಲ ಮಾಡುತ್ತಾರೆ. ಹೇಗೂ ಕೊನೆಗೂ ಅವರ ಆಶೆ ಈಡೇರುತ್ತದೆ. ಮನದ ಮೊಗ್ಗು ಅರಳುತ್ತದೆ. ಪ್ರಾರ್ಥನೆ ಫಲಿಸುತ್ತದೆ. ಅಲ್ಲಾಹ್ ಅವರಿಗೆ ಸಂತಾನ ಕರುಣಿಸುತ್ತಾನೆ. ಸುಖ-ಸಂತೋಷ ದಯಪಾಲಿಸುತ್ತಾನೆ. ನೆಂಟರಿಷ್ಟರು ಸಂತೋಷಪಡುತ್ತಾರೆ. ಸಂಬಂಧಿಕರು ಉಡುಗೊರೆ ನೀಡುತ್ತಾರೆ. ಹುಟ್ಟುವ ಮಗು ನಿಸ್ಸಂಶಯವಾಗಿಯೂ ತನ್ನೊಂದಿಗೆ ಅಗಣಿತವಾದ ಸಂತೋಷವನ್ನು ತರುತ್ತದೆ. ಅದರ ಜತೆಯಲ್ಲಿಯೇ ಮನೆಯಲ್ಲಿ ಸಮೃದ್ಧಿಯುಂಟಾಗುತ್ತದೆ. ಅದರ ಮುದ್ದು ಮುಖ ಮತ್ತು ಚಿತ್ತಾಕರ್ಷಕ ರೂಪವು ಎಲ್ಲರ ಕಂಗಳಿಗೆ ತಂಪನ್ನೊದಗಿಸುತ್ತದೆ. ಹೆತ್ತವರು ತಮ್ಮ ಕರುಳ ಕುಡಿಯ ಬೆಳವಣಿಗೆ ಕಂಡು ಆನಂದ ತುಂದಿಲರಾಗುತ್ತಾರೆ. ಖಂಡಿತವಾಗಿಯೂ ಅವರ ಮಟ್ಟಿಗೆ ಅದಕ್ಕಿಂತ ದೊಡ್ಡ ಆನಂದ ಬೇರೆ ಇರಲಾರದು. ತಾಯಿಯಾದವಳು ತನ್ನ ಹಗಲಿನ ಸುಖ ಮತ್ತು ರಾತ್ರಿಯ ಆರಾಮವನ್ನು ತ್ಯಜಿಸಿಯೂ ಸಂತೋಷವಾಗಿರುತ್ತಾಳೆ. ಮಗುವಿನ ಮುಖಾರವಿಂದ ಕಾಣುತ್ತಲೇ ತಂದೆಯ ಸಕಲ ಚಿಂತೆಯೂ ಕರಗಿ ಹೋಗುತ್ತದೆ. ಮಾತಾಪಿತರ ವಿಷಯ ಬಿಡಿ, ಪುಟ್ಟ ಮಕ್ಕಳ ಮುದ್ದು ಮುಖ ಮತ್ತವರ ತೊದಲು ನುಡಿಯು ಯಾರನ್ನು ಆಕರ್ಷಿಸುವುದಿಲ್ಲ ಹೇಳಿ? ಮಕ್ಕಳು ನಗುನಗುತ್ತಾ ನಲಿಯುವುದನ್ನು ಕಂಡು ಖುಷಿ ಪಡದವರು ಯಾರಿದ್ದಾರೆ? ಗಂಟು ಮುಖದ ಗಂಭೀರ ವ್ಯಕ್ತಿಯೂ ಪುಟ್ಟ ಮಕ್ಕಳ ಮುದ್ದಾಟಗಳನ್ನು ಕಂಡು ಮುಗುಳ್ನಗದೆ ಇರಲಾರನು. ಸ್ವರ್ಗದ ಈ ಪುಷ್ಪಗಳು

ಅರಳುವುದರಿಂದ ಪ್ರತಿ ಮನೆಯಲ್ಲಿ ಸಂಭ್ರಮ ಹಾಗೂ ಪ್ರತಿ ಹೂದೋಟದಲ್ಲೂ ವಸಂತಾಗಮನವಾಗುತ್ತದೆ. ನಾಲ್ದೆಸೆಗಳಲ್ಲೂ ಆನಂದ ಲಾಸ್ಯವಾಡುತ್ತದೆ, ಸುಗಂಧ ಹರಡುತ್ತದೆ ಮತ್ತು ಎಲ್ಲರ ಮನಕ್ಕೂ ಮುದ ನೀಡುತ್ತದೆ. ಗಿಡ-ಬಳ್ಳಿಗಳು ತೊನೆದಾಡುತ್ತವೆ. ಖಗ-ಪಕ್ಷಿಗಳು ಚಿಲಿಪಿಲಿಗುಟ್ಟುತ್ತವೆ. ಮೊಗ್ಗುಗಳು ಮುಗುಳ್ನಗುತ್ತವೆ. ಪುಷ್ಪಗಳು ಹೂನಗು ಚೆಲ್ಲುತ್ತವೆ. ಒಟ್ಟಿನಲ್ಲಿ ಎಲ್ಲೆಡೆಗಳಲ್ಲೂ ಹರ್ಷೋಲ್ಲಾಸವೋ ಹರ್ಷೋಲ್ಲಾಸ...

ಮಗುವಿನ ಜನನದಿಂದ ಈ ಪರಿಯ ಅಸಾಮಾನ್ಯ ಆನಂದೋಲ್ಲಾಸಕ್ಕೆ ಕಾರಣವಿಲ್ಲದಿಲ್ಲ.

- ಸ್ವರ್ಗದ ಈ ಪುಷ್ಪಗಳು ಪ್ರಕೃತಿ ನಿರ್ಮಾಪಕನ ಸೃಷ್ಟಿಯ ಅನುಪಮ ಕೊಡುಗೆಗಳಾಗಿವೆ.
- ಅದರ ಕಾರಣವಾಗಿ ಮನೆಯಲ್ಲಿ ಒಳಿತು-ಸಮೃದ್ಧಿಗಳು ವರ್ಷಿಸುತ್ತವೆ.
- ಮಾತಾಪಿತರ ನಡುವಿನ ಸಂಬಂಧ ಉತ್ತಮ ಮತ್ತು ದೃಢವಾಗಲು ಅತ್ಯುತ್ತಮ ಮಾಧ್ಯಮವಾಗಿದೆ.
- ಆ ನಾಕಪುಷ್ಪಗಳಲ್ಲಿ ಅಲ್ಲಾಹನು ಅಸಾಮಾನ್ಯವಾದ ಚಿತ್ತಾಕರ್ಷಣೆಯನ್ನು ಇರಿಸಿದ್ದಾನೆ.
- ಅವುಗಳ ದರ್ಶನದಿಂದ ಕಣ್ಣಿನ ತಂಪಾಗುತ್ತದೆ, ಹೃದಯ ತೃಪ್ತವಾಗುತ್ತದೆ ಮತ್ತು ದುಃಖ-ದುಮ್ಮಾನಗಳು ದೂರವಾಗುತ್ತವೆ.
- ಅದರ ಮೂಲಕ ಕುಟುಂಬ ಪರಂಪರೆ ಮುಂದುವರಿಯುತ್ತದೆ.
- ಅವು ಆಕಾಂಕ್ಷೆ ಮತ್ತು ಆಗ್ರಹಾಭಿಲಾಷೆಗಳ ಕೇಂದ್ರವಾಗಿರುತ್ತದೆ. ಭವಿಷ್ಯದಲ್ಲಿ ಅದರ ಮೇಲೆ ತರತರವಾದ ನಿರೀಕ್ಷೆಗಳು ಗರಿಗೆದರುತ್ತವೆ. ಇಂತಹ ಅಮೂಲ್ಯ ಉಡುಗೊರೆ, ಅಸಾಮಾನ್ಯ ಅನುಗ್ರಹವನ್ನು ಪಡೆವವರು ಆನಂದ ಕಡಲಲ್ಲಿ ತೇಲಾಡುವುದು ಸ್ಪಷ್ಟವೇ.

ಆದರೆ, ಸಂತೋಷದೊಂದಿಗೇ ಮಗು ಅಪಾರ ಹೊಣೆಗಾರಿಕೆಗಳನ್ನೂ ಹೊತ್ತು ತರುತ್ತದೆ.

- ಮಗುವನ್ನು ಸನ್ಮನಸ್ಸಿನೊಂದಿಗೆ ಸ್ವೀಕರಿಸಬೇಕು.
- ಪ್ರೀತಿ-ಸಹಾನುಭೂತಿಯೊಂದಿಗೆ ವ್ಯವಹರಿಸಬೇಕು.
- ಅಂತಃಕರಣದೊಂದಿಗೆ ಅದಕ್ಕೆ ಶಿಕ್ಷಣ ನೀಡಬೇಕು.
- ಕ್ರಮೇಣ ಉತ್ತಮ ಗುಣಗಳನ್ನು ಅಭ್ಯಾಸ ಮಾಡಿಸಬೇಕು.
- ವಿವಿಧ ಸಂದರ್ಭಗಳ ಶಿಷ್ಟಾಚಾರವನ್ನು ಕಲಿಸಬೇಕು.
- ಸಭ್ಯ ವಿಧಿ-ವಿಧಾನಗಳನ್ನು ತಿಳಿಸಿಕೊಡಬೇಕು.
- ವಿಶ್ವಾಸಕ್ಕೆ ಮೆರುಗು ನೀಡಬೇಕು, ಕರ್ಮಗಳನ್ನು ಸುಧಾರಿಸಬೇಕು ಮತ್ತು ಚಾರಿತ್ರ್ಯವನ್ನು ಉತ್ತಮ ಪಡಿಸಬೇಕು.
- ಆರೋಗ್ಯ, ಕ್ಷೇಮ ಮತ್ತು ಪ್ರಗತಿ ಯಶಸ್ಸಿನ ಬಗ್ಗೆ ಚಿಂತಿಸಬೇಕು.

ಇವು ಹುಟ್ಟುವ ಮಗುವಿಗೆ ಸಂಬಂಧಿಸಿ ಮಾತಾಪಿತರ ಮೇಲೆ ಅನ್ವಯವಾಗುವಂತಹ

ಹೊಣೆಗಾರಿಕೆಗಳಾಗಿವೆ. ಈ ಹೊಣೆಗಾರಿಕೆಗಳ ಪ್ರಜ್ಞೆ ಇಲ್ಲದ ಮತ್ತು ಅವುಗಳನ್ನು ಈಡೇರಿಸಲಿಚ್ಛಿಸದ ಮಾತಾಪಿತರಾರೂ ಇರಲಿಕ್ಕಿಲ್ಲ. ತನ್ನ ಸಂತಾನವನ್ನು ಅಪಾರವಾಗಿ ಪ್ರೀತಿಸುವುದು ಒಂದು ಸ್ವಾಭಾವಿಕ ಬೇಡಿಕೆಯಾಗಿದೆ. ಈ ವಿಷಯದಲ್ಲಿ ಯಾರಾದರೂ ಬೇಕೆಂದೇ ನಿರ್ಲಕ್ಷ್ಯ ತೋರುವರೇ? ತಂದೆಯಾದವನಾದರೋ ತನ್ನ ಸಂತಾನವನ್ನು ತನಗಿಂತ ಉನ್ನತ ಸ್ಥಾನದಲ್ಲಿ ಕಾಣಲು ಬಯಸುತ್ತಾನೆ. ಆದರೆ ಈ ಆಗ್ರಹ ಈಡೇರಿಸಿ ಕೊಳ್ಳುವಂತಹ ಸೌಭಾಗ್ಯವಂತರು ಬಹಳ ಕಡಿಮೆ ಎನ್ನಬಹುದು. ತಮ್ಮ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಪಾಲಿಸುವಲ್ಲಿ ಯಶಸ್ಸು ಕಾಣುವವರೂ ಕಡಿಮೆ. ಏಕೆಂದರೆ, ಕೇವಲ ಒಬ್ಬನ ಆಗ್ರಹ ಮಾತ್ರದಿಂದ ಎಲ್ಲ ಕೆಲಸಗಳೂ ನಡೆಯಬಹುದೆನ್ನುವಂತಿಲ್ಲತಾನೇ? ಶಿಕ್ಷಣ-ತರಬೇತಿಗೆ ಒಂದು ಚೌಕಟ್ಟು ಮತ್ತು ವ್ಯವಸ್ಥೆ ಇರಬೇಕಾದುದು ಅಗತ್ಯ. ಹಾಗೆಯೇ ಅಪಾರ ಪರಿಶ್ರಮದ ಅಗತ್ಯವೂ ಇದೆ. ಇವುಗಳಲ್ಲಿ ಎಲ್ಲಾದರೂ ಕೊರತೆಯುಂಟಾದರೆ, ಉತ್ತಮ ಫಲಿತಾಂಶದ ನಿರೀಕ್ಷೆಯನ್ನು ಇರಿಸುವುದಾದರೂ ಹೇಗೆ?

ವೈಫಲ್ಯದ ಕಾರಣಗಳು

ಮಕ್ಕಳಿಗೆ ಸೂಕ್ತ ಶಿಕ್ಷಣ-ತರಬೇತಿ ನೀಡುವಲ್ಲಿ ಇಂದು ಸಾಮಾನ್ಯವಾಗಿ ನಾವು ವಿಫಲರಾಗುತ್ತೇವೆ. ಯಾಕೆ ಹೀಗೆ? ಇದರ ಹಿಂದೆ ಹಲವು ಕಾರಣಗಳಿವೆ. ಉದಾಹರಣೆಗೆ:

1. ಶಿಕ್ಷಣ-ತರಬೇತಿಯು ಬಹಳ ಸಹನೆ ಮತ್ತು ಸೂಕ್ಷ್ಮತೆ ಬಯಸುವ ಕಾರ್ಯವಾಗಿದೆ. ಇದರಲ್ಲಿ ಗಮನ, ಶ್ರದ್ಧೆ ಮತ್ತು ಸತತ ಪರಿಶ್ರಮದ ಅಗತ್ಯವಿದೆ. ಈ ವಿಷಯದಲ್ಲಿ ಕಾರ್ಯಪ್ರವೃತ್ತರಾಗುವವರು ಬಹಳ ಕಡಿಮೆ.

2. ಸಾಮಾನ್ಯವಾಗಿ ಮಕ್ಕಳ ಮೇಲೆ ಅವರ ಪ್ರಾಯ ಮತ್ತು ಸಾಮರ್ಥ್ಯಕ್ಕಿಂತ ಹೆಚ್ಚಿನ ನಿರೀಕ್ಷೆಗಳನ್ನಿರಿಸಲಾಗುತ್ತದೆ. ಇನ್ನು ಅವರಿಂದ ಆಗಾಗ ತಪ್ಪು-ಪ್ರಮಾದಗಳು ಸಂಭವಿಸುತ್ತಿರುತ್ತವೆ. ಹಾಗೆಯೇ ಪ್ರಗತಿಯ ಗತಿಯೂ ನಿರೀಕ್ಷೆಗಿಂತ ಭಿನ್ನವಾಗಿ, ಬಹಳ ನಿಧಾನವಿದೆಯೆಂದೂ ಕಾಣತೊಡಗುತ್ತದೆ. ಆಗ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ನಿರಾಶೆಗೊಂಡು, ಜನರು ಸಾಮಾನ್ಯವಾಗಿ ತಮ್ಮ ಪ್ರಯತ್ನಗಳನ್ನು ಕಡಿಮೆ ಮಾಡುತ್ತಾರೆ. ಮಾತ್ರವಲ್ಲ, ತಮ್ಮ ವ್ಯವಹಾರ ಮತ್ತು ವರ್ತನೆಯಿಂದ ಮಕ್ಕಳನ್ನೂ ಹತಾಶೆ, ನಿರಾಶೆಗೆ ಈಡುಮಾಡುತ್ತಾರೆ. ಹೀಗೆ ಆ ಮಕ್ಕಳಲ್ಲಿ ಆತ್ಮವಿಶ್ವಾಸವು ಕುಂದಿ ಹೋಗುತ್ತದೆ.

3. ಇಡೀ ಸಮಾಜವೇ ಕೆಟ್ಟುಹೋಗಿದೆ. ಹಿರಿಯರ ಕೆಟ್ಟ ಮಾದರಿ ಮತ್ತು ಗೆಳೆಯರ ಕೆಟ್ಟ ಸಹವಾಸದಿಂದ ಮಕ್ಕಳು ತಮಗರಿವಿಲ್ಲದೆಯೇ ಪ್ರಭಾವ ಹೊಂದುತ್ತಿರುತ್ತಾರೆ. ಹಾಗಾಗಿ ಉತ್ತಮ ಮಾತಾಪಿತರ ಮಕ್ಕಳಲ್ಲಿ ಕೂಡ ಅಪ್ರಜ್ಞಾಪೂರ್ವಕವಾಗಿ ತರತರದ ಕೆಡುಕುಗಳು ಬೆಳೆದು ಬರುತ್ತವೆ.

4. ಯಾವುದೇ ಮಗುವಿನ ಪರಿಸರವನ್ನು ಅವಲೋಕಿಸಿ ನೋಡಿ. ಆಗ, ಕೆಲವರು ಸುಧಾರಣೆಯ ಪ್ರಯತ್ನದಲ್ಲಿದ್ದರೆ, ಹೆಚ್ಚಿನವರು ಕೆಡಿಸುವುದರಲ್ಲಿ ಮಗ್ನರಾಗಿರುವುದನ್ನು ಕಾಣುವಿರಿ.

5. ಜೀವನದ ಅವಶ್ಯಕತೆಗಳು ಇಂದು ಮೂಲಭೂತ ಅಗತ್ಯಗಳಿಗೆ ಸೀಮಿತವಾಗಿ ಉಳಿದಿಲ್ಲ, ಬದಲಾಗಿ ಅವುಗಳ ಪಟ್ಟಿ (ಯಾದಿ) ಬಹಳ ಉದ್ದವಾಗಿಬಿಟ್ಟಿದೆ. ಅರ್ಥವ್ಯವಸ್ಥೆಯೂ ದಿನದಿಂದ ದಿನಕ್ಕೆ ಕ್ಲಿಷ್ಟಕರವಾಗತೊಡಗಿದೆ. ಹಾಗಾಗಿ ಅಗತ್ಯಗಳನ್ನು ಪೂರೈಸಲು ಪಡುತ್ತಿರುವ ಪರಿಶ್ರಮದಿಂದ ಕೊಂಚವೂ ಬಿಡುವು ದೊರೆಯುತ್ತಿಲ್ಲ, ಹೀಗಿರುವಾಗ, ಮಕ್ಕಳ ಶಿಕ್ಷಣ-ತರಬೇತಿಯ ಕಡೆಗೆ ಗಮನ ಕೊಡುವ ಸೌಭಾಗ್ಯವಾದರೂ ಎಲ್ಲಿ ದೊರೆಯುತ್ತದೆ?

6. ಸೂಕ್ತ ಶಿಕ್ಷಣ-ತರಬೇತಿಗೆ ಬೇಕಾದ ಯೋಗ್ಯತೆ, ಪ್ರತಿಭೆ ಮತ್ತು ವ್ಯವಸ್ಥೆಯಿಂದ ಜನರು ಬಹುತೇಕ ಅಜ್ಞರಾಗಿದ್ದಾರೆ. ಆದ್ದರಿಂದ ಅವರ ಪ್ರಯತ್ನಗಳು ಫಲ ನೀಡುವುದರ ಬದಲು ಹೆಚ್ಚಿನ ವೇಳೆ ಪ್ರತಿಕೂಲ ಪರಿಣಾಮ ಬೀರುತ್ತವೆ.

7. ಮಾತಾಪಿತರ ಸಂಬಂಧದಲ್ಲಿ ಬಿರುಕು, ಅನ್ಯೋನ್ಯತೆಯ ಕೊರತೆ, ಅಗಲಿಕೆ, ಮರಣ, ಅನುಪಸ್ಥಿತಿ ಅಥವಾ ಮನೆಯಿಂದ ದೂರವಿರುವುದು ಇತ್ಯಾದಿಗಳೆಲ್ಲವೂ ಮಕ್ಕಳ ಸರಿಯಾದ ಶಿಕ್ಷಣ-ತರಬೇತಿಗೆ ಬಹಳ ದೊಡ್ಡ ತೊಡಕಾಗಿವೆ.

8. ಮಿಥ್ಯ ವ್ಯವಸ್ಥೆಯು ಜೀವನದ ಮೌಲ್ಯವನ್ನೇ ಬದಲಿಸಿಬಿಟ್ಟಿದೆ. ಭೌತಿಕತೆಯು ಮನಮಸ್ತಿಷ್ಕವನ್ನು ಎಷ್ಟು ಆವರಿಸಿಬಿಟ್ಟಿದೆಯೆಂದರೆ, ಮಕ್ಕಳ ಜಗತ್ತು ಬೆಳಗಿಸಲಿಕ್ಕಾಗಿ, ಅವರ ಭವಿಷ್ಯವನ್ನು ಉತ್ತಮ ಪಡಿಸಲಿಕ್ಕಾಗಿ ಸಜ್ಜನರೂ ತಮ್ಮ ಮಕ್ಕಳ ಈಮಾನ್ ಮತ್ತು ಚಾರಿತ್ರ್ಯವನ್ನು ಶೈತಾನನಿಗೆ ಬಲಿ ನೀಡುವುದರಲ್ಲಿ ಹಿಂದೇಟು ಹಾಕುವುದಿಲ್ಲ,

9. ಎಷ್ಟೋ ಜನರು ತಮ್ಮ ಆರ್ಥಿಕ ತೊಂದರೆ, ಕೊರತೆ ಮತ್ತಿತರ ಕಷ್ಟ-ಕೋಟಲೆಗಳ ಕಾರಣವಾಗಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ-ತರಬೇತಿ ನೀಡುವಲ್ಲಿ ಸೋಲುತ್ತಾರೆ. ಮಾತ್ರವಲ್ಲ, ಅವರಿಗೆ ಆ ನಿಟ್ಟಿನಲ್ಲಿ ಸಹಾಯ ಮಾಡುವವರೂ ಇರುವುದಿಲ್ಲ, ಏಕೆಂದರೆ ಕೈಗಾರಿಕಾ ಕ್ರಾಂತಿಯು ಕುಟುಂಬ ವ್ಯವಸ್ಥೆಯನ್ನು ಛಿದ್ರ-ವಿಚ್ಛಿದ್ರಗೊಳಿಸಿಬಿಟ್ಟಿದೆ. ಸಾಮಾಜಿಕ ಸಂಬಂಧವೂ ಸಡಿಲವಾಗಿದೆ. ಈ ಕಾರಣವಾಗಿ ಮಾತಾಪಿತರಿಂದ ಅಸಹಾಯಕತೆ, ಕೊರತೆ ಮತ್ತು ಪ್ರಮಾದ ಉಂಟಾದರೆ, ಕುಟುಂಬದ ಇತರ ಸದಸ್ಯರು ಆ ಹೊಣೆಯನ್ನು ವಹಿಸಲು ಸಿದ್ಧರಾಗುವುದಿಲ್ಲ, ಸಮಾಜವೂ ಕೂಡ ಅವರನ್ನು ಅದಕ್ಕಾಗಿ ಪ್ರೇರೇಪಿಸುವುದಿಲ್ಲ, ಮಾತ್ರವಲ್ಲ, ಸಮಾಜದಲ್ಲಿ ಅಂತಹ ಮಕ್ಕಳಿಗೆ ಸೂಕ್ತ ವ್ಯವಸ್ಥೆಯೂ ಇಲ್ಲ,

10. ಮಕ್ಕಳನ್ನು ಕ್ರಿಯಾಶೀಲವಾಗಿರಿಸುವ ಮತ್ತು ಅವರ ಬಿಡುವಿನ ವೇಳೆಯನ್ನು ಪ್ರಯೋಜನಕಾರಿ, ಸೃಜನಾತ್ಮಕ ಹವ್ಯಾಸಗಳಲ್ಲಿ ತೊಡಗಿಸುವ ಅಥವಾ ಉತ್ತಮ ಆಟ

ಇತ್ಯಾದಿಗಳಿಗೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವ ಕೆಲಸ ನಡೆಯುತ್ತಿಲ್ಲ, ಅದರ ಕಾರಣವಾಗಿ ಮಕ್ಕಳ ಪ್ರತಿಭೆ ಮತ್ತು ಸಾಮರ್ಥ್ಯವು ಅನಗತ್ಯ ಕಾಮಗಳೆಡೆಗೆ ಹೊರಳುತ್ತದೆ. ಅವರು ಉಂಡಾಡಿಗಳಾಗಿ ಬಿಡುತ್ತಾರೆ ಮತ್ತು ತರತರವಾದ ಅನುಚಿತ ಕ್ರಿಯೆಗಳಲ್ಲಿ ತೊಡಗಿಕೊಳ್ಳುತ್ತಾರೆ.

11. ಸಮಾಜದಲ್ಲಿ ಹೆಚ್ಚುತ್ತಿರುವ ಅಶ್ಲೀಲತೆ, ನಗ್ನತೆ, ನೈತಿಕ ಅಧಃಪತನ, ಚಿತ್ತಾಕರ್ಷಕ ದೃಶ್ಯ, ಅಶ್ಲೀಲ ಸಾಹಿತ್ಯ, ನಗ್ನ ಚಿತ್ರಗಳು, ಅಸಹ್ಯ ಪೋಸ್ಟರ್‌ಗಳ ಹಾವಳಿ; ನೀತಿ ಕೆಡಿಸುವ ಸಿನಿಮಾಗಳು, ಕಥೆ-ಕಾದಂಬರಿಗಳ ಹೆಚ್ಚಳವು ಸಾಮಾನ್ಯವಾಗಿ ಸುಧಾರಣಾ ಪ್ರಯತ್ನಗಳ ಮೇಲೆ ತಣ್ಣೀರೆರಚುತ್ತವೆ.

12. ಮಕ್ಕಳ ವ್ಯಕ್ತಿತ್ವದ ಮೇಲೆ ಮನೆ, ಶಾಲೆ/ಮದ್ರಸಾ, ಪರಿಸರ, ಸಮಾಜ ಮತ್ತು ರಾಷ್ಟ್ರ/ಆಡಳಿತವೂ ಒಂದಿಲ್ಲೊಂದು ರೀತಿಯಲ್ಲಿ ಪ್ರಭಾವ ಬೀರುತ್ತವೆ. ಸೂಕ್ತ ಮತ್ತು ಮಾದರಿ ಶಿಕ್ಷಣ-ತರಬೇತಿಗಾಗಿ ಅವೆಲ್ಲವುಗಳ ನಡುವೆ ಸಹಕಾರ ಮತ್ತು ಸಮಭಾವ ಇರಬೇಕಾದುದು ಅಗತ್ಯ. ಆದರೆ ಇಲ್ಲಿ ಅದುವೇ ಊನವಾಗಿದೆ. ಸಮಭಾವ ಇರುವುದು ಬಿಡಿ, ಅವುಗಳ ಪೈಕಿ ಪ್ರತಿಯೊಂದರ ಪ್ರಯತ್ನದ ದಿಕ್ಕು ಭಿನ್ನಭಿನ್ನವಾಗಿರುತ್ತದೆ. ಮನೆಮಂದಿ ಕಾಳಜಿ ವಹಿಸುವಾಗ ಉತ್ತಮ ಶಾಲೆ/ಮದ್ರಸಾ ಸಿಗುವುದಿಲ್ಲ, ಶಾಲೆ/ಮದ್ರಸಾ ತನ್ನ ಹೊಣೆಗಾರಿಕೆಯನ್ನು ಪಾಲಿಸಲು ಮುಂದಾದರೂ ಇತರ ರಂಗಗಳಿಂದ ಸಹಕಾರವಿರುವುದಿಲ್ಲ, ಹಾಗಾಗಿ ಬಹುತೇಕ ಮಕ್ಕಳು ಇದೇ ಒತ್ತಡದಲ್ಲಿ ಸಿಲುಕಿ ನರಳುತ್ತಾರೆ.

ಅಸಡ್ಡೆಯ ದುಷ್ಪರಿಣಾಮಗಳು

ಶಿಕ್ಷಣ-ತರಬೇತಿಯ ಕುರಿತಾದ ಅಸಡ್ಡೆಯು ಕೇವಲ ವ್ಯಕ್ತಿ ಮತ್ತು ಕುಟುಂಬಕ್ಕೆ ಮಾತ್ರವಲ್ಲ, ಸಮುದಾಯ ಮತ್ತು ದೇಶಕ್ಕೂ ಅತ್ಯಂತ ಅಪಾಯಕಾರಿ ಮತ್ತು ನಷ್ಟಕಾರಕವಾಗಿ ಪರಿಣಮಿಸುತ್ತದೆ. ಏಕೆಂದರೆ-

- ಮಕ್ಕಳು ನಿರುಪಯುಕ್ತರೂ ಅಸಮರ್ಥರೂ ಆಗಿಬಿಡುತ್ತಾರೆ. ಅವರಲ್ಲಿ ಜನ್ಮತಃ ಇದ್ದ ಸಾಮರ್ಥ್ಯ, ಯೋಗ್ಯತೆ ಮತ್ತು ಪ್ರತಿಭೆಗಳೆಲ್ಲವೂ ಒಂದೋ ಹೊಸಕಲ್ಪಡುತ್ತವೆ ಅಥವಾ ತಪ್ಪು ಹಾದಿಗಿಳಿಯುತ್ತವೆ.
- ತರತರವಾದ ಕೆಡುಕು ಮತ್ತು ದುಷ್ಕೃತ್ಯಗಳಲ್ಲಿ ತೊಡಗಿಕೊಂಡು, ಮಕ್ಕಳು ತಮ್ಮ ಇಹ-ಪರಗಳೆರಡನ್ನೂ ಹಾಳುಗೆಡವುತ್ತಾರೆ.
- ಕಂಗಳಿಗೆ ತಂಪು ಮತ್ತು ವೃದ್ಧಾಪ್ಯದ ಊರುಗೋಲಾಗುವುದು ಬಿಡಿ, ಮುಳ್ಳಾಗಿ ಕುಟುಕುತ್ತಾರೆ ಮತ್ತು ಹೆತ್ತವರಿಗೆ ಒಂದು ಹೊರೆಯಾಗಿ ಪರಿಣಮಿಸುತ್ತಾರೆ.
- ಹಿರಿಯರು ಮಾಡಿಟ್ಟದ್ದನ್ನು ಮುಲಾಜಿಲ್ಲದೆ ಪೋಲು ಮಾಡುತ್ತಾರೆ.
- ಕುಟುಂಬದ ಕಣ್ಮಣಿಯಾಗುವುದರ ಬದಲು ತಲೆಬೇನೆಯಾಗಿ ಮಾರ್ಪಡುತ್ತಾರೆ.
- ತಮ್ಮ ಕೆಟ್ಟ ಚಾರಿತ್ರ್ಯದಿಂದಾಗಿ ಧರ್ಮ ಮತ್ತು ಸಮುದಾಯದ ಹೆಸರು ಕೆಡಿಸುತ್ತಾರೆ.

- ಅಪರಾಧ ಕೃತ್ಯಗಳಲ್ಲಿ ತೊಡಗಿ ಎಲ್ಲರಿಗೂ ಕಂಟಕರಾಗಿ ಮಾರ್ಪಡುತ್ತಾರೆ ಮತ್ತು ಸಮಾಜಕ್ಕೆ ತರತರವಾದ ನಷ್ಟಗಳನ್ನುಂಟು ಮಾಡುತ್ತಾರೆ.
- ಸಮುದಾಯವು ಸಜ್ಜನರಿಂದ, ಉತ್ತಮ ಸಮಾಜದಿಂದ, ನಿಷ್ಕಾಮ ಕರ್ಮಿಗಳಿಂದ ಮತ್ತು ಆಡಳಿತವು ಉತ್ತಮ ನಾಗರಿಕರಿಂದ ವಂಚಿತವಾಗುತ್ತದೆ.
- ಹಾಗಾಗಿ ಆಡಳಿತಕ್ಕೆ ಜೈಲು, ನ್ಯಾಯಾಲಯ, ಪೊಲೀಸ್ ಠಾಣೆ ಮತ್ತು ಆಸ್ಪತ್ರೆಗಳಿಗಾಗಿ ಬಹಳ ಖರ್ಚು ಮಾಡಬೇಕಾಗಿ ಬರುವುದು.
- ದೇಶದ ಆರ್ಥಿಕತೆ ಮತ್ತು ಸಮಾಜದ ನೈತಿಕತೆಗೆ ಅಂತಹವರು ಶಾಪವಾಗಿ ಪರಿಣಮಿಸುತ್ತಾರೆ.

ಒಟ್ಟಿನಲ್ಲಿ ಸುಗಂಧ ಹರಡಲು ಬೀರಿದ ಆ ನಾಕಪುಷ್ಪಗಳು ಮೊದಮೊದಲು ಪ್ರತಿಯೊಬ್ಬರ ಪಾಲಿಗೆ ಸಂತೋಷದ ಕಾರಣವಾಗಿದ್ದವರು, ಅಸಡ್ಡೆ ಮತ್ತು ಕೊರತೆಯಿಂದಾಗಿ ಮಾಲಿನ್ಯದ ಗುಪ್ಪೆಯಾಗಿ ಮಾರ್ಪಡುತ್ತವೆ ಹಾಗೂ ಅಸಹ್ಯ ದುರ್ವಾಸನೆಯಿಂದ ಎಲ್ಲರಿಗೂ ಕಿರಿಕಿರಿಯಾಗಿ ಬಿಡುತ್ತವೆ. ಈ ರೀತಿಯಾಗಿ ಅಸಡ್ಡೆ ಮತ್ತು ನಿರ್ಲಕ್ಷ್ಯಕ್ಕೆ ಪ್ರಕೃತಿಯು ತನ್ನದೇ ಶೈಲಿಯಲ್ಲಿ ಪ್ರತೀಕಾರ ಪಡೆಯುತ್ತದೆ.

ತದ್ವಿರುದ್ಧವಾಗಿ ಮಕ್ಕಳ ಶಿಕ್ಷಣ-ತರಬೇತಿಯ ಬಗ್ಗೆ ಸೂಕ್ತ ಗಮನ ಹರಿಸಿದ್ದೇ ಆದರೆ-

- ಅವರ ಪ್ರತಿಭೆ ಬೆಳೆಯುತ್ತದೆ, ಚಾರಿತ್ರ್ಯ ಉತ್ತಮಗೊಳ್ಳುತ್ತದೆ ಹಾಗೂ ಇಹ-ಪರಗಳಲ್ಲಿ ಅವರು ಯಶಸ್ಸಿನ ಹಾದಿಯನ್ನು ತುಳಿಯುತ್ತಾರೆ.
- ಅಲ್ಲಾಹನು ಅವರನ್ನು ಈ ಭೂಮಿಗೆ ಕಳುಹಿಸಿದ ಉದ್ದೇಶ ಈಡೇರುತ್ತದೆ.
- ಅವರು ತಮ್ಮ ವೈಯಕ್ತಿಕ, ಕೌಟುಂಬಿಕ ಮತ್ತು ಸಾಮೂಹಿಕ ಹೊಣೆಗಾರಿಕೆಗಳನ್ನು ನಿಭಾಯಿಸಲು ಶಕ್ತರಾಗುತ್ತಾರೆ.
- ಅವರು ಅಲ್ಲಾಹನ ಸಜ್ಜನ ದಾಸರೂ ಸಮಾಜದ ನಿಷ್ಕಾಮ ಸೇವಕರೂ ದೇಶದ ಪ್ರಾಮಾಣಿಕ ನಾಗರಿಕರೂ ಆಗಿ ಮಾರ್ಪಡುತ್ತಾರೆ.
- ಅವರ ಅಸ್ತಿತ್ವವು ಸ್ವಯಂ ಅವರ ಮತ್ತು ದೇಶ, ಸಮುದಾಯದ ಮಟ್ಟಿಗೆ ಕರುಣೆಗೆ ಕಾರಣ ಹಾಗೂ ಸಮೃದ್ಧಿಗೆ ಹೇತುವಾಗುತ್ತದೆ.
- ನಾಗರಿಕತೆಯ ಬೆಳವಣಿಗೆಯಲ್ಲಿ ಅವರ ಪ್ರತಿಭೆಯಿಂದ ಸಹಾಯ ಲಭಿಸುತ್ತದೆ.
- ದೇಶದ ಆರ್ಥಿಕತೆ ಮತ್ತು ರಾಷ್ಟ್ರೀಯ ಉತ್ಪನ್ನದಲ್ಲಿ ಹೆಚ್ಚಳವಾಗುತ್ತದೆ. ಹಾಗೆಯೇ ಸರಕಾರದ ಖರ್ಚು-ವೆಚ್ಚಗಳು ಮತ್ತು ಸಮಸ್ಯೆಗಳು ಕಡಿಮೆಯಾಗುತ್ತದೆ.

ಒಟ್ಟಿನಲ್ಲಿ ಸರಿಯಾದ ಶಿಕ್ಷಣ-ತರಬೇತಿಯಲ್ಲಿ ವ್ಯಯಿಸಿದ ಶಕ್ತಿ, ಶ್ರಮ ಹಾಗೂ ಸಂಪತ್ತು-ಪ್ರತಿಯೊಂದೂ ಪ್ರಯೋಜನಕಾರಿಯಾಗಿ ಬಿಡುತ್ತದೆ.

ಆದರೆ ದುರದೃಷ್ಟವಶಾತ್, ನಮ್ಮ ನಿರ್ಲಕ್ಷ್ಯ ಮತ್ತು ರಾಜಕೀಯದ ಮಂದಿಯಲ್ಲಿನ ದೂರದೃಷ್ಟಿಯ ಕೊರತೆಯಿಂದಾಗಿ ನಾನಾಬಗೆಯ ಪಠ್ಯ ಮತ್ತು ಅಭ್ಯಾಸಗಳು, ಸಹಾಯಕ

ಕೈಪಿಡಿ, ವಿದೇಶಿ ಪಠ್ಯ ಪದ್ಧತಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಒಂದು ಅರ್ಥಹೀನ ಶಿಕ್ಷಣ-ತರಬೇತಿ ವ್ಯವಸ್ಥೆಯು ಜಗತ್ತಿನಾದ್ಯಂತ ಜಾರಿಯಲ್ಲಿದೆ. ಅದರಿಂದ ಒಂದೋ ದೇವದಾಸ್ಯತನ, ಹೊಣೆಗಾರಿಕಾ ಪ್ರಜ್ಞೆ ಮತ್ತು ನೈತಿಕ ಮೌಲ್ಯಗಳನ್ನು ಗೌರವಿಸುವ ಬದಲು ದೇವನಿಂದ ನಿರಪೇಕ್ಷತೆ, ಪರಲೋಕ ವಿಚಾರಣೆಯ ಬಗ್ಗೆ ನಿರ್ಭಯ ಹಾಗೂ ಉನ್ನತ ಮಾನವೀಯ ಹಕ್ಕುಗಳ ಬಗ್ಗೆ ಅಗೌರವವನ್ನು ಕಲಿಸುತ್ತದೆ. ಇಲ್ಲವೇ ಶಿರ್ಕ್, ಸಂದೇಹ, ಪೂರ್ವಗ್ರಹ, ಸಂಕುಚಿತತೆ, ದೇಶೀಯ ಮತ್ತು ಜನಾಂಗೀಯ ಪಕ್ಷಪಾತ, ಸ್ವಾರ್ಥ ಮತ್ತು ಡಂಬಾಚಾರ, ಸುಖಲೋಲುಪತೆ, ಆಡಂಬರಪ್ರಿಯತೆ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳುತ್ತದೆ ಮತ್ತು ಅದು, ಭೌತಿಕ ಪ್ರಗತಿ ಮತ್ತು ಆರ್ಥಿಕ ಸುಭಿಕ್ಷೆಯನ್ನು ಪರಮ ಗುರಿಯೆಂದು ಪರಿಗಣಿಸುತ್ತದೆಯೇ ಹೊರತು ಚಾರಿತ್ರ್ಯವನ್ನು ಉತ್ತಮ ಪಡಿಸುವ ಕಡೆಗೆ ಸ್ವಲ್ಪವೂ ಗಮನವೀಯುವುದಿಲ್ಲ.

ಈ ವ್ಯವಸ್ಥೆಯಲ್ಲಿ ಸ್ಥೂಲವಾದ ಬದಲಾವಣೆ ತರದೆ ಇದ್ದರೆ, ಅದರಲ್ಲಿ ಬೆಳೆದು ಬರುವ ಪೀಳಿಗೆಯಿಂದ ಒಟ್ಟಾರೆಯಾಗಿ ಒಳಿತನ್ನು ನಿರೀಕ್ಷಿಸುವುದು ವ್ಯರ್ಥ; ತದ್ವಿರುದ್ಧವಾಗಿ ಕೆಡುಕಿನ ಆಶಂಕೆಯಂತೂ ಸದಾ ಇರುತ್ತದೆ ಎಂಬುದು ಸ್ಪಷ್ಟ.

ಇನ್ನು ಧಾರ್ಮಿಕ ವಿದ್ಯಾಲಯ(ಮದ್ರಸ)ಗಳ ವಿಷಯ. ಒಂದೊಮ್ಮೆ ಉತ್ತಮ ಶಿಕ್ಷಣ-ತರಬೇತಿಯ ವಕ್ತಾರ, ಅಜ್ಞಾನದ ಅಂಧಕಾರದಲ್ಲಿ ಪ್ರಕಾಶಕಿರಣ, ಮಾರ್ಗದರ್ಶನದ ಒರತೆ ಹಾಗೂ ಮಾನವರಿಗೆ ಸಾದ್ಯಂತ ಪ್ರಯೋಜನಕಾರಿಯಾಗಿದ್ದ ಮದ್ರಸಗಳು ಕೂಡ ಇಂದು ಸ್ವಯಂ ತಮ್ಮ ಜಡತ್ವ, ಸಮುದಾಯದ ನಿರ್ಲಕ್ಷ್ಯ, ಅನ್ಯರ ವಿರೋಧ, ಮಿಥ್ಯಶಕ್ತಿಗಳ ಮೇಲಿನ ಭಯ, ಧಾರ್ಮಿಕ ಗೌರವದ ಕೊರತೆ, ತ್ಯಾಗ-ಬಲಿದಾನದಲ್ಲಿ ಹಿಂಜರಿತ, ಶಿಕ್ಷಣದಲ್ಲಿ ಧಾರ್ಮಿಕ-ಲೌಕಿಕ ಎಂಬ ಭಿನ್ನತೆ, ಏಕಪಕ್ಷೀಯತೆ, ಕೆಲಸಕ್ಕೆ ಬಾರದ ಪಠ್ಯಪದ್ಧತಿ ಮತ್ತು ಅಪಕ್ವ ಶಿಕ್ಷಣ ವ್ಯವಸ್ಥೆ ಇತ್ಯಾದಿಗಳಿಂದಾಗಿ ಮುದುಡಿಕೊಳ್ಳುತ್ತಿವೆ. ಮಾತ್ರವಲ್ಲ, ಅವುಗಳ ಪ್ರಾಮುಖ್ಯತೆಯು ದಿನೇದಿನೇ ಕಡಿಮೆಯಾಗುತ್ತಿದೆ ಮತ್ತು ಅವುಗಳ ಪ್ರಭಾವ ವಲಯವು ಕುಂದುತ್ತ ಇದೆ.

ಹಾಗಾಗಿ ಎಲ್ಲ ಜನರು ಮತ್ತು ಸಂಘಟನೆಗಳು ಪರಿಸ್ಥಿತಿಯ ಸುಧಾರಣೆಯ ಕಡೆಗೆ ಗಮನ ಹರಿಸಬೇಕು ಹಾಗೂ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಏನೆಲ್ಲ ಮಾಡಲು ಸಾಧ್ಯವಿದೆಯೋ ಅವನ್ನೆಲ್ಲ ಮಾಡಿಯೇ ತೀರಬೇಕು ಎಂಬುದು ಪ್ರಸಕ್ತ ಪರಿಸ್ಥಿತಿಯ ಬೇಡಿಕೆಯಾಗಿದೆ. ಅವಿರತ ಪರಿಶ್ರಮ ಮತ್ತು ದೃಢತೆಯೊಂದಿಗೆ ಪರಿಸ್ಥಿತಿಯನ್ನು ಎದುರಿಸಲು ಹಾಗೂ ಅದರ ದಿಕ್ಕನ್ನು ಬದಲಿಸಲು ಸಾಧ್ಯ.

ಇಂದಿನ ಪರಿಸ್ಥಿತಿಯು, ನಿಸ್ಸಂಶಯವಾಗಿಯೂ ಆಶಾಭಂಗಗೊಳಿಸುವಂತಿದೆ. ಸರಕಾರವು ಯಾವುದೇ ಸತ್ಕ್ರಾಂತಿಗೆ ಮನಸ್ಸು ಮಾಡುವಂತೆ ತೋರುವುದಿಲ್ಲ. ಇಲ್ಲಿನ ಬಹುಸಂಖ್ಯಾತ ಜನರು ಭೌತಿಕತೆ ಮತ್ತು ಪಾಶ್ಚಾತ್ಯೀಕರಣಕ್ಕೆ ಬಲಿಯಾಗಿದ್ದಾರೆ. ಅವರು

ಒಂದೋ ಕಣ್ಣುಮುಚ್ಚಿ ಪಾಶ್ಚಾತ್ಯರನ್ನು ಅನುಸರಿಸುತ್ತಿದ್ದಾರೆ ಅಥವಾ ಕಾಲಹರಣಗೊಂಡ ಪ್ರಾಚೀನ ಸಂಸ್ಕೃತಿಯನ್ನು ಪುನಃ ಸ್ಥಾಪಿಸಲು ಪರಿಶ್ರಮ ಪಡುತ್ತಿದ್ದಾರೆ. ಅವರು ಸ್ವಯಂ ಆ ಕೊಳೆನೀರಿನಲ್ಲಿ ಕೊಚ್ಚಿಕೊಂಡು ಹೋಗಲು ಉದ್ಯುಕ್ತರಾಗಿದ್ದಾರೆ ಮತ್ತು ಇತರರನ್ನೂ ತಮ್ಮೊಡನೆ ಸೆಳೆಯುತ್ತಿದ್ದಾರೆ. ಇತ್ತ ಮುಸ್ಲಿಮ್ ಸಮುದಾಯದ ಪರಿಸ್ಥಿತಿಯೂ ಅಷ್ಟೇ. ಅವರಲ್ಲಿ ಒಂದು ವ್ಯವಸ್ಥೆ ಮತ್ತು ಒಗ್ಗಟ್ಟು ಎಂಬುದಿಲ್ಲ, ಅವರು ಕ್ಷುಲ್ಲಕ ಭಿನ್ನಾಭಿಪ್ರಾಯಗಳಲ್ಲಿ ಮುಳುಗಿಹೋಗಿದ್ದಾರೆ. ಅವರ ಸಂಪನ್ಮೂಲಗಳು ಸೀಮಿತವಾಗಿವೆ, ಧೈರ್ಯ-ಸ್ಥೈರ್ಯ ಉಡುಗಿಹೋಗಿದೆ ಮತ್ತು ಅವರ ಉತ್ಸಾಹ ಕುಂದಿದೆ. ಇಂತಹ ಸ್ಥಿತಿಯಲ್ಲಿ ಒಂದು ಸಮಗ್ರ ಕ್ರಾಂತಿಯ ಕರೆ ನೀಡುವುದನ್ನು ಭ್ರಾಂತಿ ಅಥವಾ ತಲೆಬುಡವಿಲ್ಲದ ಮಾತೆಂದು ಪರಿಗಣಿಸಲಾಗುತ್ತದೆ. ಆದರೆ ನಾವೆಲ್ಲ ಮುಳುಗಿಹೋಗಿರುವ ಈ ನೆರೆನೀರಲ್ಲಿ ಸಮುದಾಯದ ಅಸ್ತಿತ್ವವು ಉಪ್ಪಿನಂತೆ ಕರಗಿಹೋಗುತ್ತಿದೆ ಮತ್ತು ನಾಡಿನ ನೈತಿಕತೆಯು ಸಂಪೂರ್ಣ ಅಧಃಪತನಕ್ಕೀಡಾಗುತ್ತಿದೆ. ಹೀಗಿರುತ್ತ ದೇಶ-ಸಮುದಾಯ ಮತ್ತು ಭಾವೀ ಪೀಳಿಗೆಯನ್ನು ವಿನಾಶದಿಂದ ರಕ್ಷಿಸಲಿಕ್ಕಾಗಿ ಧೀಮಂತಿಕೆಯಿಂದ ಸೆಟೆದು ನಿಲ್ಲುವ ಮತ್ತು ನೆರೆನೀರಿನ ದಿಕ್ಕನ್ನೇ ಬದಲಿಸಲು ಪ್ರಯತ್ನಿಸುವುದರ ಹೊರತು ಬೇರೆ ದಾರಿಯಿಲ್ಲ, ಅದರಲ್ಲಿಯೇ ನಮ್ಮ ಸರ್ವತೋಮುಖ ಯಶಸ್ಸು ಅಡಗಿದೆ.

◆ ◆ ◆

ಅಧ್ಯಾಯ - 2

ಶಿಕ್ಷಣದ ಅರ್ಥ ವ್ಯಾಖ್ಯಾನ

ಮಕ್ಕಳ ಶಿಕ್ಷಣವೆಂಬುದು ಬಹುತೇಕ ಪ್ರತಿಯೊಬ್ಬರ ಮಟ್ಟಿಗೂ ಆಸಕ್ತಿದಾಯಕ ವಿಷಯವಾಗಿದೆ. ಯಾವುದಾದರೂ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ನೋಡಿ... ಸ್ತ್ರೀ-ಪುರುಷರು, ಬಡವ-ಬಲ್ಲಿದರು, ಹಳ್ಳಿಗ-ಪಟ್ಟಣಿಗ, ಮುಸ್ಲಿಮ್-ಮುಸ್ಲಿಮೇತರ... ಒಟ್ಟಿನಲ್ಲಿ ಎಲ್ಲರೂ ಎಲ್ಲ ವಿಭಾಗದವರೂ ಈ ಬಗ್ಗೆ ಗಮನ ಹರಿಸುವರು. ಅವಕಾಶ ದೊರೆತರೆ ಪ್ರತಿಯೊಬ್ಬರೂ ತಂತಮ್ಮ ಸಾಮರ್ಥ್ಯಾನುಸಾರ ಏನಾದರೊಂದು ವಿಶ್ಲೇಷಣೆಯನ್ನಂತೂ ಮಾಡುವರು.

ಈ ಸಾಮೂಹಿಕ ಆಸಕ್ತಿಯು ಕೊಂಚ ಮಟ್ಟಿಗೆ ಸ್ವಾಭಾವಿಕವೂ ಆಗಿದೆ. ಏಕೆಂದರೆ,

- ಅಲ್ಲಾಹನ ಕೃಪೆಯಿಂದ ಎಲ್ಲರೂ ಮಕ್ಕಳು-ಮರಿಗಳನ್ನು ಹೊಂದಿದವರಾಗಿರುತ್ತಾರೆ ಮತ್ತು ಎಲ್ಲರಿಗೂ ತಂತಮ್ಮ ಮಕ್ಕಳ ಭವಿಷ್ಯದ ಚಿಂತೆ ಇರುತ್ತದೆ.
- ಪ್ರತಿಯೊಬ್ಬರೂ ತಮ್ಮ ಸಂತಾನವನ್ನು ತಮಗಿಂತ ಮಿಗಿಲಾಗಿ ಕಾಣಬಯಸುತ್ತಾರೆ ಮತ್ತು ಅದಕ್ಕಾಗಿ ಶಿಕ್ಷಣ-ತರಬೇತಿಯ ಆಸರೆಯನ್ನು ಹುಡುಕುತ್ತಾರೆ.
- ಬಹುತೇಕ ಎಲ್ಲರೂ ತಮ್ಮಿಂದ ಈಡೇರಿಸಲಾಗದ ತನ್ನ ಅತ್ಯಾಗ್ರಹ, ಅಭಿಲಾಷೆಯನ್ನು ತಮ್ಮ ಮಕ್ಕಳಿಂದ ಈಡೇರಿಸಲು ಬಯಸುತ್ತಾರೆ. ಅದಕ್ಕಾಗಿ ಅವರು ಸೂಕ್ತ ಉಪಾಯಗಳನ್ನು ಅರಿಯಲು ಪ್ರಯತ್ನಿಸುತ್ತಾರೆ.
- ತಮ್ಮ ಆದರ್ಶಗಳಂತೆ ತಮ್ಮ ಮಕ್ಕಳು ಬೆಳೆಯುತ್ತಿಲ್ಲವೆಂದು ಮನಗಂಡಾಗ ಪ್ರತಿಯೊಬ್ಬರೂ ಬೇಸರಪಡುತ್ತಾರೆ ಮತ್ತು ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ.
- ಭವಿಷ್ಯದ ತಯಾರಿಗಾಗಿ ಪ್ರಕೃತಿಯು ಬಾಲ್ಯದ ಸುದೀರ್ಘವಾದ ಕಾಲವನ್ನು ಕರುಣಿಸಿದೆ. ಅದನ್ನು ಪ್ರಯೋಜನಕಾರಿಯಾಗಿ ಮಾರ್ಪಡಿಸಲು ಪ್ರತಿಯೊಬ್ಬರೂ ಬಯಸುತ್ತಾರೆ.

ಆದರೆ ಈ ವಿಷಯವಾಗಿ ಜನರ ಅಭಿಪ್ರಾಯಗಳನ್ನು ಒಮ್ಮೆ ಅವಲೋಕಿಸಿ ನೋಡಿ. ಒಬ್ಬೊಬ್ಬರದೂ ಒಂದೊಂದು ಮಾತು. ಒಂದರ್ಥದಲ್ಲಿ ಪ್ರತಿಯೊಬ್ಬರ ಮನದಲ್ಲೂ ಶಿಕ್ಷಣಕ್ಕೆ ಸಂಬಂಧಿಸಿ ಪ್ರತ್ಯಪ್ರತ್ಯೇಕ ವ್ಯಾಖ್ಯಾನವಿದೆಯೆಂದೂ ಭಿನ್ನ ಭಿನ್ನವಾದ ಕಲ್ಪನೆಯಿದೆಯೆಂದೂ

ಈ ಮೂಲಕ ಅರ್ಥೈಸಬಹುದಾಗಿದೆ. ಒಂದು ವ್ಯಾಖ್ಯೆ ಅಥವಾ ಒಂದು ಕಲ್ಪನೆಯ ಬಗ್ಗೆ ಒಮ್ಮತಾಭಿಪ್ರಾಯವಿರುವಂತಹ ಕೆಲವೇ ಮಂದಿ ಕಷ್ಟದಿಂದ ದೊರೆಯಬಹುದು. ಎಲ್ಲಿಯ ವರೆಗೆಂದರೆ, ಶಿಕ್ಷಣ ತಜ್ಞರುಗಳ ನಡುವೆಯೂ ಈ ವಿಷಯವಾಗಿ ಗಂಭೀರ ಭಿನ್ನಾಭಿಪ್ರಾಯ ಗಳು ಕಾಣಸಿಗುತ್ತವೆ. ಈ ಚಿಂತನಾ ಭಿನ್ನತೆಯ ಹಿಂದೆಯೂ ಹಲವು ಕಾರಣಗಳಿವೆ.

ಜೀವನ ಸಿದ್ಧಾಂತದ ಕುರಿತು ಅಭಿಪ್ರಾಯ ಭಿನ್ನತೆ

ಜೀವನಕ್ಕೆ ಸಂಬಂಧಿಸಿ ಜನರ ಸಿದ್ಧಾಂತಗಳು ಭಿನ್ನಭಿನ್ನವಾಗಿರುತ್ತವೆ. ಕೆಲವರು ಐಹಿಕ ಜೀವನ ಮತ್ತು ಇಲ್ಲಿನ ಸುಖಾಡಂಬರವನ್ನೇ ಸರ್ವಸ್ವವೆಂದು ಭಾವಿಸುತ್ತಾರೆ. ಇನ್ನು ಕೆಲವರು ಮರಣೋತ್ತರ ಜೀವನದ ಮೇಲೆ ನಂಬಿಕೆಯಿರಿಸಿದವರಾಗಿರುತ್ತಾರೆ ಮತ್ತು ಪರಲೋಕದ ಯಶಸ್ಸನ್ನು ತಮ್ಮ ಪರಮ ಗುರಿಯೆಂದು ಭಾವಿಸುತ್ತಾರೆ. ಕೆಲವರು ಸಂಪತ್ತು ಶೇಖರಿಸುವುದನ್ನು ಮತ್ತು ಬ್ಯಾಂಕ್ ಬ್ಯಾಲೆನ್ಸ್ ಹೆಚ್ಚಿಸುವುದನ್ನೇ ಜೀವನದ ಉದ್ದೇಶವೆಂದು ಭಾವಿಸಿದರೆ; ಮತ್ತೆ ಕೆಲವರ ಮಟ್ಟಿಗೆ ಅಧಿಕಾರ-ಶಕ್ತಿ ಗಳಿಸುವುದು ಮತ್ತು ಇತರರ ಮೇಲೆ ಪ್ರಭಾವ ಬೀರುವುದೇ ಸರ್ವಸ್ವವಾಗಿರುತ್ತದೆ. ಇನ್ನು ಕೆಲವರು ಐಹಿಕ ಜಂಜಡಗಳಿಂದ ದೂರವಿದ್ದು ಸನ್ಯಾಸ ಜೀವನದ ಮೇಲೆ ವಿಶ್ವಾಸ ಹೊಂದಿರುತ್ತಾರೆ. ಮತ್ತೆ ಕೆಲವರು ಇಹಲೋಕ ಜೀವನದ ಜಂಜಡಗಳ ಮಧ್ಯೆ ಇದ್ದುಕೊಂಡೇ ದೇವಸಂಪ್ರೀತಿ ಗಳಿಸುವುದರ ಮೇಲೆ ನಂಬಿಕೆಯಿಟ್ಟಿರುತ್ತಾರೆ. ಜೀವನದ ಬಗೆಗಿನ ಈ ವಿಭಿನ್ನ ಅಭಿಪ್ರಾಯಗಳೇ ಶಿಕ್ಷಣ-ತರಬೇತಿಯ ಕಲ್ಪನೆಯ ಮೇಲೂ ಪ್ರಭಾವ ಬೀರುತ್ತವೆ.

ಆದರ್ಶಗಳಲ್ಲಿನ ಭಿನ್ನತೆ

ಬೇರೆ ಬೇರೆ ಜನರಲ್ಲಿ ಬೇರೆ ಬೇರೆ ತೆರನಾದ ಆದರ್ಶಗಳಿರುತ್ತವೆ. ಒಬ್ಬನು ತನ್ನ ಮಗುವನ್ನು ಡಾಕ್ಟರ್ ಮಾಡಲು ಬಯಸುತ್ತಾನೆ, ಇನ್ನೊಬ್ಬನು ಇಂಜಿನಿಯರ್, ಮತ್ತೊಬ್ಬ ರಾಜಕಾರಣಿ, ಮಗುದೊಬ್ಬ ವಕೀಲ... ಹೀಗೆ ಕೆಲವರ ದೃಷ್ಟಿಯಲ್ಲಿ ಕೃಷಿ ಅಥವಾ ವ್ಯಾಪಾರ ಮಹತ್ವ ಪಡೆದಿದ್ದರೆ, ಇನ್ನು ಕೆಲವರಿಗೆ ಪತ್ರಿಕಾರಂಗ, ವ್ಯವಸಾಯ ಅಥವಾ ರಾಜಕೀಯ ಮುಖ್ಯವಾಗಿರುತ್ತದೆ. ಕೆಲವರು ತಮ್ಮ ಮಕ್ಕಳನ್ನು ವಿದ್ವಾಂಸರನ್ನಾಗಿ ಮಾಡಲು ಬಯಸಿದರೆ, ಇನ್ನು ಕೆಲವರು ಸರಕಾರಿ ಉದ್ಯೋಗಿಯಾಗಿಸಲು ಇಚ್ಛಿಸುತ್ತಾರೆ. ಒಟ್ಟಿನಲ್ಲಿ ಒಬ್ಬೊಬ್ಬರದೂ ಒಂದೊಂದು ಆದರ್ಶ. ಆದರ್ಶದಲ್ಲಿನ ಈ ಭಿನ್ನತೆಯ ಪರಿಣಾಮವಾಗಿ ಶಿಕ್ಷಣದ ಕುರಿತಾದ ಕಲ್ಪನೆಯೂ ಭಿನ್ನವಾಗಿರುತ್ತದೆ.

ಪರಿಸರದಲ್ಲಿನ ಭಿನ್ನತೆ

ಪ್ರತಿಯೊಂದು ಪ್ರದೇಶದ ಪ್ರಾಕೃತಿಕ ಮತ್ತು ಸಾಮಾಜಿಕ ಪರಿಸರವು ಪ್ರತ್ಯೇಕವಾಗಿರುತ್ತದೆ. ಆಯಾ ಪ್ರದೇಶದ ಜನರಲ್ಲಿ ತಂತಮ್ಮ ಪರಿಸರಕ್ಕೆ ಹೊಂದಿಕೊಳ್ಳಲು

ನಿರ್ದಿಷ್ಟ ಗುಣ ಮತ್ತು ಸಾಮರ್ಥ್ಯಗಳಿರಬೇಕಾಗುತ್ತದೆ. ಅದು ಶಿಕ್ಷಣ ಮತ್ತು ತರಬೇತಿಯ ಮೂಲಕವೇ ಈಡೇರಲು ಸಾಧ್ಯ. ಪರಿಸರ ಮತ್ತು ಅದರ ಬೇಡಿಕೆಗಳಲ್ಲಿನ ಈ ಭಿನ್ನತೆಗಳೇ ಶಿಕ್ಷಣದ ಕುರಿತಾದ ಕಲ್ಪನೆಗಳಲ್ಲಿ ಭಿನ್ನತೆಗೆ ಹೇತುವಾಗುತ್ತವೆ.

ಪರಿಸ್ಥಿತಿ ಮತ್ತು ಅಗತ್ಯಗಳಲ್ಲಿನ ಭಿನ್ನತೆ

ಪ್ರತಿಯೊಬ್ಬರದೂ ಭಿನ್ನಭಿನ್ನವಾದ ಪರಿಸ್ಥಿತಿ. ಹಾಗೆಯೇ ಪ್ರತಿಯೊಬ್ಬರಿಗೂ ತಮ್ಮದೇ ಆದ ಅಗತ್ಯಗಳಿರುತ್ತವೆ. ಶಿಕ್ಷಣದಲ್ಲಿ ಆ ಬಗ್ಗೆ ಹೊಂದಾಣಿಕೆ ಇಲ್ಲದಿದ್ದರೆ, ಅಸಮಾಧಾನ ಹುಟ್ಟಿಕೊಳ್ಳುವ ಸಾಧ್ಯತೆಯಿದೆ.

ವ್ಯಕ್ತಿತ್ವದ ಗೊಂದಲ

ಮಾನವನ ವ್ಯಕ್ತಿತ್ವವೇ ಗೊಂದಲಗಳಿಂದ ಕೂಡಿದೆ. ಅದರಲ್ಲಿ ಹಲವಾರು ಮಗ್ಗುಲುಗಳಿವೆ. ಉದಾಹರಣೆಗೆ: ಮಾನಸಿಕ, ದೈಹಿಕ, ಕಾರ್ಮಿಕ ಮತ್ತು ನೈತಿಕ ಇತ್ಯಾದಿ. ಒಬ್ಬರ ದೃಷ್ಟಿಯಲ್ಲಿ ಒಂದು ಮಗ್ಗುಲು ಪ್ರಮುಖವೆನಿಸಿದ್ದರೆ, ಇನ್ನೊಬ್ಬರ ಮಟ್ಟಿಗೆ ಇನ್ನೊಂದು ಮಗ್ಗುಲು ಮಹತ್ವದ್ದಾಗಿರುತ್ತದೆ. ಪ್ರತಿಯೊಬ್ಬರೂ ಶಿಕ್ಷಣ-ತರಬೇತಿಯ ಮುಖಾಂತರ ತನ್ನ ಇಷ್ಟದ ಮಗ್ಗುಲಿನ ಬೆಳವಣಿಗೆ, ಪ್ರಗತಿಗೇ ಹೆಚ್ಚು ಮಹತ್ವ ನೀಡುತ್ತಾರೆ. ಹಾಗೆಯೇ ಅದರಲ್ಲಿ ಕೊರತೆಯೇನಾದರೂ ಸಂಭವಿಸಿದರೆ ವ್ಯಾಕುಲಕ್ಕೊಳಗಾಗುತ್ತಾರೆ.

ಶಿಕ್ಷಣದ ವಿಧಾನದಲ್ಲಿ ಭಿನ್ನತೆ

ಹಲವರು ತಂತಮ್ಮ ಅನುಭವಗಳ ಆಧಾರದಲ್ಲಿ ಶಿಕ್ಷಣ-ತರಬೇತಿಯ ಹಲವಾರು ವಿಧಾನಗಳನ್ನು ಲಾಭದಾಯಕ ಮತ್ತು ಯಶಸ್ವಿ ಎಂದು ಕಂಡುಕೊಂಡಿದ್ದಾರೆ. ಹಾಗಾಗಿ ಇಂದು ಶಿಕ್ಷಣದ ಅನೇಕ ವಿಧಾನಗಳು ಚಾಲ್ತಿಯಲ್ಲಿವೆ. ಪ್ರತಿಯೊಬ್ಬರೂ ತಮಗಿಷ್ಟವಿರುವ ವಿಧಾನವನ್ನೇ ಸರಿ ಮತ್ತು ಯೋಗ್ಯವೆಂದು ಭಾವಿಸುತ್ತಾರೆ. ಆದರೆ ಶಿಕ್ಷಣದ ಪ್ರತಿಯೊಂದು ವ್ಯಾಖ್ಯೆ ಮತ್ತು ಎಲ್ಲ ವಿಧಾನಗಳೂ ಸರಿಯಾಗಲಾರದು ಎಂಬುದು ಸ್ಪಷ್ಟ. ಯಾವುದಾದರೂ ಒಂದು ಮಾತ್ರ ಯೋಗ್ಯ ಮತ್ತು ಸೂಕ್ತವೆನಿಸುವುದು.

ಶಿಕ್ಷಣದ ಅರ್ಥ

ನಿಘಂಟಿನಲ್ಲಿ ಶಿಕ್ಷಣಕ್ಕೆ ಏನಾದರೂ ತಿಳಿಸುವುದು, ಓದಿಸುವುದು ಅಥವಾ ಕಲಿಸುವುದು ಎಂಬ ಅರ್ಥಗಳಿವೆ. ಕೆಲವರು ಅದನ್ನು ಬೋಧನೆಗೆ ಪರ್ಯಾಯವಾಗಿಯೂ ಭಾವಿಸುವವರಿದ್ದಾರೆ. ಅಂದರೆ ವಿದ್ಯಾರ್ಥಿಗಳಿಗೆ ಕೇವಲ ಪಠ್ಯಪುಸ್ತಕದ ವಿಷಯವನ್ನು ಬೋಧಿಸುವುದು ಅಥವಾ ಓದುಬರೆಹ ಮತ್ತು ಲೆಕ್ಕ ಇತ್ಯಾದಿ ಕಲಿಸುವುದು. ವಸ್ತುತಃ ಶಿಕ್ಷಣವೆಂಬುದು ಒಂದು ಸಮಗ್ರ ಪದವಾಗಿದೆ. ಅದರ ಅರ್ಥ ವ್ಯಾಪ್ತಿಯಲ್ಲಿ ಬೋಧನೆ

ಯೊಂದಿಗೆ ಕಲೆಯಲ್ಲಿಯೂ ಪಕ್ವತೆಯನ್ನು ಬೆಳೆಸುವುದು ಸೇರಿದೆ. ಹಾಗೆಯೇ ಸಾಹಿತ್ಯ, ತರಬೇತಿ, ವ್ಯಕ್ತಿತ್ವದ ವಿಭಿನ್ನ ಮಗ್ಗುಲುಗಳಲ್ಲಿ ಸಾಮರಸ್ಯ ಬೆಳೆಸುವುದು ಕೂಡ ಸೇರಿದೆ.

ಶಿಕ್ಷಣದ ಸಂಕ್ಷಿಪ್ತ ಮತ್ತು ವಿಶಾಲಾರ್ಥ

ಶಿಕ್ಷಣ ಎಂಬ ಪದ ಕೇಳುತ್ತಲೇ, ವಿದ್ಯಾರ್ಥಿಗಳಿಗಾಗಿ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ವ್ಯವಸ್ಥಿತ ಪ್ರಯತ್ನಗಳ ಕಡೆಗೆ ಗಮನ ಹೊರಳುತ್ತದೆ. ನಿಸ್ಸಂಶಯವಾಗಿಯೂ ವ್ಯವಸ್ಥಿತ ಮತ್ತು ಸಾಂಪ್ರದಾಯಿಕ (Formal) ಶಿಕ್ಷಣ ಅದುವೇ ಆಗಿದೆ. ಮಾತ್ರವಲ್ಲ, ಅದರ ಪ್ರಭಾವವೂ ದೂರಗಾಮಿಯಾಗಿರುತ್ತದೆ. ಆದರೆ ಅದು ಶಿಕ್ಷಣದ ತೀರಾ ಸಂಕ್ಷಿಪ್ತ ವ್ಯಾಖ್ಯೆಯಾಗಿದೆ. ಯಾಕೆಂದರೆ, ಶಿಕ್ಷಣ ಸಂಸ್ಥೆ(ವಿದ್ಯಾಲಯ)ಗಳಲ್ಲಿ ಮಕ್ಕಳು ಬಹಳ ಕಡಿಮೆ ಸಮಯವನ್ನಷ್ಟೇ ವ್ಯಯಿಸುತ್ತಾರೆ ಮತ್ತು ಅತ್ಯಲ್ಪವೇ ವಿಷಯಗಳನ್ನು ಕಲಿಯುತ್ತಾರೆ, ಸ್ವಲ್ಪವೇ ಅನುಭವಗಳನ್ನು ಹೊಂದುತ್ತಾರೆ. ವಸ್ತುತಃ ಅವರ ಈ ಅರಿಯುವ, ಕಲಿಯುವ ಮತ್ತು ಅನುಭವ ಗಳಿಸುವ ಕ್ರಿಯೆಯು ಹುಟ್ಟಿನಿಂದ ಸಾವಿನ ವರೆಗೂ ನಿರಂತರ ಜಾರಿಯಲ್ಲಿರುತ್ತದೆ. ಶಿಕ್ಷಣ ಸಂಸ್ಥೆಗಳ ವ್ಯವಸ್ಥಿತ ಶಿಕ್ಷಣದ ಹೊರತಾಗಿ ಇನ್ನೂ ಎಷ್ಟೋ ವಿಷಯಗಳನ್ನು ಅವರು ತಮ್ಮ ಮನೆ, ಕೇರಿ, ನೆರೆಕರೆ, ಪ್ರಾಕೃತಿಕ ಮತ್ತು ಸಾಮಾಜಿಕ ಪರಿಸರ, ತನ್ನ ಸುತ್ತ ಹರಡಿಕೊಂಡಿರುವ ಈ ಜಗತ್ತು ಹಾಗೂ ಇದರಲ್ಲಿ ಬಾಳುತ್ತಿರುವ ಜನರಿಂದಲೂ ಕಲಿಯುತ್ತಾರೆ. ಆದರೆ ಈ ಶಿಕ್ಷಣವು ಅಸಾಂಪ್ರದಾಯಿಕ ಮತ್ತು ಅವ್ಯವಸ್ಥಿತ (Informal) ಆಗಿರುತ್ತದೆ. ಆದರೆ ಪ್ರಭಾವ ಮತ್ತು ಪರಿಣಾಮದ ದೃಷ್ಟಿಯಿಂದ ವ್ಯವಸ್ಥಿತ ಶಿಕ್ಷಣಕ್ಕಿಂತ ಕಡಿಮೆಯೇನೂ ಇರುವುದಿಲ್ಲ.

ಈ ಪ್ರಕಾರ, ಶಿಕ್ಷಣದ ವಿಶಾಲಾರ್ಥದಲ್ಲಿ, ಪ್ರತಿಯೋರ್ವರೂ ಮಡಿಲಿನಿಂದ ಗೋರಿಯ ವರೆಗೂ ವ್ಯವಸ್ಥಿತ ಮತ್ತು ಅವ್ಯವಸ್ಥಿತವಾಗಿ ಸ್ವಯಂ ಗಳಿಸುವ ಅಥವಾ ಅವರಿಗೆ ಇತರರು ಕಲಿಸುವ ಸಕಲ ಪ್ರಕ್ರಿಯೆ, ಮಾಹಿತಿ ಮತ್ತು ಅನುಭವಗಳು ಒಳಗೊಂಡಿರುತ್ತವೆ.

◆ ◆ ◆

ಅಧ್ಯಾಯ - 3

ಶಿಕ್ಷಣ-ತರಬೇತಿಯ ಮೇಲೆ ಪ್ರಭಾವ ಬೀರುವ ಅಂಶಗಳು

ಮಕ್ಕಳ ಶಿಕ್ಷಣ ಮತ್ತು ತರಬೇತಿಯ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತವೆ ಎಂಬುದು ಶಿಕ್ಷಣದ ವಿಶಾಲಾರ್ಥದ ಮೂಲಕ ಸ್ಪಷ್ಟವಾಗುತ್ತದೆ. ಅವುಗಳ ಪೈಕಿ ಬಹಳ ಪ್ರಮುಖವಾದವು ಇವು: 1. ಮನೆ, 2. ಶಾಲೆ/ಮದ್ರಸಾ, 3. ಪರಿಸರ, 4. ಸಮಾಜ ಮತ್ತು 5. ಆಡಳಿತ ಅಥವಾ ದೇಶ.

1. ಮನೆ

ಶಿಕ್ಷಣ-ತರಬೇತಿಯ ಸರ್ವ ಪ್ರಥಮ ಮತ್ತು ಬಹುಮುಖ್ಯ ಸಂಸ್ಥೆ ಮನೆಯಾಗಿದೆ. ಜನನದಿಂದ ನಾಲ್ಕೈದು ವರ್ಷ ಪ್ರಾಯದ ವರೆಗೆ ಮಗುವಿನ ನಡೆ-ನುಡಿ ಮನೆಯ ನಾಲ್ಕು ಗೋಡೆಗಳಿಗೆ ಸೀಮಿತವಾಗಿರುತ್ತದೆ. ಈ ಹಂತದಲ್ಲಿ ಮಗು, ಮನೆಮಂದಿ ಮತ್ತು ಮನೆಯ ಪರಿಸರದಿಂದ ಪಡೆಯುವ ಪ್ರಭಾವವು ದೂರಗಾಮಿ ಹಾಗೂ ಅತಿ ಪ್ರಮುಖದ್ದಾಗಿರುತ್ತದೆ. ಇಲ್ಲಿಯೇ ಮಗು ನಡೆ-ನುಡಿ, ಆಹಾರ ಸೇವನೆಯ ಅಭ್ಯಾಸವನ್ನು ಪಡೆಯುತ್ತದೆ. ಮಗುವಿನ ತರಬೇತಿ ಮತ್ತು ಪೋಷಣೆಗೆ ಅಗತ್ಯವಾಗಿ ಇರಬೇಕಾದಂತಹ ನೈಜ ಪ್ರೀತಿ, ವಾತ್ಸಲ್ಯ, ಅನುಕಂಪ, ಸಹಕಾರ, ಪ್ರೋತ್ಸಾಹ ಎಲ್ಲವೂ ದೊರೆಯುತ್ತದೆ. ಮಾತಾಪಿತರು, ಸೋದರ-ಸೋದರಿಯರು, ಅಜ್ಜ-ಅಜ್ಜಿ ಮತ್ತಿತರ ನಿಕಟ ಬಂಧುಗಳು ಬೇರೆ ಬೇರೆ ರೀತಿಯಲ್ಲಿ ಮಗುವಿಗೆ ಶಿಕ್ಷಣ-ತರಬೇತಿಯನ್ನು ನೀಡುತ್ತಾರೆ. ಅವರ ಅಭ್ಯಾಸ-ನಡವಳಿಕೆಗಳು, ಚಲನ-ವಲನ ಇತ್ಯಾದಿಗಳನ್ನು ಅನುಕರಿಸುತ್ತ ಮಗು ತನ್ನಲ್ಲಿ ವಿವಿಧ ಗುಣಗಳನ್ನು ಬೆಳೆಸುತ್ತದೆ. ಮಕ್ಕಳ ಸ್ವಚ್ಛ-ನಿರ್ಮಲ ಮನಸ್ಸಿನಲ್ಲಿ ಅಚ್ಚೊತ್ತಲ್ಪಡುವ ಕೌಟುಂಬಿಕ ಜೀವನದ ಗಾಢ ಚಿಹ್ನೆಗಳು ಜೀವನಪರ್ಯಂತ ಅಳಿದು ಹೋಗದಂತಹವುಗಳಾಗಿವೆ. ಶಾಲೆ/ಮದ್ರಸಗಳಿಗೆ ಸೇರಿದ ಬಳಿಕವೂ ಮನೆಯ

ಪ್ರಾಧಾನ್ಯತೆಯು ಕುಂದುವುದಿಲ್ಲ. ಏಕೆಂದರೆ ಮಕ್ಕಳು ಶಾಲೆಗಳಲ್ಲಿ ಕೆಲವೇ ಗಂಟೆಗಳಷ್ಟು ಕಾಲ ಇರುತ್ತಾರೆ. ಆ ಒಂದು ಸಂಕ್ಷಿಪ್ತ ಅವಧಿಯಲ್ಲಿ ಮಕ್ಕಳಿಗೆ ಓದಿಸುವುದು, ಬರೆಸುವುದು; ಅವರಿಗೆ ದೈಹಿಕ, ಬೌದ್ಧಿಕ ಮತ್ತು ನೈತಿಕ ತರಬೇತಿ ನೀಡುವುದು; ಅವರ ನಡೆ-ನುಡಿಗಳ ಮೇಲೆ ಕಣ್ಣಿಡುವುದು ಇತ್ಯಾದಿ ಕೆಲಸಗಳು ಮನೆಯ ಸಹಕಾರವಿಲ್ಲದೆ ಕೇವಲ ಶಾಲೆಯೊಂದರಿಂದಲೇ ಸಾಧ್ಯವೆನ್ನುವಂತಿಲ್ಲ. ಆದ್ದರಿಂದ ಮನೆಯು ಈ ಕೆಳಗಿನ ಕರ್ತವ್ಯಗಳನ್ನು ಪಾಲಿಸಬೇಕಾದುದು ತೀರಾ ಅಗತ್ಯ.

ಕರ್ತವ್ಯಗಳು

ಪೋಷಣೆ, ದೈಹಿಕ ತರಬೇತಿ ಮತ್ತು ಆರೋಗ್ಯ-ಶುಚಿತ್ವದೆಡೆಗೆ ಗಮನ. ಆಹಾರ, ಪಾನೀಯ ಮತ್ತು ವಸ್ತ್ರದ ವ್ಯವಸ್ಥೆ, ದೇಹ ಮತ್ತು ಬಟ್ಟೆಯ ಸ್ವಚ್ಛತೆ, ಕಾಲಕಾಲಕ್ಕೆ ಸ್ನಾನ ಮಾಡುವ, ಬಟ್ಟೆ ಬದಲಿಸುವ, ಉಗುರು-ಕೂದಲು ಕತ್ತರಿಸುವ ಮತ್ತಿತರ ಕಾರ್ಯಗಳನ್ನು ವ್ಯವಸ್ಥಿತವಾಗಿ ಕಲಿಸುವುದು. ಆಟೋಟ, ವ್ಯಾಯಾಮ ಮತ್ತು ಆರೋಗ್ಯ ಸಂರಕ್ಷಣೆಯ ನಿಯಮಗಳನ್ನು ಪಾಲಿಸುವಂತೆ ಪ್ರೇರೇಪಿಸುವುದು ಇತ್ಯಾದಿ.

ಮಗುವಿನ ನಡೆ-ನುಡಿಯ ಮೇಲೆ ಕಣ್ಣಿಡುವುದು, ಪ್ರೀತಿ-ವಾತ್ಸಲ್ಯದಿಂದ ಅದನ್ನು ತರಬೇತುಗೊಳಿಸುವುದು ಮತ್ತು ಕ್ರಮೇಣ ಉತ್ತಮ ಗುಣ-ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು.

ಶಿಕ್ಷಣ-ತರಬೇತಿಗೆ ಸಂಬಂಧಿಸಿ ಶಾಲೆ/ಮದ್ರಸಗಳಿಂದ ನೀಡಲಾಗುವ ಸೂಚನೆಗಳನ್ನು ಪಾಲಿಸುವಂತೆ ಮಾಡುವುದು.

ಕೌಟುಂಬಿಕ ಜೀವನವನ್ನು ಪಾವನವಾಗಿರಿಸುವುದು ಮತ್ತು ಕುಟುಂಬ ಸದಸ್ಯರ ಪರಸ್ಪರ ಸಂಬಂಧಗಳನ್ನು ಉತ್ತಮವಾಗಿರಿಸಲು ಪ್ರಯತ್ನಿಸುವುದು. ಆ ಮೂಲಕ ಮಗು ಪ್ರಜ್ಞಾಪೂರ್ವಕವಾಗಿಯೂ ಅಪ್ರಜ್ಞಾಪೂರ್ವಕವಾಗಿಯೂ ಉತ್ತಮ ಮಾದರಿಯನ್ನು ಅನುಸರಿಸುವಂತಾಗಬೇಕು.

ಮನೆಯ ಕೆಲಸ-ಕಾರ್ಯಗಳಲ್ಲಿ ಕೈ ಜೋಡಿಸಲು ಅವಕಾಶ ನೀಡುವುದು. ಬಿಡುವಿನ ವೇಳೆಗಳಲ್ಲಿ ಆಸಕ್ತಿದಾಯಕವಾದ ಯಾವುದಾದರೂ ಹವ್ಯಾಸ(Hobby)ದಲ್ಲಿ ಪಾಲ್ಗೊಳಿಸುವುದು. ಹಾಗೆಯೇ ಸಾಮರ್ಥ್ಯವನ್ನು ಅನುಸರಿಸಿ ಮನೆಯ ಯಾವುದಾದರೂ ಹೊಣೆಗಾರಿಕೆಯನ್ನು ಒಪ್ಪಿಸಿಕೊಡುವುದು. ಈ ಮೂಲಕ ಮಗುವಿನಲ್ಲಿ ಪರಿಶ್ರಮ, ಹೊಣೆಗಾರಿಕಾ ಪ್ರಜ್ಞೆ, ಕಾರ್ಯಮಗ್ನತೆ ಮತ್ತು ಸಹಕಾರಿ ಮನೋಭಾವಗಳು ಬೆಳೆಯಲು ಸಹಾಯಕವಾಗುತ್ತದೆ.

ಮಗುವಿಗೆ ಸ್ನೇಹಿತರೊಡನೆ ಆಟವಾಡಲು, ಸಂಬಂಧಿಗಳೊಡನೆ ಬೆರೆಯಲು ಅವಕಾಶ ನೀಡಬೇಕು. ಈ ಮೂಲಕ ಮಗುವಿಗೆ ಸಾಮಾಜಿಕ ತರಬೇತಿಯನ್ನು ಹೊಂದಲು

ಸಹಕಾರಿಯಾಗುತ್ತದೆ. ಅದೇ ವೇಳೆ ಮಗುವಿನ ಮಿತ್ರರ ನಡತೆಯ ಮೇಲೂ ಒಂದು ಕಣ್ಣಿಟ್ಟಿರುವುದು ಮತ್ತು ಕೆಟ್ಟ ಸಾಂಗತ್ಯದಿಂದ ಮಗುವನ್ನು ದೂರವಿಡುವುದು ಕೂಡ ಅಗತ್ಯ.

ಮಕ್ಕಳ ಸ್ವಾಭಿಮಾನವನ್ನು ಪರಿಗಣಿಸುವುದು ಮತ್ತು ಧರ್ಮಸಮ್ಮತ ಮೇರೆಯೊಳಗಿದ್ದು ಕೊಂಡು ಅವರ ಆಸಕ್ತಿ-ಭಾವನೆಗಳಿಗೆ ಮಾನ್ಯತೆ ನೀಡುವುದು.

ಮಗು ಅನಿವಾರ್ಯವಾಗಿ ಧಾರ್ಮಿಕ ವಿದ್ಯಾಭ್ಯಾಸವಿಲ್ಲದ ಶಾಲೆಯಲ್ಲಿ ಕಲಿಯುತ್ತಿದ್ದರೆ, ಸ್ವತಃ ಅದರ ವ್ಯವಸ್ಥೆ ಮಾಡುವುದು.

ಇವು ಮಗುವಿಗೆ ಮನೆಯಿಂದ ಸಲ್ಲಬಹುದಾದ ಮಾತ್ರವಲ್ಲ, ಸಲ್ಲಲೇ ಬೇಕಾದ ಕೌಟುಂಬಿಕ ಕರ್ತವ್ಯಗಳಾಗಿವೆ. ಆದರೆ ಅಜ್ಞಾನ, ದಾರಿದ್ರ್ಯ, ಸಂಪನ್ಮೂಲ-ಸೌಲಭ್ಯಗಳ ಕೊರತೆ, ಮಾತಾಪಿತರ ನಿಬಿಡತೆ ಮತ್ತು ಸಾರ್ವತ್ರಿಕ ಕೆಡುಕುಗಳ ಕಾರಣವಾಗಿ ಮನೆಯು ತನ್ನ ಕರ್ತವ್ಯಗಳನ್ನು ಸರಿಯಾಗಿ ಪಾಲಿಸುವಲ್ಲಿ ವಿಫಲವಾಗುತ್ತಿದೆ. ಕೈಗಾರಿಕಾ ಕ್ರಾಂತಿಯು ಕುಟುಂಬ ವ್ಯವಸ್ಥೆಯನ್ನು ಇನ್ನಷ್ಟು ಬಿಗಡಾಯಿಸಿಬಿಟ್ಟಿದೆ. ತಂದೆ ಒಂದು ಕಡೆ ಇದ್ದರೆ, ಮಕ್ಕಳು ಇನ್ನೊಂದು ಕಡೆ. ಹೀಗಿರುತ್ತಾ ಮಕ್ಕಳ ಪೋಷಣೆ ಯಾರು ಮಾಡುತ್ತಾರೆ? ತತ್ಪರಿಣಾಮವಾಗಿ ಶಾಲೆಯು ಮನೆಯ ಸಹಕಾರದಿಂದ ವಂಚಿತಗೊಳ್ಳುತ್ತದೆ. ಸೀಮಿತ ಸೌಲಭ್ಯದ ಕಾರಣ ಶಾಲೆಗಳೂ ಸಾಮಾನ್ಯವಾಗಿ ಸುದೃಢವಾಗಿರುವುದಿಲ್ಲ. ಆದ್ದರಿಂದ ಶಿಕ್ಷಣ-ತರಬೇತಿಯ ಸಂಪೂರ್ಣ ಹೊಣೆಯನ್ನು ವಹಿಸಲು ಅವು ಶಕ್ತವಿರುವುದಿಲ್ಲ. ಇದರಿಂದ ಮಕ್ಕಳ ಶಿಕ್ಷಣ-ತರಬೇತಿ ತೀವ್ರವಾಗಿ ಪ್ರಭಾವಕ್ಕೊಳಗಾಗುತ್ತದೆ. ಹಾಗಾಗಿ ಕೌಟುಂಬಿಕ ವ್ಯವಸ್ಥೆಯನ್ನು ಸ್ಥಿರಗೊಳಿಸುವ ಮತ್ತು ಮನೆಮಂದಿ ತಮ್ಮ ಮಕ್ಕಳ ಕುರಿತ ಕರ್ತವ್ಯಗಳನ್ನು ಪಾಲಿಸುವ ಕಡೆಗೆ ಗಮನ ಕೊಡಬೇಕಾದುದು ಅತಿ ಅಗತ್ಯ. ಅನ್ಯಥಾ ಮುಂದಿನ ಪೀಳಿಗೆಯನ್ನು ನಿಯಂತ್ರಿಸುವುದೇ ದುಸ್ತರವಾದೀತು.

2. ಶಾಲೆ

ಮಕ್ಕಳ ಶಿಕ್ಷಣ-ತರಬೇತಿಯಲ್ಲಿ ಪ್ರಭಾವ ಬೀರುವ ಎರಡನೆಯ ಮಹತ್ತರ ಘಟ್ಟ ಶಾಲೆಯಾಗಿದೆ. ಮಕ್ಕಳ ವ್ಯಕ್ತಿತ್ವದ ವಿವಿಧ ಮಗ್ಗುಲುಗಳನ್ನು ಅತ್ಯುತ್ತಮ ರೀತಿಯಲ್ಲಿ ಬೆಳೆಸುವ ಹೊಣೆಗಾರಿಕೆ ಶಾಲೆಯ ಮೇಲಿದೆ. ಮಕ್ಕಳು ಶಾಲೆಯಿಂದ ಹೊರಗೆ ಕಲಿಯುವಂತಹ ವಿಷಯಗಳಲ್ಲಿ ಒಂದು ವ್ಯವಸ್ಥೆ ಅಥವಾ ಅಚ್ಚುಕಟ್ಟುತನ ಇರುವುದಿಲ್ಲ. ಅದೇ ವೇಳೆ, ಶಾಲೆಯು ಪ್ರತಿಭಾವಂತ ಅಧ್ಯಾಪಕರ ಸಹಾಯದಿಂದ ಒಂದು ವಿಶಿಷ್ಟ ವ್ಯವಸ್ಥೆ ಮತ್ತು ಕ್ರಮಬದ್ಧತೆಯೊಂದಿಗೆ ಮಕ್ಕಳಿಗೆ ಶಿಕ್ಷಣ ನೀಡುವ ಹಾಗೂ ಅವರ ಚಾರಿತ್ರ್ಯ ಮತ್ತು ವ್ಯಕ್ತಿತ್ವವನ್ನು ರೂಪಿಸುವ ವ್ಯವಸ್ಥಿತ ಸಂಸ್ಥೆಯಾಗಿದೆ. ಮನೆಯಂತೆಯೇ ಮಕ್ಕಳಿಗೆ ತಮ್ಮ ಶಾಲೆಯೊಂದಿಗೂ ಭಾವನಾತ್ಮಕ ಬಂಧುತ್ವವಿರುತ್ತದೆ. ಅವರು ತಮ್ಮ ಅಧ್ಯಾಪಕರನ್ನು ಜಗತ್ತಿನ ಅತಿದೊಡ್ಡ ವ್ಯಕ್ತಿಯೆಂದು ಭಾವಿಸುತ್ತಾರೆ. ಅವರ ರೂಢಿ-ಪದ್ಧತಿಗಳ ಮೇಲೆ

ಅಸಾಮಾನ್ಯ ವಿಶ್ವಾಸವನ್ನು ಹೊಂದಿರುತ್ತಾರೆ. ಅವರ ಚಾರಿತ್ರ್ಯ ಮತ್ತು ನಡತೆಯನ್ನು ತಮ್ಮ ಪಾಲಿಗೆ ಅನುಸರಣಾರ್ಹ ಮಾದರಿಯೆಂದು ಬಗೆಯುತ್ತಾರೆ. ಶಾಲೆಯ ವಾತಾವರಣವು ಅವರ ಮೇಲೆ ಅಪಾರವಾದ ಪ್ರಭಾವವನ್ನುಂಟು ಮಾಡುತ್ತದೆ. ಇಲ್ಲಿ ಮಕ್ಕಳ ಚಾರಿತ್ರ್ಯ ಮತ್ತು ವ್ಯಕ್ತಿತ್ವದ ಮೇಲೆ ಅಚ್ಚಾಗುವ ಚಿತ್ರವು ಜೀವನ ಪರ್ಯಂತ ಸ್ಥಿರವಾಗಿರುತ್ತದೆ. ಇದೇ ಕಾರಣದಿಂದ ಶಾಲೆಗೆ ಮಹತ್ವಪೂರ್ಣ ಸ್ಥಾನವಿದೆ.

ಶಾಲೆಯ ಕರ್ತವ್ಯಗಳು

ಶಾಲೆಗಳು ಈ ಕೆಳಗಿನ ಕರ್ತವ್ಯಗಳನ್ನು ಪಾಲಿಸಬೇಕಾದುದು ಅಗತ್ಯ-

ಮಕ್ಕಳನ್ನು ವಿವಿಧ ಜ್ಞಾನ ಮತ್ತು ಕಲೆಯಲ್ಲಿ ಪಾರಂಗತರಾಗಿಸುವುದು. ಮಕ್ಕಳು ಅಲ್ಲಿ-ಇಲ್ಲಿಂದ ಕಲಿಯುವ ಅಥವಾ ಗಳಿಸುವ ವಿಷಯಗಳು ಸಾಮಾನ್ಯವಾಗಿ ಅಪೂರ್ಣ ಅಥವಾ ಅರೆಬರೆಯಾಗಿರುತ್ತವೆ. ಅದರಲ್ಲಿ ಯಾವುದೇ ವ್ಯವಸ್ಥೆ ಮತ್ತು ಕ್ರಮಬದ್ಧತೆಯಿರುವುದಿಲ್ಲ, ಅದೇ ವಿಷಯಗಳನ್ನು ಹಂತಹಂತವಾಗಿ ಮತ್ತು ವ್ಯವಸ್ಥಿತವಾಗಿ ನೀಡುವುದು ಹಾಗೂ ಮಕ್ಕಳನ್ನು ಅವುಗಳಲ್ಲಿ ಪಾರಂಗತರಾಗಿಸುವುದು ಶಾಲೆಯ ಕರ್ತವ್ಯವಾಗಿರುತ್ತದೆ.

ಸುಧಾರಣೆ ಮತ್ತು ತರಬೇತಿ ನೀಡುವುದು. ಶೈಕ್ಷಣಿಕ, ದೈಹಿಕ ಅಥವಾ ನೈತಿಕವಾಗಿ ಮಕ್ಕಳಲ್ಲಿ ಬೆಳೆದು ಬರಬಹುದಾದ ಕೆಡುಕುಗಳನ್ನು ನಿವಾರಿಸುವುದು ಮತ್ತು ಅವರಲ್ಲಿ ಸುಧಾರಣೆ ತರುವುದು, ಉತ್ತಮ ಅಭ್ಯಾಸಗಳನ್ನು ರೂಢಿಸುವುದು, ಅವರ ಆಂತರಿಕ ಪ್ರತಿಭೆಯನ್ನು ಸರಿಯಾದ ದಿಕ್ಕಿಗೆ ತರುವುದು... ಹೀಗೆ ಅವರಲ್ಲಿ ವೈಯಕ್ತಿಕ, ಸಾಮಾಜಿಕ ಮತ್ತು ಕೌಟುಂಬಿಕ ಹೊಣೆಗಾರಿಕೆಗಳನ್ನು ಅತ್ಯುತ್ತಮ ರೀತಿಯಲ್ಲಿ ನಿಭಾಯಿಸಲು ಶಕ್ತರಾಗುವಂತಹ ನೈತಿಕ ಗುಣಗಳನ್ನು ಬೆಳೆಸುವುದು.

ಸಮಾಜದ ಅನಿಷ್ಟಕಾರಿ ಒಲವುಗಳನ್ನು ವಿರೋಧಿಸುವಂತಾಗಲು ಮತ್ತು ಅದರಿಂದ ಸ್ವಯಂ ತನ್ನನ್ನು ದೂರವಿರಿಸಲು ಹಾಗೂ ಇತರರನ್ನೂ ರಕ್ಷಿಸುವಂತಾಗಲು ಮಕ್ಕಳಲ್ಲಿ ಒಳಿತು-ಕೆಡುಕುಗಳ ವ್ಯತ್ಯಾಸ, ಸತ್ಯಪ್ರಿಯತೆ, ಮಿಥ್ಯವಿರೋಧ, ಒಳಿತನ್ನು ಹರಡುವ ಮತ್ತು ಕೆಡುಕನ್ನು ನಿರೋಧಿಸುವ ಗುಣವನ್ನು ಬೆಳೆಸಬೇಕು.

ಮಕ್ಕಳು ವಾಸ್ತವಿಕ ಜಗತ್ತಿನಲ್ಲಿ ಯಶಸ್ವಿಯಾಗಿ ಜೀವಿಸುವಂತಾಗಲು ಅವರ ಬಾಲ್ಯ-ಯೌವನ, ಪುಸ್ತಕಲೋಕ-ಕರ್ಮರಂಗ ಹಾಗೂ ಶಾಲೆ-ಸಮಾಜಗಳ ನಡುವೆ ಇರುವ ಅಂತರ ಅಥವಾ ಖಾಲಿ ಜಾಗವನ್ನು ತುಂಬುವುದು.

ಮಾನವ ಕುಲದ ಪ್ರಯೋಜನಕಾರಿ ಅನುಭವ ಸಂಶೋಧನೆಗಳನ್ನು ಹಾಗೂ ಪೂರ್ವಜರಿಂದ ವಾರೀಸಾಗಿ ದೊರೆತ ಶಿಕ್ಷಣ, ಕಲೆ ಮತ್ತು ಸಂಸ್ಕೃತಿಯ ರಕ್ಷಣೆ ಹಾಗೂ ಅದರಲ್ಲಿ ಇನ್ನಷ್ಟು ಉತ್ತಮ ಅಂಶಗಳನ್ನು ಸೇರಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸುವುದು. ನಮ್ಮ ಪೂರ್ವಜರು ನಮಗಾಗಿ ವಾರೀಸಿನಲ್ಲಿ ಬಿಟ್ಟು ಹೋಗಿರುವ ಜ್ಞಾನ-ತಂತ್ರಜ್ಞಾನವನ್ನು

ರಕ್ಷಿಸುವುದು ಮತ್ತು ಅದರಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಿ ಮುಂದಿನ ಪೀಳಿಗೆಗೆ ವರ್ಗಾಯಿಸುವುದು ಶಾಲೆಗಳ ಕರ್ತವ್ಯವಾಗಿದೆ.

ಕಲಿತ ವಿದ್ಯೆಯನ್ನು ಸ್ವಯಂ ಅನುಸರಿಸುವ ಮತ್ತು ಇತರರಿಗೂ ಅದನ್ನು ತಲುಪಿಸುವ ಪ್ರಜ್ಞೆಯನ್ನು ಮಕ್ಕಳಲ್ಲಿ ಬೆಳೆಸಬೇಕು.

ಸಮಾಜಕ್ಕೆ ವಿದ್ಯೆ-ಅನುಗ್ರಹದ ಒಂದು ಮಾನದಂಡವನ್ನು ಒದಗಿಸಿಕೊಡಬೇಕು. ಅಂದರೆ ಶಾಲೆಗಳಿಂದ ಕಲಿತು ಪಾರಂಗತರಾಗಿ ಪ್ರಮಾಣ ಪತ್ರ ಪಡೆದ ವಿದ್ಯಾರ್ಥಿಗಳ ಪೈಕಿ ಯಾರಲ್ಲಿ ಯಾವ ಪ್ರತಿಭೆಯಿದೆ ಮತ್ತು ಯಾರು, ಯಾವ ಕೆಲಸಕ್ಕೆ ಅರ್ಹರು ಎಂಬುದನ್ನು ಅವರ ಪ್ರಮಾಣ ಪತ್ರದಿಂದಲೇ ಸಮಾಜ ಗುರುತಿಸಿಕೊಳ್ಳಬೇಕು.

ವಿದ್ಯಾರ್ಥಿಗಳಲ್ಲಿ ಬೌದ್ಧಿಕ, ದೈಹಿಕ, ಸಾಮಾಜಿಕ ಮತ್ತು ನೈತಿಕ ನೆಲೆಯಲ್ಲಿ ಇರುವ ವ್ಯತ್ಯಾಸವನ್ನು ಗುರುತಿಸಿ ಅವರ ಬಗ್ಗೆ ವೈಯಕ್ತಿಕ ಗಮನ ಹರಿಸಬೇಕು. ಈ ಮೂಲಕ ಪ್ರತಿಯೊಂದು ಮಗುವೂ ತನ್ನ ಸಾಮರ್ಥ್ಯ ಮತ್ತು ಪ್ರತಿಭೆಯಂತೆ ಮುಂದುವರಿಯಂತಾಗಬೇಕು.

3. ಪರಿಸರ

ಇದು ಮೂರನೆಯ ಪ್ರಮುಖ ಅಂಶವಾಗಿದೆ. ಮಕ್ಕಳ ಶಿಕ್ಷಣ-ತರಬೇತಿಯಲ್ಲಿ ಪರಿಸರದ ಪ್ರಭಾವವೂ ಬಹಳ ಗಾಢವಾಗಿರುತ್ತದೆ. ಮಗು ಬೆಳೆಯುವ ಭೌಗೋಳಿಕ ಪರಿಸರ, ಅದು ಕಾಣುವ ದೃಶ್ಯಗಳು, ಸಂಬಂಧ ಹೊಂದುವ ವಿಭಾಗ (ಜನ) ಹಾಗೂ ಯಾವ ಮಕ್ಕಳೊಂದಿಗೆ ಆಟವಾಡುತ್ತ ಒಡನಾಡುತ್ತ ಇರುತ್ತದೋ ಅವೆಲ್ಲದರ ಒಟ್ಟು ಪ್ರಭಾವವನ್ನು ಮಗು ಪಡೆಯುತ್ತಿರುತ್ತದೆ. ನೆರೆಕರೆಯ ಜನರ ವ್ಯವಹಾರ, ವಿಶ್ವಾಸ-ಕರ್ಮ, ಆಚಾರ-ವಿಚಾರ ಇತ್ಯಾದಿಗಳಿಂದಲೂ ಮಗು ಪ್ರಭಾವಕ್ಕೊಳಗಾಗುತ್ತದೆ. ಪರಿಸರ ಉತ್ತಮವಿದ್ದರೆ, ಮನೆ ಮತ್ತು ಶಾಲೆ/ಮದ್ರಸದ ಪ್ರಯತ್ನಗಳು ಫಲ ನೀಡುತ್ತವೆ. ಅನ್ಯಥಾ ಎರಡೂ ವಿಭಾಗಗಳಿಗೆ ಬಹಳಷ್ಟು ತೊಂದರೆಗಳನ್ನು ಎದುರಿಸಬೇಕಾಗಿ ಬರುತ್ತದೆ. ಹಲವು ಸಂದರ್ಭಗಳಲ್ಲಿ ಉತ್ತಮ ಮನೆತನದ ಮಕ್ಕಳು ಮತ್ತು ಮಾದರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳು ಕೂಡ ಎಲ್ಲ ರೀತಿಯ ಪ್ರಯತ್ನಗಳ ಹೊರತಾಗಿಯೂ ಕೆಟ್ಟ ಪರಿಸರಕ್ಕೆ ಬಲಿಬೀಳುತ್ತಾರೆ ಹಾಗೂ ಅವರ ಬೆಳವಣಿಗೆಯು ಸರಿಯಾದ ದಾರಿಯಲ್ಲಿ ಆಗುವುದಿಲ್ಲ, ಆದ್ದರಿಂದ ಪರಿಸರವನ್ನು ಮಕ್ಕಳ ಶಿಕ್ಷಣ-ತರಬೇತಿಗೆ ಉಪಯುಕ್ತವಾಗಿ ರೂಪಿಸಲು ಪ್ರಯತ್ನಿಸಬೇಕಾಗಿದೆ.

4. ಸಮಾಜ

ಮಾನವನು ವಸ್ತುತಃ ಪರಿಸರ ಮತ್ತು ಸಮಾಜದ ಉತ್ಪನ್ನವಾಗಿದ್ದಾನೆ. ತನ್ನ ಪರಿಸರದ ಚಿಂತನೆಗಿಂತ ಉನ್ನತವಾಗಿ ಏನನ್ನಾದರೂ ಆಲೋಚಿಸುವ ಮತ್ತು ಅದರಂತೆ ವರ್ತಿಸುವಂತಹ ಕ್ರಾಂತಿಕಾರಿ ಮನಸ್ಸಿನ ಅಥವಾ ಇಬ್ರಾಹೀಮಿ(ಸಂಶೋಧನಾತ್ಮಕ) ದೃಷ್ಟಿಕೋನ ಹೊಂದಿರುವ

ಮಂದಿ ಸಮಾಜದಲ್ಲಿ ಕಾಣಸಿಗುವುದು ಬಹಳ ವಿರಳ. ವಸ್ತುತಃ, ಸಮಾಜದಲ್ಲಿ ಹೆಚ್ಚು ಚಾಲ್ತಿಯಲ್ಲಿರುವ ವಸ್ತು/ವಿಷಯಗಳನ್ನೇ ಜನರು ತಿಳಿದೋ ತಿಳಿಯದೆಯೋ ತಮ್ಮದಾಗಿಸಿಕೊಳ್ಳುತ್ತಾರೆ.

ಇಂದಿನ ಸಮಾಜದಲ್ಲಿ ಜನರ ಮೇಲೆ ತನ್ನ ಒಳ್ಳೆಯ ಅಥವಾ ಕೆಟ್ಟ ಛಾಪನ್ನು ಮೂಡಿಸುವಂತಹ ಅನೇಕ ವಸ್ತು/ವಿಷಯಗಳಿರುತ್ತವೆ. ಉದಾಹರಣೆಗೆ: ವಿಭಿನ್ನ ರೀತಿಯ ಧಾರ್ಮಿಕ, ಸಾಮಾಜಿಕ, ರಾಜಕೀಯ ಸಂಘ-ಸಂಸ್ಥೆಗಳು; ಕ್ಲಬ್‌ಗಳು, ಮುದ್ರಣ ಮಾಧ್ಯಮ, ವೇದಿಕೆ, ಸಿನೀಮಾ, ರೇಡಿಯೋ, ಜಾತ್ರೆ-ಸಂತೆ, ಗ್ರಂಥಾಲಯ, ವಾಚನಾಲಯ, ವಸ್ತು ಸಂಗ್ರಹಾಲಯ, ಪ್ರದರ್ಶನಾಲಯ, ಜನಸೇವೆ ಮತ್ತು ಜನಕಲ್ಯಾಣ ಸಂಸ್ಥೆಗಳು ಇತ್ಯಾದಿ... ಜನರು ಇಂತಹವುಗಳಿಂದ ಜೀವನ ಪೂರ್ತಿ ಏನನ್ನಾದರೂ ಕಲಿಯುತ್ತಲೂ ಪ್ರಭಾವ ಹೊಂದುತ್ತಲೂ ಇರುತ್ತಾರೆ. ಸಮಾಜದ ಈ ವಿವಿಧ ಅಂಶಗಳು ಸರಿಯಾದ ನಿಟ್ಟಿನಲ್ಲಿ ಕಾರ್ಯವೆಸಗಿದರೆ ಜನರನ್ನು ಉದ್ಧರಿಸಲು ಮತ್ತು ಅವರ ಚಾರಿತ್ರ್ಯವನ್ನು ಉತ್ತಮಪಡಿಸಲು ಸಹಕಾರಿಯಾಗುತ್ತವೆ. ಮಾತ್ರವಲ್ಲ, ಸ್ವಯಂ ತಮ್ಮ ಪಾಲಿಗೆ ನಿಷ್ಕಾಮ ಕರ್ಮಿಗಳನ್ನು ಸಿದ್ಧಪಡಿಸುತ್ತದೆ. ಅನ್ಯಥಾ ಆ ವಿಷಯಗಳ ಕಾರಣವಾಗಿಯೇ ಜನರು ಕೆಡುತ್ತಾರೆ. ಮಾತ್ರವಲ್ಲ, ಸಮಾಜದೊಂದಿಗೆ ಅವರೂ ಅಧಃಪತನಕ್ಕೀಡಾಗುತ್ತಾರೆ.

ಸಮಾಜದ ಕರ್ತವ್ಯಗಳು

ಸಮಾಜದ ಕರ್ತವ್ಯಗಳು ಈ ಕೆಳಗಿನಂತಿವೆ:

1. ಕೆಡುಕುಗಳು ಬೆಳೆದು ಸಮಾಜವನ್ನು ಕೆಡಿಸುವುದರಿಂದ ತಡೆಯಲು ಸಾಮೂಹಿಕ ಆತ್ಮಸಾಕ್ಷಿಯನ್ನು ಜೀವಂತವಿರಿಸುವುದು.
2. ಎಲ್ಲ ರೀತಿಯ ಪ್ರತಿಭೆ ಮತ್ತು ಒಲವುಗಳುಳ್ಳ ಮಂದಿ ಸ್ವಯಂ ಲಾಭಾನ್ವಿತರಾಗಲು ಹಾಗೂ ಸಮಾಜಕ್ಕೂ ಪ್ರಯೋಜನವನ್ನುಂಟು ಮಾಡುವಂತಾಗಲು ತರತರದ ಸಂಸ್ಥೆಗಳು, ಕ್ಲಬ್‌ಗಳು ಮತ್ತು ಸೊಸೈಟಿಗಳನ್ನು ಸ್ಥಾಪಿಸುವುದು.
3. ವ್ಯಕ್ತಿ ಮತ್ತು ಸಂಸ್ಥೆಗಳ ಮೇಲೆ ದೃಷ್ಟಿಯನ್ನಿರಿಸುವುದು. ಒಳಿತಿನಲ್ಲಿ ಅವುಗಳೊಂದಿಗೆ ಸಂಪೂರ್ಣ ಸಹಕಾರ ಮತ್ತು ಕೆಡುಕಿನ ನಿರ್ಮೂಲನದಲ್ಲಿ ಸಕ್ರಿಯ ಪಾತ್ರ ವಹಿಸುವುದು.
4. ಸಮಾಜದ ಹಿಂದುಳಿದ, ಅಸಹಾಯಕ ಮತ್ತು ಮರ್ದಿತ ಜನರಿಗೆ ಆಶ್ರಯ ನೀಡುವುದು ಹಾಗೂ ಅವರ ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು.

5. ಆಡಳಿತ ಅಥವಾ ಸರಕಾರ

ಆಡಳಿತದ ಪರಿಧಿಯು ದಿನೇದಿನೇ ವಿಶಾಲವಾಗುತ್ತಿದೆ. ಸಾಮೂಹಿಕ ವಿಷಯಗಳಿಂದ ಮುಂದೆ ಹೋಗಿ ಇಂದು ಅದು, ವೈಯಕ್ತಿಕ (ಖಾಸಗಿ) ಜೀವನದಲ್ಲೂ ಹಸ್ತಕ್ಷೇಪ

ನಡೆಸುತ್ತಿದೆ. ಅದರ ಸೌಲಭ್ಯ-ಸಂಪನ್ಮೂಲಗಳು ಅಪಾರವಾದುದು. ನಾಗರಿಕರ ಜೀವನದ ಯಾವುದೇ ವಿಭಾಗವೂ ಅದರ ಪ್ರಭಾವದಿಂದ ಮುಕ್ತವಾಗಿಲ್ಲ. ಹಾಗಾಗಿ ಶಿಕ್ಷಣ-ತರಬೇತಿಯ ಮೇಲೆ ಇದು ಕೂಡ ಅತಿ ದೊಡ್ಡ ಮತ್ತು ಅತ್ಯಂತ ಪ್ರಭಾವಶಾಲಿ ಅಂಶವಾಗಿದೆ. ಇಂತಹ ಸ್ಥಿತಿಯಲ್ಲಿ ಇದರ ಹೊಣೆಗಾರಿಕೆಗಳು ಬಹಳ ಹೆಚ್ಚಾಗುತ್ತಿವೆ.

ಕರ್ತವ್ಯಗಳು

ಆಡಳಿತದ ಮೇಲೆ ಈ ಕೆಳಗಿನ ಹೊಣೆಗಾರಿಕೆಗಳಿವೆ:

1. ಪ್ರತಿಯೋರ್ವ ನಾಗರಿಕನಿಗೂ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು.
2. ಪ್ರೌಢರ ಶಿಕ್ಷಣಕ್ಕೆ ವ್ಯವಸ್ಥೆ ಮಾಡುವುದು.
3. ಜಾತಿ-ಮತ-ಧರ್ಮ-ವರ್ಗ-ವರ್ಣ ಭೇದವಿಲ್ಲದೆ ಪ್ರತಿಯೋರ್ವರಿಗೂ ಅವರ ಪ್ರತಿಭೆ, ಯೋಗ್ಯತೆಗನುಸಾರ ಶಿಕ್ಷಣ ಪಡೆಯುವ ಅವಕಾಶ ಒದಗಿಸುವುದು.
4. ಶಿಕ್ಷಣ-ಕಲೆ, ಕೈಗಾರಿಕೆ-ವಾಣಿಜ್ಯ, ತಂತ್ರಜ್ಞಾನ-ಕೃಷಿ, ವೈದ್ಯಕೀಯ ಇತ್ಯಾದಿಗಳ ಪ್ರಗತಿಗಾಗಿ ಸಣ್ಣ ಮತ್ತು ದೊಡ್ಡ ಮಟ್ಟದ ವಿವಿಧ ಸಂಸ್ಥೆಗಳನ್ನು ಸ್ಥಾಪಿಸುವುದು.
5. ಅಲ್ಪಸಂಖ್ಯಾತರಿಗೆ ಅವರ ಇಷ್ಟದ ಶಿಕ್ಷಣ ಸಂಸ್ಥೆಯನ್ನು ನಡೆಸಲು ಸವಲತ್ತುಗಳನ್ನು ನೀಡುವುದು.
6. ಖಾಸಗಿ ಸಂಸ್ಥೆಗಳಿಗೆ ಸಾಧ್ಯಂತ ಸ್ವತಂತ್ರವಾಗಿ ಕಾರ್ಯವೆಸಗಲು ಅವಕಾಶ ನೀಡುವುದು.
7. ನಾಗರಿಕರ ಶಿಕ್ಷಣ-ತರಬೇತಿಯ ಕುರಿತು ಅತ್ಯಧಿಕ ಗಮನ ಹರಿಸುವುದು ಹಾಗೂ ರಾಷ್ಟ್ರೀಯ ಬಜೆಟ್‌ನಲ್ಲಿ ಅದಕ್ಕಾಗಿ ಆದಷ್ಟು ಹೆಚ್ಚು ಸೌಲಭ್ಯವನ್ನೀಯುವುದು.
8. ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ ಮತ್ತು ಸೌಲಭ್ಯಗಳನ್ನು ಒದಗಿಸುವುದು.
9. ಕಿವುಡ, ಮೂಗ, ಅಂಧ, ಬುದ್ಧಿಮಾಂದ್ಯ, ಮಾನಸಿಕ ಹಾಗೂ ದೈಹಿಕ ವೈಕಲ್ಯವಿರುವ ಮಕ್ಕಳಿಗಾಗಿ ಅವರ ಸ್ಥಿತಿಗತಿಗನುಸಾರ ಶಿಕ್ಷಣ-ತರಬೇತಿಯ ವ್ಯವಸ್ಥೆ ಮಾಡುವುದು.
10. ಶಿಕ್ಷಣ-ತರಬೇತಿಯನ್ನು ಸುಲಭ, ಆಸಕ್ತಿದಾಯಕ, ಪ್ರಭಾವಶಾಲಿ ಮತ್ತು ಸಾರ್ವತ್ರಿಕಗೊಳಿಸುವ ವಿಧಾನದ ಕುರಿತು ಸಂಶೋಧನೆ ನಡೆಸಲು ಹಾಗೂ ಮಾದರಿ ಪಠ್ಯ ಮತ್ತು ಪಠ್ಯೇತರ ಪುಸ್ತಕಗಳ ರಚನೆಗೆ ಸೌಲಭ್ಯವನ್ನು ಒದಗಿಸುವುದು.
11. ಆದಷ್ಟು ಸುಸ್ವಭಾವಿ ಮತ್ತು ಪ್ರತಿಭಾವಂತ ಅಧ್ಯಾಪಕರನ್ನು ಸಿದ್ಧಗೊಳಿಸುವುದು.

ಇದು ಶಿಕ್ಷಣ-ತರಬೇತಿಯ ಮೇಲೆ ಪ್ರಭಾವ ಬೀರುವ ವಿವಿಧ ಅಂಶಗಳಾಗಿವೆ. ಈ ಅಂಶಗಳ ಒಳಿತು ಕೆಡುಕು, ಕರ್ತವ್ಯಪಾಲನೆ, ನಿರ್ಲಕ್ಷ್ಯಗಳನ್ನೇ ಶಿಕ್ಷಣ-ತರಬೇತಿಯ ಪರಿಣಾಮವು ಅವಲಂಬಿಸಿದೆ. ಆದರೆ ಸ್ವಯಂ ಶಿಕ್ಷಣ-ತರಬೇತಿಯು ಒಳ್ಳೆಯದೋ ಕೆಟ್ಟದ್ದೋ ಎಂಬುದು ಆಯಾ ಸಂಸ್ಥೆಯ ಸ್ಥಾಪನೆ ಮತ್ತು ಚಾಲನೆಯ ಹಿಂದಿರುವ ಉದ್ದೇಶವನ್ನು ಅವಲಂಬಿಸಿದೆ.

ಆದ್ದರಿಂದ ಉತ್ತಮ ಶಿಕ್ಷಣ-ತರಬೇತಿ ನೀಡಬೇಕಾದರೆ, ಆ ಸಂಸ್ಥೆಗಳನ್ನು ಉತ್ತಮ ಮತ್ತು ಕರ್ತವ್ಯನಿಷ್ಠವನ್ನಾಗಿ ಮಾಡಲು ಪ್ರಯತ್ನಿಸಬೇಕಾಗಿದೆ. ಅದರ ಹಿಂದೆ ಕೆಲಸ ಮಾಡುವ ಕಲ್ಪನೆ ಮತ್ತು ಉದ್ದೇಶಗಳು ಸರಿಯಾಗಿದ್ದರೆ ಮಾತ್ರ ಅದನ್ನು ಸಾಧಿಸಬಹುದು.

◆ ◆ ◆

ಅಧ್ಯಾಯ - 4

ಶಿಕ್ಷಣದ ಉದ್ದೇಶ

ಶಿಕ್ಷಣದ ವ್ಯಾಖ್ಯಾನದಂತೆಯೇ ಅದರ ಉದ್ದೇಶದ ಕುರಿತೂ ಬಹುಶಃ ಭಿನ್ನಾಭಿಪ್ರಾಯಗಳಿವೆ. ಪಾಲಕರು ತಮ್ಮ ಮಕ್ಕಳು ಕಲಿತು ಸ್ವತಃ ಸಂಪಾದಿಸಿ ತಿನ್ನಲು ಅರ್ಹರಾಗಬೇಕೆಂದು ಅವರಿಗೆ ಶಿಕ್ಷಣ ನೀಡುತ್ತಾರೆ. 'ಆರ್ಥಿಕತೆಗಾಗಿ ಶಿಕ್ಷಣ' ಎಂಬುದೇ ಅವರ ಮೂಲಭೂತ ಉದ್ದೇಶ ಆಗಿರುತ್ತದೆ. ಆದರೆ ಅದನ್ನು ನೇರವಾಗಿ ಒಪ್ಪಿಕೊಳ್ಳುವುದಿಲ್ಲ, ನಿಸ್ಸಂದೇಹವಾಗಿಯೂ ಸಂಪಾದಿಸುವುದು, ತಿನ್ನುವುದು ಮಾನವನ ಮೂಲಭೂತ ಆಗತ್ಯವಾಗಿದೆ ಮತ್ತು ಮಕ್ಕಳು ಕಲಿತು, ತಮ್ಮ ಕಾಲ ಮೇಲೆ ನಿಲ್ಲುವಂತಾಗಬೇಕೆಂಬ ಚಿಂತೆ ಪ್ರತಿಯೋರ್ವ ಮಾತಾಪಿತರಿಗೂ ಇರಬೇಕಾಗಿದೆ. ಆದರೆ ಅದು ಮಾತ್ರ ಮಾನವೀಯತೆಯ ಬೇಡಿಕೆಯಾಗಿರುವುದಲ್ಲ, ಕೇವಲ ಅದನ್ನೇ ಶಿಕ್ಷಣದ ಮೂಲಭೂತ ಉದ್ದೇಶವೆಂದು ಬಗೆದರೆ ಮಗು ಆರ್ಥಿಕ ಪ್ರಾಣಿಯಾಗಿ ಬೆಳೆಯಬಹುದೇ ಹೊರತು ಮಾನವ ಖಂಡಿತ ಆಗಲಾರದು. ಅದೂ ಅಲ್ಲದೆ ಮುಸ್ಲಿಮನ ಮಟ್ಟಿಗೆ ಜೀವಕ್ಕಿಂತಲೂ ಈಮಾನ್ ಹೆಚ್ಚು ಪ್ರಿಯವಾಗಿದೆ. ಇಂತಹ ಸ್ಥಿತಿಯಲ್ಲಿ ಆರ್ಥಿಕತೆಯನ್ನೇ ಜೀವನದ ಪರಮ ಗುರಿಯೆಂದು ಬಗೆದು, ಶಿಕ್ಷಣ-ತರಬೇತಿಯ ಗಾಣವನ್ನು ಅದರ ಸುತ್ತಲೇ ತಿರುಗಿಸುವುದು ವಾಸ್ತವದಲ್ಲಿ ಮಕ್ಕಳ ಮೇಲೆ ಮಾಡುವ ಉಪಕಾರವಲ್ಲ, ಬದಲಾಗಿ ಅವರ ಮೇಲೆಸಗುವ ದೌರ್ಜನ್ಯವಾಗುತ್ತದೆ.

ಅದೇ ರೀತಿ, ಹೆಚ್ಚಿನ ಅಧ್ಯಾಪಕರು, ಬಾಯಿಯಿಂದ ಏನೇ ಹೇಳಿದರೂ ಕಾರ್ಯತಃ ಜ್ಞಾನ ಗಳಿಸುವುದೇ ಶಿಕ್ಷಣದ ಉದ್ದೇಶವೆಂದು ಭಾವಿಸುತ್ತಾರೆ. ವಿದ್ಯಾರ್ಥಿಗಳು ತಮ್ಮೆಲ್ಲ ಗಮನವನ್ನು ಓದು-ಬರಹದಲ್ಲಿ, ವಿದ್ಯಾ ಪ್ರೌಢಿಮೆ ಗಳಿಸುವಲ್ಲಿ ಮತ್ತು ಉತ್ತಮ ಅಂಕಗಳೊಂದಿಗೆ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದರಲ್ಲಿ ಕೇಂದ್ರೀಕರಿಸಬೇಕೆಂದು ಬಯಸುತ್ತಾರೆ. ಅವರ ದೃಷ್ಟಿಯಲ್ಲಿ ವ್ಯಕ್ತಿತ್ವದ ಇತರ ಮಗ್ಗುಲುಗಳು (ದೈಹಿಕ, ವ್ಯಾವಹಾರಿಕ, ನೈತಿಕ ಇತ್ಯಾದಿ) ಮಂದವಾಗಿ ಬಿಡುತ್ತವೆ. ವಸ್ತುತಃ ಸಂತುಲಿತ ಮತ್ತು ಯಶಸ್ವಿ ಜೀವನಕ್ಕೆ ಆ ಎಲ್ಲ ಮಗ್ಗುಲುಗಳು ಶಿಕ್ಷಣದಷ್ಟೇ ಗಮನಾರ್ಹವಾಗಿರುತ್ತದೆ ಕೆಲವೊಮ್ಮೆ ಅದಕ್ಕಿಂತಲೂ ಹೆಚ್ಚು.

ಶೈಕ್ಷಣಿಕ ಅರ್ಹತೆಯಲ್ಲಿ ಹೆಚ್ಚಳವು ಖಂಡಿತವಾಗಿಯೂ ಅಗತ್ಯವಿದೆ ಮತ್ತು ಅದು ಅಪಾರ ಗಮನವನ್ನು ಬಯಸುತ್ತದೆ. ಆದರೆ ವ್ಯಕ್ತಿತ್ವದ ಇತರ ಮಗ್ಗುಲುಗಳನ್ನು ಕಡೆಗಣಿಸುವುದೋ ಅಥವಾ ವಿದ್ಯಾರ್ಹತೆಗಾಗಿ ಬಲಿ ನೀಡುವುದೋ ನಡೆದರೆ ಅದು ಅತಿ ಅಪಾಯಕಾರಿಯಾಗಿ ಪರಿಣಮಿಸುತ್ತದೆ. ಉನ್ನತ ಶಿಕ್ಷಣ ಪಡೆದ ವ್ಯಕ್ತಿಗಳೇ ಹೆಚ್ಚಾಗಿ ಆರೋಗ್ಯ, ನೈತಿಕ ಅಥವಾ ವ್ಯಾವಹಾರಿಕ ನೆಲೆಯಲ್ಲಿ ಅಯೋಗ್ಯರೆನಿಸಿಕೊಂಡು ಸ್ವಯಂ ತಮಗೂ ಇತರರಿಗೂ ಪ್ರಯೋಜನಕಾರಿಯಾಗುವುದರ ಬದಲು ಹಾನಿಕಾರಕರಾಗಿ ಬಿಡುತ್ತಾರೆಂಬುದು ವಾಸ್ತವ.

ಶಿಕ್ಷಣದ ಇತರ ಅನೇಕ ಉದ್ದೇಶಗಳನ್ನೂ ಪಟ್ಟಿ ಮಾಡಬಹುದಾಗಿದೆ. ಅವುಗಳ ಪೈಕಿ ಕೆಲವು ಈ ರೀತಿ ಇವೆ-

1. ಸಮಾಜದ ನಿಷ್ಕಾಮಕರ್ಮಿ ಸೇವಕರನ್ನು ತಯಾರಿಸುವುದು.
2. ದೇಶದ ಉತ್ತಮ ನಾಗರಿಕರನ್ನು ರೂಪಿಸುವುದು.
3. ವ್ಯಕ್ತಿತ್ವದ ವಿವಿಧ ಮಗ್ಗುಲುಗಳನ್ನು ಸಂತುಲಿತವಾಗಿ ಉತ್ತಮಪಡಿಸುವುದು.
4. ವೈಯಕ್ತಿಕತೆಯನ್ನು ಬೆಳೆಸುವುದು ಮತ್ತು ಆತ್ಮಾಭಿಮಾನವನ್ನು ಹೆಚ್ಚಿಸುವುದು.
5. ಜೀವನ ಸಾಗಿಸಲು ಸಂಪೂರ್ಣ ರೀತಿಯಲ್ಲಿ ಸಿದ್ಧಗೊಳಿಸುವುದು. ಅಂದರೆ ವಿದ್ಯಾರ್ಥಿಗಳನ್ನು..
   - ಅ. ತಮ್ಮ ಸ್ವಂತಿಕೆಯನ್ನು ರಕ್ಷಿಸಲು
   - ಆ. ಸಾಮಾನ್ಯ ಜೀವನಾವಶ್ಯಕ ವಸ್ತುಗಳನ್ನು ಪೂರೈಸಲು
   - ಇ. ಸಂತಾನ ಮತ್ತು ಕುಟುಂಬ ಪೋಷಣೆ ವಹಿಸಲು
   - ಈ. ಸಾಮಾಜಿಕ ಸಂಬಂಧವನ್ನು ನೆಲೆಗೊಳಿಸಲು ಮತ್ತು
   - ಉ. ಬಿಡುವಿನ ಸಮಯವನ್ನು ಉತ್ತಮ ರೀತಿಯಲ್ಲಿ ಕಳೆಯಲು ಯೋಗ್ಯಗೊಳಿಸುವುದು.
6. ಆರೋಗ್ಯಪೂರ್ಣ ದೇಹದಲ್ಲಿ ಆರೋಗ್ಯಪೂರ್ಣ ಮನಸ್ಸು-ಹೃದಯವನ್ನು ಬೆಳೆಸುವುದು ಇತ್ಯಾದಿ.

ಶಿಕ್ಷಣದ ಕುರಿತಾದ ಈ ಮೇಲಿನ ಉದ್ದೇಶಗಳ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ನಿರಾಕರಿಸಲಾಗದು. ಆದರೆ ಆ ಪೈಕಿ ಯಾವುದಾದರೂ ಒಂದು ಸ್ವಯಂ ಉದ್ದೇಶ ವಾಗಲಾರದು. ಏಕೆಂದರೆ ಪ್ರತಿಯೊಂದು ಭಿನ್ನಭಿನ್ನವಾಗಿದ್ದರೆ ಅಪೂರ್ಣ ಉದ್ದೇಶವಾಗುತ್ತದೆ. ಏಕಮುಖವಾಗುತ್ತದೆ ಅಥವಾ ಅಸ್ಪಷ್ಟವಾಗುತ್ತದೆ.

ಶಿಕ್ಷಣದ ನೈಜ ಉದ್ದೇಶ

'ಅಲ್ಲಾಹನ ಸಜ್ಜನ ದಾಸರನ್ನಾಗಿ ರೂಪಿಸುವುದು.'

ಅಂದರೆ ವಿದ್ಯಾರ್ಥಿಗಳ ಸ್ವಾಭಾವಿಕ ಪ್ರತಿಭೆಗಳನ್ನು ಅಭಿವ್ಯಕ್ತಗೊಳಿಸುವುದು, ಅವರ

ಪ್ರಾಕೃತಿಕ ಒಲವುಗಳನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವುದು ಹಾಗೂ ಬೌದ್ಧಿಕ, ದೈಹಿಕ, ವ್ಯಾವಹಾರಿಕ ಮತ್ತು ನೈತಿಕ ನೆಲೆಯಲ್ಲಿ ಹಂತಹಂತವಾಗಿ ಅವರನ್ನು ದೇವನ ಕೃತಜ್ಞ ದಾಸರನ್ನಾಗಿ ಮಾಡುವುದು, ಜಗತ್ತಿನಲ್ಲಿ ದೇವೇಚ್ಛೆಯಂತೆ ವ್ಯವಹರಿಸಲು ಹಾಗೂ ವೈಯಕ್ತಿಕವಾಗಿ, ಕೌಟುಂಬಿಕವಾಗಿ ಮತ್ತು ಸಾಮೂಹಿಕವಾಗಿ ಅವರ ಮೇಲೆ ದೇವನು ಹೊರಿಸಿದ ಹೊಣೆಗಾರಿಕೆಗಳನ್ನು ಅತ್ಯುತ್ತಮವಾಗಿ ನಿಭಾಯಿಸುವಂತೆ ಮಾಡುವುದು.

ಇದುವೇ ಶಿಕ್ಷಣದ ಸರಿಯಾದ ಸಮಗ್ರ ಮತ್ತು ಮೂಲಭೂತ ಉದ್ದೇಶವಾಗಿದೆ. ಏಕೆಂದರೆ, ಸರ್ವರನ್ನೂ ಅಲ್ಲಾಹನೇ ಸೃಷ್ಟಿಸಿದ್ದಾನೆ. ಅವನೇ ಎಲ್ಲರ ಪಾಲನೆ-ಪೋಷಣೆ ಮಾಡುತ್ತಾನೆ ಮತ್ತು ಎಲ್ಲರ ಅಗತ್ಯಗಳನ್ನೂ ಅವನೇ ಪೂರೈಸುತ್ತಾನೆ. ಅವನೇ ಎಲ್ಲರ ಒಡೆಯ, ಆರಾಧ್ಯ, ಸಾಮ್ರಾಟ. ಅವನ ಸಾಮ್ರಾಜ್ಯವು ಅನಂತವಾದುದು. ನಾವು ವಾಸಿಸುತ್ತಿರುವ ಈ ವಿಶಾಲ ಭೂಮಿಯೂ ಅವನ ಸಾಮ್ರಾಜ್ಯದ ಒಂದು ಸಣ್ಣ ವಿಭಾಗ ಮಾತ್ರ. ಈ ಭೂಮಿಯನ್ನು ಅಲ್ಲಾಹನು ತರತರವಾದ ಅನುಗ್ರಹಗಳಿಂದ ಸಂಪನ್ನಗೊಳಿಸಿದ್ದಾನೆ. ಆ ಅನುಗ್ರಹಗಳನ್ನು ನಮಗೆ ಅಧೀನಗೊಳಿಸಿ ನಮ್ಮನ್ನು (ಮಾನವರನ್ನು) ಈ ಭೂಮಿಯಲ್ಲಿ ನೆಲೆಗೊಳಿಸಿದನು. ವಿಶ್ವದ ಸಕಲ ವಸ್ತುಗಳ ನೈಜ ಒಡೆಯ ಅಲ್ಲಾಹನೇ ಆಗಿದ್ದಾನೆ. ನಮಗೆ ಇಲ್ಲಿ ದೊರೆತಿರುವುದೆಲ್ಲವೂ ಅವನ ಅಮಾನತ್ತಾಗಿದೆ. ನಾವಾದರೋ ಅಲ್ಲಾಹನ ದಾಸರೂ ಗುಲಾಮರೂ ಆಗಿದ್ದೇವೆ. ನಮಗೆ ಇಲ್ಲಿ ಜೀವನ ಸಾಗಿಸಲು ಸುಸ್ಪಷ್ಟ ವಿಧಾನಗಳನ್ನೂ ಕಲಿಸಿದ್ದಾನೆ. ಹಾಗಾಗಿ ಅವನ ಅನುಗ್ರಹಗಳಿಗೆ ಕೃತಜ್ಞರಾಗಬೇಕಾದುದು, ಅವನು ತೋರಿದ ದಾರಿಯಲ್ಲಿ ನಡೆಯುವುದು ಮತ್ತು ಅವನ ಸಾಮ್ರಾಜ್ಯದಲ್ಲಿ ಅವನ ಇಚ್ಛೆಯನ್ನು ಈಡೇರಿಸುವುದು ನಮ್ಮ ಕರ್ತವ್ಯವಾಗಿದೆ. ಅಲ್ಲಾಹನು ನಮ್ಮ ಮೇಲೆ ತರತರವಾದ ಹೊಣೆಗಾರಿಕೆಗಳನ್ನು ಹೊರಿಸಿದ್ದಾನೆ. ಆ ಹೊಣೆಗಾರಿಕೆಗಳನ್ನು ಈಡೇರಿಸಲು ನಮಗೆ ಸುದೃಢವಾದ ದೇಹವನ್ನು ಒದಗಿಸಿದ್ದಾನೆ. ಈ ದೇಹದಲ್ಲಿ ಹಲವು ರೀತಿಯ ಶಕ್ತಿ-ಸಾಮರ್ಥ್ಯಗಳನ್ನು ಇರಿಸಿದ್ದಾನೆ. ಸುತ್ತಮುತ್ತ ಹಲವು ತರದ ಸಂಪನ್ಮೂಲ ಮತ್ತು ಮಾಧ್ಯಮಗಳನ್ನು ಒದಗಿಸಿದ್ದಾನೆ. ಅವನು ದಯಪಾಲಿಸಿರುವ ಯಾವ ವಸ್ತುವೂ ನಿರರ್ಥಕವಲ್ಲ, ಹಾಗಾಗಿ ಅಲ್ಲಾಹನು ನೀಡಿರುವ ಶಕ್ತಿ-ಸಾಮರ್ಥ್ಯಗಳನ್ನು ಮತ್ತು ಸಂಪತ್ -ಸೌಕರ್ಯಗಳನ್ನು ಅವನ ಇಂಗಿತಕ್ಕೆ ಅನುಸಾರ ಬಳಸುವುದರಲ್ಲಿಯೇ ನಮ್ಮ ಯಶಸ್ಸು ಅಡಗಿದೆ. ಅಂದರೆ ಅಲ್ಲಾಹನ ಕೃತಜ್ಞ ಮತ್ತು ಸಜ್ಜನ ದಾಸರಾಗಿ ಬಾಳುವುದಾಗಿದೆ.

ಇನ್ನು ಶಿಕ್ಷಣ-ತರಬೇತಿಯಲ್ಲಿ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಿದರೆ ಮಾತ್ರ ಪ್ರಸ್ತುತ ಉದ್ದೇಶ ಈಡೇರಬಹುದೆಂಬುದು ಸ್ಪಷ್ಟ.

1. ದೈಹಿಕ ಆರೋಗ್ಯ: ಅಲ್ಲಾಹನು ಸುಂದರ ದೇಹ ನೀಡಿರುವಾಗ ಅದರ ಆರೋಗ್ಯ, ಬೆಳವಣಿಗೆಗಾಗಿ ಅಗತ್ಯದ ಮಾಹಿತಿಗಳನ್ನು ಒದಗಿಸುವುದು, ಆರೋಗ್ಯ ಸಂರಕ್ಷಣೆಯ ನೀತಿಗಳನ್ನು ಪಾಲಿಸುವುದು, ದೈಹಿಕ ಪರಿಶ್ರಮ, ವ್ಯಾಯಾಮ ಅಥವಾ

ಆಟೋಟ ಮತ್ತು ಸ್ವಚ್ಛತೆಯನ್ನು ಅಭ್ಯಾಸ ಮಾಡಿಸುವುದು, ಹಾಗೆಯೇ ಮುನ್ನೆಚ್ಚರಿಕಾ ವಿಧಾನಗಳನ್ನು ಕಲಿಸಿ ಕೊಡುವುದು.

2. ಸ್ವಾಭಾವಿಕ ಸಾಮರ್ಥ್ಯ ಮತ್ತು ಪ್ರತಿಭೆಗಳ ಪೋಷಣೆ: ಅಲ್ಲಾಹನು ಮಾನವನಲ್ಲಿ ಪ್ರಾಕೃತಿಕವಾಗಿ ಇಟ್ಟಿರುವಂತಹ ಸ್ವಾಭಾವಿಕ ಶಕ್ತಿ-ಸಾಮರ್ಥ್ಯಗಳು ಪ್ರತಿಯೋರ್ವನ ಮಟ್ಟಿಗೂ ಅಗತ್ಯ ಮತ್ತು ಪ್ರಯೋಜನಕಾರಿಯಾಗಿದೆ. ಅವುಗಳನ್ನು ಬಳಸುವ ಕುರಿತು ಚಿಂತಿಸುವುದು ಮತ್ತು ಅವುಗಳನ್ನು ಸರಿಯಾದ ನಿಟ್ಟಿನಲ್ಲಿ ಬಳಸಲು ಸಹಕರಿಸುವುದು. ಅವುಗಳ ಪೈಕಿ ಯಾವುದನ್ನೂ ದಮನಿಸುವುದೋ ನಿರ್ಲಕ್ಷಿಸುವುದೋ ಮಾಡಬಾರದು.

3. ಸ್ವಾಭಾವಿಕ ಆಶೆ-ಆಕಾಂಕ್ಷೆಗಳನ್ನು ಸರಿಯಾದ ದಿಕ್ಕಿಗೆ ಕೊಂಡೊಯ್ಯುವುದು ಮತ್ತು ಉತ್ತಮ ಹಾಗೂ ಪ್ರಯೋಜನಕಾರಿ ಹವ್ಯಾಸಗಳಲ್ಲಿ ಆಸಕ್ತಿಯನ್ನುಂಟು ಮಾಡುವುದು. ಇಸ್ಲಾಮಿಯಾತ್, ಭಾಷೆ-ಸಭ್ಯತೆ, ಸಾಮಾಜಿಕ ಜ್ಞಾನ ಮತ್ತು ಪಠ್ಯೇತರ ವಿಷಯ ಹಾಗೂ ಚಟುವಟಿಕೆ ಇತ್ಯಾದಿಗಳ ಮೂಲಕ ಮಕ್ಕಳನ್ನು ಪ್ರೋತ್ಸಾಹಿಸುತ್ತಾ ಇದ್ದರೆ, ಮಕ್ಕಳು ತಮ್ಮ ಬಿಡುವಿನ ವೇಳೆಯನ್ನು ಉತ್ತಮ ಹಾಗೂ ಪ್ರಯೋಜನಕಾರಿ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುವರು.

4. ಕೆಟ್ಟ ಚಿಂತನೆ ಮತ್ತು ಮಿಥ್ಯ ವಿಚಾರಕ್ಕೆ ಬಲಿಯಾಗದಿರಲು ಸರಿಯಾದ ರೀತಿಯಲ್ಲಿ ಆಲೋಚಿಸುವ ಹಾಗೂ ಸತ್ಯ-ಮಿಥ್ಯ ಮತ್ತು ಒಳ್ಳೆಯ-ಕೆಟ್ಟ ವಿಷಯಗಳ ವ್ಯತ್ಯಾಸವನ್ನು ಅರಿಯುವ ಮಾನದಂಡವನ್ನು ಒದಗಿಸುವುದು.

5. ವೈಯಕ್ತಿಕ, ಕೌಟುಂಬಿಕ ಮತ್ತು ಸಾಮಾಜಿಕ ಹೊಣೆಗಾರಿಕೆಗಳ ಸರಿಯಾದ ಜ್ಞಾನ ಒದಗಿಸುವುದು ಹಾಗೂ ಅವುಗಳನ್ನು ಕಾರ್ಯರೂಪಕ್ಕೆ ತರುವಂತಾಗಲು ಪ್ರಾಯೋಗಿಕ ತರಬೇತಿ ನೀಡುವುದು.

6. ಪ್ರಾಕೃತಿಕ ಕಾರ್ಖಾನೆಯ ಜ್ಞಾನ ಒದಗಿಸಿ ಕೊಡುವುದು ಮತ್ತು ಅದರಲ್ಲಿ ಅಡಕವಾಗಿರುವ ಪ್ರತ್ಯಕ್ಷ-ಪರೋಕ್ಷ ಖಜಾನೆಗಳ ಪರಿಚಯ ಮಾಡಿಸಿಕೊಡುವುದು.

7. ಓದು-ಬರೆಹ ಮತ್ತಿತರ ಮಾಹಿತಿಗಳನ್ನು ಒದಗಿಸುವುದು.

8. ಶುದ್ಧ ಚಾರಿತ್ರ್ಯವನ್ನು ಬೆಳೆಸುವುದು.

ಇವು ಮಕ್ಕಳ ಶಿಕ್ಷಣ-ತರಬೇತಿಗೆ ಸಂಬಂಧಿಸಿ ಹಿರಿಯರ ದೃಷ್ಟಿಯಲ್ಲಿರಬೇಕಾದ ಉನ್ನತ ಮತ್ತು ಪರಿಶುದ್ಧ ಉದ್ದೇಶಗಳಾಗಿವೆ. ಆದರೆ ಮಕ್ಕಳನ್ನು ಪ್ರಾಯಪೂರ್ತಿಯಾಗುವ ಮುನ್ನವೇ ಪ್ರೌಢರನ್ನಾಗಿಸುವುದೆಂದು ಇದರ ಅರ್ಥ ಅಲ್ಲ, ಹಾಗೆಯೇ ಮಕ್ಕಳ ಬಾಲ್ಯ ಕಾಲದ ವಿಶೇಷತೆಗಳು, ಆಸಕ್ತಿಗಳು ಮತ್ತು ಆಕಾಂಕ್ಷೆಗಳನ್ನು ಕಡೆಗಣಿಸಿ ಶಿಕ್ಷಣ-ತರಬೇತಿಯ ಯಾವುದಾದರೂ ಕಾರ್ಯ ವಿಧಾನ ರೂಪಿಸುವುದೆಂದೂ ಅದರ ಅರ್ಥ ಅಲ್ಲ. ಭವಿಷ್ಯದ ಚಿಂತನೆಯಲ್ಲಿ ಕೆಲವರಿಂದ ಸಾಮಾನ್ಯವಾಗಿ ಇಂತಹ ಪ್ರಮಾದಗಳುಂಟಾಗುತ್ತವೆ. ಅದರ

ಗಂಭೀರ ಪರಿಣಾಮ ಮಕ್ಕಳ ಮೇಲಾಗುತ್ತದೆ. ಆದರಿಂದಾಗಿ ಅವರ ವ್ಯಕ್ತಿತ್ವದಲ್ಲಿ ಬಂಡಾಯ ಅಥವಾ ಕಾಪಟ್ಯದ ಕ್ರಿಮಿಗಳು ಬೆಳೆಯತೊಡಗುತ್ತವೆ.

ಹೀಗೆ ಅವರ ಬೌದ್ಧಿಕ ಮತ್ತು ದೈಹಿಕ ಪ್ರತಿಭೆಗಳು ಮುದುಡಿಕೊಳ್ಳುತ್ತವೆ. ಆದ್ದರಿಂದ ಆ ಉನ್ನತ ಉದ್ದೇಶಗಳನ್ನು ಸದಾ ನಮ್ಮ ಮುಂದೆ ಇರಿಸಬೇಕಾದುದು ಅಗತ್ಯ. ಆದರೆ ಮಕ್ಕಳಿಂದ ಯಾವುದೇ ಉನ್ನತವಾದ ನಿರೀಕ್ಷೆಯನ್ನಿಡಲೂ ಬಾರದು ಮತ್ತು ಅವರ ಮೇಲೆ ಸಮಯಕ್ಕೆ ಮೊದಲೇ ಏನನ್ನೂ ಹೇರಲೂ ಬಾರದು. ಬದಲಾಗಿ ಶಿಕ್ಷಣ-ತರಬೇತಿಯ ಕಾರ್ಯಕ್ರಮಗಳನ್ನು ಸಿದ್ಧಪಡಿಸುವ ವೇಳೆ, ಮಕ್ಕಳ ಹುಡುಗಾಟಿಕೆಯ (ಬಾಲ್ಯದ) ಆಸಕ್ತಿಗಳನ್ನು ಸಾದ್ಯಂತ ಪರಿಗಣಿಸಬೇಕು. ಆ ಮೂಲಕವೇ ಕ್ರಮಬದ್ಧವಾಗಿ ಈ ಉದ್ದೇಶಗಳನ್ನು ಈಡೇರಿಸುತ್ತಾ ಬರಬೇಕು.

---

1. ನಿಷ್ಕಳಂಕ ಒಳಿತುಗಳ ಮೂಲಕ ಆನಂದ ಹೊಂದುವುದೇ ಶಿಕ್ಷಣದ ಉದ್ದೇಶವಾಗಿದೆ. (ಅರಿಸ್ಟಾಟಲ್)
2. ಮಾದರೀ ಮಾನವನ ಪರಿಪೂರ್ಣತೆಯೇ ಶಿಕ್ಷಣದ ಉದ್ದೇಶವಾಗಿದೆ. (ಪೇನ್)
3. ಪರಿಪೂರ್ಣ ಮಾನವನ ತರಬೇತಿಯೇ ಶಿಕ್ಷಣ. (ಕಾಮೀನೇಸ್)
4. ಪ್ರಜ್ಞೆ ಮತ್ತು ಇಚ್ಛೆಗಳ ವಿಕಸನವೇ ಶಿಕ್ಷಣದ ಉದ್ದೇಶ. (ಡೇವಿಡ್‌ಸನ್)
5. ಶಿಕ್ಷಣ ಒಂದು ಪ್ರತಿಭೆಯಾಗಿದೆ. ಅದರಿಂದ ನಿರ್ದಿಷ್ಟ ವಿಷಯದ ತಜ್ಞರಾಗುವುದಲ್ಲ ಬದಲಾಗಿ ಮಾನವರಾಗುವುದೇ ಅದರ ಉದ್ದೇಶ. (ಮಾಂಟೇನ್)
6. ಅಮೃತ ಶಿಲೆಯನ್ನು ಪಡೆಯಲು ಬಂಡೆಗಳನ್ನು ಕೆತ್ತಲಾಗುವಂತೆಯೇ ಮಾನವ ಆತ್ಮದ ಪಕ್ವತೆಗೆ ಶಿಕ್ಷಣ. (ಎಡಿಸನ್)
7. ಶಿಕ್ಷಣದ ಉದ್ದೇಶ ವಿದ್ಯೆಯನ್ನು ತುಂಬುವುದಲ್ಲ, ಬದಲಾಗಿ ಸಾಮರ್ಥ್ಯದ ತರಬೇತಿಯಾಗಿದೆ. (ಆರ್ಕುಟ್)
8. ಸ್ಪಷ್ಟ, ನಿಷ್ಕಳಂಕ, ದೋಷರಹಿತ, ಸ್ವಚ್ಛ ಜೀವನ ಸಾಗಿಸಲು ಶಕ್ತರಾಗಿಸುವುದೇ ಶಿಕ್ಷಣದ ಉದ್ದೇಶ. (ಫ್ರೋಬೆಲ್)
9. ಶಿಕ್ಷಣವೆಂದರೆ ಅನುಭವದ ನವನಿರ್ಮಾಣವಾಗಿದೆ. ಆ ಮೂಲಕ ವ್ಯಕ್ತಿಯನ್ನು ತನ್ನ ಸಾಮರ್ಥ್ಯಗಳ ಮೇಲೆ ಹತೋಟಿ ಸಾಧಿಸಲು ಯೋಗ್ಯಗೊಳಿಸುತ್ತಾ, ಅವನ ಅನುಭವದಲ್ಲಿ ವೈಶಾಲ್ಯತೆಯನ್ನುಂಟು ಮಾಡುತ್ತದೆ ಮತ್ತು ಅವನನ್ನು ಸಾಮಾಜಿಕ ನೆಲೆಯಲ್ಲಿ ಹೆಚ್ಚು ಉಪಕಾರಿಯನ್ನಾಗಿ ಮಾಡುತ್ತದೆ. (ಡೀವೀ)
10. ಸಾಮಾನ್ಯವಾಗಿ, ನೈತಿಕತೆಯನ್ನು ಮಾನವೀಯತೆಯ ಅತ್ಯುನ್ನತ ಉದ್ದೇಶವೆಂದು ಭಾವಿಸಲಾಗುತ್ತದೆ. ಶಿಕ್ಷಣದ ಉದ್ದೇಶವೂ ಅದುವೇ. (ಹಾರ್ಬರ್ಟ್)

◆ ◆ ◆

ಅಧ್ಯಾಯ - 5

ವಿವಿಧ ಶೈಕ್ಷಣಿಕ ಸಿದ್ಧಾಂತಗಳು

ಜೀವನದ ಇತರೆಲ್ಲ ರಂಗಗಳಂತೆಯೇ ಶಿಕ್ಷಣದ ಕುರಿತು ಕೂಡ ವಿಭಿನ್ನ ಸಿದ್ಧಾಂತಗಳಿವೆ. ಇಲ್ಲಿ ನಾವು ಕೇವಲ ಮೂರು ವಿಧದ ಸಿದ್ಧಾಂತಗಳ ಬಗ್ಗೆ ಚರ್ಚಿಸೋಣ.

1. ಸಮಾಜವಾದೀ ಸಿದ್ಧಾಂತ
2. ಪ್ರಜಾಪ್ರಭುತ್ವವಾದೀ ಸಿದ್ಧಾಂತ
3. ಇಸ್ಲಾಮೀ ಸಿದ್ಧಾಂತ

ಜಗತ್ತಿನ ನಾಯಕತ್ವದ ನೊಗವು ಇಂದು ಅಮೇರಿಕ ಮತ್ತು ರಷ್ಯಾಗಳ ಕೈಗಳಲ್ಲಿವೆ.* ತತ್ವ ಸಿದ್ಧಾಂತಕ್ಕೆ ಸಂಬಂಧಿಸಿ ಈ ಎರಡು ರಾಷ್ಟ್ರಗಳೇ ಮುಂಚೂಣಿಯಲ್ಲಿವೆ. ಅಮೇರಿಕವು ಪ್ರಜಾಪ್ರಭುತ್ವದ ಧ್ವಜವಾಹಕವಾಗಿದ್ದರೆ, ರಷ್ಯಾ ಸಮಾಜವಾದಿಯಾಗಿದೆ.

ಅಮೇರಿಕದ ಪ್ರಭಾವಕ್ಕೊಳಗಾಗಿರುವ ಜಗತ್ತಿನ ರಾಷ್ಟ್ರಗಳೆಲ್ಲವೂ ರಾಷ್ಟ್ರೀಯವಾದಿ ಪ್ರಜಾಪ್ರಭುತ್ವದ ಮೇಲೆ ವಿಶ್ವಾಸವನ್ನಿರಿಸುತ್ತವೆ. ತಮ್ಮಲ್ಲಿನ ಶೈಕ್ಷಣಿಕ ಚೌಕಟ್ಟನ್ನು ಅದೇ ಸಿದ್ಧಾಂತಕ್ಕೆ ತಕ್ಕಂತೆ ರೂಪಿಸುತ್ತದೆ. ಅಂತೆಯೇ ರಷ್ಯಾದ ಪ್ರಭಾವಕ್ಕೊಳಗಾಗಿರುವ ಜನರು ಸಮಾಜವಾದಿ ಸಿದ್ಧಾಂತವನ್ನು ಅನುಸರಿಸುತ್ತಾರೆ ಮತ್ತು ಅವರ ಶೈಕ್ಷಣಿಕ ವ್ಯವಸ್ಥೆಯ ಮೇಲೂ ಅದರ ಗಾಢ ಛಾಪು ಎದ್ದು ಕಾಣುತ್ತದೆ. ಆದ್ದರಿಂದ ಶಿಕ್ಷಣದ ಇಸ್ಲಾಮೇತರ ಸಿದ್ಧಾಂತಕ್ಕೆ ಸಂಬಂಧಿಸಿ ನಾವು ಕೇವಲ ಅವೆರಡನ್ನೇ ಚರ್ಚೆಗೆ ಎತ್ತಿಕೊಂಡಿದ್ದೇವೆ.

ಸಮಾಜವಾದಿ ಶೈಕ್ಷಣಿಕ ಸಿದ್ಧಾಂತ

ಸಮಾಜವಾದವೆಂಬುದು ಒಂದು ಭೌತಿಕವಾದಿ ವ್ಯವಸ್ಥೆಯಾಗಿದೆ. ಅದು ತನ್ನ ಧರ್ಮವಿರೋಧಿ ನೀತಿ ಮತ್ತು ನೈತಿಕ, ಆಧ್ಯಾತ್ಮಿಕ ಮೌಲ್ಯಗಳ ಅವಹೇಳನಕ್ಕೆ ಹೆಸರುವಾಸಿಯಾಗಿದೆ. ವರ್ಗ ಸಂಘರ್ಷವನ್ನು ಹುಟ್ಟು ಹಾಕಿ ತನ್ನ ಬೇಳೆ ಬೇಯಿಸಿಕೊಳ್ಳುತ್ತದೆ. ವ್ಯಕ್ತಿ ಮತ್ತು ವೈಯಕ್ತಿಕತೆಯು ಅವರ ಮಟ್ಟಿಗೆ ಗೌಣ. ನಾಗರಿಕರ ಮಾನ-ಪ್ರಾಣ-ಸೊತ್ತು ಮತ್ತು ಸಾಮ್ರಾಜ್ಯದ ಸಕಲ ಸಂಪನ್ಮೂಲಗಳು ಸರಕಾರದ ಸಂಪತ್ತಾಗಿರುತ್ತದೆ. ಈ ಪ್ರಕಾರ

* ನೆನಪಿಡಿ: ಈ ಕೃತಿ ರಚನೆಯಾದದ್ದು 1963ರಲ್ಲಿ (ಅನು)

ಸಮಾಜವಾದಿ ವ್ಯವಸ್ಥೆಯು ಸರ್ವಸಂಪೂರ್ಣವಾಗಿ ದೇವನಿಗೆ ವಿದ್ರೋಹವೆಸಗುವ ಮತ್ತು ಜನರ ವೈಯಕ್ತಿಕತೆಯನ್ನು ದಮನಿಸುವ ಕೃತ್ಯಗಳಲ್ಲಿ ತೊಡಗಿಕೊಂಡಿರುತ್ತದೆ. ಅದಕ್ಕೆ ಪ್ರಕೃತಿಗೆ ವಿರುದ್ಧವಾಗಿ ನಿರಂತರ ಸೆಣಸಾಡಬೇಕಾಗಿ ಬರುತ್ತದೆ. ಅದಕ್ಕೆ ಸದಾ ಪ್ರತಿರೋಧೀ ಕ್ರಾಂತಿಯ ಭೀತಿ ಇದ್ದೇ ಇರುತ್ತದೆ. ಆದ್ದರಿಂದಲೇ ಅದು ತನ್ನ ಉಳಿವಿಗಾಗಿ ಬಲಪ್ರಯೋಗ ಮತ್ತು ಸರ್ವಾಧಿಕಾರಿ ಧೋರಣೆಯನ್ನು ಅನುಸರಿಸುತ್ತದೆ.

ಶಿಕ್ಷಣದ ಉದ್ದೇಶ

ಶಿಕ್ಷಣ-ತರಬೇತಿಯ ಮುಖಾಂತರ ನಾವು ಜನರನ್ನು 'ಸಮಾಜದ ನಿಷ್ಕಾಮ ಸೇವಕ'ರನ್ನಾಗಿ ಮಾರ್ಪಡಿಸುತ್ತೇವೆ ಎಂದು ಸಮಾಜವಾದಿಗಳು ವಾದಿಸುತ್ತಾರೇನೋ ಸರಿ. ಆದರೆ ಅವರು ವಿದ್ಯಾರ್ಥಿಗಳ ಸ್ವಾಭಾವಿಕ ಪ್ರತಿಭೆ ಮತ್ತು ವೈಯಕ್ತಿಕ ವಿಶೇಷತೆಗಳನ್ನು ತಮಗೆ ಬೇಕಾದಂತೆ ತಿರುಚಲು ಪ್ರಯತ್ನಿಸುತ್ತಾರೆ. ಅಂದರೆ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವವನ್ನು ಸಮಾಜದ ಭೌತಿಕ ಲಾಭಕ್ಕಾಗಿ ಬಲಿ ನೀಡುವಂತೆ ಮತ್ತು ತಮ್ಮ ವೈಯಕ್ತಿಕತೆಯನ್ನು ಸಾಮೂಹಿಕತೆಯಲ್ಲಿ ಕಳೆದುಕೊಳ್ಳುವಂತೆ ಮಾಡುತ್ತಾರೆ. ಅವರು ವಿದ್ಯಾರ್ಥಿಗಳನ್ನು ಭೌತಿಕವಾದಿ, ಧರ್ಮದ್ವೇಷಿ ಮತ್ತು ದೇವದ್ರೋಹಿಯನ್ನಾಗಿ ಮಾರ್ಪಡಿಸುತ್ತಾರೆ. ಅವರಲ್ಲಿ ವರ್ಗ ದ್ವೇಷವನ್ನು ಬಿತ್ತುತ್ತಾರೆ ಮತ್ತು ಅವರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಮಾಡಿ ಬಿಡುತ್ತಾರೆ. ಈ ರೀತಿಯಾಗಿ ಕೆಲವು ಮಂದಿಯ ಗುಂಪು ಅಥವಾ ಒಂದು ಸಣ್ಣ ಪಕ್ಷವು ಸಾಮ್ರಾಜ್ಯದ ಸಕಲ ಸೌಲಭ್ಯ-ಸಂಪನ್ಮೂಲ ಮತ್ತು ಸರ್ವರ ತನು-ಮನಗಳ ಮೇಲೆ ಹತೋಟಿ ಸಾಧಿಸಿ, ಕೇವಲ ಎರಡು ಹೊತ್ತಿನ ರೊಟ್ಟಿಗಾಗಿ ಎಲ್ಲರನ್ನೂ ಹೃದಯಹೀನರನ್ನಾಗಿಯೂ ತಮ್ಮ ಉಪಯೋಗದ ವಸ್ತುವನ್ನಾಗಿಯೂ ಮಾಡಿಬಿಡುತ್ತಾರೆ. ಇಷ್ಟಾಗಿಯೂ ಅವರು ಹೇಳುವುದೇನು? ನಾವು ಮಾನವರ ಆರ್ಥಿಕ ಸಮಸ್ಯೆಗಳನ್ನು ನೀಗಿಸಿದೆವು ಎಂದಲ್ಲವೇ? ಒಂದು ವೇಳೆ, ಅವರ ವಾದವನ್ನು ಸತ್ಯವೆಂದೇ ಒಪ್ಪಿದರೂ, ಇತರರ ಕೈಯಲ್ಲಿ ಬೀಗದ ಕೈ ಇರುವ ಪಡಿತರ ಧಾನ್ಯವು ಎಷ್ಟೇ ಹೇರಳವಿದ್ದರೂ ಅದು ಹಿತಕರವಲ್ಲ, ಏಕೆಂದರೆ ಆದರಿಂದ ಬೆಳವಣಿಗೆಯಲ್ಲಿ ಕೊರತೆಯುಂಟಾಗುತ್ತದೆ. ಕೇವಲ ದೈಹಿಕ ಸ್ಥೂಲತ್ವವು ಅದಕ್ಕೆ ಪರಿಹಾರವಾಗದು.

ಸಮಾಜವಾದಿ ಶಿಕ್ಷಣ ವ್ಯವಸ್ಥೆಯ ವೈಶಿಷ್ಟ್ಯಗಳು

ಶಿಕ್ಷಣದ ಸಮಾಜವಾದಿ ದೃಷ್ಟಿಕೋನವು ರೂಪುಗೊಂಡಿರುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ಈ ಕೆಳಗಿನ ವಿಶೇಷತೆಗಳನ್ನು ಕಾಣಬಹುದಾಗಿದೆ:

1. ದೇಶದ ಸಕಲ ಪ್ರಜೆಗಳು ಸಮಾಜವಾದದಿಂದ ಪ್ರಭಾವಿತರೂ ಆ ವ್ಯವಸ್ಥೆಯ ಸಹಾಯಕರೂ ಸೇವಕರೂ ಆಗಿ ಮಾರ್ಪಡುವಂತಾಗಲು ಶಿಕ್ಷಣವು ಎಲ್ಲರಿಗೂ ಸಮಾನ ಮತ್ತು ಕಡ್ಡಾಯವಾಗಿರುತ್ತದೆ.

2. ಶಿಕ್ಷಣದ ಇಡೀ ವ್ಯವಸ್ಥೆಯು ಸರಕಾರದ ನಿಯಂತ್ರಣದಲ್ಲಿರುತ್ತದೆ ಖಾಸಗಿ ಸಂಸ್ಥೆಗಳ ಸ್ಥಾಪನೆಗೆ ಸರ್ವಥಾ ಅನುಮತಿಯಿರುವುದಿಲ್ಲ, ಆ ಮೂಲಕ ವಿದ್ಯಾರ್ಥಿಗಳ ಕಿವಿಗಳಿಗೆ ಸರಕಾರ ಮತ್ತು ಸಮಾಜವಾದದ ವಿರುದ್ಧ ಯಾವ ಮಾತೂ ಸೋಂಕದಂತೆ ನೋಡಿಕೊಳ್ಳಲಾಗುತ್ತದೆ.
3. ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತದೆ. ಶಿಕ್ಷಣವು ಸಾಮಾನ್ಯವಾಗಿರಲಿ ಅಥವಾ ವೃತ್ತಿಯಾಧಾರಿತ, ವಾಣಿಜ್ಯವಾಗಿರಲಿ ಅಥವಾ ಕೃಷಿಯಾಧಾರಿತ... ಎಲ್ಲ ವೆಚ್ಚಗಳನ್ನೂ ಸರಕಾರವೇ ಭರಿಸುವುದು. ವಿದ್ಯಾರ್ಥಿಗಳಿಗೆ ಆಹಾರ, ವಸ್ತ್ರ ಮತ್ತು ಶೈಕ್ಷಣಿಕ ವಸ್ತುಗಳನ್ನು ಸರಕಾರವೇ ಉಚಿತವಾಗಿ ಒದಗಿಸುತ್ತದೆ.
4. ಮಕ್ಕಳ ಮನ-ಮಸ್ತಿಷ್ಕಗಳಲ್ಲಿ ಬಾಲ್ಯದಲ್ಲಿಯೇ ಸಮಾಜವಾದದ ಗಾಢ ಛಾಪು ಮೂಡುವಂತಾಗಲು ಎಲ್ಲ ಮಕ್ಕಳಿಗೂ ಬಾಲ್ಯದಲ್ಲಿಯೇ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗುತ್ತದೆ. ಅದಕ್ಕಾಗಿ ಹೆತ್ತವರಿಗೆ ವಿಶೇಷ ರೀತಿಯ ತರಬೇತಿಯನ್ನೂ ನೀಡಲಾಗುತ್ತದೆ. ಇಂತಹ ಅಂಗನವಾಡಿ ಕೇಂದ್ರಗಳನ್ನು ವ್ಯಾಪಕವಾಗಿ ವ್ಯವಸ್ಥೆ ಮಾಡಲಾಗುತ್ತದೆ.
5. ಧರ್ಮ, ಜನಾಂಗ, ವರ್ಗ, ವರ್ಣ, ಲಿಂಗ ಭೇದವಿಲ್ಲದೆ ಪ್ರತಿಯೊಬ್ಬರೂ ಶಿಕ್ಷಣ ಗಳಿಸಬೇಕಾದುದು ಕಡ್ಡಾಯವಾಗಿರುತ್ತದೆ. ಬೌದ್ಧಿಕ ಮತ್ತು ದೈಹಿಕ ದುಡಿಮೆಗಾರರಲ್ಲಿ ವ್ಯತ್ಯಾಸವನ್ನು ಕಾಣಲಾಗುವುದಿಲ್ಲ, ಎಲ್ಲರನ್ನೂ ಒಂದೇ ಬೆತ್ತದಿಂದ ಅಟ್ಟಲಾಗುತ್ತದೆ.
6. ಧರ್ಮ, ನೈತಿಕತೆ, ಆಧ್ಯಾತ್ಮಿಕತೆ ಅಥವಾ ಜೀವನದ ಸ್ಥಾಯೀ ಮೌಲ್ಯಗಳಿಗೆ ಈ ಶಿಕ್ಷಣ ವ್ಯವಸ್ಥೆಯಲ್ಲಿ ಸ್ವಲ್ಪವೂ ಸ್ಥಳವಿಲ್ಲ, ತದ್ವಿರುದ್ಧವಾಗಿ, ಭೌತಿಕವಾದ, ನಾಸ್ತಿಕತೆ, ಧರ್ಮದ್ವೇಷ ಮತ್ತು ವರ್ಗಭೇದವನ್ನು ವಿದ್ಯಾರ್ಥಿಗಳ ಮೆದುಳಿಗೆ ತುರುಕಲಾಗುತ್ತದೆ. ಈ ಮೂಲಕ ಸಮಾಜದ ಪ್ರಸಕ್ತ ವ್ಯವಸ್ಥೆಯನ್ನು ಬುಡಮೇಲುಗೊಳಿಸಿ ಕೇವಲ ಭೌತಿಕತೆ ಮತ್ತು ನಾಸ್ತಿಕತೆಯ ಆಧಾರದಲ್ಲಿ ಸಮಾಜವನ್ನು ರೂಪಿಸುವ ಉದ್ದೇಶವಿದೆ.
7. ಶಾಲೆಯ ಎಲ್ಲ ಪಠ್ಯಗಳಲ್ಲೂ ಕಾರ್ಯನೀತಿ ಮತ್ತು ಅಭ್ಯಾಸಗಳಲ್ಲೂ ಲೌಕಿಕ ಲಾಭದ ದೃಷ್ಟಿಕೋನವೇ ಹೆಚ್ಚು ಪ್ರಭಾವ ಬೀರಿರುತ್ತದೆ. ಅಂದರೆ ಲೌಕಿಕ ಲಾಭ ದೊರೆಯುವಂತಹ ಮತ್ತು ದೇಶೀಯ ಉತ್ಪನ್ನ ಹಾಗೂ ರಾಷ್ಟ್ರೀಯ ಸಂಪತ್ತಿನಲ್ಲಿ ಹೆಚ್ಚಳವಾಗಬಲ್ಲಂತಹ ವಿಷಯಗಳನ್ನೇ ಕಲಿಸಲಾಗುತ್ತದೆ, ಅಭ್ಯಾಸ ಮಾಡಿಸಲಾಗುತ್ತದೆ. ಆದ್ದರಿಂದಲೇ ವೃತ್ತಿಯಾಧಾರಿತ ಶಿಕ್ಷಣಕ್ಕೇ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಶಾಲೆಗಳನ್ನು ಸ್ಥಳೀಯ ಕಾರ್ಖಾನೆಗಳಿಗೆ ಹೊಂದಿಕೊಂಡೇ ನಿರ್ಮಿಸಲಾಗುತ್ತದೆ. ಹಾಗೆಯೇ ವಿದ್ಯಾರ್ಥಿಗಳು ಫಾರ್ಮ್‌ಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಪ್ರಾಯೋಗಿಕ ಶಿಕ್ಷಣ ಪಡೆಯಬೇಕಾಗುತ್ತದೆ.

8. ದೇಶದ ಇತರ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳೊಡನೆ ಸಂಪೂರ್ಣ ಸಹಕಾರ ನೀಡುತ್ತವೆ. ಸಮಾಜವಾದಿ ವ್ಯವಸ್ಥೆಯಲ್ಲಿ ಸಕಲ ಕೈಗಾರಿಕೆ-ವಾಣಿಜ್ಯ, ವ್ಯಾಪಾರ-ಕೃಷಿ ವಲಯಗಳು ಸರಕಾರಿ ಅಧೀನದಲ್ಲಿರುತ್ತವಾದ್ದರಿಂದ ಕಾರ್ಖಾನೆ, ಫಾರ್ಮ್ ಮತ್ತಿತರ ಸರಕಾರಿ ಸಂಸ್ಥೆಗಳು ಶಾಲೆಗಳಿಗೆ ಸಾದ್ಯಂತ ಸಹಾಯ-ಸಹಕಾರ ನೀಡುತ್ತವೆ.
9. ಸರಕಾರಕ್ಕೆ, ತನ್ನ ಯೋಜನೆಯ ಪ್ರಕಾರ, ಯಾವ ಪ್ರತಿಭೆ ಮತ್ತು ತಂತ್ರಜ್ಞಾನದಲ್ಲಿ ಎಷ್ಟು ಮಂದಿಯ ಅಗತ್ಯವಿದೆಯೋ ಅಷ್ಟು ಮಂದಿಯನ್ನು ಅದು ತನ್ನ ನಿಯಂತ್ರಣ ಮತ್ತು ಮೇಲ್ನೋಟದಲ್ಲಿ ಸಿದ್ಧಗೊಳಿಸುತ್ತದೆ. ಈ ಮೂಲಕ ಸರಕಾರದ ಅಗತ್ಯ ಮತ್ತು ವ್ಯಕ್ತಿಗಳ ಪ್ರತಿಭೆಯಲ್ಲಿ ಸಮತೋಲನ ಕಾಯ್ದುಕೊಳ್ಳಲಾಗುತ್ತದೆ.
10. ಪಠ್ಯಕ್ರಮ, ಪಾಠಪುಸ್ತಕ ಮತ್ತು ಬೋಧನಾಕ್ರಮ ಎಲ್ಲವೂ ಸರಕಾರದ ಅಣತಿಯ ಪ್ರಕಾರ ಸಿದ್ಧವಾಗುತ್ತದೆ. ವಿದ್ಯಾರ್ಥಿಗಳಿಗೆ ಪಠ್ಯವನ್ನು ಆಯ್ಕೆ ಮಾಡುವ ಅಥವಾ ಅಧ್ಯಾಪಕರಿಗೆ ಬೋಧನಾ ಕ್ರಮವನ್ನು ಆಯ್ದುಕೊಳ್ಳುವ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ, ಆದ್ದರಿಂದಲೇ ಇಡೀ ಶಿಕ್ಷಣ ವ್ಯವಸ್ಥೆಯೇ ಜಡ ಮತ್ತು ನಿರ್ಭಾವುಕವಾಗಿರುತ್ತದೆ. ಅದರಲ್ಲಿ ಅಸಾಮಾನ್ಯವಾದ ಏಕರೂಪತೆ ಕಂಡುಬರುತ್ತದೆ.

ಈ ವ್ಯವಸ್ಥೆಯ ವಿಶೇಷತೆ ಮತ್ತು ಕೊರತೆಗಳು

ಈ ವ್ಯವಸ್ಥೆಯಲ್ಲಿರುವ ಕೆಲವು ವಿಶೇಷತೆಗಳು ಈ ಕೆಳಗಿನಂತಿವೆ:

1. ವ್ಯಕ್ತಿಯಲ್ಲಿ ಸಾಮೂಹಿಕ ಹಿತಕ್ಕಾಗಿ ವೈಯಕ್ತಿಕ ಲಾಭಗಳನ್ನು ಬಲಿ ನೀಡುವಂತಹ ವಿಶೇಷ ಸ್ಫೂರ್ತಿಯನ್ನು ಹುಟ್ಟಿಸಲು ಪ್ರಯತ್ನಿಸಲಾಗುತ್ತದೆ.
2. ವಿದ್ಯಾರ್ಥಿಗಳಲ್ಲಿ ದೈಹಿಕ ಪರಿಶ್ರಮದ ಅಭ್ಯಾಸವುಂಟಾಗುತ್ತದೆ. ಅವರು ದುಡಿಮೆಯನ್ನು ಕೀಳೆಂದು ಭಾವಿಸುವುದಿಲ್ಲ.
3. ಮೌಖಿಕ/ಲಿಖಿತಕ್ಕಿಂತ ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಕಾರಣ ವಿದ್ಯಾರ್ಥಿಗಳು ತಾವು ಕಲಿತುದನ್ನು ಕಾರ್ಯರೂಪಕ್ಕೆ ತರುವ ಕಲೆಯನ್ನು ಚೆನ್ನಾಗಿ ಕರಗತ ಮಾಡಿರುತ್ತಾರೆ. ಹೀಗೆ ಅವರು ಸದಾ ಕ್ರಿಯಾಶೀಲರಾಗಿರುತ್ತಾರೆ.
4. ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಹಾಗೂ ಸಂಪತ್ತಿನ ಸಮಾನ ಹಂಚಿಕೆಗೆ ಆರಂಭದಲ್ಲಿಯೇ ಅಪಾರ ಒತ್ತು ನೀಡುತ್ತಿರುವ ಕಾರಣ ವಿದ್ಯಾರ್ಥಿಗಳಲ್ಲಿ ಮೇಲು-ಕೀಳು, ಬಡವ-ಬಲ್ಲಿದ ಎಂಬ ಭೇದ ಭಾವ ಹುಟ್ಟಿಕೊಳ್ಳುವುದಿಲ್ಲ.
5. ಉಚಿತ ಮತ್ತು ಕಡ್ಡಾಯ ಶಿಕ್ಷಣದಿಂದಾಗಿ ಪ್ರತಿಯೋರ್ವರೂ ಶಿಕ್ಷಿತರಾಗುತ್ತಾರೆ.
6. ಶಿಕ್ಷಣದಲ್ಲಿ ಏಕರೂಪತೆಯಿರುವ ಕಾರಣ ಜನರ ಚಿಂತನೆಯಲ್ಲೂ ಏಕರೂಪತೆ ಇರುವ ಸಾಧ್ಯತೆ ಹೆಚ್ಚು ಮತ್ತು ತಾತ್ವಿಕ-ಪ್ರಾಯೋಗಿಕ ಭಿನ್ನತೆಗಳು ಇರಲಾರವು.
7. ಎಲ್ಲವೂ ಸರಕಾರದ ಅಧೀನದಲ್ಲಿರುವ ಕಾರಣ ಮನೆ, ಶಾಲೆ, ಸಮಾಜ ಮತ್ತು

ಸರಕಾರದ ವಿವಿಧ ಸಂಸ್ಥೆಗಳಲ್ಲಿ ಸಂಪೂರ್ಣ ಸಹಕಾರ ಮತ್ತು ಸೌಹಾರ್ದತೆಯಿರುತ್ತದೆ. ಇದರಿಂದಾಗಿ ಮಕ್ಕಳ ಶಿಕ್ಷಣಕ್ಕೆ ಬಹಳಷ್ಟು ಪ್ರಯೋಜನಗಳು ಒದಗುತ್ತವೆ.

8. ಶಿಕ್ಷಣದ ಮೇಲೆ ಸರಕಾರದ ಸಂಪೂರ್ಣ ಹತೋಟಿಯಿರುವ ಕಾರಣ, ಸರಕಾರದ ಅಗತ್ಯಕ್ಕೆ ತಕ್ಕುದಾದ ಶಿಕ್ಷಣವನ್ನೇ ನೀಡಲಾಗುತ್ತದೆ. ಆದ ಕಾರಣ ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯೇ ಉದ್ಭವಿಸುವುದಿಲ್ಲ.

ಆದರೆ ಈ ವಿಶೇಷತೆಗಳ ಜತೆಯಲ್ಲಿಯೇ ಕೆಲವು ಮೂಲಭೂತ ದೋಷಗಳೂ ಕಂಡು ಬರುತ್ತವೆ. ಅವು ಈ ಸಿದ್ಧಾಂತದ ಎಲ್ಲ ಪ್ರಯೋಜನಗಳ ಮೇಲೂ ತಣ್ಣೀರೆರಚಿ ಬಿಡುತ್ತವೆ ಮತ್ತು ಅದರ ಸ್ವೀಕಾರಾರ್ಹತೆಯನ್ನೇ ಸಂಶಯಾಸ್ಪದಗೊಳಿಸಿ ಬಿಡುತ್ತದೆ. ಉದಾ:

ದೋಷಗಳು

1. ದೇವ ವಿದ್ರೋಹಿ, ಧರ್ಮದ್ವೇಷಿ ಮತ್ತು ನೈತಿಕ ಮೌಲ್ಯಗಳನ್ನು ತುಳಿಯುವ ಪಾಠ ಕಲಿತು ಬೆಳೆಯುವ ಮಂದಿ ಮಾನವತೆಯ ಪಾಲಿಗೆ ಮೃಗವಷ್ಟೇ ಆಗಿರುತ್ತಾರೆ. ಅವರಿಂದ ಯಾವುದೇ ಒಳಿತಿನ ನಿರೀಕ್ಷೆಯನ್ನು ಇರಿಸಲಾಗದು. ಅವರು ಇತರರ ಪಾಲಿಗೆ ಅಕ್ರಮಿಗಳಾಗಿರುವುದು ಮಾತ್ರವಲ್ಲ, ಸ್ವಯಂ ತಮ್ಮ ಮೇಲೆಯೇ ಅಕ್ರಮವೆಸಗುತ್ತಾರೆ. ಅವಕಾಶ ಸಿಕ್ಕಿದರೆ ಸರಕಾರವನ್ನೂ ಬಿಡಲಾರರು.
2. ಜನರ ವೈಯಕ್ತಿಕತೆಯು ತುಳಿಯಲ್ಪಡುತ್ತದೆ.
3. ಒತ್ತಾಯ ಮತ್ತು ಬಾಹ್ಯ ಒತ್ತಡದ ಕಾರಣ ವಿದ್ಯಾರ್ಥಿಗಳಿಗೆ ತಮ್ಮ ಇಚ್ಛೆ, ಅಭಿಪ್ರಾಯ ಮತ್ತು ಆತ್ಮಸಾಕ್ಷಿಯೊಂದಿಗೆ ನಿರಂತರ ಸಂಘರ್ಷಿಸುತ್ತಿರಬೇಕಾಗಿ ಬರುತ್ತದೆ. ಅವರು ಮಾನಸಿಕ ಒತ್ತಡಕ್ಕೆ ಸಿಲುಕಿ ಬಿಡುತ್ತಾರೆ. ಇಂತಹ ವಿದ್ಯಾರ್ಥಿಗಳು ಎಂದೂ ಉತ್ತಮ ಚಾರಿತ್ರ್ಯವಂತರಾಗಲು ಸಾಧ್ಯವಿಲ್ಲವೆಂಬುದು ಸ್ಪಷ್ಟ
4. ಭೌತಿಕತೆ ಮತ್ತು ಲಾಭ ಬಡುಕತನಗಳು ಮೇಲುಗೈ ಸಾಧಿಸುವ ಕಾರಣ ಸ್ವಾರ್ಥವು ವ್ಯಾಪಕವಾಗಿ ಬಿಡುತ್ತದೆ.
5. ಪ್ರತಿಯೊಂದನ್ನೂ ಮೇಲಿನಿಂದ ಹೇರುವುದರ ಪರಿಣಾಮವಾಗಿ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಕರ್ತವ್ಯವನ್ನು ಬಿಟ್ಟಿ ಕೆಲಸವೆಂದು ಭಾವಿಸತೊಡಗುತ್ತಾರೆ ಸಾಮಾನ್ಯವಾಗಿ ಅವರಲ್ಲಿ ಮೈಗಳ್ಳತನ ಮನೆ ಮಾಡತೊಡಗುತ್ತದೆ. ಹೀಗೆ ಇಡೀ ಸಮುದಾಯವು ದೊಣ್ಣೆಯ ಪೆಟ್ಟಿಗೆ ಹೆದರಿ ನಡೆಯತೊಡಗುತ್ತದೆ.
6. ಜನರ ವ್ಯಕ್ತಿತ್ವದ ಹಲವು ಮಗ್ಗುಲುಗಳನ್ನು ಕಡೆಗಣಿಸಲಾಗುತ್ತದೆ. ಅಭಿಪ್ರಾಯ ಸ್ವಾತಂತ್ರ್ಯ ದಮನಿಸಲ್ಪಡುವ ಕಾರಣ, ಅವಿಕಸಿತ ವ್ಯಕ್ತಿತ್ವ ಬೆಳೆಯುತ್ತದೆ.
7. ರಾಷ್ಟ್ರೀಯ ಉತ್ಪನ್ನ ಮತ್ತು ದೇಶೀಯ ಸಂಪತ್ತಿನ ಹೆಚ್ಚಳಕ್ಕೆ ಅಗತ್ಯಕ್ಕಿಂತ ಹೆಚ್ಚು ಮಹತ್ವ ನೀಡಿ, ಶಿಕ್ಷಣ-ತರಬೇತಿಯ ಮೂಲಕ ಜನರನ್ನು ಆರ್ಥಿಕ ಪ್ರಾಣಿಯನ್ನಾಗಿ

ಮಾರ್ಪಡಿಸಲಾಗುತ್ತದೆ. ತಿನ್ನುವುದು ಮತ್ತು ಗಳಿಸುವುದಷ್ಟೇ ಹೊರತು ಜೀವನದಲ್ಲಿ ಬೇರೆ ಯಾವುದೇ ವಸ್ತುವಿಗೆ ಮಹತ್ವ ಉಳಿಯುವುದಿಲ್ಲ.

8. ದೇಶದ ಕೆಲವು ಹೊಣೆಗಾರರ ಹೊರತು ಉಳಿದೆಲ್ಲರನ್ನೂ ಮಾನಸಿಕ ಜಡತ್ವಕ್ಕೆ ಈಡು ಮಾಡಲಾಗುತ್ತದೆ.
9. ಜನರನ್ನು ಜಗತ್ತಿನ ಪ್ರಶಾಂತಿ ಮತ್ತು ಪರಲೋಕದ ಯಶಸ್ಸು ಎರಡರಿಂದಲೂ ವಂಚಿತರನ್ನಾಗಿಸಲಾಗುತ್ತದೆ.

ಪ್ರಜಾಪ್ರಭುತ್ವ ಶಿಕ್ಷಣ ಪದ್ಧತಿ

ಸರ್ವಾಧಿಕಾರ ಅಥವಾ ಸಾಮ್ರಾಜ್ಯಶಾಹಿತ್ವಕ್ಕೆ ಪ್ರತಿಯಾಗಿ ಪ್ರಜಾಪ್ರಭುತ್ವದಲ್ಲಿ ದೇಶದ ಸಕಲ ಪ್ರಜೆಗಳು ಸಂಪೂರ್ಣ ಅಧಿಕಾರವುಳ್ಳವರಾಗಿರುತ್ತಾರೆ. ಅವರ ಇಷ್ಟದಂತೆಯೇ ಆಡಳಿತಗಳು ಸ್ಥಾಪನೆಗೊಳ್ಳುತ್ತವೆ ಮತ್ತು ಕಾನೂನು ನಿರ್ಮಾಣವಾಗುತ್ತದೆ. ದೇಶದಲ್ಲಿ ಯಾವನೇ ವ್ಯಕ್ತಿ, ಕುಟುಂಬ ಅಥವಾ ಗುಂಪಿನ ಏಕಾಧಿಕಾರವಿರುವುದಿಲ್ಲ. ಜನರಿಂದ ಆರಿಸಿ ಬಂದ ಪ್ರತಿನಿಧಿಗಳು ಆಡಳಿತ ನಡೆಸುತ್ತಾರೆ. ಸಾಮಾನ್ಯವಾಗಿ ನಾಲ್ಕು-ಐದು ವರ್ಷಗಳಿಗೊಮ್ಮೆ ಚುನಾವಣೆಗಳು ಜರಗುತ್ತವೆ. ಬಹುಮತದಿಂದ ಆಯ್ಕೆಯಾದವರು ನಿರ್ದಿಷ್ಟ ಅವಧಿಗೆ ಆಡಳಿತದ ಹೊಣೆಗಾರರಾಗಿರುತ್ತಾರೆ. ಚುನಾವಣೆಗೆ ಸಾಮಾನ್ಯವಾಗಿ ಪ್ರೌಢರಿಂದ ಮತ ಚಲಾವಣೆಗೊಳ್ಳುತ್ತದೆ. ಎಲ್ಲರಿಗೂ ಮತ ಚಲಾಯಿಸುವ ಮತ್ತು ಚುನಾವಣೆ ಸ್ಪರ್ಧಿಸುವ ಹಕ್ಕು ಇರುತ್ತದೆ. ಪ್ರತಿಯೊಬ್ಬರ ಮತವನ್ನೂ ಸಮಾನವಾಗಿ ಪರಿಗಣಿಸಲಾಗುತ್ತದೆ. ಬಹುಮತಾಭಿಪ್ರಾಯದಿಂದ ಸರಕಾರವನ್ನು ಬದಲಿಸಲು ಸಾಧ್ಯವಿದೆ. ಈ ಪ್ರಕಾರ, ಪ್ರಜಾಪ್ರಭುತ್ವವು ಈ ಕೆಳಗಿನ ವಿಷಯಗಳಲ್ಲಿ ವಿಶ್ವಾಸವಿರುವುದಾಗಿ ಸಾರುತ್ತದೆ:

1. ವ್ಯಕ್ತಿ ಸ್ವಾತಂತ್ರ್ಯದ ಮೇಲೆ ವಿಶ್ವಾಸ

ಅಂದರೆ ದೇಶದ ಪ್ರತಿಯೋರ್ವ ನಾಗರಿಕನಿಗೂ ಜೀವಿಸುವ, ಸಂಚರಿಸುವ, ಸಂಘಟನೆ ಸ್ಥಾಪಿಸುವ, ಕಾರ್ಯಕ್ರಮ ಸಂಘಟಿಸುವ ಸ್ವಾತಂತ್ರ್ಯವಿದೆ. ಬರವಣಿಗೆ, ಭಾಷಣ, ಧರ್ಮವಿಶ್ವಾಸ, ಅಭಿಪ್ರಾಯ, ಆತ್ಮಸಾಕ್ಷಿ ಇತ್ಯಾದಿಗಳೆಲ್ಲದರ ಸ್ವಾತಂತ್ರ್ಯವಿದೆ ಹಾಗೂ ಶಿಕ್ಷಣ ಮತ್ತು ಪ್ರಚಾರ ನಡೆಸುವ ಹಕ್ಕು ಇದೆ. ಒಟ್ಟಿನಲ್ಲಿ ದೇಶ, ಸಮುದಾಯ ಅಥವಾ ಇತರ ನಾಗರಿಕರಿಗೆ ನಾಶ-ನಷ್ಟವನ್ನುಂಟು ಮಾಡಬಾರದು ಅಥವಾ ಇತರರ ಹಕ್ಕುಗಳ ಮೇಲೆ ಹಸ್ತಕ್ಷೇಪವೂ ನಡೆಯಬಾರದು ಎಂಬುದಷ್ಟೇ ಶರ್ತ.

2. ಸಮಾನತೆಯಲ್ಲಿ ವಿಶ್ವಾಸ

ಅಂದರೆ ಸಕಲ ನಾಗರಿಕರೂ ಸಮಾನರು. ಜಾತಿ, ಕುಲ, ವರ್ಣ, ವಿಶ್ವಾಸ-ಆಚಾರ ಅಥವಾ ಲಿಂಗಾಧಾರಿತವಾಗಿ ನಾಗರಿಕರ ಮಧ್ಯೆ ವ್ಯತ್ಯಾಸವನ್ನುಂಟು ಮಾಡಲಾಗದು.

ಪ್ರತಿಯೊಬ್ಬರಿಗೂ ಮುಂದುವರಿಯುವ ಸಮಾನ ಅವಕಾಶವಿದೆ. ಯಾರೂ ಯಾವುದೇ ಸ್ಥಾನಕ್ಕೂ ಅರ್ಹನೆನಿಸಿದರೆ ಖಂಡಿತ ಅದರಲ್ಲಿ ವಿರಾಜಮಾನವಾಗಬಹುದು.

3. ಸಾಮೂಹಿಕತೆಯಲ್ಲಿ ವಿಶ್ವಾಸ

ದೇಶದ ಸಕಲ ನಾಗರಿಕರೂ ಒಟ್ಟಾಗಿ ಬಾಳಬೇಕು, ಪರಸ್ಪರರ ವ್ಯಕ್ತಿತ್ವ ಮತ್ತು ವೈಯಕ್ತಿಕತೆಯನ್ನು ಗೌರವಿಸಬೇಕು. ದೇಶ ಹಾಗೂ ಜನತೆಯ ಹಿತಕ್ಕಾಗಿ ಪರಸ್ಪರ ಸಹಕರಿಸಬೇಕು.

4. ಬದಲಾವಣೆಯಲ್ಲಿ ವಿಶ್ವಾಸ

ಬದಲಾವಣೆ ಸ್ವಾಭಾವಿಕವಾಗಿದೆ. ಅದುವೇ ಜೀವಂತಿಕೆ ಮತ್ತು ಪ್ರಗತಿಯ ಲಕ್ಷಣ. ಕಾಲವು ಪ್ರತಿಕ್ಷಣ ಬದಲಾಗುತ್ತಲೇ ಇರುತ್ತದೆ. ದೇಶದ ಪರಿಸ್ಥಿತಿ ಮತ್ತು ಅಗತ್ಯಗಳಲ್ಲಿಯೂ ಬದಲಾವಣೆ ಆಗುತ್ತಲಿರುತ್ತದೆ. ಹೊಸ ಪರಿಸ್ಥಿತಿಯು ಹೊಸ ಸವಾಲುಗಳನ್ನು ಹೊತ್ತು ತರುತ್ತದೆ. ಆದ್ದರಿಂದ ದೇಶದ ಉಳಿವು, ಸ್ಥಿರತೆ ಮತ್ತು ಪ್ರಗತಿಗಾಗಿ ಅದರ ವ್ಯವಸ್ಥೆ, ಧೋರಣೆ ಮತ್ತು ಕಾರ್ಯಕ್ರಮಗಳಲ್ಲಿ ಅಗತ್ಯಾನುಸಾರ ಬದಲಾವಣೆ ಆಗುತ್ತ ಇರಬೇಕಾಗಿದೆ. ಆದರೆ ಈ ಬದಲಾವಣೆಯು ಸಕಲ ನಾಗರಿಕರ ಅಭಿಪ್ರಾಯ ಮತ್ತು ಸ್ವೀಕಾರದೊಂದಿಗೆ ಆದರೆ ಮಾತ್ರ ಪ್ರಯೋಜನಕಾರಿ ಹಾಗೂ ಪರಿಣಾಮಕಾರಿಯಾಗಿ ಮಾರ್ಪಡುತ್ತದೆ. ಯಾವುದೇ ವಸ್ತು ಯಾರ ಮೇಲೂ ಹೇರಲ್ಪಡಬಾರದು.

ಶಿಕ್ಷಣದ ಉದ್ದೇಶ

ಪ್ರಜಾಪ್ರಭುತ್ವ ವ್ಯವಸ್ಥೆಯ ಜಯಾಪಜಯಗಳು ಸಂಪೂರ್ಣವಾಗಿ ದೇಶದ ಪ್ರಜೆಗಳ ಸಾಮರ್ಥ್ಯವನ್ನು ಅವಲಂಬಿಸಿವೆ. ಆದ್ದರಿಂದ ಪ್ರಜಾಪ್ರಭುತ್ವದ ಧ್ವಜವಾಹಕರ ಮಟ್ಟಿಗೆ ವ್ಯಕ್ತಿಯನ್ನು ದೇಶದ ಉತ್ತಮ ನಾಗರಿಕನನ್ನಾಗಿ ರೂಪಿಸುವುದು ಶಿಕ್ಷಣದ ಉದ್ದೇಶವಾಗಿದೆ. ಆದರೆ ಪ್ರಜಾಪ್ರಭುತ್ವದಲ್ಲಿಯೂ...

ಅ. ಭೌತಿಕ ಪ್ರಗತಿ ಮತ್ತು ಆರ್ಥಿಕ ಸುಸ್ಥಿತಿಗೇ ಪ್ರಾಮುಖ್ಯತೆ ನೀಡಲಾಗುತ್ತದೆ. ಅದಕ್ಕಾಗಿ ಪ್ರಜೆಗಳಲ್ಲಿ ಪರಸ್ಪರ ಮತ್ತು ಇತರ ದೇಶಗಳಿಂದ ನಿರಂತರ ಸ್ಪರ್ಧೆ ಎದುರಾಗುತ್ತಿರುತ್ತದೆ.

ಆ. ಪ್ರಜೆಗಳಿಗೆ ನಿರಂತರವಾಗಿ ದೇಶಭಕ್ತಿ ಮತ್ತು ರಾಷ್ಟ್ರೀಯ ಪಕ್ಷಪಾತದ ಅಮಲನ್ನು ಕುಡಿಸಲಾಗುತ್ತಿರುತ್ತದೆ.

ಆದ್ದರಿಂದ ಇಲ್ಲಿಯೂ ನೈತಿಕ ಮೌಲ್ಯಗಳು ಕಾರ್ಯತಃ ಕಡೆಗಣಿಸಲ್ಪಡುತ್ತವೆ ಹಾಗೂ ಅವುಗಳಿಗೆ ಸಲ್ಲತಕ್ಕ ಪರಿಗಣನೆ ಉಳಿಯುವುದಿಲ್ಲ. ದೇಶದ ಹಿತ ಮತ್ತು ನೈತಿಕ ಮೌಲ್ಯಗಳ ನಡುವೆ ಸಂಘರ್ಷ ಏರ್ಪಟ್ಟರೆ ಓರ್ವ ಉತ್ತಮ ನಾಗರಿಕನೆಂಬ ನೆಲೆಯಲ್ಲಿ ನೈತಿಕ ಮೌಲ್ಯಗಳಿಗೆ ತಿಲಾಂಜಲಿ ಇಡುವಂತೆ ನಿರೀಕ್ಷಿಸಲಾಗುತ್ತದೆ. ಆದರೆ ಒಬ್ಬ ಒಳ್ಳೆಯ

ವ್ಯಕ್ತಿಯಿಂದ ಅಂತಹ ನಿರೀಕ್ಷೆ ಇಡುವಂತಿಲ್ಲವಷ್ಟೇ. ಆದ್ದರಿಂದ 'ಒಳ್ಳೆಯ' ಎಂಬ ಪದದ ಬಗ್ಗೆ ತಪ್ಪು ಕಲ್ಪನೆಯನ್ನಿರಿಸಬಾರದು. ಉತ್ತಮ ನಾಗರಿಕ ಮತ್ತು ಉತ್ತಮ ವ್ಯಕ್ತಿಯ ಗುಣಗಳ ಮಧ್ಯೆ ಹೆಚ್ಚಿನ ವೇಳೆ ಅಜಗಜಾಂತರವನ್ನು ಕಾಣಲು ಸಾಧ್ಯ.

ಪ್ರಜಾಪ್ರಭುತ್ವ ಶಿಕ್ಷಣ ವ್ಯವಸ್ಥೆಯ ವಿಶೇಷತೆಗಳು

ಈ ಸಿದ್ಧಾಂತದ ಆಧಾರದಲ್ಲಿ ರೂಪುಗೊಳ್ಳುವ ಶಿಕ್ಷಣ ವ್ಯವಸ್ಥೆಯಲ್ಲಿ ಈ ಕೆಳಗಿನ ವಿಶೇಷತೆಗಳನ್ನು ಕಾಣಬಹುದು:

1. ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕ ಮತ್ತು ಕಡ್ಡಾಯವಾಗಿರುತ್ತದೆ. ಸಕಲ ನಾಗರಿಕರು ಮೂಲಭೂತ ಶಿಕ್ಷಣ-ತರಬೇತಿಯನ್ನು ಹೊಂದುವಂತೆ ಪ್ರಯತ್ನಿಸಲಾಗುತ್ತದೆ.
2. ಸಾಮಾನ್ಯ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ನೀಡಲು ಪ್ರಯತ್ನಿಸಲಾಗುತ್ತದೆ. ಯಾರೂ ಸಂಪನ್ಮೂಲದ ಕೊರತೆಯಿಂದಾಗಿ ಮೂಲಭೂತ ಶಿಕ್ಷಣದಿಂದ ವಂಚಿತವಾಗಬಾರದು.
3. ಜಾತಿ-ಧರ್ಮ, ವರ್ಣ-ವರ್ಗ ಅಥವಾ ಗೋತ್ರ-ಕುಲವೆಂಬ ವ್ಯತ್ಯಾಸವಿಲ್ಲದೆ ಎಲ್ಲರಿಗೂ ತಂತಮ್ಮ ಸಾಮರ್ಥ್ಯ/ಪ್ರತಿಭೆಗಳನ್ನು ಕ್ರಿಯಾರೂಪಕ್ಕೆ ತರುವ ಸಮಾನ ಅವಕಾಶವಿದೆ. ಯಾರೊಂದಿಗೂ ತಾರತಮ್ಯವನ್ನು ತೋರಲಾಗದು.
4. ಪ್ರತಿಯೊಬ್ಬರೂ ತಮ್ಮ ಪ್ರತಿಭೆಯಂತೆ ಮುಂದುವರಿಯಲು ಅನುವಾಗುವಂತೆ ವಿದ್ಯಾರ್ಥಿಗಳ ವಿಶೇಷತೆ ಮತ್ತು ಅವರಲ್ಲಿರುವ ಸಾಮರ್ಥ್ಯದ ವ್ಯತ್ಯಾಸವನ್ನು ಪರಿಗಣಿಸುತ್ತಾ ಅವರ ಬಗ್ಗೆ ವ್ಯಕ್ತಿಗತ ಗಮನಹರಿಸಲಾಗುತ್ತದೆ.
5. ವ್ಯಕ್ತಿ ಮತ್ತು ಸಮಾಜ ಎರಡಕ್ಕೂ ಪ್ರಾಮುಖ್ಯತೆ ನೀಡಲಾಗುತ್ತದೆ. ಒಂದನ್ನು ಇನ್ನೊಂದಕ್ಕಾಗಿ ಬಲಿ ನೀಡಲಾಗುವುದಿಲ್ಲ, ಬದಲಾಗಿ ಒಂದೆಡೆ ವ್ಯಕ್ತಿಗೆ ಅಭಿವೃದ್ಧಿ ಹೊಂದಲು ಅತ್ಯಧಿಕ ಅವಕಾಶ ನೀಡಲಾಗುವಂತೆಯೇ ಇನ್ನೊಂದೆಡೆ ಆತನನ್ನು ಸಾಮೂಹಿಕ ಹೊಣೆಗಾರಿಕೆಗಳ ಈಡೇರಿಕೆಗೆ ಸಿದ್ಧಗೊಳಿಸಲಾಗುತ್ತದೆ.
6. ಶಿಕ್ಷಕ ಮತ್ತು ಶಿಷ್ಯ ಈರ್ವರ ಸ್ವಾತಂತ್ರ್ಯವನ್ನೂ ಗೌರವಿಸಲಾಗುತ್ತದೆ. ಶಿಕ್ಷಕ ಓರ್ವ ಸರ್ವಾಧಿಕಾರಿಯ ಬದಲಿಗೆ ಸಹಾನುಭೂತಿಯುಳ್ಳ ಮಾರ್ಗದರ್ಶಕನೆಂಬ ನೆಲೆಯಲ್ಲಿ ಕಾರ್ಯವೆಸಗುತ್ತಾನೆ. ಬಲವಂತ ಮತ್ತು ಬಾಹ್ಯ ಒತ್ತಡದಿಂದ ಕೆಲಸ ಮಾಡುವುದಿಲ್ಲ, ಬದಲಾಗಿ ಸ್ವತಂತ್ರ ವಾತಾವರಣದಲ್ಲಿ ಶಿಕ್ಷಣ ನೀಡುತ್ತಾನೆ. ಶಿಕ್ಷಕನಿಗೂ ಶಿಕ್ಷಣ ವಿಧಾನ ಮತ್ತು ಶಾಲಾ ವ್ಯವಸ್ಥೆ ಇತ್ಯಾದಿ ವಿಷಯದಲ್ಲಿ ಅತ್ಯಧಿಕ ಸ್ವಾತಂತ್ರ್ಯ ನೀಡಲಾಗುತ್ತದೆ.
7. ಭೌತಿಕ ಮತ್ತು ಲಾಭದ ದೃಷ್ಟಿಕೋನಕ್ಕೆ ಅಪಾರ ಪ್ರಾಮುಖ್ಯತೆ ನೀಡಲಾಗುತ್ತದೆ. ಆದರೆ ಜೀವನದ ಉನ್ನತ ಮೌಲ್ಯಗಳನ್ನು ಎಂದಿಗೂ ಕಡೆಗಣಿಸಲಾಗುವುದಿಲ್ಲ,

ರಾಷ್ಟ್ರೀಯ ಮತ್ತು ಜನಾಂಗೀಯ ಮಟ್ಟದಲ್ಲಿ ಅದಕ್ಕೂ ಪ್ರಾಮುಖ್ಯತೆ ನೀಡಲಾಗುತ್ತದೆ.

8. ಧರ್ಮವನ್ನು ವ್ಯಕ್ತಿಯ ಖಾಸಗಿ ವಿಷಯವಾಗಿ ಭಾವಿಸಲಾಗುತ್ತದೆ. ಅದನ್ನು ಪೂಜೆ-ಆರಾಧನೆಗಳಿಗೆ ಸೀಮಿತಗೊಳಿಸಲು ಪ್ರಯತ್ನಿಸಲಾಗುತ್ತದೆ. ಸಾಮೂಹಿಕ ವಿಷಯಗಳಲ್ಲಿ ಧರ್ಮದ ಹಸ್ತಕ್ಷೇಪವನ್ನು ನಿರುತ್ತೇಜಿಸಲಾಗುತ್ತದೆ. ಆದ್ದರಿಂದ ಧಾರ್ಮಿಕ ವಿದ್ಯಾಭ್ಯಾಸವನ್ನು ವ್ಯಕ್ತಿ ಅಥವಾ ಖಾಸಗಿ ಸಂಸ್ಥೆಗಳ ವಿವೇಚನೆಗೆ ಬಿಟ್ಟು ಬಿಡಲಾಗುತ್ತದೆ. ಸರಕಾರವು ತನ್ನ ಸಂಸ್ಥೆಗಳಲ್ಲಿ ಅದರ ವ್ಯವಸ್ಥೆಯನ್ನು ಮಾಡುವುದಿಲ್ಲ.
9. ದೇಶದ ವಿವಿಧ ಧಾರ್ಮಿಕ, ಭಾಷೀಯ, ಸಾಂಸ್ಕೃತಿಕ ಅಥವಾ ಸಾಮುದಾಯಿಕ ವಿಭಾಗಗಳ ನಡುವೆ ಸಾದ್ಯಂತ ಸಮಾನ ಆಸಕ್ತಿಯನ್ನು ಹುಟ್ಟಿಸಲು ಪ್ರಯತ್ನಿಸಲಾಗುತ್ತದೆ. ಅವರೆಲ್ಲರ ವೈಯಕ್ತಿಕತೆಯನ್ನು ಕ್ರಮೇಣ ಸೀಮಿತಗೊಳಿಸುತ್ತಾ ಎಲ್ಲರನ್ನೂ ಒಂದು ಸಮುದಾಯ ಮತ್ತು ಒಂದು ಸಂಸ್ಕೃತಿಗೆ ತರಲು ಚಿಂತಿಸಲಾಗುತ್ತದೆ.
10. ಖಾಸಗಿ ಸಂಸ್ಥೆಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲಾಗುತ್ತದೆ. ವ್ಯಕ್ತಿ ಮತ್ತು ಗುಂಪುಗಳಿಗೆ ತಮ್ಮದೇ ಆದ ಖಾಸಗಿ ಸಂಸ್ಥೆಗಳನ್ನು ನಡೆಸುವ ಹಾಗೂ ತಮ್ಮ ಮಕ್ಕಳಿಗೆ ತಮ್ಮ ಇಷ್ಟದ ಶಿಕ್ಷಣವನ್ನು ಕೊಡಿಸುವ ಸಂಪೂರ್ಣ ಹಕ್ಕು ಇರುತ್ತದೆ.
11. ಶಿಕ್ಷಣ ವ್ಯವಸ್ಥೆಯ ಮೇಲೆ ಕೇಂದ್ರ ಸರಕಾರವು ಅತಿ ಕಡಿಮೆ ಹಸ್ತಕ್ಷೇಪ ನಡೆಸುತ್ತದೆ. ಸ್ಥಳೀಯಾಡಳಿತ ಮತ್ತು ರಾಜ್ಯ ಸರಕಾರಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಲಾಗುತ್ತದೆ. ಈ ಮೂಲಕ ಪ್ರಜಾಪ್ರಭುತ್ವದ ರಂಗು ನಿರಂತರವಾಗಿರಬೇಕು, ಜನ ಹೆಚ್ಚು ಸ್ವತಂತ್ರ ವಾತಾವರಣವನ್ನು ಅನುಭವಿಸಬೇಕು ಮತ್ತು ಸ್ವತಂತ್ರವಾಗಿ ಪ್ರಯೋಗಗಳನ್ನು ನಡೆಸಬೇಕು ಎಂದು ಉದ್ದೇಶಿಸಲಾಗಿದೆ.
12. ದೇಶದ ಸಕಲ ಪ್ರಜೆಗಳನ್ನು ಒಗ್ಗಟ್ಟಾಗಿರಿಸಲು, ಅವರಲ್ಲಿ ಭಾವೈಕ್ಯ ಮೂಡಿಸಲು ದೇಶಭಕ್ತಿ ಮತ್ತು ರಾಷ್ಟ್ರೀಯತೆಯ ಭಾವನೆಯನ್ನು ಹೆಚ್ಚೆಚ್ಚು ಹುಟ್ಟಿಸಲಾಗುತ್ತದೆ.

ವಿಮರ್ಶೆ

ರಾಷ್ಟ್ರೀಯವಾದಿ ಪ್ರಜಾಪ್ರಭುತ್ವ ಶಿಕ್ಷಣ ವ್ಯವಸ್ಥೆಯಲ್ಲಿ...

1. ವ್ಯಕ್ತಿ ಸ್ವಾತಂತ್ರ್ಯದ ಗೌರವ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಸ್ವತಂತ್ರ ವಾತಾವರಣ,
2. ಸಾರ್ವತ್ರಿಕವಾದ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ
3. ಸಮಾನತೆ ಮತ್ತು ಅಭಿವೃದ್ಧಿ ಹೊಂದಲಿಕ್ಕಿರುವ ಸಮಾನಾವಕಾಶ,
4. ಪ್ರತಿಭೆ ಮತ್ತು ಪರಿಶ್ರಮದಿಂದ ಪ್ರಗತಿ ಹೊಂದಲು ಸಂಪೂರ್ಣ ಅವಕಾಶ
5. ಸಂಸ್ಕೃತಿ-ನಾಗರಿಕತೆ ಮತ್ತು ಧರ್ಮ-ನೈತಿಕತೆಗಳನ್ನು ಸಂಪೂರ್ಣವಾಗಿ ಪರಿಗಣಿಸುವುದು ಇತ್ಯಾದಿ ವಿಶೇಷತೆಗಳಿವೆ. ಜತೆಗೆ ಕೆಲವು ಕೊರತೆಗಳೂ ಈ ವ್ಯವಸ್ಥೆಯಲ್ಲಿದೆ. ಉದಾಹರಣೆಗೆ:

1. ಆರಂಭದಲ್ಲಿಯೇ ರಾಷ್ಟ್ರೀಯವಾದ ಮತ್ತು ಜನಾಂಗೀಯವಾದದ ಅಮಲನ್ನು ಕುಡಿಸಿ ನಾಗರಿಕರನ್ನು ಪಕ್ಷಪಾತ, ಸಂಕುಚಿತತೆ ಮತ್ತು ಜನಾಂಗೀಯ ಸ್ವಾರ್ಥತೆಗೆ ಈಡು ಮಾಡಲಾಗುತ್ತದೆ. ದೇಶದ ಗಡಿಯಾಚೆ ಇರುವ ಜನರ ಬಗ್ಗೆ ಅವರ ಮನದಲ್ಲಿ ಯಾವುದೇ ಸಹಾನುಭೂತಿ ಇರುವುದಿಲ್ಲ, ಬದಲು ಅವರ ವಿರುದ್ಧ ವೈರ ಭಾವನೆಯೇ ಬೆಳೆದು ಬರುತ್ತದೆ. ಇಂತಹ ಜನರಿಂದ ಮಾನವೀಯತೆಯನ್ನು ನಿರೀಕ್ಷಿಸುವುದು ತೀರಾ ಕಷ್ಟ ಎಂಬುದು ಸ್ಪಷ್ಟ.
2. ಧಾರ್ಮಿಕ ಶಿಕ್ಷಣವನ್ನು ಕಡೆಗಣಿಸಿ ಅಥವಾ ಅದನ್ನು ಪೋಷಕರ ಮತ್ತು ಖಾಸಗಿ ಸಂಸ್ಥೆಗಳಿಗೆ ಒಪ್ಪಿಸಿ ಬಿಡುವ ಮೂಲಕ ಕಾರ್ಯತಃ ದೊಡ್ಡ ಸಂಖ್ಯೆಯ ಜನರಲ್ಲಿ ಧರ್ಮ ಮತ್ತು ನೈತಿಕತೆಯೊಂದಿಗಿನ ಸಂಬಂಧವನ್ನು ಕಡಿದು ಬಿಡಲಾಗುತ್ತದೆ. ಈ ಮೂಲಕ ಜನರು ತಮ್ಮ ಸಂಸ್ಥೆಗಳನ್ನು ಸೀಮಿತ ಮತ್ತು ಅಪೂರ್ಣ ರೀತಿಯಲ್ಲಿಯಷ್ಟೇ ಮಾಡಲು ಶಕ್ತರಾಗುತ್ತಾರೆ.
3. ಜೀವನದ ಎಲ್ಲ ರಂಗಗಳನ್ನು ವಿಶೇಷತಃ ಸಾಮೂಹಿಕ ರಂಗವನ್ನು ದೇವನಿಂದ ನಿರಪೇಕ್ಷಗೊಳಿಸಿ ಧರ್ಮದ ಉತ್ಥಾನ ಕಾರ್ಯದಲ್ಲಿ ಜನರನ್ನು ನಿರುತ್ತೇಜಿಸಲಾಗುತ್ತದೆ.
4. ತಮ್ಮವರಿಗೆ ಮತ್ತು ಇತರರಿಗೆ ಬೇರೆ ಬೇರೆ ಮಾನದಂಡಗಳನ್ನು ನೀಡುವ ಮೂಲಕ ನೈತಿಕ ಮೌಲ್ಯಗಳಿಗೆ ಕಡಿಮೆ ಮಹತ್ವ ನೀಡಲಾಗುತ್ತದೆ. ಈ ರೀತಿ ಜನರಲ್ಲಿ ತತ್ವನಿಷ್ಠೆ ಇಲ್ಲವಾಗುತ್ತದೆ. ಕ್ರಮೇಣ ಅವರು ತಮ್ಮವರೊಂದಿಗೂ ಅಪ್ರಾಮಾಣಿಕರಾಗಿ ಮಾರ್ಪಡುತ್ತಾರೆ.
5. ಸತ್ಯ-ನ್ಯಾಯ ಮತ್ತು ಜೀವನದ ನೈಜ ತತ್ವಗಳ ಬದಲು ಬಹುಮತವನ್ನೇ ತೀರ್ಪಿನ ಮಾನದಂಡವೆಂದು ಸಾರುವ ಕಾರಣ ಅಲ್ಪಸಂಖ್ಯಾತರೊಡನೆ ನ್ಯಾಯ ಪಾಲನೆಯು ವಿರಳವಾಗುತ್ತದೆ. ಹಾಗಾಗಿ ರಾಷ್ಟ್ರೀಯವಾದಿ ಪ್ರಜಾಪ್ರಭುತ್ವ-ಸಿದ್ಧಾಂತದಂತೆ ಶಿಕ್ಷಣ ನೀಡುವುದರಿಂದ ಸಾಮಾನ್ಯವಾಗಿ 'ತತ್ವಹೀನ ಕ್ಷೋಭೆಕಾರಕ' ಜನರೇ ಮೂಡಿ ಬರುವ ಸಾಧ್ಯತೆ ಹೆಚ್ಚಿದೆ.

ಶಿಕ್ಷಣದ ಇಸ್ಲಾಮೀ ಸಿದ್ಧಾಂತ

ಇಸ್ಲಾಮ್ ಒಂದು ಸಂಪೂರ್ಣ ಜೀವನ ವ್ಯವಸ್ಥೆಯಾಗಿದೆ. ಅಲ್ಲಾಹನ ಬಳಿ ಸಕಲ ಮಾನವ ಕುಲದ ಏಕೈಕ ಅಧಿಕೃತ ಧರ್ಮ ಇದೊಂದೇ ಆಗಿದೆ. ಇದನ್ನು ತನ್ನದಾಗಿಸಿಕೊಳ್ಳುವ ಮೂಲಕ ಮಾತ್ರವೇ ಮಾನವ ಇಹಪರಗಳೆರಡರಲ್ಲೂ ಯಶಸ್ಸು ಗಳಿಸಬಲ್ಲ.

ಇಸ್ಲಾಮೀ ವ್ಯವಸ್ಥೆಯ ಬುನಾದಿ

1. ತೌಹೀದ್: ಸಕಲ ವಿಶ್ವದ ಸೃಷ್ಟಿಕರ್ತ, ಪಾಲಕ, ಪ್ರಭು ಅಲ್ಲಾಹನಾಗಿದ್ದಾನೆ. ಸರ್ವ ಮಾನವರೂ ಅವನ ದಾಸರಾಗಿದ್ದಾರೆ. ಪ್ರಭುತ್ವ ಕೇವಲ ಅವನಿಗೇ ಮೀಸಲು.

ಪ್ರತಿಯೋರ್ವರೂ ಅವನ ಆಜ್ಞಾಪಾಲಕರಾಗಿ ಬಾಳಬೇಕಾಗಿದೆ ಮತ್ತು ಅವನ ಮುಂದೆಯೇ ಶಿರ ಬಾಗಬೇಕು.

2. **ರಿಸಾಲತ್:** ಅಲ್ಲಾಹನು ಮಾನವರ ಮಾರ್ಗದರ್ಶನಕ್ಕಾಗಿ ತನ್ನ ಸಂದೇಶವಾಹಕರನ್ನು ಕಳುಹಿಸಿದನು. ಸಂದೇಶವಾಹಕರು ತಮ್ಮೊಂದಿಗೆ ಅಲ್ಲಾಹನ ಆದೇಶಗಳನ್ನು ತಂದರು. ಪ್ರವಾದಿ ಮುಹಮ್ಮದ್ ಮುಸ್ತಫಾರವರು(ಸ) ಅಲ್ಲಾಹನ ಅಂತಿಮ ಸಂದೇಶವಾಹಕರಾಗಿದ್ದಾರೆ. ಅವರ ಮೂಲಕ ಪ್ರವಾದಿತ್ವದ ಶೃಂಖಲೆ ಸಮಾಪ್ತಿಯಾಯಿತು. ಅಂತ್ಯ ಪ್ರವಾದಿಯವರು(ಸ) ಅಲ್ಲಾಹನ ಆದೇಶ, ಅಂತಿಮ ವಾಣಿ ಪವಿತ್ರ ಕುರ್‌ಆನನ್ನು ತಂದರು ಮತ್ತು ಅಲ್ಲಾಹನ ಇಂಗಿತಕ್ಕೆ ತಕ್ಕಂತೆ ಬಾಳಿ ತೋರಿಸಿದರು. ಅಲ್ಲಾಹನ ಗ್ರಂಥ (ಪವಿತ್ರ ಕುರ್‌ಆನ್) ಮತ್ತು ಪ್ರವಾದಿವರ್ಯರ(ಸ) ಚರ್ಯೆಯ ಅನುಕರಣೆಯಲ್ಲಿಯೇ ಸಕಲ ಮಾನವರ ಮೋಕ್ಷ ಅಡಗಿದೆ.

3. **ಆಖಿರತ್:** ಸಕಲ ಮಾನವರೂ ಮರಣ ಹೊಂದಿ ಒಂದು ದಿನ ಅಲ್ಲಾಹನ ಸನ್ನಿಧಿಯಲ್ಲಿ ಎದ್ದು ಹಾಜರಾಗಲಿಕ್ಕಿದೆ. ಅಲ್ಲಿ ತಮ್ಮ ಎಲ್ಲ ಕರ್ಮಗಳ ಲೆಕ್ಕಾಚಾರ ನೀಡಲಿಕ್ಕಿದೆ. ಯಾರೂ ಅಲ್ಲಾಹನ ಹಿಡಿತದಿಂದ ತಪ್ಪಿಸಲಾರರು. ಪ್ರತಿಯೋರ್ವರಿಗೂ ಅಂದು ತಮ್ಮ ಕರ್ಮಗಳಿಗೆ ಶಿಕ್ಷೆ ಯಾ ರಕ್ಷೆ ದೊರೆಯಲಿದೆ.

4. **ಖಿಲಾಫತ್:** ನಮ್ಮ ಈ ಭೂಮಿಯು ಅಲ್ಲಾಹನ ಅನಂತ ಸಾಮ್ರಾಜ್ಯದ ಒಂದು ಸಣ್ಣ ಭಾಗವಷ್ಟೇ ಆಗಿದೆ. ಮಾನವನು ಭೂಮಿಯಲ್ಲಿ ಅಲ್ಲಾಹನ ಪ್ರತಿನಿಧಿ ಅಥವಾ ಖಲೀಫ ಆಗಿದ್ದಾರೆ. ಅವನ ಮಟ್ಟಿಗೆ, ಅಲ್ಲಾಹನ ಭೂಮಿಯಲ್ಲಿ ಅಲ್ಲಾಹನ ಇಚ್ಛೆಯಂತೆ ಬಾಳಬೇಕಾದುದೇ ಸರಿಯಾದ ವಿಧಾನವಾಗಿದೆ. ದೇವನಿಷ್ಠೆ, ಧರ್ಮನಿಷ್ಠೆ, ವ್ಯವಸ್ಥಾಪನಾ ಸಾಮರ್ಥ್ಯ ಮತ್ತು ಪ್ರಜೆಗಳ ವಿಶ್ವಾಸ ಇವು ನಾಯಕತ್ವಕ್ಕೆ ಬೇಕಾದ ಕನಿಷ್ಠ ಗುಣಗಳು. ಸಾಮೂಹಿಕ ವ್ಯವಸ್ಥೆಯನ್ನು ನ್ಯಾಯ-ಸಮಾನತೆಯಿಂದ ಸ್ಥಾಪಿಸುವುದು, ಕೆಡುಕುಗಳನ್ನು ಅಳಿಸುವುದು, ಒಳಿತುಗಳನ್ನು ಪ್ರೇರೇಪಿಸುವುದು ಮತ್ತು ಆಡಳಿತವನ್ನು ಅಲ್ಲಾಹನ ಇಚ್ಛೆಯಂತೆ ನಡೆಸುವುದು ಇದು ಹೊಣೆಗಾರರ ಕರ್ತವ್ಯವಾಗಿದೆ.

5. **ಮಾನವ ಕುಲದ ಏಕತೆ, ಸಮಾನತೆ ಮತ್ತು ಸಹೋದರತ್ವ:** ಸಕಲ ಮಾನವರು ಏಕ ಮಾತಾಪಿತರ ಸಂತಾನವಾಗಿದ್ದಾರೆ. ಆದ್ದರಿಂದ ಎಲ್ಲರೂ ಪರಸ್ಪರ ಸಮಾನರು ಮತ್ತು ಸಹೋದರರು. ವರ್ಣ-ವರ್ಗ ಭೇದ, ಜಾತಿಪದ್ಧತಿ, ಅಸ್ಪೃಶ್ಯತೆ ಎಲ್ಲವೂ ಸುಳ್ಳು ಮತ್ತು ಕಪೋಲಕಲ್ಪಿತ ಮಾತುಗಳಾಗಿವೆ. ಅರಬನಿಗೆ ಅರಬೇತರನಿಗಿಂತ, ಬಿಳಿಯನಿಗೆ ಕರಿಯನಿಗಿಂತ, ಶ್ರೀಮಂತನಿಗೆ ಬಡವನಿಗಿಂತ, ಬ್ರಾಹ್ಮಣನಿಗೆ ಅಸ್ಪೃಶ್ಯನಿಗಿಂತ ಶ್ರೇಷ್ಠತೆ ಏನೂ ಇಲ್ಲ. ಕೇವಲ ಅತ್ಯಧಿಕ ಧರ್ಮನಿಷ್ಠ ಮತ್ತು ದೇವನಿಷ್ಠನೇ ಅತ್ಯುತ್ತಮನು.

6. ಸ್ವಾತಂತ್ರ್ಯ: ಹಿರಿಯ-ಕಿರಿಯ, ಬಡವ-ಬಲ್ಲಿದ, ಸ್ತ್ರೀ-ಪುರುಷ, ಯಜಮಾನ-ನೌಕರ ಎಲ್ಲರೂ ಅಲ್ಲಾಹನ ದಾಸರೂ ಅವನ ಆಜ್ಞಾಪಾಲಕರೂ ಆಗಿದ್ದಾರೆ. ಸರ್ವತ್ರ ಸ್ವತಂತ್ರರು ಅಂತ ಯಾರೂ ಇಲ್ಲ. ಆದರೆ ಮಾನವರಿಗೆ ಸಂಬಂಧಿಸಿ ಎಲ್ಲರೂ ಸ್ವತಂತ್ರರು. ಪ್ರತಿಯೋರ್ವನನ್ನು ಅಲ್ಲಾಹನು ಸ್ವತಂತ್ರನಾಗಿ ಹುಟ್ಟಿಸಿದ್ದಾನೆ. ಹಾಗಾಗಿ ಯಾರಿಗೂ ಇತರರ ಸ್ವಾತಂತ್ರ್ಯ ಕಸಿಯುವ ಅಥವಾ ಅಲ್ಲಾಹನ ದಾಸರನ್ನು ತನ್ನ ದಾಸರನ್ನಾಗಿ ಮಾಡುವ ಮತ್ತು ಅವರನ್ನು ತನ್ನ ಇಚ್ಛೆಯಂತೆ ನಡೆಸುವ ಅಧಿಕಾರ ಇಲ್ಲ.
7. ವಿಶ್ವಾಸ: ಆತ್ಮಸಾಕ್ಷಿ ಮತ್ತು ಅಭಿಪ್ರಾಯದ ವಿಷಯದಲ್ಲಿ ಯಾವುದೇ ಒತ್ತಡ ಇಲ್ಲ. ಯಾವುದೇ ಸಿದ್ಧಾಂತ ಮತ್ತು ಅಭಿಪ್ರಾಯದಲ್ಲಿ ಯಾರಿಗಾದರೂ ವಿಶ್ವಾಸವಿದ್ದರೆ, ಅದನ್ನು ಅವರು ಅಂಗೀಕರಿಸಬಹುದು. ಹಾಗಿದ್ದರೂ ಮಾನವರಿಗೆ ಕಲ್ಯಾಣಕಾರಿಯಾಗಿರುವ ಇಸ್ಲಾಮನ್ನು ನೆಚ್ಚಿಕೊಳ್ಳುವ ಮೂಲಕ ಇಹ-ಪರ ಯಶಸ್ಸು ಗಳಿಸುವುದು ಉತ್ತಮ.
8. ಸಕಲ ಸೃಷ್ಟಿಗಳೂ ಅಲ್ಲಾಹನ ಕುಟುಂಬವಾಗಿದೆ. ಎಲ್ಲರ ಮೂಲಭೂತ ಅಗತ್ಯಗಳು ಅವಶ್ಯವಾಗಿ ಪೂರೈಸಲ್ಪಡಬೇಕು. ಪ್ರತಿಯೊಬ್ಬ ಹಸಿದವನು ಅನ್ನವನ್ನು, ನಗ್ನನು ವಸ್ತ್ರವನ್ನು ಮತ್ತು ರೋಗಿಯು ಚಿಕಿತ್ಸೆಯನ್ನು ಬಯಸುತ್ತಾನೆ. ಅವರ ಈ ಹಕ್ಕು ಯಾವುದೇ ಬೆಲೆ ತೆತ್ತಾದರೂ ಪೂರೈಸಲ್ಪಡಬೇಕಾಗಿದೆ.
9. ಪ್ರತಿಯೋರ್ವ ಮಾನವನ ಪ್ರಾಣ, ಸೊತ್ತು, ಮಾನ ಪವಿತ್ರವಾದುದು. ಅದರ ಮೇಲೆ ಹಸ್ತಕ್ಷೇಪ ಸಲ್ಲದು.
10. ಪ್ರತಿಯೋರ್ವರೂ ತನಗಿಷ್ಟವಾದುದನ್ನೇ ಇತರರಿಗೂ ಬಯಸಬೇಕು.
11. ಒಳಿತಿನ ಕಾರ್ಯಗಳಲ್ಲಿ ಪರಸ್ಪರ ಸಹಕರಿಸಬೇಕು. ಕೆಡುಕುಗಳಲ್ಲಿ ಯಾರಿಗೂ ಸಹಕಾರ ತೋರಬಾರದು.
12. ಜೀವನ ಸಾಗಿಸುವ ನೇರವಾದ ಸತ್ಯಮಾರ್ಗದ ಬಗ್ಗೆ ತಿಳಿದವರು, ಅದನ್ನು ತಿಳಿದಿಲ್ಲದವರಿಗೆ ತಿಳಿಸಿ ಕೊಡಬೇಕು.

ಶಿಕ್ಷಣದ ಉದ್ದೇಶ

ಈ ಮೂಲಭೂತ ಕಲ್ಪನೆಯಿಂದ ತಿಳಿದು ಬರುವಂತೆ, ಇಸ್ಲಾಮೀ ದೃಷ್ಟಿಕೋನದಲ್ಲಿ ಶಿಕ್ಷಣದ ಉದ್ದೇಶವು ವ್ಯಕ್ತಿಯನ್ನು 'ಅಲ್ಲಾಹನ ಸಜ್ಜನ ದಾಸ'ನನ್ನಾಗಿ ಮಾಡುವುದಾಗಿದೆ. ವಿವರಗಳಿಗಾಗಿ ನೋಡಿ, ಪುಟ 29-32.

ಇಸ್ಲಾಮೀ ಶಿಕ್ಷಣ ವ್ಯವಸ್ಥೆಯ ವಿಶೇಷತೆಗಳು

ಇಸ್ಲಾಮೀ ಶಿಕ್ಷಣ ವ್ಯವಸ್ಥೆಯಲ್ಲಿ ಈ ಕೆಳಗಿನ ವಿಶೇಷತೆಗಳಿವೆ:

1. ಮೂಲಭೂತ ಶಿಕ್ಷಣವು ಪ್ರತಿಯೋರ್ವ ಮುಸ್ಲಿಮ್ ಸ್ತ್ರೀ-ಪುರುಷರ ಕರ್ತವ್ಯವಾಗಿರುತ್ತದೆ. ಏಕೆಂದರೆ,

''ವಿದ್ಯೆ ಗಳಿಸುವುದು ಎಲ್ಲ ಮುಸ್ಲಿಮ್ ಸ್ತ್ರೀ-ಪುರುಷರ ಮೇಲೆ ಕಡ್ಡಾಯವಾಗಿದೆ'' ಎಂದು ಪ್ರವಾದಿವರ್ಯರು(ಸ) ಹೇಳಿದ್ದಾರೆ. (ಇಬ್ನುಮಾಜಃ)

ಈ ಕರ್ತವ್ಯ ಪಾಲನೆಗಾಗಿ ಪ್ರತಿಯೋರ್ವ ವ್ಯಕ್ತಿಗೂ ಸಂಪೂರ್ಣ ಸೌಲಭ್ಯವನ್ನು ಒದಗಿಸಲಾಗುತ್ತದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಯು ಸ್ವತಃ ಚಿಂತಿಸುತ್ತಾನಲ್ಲದೆ, ಅಧ್ಯಾಪಕರು, ಪಾಲಕರು, ಮುಸ್ಲಿಮ್ ಸಮಾಜ ಮತ್ತು ಇಸ್ಲಾಮೀ ವ್ಯವಸ್ಥೆ ಎಲ್ಲರೂ/ಎಲ್ಲವೂ ಈ ಸತ್ಕಾರ್ಯದಲ್ಲಿ ಸಹಕರಿಸುತ್ತವೆ.

2. ಕಲಿಯುವ, ಕಲಿಸುವ ಮತ್ತು ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಸಂಪೂರ್ಣ ಪ್ರಯತ್ನ ಮಾಡಲಾಗುತ್ತದೆ. ಯಾರೂ ವಿದ್ಯೆಯಿಂದ ವಂಚಿತನಾಗಬಾರದೆಂಬುದೇ ಅದರ ಉದ್ದೇಶ.

''ವಿದ್ಯೆ ಗಳಿಸಿರಿ ಮತ್ತು ಜನರಿಗೆ ಕಲಿಸಿರಿ.'' (ಬೈಹಕಿ)

3. ಪ್ರಯೋಜನಕಾರಿ ವಿದ್ಯೆಯನ್ನು ಕಲಿಯುವುದು ಮತ್ತು ಕಲಿಸುವುದು ಪುಣ್ಯ ಕರ್ಮವಾಗಿದೆ. ಹಾಗೆಯೇ ಸಂಪೂರ್ಣ ಪ್ರಾಮಾಣಿಕತೆ ಮತ್ತು ದಕ್ಷತೆಯೊಂದಿಗೆ ಕಲಿಯಲಾಗುತ್ತದೆ, ಕಲಿಸಲಾಗುತ್ತದೆ.

''ಅಧ್ಯಾಪಕ ಮತ್ತು ವಿದ್ಯಾರ್ಥಿ ಈರ್ವರೂ ಪುಣ್ಯ ಗಳಿಕೆಯಲ್ಲಿ ಭಾಗೀದಾರರು.'' (ಇಬ್ನು ಮಾಜಃ)

''ಯಾರಾದರೂ ಒಳಿತಿನೆಡೆಗೆ ಮಾರ್ಗದರ್ಶನ ನೀಡಿದರೆ, ಅವನಿಗೆ ಆ ಒಳಿತನ್ನು ಎಸಗುವವನಷ್ಟೇ ಪ್ರತಿಫಲ ಸಿಗುವುದು.'' (ಮುಸ್ಲಿಮ್)

''ವಿದ್ಯೆ ಗಳಿಕೆಯ ಹಾದಿಯನ್ನು ಯಾರಾದರೂ ಆಯ್ದುಕೊಂಡರೆ, ಅಲ್ಲಾಹ್ ಅವನಿಗೆ ಸ್ವರ್ಗದ ದಾರಿಯನ್ನು ಸುಗಮಗೊಳಿಸುತ್ತಾನೆ.'' (ಮುಸ್ಲಿಮ್)

''ಒಳಿತನ್ನು ಕಲಿಯುವವನಿಗಾಗಿ ಸಕಲ ವಸ್ತುಗಳೂ ಕ್ಷಮೆಯ ಪ್ರಾರ್ಥನೆಗೈಯುತ್ತವೆ.'' (ತಿರ್ಮಿದಿ)

''ವಿದ್ಯೆ ಗಳಿಸಲಿಕ್ಕಾಗಿ ಮನೆಯಿಂದ ಹೊರಟವನು, ಮರಳಿ ಬರುವ ವರೆಗೆ ಅಲ್ಲಾಹನ ಮಾರ್ಗದಲ್ಲಿ ಇರುತ್ತಾನೆ.'' (ತಿರ್ಮಿದಿ)

''ವಿದ್ಯಾರ್ಥಿಯ ಸಂತೋಷಕ್ಕಾಗಿ ದೇವಚರರು ಅವನ ಸುತ್ತ ತಮ್ಮ ರೆಕ್ಕೆಗಳನ್ನು ಹರಡಿಕೊಂಡಿರುತ್ತಾರೆ.'' (ಅಬೂದಾವೂದ್)

4. ಪ್ರಯೋಜನವಿಲ್ಲದ ಮತ್ತು ನಷ್ಟಕಾರಕ ವಿದ್ಯೆಯ ಹಿಂದೆ ಬೀಳುವುದರಿಂದ ತಡೆಯಲಾಗುತ್ತದೆ.

''ಪ್ರಯೋಜನವಿಲ್ಲದ ವಿದ್ಯೆಯಿಂದ ಅಲ್ಲಾಹನ ರಕ್ಷಣೆ ಬೇಡಿರಿ.'' (ಇಬ್ನುಮಾಜಃ)

5. ಅಗತ್ಯಾನುಸಾರ ಉಚಿತ ಶಿಕ್ಷಣ ನೀಡಲಾಗುತ್ತದೆ. ಆರ್ಥಿಕ ಸಾಮರ್ಥ್ಯವಿಲ್ಲದ ಮತ್ತು ನಿರ್ಗತಿಕ ವಿದ್ಯಾರ್ಥಿಗಳ ಎಲ್ಲ ಅಗತ್ಯಗಳನ್ನು ಒದಗಿಸುವ ವ್ಯವಸ್ಥೆ ಮಾಡಲಾಗುತ್ತದೆ. ಈ ಕಾರ್ಯದಲ್ಲಿ ಸಹಕಾರ ನೀಡುವುದನ್ನು ಪ್ರತಿಯೋರ್ವರೂ ಸತ್ಕಾರ್ಯ ಮತ್ತು ಝುಕಾತ್‌ನ (ದಾನದ) ಅತ್ಯುತ್ತಮ ಉಪಾಧಿಯೆಂದು ಭಾವಿಸುತ್ತಾರೆ.

6. ಪ್ರತಿಯೋರ್ವ ವಿದ್ಯಾರ್ಥಿಗೂ ಕಲಿತ ವಿದ್ಯೆಯಂತೆ ನಡೆಯಲು ಮತ್ತು ಇತರರಿಗೂ ವಿದ್ಯೆಯನ್ನು ತಲುಪಿಸಲು ಉಪದೇಶ ಮತ್ತು ತರಬೇತಿಯನ್ನು ನೀಡಲಾಗುತ್ತದೆ.

''ವಿದ್ಯೆ ಎರಡು ತರದ್ದಾಗಿರುತ್ತದೆ. ಒಂದನೆಯದು, ನಾಲಗೆಯ ಮೂಲಕ ಹಾದು ಹೃದಯದಲ್ಲಿ ಮನೆ ಮಾಡುವುದು. ಅದುವೇ ಪ್ರಯೋಜನಕಾರಿ ವಿದ್ಯೆ. ಇನ್ನೊಂದು, ನಾಲಗೆಯಲ್ಲೇ ಇದ್ದು ಬಿಡುವಂತಹದ್ದು. ಅದು ಅಲ್ಲಾಹನ ನ್ಯಾಯಾಲಯದಲ್ಲಿ ಆದಮರ ಸಂತತಿಯ ವಿರುದ್ಧದ ಅತಿ ದೊಡ್ಡ ಪ್ರಕರಣವಾಗಿರುವುದು.'' (ದಾರಿಮಿ)

''ನನ್ನ ಶಿಕ್ಷಣವನ್ನು ಜನರಿಗೆ ತಲುಪಿಸಿರಿ. ಅದು ಒಂದು ಸೂಕ್ತವಾಗಿದ್ದರೂ ಸರಿ.'' (ಬುಖಾರಿ)

''ಒಬ್ಬ ವ್ಯಕ್ತಿಯೊಡನೆ ಯಾವುದಾದರೂ ವಿದ್ಯೆಯ ಬಗ್ಗೆ ಕೇಳಲಾದರೆ ಮತ್ತು ಅವನು ತಿಳಿದಿದ್ದರೂ ಹೇಳದಿದ್ದರೆ (ಅಡಗಿಸಿದರೆ) ಪುನರುತ್ಥಾನ ದಿನದಂದು ಅವನ ಬಾಯಿಗೆ ಬೆಂಕಿಯ ಲಗಾಮನ್ನು ತೊಡಿಸಲಾಗುವುದು.''(ತಿರ್ಮಿದಿ, ಅಬೂದಾವೂದ್ ಮತ್ತಿತರರು)

''ಜನರು ತಮ್ಮ ನೆರೆಕರೆಯವರಿಗೆ ತಪ್ಪದೆ ಶಿಕ್ಷಣ ನೀಡಬೇಕು, ಅವರಿಗೆ ಉಪದೇಶ ನೀಡಬೇಕು, ಒಳಿತನ್ನು ಬೋಧಿಸಬೇಕು, ಕೆಡುಕಿನಿಂದ ತಡೆಯಬೇಕು. ಅದೇ ರೀತಿ ಜನರು ತಮ್ಮ ನೆರೆಕರೆಯವರಿಂದಲೂ ವಿದ್ಯೆ ಗಳಿಸುತ್ತಿರಬೇಕು, ಉಪದೇಶಗಳನ್ನು ಸ್ವೀಕರಿಸಬೇಕು ಮತ್ತು ತಮ್ಮಲ್ಲಿ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕು. ಅನ್ಯಥಾ ನಾನು ಆ ಜನರಿಗೆ ಇಹಲೋಕದಲ್ಲಿಯೇ ಶಿಕ್ಷೆ ನೀಡುವೆನು.'' (ತ್ವಬ್ರಾನಿ)

7. ಅಧ್ಯಾಪಕ ಮತ್ತು ವಿದ್ಯಾರ್ಥಿಗಳೀರ್ವರ ವ್ಯಕ್ತಿತ್ವವನ್ನು ಗೌರವಿಸಲಾಗುತ್ತದೆ ಹಾಗೂ ಈರ್ವರ ಆತ್ಮಗೌರವವನ್ನು ಮಾನ್ಯ ಮಾಡಲಾಗುತ್ತದೆ. ಅಧ್ಯಾಪಕನು ಕೃಪಾಳು, ಮೇಲ್ವಿಚಾರಕ ಮತ್ತು ಆಧ್ಯಾತ್ಮಿಕ ಪಿತನಂತೆ ಇದ್ದರೆ ವಿದ್ಯಾರ್ಥಿಯು ಆಜ್ಞಾನುವರ್ತಿ ಮಗನಂತೆ ಇರುವನು.

''ವಿದ್ಯೆ ಕಲಿಸಿರಿ. ಕಾಠಿಣ್ಯ ತೋರಬೇಡಿ. ವಿದ್ಯೆ ಕಲಿಸುವವರು ಕಾಠಿಣ್ಯ ತೋರುವವರಿಗಿಂತ ಉತ್ತಮರು.'' (ಬೈಹಕೀ)

''ಯಾರಿಂದ ವಿದ್ಯೆ ಕಲಿಯುತ್ತೀರೋ ಅವರನ್ನು ಗೌರವಿಸಿರಿ.'' (ಹದೀಸ್)

ಇಮಾಮ್ ಶಾಫಿಈಯವರು(ರ) ತಮ್ಮ ಅಧ್ಯಾಪಕರ ಮನೆಯ ಕಡೆಗೆ ಕಾಲುಚಾಚಿ ಮಲಗುತ್ತಿರಲಿಲ್ಲ, ಅದರಿಂದ ಗುರುಗಳ ಗೌರವಕ್ಕೆ ಧಕ್ಕೆಯಾಗುತ್ತದೆಂಬ ಆಶಂಕೆಯೇ ಕಾರಣ.

8. ಪರಿಶುದ್ಧ ವಾತಾವರಣದಲ್ಲಿ ವಿದ್ಯೆ ಕಲಿಸಲಾಗುತ್ತದೆ. ಮನೆ, ಮೊಹಲ್ಲ ಪರಿಸರ, ರಾಜ್ಯ ಮತ್ತು ಮದ್ರಸಾ ಎಲ್ಲ ವಾತಾವರಣವನ್ನೂ ಪರಿಶುದ್ಧವಾಗಿರಿಸಲು

ಹಾಗೂ ತನ್ನ ಸಹಕಾರವನ್ನು ನೀಡಲು ಸದಾ ಸಿದ್ಧವಿರುತ್ತದೆ. ಅಂತೆಯೇ ಹಿರಿಯರ ವಿಶೇಷತಃ ಅಧ್ಯಾಪಕರ ಸದ್ವರ್ತನೆ, ಸಹಾನುಭೂತಿ, ಹಿತಚಿಂತನೆ ಮತ್ತು ಸಚ್ಚಾರಿತ್ರ್ಯವು ವಿದ್ಯಾರ್ಥಿಗಳ ಸೂಕ್ತ ತರಬೇತಿ ಹಾಗೂ ಮಾದರಿಯುತ ವ್ಯವಸ್ಥೆಯ ಸ್ಥಾಪನೆಯಲ್ಲಿ ಸಹಕಾರಿಯಾಗಿರುತ್ತದೆ.

9. ವೈಯಕ್ತಿಕ, ಕೌಟುಂಬಿಕ ಮತ್ತು ಸಾಮೂಹಿಕ ಹೊಣೆಗಾರಿಕೆಗಳ ಸರಿಯಾದ ವಿದ್ಯೆಯನ್ನು ಒದಗಿಸಲಾಗುತ್ತದೆ. ಆ ವಿದ್ಯೆಯನ್ನು ಅಲ್ಲಾಹ್ ಮತ್ತು ಪ್ರವಾದಿವರ್ಯರ(ಸ) ಆದೇಶಗಳಂತೆ ಪಾಲಿಸಲು ಹಂತಹಂತವಾಗಿ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುತ್ತದೆ.

10. ಮುಸ್ಲಿಮೇತರರಿಗೆ ಅವರ ಆಚಾರ-ವಿಶ್ವಾಸ ಮತ್ತು ಇಷ್ಟದಂತೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಸವಲತ್ತುಗಳನ್ನು ಒದಗಿಸಲಾಗುತ್ತದೆ. ಅವರ ವಿಶ್ವಾಸ ಅಥವಾ ಧರ್ಮಕ್ಕೆ ವಿರುದ್ಧವಾದ ಯಾವ ವಿಷಯವನ್ನೂ ಅವರಿಗೆ ಬಲವಂತವಾಗಿ ಕಲಿಸಲಾಗುವುದಿಲ್ಲ.

''ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲಾತ್ಕಾರಗಳಿಲ್ಲ.''

(ಪವಿತ್ರ ಕುರ್‌ಆನ್, 2:256)

11. ಧಾರ್ಮಿಕ ಮತ್ತು ನೈತಿಕ ಮೌಲ್ಯಗಳಿಗೆ ಸ್ಥಾಯೀ ಸ್ಥಾನಮಾನ ಹಾಗೂ ಅಸಾಮಾನ್ಯ ಮಹತ್ವವನ್ನು ನೀಡಲಾಗುತ್ತದೆ. ಅವುಗಳ ಬೇಡಿಕೆಗಳನ್ನು ಯಾವ ಬೆಲೆ ತೆತ್ತಾದರೂ ಪೂರೈಸಲಾಗುತ್ತದೆ. ಯಾವ ಸ್ಥಿತಿಯಲ್ಲೂ ಅವುಗಳ ಮೌಲ್ಯಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳಲಾಗುತ್ತದೆ.

''ನನ್ನನ್ನು ಚಾರಿತ್ರ್ಯದ ಪರಿಪೂರ್ಣತೆಗಾಗಿ ಕಳುಹಿಸಲಾಗಿದೆ'' ಎಂದು ಪ್ರವಾದಿ ವರ್ಯರು(ಸ) ಹೇಳಿದ್ದಾರೆ. [ಮುಅತ್ತಾ- ಇಮಾಮ್ ಮಾಲಿಕ್(ರ)] ''ನಾನು ಅಲ್ಲಾಹನಲ್ಲಿ ವಿಶ್ವಾಸವಿರಿಸಿದೆ ಎಂದು ಹೇಳಿರಿ ಮತ್ತು ಅದರಲ್ಲಿಯೇ ಸ್ಥಿರವಾಗಿರಿ.''

''ಭೂಮಿಯ ಇಕ್ಕೆಲಗಳಿಂದಲೂ ಜನರು ನಿಮ್ಮ ಬಳಿಗೆ ಧರ್ಮದ ಜ್ಞಾನವನ್ನು ಕಲಿಯಲು ಬರುವರು. ನೀವು ಅವರಿಗೆ ಒಳಿತನ್ನು ಉಪದೇಶಿಸಿರಿ.'' **(ತಿರ್ಮಿದಿ)**

12. ವಿದ್ಯಾರ್ಥಿಯ ಪ್ರಾಯ, ಅಗತ್ಯಗಳು, ಸ್ವಭಾವ, ವೈಯಕ್ತಿಕ ಪ್ರತಿಭೆ ಮತ್ತು ಮಾನಸಿಕ ಸ್ಥಿತಿಯನ್ನು ಪರಿಗಣಿಸಿಯೇ ಶಿಕ್ಷಣ ನೀಡಲಾಗುತ್ತದೆ. ಶಿಕ್ಷಣ-ತರಬೇತಿಯನ್ನು ಸುಲಭವಾಗಿ ನೀಡಲಾಗುತ್ತದೆ. ಕಠಿಣತೆ ಮತ್ತು ಕ್ಲಿಷ್ಟತೆಯನ್ನು ಇರಿಸಿ ಅವರನ್ನು ಹತಾಶಗೊಳಿಸುವುದಿಲ್ಲ, ಮಾತ್ರವಲ್ಲ, ಶಿಕ್ಷಣವನ್ನು ಅವರ ಮೇಲೆ ಹೊರೆಯಾಗಲೂ ಬಿಡುವುದಿಲ್ಲ. ಒಂದು ಪ್ರಖ್ಯಾತ ಲೋಕೋಕ್ತಿ ಹೀಗಿದೆ,

''ಜನರೊಡನೆ ಅವರ ಬುದ್ಧಿಗೆ ಅನುಸಾರ ಮಾತನಾಡಿರಿ.''

ಪ್ರವಾದಿವರ್ಯರು(ಸ) ಹೇಳಿದ್ದಾರೆ,

''ಸೌಲಭ್ಯವನ್ನೀಯಿರಿ, ಕ್ಲಿಷ್ಟತೆಯಲ್ಲಿ ಬೀಳಿಸದಿರಿ. ಸುವಾರ್ತೆ ನೀಡಿರಿ, ತಿರಸ್ಕಾರ ಮೂಡುವಂತೆ ಮಾಡಬೇಡಿರಿ.''(ಹದೀಸ್)

''ಪ್ರವಾದಿವರ್ಯರು(ಸ) ತಡೆತಡೆದು ಪ್ರವಚನ ನೀಡುತ್ತಿದ್ದಂತೆ ನಾನು ತಡೆ ತಡೆದು ಪ್ರವಚನ ನೀಡುತ್ತೇನೆ. ನಾವು ಬೇಸರಗೊಳ್ಳಬಾರದೆಂದು ಅವರು(ಸ) ಹಾಗೆ ಮಾಡುತ್ತಿದ್ದರು.'' **[ಅಬ್ದುಲ್ಲಾ ಬಿನ್ ಮಸ್ಊದ್(ರ)- ಬುಖಾರಿ, ಮುಸ್ಲಿಮ್]**

ಇಸ್ಲಾಮಿನಲ್ಲಿ ಹತಾಶೆಯೆಂಬುದೇ ಸತ್ಯನಿಷೇಧವಾಗಿದೆ. ಹಾಗಾಗಿ ಸುಧಾರಣೆ ಮತ್ತು ತರಬೇತಿಯಿಂದ ವಿದ್ಯಾರ್ಥಿಗಳೂ ಹತಾಶರಾಗುವುದಿಲ್ಲ; ಅವರ ಅಧ್ಯಾಪಕರು, ಪೋಷಕರು ಅಥವಾ ಇತರ ಹೊಣೆಗಾರರೂ ಹತಾಶರಾಗುವುದಿಲ್ಲ, ಬದಲಾಗಿ ಪ್ರತಿಯೊಬ್ಬರೂ ಹತಾಶೆಯಿಂದ ಸ್ವಯಂ ರಕ್ಷಿಸಲ್ಪಡುತ್ತಾರೆ ಮತ್ತು ವಿದ್ಯಾರ್ಥಿಗಳನ್ನು ರಕ್ಷಿಸುತ್ತಾರೆ.

''ಅಲ್ಲಾಹನ ಅನುಗ್ರಹದಿಂದ ನಿರಾಶರಾಗಬೇಡಿರಿ. ಅವನ ಅನುಗ್ರಹದಿಂದ ಸತ್ಯನಿಷೇಧಿಗಳು ಮಾತ್ರ ನಿರಾಶರಾಗುತ್ತಾರೆ.'' (ಪವಿತ್ರ ಕುರ್ಆನ್, 12:87)

ಹೃದಯಗಳಿಗೆ ಕೆಲವು ಆಶೆ-ಆಕಾಂಕ್ಷೆಗಳಿರುತ್ತವೆ. ಕೆಲವೊಮ್ಮೆ ಅವು ಮಾತುಗಳನ್ನಾಲಿಸುತ್ತವೆ, ಇನ್ನು ಕೆಲವೊಮ್ಮೆ ಆಲಿಸಲು ಸಿದ್ಧವಿರುವುದಿಲ್ಲ, ಆದ್ದರಿಂದ ಜನರ ಮನಸ್ಸುಗಳಲ್ಲಿರುವ ಆಕಾಂಕ್ಷೆಗಳ ಮೂಲಕ ಹಾದು ಹೋಗಿ, ಅವರ ಮನಸ್ಸುಗಳು ಆಲಿಸಲು ಸಿದ್ಧವಿರುವಾಗ ಉಪದೇಶಿಸಿರಿ. ಏಕೆಂದರೆ ಮನಸ್ಸಿಗೆ ಬಲವಂತವಾಗಿ ಉಪದೇಶಿಸುವಾಗ ಅದು ಕಿವುಡಾಗಿ ಬಿಡುತ್ತದೆ ಮತ್ತು ಉಪದೇಶವನ್ನು ಆಲಿಸಲು ಸಿದ್ಧವಾಗುವುದಿಲ್ಲ. **[ಅಲೀ(ರ)- ಕಿತಾಬುಲ್ ಖರಾಜ್, ಅಬೂ ಯೂಸುಫ್]**

13. ವಿದ್ಯಾರ್ಥಿಯ ವ್ಯಕ್ತಿತ್ವದ ಎಲ್ಲ ಮಗ್ಗುಲುಗಳನ್ನೂ ಸಹಾನುಭೂತಿಯೊಂದಿಗೆ ಬೆಳೆಸುವ ಬಗ್ಗೆ ಚಿಂತಿಸಲಾಗುತ್ತದೆ. ಅವರ ಸ್ವಾಭಾವಿಕ ಪ್ರತಿಭೆಗಳಿಗೆ ಸಾಣೆ ಹಿಡಿಯಲು ಪ್ರಯತ್ನಿಸಲಾಗುತ್ತದೆ. ಅವುಗಳನ್ನು ಕಾರ್ಯರೂಪಕ್ಕಿಳಿಸಲು ಅವಕಾಶ ನೀಡಲಾಗುತ್ತದೆ. ಏಕೆಂದರೆ ಮಕ್ಕಳನ್ನು ಅಲ್ಲಾಹನ ಅಮಾನತ್ ಎಂದು ಭಾವಿಸಲಾಗುತ್ತದೆ. ಆದ್ದರಿಂದ ಅವರನ್ನು ತುಳಿಯಲಾಗುವುದಿಲ್ಲ; ಮಾತ್ರವಲ್ಲ, ಕಡೆಗಣಿಸಲಾಗುವುದೂ ಇಲ್ಲ, ಬದಲಾಗಿ ಅವರನ್ನು ಸರಿಯಾದ ದಿಕ್ಕಿನಲ್ಲಿ ನಡೆಸುವ ವ್ಯವಸ್ಥೆಯನ್ನು ಮಾಡಲಾಗುತ್ತದೆ.

14. ವಿದ್ಯಾರ್ಥಿಗಳಿಗೆ ಸರಳ ಜೀವನ, ಪರಿಶ್ರಮ, ತನ್ನ ಕೆಲಸವನ್ನು ಸ್ವತಃ ಮಾಡುವ ಮತ್ತು ಮಾನವರ ಸೇವೆ ಮಾಡುವ ಅಭ್ಯಾಸ ಮಾಡಿಸಲಾಗುತ್ತದೆ. ಏಕೆಂದರೆ ಅವರು ತಮ್ಮ ಕೆಲಸ ಸ್ವಯಂ ಮಾಡುವುದರಲ್ಲಿ ಕೀಳೆಂದು ಭಾವಿಸಬಾರದು. ಪ್ರವಾದಿವರ್ಯರು(ಸ) ತಮ್ಮ ಕೆಲಸವನ್ನು ಸ್ವತಃ ಮಾಡುತ್ತಿದ್ದರು. ಸತ್ಯಸಂಧ ಖಲೀಫರು ಮತ್ತು ಧಾರ್ಮಿಕ ವಿದ್ವಾಂಸರುಗಳೂ ಅದೇ ಅಭ್ಯಾಸವನ್ನು ಹೊಂದಿದ್ದರು.

15. ಅಲ್ಲಾಹನ ಸಂಪ್ರೀತಿ ಗಳಿಸುವುದು ಮತ್ತು ಅಲ್ಲಾಹನ ಸೃಷ್ಟಿಗಳಿಗೆ ಪ್ರಯೋಜನ ಒದಗಿಸುವುದು ಮಾತ್ರ ವಿದ್ಯಾರ್ಜನೆಯ ಉದ್ದೇಶವಾಗಿದೆಯೇ ಹೊರತು, ಇಂದಿನಂತೆ ಡಿಗ್ರಿಗಳ ದರ್ಪ, ಸ್ಥಾನಮಾನ, ವೈಭವ, ಸಂಪತ್ತು, ಖ್ಯಾತಿ ಮತ್ತು ವಿದ್ಯಾರ್ಹತೆಯ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವುದೋ ಅಥವಾ ಲೌಕಿಕ ಲಾಭವೋ ಉದ್ದೇಶವಾಗಿಲ್ಲ.

''ಒಬ್ಬನು ಅಲ್ಲಾಹನ ಸಂಪ್ರೀತಿ ಗಳಿಸುವಂತಹ ವಿದ್ಯೆ ಗಳಿಸಿದ. ಆದರೆ ಅವನ ವಿದ್ಯಾರ್ಜನೆಯ ಉದ್ದೇಶ ಲೌಕಿಕ ಲಾಭ ಗಳಿಸುವುದೆಂದಾಗಿದ್ದರೆ, ಪುನರುತ್ಥಾನದಂದು ಅವನಿಗೆ ಸ್ವರ್ಗದ ಸುಗಂಧವೂ ಲಭಿಸಲಾರದು.''

(ಅಬೂದಾವೂದ್, ಇಬ್ನು ಮಾಜಃ, ಅಹ್ಮದ್)

''ಒಬ್ಬನು ವಿದ್ವಾಂಸರೊಡನೆ ಸ್ಪರ್ಧಿಸುವ ತಿಳಿಗೇಡಿಗಳೊಡನೆ ಜಗಳಾಡುವ ಅಥವಾ ಜನರನ್ನು ತನ್ನೆಡೆಗೆ ಸೆಳೆಯುವ ಉದ್ದೇಶದಿಂದ ವಿದ್ಯಾರ್ಜನೆಗೈದರೆ, ಅಲ್ಲಾಹ್ ಅವನನ್ನು ನರಕಾಗ್ನಿಗೆ ತಳ್ಳುವನು.'' **(ತಿರ್ಮಿದಿ, ಇಬ್ನುಮಾಜಃ)**

ಒಮ್ಮೆ ಉಮರ್(ರ) ಬಿನ್ ಖತ್ತಾಬ್‌ರವರು ಕಅಬ್‌ರೊಡನೆ(ರ) ವಿಚಾರಿಸಿದರು, ''ನಿಮ್ಮ ದೃಷ್ಟಿಯಲ್ಲಿ ಜ್ಞಾನಿ ಯಾರು?'' ಕಅಬ್ ಹೇಳಿದರು, ''ತನ್ನ ಜ್ಞಾನದಂತೆ ಕರ್ಮವೆಸಗುವವರು.'' ಪುನಃ ಉಮರ್(ರ) ಕೇಳಿದರು, ''ಜ್ಞಾನಿಗಳ ಹೃದಯದಿಂದ ಜ್ಞಾನವನ್ನು ಹೊರಗೆ ಹಾಕುವಂತಹ ವಸ್ತು ಯಾವುದು?'' ಕಅಬ್ ಹೇಳಿದರು, ''ಅತ್ಯಾಸೆ.''

(ದಾರಿಮೀ)

16. ಹಿರಿಯರು, ಕಿರಿಯರು, ಶಿಕ್ಷಿತರು, ಅಶಿಕ್ಷಿತರು ಎಲ್ಲರಲ್ಲೂ ವಿದ್ಯಾರ್ಜನೆಯ ಆಸೆಯನ್ನು ಬಿತ್ತಲಾಗುತ್ತದೆ. ವ್ಯಕ್ತಿಯು ಮಡಿಲಿನಿಂದ ಗೋರಿಯ ತನಕ ವಿದ್ಯೆ ಗಳಿಸಬೇಕೆಂಬ ಉದ್ದೇಶದಿಂದ ಗ್ರಂಥಾಲಯ, ವಾಚನಾಲಯ ಮತ್ತು ಚರ್ಚಾಗೋಷ್ಠಿ ಇತ್ಯಾದಿಗಳ ಮೂಲಕ ಅಂತಹ ಸವಲತ್ತುಗಳನ್ನು ಒದಗಿಸಿಕೊಡಲಾಗುತ್ತದೆ.

''ವಿಶ್ವಾಸಿಯ ಹೊಟ್ಟೆಯು ಒಳ್ಳೆಯ ವಿಷಯಗಳಿಂದ ತುಂಬಿ ಹೋಗುವುದಿಲ್ಲ, ಆತ ಆಲಿಸುತ್ತಲೇ ಇರುತ್ತಾನೆ... ಸ್ವರ್ಗಕ್ಕೆ ಹೋಗುವ ವರೆಗೂ.'' **(ತಿರ್ಮಿದಿ)**

ಇವು ಇಸ್ಲಾಮೀ ಶಿಕ್ಷಣ ವ್ಯವಸ್ಥೆಯ ವಿಶೇಷತೆಗಳಾಗಿವೆ. ಮಾನವನ ಸಕಲ ರಂಗಗಳು ಮತ್ತು ಅವನ ಸರ್ವ ನೈಸರ್ಗಿಕ ಶಕ್ತಿ-ಸಾಮರ್ಥ್ಯ ಹಾಗೂ ಅವನ ಎಲ್ಲ ಅಗತ್ಯಗಳಿಗೂ ಇಸ್ಲಾಮೀ ಶಿಕ್ಷಣ ವ್ಯವಸ್ಥೆಯಲ್ಲಿ ಮಾತ್ರವೇ ಸೌಲಭ್ಯವನ್ನೀಯಲಾಗಿದೆಯೆಂದು ಇದರಿಂದ ತಿಳಿದು ಬರುತ್ತದೆ. ಎಲ್ಲ ರೀತಿಯಲ್ಲಿ ಸಂಪೂರ್ಣ, ಪ್ರಯೋಜನಕಾರಿ ಮತ್ತು ಅಲ್ಲಾಹನ ದೃಷ್ಟಿಯಲ್ಲಿ ಅಧಿಕೃತವಾದಂತಹ ವ್ಯವಸ್ಥೆ ಇದೊಂದೇ ಆಗಿದೆ; ಉಳಿದಂತೆ ಯಾವೆಲ್ಲ ಶಿಕ್ಷಣ ವ್ಯವಸ್ಥೆಗಳಿವೆಯೋ ಅವು ಮಾನವ ನಿರ್ಮಿತ, ಏಕಮುಖಿ, ಅಪೂರ್ಣ ಮತ್ತು ಒಟ್ಟಾರೆಯಾಗಿ ಮಾನವತೆಗೆ ನಷ್ಟಕಾರಕವಾಗಿವೆ; ಮಾನವತೆಗೆ ಪ್ರಯೋಜನಕಾರಿಯಾಗಿರುವ ಶಿಕ್ಷಣ ವ್ಯವಸ್ಥೆ ಇದೊಂದೇ ಆಗಿದೆ. ಇದನ್ನು ಸ್ವೀಕರಿಸುವ ಮೂಲಕ ಪ್ರಸಕ್ತ ಶೈಕ್ಷಣಿಕ

ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಮಾತ್ರವಲ್ಲ ಮುಂದಿನ ಪೀಳಿಗೆಯ ಭವಿಷ್ಯವನ್ನೂ ಉಜ್ವಲಗೊಳಿಸಲು ಸಾಧ್ಯವಿದೆ. ಅನ್ಯಥಾ ಮಾನವತೆಯ ಅಂತಿಮ ಪರಿಣಾಮವು ವೇದನಾಜನಕವಾಗುವುದು. ಈಗಿನ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯು ಇಂದಿನ ಪೀಳಿಗೆಯಲ್ಲಿ ಹರಡುತ್ತಿರುವ ಕೇಡುಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ಅಲ್ಲಾಹನು ನಮ್ಮನ್ನು ಇಸ್ಲಾಮಿ ವ್ಯವಸ್ಥೆಯನ್ನು ಅನುಸರಿಸುವಂತೆ ಅನುಗ್ರಸಲಿ ಮತ್ತು ಯೋಚಿಸುವಾಗಲೇ ಮನಸ್ಸನ್ನು ತಲ್ಲಣಗೊಳಿಸುವಂತಹ ಆ ಕೆಟ್ಟ ಪರಿಣಾಮದಿಂದ ನಮ್ಮನ್ನು ರಕ್ಷಿಸಲಿ.

♦ ♦ ♦

ಅಧ್ಯಾಯ - 6

ಶಿಕ್ಷಣ-ತರಬೇತಿ ಕಲೆ

ಪ್ರವಾದಿಯವರ(ಸ) ಜೀವನ ಮಾದರಿ

"ನಾವು ನಿಮ್ಮೊಳಗಿಂದಲೇ ಓರ್ವ ಸಂದೇಶವಾಹಕನನ್ನು ಕಳುಹಿಸಿದೆವು. ಅವರು ನಿಮಗೆ ನಮ್ಮ ವಚನಗಳನ್ನು ಓದಿ ಹೇಳುತ್ತಾರೆ, ನಿಮ್ಮನ್ನು ಸಂಸ್ಕರಿಸುತ್ತಾರೆ. ನಿಮಗೆ ಗ್ರಂಥ ಮತ್ತು ಯುಕ್ತಿಯ ಶಿಕ್ಷಣ ನೀಡುತ್ತಾರೆ ಮತ್ತು ನೀವು ಇಷ್ಟರ ತನಕ ತಿಳಿಯದಿದ್ದ ಸಂಗತಿಗಳನ್ನು ಬೋಧಿಸುತ್ತಾರೆ." (ಪವಿತ್ರ ಕುರ್‌ಆನ್: 2: 151)

"ನನ್ನನ್ನು ಉಪದೇಶಕನಾಗಿ ಕಳುಹಿಸಲಾಗಿದೆ" ಎಂದು ಪ್ರವಾದಿವರ್ಯರು(ಸ) ಹೇಳಿದ್ದಾರೆ. (ಮಿಶ್ಕಾತ್)

"ನನ್ನನ್ನು ನೈತಿಕತೆಯ ಪರಿಪೂರ್ಣತೆಗಾಗಿ ನಿಯೋಜಿಸಲಾಗಿದೆ."

(ಮುವತ್ತಾ ಇಮಾಮ್ ಮಾಲಿಕ್)

"ವಿದ್ವಾಂಸರು ಪ್ರವಾದಿಗಳ ವಾರಸುದಾರರು ಮತ್ತು ಪ್ರವಾದಿಗಳ ವಾರಸು ದಿರ್ಹಮ್-ದೀನಾರ್‌ಗಳಲ್ಲ, ಬದಲಾಗಿ ಅವರ ವಾರಸು ವಿದ್ಯೆಯಾಗಿದೆ. ವಿದ್ವಾಂಸರನ್ನು ಅದರ ವಾರಸುದಾರರನ್ನಾಗಿ ಮಾಡಲಾಗಿದೆ." (ತಿರ್ಮಿದಿ, ಅಬೂದಾವೂದ್)

ಸರಿಯಾದ ಶಿಕ್ಷಣ ಮತ್ತು ತರಬೇತಿಯು ಪ್ರವಾದಿತ್ವದ ಒಂದು ಪ್ರಮುಖ ಅಂಗವಾಗಿದೆ ಹಾಗೂ ಜೀವನದ ಇತರ ವಿಷಯಗಳಂತೆಯೇ ಈ ವಿಷಯದಲ್ಲಿಯೂ ನಮಗೆಲ್ಲರಿಗೂ ಪ್ರವಾದಿಯವರ(ಸ) ಚರ್ಯೆಯೇ ಮಾದರಿಯಾಗಿದೆ ಎಂಬುದು ಈ ಮೇಲಿನ ಕುರ್‌ಆನ್ ವಚನ ಮತ್ತು ಪ್ರವಾದಿ ವಚನಗಳಿಂದ ನಮಗೆ ತಿಳಿದು ಬರುತ್ತದೆ. ಬನ್ನಿ, ಈ ನಿಟ್ಟಿನಲ್ಲಿ ನಮಗೆ ಯಾವ ಮಾರ್ಗದರ್ಶನ ಸಿಗುತ್ತದೆ ಎಂಬುದನ್ನು ಅವಲೋಕಿಸೋಣ. ಪ್ರವಾದಿವರ್ಯರನ್ನು(ಸ) ಅನುಕರಿಸುವ ಮೂಲಕ ನಮಗೆ ಶಿಕ್ಷಣ-ತರಬೇತಿಯನ್ನು ಹೆಚ್ಚು ಪ್ರಯೋಜನಕಾರಿ ಮತ್ತು ಪರಿಣಾಮಕಾರಿಯಾಗಿ ಮಾರ್ಪಡಿಸಲು ಸಾಧ್ಯವಿದೆ.

ಅಧ್ಯಾಪಕನ ವ್ಯಕ್ತಿತ್ವ ಮತ್ತು ಗುಣಗಳು

ವಿದ್ಯಾರ್ಥಿಗಳ ಶಿಕ್ಷಣ ಮತ್ತು ತರಬೇತಿಯಲ್ಲಿ ಅಧ್ಯಾಪಕನ ವ್ಯಕ್ತಿತ್ವ ಮತ್ತು ವೈಯಕ್ತಿಕ ಗುಣವಿಶೇಷಗಳ ಪಾತ್ರವು ಬಹಳ ಮಹತ್ವದ್ದಾಗಿರುತ್ತದೆ. ವಿದ್ಯಾರ್ಥಿಗಳು ತಿಳಿದೋ ತಿಳಿಯದೆಯೋ ಅವುಗಳಿಂದ ನಿರಂತರ ಪ್ರಭಾವಿತರಾಗುತ್ತಲೇ ಇರುತ್ತಾರೆ. ಈ ಪ್ರಭಾವವು ಅವರಲ್ಲಿ ಜೀವನ ಪರ್ಯಂತ ಕಾಣಬಹುದಾಗಿದೆ.

ಪ್ರವಾದಿವರ್ಯರ(ಸ) ವ್ಯಕ್ತಿತ್ವದ (ಈ ಕೆಳಗೆ ನೀಡಲಾಗಿರುವ) ಕೆಲವು ಗುಣವಿಶೇಷಗಳನ್ನು ವಿಶೇಷವಾಗಿ ಪರಿಗಣಿಸಬೇಕು. ಆ ಮೂಲಕ ಪ್ರತಿಯೋರ್ವ ಅಧ್ಯಾಪಕನೂ ಅವುಗಳ ಬೆಳಕಿನಲ್ಲಿ ತನ್ನ ವ್ಯಕ್ತಿತ್ವವನ್ನು ರೂಪಿಸಬೇಕು ಹಾಗೂ ತನ್ನ ಆ ಅನುಸರಣಾರ್ಹ ಮಾದರಿಯನ್ನು ವಿದ್ಯಾರ್ಥಿಗಳ ಮುಂದಿಡಬೇಕು.

1. ಪ್ರವಾದಿವರ್ಯರ(ಸ) ವ್ಯಕ್ತಿತ್ವವು ಆಕರ್ಷಣೀಯ, ಆದರಣೀಯ ಮತ್ತು ಪ್ರಭಾವಶಾಲಿಯಾಗಿತ್ತು. ಕಂಡವನು ಅದರೆಡೆಗೆ ಆಕರ್ಷಿತನಾಗಿ ಬಿಡುತ್ತಿದ್ದ, ತನ್ನ ಜೀವನವನ್ನೇ ಅರ್ಪಿಸಲು ಮತ್ತು ಪ್ರವಾದಿವರ್ಯರಿಗಾಗಿ(ಸ) ತನ್ನೆಲ್ಲವನ್ನೂ ತ್ಯಾಗ ಮಾಡಲು ಸಿದ್ಧನಾಗುತ್ತಿದ್ದ. ಅಧ್ಯಾಪಕನೂ ತನ್ನಲ್ಲಿ ಅಂತಹುದೇ ಗುಣ ವಿಶೇಷಗಳನ್ನು ಬೆಳೆಸಿಕೊಳ್ಳಬೇಕು. ಆ ಮೂಲಕ ವಿದ್ಯಾರ್ಥಿಗಳು ಅಧ್ಯಾಪಕನಿಂದ ಹೆದರಿ ದೂರ ಓಡುವ ಬದಲು, ಹತ್ತಿರವಾಗಬೇಕು; ಗಮನ ಮತ್ತು ಆಸಕ್ತಿಯೊಂದಿಗೆ ಅಧ್ಯಾಪಕನ ಮಾತು ಆಲಿಸುವಂತಾಗಬೇಕು ಹಾಗೂ ಅಧ್ಯಾಪಕನ ಪ್ರಭಾವವನ್ನು ಸ್ವೀಕರಿಸಿಕೊಳ್ಳಬೇಕು. ಈ ಮೇಲೆ ತಿಳಿಸಿರುವ ಗುಣ ವಿಶೇಷದ ಹೊರತು ಅಧ್ಯಾಪಕನಿಗೆ ತನ್ನ ಕರ್ತವ್ಯವನ್ನು ಪಾಲಿಸಲು ಸಾಧ್ಯವಿಲ್ಲ.

2. ಜೀವನದ ಎಲ್ಲ ಸಣ್ಣ-ದೊಡ್ಡ ವ್ಯವಹಾರಗಳಲ್ಲಿ ಪ್ರವಾದಿವರ್ಯರ(ಸ) ಮಾದರಿ ಅನುಸರಣಾರ್ಹವಾಗಿತ್ತು. ಅವರ ಇಡೀ ಜೀವನ ಒಂದು ತೆರೆದ ಗ್ರಂಥದಂತಿತ್ತು. ಅಂತರಂಗ ಮತ್ತು ಬಹಿರಂಗ ಜೀವನ ಏಕಪ್ರಕಾರವಿತ್ತು. ಅವರು ನೀಡುವ ಶಿಕ್ಷಣವನ್ನು ಸ್ವಯಂ ತಮ್ಮ ಜೀವನದಲ್ಲಿ ಅಳವಡಿಸಿ ತೋರಿಸಿದ್ದರು. ನಾಲಗೆಯಿಂದ ಉಚ್ಚರಿಸಿದ್ದನ್ನು ಕೃತಿಗಿಳಿಸಿ ತೋರಿಸಿದ್ದರು.

ವಿದ್ಯಾರ್ಥಿಗಳೂ ತಮ್ಮ ಅಧ್ಯಾಪಕನ ಮಾತುಗಳಿಗಿಂತ ಹೆಚ್ಚಾಗಿ ಅವನ ಜೀವನ ಮಾದರಿಯನ್ನು ಅನುಸರಿಸುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳಲ್ಲಿ ಅನುಸರಣೆಗೆ ಉತ್ತಮ ಮಾದರಿ ತೋರಿಸಲು ತನ್ನ ಚಾರಿತ್ರ್ಯದ ಎಲ್ಲ ಮಗ್ಗುಲುಗಳ ಮೇಲೂ ಗಮನ ಕೇಂದ್ರೀಕರಿಸಬೇಕು. ಅನ್ಯಥಾ ತನ್ನ ಸ್ವಂತ ಕೊರತೆಗಳ ಆಪತ್ತು ಅಂತೂ ಇದ್ದದ್ದೇ; ಜತೆಗೆ ಕೆಟ್ಟ ಚಾರಿತ್ರ್ಯದಿಂದ ವಿದ್ಯಾರ್ಥಿಗಳ ಮೇಲೆ ಬೀರಿದ ಪ್ರಭಾವದ ಆಪತ್ತು ಕೂಡ ಅಧ್ಯಾಪಕನ ಮೇಲಿರುವುದು.

3. ಪ್ರವಾದಿವರ್ಯರ(ಸ) ವ್ಯಕ್ತಿತ್ವವು ಜ್ಞಾನ-ಯುಕ್ತಿಯ ಆಗರವಾಗಿತ್ತು. ಅಧ್ಯಾಪಕನೂ ಯುಕ್ತಿವಂತ ಮತ್ತು ಜ್ಞಾನವಂತನಾಗಬೇಕಾದುದು ಅಗತ್ಯ. ಏಕೆಂದರೆ ಸರಿಯಾದ ಮತ್ತು ಪಕ್ವವಾದ (ಸ್ಪಷ್ಟವಾದ) ಜ್ಞಾನ ಇಲ್ಲದೆ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಲು ಸಾಧ್ಯವಿಲ್ಲ. ಅಂತೆಯೇ ಯುಕ್ತಿಯ ಹೊರತು ಅವರಿಗೆ ಸೂಕ್ತ ತರಬೇತಿ ನೀಡಲೂ ಆಗದು. ತರಬೇತಿಯೆಂಬುದು ಅಪಾರ ಯುಕ್ತಿವಂತಿಕೆಯನ್ನು ಅಪೇಕ್ಷಿಸುತ್ತದೆ. ಅಧ್ಯಾಪಕನು ತನ್ನ ಜ್ಞಾನದಲ್ಲಿ ಹೆಚ್ಚಳ, ಪಕ್ವತೆ ಮತ್ತು ತನ್ನ ತಿಳುವಳಿಕೆಯಲ್ಲಿ ಭರವಸೆಯನ್ನು ಉಂಟು ಮಾಡಲು ನಿರಂತರ ಶ್ರಮಿಸಬೇಕಾದ ಅಗತ್ಯವಿದೆ. ವಿದ್ಯೆಗೆ ಸಂಬಂಧಿಸಿ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರನ್ನೇ ಮಾದರಿಯನ್ನಾಗಿ ಗ್ರಹಿಸುತ್ತಾರೆ. ಒಂದು ವೇಳೆ ಅಧ್ಯಾಪಕನಿಗೆ ಸ್ವಯಂ ತನ್ನ ವಿದ್ಯೆ/ಜ್ಞಾನದ ಮೇಲೆ ಭರವಸೆ/ನಂಬಿಕೆ ಇಲ್ಲದಿದ್ದರೆ, ವಿದ್ಯಾರ್ಥಿಗಳ ವಿಶ್ವಾಸವೂ ಡೋಲಾಯಮಾನವಾಗುತ್ತದೆ. ಇನ್ನು ಯಾವುದಾದರೂ ವಿಷಯದ ಕುರಿತು ಅಧ್ಯಾಪಕನಿಗೆ ತಿಳಿದಿಲ್ಲದಿದ್ದರೆ ನಯವಾಗಿ ತನಗೆ ತಿಳಿದಿಲ್ಲವೆಂದು ಒಪ್ಪಿಕೊಳ್ಳಬೇಕು. ಅದು ಬಿಟ್ಟು ತಪ್ಪು ತಪ್ಪೇ ಮಾಹಿತಿ ನೀಡಬಾರದು. ಬದಲಾಗಿ ಆ ಕುರಿತು ಮಾಹಿತಿ ಕಲೆ ಹಾಕಿ ನಂತರ ಅದನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಇದರಿಂದ ವಿದ್ಯಾರ್ಥಿಗಳ ವಿಶ್ವಾಸ/ ಭರವಸೆಯೂ ಯಥಾಸ್ಥಿತಿಯಲ್ಲಿರುವುದು, ಅಧ್ಯಾಪಕನೂ ಸುಳ್ಳು ಹೇಳುವ ಪಾಪದಿಂದ ರಕ್ಷಿಸಲ್ಪಡುವನು. ಈ ಕುರಿತು ಪ್ರವಾದಿವರ್ಯರು(ಸ) ಹೀಗೆಂದಿರುವರು, ''ಯಾರಾದರೂ ತನಗೆ ತಿಳಿದಿಲ್ಲದ ವಿಷಯದಲ್ಲಿ ಉಪದೇಶ ನೀಡಿದರೆ ಅದರ ಆಪತ್ತು ಅವನ ಮೇಲೆಯೇ ಇರುವುದು.''

ಪ್ರವಾದಿವರ್ಯರು(ಸ) ಸ್ವತಃ ಹಲವು ವಿಷಯಗಳ ಕುರಿತು ತಮಗೆ ತಿಳಿದಿಲ್ಲದ್ದನ್ನು ಒಪ್ಪಿಕೊಳ್ಳುತ್ತಿದ್ದರು ಮತ್ತು ಆ ಕುರಿತು ದಿವ್ಯವಾಣಿ (ವಹೀ) ಬಂದಾಗ ತಿಳಿಸುತ್ತಿದ್ದರು.

4. ಕ್ಷಮಾಗುಣ ಮತ್ತು ಸಹನಶೀಲತೆಯಲ್ಲಿ ಪ್ರವಾದಿವರ್ಯರಿಗೆ(ಸ) ಯಾರೂ ಸಾಟಿಯಿಲ್ಲ. ಅಧ್ಯಾಪಕನಿಗೂ ಹಲವೊಮ್ಮೆ ತುಂಟ ಮಕ್ಕಳು ಎದುರಾಗುವರು. ಅಂತಹವರಿಂದ ಸದಾ ತಪ್ಪು, ಪ್ರಮಾದ ಮತ್ತು ಅಸ್ವಾಭಾವಿಕವಾದಂತಹ ಕೃತ್ಯಗಳೂ ನಡೆಯಬಹುದು. ಇಂತಹ ಸಂದರ್ಭದಲ್ಲಿ ಕ್ಷಮೆ, ಸಹನೆಯ ಗುಣ ಇರುವ ಅಧ್ಯಾಪಕನೇ ಯಶಸ್ವಿಯೆನಿಸಬಲ್ಲನು. ಸಿಡಿಮಿಡಿಗೊಳ್ಳುವ ಮತ್ತು ಬೇಗನೇ ಕೋಪಗೊಳ್ಳುವವನು ಎಂದೂ ಉತ್ತಮ ಅಧ್ಯಾಪಕನಾಗಲಾರ.

5. ಪ್ರವಾದಿವರ್ಯರ(ಸ) ಸಜ್ಜನಿಕೆ ಮತ್ತು ಸೌಜನ್ಯ ಹೇಗಿರುತ್ತಿತ್ತೆಂದರೆ, ಅವರು ತಮ್ಮವರು-ಪರರು, ಮಿತ್ರರು-ಶತ್ರುಗಳು ಮಾತ್ರವಲ್ಲ, ತಮಗೆ ಇಷ್ಟವಿಲ್ಲದವರೊಡನೆಯೂ ಸೌಜನ್ಯಪೂರ್ಣವಾಗಿ ವ್ಯವಹರಿಸುತ್ತಿದ್ದರು. ಇತರರ ಮನಸ್ಸಮಾಧಾನದ ಬಗ್ಗೆ ಅವರು ಸದಾ ಜಾಗ್ರತೆ ವಹಿಸುತ್ತಿದ್ದರು. ತಮ್ಮ ಮನದಾಳದಲ್ಲಿ ಎಷ್ಟೇ ದುಃಖ-ದುಮ್ಮಾನ ಮಡುಗಟ್ಟಿದ್ದರೂ ಜನರೊಡನೆ ಮುಗುಳ್ನಗುತ್ತ ವ್ಯವಹರಿಸುತ್ತಿದ್ದರು. ಸದಾ ಪ್ರಸನ್ನವದನರಾಗಿರುತ್ತಿದ್ದರು. ಅದೇ

ರೀತಿ ಅಧ್ಯಾಪಕನೂ ಸಜ್ಜನಿಕೆ, ಸೌಜನ್ಯವನ್ನು ಮೈಗೂಡಿಸಿಕೊಳ್ಳಬೇಕು. ಸದಾ ಮುಗುಳ್ನಗುತ್ತಿರಬೇಕು. ಅಧ್ಯಾಪಕನಿಗೆ ವಿದ್ಯಾರ್ಥಿಗಳನ್ನು, ಅವರ ಪೋಷಕರನ್ನು, ಜನಸಾಮಾನ್ಯರನ್ನು, ಪರ-ವಿರೋಧಿಗಳನ್ನು, ಒಟ್ಟಿನಲ್ಲಿ ಎಲ್ಲ ತರದ ಜನರೊಡನೆ ವ್ಯವಹರಿಸಬೇಕಾಗಿ ಬರುತ್ತದೆ. ಅವರೆಲ್ಲರ ಸಹಕಾರವೂ ಅಧ್ಯಾಪಕನಿಗೆ ಅಗತ್ಯವಿರುತ್ತದೆ. ಹಾಗಾಗಿ ಈ ಗುಣ ವಿಶೇಷಗಳ ಹೊರತು ಅವನು ತನ್ನ ಕರ್ತವ್ಯವನ್ನು ಪೂರೈಸಲಾರ.

6. ವಸ್ತ್ರದಲ್ಲಿಸರಳತೆ, ವಿನಮ್ರತೆ ಮತ್ತು ನಿಷ್ಕಾಪಟ್ಯದೊಂದಿಗೇ ಪ್ರವಾದಿವರ್ಯರು(ಸ) ನೈರ್ಮಲ್ಯವನ್ನು ಸಾದ್ಯಂತ ಪಾಲಿಸುತ್ತಿದ್ದರು. ಅದೇ ರೀತಿ ಅಧ್ಯಾಪಕನೂ ಫ್ಯಾಶನ್ ಮತ್ತು ನಟನೆಯಿಂದ ದೂರವಿರಬೇಕು. ಸರಳತೆ ಮತ್ತು ನೈರ್ಮಲ್ಯದಲ್ಲಿಯೇ ವಿದ್ಯೆಯ ಘನತೆ ಅಡಗಿರುವುದು.

7. ಪ್ರವಾದಿವರ್ಯರ(ಸ) ವ್ಯಕ್ತಿತ್ವದಲ್ಲಿ ಸಂತುಲಿತತೆ ಮತ್ತು ವರ್ತನೆಯಲ್ಲಿ ಏಕರೂಪತೆಯಿತ್ತು. ಅವರನ್ನು ಯಾರೇ ಭೇಟಿಯಾದರೂ ಅವರ ಇಷ್ಟಾನಿಷ್ಟಗಳೇನು, ನಮ್ಮ ಯಾವ ಮಾತಿಗೆ ಅವರಿಂದ ಯಾವ ಪ್ರತಿಕ್ರಿಯೆ ಬರಬಹುದು ಎಂಬುದನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಿತ್ತು. ಅಧ್ಯಾಪಕನಲ್ಲಿಯೂ ಈ ಗುಣ ಇರಬೇಕಾದುದು ಅಗತ್ಯ. ಆ ಮೂಲಕ ವಿದ್ಯಾರ್ಥಿಗಳು ಅಧ್ಯಾಪಕನ ಭಾವನೆಗಳನ್ನು ಗೌರವಿಸಬಲ್ಲರು. ಅನ್ಯಥಾ ಬಯಸಿಯೂ ವಿಚಿತ್ರವಾದ ಸಂಘರ್ಷದಲ್ಲಿ ತೊಳಲಾಡುವರು. ಅವರಿಗೆ ಅಧ್ಯಾಪಕನು ಯಾವುದರಿಂದ ಸಂತುಷ್ಟನಾಗುವನು ಮತ್ತು ಯಾವುದರಿಂದ ಕೋಪಗೊಳ್ಳುವನು ಎಂಬುದು ತಿಳಿಯಲಾರದು.

8. ಪ್ರವಾದಿಯವರ(ಸ) ನೇರ - ಸತ್ಯ ಶಿಕ್ಷಣಕ್ಕೆ ತಿಳಿಗೇಡಿಗಳು ಕಲ್ಲು ಮುಳ್ಳುಗಳಿಂದ ಪ್ರತಿಕ್ರಿಯಿಸಿದರು. ಆದರೆ ಪ್ರವಾದಿವರ್ಯರು(ಸ) ಕೊನೆಯ ತನಕವೂ ಅವರ ಸುಧಾರಣೆಯ ಕುರಿತು ಹತಾಶರಾಗಿರಲಿಲ್ಲ; ಆಶಾಭಾವನೆಯನ್ನೇ ಹೊಂದಿದ್ದರು. ಕಟ್ಟಕಡೆಗೆ ಯಶಸ್ಸು ಪ್ರವಾದಿವರ್ಯರಿಗೆ(ಸ) ಲಭಿಸಿಯೇ ಬಿಟ್ಟಿತು. ಅಧ್ಯಾಪಕನೂ ಅಷ್ಟೇ. ಶಿಕ್ಷಣ-ತರಬೇತಿ ಅಥವಾ ಸುಧಾರಣೆಯ ಕುರಿತು ಸ್ವಯಂ ಹತಾಶನಾಗಲೂ ಬಾರದು, ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಹತಾಶರಾಗಲು ಬಿಡಲೂ ಬಾರದು. ಪ್ರಾಯಸ್ಥರಾದ ನಾವೇ ನಮ್ಮ ಸುಧಾರಣೆಗೆ ಸಂಬಂಧಿಸಿ ಆಶಾಭಾವನೆಯನ್ನು ಹೊಂದಿರುತ್ತೇವೆ. ಹಾಗಿರುವಾಗ ಮಕ್ಕಳ ಸುಧಾರಣೆಗೆ ಅವರ ಇಡೀ ಜೀವನವಿದೆ. ಇನ್ನು ತಿಳುವಳಿಕೆಯ ಕೊರತೆಯಿಂದಾಗಿ ಅವರಿಂದ ತಪ್ಪು-ಪ್ರಮಾದಗಳು ಸಂಭವಿಸುವ ಸಾಧ್ಯತೆ ಹೆಚ್ಚೇ ಇರುತ್ತದೆ.

9. ತ್ಯಾಗ, ನಿರಪೇಕ್ಷತೆ ಮತ್ತು ಅಲ್ಲಾಹನಲ್ಲಿ ಭರವಸೆಗೆ ಸಂಬಂಧಿಸಿ ಪ್ರವಾದಿವರ್ಯರಿಗೆ(ಸ) ಯಾರೂ ಸಾಟಿಯಿಲ್ಲ, ಅಧ್ಯಾಪಕನೂ ಇಂದಿನ ಕಾಲಘಟ್ಟದಲ್ಲಿ ಈ ಗುಣಗಳನ್ನು ವಿಶೇಷವಾಗಿ ಮೈಗೂಡಿಸಿಕೊಳ್ಳಬೇಕು. ಈ ಗುಣಗಳ ಮೂಲಕವೇ ಶಿಕ್ಷಣ-ತರಬೇತಿಯಂತಹ ಸತ್ಕರ್ಮದಲ್ಲಿ ಸಮೃದ್ಧಿ ತರಲು ಸಾಧ್ಯ. ಲೌಕಿಕ ಲಾಭಗಳನ್ನು ಇಷ್ಟಪಡುವವರು ಈ ಕ್ಷೇತ್ರದಲ್ಲಿ ಕಾಲಿಡಲೇಬಾರದು.

10. ಪ್ರವಾದಿವರ್ಯರ(ಸ) ಹೊಣೆಗಾರಿಕಾ ಪ್ರಜ್ಞೆ, ಕಾರ್ಯಮಗ್ನತೆಯ ಅವಸ್ಥೆ ಏನಾಗಿತ್ತೆಂದರೆ ಸ್ವಯಂ ಅಲ್ಲಾಹನೇ, ಲಅಲ್ಲಕ ಬಾಖಿಅನ್ನಫ್ಸಕ (ನೀವು ಅವರ ಹಿಂದೆ ಬಹುಶಃ ನಿಮ್ಮನ್ನೇ ಹಾಳು ಮಾಡಿ ಬಿಡುತ್ತೀರಿ) ಎಂದು ಉದ್ಗರಿಸಿರುವನು. ಶಿಕ್ಷಣ-ತರಬೇತಿಯೂ ತೀರಾ ಕ್ಲಿಷ್ಟಕರ ಕೆಲಸವಾಗಿದೆ. ಅಧ್ಯಾಪಕನು ಈ ಮೇಲಿನ ಗುಣ ವಿಶೇಷಗಳ ಹೊರತು ತನ್ನ ಕರ್ತವ್ಯವನ್ನು ಪಾಲಿಸಲಾರ.

11. ಪರಿಸ್ಥಿತಿ ಎಷ್ಟೇ ಕ್ಲಿಷ್ಟಕರವಾಗಿದ್ದರೂ ಪ್ರವಾದಿವರ್ಯರು(ಸ) ಸಮಸ್ಯೆಗಳನ್ನು ದೂರದೃಷ್ಟಿಯಿಂದ ಸುಲಭವಾಗಿ ಪರಿಹರಿಸುತ್ತಿದ್ದರು. ಅವರ(ಸ) ಕೆಲವು ಮಾತುಗಳು ಬೆಂಕಿಗೆ ನೀರು ಸುರಿಯುವಂತೆ ಇರುತ್ತಿದ್ದುವು ಮತ್ತು ಉಭಯ ಕಕ್ಷಿಗಳೂ ಸಮಾಧಾನಗೊಳ್ಳುತ್ತಿದ್ದರು. ಅಧ್ಯಾಪಕನಿಗೂ ತರಗತಿಯಲ್ಲಿಯೂ ತರಗತಿಯ ಹೊರಗೂ ಹಲವು ರೀತಿಯ ಸಮಸ್ಯೆಗಳು ಎದುರಾಗುತ್ತವೆ. ಒಂದು ವೇಳೆ ಅವುಗಳನ್ನು ಪರಿಹರಿಸುವ ಸಾಮರ್ಥ್ಯ/ಪ್ರತಿಭೆ ಇಲ್ಲದಿದ್ದರೆ ಅಧ್ಯಾಪಕನಿಗೆ ಬಹಳ ಕಷ್ಟಪಡಬೇಕಾಗಿ ಬರುತ್ತದೆ.

12. ಪ್ರವಾದಿವರ್ಯರಿಗೆ(ಸ) ಮಕ್ಕಳ ಮೇಲೆ ಅಪಾರ ಪ್ರೀತಿ-ವಾತ್ಸಲ್ಯವಿತ್ತು. ಮಕ್ಕಳ ಬಾಲಿಶವಾದ ಚಟುವಟಿಕೆಗಳಿಗೆ ಆದಷ್ಟೂ ರಿಯಾಯಿತಿ ನೀಡುತ್ತಿದ್ದರು. ಪ್ರವಾದಿವರ್ಯರು(ಸ) ಎಂದೂ ಯಾವ ಮಗುವಿಗೂ ಹೊಡೆದದ್ದಿಲ್ಲ, ಹೊಡೆಯಲಿಕ್ಕೆ ಆದೇಶಿಸಿದ್ದರೂ ಅದು ಕೊನೆಯ ಅಸ್ತ್ರದ ರೂಪದಲ್ಲಾಗಿತ್ತು. ಅಧ್ಯಾಪಕನೂ ತನ್ನಲ್ಲಿ ಇಂಥ ಗುಣಗಳನ್ನು ಬೆಳೆಸಿಕೊಳ್ಳಬೇಕು. ಮಕ್ಕಳ ಮೇಲೆ ಪ್ರೀತಿ-ಮಮತೆ ಇಲ್ಲದಿದ್ದರೆ ಅಧ್ಯಾಪನಾ ವೃತ್ತಿಯಲ್ಲಿ ತೊಡಗಲೇ ಬಾರದು.

ಅಧ್ಯಾಪಕನ ಧ್ವನಿ

ಪಾಠವು ಪರಿಣಾಮಕಾರಿ ಮತ್ತು ಯಶಸ್ವಿಯಾಗಬೇಕಾದರೆ ಅದರಲ್ಲಿ ಅಧ್ಯಾಪಕನ ಧ್ವನಿಯು ಹಿರಿದಾದ ಪಾತ್ರ ವಹಿಸುತ್ತದೆ. ಚಿತ್ತಾಕರ್ಷಕ, ಹಿತಕರ ಮತ್ತು ಸಿಹಿಯಾದ ಧ್ವನಿಗೆ ವಿದ್ಯಾರ್ಥಿಗಳು ಬಲು ಬೇಗನೇ ಆಕರ್ಷಿತರಾಗುತ್ತಾರೆ. ಮಾತ್ರವಲ್ಲ, ತರಗತಿಯಲ್ಲಿ ಬಹಳ ಹೊತ್ತಿನ ವರೆಗೆ ದಣಿವು ಅಥವಾ ಕಿರಿಕಿರಿಯನುಭವಿಸುವುದಿಲ್ಲ. ಅದೇ ವೇಳೆ ಅಧ್ಯಾಪಕನ ಧ್ವನಿ ಕರ್ಕಶವಾಗಿದ್ದರೆ ಅಥವಾ ಆತ ಏರುಧ್ವನಿಯಲ್ಲಿ ಮಾತಾಡುತ್ತಿದ್ದರೆ ಕೇಳುಗರ ಕಿವಿಗೆ ಹಿತವೆನಿಸುವುದಿಲ್ಲ, ವಿದ್ಯಾರ್ಥಿಗಳು ಬಹಳ ಬೇಗನೇ ಸುಸ್ತು, ಕಿರಿಕಿರಿಯನುಭವಿಸುತ್ತಾರೆ. ಕರ್ಕಶ ಧ್ವನಿಯಿಂದಾಗಿ ಕಿರಿಯ ಪ್ರಾಥಮಿಕ ತರಗತಿಯ ಮಕ್ಕಳಲ್ಲಿ ನಿರಂತರ ಭೀತಿಯು ಮನೆ ಮಾಡುತ್ತಿರುತ್ತದೆ. ಅವರು ಅಧ್ಯಾಪಕನ ಮಾತಿಗೆ ಸರಿಯಾಗಿ ಗಮನ ಕೊಡಲು ಶಕ್ತರಾಗುವುದಿಲ್ಲ, ಹಾಗಾಗಿ ಅವರಿಗೆ ಪಾಠವೂ ಸರಿಯಾಗಿ ಅರ್ಥವಾಗುವುದಿಲ್ಲ. ಚೀರಾಡುವುದು, ಏರು ಧ್ವನಿಯಲ್ಲಿ ಮಾತನಾಡುವುದು ಸ್ವತಃ ಅಧ್ಯಾಪಕನ ಆರೋಗ್ಯಕ್ಕೂ ಒಳ್ಳೆಯದಲ್ಲ. ಅದರಿಂದ ಗಂಟಲು ಮತ್ತು ಪುಪ್ಪುಸಕ್ಕೆ (Lungs) ತೀವ್ರ ಆಘಾತವಾಗುತ್ತದೆ. ಅದೇ ರೀತಿ ಹೆಚ್ಚು ಮಾತಾಡುವುದರಿಂದ ಮತ್ತು ಅನಗತ್ಯ ಮಾತನಾಡುವುದರಿಂದಲೂ

ಗಮನ ಮತ್ತು ಆಸಕ್ತಿ ಹೊರಟು ಹೋಗುತ್ತದೆ. ಮಾತು ಎಷ್ಟೇ ಪ್ರಭಾವಶಾಲಿಯಾಗಿದ್ದರೂ ಧ್ವನಿಯಲ್ಲಿ ಏರಿಳಿತವಿಲ್ಲದಿದ್ದರೆ, ಒಂದೇ ಸ್ವರದಲ್ಲಿ ಮಾತನಾಡುತ್ತಿದ್ದರೆ ಅದೂ ಪ್ರಭಾವ ಕಳಕೊಳ್ಳುತ್ತದೆ. ಧ್ವನಿಗೆ ಸಂಬಂಧಿಸಿ ಅಧ್ಯಾಪಕರ ಮಾರ್ಗದರ್ಶನಕ್ಕಾಗಿ ಪ್ರವಾದಿವರ್ಯರ(ಸ) ಮಾದರಿಯನ್ನು ಇಲ್ಲಿ ಕೊಡುತ್ತಿದ್ದೇವೆ. ಪಾಠವನ್ನು ಪರಿಣಾಮಕಾರಿಯನ್ನಾಗಿ ಮಾಡಲು ಇದನ್ನು ಅನುಸರಿಸುವುದು ಅಗತ್ಯ.

1. ಪ್ರವಾದಿಯವರದ್ದು(ಸ) ಏರುಧ್ವನಿಯೂ ಆಗಿರಲಿಲ್ಲ, ಕೀರಲು ಧ್ವನಿಯೂ ಆಗಿರಲಿಲ್ಲ, ಬದಲಾಗಿ ಮಧ್ಯಮ ಧ್ವನಿಯಾಗಿತ್ತು. ಅವರ ಧ್ವನಿಯು ಕಿವಿಗೆ ಇಂಪಾಗಿ ಕೇಳಿಸುತ್ತಿತ್ತು. ಆದರೂ ಅಭಿಸಂಬೋಧಿತನಿಗೆ ಕೇಳಿಸುವಂತಾಗಲು ಪ್ರವಾದಿವರ್ಯರು(ಸ) ಧ್ವನಿ ಎತ್ತರಿಸಿಯೂ ಮಾತನಾಡುತ್ತಿದ್ದರು. ಅಧ್ಯಾಪಕನ ಧ್ವನಿಯೂ ಕಿವಿಗಡಚಿಕ್ಕುವಂತೆ ಗಡುಸಾಗಿಯೂ ಇರಬಾರದು, ಕೇಳಿಸದಷ್ಟು ಕೀರಲು ಧ್ವನಿಯೂ ಆಗಿರಬಾರದು. ಅದರಿಂದ ತರಗತಿಯಲ್ಲಿ ಶಿಸ್ತು ಇಲ್ಲವಾಗುತ್ತದೆ. ಬದಲಾಗಿ ಇಡೀ ತರಗತಿಯು ಕೇಳಿಸಿಕೊಳ್ಳುವಷ್ಟು ಇರಬೇಕು. ಏನಿದ್ದರೂ ಕಿರುಚುವುದು ಮತ್ತು ಕರ್ಕಶ ಧ್ವನಿಯಲ್ಲಿ ಮಾತನಾಡುವುದು ಯಾವ ರೀತಿಯಲ್ಲೂ ಸಹನೀಯವಲ್ಲ. ಕತ್ತೆಯ ಧ್ವನಿಯನ್ನಂತೂ ಕುರ್‌ಆನಿನಲ್ಲಿ ಟೀಕಿಸಿ ಹೇಳಲಾಗಿದೆ.

''ಖಂಡಿತವಾಗಿಯೂ ಕೆಟ್ಟ ಸ್ವರವು ಕತ್ತೆಯ ಸ್ವರವಾಗಿದೆ.''

(ಪವಿತ್ರ ಕುರ್‌ಆನ್: 21:19)

2. ಆರಂಭದಿಂದ ಅಂತ್ಯ ಕಾಲದ ವರೆಗೂ ಪ್ರವಾದಿವರ್ಯರು(ಸ) ಬಾಯಿ ತುಂಬಾ ಮಾತನಾಡುತ್ತಿದ್ದರು. (ಅರ್ಧ ಮಾತು ಗಂಟಲಲ್ಲಿ ಉಳಿಮಬಿಟ್ಟ ಉದಾಹರಣೆಯಿಲ್ಲ) ಅಧ್ಯಾಪಕನೂ ಇದನ್ನು ಸದಾ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

3. ಪ್ರವಾದಿವರ್ಯರು(ಸ) ಮಾತನಾಡುವಾಗ, ವಾಕ್ಯದ ಕೊನೆಯ ಪದ ಮಾತ್ರವಲ್ಲ ಕೊನೆಯ ಅಕ್ಷರವೂ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಅಧ್ಯಾಪಕನೂ ಇದನ್ನು ಅಭ್ಯಾಸ ಮಾಡಬೇಕು. ಉಚ್ಚಾರ ಮತ್ತು ಸ್ವರ ಸ್ಪಷ್ಟವಾಗಿದ್ದರೆ ಮಾತು ಸರಿಯಾಗಿ ಅರ್ಥವಾಗುತ್ತದೆ. ಮಾತ್ರವಲ್ಲ, ವಿದ್ಯಾರ್ಥಿಗಳ ಉಚ್ಚಾರ ಮತ್ತು ಸ್ವರ ಸುಧಾರಣೆಯಾಗುವುದು.

4. ಪ್ರವಾದಿವರ್ಯರ(ಸ) ಧ್ವನಿಯಲ್ಲಿ ಅಗತ್ಯಾನುಸಾರ ಏರಿಳಿತವಾಗುತ್ತಿತ್ತು. ಅದರಿಂದಾಗಿ ಅವರ ಮಾತಿನಲ್ಲಿ ಅಸಾಮಾನ್ಯವಾದ ಪ್ರಭಾವ ಇರುತ್ತಿತ್ತು. ಅಧ್ಯಾಪಕನೂ ಒಂದೇ ಸ್ವರದಲ್ಲಿ ಮಾತನಾಡುವುದನ್ನು ನಿಲ್ಲಿಸಬೇಕು. ಅಗತ್ಯಾನುಸಾರ ಧ್ವನಿಯಲ್ಲಿ ಏರಿಳಿತವನ್ನು ಹುಟ್ಟಿಸಲು ಪ್ರಯತ್ನಿಸಬೇಕು.

5. ಇತರೆಲ್ಲ ವಿಷಯಗಳಂತೆಯೇ ಪ್ರವಾದಿವರ್ಯರ(ಸ) ಧ್ವನಿಯಲ್ಲಿಯೂ ಸಂಕೋಚ ಮತ್ತು ಕೃತ್ರಿಮತೆ ಖಂಡಿತ ಇದ್ದಿರಲಿಲ್ಲ, ಅಧ್ಯಾಪಕನೂ ತನ್ನ ಧ್ವನಿಯಲ್ಲಿ ನಿಸ್ಸಂಕೋಚ ಮತ್ತು ಪ್ರಾಮಾಣಿಕತೆಯನ್ನು ತರಲು ಪ್ರಯತ್ನಿಸಬೇಕು. ಮಾತಿನ ಧಾಟಿಯು ಸ್ವಾಭಾವಿಕವಾಗಿರಬೇಕು.

ಕೆಲವು ಮಂದಿ ಅಧ್ಯಾಪಕರು ಬಾಯಿ ವಕ್ರವಾಗಿಸಿ ಮಾತನಾಡುವುದರಲ್ಲಿ ಮತ್ತು ಧ್ವನಿಯಲ್ಲಿ ಕೃತಕತೆ ತರುವುದರಲ್ಲಿ ತಮ್ಮ ಘನತೆಯಿದೆಯೆಂದು ಭಾವಿಸುತ್ತಾರೆ. ಆದರೆ ವಸ್ತುತಃ ಅವರು ತಮ್ಮ ಈ ಕೃತ್ಯದಿಂದಾಗಿ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಅಪಹಾಸ್ಯಕ್ಕೀಡಾಗುತ್ತಾರೆ.

6. ಪ್ರವಾದಿವರ್ಯರು(ಸ) ಅಗತ್ಯಕ್ಕೆ ತಕ್ಕಷ್ಟೇ ಮಾತನಾಡುತ್ತಿದ್ದರು. ಹೆಚ್ಚು ಮಾತನಾಡುವುದರಿಂದ ಮತ್ತು ಅನಗತ್ಯ ಮಾತನಾಡುವುದರಿಂದ ಅವರು ಅನುಯಾಯಿಗಳನ್ನು ತಡೆದಿದ್ದಾರೆ. ಅಧ್ಯಾಪಕನಿಗೆ ದಿನನಿತ್ಯ ಗಂಟೆಗಟ್ಟಲೆ ಮತ್ತು ಜೀವನಪೂರ್ತಿ ಮಾತನಾಡಲಿಕ್ಕಿರುತ್ತದೆ. ಆದ್ದರಿಂದ ಮಾತನಾಡುವಾಗ ಆದಷ್ಟೂ ಜಾಗರೂಕತೆ ವಹಿಸಬೇಕು. ಬೇರೆ ಬೇರೆ ಕೆಲಸಗಳಿಗೆ ಸಂಜ್ಞೆಗಳನ್ನು ನಿರ್ಧರಿಸುವುದು ಒಳ್ಳೆಯದು. ಇದರಿಂದ ಹೆಚ್ಚು ಮಾತನಾಡುವುದು ತಪ್ಪುತ್ತದೆ. ಅನಗತ್ಯ ಮತ್ತು ನಿರರ್ಥಕವಾಗಿ ಮಾತನಾಡುವುದನ್ನು ಬಿಟ್ಟು ಬಿಡಬೇಕು. ಸಾಧ್ಯವಾದಷ್ಟರ ಮಟ್ಟಿಗೆ ವಿದ್ಯಾರ್ಥಿಗಳಿಗೇ ಮಾತನಾಡಲು ಮತ್ತು ಕೆಲಸ ಮಾಡಲು ಅವಕಾಶ ಒದಗಿಸಿ ಕೊಡಬೇಕು.

ಅಧ್ಯಾಪಕನ ಭಾಷೆ

ವಿದ್ಯಾರ್ಥಿಗಳ ಶಿಕ್ಷಣ-ತರಬೇತಿಯಲ್ಲಿ ಅಧ್ಯಾಪಕನ ಭಾಷೆಗೆ ಮಹತ್ತರವಾದ ಪಾತ್ರವಿದೆ. ಏಕೆಂದರೆ ಅಧ್ಯಾಪಕನ ಮಾತೇ ಪ್ರಮುಖ ಅಸ್ತ್ರವಾಗಿದ್ದು, ಅದರ ಮೂಲಕವೇ ಅವನು ತನ್ನ ಮಾತನ್ನು ವಿದ್ಯಾರ್ಥಿಗಳಿಗೆ ತಲುಪಿಸುತ್ತಾನೆ. ತನ್ನ ಭಾವನೆ-ಚಿಂತನೆಗಳನ್ನು ವ್ಯಕ್ತಪಡಿಸುತ್ತಾನೆ. ಇನ್ನೊಂದೆಡೆ, ಸ್ವತಃ ವಿದ್ಯಾರ್ಥಿಗಳೂ ತಿಳಿದೋ ತಿಳಿಯದೆಯೋ ತಮ್ಮ ಅಧ್ಯಾಪಕನ ಭಾಷೆಯನ್ನು ಅನುಕರಿಸುತ್ತಾರೆ. ಆದ್ದರಿಂದ ಅಧ್ಯಾಪಕನು ಭಾಷಾ ಪ್ರಯೋಗದ ವಿಷಯದಲ್ಲಿ ಸಾದ್ಯಂತ ಜಾಗರೂಕನಾಗಿರಬೇಕು. ಅಧ್ಯಾಪಕನ ಮಾತು ದೋಷಪೂರ್ಣವಾಗಿದ್ದರೆ ವಿದ್ಯಾರ್ಥಿಗಳೂ ದೋಷಪೂರಿತ ಭಾಷೆಯನ್ನೇ ಬಳಸತೊಡಗುತ್ತಾರೆ. ಇಂತಹ ಸ್ಥಿತಿಯಲ್ಲಿ ಮಾತು ಸರಿಯಾಗಿ ಅರ್ಥವಾಗಲಾರದು. ಈ ನಿಟ್ಟಿನಲ್ಲಿ ನಮಗೆ ಪ್ರವಾದಿವರ್ಯರ(ಸ) ಮಾದರಿಯಿಂದ ಯಾವ ಮಾರ್ಗದರ್ಶನ ಸಿಗುತ್ತದೆ ನೋಡೋಣ.

1. ಪ್ರವಾದಿವರ್ಯರು(ಸ) ಅತ್ಯಂತ ಶುದ್ಧ, ಸರಳ, ಸುಲಭ ಮತ್ತು ಮೃದುವಾದ ಭಾಷೆಯನ್ನು ಬಳಸುತ್ತಿದ್ದರು. ಪ್ರಾಸಬದ್ಧ ಮತ್ತು ಸಾಹಿತ್ಯಿಕ ಪದವನ್ನು ಬಳಸುತ್ತಿರಲಿಲ್ಲ. ಯಾವುದೇ ಸಮಸ್ಯೆಯಿದ್ದರೂ ಅವಿದ್ಯಾವಂತರೂ ಪಾಮರರೂ ಚೆನ್ನಾಗಿ ಅರ್ಥ ಮಾಡಿಕೊಳ್ಳುವಂತಹ ಸರಳ ಭಾಷೆಯಲ್ಲಿ ಉಲ್ಲೇಖಿಸುತ್ತಿದ್ದರು. ಅಧ್ಯಾಪಕನಿಗಂತೂ ಸಣ್ಣ ಮಕ್ಕಳೊಡನೆ ವ್ಯವಹರಿಸಲಿಕ್ಕಿರುತ್ತದೆ. ಅವರಲ್ಲಿ ಪದಗಳ ಭಂಡಾರವೂ ಸೀಮಿತವಾಗಿರುತ್ತದೆ. ಒಂದು ವೇಳೆ ಮಾತನಾಡುವಾಗ ಮಕ್ಕಳ ಭಾಷೆಯ ಅಪಕ್ವತೆಯನ್ನು ಪರಿಗಣಿಸದಿದ್ದರೆ ಅವರಿಗೆ ಅರ್ಥ ಮಾಡಿಕೊಳ್ಳಲು ತೀರಾ ಕಷ್ಟವೆನಿಸುವುದು.

2. ವಾಕ್ಚಾತುರ್ಯದ ಬಗ್ಗೆಯೂ ಪ್ರವಾದಿವರ್ಯರು(ಸ) ಅತಿ ಹೆಚ್ಚು ಗಮನ ನೀಡುತ್ತಿದ್ದರು. ಬಹಳ ಕಡಿಮೆ ಪದಗಳಲ್ಲಿ ತಮ್ಮ ಮಾತುಗಳನ್ನು ವ್ಯಕ್ತಪಡಿಸುತ್ತಿದ್ದರು. ಅವರ ವಾಕ್ಯ ಸಣ್ಣದೂ ಪದಗಳು ಸಮಗ್ರವೂ ಆಗಿರುತ್ತಿತ್ತು. ಆದರೂ ಅವರ ಮಾತಿನ ಇಂಗಿತ ಸ್ಪಷ್ಟವಾಗಿ ಅರ್ಥವಾಗುತ್ತಿತ್ತು. ಅಧ್ಯಾಪಕನೂ ಸಣ್ಣ ಸಣ್ಣ ವಾಕ್ಯಗಳಲ್ಲಿ ಮತ್ತು ಬಹಳ ಕಡಿಮೆ ಪದಗಳಲ್ಲಿ ತನ್ನ ಮಾತನ್ನು ಅರುಹುವ ಕಲೆಯನ್ನು ಕರಗತ ಮಾಡಿಕೊಳ್ಳಬೇಕು. ಮಾತು ಸ್ಪಷ್ಟವಾಗಿರಬೇಕು, ವಿಷಯಕ್ಕೆ ಸಂಬಂಧಿಸಿರಬೇಕು.

3. ಶುದ್ಧ, ಸ್ಪಷ್ಟ ಮತ್ತು ಶಿಷ್ಟ ಪದಗಳನ್ನು ಬಳಸುತ್ತಿದ್ದರು. ಒಂದು ವಿಷಯವನ್ನು ವಿವರವಾಗಿ ಅರುಹುವುದು ಶಿಷ್ಟಾಚಾರಕ್ಕೆ ವಿರುದ್ಧವೆಂದಾಗಿದ್ದರೆ, ಅದನ್ನು ಸಂಜ್ಞೆಯ ಮೂಲಕ ಸೂಚಿಸುತ್ತಿದ್ದರು. ವಿದ್ಯಾರ್ಥಿಗಳ ಭಾಷೆಯೂ ಈ ಗುಣಗಳಲ್ಲಿ ಸೇರಿಸಿಕೊಳ್ಳಬೇಕಾದರೆ ಅಧ್ಯಾಪಕನು ತನ್ನ ಮಾತಿನಲ್ಲಿ ಶುದ್ಧತೆ, ಸ್ಪಷ್ಟತೆ ಮತ್ತು ಶಿಷ್ಟತೆಯನ್ನು ಸಾದ್ಯಂತ ಪಾಲಿಸಬೇಕು. ಕೆಟ್ಟ ಭಾಷೆ ಮತ್ತು ಅಸಭ್ಯ ಪದಗಳಿಂದ ಅಧ್ಯಾಪಕ ಹೇಗೂ ದೂರವಿರಬೇಕು. ಅದೇ ವೇಳೆ ವಿದ್ಯಾರ್ಥಿಗಳಿಂದ ಅಂತಹ ಪ್ರಮಾದವೇನಾದರೂ ಸಂಭವಿಸಿದರೆ ಸೂಕ್ತ ಸಮಯಕ್ಕೆ ಸುಧಾರಣೆ ತರಬೇಕು. ಕೆಲವೊಮ್ಮೆ ಮಕ್ಕಳ ಭಾಷೆಯಲ್ಲಿ ತಿಳಿಯದೆ ಅಸಭ್ಯ ಮಾತು ಮತ್ತು ವಾಕ್ಯಗಳು ಸೇರಿಕೊಳ್ಳುತ್ತವೆ. ಅದನ್ನು ಅವರು ತಮ್ಮ ಮಾತು-ಬರವಣಿಗೆಯಲ್ಲಿ ನಿಸ್ಸಂಕೋಚವಾಗಿ ಬಳಸುತ್ತಾರೆ. ಹಾಗೆ ಮಾಡುವುದರಿಂದ ಮಕ್ಕಳನ್ನು ತಡೆಯಬೇಕಾಗಿದೆ.

ಶಿಕ್ಷಣದ ವಿಧಾನ

ಪ್ರವಾದಿವರ್ಯರ(ಸ) ಚಾರಿತ್ರ್ಯದಿಂದ ನಮಗೆ ಶಿಕ್ಷಣದ ವಿಧಾನ, ರೀತಿ-ನೀತಿಗಳಿಗೆ ಸಂಬಂಧಿಸಿ ಈ ಕೆಳಗಿನ ಮಾರ್ಗದರ್ಶನ ದೊರೆಯುತ್ತದೆ.

1. ಪಠ್ಯದ ನಿರ್ದಿಷ್ಟ ಉದ್ದೇಶವು ಅಧ್ಯಾಪಕ ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಸ್ಪಷ್ಟವಾಗಿರಬೇಕು. ಪ್ರವಾದಿವರ್ಯರು(ಸ) ಏನಾದರೂ ತಿಳಿಸಲು ಅಥವಾ ಕಲಿಸಲು ಹೊರಟರೆ ಅದರ ಮೂಲಭೂತ ಉದ್ದೇಶವು ಅವರ ಮುಂದೆ ಸ್ಪಷ್ಟವಾಗಿರುತ್ತದಷ್ಟೇ. ಅದೇ ವೇಳೆ, ಅವರ ಅನುಯಾಯಿಗಳಿಗೂ ತಾವು ಏನನ್ನು ಮತ್ತು ಯಾಕಾಗಿ ಕಲಿಯುತ್ತಿದ್ದೇವೆ ಎಂಬುದು ಸ್ಪಷ್ಟವಾಗಿ ತಿಳಿದಿರುತ್ತದೆ. ಅಧ್ಯಾಪಕನು ಇದನ್ನು ಪರಿಗಣಿಸಬೇಕು. ಏಕೆಂದರೆ ತರಗತಿ ನಡೆಸುವ ವೇಳೆ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಸಂಪೂರ್ಣ ಸಮಯ ಮತ್ತು ಗಮನ ಪಠ್ಯದ ಉದ್ದೇಶದಲ್ಲೇ ಕೇಂದ್ರೀಕೃತವಾಗಿರಬೇಕು. ಅತ್ತಿತ್ತ ಹೊರಳುವಂತಾಗಬಾರದು.

2. ವಿದ್ಯಾರ್ಥಿಗಳಲ್ಲಿ ಆಸಕ್ತಿ ಕೆರಳಿಸಿ ಮತ್ತು ಕುತೂಹಲ ಹುಟ್ಟಿಸಿ ತರಗತಿ ನಡೆಸಬೇಕು. ಪ್ರವಾದಿವರ್ಯರು(ಸ) ಯಾವುದಾದರೂ ಪ್ರಶ್ನೆ ಕೇಳಿ ಅಥವಾ ಅಪೂರ್ಣ ವಾಕ್ಯ ಹೇಳಿ ಜನರಲ್ಲಿ ಕುತೂಹಲ ಹುಟ್ಟಿಸುತ್ತಿದ್ದರು. ಬಳಿಕ ಅವರ ಗಮನವನ್ನು ತಮ್ಮೆಡೆಗೆ ಸೆಳೆದು,

ವಿಷಯವನ್ನು ತಿಳಿಸುತ್ತಿದ್ದರು ಅಥವಾ ಕಲಿಸುತ್ತಿದ್ದರು. ಉದಾಹರಣೆಗೆ, ''ಒಮ್ಮೆ ಮಹಾ ದಾನಶೂರ ಯಾರು?'' ಎಂದು ಕೇಳಿದರು. ತರುವಾಯ ಉತ್ತರವನ್ನೂ ಅವರೇ ನೀಡಿದರು. ಇನ್ನೊಮ್ಮೆ ಮಿಂಬರ್(ವೇದಿಕೆ)ಗೆ ಹತ್ತುವಾಗ ಮೂರು ಬಾರಿ, ''ಅವನು ನಾಶವಾದನು...'' ಎಂದು ಹೇಳಿದರು. ಒಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಕುತೂಹಲ ಹುಟ್ಟುವ ತನಕ ಅಥವಾ ಮಾನಸಿಕವಾಗಿ ಸಿದ್ಧರಾಗುವ ತನಕ ಪಠ್ಯದಲ್ಲಿ ಅವರು ಗಮನ ಕೇಂದ್ರೀಕರಿಸಲಾರರು. ಅಂತೆಯೇ ವಿದ್ಯಾರ್ಥಿಗಳ ಆಸಕ್ತಿ, ಗಮನ ಮತ್ತು ತನ್ಮಯತೆಯ ಹೊರತು ಅಧ್ಯಾಪಕನ ಪ್ರಯತ್ನಗಳೂ ಫಲಕಾರಿಯಾಗಲಾರವು.

3. ಎಲ್ಲವನ್ನೂ ಒಂದೇ ಬಾರಿಗೆ ಹೇಳಿ ಬಿಡುವ ಬದಲು ಪಠ್ಯವನ್ನು ಸೂಕ್ತ ಭಾಗಗಳಾಗಿ ವಿಂಗಡಿಸಬೇಕು. ತರುವಾಯ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಿ ಒಂದು ಭಾಗವನ್ನು ಕಲಿಸಬೇಕು. ಅದು ಅವರಿಗೆ ಮನನ ಆಯಿತು ಎಂದು ಸ್ಪಷ್ಟವಾದ ಬಳಿಕವೇ ಮುಂದಿನ ಭಾಗವನ್ನು ಕಲಿಸಬೇಕು. ಹ. ಮುಆದ್‌ರಿಗೆ(ರ) ಸಂಬಂಧಿಸಿದ ಹದೀಸ್‌ನಿಂದ ಈ ಕುರಿತು ಮಾರ್ಗದರ್ಶನ ದೊರೆಯುತ್ತದೆ. ಈ ರೀತಿ ಇಡೀ ಪಾಠವು ಸುಲಭದಲ್ಲಿ ಮನನವಾಗುತ್ತದೆ.

4. ವಿದ್ಯಾರ್ಥಿಗಳಿಗೆ ಆದಷ್ಟು ಸುಲಭಗೊಳಿಸಿ ಕಲಿಸಿರಿ. ಅವರು ಸೋತು ಸುಣ್ಣವಾಗುವಷ್ಟು ಕಷ್ಟವನ್ನುಂಟು ನೀಡಬೇಡಿರಿ.

''ಸುಲಭಗೊಳಿಸಿರಿ. ಕಷ್ಟಕ್ಕೀಡು ಮಾಡಬೇಡಿರಿ.'' (ಹದೀಸ್)

ಕ್ರಮೇಣ ಸುಲಭದಿಂದ ಹಂತಹಂತವಾಗಿ ಕಷ್ಟದ ವಿಷಯದೆಡೆಗೆ ಸಾಗಿರಿ. ಈ ಮೂಲಕ ಮಕ್ಕಳು ಕ್ಲಿಷ್ಟಕರ ವಿಷಯಗಳನ್ನು ಸುಲಭವಾಗಿ ಅರಗಿಸಿಕೊಳ್ಳಲು ಶಕ್ತರಾಗುವರು.

5. ಪಾಠ ಮಾಡುತ್ತಿರುವಾಗ ಮಕ್ಕಳ ಗಮನ ತಪ್ಪದಂತೆ ಮತ್ತು ತೂಕಡಿಸದಂತೆ ನೋಡಿಕೊಳ್ಳುತ್ತ ಇರಬೇಕು. ಈ ವಿಷಯದಲ್ಲಿ ಪ್ರವಾದಿವರ್ಯರು(ಸ) ಬಹಳ ಜಾಗರೂಕತೆ ವಹಿಸುತ್ತಿದ್ದರು. ಅಂತಹ ಲಕ್ಷಣ ಕಂಡು ಬಂದಾಗಲೆಲ್ಲ ಒಂದೋ ಬೇರೆ ವಿಷಯವನ್ನೆತ್ತಿದ್ದರು ಅಥವಾ ವಿಷಯವನ್ನು ಅಲ್ಲಿಗೇ ನಿಲ್ಲಿಸಿ ಬಿಡುತ್ತಿದ್ದರು.

6. ವಿಷಯವನ್ನು ವಿವರಿಸಲು ಈ ಕೆಳಗಿನ ವಿಧಾನಗಳ ಪೈಕಿ ಒಂದನ್ನು ಸಂದರ್ಭಾನುಸಾರ ಬಳಸಬೇಕು.

ಅ. ಮಾತುಕತೆಯ ವಿಧಾನ (Conversational Method)

ಆ. ಪ್ರಶ್ನೋತ್ತರ ವಿಧಾನ (Question Answer Method)

ಇ. ಕಥನ/ವರ್ಣನಾತ್ಮಕ ವಿಧಾನ (Narrative/Discriptive Method)

ಈ. ಪ್ರವಚನ ವಿಧಾನ (Lecture Method)

ಅ. ಮಾತುಕತೆಯ ವಿಧಾನ

ಪ್ರವಾದಿವರ್ಯರು(ಸ) ಮಾತು ಮಾತಿನಲ್ಲೇ ಬಹಳಷ್ಟು ಅಗತ್ಯದ ವಿಷಯಗಳನ್ನು ಕಲಿಸುತ್ತಿದ್ದರು. ಈ ವಿಧಾನವು ಅತ್ಯಂತ ಆಸಕ್ತಿದಾಯಕ, ಸರಳ, ಸ್ವಾಭಾವಿಕ ಮತ್ತು ಪ್ರಯೋಜನಕಾರಿಯಾಗಿದೆ. ಇದರಿಂದ ವಿದ್ಯಾರ್ಥಿಗಳೂ ನಿಸ್ಸಂಕೋಚವಾಗಿ ತಮ್ಮ ಇಂಗಿತವನ್ನು ವ್ಯಕ್ತಪಡಿಸುವರು. ಅಧ್ಯಾಪಕನಿಗೂ ಅವರ ಕಷ್ಟ ಮತ್ತು ಭಾವನೆಗಳನ್ನು ಸರಿಯಾಗಿ ಅಂದಾಜಿಸಲು ಸಹಕಾರಿಯಾಗುತ್ತದೆ. ಹೀಗೆ ಅವರ ಸುಧಾರಣೆ ಮತ್ತು ತರಬೇತಿಗೆ ಸ್ವಾಭಾವಿಕವಾಗಿಯೇ ಅವಕಾಶ ಒದಗಿ ಬರುತ್ತದೆ. ಆದರೆ ಸಂಭಾಷಣೆಯು ಪ್ರಯೋಜನಕಾರಿಯಾಗಬೇಕಾದರೆ ಈ ಕುರಿತು ಪ್ರವಾದಿವರ್ಯರ(ಸ) ಮಾದರಿಯನ್ನು ಅನುಸರಿಸಬೇಕಾದುದಗತ್ಯ. ಅಂದರೆ...

1. ಪ್ರತಿಯೊಬ್ಬ ವಿದ್ಯಾರ್ಥಿಯೂ ನಿಸ್ಸಂಕೋಚವಾಗಿ ಮನದಲ್ಲಿರುವುದನ್ನು ಅರುಹಲು ಸಂಭಾಷಣೆಯು ಸಾದ್ಯಂತ ಮುಕ್ತ ವಾತಾವರಣದಲ್ಲಿ ನಡೆಯಬೇಕು. ಅದೇ ವೇಳೆ ಶಿಷ್ಟಾಚಾರ, ಸಭ್ಯತೆಯನ್ನು ಪಾಲಿಸುತ್ತಲೂ ಇರಬೇಕು.
2. ಗಮನ ಕೊಟ್ಟು ಮತ್ತು ಮುಗುಳ್ನಗುತ್ತಾ ಆಲಿಸಬೇಕು.
3. ಮಾತಿನ ಮಧ್ಯದಲ್ಲಿ ಬಾಯಿ ಹಾಕಬಾರದು. ಒಂದು ಸಮಯಕ್ಕೆ ಒಬ್ಬನೇ ವ್ಯಕ್ತಿ ಮಾತನಾಡಬೇಕು. ಒಬ್ಬನು ಮಾತನಾಡಿ ಮುಗಿಯುವ ವರೆಗೆ ಇನ್ನೊಬ್ಬ ಮಾತನಾಡಬಾರದು.
4. ವಿಷಯಕ್ಕೆ ಸಂಬಂಧಿಸದ, ವ್ಯತಿರಿಕ್ತ ಅಥವಾ ಅನುಚಿತ ಸಂಭಾಷಣೆ ಆಗತೊಡಗಿದರೆ ಸೂಕ್ತ ರೀತಿಯಲ್ಲಿ ಸುಧಾರಣೆ ತರಬೇಕು.
5. ಸಂಭಾಷಣೆಯ ವೇಳೆ ಶಿಕ್ಷಣ-ತರಬೇತಿಗೆ ಸ್ವಾಭಾವಿಕವಾಗಿ ಅವಕಾಶ ಸಿಗುತ್ತದೆ. ಅದನ್ನು ಸಂಪೂರ್ಣ ಬಳಸಿಕೊಳ್ಳಬೇಕು.
6. ಸಂಭಾಷಣೆಯ ವೇಳೆ ಲಗುಬಗೆಯಿಂದ ಮಾತನಾಡಬಾರದು. ಪದಗಳನ್ನು ತಡೆತಡೆದು ಸಾವಧಾನವಾಗಿ ಉಚ್ಚರಿಸಬೇಕು. ಮಾತನ್ನು ಸರಿಯಾಗಿ ಅರ್ಥ ಮಾಡಿಸಿಕೊಡಲು ಮತ್ತು ಪದ ಅಥವಾ ವಾಕ್ಯದ ಮಹತ್ವ ತಿಳಿಸಲು ಅಗತ್ಯಾನುಸಾರ ವಾಕ್ಯ ಅಥವಾ ಪದವನ್ನು ಪುನರುಚ್ಚರಿಸಬೇಕು.
7. ಸಂಭಾಷಣೆಯಲ್ಲಿ ಅಭಿಸಂಬೋಧಿತರ ಆಸಕ್ತಿ, ಒಲವು ಮತ್ತು ಅಗತ್ಯವನ್ನು ಸಾದ್ಯಂತ ಪರಿಗಣಿಸಬೇಕು.

ಆ. ಪ್ರಶ್ನೋತ್ತರ ವಿಧಾನ

ಪ್ರವಾದಿವರ್ಯರು(ಸ) ಈ ವಿಧಾನದ ಮೂಲಕ ಹಲವು ವಿಷಯಗಳನ್ನು ಅರ್ಥ ಮಾಡಿಸಿಕೊಡುತ್ತಿದ್ದರು. ಹೇಳಬೇಕಾದ ವಿಷಯಕ್ಕೆ ಸಂಬಂಧಿಸಿ ಮೊದಲು ಪ್ರಶ್ನೆ ಕೇಳುತ್ತಿದ್ದರು.

ತರುವಾಯ ಸರಿಯಾದ ಉತ್ತರವನ್ನು ಹೇಳುತ್ತಿದ್ದರು. ಇತರರಿಗೂ ಮುಕ್ತವಾಗಿ ಪ್ರಶ್ನಿಸುವ ಅವಕಾಶ ನೀಡುತ್ತಿದ್ದರು. ಅದೇ ವೇಳೆ, ನಿರರ್ಥಕ ಪ್ರಶ್ನೆ ಕೇಳುವುದರಿಂದ ತಡೆಯುತ್ತಿದ್ದರು ಅಥವಾ ಅದನ್ನು ಕಡೆಗಣಿಸುತ್ತಿದ್ದರು. ವಿಷಯಕ್ಕೆ ಸಂಬಂಧಿಸಿರದ ಪ್ರಶ್ನೆ ಬಂದರೆ, ಪ್ರತ್ಯೇಕವಾಗಿ ಅದಕ್ಕೆ ಉತ್ತರಿಸುತ್ತಿದ್ದರು. ಈ ವಿಧಾನವು ಬಹಳ ಪ್ರಯೋಜನಕಾರಿಯಾಗಿದೆ. ಇದರ ಪ್ರಮುಖ ವಿಶೇಷತೆಯೇನೆಂದರೆ, ವಿದ್ಯಾರ್ಥಿಯ ಮನಸ್ಸು ಪ್ರಶ್ನೆಗೆ ಉತ್ತರವನ್ನು ಹುಡುಕುವುದರಲ್ಲಿ ವ್ಯಸ್ತವಾಗುತ್ತದೆ ಅಥವಾ ಕನಿಷ್ಠ ಸಂಪೂರ್ಣ ಗಮನ ಮತ್ತು ಏಕಾಗ್ರತೆಯೊಂದಿಗೆ ಅದರ ಉತ್ತರ ಕೇಳಲು ಸಿದ್ಧನಾಗುತ್ತಾನೆ. ಈ ನಿಟ್ಟಿನಲ್ಲಿ ಪ್ರವಾದಿವರ್ಯ(ಸ) ಮಾದರಿಯಿಂದ ಈ ಕೆಳಗಿನ ಮಾರ್ಗದರ್ಶನ ದೊರೆಯುತ್ತದೆ:

1. ಪ್ರಶ್ನೆಯು ಸಂಕ್ಷಿಪ್ತ ಮತ್ತು ಸಮಗ್ರವಾಗಿರಬೇಕು. ಅದನ್ನು ಸ್ಪಷ್ಟ ಪದಗಳೊಂದಿಗೆ ಕೇಳಬೇಕು. ಅಭಿಸಂಬೋಧಿತನಿಗೆ, ತನ್ನೊಡನೆ ಏನನ್ನು ಕೇಳಲಾಗುತ್ತಿದೆ ಎಂದು ಸ್ಪಷ್ಟವಾಗಿ ತಿಳಿಯಬೇಕು. ಹಾಗೆ ಪ್ರಶ್ನೆ ಸುಲಭದಲ್ಲಿ ಮನನವಾದರೆ ಉತ್ತರಿಸಲು ಸುಲಭವಾಗುತ್ತದೆ. ಪ್ರಶ್ನೆಯೇ ಸ್ಪಷ್ಟವಾಗಿಲ್ಲದಿದ್ದರೆ ಅದಕ್ಕೆ ದೊರಕುವ ಉತ್ತರವೂ ಸ್ಪಷ್ಟವಾಗಿರಲಾರದು.
2. ಪ್ರಶ್ನೆ ಕೇಳುವ ರೀತಿಯು ಎಲ್ಲರೂ ಕಿವಿಗೊಟ್ಟು ಆಲಿಸುವಂತಿರಬೇಕು. ಸಂಪೂರ್ಣ ಮಗ್ನತೆಯೊಂದಿಗೆ ಗಮನಕೊಟ್ಟು ಕೇಳುವಂತಾಗಬೇಕು ಮತ್ತು ಉತ್ತರವನ್ನು ಆಲೋಚಿಸಲು ಅಥವಾ ಆಲಿಸಲು ಸಿದ್ಧರಾಗುವಂತಿರಬೇಕು.
3. ಪ್ರಶ್ನೆ ಕೇಳಿದ ಬಳಿಕ ಆಲೋಚಿಸಲು ಅವಕಾಶ ನೀಡಬೇಕು. ಬಳಿಕ ಮುಕ್ತ ಮನಸ್ಸಿನಿಂದ ಉತ್ತರ ಆಲಿಸಬೇಕು.
4. ತಪ್ಪು ಉತ್ತರ ಬಂದರೆ ಅದನ್ನು ಸರಿಪಡಿಸಬೇಕು. ಒಂದು ವೇಳೆ ಉತ್ತರ ಸಿಗದಿದ್ದರೆ ಅಥವಾ ಪ್ರಶ್ನೆಯನ್ನು ಮರಳಿಸಿದರೆ, ಸ್ವಯಂ ಸ್ಪಷ್ಟವಾಗಿ ಉತ್ತರ ನೀಡಬೇಕು. ಕುತೂಹಲ ಹುಟ್ಟಿಸಿ, ಅದನ್ನು ತಣಿಸುವ ವ್ಯವಸ್ಥೆ ಮಾಡದಿದ್ದರೆ ಅದು ಹಾನಿಕರ ಮತ್ತು ಸಂದೇಹಗಳಿಗೆಡೆ ಮಾಡಿಕೊಡುತ್ತದೆ.
5. ವಿದ್ಯಾರ್ಥಿಗಳಿಗೂ ಪ್ರಶ್ನಿಸಲು ಅವಕಾಶ ನೀಡಬೇಕು. ಏಕೆಂದರೆ ಹೆಚ್ಚು ಪ್ರಶ್ನಿಸುವವನೇ ಹೆಚ್ಚು ಕಲಿಯುತ್ತಾನೆ. ಆದರೆ ನಿರರ್ಥಕ ಪ್ರಶ್ನೆ ಕೇಳಿದರೆ, ಗದರಿಸುವ ಬದಲು ಅದನ್ನು ಒಂದೋ ಕಡೆಗಣಿಸಬೇಕು ಅಥವಾ ನಯವಾಗಿ ಅದರಿಂದ ತಡೆಯಬೇಕು.
6. ವಿಷಯಕ್ಕೆ ಸಂಬಂಧ ಪಡದ ಆದರೆ ಪ್ರಯೋಜನಕಾರಿ ಮತ್ತು ಅಗತ್ಯದ ಪ್ರಶ್ನೆ ಕೇಳಲಾದರೆ, ಮಾತು ಮುಗಿಸಿದ ಬಳಿಕ ಪ್ರತ್ಯೇಕವಾಗಿ ಅದಕ್ಕೆ ಉತ್ತರಿಸಬೇಕು.

ಇ. ಕಥನ/ವರ್ಣನಾತ್ಮಕ ವಿಧಾನ

ಒಂದು ವಿಷಯದಲ್ಲಿ ಏನಾದರೂ ಹೇಳಲಿಕ್ಕಿದ್ದರೆ ಅಥವಾ ಯಾವುದಾದರೊಂದು ಘಟನೆಯನ್ನು ತಿಳಿಸಲಿಕ್ಕಿದ್ದರೆ ಪ್ರವಾದಿವರ್ಯರು(ಸ) ಕೆಲವೊಮ್ಮೆ ಕಥನದ ವಿಧಾನವನ್ನು ಅನುಸರಿಸುತ್ತಿದ್ದರು. ಆದರೆ ಅವರ ವಿವರಣೆಯಲ್ಲಿ ಈ ಕೆಳಗಿನ ವಿಶೇಷತೆಗಳಿರುತ್ತಿದ್ದುವು:

1. **ಸಂಕ್ಷಿಪ್ತತೆ:** ಪ್ರವಾದಿವರ್ಯರು(ಸ) ವಿಷಯವನ್ನು ದೀರ್ಘಗೊಳಿಸಿ ಹೇಳುತ್ತಿರಲಿಲ್ಲ, ಬದಲಾಗಿ ಸಂಕ್ಷಿಪ್ತವಾದ ಸಮಗ್ರ ಪದಗಳನ್ನು ಬಳಸುತ್ತಿದ್ದರು.
2. **ವರ್ಣನೆ:** ಪದಗಳಲ್ಲಿ ವರ್ಣನಾತ್ಮಕತೆ ಇರುತ್ತಿತ್ತು. ಅದರಿಂದಾಗಿ ಕೇಳುಗರು ಅದು ತಮ್ಮ ಕಣ್ಣ ಮುಂದೆಯೇ ನಡೆಯುತ್ತಿದೆಯೇನೋ ಎಂದು ಭಾವಿಸುತ್ತಿದ್ದರು.
3. **ಉಪಮೆಗಳ ಮೂಲಕ ವಿವರಣೆ:** ವಿಷಯವನ್ನು ಅತ್ಯುತ್ತಮವಾಗಿ ತಿಳಿಸಲು ಅವರು ಸೂಕ್ತ ಮತ್ತು ಸಂದರ್ಭೋಚಿತವಾದ ಉಪಮೆಗಳನ್ನೂ ನೀಡುತ್ತಿದ್ದರು. ಇದರಿಂದ ಮಾತಿನ ಎಲ್ಲ ಮಗ್ಗುಲುಗಳೂ ಸುಲಭವಾಗಿ ಅರ್ಥವಾಗುತ್ತಿದ್ದುವು.
4. **ಅಗತ್ಯಾನುಸಾರ ಶಬ್ದಗಳ ಏರಿಳಿತ ಮತ್ತು ವಾಕ್ಯಗಳಲ್ಲಿ ಒತ್ತು ನೀಡುವುದು:** ಪ್ರವಾದಿವರ್ಯರು(ಸ) ಈ ವಿಧಾನವನ್ನು ಅನುಸರಿಸುವ ಮೂಲಕ ಜನರು ಅವರ ಮಾತಿನ ಮಹತ್ವ ಮತ್ತು ಅಗತ್ಯತೆಯನ್ನು ಚೆನ್ನಾಗಿ ಅರ್ಥ ಮಾಡುತ್ತಿದ್ದರು.
5. **ಸ್ವಯಂ ಪ್ರಭಾವಿತಗೊಂಡು ಮಾತನಾಡುವುದು:** ಮಾತಿನಲ್ಲಿ ಯಾವ ಪ್ರಭಾವವನ್ನು ತರಬೇಕೋ ಅದನ್ನು ಸ್ವಯಂ ತಮ್ಮಲ್ಲಿ ಅದರ ಪ್ರಭಾವವನ್ನು ಅನುಭವಿಸಿ ಮಾತನಾಡುತ್ತಿದ್ದರು. ಅವರ ಈ ಅವಸ್ಥೆಯು ಕೇಳುಗರ ಮೇಲೆ ಅಪಾರ ಪ್ರಭಾವ ಬೀರುತ್ತಿತ್ತು. ಮಾತು ಹೃದಯದಿಂದ ಹೊರಟರೆ, ಪ್ರಭಾವ ಬೀರದಿರುವುದಿಲ್ಲ ಎಂಬುದು ಸ್ಪಷ್ಟ ತಾನೇ?
6. **ಅಗತ್ಯಾನುಸಾರ ಸ್ವಯಂ ಮಾದರಿಯಾಗುವುದು:** ಪ್ರವಾದಿವರ್ಯರು(ಸ) ಯಾವುದೇ ವಿಷಯವನ್ನು ಕೇವಲ ಮಾತಿನ ಮೂಲಕ ಹೇಳಿ ಬಿಡುತ್ತಿರಲಿಲ್ಲ, ಬದಲಾಗಿ ಅಗತ್ಯ ಮತ್ತು ಸಂದರ್ಭಾನುಸಾರ ಅದನ್ನು ಸ್ವತಃ ಆಚರಿಸಿ ತೋರಿಸುತ್ತಿದ್ದರು. ಅಥವಾ ದೈನಂದಿನ ಜೀವನದಲ್ಲಿ ಅದರ ಕರ್ಮಫಲ ಮತ್ತು ಜೀವನದೊಂದಿಗೆ ಅದರ ಸಂಬಂಧವನ್ನು ಅತ್ಯುತ್ತಮವಾಗಿ ತಿಳಿ ಹೇಳುತ್ತಿದ್ದರು.

ಈ. ಪ್ರವಚನ ವಿಧಾನ

ಸಾಮಾನ್ಯವಾಗಿ ಪ್ರವಾದಿವರ್ಯರ(ಸ) ಬೋಧನೆಗಳು ಪ್ರವಚನ ರೂಪದಲ್ಲಿರುತ್ತಿದ್ದುವು. ಸಾಮೂಹಿಕ ಶಿಕ್ಷಣ-ತರಬೇತಿಯಲ್ಲಿ ಅವರು ಸಾಮಾನ್ಯವಾಗಿ ಇದೇ ವಿಧಾನವನ್ನು ಅನುಸರಿಸುತ್ತಿದ್ದರು. ಅವರು ಪ್ರವಚನ ನೀಡಲು ನಿಂತಾಗ ಇಡೀ ಸಭೆಯಲ್ಲಿ ಮೌನ ಆವರಿಸಿಬಿಡುತ್ತದೆ. ಅವರು ಅತ್ಯಂತ ಸಂಕ್ಷಿಪ್ತ ಮತ್ತು ಸಮಗ್ರವಾದ

ಪ್ರವಚನ ನೀಡುತ್ತಿದ್ದರು. ಅವರ ಪ್ರವಚನವು ಅತ್ಯಂತ ಪ್ರಬಲ, ಉತ್ಸಾಹಭರಿತ ಮತ್ತು ಪ್ರಭಾವಶಾಲಿಯಾಗಿರುತ್ತಿತ್ತು. ಮಾತಿನ ವೈಖರಿಯೂ ಅತ್ಯಂತ ಉತ್ಸಾಹಭರಿತ ಮತ್ತು ಹೃದಯದಲ್ಲಿ ಆವೇಶವುಂಟು ಮಾಡುವಂತಿರುತ್ತಿತ್ತು. ಸಂದರ್ಭಾನುಸಾರ ಧ್ವನಿಯಲ್ಲಿ ಏರಿಳಿತವೂ ಆಗುತ್ತಿತ್ತು. ಅಂಗಭಾಷೆ ಮತ್ತು ಮುಖಚಹರೆಯಲ್ಲಿ ಹಾಗೂ ಕಣ್ಣುಗಳಲ್ಲಿ ಅವರ ಮನಸ್ಸಿನ ಅವಸ್ಥೆಯು ಸಂಪೂರ್ಣವಾಗಿ ವ್ಯಕ್ತವಾಗುತ್ತಿತ್ತು. ಹಾಗಾಗಿ ಕೇಳುಗರು ಅಪಾರವಾಗಿ ಪ್ರಭಾವಕ್ಕೊಳಗಾಗುತ್ತಿದ್ದರು. ಸಹಾಬಿಗಳಲ್ಲಿ ತ್ಯಾಗ-ಬಲಿದಾನ, ಆವೇಶ-ಉತ್ಸಾಹ ಮತ್ತು ಸತ್ಕರ್ಮಗಳನ್ನೆಸಗುವಲ್ಲಿ ಪ್ರವಾದಿವರ್ಯರ(ಸ) ಪ್ರವಚನಗಳು ಬಲವೊದಗಿಸುತ್ತಿದ್ದುವು. ಪ್ರವಚನ ವಿಧಾನವನ್ನು ಅನುಸರಿಸುವಾಗ ಅಧ್ಯಾಪಕನೂ ಈ ಎಲ್ಲ ಗುಣವಿಶೇಷಗಳನ್ನು ತನ್ನದಾಗಿಸಿಕೊಳ್ಳಬೇಕು.

ಸ್ಪಷ್ಟನೆ ಮತ್ತು ವಿವರಣೆ

ಪ್ರವಾದಿವರ್ಯರು(ಸ) ತಮ್ಮ ಮಾತನ್ನು ಸ್ಪಷ್ಟವಾಗಿ ಮತ್ತು ಉತ್ತಮ ರೀತಿಯಲ್ಲಿ ಮನವರಿಕೆ ಮಾಡಿಸಿಕೊಡಲಿಕ್ಕಾಗಿ ಅಗತ್ಯಾನುಸಾರ ಈ ಕೆಳಗಿನ ವಿಧಾನಗಳನ್ನು ಅನುಸರಿಸುತ್ತಿದ್ದರು:

1. ಪ್ರಾಯೋಗಿಕ ಮಾದರಿ. ಅಂದರೆ ಸ್ವತಃ ಮಾಡಿ ತೋರಿಸುತ್ತಿದ್ದರು ಅಥವಾ ಕೈಗಳಿಂದ, ಬೆರಳುಗಳಿಂದ ಸಂಜ್ಞೆ ಮಾಡಿ ತಿಳಿಸುತ್ತಿದ್ದರು.
2. ಕೆಲವೊಮ್ಮೆ ಮರಳಿನಲ್ಲಿ ಗುರುತು ಹಾಕಿ, ತಮ್ಮ ಮಾತನ್ನು ಸ್ಪಷ್ಟಪಡಿಸುತ್ತಿದ್ದರು.
3. ಯಾವುದಾದರೂ ಪರಿಚಯವಿರುವ ವಸ್ತು/ವಿಷಯದ ಉದಾಹರಣೆ ನೀಡಿ ಮನವರಿಕೆ ಮಾಡಿಸುತ್ತಿದ್ದರು.
4. ಯಾವುದಾದರೂ ಸೂಕ್ತ ಕಥನ, ಘಟನೆ, ಚಟಾಕಿ ಅಥವಾ ಉಪಮೆಯನ್ನು ಬಳಸುತ್ತಿದ್ದರು.
5. ಒಂದು ವಿಷಯವನ್ನು ಅದಕ್ಕೆ ವಿರುದ್ಧ ಇರುವ ವಿಷಯದೊಂದಿಗೆ ತುಲನೆ ಮಾಡಿ ವ್ಯತ್ಯಾಸವನ್ನು ತಿಳಿಯಪಡಿಸುತ್ತಿದ್ದರು.
6. ಅಗತ್ಯಾನುಸಾರ ಒಂದು ಮಾತನ್ನು ಆಗಾಗ ಪುನರಾವರ್ತಿಸುತ್ತಾ ಚೆನ್ನಾಗಿ ಮನವರಿಕೆ ಮಾಡಿಸಿಕೊಡುತ್ತಿದ್ದರು. ಈ ಎಲ್ಲ ವಿಧಾನಗಳಿಂದ ಅಧ್ಯಾಪಕನೂ ಸಾದ್ಯಂತ ಪ್ರಯೋಜನ ಪಡೆಯಬೇಕು.

ವಿದ್ಯಾರ್ಥಿಗಳೊಂದಿಗೆ ವರ್ತನೆ

ವಿದ್ಯಾರ್ಥಿಗಳೊಡನೆ ಉತ್ತಮ ರೀತಿಯಲ್ಲಿ ವ್ಯವಹರಿಸಬೇಕೆಂದು ಪ್ರವಾದಿವರ್ಯರು(ಸ) ಉಪದೇಶಿಸಿದ್ದಾರೆ. ಈ ವಿಷಯವಾಗಿ ಪ್ರವಾದಿವರ್ಯರ(ಸ) ಚಾರಿತ್ರ್ಯ ಈ ರೀತಿ ಇತ್ತು:

1. ಮುಗುಳ್ನಗುತ್ತಾ, ಮುಕ್ತ ಮನಸ್ಸಿನಿಂದ ವ್ಯವಹರಿಸುತ್ತಿದ್ದರು. ಮೃದುವಾಗಿ ಮತ್ತು ಪ್ರೀತಿಪೂರ್ವಕ ಮಾತನಾಡುತ್ತಿದ್ದರು.
2. ಜನರ ಆತ್ಮಗೌರವವನ್ನು ಸದಾ ಪರಿಗಣಿಸುತ್ತಿದ್ದರು. ಪ್ರವಾದಿವರ್ಯರು(ಸ) ಎಂದೂ ಯಾರನ್ನೂ ಹೀಯಾಳಿಸಿದ್ದಿಲ್ಲ ಅಥವಾ ಅವಮಾನಿಸಿದ್ದಿಲ್ಲ.
3. ಜನರ ಮನಸ್ಸಮಾಧಾನಕ್ಕಾಗಿ ವಿನೋದ ಮತ್ತು ಸಭ್ಯವಾದ ಹಾಸ್ಯವನ್ನೂ ಮಾಡುತ್ತಿದ್ದರು.
4. ಯಾರಾದರೂ ಅನಾರೋಗ್ಯಕ್ಕೀಡಾದರೆ ಕ್ಷೇಮ ವಿಚಾರಿಸಲು ಹೋಗುತ್ತಿದ್ದರು. ಆರೋಗ್ಯ ವಿಚಾರಿಸುತ್ತಿದ್ದರು, ಸಂತೈಸುತ್ತಿದ್ದರು ಮತ್ತು ಅವರಿಗಾಗಿ ಪ್ರಾರ್ಥಿಸುತ್ತಿದ್ದರು.
5. ಜನರ ಪ್ರತಿಭೆ, ಒಲವು ಮತ್ತು ಆಸಕ್ತಿಯನ್ನು ಪರಿಗಣಿಸುತ್ತಿದ್ದರು. ಚರ್ಚೆ, ಪ್ರವಚನ ಅಥವಾ ಉಪದೇಶವನ್ನು ಎಂದೂ ಜನರಿಗೆ ಭಾರವಾಗದಂತೆ ನೋಡಿಕೊಳ್ಳುತ್ತಿದ್ದರು. ಜನರಿಗೆ ಆಸಕ್ತಿ ಇಲ್ಲವೆಂದು ತೋರಿದರೆ ಒಂದೋ ಬೇರೆ ವಿಷಯಕ್ಕೆ ಹೋಗುತ್ತಿದ್ದರು ಅಥವಾ ಚರ್ಚೆಯನ್ನು ಅಲ್ಲಿಗೇ ಮೊಟಕುಗೊಳಿಸುತ್ತಿದ್ದರು.
6. ಪ್ರತಿಯೊಬ್ಬರ ಮಾತನ್ನೂ ಗಮನಗೊಟ್ಟು ಆಲಿಸುತ್ತಿದ್ದರು. ಒಳ್ಳೆಯ ಮಾತನ್ನು ಪ್ರಶಂಸಿಸುತ್ತಿದ್ದರು. ಅನುಚಿತವಾದ ಮಾತನ್ನು ತಡೆಯುತ್ತಿದ್ದರು.
7. ಯಾರಾದರೂ ಶಿಷ್ಟಾಚಾರದ ಮೇರೆಯನ್ನು ಮೀರಿ ಬಿಟ್ಟರೆ ಸಹನೆ ವಹಿಸುತ್ತಿದ್ದರು. ಅಪ್ರಿಯವಾದ ಮಾತನ್ನು ಕಡೆಗಣಿಸುತ್ತಿದ್ದರು ಮತ್ತು ಮಾತು ಬದಲಿಸುತ್ತಿದ್ದರು.
8. ಜನರ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರ ನೀಡುತ್ತಿದ್ದರು. ನಿರರ್ಥಕ ಮತ್ತು ಅಸಂಬದ್ಧ ಪ್ರಶ್ನೆ ಕೇಳುವುದರಿಂದ ತಡೆಯುತ್ತಿದ್ದರು ಅಥವಾ ಕಡೆಗಣಿಸುತ್ತಿದ್ದರು.
9. ಯಾರಿಂದಲಾದರೂ ತಪ್ಪು ಸಂಭವಿಸುತ್ತಿರುವುದು ಕಂಡರೆ ಎಂದಿನಂತೆ ತಡೆಯುತ್ತಿದ್ದರು ಅಥವಾ ಸೂಚ್ಯವಾಗಿ ಅವರ ಗಮನ ಸೆಳೆಯುತ್ತಿದ್ದರು.
10. ಜನರ ಕಷ್ಟ-ದುಃಖದಲ್ಲಿ ಸಹಾಯ ಮಾಡುತ್ತಿದ್ದರು. ಸಾಂತ್ವನ ನೀಡುತ್ತಿದ್ದರು. ನಿರ್ಗತಿಕರಿಗೆ ಸ್ವತಃ ಸಹಾಯ ಮಾಡುತ್ತಿದ್ದರು, ಸ್ಥಿತಿವಂತ ಸಹಾಬಿಗಳಿಂದಲೂ ಸಹಾಯ ಮಾಡಿಸುತ್ತಿದ್ದರು.
11. ಜನರೊಡನೆ ಮುಕ್ತವಾಗಿ ಬೆರೆಯುತ್ತಿದ್ದರು. ಅವರಿಗೆ ಸರಿಸಮಾನರಾಗಿ ಕುಳಿತುಕೊಳ್ಳುತ್ತಿದ್ದರು. ಎದೆಗಪ್ಪಿಕೊಂಡು ಪ್ರಾರ್ಥಿಸುತ್ತಿದ್ದರು. ಎರಡೂ ಭುಜಗಳ ಮೇಲೆ ಕೈಯಿಟ್ಟು ಅತ್ಯಂತ ಪ್ರೀತಿಯಿಂದ ಉಪದೇಶಿಸುತ್ತಿದ್ದರು. ಕೆಲವೊಮ್ಮೆ ತಮ್ಮ ಊಟದಲ್ಲಿ ಪಾಲುಗೊಳಿಸುತ್ತಿದ್ದರು.
12. ಯಾರಾದರೂ ಯಾವುದೇ ರೀತಿಯ ಸಾಮಾನ್ಯವಾದ ಸೇವೆ ಸಲ್ಲಿಸಿದರೂ ಅಪಾರವಾಗಿ ಕೃತಜ್ಞತೆ ಸಲ್ಲಿಸುತ್ತಿದ್ದರು. ಅವರಿಗಾಗಿ ಪ್ರಾರ್ಥಿಸುತ್ತಿದ್ದರು.
13. ಸಭೆಯಲ್ಲಿ ಪ್ರತಿಯೋರ್ವ ವ್ಯಕ್ತಿಯ ಕಡೆಗೂ ಗಮನವೀಯುತ್ತಿದ್ದರು. ಯಾರನ್ನೂ ಕಡೆಗಣಿಸಿದ ಭಾವ ಬರದಂತೆ ನೋಡಿಕೊಳ್ಳುತ್ತಿದ್ದರು. ಇದರಿಂದಾಗಿ

ಪ್ರವಾದಿವರ್ಯರಿಗೆ(ಸ) ನನ್ನ ಮೇಲೆ ಅತಿ ಹೆಚ್ಚು ಪ್ರೀತಿ ಇದೆ ಎಂದು ಪ್ರತಿಯೊಬ್ಬರೂ ಭಾವಿಸುತ್ತಿದ್ದರು.

14. ಮಕ್ಕಳೊಂದಿಗಿನ ವರ್ತನೆಯಂತೂ ಅಪಾರ ಪ್ರೀತಿ-ಮಮತೆಯಿಂದ ಕೂಡಿರುತ್ತಿತ್ತು. ಪ್ರವಾದಿವರ್ಯರು(ಸ) ಮಕ್ಕಳನ್ನು ಕಂಡು ಬಹಳ ಸಂತೋಷಪಡುತ್ತಿದ್ದರು. ಸ್ವತಃ ಸಲಾಮ್ ಹೇಳುತ್ತಿದ್ದರು. ಅವರ ತಲೆ ನೇವರಿಸುತ್ತಿದ್ದರು. ಮಡಿಲಲ್ಲಿ ಕುಳ್ಳಿರಿಸುತ್ತಿದ್ದರು. ಭುಜದ ಮೇಲಿರಿಸುತ್ತಿದ್ದರು. ಪ್ರೀತಿಸುತ್ತಿದ್ದರು, ಪ್ರಾರ್ಥಿಸುತ್ತಿದ್ದರು. ಮಕ್ಕಳಿಗೆ ಆಸಕ್ತಿಯಿರುವಂತಹ ಮಾತನ್ನಾಡುತ್ತಿದ್ದರು. ಮಕ್ಕಳನ್ನು ಸರತಿಯಲ್ಲಿ ನಿಲ್ಲಿಸಿ ಓಟದ ಸ್ಪರ್ಧೆ ನಡೆಸುತ್ತಿದ್ದರು. ಮಕ್ಕಳು ಓಡಿ ಬಂದು ಹೊಟ್ಟೆ ಮತ್ತು ಎದೆ ಮೇಲೆ ಬಿದ್ದರೆ ಬಹಳ ಖುಷಿ ಪ್ರಕಟಿಸುತ್ತಿದ್ದರು. ತಮಾಷೆಯ ಮಾತುಗಳನ್ನಾಡುತ್ತಿದ್ದರು. ಊಟದಲ್ಲಿ ಹತ್ತಿರ ಸೇರಿಸುತ್ತಿದ್ದರು. ಪ್ರೀತಿಯಿಂದ ಶಿಷ್ಟಾಚಾರಗಳನ್ನು ಕಲಿಸುತ್ತಿದ್ದರು. ದಾರಿಯಲ್ಲಿ ಮಕ್ಕಳು ಸಿಕ್ಕಿದರೆ ತಮ್ಮ ಸವಾರಿಯಲ್ಲಿ ಕೂರಿಸುತ್ತಿದ್ದರು. ಮಕ್ಕಳು ತಪ್ಪೆಸಗಿದರೆ ತಿಳಿ ಹೇಳಿ ಕ್ಷಮಿಸುತ್ತಿದ್ದರು. ಮಕ್ಕಳಿಗೆ ಹೊಡೆಯುವುದರಿಂದ ಜನರನ್ನು ತಡೆಯುತ್ತಿದ್ದರು. ಅವರ ಕುರಿತಾಗಿ ಕ್ಷಮಾಗುಣವನ್ನು ಬೆಳೆಸಬೇಕೆಂದು ಉಪದೇಶಿಸುತ್ತಿದ್ದರು. ಯುದ್ಧ ವೇಳೆಯಲ್ಲಿ ಕೆಲವು ಸಹಾಬಿಗಳು ಶತ್ರು ಪಾಳಯದ ಕೆಲವು ಮಕ್ಕಳನ್ನು ವಧಿಸಿದ್ದರು. ಪ್ರವಾದಿವರ್ಯರಿಗೆ(ಸ) ತಿಳಿದಾಗ ತೀವ್ರವಾಗಿ ದುಃಖಿತರಾದರು. ಅವರ(ಸ) ಮುಖದ ವರ್ಣವೇ ಬದಲಾಯಿತು. ಕೋಪದಿಂದಲೇ ಹೇಳಿದರು, ''(ಆ ಮಕ್ಕಳು) ನಿಮಗಿಂತ ಉತ್ತಮರು. ಮಕ್ಕಳನ್ನು ಎಂದಿಗೂ ವಧಿಸಬೇಡಿರಿ.''

15. ಒಂದು ಮಗುವನ್ನು ''ಮಕ್ಕಳಂತೂ ಸ್ವರ್ಗದ ಪುಷ್ಪವಾಗಿದ್ದಾರೆ'' ಎಂದು ಹೇಳಿದರು.

16. ಮಕ್ಕಳೂ ಪ್ರವಾದಿವರ್ಯರನ್ನು(ಸ) ಬಹಳ ಪ್ರೀತಿಸುತ್ತಿದ್ದರು. ಗಲ್ಲಿ-ಕೇರಿಗಳಲ್ಲಿ ಅವರನ್ನು(ಸ) ಕಂಡಾಗ ಖುಷಿಯಿಂದ ಕುಣಿದು ಕುಪ್ಪಳಿಸುತ್ತಿದ್ದರು. ಓಡೋಡಿ ಬಂದು ಪ್ರವಾದಿವರ್ಯರಿಗೆ(ಸ) ಅಂಟಿ ಬಿಡುತ್ತಿದ್ದರು. ಆನಂದತುಂದಿಲರಾಗುತ್ತಿದ್ದರು.

ಪ್ರವಾದಿವರ್ಯರ(ಸ) ಈ ಶ್ರೇಷ್ಠ ಶಿಕ್ಷಣ ವಿಧಾನ ಮತ್ತು ಜನರೊಂದಿಗಿನ ಅವರ ವರ್ತನೆಯ ಕಾರಣವಾಗಿಯೇ ಸಹಾಬಿಗಳಲ್ಲಿ ವಿದ್ಯೆ ಗಳಿಕೆಯ ಬಗ್ಗೆ ಅಸಾಮಾನ್ಯ ಒಲವು ಹುಟ್ಟಿಕೊಂಡಿತ್ತು. ಪ್ರವಾದಿವರ್ಯರ(ಸ) ಪ್ರತಿಯೊಂದು ಮಾತನ್ನೂ ಅವರು ಗಮನಕೊಟ್ಟು ಆಲಿಸಿದರು. ಅತ್ಯಂತ ನಿಷ್ಕಳಂಕತೆಯಿಂದ ಅದನ್ನು ಪಾಲಿಸಿದರು. ಪ್ರವಾದಿ ವಚನವನ್ನು ಹೃದ್ಯಸ್ಥಗೊಳಿಸಿದರು. ಜೀವನಪೂರ್ತಿ ನೆನಪಿನಲ್ಲಿಟ್ಟರು ಮತ್ತು ಪ್ರವಾದಿವರ್ಯರ(ಸ) ಶಿಕ್ಷಣವನ್ನು ಇತರರಿಗೆ ತಲುಪಿಸಲು ತನು-ಮನ-ಧನದಿಂದ ಶ್ರಮಿಸಿದರು. ಆ ಹಾದಿಯಲ್ಲಿ ಎಲ್ಲ ರೀತಿಯ ಕಷ್ಟ-ದುಃಖ ಸಹಿಸಿದರು, ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸಿದರು.

ಎಲ್ಲ ಸ್ಥಿತಿಯಲ್ಲೂ ಸತ್ಯದಲ್ಲೇ ಅಚಲರಾಗಿ ನಿಂತರು ಮತ್ತು ಸತ್ಯ ವಚನದ ಉತ್ಥಾನಕ್ಕಾಗಿ ರಕ್ತವನ್ನೇ ಬೆವರಾಗಿಸಿದರು. ಅಲ್ಲಾಹ್ ಅವರಿಂದ ಸಂತುಷ್ಟನಾಗಲಿ.

ಅಧ್ಯಾಪಕರೂ ತಮ್ಮಲ್ಲಿ ಇಂತಹ ಗುಣ ವಿಶೇಷಗಳನ್ನು ಬೆಳೆಸಿಕೊಂಡರೆ ಖಂಡಿತವಾಗಿಯೂ ಪರಿಸ್ಥಿತಿ ಬದಲಾಗಬಹುದು.

◆ ◆ ◆

ಅಧ್ಯಾಯ - 7

ಶಿಕ್ಷಣದ ಆಧುನಿಕ ಒಲವುಗಳು

''ಯುಕ್ತಿ ಮತ್ತು ಬುದ್ಧಿವಂತಿಕೆಯ ಮಾತುಗಳು ಯುಕ್ತಿವಂತ ಮತ್ತು ಬುದ್ಧಿವಂತ ವ್ಯಕ್ತಿಯ ಕಳೆದು ಹೋದ ಸೊತ್ತುಗಳಾಗಿವೆ. ಆದನ್ನು ಎಲ್ಲಿ ಕಂಡರೂ ಗಳಿಸಲು ಅರ್ಹನು (ಅವನು ಆದನ್ನು ಗಳಿಸಬೇಕು).'' (ತಿರ್ಮಿದಿ, ಇಬ್ನುಮಾಜಃ)

ಜಗತ್ತಿನ ಹಲವು ದೇಶಗಳಲ್ಲಿ ಇಂದು ಚಾಲ್ತಿಯಲ್ಲಿರುವ ಶೈಕ್ಷಣಿಕ ಸಿದ್ಧಾಂತ ಮತ್ತು ಅಲ್ಲಿ ಪ್ರಾಬಲ್ಯ ಪಡೆದಿರುವ ಶಿಕ್ಷಣ ವ್ಯವಸ್ಥೆಗಳು ಮೂಲಭೂತವಾದ ಕೊರತೆಗಳ ಕಾರಣದಿಂದಾಗಿ ಸುಧಾರಣೆಗೆ ಅರ್ಹವಾಗಿವೆಯೇನೋ ಸರಿ. ಆದರೆ ಸುದೀರ್ಘವಾದ ಅಧ್ಯಯನ ಮತ್ತು ಅನುಭವ ಹಾಗೂ ಮಕ್ಕಳ ಮನಃಶಾಸ್ತ್ರದ ಅಧ್ಯಯನದ ಬೆಳಕಿನಲ್ಲಿ ಕೆಲವು ಪ್ರಯೋಜನಕಾರಿಯಾದ ಒಲವುಗಳೂ ಕಂಡುಬಂದಿವೆ. ಅವು ಇಸ್ಲಾಮಿ ಶಿಕ್ಷಣದೊಂದಿಗೆ ಸಂಘರ್ಷಿಸುವುದೂ ಇಲ್ಲ. ಆದ್ದರಿಂದ ಒಳಿತನ್ನು ಎಲ್ಲಿ ಕಂಡರೂ ಸ್ವೀಕರಿಸಬೇಕೆಂಬ ನೀತಿಯಂತೆ, ಅವುಗಳನ್ನು ಸ್ವೀಕರಿಸಲು ಮುಂದಾಗಬೇಕು. ಉದಾಹರಣೆಗೆ:

1. ಶಿಕ್ಷಣದ ಉದ್ದೇಶ ಮತ್ತು ವ್ಯಾಖ್ಯೆಯನ್ನು ಓದು-ಬರೆಹಕ್ಕೆ ಸೀಮಿತಗೊಳಿಸುವ ಅಥವಾ ಕೆಲವು ಪುಸ್ತಕ, ಪ್ರಬಂಧ ಮತ್ತು ಕಲೆಯಲ್ಲಿ ವಿದ್ಯಾರ್ಥಿಗಳನ್ನು ಪರಿಣತಗೊಳಿಸುವ ಬದಲು ಅದರಲ್ಲಿ ಇನ್ನಷ್ಟು ವಿಶಾಲತೆಯನ್ನುಂಟು ಮಾಡುವುದು. ಅಂದರೆ...

   ಅ. ಶಿಕ್ಷಣದ ಮುಖಾಂತರ ವಿದ್ಯಾರ್ಥಿಯ ವ್ಯಕ್ತಿತ್ವದ (ಬೌದ್ಧಿಕ, ದೈಹಿಕ, ವ್ಯಾವಹಾರಿಕ ಮತ್ತು ನೈತಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ) ಇತ್ಯಾದಿ ಎಲ್ಲ ರಂಗಗಳಲ್ಲಿ ಸರ್ವತೋಮುಖ ಬೆಳವಣಿಗೆ ಮತ್ತು ಸಂತುಲಿತ ಪ್ರಗತಿ.

   ಆ. ವೈಯಕ್ತಿಕ ಮತ್ತು ಸಾಮೂಹಿಕ ಎರಡೂ ನಿಟ್ಟಿನಲ್ಲಿ ವಿದ್ಯಾರ್ಥಿಯ ಮೇಲಿರುವ ಹೊಣೆಗಾರಿಕೆಗಳನ್ನು ಅತ್ಯುತ್ತಮ ರೀತಿಯಲ್ಲಿ ನೆರವೇರಿಸುವ ಮತ್ತು ಒಟ್ಟು ಸೇರಿ ಕೆಲಸ ಮಾಡುವ ಸಾಮರ್ಥ್ಯ.

   ಇ. ಆತ್ಮವಿಶ್ವಾಸದ ಭಾವನೆ, ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ಮತ್ತು ದೈನಂದಿನ ಕೆಲಸ ಕಾರ್ಯಗಳನ್ನು ನಿಸ್ಸಂಕೋಚವಾಗಿ ಮಾಡುವ ಶಕ್ತಿ.

   ಈ. ಬಿಡುವಿನ ವೇಳೆಯನ್ನು ಪ್ರಯೋಜನಕಾರಿ ಹವ್ಯಾಸದಲ್ಲಿ ತೊಡಗಿಸುವ ಅಭ್ಯಾಸ.

ಊ. ವಿದ್ಯಾರ್ಥಿ-ಶಿಕ್ಷಕರೀರ್ವರಲ್ಲೂ ಸಂಶೋಧನಾತ್ಮಕ ಉತ್ಸಾಹ ಮತ್ತು ಇನ್ನಷ್ಟು ಮಾಹಿತಿಗಳನ್ನು ತಿಳಿದುಕೊಳ್ಳುವ ವಾಂಛೆ.

2. ಪಠ್ಯ, ಪಾಠಗಳು ಅಥವಾ ಪಾಠಪುಸ್ತಕಗಳ ಬದಲು ಮಗುವಿಗೆ ಕೇಂದ್ರಸ್ಥಾನ ಮತ್ತು ಮೂಲಭೂತ ಮಹತ್ವ ನೀಡಬೇಕು. ಅಂದರೆ...

ಅ. ಶಿಕ್ಷಣವು ಮಗುವಿಗಾಗಿರುವುದೇ ಹೊರತು ಮಗು ಶಿಕ್ಷಣಕ್ಕಾಗಿರುವುದಲ್ಲ ಎಂಬುದನ್ನು ಸದಾ ಜ್ಞಾಪಕದಲ್ಲಿಡಬೇಕು. ಸಕಲ ಶೈಕ್ಷಣಿಕ ಪ್ರಯತ್ನಗಳು ಮಗುವಿಗೆ ವಿವಿಧ ಸ್ತರಗಳಲ್ಲಿ ಪ್ರಯೋಜನ ಒದಗಿಸುವುದಕ್ಕಿರಬೇಕು. ಮಗುವನ್ನು ಶಿಕ್ಷಣಕ್ಕಾಗಿ ಬಲಿ ನೀಡುವಂತಾಗಬಾರದು.

ಆ. ಭವಿಷ್ಯ ರೂಪಿಸುವ ಚಿಂತೆಯಲ್ಲಿ ಮಕ್ಕಳ ಈಗಿನ ಒಲವು-ಆಸಕ್ತಿಗಳನ್ನು ತೀರಾ ಕಡೆಗಣಿಸುವಂತಾಗಬಾರದು. ಅನ್ಯಥಾ ಅದರ ಪರಿಣಾಮ ಘೋರವಾಗಿರುವುದು ಮತ್ತು ಮಗುವನ್ನು ಈಗಿನ ಆನಂದದಿಂದ ವಂಚಿತಗೊಳಿಸಿ ಎಸಗುವ ಯಾವ ಪ್ರಯತ್ನವೂ ಫಲಕಾರಿಯಾಗದು. ಬದಲಾಗಿ ಮಗುವಿನ ವ್ಯಕ್ತಿತ್ವದ ಹಲವು ಮಗ್ಗುಲುಗಳು ಪ್ರತಿಕೂಲ ಪ್ರಭಾವಕ್ಕೊಳಗಾಗಬಹುದು ಮತ್ತು ಸಂತುಲಿತ ಪ್ರಗತಿ ಸಾಧಿತವಾಗಲಾರದು.

ಇ. ಮಗುವಿನ ಪ್ರಾಯ, ಬೌದ್ಧಿಕ ಸಾಮರ್ಥ್ಯ, ದೈಹಿಕ ಸ್ಥಿತಿ, ಅದರ ಅಗತ್ಯಗಳು ಮತ್ತು ಕೌಟುಂಬಿಕ ಪರಿಸರ ಎಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡೇ ಶಿಕ್ಷಣ ನೀಡಬೇಕು.

ಈ. ವಿದ್ಯಾರ್ಥಿಗಳ ನಡುವಿನ ವೈಯಕ್ತಿಕ ವ್ಯತ್ಯಾಸ, ಅವರ ಖಾಸಗಿ ಒಲವುಗಳು ಆಸಕ್ತಿಗಳನ್ನೂ ದೃಷ್ಟಿಯಲ್ಲಿರಿಸಬೇಕು. ಇಡೀ ತರಗತಿಯನ್ನು ಪರಿಗಣಿಸುವ ಬದಲು, ಪ್ರತಿ ಮಗುವನ್ನು ಪ್ರತ್ಯೇಕ ಅಸ್ತಿತ್ವ ಎಂದು ಒಪ್ಪಿಕೊಳ್ಳಬೇಕು. ಮಗುವಿನ ವೈಯಕ್ತಿಕತೆಯನ್ನು ಪರಿಗಣಿಸಬೇಕು ಮತ್ತು ಅದರ ವ್ಯಕ್ತಿತ್ವವನ್ನು ಗೌರವಿಸಬೇಕು. ಒಟ್ಟಿನಲ್ಲಿ ಇಡೀ ತರಗತಿಯನ್ನು ಒಂದೇ ದಿಕ್ಕಿಗೆ ಅಟ್ಟುವುದು ಸರಿಯಲ್ಲ.

ಉ. ವಿದ್ಯಾರ್ಥಿಯ ಸ್ವಾಭಾವಿಕ ಸಾಮರ್ಥ್ಯ ಮತ್ತು ಪ್ರಾಕೃತಿಕ ಒಲವುಗಳನ್ನು ಸರಿಯಾದ ದಿಕ್ಕಿನಲ್ಲಿ ನಡೆಸುವ ಅವಕಾಶವನ್ನು ನೀಡಬೇಕು.

3. ಮಕ್ಕಳ ಶಿಕ್ಷಣ-ತರಬೇತಿಯ ಪಠ್ಯವನ್ನು ಸಿದ್ಧಪಡಿಸುವಾಗ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಬೇಕು.

ಅ. ಮಗುವಿನ ಪ್ರಾಯ, ಅದರ ಸ್ವಾಭಾವಿಕ ಶಕ್ತಿ, ಒಲವು, ಭಾವನೆ, ಆಗ್ರಹ, ಅಭಿಲಾಷೆ ಮತ್ತು ದೈಹಿಕ-ಬೌದ್ಧಿಕ ಪ್ರತಿಭೆ.

ಆ. ಮಕ್ಕಳ ಪಾಲನೆ-ಪೋಷಣೆಯ ವಿವಿಧ ಹಂತಗಳು ಮತ್ತು ಪ್ರತಿಯೊಂದು ಹಂತದ ಬೌದ್ಧಿಕ ವಿಶೇಷತೆಗಳು, ಅವರ ಆಸಕ್ತಿಗಳು ಮತ್ತು ಅಗತ್ಯಗಳು.

ಇ. ಸಾಮಾಜಿಕ ಮತ್ತು ನೈಸರ್ಗಿಕ ಪರಿಸರ ಹಾಗೂ ಅದರಲ್ಲಿ ಹೊಂದಿಕೊಳ್ಳಲು ಇರುವ ಸಾಮರ್ಥ್ಯ ಮತ್ತು ಗುಣಗಳು.

ಈ. ದೇಶ ಮತ್ತು ಸಮುದಾಯದ ಅಗತ್ಯಗಳು, ಅವುಗಳ ಉದ್ದೇಶ ಮತ್ತು ಸಾಂಸ್ಕೃತಿಕ ಕೊಡುಗೆಗಳು.

ಉ. ಮಗುವಿನ ವ್ಯಕ್ತಿತ್ವದ ಎಲ್ಲ ಮಜಲುಗಳಲ್ಲಿ ಸರ್ವಾಂಗೀಣ ಪೋಷಣೆ ಮತ್ತು ತರಬೇತಿಗಾಗಿ ಶೀರ್ಷಿಕೆಗಳು, ಪಾಠಗಳು, ಹವ್ಯಾಸಗಳು ಮತ್ತು ಚಟುವಟಿಕೆಗಳು.

ಊ. ಮಗುವಿನ ಭಾವೀ ಜೀವನಕ್ಕಾಗಿ ಸಿದ್ಧಗೊಳಿಸಲು ಸಹಾಯಕವಾಗುವ ಅಂಶಗಳು.

4. ಶಿಕ್ಷಣವು ಮಕ್ಕಳಿಗೆ ಸುಲಭ, ಆಸಕ್ತಿದಾಯಕ ಮತ್ತು ಪ್ರಭಾವಶಾಲಿಯಾಗುವಂತಹ ಬೋಧನಾ ವಿಧಾನವನ್ನು ಅನುಸರಿಸಬೇಕು. ಅಂದರೆ...

ಅ. ಆಟದಲ್ಲಿಯೇ ಹಲವು ವಿಷಯಗಳನ್ನು ಕಲಿಸುವುದು. (ನಲಿ-ಕಲಿ)

ಆ. ಕಥೆ, ಸಂಭಾಷಣೆ ಮತ್ತು ನಾಟಕಗಳ ಮೂಲಕ ಕಲಿಸುವುದು.

ಇ. ಪ್ರತಿಯೊಂದು ಪಾಠಕ್ಕೆ ಸಂಬಂಧಿಸಿದ ಚಿತ್ರಗಳು, ಚಾರ್ಟ್‌ಗಳು ಮತ್ತಿತರ ಹೆಚ್ಚಿನ ವಿವರಣೆಯುಳ್ಳ ಶೈಕ್ಷಣಿಕ ವಸ್ತುಗಳನ್ನು ಬಳಸುವುದು. ಆ ಮೂಲಕ ಪಾಠವನ್ನು ಹೆಚ್ಚು ಆಸಕ್ತಿದಾಯಕಗೊಳಿಸುವುದು. ಭಾವನೆಗಳು ಸ್ಪಷ್ಟವಾಗಿರಬೇಕು ಮತ್ತು ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ಬಳಸಿ ಹೆಚ್ಚು ಸ್ಥಿರವಾದ ಮಾಹಿತಿಗಳನ್ನು ಗಳಿಸುವ ಅವಕಾಶ ಒದಗಿಸಬೇಕು.

ಈ. ಪ್ರಯೋಜನಕಾರಿ ಮತ್ತು ಆಸಕ್ತಿದಾಯಕ ಹವ್ಯಾಸಗಳು ಹಾಗೂ ಯೋಜನೆಗಳನ್ನು ರೂಪಿಸುವ ಮೂಲಕ ಸೃಜನಾತ್ಮಕ ಪ್ರತಿಭೆಗಳನ್ನು ಉದ್ದೀಪಿಸಬೇಕು. ಹಾಗೆಯೇ ಸ್ವಯಂ ಅನುಭವ ಹೊಂದಿ ಕಲಿಯುವ ಸದವಕಾಶವನ್ನು ಸಾಧ್ಯಂತ ಒದಗಿಸಬೇಕು.

ಉ. ಮಕ್ಕಳು ತಮ್ಮ ಕಷ್ಟ ಮತ್ತು ಸಮಸ್ಯೆಗಳನ್ನು ಮುಕ್ತವಾಗಿ ಹೇಳುವಂತಹ ವಾತಾವರಣವನ್ನು ತರಗತಿಯಲ್ಲಿ ಉಂಟು ಮಾಡಬೇಕು.

ಊ. ಭಾವನೆ ಮತ್ತು ಚಿಂತನೆಗಳನ್ನು ಪ್ರಕಟಿಸುವ ವಿವಿಧ ಮಾಧ್ಯಮಗಳನ್ನು ಬಳಸುವ ಶಿಷ್ಟಾಚಾರವನ್ನು ಕಲಿಸಬೇಕು. ಅಂದರೆ ಮೌಖಿಕ ಅಥವಾ ಲಿಖಿತ ರೂಪದಲ್ಲಿ ಪ್ರಬಂಧ, ಸಾಹಿತ್ಯ, ಭಾಷಣ, ಕಲೆ ಇತ್ಯಾದಿಗಳ ಮೂಲಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತಾಗಬೇಕು.

ಋ. ಅಧ್ಯಾಪಕ ತನ್ನನ್ನು ಸರ್ವಾಧಿಕಾರಿ ಎಂದು ಭಾವಿಸುವ ಬದಲು ತನ್ನನ್ನು ಮಕ್ಕಳ ಸಲಹೆಗಾರ, ಸಹಾಯಕ ಮತ್ತು ಸಂರಕ್ಷಕನಾಗಿ ನಿರೂಪಿಸಬೇಕು.

ಎ. ಪಾಠವನ್ನು ಮುಂದುವರಿಸಲು ವಿದ್ಯಾರ್ಥಿಗಳ ಸಹಕಾರವನ್ನು ಪಡೆಯುವುದು. ತರಗತಿಗೆ ಇಡೀ ಮಾಹಿತಿಗಳನ್ನು ನೀವೇ ನೀಡುವ ಬದಲು ಅವರಾಗಿಯೇ ಸ್ವತಃ ಮಾಹಿತಿ ಪಡೆಯಲು ಪ್ರಯತ್ನಿಸುವಂತಹ ಪರಿಸ್ಥಿತಿಯನ್ನುಂಟು ಮಾಡಬೇಕು.

ಏ. ಪ್ರಬಂಧ ಮತ್ತು ಪಾಠಗಳನ್ನು ಪರಸ್ಪರ ಸೇರಿಸಿ ಕಲಿಸಲು ಪ್ರಯತ್ನಿಸಬೇಕು.

ಸಾಮಾಜಿಕ ಮತ್ತು ನೈಸರ್ಗಿಕ ಪರಿಸರ ಹಾಗೂ ಮಕ್ಕಳ ದೈನಂದಿನ ಜೀವನದೊಂದಿಗೂ ಅದನ್ನು ಸೇರಿಸಬೇಕು.

ಐ. ಶಿಕ್ಷಣವನ್ನು ಮಕ್ಕಳ ಮಾತೃಭಾಷೆಯಲ್ಲಿ ನೀಡಬೇಕು.

5. ಪಾಠಶಾಲೆಯ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ, ಸಮಾನತೆ, ಪ್ರಜಾತಂತ್ರ ಮತ್ತು ಸಹಕಾರ ಮೇಳೈಸಬೇಕು. ಅಂದರೆ,

ಅ. ಶಾಲೆಯ ವ್ಯವಸ್ಥೆಯಲ್ಲಿ ಅಧ್ಯಾಪಕರ ಸಲಹೆಗಳಿಗೂ ಮಹತ್ವ ನೀಡಬೇಕು.

ಆ. ಅಧ್ಯಾಪಕರು ಪರಸ್ಪರ ಮತ್ತು ವಿದ್ಯಾರ್ಥಿಗಳು ಪರಸ್ಪರ ಸಮಾನತೆ ಹಾಗೂ ಸಹೋದರತೆಯ ವಾತಾವರಣವನ್ನು ಅನುಭವಿಸುವಂತಾಗಬೇಕು. ಯಾವುದೇ ರೀತಿಯ ಪರಕೀಯತೆ ಮತ್ತು ತಾರತಮ್ಯ ತೋರುವಂತಾಗಬಾರದು.

ಇ. ಬಾಹ್ಯ ಒತ್ತಡದ ಬದಲು ಆತ್ಮ ಸಂಯಮಕ್ಕೆ ಹೆಚ್ಚು ಒತ್ತು ಕೊಡಬೇಕು.

ಈ. ತಂಡವಾಗಿ ಕೆಲಸ ಮಾಡುವ (Team Work) ಅಭ್ಯಾಸ ಹುಟ್ಟಿಸಬೇಕು ಮತ್ತು ವಿವಿಧ ರೀತಿಯ ಕೆಲಸ-ಹೊಣೆಗಾರಿಕೆ ವಹಿಸಿಕೊಳ್ಳಲು ತಂಡ ರೂಪಿಸಬೇಕು. ಈ ಮೂಲಕ ಅವರು ತಮ್ಮ ನಾಯಕನ (Monitor) ಮೇಲ್ನೋಟದಲ್ಲಿ ಕೆಲಸ ಮಾಡಲು ಕಲಿಯುವಂತಾಗಬೇಕು.

ಉ. ಪೋಷಕರ ಸಹಕಾರ ಪಡೆಯಲು ಪ್ರಯತ್ನಿಸಬೇಕು.

ಊ. ಶಿಕ್ಷಣವು ಸಾಧ್ಯಂತ ಸಾರ್ವತ್ರಿಕ ಮತ್ತು ಕಡ್ಡಾಯವಾಗಬೇಕು.

◆ ◆ ◆

ಅಧ್ಯಾಯ-8

ಮಗು ಮತ್ತು ಅದರ ಸ್ವಭಾವ

ಮಕ್ಕಳನ್ನು ಎಂದಿಗೂ ಹಿರಿಯರೊಂದಿಗೆ ಹೋಲಿಸಬೇಡಿರಿ. ಅವರ ಜಗತ್ತೇ ಭಿನ್ನ ಮತ್ತು ಅಪೂರ್ವವಾಗಿರುತ್ತದೆ. ಮಕ್ಕಳ ಜೀವನದ ಮೇಲೆ ದೂರಗಾಮಿ ಮತ್ತು ಗಾಢ ಪ್ರಭಾವ ಬೀರುವಂತಹ ಎಷ್ಟೋ ಘಟನೆಗಳು ಅವರ ಮಟ್ಟಿಗೆ ಯಾವುದೇ ಪ್ರಾಮುಖ್ಯವಲ್ಲ, ಅವು ಅವರ ಮನರಂಜನೆ ಮತ್ತು ಸಂತೋಷದ ವಸ್ತುಗಳಾಗಿರುತ್ತವೆ ಎಂಬುದನ್ನು ನಾವು ನಿತ್ಯ ನೋಡುತ್ತಿರುತ್ತೇವೆ. ಮನೆಯಲ್ಲಿ ಬೆಂಕಿ ಅನಾಹುತವಾದರೆ, ಕಳ್ಳತನವಾದರೆ ಅಥವಾ ಮನೆಯ ಹಿರಿಯರಾರಾದರೂ ನಿಧನರಾದರೆ, ಮಕ್ಕಳು ಇತರರನ್ನು ನೋಡಿ ತಾತ್ಕಾಲಿಕವಾಗಿ ಕಣ್ಣೀರಿಳಿಸಬಹುದು. ಆದರೆ ನಿಜವಾಗಿ ಅಂತಹ ಸಂದರ್ಭಗಳಲ್ಲಿ ಬಂಧು-ಮಿತ್ರಾದಿಗಳು, ನೆರೆಕರೆಯವರು ಹಾಗೂ ಅವರ ಮಕ್ಕಳು ಬಂದು ಸೇರುವಾಗ ಉಂಟಾಗುವ ಗೌಜುಗದ್ದಲದಿಂದ ರಂಜಿತರಾಗುತ್ತಾರೆ. ಇಂತಹ ಘಟನೆಗಳ ಸಂದರ್ಭದಲ್ಲಿ ಮಕ್ಕಳ ಚಟುವಟಿಕೆಗಳನ್ನು ಗಮನಿಸಿ ನೋಡಿ... ಆ ಘಟನೆಗಳಿಂದ ಅವರ ಮನಸ್ಸಿಗೆ ವಿಶೇಷವಾದ ಯಾವುದೇ ಪ್ರಭಾವ ಉಂಟಾಗುವುದಿಲ್ಲ ಎಂಬುದನ್ನು ಕಂಡುಕೊಳ್ಳಬಲ್ಲಿರಿ. ಅವಕಾಶ ಸಿಕ್ಕರೆ ಅವರು ಸಂತೋಷದಿಂದ ಕುಣಿದಾಡಲು, ಗುಲ್ಲುಗದ್ದಲವೆಬ್ಬಿಸಲು ತೊಡಗುವರು. ವಾಸ್ತವದಲ್ಲಿ ಅದು ಅವರ ನೈಸರ್ಗಿಕ ಸ್ವಭಾವವಾಗಿದೆ.

ಮಕ್ಕಳು ವಸ್ತುತಃ ಬುದ್ಧಿವಂತ ಅಸ್ತಿತ್ವವಾಗಿದ್ದಾರೆ. ಅವರಲ್ಲಿ ವಿವಿಧ ರೀತಿಯ ಶಕ್ತಿ-ಸಾಮರ್ಥ್ಯಗಳಿರುತ್ತವೆ. ಅವರಲ್ಲಿ ಕೆಲವು ಮೂಲಭೂತ ಆಕಾಂಕ್ಷೆಗಳೂ, ಭಾವನೆಗಳೂ ಇರುತ್ತವೆ. ಅವರಲ್ಲಿ ತಮ್ಮದೇ ಆದ ಇಷ್ಟಾನಿಷ್ಟಗಳು, ಆಸಕ್ತಿಗಳು ಮತ್ತು ಇರಾದೆಗಳೂ ಇರುತ್ತವೆ. ಅವರಲ್ಲಿ ಅರ್ಥೈಸುವ, ತಿಳಿಯುವ, ಅನುಭವಿಸುವ ಮತ್ತು ಪ್ರಭಾವಿತಗೊಳ್ಳುವ, ಕಲಿಯುವ ಮತ್ತು ಅಭ್ಯಾಸ ಬೆಳೆಸುವ, ತಲ್ಲೀನರಾಗುವ, ಕಂಠಪಾಠ ಮಾಡುವ, ಪುನರಾವರ್ತಿಸುವ ವಿಶಿಷ್ಟ ಕೌಶಲ್ಯವಿರುತ್ತದೆ. ಅವರು ಪ್ರೌಢತೆಗೆ ಕಾಲಿಡುವ ಮತ್ತು ಹಿರಿಯರ ಲೋಕವನ್ನು ಪ್ರವೇಶಿಸುವ ಹೊತ್ತಿಗೆ ಹಲವು ಹಂತಗಳನ್ನು ದಾಟಿರುತ್ತಾರೆ. ಪ್ರತಿಯೊಂದು ಹಂತಕ್ಕೂ ಕೆಲವೊಂದು ವಿಶೇಷತೆಗಳಿರುತ್ತವೆ. ಆ ವಿಶೇಷತೆಗಳ ಕೆಲವು

ಮೂಲಭೂತ ಬೇಡಿಕೆಗಳು ಮತ್ತು ಶಿಕ್ಷಣ-ತರಬೇತಿಯ ಕುರಿತಾದ ಪ್ರಯತ್ನಗಳೇನಿವೆಯೋ ಅವೆಲ್ಲದರ ಬಗ್ಗೆ ಮಾಹಿತಿಗಳನ್ನು ಗಳಿಸಿ ಅವುಗಳನ್ನು ಸಂಪೂರ್ಣ ಪರಿಗಣನೆಗೆ ತೆಗೆದುಕೊಂಡರೆ ಮಾತ್ರವೇ ಫಲಪ್ರದವಾಗುವವು.

ಮಕ್ಕಳಿಗೆ ಕೆಲವು ಶಕ್ತಿ-ಸಾಮರ್ಥ್ಯಗಳು ಹುಟ್ಟಿನಿಂದಲೇ ದೊರೆತಿರುತ್ತವೆ. ಇನ್ನು ಕೆಲವನ್ನು ಅವರು ಸ್ವಯಂ ಆರ್ಜಿಸಿಕೊಳ್ಳುತ್ತಾರೆ ಅಥವಾ ಇತರರ ಪ್ರಯತ್ನಗಳಿಂದ ಗಳಿಸಿಕೊಳ್ಳುತ್ತಾರೆ. ಹುಟ್ಟಿನಿಂದ ದೊರೆಯುವ ಶಕ್ತಿ-ಸಾಮರ್ಥ್ಯಗಳನ್ನು ಹುಟ್ಟುಗುಣ, ಪ್ರಾಕೃತಿಕ ಸಾಮರ್ಥ್ಯ ಅಥವಾ ಪ್ರಕೃತಿ (ಸ್ವಭಾವ) ಎಂದು ಹೇಳಲಾಗುತ್ತದೆ. ಇದು ಸಂಪೂರ್ಣವಾಗಿ ಅಲ್ಲಾಹನ ಕೊಡುಗೆಯಾಗಿದೆ. ಅದನ್ನು ಹೊಂದಿರುವುದರಲ್ಲಿ ಯಾರದೇ ಸ್ವಂತ ಅಥವಾ ಇತರರ ಪ್ರಯತ್ನಗಳು ಖಂಡಿತ ಕಾರ್ಯವೆಸಗಿರುವುದಿಲ್ಲ, ಅಷ್ಟೇ ಅಲ್ಲ, ಅವುಗಳಲ್ಲಿ ಯಾವುದೇ ರೀತಿ ಹೆಚ್ಚು ಕಡಿಮೆ ಮಾಡಲಾಗುವುದಿಲ್ಲ, ಮಾನವ ಪ್ರಯತ್ನಗಳಿಂದ ಕೇವಲ ಅವುಗಳನ್ನು ಬೆಳೆಸಲು ಮತ್ತು ಯಾವುದಾದರೊಂದು ದಿಕ್ಕಿನಲ್ಲಿ ನಡೆಸಲು ಮಾತ್ರವೇ ಸಾಧ್ಯ.

ಶಿಕ್ಷಣ-ತರಬೇತಿಯ ಉದ್ದೇಶವು ವಸ್ತುತಃ ಸ್ವಾಭಾವಿಕ ಸಾಮರ್ಥ್ಯಗಳನ್ನು ಅಭಿವ್ಯಕ್ತಗೊಳಿಸುವುದು, ಸಿದ್ಧಗೊಳಿಸುವುದು, ಶೃಂಗರಿಸುವುದು ಮತ್ತು ಸರಿಯಾದ ದಿಕ್ಕಿನಲ್ಲಿ ನಡೆಸುವುದಾಗಿದೆ.

ಹಾಗೆ ನೋಡಿದರೆ, ಅಲ್ಲಾಹನ ಕೊಡುಗೆಗಳು ಅಪಾರ. ಆದರೆ ಶಿಕ್ಷಣ-ತರಬೇತಿಯ ನಿಟ್ಟಿನಲ್ಲಿ ಮಕ್ಕಳ ಈ ಕೆಳಗೆ ಸೂಚಿಸಲಾದ ಸ್ವಾಭಾವಿಕ ಶಕ್ತಿ-ಸಾಮರ್ಥ್ಯಗಳ ಕುರಿತು ಸಂಕ್ಷಿಪ್ತ ಮಾಹಿತಿ ಮತ್ತು ಅವುಗಳನ್ನು ಸರಿಯಾದ ದಿಕ್ಕಿನಲ್ಲಿ ಹಚ್ಚುವುದರ ವಿಧಾನಗಳನ್ನು ತಿಳಿದುಕೊಳ್ಳಬೇಕಾದುದು ಅಗತ್ಯ.

1. ಅನೈಚ್ಛಿಕ ಸಾಮರ್ಥ್ಯಗಳು(ಪ್ರತಿಭೆಗಳು)
2. ಸ್ವಭಾವ ಮತ್ತು ಭಾವನೆಗಳು
3. ಯೋಗ್ಯತೆ/ಅರ್ಹತೆ

1. ಅನೈಚ್ಛಿಕ ಸಾಮರ್ಥ್ಯಗಳು (Reflexee)

ಅಲ್ಲಾಹನು ನಮ್ಮ ದೇಹದಲ್ಲಿ ಸುಮಾರು ಐವತ್ತರಷ್ಟು ಅನೈಚ್ಛಿಕ ಶಕ್ತಿ-ಸಾಮರ್ಥ್ಯಗಳನ್ನು ಇರಿಸಿದ್ದಾನೆ. ಅವು ದೇಹದ ವಿವಿಧ ಅಂಗಗಳನ್ನು ಕ್ಷಣಿಕ ದುರ್ಘಟನೆಗಳು ಅಥವಾ ಅನಿರೀಕ್ಷಿತವಾಗಿ ತಗುಲಬಹುದಾದ ನಾಶ-ನಷ್ಟಗಳಿಂದ ರಕ್ಷಿಸಲು ಸಹಕಾರಿಯಾಗಿವೆ. ಅವುಗಳ ಕಾರಣವಾಗಿ ಅನೈಚ್ಛಿಕವಾಗಿ, ಹಲವು ಪ್ರಯೋಜನಕಾರಿ ಕೆಲಸಗಳು ಸಂಭವಿಸುತ್ತವೆ. ಅದರಲ್ಲಿ ನಮ್ಮ ಪ್ರಜ್ಞೆ ಮತ್ತು ಇರಾದೆಗೆ ಯಾವುದೇ ಸ್ಥಾನವಿರುವುದಿಲ್ಲ, ಉದಾಹರಣೆಗೆ: ಸೀನುವುದು, ಕೆಮ್ಮುವುದು ಮತ್ತು ಉಗುಳು ಹೊರಹಾಕುವುದು, ಕಣ್ರೆಪ್ಪೆ ಮಿಟುಕಿಸುವುದು,

ರೇಗಾಡುವುದು, ಏದುಸಿರು ಬಿಡುವುದು, ಆಕಳಿಸುವುದು, ಮುಗುಳ್ನಗುವುದು, ವಾಂತಿ ಮಾಡುವುದು, ಹುಬ್ಬುಗಂಟಿಕ್ಕುವುದು, ಕಂಪಿಸುವುದು ಮತ್ತು ವಿವಿಧ ಗ್ರಂಥಿಗಳಿಂದ ತೇವಾಂಶ ಹೊರಹಾಕುವುದು ಇತ್ಯಾದಿ.

ಅನೈಚ್ಛಿಕ ಕಾರ್ಯಗಳ ವಿಶೇಷತೆಗಳು

ಈ ಸ್ವಾಭಾವಿಕ ಶಕ್ತಿಗಳ ಕಾರಣವಾಗಿ ಉಂಟಾಗುವ ಅನೈಚ್ಛಿಕ ಕಾರ್ಯಗಳಲ್ಲಿ ಈ ಕೆಳಗಿನ ವಿಶೇಷತೆಗಳು ಕಂಡುಬರುತ್ತವೆ:

1. ತ್ವರಿತವಾಗಿ ಸಂಭವಿಸುವುದು.
2. ಸದಾ ಒಂದು ನಿರ್ದಿಷ್ಟ ರೀತಿಯಲ್ಲಿ ಆಗುವುದು.
3. ಅನೈಚ್ಛಿಕವಾಗಿ ಆಗುವುದು.
4. ಇದರಲ್ಲಿ ಪ್ರಜ್ಞೆಗೆ ಯಾವುದೇ ಪಾತ್ರ ಇರದು.
5. ಅದು ಆಗಿಬಿಡಲು ಸದಾ ಸನ್ನದ್ಧವಾಗಿರುವುದು.
6. ದೇಹದ ಯಾವುದಾದರೊಂದು ಅಂಗಕ್ಕೆ ಸೀಮಿತವಾಗಿರುವುದು.
7. ಬದಲಾವಣೆ ಅಸಾಧ್ಯವಾಗಿರುವುದು.

2. ಸ್ವಭಾವಗಳು (Instinct)

ಇವು ಸ್ವಾಭಾವಿಕ ಶಕ್ತಿ ಅಥವಾ ಸ್ವಾಭಾವಿಕ ಒಲವುಗಳಾಗಿದ್ದು, ಇವುಗಳ ಕಾರಣವಾಗಿ ಯಾವುದೇ ತರಬೇತಿ ಪಡೆಯದೆ ಅಥವಾ ಮೊದಲೇ ಕಲಿಯದೆ ಮಾನವನು ಹಲವು ಕಾರ್ಯಗಳನ್ನು ಮಾಡಲು ಶಕ್ತನಾಗುತ್ತಾನೆ. ಈ ಸ್ವಭಾವಗಳು ಯಾವುದಾದರೊಂದು ಸಂದರ್ಭದಲ್ಲಿನ ಕ್ರಿಯೆ ಅಥವಾ ಪರಿಸ್ಥಿತಿಯ ಕಾರಣವಾಗಿ ದೇಹದಲ್ಲಿ ವಿಶಿಷ್ಟವಾದ ಅವಸ್ಥೆಯನ್ನುಂಟು ಮಾಡುತ್ತದೆ. ಹಾಗೆಯೇ ಇಡೀ ದೇಹವು ಒಂದು ವಿಶೇಷ ಮತ್ತು ನಿರ್ದಿಷ್ಟ ರೀತಿಯಲ್ಲಿ ಕಾರ್ಯವೆಸಗತೊಡಗುತ್ತದೆ. ಉದಾ: ಹಸಿವೆಯಾದಾಗ ಆಹಾರ ಹುಡುಕುವುದು, ಅಪಾಯಕಾರಿ ವಸ್ತುವಿಗೆ ಹೆದರಿ ಓಡುವುದು, ವೈರಿಯೊಡನೆ ಸೆಣಸಾಡುವುದು, ಹೊಸ ವಸ್ತು ಕಂಡರೆ ಅದರ ಮಾಹಿತಿ ತಿಳಿಯಲು ಆಸಕ್ತಿ ವಹಿಸುವುದು ಇತ್ಯಾದಿ. ಯಾವುದೇ ಸ್ವಭಾವವು ಯಾವ ರೀತಿಯಲ್ಲಿ ಪ್ರಕಟವಾಗುತ್ತದೆಂಬುದು ಪರಿಸರವನ್ನು ಅವಲಂಬಿಸಿರುತ್ತದೆ. ಎಲ್ಲ ಮಕ್ಕಳೂ ಮಾತನಾಡಲು ಬಯಸುತ್ತಾರೆ. ಆದರೆ ಯಾವ ಭಾಷೆ? ಅದು ಪರಿಸರದ ಭಾಷೆಯೆಂಬುದು ಸ್ಪಷ್ಟ ತಾನೇ? ತನ್ನ ಸುತ್ತಮುತ್ತ ಆಡಲಾಗುವ 'ಭಾಷೆ'ಯನ್ನೇ ಮಗು ಅನುಕರಿಸುತ್ತದಷ್ಟೇ.

ವಿಶೇಷತೆಗಳು

i. ಅನೈಚ್ಛಿಕ ಕಾರ್ಯಗಳಿಗಿಂತ ಸ್ವಾಭಾವಿಕ ಕಾರ್ಯಗಳು ಹೆಚ್ಚು ಜಟಿಲವಾಗಿರುತ್ತವೆ.
ii. ಸ್ವಭಾವದಲ್ಲಿ ಒಂದು ಹಂತದ ಮಟ್ಟಿಗೆ ಪ್ರಜ್ಞೆಯ ಪಾತ್ರವಿರುತ್ತದೆ.

iii. ಇಡೀ ದೇಹವು ತಲ್ಲೀನವಾಗುತ್ತದೆ.
iv. ಬೇರೆ ಬೇರೆ ರೀತಿಯಲ್ಲಿ ಪ್ರಕಟವಾಗುತ್ತದೆ.
v. ತರಬೇತಿಯಿಂದ ಸ್ವಭಾವದಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆ ಸಾಧ್ಯ.

3. ಯೋಗ್ಯತೆ/ಅರ್ಹತೆ/ ಸಾಮರ್ಥ್ಯ (Capacity)

ಇವು ಸ್ವಾಭಾವಿಕ ಪ್ರತಿಭೆಗಳಾಗಿವೆ. ಇವುಗಳನ್ನು ಬೆಳೆಸುವಲ್ಲಿ ಬುದ್ಧಿ-ಯುಕ್ತಿ ಮತ್ತು ಪ್ರಜ್ಞೆ-ಸಂಕಲ್ಪಗಳಿಗೆ ಮಹತ್ತರ ಪಾತ್ರವಿದೆ. ಉದಾಹರಣೆ: ವ್ಯವಸ್ಥಾಪನಾ ಸಾಮರ್ಥ್ಯ, ಯಾವುದಾದರೂ ನಿರ್ದಿಷ್ಟ ವಿಷಯ ಅಥವಾ ಕಲೆಯ ಕುರಿತ ವಿಶೇಷ ಒಲವು, ನೇತೃತ್ವ ಮತ್ತು ಮಾರ್ಗದರ್ಶನದ ಸಾಮರ್ಥ್ಯ ಇತ್ಯಾದಿ. ಇವುಗಳು ಬುದ್ಧಿವಂತಿಕೆಗೆ ಸಂಬಂಧಿಸಿದವುಗಳಾಗಿವೆ. ಆದ ಕಾರಣ ಅನುಭವ ಮತ್ತು ತರಬೇತಿಯ ಮೂಲಕ ಅದರಲ್ಲಿ ಸಾಕಷ್ಟು ಬದಲಾವಣೆ-ಪರಿವರ್ತನೆ ಸಾಧ್ಯವಿದೆ. ಆದ್ದರಿಂದ ಬೇರೆ ಬೇರೆ ಮಂದಿಯಲ್ಲಿ ಇಂತಹ ಪ್ರತಿಭೆಗಳು ಭಿನ್ನಭಿನ್ನವಾಗಿರುತ್ತವೆ.

ಅನೈಚ್ಛಿಕ ಶಕ್ತಿಗಳು ಮತ್ತು ತರಬೇತಿ

ಅನೈಚ್ಛಿಕ ಕಾರ್ಯಗಳು ನಿರ್ದಿಷ್ಟ ವಿಧಾನದಿಂದ ಪ್ರಕಟವಾಗುತ್ತದೆ. ಅವುಗಳಲ್ಲಿ ಯಾವುದೇ ರೀತಿಯ ಬದಲಾವಣೆ ಸಾಧ್ಯವಿಲ್ಲ ಮತ್ತು ಅವು ಸಂಭವಿಸುವುದರಲ್ಲಿ ಪ್ರಜ್ಞೆ ಮತ್ತು ಸಂಕಲ್ಪಕ್ಕೆ ಯಾವುದೇ ಪಾತ್ರವಿಲ್ಲವಷ್ಟೇ. ಹಾಗಾಗಿ ಈ ನಿಟ್ಟಿನಲ್ಲಿ ಹೆಚ್ಚಿನ ವಿವರಣೆಯ ಅಗತ್ಯ ಕಾಣುವುದಿಲ್ಲ, ಆದಾಗ್ಯೂ ಅನೈಚ್ಛಿಕ ಕಾರ್ಯಗಳಿಗೆ ಸಂಬಂಧಿಸಿ ಎರಡು ಮಗ್ಗುಲುಗಳಲ್ಲಿ ಗಮನ ಹರಿಸಬೇಕಾದ ಅಗತ್ಯವಿದೆ.

ಅ. ಕೆಲವು ಅನೈಚ್ಛಿಕ ಕಾರ್ಯಗಳು ಸಂಭವಿಸುವಾಗ, ಸಾಮಾನ್ಯವಾಗಿ ನಮ್ಮ ತಿಳುವಳಿಕೆಗೆ ಬರುತ್ತವೆ. ಉದಾಹರಣೆಗೆ: ಕೆಮ್ಮುವುದು, ಆಕಳಿಸುವುದು, ಸೀನುವುದು, ಉಗುಳು ಅಥವಾ ಕಫ ಹೊರಹೊಮ್ಮುವುದು ಇತ್ಯಾದಿ. ಈ ನಿಟ್ಟಿನಲ್ಲಿ ಬಾಲ್ಯದಲ್ಲಿಯೇ ಈ ಕೆಳಗಿನ ವಿಷಯಗಳನ್ನು ಅಭ್ಯಾಸ ಮಾಡಿಸುದೊಳಿತು.

1. ಕೆಮ್ಮು, ಆಕಳಿಕೆ ಅಥವಾ ಸೀನು ಬರುವಾಗ ಬಾಯಿಗೆ ಕೈ ಅಥವಾ ಕರವಸ್ತ್ರ ಅಡ್ಡವಿರಿಸಬೇಕು.
2. ಉಗುಳು ಅಥವಾ ಕಫ ಹೊರಬಂದರೆ ಅದನ್ನು ನುಂಗಬಾರದು. ಅದು ಕೆಟ್ಟ ಅಭ್ಯಾಸ.
3. ಒಂದು ಬದಿಗೆ ಹೋಗಿ ಉಗುಳಬೇಕು. ಅಲ್ಲಲ್ಲಿ ಉಗುಳುವುದು ತರವಲ್ಲ.
4. ನಮಾಝ್ ಅಥವಾ ಸಭೆಯಲ್ಲಿರುವಾಗ ಸಾಧ್ಯಂತ ಕೆಮ್ಮು ಮತ್ತು ಆಕಳಿಕೆಯನ್ನು

ತಡೆ ಹಿಡಿಯಬೇಕು. ಅಂದರೆ ಆಗಾಗ ಜೋರಾಗಿ ಕೆಮ್ಮಬಾರದು ಮತ್ತು ಆಕಳಿಸುವಾಗ ಬಾಯಿ ಹೆಚ್ಚು ಅಗಲಿಸಬಾರದು.

5. ಸೀನಿದಾಗ 'ಅಲ್‌ಹಮ್ದುಲಿಲ್ಲಾಹ್' ಮತ್ತು ಆಕಳಿಸಿದಾಗ 'ಲಾ ಹೌಲವಲಾಕುವ್ವತ ಇಲ್ಲಾ ಬಿಲ್ಲಾಹ್' ಎನ್ನಬೇಕು. ಇನ್ನೊಬ್ಬರ ಸೀನಿಗೆ ಉತ್ತರವಾಗಿ 'ಯರ್‌ಹಮುಕಲ್ಲಾಹ್' ಅನ್ನಬೇಕು.

ಆ. ಎರಡನೆಯ ಗಮನಾರ್ಹ ಮಗ್ಗುಲು ಅನೈಚ್ಛಿಕ ಕಾರ್ಯಗಳು ಕೆಲವೊಮ್ಮೆ ಶರ್ತಬದ್ಧ ಮತ್ತು ಸಂಬಂಧಪೂರ್ವಕವಾಗಿರುತ್ತದೆ (Conditioning of reflexes). ಕೆಲವೊಮ್ಮೆ ಸ್ವಾಭಾವಿಕ ಕ್ರಿಯೆಗಳು ಅಥವಾ ಅನೈಚ್ಛಿಕ ಕಾರ್ಯಗಳು ಮೂಲ ಕಾರಣಗಳ ಹೊರತಾಗಿಯೂ ತಾತ್ಕಾಲಿಕವಾದ ಕಾರಣಗಳಿಂದ ಸಂಭವಿಸುತ್ತವೆ. ಅದನ್ನು ಶರ್ತಬದ್ಧ ಅನೈಚ್ಛಿಕ ಕಾರ್ಯಗಳು ಎನ್ನಬಹುದಾಗಿದೆ.

ಹೀಗೆ ಯಾಕೆ ಆಗುತ್ತದೆ?

ಹುಟ್ಟಿದ ಬಳಿಕ ದಿನನಿತ್ಯ ಪ್ರತಿಯೋರ್ವ ವ್ಯಕ್ತಿಗೂ ಹಲವು ರೀತಿಯ ಅನುಭವಗಳಾಗುತ್ತವೆ ಮತ್ತು ಅನೇಕ ರೀತಿಯ ವಸ್ತು/ವಿಷಯಗಳನ್ನು ನೋಡಬೇಕಾಗಿ ಬರುತ್ತದೆ. ಅವುಗಳಲ್ಲಿ ಕೆಲವು ಕಹಿ ಅನುಭವಗಳಾದರೆ, ಇನ್ನು ಕೆಲವು ಹಿತಕರವಾಗಿರುತ್ತವೆ. ಕೆಲವು ಪ್ರಯೋಜನಕಾರಿಯಾಗಿದ್ದರೆ, ಇನ್ನು ಕೆಲವು ನಷ್ಟಕಾರಕವಾಗಿರುತ್ತವೆ. ಇಂತಹ ಅನುಭವಗಳನ್ನು ಆಧರಿಸಿಯೇ ಸ್ವಾಭಾವಿಕ ಅಥವಾ ಅನೈಚ್ಛಿಕ ಕಾರ್ಯಗಳು ಸಂಭವಿಸುತ್ತವೆಂಬುದು ಸ್ಪಷ್ಟ. ಇನ್ನು ಯಾವ ತರದ ವ್ಯಕ್ತಿಗಳು, ಪರಿಸ್ಥಿತಿಗಳು ಅಥವಾ ವಸ್ತುಗಳಿಂದ ಕೆಲವು ಅನುಭವ ಮತ್ತು ಸಂಬಂಧವುಂಟಾಗುತ್ತದೋ ಆ ವ್ಯಕ್ತಿ ಅಥವಾ ವಸ್ತು/ವಿಷಯ ಎದುರು ಬದುರಾದಾಗಲೆಲ್ಲ ಅದಕ್ಕೆ ಪೂರಕವಾದ ಕ್ರಿಯೆ/ಪ್ರತಿಕ್ರಿಯೆಗಳು ಸಂಭವಿಸಿ ಬಿಡುತ್ತವೆ. ಕಾರ್ಯತಃ ಹಿಂದೆ ಆದ ಅನುಭವದ ಪುನರಾವರ್ತನೆಯಾಗದಿದ್ದರೂ ಸರಿ. ಉದಾಹರಣೆಗೆ: ಅಂಧಕಾರ ಎಂಬುದು ಸ್ವತಃ ಭಯಪಡುವ ವಸ್ತು/ವಿಷಯ ಅಲ್ಲ. ಆದರೆ ಒಂದು ಮಗುವಿಗೆ ಅಂಧಕಾರದಲ್ಲಿ ಯಾವುದಾದರೂ ಅಪಾಯಕಾರಿ ಪ್ರಾಣಿ ಅಥವಾ ಕ್ರಿಮಿಕೀಟದಿಂದ ಹಾನಿಯುಂಟಾಗಿದ್ದರೆ ಅಥವಾ ಯಾವುದಾದರೂ ವಸ್ತುವಿಗೆ ತಾಗಿ ಗಾಯವಾಗಿದ್ದರೆ, ಆ ಮಗು ಅಂಧಕಾರಕ್ಕೆ ತೀವ್ರವಾಗಿ ಭಯಪಡತೊಡಗುತ್ತದೆ. ಆ ಜಾಗದಲ್ಲಿ ಹಾನಿಕಾರಕ ವಸ್ತು ಇಲ್ಲದಿದ್ದರೂ ಸರಿಯೆ.

ಒಂದು ಹಾಲುಗಲ್ಲದ ಹಸುಳೆಗೆ ತಾಯಿಯ ಎದೆಹಾಲಿಗಿಂತ ಹೆಚ್ಚು ಇಷ್ಟದ ವಸ್ತು ಬೇರೇನಿದೆ? ಇನ್ನು ಮೊಲೆ ಹಾಲು ಬಿಡಿಸಲು ಯಾವುದಾದರೂ ಕಹಿ ವಸ್ತುವನ್ನು ಹಚ್ಚಲಾಗುತ್ತದೆ. ಆ ಮೇಲೆ ಹಾಲು ಕುಡಿಯಲು ಬಾಯಿ ಹಚ್ಚಿದಾಗಲೆಲ್ಲ ಕಹಿಯನುಭವವಾಗಿ ಕೊನೆಗೆ ಮಗು ಎದೆ ಹಾಲು ಕುಡಿಯುವುದನ್ನು ನಿಲ್ಲಿಸಿ ಬಿಡುತ್ತದೆ.

ಮಾತ್ರವಲ್ಲ, ತಾಯಿಯ ಎದೆ ಕಾಣುವಾಗಲೆಲ್ಲ ಮುಖ ಸಿಂಡರಿಸಿಕೊಳ್ಳುತ್ತದೆ. ಸಣ್ಣ ಮಕ್ಕಳು ಮನೆಯ ಸಾಕು ಪ್ರಾಣಿಗಳು ಅಥವಾ ಪರಿಸರದಲ್ಲಿರುವ ಜಾನುವಾರುಗಳನ್ನು ಬಹಳ ಇಷ್ಟಪಡುತ್ತಾರೆ. ಅವುಗಳೊಂದಿಗೆ ಆಟವಾಡಲು ಬಯಸುತ್ತಾರೆ. ಅಳುತ್ತಾ ಇರುವಾಗ ಅವುಗಳನ್ನು ಕಂಡಕೂಡಲೇ ಅಳು ನಿಲ್ಲಿಸಿ ಬಿಡುತ್ತಾರೆ. ಆದರೆ ಅದೇ ಮಗುವಿನ ಬೆರಳನ್ನು ಗಿಳಿ ಕಚ್ಚಿದರೆ, ಬೌಬೌ ಎನ್ನುತ್ತಾ ನಾಯಿ ಓಡಿಸಿದರೆ ಅಥವಾ ಎರಡು ಬೆಕ್ಕುಗಳ ಜಗಳಾಡುವಾಗಿನ ಭಯಾನಕ ಶಬ್ದಕ್ಕೆ ಹೆದರಿ ಮಗು ನಿದ್ರೆಯಿಂದ ಎಚ್ಚೆತ್ತರೆ, ಆ ಮೇಲೆ ಮಗು ಅವುಗಳ ಹೆಸರು ಕೇಳಿದರೆ ಹೆದರತೊಡಗುತ್ತದೆ ಮತ್ತು ಅವುಗಳನ್ನು ಕಾಣುವಾಗಲೆಲ್ಲ ಭಯದಿಂದ ರೋಮ ನಿಮಿರಿಕೊಳ್ಳುತ್ತದೆ.

ಸ್ಪರ್ಧೆಯಲ್ಲಿ ನಿರಂತರ ಸೋಲುತ್ತಿರುವವರು ಸ್ಪರ್ಧಾ ಕಣಕ್ಕಿಳಿಯುವಾಗಲೇ ಬೆವರತೊಡಗುತ್ತಾರೆ. ಫೇಲಾಗುತ್ತಿರುವ ಮಗು ಪರೀಕ್ಷೆ ಅನ್ನುವಾಗಲೇ ಭಯಪಡುತ್ತದೆ. ತದ್ವಿರುದ್ಧವಾಗಿ ನಿರಂತರ ಜಯ ಗಳಿಸುತ್ತಿರುವ ಮಗು ಸ್ಪರ್ಧೆಯನ್ನು ಮತ್ತು ಉತ್ತಮ ಅಂಕ ಗಳಿಸುತ್ತಿರುವ ಮಗು ಪರೀಕ್ಷೆಯನ್ನು ಮುಕ್ತವಾಗಿ ಸ್ವೀಕರಿಸುತ್ತದೆ.

ಪುಟ್ಟ ಮಗುವಿನ ಮುಂದೆ ಸುಂದರವಾದ ಬಣ್ಣದ ಆಟಿಕೆಯನ್ನಿಡಲಾಗುತ್ತದೆ. ಮಗು ಅದನ್ನು ತೆಗೆಯಲು ಕೈ ಚಾಚಿದಾಗ ಹಿಂದಿನಿಂದ ಭಯಾನಕ ಶಬ್ದ ಹೊರಡಿಸಲಾಗುತ್ತದೆ. ಇದರಿಂದಾಗಿ ಮಗು ಭಯಪಟ್ಟು ಹಿಂದೆ ಸರಿಯುತ್ತದೆ. ಇದನ್ನು ಪುನರಾವರ್ತಿಸಲಾಗುತ್ತದೆ. ಪರಿಣಾಮವಾಗಿ ಮಗು ಆಟಿಕೆಯಂತಹ ಪ್ರೀತಿಯ ವಸ್ತುವನ್ನು ಕಂಡರೂ ಭಯವನ್ನು ಪ್ರಕಟಿಸುತ್ತದೆ. ಆಗ ಭಯಾನಕ ಶಬ್ದ ಹೊರಡಿಸದಿದ್ದರೂ ಸರಿಯೇ. ತರುವಾಯ ಭಯಾನಕ ಶಬ್ದ ಹೊರಡಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿ, ಅದೇ ಆಟಿಕೆಯೊಂದಿಗೆ ಚಾಕೋಲೇಟು ನೀಡತೊಡಗಿದಾಗ ಮಗು ಕ್ರಮೇಣ ಆಟಿಕೆಯ ಮೇಲಿನ ಭಯವನ್ನು ಮರೆಯತೊಡಗುತ್ತದೆ.

ಒಂದು ಮಗುವಿಗೆ ಬಹಳ ಪ್ರೀತಿಯಿಂದ ಪವಿತ್ರ ಕುರ್‌ಆನ್ ಕಲಿಸಲಾಗುತ್ತದೆ. ಅದರ ಕೈಯಲ್ಲಿರುವ ಕುರ್‌ಆನ್ ಪ್ರತಿಯು ಅತ್ಯುತ್ತಮ ಕಾಗದದಲ್ಲಿ ಬಹಳ ಸುಂದರವಾಗಿ ಮುದ್ರಣಗೊಂಡುದಾಗಿರುತ್ತದೆ. ಅದರ ಹೊದಿಕೆಯೂ ಅತ್ಯಾಕರ್ಷಕವಾದುದು. ಆ ಮಗು ಕುರ್‌ಆನ್ ಹಿಡಿದು ಪಠಿಸಲು ಕೂತಾಗಲೆಲ್ಲ ಮಗುವನ್ನು ಪ್ರಶಂಸೆಗೈಯಲಾಗುತ್ತದೆ, ಅಭಿಮಾನದಿಂದ ನೋಡಲಾಗುತ್ತದೆ. ಈ ನಿರಂತರ ಹಿತಕರವಾದ ಅನುಭವದ ಪರಿಣಾಮವಾಗಿ, ಆ ಮಗುವಿನಲ್ಲಿ ಪವಿತ್ರ ಕುರ್‌ಆನ್‌ನೊಂದಿಗೆ ಗಾಢವಾದ ನಂಟು ಬೆಳೆಯುತ್ತದೆ. ಅದನ್ನು ಕಾಣುತ್ತಲೇ ಮಗು ಕೈಗೆತ್ತಿಕೊಳ್ಳುತ್ತದೆ. ಇದೇ ಅವಸ್ಥೆಯು ತದ್ವಿರುದ್ಧವಾಗಿದ್ದರೆ ಮಗು ಭಯಪಡುತ್ತದೆ ಮತ್ತು ಕುರ್‌ಆನ್ ಪಠಣವನ್ನೂ ಇಷ್ಟಪಡಲಾರದು.

ಓರ್ವ ಹುಡುಗ ಗಣಿತದ ತರಗತಿಯಲ್ಲಿ ಯಾವಾಗಲೂ ಗದರಿಕೆ ಮತ್ತು ಏಟು ತಿನ್ನುತ್ತಿದ್ದ, ಕ್ರಮೇಣ ಅವನಿಗೆ ಗಣಿತದ ಮೇಲೆಯೇ ದ್ವೇಷ ಹುಟ್ಟಿಕೊಳ್ಳುತ್ತದೆ. ಏಕೆಂದರೆ ಆ ವಿಷಯದೊಂದಿಗೆ ಅವನಿಗೆ ತೀರಾ ಕಹಿ ಅನುಭವವಾಗಿರುತ್ತದೆ. ಇಂತಹುದೇ ಕೆಲವು

ವ್ಯಕ್ತಿಗಳ ವಿಷಯದಲ್ಲಿಯೂ ಸಂಭವಿಸುತ್ತದೆ. ಓರ್ವ ಅಧ್ಯಾಪಕನು ಮಕ್ಕಳೊಂದಿಗೆ ಅತ್ಯಂತ ಪ್ರೀತಿ-ಕರುಣೆಯಿಂದ ವ್ಯವಹರಿಸುತ್ತಿದ್ದ, ಚೆನ್ನಾಗಿ ಕಲಿಸುವುದರೊಂದಿಗೆ ಅವರಿಗೆ ಆಟವಾಡಲು ಮತ್ತು ಸಂತೋಷವಾಗಿರಲು ಅವಕಾಶ ನೀಡುತ್ತಿದ್ದ, ಮಕ್ಕಳಿಂದ ತಪ್ಪೇನಾದರೂ ಸಂಭವಿಸಿದರೆ ಒಮ್ಮೊಮ್ಮೆ ಕಠೋರನಾದರೂ ಹೆತ್ತವರ ಹಾಗೆ ಪ್ರೀತಿ, ಮಮತೆ ಮತ್ತು ಸದ್ವರ್ತನೆಯೊಂದಿಗೆ ಅವರನ್ನು ತಿದ್ದುತ್ತಾನೆ. ಇಂತಹ ಅಧ್ಯಾಪಕ ಅನಾರೋಗ್ಯಕ್ಕೀಡಾದರೆ ಏಳೆಂಟು ವರ್ಷದ ಮಕ್ಕಳೂ ಅವನನ್ನು ಕಾಣಲು ಹೋಗುತ್ತಾರೆ. ಅವನ ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತಾರೆ. ರಜೆಯ ಬಳಿಕ ಅಧ್ಯಾಪಕ ಶಾಲೆಗೆ ಮರಳದಿದ್ದಾಗ, ಆ ಮಕ್ಕಳು ಕಳವಳಗೊಳ್ಳುತ್ತಾರೆ. ಹಣ ಒಟ್ಟು ಸೇರಿಸಿ ಪತ್ರ ಬರೆಯುತ್ತಾರೆ. ತದ್ವಿರುದ್ಧವಾಗಿ ಇನ್ನೋರ್ವ ಅಧ್ಯಾಪಕ ಮಕ್ಕಳನ್ನು ಗದರಿಸುತ್ತಾ, ಹೊಡೆಯುತ್ತಾ ಇರುತ್ತಾನೆ. ಅರ್ಹ ಮೇರೆಯೊಂದಿಗೆ ಮಕ್ಕಳ ಆಸಕ್ತಿಗಳಿಗೆ ರಿಯಾಯಿತಿ ನೀಡುವುದಿಲ್ಲ, ಹೀಗಿರುವಾಗ, ಮಕ್ಕಳು ಅವನ ರೂಪ ಕಾಣುವಾಗಲೇ ಭಯಭೀತರಾಗುತ್ತಾರೆ. ಮನದಲ್ಲೇ ಅವನಿಗೆ ಹಿಡಿಶಾಪ ಹಾಕುತ್ತಾರೆ. ಅವನು ಅನಾರೋಗ್ಯಕ್ಕೀಡಾದರೆ, ಮಕ್ಕಳ ನಡುವೆ ಆತ ಮರಣ ಹೊಂದಿದನೆಂದೇ ಪ್ರಚಾರವಾಗುತ್ತದೆ. ಎಲ್ಲಿಯ ವರೆಗೆಂದರೆ ಒಂದಿಬ್ಬರು ಮಕ್ಕಳ ಹೆತ್ತವರು ಸಂತಾಪ ಸೂಚಿಸಲು ಹೊರಟುಬಿಡುತ್ತಾರೆ. ಇದು ವಸ್ತುತಃ ಅಧ್ಯಾಪಕನ ಕಠೋರ ವರ್ತನೆಯ ಕಾರಣದಿಂದಾಗಿ ಹುಟ್ಟುವ ದ್ವೇಷದ ಪ್ರಕಟನೆಯಾಗಿದೆ. ಯಾವ ಅಧ್ಯಾಪಕನ ಮುಖದರ್ಶನ ದಿಂದಲೇ ಮಕ್ಕಳು ಭಯಪಡುತ್ತಾರೋ ಅಂತಹ ಅಧ್ಯಾಪಕನಿಂದ ಮಕ್ಕಳು ಯಾವ ರೀತಿಯ ಪ್ರಭಾವ ಹೊಂದುವರು ಎಂಬುದನ್ನು ಸ್ವತಃ ಅಂದಾಜಿಸಿರಿ.

ಸುಳ್ಳು ಮತ್ತು ಕಳ್ಳತನ, ಸಚ್ಚಾರಿತ್ರ್ಯ ಮತ್ತು ಸ್ನೇಹಪರತೆ, ಸಿಡುಕು-ಮುಂಗೋಪ, ತಾಳ್ಮೆ-ಸಹನೆ ಅಥವಾ ನೀಚತನ, ಯಾವುದಾದರೂ ವಿಷಯದಲ್ಲಿ ಆಸಕ್ತಿ ಅಥವಾ ದ್ವೇಷ, ಯಾರಾದರೂ ವ್ಯಕ್ತಿಯೊಂದಿಗೆ ಪ್ರೀತಿ ಅಥವಾ ವೈರ ಅಂತೆಯೇ ನಾಯಿ, ಬೆಕ್ಕು ಅಥವಾ ಅಂಧಕಾರಕ್ಕೆ ಭಯಪಡುವುದು, ಜಾನುವಾರುಗಳನ್ನು ಸತಾಯಿಸುವುದು ಅಥವಾ ಕರುಣೆ ತೋರುವುದು, ಓದಿನಲ್ಲಿ ಪರಿಶ್ರಮ ಅಥವಾ ಪುಕ್ಕಲುತನ ಇತ್ಯಾದಿಗಳೆಲ್ಲವೂ ವಾಸ್ತವದಲ್ಲಿ ಕಾರ್ಯಕಾರಣ ಅನೈಚ್ಛಿಕ ಅಥವಾ ನೈಸರ್ಗಿಕ ಕ್ರಿಯೆಗಳಾಗಿವೆ. ಇವು ಜೀವಮಾನವಿಡೀ ಇರುವಂತಹದ್ದು.

ಗಮನಾರ್ಹ ಸಂಗತಿಗಳು

ಅನೈಚ್ಛಿಕ ಶಕ್ತಿಗಳು ಪರಿಸರ ಮತ್ತದರ ಅನುಭವಗಳಿಗೆ ಸಂಬಂಧಿಸುವುದರಿಂದ ವ್ಯಕ್ತಿಯ ಚಾರಿತ್ರ್ಯ ಮತ್ತು ನಡತೆಯ ಮೇಲೆ ಅದರ ಪ್ರಭಾವ ಗಾಢವಾಗಿರುತ್ತದೆ. ಬಾಲ್ಯಕಾಲದ ಕೆಲವು ಕಹಿ ಅನುಭವಗಳು ಮನಮಸ್ತಿಷ್ಕದ ಮೇಲೆ ಗಾಢವಾದ ಛಾಪನ್ನು ಒತ್ತಿಬಿಡುತ್ತದೆ. ಅದು ಜೀವನ ಪರ್ಯಂತ ಅಳಿದು ಹೋಗುವುದಿಲ್ಲ, ಯಾವ ವ್ಯಕ್ತಿ,

ಪರಿಸ್ಥಿತಿ ಅಥವಾ ಹವ್ಯಾಸಗಳಿಂದ ಅವರು ಕಹಿ ಅನುಭವಿಸುತ್ತಾರೋ ಆ ವ್ಯಕ್ತಿ ಅಥವಾ ವಸ್ತು/ವಿಷಯ ಎದುರಾದಾಗಲೆಲ್ಲ ಅನೈಚ್ಛಿಕವಾಗಿ ಅದೇ ಅವಸ್ಥೆ ಪುನರಾವರ್ತಿಸುತ್ತದೆ. ಉದಾ: ಭಾವೋದ್ರೇಕ, ಕೋಪ, ಭಯ, ಅನಾಸಕ್ತಿ, ಸಂತೋಷ, ದುಃಖ, ಪ್ರೀತಿ, ಅನುಕಂಪ ಇತ್ಯಾದಿ. ಅವು ಸರಿ, ಪ್ರಯೋಜನಕಾರಿ ಮತ್ತು ಅಗತ್ಯವೇ ಆಗಿರಲಿ ಅಥವಾ ತಪ್ಪು, ನಷ್ಟಕಾರಕ ಮತ್ತು ಅನಗತ್ಯವಾಗಿರಲಿ. ಅಂತೆಯೇ ಅನೈಚ್ಛಿಕ ಶಕ್ತಿಗಳು ಶರ್ತಬದ್ಧ ಮತ್ತು ಸಂಬದ್ಧವಾಗುವುದರ ವಿಷಯವಾಗಿ ಈ ಕೆಳಗಿನ ಅಂಶಗಳು ಗಮನಾರ್ಹವಾಗಿದೆ.

1. ಹೆತ್ತವರು ಮಕ್ಕಳಲ್ಲಿ ಉತ್ತಮವಾದ ಅಭ್ಯಾಸ, ಗುಣ, ಕರ್ಮ ಮತ್ತು ಚಾರಿತ್ರ್ಯ ಬೆಳೆಸುವ ನಿಟ್ಟಿನಲ್ಲಿ ಸಾಧ್ಯಂತ ಪ್ರಯತ್ನಿಸಬೇಕು. ಅದರ ಜೊತೆಗೆ ಬಾಲ್ಯದಲ್ಲಿಯೇ ಮಕ್ಕಳಿಗೆ ಹಿತಕರವಾದ ಮತ್ತು ಉತ್ತಮವಾದ ಅನುಭವ ದೊರೆಯುವಂತೆ ನೋಡಿಕೊಳ್ಳಬೇಕು. ಅದರಿಂದ ಮಕ್ಕಳು ಸಂತೋಷ ಅನುಭವಿಸುವಂತಾಗಬೇಕು. ಹಾಗೆಯೇ ಅದನ್ನು ಆಗಾಗ ನೆನಪಿಸುತ್ತಾ ಅವರನ್ನು ಉತ್ತಮ ಚಾರಿತ್ರ್ಯವಂತರನ್ನಾಗಿ ಮಾಡಬೇಕು.
2. ಮನೆಯಲ್ಲಿ ಸೂಕ್ತ ವ್ಯವಸ್ಥೆ ಆಗದೆ ಇದ್ದರೆ ಮಕ್ಕಳನ್ನು ಬೇಗನೇ ಯಾವುದಾದರೂ ಉತ್ತಮವಾದ ಪಾಠಶಾಲೆಗೆ ಸೇರಿಸಬೇಕು.
3. ಮಕ್ಕಳ ಪ್ರಾಥಮಿಕ ಶಿಕ್ಷಣವು ಅತ್ಯಂತ ಹಿತಕರವಾದ ವಾತಾವರಣದಲ್ಲಿ ಪ್ರೀತಿಪೂರ್ವಕವಾಗಿ ನೀಡುವಂತಾಗಬೇಕು. ಓದು-ಬರೆಹ ಮತ್ತಿತರ ಪಾಠ ಮತ್ತು ಅಭ್ಯಾಸಗಳಲ್ಲಿ ಆಸಕ್ತಿ ಮೂಡಬೇಕಾದರೆ ಮಕ್ಕಳು ಸ್ವಾಭಾವಿಕವಾಗಿ ಆಸಕ್ತಿ ಹೊಂದುವಂತಹ ಅಭ್ಯಾಸ ಮತ್ತು ಕ್ರಿಯೆಗಳ ಮೂಲಕ ಶಿಕ್ಷಣ ನೀಡಬೇಕು.
4. ಪಾಠದ ವೇಳೆ ಯಾವುದಾದರೂ ವಿಷಯವು ಮಕ್ಕಳಿಗೆ ಸುಲಭವಾಗಿ ಅರ್ಥವಾಗದಿದ್ದರೆ ಅದರಿಂದ ಕೋಪಗೊಳ್ಳಬಾರದು. ಅವರನ್ನು ಶಿಕ್ಷಿಸಲೂ ಬಾರದು. ಅನ್ಯಥಾ ಆ ಪಠ್ಯದ ಮೇಲೆಯೇ ಮಕ್ಕಳಿಗೆ ದ್ವೇಷ ಹುಟ್ಟಬಹುದು. ಆದ್ದರಿಂದ ಶಾಂತಚಿತ್ತತೆಯೊಂದಿಗೆ ತಿಳಿಹೇಳಲು ಪ್ರಯತ್ನಿಸಬೇಕು.
5. ಒಂದು ವೇಳೆ ಅಪ್ರಯತ್ನವಾಗಿ ಅಥವಾ ಅಲಕ್ಷ್ಯದಿಂದಾಗಿ ಮಕ್ಕಳಲ್ಲಿ ಅಪ್ರಿಯವಾದ ಅನೈಚ್ಛಿಕ ಕ್ರಿಯೆ/ಸ್ವಭಾವಗಳು ಕಂಡುಬಂದರೆ, ಉದಾಹರಣೆಗೆ: ಹೆತ್ತವರು ಮತ್ತು ಅಧ್ಯಾಪಕರಿಂದಾದ ಪ್ರಮಾದದ ಕಾರಣವಾಗಿ ಅವರ ಮೇಲೆ ದ್ವೇಷ; ನಾಯಿ-ಬೆಕ್ಕು ಮತ್ತು ಕತ್ತಲಿಗೆ ಭಯಪಡುವುದು; ನಿರ್ದಿಷ್ಟ ಪಠ್ಯಗಳಲ್ಲಿ ಅನಾಸಕ್ತಿ ಇತ್ಯಾದಿ... ಇಂತಹ ಸಂದರ್ಭಗಳಲ್ಲಿ ಮಕ್ಕಳಿಗೆ ಉತ್ತಮ ಅನುಭವಗಳನ್ನು ಒದಗಿಸಿ, ಆದಷ್ಟು ಬೇಗ ಸುಧಾರಣೆ ತರಲು ಪ್ರಯತ್ನಿಸಬೇಕು. ದ್ವೇಷ, ವಿದ್ರೋಹಗಳನ್ನು ದೂರ ಮಾಡಬೇಕಾದರೆ ಅಧ್ಯಾಪಕರು ಮತ್ತು ಹೆತ್ತವರು ಮಕ್ಕಳೊಡನೆ ಅತ್ಯಂತ ಪ್ರೀತಿ ಮತ್ತು ಅನುನಯದೊಂದಿಗೆ ವ್ಯವಹರಿಸಬೇಕು; ಸದ್ವರ್ತನೆಯಿಂದ ಹಿಂದೆ ನಡೆದ

ಪ್ರಮಾದಗಳಿಗೆ ಪರಿಹಾರ ಒದಗಬಹುದು. ಇನ್ನು ಮಕ್ಕಳಿಗೆ ಅನಾಸಕ್ತಿ ಇರುವಂತಹ ಪಠ್ಯಗಳನ್ನು ಸುಲಭ ಮತ್ತು ಆಸಕ್ತಿದಾಯಕಗೊಳಿಸಲು ಮಾದರಿ(Models), ಚಿತ್ರಗಳು, ಚಾರ್ಟ್ ಇತ್ಯಾದಿಗಳನ್ನು ಬಳಸಬೇಕು. ಮಕ್ಕಳು ಯಾವುದಾದರೂ ವಿಷಯದಲ್ಲಿ ಪ್ರಗತಿ ಹೊಂದುತ್ತಿದ್ದರೆ, ಅವರಿಗೆ ಇನ್ನಷ್ಟು ಧೈರ್ಯ ನೀಡಿ, ಪ್ರೋತ್ಸಾಹಿಸಿ ಮತ್ತು ಇನ್ನೂ ಮುಂದುವರಿಯಲು ಹುರಿದುಂಬಿಸಬೇಕು. ಕತ್ತಲಲ್ಲಿ ಆಟದ ಮತ್ತು ಊಟದ ವಸ್ತುಗಳನ್ನು ಇಟ್ಟು, ಅದನ್ನು ತರಲು ಹೇಳಬೇಕು. ಒಟ್ಟಿನಲ್ಲಿ ಮಕ್ಕಳಿಗಾದಂತಹ ಕಹಿ ಅನುಭವಗಳನ್ನು ದೂರ ಮಾಡಲು, ಆ ಎಲ್ಲ ವಸ್ತುಗಳೊಂದಿಗೆ ಹಿತಕರ ಅನುಭವವಾಗುವ ಎಲ್ಲ ಪ್ರಯತ್ನಗಳನ್ನೂ ಮಾಡಬೇಕು. ಈ ಕಾರ್ಯ ನಡೆದರೆ, ಮಕ್ಕಳ ಬಾಲ್ಯದಲ್ಲಿಯೇ ಇನ್‌ಶಾ ಅಲ್ಲಾಹ್ ಸುಧಾರಣೆಯಾಗಬಹುದು. ಅನ್ಯಥಾ ಇದುವೇ ದೃಢವಾಗುತ್ತಾ ಹೋಗಿ ಜೀವನ ಪೂರ್ತಿ ವ್ಯಕ್ತಿತ್ವವನ್ನು ದುರ್ಬಲಗೊಳಿಸುತ್ತಾ ಇರುವುದು ಹಾಗೂ ಅಯುಕ್ತ ಕ್ರಿಯೆ ಮತ್ತು ಅಪ್ರಿಯ ವ್ಯಕ್ತಿತ್ವಕ್ಕೆ ಕಾರಣವಾಗಬಹುದು.

◆ ◆ ◆

ಅಧ್ಯಾಯ- 9

ಸ್ವಭಾವ ಮತ್ತು ಭಾವನೆಗಳು

''ಪ್ರತಿಯೊಂದು ಮಗುವೂ ಇಸ್ಲಾಮಿನ ಪ್ರಕೃತಿಯಲ್ಲಿಯೇ ಹುಟ್ಟುತ್ತದೆ.'' (ಹದೀಸ್)

ಅಲ್ಲಾಹನು ಭೂಮಿಯಲ್ಲಿ ಮಾನವನನ್ನು ತನ್ನ ಪ್ರತಿನಿಧಿಯನ್ನಾಗಿ ಸೃಷ್ಟಿಸಿದ್ದಾನೆ. ಈ ಹುದ್ದೆಯ ಬೇಡಿಕೆಯಲ್ಲಿ ಮಾನವನ ಮೇಲೆ ಮೂರು ವಿಧದ ಹೊಣೆಗಾರಿಕೆಗಳಿರುತ್ತವೆ.

1. ವೈಯಕ್ತಿಕ (ಖಾಸಗಿ), 2. ಕೌಟುಂಬಿಕ, 3. ಸಾಮೂಹಿಕ (ಸಾಮಾಜಿಕ)

ಈ ಎಲ್ಲ ಹೊಣೆಗಾರಿಕೆಗಳಿಗೆ ಪೂರಕವಾಗಿ ಅಲ್ಲಾಹನು ಪ್ರತಿಯೋರ್ವ ಮಾನವನನ್ನೂ ಜನ್ಮತಃ ವಿಭಿನ್ನ ರೀತಿಯ ಶಕ್ತಿ-ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ವಿಶೇಷತಃ ಸ್ವಭಾವವನ್ನು ನೀಡಿ ಕಳುಹಿಸಿದ್ದಾನೆ.

ಸ್ವಭಾವ ಅಂದರೆ ವಸ್ತುತಃ ಪ್ರಾಕೃತಿಕ ಬೇಡಿಕೆ ಅಥವಾ ಮೂಲಭೂತ ಆಗ್ರಹವಾಗಿದೆ. ಅದು ಬಾಲ್ಯದಲ್ಲಿಯೇ ನಮ್ಮೆಲ್ಲ ಕ್ರಿಯೆಗಳ ಮೂಲ ಕಾರಣವಾಗಿರುತ್ತದೆ. ನಮ್ಮ ಕಾರ್ಯ ಚಟುವಟಿಕೆಗಳು ಮತ್ತು ಗುಣ-ನಡತೆಗಳ ಹಿಂದೆಯೂ ಪ್ರತ್ಯಕ್ಷ-ಪರೋಕ್ಷವಾಗಿ ಇದುವೇ ಕಾರ್ಯ ನಿರ್ವಹಿಸುತ್ತದೆ. ಮಾತ್ರವಲ್ಲ, ನಮ್ಮ ವೈಯಕ್ತಿಕ ಸಂರಕ್ಷಣೆ, ಕುಟುಂಬ ಪೋಷಣೆ ಮತ್ತು ಸಂಸ್ಕೃತಿ-ನಾಗರಿಕತೆಯ ಬೆಳವಣಿಗೆಗಳಲ್ಲಿಯೂ ಸಹಾಯಕವಾಗುತ್ತದೆ. ಈ ಪ್ರಕಾರ ಸ್ವಭಾವವನ್ನು ಈ ಕೆಳಗಿನಂತೆ ಮೂರು ವಿಭಾಗಗಳಾಗಿ ವಿಂಗಡಿಸಬಹುದಾಗಿದೆ.

1. **ವೈಯಕ್ತಿಕ:** ಅಂದರೆ ಪ್ರಾಣ ರಕ್ಷಣೆ ಮತ್ತು ದೇಹದ ಸರಿಯಾದ ಸಾಮರ್ಥ್ಯದಲ್ಲಿ ಸಹಾಯಕವಾಗಿರುವಂತಹ ಸ್ವಭಾವ. ಉದಾ: ಆಹಾರದ ಹುಡುಕಾಟ, ಸಂಗ್ರಹ-ದಾಸ್ತಾನು, ಕುತೂಹಲ, ಸ್ಪರ್ಧಾ ಮನೋಭಾವ, ಪಲಾಯನ ಇತ್ಯಾದಿ.
2. **ಕೌಟುಂಬಿಕ:** ಅಂದರೆ ಕುಟುಂಬದ ಪೋಷಣೆ ಮತ್ತು ರಕ್ಷಣೆಯಲ್ಲಿ ಸಹಾಯಕವಾಗಿರುವ ಸ್ವಭಾವ. ಉದಾ: ವೈವಾಹಿಕ ಮತ್ತು ಮಾತೃತ್ವ-ಪಿತೃತ್ವ ಇತ್ಯಾದಿ.
3. **ಸಾಮಾಜಿಕ:** ಅಂದರೆ ಮಾನವನನ್ನು ಸಾಮೂಹಿಕ ಜೀವನ ಸಾಗಿಸಲು ಸನ್ನದ್ಧಗೊಳಿಸುವಂತಹ ಸ್ವಭಾವ. ಉದಾ: ಸಾಂಘಿಕ ಸ್ವಭಾವ, ಆತ್ಮಗೌರವ, ಆತ್ಮನಿಂದನೆ, ಪ್ರಭಾವಿತಗೊಳ್ಳುವುದು, ಪ್ರಭಾವ ಹೊಂದುವುದು, ಅನುಕಂಪ, ಅನುಕರಣೆ ಇತ್ಯಾದಿ.

ಸ್ವಭಾವಗಳ ವಿಶೇಷತೆಗಳು

ಸ್ವಭಾವಗಳಲ್ಲಿ ಈ ಕೆಳಗಿನ ಪ್ರಮುಖ ವಿಶೇಷತೆಗಳಿರುತ್ತವೆ. ಮಕ್ಕಳ ಶಿಕ್ಷಣ-ತರಬೇತಿಯ ವೇಳೆ ಇವುಗಳನ್ನು ಗಮನದಲ್ಲಿರಿಸಬೇಕಾದುದು ಅಗತ್ಯ. ಈ ವಿಶೇಷತೆಗಳನ್ನು ಕಡೆಗಣಿಸಿದರೆ, ಮಕ್ಕಳ ಸಂತುಲಿತ ಪೋಷಣೆಯ ಮೇಲೆ ಪ್ರತಿಕೂಲ ಪರಿಣಾಮವುಂಟಾಗುತ್ತದೆ.

1. ವ್ಯಾಪಕವಾಗಿರುತ್ತದೆ

ಅಂದರೆ ಇದು ಎಲ್ಲ ಮಾನವರಲ್ಲಿ ಕಂಡು ಬರುತ್ತದೆ. ಇದು ವ್ಯಕ್ತಿ, ಪಂಗಡ ಅಥವಾ ಜನಾಂಗಕ್ಕೆ ಸೀಮಿತವಾಗಿಲ್ಲ. ಆದರೆ ಕೆಲವರಲ್ಲಿ ಹೆಚ್ಚು ಮತ್ತು ಕೆಲವರಲ್ಲಿ ಕಮ್ಮಿ ಇರುತ್ತದೆ. ಒಂದು ಸ್ವಭಾವವು ಒಬ್ಬನಲ್ಲಿ ಹೆಚ್ಚು ಪ್ರಬಲವಾಗಿದ್ದರೆ, ಇನ್ನೊಬ್ಬನಲ್ಲಿ ಕಡಿಮೆ ಇರುತ್ತದೆ. ಅದೇ ರೀತಿ ಅದು ಪ್ರಕಟವಾಗುವ ರೀತಿ ಮತ್ತು ವಿಧಾನದಲ್ಲಿಯೂ ವ್ಯತ್ಯಾಸವಿರುತ್ತದೆ. ಒಬ್ಬನು ತನ್ನ ಪರಿಸರ, ತರಬೇತಿ, ಅನುಭವ, ಬುದ್ಧಿ ಮತ್ತು ಪರಿಣಾಮಕಾರಿ ಮಾದರಿಗಳ ಪ್ರಭಾವದಿಂದಾಗಿ ಒಂದು ಸ್ವಭಾವವನ್ನು ಯಾವ ರೀತಿ ಪ್ರಕಟಿಸುತ್ತಾನೋ ಇನ್ನೊಬ್ಬನು ಅದೇ ವಸ್ತು/ವಿಷಯಗಳ ಪ್ರಭಾವದಿಂದ ಬೇರೆಯೇ ತೆರನಾದ ದಾರಿಯನ್ನು ತುಳಿಯುತ್ತಾನೆ. ಆದ್ದರಿಂದಲೇ ವಿಭಿನ್ನ ಜನರ ಚಾರಿತ್ರ್ಯ ಮತ್ತು ಅಭ್ಯಾಸಗಳಲ್ಲಿ ವಿಭಿನ್ನವಾದ ವ್ಯತ್ಯಾಸಗಳು ಕಾಣಬರುತ್ತವೆ.

2. ಪ್ರಕೃತಿದತ್ತವಾಗಿದೆ; ಹುಟ್ಟಿನಿಂದಲೇ ಬೆಳೆದು ಬರುತ್ತದೆ

ಆದರೆ ಎಲ್ಲವೂ ಒಂದೇ ಬಾರಿಗೆ ಪ್ರಕಟಗೊಳ್ಳುವುದಿಲ್ಲ, ಬದಲಾಗಿ ಶಕ್ತಿ ಮತ್ತು ಅಗತ್ಯಕ್ಕೆ ತಕ್ಕಂತೆ ಕಾಲ ಕಾಲಕ್ಕೆ ಪ್ರಕಟವಾಗುತ್ತಿರುತ್ತದೆ. ಮಗುವಿನಲ್ಲಿ ಮೊದಲು ವೈಯಕ್ತಿಕವಾದ ಸ್ವಭಾವ ಕೆಲಸ ಮಾಡುತ್ತದೆ. ಅದರಲ್ಲೂ ಆಹಾರದ ಹುಡುಕಾಟವು ಪ್ರಮುಖವಾಗಿದೆ. ಮಗು ಹುಟ್ಟಿದಾಕ್ಷಣ ಆಹಾರಕ್ಕೆ ತಡಕಾಡುತ್ತದೆ. ಬಳಿಕ ಒಂದೊಂದಾಗಿ ಹಿಡಿಯುವ, ತೆವಳುವ, ಕುಳಿತುಕೊಳ್ಳುವ ಮತ್ತು ಎದ್ದು ನಿಲ್ಲುವ ಇತ್ಯಾದಿ ಅಭ್ಯಾಸಗಳು ಬೆಳೆದು ಬರುತ್ತವೆ. ಬಳಿಕ ಕ್ರಮೇಣ ಕುತೂಹಲ, ಪಲಾಯನ, ಸ್ಪರ್ಧಾ ಮನೋಭಾವ, ನಿರ್ಮಾಣ ಮತ್ತು ಸಂಗ್ರಹಣೆಯ ಸ್ವಭಾವ ಬೆಳೆದು ಬರತೊಡಗುತ್ತದೆ.

ವೈಯಕ್ತಿಕತೆಯ ಬಳಿಕ ಸಾಂಘಿಕ ಮತ್ತು ಸಾಮಾಜಿಕ ಸ್ವಭಾವಗಳು ಬೆಳೆದು ಬರುತ್ತವೆ. ತಾರುಣ್ಯದ ಆರಂಭದೊಂದಿಗೆ ಲೈಂಗಿಕ ಸ್ವಭಾವವೂ ಹುಟ್ಟಿಕೊಳ್ಳತೊಡಗುತ್ತದೆ. ಕೊನೆಯಲ್ಲಿ ಮಾತೃತ್ವ-ಪಿತೃತ್ವದ ಸ್ವಭಾವ ಅಂತೆಯೇ ಒಂದು ಸ್ವಭಾವವು ಪ್ರಾಯದ ಒಂದು ಹಂತದಲ್ಲಿ ಬಹಳ ಪ್ರಬಲವಾಗಿದ್ದರೆ, ಇನ್ನೊಂದು ಹಂತದಲ್ಲಿ ದುರ್ಬಲವಾಗಿರುತ್ತದೆ. ಉದಾಹರಣೆಗೆ, ಬಾಲ್ಯದಲ್ಲಿ ಕುತೂಹಲವು ಬಹಳವಾಗಿದ್ದರೆ, ತಾರುಣ್ಯದಲ್ಲಿ ಲೈಂಗಿಕತೆ. ಶಿಕ್ಷಣ-ತರಬೇತಿಯ ಸಂದರ್ಭದಲ್ಲಿ ಇದನ್ನು ಗಮನದಲ್ಲಿರಿಸಬೇಕು. ಯಾವ ಸಮಯದಲ್ಲಿ ಯಾವ ಸ್ವಭಾವವು

ಪ್ರಬಲವಾಗಿರುತ್ತದೋ ಆ ಸಮಯದಲ್ಲಿ ಅದರ ಕುರಿತಾಗಿ ಸೂಕ್ತ ಮಾರ್ಗದರ್ಶನ ನೀಡಬೇಕು. ಸಮಯಕ್ಕೆ ಮುಂಚೆ ಅದನ್ನು ಪ್ರಸ್ತಾಪಿಸುವುದು ಅಥವಾ ಸೂಕ್ತ ಕಾಲ ಕೂಡಿ ಬಂದಾಗಲೂ ಸರಿಯಾದ ಮಾರ್ಗದರ್ಶನ ನೀಡದಿರುವುದು ಎರಡೂ ಅಪಾಯಕಾರಿ ಸಂಗತಿಗಳಾಗಿವೆ.

3. ಕಾರ್ಯಕಾರಣವಾಗಿರುತ್ತದೆ

ಅಂದರೆ ಸ್ವಭಾವವು ಅನಗತ್ಯವಾಗಿ ಉಂಟಾಗುವಂತಹದ್ದಲ್ಲ, ಬದಲಾಗಿ ಅದು ಹುಟ್ಟಲು ಯಾವುದಾದರೂ ಕಾರಣ ಇರಲೇ ಬೇಕಾಗುತ್ತದೆ. ಪ್ರತಿಸ್ಪರ್ಧಿ ಇದ್ದರೆ ಮಾತ್ರವೇ ಸ್ಪರ್ಧಾ ಮನೋಭಾವ ಬೆಳೆಯುತ್ತದೆ. ಆಶ್ಚರ್ಯಜನಕ ವಸ್ತು/ವಿಷಯವಿದ್ದಾಗಲಷ್ಟೇ ಆ ಬಗ್ಗೆ ಕುತೂಹಲ ಹುಟ್ಟಿಕೊಳ್ಳುವುದು. ಇನ್ನು ಮೂಲ ವಿಷಯಕ್ಕೆ ಬದಲು ಅದರ ಕಲ್ಪನೆಯೇ ಕಾರ್ಯಕಾರಣವಾಗುವುದು ಬೇರೆ ಸಂಗತಿಯಾಗಿದೆ.

4. ಬಳಕೆಯಾಗದಿದ್ದರೆ ದುರ್ಬಲವಾಗುತ್ತದೆ

ಅಂದರೆ ಒಂದು ಸ್ವಭಾವವು ಪ್ರಕಟವಾಗುವ ಮತ್ತು ಪ್ರಬಲವಾಗಿರುವ ಸಮಯದಲ್ಲಿ ಅದರಿಂದ ಪ್ರಯೋಜನ ಪಡೆಯದಿದ್ದರೆ, ಆ ಸಮಯ ಕಳೆಯುತ್ತಿದ್ದಂತೆಯೇ ಆ ಸ್ವಭಾವವೂ ದುರ್ಬಲವಾಗಿ ಬಿಡುತ್ತದೆ. ಕೆಲವೊಮ್ಮೆ ಸತ್ತೇ ಹೋಗುತ್ತದೆ. ಅಂತೆಯೇ ಯಾವ ಉದ್ದೇಶದಿಂದ ಪ್ರಕೃತಿಯು ಆ ಸ್ವಭಾವವನ್ನು ನೀಡುತ್ತದೋ ಸ್ವಯಂ ಆ ಉದ್ದೇಶವೇ ಪ್ರಭಾವಿತವಾಗಿ ಬಿಡುತ್ತದೆ. ಕುರಿಮರಿಗಳ ಉದಾಹರಣೆಯೇ ನಮ್ಮ ಮುಂದಿದೆ. ಮಾತನಾಡುವ, ನಡೆದಾಡುವ ಮತ್ತಿತರ ವಿಷಯಗಳಿಗೆ ಸಂಬಂಧಿಸಿ ಅವುಗಳಿಗೆ ಅನುಕರಿಸಲು ಅವಕಾಶ ಸಿಕ್ಕಿರಲಿಲ್ಲ, ಹಾಗಾಗಿ, ಜೀವನಪೂರ್ತಿ ಕಲಿಸಿದರೂ ಅದನ್ನು ಅವು ಕಲಿಯಲಾರದು. ಅದೇ ವೇಳೆ ಮಾನವ ಮಕ್ಕಳು ಯಾವುದೇ ವಿಶೇಷ ಪ್ರಯತ್ನವಿಲ್ಲದೆಯೇ ಕೇವಲ ಅನುಕರಿಸುವ ಮೂಲಕ ಅವೆಲ್ಲವನ್ನೂ ಕಲಿಯುತ್ತಾರೆ. ಆದ್ದರಿಂದಲೇ ಆ ಸ್ವಭಾವಗಳನ್ನು ಕಡೆಗಣಿಸುವುದೋ ಅಥವಾ ತುಳಿಯುವುದೋ ಮಾಡುವುದರ ಬದಲು ಅವುಗಳ ಸೂಕ್ತ ಉಪಯೋಗದ ಬಗ್ಗೆ ಮಾರ್ಗದರ್ಶನ ನೀಡಬೇಕಾಗಿದೆ.

5. ಸಮಾಧಾನದ ರೂಪದಲ್ಲಿ ಸಂತೋಷ ಅನ್ಯಥಾ ಕಳವಳವಾಗುತ್ತದೆ

ಅಂದರೆ ಸ್ವಭಾವದ ಬೇಡಿಕೆಗಳು ಪೂರ್ತಿಗೊಂಡಾಗ ವ್ಯಕ್ತಿಗೆ ಸಂತೋಷ, ಸಮಾಧಾನ ಮತ್ತು ಪ್ರಶಾಂತಿಯ ಅನುಭವವಾಗುತ್ತದೆ. ಆದರೆ ಅವುಗಳ ಈಡೇರಿಕೆಯಲ್ಲಿ ಅಡ್ಡಿಯುಂಟಾದರೆ ಅಥವಾ ಯಾವುದಾದರೂ ಕಾರಣದಿಂದ ಈಡೇರದಿದ್ದರೆ ವ್ಯಕ್ತಿಯು ಕಳವಳಗೊಳ್ಳುತ್ತಾನೆ. ಅಸಂತೃಪ್ತ ಮತ್ತು ಅಸಂತುಷ್ಟನಾಗುತ್ತಾನೆ. ಆದ್ದರಿಂದ ಸೂಕ್ತ ಮೇರೆಯಲ್ಲಿರುತ್ತಾ ಮಕ್ಕಳಿಗೆ ಸಂತೋಷ ನೀಡಬಹುದಾದ ವಸ್ತುಗಳನ್ನು ಒದಗಿಸಿ ಕೊಡಬೇಕು. ಅನ್ಯಥಾ ಮಕ್ಕಳ ವ್ಯಕ್ತಿತ್ವದ ಮೇಲೆ ಕೆಟ್ಟ ಪರಿಣಾಮವುಂಟಾಗುತ್ತದೆ.

—

6. ತರಬೇತಿಯಿಂದ ಸ್ವಭಾವದಲ್ಲಿ ಬದಲಾವಣೆ ಸಾಧ್ಯ

ಮಾನವನ ಸ್ವಭಾವವು ಪ್ರಾಣಿಗಳಂತಲ್ಲ, ಅನುಭವ, ತರಬೇತಿ, ಅನುಸರಣೆ ಮತ್ತು ಜ್ಞಾನದ ಮೂಲಕ ಅದರಲ್ಲಿ ಬದಲಾವಣೆ ಅಥವಾ ಸುಧಾರಣೆ ತರಲು ಸಾಧ್ಯ. ಉದಾಹರಣೆಗೆ: ಜೀವನಾಧಾರ ಗಳಿಕೆಯ ಅದೆಷ್ಟೋ ವಿಧಾನಗಳು ನಮ್ಮ ಸಮಾಜದಲ್ಲಿವೆ. ಆದರೆ ಅವೆಲ್ಲದರ ಹಿಂದಿರುವ ಉದ್ದೇಶ ಒಂದೇ... ಆಹಾರ. ಹಾಗಾಗಿ ತನ್ನ ಈ ವಿಶೇಷತೆಯ ಕಾರಣದಿಂದ ಮಾನವನು, ಪ್ರಾಣಿಗಳಿಗಿಂತ ಭಿನ್ನವಾಗಿ ಶಿಕ್ಷಣ-ತರಬೇತಿಯಿಂದ ಪ್ರಯೋಜನ ಪಡೆಯುವಲ್ಲಿ ಶಕ್ತನಾಗಿದ್ದಾನೆ. ಜೇನ್ನೊಣವು ತನ್ನ ಜೇನುಗೂಡನ್ನು ಬಹಳ ಸುಂದರ ಮತ್ತು ಅಚ್ಚುಕಟ್ಟಾಗಿ ತಯಾರಿಸುತ್ತದೆ. ಆದರೆ ಯಾವ ಸ್ಥಿತಿಯಲ್ಲೂ ಅದರಿಂದ ಒಂದೇ ರೂಪದ ಗೂಡನ್ನು ಮಾಡಲು ಸಾಧ್ಯ. ತದ್ವಿರುದ್ಧವಾಗಿ, ಮಾನವನು ತನ್ನ ನಿರ್ಮಾಣ ಕಲೆಯ ಮೂಲಕ ತರತರದ ವಿನ್ಯಾಸಗಳನ್ನು ಮಾಡಬಲ್ಲನು. ಗುಡಿಸಲಿನಿಂದ ಹಿಡಿದು ಗಗನಚುಂಬಿ ಕಟ್ಟಡಗಳ ವರೆಗೆ, ಭಾರೀ ಯಂತ್ರಗಳು, ವಿಶಾಲ ಕಾರ್ಖಾನೆಗಳು ಏನನ್ನು ಸೂಚಿಸುತ್ತವೆ? ಮಾನವ ಕುಲವನ್ನು ಒಂದು ಭವ್ಯ ನಾಗರಿಕತೆಯ ವಕ್ತಾರವನ್ನಾಗಿ ಮಾಡುವಲ್ಲಿ ವಸ್ತುತಃ ಸ್ವಭಾವಗಳ ತರಬೇತಿಯ ಪಾತ್ರ ಬಹಳ ಹಿರಿದು.

ಸ್ವಭಾವ ಮತ್ತು ಭಾವನೆಗಳು

ಭಾವನೆಗಳು ಅಂದರೆ ವಸ್ತುತಃ ನಮ್ಮ ಮೇಲೆ ಆಗಿರುವಂತಹ ಹಿತಕರ ಅಥವಾ ಅಹಿತಕರ ಅನುಭವಗಳ ಪ್ರಭಾವಗಳಾಗಿರುತ್ತವೆ. ಅವು ನಮ್ಮ ಆಲೋಚನೆಗಳ ಮೇಲೆ ಅಡ್ಡಿಯನ್ನುಂಟು ಮಾಡಿರುತ್ತವೆ. ಅವುಗಳ ಪ್ರಭಾವದಿಂದಾಗಿ ನಮ್ಮಿಂದ ಉಂಟಾಗುವ ಕೃತ್ಯಗಳಲ್ಲಿ ಬುದ್ಧಿ-ವಿವೇಕದ ಪಾತ್ರ ಬಹಳ ಕಡಿಮೆ. ಉದಾ: ಕ್ರೋಧ, ಭಯ, ಆಶ್ಚರ್ಯ, ದ್ವೇಷ, ದುಃಖ, ಅಹಂಕಾರ ಇತ್ಯಾದಿ.

ಸ್ವಭಾವ ಮತ್ತು ಭಾವನೆಗಳ ನಡುವೆ ಅವಿನಾಭಾವ ಸಂಬಂಧ ಇರುತ್ತದೆ. ಬಹುತೇಕ ಪ್ರತಿಯೊಂದು ಸ್ವಭಾವದೊಂದಿಗೆ ಏನಾದರೊಂದು ಭಾವನೆ ಇದ್ದೇ ಇರುತ್ತದೆ. ಒಬ್ಬ ವ್ಯಕ್ತಿಗೆ ಯಾವುದಾದರೊಂದು ಪರಿಸ್ಥಿತಿ ಎದುರಾಯಿತೆಂದಿಟ್ಟುಕೊಳ್ಳಿ, ಆಗ ಒಂದು ಕ್ರಿಯೆಯು ಅವನ ಯಾವುದಾದರೊಂದು ಸ್ವಭಾವವನ್ನು ಕೆಣಕಿದರೆ ಅದಕ್ಕೆ ಸಂಬಂಧಿಸಿರುವ ಭಾವನೆಯೂ ಪ್ರಕಟವಾಗುತ್ತದೆ. ಉದಾಹರಣೆಗೆ:

1. ಕುತೂಹಲ ಸ್ವಭಾವದೊಂದಿಗೆ ಕೌತುಕ ಮತ್ತು ಆಶ್ಚರ್ಯದ ಭಾವನೆ.
2. ಸ್ಪರ್ಧಾಗುಣದೊಂದಿಗೆ ಕೋಪ, ಭಾವೋದ್ರೇಕದ ಭಾವನೆ.
3. ಪಲಾಯನ ಸ್ವಭಾವದೊಂದಿಗೆ ಭಯ ಮತ್ತು ಭಾವೋದ್ರೇಕದ ಭಾವನೆ.
4. ಸಂಗ್ರಹ ಸ್ವಭಾವದೊಂದಿಗೆ ಮಾಲಕತ್ವದ ಭಾವನೆ.
5. ಸೃಜನಾತ್ಮಕ ಸ್ವಭಾವದೊಂದಿಗೆ ನಿರ್ಮಾಣದ ಭಾವನೆ.

6. ಲೈಂಗಿಕ ಸ್ವಭಾವದೊಂದಿಗೆ ಕಾಮೇಚ್ಛೆಯ ಭಾವನೆ.
7. ಪಾಲಕತ್ವ ಸ್ವಭಾವದೊಂದಿಗೆ ಮಮತೆಯ ಭಾವನೆ.
8. ನಗುವ ಸ್ವಭಾವದೊಂದಿಗೆ ಸಂತೋಷ ಮತ್ತು ಮನರಂಜನೆಯ ಭಾವನೆ.
9. ಆಹಾರ ಹುಡುಕುವ ಸ್ವಭಾವದೊಂದಿಗೆ ಹಸಿವು ದಾಹದ ಭಾವನೆ.
10. ಆತ್ಮಪ್ರಶಂಸೆ ಮತ್ತು ಪ್ರದರ್ಶನ ಸ್ವಭಾವದೊಂದಿಗೆ ಅಹಂಕಾರ ಮತ್ತು ಆಡಂಬರದ ಭಾವನೆ.
11. ಆತ್ಮನಿಂದನೆಯ ಸ್ವಭಾವದೊಂದಿಗೆ ಸಮರ್ಪಣೆ ಅಥವಾ ದಾಸ್ಯತನ ಭಾವನೆ.
12. ಸಾಮೂಹಿಕತೆಯ ಸ್ವಭಾವದೊಂದಿಗೆ ಒಬ್ಬಂಟಿತನ ಅಥವಾ ಅಸಹಾಯಕತೆಯ ಭಾವನೆ.
13. ಅಸಂತೋಷ ಮತ್ತು ಅಸೂಯೆಯ ಗುಣದೊಂದಿಗೆ ದ್ವೇಷ ಮತ್ತು ತಿರಸ್ಕಾರದ ಭಾವನೆ.
14. ಪ್ರಲಾಪಿಸುವುದರ ಹಿಂದೆ ದುಃಖ ಮತ್ತು ವೇದನೆಯ ಭಾವನೆ.

ಸ್ವಭಾವ ಮತ್ತು ಭಾವನೆಗಳು ಕೆಲವೊಮ್ಮೆ ಪರಸ್ಪರ ಎಷ್ಟು ಬೆರೆತುಕೊಂಡಿರುತ್ತವೆಂದರೆ, ಒಂದು ಕಾರಣವಾಗಿಯೂ ಇನ್ನೊಂದು ಅದರ ಪರಿಣಾಮವಾಗಿಯೂ ಅಥವಾ ಎರಡೂ ಪರಸ್ಪರ ಕಾರಣ ಮತ್ತು ಪರಿಣಾಮಗಳಾಗಿಯೂ ಭಾಸವಾಗುತ್ತವೆ. ಅದೇ ರೀತಿ ಇನ್ನು ಹಲವು ಭಾವನೆ ಮತ್ತು ಸ್ವಭಾವಗಳಲ್ಲಿ ಯಾವುದೇ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾಗುವುದಿಲ್ಲ, ಬದಲಾಗಿ ಸಾಮಾನ್ಯ ಮಾತುಗಳಲ್ಲಿ ಅವೆರಡಕ್ಕೂ ಒಂದೇ ಪದವನ್ನು ಬಳಸಲಾಗುತ್ತದೆ. ಉದಾಹರಣೆಗೆ: ಕ್ರೋಧ, ಅಸೂಯೆ, ದುಃಖ, ಪ್ರೀತಿ, ದ್ವೇಷ, ಭಯ ಇತ್ಯಾದಿಗಳನ್ನು ನಾವು ಭಾವನೆಯೆಂದೂ ಹೇಳುತ್ತೇವೆ, ಸ್ವಭಾವ ಎಂದೂ ಹೇಳುತ್ತೇವೆ.

ಭಾವನೆಗಳ ವಿಶೇಷತೆಗಳು

ಭಾವನೆಗಳಲ್ಲಿ ಈ ಕೆಳಗಿನ ವಿಶೇಷತೆಗಳಿರುತ್ತವೆ:

1. ವಿವೇಕವು ಮಂಕಾಗುತ್ತದೆ ಮತ್ತು ವ್ಯಕ್ತಿಯು ಸರಿಯಾಗಿ ಚಿಂತಿಸುವ ಅಥವಾ ಸರಿಯಾದ ತೀರ್ಮಾನ ಕೈಗೊಳ್ಳುವ ಸ್ಥಿತಿಯಲ್ಲಿರುವುದಿಲ್ಲ, ಆದ್ದರಿಂದಲೇ ಹೆಚ್ಚಿನ ವೇಳೆ ಭಾವನಾತ್ಮಕವಾಗಿ ಎಸಗಿದ ಕ್ರಿಯೆಗೆ ನಂತರ ಪಶ್ಚಾತ್ತಾಪ ಪಡಬೇಕಾಗಿ ಬರುತ್ತದೆ.

2. ದೈಹಿಕ ನ್ಯೂನತೆಗಳುಂಟಾಗುತ್ತವೆ. ನಮ್ಮ ಅಂಗಾಂಗಗಳು ಸಾಮಾನ್ಯ ಸ್ಥಿತಿಯಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತವೋ ಅದಕ್ಕೆ ಭಿನ್ನವಾಗಿ ಭಾವೋದ್ರೇಕಗೊಂಡಾಗ ಅವುಗಳಲ್ಲಿ ತರತರವಾದ ಬದಲಾವಣೆಗಳು ಕಾಣತೊಡಗುತ್ತವೆ. ಹೃದಯಬಡಿತ ಏರುವುದು, ಬೆವರುವುದು, ವಿವಿಧ ರೀತಿಯಲ್ಲಿ ಎಂಜಲು ಸ್ರವಿಸುವುದು, ರೋಮಾಂಚನವಾಗುವುದು, ದೇಹದಲ್ಲಿ ನಡುಕ, ಮುಖ ಕೆಂಪೇರುವುದು ಅಥವಾ ಬಿಳುಪೇರುವುದು, ಮೂಗಿನ ಹೊಳ್ಳೆಗಳು ಬಿರಿಯುವುದು, ಬಾಯಿಯಿಂದ ನೊರೆ ಬರುವುದು... ಒಟ್ಟಿನಲ್ಲಿ ಶರೀರದಲ್ಲಿ

ವಿಶೇಷ ರೀತಿಯ ಅವಸ್ಥೆಯುಂಟಾಗುತ್ತದೆ. ಜೀರ್ಣ ವ್ಯವಸ್ಥೆ, ರಕ್ತಸಂಚಲನೆ, ಎಂಜಲು ಸ್ರವಿಕೆ ಎಲ್ಲದರ ಮೇಲೂ ಪ್ರಭಾವವುಂಟಾಗುತ್ತದೆ. ಆದ್ದರಿಂದಲೇ ಅತಿಭಾವುಕ ಜನರ ಆರೋಗ್ಯವು ಎಂದೂ ಸುಸ್ಥಿತಿಯಲ್ಲಿರುವುದಿಲ್ಲ, ಅಂತೆಯೇ ದುಃಖ-ದುಮ್ಮಾನ ಮತ್ತು ಕೋಪದ ಸ್ಥಿತಿಯಲ್ಲಿ ಆಹಾರ ಪಾನೀಯ ಸೇವಿಸುವುದರಿಂದ ತಡೆಯಲಾಗಿದೆ. ಬದಲಾಗಿ ಸಮಾಧಾನದಿಂದ, ಶಾಂತಚಿತ್ತರಾಗಿ ಬಂಧುಗಳ ಸಂಗಡ ಆಹಾರ ಸೇವಿಸಬೇಕು. ಇದರಿಂದ ಹೆಚ್ಚು ತಿನ್ನಲೂ ಸಾಧ್ಯವಾಗುತ್ತದೆ ಮತ್ತು ಚೆನ್ನಾಗಿ ಜೀರ್ಣವೂ ಆಗುತ್ತದೆ.

3. ಭಾವನೆಯು ಬಹುವಂಶ ವೈಯಕ್ತಿಕ, ಖಾಸಗಿ ಮತ್ತು ಆಂತರಿಕ ಅನುಭವವಾಗಿರುತ್ತದೆ. ಒಂದೇ ಘಟನೆಯು ಬೇರೆ ಬೇರೆ ಜನರಲ್ಲಿ ಭಿನ್ನಭಿನ್ನವಾದ ಭಾವನೆಗಳನ್ನುಂಟು ಮಾಡುತ್ತದೆ. ಉದಾಹರಣೆಗೆ, ಒಬ್ಬ ವ್ಯಕ್ತಿಯ ಮರಣದಿಂದ ಆತನ ಪತ್ನಿ, ಮಕ್ಕಳು, ಬಂಧುಗಳು ಮತ್ತು ಶತ್ರುಗಳಲ್ಲಿ ಭಿನ್ನಭಿನ್ನವಾದ ಭಾವನೆಗಳುಂಟಾಗುತ್ತವೆ. ಅವೆಲ್ಲದರ ಅವಸ್ಥೆಯೂ ಭಿನ್ನವಾಗಿರುತ್ತದೆ. ಸ್ವಯಂ ಒಬ್ಬ ವ್ಯಕ್ತಿಯ ಮೇಲೆ ಬೇರೆ ಬೇರೆ ಸ್ಥಿತಿ ಮತ್ತು ಹಿನ್ನೆಲೆಯಲ್ಲಿ ಒಂದೇ ವಸ್ತು ಅಥವಾ ಒಂದೇ ರೀತಿಯ ಘಟನೆಗಳು ಉಂಟು ಮಾಡುವ ಅವಸ್ಥೆಯೂ ಭಿನ್ನಭಿನ್ನವಾಗಿರುತ್ತದೆ. ಅದೇ ರೀತಿ, ಒಬ್ಬ ವ್ಯಕ್ತಿ ಏನೆಲ್ಲ ಅನುಭವಿಸುತ್ತಿರುವನೋ ಅದನ್ನು ಅವನೊಬ್ಬನೇ ಗ್ರಹಿಸಬಲ್ಲ, ಇತರರು ಅದನ್ನು ನಿರ್ದಿಷ್ಟವಾಗಿ ಅಂದಾಜಿಸಲಾರರು. ಒಬ್ಬರ ಭಾವನಾತ್ಮಕ ಪ್ರತಿಕ್ರಿಯೆಯಿಂದ ಅವರ ಗುಣವನ್ನು ಅಂದಾಜಿಸುವವರು ಹೆಚ್ಚಿನ ವೇಳೆ ತಪ್ಪುಕಲ್ಪನೆಗೆ ಈಡಾಗಿರುತ್ತಾರೆ.

4. ಭಾವನೆಗಳು ಸಾಂಕ್ರಾಮಿಕವಾಗಿರುತ್ತವೆ. ಅಂದರೆ ಒಬ್ಬ ವ್ಯಕ್ತಿಯಲ್ಲಿ ಪ್ರಕಟವಾಗುವ ಭಾವನೆಗಳು ನೋಡುಗರ ಮೇಲೂ ಉಂಟಾಗುತ್ತವೆ. ಒಬ್ಬನು ದುಃಖಿತ ಮತ್ತು ಅಳುತ್ತಿರುವುದನ್ನು ಕಂಡು ಇತರರ ಮುಖಗಳೂ ಕಳೆಗುಂದುತ್ತವೆ. ಅದೇ ವೇಳೆ ಹಸನ್ಮುಖಿ ಮತ್ತು ಸತ್ಸ್ವಭಾವಿಗಳ ಸಾಂಗತ್ಯದಲ್ಲಿ ಇತರರ ಮುಖದಲ್ಲೂ ಸಂತೋಷದ ಕಳೆ ಏರುತ್ತದೆ.

5. ಸಣ್ಣ ವಿಷಯಕ್ಕೂ ಭಾವೋದ್ರೇಕಕ್ಕೊಳಗಾಗುತ್ತಾರೆ ಮತ್ತು ಅದರಲ್ಲಿ ಯಾವುದೇ ಮಿತಿಯಿರುವುದಿಲ್ಲ, ಕೊಡುಕೊಳ್ಳುವಿಕೆಯಲ್ಲಿ ಚಿಲ್ಲರೆ ಹಣಕ್ಕೆ ಜಗಳ, ಸಣ್ಣ ಸಣ್ಣ ವಿಷಯಕ್ಕೂ ಕಿತ್ತಾಟ, ಹೊಡೆದಾಟ ಮತ್ತು ಕೊಲೆಯಲ್ಲಿ ಪರ್ಯಾವಸಾನ; ತಮಾಷೆಯಾಡುತ್ತಲೇ ಜೀವನ ಪೂರ್ತಿ ಸಂಬಂಧ ಕಡಿಯುವುದು ಇತ್ಯಾದಿ ದಿನನಿತ್ಯ ಕಾಣಬಹುದಾದ ಸಂಗತಿಗಳು.

6. ಭಾವನೆಗಳು ಸುದೀರ್ಘ ಹೊತ್ತು ಆವರಿಸಿರುವ ಕಾರಣ, ನಿರ್ದಿಷ್ಟ ರೂಪ ಪಡೆದುಕೊಂಡು ಮೂಡ್ ಬದಲಾಗುವ ಸಂಭವವಿರುತ್ತದೆ. ಇಬ್ಬರು ಪರಸ್ಪರ ಕೋಪಗೊಂಡಿದ್ದರೆ ಸಣ್ಣ ವಿಷಯಕ್ಕೂ ಜಗಳಾಡುತ್ತಾರೆ. ಹಲವೊಮ್ಮೆ ಯಾರದೋ ಮೇಲಿನ ಕೋಪ ಇನ್ನಾರ ಮೇಲೋ ತೀರಿಸುತ್ತಾರೆ. ಅದೇ ವೇಳೆ ಆನಂದತುಂದಿಲರಾಗಿದ್ದರೆ ಅಥವಾ ಪ್ರೀತಿ-ಗೌರವದ ಭಾವನೆಯಿದ್ದರೆ, ಅಹಿತಕರ ವಿಷಯಗಳನ್ನು ಕಡೆಗಣಿಸಲಾಗುತ್ತದೆ.

7. ಭಾವನೆಯಲ್ಲಿ ತಿರುಗುವ ಮತ್ತು ಹಾದಿ ಬದಲಿಸುವ ಸಾಮರ್ಥ್ಯವೂ ಇರುತ್ತದೆ. ಪರಸ್ಪರರನ್ನು ಛೇಡಿಸುತ್ತಿದ್ದ ಅಥವಾ ಪರಸ್ಪರರನ್ನು ದೂರುತ್ತಿದ್ದ ಮಕ್ಕಳೇ ಆತ್ಮೀಯ ಗೆಳೆಯರಾಗಿ ಮಾರ್ಪಡುತ್ತಾರೆ. ಅವರ ಛೇಡಿಸುವಿಕೆ ಮತ್ತು ದೂರುಗಳೂ ಕೂಡ ವಸ್ತುತಃ ಸಂಬಂಧ ಬಲಗೊಳ್ಳುವುದರ ಸೂಚನೆಯಾಗಿರುತ್ತದೆ. ವಿಶೇಷತಃ ಬಾಲ್ಯದಲ್ಲಿ ಸೋದರ ಸೋದರಿಯರು ಪರಸ್ಪರ ಛೇಡಿಸುತ್ತಿರುವುದು ಅಪಾರ ಪ್ರೀತಿಯ ದ್ಯೋತಕವಾಗಿರುತ್ತದೆ.

8. ಭಾವನೆಯು ಸಾರ್ವತ್ರಿಕವಾಗಿರುತ್ತದೆ. ಮಕ್ಕಳು, ಯುವಜನರು, ವೃದ್ಧರು ಎಲ್ಲರೂ ಭಾವೋದ್ರೇಕಕ್ಕೊಳಗಾಗಬಲ್ಲರು. ಆದರೆ ಸಣ್ಣ ಮಕ್ಕಳಲ್ಲಿ ಮತ್ತು ಹದಿಹರೆಯದವರಲ್ಲಿ ಇದು ಹೆಚ್ಚು. ಮಕ್ಕಳಂತೂ ಬಲುಬೇಗನೇ ಭಾವಾವೇಶಕ್ಕೆ ಒಳಗಾಗುತ್ತಾರೆ. ಅವರ ಭಾವನೆ ಎಷ್ಟು ತೀವ್ರವಾಗಿರುತ್ತದೆಂದರೆ ತೀರಾ ಕ್ಷುಲ್ಲಕ ವಿಷಯಕ್ಕೂ ಕಿರುಚಾಡುತ್ತಾ ನೆಲದಲ್ಲಿ ಹೊರಳಾಡತೊಡಗುವರು. ಆದರೆ ಈ ಅವಸ್ಥೆಯು ತೀರಾ ತಾತ್ಕಾಲಿಕವಾದುದು. ಅವರು ಬಲುಬೇಗನೇ ಶಾಂತರೂ ಆಗುತ್ತಾರೆ. ಕಣ್ಣೀರಿನಿಂದ ತೋಯ್ದ ಮಕ್ಕಳ ಮುಖಗಳಲ್ಲಿ ಮುಗುಳ್ನಗು ಲಾಸ್ಯವಾಡುವುದನ್ನು ಬಹುತೇಕ ಎಲ್ಲರೂ ಕಂಡಿರುತ್ತಾರೆ. ಯೌವನದಲ್ಲಿ ಭಾವೋದ್ರೇಕವು ಪರಿಣಾಮವರಿಯದೆ ಆತ್ಮಹತ್ಯೆಗೆ ಶರಣಾಗುವ ವರೆಗೂ ಹೋಗಿ ಮುಟ್ಟುತ್ತದೆ.

9. ಭಾವನೆಗಳನ್ನು ಕೆರಳಿಸುವಲ್ಲಿ ಸ್ವಭಾವದ ಪಾತ್ರವೂ ಇದೆ. ಶೀತ ಪ್ರಕೃತಿಯವರಿಗಿಂತ ಉಷ್ಣ ಪ್ರಕೃತಿಯುವರು ಬೇಗನೇ ಭಾವೋದ್ರೇಕಕ್ಕೊಳಗಾಗುತ್ತಾರೆ ಮತ್ತು ಕೋಪೋದ್ರಿಕ್ತರಾಗುತ್ತಾರೆ. ಉದಾಸೀನ ಸ್ವಭಾವದವರು ದುಃಖಿತರೂ ಸೂಕ್ಷ್ಮ ಸಂವೇದಿಗಳೂ ಆಗಿರುತ್ತಾರೆ ಹಾಗೂ ಎಲ್ಲವನ್ನೂ ತಮ್ಮ ತಲೆಯ ಮೇಲೆ ಹೊತ್ತುಕೊಂಡಿರುತ್ತಾರೆ. ಪಿತ್ತ ಸ್ವಭಾವದವರು ತಮ್ಮ ಭಾವನೆಗಳನ್ನು ಎಂದೂ ನಿಯಂತ್ರಿಸಲಾರರು ಮತ್ತು ಹತಾಶೆ, ಪುಕ್ಕಲುತನಕ್ಕೆ ಬಹಳ ಬೇಗನೇ ಈಡಾಗುತ್ತಾರೆ. ಇದು ಏಕೆಂದರೆ, ಆ ಭಾವನೆಗಳು ಕೆರಳುವಾಗ ದೇಹದಲ್ಲುಂಟಾಗುವ ರಾಸಾಯನಿಕ ಪರಿವರ್ತನೆಗಳು ಮೊದಲೇ ಇರುವ ಸ್ವಭಾವದಲ್ಲಿ ಇನ್ನಷ್ಟು ಪ್ರಖರತೆಯನ್ನುಂಟು ಮಾಡುತ್ತದೆ. ಪುಟಕ್ಕಿಟ್ಟ ಚಿನ್ನದಂತೆಯೋ ಅಥವಾ ಮೈಲಿಗೆಯ ಮೇಲೆ ಕೆಸರೆರಚಿದಂತೆಯೋ ಆಗಿಬಿಡುತ್ತದೆ.

10. ಒಂದೇ ಭಾವನೆ ಆಗಾಗ ಮರುಕಳಿಸುತ್ತಿದ್ದರೆ ಭಾವನಾತ್ಮಕ ಸ್ವಭಾವವು ಅಭ್ಯಾಸವಾಗಿ ಬಿಡುವ ಸಾಧ್ಯತೆ ಇದೆ. ಒಬ್ಬ ವ್ಯಕ್ತಿಯನ್ನು ಆಗಾಗ ಛೇಡಿಸುತ್ತಿದ್ದರೆ, ಆತ ಕ್ರಮೇಣ ಸಿಡುಕು ಸ್ವಭಾವದವನಾಗಿ ಮಾರ್ಪಡುತ್ತಾನೆ. ಹತಾಶೆ ಮತ್ತು ವೈಫಲ್ಯಗಳಿಗೆ ನಿರಂತರ ಈಡಾಗುತ್ತಿದ್ದರೆ ಭಗ್ನ ಹೃದಯಿಯಾಗಿಯೂ ನಿರಂತರ ಯಶಸ್ಸು ಗಳಿಸುತ್ತಲಿದ್ದರೆ ಆಶಾವಾದಿಯಾಗಿಯೂ ಮಾರ್ಪಡುತ್ತಾನೆ. ನಿರಂತರ ತಾತ್ಸಾರ, ಅವಮಾನಗಳಿಗೆ ತುತ್ತಾಗುತ್ತಿದ್ದರೆ ಕೀಳರಿಮೆಯೂ ನಿರಂತರ ಮುದ್ದಿನಿಂದಾಗಿ ಮೇಲರಿಮೆಯೂ ಬೆಳೆಯುತ್ತದೆ. ವಿವಿಧ ವಿಷಯಗಳಲ್ಲಿ ನಮ್ಮ ಸ್ವಭಾವ, ಭಾವನೆ ಮತ್ತು ಒಲವುಗಳು ಇದರ ಪರಿಣಾಮವಾಗಿಯೇ ಹುಟ್ಟಿಕೊಳ್ಳುವುದು.

ಸ್ವಭಾವ ಮತ್ತು ಭಾವನೆಗಳ ಮಹತ್ವ

ನಮ್ಮ ಜೀವನದಲ್ಲಿ ಸ್ವಭಾವ ಮತ್ತು ಭಾವನೆಗಳಿಗೆ ಅಪಾರ ಮಹತ್ವವಿದೆ. ಇದುವೇ ನಮ್ಮ ಚಾರಿತ್ರ್ಯದ ಆಧಾರ, ನಡತೆಯ ಮೂಲ, ಕರ್ಮಗಳ ಚಾಲಕ ಮತ್ತು ಸ್ವಭಾವದ ಭಂಡಾರವಾಗಿದೆ. ಜೀವನದ ಹೋರಾಟದಲ್ಲಿ ನಾನಾ ವಿಧವಾಗಿ ಎದುರ್ಗೊಳ್ಳುವ ಅಡೆತಡೆಗಳನ್ನು ಎದುರಿಸಲಿಕ್ಕಿರುವ ಸಲಕರಣೆಗಳು ಮತ್ತು ಆಯುಧಗಳಾಗಿವೆ. ಜೀವನದ ಪರಿಶ್ರಮದಲ್ಲಿ (ಜಿಹಾದ್‌ನಲ್ಲಿ) ಇದುವೇ ಖಡ್ಗಗಳಾಗಿವೆ. ಸರಿಯಾದ ರೀತಿಯಲ್ಲಿ ಬಳಕೆಯಾದರೆ ಮುಜಾಹಿದ್, ಗಾಝಿಗಳಾಗುವರು. ಅನ್ಯಥಾ ಅಕ್ರಮಿ, ಮರ್ದಕ, ಕೊಲೆಗಾರ ಮತ್ತು ದರೋಡೆಕೋರರಾಗುವರು. ಸರಿಯಾದ ಹಾದಿಯಲ್ಲಿ ನಡೆದರೆ, ಅಲ್ಲಾಹನ ಸಜ್ಜನ ದಾಸ, ಭೂಮಿಯಲ್ಲಿ ಅವನ ಪ್ರತಿನಿಧಿ ಮತ್ತು ನಿಜಾರ್ಥದಲ್ಲಿ ಸೃಷ್ಟಿಶ್ರೇಷ್ಠರನ್ನಾಗಿ ಮಾಡಲು ಸಹಕಾರಿ ಮತ್ತು ಇಹ-ಪರ ಯಶಸ್ಸಿನಲ್ಲಿ ಸಹಾಯಕವಾಗುವುದು. ತಪ್ಪು ಹಾದಿಯಲ್ಲಿ ನಡೆದರೆ, ಮೃಗಕ್ಕಿಂತಲೂ ಕೀಳಾಗಿ ಮಾಡಿ ಬಿಡುವುದು ಮತ್ತು ಇಹ-ಪರಗಳಲ್ಲಿ ನಷ್ಟ ಹಾಗೂ ನಿಂದನೆಗೆ ಕಾರಣವಾಗುವುದು.

ಸಮತೋಲನದಲ್ಲಿದ್ದರೆ ಸಚ್ಚಾರಿತ್ರ್ಯವೆನಿಸುವುದು ಮತ್ತು ವ್ಯಕ್ತಿತ್ವಕ್ಕೆ ಮೆರುಗು ನೀಡುವುದು. ಸಮತೋಲನದಿಂದ ತಪ್ಪಿದರೆ ದುಶ್ಶೀಲವೆನಿಸುವುದು ಮತ್ತು ಎಲ್ಲರ ದೃಷ್ಟಿಗಳಲ್ಲಿ ನಿಂದ್ಯನಾಗಿ ಮಾಡುವುದು. ಈ ಕೆಳಗೆ ನಮೂದಿಸಿರುವ ಜೋಡಿ(ಪದ)ಗಳ ಪೈಕಿ ಪ್ರತಿಯೊಂದರಲ್ಲೂ ಯಾವುದಾದರೂ ಒಂದು ಸ್ವಭಾವ ಅಥವಾ ಭಾವನೆಯು ಕ್ರಿಯಾಶೀಲವಾಗಿರುತ್ತದೆ. ಆದರೆ ಅದರ ಪ್ರಕಟನೆಯ ವಿವಿಧ ರೂಪಗಳು ಎಲ್ಲಿಂದ ಎಲ್ಲಿಗೆ ಕೊಂಡೊಯ್ಯುತ್ತದೆ ನೋಡಿ.

1. ಪ್ರೀತಿ – ವಿಷಯಾಸಕ್ತಿ
2. ಸ್ವಾತಂತ್ರ್ಯ – ಕಾನೂನು ಉಲ್ಲಂಘನೆ
3. ಜಾಗರೂಕತೆ – ಭಯ/ಹೇಡಿತನ
4. ಸೌಜನ್ಯ/ಹಿತಚಿಂತನೆ – ಅನೀತಿ/ಮುಖಸ್ತುತಿ
5. ಶಕ್ತಿ ಮತ್ತು ಚಟುವಟಿಕೆ – ಅಕ್ರಮ/ಹಿಂಸೆ
6. ಚಿಂತನೆ/ವಿವೇಚನೆ – ದುಃಖ/ಹತಾಶೆ
7. ಮಿತವ್ಯಯ – ಜಿಪುಣತೆ
8. ಆತ್ಮವಿಶ್ವಾಸ – ಆತ್ಮಪ್ರಶಂಸೆ
9. ಮಾನ್ಯತೆ/ಗೌರವ – ಭಟ್ಟಂಗಿತನ/ಆಸೆಬುರುಕುತನ
10. ಧೈರ್ಯ/ಸ್ಥೈರ್ಯ – ಪರಿಣಾಮದ ಪರಿವೆಯಿಲ್ಲದಿರುವುದು
11. ಶಿಕ್ಷಣ ಸ್ವೀಕೃತಿ – ಶೀಘ್ರಗಾಮಿತ್ವ/ಪರಿಣಾಮಹೀನತೆ
12. ಶುಭ ನಿರೀಕ್ಷೆ – ಅಂಧಶ್ರದ್ಧೆ

ಒಟ್ಟಿನಲ್ಲಿ ಸ್ವಭಾವ ಮತ್ತು ಭಾವನೆಗಳ ಪ್ರಕಟದಲ್ಲಿ ವಿವಿಧ ವಿಧಾನಗಳಿರುತ್ತವೆ. ಆ ಪೈಕಿ ಕೆಲವು ಸಹ್ಯವಾಗಿರುತ್ತವೆ, ಇನ್ನು ಕೆಲವು ಅಪ್ರಿಯವಾಗಿರುತ್ತವೆ. ಅವುಗಳನ್ನು ನಿಯಂತ್ರಿಸುವ ವಿಧಾನವನ್ನು ಕಲಿಸುವುದು, ಅವನ್ನು ಸರಿಯಾದ ದಿಕ್ಕಿನಲ್ಲಿ ನಡೆಸುವುದು ಮತ್ತು ತಪ್ಪು ಹಾದಿಗಿಳಿದಿದ್ದರೆ ಸುಧಾರಿಸುವುದು ಶಿಕ್ಷಣ-ತರಬೇತಿಯ ಕೆಲಸವಾಗಿದೆ.

ಗಮನಾರ್ಹ ವಿಷಯಗಳು

ಸ್ವಭಾವ/ಭಾವನೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ವಿಷಯಗಳು ಗಮನಾರ್ಹವಾಗಿದೆ,

1. ಅಧ್ಯಾಪಕರು ಮತ್ತು ಪೋಷಕರು ಮಕ್ಕಳೊಡನೆ ಅತ್ಯಂತ ಪ್ರೀತಿ-ಸಹಾನುಭೂತಿಯಿಂದ ವ್ಯವಹರಿಸಬೇಕು, ಎಂದಾದರೂ ಸೂಕ್ತ ಕಾರಣಕ್ಕೆ ಗದರಿಸುವುದು ಅಥವಾ ಶಿಕ್ಷಿಸುವುದಿದ್ದರೂ ತಕ್ಷಣವೇ ಸದ್ವರ್ತನೆಯಿಂದ ಅದನ್ನು ಸರಿಪಡಿಸಬೇಕು.

2. ಸೋದರ-ಸೋದರಿಯರು, ಗೆಳೆಯರು ಮತ್ತು ಸಹಪಾಠಿಗಳೊಡನೆ ಸದ್ವರ್ತನೆ, ಹಿತಚಿಂತನೆಯಿಂದ ವ್ಯವಹರಿಸಲು ಪ್ರೇರೇಪಿಸಬೇಕು. ಎಂದಾದರೂ ಮುನಿಸು ತೋರಿದರೆ ತಕ್ಷಣವೇ ರಾಜಿ ಮಾಡಿಸಬೇಕು. ಈ ಪ್ರಕಾರ ಮಕ್ಕಳಲ್ಲಿ ಹೆತ್ತವರೊಡನೆ, ಅಧ್ಯಾಪಕರೊಡನೆ, ಮನೆ, ಶಾಲೆ, ಸೋದರ-ಸೋದರಿ, ಮಿತ್ರರು ಮತ್ತಿತರರೊಡನೆ ಭಾವನಾತ್ಮಕ ಬಂಧ ಹುಟ್ಟಿಕೊಳ್ಳುತ್ತದೆ. ಈ ಅನುಬಂಧವು ಸಂಬಂಧಗಳನ್ನು ಗಟ್ಟಿಗೊಳಿಸಲು ಮತ್ತು ಎಲ್ಲ ಸ್ಥಿತಿಗಳಲ್ಲೂ ಪಾಲಿಸಿಕೊಂಡು ಬರಲು ಸಹಕಾರಿಯಾಗುವುದು.

3. ಅಪ್ರಿಯ ಕೃತ್ಯ ಅಥವಾ ಪರಸ್ಪರ ಮನಸ್ತಾಪವು ಮಕ್ಕಳಲ್ಲಿ ದ್ವೇಷ, ಹಗೆತನ, ಅಸೂಯೆಯ ಭಾವನೆಯನ್ನು ಬೆಳೆಸುತ್ತದೆ ಹಾಗೂ ಅವರನ್ನು ವಿದ್ರೋಹ ಮತ್ತು ವಿರಹಕ್ಕೆ ಪ್ರೇರೇಪಿಸುತ್ತದೆ. ಅವುಗಳ ಪರಿಣಾಮ ಹಲವೊಮ್ಮೆ ಅತ್ಯಂತ ಅಪಾಯಕಾರಿಯಾಗಿರುತ್ತದೆ. ಧರ್ಮನಿಷ್ಠ ಮನೆತನ ಮತ್ತು ಧಾರ್ಮಿಕ ವಿದ್ಯಾಲಯಗಳ ಮಕ್ಕಳು ದೊಡ್ಡವರಾಗಿ ನಾಸ್ತಿಕರ ಮತ್ತು ದೇವಧಿಕ್ಕಾರಿಗಳ ಸಾಲಿನಲ್ಲಿ ಗುರುತಿಸಿಕೊಳ್ಳುವುದು, ಸಭ್ಯ ಕುಟುಂಬದ ಹೆಣ್ಣು ಮಕ್ಕಳು ಆತ್ಮಹತ್ಯೆ ಮತ್ತು ದೇಹ ಮಾರುವುದಕ್ಕೆ ಮುಂದಾಗುವುದು, ದೊಡ್ಡ ಮನುಷ್ಯರ ಮಕ್ಕಳು ಅಪರಾಧ ಕೃತ್ಯಗಳಲ್ಲಿ ತೊಡಗಿಕೊಳ್ಳುವುದು ಇತ್ಯಾದಿಗಳು ಈ ಅಪ್ರಿಯ ಕೃತ್ಯದ ಪಿತೂರಿಗಳೇ ಆಗಿವೆ. ಆದ್ದರಿಂದ ಪರಸ್ಪರ ಸಂಬಂಧಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಅಪಾರ ಗಮನ ನೀಡಬೇಕಾಗಿದೆ.

4. ಸಹಜ ಪ್ರವೃತ್ತಿ ಮತ್ತು ಮೃದು ಸ್ವಭಾವದ ತರಬೇತಿಗಾಗಿ ಮನೆ, ಶಾಲೆ ಮತ್ತು ತರಗತಿಯ ಪರಿಸರವನ್ನು ಸಾದ್ಯಂತ ಸ್ವಚ್ಛ, ಆಹ್ಲಾದಕರ ಮತ್ತು ಮನಮೋಹಕವಾಗಿರಿಸಬೇಕು. ವಸ್ತುಗಳನ್ನು ಒಪ್ಪ ಓರಣವಾಗಿರಿಸುವುದರಲ್ಲಿ ಅಚ್ಚುಕಟ್ಟುತನ ಇರಲಿ. ಮಾತುಕತೆ, ವರ್ತನೆ

ಮತ್ತು ವ್ಯವಹಾರಗಳಲ್ಲಿ ನಮ್ರತೆ ಹಾಗೂ ಶಿಷ್ಟಾಚಾರವನ್ನು ಸದಾ ಪಾಲಿಸಬೇಕು. ಹಸ್ತಬರಹ, ಕಲೆ, ಚಿತ್ರಕಲೆ ಮತ್ತು ತೋಟಗಾರಿಕೆಯ ಶಿಕ್ಷಣದ ವ್ಯವಸ್ಥೆಯನ್ನೂ ಮಾಡಬೇಕು.

5. ಪರಿಶುದ್ಧ ಭಾವನೆ ಮತ್ತು ಉನ್ನತ ಕಲ್ಪನೆಗಳನ್ನು ಬೆಳೆಸಲೋಸುಗ ಉನ್ನತ ವ್ಯಕ್ತಿತ್ವಗಳ ಘಟನೆಗಳು, ಸಾಹಿತ್ಯದ ತುಣುಕುಗಳು ಮತ್ತು ತರಬೇತಿ ಕಥೆಗಳಿಂದ ಸಹಾಯ ಪಡೆಯಬಹುದು.

6. ಮನೆಯ ಕೆಲಸ ಮತ್ತು ಶಾಲೆಯ ಪಠ್ಯ ಹಾಗೂ ಹವ್ಯಾಸಗಳ ಜತೆ ಆಹ್ಲಾದಕರ ಅನುಭವ ಹೊಂದುವಂತೆ ಮಾಡುವುದು. ಮಕ್ಕಳ ಪ್ರಯತ್ನಗಳನ್ನು ಶ್ಲಾಘಿಸುವುದು, ಉತ್ತಮ ಫಲಿತಾಂಶ ಪಡೆದರೆ ಮನ ಬಿಚ್ಚಿ ಕೊಂಡಾಡುವುದು, ಅಂಕ ನೀಡುವಲ್ಲಿ ಹೃದಯ ವೈಶಾಲ್ಯತೆ ಮೆರೆಯುವುದು. ಇವೆಲ್ಲವೂ ಮಕ್ಕಳಲ್ಲಿ ಹುರುಪು ಮತ್ತು ಸಂತೃಪ್ತಿಗೆ ಕಾರಣವಾಗುತ್ತದೆ. ಹೀಗೆ ಮಾಡುವುದರಿಂದ ಮಕ್ಕಳ ಮನಸ್ಸು ಬೆಳೆಯುತ್ತದೆ, ಅವರು ಹೆಚ್ಚೆಚ್ಚು ಪರಿಶ್ರಮ ಹಾಗೂ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಹೀಗೆ ಅವರು ಎಂದೂ ಹತಾಶೆ ಅಥವಾ ನಿರಾಶೆಗೆ ಈಡಾಗಲಾರರು.

7. ಪವಿತ್ರ ಕುರ್‌ಆನ್ ಮತ್ತು ಮಸೀದಿಗಳೊಂದಿಗೆ ಭಾವನಾತ್ಮಕ ಸಂಬಂಧವನ್ನು ಹುಟ್ಟಿಸಬೇಕು. ಪವಿತ್ರ ಕುರ್‌ಆನ್‌ನ ಶಿಕ್ಷಣವನ್ನು ಆಹ್ಲಾದಕರ ವಾತಾವರಣದಲ್ಲಿ ನೀಡಬೇಕು. ಪಠಿಸಲು ನೀಡುವ ಕುರ್‌ಆನ್ ಪ್ರತಿಯ ಕಾಗದ, ಲಿಪಿ ಮತ್ತು ಮುದ್ರಣ ಸಾದ್ಯಂತ ಉತ್ತಮವಾಗಿರಲಿ. ಕಲಿಸುವಾಗ ಆದಷ್ಟು ಕಾಠಿಣ್ಯದಿಂದ ದೂರವಿರಬೇಕು. ಪ್ರೀತಿ, ಅನುನಯ, ಪ್ರೋತ್ಸಾಹ ಮತ್ತು ಸೂಕ್ತ ಮಾರ್ಗದರ್ಶನವನ್ನು ನೀಡುತ್ತಲಿರಬೇಕು. ಪವಿತ್ರ ಕುರ್‌ಆನಿನ ಶಿಕ್ಷಣವನ್ನೆಂದೂ ಭಾರವೆಂಬ ಭಾವನೆ ಬರದಂತೆ ನೋಡಿಕೊಳ್ಳಬೇಕು. ಅನ್ಯಥಾ ಭಾವನಾತ್ಮಕ ಸಂಬಂಧ ಬೆಳೆಸುವ ಬದಲು ದ್ವೇಷಕ್ಕೆ ಕಾರಣವಾದೀತು.

8. ಮಸೀದಿಗಳು ಸ್ವಚ್ಛ ಮತ್ತು ಆಕರ್ಷಕವಾಗಿರಬೇಕು. ಪರಿಸರ ಪ್ರಶಾಂತ ಮತ್ತು ಗಂಭೀರವಾಗಿರಬೇಕು. ಹಿರಿಯರು ಮಸೀದಿಯ ಶಿಷ್ಟಾಚಾರವನ್ನು ಸಂಪೂರ್ಣ ಪಾಲಿಸಬೇಕು. ಪುಟ್ಟ ಮಕ್ಕಳನ್ನಂತೂ ಮಸೀದಿಗೆ ಕರಕೊಂಡು ಹೋಗಬಾರದಷ್ಟೇ. ಆದರೆ ಐದಾರು ವರ್ಷ ಪ್ರಾಯವಾದಾಗ, ಸ್ವಚ್ಛತೆ ಮತ್ತು ಸತ್ರ್ ಪಾಲಿಸುತ್ತಾ ಎಂದಾದರೂ ತಮ್ಮ ಜತೆ ಮಸೀದಿಗೆ ಕರಕೊಂಡು ಹೋಗುತ್ತಲಿರಬೇಕು. ನಮಾಝಿಗಳೂ ಅಷ್ಟೇ, ಮಸೀದಿಗೆ ಬಂದ ಮಕ್ಕಳನ್ನು ಗೌರವದ ದೃಷ್ಟಿಯಿಂದ ನೋಡಬೇಕು. ಹುಬ್ಬೇರಿಸುವುದು ಅಥವಾ ಗದರಿಸುವುದು ಸಲ್ಲ, ಶಿಷ್ಟಾಚಾರ ತಪ್ಪಿದಲ್ಲಿ ಪ್ರೀತಿಯಿಂದ ತಿಳಿ ಹೇಳಬೇಕು. ಹಿರಿಯರು ಸ್ವಯಂ ಶಿಷ್ಟಾಚಾರ ಪಾಲಿಸಿದರೆ, ಅದನ್ನು ನೋಡಿ ಮಕ್ಕಳೂ ಕ್ರಮೇಣ ಕಲಿತುಕೊಳ್ಳುತ್ತಾರೆ. ಹಲವೊಮ್ಮೆ ಹಿರಿಯರು ಮಸೀದಿಯಲ್ಲಿ ಮಕ್ಕಳನ್ನು ನಿರ್ದಯವಾಗಿ ಗದರಿಸುತ್ತಾರೆ. ಅದರಿಂದಾಗಿ ಮಕ್ಕಳು ಮಸೀದಿಗೆ ಹೋಗುವುದಕ್ಕೇ ಹಿಂದೇಟು ಹಾಕುತ್ತಾರೆ. ನೆನಪಿರಲಿ- ಇಂತಹ ಕೃತ್ಯಗಳು ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ.

9. ಮಕ್ಕಳು ಬೆಳೆದಂತೆಲ್ಲ ಅವರಿಗೆ ಅಲ್ಲಾಹನ ಅನುಗ್ರಹ ಮತ್ತು ಕೊಡುಗೆಗಳು, ಸಹಾಬಿಗಳ, ಸುಧಾರಕರ, ಧಾರ್ಮಿಕ ನೇತಾರರ ಮತ್ತು ಸಮುದಾಯದ ಕಲ್ಯಾಣ ಸಂಸ್ಥೆಗಳ ಸೇವೆಗಳನ್ನು ಪರಿಚಯಿಸುವ ಮೂಲಕ ಮಕ್ಕಳಲ್ಲೂ ಅಂತಹ ಕಾರ್ಯಗಳಲ್ಲಿ ಭಾವನಾತ್ಮಕ ಸಂಬಂಧ ಬೆಳೆಸಬೇಕು. ಈ ಸಂಬಂಧವು ಅವರಲ್ಲಿ ಸತ್ಯಪ್ರೇಮ ಮತ್ತು ಮಿಥ್ಯ ದ್ವೇಷವನ್ನು ಬೆಳೆಸುವುದು. ಅವರು ಪಥಭ್ರಷ್ಟರು ಮತ್ತು ಅಪರಾಧಿಗಳಿಂದ ದೂರ ಉಳಿಯುವರು. ಧರ್ಮ ಮತ್ತು ಸಮುದಾಯದ ಸೇವೆಗೈಯಲು ಪ್ರೇರಿತರಾಗುವರು.

10. ಭಾವಾವೇಶಕ್ಕೊಳಗಾಗಿರುವಾಗ ಮಕ್ಕಳನ್ನು ಕೆಣಕಬಾರದು. ಬದಲಾಗಿ ಅರ್ಹ ಮೇರೆಯೊಳಗೆ ಸಮಾಧಾನಗೊಳ್ಳಲು ಅವಕಾಶ ನೀಡಬೇಕು. ಆದರೆ ಅಪ್ರಿಯ ಕಾರ್ಯವೆಸಗುವುದರಿಂದ ತಡೆಯಲು ಯುಕ್ತಿಪೂರ್ಣವಾಗಿ ವ್ಯವಹರಿಸಬೇಕು.

11. ಮನೆ, ಶಾಲೆ ಮತ್ತು ಬಂಧು-ಮಿತ್ರರಲ್ಲಿ ನಡೆಯುವ ಸಮಾರಂಭಗಳಲ್ಲಿ ಮಕ್ಕಳಿಗೂ ಪಾಲ್ಗೊಳ್ಳಲು ಮತ್ತು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶವೀಯಬೇಕು. ವಿಶೇಷತಃ ಅತಿಥಿಗಳ ಆಗಮನದಿಂದ ಸಂತೋಷ ಹಾಗೂ ಅವರ ಆತಿಥ್ಯದ ವ್ಯವಸ್ಥೆ ಇತ್ಯಾದಿಗಳಲ್ಲಿ, ಇದರಿಂದ ಮಕ್ಕಳ ಭಾವನೆಗಳಿಗೆ ಸಮಾಧಾನವೊದಗುವುದು, ಉತ್ತಮ ಭಾವನೆಗಳು ಬೆಳೆಯುವುದು ಮತ್ತು ಭಾವನಾತ್ಮಕ ಸಂಬಂಧವೂ ಹುಟ್ಟಿಕೊಳ್ಳುವುದು.

12. ಒಂದು ವೇಳೆ ಮಕ್ಕಳ ಭಾವನೆಗಳು ತಪ್ಪು ದಾರಿ ತುಳಿದರೆ, ಸರಿಯಾದ ಕಾರಣವನ್ನು ಹುಡುಕಿ ಅದರ ಪರಿಹಾರಕ್ಕೆ ಪ್ರಯತ್ನಿಸಬೇಕು. ಆ ಮೂಲಕ ಮುಂದೆ ಅದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕು. ಅನಾರೋಗ್ಯದ ಕಾರಣ ಆ ರೀತಿ ವ್ಯವಹರಿಸುತ್ತಿದ್ದರೆ, ಅದಕ್ಕೆ ಸೂಕ್ತ ಚಿಕಿತ್ಸೆ ನೀಡಬೇಕು. ಒಂದು ವೇಳೆ ಕೆಟ್ಟ ಪ್ರವೃತ್ತಿಗೆ ಶಿಕ್ಷೆ ನೀಡಲೇ ಬೇಕೆಂದಿದ್ದರೆ, ಪರಾಮರ್ಶಿಸಿಯೇ ಶಿಕ್ಷಿಸಬೇಕು. ಆದರೆ ತಕ್ಷಣವೇ ಅವರ ದುಃಖ ದೂರ ಮಾಡಬೇಕು.

ಅಧ್ಯಾಯ - 10

ಬೆಳವಣಿಗೆಯ ಹಂತಗಳು

ಮಕ್ಕಳು ಹಂತಹಂತವಾಗಿ ಪ್ರಾಯ ಪ್ರಬುದ್ಧತೆಗೆ ಬರುತ್ತಾರೆ. ಹಿರಿಯರ ಲೋಕದಲ್ಲಿ ಪ್ರವೇಶಿಸಲು ಅವರಿಗೆ ಹಲವು ಹಂತಗಳನ್ನು ದಾಟಿ ಬರಬೇಕಾಗುತ್ತದೆ. ಬೆಳವಣಿಗೆಯ ಈ ಹಂತಗಳು ಪ್ರತ್ಯಪ್ರತ್ಯೇಕ ವಿಶೇಷತೆಗಳನ್ನು ಹೊಂದಿವೆ. ಮಕ್ಕಳ ಶಿಕ್ಷಣ-ತರಬೇತಿಯಲ್ಲಿ ಈ ವಿಶೇಷತೆಗಳನ್ನು ಪರಿಗಣಿಸಿದಲ್ಲಿ, ನಿಮ್ಮ ಪ್ರಯತ್ನಗಳು ಪ್ರಭಾವಶಾಲಿ ಮತ್ತು ಪ್ರಯೋಜನಕಾರಿಯಾಗಿ ಪರಿಣಮಿಸುತ್ತವೆ. ಅನ್ಯಥಾ ಎಷ್ಟು ಪ್ರಯತ್ನಿಸಿದರೂ ಯಶಸ್ಸು ದೊರೆಯುವುದು ಸಂಶಯ. ಮಾತ್ರವಲ್ಲ, ಈ ಪ್ರಯತ್ನಗಳು ಕೆಲವೊಮ್ಮೆ ಪ್ರತಿಕೂಲ ಪರಿಣಾಮವನ್ನೂ ಪಡೆಯುವ ಸಾಧ್ಯತೆಯಿದೆ.

ವಿವಿಧ ಹಂತಗಳು

ಬೌದ್ಧಿಕ ಮತ್ತು ದೈಹಿಕವಾಗಿ ಬೆಳೆದು ಪ್ರಾಯಪ್ರಬುದ್ಧತೆಗೆ ತಲುಪಲು, ಮಕ್ಕಳಿಗೆ ಈ ಕೆಳಗಿನ ಹಂತಗಳನ್ನು ದಾಟಬೇಕಾಗಿ ಬರುತ್ತದೆ.

1. ಶೈಶವಾವಸ್ಥೆ (ಆರಂಭಿಕ ಬಾಲ್ಯ): ಹುಟ್ಟಿನಿಂದ ಐದು ವರ್ಷಗಳ ತನಕ.
2. ಬಾಲ್ಯ: ಆರರಿಂದ ಒಂಭತ್ತು ವರ್ಷಗಳ ತನಕ.
3. ಕೌಮಾರ್ಯ: ಒಂಬತ್ತು-ಹತ್ತು ವರ್ಷಗಳಿಂದ ಹನ್ನೆರಡು ಹದಿಮೂರು ವರ್ಷಗಳ ವರೆಗೆ.
4. ಹದಿಹರೆಯ: ಹದಿಮೂರು, ಹದಿನಾಲ್ಕು ವರ್ಷಗಳಿಂದ ಹದಿನೇಳು ಹದಿನೆಂಟರ ಹರೆಯ.

ಆಹಾರ-ಪಾನೀಯ, ಪರಿಸರ ಮತ್ತು ಸಾಮಾಜಿಕ ಸ್ಥಿತಿಗತಿಗಳು ಬೆಳವಣಿಗೆಯ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ. ಹಾಗಾಗಿ ಮಕ್ಕಳ ಖಾಸಗಿ ಪರಿಸ್ಥಿತಿಯ ಕಾರಣವಾಗಿ ಈ ಅವಧಿಗಳಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಹೀಗೆ ಎಲ್ಲ ಮಕ್ಕಳಲ್ಲಿ ಸಂಪೂರ್ಣ ಸಾಮ್ಯತೆ ಕಾಣಲು ಸಾಧ್ಯವಿಲ್ಲ, ಇದೇ ರೀತಿಯಲ್ಲಿ ಒಂದು ಮಗು ಹಂತಹಂತವಾಗಿ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ಸಾಗುತ್ತದೆ. ಆದ್ದರಿಂದ

ಪ್ರತಿಯೊಂದು ಅವಸ್ಥೆಯ ಬಗ್ಗೆ ಈ ಮೇಲೆ ತಿಳಿಸಲಾದ ಅವಧಿಯು ಒಂದು ಅಂದಾಜು ಅಷ್ಟೇ. ಅದೇನಿದ್ದರೂ ಪ್ರತಿಯೊಂದು ಮಗುವಿಗೂ ಈ ಹಂತಗಳನ್ನು ದಾಟಬೇಕಾಗುತ್ತದೆ.

ಶೈಶವ
(ಹುಟ್ಟಿನಿಂದ ಐದು ವರ್ಷಗಳ ತನಕ)

ಪ್ರತಿಯೊಂದು ಹಂತವು ಬೇರೆ ಬೇರೆ ಕಾರಣಗಳಿಂದಾಗಿ ಅತಿ ಪ್ರಮುಖವಾಗಿದೆ. ಐದು ವರ್ಷಗಳ ವರೆಗೆ ಮಕ್ಕಳು ತಾಯಿಯ ಮಡಿಲಲ್ಲಿ ಅಥವಾ ಮನೆಯ ವಾತಾವರಣದಲ್ಲಿ ಏನೆಲ್ಲ ಕಲಿಯುತ್ತಾರೋ ಅವುಗಳ ಛಾಪು ಅವರ ಜೀವನಪೂರ್ತಿ ಇರುತ್ತದೆ. ಆದ್ದರಿಂದ ಈ ಹಂತಕ್ಕೆ ಮೂಲಭೂತ ಸ್ಥಾನವಿದೆ. ಆಹಾರ-ಪಾನೀಯ ಸೇವನೆ ಮತ್ತು ಇತರರೊಡನೆ ಬೆರೆಯುವುದು, ವಸ್ತ್ರಧಾರಣೆ, ನಡತೆ ಎಲ್ಲವನ್ನೂ ಮಕ್ಕಳು ಈ ಹಂತದಲ್ಲೇ ಕಲಿಯುತ್ತವೆ. ಪ್ರೀತಿ, ದ್ವೇಷ, ಭಯ-ನಿರ್ಭಯ, ಸ್ವಾತಂತ್ರ್ಯ-ನಿರ್ಬಂಧ, ಸಹಾನುಭೂತಿ-ಸಹಕಾರ, ತ್ಯಾಗ-ಬಲಿದಾನ, ಚಳಿ-ಸೆಖೆ, ಕಠೋರತೆ-ಮೃದುತ್ವ ಸುಖ-ದುಃಖ ಇತ್ಯಾದಿಗಳೆಲ್ಲದರ ಅನುಭವ ಮತ್ತು ಪ್ರಜ್ಞೆಯು ಇದೇ ಹಂತದಲ್ಲಿ ಬೆಳೆದು ಬರುತ್ತದೆ.

ದೈಹಿಕವಾಗಿಯೂ ಈ ಹಂತವು ಅತಿ ಪ್ರಮುಖವದುದಾಗಿದೆ. ಮೊದಲೆರಡು ವರ್ಷಗಳಲ್ಲಿ ಕೆಲವು ದೈಹಿಕ ನ್ಯೂನತೆಗಳು ಕಂಡುಬರುವ ಸಾಧ್ಯತೆ ಇದೆ. ಅವುಗಳನ್ನು ಸರಿಪಡಿಸಲು ಜೀವನ ಪರ್ಯಂತ ಸಾಧ್ಯವಿರಲಾರದು. ವಿಶೇಷತಃ ದೃಷ್ಟಿ, ಶ್ರವಣ ಮತ್ತು ವಾಕ್‌ಶಕ್ತಿಗಳಲ್ಲಿ ತೊಂದರೆ ಕಾಣಿಸಿಕೊಳ್ಳಬಹುದು. ಇದು ದೈಹಿಕ ಮಾತ್ರವಲ್ಲ, ಮಾನಸಿಕ ಬೆಳವಣಿಗೆಯ ಮೇಲೂ ಪ್ರಭಾವ ಬೀರುತ್ತದೆ.

ಈ ಹಂತದಲ್ಲಿ ದೈಹಿಕ ಬೆಳವಣಿಗೆ ಶೀಘ್ರವಾಗಿರುತ್ತದೆ. ವಿಶೇಷತಃ ಸ್ತನಪಾನದ ಅವಧಿಯಲ್ಲಿ ನಾಲ್ಕುವರೆ ವರ್ಷಗಳ ವರೆಗಂತೂ ಯೌವನ ಕಾಲದ ಎತ್ತರದ ಅರ್ಧದಷ್ಟು ಎತ್ತರಕ್ಕೆ ಮಗು ಬೆಳೆಯುತ್ತದೆ.

ವಿಶೇಷತೆಗಳು

ಈ ಹಂತದ ಪ್ರಮುಖ ವಿಶೇಷತೆಗಳು ಈ ಪ್ರಕಾರ ಇರುತ್ತವೆ.

1. ದೈಹಿಕ ಮತ್ತು ಮಾನಸಿಕವಾಗಿ ಮಗು ತೀರಾ ದುರ್ಬಲವಾಗಿರುತ್ತದೆ. ಪ್ರತಿಯೊಂದು ಕೆಲಸಕ್ಕೂ ಹಿರಿಯರನ್ನು ಅವಲಂಬಿಸಿರುತ್ತದೆ. ಹಸಿವು, ದಾಹ ಮತ್ತು ಅಪಾಯದ ಸಂದರ್ಭದಲ್ಲಿ ಮಗುವಿಗೆ ಹಿರಿಯರ ಅಗತ್ಯ ಬಹಳವಿರುತ್ತದೆ. ಆರಂಭದ ಸುಮಾರು ಎರಡು ವರ್ಷಗಳು ಸ್ತನಪಾನದಲ್ಲಿ ಕಳೆಯುತ್ತದೆ. ಮಾತೆಯ ಮಡಿಲೇ ಅತಿದೊಡ್ಡ ಆಶ್ರಯವಾಗಿರುತ್ತದೆ. ನಂತರವೂ ಮಗು ತಾಯಿ ಮತ್ತು ಮನೆಯ

ವಾತಾವರಣವನ್ನೇ ಹೆಚ್ಚು ಅವಲಂಬಿಸಿರುತ್ತದೆ. ವಾಸ್ತವದಲ್ಲಿ ಮಗುವಿನ ಪೋಷಣೆಗೆ ಬೇಕಾಗಿರುವ ಪ್ರೀತಿ, ಕರುಣೆ, ಮಮತೆ, ಹಿತಚಿಂತನೆ, ತ್ಯಾಗ ಮತ್ತು ಉತ್ಸಾಹವು ತಾಯಿ ಮತ್ತು ಕುಟುಂಬದ ಇತರ ಸದಸ್ಯರಿಂದಲ್ಲದೆ ಬೇರೆ ಯಾರಲ್ಲೂ ಇರಲು ಸಾಧ್ಯವಿಲ್ಲ. ಈ ಹಂತದಲ್ಲಿ ಯಾವುದಾದರೂ ಕಾರಣದಿಂದಾಗಿ ಮನೆಯ ಪ್ರೀತಿ, ಮಮತೆ ಮತ್ತು ಸಹಕಾರದಿಂದ ವಂಚಿತರಾಗುವ ಮಕ್ಕಳು ನಿರ್ಮಲ ಮಾನವೀಯ ಭಾವನೆಗಳಿಂದಲೂ ವಂಚಿತರಾಗುತ್ತಾರೆ. ಆದ್ದರಿಂದ ಮಕ್ಕಳ ಶಿಕ್ಷಣ-ತರಬೇತಿಗಾಗಿ ಮನೆಯ ವಾತಾವರಣವನ್ನೇ ಉತ್ತಮ ಪಡಿಸಬೇಕಾಗಿದೆ ಹಾಗೂ ತೀರಾ ವಿವಶತೆಯಿದ್ದ ಹೊರತು ಈ ಹೊಣೆಗಾರಿಕೆಯನ್ನು ನರ್ಸರಿ (ಅಂಗನವಾಡಿ) ಶಾಲೆಗಳಿಗೆ ಒಪ್ಪಿಸಬಾರದು. ಹಾಗೆಯೇ ಸಣ್ಣ ಮಕ್ಕಳ ಪಾಲಿಗೆ ಅಧ್ಯಾಪಕ-ಅಧ್ಯಾಪಕಿಯರು ಪ್ರೀತಿ-ಮಮತೆಯಲ್ಲಿ ಮಾತಾ-ಪಿತರಿಗೆ ಪರ್ಯಾಯವಾಗಲು ಪ್ರಯತ್ನಿಸಬೇಕು; ಶಾಲೆ ಮತ್ತು ತರಗತಿಯ ಪರಿಸರವು ಮನೆಯ ವಾತಾವರಣಕ್ಕೆ ಅಪರಿಚಿತವಾಗಿ ಕಾಣದಂತೆ ನೋಡಿಕೊಳ್ಳಬೇಕು. ಕೆಲವರು ಮಕ್ಕಳಿಗೆ ಓದು-ಬರಹ ಕಲಿಸಲು ತ್ವರೆ ಮಾಡುತ್ತಾರೆ. ಇದು ಮಕ್ಕಳ ದೈಹಿಕ ಆರೋಗ್ಯ ಮತ್ತು ಮಾನಸಿಕ ಬೆಳವಣಿಗೆ ಎರಡರ ಮೇಲೂ ಹೊಡೆತ ನೀಡುತ್ತದೆ. ಐದು-ಆರು ವರ್ಷಗಳಿಗಿಂತ ಮುಂಚೆ ಹಾಗೆ ಮಾಡಲೇಬಾರದು.

2. ಶರ್ತರಹಿತ ಮತ್ತು ಭಾಗೀದಾರಿಕೆಯಿಲ್ಲದ ಪ್ರೀತಿಯನ್ನು ಮಕ್ಕಳು ಬಯಸುತ್ತಾರೆ. ನನ್ನನ್ನು ಪ್ರೀತಿಸಬೇಕು, ನನ್ನ ಗುಣವನ್ನಲ್ಲ; ಹಾಗೆಯೇ ನನ್ನನ್ನು ಮಾತ್ರ ಪ್ರೀತಿಸಬೇಕು ಎಂದು ಆಶಿಸುತ್ತಾರೆ. ಆದ್ದರಿಂದಲೇ ಸಹೋದರ-ಸಹೋದರಿ ಅಥವಾ ಮನೆಯ ಇತರ ಮಕ್ಕಳೊಂದಿಗೆ ವೈರತ್ವದ ಭಾವನೆ ಬೆಳೆಯುವ ಆಶಂಕೆ ಇರುತ್ತದೆ. ಮಕ್ಕಳನ್ನು ಮಕ್ಕಳೆಂಬ ನೆಲೆಯಲ್ಲಿ ಪ್ರೀತಿಸಬೇಕು. ಇದರಿಂದ ಅವರಲ್ಲಿ ಆತ್ಮವಿಶ್ವಾಸ ಬೆಳೆದು ಬರುತ್ತದೆ. ಹಾಗೆಯೇ ಎಲ್ಲ ಮಕ್ಕಳನ್ನೂ ಏಕಪ್ರಕಾರ ಪ್ರೀತಿಸಬೇಕು. ಯಾವ ಮಗುವಿಗೂ ತನ್ನನ್ನು ಕಡೆಗಣಿಸಲಾಗುತ್ತಿದೆ ಎಂದು ಭಾಸವಾಗಬಾರದು. ವಿಶೇಷತಃ ಹೊಸ ಮಗುವಿನ ಜನನವಾದಾಗ; ಇದರಿಂದ ಹಿರಿಯ ಮಗುವಿನ ಮನದಲ್ಲಿ ದ್ವೇಷ ಹುಟ್ಟುವ ಸಾಧ್ಯತೆಯಿದೆ.

3. ಸ್ವಭಾವತಃ ಸ್ವಾತಂತ್ರ್ಯ ಮತ್ತು ಗದ್ದಲಪ್ರಿಯರಾಗಿರುತ್ತಾರೆ. ಬಲು ಬೇಗನೇ ಭಾವೋದ್ರೇಕಕ್ಕೊಳಗಾಗುತ್ತಾರೆ. ಆದರೆ ಅದು ತೀರಾ ತಾತ್ಕಾಲಿಕವಾಗಿರುತ್ತದೆ. ಅಂದರೆ ಬಲು ಬೇಗನೇ ತಣ್ಣಗಾಗುತ್ತಾರೆ. ಕ್ಷುಲ್ಲಕ ವಿಷಯಕ್ಕೆಲ್ಲ ಜೋರಾಗಿ ಅಳುವುದು, ನೆಲದಲ್ಲಿ ಹೊರಳಾಡುವುದು ಮತ್ತು ರಮಿಸುವವರಿದ್ದರೆ ಅಳುತ್ತಲೇ ನಗುವುದು ಹಾಗೂ ಕಣ್ಣೀರಿಳಿಯುತ್ತಿರುವ ಗಲ್ಲದೊಂದಿಗೆ ಮುಗುಳ್ನಗುವುದು. ಇವೆಲ್ಲ ನಾವು ದಿನನಿತ್ಯ ನೋಡುವಂತಹದ್ದೇ ತಾನೇ? ಉಗ್ರ ಹತೋಟಿಯು ಮಕ್ಕಳ ಬೆಳವಣಿಗೆ ಮತ್ತು ವಿಕಾಸಕ್ಕೆ ಮಾರಕವಾಗಿದೆ. ನೈತಿಕವಾಗಿಯೂ ಮೋಸ, ಕಾಪಟ್ಯದ ಗುಣ ಬೆಳೆಯಲು ಕಾರಣವಾದೀತು. ಆದ್ದರಿಂದ ಗದ್ದಲ ಮತ್ತು ಅವ್ಯವಸ್ಥೆಯನ್ನು ಸಾದ್ಯಂತ ಸಹಿಸಬೇಕು. ಭಾವನೆಯಲ್ಲಿ

ಉಗ್ರತೆಯಿದ್ದರೆ, ಪ್ರೀತಿಯಿಂದ ರಮಿಸಲು ಪ್ರಯತ್ನಿಸಬೇಕು. ಅದು ಬಿಟ್ಟು ಗದರಿಸುವುದು, ಹೊಡೆದು ಬುದ್ಧಿ ಕಲಿಸುವುದು ಎಳ್ಳಷ್ಟೂ ಸರಿಯಲ್ಲ. ಯುಕ್ತಿಯಿಂದ ಪ್ರವರ್ತಿಸಿದರೆ ಮಕ್ಕಳು ಸುಲಭದಲ್ಲಿ ನಿಯಂತ್ರಣಕ್ಕೆ ಬರುತ್ತಾರೆ.

4. ಸ್ವಭಾವ ಮತ್ತು ಭಾವನೆಗಳಿಗೆ ಅಧೀನವಾಗಿರುತ್ತಾರೆ. ಅವುಗಳ ಬೇಡಿಕೆಗಳ ತ್ವರಿತ ಈಡೇರಿಕೆಯನ್ನು ಬಯಸುತ್ತಾರೆ. ಈಡೇರಿಕೆಯಲ್ಲಿ ಅಡೆತಡೆಯುಂಟಾದರೆ ಅತ್ಯಂತ ಕಳವಳಗೊಳ್ಳುತ್ತಾರೆ ಮತ್ತು ಹಠ ಹಿಡಿಯುತ್ತಾರೆ. ವರ್ತಮಾನದಲ್ಲೇ ಮಗ್ನರಾಗಿರುತ್ತಾರೆ. ಭವಿಷ್ಯದ ಚಿಂತೆ ಕೊಂಚವೂ ಇರುವುದಿಲ್ಲ. ಜೈವಿಕ ದೃಷ್ಟಿಕೋನದಂತೆ, ಆ ಮಕ್ಕಳ ಪಾಲಿಗೆ ಅದುವೇ ಸೂಕ್ತ. ಆದ್ದರಿಂದ ಅವರ ಆ ವಿಶೇಷತೆಗಳ ಬಗ್ಗೆ ರಿಯಾಯಿತಿ ಇರಲಿ. ಸ್ವಭಾವ ಮತ್ತು ಭಾವನೆಗಳ ಮೇಲೆ ಹತೋಟಿ ಸಾಧಿಸಲು ಹಂತಹಂತವಾಗಿ ಅಭ್ಯಾಸ ಮಾಡಿಸಿಕೊಳ್ಳಬೇಕು. ಅನುಭವಗಳೊಂದಿಗೆ ಕ್ರಮೇಣ ಚಿಂತನೆ ಮತ್ತು ನಿರ್ಧಾರ ಶಕ್ತಿಯಲ್ಲಿ ಹೆಚ್ಚಳವುಂಟಾಗತೊಡಗುತ್ತದೆ. ಇದು ಆಗದೇ ನಿಯಂತ್ರಣ ಸಾಧ್ಯವಿಲ್ಲ. ಆದ್ದರಿಂದ ಈ ವಿಷಯವಾಗಿ ತ್ವರೆ ಮಾಡಬಾರದು.

5. ತುಂಬಾ ತುಂಟರೂ ಆಟಪ್ರಿಯರೂ ಆಗಿರುತ್ತಾರೆ. ತಿನ್ನುವುದು, ಆಡುವುದು, ನಿದ್ರಿಸುವುದು ಮತ್ತು ಅಳುವುದು ಇವೇ ಅವರ ಮುಖ್ಯ ಕೆಲಸವಾಗಿರುತ್ತದೆ. ಯಾವಾಗಲೂ ಏನಾದರೊಂದು ಮಾಡುತ್ತ ಕೆಡವುತ್ತಾ ಇರುತ್ತಾರೆ. ಆಟಿಕೆಗಳಲ್ಲಿ ಪ್ರತ್ಯೇಕವಾಗಿ ಆಡಲು ಬಯಸುತ್ತಾರೆ. ಒಟ್ಟಿಗೆ ಸೇರಿ ಆಡುವುದು ಕೇವಲ ಸ್ಪರ್ಧೆ ಇಲ್ಲದ ಆಟ ಮಾತ್ರ. ಸೋಲಲು ತಯಾರಿಲ್ಲದ ಕಾರಣ ಪೈಪೋಟಿಯಿರುವ ಆಟಗಳಿಂದ ದೂರವುಳಿಯುತ್ತಾರೆ. ಆದ್ದರಿಂದ ಆಟದ ವಿಧಾನವನ್ನು ಹೇಳಿಕೊಟ್ಟು ವಿಧವಿಧವಾದ, ರಂಗುರಂಗಿನ ಆಟಿಕೆಗಳನ್ನು ನೀಡಿ ಅವರಿಗೆ ಆಡಲು ಅನುವು ಮಾಡಿಕೊಡಬೇಕು. ಅಂತೆಯೇ ಕಲಿಸುವುದೇನಿದ್ದರೂ ಸಾದ್ಯಂತ ಆಟದೊಂದಿಗೇ ಕಲಿಸಬೇಕು.

6. ತನ್ನ ಮೇಲೆಯೇ ಹೆಚ್ಚು ಪ್ರೀತಿ. ಮೇಲ್ನೋಟಕ್ಕೆ ಸ್ವಾರ್ಥಿಯಾಗಿ ಕಾಣುತ್ತಾರೆ. ಇದು ಜೈವಿಕ ಬೇಡಿಕೆಯಾಗಿದೆ ಮತ್ತು ಮಕ್ಕಳ ಬೆಳವಣಿಗೆಗೆ ತೀರಾ ಅಗತ್ಯವಾಗಿದೆ. ಈ ಬಗ್ಗೆ ಗದರಿಸಬಾರದು. ಅಂತೆಯೇ ತ್ಯಾಗ ಮತ್ತು ಉನ್ನತ ಚಾರಿತ್ರ್ಯದ ನಿರೀಕ್ಷೆಯನ್ನಿಡಬಾರದು. ಹಿರಿಯರು ತಮ್ಮ ಪಾಲಿನಿಂದಲೂ ಸಣ್ಣ ಮಕ್ಕಳಿಗೆ ನೀಡುವುದೊಳಿತು. ಹಾಗೆಯೇ ತನ್ನಲ್ಲಿನ ಹೆಚ್ಚು ವಸ್ತುಗಳಿಂದ ಅಲ್ಪಸ್ವಲ್ಪವಾದರೂ ಇತರರಿಗೆ ನೀಡಿದರೆ, ಅದನ್ನು ಪ್ರಶಂಸಿಸಬೇಕು ಮತ್ತು ಬಾಯಿ ತುಂಬಾ ಹೊಗಳಬೇಕು. ಈ ಪ್ರಕಾರ, ಕ್ರಮೇಣ ತ್ಯಾಗವನ್ನು ಕಲಿಯಲು ಸಾಧ್ಯ.

7. ತರತರದ ಪ್ರಶ್ನೆ ಕೇಳುವ ಮತ್ತು ಹೆಚ್ಚು ಮಾತನಾಡುವ ಪ್ರವೃತ್ತಿ ಇರುತ್ತದೆ. ಇದರಿಂದಾಗಿ ಮಗುವನ್ನು ಗದರಿಸಬಾರದು. ಪ್ರಶ್ನೆ ಕೇಳುವುದು ಆರೋಗ್ಯಪೂರ್ಣ ಮೆದುಳಿನ ಲಕ್ಷಣವಾಗಿದೆ. ಮಾತು ಮಾತಲ್ಲೇ ಮಗು ಬಹಳಷ್ಟನ್ನು ಕಲಿಯುತ್ತದೆ ಮತ್ತು

ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತದೆ. ಮಗುವಿನ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡಬೇಕು ಮತ್ತು ಮಾತನಾಡಲು, ಏನಾದರೂ ಪ್ರಶ್ನಿಸಲು ಪ್ರೇರೇಪಿಸುತ್ತಲೂ ಇರಬೇಕು.

8. ವಿವಿಧ ರೀತಿಯ ಕ್ರಿಯೆಗಳು, ಶಬ್ದ-ನಾದಗಳನ್ನು ಮಗು ಅನುಕರಿಸುತ್ತದೆ ಹಾಗೂ ಆಟಗಳಲ್ಲಿ ಅದನ್ನು ಆವರ್ತಿಸುತ್ತಿರುತ್ತದೆ. ಇತರರು ಮಾಡುವುದನ್ನು ನೋಡಿ, ತನಗರಿವಿಲ್ಲದೆಯೇ ಅದನ್ನು ಅನುಕರಿಸುತ್ತದೆ. ಕಿವಿಗೆ ಬೀಳುವ ಒಳ್ಳೆಯ-ಕೆಟ್ಟ ಶಬ್ದಗಳೆಲ್ಲವೂ ಮಕ್ಕಳ ಬಾಯಲ್ಲಿ ಪುನರಾವರ್ತನೆಯಾಗುತ್ತದೆ. ಆದ್ದರಿಂದ ಹಿರಿಯರು ಮಕ್ಕಳ ಮುಂದೆ ಒಳ್ಳೆಯ ವರ್ತನೆ ತೋರಬೇಕು ಮತ್ತು ಪರಿಸರವನ್ನು ಪರಿಶುದ್ಧವಾಗಿರಿಸಬೇಕು. ಆಟದ ಮೂಲಕವೇ ಆಹಾರ ಪಾನೀಯ ಸೇವನೆ, ಜನರೊಡನೆ ವರ್ತನೆ ಇತ್ಯಾದಿ ಶಿಷ್ಟಾಚಾರಗಳನ್ನು ಕಲಿಸುತ್ತಾ ಇರಬೇಕು. ನಾಲಗೆಯ ಆರೋಗ್ಯ ಅಂದರೆ ಪದೋಚ್ಚಾರ ಮತ್ತು ಪದಗಳ ಬಳಕೆಯ ಸುಧಾರಣೆಯ ನಿಟ್ಟಿನಲ್ಲಿ ಅನುಕರಣೆ ಮಾಡುವ ಆಟದ ಮೂಲಕ ಪ್ರಯೋಜನ ಪಡೆಯಬಹುದು. ಆದರೆ ಈ ಎಲ್ಲ ಕಾರ್ಯಗಳೂ ಮೌಖಿಕ ಅಥವಾ ಪ್ರಾಯೋಗಿಕವಾಗಿ ನಡೆಯಬೇಕು. ಬರೆಯುವ, ಓದುವ ಅಥವಾ ಪಠಿಸುವ ನಿಯಮಗಳ ಭಾರವನ್ನು ಹೇರಲೇ ಬಾರದು. ಪ್ರಾಣಿ-ಪಕ್ಷಿಗಳ ಶಬ್ದವನ್ನು ಅನುಕರಿಸಲು ಕೂಡ ಅವಕಾಶ ನೀಡಬೇಕು. ಮಕ್ಕಳಿಗೆ ಅದರಲ್ಲಿ ಬಹಳ ಆನಂದ ಸಿಗುತ್ತದೆ. ಆದರೆ ಯಾರದೇ ನ್ಯೂನತೆಯನ್ನು ಅನುಕರಿಸಲು ಬಿಡಬಾರದು.

9. ಅರಿವು ಮತ್ತು ಅನುಭವದ ಕೊರತೆಯಿಂದಾಗಿ ಮಗುವಿಗೆ ಸಾಧ್ಯಾಸಾಧ್ಯತೆಗಳ ವ್ಯತ್ಯಾಸ ತಿಳಿಯುವುದಿಲ್ಲ, ಆದ ಕಾರಣ ಅದರ ಕಲ್ಪನಾ ಶಕ್ತಿಯು ತೀವ್ರವಾಗಿರುತ್ತದೆ. ಭೂತ-ಪ್ರೇತ, ಜಿನ್ನ್-ಅಪ್ಸರೆ, ದೇವಿ-ದೇವತೆ, ಪ್ರಾಣಿ-ಪಕ್ಷಿ ಇತ್ಯಾದಿಗಳ ವಿಚಿತ್ರವಾದ ಕಥೆಗಳನ್ನು ಮಗು ಸತ್ಯವೆಂದೇ ಭಾವಿಸುತ್ತದೆ. ಅಂತಹ ವಿಷಯಗಳನ್ನು ಕೂಡಲೇ ನಂಬಿ ಬಿಡುತ್ತದೆ. ಆದ್ದರಿಂದ ಮನದಲ್ಲಿ ಗುಮಾನಿ ಬೆಳೆಯಬಹುದಾದಂತಹ ಕಥೆ-ಪ್ರಸಂಗಗಳನ್ನು ಈ ಪ್ರಾಯದಲ್ಲಿ ಮಕ್ಕಳಿಗೆ ಹೇಳಲೇ ಬಾರದು. ಪ್ರವಾದಿಗಳ ಕಥೆಗಳಲ್ಲಿ ವಿಶೇಷತಃ ಪವಾಡಗಳನ್ನು ತಿಳಿಸುವುದು ಮತ್ತು ಪ್ರಾಣಿಗಳ ಕಥೆಯ ಮೂಲಕ ನೀತಿ ಹಾಗೂ ಬೌದ್ಧಿಕ ತರಬೇತಿ ನೀಡುವುದು, ಹಾಗೆಯೇ ಆ ಮೂಲಕ ಮಾತು ಕಲಿಸುವುದು ಇತ್ಯಾದಿ ಮಾಡುವುದೊಳಿತು.

10. ಗಾಢ ಬಣ್ಣ, ದೊಡ್ಡ ಶಬ್ದ, ಅಸಾಮಾನ್ಯ ಕ್ರಿಯೆ ಮತ್ತು ಸಿಹಿ ವಸ್ತುಗಳನ್ನು ಮಗು ಬಹಳ ಇಷ್ಟಪಡುತ್ತದೆ. ಅವುಗಳೆಡೆಗೆ ಬಹಳ ಬೇಗನೇ ಆಕರ್ಷಿತವಾಗುತ್ತದೆ. ಹಾಗಾಗಿ ನಿಮ್ಮ ಸಾಮರ್ಥ್ಯಕ್ಕನುಸಾರ ಬಣ್ಣದ, ಶಬ್ದ ಮಾಡುವಂತಹ ಮರದ ಅಥವಾ ಪ್ಲಾಸ್ಟಿಕ್‌ನ ಆಟಿಕೆಗಳನ್ನು ತಂದು ಕೊಡಬೇಕು. ಬಳಸುವ ವಸ್ತು ಕೂಡಾ ಬಣ್ಣಬಣ್ಣದ್ದಾಗಿದ್ದರೆ ಚೆನ್ನ. ವಸ್ತು ದುಬಾರಿಯೋ ಅಪರೂಪದ್ದೋ ಆಗಿರಬೇಕೆಂದೇನಿಲ್ಲ. ವರ್ಣಮಯವಾಗಿರಬೇಕಾದುದು ಅಗತ್ಯ. ಈ ಹಂತದಲ್ಲಿ ಮಗುವಿನ ಆಗ್ರಹಗಳನ್ನು

ಮನ್ನಿಸದಿದ್ದರೆ ಅಥವಾ ಪೂರೈಸುವಲ್ಲಿ ಅಡೆತಡೆಯುಂಟಾದರೆ, ಅದರಿಂದಾಗಿ ಮಗುವಿನ ಬೌದ್ಧಿಕ ವಿಕಾಸದ ಮೇಲೆ ಪ್ರತಿಕೂಲ ಪರಿಣಾಮವುಂಟಾಗುತ್ತದೆ. ಮಗು ಬೆಳೆದ ಮೇಲೆ ಅದರ ಚಾರಿತ್ರ್ಯದಲ್ಲಿ ಅದು ಪ್ರತಿಫಲಿಸುತ್ತದೆ. ಅದರ ಜತೆಗೇ ಬಣ್ಣ ಇತ್ಯಾದಿಗಳ ಕುರಿತಾದ ಬಾಲಿಶವಾದ ಆಸಕ್ತಿಯು ಮಗು ಬೆಳೆದ ಮೇಲೂ ಮುಂದುವರಿಯುತ್ತದೆ. ಏಕೆಂದರೆ ಅದರ ಆ ಪ್ರಾಯದಲ್ಲಿ ಪೂರ್ತಿಯಾಗದ ಆಗ್ರಹವು ದೈಹಿಕವಾಗಿ ಬೆಳೆದರೂ ಮಾನಸಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಹೀಗೆ ಬಾಲಿಶವಾದ ಆಗ್ರಹವು ಪೂರ್ತಿಯಾಗದೆ ಮಗು ಮುಂದುವರಿಯುವುದಿಲ್ಲ.

11. ಸುತ್ತಲಿರುವ ಸಾಮಾನ್ಯ ವಸ್ತುಗಳನ್ನು ಗಮನ ಕೊಟ್ಟು ನೋಡುವ, ಸ್ಪರ್ಶಿಸುವ, ಉಪಯೋಗಿಸುವ ಮತ್ತು ಅವುಗಳ ಕುರಿತು ಮಾಹಿತಿ ಪಡೆಯುವ ಆಸಕ್ತಿ ಹಾಗೂ ಕುತೂಹಲ ಇರುತ್ತದೆ. ಮಗುವಿಗೆ ಅನುಭವ ಮತ್ತು ವೀಕ್ಷಣೆಗೆ ಸಾಕಷ್ಟು ಅವಕಾಶವನ್ನೊದಗಿಸಬೇಕು. ಪರಿಸರದಲ್ಲಿ ಬೆಳೆಯುವ ಫಲ-ತರಕಾರಿಗಳು, ಗಿಡ-ಮರಗಳು, ಪ್ರಾಣಿ-ಪಕ್ಷಿಗಳು, ಕ್ರಿಮಿ-ಕೀಟ ಇತ್ಯಾದಿಗಳನ್ನು ನೋಡಲು ಮತ್ತು ಅವುಗಳ ಕುರಿತು ಮಾಹಿತಿ ನೀಡಲು ಆಗಾಗ ನಿಮ್ಮೊಂದಿಗೆ ಮಗುವನ್ನೂ ವಿಹಾರಕ್ಕೆ ಕರಕೊಂಡು ಹೋಗಬೇಕು. ಆವಶ್ಯಕ ಮಾಹಿತಿಗಳನ್ನೂ ನೀಡುತ್ತಿರಬೇಕು. ಅಂದ ಹಾಗೆ, ವಸ್ತುಗಳ ವಿವೇಚನೆ ಚೆನ್ನಾಗಿ ಆಗಬೇಕಾದರೆ ಪಂಚೇಂದ್ರಿಯಗಳ ಆರೋಗ್ಯದ ಬಗ್ಗೆ ಖಾತರಿಯನ್ನೂ ಹೊಂದಿರಬೇಕು.

12. ಸೃಜನಾತ್ಮಕ ಸ್ವಭಾವ ತೀವ್ರವಾಗಿರುತ್ತದೆ. ಮಗು ಏನನ್ನಾದರೂ ನಿರ್ಮಿಸುತ್ತಾ ಕೆಡವುತ್ತಾ ಇರುತ್ತದೆ. ಆದರೆ ಈ ನಿರ್ಮಾಣ-ಸಂಹಾರದಲ್ಲಿ ಮಗು ವ್ಯತ್ಯಾಸವನ್ನು ಗುರುತಿಸುವುದಿಲ್ಲ, ಅದರ ಮಟ್ಟಿಗೆ ವಸ್ತುವಿನ ರೂಪ ಬದಲಾಗುವುದೇ ನಿರ್ಮಾಣವಾಗಿದೆ. ಅದು ಸರಿಯಾದರೂ ಕೆಟ್ಟು ಹೋದರೂ ವ್ಯತ್ಯಾಸವಿಲ್ಲ, ಮಣ್ಣು, ರದ್ದಿ ಕಾಗದ, ಖಾಲಿ ಡಬ್ಬಿ, ಮರದ ತುಂಡು, ಸುಲಭ ಮತ್ತು ಅಗ್ಗದ ಆಟಿಕೆ ಇತ್ಯಾದಿಗಳನ್ನು ಒದಗಿಸುವ ಮೂಲಕ ಮಗುವಿಗೆ ಏನನ್ನಾದರೂ ಮಾಡುವ, ಜೋಡಿಸುವ, ಕ್ರಮಬದ್ಧವಾಗಿಸುವ ಇತ್ಯಾದಿ ಕಲೆಗಳಲ್ಲಿ ಪಕ್ವಗೊಳಿಸಲು ಅವಕಾಶ ಒದಗಿಸಬೇಕು. ಈ ಪ್ರಕಾರ ಮಗು ಕೈ, ಕಣ್ಣು ಮತ್ತು ಮೆದುಳುಗಳ ನಡುವೆ ಸಂಬಂಧ ಸ್ಥಾಪಿಸುವ ಹಾಗೂ ಆ ಮೂರೂ ಅಂಗಗಳಿಂದ ಏಕಕಾಲದಲ್ಲಿ ಕೆಲಸ ಮಾಡುವ ಅಭ್ಯಾಸ ಪಡೆಯುತ್ತದೆ.

13. ವಿಶಿಷ್ಟ ಮತ್ತು ಅಪರೂಪದ ವಸ್ತುಗಳನ್ನು ಹೆಕ್ಕಿ ಜೇಬಿನಲ್ಲಿ ತುಂಬಿಸಿಡುವ ಆಸಕ್ತಿ ಬಹಳ ಇರುತ್ತದೆ. ಆದರೆ ಈ ಹಂತದಲ್ಲಿ ಮಗುವಿಗೆ ಅಪರೂಪವಾಗಿ ಕಾಣುವ ವಸ್ತುಗಳು ತೀರಾ ತುಚ್ಛವಾಗಿರುತ್ತವೆ. ನೀವು ನಾಲ್ಕೈದು ವರ್ಷ ಪ್ರಾಯದ ಮಗುವಿನ ಜೇಬನ್ನು ಪರಿಶೀಲಿಸಿ ನೋಡಿ. ಅದರಲ್ಲಿ ಕಾಗದದ ತುಂಡು, ಮಣ್ಣಿನ ಪಾತ್ರೆ ಇತ್ಯಾದಿಗಳ ತುಂಡು, ಹಣ್ಣುಗಳ ಬೀಜ, ಗಾಜು ಹಾಗೂ ಬಣ್ಣ ಬಣ್ಣದ ಇತರ ತುಂಡುಗಳು ಸಿಗಬಹುದು. ಶೇಖರಣೆ ಮತ್ತು ಒಡೆತನದ ಆಸಕ್ತಿಯು ಸ್ವಾಭಾವಿಕವಾಗಿದೆ. ಈ ಸ್ವಭಾವವನ್ನು

ತುಳಿಯಬಾರದು. ಮಗುವಿಗೆ ತನ್ನ ಇಷ್ಟದ ವಸ್ತುಗಳನ್ನು ಸಂಗ್ರಹಿಸಿಡಲು ಸ್ವಲ್ಪ ಸುರಕ್ಷಿತವಾದ ಸ್ಥಳ ಬೇಕು. ಈ ಪ್ರಕಾರ ಮಗು ಕ್ರಮೇಣ ಒಳ್ಳೆಯ ಆಸಕ್ತಿಯನ್ನು ಬೆಳೆಸಿಕೊಳ್ಳಲು ಅದು ಸಹಕಾರಿಯಾಗುತ್ತದೆ. ವಸ್ತುಗಳನ್ನು ಒಪ್ಪ-ಓರಣವಾಗಿಡಲು ಮತ್ತು ಸಿಂಗರಿಸಲೂ ಮಗು ಕಲಿಯುತ್ತದೆ. ಮಗುವಿಗೆ ವಸ್ತುಗಳನ್ನು ಇಡಲು ಸುರಕ್ಷಿತ ಜಾಗ ಸಿಗದ ಕಾರಣವೇ ಅವುಗಳನ್ನು ಜೇಬಿನಲ್ಲಿ ತುಂಬಿಸಿಡುತ್ತದೆ.

14. ಅಪರಿಚಿತರೊಂದಿಗೆ ಬೆರೆಯಲು ಹಿಂಜರಿಯುತ್ತದೆ. ಬಹಳ ಅಳುಕಿನಿಂದಲೇ ಆತ್ಮೀಯತೆ ಬೆಳೆಯುತ್ತದೆ. ಗೆಳೆತನ ಬೆಳೆಸುವುದೂ ಬಹಳ ನಿಧಾನ. ಒಂದು ವೇಳೆ ಮಗುವಿನ ಸ್ವಂತ ವಿಷಯಗಳ ಬಗ್ಗೆ ಮಾತನಾಡಿದರೆ, ಅದರ ಆಟಿಕೆ ಮತ್ತಿತರ ವಸ್ತುಗಳನ್ನು ಹೊಗಳಿದರೆ, ಮಗುವಿಗೆ ತಿಂಡಿ ಮತ್ತು ಆಟಿಕೆಗಳನ್ನು ನೀಡಿದರೆ ಅಥವಾ ಅದರ ಆಟದಲ್ಲಿ ಭಾಗಿಯಾದರೆ, ಕ್ರಮೇಣ ಮಗು ನಿಮ್ಮೊಂದಿಗೆ ಮುಕ್ತವಾಗಿ ಬೆರೆಯತೊಡಗುತ್ತದೆ. ನಂತರ ನಿಮ್ಮೊಡನೆ ಬಾಯಿ ತುಂಬಾ ಮಾತನಾಡತೊಡಗುತ್ತದೆ ಮತ್ತು ತನ್ನ ದುಃಖ-ದುಮ್ಮಾನ, ಚಿಂತೆಗಳನ್ನೆಲ್ಲ ತಿಳಿಸುತ್ತದೆ.

15. ಕಂಡದ್ದು ಕೇಳಿದ್ದನ್ನು ಆಗಾಗ ಪುನರಾವರ್ತಿಸಲು ಮಗು ಪ್ರಯತ್ನಿಸುತ್ತದೆ. ಆದ್ದರಿಂದ ಕಥೆ ಹೇಳಿದ ಮೇಲೆ, ಯಾವುದಾದರೂ ಘಟನೆಯನ್ನು ತಿಳಿಸಿದ ಮೇಲೆ ಅಥವಾ ಏನನ್ನಾದರೂ ಕಲಿಸಿದ ಬಳಿಕ ಪುನರಾವರ್ತಿಸಲು ಸಾಕಷ್ಟು ಅವಕಾಶವನ್ನು ನೀಡಬೇಕು. ಈ ರೀತಿ ಮಾತನ್ನು ಅಭ್ಯಾಸ ಮಾಡಲು ಸಹಕಾರಿಯಾಗುತ್ತದೆ. ವಾಕ್ಯಗಳು ಸಂಘರ್ಷಿಸುವಂತಹ ಅಥವಾ ಒಂದು ಸುಂದರ ವಾಕ್ಯ ಆಗಾಗ ಪುನರಾವರ್ತಿಸಲ್ಪಡುವಂತಹ ಕಥೆಗಳಲ್ಲಿ ಮಕ್ಕಳಿಗೆ ಬಹಳ ಆಸಕ್ತಿ ಇರುತ್ತದೆ.

16. ಪದಗಳ ಕೊರತೆ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಸಾಮರ್ಥ್ಯ ಇಲ್ಲದ ಕಾರಣ ಮಗು ತನ್ನ ಆಗ್ರಹ, ಅಗತ್ಯ ಅಥವಾ ಕಷ್ಟವನ್ನು ತಿಳಿಸುವಲ್ಲಿ ಸೋಲುತ್ತದೆ. ಆದ್ದರಿಂದ ಮಗುವಿನ ಸಂಜ್ಞೆಗಳನ್ನು ತಿಳಿಯಲು ಮತ್ತು ಅದರ ಅಗತ್ಯ, ಕಾಯಿಲೆ ಅಥವಾ ಕಷ್ಟಗಳನ್ನು ಸ್ವಯಂ ಅಂದಾಜಿಸಲು ಪ್ರಯತ್ನಿಸಬೇಕು. ಹೀಗೆ ಅದರ ದೈಹಿಕ ಕೊರತೆ, ಕಾಯಿಲೆ ಮತ್ತು ಬೌದ್ಧಿಕ ತೊಂದರೆಗಳನ್ನು ಅವಲೋಕಿಸುತ್ತಲಿರಬೇಕು ಹಾಗೂ ಅವುಗಳನ್ನು ದೂರೀಕರಿಸಲು ಪ್ರಯತ್ನಿಸುತ್ತಿರಬೇಕು.

17. ತನ್ನ ಕೆಲವು ಕಾರ್ಯಗಳಲ್ಲಿ ಮಗು ಹಸ್ತಕ್ಷೇಪವನ್ನು ಸಹಿಸುವುದಿಲ್ಲ, ಬದಲಾಗಿ ಸ್ವಯಂ ಮಾಡಲು ಬಯಸುತ್ತದೆ. ಉದಾ: ಬಟ್ಟೆ ಅಥವಾ ಪಾದರಕ್ಷೆ ಧರಿಸಲು ಪ್ರಯತ್ನಿಸುವುದು, ಸ್ವಯಂ ಮುಖ-ಕೈಕಾಲು ತೊಳೆಯುವುದು, ತಿನ್ನಲು ಅಥವಾ ಕುಡಿಯಲು ಪ್ರಯತ್ನಿಸುವುದು ಇತ್ಯಾದಿ. ಇವು ಬಹಳ ಪ್ರಯೋಜನಕಾರಿ ಒಲವುಗಳಾಗಿವೆ. ಹೀಗೆ ಮಾಡಲು ಸಾಧ್ಯಂತ ಅವಕಾಶ ನೀಡಬೇಕು. ಅದರಲ್ಲಿ ಹಸ್ತಕ್ಷೇಪ ಮಾಡುವ ಬದಲು ಅಗತ್ಯಾನುಸಾರ ಸರಿಯಾದ ರೀತಿಯನ್ನು ತಿಳಿಸಿ ಕೊಡಬೇಕು. ಇದರಿಂದ ಕ್ರಮೇಣ ಮಗು

ತನ್ನ ಕಾಲಲ್ಲೇ ನಿಲ್ಲಲು ಮತ್ತು ತನ್ನ ಕೆಲಸಗಳಿಗೆ ಹಿರಿಯರನ್ನು ಅವಲಂಬಿಸದಿರಲು ಕಲಿಯುತ್ತದೆ. ವಸ್ತುಗಳ ಮೇಲೆ ನಿಯಂತ್ರಣ ಅಥವಾ ಹಿಡಿತ ಗಟ್ಟಿಯಾಗಿಲ್ಲದ ಕಾರಣ ಹಿಡಿದ ವಸ್ತು ಕೈಯಿಂದ ಬಿದ್ದು ಬಿಡಬಹುದು. ಒಡೆದು ಹೋಗಲೂಬಹುದು. ಇದು ಮಗು ಬೇಕಂತಲೇ ಮಾಡುವುದಲ್ಲ, ಆದ್ದರಿಂದ ಅದಕ್ಕಾಗಿ ಮಗುವನ್ನು ಗದರಿಸುವುದೋ ಹೊಡೆಯುವುದೋ ಮಾಡಬಾರದು. ಅನ್ಯಥಾ ಮಗುವಿನಲ್ಲಿ ಆತ್ಮವಿಶ್ವಾಸ ಇಲ್ಲವಾಗುತ್ತದೆ. ಇಂತಹ ಘಟನೆಗಳಿಂದ ಮಗು ಸ್ವಯಂ ಲಜ್ಜಿತವಾಗುತ್ತದೆ ಮತ್ತು ತನ್ನ ಕೈಯಿಂದ ಬಿದ್ದ ಅಥವಾ ತನ್ನ ಬಾಯಿಗೆ ಬರದ ವಸ್ತುವನ್ನೇ ತಪ್ಪಿತಸ್ಥವೆಂದು ಭಾವಿಸುತ್ತದೆ. ಇಂತಹ ವೇಳೆಯಲ್ಲೆಲ್ಲ ಮಗುವಿನಲ್ಲಿ ಆತ್ಮವಿಶ್ವಾಸ ಬೆಳೆಸಲಿಕ್ಕಾಗಿ ಸಂತೈಸುವುದೇ ಸೂಕ್ತ ವಿಧಾನವಾಗಿದೆ.

18. ಪ್ರಸಿದ್ಧವಾಗುವ, ಪ್ರೀತಿಪಾತ್ರವಾಗುವ ಮತ್ತು ತನ್ನೆಡೆಗೆ ಎಲ್ಲರ ಗಮನ ಸೆಳೆಯುವ ಆಸಕ್ತಿ ಬಹಳ ಇರುತ್ತದೆ. ಸರಿಯಾದ ರೀತಿಯಲ್ಲಿ ಗಮನ ಸೆಳೆಯಲಾಗದಿದ್ದರೆ, ಅಪ್ರಿಯವಾದ ರೀತಿಯಲ್ಲಿ ಗಮನ ಸೆಳೆಯಲು ಪ್ರಯತ್ನಿಸುತ್ತದೆ. ಉದಾ: ಕಿರುಚಾಡುವ ಮತ್ತು ಚೀರಾಡುವ ಅಥವಾ ಹಾಸಿಗೆಯಲ್ಲಿಯೇ ಮಲಮೂತ್ರ ವಿಸರ್ಜಿಸುವ ಮೂಲಕ, ತಮ್ಮ-ತಂಗಿಯರನ್ನು ಸತಾಯಿಸುವ ಮೂಲಕ. ಆದ್ದರಿಂದ ಸೂಕ್ತ ರೀತಿಯಲ್ಲಿ ಮಗುವಿನ ಕಡೆಗೆ ಗಮನ ನೀಡುತ್ತಿರಬೇಕು. ಇತರರಲ್ಲಿ ಮಗುವನ್ನು ಹೊಗಳಬೇಕು ಮತ್ತು ಮಗು ಏನಾದರೂ ಕಲಿತಿದ್ದರೆ ಅದನ್ನು ಇತರರ ಮುಂದೆ ಪ್ರದರ್ಶಿಸಬೇಕು.

19. ಕತ್ತಲಿಗೆ ಭಯಪಡುತ್ತದೆ ಮತ್ತು ಭಯಾನಕ ಶಬ್ದಗಳನ್ನು ಕೇಳಿ ಬೆಚ್ಚಿ ಬೀಳುತ್ತದೆ. ಬಿದ್ದು ಬಿಡುವ ಭಯವೂ ಇರುತ್ತದೆ. ಹಾಗಾಗಿ ಮಕ್ಕಳನ್ನು ಹೆದರಿಸಬಾರದು ಮತ್ತು ಸ್ವಯಂ ಅವರ ಮುಂದೆ ಭಯಪಟ್ಟಂತೆ ವರ್ತಿಸಬಾರದು. ಏಕೆಂದರೆ ಯಾವುದೇ ವಸ್ತುವಿನ ಬಗ್ಗೆ ನೀವು ಭಯಪಟ್ಟರೆ, ಮಗುವೂ ಅದನ್ನು ನೋಡಿ ಭಯಪಡಲು ಕಲಿಯುತ್ತದೆ.

ಬಾಲ್ಯ
(6ರಿಂದ 9 ವರ್ಷ)

ಮಗುವಿನ ಈ ಹಂತವೂ ದೈಹಿಕ ಬೆಳವಣಿಗೆಯದ್ದಾಗಿರುತ್ತದೆ. ಆದರೆ ಶೈಶವ ಕಾಲದಲ್ಲಿದ್ದಷ್ಟು ತೀವ್ರವಾಗಿರುವುದಿಲ್ಲ. ಈ ಹಂತದಲ್ಲಿ ಮಗುವಿನ ಲೋಕವು ಮನೆಯ ನಾಲ್ಕು ಗೋಡೆಗಳಿಗೆ ಸೀಮಿತವಾಗಿರುವುದಿಲ್ಲ, ಬದಲಾಗಿ ಮಗು ಮನೆಯಿಂದ ಹೊರಗಡಿಯಿಡುತ್ತದೆ ಮತ್ತು ಹೊಸ ಹೊಸ ಮಿತ್ರರನ್ನೂ ಮಾಡಿಕೊಳ್ಳುತ್ತದೆ. ಬೌದ್ಧಿಕ ಮತ್ತು ದೈಹಿಕವಾಗಿ ಒಂದು ಹಂತದ ವರೆಗೆ ತನ್ನ ಕೆಲಸವನ್ನು ಸ್ವತಃ ಮಾಡಲು ಶಕ್ತವಾಗಿರುತ್ತದೆ. ಪ್ರತಿಯೊಂದು ವಿಷಯದಲ್ಲಿ ಹಿರಿಯರನ್ನೇ ಅವಲಂಬಿಸಿರುವುದಿಲ್ಲ, ಸ್ವತಃ ಶೌಚ್ಯ ಮಾಡುತ್ತದೆ, ತನ್ನ ಇಜಾರಿನ ಲಾಡಿ ಸ್ವಯಂ ಕಟ್ಟುತ್ತದೆ, ಮಾತನ್ನು ಅರ್ಥ ಮಾಡಿಕೊಳ್ಳುತ್ತದೆ ಮತ್ತು

ತನ್ನ ಅಗತ್ಯಗಳನ್ನು ಅರುಹಲು ಶಕ್ತವಾಗಿರುತ್ತದೆ. ಮಿತ್ರರು ಸಿಕ್ಕಿದರೆ ಮತ್ತು ಆಸಕ್ತಿದಾಯಕ ಆಟದಲ್ಲಿ ತೊಡಗಿದರೆ ಗಂಟೆಗಟ್ಟಲೆ ತನ್ನ ಹೆತ್ತವರಿಂದ ದೂರವಿರುತ್ತದೆ. ಆದ್ದರಿಂದ ಈ ಪ್ರಾಯದಲ್ಲಿ ಶಾಲೆಗೆ ಸೇರಿಸಿ ಅಧಿಕೃತವಾಗಿ ವಿದ್ಯಾಭ್ಯಾಸವನ್ನು ಆರಂಭಿಸಬೇಕು.

ಈ ಹಂತದ ಕೆಲವು ಮುಖ್ಯ ವಿಶೇಷತೆಗಳನ್ನು ಇಲ್ಲಿ ನೀಡುತ್ತಿದ್ದೇವೆ. ಶಿಕ್ಷಣ-ತರಬೇತಿಯಲ್ಲಿ ಇವುಗಳನ್ನು ಪರಿಗಣಿಸಬೇಕಾದುದು ಬಹಳ ಅಗತ್ಯ.

1. ತುಂಟತನದಲ್ಲಿ ಹೆಚ್ಚಳ, ಓಡಾಟ-ಹಾರಾಟದಲ್ಲಿ ಸದಾ ಆಸಕ್ತಿ; ನೆರೆಕರೆ, ಕೇರಿ ಮತ್ತು ಶಾಲೆಗಳಲ್ಲಿ ಗೆಳೆತನ ಬೆಳೆಸುವುದರಲ್ಲಿ ಮತ್ತು ಅವರೊಡನೆ ಸೇರಿ ಆಟವಾಡುವುದರಲ್ಲಿನ ಆಸಕ್ತಿ ಹೆಚ್ಚುತ್ತಲಿರುತ್ತದೆ. ಮನೆ ಮತ್ತು ಮನೆಮಂದಿಯೊಂದಿಗಿನ ಒಡನಾಟ ಸ್ವಲ್ಪ ಕಡಿಮೆಯಾಗುತ್ತದೆ. ಗೆಳೆಯರ ಮಧ್ಯೆ ಒಂದು ಸ್ಥಾನವನ್ನು ಗಿಟ್ಟಿಸುವ ಚಿಂತೆ ಇರುತ್ತದೆ. ಈ ಎಲ್ಲ ಒಲವುಗಳು ಪ್ರಯೋಜನಕಾರಿಯಾಗಿವೆ. ಇವುಗಳ ಪೋಷಣೆಗೆ ಅವಕಾಶ ಒದಗಿಸಬೇಕು ಹಾಗೂ ಈ ವಿಷಯದಲ್ಲಿ ತಡೆಯುವುದರಿಂದ ಅಥವಾ ಹೆಚ್ಚು ನಿರ್ಬಂಧ ಹೇರುವುದರಿಂದ ದೂರವಿರಬೇಕು. ಗೆಳೆಯರೊಡನೆ ಆಟವಾಡುವುದರಿಂದ ಮತ್ತು ಗದ್ದಲವೆಬ್ಬಿಸುವುದರಿಂದ ಮಕ್ಕಳಿಗೆ ಒಂದು ರೀತಿಯ ಆನಂದ ಸಿಗುತ್ತದೆ. ಅದರಿಂದ ಅವರನ್ನು ತಡೆದರೆ ಮಕ್ಕಳ ವ್ಯಕ್ತಿತ್ವದ ಹಲವು ಮಗ್ಗುಲುಗಳು ಪ್ರಭಾವಿತವಾಗುತ್ತವೆ. ಅದೇನಿದ್ದರೂ ಮಗುವಿನ ಗೆಳೆಯರ ಮೇಲೆ ನಿಗಾ ಇರಿಸಬೇಕು. ಒಮ್ಮೊಮ್ಮೆ ಅವರನ್ನು ಮನೆಗೆ ಕರೆದು ಆತಿಥ್ಯ ನೀಡಲೂ ಅವಕಾಶ ನೀಡಬೇಕು. ಇದರಿಂದ ಮಗುವಿನ ಗೌರವ ಹೆಚ್ಚುತ್ತದೆ ಮತ್ತು ಸಂಗಡಿಗರ ಮೇಲೂ ಒಳ್ಳೆಯ ಪ್ರಭಾವವುಂಟಾಗುತ್ತದೆ.

2. ಕುತೂಹಲ ಮತ್ತು ಪರಿಸರದ ಬಗ್ಗೆ ಮಾಹಿತಿ ಗಳಿಸುವ ಆಸಕ್ತಿಯಲ್ಲಿ ಹೆಚ್ಚಳವುಂಟಾಗುತ್ತದೆ. ಈ ಹಂತದಲ್ಲಿ ಮಕ್ಕಳ ಲೋಕವು ವಿಶಾಲವಾಗುವ ಕಾರಣ, ಅನುಭವ ಮತ್ತು ವೀಕ್ಷಣೆಯ ರಂಗವೂ ವಿಸ್ತಾರವಾಗುತ್ತದೆ. ಮಕ್ಕಳು ಮಾಹಿತಿ ಗಳಿಸಲಿಕ್ಕಾಗಿ ತರತರದ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ಬಹಳ ಹೆಚ್ಚಾಗಿ ಮಾತನಾಡುತ್ತಾರೆ. ಹಾಗಾಗಿ ಮಕ್ಕಳನ್ನು ಕೆಲವೊಮ್ಮೆ ಪಿಕ್‌ನಿಕ್ ಅಥವಾ ಶೈಕ್ಷಣಿಕ ಪ್ರವಾಸಕ್ಕೆ ಕರಕೊಂಡು ಹೋಗಿ, ಹತ್ತಿರದ ಪರಿಸರದ ವಸ್ತುಗಳ ಬಗ್ಗೆ ಮಾಹಿತಿಯನ್ನು ನೀಡಬೇಕು. ಈ ಮೂಲಕ ಅವರಿಗೆ ಅದರ ಅನುಭವ ಪಡೆಯುವಂತೆ ಅವಕಾಶ ಒದಗಿಸಬೇಕು. ಅವರ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡಿ ಅವರನ್ನು ಸಂತೃಪ್ತಗೊಳಿಸಬೇಕು. ಹಾಗೆಯೇ ಇನ್ನೂ ಹೆಚ್ಚೆಚ್ಚು ಪ್ರಶ್ನೆ ಕೇಳುವಂತೆ ಪ್ರೇರೇಪಿಸಬೇಕು. ಕೆಲವೊಮ್ಮೆ ಯಾವುದಾದರೂ ಸಮಸ್ಯೆಯನ್ನು ನೀಡಿ ಅದನ್ನು ಪರಿಹರಿಸಲು ಹೇಳುವ ಮೂಲಕ ಸವಾಲುಗಳನ್ನೆದುರಿಸಲು ತರಬೇತುಗೊಳಿಸಬೇಕು.

3. ಆಟದಲ್ಲಿ ಹಂತಹಂತವಾಗಿ ವ್ಯವಸ್ಥೆ ಬೆಳೆಯುತ್ತದೆ. ನೀತಿ ನಿಯಮಗಳ ಪಾಲನೆಯ ಪ್ರಜ್ಞೆ ಬೆಳೆಯುತ್ತದೆ. ಹಾಗಾಗಿ ಒಟ್ಟಿಗೆ ಸೇರಿ ಆಟವಾಡುವುದರ ಮಹತ್ವವನ್ನು ಪರಿಗಣಿಸುತ್ತಾ,

ತನ್ನ ಇಷ್ಟಕ್ಕೆ ವಿರುದ್ಧ ತರತರವಾದ ನಿರ್ಬಂಧಗಳನ್ನು ಸಹಿಸಲೂ ಮಕ್ಕಳು ಸಿದ್ಧರಾಗುತ್ತಾರೆ. ಉದಾ: ಸರದಿಯ ಪಾಲನೆ, ತನಗೆ ಸಿಕ್ಕ ಪಾತ್ರವನ್ನು ನಿರ್ವಹಿಸುವುದು ಇತ್ಯಾದಿ. ಈ ಒಲವುಗಳನ್ನು ಬಳಸಿ ಸಾಮಾಜಿಕ ಜೀವನದಲ್ಲಿ ನಿಯಮಗಳ ಪಾಲನೆ ಮತ್ತು ಸಾಮೂಹಿಕ ಶಿಷ್ಟಾಚಾರ ಪಾಲನೆ ಹಾಗೂ ಉತ್ತಮ ಅಭ್ಯಾಸವನ್ನು ಬೆಳೆಸಲು ತರಬೇತುಗೊಳಿಸಬೇಕು.

4. ಮನೆ ಮತ್ತು ಶಾಲೆಯ ಕುರಿತ ಬದ್ಧತೆಯ ಪ್ರಜ್ಞೆ ಹೆಚ್ಚುತ್ತದೆ. ಇವೆರಡನ್ನೂ ಮಕ್ಕಳು ತನ್ನದೆಂದು ಭಾವಿಸುತ್ತಾರೆ. ಇವುಗಳ ಒಂದು ಅಂಗ ಎಂಬ ನೆಲೆಯಲ್ಲಿ ತನ್ನ ಹೊಣೆಗಾರಿಕೆಯ ಪ್ರಜ್ಞೆಯನ್ನೂ ಹೊಂದುತ್ತಾರೆ. ತನ್ನ ಮನೆ ಮತ್ತು ಶಾಲೆಯನ್ನು ಯಾರಾದರೂ ದೂರಿದರೆ ಸಹಿಸಲಾರರು. ತನ್ನ ಹೆತ್ತವರು ಮತ್ತು ಅಧ್ಯಾಪಕರನ್ನು ಮನಸಾರೆ ಗೌರವಿಸುತ್ತಾರೆ. ಅವರ ಅವಮಾನವನ್ನು ಎಳ್ಳಷ್ಟೂ ಸಹಿಸುವುದಿಲ್ಲ, ಹಾಗಾಗಿ ಎರಡೂ ಕಡೆ ಮಕ್ಕಳಲ್ಲಿ ತನ್ನತನದ ಭಾವನೆ ಬೆಳೆಯಲು ಅವಕಾಶ ಒದಗಿಸಿಕೊಡಬೇಕು. ಅಂತೆಯೇ ಸಣ್ಣಪುಟ್ಟ ಹೊಣೆಗಾರಿಕೆಗಳನ್ನು ವಹಿಸಿಕೊಡಬೇಕು. ಈ ಪ್ರಕಾರ ಮಕ್ಕಳಲ್ಲಿ ಹೊಣೆಗಾರಿಕೆಯ ಪ್ರಜ್ಞೆಯೂ ಬೆಳೆಯುತ್ತದೆ ಮತ್ತು ಸಹಕಾರ ಮನೋಭಾವದ ತರಬೇತಿಯೂ ಆಗುವುದು. ಸಭೆ ಸಮಾರಂಭ ಮತ್ತು ಅತಿಥಿಗಳ ಆಗಮನ ಇತ್ಯಾದಿ ಸಂದರ್ಭಗಳಲ್ಲಿ ಮಕ್ಕಳಿಗೆ ಏನಾದರೊಂದು ಕೆಲಸವನ್ನು ಕೊಟ್ಟು ಬಿಡಬೇಕು.

5. ಸ್ಮರಣ ಶಕ್ತಿಯಲ್ಲಿ ಕ್ರಮಬದ್ಧತೆ ಬೆಳೆಯತೊಡಗುತ್ತದೆ. ಹಲವು ವಿಷಯಗಳನ್ನು ಮಕ್ಕಳು ಪ್ರಜ್ಞಾಪೂರ್ವಕವಾಗಿಯೇ ಬಾಯಿಪಾಠ ಮಾಡುತ್ತಾರೆ. ಈ ಹಂತದಲ್ಲಿ ಸರಳವಾದ ವಿಷಯಗಳನ್ನು ವಿವರಿಸಿಕೊಟ್ಟರೆ ನೆನಪಿಡಲು ಸುಲಭವಾಗುತ್ತದೆ. ಆದ್ದರಿಂದ ಏನೆಲ್ಲ ಬಾಯಿಪಾಠ ಮಾಡಿಸಬೇಕೋ ಅವೆಲ್ಲವುಗಳ ಉದ್ದೇಶ ಮತ್ತು ಅರ್ಥ ವಿವರಣೆಯನ್ನು ತಿಳಿಸಬೇಕು. ಕುರ್‌ಆನ್ ವಚನಗಳು, ದಿಕ್ರ್-ದುಆಗಳು, ಪದ್ಯಗಳು ಹಾಗೂ ಮಗ್ಗಿಗಳನ್ನು ಹಂತಹಂತವಾಗಿ ಹೆಚ್ಚೆಚ್ಚು ಬಾಯಿಪಾಠ ಮಾಡಿಸಬೇಕು. ಈ ಪ್ರಾಯದಲ್ಲಿ ಕಲಿತದ್ದನ್ನು ಜೀವನಪೂರ್ತಿ ಮಕ್ಕಳು ಮರೆಯುವುದಿಲ್ಲ.

6. ತನ್ನ ದೇಹ, ವಸ್ತ್ರ ಮತ್ತು ಬಳಕೆಯ ಇತರ ವಸ್ತುಗಳ ಬಗ್ಗೆ ಅಲಕ್ಷ್ಯರಾಗುತ್ತಾರೆ. ಆದ್ದರಿಂದ ವಸ್ತುಗಳನ್ನು ಇರಿಸಲು ಕಪಾಟು, ಪೆಟ್ಟಿಗೆ ಇತ್ಯಾದಿ ಸ್ಥಳಗಳನ್ನು ನಿಗದಿ ಪಡಿಸಬೇಕು. ಅದರಲ್ಲಿ ಮಕ್ಕಳಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಕ್ರಮೇಣ ಅವರಿಗೆ ತಮ್ಮ ಸಾಮಾನು ಸರಂಜಾಮುಗಳನ್ನು ಅಚ್ಚುಕಟ್ಟಾಗಿ, ಸುರಕ್ಷಿತವಾಗಿ ಮತ್ತು ನಿಯಮಿತವಾಗಿ ಇರಿಸಲು ಅಭ್ಯಾಸ ಮಾಡಿಸಬೇಕು. ವಸ್ತುಗಳನ್ನು ಬಳಸಿದ ಬಳಿಕ ಮಕ್ಕಳು ಸಾಮಾನ್ಯವಾಗಿ ಅಲ್ಲಿ ಇಲ್ಲಿ ಎಸೆದು ಬಿಡುತ್ತಾರೆ. ಬಳಿಕ ಮತ್ತೆ ಅದರ ಅಗತ್ಯ ಇರುವಾಗ ಗಡಿಬಿಡಿಯಾಗುತ್ತದೆ. ಆದ್ದರಿಂದ ಅವುಗಳ ಅಗತ್ಯ ಬೀಳುವಾಗ ಸುಲಭದಲ್ಲಿ ಸಿಗುವಂತಾಗಲು, ಹಿರಿಯರೇ ಆ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ವಸ್ತುಗಳನ್ನು ಅವುಗಳ ಜಾಗದಲ್ಲಿ ಇರಿಸಬೇಕು. ವಿಶೇಷತಃ ಓದು ಬರೆಹದ ವಸ್ತುಗಳು. ಅನ್ಯಥಾ ಬಹಳ ತೊಂದರೆಯಾಗಬಹುದು. ಈ ಪ್ರಾಯದ

ಮಕ್ಕಳು ತಮ್ಮ ವಸ್ತುಗಳನ್ನು ಸರಿಯಾದ ಜಾಗದಲ್ಲಿ ಇರಿಸಬೇಕು ಎಂದು ನಿರೀಕ್ಷಿಸುವುದೇ ಅವಧಿ ಪೂರ್ವವಾಗುತ್ತದೆ. ಅಗತ್ಯದ ವೇಳೆ ಅವರು ಅತ್ತು ಕರೆಯುವವರು ಮತ್ತು ಮಾತಾಪಿತರೊಂದಿಗೇ ಕೇಳುವರು.

7. ಅನುಕರಣೆಯಲ್ಲಿ ಈಗ ಒಂದು ಹಂತದ ವರೆಗೆ ಪ್ರಜ್ಞೆಯ ಪಾತ್ರವಿರುತ್ತದೆ. ಆದರೂ ಹೆಚ್ಚಿನ ಅನುಕರಣೆಗಳು ಅಪ್ರಜ್ಞಾಪೂರ್ವಕವಾಗಿರುತ್ತವೆ. ನಡೆ-ನುಡಿ ಮತ್ತು ವಿವಿಧ ಸಂದರ್ಭಗಳ ಶಿಷ್ಟಾಚಾರಗಳನ್ನು ಅನುಕರಣೆಯ ಆಟಗಳ ಮೂಲಕ ಕಲಿಸಬೇಕು. ಉತ್ತಮ ಕೈಬರಹ, ಉಚ್ಚಾರ, ಮಾದರಿ ಇತ್ಯಾದಿಗಳನ್ನು ನಕಲು ಮಾಡಿಸಬೇಕು. ಮನೆ ಮತ್ತು ಶಾಲೆಯ ಪರಿಸರವನ್ನು ಆದಷ್ಟು ಪರಿಶುದ್ಧವಾಗಿರಿಸಲು ಪ್ರಯತ್ನಿಸಬೇಕು. ಮಕ್ಕಳ ಮುಂದೆ ಉತ್ತಮ ಚರ್ಯೆಯನ್ನು ಪ್ರದರ್ಶಿಸಬೇಕು. ಈ ಮೂಲಕ ಅಪ್ರಜ್ಞಾಪೂರ್ವಕವಾದ ಅನುಕರಣೆಗೆ ಉತ್ತಮ ಮಾದರಿ ದೊರೆಯುತ್ತದೆ.

8. ಕಲ್ಪನೆಗಳು ಕಾರ್ಯರೂಪವನ್ನು ಪಡೆದುಕೊಳ್ಳುತ್ತವೆ. ಹಾಗಾಗಿ ಕ್ರಮೇಣ ಸಾಧ್ಯಾಸಾಧ್ಯಗಳ ನಡುವೆ ವ್ಯತ್ಯಾಸವು ಅರಿವಾಗತೊಡಗುತ್ತದೆ. ಕಾಲ್ಪನಿಕ ಕಥೆ, ವೃತ್ತಾಂತಗಳಲ್ಲಿ ಆಸಕ್ತಿಯೇನೋ ಇರುತ್ತದೆ. ಆದರೆ ಅದೆಲ್ಲ ತಪ್ಪು ಎಂದೂ ಆಲೋಚಿಸತೊಡಗುತ್ತಾರೆ. ಕಲ್ಪನೆಗಳಿಗೆ ಕ್ರಿಯಾ ರೂಪವನ್ನು ನೀಡಲು ಕಲಸಿದ ಆವೆಮಣ್ಣು, ಸ್ಲೇಟ್ ಅಥವಾ ಕರಿಹಲಗೆ, ಬಣ್ಣದ ಕಡ್ಡಿ, ಬಣ್ಣದ ಬ್ರಶ್, ಸಾಮಾನ್ಯ ಕಾಗದ ಇತ್ಯಾದಿಗಳನ್ನು ಒದಗಿಸಬೇಕು.

9. ಸೃಜನಾತ್ಮಕ ಕೆಲಸಗಳ ಮೂಲಕ ಪರಿಣತಿಯನ್ನು ಪಡೆಯುವ ಹಂಬಲ ಬೆಳೆದು ಬರುತ್ತದೆ. ಅವರು ಯಾವಾಗಲೂ ಏನಾದರೂ ಮಾಡುತ್ತ, ಕೆಡವುತ್ತ ಇರುತ್ತಾರೆ. ಹಾಗಾಗಿ ಸೃಜನಾತ್ಮಕ ಹವ್ಯಾಸಗಳನ್ನು ಉದಾ: ಆರ್ಟ್-ಕ್ರಾಫ್ಟ್, ಮಣ್ಣಿನ ಕೆಲಸ, ತೋಟಗಾರಿಕೆ ಇತ್ಯಾದಿಗಳಿಗೆ ಅವಕಾಶವನ್ನು ನೀಡುವ ಮೂಲಕ ಅವುಗಳಲ್ಲಿ ಪರಿಣತಿಯನ್ನು ಹೊಂದಲು ಸಹಾಯ ಮಾಡಬೇಕು. ನಿತ್ಯ ಬಳಕೆಯ ವಸ್ತುಗಳನ್ನು ಸೂಕ್ತ ರೀತಿಯಲ್ಲಿ ಬಳಸುವ ವಿಷಯದಲ್ಲಿ ಮಾರ್ಗದರ್ಶನ ಮತ್ತು ಸಹಾಯ-ಸಹಕಾರ ನೀಡಬೇಕು. ಇದರಿಂದ ಸೃಜನಾತ್ಮಕ ಪ್ರತಿಭೆಗಳು ಬೆಳೆದು ಬರುತ್ತವೆ ಮತ್ತು ಅವುಗಳಲ್ಲಿ ಪರಿಣತಿಯೂ ಹುಟ್ಟುತ್ತದೆ. ವಿಶೇಷ ಒಲವುಗಳ ಅವಲೋಕನವನ್ನೂ ಮಾಡುತ್ತಲಿರಬೇಕು. ಆದರೆ ಈ ಪ್ರಾಯದಲ್ಲಿ ಒಂದು ವಿಷಯದಲ್ಲಿ ಹೆಚ್ಚು ಒಲವು ಇರುವುದು ಕಂಡರೆ, ಅದು ಮುಂದೆಯೂ ಇರಬೇಕೆಂದೇನೂ ಇಲ್ಲ.

10. ಸ್ಪರ್ಧಾ ಮನೋಭಾವ ಮತ್ತು ಸಂಗಡಿಗರ ಮಧ್ಯೆ ಪ್ರಸಿದ್ಧನಾಗುವ ಆಗ್ರಹ ಬೆಳೆಯುತ್ತದೆ. ಈಗ ಹಂತಹಂತವಾಗಿ ಸ್ಪರ್ಧಾತ್ಮಕ ಆಟಗಳಲ್ಲಿ ಆಸಕ್ತಿ ಹುಟ್ಟಿಕೊಳ್ಳುತ್ತದೆ. ಆದರೆ ವೈಫಲ್ಯದಿಂದ ಈಗಲೂ ಭಯಪಡುತ್ತಾರೆ. ಆದ್ದರಿಂದ ಸುಲಭದಲ್ಲಿ ಸೋಲೊಪ್ಪಿಕೊಳ್ಳುವುದಿಲ್ಲ, ಕೆಲವೊಮ್ಮೆ ಆಟದಲ್ಲಿ ಮೋಸವನ್ನೂ ಮಾಡುತ್ತಾರೆ. ಹಾಗಾಗಿ ಆಟ ಮತ್ತು ಓದಿನ ಕೆಲಸದಲ್ಲಿ ಸ್ಪರ್ಧಾತ್ಮಕತೆಯನ್ನು ಹುಟ್ಟಿಸಬೇಕು. ಆದರೆ ಸೋಲಿಗೆ ಹೆಚ್ಚು

ಗಾಬರಿಪಡಲು ಅಥವಾ ಪ್ರತಿಸ್ಪರ್ಧಿಯ ಮೇಲೆ ವೈರ ಕಟ್ಟಿಕೊಳ್ಳಲು ಅವಕಾಶ ನೀಡಬಾರದು. ಅಂತೆಯೇ ಆಟಗಳಲ್ಲಿ ಸೋಲು-ಗೆಲುವಿಗಿಂತ ಪ್ರಾಮಾಣಿಕತೆಗೆ ಹೆಚ್ಚು ಪ್ರಾಶಸ್ತ್ಯ ನೀಡಲು ಪ್ರೇರೇಪಿಸಬೇಕು. ಈ ಮೂಲಕ ಸೋಲು-ಗೆಲುವನ್ನು ಮಕ್ಕಳು ಆಟದಲ್ಲಿ ಸಹಜವೆಂದು ಭಾವಿಸತೊಡಗುವರು. ಅಲ್ಲದೆ ಸೋತಾಗ ಹತಾಶರಾಗುವುದಿಲ್ಲ ಮತ್ತು ಗೆದ್ದಾಗ ಪ್ರತಿಸ್ಪರ್ಧಿಯನ್ನು ಛೇಡಿಸುವುದಿಲ್ಲ.

11. ಸಂಗ್ರಹ ಸ್ವಭಾವವೂ ಬಹಳ ತೀವ್ರವಾಗಿರುತ್ತದೆ. ಶಾಲೆಯ ವಸ್ತುಸಂಗ್ರಹಾಲಯಕ್ಕೆ ಹೂ, ಎಲೆಗಳು, ಹಕ್ಕಿಪುಕ್ಕ, ಗೂಡು, ಚಿಪ್ಪು, ವಿವಿಧ ದೇಶಗಳ ಅಂಚೆಚೀಟಿ ಇತ್ಯಾದಿಗಳನ್ನು ಸಂಗ್ರಹಿಸಲು ಹೇಳಬೇಕು ಮತ್ತು ಅವುಗಳನ್ನು ಅಚ್ಚುಕಟ್ಟಾಗಿ ಇರಿಸಲು ಕಲಿಸಬೇಕು.

12. ಗಮನವು ಆಗಾಗ ತಪ್ಪುತ್ತಿರುತ್ತದೆ. ಹಾಗಾಗಿ ಮಕ್ಕಳು ಒಂದು ವಸ್ತುವಿನಲ್ಲಿ ಹೆಚ್ಚು ಹೊತ್ತು ಗಮನ ಕೇಂದ್ರೀಕರಿಸಿರಲಾರರು. ಆದ್ದರಿಂದ ಯಾವುದಾದರೂ ಒಂದು ವಸ್ತುವಿನಲ್ಲಿ ಹೆಚ್ಚು ಹೊತ್ತು ಗಮನವೀಯುವಂತೆ ಮಾಡುವ ಪ್ರಯತ್ನವು ನಿಷ್ಪ್ರಯೋಜಕವಾಗುತ್ತದೆ. ಅದಕ್ಕಾಗಿ ಒಂದು ವಸ್ತುವಿನ ವಿವಿಧ ಮಗ್ಗುಲುಗಳ ಬಗ್ಗೆ ಗಮನ ಸೆಳೆಯುವುದು ಉತ್ತಮ ವಿಧಾನವಾಗಿದೆ. ಉದಾ: ಒಂದು ಹೂವಿನ ಮೇಲೆ ಗಮನ ಸೆಳೆಯಬೇಕಾದರೆ ಅದರ ರೂಪ, ಬಣ್ಣ ಸುಗಂಧ, ಭಾಗ ಇತ್ಯಾದಿಗಳ ಬಗ್ಗೆ ಪ್ರತ್ಯಪ್ರತ್ಯೇಕವಾಗಿ ಚರ್ಚಿಸಿದರೆ, ಒಟ್ಟಾರೆಯಾಗಿ ಹೂವಿನ ಮೇಲೆಯೇ ಹೆಚ್ಚು ಹೊತ್ತು ಗಮನ ಕೇಂದ್ರೀಕರಿಸಿರುತ್ತದೆ. ಅನ್ಯಥಾ ಒಂದು ಸಣ್ಣ ದೃಷ್ಟಿ ಹಾಯಿಸಿದ ಮೇಲೆ ಗಮನ ಬೇರೆಡೆಗೆ ಹರಿಯುತ್ತದೆ.

13. ಯಾವುದಾದರೂ ಕೊರತೆ ಅಥವಾ ತಪ್ಪಿಗೆ ವಿಮರ್ಶಿಸುವುದು, ಏನಾದರೂ ನ್ಯೂನತೆ ಕಂಡರೆ ಛೇಡಿಸುವುದು, ಕಾರಣವಿಲ್ಲದೆ ಹಾಸ್ಯ ಮಾಡುವುದು, ಒಂದು ಕ್ರಿಯೆಯನ್ನು ನಕಲು ಮಾಡುವುದು ಮತ್ತು ಸಂತೋಷ ಪಡುವುದು - ಇವೆಲ್ಲವೂ ಈ ಹಂತದಲ್ಲಿ ಪ್ರಾರಂಭವಾಗುತ್ತವೆ. ಇದರಲ್ಲಿ ಹಿರಿಯರು-ಕಿರಿಯರು ಅಥವಾ ಗೆಳೆಯರು-ಸಹಪಾಠಿಗಳು ಎಂಬ ಭೇದವಿರುವುದಿಲ್ಲ. ಕೆಟ್ಟ ಮಾತು ಅಥವಾ ಕೆಟ್ಟ ವರ್ತನೆಯನ್ನು ವಿಮರ್ಶಿಸಿದರೆ, ಅದನ್ನು ಮುಕ್ತ ಮನಸ್ಸಿನಿಂದ ಆಲಿಸುತ್ತಾರೆ. ಆದರೆ ಛೇಡಿಸುವುದರಿಂದ ಮತ್ತು ಹಾಸ್ಯ ಮಾಡುವುದರಿಂದ ಆಗುವ ಕಿರಿಕಿರಿಯನ್ನು ಅವರಿಗೆ ಮನವರಿಕೆ ಮಾಡಿಸುವ ಮೂಲಕ ಅವರಿಂದ ಆ ಗುಣವನ್ನು ದೂರ ಮಾಡಿಸುವ ಅಗತ್ಯವಿದೆ. ಆದರೆ ಅದಕ್ಕಾಗಿ ಕಠೋರವಾಗಿ ವರ್ತಿಸುವ ಬದಲು ತಿಳಿ ಹೇಳುವ ಮತ್ತು ಉಪದೇಶಿಸುವ ಕಾರ್ಯವು ಹೆಚ್ಚು ಪರಿಣಾಮಕಾರಿಯಾಗಿದೆ. ವಸ್ತುತಃ ಇತರರು ತನ್ನನ್ನು ಛೇಡಿಸುವುದರಿಂದಲೇ ಮಕ್ಕಳು ಇತರರನ್ನು ಛೇಡಿಸುತ್ತಾರೆ.

14. ಪ್ರತ್ಯಕ್ಷವಾದ ನೀತಿಪಾಠ, ಉಪದೇಶ, ಉಪನ್ಯಾಸದಂತಹ ಮಾತುಗಳಲ್ಲಿ ಆಸಕ್ತಿ ಇರುವುದಿಲ್ಲ. ಅದರಿಂದ ಪ್ರಭಾವಿತರಾಗುವುದೂ ಇಲ್ಲ. ಸಾಮಾಜಿಕ ಶಿಷ್ಟಾಚಾರಗಳ

ಘನತೆ, ನೈತಿಕ ನಿಯಮ ಮತ್ತು ನಮೂರ್ಯ್ಗಳ ಪಾಲನೆಯನ್ನು ಅಭ್ಯಾಸ ಮಾಡಿಸುವ ಅತ್ಯುತ್ತಮ ಮಾದರಿಯು ಹಿರಿಯರ ಸನ್ನಡತೆಯಾಗಿದೆ. ಅದನ್ನು ಮಕ್ಕಳು ಅಪ್ರಜ್ಞಾಪೂರ್ವಕವಾಗಿ ಅನುಕರಿಸುತ್ತಾರೆ. ಅಲ್ಲದೆ ಐತಿಹಾಸಿಕ ಘಟನೆಗಳು, ನೀತಿಕತೆಗಳು, ಪ್ರಾಣಿಗಳ ಕತೆಗಳ ಸಹಾಯದಿಂದ ಉತ್ತಮ ಕಲ್ಪನೆಗಳನ್ನು ಹುಟ್ಟಿಸಬೇಕು. ಮಕ್ಕಳು ಕಥಾನಾಯಕನ ಜಾಗದಲ್ಲಿ ತಮ್ಮನ್ನು ಕಲ್ಪಿಸಿ ಕತೆಯನ್ನಾಲಿಸುತ್ತಾರೆ. ಹಾಗಾಗಿ ಅವರು ಕಥಾನಾಯಕನಂತೆಯೇ ಆಗಬೇಕೆಂದು ಆಶಿಸುತ್ತಾರೆ. ಕಥೆ ಹೇಳುವುದು ನೀತಿಪಾಠದ ಅತಿ ಪರಿಣಾಮಕಾರಿ ವಿಧಾನವಾಗಿದೆ. ಆದರೆ ಕಥೆಯ ಕೊನೆಯಲ್ಲಿ ವಿನಾ ಕಾರಣ ಒಂದು ಫಲಿತಾಂಶವನ್ನು ನಿರ್ಧರಿಸಿ ಮಕ್ಕಳ ಮೇಲೆ ಹೇರುವುದರಿಂದ ಅವರು ಕಿರಿಕಿರಿ ಅನುಭವಿಸುತ್ತಾರೆ. ಕೆಲವೊಮ್ಮೆ ವಿರೋಧ ಭಾವನೆಯೂ ಬೆಳೆಯುವ ಸಾಧ್ಯತೆಯಿದೆ. ಆದ್ದರಿಂದ ಕಥೆ ಹೇಳಿ ಬಿಟ್ಟುಬಿಡಬೇಕು. ಫಲಿತಾಂಶವನ್ನು ನಿರ್ಧರಿಸಿ ಉಪದೇಶಿಸಲು ಹೋಗಬಾರದು. ಮಕ್ಕಳು ಅಪ್ರಜ್ಞಾಪೂರ್ವಕವಾಗಿ ಸ್ವಯಂ ಪ್ರಭಾವಿತರಾಗುತ್ತಾರೆ.

15. ಶಾಲೆಗೆ ತಲುಪಿ, ತನ್ನ ಹೊಸ ಸಹಪಾಠಿಗಳೊಡನೆ ವ್ಯವಹರಿಸುವಾಗ ಮಕ್ಕಳಿಗೆ, ತಮ್ಮ ವಸ್ತುಗಳು ಕಳ್ಳತನವಾಗುವಂತಹ ಕಹಿ ಅನುಭವವೂ ಆಗುತ್ತದೆ. ಮನೆಯಲ್ಲಿ ತನ್ನ ವಸ್ತುಗಳನ್ನು ಎಲ್ಲೆಂದರಲ್ಲಿ ಎಸೆದು ಬಿಡುತ್ತಿದ್ದರು. ಆದರೆ ಅವು ಸುರಕ್ಷಿತವಾಗಿರುತ್ತಿದ್ದುವು. ಆದರೆ ಶಾಲೆಯಲ್ಲಿ ಹಾಗೆ ಮಾಡಿದರೆ ವಸ್ತುಗಳು ಕಳೆದುಹೋಗುತ್ತವೆ. ಹಾಗಾಗಿ ತನ್ನ ವಸ್ತುಗಳ ಬಗ್ಗೆ ಇತರರ ಮೇಲೆ ಭರವಸೆಯು ಇಲ್ಲವಾಗುತ್ತದೆ ಮತ್ತು ಪ್ರತಿಯೋರ್ವನನ್ನೂ ಸಂಶಯದ ದೃಷ್ಟಿಯಿಂದ ನೋಡತೊಡಗುತ್ತಾರೆ. ಆದ್ದರಿಂದ ಮಕ್ಕಳು ಅನುಮತಿ ಪಡೆಯದೆ ಇತರರ ವಸ್ತುಗಳನ್ನು ತೆಗೆದುಕೊಳ್ಳದ ಮತ್ತು ಮಕ್ಕಳ ಭರವಸೆಗೆ ಪೆಟ್ಟಾಗದಂತಹ ವಾತಾವರಣವನ್ನು ತರಗತಿಯಲ್ಲಿ ಉಂಟುಮಾಡಬೇಕು. ಅನ್ಯಥಾ ಇದುವೇ ಮುಂದೆ ಮಕ್ಕಳ ಮನದಲ್ಲಿ ಇಡೀ ಜಗತ್ತಿನ ಮೇಲೆ ಕೆಟ್ಟ ಗುಮಾನಿ ಬೆಳೆಯಲು ಕಾರಣವಾಗಬಲ್ಲುದು.

16. ಕತ್ತಲಿಗೆ ಭಯಪಡುವುದು ಕಡಿಮೆಯಾಗುತ್ತದೆಯಾದರೂ ಈಗಲೂ ಬಹಳಷ್ಟು ಕಲ್ಪಿತ ವಿಷಯಗಳಿಗೆ ಭಯಪಡುತ್ತಾರೆ. ಆದ್ದರಿಂದ ಮಲಗುವ ವೇಳೆ ಭೂತ-ಪ್ರೇತಗಳ ಕಥೆಯನ್ನು ಎಂದಿಗೂ ಹೇಳಬಾರದು. ಮಕ್ಕಳ ಭಯವನ್ನು ಹೋಗಲಾಡಿಸಲು ಸಾಧ್ಯಂತ ಪ್ರಯತ್ನಿಸಬೇಕಾಗಿದೆ. ಅನ್ಯಥಾ ಈ ಭಯವೇ ಮುಂದೆ ಅವರನ್ನು ಹೇಡಿಗಳನ್ನಾಗಿ ಮಾಡುತ್ತದೆ.

ಕೌಮಾರ್ಯ

(ಒಂಭತ್ತು-ಹತ್ತರಿಂದ ಹನ್ನೆರಡು-ಹದಿಮೂರು ವರ್ಷದ ವರೆಗೆ)

ಮಕ್ಕಳ ಈ ಹಂತವು ಸ್ಥಿರತೆ, ಭದ್ರತೆ ಮತ್ತು ಕ್ರಿಯಾಶೀಲತೆಯ ಕಾಲವೆಂದು ಪರಿಗಣಿಸಲ್ಪಡುತ್ತದೆ. ಏಕೆಂದರೆ ಬೆಳವಣಿಗೆಯ ವೇಗವು ಈ ಹಿಂದಿನ ಪ್ರಾಯಕ್ಕೆ ಹೋಲಿಸಿದರೆ

ಬಹಳ ನಿಧಾನವಾಗುತ್ತದೆ. ಅದುವರೆಗೆ ಏನೆಲ್ಲ ಕಲಿತಿರುತ್ತಾರೋ ಅದರಲ್ಲಿ ಪಕ್ವತೆ ಬೆಳೆಯುತ್ತದೆ. ಬೆಳವಣಿಗೆಯ ಹಂತದಲ್ಲಿ ಮಕ್ಕಳು ಬಹಳ ಬೇಗ ದಣಿಯುತ್ತಿದ್ದರು ಮತ್ತು ಅನಾರೋಗ್ಯಕ್ಕೀಡಾಗುತ್ತಿದ್ದರು. ಆದರೆ ಈಗ ಅವರು ತುಂಬಾ ಪರಿಶ್ರಮ ಪಡಬಲ್ಲರು. ಆದ್ದರಿಂದ ದೈಹಿಕ ಮತ್ತು ಬೌದ್ಧಿಕ ಎರಡೂ ರೀತಿಯ ಕೆಲಸಗಳನ್ನು ಅವರಿಂದ ಚೆನ್ನಾಗಿ ಮಾಡಿಸಬಹುದಾಗಿದೆ. ಪರಿಶ್ರಮಪಟ್ಟು ಕಲಿಯಲು ಈ ಪ್ರಾಯವು ಅತ್ಯಂತ ಸೂಕ್ತವಾಗಿದೆ. ಈ ಹಂತದ ಕೆಲವು ವಿಶೇಷತೆಗಳು:

1. ಗುಲ್ಲು-ಗದ್ದಲ, ವಾಚಾಳಿತನ, ತುಂಟಾಟ ಮತ್ತು ಚುರುಕುತನದಲ್ಲಿ ತೀವ್ರ ಹೆಚ್ಚಳವಾಗುತ್ತದೆ. ಆದ್ದರಿಂದ ಮಕ್ಕಳನ್ನು ವಿವಿಧ ರೀತಿಯ ಪ್ರಯೋಜನಕಾರಿ ಹವ್ಯಾಸಗಳಲ್ಲಿ ಮತ್ತು ಆಸಕ್ತಿದಾಯಕ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು. ಅನ್ಯಥಾ ಈ ಎಲ್ಲ ಶಕ್ತಿಗಳೂ ಪುಂಡಾಟಿಕೆಗೆ ದಾರಿ ಮಾಡಿಕೊಡುತ್ತವೆ. ಅವರಿಗೇನಿದ್ದರೂ ಸದಾ ಏನಾದರೊಂದು ಕೆಲಸ ದೊರೆಯುತ್ತಲಿರಬೇಕು. ಕೆಲಸವಿಲ್ಲದಿದ್ದರೆ, ಅವರು ವಿನಾಕಾರಣ ಕೆಡುಕಿನೆಡೆಗೆ ವಾಲಬಹುದು.

2. ಜ್ಞಾಪಕ ಶಕ್ತಿಯು ಉಚ್ಛ್ರಾಯ ಸ್ಥಿತಿಯಲ್ಲಿರುತ್ತದೆ. ಹತ್ತು ಹನ್ನೊಂದು ವರ್ಷ ಪ್ರಾಯದಲ್ಲಿ ಹುಡುಗಿಯರ ಮತ್ತು ಹನ್ನೆರಡು-ಹದಿಮೂರು ವರ್ಷ ಪ್ರಾಯದಲ್ಲಿ ಹುಡುಗರ ಮೆದುಳು ತನ್ನ ಸಂಪೂರ್ಣ ಗಾತ್ರಕ್ಕೆ ಮತ್ತು ಜನನದ ವೇಳೆಗಿಂದ ನಾಲ್ಕು ಪಟ್ಟು ಬೆಳೆದಿರುತ್ತದೆ. ಜ್ಞಾಪಕಶಕ್ತಿಯು ಸಾಕಷ್ಟು ಬೆಳೆದಿರುತ್ತದೆ. ಆದರೆ ಅರಿತು ನೆನಪಿಸುವ ಒಲವು ಹೆಚ್ಚಿರುತ್ತದೆ. ಆದ್ದರಿಂದ ಕಲಿಸಲಿಕ್ಕಿರುವುದರ ಪ್ರಯೋಜನಗಳು ಮತ್ತು ವ್ಯಾಖ್ಯಾನವನ್ನು ಅಗತ್ಯವಾಗಿ ಮನನ ಮಾಡಿಸಬೇಕು. ಪವಿತ್ರ ಕುರ್‌ಆನ್, ದಿಕ್ರ್, ಪ್ರಾರ್ಥನೆ, ಚುಟುಕು, ಉಲ್ಲೇಖ-ಗಾದೆ, ಪದ್ಯ ಇತ್ಯಾದಿಗಳನ್ನು ಹೆಚ್ಚೆಚ್ಚು ಕಂಠಪಾಠ ಮಾಡಿಸಬೇಕು.

3. ಪದಗಳ ಉಚ್ಚಾರ ಮತ್ತು ವಿವರಣಾ ಶೈಲಿ ಇತ್ಯಾದಿಗಳಲ್ಲಿ ಇತರರ ಅನುಕರಣೆ ಮಾಡುವ ಆಸಕ್ತಿ ಬೆಳೆಯುತ್ತದೆ. ಆದ್ದರಿಂದ ಪದಗಳ ಉಚ್ಚಾರ, ಏರಿಳಿತದ ಜತೆಗೆ ಗದ್ಯ ಮತ್ತು ಪದ್ಯವನ್ನು ಓದುವ ಅಥವಾ ಭಾಷಣ ಮಾಡುವ ಅಭ್ಯಾಸವನ್ನು ಮಾಡಿಸಬೇಕು. ಅನ್ಯ ಭಾಷೆಗಳನ್ನು ಉದಾಹರಣೆಗೆ, ಅರಬಿ, ಹಿಂದಿ, ಇಂಗ್ಲಿಷ್, ಕಿರಾಅತ್ ಇತ್ಯಾದಿಗಳನ್ನು ಈ ಹಂತದಲ್ಲಿಯೇ ಕಲಿಸಲು ಪ್ರಾರಂಭಿಸಬೇಕು. ಆದರೆ ವ್ಯಾಕರಣ ಮತ್ತು ಪುಸ್ತಕಗಳ ಹೊರೆಯನ್ನು ಹೆಚ್ಚು ಹೊರಿಸಬಾರದು. ಬದಲಾಗಿ ಹೆಚ್ಚಿನ ಕೆಲಸವು ಮೌಖಿಕ ಅಥವಾ ಪ್ರಾಯೋಗಿಕವಾಗಿರಬೇಕು.

4. ಕುತೂಹಲದಲ್ಲಿ ಹೆಚ್ಚಳ ಮತ್ತು ಸುತ್ತಮುತ್ತಲ ವಸ್ತುಗಳ ಬಗ್ಗೆ ಹಾಗೂ ಸಾಮಾಜಿಕ ಮತ್ತು ಪ್ರಾಕೃತಿಕ ಪರಿಸರವನ್ನು ಅಭ್ಯಸಿಸುವ ಮೂಲಕ ಮಾಹಿತಿಗಳನ್ನು

ಸಂಗ್ರಹಿಸುವ ಸ್ವಾಭಾವಿಕ ಒಲವು ಬೆಳೆಯುತ್ತದೆ. ಅದಕ್ಕಾಗಿ ಅವರಿಗೆ ಸಾಕಷ್ಟು ಅವಕಾಶಗಳೂ ಒದಗುತ್ತಿರಬೇಕು. ವಿಜ್ಞಾನ, ಭೂಗೋಳ ಮತ್ತು ಇತಿಹಾಸದ ಅಧ್ಯಯನಕ್ಕಾಗಿ ಶೈಕ್ಷಣಿಕ ಪ್ರವಾಸಕ್ಕೆ ಕರಕೊಂಡು ಹೋಗುವುದು ಮತ್ತು ವಿವಿಧ ವಸ್ತು/ವಿಷಯಗಳ ಪ್ರಯೋಗ ಮತ್ತು ಅನುಭವಗಳನ್ನು ಮಾಡಿಸಿಕೊಡುವುದು ಉತ್ತಮ. ವೀಕ್ಷಣೆಯ ಫಲಿತಾಂಶಗಳನ್ನು ಪ್ರಬಂಧಗಳ ರೂಪದಲ್ಲಿ ಬರೆಯಲು ಪ್ರೇರೇಪಿಸಬೇಕು ಮತ್ತು ಅವುಗಳ ಚಿತ್ರ ಅಥವಾ ಮಾದರಿಗಳನ್ನು ರಚಿಸಲು ತಿಳಿಸಬೇಕು. ಬೋಧನೆಯನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಬೇಕಾದರೆ ಸುತ್ತಮುತ್ತಲ ವಸ್ತುಗಳು ಮತ್ತು ಸಾಮಾಜಿಕ-ಪ್ರಾಕೃತಿಕ ಪರಿಸರವನ್ನು ಹೆಚ್ಚೆಚ್ಚು ಉದಾಹರಿಸುತ್ತಿರಬೇಕು. ಕೆಲವೊಮ್ಮೆ ಕುತೂಹಲವು ತಪ್ಪು ದಾರಿಯನ್ನು ತುಳಿಯತೊಡಗುತ್ತದೆ. ಅದು ಅಸಂಬದ್ಧ ಮತ್ತು ಕೆಟ್ಟ ವಿಷಯಗಳನ್ನು ಅಥವಾ ಜನರ ಖಾಸಗಿ ಜೀವನವನ್ನು ಕೆದಕುವಂತಹ ಕೃತ್ಯಕ್ಕೆ ಹೇತುವಾಗಬಲ್ಲುದು. ಇಂತಹ ವಿಷಯಗಳಿಂದ ಮಕ್ಕಳನ್ನು ರಕ್ಷಿಸಬೇಕಾಗಿದೆ.

5. ವಿವಿಧ ಬೌದ್ಧಿಕ ಶಕ್ತಿಗಳಲ್ಲಿ ಉದಾ: ಚಿಂತನೆ, ವಿಶ್ಲೇಷಣೆ ಮತ್ತು ಆಲೋಚನೆ ಇತ್ಯಾದಿಗಳಲ್ಲಿ ಒಂದು ಹಂತದ ವರೆಗೆ ಅಧಿಕೃತತೆ ಹುಟ್ಟಿಕೊಳ್ಳುತ್ತದೆ. ಅನುಭವಗಳ ಕಾರಣವಾಗಿ, ಸಾಧ್ಯಾಸಾಧ್ಯತೆಗಳ ನಡುವಿನ ವ್ಯತ್ಯಾಸಗಳನ್ನು ಅರಿಯತೊಡಗುತ್ತಾರೆ. ಭೂತ-ಪ್ರೇತ, ಯಕ್ಷ-ಅಪ್ಸರೆ ಮತ್ತಿತರ ಕಥೆಗಳೆಲ್ಲವೂ ಕಾಲ್ಪನಿಕ ಮತ್ತು ಅಸಂಬದ್ಧ ಎಂದು ತಿಳಿಹೇಳುವ ಮೂಲಕ ಸಂಶಯ ಪ್ರವೃತ್ತಿಯಿಂದ ಮಕ್ಕಳನ್ನು ರಕ್ಷಿಸಬಹುದಾಗಿದೆ. ಅಲ್ಲದೆ ಅವರ ಮನಗಳಲ್ಲಿ ಇರಬಹುದಾದ ಭೀತಿಯನ್ನು ಹೋಗಲಾಡಿಸಬಹುದಾಗಿದೆ. ವಿಶ್ವಾಸಗಳ ಸುಧಾರಣೆಯ ಮೂಲಕ ಸಹಾಯ ಮಾಡಬಹುದಾಗಿದೆ. ಅಲ್ಲದೆ ಇಂತಹ ಕಥೆಗಳನ್ನು ಆಲಿಸುವುದರಿಂದ ಅಥವಾ ಓದುವುದರಿಂದ ತಡೆದು ಪ್ರಯೋಜನಕಾರಿ ಅಧ್ಯಯನದಲ್ಲಿ ತೊಡಗಿಸಿಕೊಳ್ಳುವುದು ಸುಲಭವಾಗುತ್ತದೆ.

6. ಮೂಲ ವಸ್ತು ಅಥವಾ ಮಾದರಿಗಳ ಬದಲು ಅವುಗಳ ಭಾವಚಿತ್ರ ಅಥವಾ ರೇಖಾಚಿತ್ರಗಳ ಮೂಲಕ ವಿಷಯವನ್ನು ಗ್ರಹಿಸುವ ಹಾಗೂ ಸರಿಯಾದ ಕಲ್ಪನೆಯನ್ನು ಹೊಂದುವ ಸಾಮರ್ಥ್ಯ ಹುಟ್ಟಿಕೊಳ್ಳುತ್ತದೆ. ಭೂಗೋಳ, ಇತಿಹಾಸ ಮತ್ತು ಸಾಮಾನ್ಯ ವಿಜ್ಞಾನ ಇತ್ಯಾದಿಗಳಿಗೆ ಸಂಬಂಧಿಸಿ ಚಿತ್ರ, ಅಟ್ಲಾಸ್ ಮತ್ತು ರೇಖಾಚಿತ್ರಗಳಿಂದ ಪ್ರಯೋಜನ ಹೊಂದಲು ಕಲಿಸಬೇಕು. ಮಕ್ಕಳ ಪತ್ರಿಕೆ ಮತ್ತು ನಿಯತಕಾಲಿಕಗಳಿಂದ ಅವರು ಚೆನ್ನಾಗಿ ಪ್ರಯೋಜನ ಹೊಂದಬಲ್ಲರು. ಹೀಗೆ ಅವರಲ್ಲಿ ಸಾಮಾನ್ಯ ಜ್ಞಾನ ಬೆಳೆಯುವಂತಾಗಲು ಇವುಗಳಿಂದಲೂ ಪ್ರಯೋಜನ ಪಡೆಯಬಹುದಾಗಿದೆ.

7. ಮಹತ್ಕಾರ್ಯಗಳನ್ನೆಸಗುವ, ಹೊಸ ಹೊಸ ಆವಿಷ್ಕಾರಗಳನ್ನು ಮಾಡುವ ಅಥವಾ ಸಂಶೋಧಿಸುವ ಆಗ್ರಹ ಬೆಳೆಯುತ್ತದೆ. ಪವಾಡಗಳ ಕಥೆ ಮತ್ತು ವೃತ್ತಾಂತಗಳಲ್ಲಿ

ಬಹಳ ಆಸಕ್ತಿ ಹೊಂದುತ್ತಾರೆ. ನಾಯಕ ಅಪಾರ ಸಂಕಷ್ಟಗಳನ್ನು ಎದುರಿಸುವ ಮತ್ತು ಕೊನೆಯಲ್ಲಿ ಯಶಸ್ಸನ್ನು ಗಳಿಸುವಂತಹ ಕಥೆಗಳು ಬಹಳ ಇಷ್ಟವಾಗುತ್ತವೆ. ಯಾತ್ರಿಕರ ಪ್ರವಾಸ ಕಥನ, ಸಂಶೋಧಕರ ಪ್ರಯತ್ನಗಳನ್ನು ಪರಿಚಯಪಡಿಸುವ ಉತ್ತಮ ಕಾಲಘಟ್ಟವಾಗಿದೆ. ಇವುಗಳಲ್ಲಿ ಮಕ್ಕಳು ಆಸಕ್ತಿಯನ್ನೂ ಹೊಂದುವರು ಮತ್ತು ಇಂತಹ ಮಹತ್ಕಾರ್ಯಗಳನ್ನು ಎಸಗುವಂತಹ ಒಲವನ್ನೂ ಮನಸ್ಸಿನಲ್ಲಿ ಬೆಳೆಸುವರು. ಅದೇ ವೇಳೆ ಕಥಾ ನಾಯಕನಿಗೆ ಸೋಲುಂಟಾಗುವಂತಹ ಕಥೆಗಳಿಂದ ಮಕ್ಕಳ ಮನದಲ್ಲಿ ದುಃಖ-ಹತಾಶೆ ಬೆಳೆಯುತ್ತದೆ. ಆದ್ದರಿಂದ ಸಾಧ್ಯವಾದಷ್ಟರ ಮಟ್ಟಿಗೆ ಅಂತಹವುಗಳಿಂದ ದೂರವೇ ಉಳಿಯಬೇಕು. ಒಂದು ವೇಳೆ ಅಂತಹ ಕಥೆಗಳನ್ನು ಹೇಳಲೇ ಬೇಕೆಂದಿದ್ದರೆ, ಸೋಲಿನಲ್ಲೂ ಗೆಲುವಿನ ಛಾಯೆಯನ್ನು ಎತ್ತಿ ತೋರಿಸಬೇಕು.

8. ಅನುಕರಣೆಗಿಂತ ಸಂಶೋಧನೆ ಪ್ರಿಯವಾಗಿರುತ್ತದೆ. ಆದ್ದರಿಂದ ಆಟ ಮತ್ತು ಕೆಲಸದಲ್ಲಿ ಹೊಣೆಗಾರಿಕೆ ಅಥವಾ ಪಾತ್ರವನ್ನು ಸ್ವತಃ ಹೇರುವ ಬದಲು ಅಥವಾ ಮಾಡುವ ವಿಧಾನವನ್ನು ಸ್ವಯಂ ಹೇಳಿ ಕೊಡುವುದರ ಬದಲು ಮಕ್ಕಳಿಗೇ ಸಾಧ್ಯಂತ ಆಯ್ಕೆಯ ಸ್ವಾತಂತ್ರ್ಯ ನೀಡಬೇಕು ಹಾಗೂ ಸಂಶೋಧನೆಗೆ ಅವಕಾಶ ಒದಗಿಸಿಕೊಡಬೇಕು. ಕೆಲವೊಮ್ಮೆ ನಾವು ಊಹಿಸಿಯೂ ಇರದಂತಹ ವಿಷಯಗಳು ಮಕ್ಕಳಿಗೆ ಹೊಳೆದಿರುತ್ತವೆ. ಅವರು ಕ್ರಮೇಣ ತಮ್ಮ ಕಾಲ ಮೇಲೆಯೇ ನಿಲ್ಲಲು ಶಕ್ತರಾಗುತ್ತಾರೆ. ತಮ್ಮ ಇಷ್ಟಾನಿಷ್ಟಗಳು ಸೇರುವುದರಿಂದ ಹೆಚ್ಚು ಪರಿಶ್ರಮ ಮತ್ತು ಬದ್ಧತೆಯೊಂದಿಗೆ ಕೆಲಸ ಮಾಡುತ್ತಾರೆ.

9. ತಮ್ಮ ಆಂತರಿಕ ಜಗತ್ತು ಹಾಗೂ ಮನೆ-ಶಾಲೆ ಇತ್ಯಾದಿಗಳಿಗಿಂತ ಬಾಹ್ಯ ಜಗತ್ತಿನ ಮೇಲೆ ಆಸಕ್ತಿ ಇರುತ್ತದೆ. ಈ ಆಸಕ್ತಿಯನ್ನು ಪರಿಗಣಿಸದೆ ಇದ್ದರೆ, ಶಾಲೆಯಿಂದ ದೂರ ಓಡುವ ಮತ್ತು ಮನೆಯಿಂದ ನಾಪತ್ತೆಯಾಗುವ ಅಭ್ಯಾಸ ಬೆಳೆಯುತ್ತದೆ. ಶಾಲೆಯ ಪ್ರಯತ್ನ ಏನಾಗಿರಬೇಕೆಂದರೆ, ಕೆಲವೊಮ್ಮೆ ಪಿಕ್‌ನಿಕ್ ಮತ್ತು ವಿಹಾರದ ಕಾರ್ಯಕ್ರಮವನ್ನಿಡಬೇಕು. ಭೂಗೋಳ, ವಿಜ್ಞಾನ ಮತ್ತು ಸಮಾಜಶಾಸ್ತ್ರಗಳ ಶಿಕ್ಷಣವನ್ನೂ ಸಾಧ್ಯಂತ ಆಯಾ ಸ್ಥಳಗಳಿಗೆ ಕರಕೊಂಡು ಹೋಗಿ ನೀಡಬೇಕಾಗಿದೆ. ಮನೆಯವರೂ ಅಷ್ಟೇ... ಮಿತ್ರರನ್ನು ಭೇಟಿಯಾಗಲು ಮತ್ತು ಅವರೊಂದಿಗೆ ತಿರುಗಾಡಲು ಬಿಡಬೇಕು. ಅಂತೆಯೇ ಮಾರುಕಟ್ಟೆಗೆ ಹೋಗುವಾಗ ಮಕ್ಕಳನ್ನು ಒಟ್ಟಿಗೆ ಕರಕೊಂಡು ಹೋಗಬೇಕು. ಈ ಮೂಲಕ ಮಕ್ಕಳ ಇಂತಹ ಆಗ್ರಹಗಳು ಸೂಕ್ತ ರೀತಿಯಲ್ಲಿ ಪೂರ್ತಿಯಾಗುತ್ತವೆ ಮತ್ತು ಅವರು ಉಂಡಾಡಿಯಾಗುವುದು ತಪ್ಪುತ್ತದೆ.

10. ಗಾಢ ಚಿಂತನೆ ಮತ್ತು ಸಮಸ್ಯೆಗಳನ್ನೆದುರಿಸುವ ಆಸಕ್ತಿ ಬೆಳೆಯುತ್ತದೆ. ಆದ್ದರಿಂದ ಮಕ್ಕಳ ಮುಂದೆ ಸಮಸ್ಯೆಗಳನ್ನು ಇರಿಸಿ, ಅವುಗಳ ಪರಿಹಾರಕ್ಕೆ ಪ್ರೇರೇಪಿಸಬೇಕು. ಅಂತೆಯೇ ಎಲ್ಲವನ್ನೂ ಸ್ವತಃ ಹೇಳಿಕೊಡುವ ಬದಲು, ಮಕ್ಕಳಿಗೇ ಚಿಂತನೆ ನಡೆಸುವ, ಪ್ರಯೋಗ ನಡೆಸುವ ಮತ್ತು ಮಾಹಿತಿಗಳನ್ನು ಗಳಿಸುವ ಅವಕಾಶವನ್ನು ಒದಗಿಸಿ ಕೊಡಬೇಕು.

11. ಮನೆ ಮತ್ತು ಶಾಲೆಯ ಪರಿಸರ ಉತ್ತಮವಿದ್ದರೆ, ಜನರು ಕೆಡುಕಿನಿಂದ ದೂರವುಳಿದು ಒಳಿತನ್ನು ಸ್ವೀಕರಿಸುತ್ತಾ ಇದ್ದರೆ, ಪರಸ್ಪರ ಪ್ರೀತಿ-ಸಹಾನುಭೂತಿಯಿಂದ ವ್ಯವಹರಿಸುತ್ತಿದ್ದರೆ, ಮಕ್ಕಳಲ್ಲೂ ಒಳಿತು-ಕೆಡುಕುಗಳ ವಿವೇಚನೆ ಮತ್ತು ಪ್ರೀತಿ -ಸಹಾನುಭೂತಿಯ ಭಾವನೆ ಬೆಳೆದು ಬರುತ್ತದೆ. ಮಕ್ಕಳೂ ಒಳಿತನ್ನು ಸ್ವೀಕರಿಸುವವರು ಮತ್ತು ಕೆಡುಕಿನಿಂದ ದೂರವುಳಿಯುವವರು; ತನಗೆ ಉಪಕಾರ ಮಾಡಿದವರೊಡನೆ ಮತ್ತು ಸಂಗಡಿಗರೊಡನೆ ಪ್ರೀತಿಯಿಂದಲೂ ದುರ್ಬಲ ಮತ್ತು ಅಸಹಾಯಕರೊಡನೆ ಸಹಾನುಭೂತಿಯಿಂದಲೂ ವ್ಯವಹರಿಸುವವರು; ಹಿರಿಯರು ಯಾವುದಕ್ಕೆ ಪ್ರಾಮುಖ್ಯತೆ ನೀಡುತ್ತಾರೋ ಮಕ್ಕಳೂ ಅದಕ್ಕೆ ಪ್ರಾಮುಖ್ಯತೆ ನೀಡುವರು. ಉದಾ: ನಮಾಝ್, ಉಪವಾಸ, ಸತ್ಕರ್ಮ, ದಾನ ಇತ್ಯಾದಿ. ಆದರೆ ಪರಿಸರವು ಇಂತಹ ಗುಣಗಳನ್ನು ಹೊಂದಿಲ್ಲದಿದ್ದರೆ ಮಗುವಿನಿಂದಲೂ ಈ ಹಂತದಲ್ಲಿ ಪ್ರಸ್ತುತ ಗುಣಗಳನ್ನು ನಿರೀಕ್ಷಿಸುವುದು ನಿರರ್ಥಕ. ಆದ್ದರಿಂದ ಮನೆ-ಶಾಲೆಯ ಪರಿಸರ ಮತ್ತು ಹಿರಿಯರ ಚಾರಿತ್ರ್ಯ ಅತ್ಯಂತ ಸೂಕ್ತ ಮತ್ತು ಅನುಕೂಲಕರವಾಗಿರಬೇಕು.

12. ಆಲೋಚನೆ, ಕಲ್ಪನೆ ಮತ್ತು ಆಸಕ್ತಿಗಳಲ್ಲಿ ಸ್ಥಿರತೆಯ ಬದಲು ಬದಲಾವಣೆಗಳು ಉಂಟಾಗುತ್ತಿರುತ್ತದೆ. ಇವತ್ತು ಒಂದು ಚಿಂತನೆ-ಕಲ್ಪನೆ ಇದ್ದರೆ, ನಾಳೆ ಇನ್ನೊಂದಿರುತ್ತದೆ. ಇವತ್ತು ಒಂದು ವಿಷಯದಲ್ಲಿ ಆಸಕ್ತಿ ಇದ್ದರೆ ನಾಳೆ ಮತ್ತೊಂದರಲ್ಲಿರುತ್ತದೆ. ಆದ್ದರಿಂದ ವಿವಿಧ ಕ್ರಿಯೆಗಳಲ್ಲಿ ತೊಡಗಿಕೊಳ್ಳಲು ಅವಕಾಶವೊದಗಿಸುವ ಮೂಲಕ ಸೂಕ್ತ ಆಯ್ಕೆಯಲ್ಲಿ ಮಾರ್ಗದರ್ಶನ ಮತ್ತು ಸಹಕಾರ ನೀಡಬೇಕು. ಉತ್ತಮ ಅಭ್ಯಾಸಗಳನ್ನು ಕಲಿಸಿದ ಬಳಿಕ ತೃಪ್ತಿಪಟ್ಟು ಸುಮ್ಮನಿರಬಾರದು. ಬದಲಾಗಿ ಅದರ ವಿರುದ್ಧವಾದ ಅಭ್ಯಾಸಗಳು ಕಲಿಯದಂತೆ ನೋಡಿಕೊಳ್ಳಬೇಕು. ಅನ್ಯಥಾ ಮಾಡಿದ ಪ್ರಯತ್ನದ ಮೇಲೆ ತಣ್ಣೀರೆರಚಿದಂತಾದೀತು.

13. ಏಳೆಂಟು ವರ್ಷಗಳ ತನಕ ಮಕ್ಕಳು ನೈಸರ್ಗಿಕ ಒಲವು ಇರುವಂತಹ ವಸ್ತುಗಳಲ್ಲಿ ಮಾತ್ರವೇ ಆಸಕ್ತಿ ವಹಿಸಿರುತ್ತಾರೆ. ಕ್ರಮೇಣ ಮಿತ್ರರಲ್ಲಿ ಪ್ರಸಿದ್ಧರಾಗಲು, ಹಿರಿಯರ ಸಂತೋಷ ಮತ್ತು ಶಹಬ್ಬಾಸ್‌ಗಿರಿ ಗಿಟ್ಟಿಸಲು ಹಾಗೂ ಅವರ ಕೋಪದಿಂದ ತಪ್ಪಿಸಿಕೊಳ್ಳಲು ಸಹಕಾರಿಯಾಗುವಂತಹ ವಿಷಯಗಳಲ್ಲಿಯೂ ಆಸಕ್ತಿ ವಹಿಸಲು ತೊಡಗುತ್ತಾರೆ. ಹಾಗಾಗಿ ಕಡ್ಡಾಯ ಕರ್ಮಗಳ ಪಾಲನೆ, ಶಿಷ್ಟಾಚಾರ ಮತ್ತು ಉತ್ತಮ ವ್ಯವಹಾರಗಳನ್ನು ಅಭ್ಯಾಸ ಮಾಡಿಸಲು ಈ ಒಲವಿನಿಂದ ಪ್ರಯೋಜನ ಪಡೆಯಬಹುದು. ಏರು ಧ್ವನಿಯಲ್ಲಿ ಪದ್ಯ ಹಾಡುವುದು, ಕಾಲ್ಪನಿಕ ಕಥೆಗಳನ್ನು ಓದುವುದು, ತರಗತಿಯಲ್ಲಿ ಉತ್ತೀರ್ಣನಾಗಲು ಹೆಚ್ಚೆಚ್ಚು ಪರಿಶ್ರಮ ಪಡುವುದು, ತನ್ನ ಕೈ ಬರಹ ಸರಿಪಡಿಸಲು ನಿರಂತರ ಪ್ರಯತ್ನಿಸುವುದು, ವೇದಿಕೆಯಲ್ಲಿ ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಲು ಹಾಗೂ ಭಾಷಣ ಇತ್ಯಾದಿಗಳಿಗೆ ಪರಿಶ್ರಮ ಪಟ್ಟು ಸಿದ್ಧತೆ ನಡೆಸುವುದು. ಇವೆಲ್ಲವೂ ಈ ಹಂತದಲ್ಲಿ ಮಕ್ಕಳ ಅಭಿರುಚಿಯಾಗಿರುತ್ತದೆ. ಹಾಗಾಗಿ ಯುಕ್ತಿಪೂರ್ಣವಾಗಿ ಅವರಿಂದ ಕೆಲಸ ಮಾಡಿಸಬೇಕು.

ಕೆಲವರು ಮಕ್ಕಳ ಮೇಲೆ ಆಗಾಗ ಕೋಪಗೊಳ್ಳುತ್ತಿರುತ್ತಾರೆ ಮತ್ತು ಗದರಿಸುತ್ತಾ ಕೆಲಸ ಮಾಡಿಸಲು ಉದ್ಯುಕ್ತರಾಗಿರುತ್ತಾರೆ. ಈ ವಿಧಾನದಿಂದ ಮಕ್ಕಳು ಸ್ವಾಭಿಮಾನ ಕಳಕೊಳ್ಳುವುದರ ಜತೆಗೇ ನಿಮ್ಮ ಇಷ್ಟಾನಿಷ್ಟಗಳ ಬಗ್ಗೆ ನಿರ್ಲಕ್ಷ್ಯ ಧೋರಣೆ ಬೆಳೆಸಿಕೊಳ್ಳುವ ಸಾಧ್ಯತೆ ಇದೆ. ಆದ್ದರಿಂದ ಗದರಿಕೆಯ ಪ್ರಯೋಗವನ್ನು ಸಾದ್ಯಂತ ಕಡಿಮೆಗೊಳಿಸಬೇಕು.

14. ಸಾಮೂಹಿಕತೆಯ ಸ್ವಭಾವವು (ಗುಂಪುಗಾರಿಕೆ) ಬಹಳ ತೀವ್ರವಾಗಿರುತ್ತದೆ. ಗುಂಪು ಕಟ್ಟಿ ಗಲ್ಲಿ-ಕೇರಿ, ತೋಟ, ಮೈದಾನಗಳಲ್ಲಿ ತಿರುಗಾಡುವ ಆಸಕ್ತಿ ಬೆಳೆಯುತ್ತದೆ. ಮಕ್ಕಳು ಗುಂಪಿನ ನೀತಿ ನಿಯಮಗಳನ್ನು ಗೌರವಿಸುತ್ತಾರೆ. ಮಾತ್ರವಲ್ಲ, ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ ಕೂಡ. ಮಗು ಗುಂಪಿನಲ್ಲಿ ವಿಶೇಷವಾಗಿ ಗುರುತಿಸಲು ಪ್ರಯತ್ನಿಸುತ್ತದೆ. ಸಹವಾಸ ಉತ್ತಮವಿದ್ದರೆ, ಮಕ್ಕಳು ಸಹಜೀವನ, ನೀತಿ-ನಿಯಮಗಳ ಪಾಲನೆ, ನೇತಾರನ ಅನುಸರಣೆ, ಪರಸ್ಪರ ಭಾವನೆಗಳ ಗೌರವ ಹಾಗೂ ಸಹಕಾರಿ ಗುಣಗಳನ್ನು ಬೆಳೆಸಿಕೊಳ್ಳುವರು. ಅನ್ಯಥಾ ಗುಂಪು ಕಟ್ಟಿ ಗೌಜು-ಗದ್ದಲವೆಬ್ಬಿಸಲು ಮತ್ತು ಇತರ ಗುಂಪುಗಳನ್ನು ಸತಾಯಿಸಲು ಪ್ರಯತ್ನಿಸಬಹುದು; ಅಂತೆಯೇ ತನ್ನ ಗುಂಪು ಅಥವಾ ಗುಂಪಿನ ನಾಯಕನನ್ನು ಖುಷಿಪಡಿಸಲು ಅಪ್ರಿಯ ಕೆಲಸಗಳನ್ನೂ ಮಾಡಬಹುದು; ಶಾಲೆ ಅಥವಾ ಮನೆಯ ನೀತಿ-ನಿಯಮಗಳನ್ನು ಮುರಿಯುವ ಕೃತ್ಯಕ್ಕೂ ಇಳಿಯಬಹುದು. ಮಕ್ಕಳ ಈ ಗುಂಪುಗಾರಿಕೆಯ ಸ್ವಭಾವ ಮತ್ತು ತನ್ನ ಗುಂಪಿನಲ್ಲಿ ಪ್ರಸಿದ್ಧಿ ಪಡೆಯುವ ಆಗ್ರಹವನ್ನು ಈಡೇರಿಸಲು ಆಟೋಟ ಮತ್ತು ತರಗತಿ-ಶಾಲೆಯ ವಿವಿಧ ಹೊಣೆಗಾರಿಕೆಗಳಿಗೆ ಸಂಬಂಧಿಸಿ ಮಕ್ಕಳ ತಂಡವನ್ನು ರಚಿಸುವುದು ಸೂಕ್ತ. ಪ್ರತಿಯೊಂದು ತಂಡಕ್ಕೂ ಅದರದೇ ನಾಯಕನಿರಬೇಕು. ಉದಾ: ತರಗತಿಯ ಮಾನಿಟರ್, ತಂಡದ ಕಪ್ತಾನ, ಸಭೆ, ಪಿಕ್‌ನಿಕ್, ವಾಚನಾಲಯಗಳ ಸಂಚಾಲಕ(Incharge). ಅದೇ ರೀತಿ ತಂಡಗಳ ಸದಸ್ಯರೆಂಬ ನೆಲೆಯಲ್ಲಿ ಮಕ್ಕಳಿಗೆ ಹೊಣೆಗಾರಿಕೆಗಳನ್ನು ನಿಭಾಯಿಸುವ ಅವಕಾಶ ಒದಗಿಸಿಕೊಡಬೇಕು. ತಂಡವು ತಪ್ಪು ದಾರಿಯಲ್ಲಿ ಸಾಗದಂತೆ ಮತ್ತು ಗುಂಪುಗಾರಿಕೆಯ ಪಕ್ಷಪಾತದಲ್ಲಿ ತೊಡಗಿಸಿಕೊಳ್ಳದಂತೆ ನೋಡಿಕೊಳ್ಳಬೇಕು. ತಂಡದ ಸದಸ್ಯ ಅಥವಾ ನಾಯಕನೆಂಬ ನೆಲೆಯಲ್ಲಿ ಕೆಲಸ ಮತ್ತು ಆಟಕ್ಕೆ ಸಾಕಷ್ಟು ಅವಕಾಶ ಒದಗಿಸಿಕೊಟ್ಟರೆ ಅವರ ತರಬೇತಿಯೂ ಆಗುತ್ತದೆ. ಸ್ವಾಭಾವಿಕ ಗುಣಕ್ಕೆ ಸಮಾಧಾನವೂ ಕೆಟ್ಟ ಸಹವಾಸದಿಂದ ರಕ್ಷಣೆಯೂ ದೊರೆಯುತ್ತದೆ. ಒಬ್ಬನನ್ನು ತಂಡದ ನಾಯಕನಾಗಿ ಅಂಗೀಕರಿಸುವುದು ಮತ್ತು ಯಾರನ್ನೂ ಗೆಳೆಯನನ್ನಾಗಿ ಸ್ವೀಕರಿಸುವುದು ಇತ್ಯಾದಿಗಳಲ್ಲಿ ಮಕ್ಕಳು ಮೇಲು-ಕೀಳು, ಬಡವ-ಬಲ್ಲಿದರೆಂಬ ಭೇದ ಭಾವವನ್ನು ಹೊಂದಿರುವುದಿಲ್ಲ, ಇಲ್ಲಿ ಕೇವಲ ಸಾಮರ್ಥ್ಯವೇ ಪ್ರಮುಖ ವಿಷಯವಾಗಿರುತ್ತದೆ. ಸಮಾನತೆಯ ಈ ಭಾವನೆಯನ್ನು ಇನ್ನಷ್ಟು ಬೆಳೆಸಲು ಹಿರಿಯರು ಪ್ರಯತ್ನಿಸಬೇಕಾಗಿದೆ.

15. ಮುಗ್ಧತೆ, ಸರಳತೆ, ಅಜಾಗರೂಕತೆ ಮತ್ತು ನಿರ್ಭಯ ಮೇಳೈಸಿರುತ್ತದೆ. ಈ ವಿಷಯಗಳಲ್ಲಿ ಹೆಚ್ಚು ನಿಯಂತ್ರಣ ಹೇರುವ ಬದಲು, ತಿಳಿ ಹೇಳುವ ಮೂಲಕ ಸ್ವಚ್ಛತೆ,

ವಸ್ತ್ರ-ವಸ್ತುಗಳ ಸುರಕ್ಷತೆ ಇತ್ಯಾದಿಗಳನ್ನು ಹಂತಹಂತವಾಗಿ ಅಭ್ಯಾಸ ಮಾಡಿಸಬೇಕು. ಅದೇನಿದ್ದರೂ ಈ ಗುಣಗಳು ಒಂದು ಮೇರೆಯೊಳಗಿದ್ದರೆ, ಅವೂ ಪ್ರಯೋಜನ ಕಾರಿಯೆನಿಸುವುದು.

16. ಪೋಕರಿತನ, ಶಿಕ್ಷಣದಿಂದ ದೂರ ಓಡುವುದು, ಬಡಾಯಿ ಕೊಚ್ಚುವುದು, ಮನೆಯಿಂದ ದೂರವಿರುವುದು, ಬೀಡಿ-ಸಿಗರೇಟು ಸೇವನೆ, ಕಳ್ಳತನ, ಸುಳ್ಳು, ಬೈಗುಳ, ಮೋಸ ಮತ್ತು ಕುತೂಹಲಕ್ಕೆ ಬಿದ್ದು ಕೆಲವು ಅಪ್ರಿಯ ಕೃತ್ಯಗಳನ್ನೆಸಗುವ ಸಾಧ್ಯತೆ ಬಹಳವಿರುತ್ತದೆ. ಈ ಎಲ್ಲ ದುರ್ಗುಣಗಳು ಬೆಳೆಯುವಲ್ಲಿ ಕೆಟ್ಟ ಸಹವಾಸ ಮತ್ತು ಮಕ್ಕಳೊಂದಿಗೆ ಕೆಟ್ಟ ವ್ಯವಹಾರದ ಪಾತ್ರ ಬಹಳ ಇರುತ್ತದೆ. ಆದ್ದರಿಂದ ಮಕ್ಕಳನ್ನು ಸಾದ್ಯಂತ ಕೆಟ್ಟ ಸಹವಾಸದಿಂದ ರಕ್ಷಿಸುವ ಮತ್ತು ಅವರೊಡನೆ ಪ್ರೀತಿ-ಅನುನಯದ ವರ್ತನೆ ತೋರುವ ಪ್ರಯತ್ನವಾಗಬೇಕು. ಆದರೆ ಕೆಟ್ಟ ಸಹವಾಸದಿಂದ ರಕ್ಷಿಸುವುದೆಂದರೆ, ಮಕ್ಕಳನ್ನು ಮಿತ್ರರಿಂದ ಸಂಪೂರ್ಣ ದೂರವಿರಿಸುವುದೋ ಅಥವಾ ಅವರ ಆಸಕ್ತಿಗಳ ಪೂರ್ತಿಕೆಯ ವ್ಯವಸ್ಥೆ ಮಾಡದಿರುವುದೋ ಅಲ್ಲ. ಇಂತಹ ವ್ಯವಹಾರವೂ ಅಪಾಯಕಾರಿಯಾದೀತು. ಇದರಿಂದ ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ತೊಡಕುಂಟಾದೀತು. ಈ ಘಟ್ಟದಲ್ಲಿ ಮಾನಸಿಕ ಒತ್ತಡವು ಮಕ್ಕಳ ವ್ಯಕ್ತಿತ್ವದ ಮೇಲೆ ದೂರಗಾಮಿ ಪರಿಣಾಮ ಬೀರಬಹುದು. ಆದ್ದರಿಂದ ಬಹಳ ಜಾಗರೂಕತೆಯಿಂದ ತರಬೇತಿ ನೀಡಬೇಕಾಗಿದೆ. ಅರ್ಹ ಆಗ್ರಹಾಭಿಲಾಷೆಗಳನ್ನು ತುಳಿಯುವುದು ಮಾನಸಿಕ ಒತ್ತಡಕ್ಕೆ ಹೇತುವಾಗುತ್ತದೆ.

ಹದಿಹರೆಯ

(ಹದಿಮೂರರಿಂದ ಹದಿನೆಂಟು ವರ್ಷ ಪ್ರಾಯದವರೆಗೆ)

ಇದು ಜೀವನದ ವಸಂತ ಕಾಲವಾಗಿದೆ. ಈ ಘಟ್ಟದಲ್ಲಿ ಮುಗ್ಧ ಮೊಗ್ಗು ಬಿರಿದು ಹೂವು ಅರಳುತ್ತದೆ. ಎತ್ತರವು ತೀವ್ರವಾಗಿ ಬೆಳೆಯುತ್ತದೆ. ದೈಹಿಕ ಮತ್ತು ಮಾನಸಿಕ ಬದಲಾವಣೆಯೂ ತೀವ್ರವಾಗಿರುತ್ತದೆ. ನೋಡನೋಡುತ್ತಿದ್ದಂತೆಯೇ ತೆಳುವಾದ ಸಪೂರದ ಅಜಾನುಬಾಹು ಹುಡುಗ ಪುರುಷನಾಗಿ ಮೂಡಿ ಬರುತ್ತಾನೆ ಮತ್ತು ಸಣಕಲು ದೇಹದ ಹುಡುಗಿ ದಷ್ಟಪುಷ್ಟ ಮಹಿಳೆಯಾಗಿ ಕಾಣತೊಡಗುತ್ತಾಳೆ. ಅಜಾಗರೂಕತೆ ಮತ್ತು ಎಚ್ಚರಗೇಡಿತನ ಹೊರಟು ಹೋಗುತ್ತದೆ. ಅದರ ಜಾಗದಲ್ಲಿ ಸನ್ನಡತೆ ಮತ್ತು ಶೃಂಗಾರ ಪ್ರಿಯತೆ ಮನೆ ಮಾಡುತ್ತವೆ. ರೂಪ-ಲಾವಣ್ಯ, ನಡೆ-ನುಡಿ ಎಲ್ಲದರಲ್ಲೂ ಹಿರಿತನ ಹಾಗೂ ಸ್ಪಷ್ಟ ಬದಲಾವಣೆ ಕಾಣತೊಡಗುತ್ತವೆ. ರೂಪದಲ್ಲಿ ರಂಗೇರುತ್ತದೆ. ಮುಖದಲ್ಲಿ ಸದಾ ಮುಗುಳ್ನಗು ಲಾಸ್ಯವಾಡತೊಡಗುತ್ತದೆ. ಅಂಗಾಂಗಗಳು ದಷ್ಟಪುಷ್ಟ ಮತ್ತು ಆಕರ್ಷಕವಾಗುತ್ತವೆ. ಸಾಧಾರಣ ಮಟ್ಟಿನ ಉಡುಪು ಧರಿಸಿದರೂ ಅದು ಮಸ್ಲಿನ್ ಅಥವಾ ರೇಶ್ಮೆ ಬಟ್ಟೆಯೇನೋ ಎಂಬಷ್ಟು ಸೌಂದರ್ಯ ಸ್ಫುರಿಸುತ್ತದೆ. ಸ್ವಭಾವದಲ್ಲಿ

ಪ್ರಮತ್ತತೆಯುಂಟಾಗುತ್ತದೆ, ಸಾದಾ ನೀರಿನಲ್ಲೂ ಮದಿರೆಯ ರುಚಿ ಬಂದಂತೆ! ನವಜೀವನ, ನವೋತ್ಸಾಹ, ಹೊಸ ಮಿತ್ರರು ಮತ್ತು ಹೊಸ ಕರಾರುಗಳು... ಒಟ್ಟಿನಲ್ಲಿ ಎಲ್ಲೆಡೆ ವಸಂತ ಮತ್ತು ಆನಂದದ ಅನುಭವವಾಗುತ್ತಿರುತ್ತದೆ. ಇದು ಹದಿಹರೆಯದ ಒಂದು ಸಣ್ಣ ವ್ಯಾಖ್ಯೆಯಾಗಿದೆ.

ಈ ಹಂತದ ವಿಶೇಷತೆಗಳು ಏನೆಂಬುದನ್ನು ಅವಲೋಕಿಸೋಣ.

1. ಇದು ಆಯುಸ್ಸಿನ ಅತಿ ಸೂಕ್ಷ್ಮ ಹಂತವಾಗಿದೆ. ಲೈಂಗಿಕ ವಿಚಾರ ಮತ್ತು ಭಾವನೆಗಳಲ್ಲಿ ಹೆಚ್ಚಳವುಂಟಾಗುತ್ತದೆ. ಅನನುಭವ ಮತ್ತು ಫಲಿತಾಂಶದ ಪರಿವೆ ಇಲ್ಲದ ಕಾರಣ ದೈಹಿಕ ಹಾಗೂ ನೈತಿಕ ನೆಲೆಯಲ್ಲಿ ಅಪಾಯಕಾರಿ ಪರಿಣಾಮವನ್ನೆದುರಿಸುವ ಆಶಂಕೆಯಿರುತ್ತದೆ. ಆದ್ದರಿಂದ ಈ ಪ್ರಾಯದ ಮಕ್ಕಳ ಬಗ್ಗೆ ಅಪಾರವಾದ ಗಮನವಿರಿಸಬೇಕಾದ ಮತ್ತು ಅವರ ಅಭ್ಯಾಸ, ಗುಣಗಳ ಮೇಲೆ ತೀವ್ರ ನಿಗಾ ಇರಿಸಬೇಕಾದ ಅಗತ್ಯವಿದೆ. ಆದರೆ ಅವರ ಮೇಲೆ ಕಣ್ಣಿಟ್ಟಿರುವ ವಿಚಾರವು ಅವರಿಗೆ ತಿಳಿಯದಂತೆ ನೋಡಿಕೊಳ್ಳಲೂ ಬೇಕು. ಅದಲ್ಲದೆ ಅವರ ಆರೋಗ್ಯದ ಕುರಿತೂ ಚಿಂತಿಸಬೇಕಾಗಿದೆ. ಲೈಂಗಿಕ ಭಾವನೆಯು ಪ್ರಕೃತಿಯ ಅತಿ ಪ್ರಮುಖ ಮತ್ತು ಪ್ರಬಲ ಕೊಡುಗೆಯಾಗಿದೆ. ಅದನ್ನು ತುಳಿಯುವ ಪ್ರಯತ್ನ ಮಾಡುವುದೆಂದರೆ ಪ್ರಕೃತಿಯೊಂದಿಗೆ ಯುದ್ಧ ಸಾರಿದಂತೆ. ಅದರಿಂದ ಅವರ ವ್ಯಕ್ತಿತ್ವದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವುದು. ತದ್ವಿರುದ್ಧವಾಗಿ ಪೌರುಷದ ಈ ಮಾಣಿಕ್ಯವನ್ನು ರಕ್ಷಿಸಲು, ಭಾವನೆಗಳನ್ನು ನಿಯಂತ್ರಿಸಲು ಮತ್ತು ಈ ಸ್ವಭಾವದ ಧರ್ಮಸಮ್ಮತಾರ್ಹ ವಿಧಾನವನ್ನು ಅನುಸರಿಸಲು ಸಹಕಾರಿಯಾಗಬೇಕು. ಆಸಕ್ತಿಕರ ಸೃಜನಾತ್ಮಕ ಚಟುವಟಿಕೆಗಳು, ಸ್ಪರ್ಧಾತ್ಮಕ ಆಟಗಳು ಹಾಗೂ ಕರಕೌಶಲ್ಯ ಕಲೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವ ಸಂಪೂರ್ಣ ಅವಕಾಶ ಒದಗಿಸಿಕೊಡಬೇಕು. ಇದರಿಂದ ಪ್ರಸ್ತುತ ಗುಣವೂ ನಿಯಂತ್ರಣದಲ್ಲಿರುವುದು ಮತ್ತು ಕಲೆಗಾರಿಕೆಯಲ್ಲಿಯೂ ಕೌಶಲ್ಯವನ್ನು ಪಡೆಯುವರು.

2. ಲಜ್ಜೆ ಮತ್ತು ನಾಚಿಕೆ ಸ್ವಭಾವವು ತುಂಬಿ ತುಳುಕುತ್ತದೆ. ಸಮಾಜದ ಕುರಿತು ಅಪಾರವಾದ ಪರಿವೆ ಇರುತ್ತದೆ. ಇದು ಹದಿಹರೆಯದವರ ಸ್ವಾಭಾವಿಕ ಆಯುಧವಾಗಿದ್ದು ಈ ಮೂಲಕ ಪರಿಣಾಮದ ಪರಿವೆ ಇಲ್ಲದ ಮತ್ತು ಅನುಭವವಿಲ್ಲದ ತಮ್ಮ ಈ ಹಂತದಲ್ಲಿ ತಮ್ಮ ನಡವಳಿಕೆಯ ರಕ್ಷಣೆಯನ್ನು ಮಾಡುತ್ತಾರೆ. ಚಾರಿತ್ರ್ಯವನ್ನು ಕಳಂಕರಹಿತವಾಗಿರಿಸಲು ಮತ್ತು ಆರೋಗ್ಯವನ್ನು ಸಂರಕ್ಷಿಸಿಕೊಳ್ಳಲು ಇದು ಅತ್ಯಂತ ಪ್ರಯೋಜನಕಾರಿ ಮತ್ತು ಅಗತ್ಯವೂ ಆಗಿದೆ. ಆದ್ದರಿಂದ ಈ ಭಾವನೆ, ಸಂವೇದನೆಗಳನ್ನು ಎಂದೂ ಕುಂದದಂತೆ ನೋಡಿಕೊಳ್ಳಬೇಕು. ಏಕೆಂದರೆ ಈ ಪ್ರಾಯದಲ್ಲಿ ಲಜ್ಜೆ-ನಾಚಿಕೆ ಹೊರಟು ಹೋದರೆ ಅಥವಾ ಸಮಾಜದ ಪರಿವೆ ಇಲ್ಲದೆ ಹೋದರೆ ಹದಿಹರೆಯವು ಮಾಡದ ದುಷ್ಕೃತ್ಯವಿಲ್ಲ ಎಂಬುದು ಅನುಭವದ ಮಾತು.

3. ಬಿಡುವಿನ ವೇಳೆಯಲ್ಲಿ ಅಥವಾ ಏಕಾಂತದಲ್ಲಿ ಸಾಮಾನ್ಯವಾಗಿ ಕೆಟ್ಟ ಲೈಂಗಿಕ ಚಿಂತನೆ ಮತ್ತು ಭಾವನೆಗಳು ಗರಿಗೆದರತೊಡಗುತ್ತವೆ ಹಾಗೂ ಶೈತಾನನು ವಿವಿಧ ರೀತಿಯಲ್ಲಿ ದುಷ್ಪ್ರೇರಣೆಯನ್ನುಂಟು ಮಾಡುತ್ತಾನೆ. 'ಖಾಲಿ ತಲೆಯಲ್ಲಿ ಶೈತಾನ ಮನೆ ಮಾಡುತ್ತಾನೆ' ಎಂಬ ಲೋಕೋಕ್ತಿಯೇ ಇದೆ. ಆದ್ದರಿಂದ ಬಿಡುವಿನ ವೇಳೆಗಳಿಗಾಗಿಯೇ ಆಸಕ್ತಿದಾಯಕ ಮತ್ತು ಪ್ರಯೋಜನಕಾರಿ ಹವ್ಯಾಸ ಹಾಗೂ ಚಟುವಟಿಕೆಯ ವ್ಯವಸ್ಥೆಯನ್ನು ಸಾಧ್ಯಂತ ಮಾಡಬೇಕು. ಈ ಮೂಲಕ ಮಕ್ಕಳು ಸದಾ ವ್ಯಸ್ತರಾಗಿದ್ದು ಬಿಡಬೇಕು. ದೈಹಿಕ ಮತ್ತು ಬೌದ್ಧಿಕವಾಗಿ ಸಸಿನ ಮತ್ತು ಸರಾಗವಾದ ಎರಡೂ ರೀತಿಯ ಹವ್ಯಾಸಗಳಲ್ಲಿ ತೊಡಗಿಕೊಳ್ಳಲು ಸಂಪೂರ್ಣ ಅವಕಾಶ ಒದಗಿಸಬೇಕು.

4. ಸ್ವಾಭಿಪ್ರಾಯ, ಸ್ವಾವಲಂಬನೆ, ತನ್ನ ಕೆಲಸವನ್ನು ತಾನೇ ಮಾಡುವ, ತನ್ನ ವ್ಯವಹಾರಗಳಲ್ಲಿ ಚಿಂತನೆ ನಡೆಸಿ ತೀರ್ಮಾನ ತೆಗೆದುಕೊಳ್ಳುವ ಆಸಕ್ತಿ ಮತ್ತು ಹಿರಿಯರ ಹಾಗೂ ಹೆತ್ತವರ ಹಸ್ತಕ್ಷೇಪದಿಂದ ಮುಕ್ತರಾಗುವ ಚಿಂತನೆ ಬೆಳೆದು ಬರುತ್ತದೆ. ಹಾಗಾಗಿ, ಅವರು ತಮ್ಮ ಕಾಲ ಮೇಲೆ ನಿಲ್ಲುವಂತಾಗಲು, ಸಹ್ಯ ಮೇರೆಯೊಳಗೆ ಅವರಿಗೆ ಸ್ವಾತಂತ್ರ್ಯ ನೀಡಬೇಕು. ಮಕ್ಕಳು ಸದಾ ನಮ್ಮನ್ನು ಅವಲಂಬಿಸಿರಬೇಕು ಎಂದು ಭಾವಿಸಬಾರದು. ಪ್ರೀತಿ, ಮಮತೆಯ ಆಧಿಕ್ಯದಿಂದಾಗಿ ಹೆಚ್ಚಿನ ಮಾತಾಪಿತರು ಆ ರೀತಿ ಮಾಡುತ್ತಾರೆ. ತದ್ವಿರುದ್ಧವಾಗಿ ಮಕ್ಕಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಅವರ ಅಭಿಪ್ರಾಯವನ್ನು ಕೇಳಬೇಕು ಹಾಗೂ ಹಸ್ತಕ್ಷೇಪದಿಂದ ಸಾಧ್ಯಂತ ದೂರವಿರಬೇಕು. ಅನ್ಯಥಾ ವಿದ್ರೋಹದ ಸಾಧ್ಯತೆ ಇರುತ್ತದೆ. ಮೃದು ಮಾತು ಮತ್ತು ಅನುನಯದ ವರ್ತನೆಯ ಮೂಲಕ ಸರಿದಾರಿಗೆ ತರಲು ಪ್ರಯತ್ನಿಸಬೇಕು.

5. ಹಗಲುಗನಸು ಕಾಣುವುದು, ಸ್ವಪ್ನ ಸೌಧ ಕಟ್ಟುವುದು ಮತ್ತು ಆಗದ ಹೋಗದ ವಿಷಯದಲ್ಲಿ ಹೆಚ್ಚು ಆಸಕ್ತಿ ಹೊಂದುತ್ತಾರೆ. ಹಾಗಾಗಿ ವಾಸ್ತವಕ್ಕೆ ವಿರುದ್ಧವಾಗಿರುವಂತಹ ಪತ್ತೇದಾರಿ ಕಾದಂಬರಿ ಮತ್ತಿತರ ಕಾಲ್ಪನಿಕ ಕಥೆಗಳಲ್ಲಿಯೇ ಹೆಚ್ಚು ನಂಬಿಕೆ ಹುಟ್ಟಿಕೊಳ್ಳತೊಡಗುತ್ತದೆ. ಆದ್ದರಿಂದ ಪರಿಹರಿಸಲ್ಪಡಬಹುದಾದಂತಹ ಸಮಸ್ಯೆಗಳನ್ನು ಎದುರಿಸಲು ಅವಕಾಶ ಒದಗಿಸಿಕೊಡಬೇಕು. ವಿವಿಧ ವಿಷಯಗಳನ್ನು ಕಾರ್ಯಗತಗೊಳಿಸಲು ಅವರಿಂದಲೇ ಯೋಜನೆ ಮಾಡಿಸಿ, ಅದರಂತೆ ಕ್ರಿಯಾಶೀಲರಾಗಲು ಪ್ರೇರೇಪಿಸಬೇಕು. ಈ ಮೂಲಕ ಅವರಿಗೆ ಸಾಧ್ಯಾಸಾಧ್ಯತೆಗಳ ನಡುವಿನ ಅಂತರವನ್ನು ತಿಳಿಯಲು ಸಹಕಾರಿಯಾಗುವುದು. ಕ್ರಮೇಣ ಅವರಲ್ಲಿ ಸತ್ಯಪ್ರಿಯತೆ ಹುಟ್ಟಿಕೊಳ್ಳುತ್ತದೆ. ಜತೆಗೆ ಜಗತ್ತಿನ ಕಟುವಾಸ್ತವವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವಂತಾಗಲು, ವೈಫಲ್ಯದಿಂದ ರಕ್ಷಿಸಲು ಮತ್ತು ಸತತ ಪ್ರಯತ್ನದಿಂದ ಯಶಸ್ಸಿನ ಹಾದಿ ತುಳಿಯಲು ಮಾರ್ಗದರ್ಶನವೀಯಬೇಕು.

6. ವಿಹಾರಪ್ರಿಯತೆ ಮತ್ತು ಮಿತ್ರರ ಗುಂಪು ಕಟ್ಟಿ ವಿನೋದ ವಿಹಾರಕ್ಕೆ ಹೋಗುವ ಆಸಕ್ತಿ ಬಹಳ ಇರುತ್ತದೆ. ಹೀಗಿರುತ್ತಾ, ಮಕ್ಕಳಿಗೆ ಶೈಕ್ಷಣಿಕ ಪ್ರವಾಸ/ವಿಹಾರಕ್ಕೆ ಅವಕಾಶಗಳನ್ನು

ಒದಗಿಸಿಕೊಡಬೇಕು. ಪ್ರವಾಸದ ವ್ಯವಸ್ಥೆಯನ್ನು ಅವರೇ ಸ್ವಯಂ ಮಾಡಿಕೊಳ್ಳಲಿ. ಅದೇ ರೀತಿ ತಂಡ ರಚಿಸಿ ವಿವಿಧ ಕಾರ್ಯಕ್ರಮಗಳಲ್ಲಿ ಅವರಿಂದ ಸಹಕಾರ ಪಡೆಯಬಹುದಾಗಿದೆ. ಸಮಾಜ ಸೇವೆಗೆ ಸಂಬಂಧಿಸಿ ವಿವಿಧ ಕೆಲಸಗಳಿಗೆ ಅವರ ತಂಡವನ್ನು ರಚಿಸಬೇಕು ಮತ್ತು ಸಾದ್ಯಂತ ಸೇವೆ ಮಾಡಿಸಬೇಕು. ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ವಿಹಾರ ಪ್ರಿಯತೆಯ ಭಾವನೆಗೆ ಸಮಾಧಾನ ಒದಗುತ್ತದೆ. ಅಂತೆಯೇ ಸಮಾಜಸೇವೆಯಿಂದ ಅನುಕಂಪ ಮತ್ತು ಪೋಷಣೆಯ ಭಾವನೆ ಬೆಳೆಯುತ್ತದೆ.

7. ಹಳೆಯ ಮಿತ್ರರನ್ನು ಮರೆಯುತ್ತಾರೆ ಮತ್ತು ನೂತನ ಪ್ರಾಣ ಮಿತ್ರರನ್ನು ಗಳಿಸಿಕೊಳ್ಳುತ್ತಾರೆ. ಈ ಗೆಳೆತನವು ಅತ್ಯಂತ ಗಾಢ ಮತ್ತು ಶಾಶ್ವತವಾಗಿರುತ್ತದೆ. ಮನದಾಳದ ರಹಸ್ಯಗಳನ್ನು ಅಂತಹ ಮಿತ್ರರೊಂದಿಗೆ ಹಂಚಿಕೊಳ್ಳುತ್ತಾರೆ. ಅವರ ಸಾಂಗತ್ಯದಲ್ಲಿ ಹೆಚ್ಚೆಚ್ಚು ಸಮಯ ಕಳೆಯಲು ಬಯಸುತ್ತಾರೆ. ಮಾತ್ರವಲ್ಲ, ಅವರ ಸಹವಾಸದಿಂದ ಅಪಾರ ಪ್ರಭಾವವನ್ನು ಹೊಂದುತ್ತಾರೆ. ಹೀಗಿರುತ್ತಾ, ಮಿತ್ರರು ಒಳ್ಳೆಯವರಾಗಿದ್ದರೆ, ಅದು ಅತ್ಯಂತ ಪ್ರಯೋಜನಕಾರಿಯಾಗಿರುತ್ತದೆ ಮತ್ತು ಕೆಟ್ಟವರಾಗಿದ್ದರೆ, ಅದಕ್ಕಿಂತ ದೊಡ್ಡ ನಷ್ಟ ಬೇರೆ ಇರಲಾರದು ಎಂಬುದು ಸ್ಪಷ್ಟವೇ. ಆದರೆ ಗೆಳೆತನವು ಹೃದಯಕ್ಕೆ ಸಂಬಂಧಿಸಿ ಇರುತ್ತದೆ. ಆಯ್ಕೆಯಲ್ಲಿ ಅವರ ಇಚ್ಛೆ ಮತ್ತು ಸಂಕಲ್ಪವೇ ಪ್ರಮುಖವಾಗಿರುತ್ತದೆ. ಹಿರಿಯರ ಇಚ್ಛೆಯಂತೆ ಮಿತ್ರರನ್ನು ಆಯ್ಕೆ ಮಾಡಲಾರರು. ಇಂತಹ ಸ್ಥಿತಿಯಲ್ಲಿ ಆಯ್ಕೆಗೆ ಒಂದು ಹಂತದ ವರೆಗೆ ಸ್ವಾತಂತ್ರ್ಯ ನೀಡಬೇಕು. ಆದರೆ ಮಿತ್ರರು ದೊರೆಯಬೇಕಾದರೆ, ಪರಿಸರವು ಉತ್ತಮವಾಗಿರಬೇಕೆಂದು ಬಯಸಬೇಕಲ್ಲದೆ ಅದಕ್ಕಾಗಿ ಪ್ರಯತ್ನಿಸಲೂಬೇಕು. ಮಕ್ಕಳ ಗೆಳೆಯರ ಜೀವನ ಕ್ರಮ, ಆಸಕ್ತಿಗಳ ಮೇಲೆ ಒಂದು ಕಣ್ಣಿಟ್ಟಿರಬೇಕಾದುದು ಅಗತ್ಯ. ಅವರನ್ನು ಆಗಾಗ ಮನೆಗೆ ಆಹ್ವಾನಿಸುವ ಅವಕಾಶ ನೀಡಬೇಕು. ಅವರನ್ನು ಮಾನ್ಯ ಮಾಡಬೇಕು. ಪ್ರೀತಿ, ಸಹಾನುಭೂತಿ ಮತ್ತು ಸದ್ವರ್ತನೆಯಿಂದ ಅವರ ಇಷ್ಟದ ಹವ್ಯಾಸ ಮತ್ತು ಅಭ್ಯಾಸಗಳಲ್ಲಿ ಆಸಕ್ತಿ ಹೊಂದಲು ಅವಕಾಶ ನೀಡಬೇಕು. ಇಂತಹ ಸ್ಥಿತಿಯಲ್ಲಿ ಮಕ್ಕಳಲ್ಲಿ ಸುಧಾರಣೆಯೂ ಆಗುವುದು. ಅಂತೆಯೇ ಅವರು ಕೆಟ್ಟ ಸಾಂಗತ್ಯದಿಂದ ಸುರಕ್ಷಿತರಾಗಿರುವರು. ಹೆಚ್ಚು ತಡೆಯುವುದರಿಂದ ಕೆಟ್ಟ ಪರಿಣಾಮವುಂಟಾಗುತ್ತದೆ.

8. ಮಾದರಿ ವ್ಯಕ್ತಿತ್ವ ಮತ್ತು ಖ್ಯಾತ ನಾಯಕರ ಬಗ್ಗೆ ಒಲವು ಮತ್ತು ಅವರ ಗುಣ ಹಾಗೂ ನಡೆ ನುಡಿಯನ್ನು ತನ್ನದಾಗಿಸುವ ಆಸಕ್ತಿ ಹುಟ್ಟಿಕೊಳ್ಳುತ್ತದೆ. ಅದುವರೆಗೂ ಅವರು ತಮ್ಮ ಹೆತ್ತವರು, ಅಧ್ಯಾಪಕರು ಮತ್ತಿತರರನ್ನು ಮಾತ್ರವೇ ಮಾದರಿ ವ್ಯಕ್ತಿಗಳಾಗಿ, ಉನ್ನತ ವ್ಯಕ್ತಿತ್ವಗಳಾಗಿ ಭಾವಿಸುತ್ತಿದ್ದರು. ಆದರೆ ಈಗ ಅವರಲ್ಲಿ ಹಲವು ಕೊರತೆಗಳು ಕಾಣತೊಡಗುತ್ತವೆ. ಹಾಗಾಗಿ ಅವರು ಖ್ಯಾತನಾಮ ವ್ಯಕ್ತಿತ್ವಗಳನ್ನು ತಮ್ಮ ಪಾಲಿಗೆ ಮಾದರಿಯನ್ನಾಗಿ ಮಾಡಲು ಬಯಸುತ್ತಾರೆ. ಆದರೆ ಸಮಗ್ರ ಮತ್ತು ಪರಿಪೂರ್ಣ ಹಾಗೂ ಸರ್ವರಿಗೂ ಪ್ರಳಯದ ವರೆಗೂ ಅನುಕರಣಾರ್ಹ ವ್ಯಕ್ತಿತ್ವ ಅಂತ್ಯ ಪ್ರವಾದಿ

ಮುಹಮ್ಮದ್‌ರವರದ್ದಾಗಿದೆ(ಸ) ಎಂಬುದರಲ್ಲಿ ಎರಡು ಮಾತಿಲ್ಲ. ಹಾಗಾಗಿ ಪ್ರವಾದಿವರ್ಯರನ್ನು(ಸ) ಪ್ರೀತಿಸಲು ಮತ್ತು ಅವರ ಚಾರಿತ್ರ್ಯವನ್ನು ಅನುಕರಿಸಲು ಮಕ್ಕಳನ್ನು ಪ್ರೇರೇಪಿಸಬೇಕಾಗಿದೆ. ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿದರೆ ಮಕ್ಕಳು ಅಕ್ರಮಿ ನೇತಾರರನ್ನು ಅಥವಾ ಚಿತ್ರ ನಟರನ್ನು ತಮ್ಮ ಹೀರೊಗಳನ್ನಾಗಿ ಮಾಡಿಕೊಳ್ಳುವ ಸಾಧ್ಯತೆ ಇದೆ.

9. ಜೀವನವನ್ನು ಮುಡಿಪಾಗಿಸುವಂತಹ ಒಂದು ಪರಮ ಗುರಿಯ (ಆದರ್ಶದ) ಅಗತ್ಯ ಬಹಳವಾಗಿ ಕಾಡತೊಡಗುತ್ತದೆ. ತನ್ನ ಸೃಷ್ಟಿಕರ್ತನ ಸಂಪ್ರೀತಿಯನ್ನು ಗಳಿಸುವುದಕ್ಕಾಗಿ ತನ್ನ ಇಡೀ ಜೀವನವನ್ನು ಮುಡಿಪಾಗಿಡುವುದು, ಅಂತೆಯೇ ಜೀವನದ ಸಕಲ ರಂಗಗಳಲ್ಲಿ ಅಲ್ಲಾಹನ ಇಚ್ಛೆಯಂತೆ ಸ್ವತಃ ನಡೆಯುವುದು ಮತ್ತು ಇತರೆಲ್ಲ ಮಾನವರನ್ನು ಆ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವುದೇ ಮಾನವನ ಜೀವನದ ಏಕೈಕ ಪರಮ ಗುರಿಯಾಗಿದೆ. ಆದರೆ ಮಾನವರು ತಮಗಾಗಿ ತರತರದ ಆದರ್ಶ ಮತ್ತು ಗುರಿಯನ್ನು ಸ್ವಯಂ ನಿಶ್ಚಯಿಸಿಬಿಟ್ಟಿದ್ದಾರೆ. ದೇವಾರಾಧನೆಯ ಜಾಗದಲ್ಲಿ ಧನಾರಾಧನೆ, ಚಿತ್ತಾರಾಧನೆ, ದೇಶಭಕ್ತಿ, ಜನಾಂಗ ಭಕ್ತಿ ಇತ್ಯಾದಿ ವಿವಿಧ 'ಭಕ್ತಿ' ಮತ್ತು 'ಇಸಂ'ಗಳ ಮೇಲಾಟವು ಉಂಟು ಮಾಡಿರುವ ವಾತಾವರಣದಲ್ಲಿ ಆದರ್ಶದ ಆಯ್ಕೆಯಲ್ಲಿ ದಾರಿ ತಪ್ಪುವ ಆತಂಕ ಇದ್ದೇ ಇದೆ. ಆದ್ದರಿಂದ ಅತ್ಯಂತ ಯುಕ್ತಿ, ದೂರದೃಷ್ಟಿ, ಪ್ರೀತಿ ಮತ್ತು ಸಹಾನುಭೂತಿಯೊಂದಿಗೆ ಮಕ್ಕಳಿಗೆ ನೈಜ ಆದರ್ಶವನ್ನು ಕಲಿಸಿಕೊಡಬೇಕು. ಅವರ ಶಕ್ತಿ-ಸಾಮರ್ಥ್ಯ ಮತ್ತು ಸ್ವಾಭಾವಿಕ ಒಲವುಗಳನ್ನು ದೃಷ್ಟಿಯಲ್ಲಿರಿಸಿಕೊಂಡು, ಆ ಪರಮ ಗುರಿಯನ್ನು ಗಳಿಸುವ ಪ್ರಯತ್ನದಲ್ಲಿ ಸೂಕ್ತ ಮಾರ್ಗದರ್ಶನ ನೀಡುತ್ತಾ ಇರಬೇಕು. ಆ ಪರಮ ಗುರಿಯ ಯಾವ ದಿಶೆಯಲ್ಲಿ ಮಕ್ಕಳು ಉತ್ತಮ ಸೇವೆಯನ್ನು ಸಲ್ಲಿಸಬಲ್ಲರೋ ಆ ದಿಶೆಯನ್ನು ಗುರುತಿಸಿ ಮುನ್ನಡೆಯಬೇಕಾಗಿದೆ.

10. ಧಾರ್ಮಿಕ ಹುಮ್ಮಸ್ಸು ಮತ್ತು ಅದಕ್ಕಾಗಿ ತ್ಯಾಗ-ಬಲಿದಾನದ ಭಾವನೆ ಹಾಗೂ ನೈತಿಕ ಮೌಲ್ಯದ ಗೌರವವು ಬೆಳೆಯುತ್ತದೆ. ಆದರೆ ವಿಶ್ವಾಸ-ಶ್ರದ್ಧೆಗೆ ಸಂಬಂಧಿಸಿ ಹೆಚ್ಚಿನ ವೇಳೆ ಸಂಶಯ ಹುಟ್ಟಿಕೊಳ್ಳತೊಡಗುತ್ತದೆ; ಅವುಗಳ ರಹಸ್ಯ ಮತ್ತು ಅರ್ಥ ವ್ಯಾಖ್ಯಾನವನ್ನು ತಿಳಿಯುವ ಆಗ್ರಹ ಉಂಟಾಗುತ್ತದೆ.

ಧಾರ್ಮಿಕ ಉತ್ಸಾಹವನ್ನು ಸಮತೋಲನದೊಂದಿಗೆ ಪೋಷಿಸಬೇಕಾಗಿದೆ. ಹುಮ್ಮಸ್ಸಿನೊಂದಿಗೆ ಯುಕ್ತಿಯ ಚಿಂತೆಯೂ ಇರಬೇಕಾಗಿದೆ. ಸಂಶಯಗಳಿಗೆ ಕೋಪವು ಉತ್ತರವಾಗಬಾರದು, ಬದಲಿಗೆ ಸಹಾನುಭೂತಿಯೊಂದಿಗೆ ಸಮಾಧಾನಕರ ಉತ್ತರ ನೀಡಬೇಕಾಗಿದೆ. ಆಧಾರ-ಪ್ರಮಾಣಗಳಿಂದ ಸಂತೃಪ್ತಿಗೊಳಿಸಲು ಪ್ರಯತ್ನಿಸಬೇಕು. ಜತೆಗೆ ಶರೀಅತ್‌ನ (ಕರ್ಮಶಾಸ್ತ್ರದ) ಒಳ-ಹೊರಗುಗಳನ್ನು ತಿಳಿಸಿಕೊಡಬೇಕು. ಈ ಪ್ರಾಯದಲ್ಲಿ ದೈಹಿಕ ಬೇಡಿಕೆ ಒಂದಿದ್ದರೆ, ಆಧ್ಯಾತ್ಮಿಕ ಬೇಡಿಕೆ ಬೇರೆಯೇ ಇರುತ್ತದೆ; ಸಾಮಾಜಿಕ ಮತ್ತು ನೈತಿಕ ಮೌಲ್ಯಗಳ ಬೇಡಿಕೆಯೇ ಬೇರೆ, ಚಿತ್ತಾಕಾಂಕ್ಷೆಯ ಬೇಡಿಕೆಯೇ ಬೇರೆ. ಅವೆರಡರ

ಬೇಡಿಕೆಗಳಲ್ಲಿ ಸಂಘರ್ಷವುಂಟಾಗುವುದರಿಂದ ಮಕ್ಕಳು ವ್ಯಾಕುಲತೆಗೆ ಒಳಗಾಗುತ್ತಾರೆ ಹಾಗೂ ಶರಈ ಆದೇಶಗಳ ಯುಕ್ತಾಯುಕ್ತತೆಯ ಬಗ್ಗೆ ಸಂಶಯ ತಾಳತೊಡಗುತ್ತಾರೆ. ಆ ಉಭಯ ಬೇಡಿಕೆಗಳಲ್ಲಿರುವ ಸಾಮ್ಯತೆಯನ್ನು ತಿಳಿಸಿಕೊಟ್ಟರೆ, ಮಕ್ಕಳು ಸಮಾಧಾನ ಪಡುತ್ತಾರೆ. ಇಸ್ಲಾಮ್ ಪ್ರಕೃತಿ ಧರ್ಮವಾಗಿರುವ ಕಾರಣ ಅದು ದೇಹದ ನೈಸರ್ಗಿಕ ಬೇಡಿಕೆಗಳನ್ನು ಕಡೆಗಣಿಸುವುದಿಲ್ಲ. ಕ್ರೈಸ್ತ ಮತ್ತಿತರ ಧರ್ಮಗಳಂತೆ ಇಸ್ಲಾಮಿನಲ್ಲಿ ಯುವ ಜನತೆಗೆ ಪ್ರಕೃತಿ ವಿರೋಧಿಯಾಗಿರುವಂತಹ ಯಾವುದೇ ಅಂಶ ಕಾಣುವುದಿಲ್ಲ.

11. ಅಧ್ಯಯನದಲ್ಲಿ ಅಪಾರ ಆಸಕ್ತಿ ಇರುತ್ತದೆ. ಗಂಟೆಗಟ್ಟಲೆ ಓದುವುದರಲ್ಲಿಯೇ ತಲ್ಲೀನರಾಗಿರುತ್ತಾರೆ. ಹಾಗಾಗಿ ಸಹಾಬಿಗಳು, ಸುಧಾರಕರು, ಧರ್ಮೋದ್ಧಾರಕರು, ಸಮುದಾಯ ಪ್ರೇಮಿಗಳು ಮತ್ತು ಕ್ರಾಂತಿಕಾರಿ ವ್ಯಕ್ತಿತ್ವಗಳ ಜೀವನ ಚರಿತ್ರೆ ಹಾಗೂ ಸಾಧನೆಗಳನ್ನು ತಿಳಿಸಿಕೊಡುವಂತಹ ಕೃತಿಗಳನ್ನೂ ಐತಿಹಾಸಿಕ ಕಾದಂಬರಿಗಳನ್ನೂ ಓದಲು ಪ್ರೇರೇಪಿಸಬೇಕು. ಉಡುಗೊರೆಯ ರೂಪದಲ್ಲಿ ಅಂತಹ ಕೃತಿಗಳನ್ನು ನೀಡುತ್ತಿರಬೇಕು.

12. ನಿಸ್ಪೃಹ ಪ್ರೀತಿಯ ಭಾವನೆ ಬೆಳೆಯುತ್ತದೆ. ಈ ಭಾವನೆಯನ್ನು ಸಮಾಜ ಸೇವೆ ಮತ್ತು ಹಕ್ಕು-ನ್ಯಾಯದ ಮೇಲೆ ಪ್ರೀತಿ ಇತ್ಯಾದಿಗಳೆಡೆಗೆ ಹೊರಳಿಸಲು ಪ್ರಯತ್ನಿಸಬೇಕು. ಅಂತಹ ಅವಕಾಶವನ್ನು ಒದಗಿಸುತ್ತಿರಬೇಕು.

13. ಅಂಧಾನುಕರಣೆಯನ್ನು ವಿರೋಧಿಸುತ್ತಾರೆ ಮತ್ತು ಆಲಿಸಿದೆವು, ಅನುಸರಿಸಿದೆವು ಎನ್ನುವುದರಿಂದಲೂ ಹಿಂದೇಟು ಹಾಕುತ್ತಾರೆ. ಆದ್ದರಿಂದ ಆದೇಶಿಸುವಾಗ ಸಾಕಷ್ಟು ಜಾಗರೂಕತೆ ವಹಿಸಬೇಕು. ಸರ್ವಾಧಿಕಾರಿಯ ಹಾಗೆ ಆದೇಶ ನೀಡುವುದರ ಬದಲು ಸಲಹೆಗಾರನಾಗಿ ಮಾರ್ಗದರ್ಶನ ನೀಡಬೇಕು. ಸ್ವೀಕೃತಿಯನ್ನು ಅನುಸರಿಸಿ ಆದೇಶವನ್ನು ನೀಡಬೇಕು. ಉಲ್ಲಂಘನೆಯ ಆಶಂಕೆಯಿಂದ ಮುಕ್ತರಾಗಲು ಇದು ಅಗತ್ಯ.

14. ಅಡ್ಡಿಪಡಿಸುವುದು ಮತ್ತು ತಪ್ಪನ್ನು ಎತ್ತಿ ತೋರಿಸುವುದು ಇತ್ಯಾದಿಗಳ ಕುರಿತು ತೀವ್ರ ಕೋಪ ಮತ್ತು ವಿದ್ರೋಹದ ಆತಂಕ ಇದ್ದೇ ಇರುತ್ತದೆ. ಆದ್ದರಿಂದ ಯಾವುದೇ ತಪ್ಪಿಗೂ ಬಹಿರಂಗವಾಗಿ ತಡೆಯುವುದೋ ಗದರಿಸುವುದೋ ಮಾಡುವುದರ ಬದಲು ಏಕಾಂತದಲ್ಲಿ ಸೌಮ್ಯವಾಗಿ ಪ್ರೀತಿಯಿಂದ ತಿಳಿಹೇಳಬೇಕು.

15. ಪ್ರೀತಿಗೆ ಸಂಬಂಧಿಸಿ, ಬಾಲ್ಯ ಮರಳಿತೋ ಎಂಬಂತೆ ಭಾಸವಾಗುತ್ತದೆ. ಈ ಹಂತದ ಆರಂಭದಲ್ಲಿಯಂತೂ ತನ್ನ ಮೇಲೆಯೇ ಪ್ರೀತಿಯುಕ್ಕುತ್ತದೆ. ಶೃಂಗಾರದ ಬಗ್ಗೆ ಅಪಾರ ಗಮನವಿರುತ್ತದೆ. ಬಳಿಕ ಸಲಿಂಗಿಗಳೊಂದಿಗೆ ಪ್ರೀತಿ-ಒಡನಾಟ; ಆಮೇಲೆ ವಿರುದ್ಧ ಲಿಂಗಿಗಳ ಆಕರ್ಷಣೆ, ನಿಸ್ಪೃಹ ಪ್ರೀತಿ ಮತ್ತು ಸಂಪೂರ್ಣ ಸಮರ್ಪಣೆಯ ಭಾವ ಬೆಳೆಯುತ್ತದೆ. ಇದು ಸ್ವಾಭಾವಿಕ. ಈ ಭಾವನೆಯನ್ನು ತುಳಿಯುವ ಬದಲು ಅದನ್ನು ಸಮತೋಲನದಲ್ಲಿರಿಸುವ ಹಾಗೂ ಸರಿಯಾದ ದಿಕ್ಕಿನಲ್ಲಿ ನಡೆಸುವ ಅಗತ್ಯವಿದೆ. ಅಂತೆಯೇ ವಯಸ್ಕರಾದ ಮೇಲೆ ವಿವಾಹಕ್ಕೆ ತ್ವರೆ ಮಾಡಬೇಕು.

16. ಚಾರಿತ್ರ್ಯದಲ್ಲಿ ಏರಿಳಿತಗಳನ್ನು ಅನುಭವಿಸುತ್ತಾರೆ. ಕ್ಷಣಕ್ಷಣಕ್ಕೊಮ್ಮೆ ಬದಲಾಗುತ್ತಿರುತ್ತಾರೆ. ಒಮ್ಮೆ ತೀರಾ ಉತ್ಸಾಹ ತೋರಿದರೆ, ಇನ್ನೊಮ್ಮೆ ಸೋಮಾರಿ ಅನ್ನುವಷ್ಟು ಆಲಸ್ಯ ತೋರುತ್ತಾರೆ. ಒಮ್ಮೊಮ್ಮೆ ಅತ್ಯಂತ ಆಶಾವಾದಿಯಾಗಿ ಕಂಡರೆ ಕೆಲವೊಮ್ಮೆ ಅತಿ ನಿರಾಶೆಗೊಂಡಿರುತ್ತಾರೆ. ಅತ್ತ ಹಿರಿಯರೂ ಅಲ್ಲ, ಇತ್ತ ಕಿರಿಯರೂ ಅಲ್ಲದ ಸ್ಥಿತಿ; ಸದಾ ಮಾನಸಿಕ ಗೊಂದಲಗಳಲ್ಲಿ ತೊಳಲಾಡುತ್ತಿರುತ್ತಾರೆ. ಈ ಅವಸ್ಥೆಯಲ್ಲಿ ಅವರು ಗದರಿಕೆ, ಬೈಗುಳ, ತೆಗಳಿಕೆಯ ಬದಲು ಸಹಾನುಭೂತಿಗೆ ಹೆಚ್ಚು ಅರ್ಹರಾಗಿರುತ್ತಾರೆ.

17. ಪ್ರಾಯದ ಈ ಸ್ವರ್ಣ ಘಟ್ಟದಲ್ಲಿ ನವೋತ್ಸಾಹ, ಹೊಸ ಇರಾದೆ, ಭವಿಷ್ಯದಲ್ಲಿ ತನ್ನ ಸ್ಥಾನಮಾನವನ್ನು ನಿರ್ಧರಿಸುವ ಮತ್ತು ಮುಂದುವರಿಯುವ ಉತ್ಕಟೇಚ್ಛೆ ಬೆಳೆದು ಬರುತ್ತದೆ. ಈ ವಿಶೇಷತೆಯಿಂದ ಪ್ರಯೋಜನ ಪಡೆಯಬೇಕು. ಆ ಮೂಲಕ ಉನ್ನತ ಗುಣವನ್ನು ಬೆಳೆಸಲು ಮತ್ತು ಪ್ರಗತಿಯ ಉನ್ನತ ಸ್ಥಾನವನ್ನು ತಲುಪಲು ಸಹಕಾರ ಹಾಗೂ ಮಾರ್ಗದರ್ಶನ ನೀಡಬೇಕು. ಅನ್ಯಥಾ ತಪ್ಪು ದಿಕ್ಕಿನಲ್ಲಿ ಬಿದ್ದು ಬಿಟ್ಟರೆ, ಅದು ಅಪಾರ ಕಷ್ಟ-ನಷ್ಟಕ್ಕೆ ನಾಂದಿಯಾದೀತು.

ಇವು ಮಕ್ಕಳ ಬೆಳವಣಿಗೆಯ ವಿವಿಧ ಹಂತಗಳ ಮತ್ತು ಪ್ರತಿಹಂತದ ವಿಶೇಷತೆಗಳು. ಶಿಕ್ಷಣ-ತರಬೇತಿಯಲ್ಲಿ ಈ ವಿಶೇಷತೆಗಳನ್ನು ಸಾದ್ಯಂತ ಪರಿಗಣನೆಗೆ ತೆಗೆದುಕೊಳ್ಳಬೇಕು. ಮಗು ಯಾವ ಹಂತದಲ್ಲಿದೆಯೋ ಆ ಹಂತದ ವಿಶೇಷತೆಗಳನ್ನು ಗಮನ ಕೊಟ್ಟು ವೀಕ್ಷಿಸಬೇಕು. ಅದರ ಅನುಸಾರವೇ ಅವರಿಗಾಗಿ ಪಠ್ಯ, ಅಭ್ಯಾಸ ಇತ್ಯಾದಿಗಳನ್ನು ತಯಾರಿಸಬೇಕು. ಒಂದು ವೇಳೆ, ಆ ವಿಶೇಷತೆಗಳನ್ನು ಕಡೆಗಣಿಸಿದರೆ ಅಥವಾ ಅದರ ಸ್ವಾಭಾವಿಕ ಬೇಡಿಕೆಗಳನ್ನು ದಮನಿಸಿದರೆ, ಮಗುವಿನ ವ್ಯಕ್ತಿತ್ವ ವಿಕಸನದಲ್ಲಿ ತೊಡಕುಂಟಾಗುತ್ತದೆ. ಅದರ ದುಷ್ಪರಿಣಾಮವನ್ನು ಮಗು ಬೆಳೆದ ಮೇಲೆ ಅನುಭವಿಸಬೇಕಾಗಿ ಬರುವುದು. ಪ್ರೀತಿ, ಮಮತೆ, ಹಿತಚಿಂತನೆ ಮತ್ತು ಸಹಾನುಭೂತಿಯನ್ನು ಮೇಳೈಸಿಕೊಂಡೇ ಮಕ್ಕಳಿಗೆ ತರಬೇತಿ ನೀಡಲು ಸಾಧ್ಯ. ಪರಿಸರವನ್ನು ಪರಿಶುದ್ಧವಾಗಿರಿಸುವುದು ಮತ್ತು ಹಿರಿಯರು ತಮ್ಮಲ್ಲಿ ಉತ್ತಮ ಚಾರಿತ್ರ್ಯವನ್ನು ಬೆಳೆಸುವುದೇ ಅತ್ಯುತ್ತಮ ವಿಧಾನವಾಗಿದೆ.

◆ ◆ ◆

ಅಧ್ಯಾಯ-11

ಕೆಲವು ಪ್ರಮುಖ ಸ್ವಭಾವಗಳು

ಸ್ವಭಾವಗಳು ಮತ್ತು ಸ್ವಾಭಾವಿಕ ಗುಣಗಳು ಹಲವು ಇರುತ್ತವೆ. ಆದರೆ ಶಿಕ್ಷಣ-ತರಬೇತಿಯ ನಿಟ್ಟಿನಲ್ಲಿ ಈ ಕೆಳಗಿನವು ಪ್ರಮುಖವಾಗಿವೆ. ಹಾಗಾಗಿ ಅವುಗಳ ಕುರಿತು ವಿವರವಾಗಿ ತಿಳಿಯೋಣ.

ಕುತೂಹಲ ಗುಣ

ಅಂದರೆ ಅನ್ವೇಷಿಸುವ ಅಥವಾ ಮಾಹಿತಿ ಗಳಿಸುವ ಇಚ್ಛೆ. ಇದು ಅತಿ ಪ್ರಮುಖವಾದ ಸ್ವಭಾವ ಮತ್ತು ಸಕಲ ವಿದ್ಯೆಯ ಜನನಿಯಾಗಿದೆ. ಇದರ ಕಾರಣವಾಗಿಯೇ ಮಾನವನು ತನ್ನ ಪ್ರಾಕೃತಿಕ ಮತ್ತು ಸಾಮಾಜಿಕ ಪರಿಸರವನ್ನು ಚೆನ್ನಾಗಿ ಅರಿತುಕೊಳ್ಳುತ್ತಾನೆ ಹಾಗೂ ಕಣ್ಣು ಕಿವಿ ತೆರೆದು(ಅಂದರೆ ಪ್ರಜ್ಞಾವಂತಿಕೆಯಿಂದ) ಜೀವಿಸಲು ಯೋಗ್ಯನಾಗುತ್ತಾನೆ. ಶೈಶವ ಕಾಲದಲ್ಲಿಯೇ ಈ ಸ್ವಭಾವವು ತನ್ನ ಕೆಲಸವನ್ನು ಪ್ರಾರಂಭಿಸುತ್ತದೆ. ಕಣ್ಣಿಗೆ ಕಾಣುವ ಪ್ರತಿಯೊಂದು ವಸ್ತುವನ್ನೂ ಪ್ರಶ್ನಾರ್ಥವಾಗಿ ನೋಡಲು ತೊಡಗುತ್ತದೆ. ಎಲ್ಲಿಯ ವರೆಗೆಂದರೆ, ಆ ವಸ್ತು ದೃಷ್ಟಿಯಿಂದ ಮರೆಯಾಗುವ ವರೆಗೂ ಅದರಲ್ಲಿಯೇ ದೃಷ್ಟಿ ನೆಟ್ಟಿರುತ್ತದೆ. ಮಾತನಾಡಲು ಕಲಿತ ಮೇಲಂತೂ ಪ್ರತಿಯೊಂದು ಹೊಸ ವಸ್ತುವಿನ ಬಗ್ಗೆ ಪ್ರಶ್ನೆಗಳ ಸುರಿಮಳೆಗೆರೆಯುತ್ತದೆ. ಇದು ಏನು? ಅದು ಏನು? ಅದು ಯಾರು? ಅದು ಹೇಗಿರುತ್ತದೆ? ಹೀಗೆ ಯಾಕೆ?... ಇತ್ಯಾದಿ. ಈ ಪ್ರಕಾರ ಮಗು ತನ್ನ ಸುತ್ತಮುತ್ತಲಿನ ವಿವಿಧ ವಸ್ತುಗಳ ಬಗ್ಗೆ ಮಾಹಿತಿ(ಜ್ಞಾನ) ಗಳಿಸುತ್ತದೆ. ಈ ಸ್ವಭಾವದ ಜತೆಗೆ ಕೌತುಕ ಮತ್ತು ವಿಸ್ಮಯದ ಭಾವನೆಯೂ ಸೇರಿಕೊಂಡು ಮಗುವಿನ ಆಸಕ್ತಿಯಲ್ಲಿ ಇನ್ನಷ್ಟು ಹೆಚ್ಚಳವುಂಟಾಗುತ್ತದೆ. ಅದು ಮಗುವಿನಲ್ಲಿ ಹುಡುಕಾಟ ಮತ್ತು ಶೋಧನೆಯ ಗುಣಕ್ಕೆ ನಾಂದಿಯಾಗುತ್ತದೆ. ಇದೇ ಗುಣದ ಕಾರಣದಿಂದಾಗಿ ಮಾನವನು ವಿಶ್ವದ ರಹಸ್ಯಗಳನ್ನು ಭೇದಿಸುವಲ್ಲಿ ಸಫಲನಾಗಿದ್ದಾನೆ. ಮಾತ್ರವಲ್ಲ, ಜಗತ್ತಿನ ಇನ್ನೂ ಹಲವಾರು ಕೌತುಕಗಳನ್ನು ತಿಳಿಯುತ್ತಲೂ ಇದ್ದಾನೆ. ಆದರೆ ಇದೇ ಸ್ವಭಾವವು ತಪ್ಪು ದಿಕ್ಕಿನಲ್ಲಿ ಚಲಿಸಿದರೆ ಮಗು ವ್ಯರ್ಥ, ನಿರರ್ಥಕ ಮತ್ತು ಕೆಟ್ಟ ವಿಷಯ ಅಥವಾ ಜನರ ಖಾಸಗಿ ಜೀವನದಲ್ಲಿ ಇಣುಕುವ

ಮೂಲಕ ತನ್ನ ಸಮಯ ಮತ್ತು ಶಕ್ತಿಯನ್ನು ವ್ಯರ್ಥಗೊಳಿಸಿ ಬಿಡುತ್ತದೆ. ಕೆಲವು ಕೆಟ್ಟ ಮತ್ತು ಅಪ್ರಿಯ ಕೃತ್ಯಗಳಲ್ಲಿ ಕೇವಲ ಅವುಗಳ ಪ್ರಭಾವವನ್ನು ಅರಿಯುವ ಕುತೂಹಲದಿಂದ ತೊಡಗಿಕೊಳ್ಳುತ್ತದೆ.

ಈ ಸ್ವಭಾವಕ್ಕೆ ಸಂಬಂಧಿಸಿ ಕೆಳಗೆ ನೀಡಿರುವ ವಿಷಯಗಳನ್ನು ಪರಿಗಣಿಸಬೇಕು:

1. ಹೊಸ ಹೊಸ ಮಾಹಿತಿಗಳನ್ನು ತಿಳಿಸಿ ಕೊಡಲು ಈ ಸ್ವಭಾವವನ್ನು ಹುರಿದುಂಬಿಸಬೇಕಾಗಿದೆ. ಆಗ ಮಕ್ಕಳು ಸಂಪೂರ್ಣ ಆಸಕ್ತಿ ಮತ್ತು ತಲ್ಲೀನತೆಯೊಂದಿಗೆ ಪಠ್ಯದಲ್ಲಿ ಗಮನ ಕೊಡುತ್ತಾರೆ. ಆದ್ದರಿಂದ ಮಾಹಿತಿಪೂರ್ಣ ಪಾಠಗಳನ್ನು ಬೋಧಿಸುವಾಗ ಈ ಸ್ವಭಾವದಿಂದ ಸಾದ್ಯಂತ ಪ್ರಯೋಜನ ಪಡೆಯಬೇಕು. ಅದೇ ವೇಳೆ, ಹೊಸ ಮಾಹಿತಿಗಳನ್ನು ಹಿಂದಿನ ಪಠ್ಯದೊಂದಿಗೆ ಸೇರಿಸಿ ಮಾಹಿತಿ ಪೂರ್ಣವಾಗಿಸಿ ಕಲಿಸಬೇಕು. ಏಕೆಂದರೆ, ಒಂದು ವೇಳೆ ವಿಷಯವು ಅಪರಿಚಿತವಾಗಿದ್ದರೆ ಅಥವಾ ವಿವೇಕಪೂರ್ಣವಾಗಿಲ್ಲದಿದ್ದರೆ ಮಕ್ಕಳು ಅದರೆಡೆಗೆ ಗಮನವೀಯಲಾರರು ಅಥವಾ ಆ ಕುರಿತು ಆತಂಕ ಪಡುವರು.

2. ಮಕ್ಕಳ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರವನ್ನು ನೀಡಬೇಕು. ಹೆಚ್ಚು ಪ್ರಶ್ನೆ ಕೇಳುತ್ತಾರೆಂದು ಅವರನ್ನು ಗದರಿಸಬಾರದು. ಹೆಚ್ಚಿನವರು ಸಹನೆ ಕಳೆದುಕೊಂಡು ಮಕ್ಕಳನ್ನು ಗದರಿಸುತ್ತಾರೆ. ತತ್ಪರಿಣಾಮವಾಗಿ ಈ ಸ್ವಭಾವವು ಕ್ರಮೇಣ ದುರ್ಬಲವಾಗುತ್ತದೆ ಅಥವಾ ಸುಪ್ತವಾಗಿ ಬಿಡುತ್ತದೆ. ವಸ್ತುತಃ ಅದನ್ನು ಜೀವನ ಪರ್ಯಂತ ಜೀವಂತವಾಗಿರಿಸಬೇಕಾಗಿದೆ. ಹಾಗೆಯೇ ಪ್ರಾಯ, ಬುದ್ಧಿ ಮತ್ತು ಆಸಕ್ತಿಗೆ ಅನುಸಾರ ಆ ಸ್ವಭಾವದ ಸಮಾಧಾನಕ್ಕಾಗಿ ಸೂಕ್ತ ಅವಕಾಶಗಳನ್ನು ಒದಗಿಸಿಕೊಡಬೇಕು.

3. ಮಕ್ಕಳನ್ನು ವ್ಯರ್ಥ, ಪ್ರಯೋಜನವಿಲ್ಲದ ಮತ್ತು ಆರೋಗ್ಯ ಹಾಗೂ ಚಾರಿತ್ರ್ಯಕ್ಕೆ ಹಾನಿಕರವಾದ ವಿಷಯಗಳಲ್ಲಿ ಕುತೂಹಲ ತಾಳುವುದರಿಂದ ಸಂರಕ್ಷಿಸಬೇಕು. ಪ್ರಶ್ನೆಗಳನ್ನುಂಟು ಮಾಡಿ ಮತ್ತು ಅವಕಾಶಗಳನ್ನು ಒದಗಿಸಿ ಮಕ್ಕಳಲ್ಲಿ ವಿಜ್ಞಾನ, ಚರಿತ್ರೆ, ಭೂಗೋಳ, ಸಾಹಿತ್ಯ ಇತ್ಯಾದಿಗಳ ಕುರಿತು ಸಾಮಾನ್ಯ ಮಾಹಿತಿಗಳನ್ನು ಗಳಿಸಲು ಅಥವಾ ಹುಡುಕಾಟ ಶೋಧನೆಯ ಗುಣವನ್ನು ಬೆಳೆಸಲು ಚಿಂತಿಸಬೇಕು.

4. ಕುತೂಹಲದಲ್ಲಿ ಮೂರು ದರ್ಜೆಗಳಿರುತ್ತವೆ.

(ಅ). ದೈಹಿಕ ಕುತೂಹಲ:

ಮಗು ದೇಹದ ಅಂಗಾಂಗ ಮತ್ತು ಸುತ್ತಮುತ್ತಲ ವಸ್ತುಗಳನ್ನು ಗಮನಗೊಟ್ಟು ನೋಡುತ್ತದೆ. ಅವುಗಳನ್ನು ಮುಟ್ಟಿ ನೋಡುತ್ತದೆ. ತಡಕಾಡುತ್ತದೆ. ಕೈಯಲ್ಲಿ ಎಲ್ಲಿ ಅವುಗಳ ರೂಪ, ಬಣ್ಣ, ಗಾತ್ರ, ತೂಕ, ಶಬ್ದ ತೂಕ, ಕಾಠಿಣ್ಯ, ಕೋಮಲತೆ, ಶಾಖ, ತಂಪು ಮತ್ತಿತರ ವಿಶೇಷತೆಗಳನ್ನು ತನ್ನದೇ ಶೈಲಿಯಲ್ಲಿ ತಿಳಿದುಕೊಳ್ಳಲು ಪ್ರಯತ್ನಿಸುತ್ತದೆ. ಹಾಗಾಗಿ, ಮಗುವಿನ ಪರಿಸರ ಸುಭಿಕ್ಷವಾಗಿದ್ದರೆ ಮತ್ತು ವಿವಿಧ ಹಲವಾರು ವಸ್ತುಗಳು ಕಾಣುವ

ರೀತಿಯಲ್ಲಿ ಇದ್ದರೆ ಮಗು ಕೂಡಾ ಹೆಚ್ಚೆಚ್ಚು ವಸ್ತುಗಳ ಕುರಿತು ಜ್ಞಾನ ಹೊಂದುತ್ತದೆ. ಆದ್ದರಿಂದ ಅಂತಹ ವ್ಯವಸ್ಥೆಯಾಗಬೇಕು.

(ಅ). ಸಾಮಾಜಿಕ ಕುತೂಹಲ:

ವಸ್ತು/ವಿಷಯ, ಘಟನೆ/ದೃಶ್ಯ ಇತ್ಯಾದಿಗಳನ್ನು ಮಗು ಸ್ವಾನುಭವದಿಂದ ತಿಳಿದುಕೊಳ್ಳಲು ವಿಫಲವಾದಾಗ, ಆ ಕುರಿತು ಪೋಷಕರು, ಅಧ್ಯಾಪಕರು ಮತ್ತು ಮಿತ್ರರು ಮುಂತಾದವರಿಂದ ಕೇಳಿ ತಿಳಿಯಲು ಪ್ರಯತ್ನಿಸುತ್ತದೆ. ಮಗುವಿನ ಪ್ರಶ್ನೆಗಳು ಆರೋಗ್ಯವಂತ ಮೆದುಳಿನ ಲಕ್ಷಣವಾಗಿದೆ. ಆದ್ದರಿಂದ ಸಹಾನುಭೂತಿಯೊಂದಿಗೆ ಸಮಾಧಾನಕರ ಉತ್ತರ ನೀಡಬೇಕು.

(ಆ). ಬೌದ್ಧಿಕ ಕುತೂಹಲ:

ಹದಿಹರೆಯಕ್ಕೆ ಕಾಲಿಡುವ ಸಂದರ್ಭದಲ್ಲಿ ಇದು ಪ್ರಕಟವಾಗುತ್ತದೆ. ಕೆಲವು ಪ್ರಮುಖ ಸಮಸ್ಯೆಗಳು, ವ್ಯವಹಾರಗಳು ಮತ್ತು ಘಟನೆಗಳನ್ನು ತಿಳಿದುಕೊಳ್ಳುವಲ್ಲಿ ಅಥವಾ ಪರಿಹರಿಸುವಲ್ಲಿ ಇತರರ ಸಹಾಯ ಸಿಗದೆ ಹೋದಾಗ, ಮಕ್ಕಳು ಆ ಕುರಿತು ಸ್ವಯಂ ಗಾಢ ಚಿಂತನೆ ನಡೆಸತೊಡಗುತ್ತಾರೆ. ತರುವಾಯ ತಮ್ಮ ಸಾಮರ್ಥ್ಯಕ್ಕೆ ಅನುಸಾರ ತೀರ್ಮಾನ ಅಥವಾ ಪರಿಹಾರ ಕಂಡುಕೊಳ್ಳುತ್ತಾರೆ. ಆದರೆ ಅವು ಅವರ ಅಪಕ್ವತೆ ಮತ್ತು ಅನನುಭವದ ಕಾರಣವಾಗಿ ತೀರಾ ಕ್ಷುಲ್ಲಕವಾಗಿ ಕಾಣುತ್ತವೆ. ಆದರೆ ಮಕ್ಕಳ ಈ ಪ್ರಯತ್ನಗಳನ್ನು ತಮಾಷೆಯಲ್ಲಿ ತೇಲಿಬಿಡಬಾರದು. ಬದಲಾಗಿ ಸರಿಯಾದ ರೀತಿಯಲ್ಲಿ ಚಿಂತನೆ ನಡೆಸಲು ಸಹಾಯ ಮತ್ತು ಮಾರ್ಗದರ್ಶನ ನೀಡಬೇಕು.

5. ಮನೆ ಮತ್ತು ಶಾಲೆಗಳಲ್ಲಿ ಮಕ್ಕಳ ಕುತೂಹಲ ತಣಿಸುವಂತಹ ಸೂಕ್ತ ವ್ಯವಸ್ಥೆ ಇರಬೇಕು. ಈ ಒಲವನ್ನು ಸರಿಯಾದ ದಿಕ್ಕಿನಲ್ಲಿ ನಡೆಸಲು ಪ್ರಯತ್ನಿಸಬೇಕು. ಅನ್ಯಥಾ ಈ ಸ್ವಭಾವವು ಒಂದೋ ದುರ್ಬಲವಾಗಬಹುದು, ಇಲ್ಲವೇ ಅದು ತಪ್ಪು ದಾರಿಯನ್ನು ತುಳಿಯಬಹುದು. ತತ್ಪರಿಣಾಮವಾಗಿ ಮಕ್ಕಳು ಮನೆ ಮತ್ತು ಶಾಲೆಯಿಂದ ದೂರವುಳಿಯುವರು ಹಾಗೂ ಕೆಟ್ಟ ಗುಣ ಮತ್ತು ಅಪ್ರಿಯ ಕೃತ್ಯಗಳಲ್ಲಿ ತೊಡಗಿಕೊಳ್ಳಬಹುದು.

ಸಂಗ್ರಹ ಗುಣ

ಅಂದರೆ ಏನನ್ನಾದರೂ ಸಂಗ್ರಹಿಸಿಡುವುದು. ಇದು ಕೂಡ ಒಂದು ಮೂಲಭೂತ ಇಚ್ಛೆ ಮತ್ತು ಪ್ರಮುಖ ಸ್ವಭಾವವಾಗಿದೆ. ಇದರೊಂದಿಗೆ ಒಡೆತನದ ಭಾವನೆಯಿರುತ್ತದೆ. ಈ ಮೂಲಕ ಮಾನವ ತನ್ನ ಕಷ್ಟಕಾಲಕ್ಕಾಗಿ ಉಳಿತಾಯ ಮಾಡಿಡುತ್ತಾನೆ ಮತ್ತು ದಾರಿದ್ರ್ಯ, ಭಿಕ್ಷಾಟನೆಯಿಂದ ತನ್ನನ್ನು ರಕ್ಷಿಸಿಕೊಳ್ಳುತ್ತಾನೆ. ಕಲ್ಯಾಣ ಸಂಸ್ಥೆಗಳ ಸ್ಥಾಪನೆ ಮತ್ತು ಸಾಮೂಹಿಕ ಹಿತದ ಕಾರ್ಯಗಳಿಗೆ ಫಂಡ್ ಇತ್ಯಾದಿಗಳನ್ನು ಸಂಗ್ರಹಿಸಿಡುತ್ತಾನೆ.– ವಸ್ತು ಸಂಗ್ರಹಾಲಯ ಮತ್ತು ಗ್ರಂಥಾಲಯಗಳನ್ನು ಸ್ಥಾಪಿಸುತ್ತಾನೆ. ಲೋಕೋಕ್ತಿ, ನಾಣ್ಣುಡಿ, ಗಾದೆಮಾತು

ಇತ್ಯಾದಿಗಳ ಸಂಗ್ರಹ; ಪದಕೋಶ ಮತ್ತು ಉಲ್ಲೇಖಗಳ ಕೃತಿ ರಚನೆ ಇತ್ಯಾದಿಗಳೆಲ್ಲವೂ ಇದೇ ಸಂಗ್ರಹ ಸ್ವಭಾವದ ಫಲಿತಾಂಶಗಳಾಗಿವೆ. ಆದರೆ ಇದೇ ಸ್ವಭಾವವು ತಪ್ಪು ದಾರಿಗಿಳಿದು ಬಿಟ್ಟರೆ, ಮಾನವನನ್ನು ದುರಾಸೆ, ವಂಚನೆ, ಅಪಹರಣ, ಕಳ್ಳತನ, ದರೋಡೆ ಮತ್ತು ಬಂಡವಾಳಶಾಹಿತ್ವದಂತಹ ಕೇಡುಗಳಲ್ಲಿ ಬಂಧಿಸಿ ಬಿಡುತ್ತದೆ. ಇದರ ಕಾರಣವಾಗಿ ಸಮಾಜವಾದದಂತಹ ಮಹಾಶಾಪಕ್ಕೆ ದಾರಿ ತೆರೆದುಕೊಳ್ಳುತ್ತದೆ. ಈ ಸ್ವಭಾವವು ಎಳೆ ಪ್ರಾಯದಲ್ಲಿಯೇ ಪ್ರಕಟವಾಗುತ್ತಿರುತ್ತದೆ. ಮಗುವಿನ ಜೇಬು, ಪಾಟಿ ಚೀಲ ಅಥವಾ ಬಾಕ್ಸನ್ನು ತೆರೆದು ನೋಡಿ... ಹಣ್ಣುಗಳ ಬೀಜ, ಕಾಗದದ ತುಂಡು, ಖಾಲಿ ಡಬ್ಬ ಮತ್ತಿನ್ನೇನೋ ಸಿಗಬಹುದು. ಇವೆಲ್ಲವೂ ಈ ಗುಣದ ಪರಿಣಾಮಗಳಾಗಿವೆ. ಇದಕ್ಕಾಗಿ ಮಗುವನ್ನು ಎಚ್ಚರಿಸುವ ಬದಲು ಅಥವಾ ಆ ವಿಶಿಷ್ಟ ವಸ್ತುಗಳನ್ನು ಎಸೆದು ಬಿಡುವ ಬದಲು ಮಗುವಿನ ಸೂಕ್ತ ತರಬೇತಿಗಾಗಿ ಈ ಕೆಳಗಿನ ವಿಷಯಗಳನ್ನು ಪರಿಗಣಿಸಬೇಕು.

1. ಸಣ್ಣ ಮಕ್ಕಳನ್ನು ಶಾಲೆಯ ವಸ್ತು ಸಂಗ್ರಹಾಲಯ ಮತ್ತು ತರಗತಿಯ ಅಲಂಕಾರಕ್ಕಾಗಿ ವಿವಿಧ ರೀತಿಯ ಬೀಜ, ಹೂ, ಎಲೆ, ಹಕ್ಕಿಗಳ ಪುಕ್ಕ, ಗಾಜು ಮತ್ತು ಕಲ್ಲುಗಳ ಚೂರು, ಕಪ್ಪೆ ಚಿಪ್ಪು, ಬಸವನ ಹುಳದ ಚಿಪ್ಪು, ಖಾಲಿ ಡಬ್ಬ, ಅಂಚೆ ಚೀಟಿ, ನಕಾಶೆ, ಚಿತ್ರ, ನಾಣ್ಯ ಇತ್ಯಾದಿಗಳನ್ನು ಸಂಗ್ರಹಿಸಲು ಹಾಗೂ ಇತಿಹಾಸ, ಭೂಗೋಳ, ವಿಜ್ಞಾನ ಮತ್ತು ಕ್ರಾಫ್ಟ್ ಇತ್ಯಾದಿ ಪಾಠಗಳಲ್ಲಿ ಅವುಗಳಿಂದ ಪ್ರಯೋಜನ ಪಡೆಯಲು ಪ್ರೇರೇಪಿಸಬೇಕು. ಸಂಗ್ರಹಿಸಿದ ವಸ್ತುಗಳನ್ನು ಓರಣವಾಗಿ ಮಕ್ಕಳಿಗೆ ಇಡಲು ತಿಳಿಸಿಕೊಡಬೇಕು.

2. ದೊಡ್ಡ ಮಕ್ಕಳನ್ನು ಹದೀಸ್, ನುಡಿಗಟ್ಟು, ಗಾದೆ, ಕವನ (ದ್ವಿಪದಿ), ಉತ್ತಮ ಪುಸ್ತಕ ಇತ್ಯಾದಿಗಳನ್ನು ಸಂಗ್ರಹಿಸುವಂತೆ ಪ್ರೇರೇಪಿಸಬೇಕು.

3. ಜೇಬು ಖರ್ಚು ಮತ್ತು ಈದಿ (ಹಬ್ಬದಂದು ನೀಡುವ ಹಣ) ಇತ್ಯಾದಿಗಳಿಂದ ಒಂದಿಷ್ಟು ಉಳಿತಾಯ ಮಾಡುವ ಅಭ್ಯಾಸ ಬೆಳೆಸಬೇಕು. ಅದರಿಂದ ಸಾಕಷ್ಟು ಮೊತ್ತ ಉಳಿತಾಯವಾದಾಗ ಯಾವುದಾದರೂ ಪ್ರಯೋಜನಕಾರಿಯಾದ ಮತ್ತು ಅಗತ್ಯದ ಪುಸ್ತಕ ಅಥವಾ ವಸ್ತುವನ್ನು ಖರೀದಿಸಲು ಅಥವಾ ಯಾರಿಗಾದರೂ ಸಹಾಯ ಮಾಡಲು ಪ್ರೇರೇಪಿಸಬೇಕು.

4. ಬಡ ವಿದ್ಯಾರ್ಥಿಗಳ ಸಹಾಯಕ್ಕೆ ದೇಣಿಗೆ ಅಥವಾ ಹಳೆಯ ಪುಸ್ತಕ ಒದಗಿಸುವ ಅಭಿಯಾನದಲ್ಲಿ ಭಾಗವಹಿಸುವ ಅವಕಾಶ ಒದಗಿಸಿಕೊಡಬೇಕು.

5. ತನ್ನದೇ ಶಬ್ದಕೋಶ (Dictionary) ಮತ್ತು ಪದ್ಯ-ದ್ವಿಪದಿಗಳ ಹಸ್ತಪ್ರತಿಯನ್ನು ತಯಾರಿಸಲು ಅಂತೆಯೇ ಸಣ್ಣದೊಂದು ಗ್ರಂಥಾಲಯವನ್ನು ಸ್ಥಾಪಿಸಲು ಮಕ್ಕಳನ್ನು ಪ್ರೇರೇಪಿಸಬೇಕು. ಅದರಿಂದ ಈ ಸ್ವಭಾವವು ಸುಪ್ತವಾಗುವುದಿಲ್ಲ ಮತ್ತು ಅದಕ್ಕೆ ಪ್ರಕಟಗೊಳ್ಳಲು ಸರಿಯಾದ ಮಾರ್ಗವೂ ದೊರೆಯುವುದು.

ಸೃಜನಶೀಲತೆ

ಜಗತ್ತಿನಲ್ಲಿ ಎಷ್ಟೆಲ್ಲ ನಿರ್ಮಾಣ ಕಲೆಗಳು ಕಾಣುತ್ತವೋ ಅವೆಲ್ಲವೂ ಈ ಸ್ವಭಾವದ ಪರಿಣಾಮಗಳಾಗಿವೆ. ಗುಡಿಸಲು ಮತ್ತು ಕಟ್ಟಿಗೆ-ಕಲ್ಲಿನ ಮನೆಯಿಂದ ಹಿಡಿದು ಭವ್ಯ ಬಂಗಲೆಗಳು, ಬೃಹತ್ ಯಂತ್ರಗಳು, ರೈಲು, ಹಡಗು ಇತ್ಯಾದಿಗಳ ಕಾರ್ಖಾನೆಗಳ ವರೆಗೆ ಇದೇ ಗುಣದ ಪ್ರಭಾವವಿದೆ. ಆದರೆ ಈ ಗುಣವು ತಪ್ಪು ದಾರಿಗಿಳಿದರೆ ಅಪಾರ ನಾಶ ನಷ್ಟವನ್ನು ಉಂಟು ಮಾಡುತ್ತದೆ.

ಆದ್-ಸಮೂದರ ನಿರ್ಮಾಣಗಳು, ಮಂಗೋಲರು ಮತ್ತು ತಾರ್ತಾರಿಗಳ ಸುಲಿಗೆ ಎಲ್ಲವೂ ಈ ಸ್ವಭಾವವು ತಪ್ಪು ದಾರಿಗೆ ಇಳಿದಿರುವುದರ ಪರಿಣಾಮವಾಗಿದೆ. ಈ ಗುಣವು ಬಾಲ್ಯದಲ್ಲಿಯೇ ಪ್ರಕಟಗೊಳ್ಳುತ್ತದೆ. ಮಕ್ಕಳ ಮುಂದೆ ಯಾವುದೇ ವಸ್ತುವನ್ನು ಇರಿಸಿದರೂ ಅದನ್ನು ಮುಟ್ಟಲು ನೋಡುತ್ತಾರೆ. ಅದರ ಪರಿಣಾಮವನ್ನು ಲೆಕ್ಕಿಸುವುದಿಲ್ಲ, ಯಾವಾಗ ನೋಡಿದರೂ ಏನನ್ನಾದರೂ ಮಾಡುತ್ತ, ಕೆಡುವುತ್ತ ಇರುತ್ತಾರೆ. ಇದು ಅವರ ಮಟ್ಟಿಗೆ ಅಗತ್ಯವೂ ಆಗಿದೆ. ಈ ರೀತಿಯಾಗಿ ಅವರು ಸುಲಭದಲ್ಲಿ ಬಹಳಷ್ಟನ್ನು ಕಲಿಯುತ್ತಾರೆ. ಏಕೆಂದರೆ ನಿರ್ಮಾಣ ಮತ್ತು ಸಂಹಾರವು ಈ ಗುಣದ ಎರಡು ಮಗ್ಗುಲುಗಳಾಗಿವೆ. ಪ್ರತಿ ನಿರ್ಮಾಣದೊಂದಿಗೆ ಏನಾದರೂ ಸಂಹಾರ ಇದ್ದೇ ಇರುತ್ತದೆ. ಮಕ್ಕಳು ಇವೆರಡರ ನಡುವಿನ ವ್ಯತ್ಯಾಸವನ್ನು ಅರಿತಿರುವುದಿಲ್ಲ, ಒಂದು ವಸ್ತುವಿನ ರೂಪವನ್ನು ಬದಲಾಯಿಸುವುದನ್ನೇ ನಿರ್ಮಾಣ ಎಂದು ಭಾವಿಸುತ್ತಾರೆ. ಹಾಗಾಗಿ ನಿರ್ಮಾಣದ ಮುಂದೆ ಸಂಹಾರವು ಹೆಚ್ಚು ಸುಲಭವಾಗಿ ಕಾಣುತ್ತದೆ. ಆದ್ದರಿಂದಲೇ ಮಕ್ಕಳ ಈ ಗುಣವು ಸಂಹಾರದಿಂದ ಪ್ರಕಟವಾಗುತ್ತದೆ. ಇತರರ ಆಟಿಕೆಗಳನ್ನು ಒಡೆಯುವುದು, ಮನೆಯ ಸಾಮಾನುಗಳನ್ನು ನಾಶ ಮಾಡುವುದು ಇವೆಲ್ಲ ಬಾಲ್ಯದ ಸಾಮಾನ್ಯ ಹವ್ಯಾಸಗಳಾಗಿರುತ್ತವೆ. ಒಂದು ವೇಳೆ ಮಗುವಿಗೆ ತನ್ನ ಸಾಮರ್ಥ್ಯದ ಅನುಸಾರ ಏನನ್ನಾದರೂ ಮಾಡುವ ಅವಕಾಶ ದೊರೆತರೆ (ಅದು ಮಣ್ಣಿನ ಆಟಿಕೆಯಾದರೂ ಸರಿ) ಮಗು ಪರಿಶ್ರಮದ ಮಹತ್ವವನ್ನು ಕಲಿಯುತ್ತದೆ. ಹಾಗೆಯೇ ವಸ್ತುಗಳನ್ನು ಹಾಳುಗೆಡಹುವ ಬದಲು ಅವುಗಳನ್ನು ಸಂರಕ್ಷಿಸಲು ಕಲಿಯುತ್ತದೆ.

ಆರಂಭದಲ್ಲಿಯೇ ಮಕ್ಕಳ ಈ ಗುಣವನ್ನು ಸರಿಯಾದ ದಿಕ್ಕಿನಲ್ಲಿ ನಡೆಸಲು ಪ್ರಯತ್ನಿಸಬೇಕು. ಅನ್ಯಥಾ ನಿರ್ಮಾಣದ ಬದಲು ಸಂಹಾರದಲ್ಲಿ ಹೆಚ್ಚು ಆಸಕ್ತಿ ಬೆಳೆಯಬಹುದು.

ಈ ನಿಟ್ಟಿನಲ್ಲಿ ಈ ಕೆಳಗಿನ ವಿಷಯಗಳನ್ನು ದೃಷ್ಟಿಯಲ್ಲಿರಿಸಬೇಕು:

1. ಶಾಲೆಗಳಲ್ಲಿ ಆರ್ಟ್ ಕ್ರಾಫ್ಟ್, ಮಣ್ಣಿನ ಕೆಲಸ, ತೋಟಗಾರಿಕೆ ಇತ್ಯಾದಿಗಳ ವ್ಯವಸ್ಥೆ ಮಾಡಬೇಕು. ಇದರಿಂದ ಮಕ್ಕಳ ಈ ಸ್ವಭಾವಕ್ಕೆ ಸಾಮಾಧಾನ ಒದಗುತ್ತದೆ. ಅವರು ಪರಿಶ್ರಮಕ್ಕೆ ಒಗ್ಗುತ್ತಾರೆ. ಅವರ ನಿರ್ಮಾಣ ಕಲೆಯೂ ಬೆಳೆದು ಬರುವುದು.

2. ಮಕ್ಕಳು ತಮ್ಮ ಕೈಯಿಂದಲೇ ಏನನ್ನಾದರೂ ಮಾಡಿ ಸಂತೋಷ ಪಡುತ್ತಾರೆ. ಅದು ಹಿರಿಯರ ದೃಷ್ಟಿಯಲ್ಲಿ ತುಚ್ಛ ಮತ್ತು ಅಪೂರ್ಣವಾಗಿ ಕಂಡರೂ ಸರಿ. ಸ್ವಯಂ ತಯಾರಿಸಿರುವ ವಸ್ತು ಬಹಳ ಪ್ರಿಯವಾಗಿರುತ್ತದೆ. ಅವರು ಅದನ್ನು ಬಹಳ ಸುರಕ್ಷಿತವಾಗಿ ಇರಿಸುತ್ತಾರೆ. ತಾನು ಮಾಡಿದ ಆ ವಸ್ತುವನ್ನು ನೋಡಿದವರೆಲ್ಲರೂ ಪ್ರಶಂಸಿಸಬೇಕೆಂದೂ ಬಯಸುತ್ತಾರೆ. ಆದ್ದರಿಂದ ಮಕ್ಕಳಿಗೆ ಅಂತಹ ಅವಕಾಶವೂ ದೊರೆಯಬೇಕು. ಅವರು ಮಾಡಿದ ವಸ್ತುಗಳನ್ನು ಹೀಗಳೆಯುವ ಬದಲು ಪ್ರಶಂಸಿಸಲೂ ಬೇಕು. ವಿಮರ್ಶಿಸುವುದಿದ್ದರೂ ಪ್ರೋತ್ಸಾಹನೀಯ ಮತ್ತು ಸೃಜನಾತ್ಮಕವಾಗಿರಬೇಕು. ಏಕೆಂದರೆ ನಿರುತ್ಸಾಹಗೊಳ್ಳದೆ ಇನ್ನೂ ಉತ್ತಮವಾಗಿ ಮಗು ಅದನ್ನು ಮಾಡಿ ತೋರಿಸುವಂತಾಗ ಬೇಕು ತಾನೇ?

3. ಹೆಚ್ಚಿನ ಪೋಷಕರು ಮಕ್ಕಳನ್ನು ಧೂಳು, ಮಣ್ಣು, ಕೆಸರು, ನೀರಿನಲ್ಲಿ ಆಟವಾಡುವುದರಿಂದ ಮತ್ತು ಮಣ್ಣಿನ ಮನೆ ಇತ್ಯಾದಿ ಮಾಡುವುದರಿಂದ ತಡೆಯುತ್ತಾರೆ. ದೇಹ ಮತ್ತು ವಸ್ತ್ರಕ್ಕೆ ಕೊಳೆಯಾಗುತ್ತದೆಂಬ ಕಾರಣಕ್ಕೆ ಹಾಗೆ ಮಾಡುತ್ತಾರೆ. ಆದರೆ ಹೀಗೆ ಮಾಡುವುದರ ಮೂಲಕ ಅವರು ಮಕ್ಕಳನ್ನು ಆಟದಿಂದ ಪಡೆಯುವ ನೈಜ ಆನಂದದಿಂದ ವಂಚಿಸುತ್ತಾರೆ. ಅಂತೆಯೇ ಮಕ್ಕಳು ಪರಿಶ್ರಮ ಪಟ್ಟು ಗಳಿಸುವಂತಹ ಪ್ರಯೋಜನ ಗಳಿಂದಲೂ ವಂಚಿಸುತ್ತಾರೆ. ವಾಸ್ತವದಲ್ಲಿ ಮಕ್ಕಳನ್ನು ಆಟವಾಡಲು ಬಿಟ್ಟುಬಿಡಬೇಕು ಮತ್ತು ಆಟವಾಡಿದ ಬಳಿಕ ಅವರ ದೇಹ ಮತ್ತು ವಸ್ತ್ರದ ಸ್ವಚ್ಛತೆಯ ಕಡೆಗೆ ಗಮನ ಕೊಡಬೇಕು. ಇದು ಆಗಬೇಕಾದ ಕಾರ್ಯ. ಕೇವಲ ಸ್ವಚ್ಛತೆಯ ಕಾರಣವೊಡ್ಡಿ ಮಕ್ಕಳನ್ನು ಆಟದಿಂದ, ಅದರ ಸಂತೋಷದಿಂದ ವಂಚಿತಗೊಳಿಸುವುದು ತರವಲ್ಲ. ಹಾಸಿಗೆ ಒದ್ದೆ ಮಾಡುವುದರಿಂದ ಮತ್ತು ತನ್ನ ಮಲಮೂತ್ರದಲ್ಲಿ ಆಟವಾಡುವುದರಿಂದ ಈ ಮೂಲಕ ತಡೆಯಬಹುದಾಗಿದೆ. ಇಂತಹ ದೌರ್ಬಲ್ಯಗಳು ಹೆಚ್ಚಿನ ವೇಳೆ ಆಟವಾಡಲು ಅವಕಾಶ ಇಲ್ಲದ ಕಾರಣ ಉಂಟಾಗುತ್ತದೆ.

4. ಇಂದು ತರತರದ ಶೈಕ್ಷಣಿಕ ಆಟಿಕೆಗಳು ದೊರೆಯುತ್ತವೆ. ಅದರಲ್ಲಿ ಕಟ್ಟಿಗೆ ಅಥವಾ ಪ್ಲಾಸ್ಟಿಕ್‌ನ ಸಣ್ಣ ಸಣ್ಣ ತುಂಡುಗಳೂ ಇರುತ್ತವೆ. ಅವುಗಳನ್ನು ಕ್ರಮವಾಗಿ ಜೋಡಿಸುವುದರಿಂದ ವಿವಿಧ ರೀತಿಯ ಆಕಾರಗಳೂ ಉಂಟಾಗುತ್ತವೆ. ಅಂತಹವುಗಳನ್ನು ಒದಗಿಸಿಕೊಡಬೇಕಲ್ಲದೆ, ಅವುಗಳ ಬಳಕೆಯ ಅವಕಾಶವನ್ನೂ ನೀಡಬೇಕು.

5. ಹದಿಹರೆಯದಲ್ಲಿ ಬಾಲಕ/ಬಾಲಕಿಯರೀರ್ವರಿಗೂ ಸೂಕ್ತ ಮೇರೆಯೊಳಗೆ ಪ್ರಯೋಜನಕಾರಿ, ಆಸಕ್ತಿದಾಯಕ ಮತ್ತು ವರ್ಣರಂಜಿತವಾದ ಸೃಜನಾತ್ಮಕ ಹವ್ಯಾಸಗಳ ವ್ಯವಸ್ಥೆ ಮಾಡಿಕೊಡಬೇಕು. ಇದರಿಂದ ಅವರು ಬಿಡುವಿನ ವೇಳೆಗಳಲ್ಲಿ ಚಟುವಟಿಕೆಯಿಂದಿರುವರು. ಹಾಗೆಯೇ ಅವರ ಭಾವನೆಗಳಿಗೆ ಸಮಾಧಾನವೂ ಒದಗುವುದು ಮತ್ತು ಅವರಲ್ಲಿ ಪ್ರತಿಭೆಯೂ ಬೆಳೆದು ಬರುವುದು.

ಮೇಲರಿಮೆ / ಆತ್ಮಪ್ರಶಂಸೆ

ಅಂದರೆ ಜಂಭ-ತೋರಿಕೆ ಮತ್ತು ಇತರರ ಮುಂದೆ ದೊಡ್ಡವನಾಗಿ ಕಾಣಲು ಹಾಗೂ ತನ್ನನ್ನು ಉತ್ತಮನೆಂದು ಬಿಂಬಿಸುವ ಇಚ್ಛೆ. ಇದೂ ಒಂದು ಪ್ರಮುಖ ಸ್ವಭಾವವಾಗಿದೆ. ಧರ್ಮ, ಸಮುದಾಯ ಮತ್ತು ದೇಶದ ಉನ್ನತಿಗಾಗಿ ಪರಿಶ್ರಮ ಪಟ್ಟು ಉತ್ತಮ ಸಾಧನೆಗೈಯುವಲ್ಲಿ ಈ ಸ್ವಭಾವವು ಪ್ರಮುಖ ಪಾತ್ರ ವಹಿಸುತ್ತದೆ. ಅದೇ ರೀತಿ ಹೇಯವಾದ ಕೀಟಲೆ, ದಾದಾಗಿರಿ, ಪೋಕಿತನ ಇತ್ಯಾದಿಗಳು ಈ ಸ್ವಭಾವ ತಪ್ಪುದಾರಿಗಿಳಿಯುವುದರ ಪರಿಣಾಮವಾಗಿದೆ. ಈ ಸ್ವಭಾವವು ಬಾಲ್ಯದಲ್ಲಿಯೇ ಪ್ರಕಟಗೊಳ್ಳುತ್ತದೆ. ತನ್ನ ಬೌದ್ಧಿಕ ಮತ್ತು ದೈಹಿಕ ಗುಣ-ಸಾಮರ್ಥ್ಯಗಳ ಅರಿವು ಉಂಟಾದ ಮೇಲೆಯೇ ಮಗು ಇತರರ ಮುಂದೆ ಪ್ರಸಿದ್ಧನಾಗಲು ಪ್ರಯತ್ನಿಸುತ್ತದೆ. ಇತರರ ಪ್ರಶಂಸೆಯನ್ನು ಗಳಿಸಲು ತನ್ನಿಂದ ಸಾಧ್ಯವಾದಷ್ಟು ಪರಿಶ್ರಮ ಪಡುತ್ತದೆ. ಒಂದು ವೇಳೆ ಮಿತ್ರರು ಮತ್ತು ಹಿರಿಯರ ಮುಂದೆ ಪ್ರಶಂಸಾರ್ಹನೆನಿಸಿಕೊಳ್ಳದೆ ಹೋದರೆ ಒಂದೋ ಹತಾಶೆ ಮತ್ತು ಕೀಳರಿಮೆಗೆ ತುತ್ತಾಗುತ್ತಾನೆ. ಇಲ್ಲವೇ ಕೀಟಲೆ ಮತ್ತು ತಪ್ಪುಗಳನ್ನೆಸಗುವ ಮೂಲಕ ಗುರುತಿಸಲ್ಪಡುತ್ತಾನೆ. ಉದಾ: ಇತರರನ್ನು ಸತಾಯಿಸುವುದು, ಗುಲ್ಲು ಗದ್ದಲವೆಬ್ಬಿಸುವುದು, ಅನಾರೋಗ್ಯದ ನೆಪ ಹೂಡುವುದು ಇತ್ಯಾದಿ.

ಹಾಗಾಗಿ ಈ ಸ್ವಭಾವದ ಸೂಕ್ತ ಪೋಷಣೆಗಾಗಿ ಈ ಕೆಳಗಿನ ವಿಷಯಗಳನ್ನು ಪರಿಗಣಿಸಬೇಕಾಗಿದೆ:

1. ಮಕ್ಕಳ ಉತ್ತಮ ಕೆಲಸಗಳಿಗೆ ಅವರನ್ನು ಹೊಗಳಬೇಕು ಮತ್ತು ಮನ ಬಿಚ್ಚಿ ಪ್ರಶಂಸಿಸುತ್ತಿರಬೇಕು.

2. ಮನೆ ಮತ್ತು ಶಾಲೆಯಲ್ಲಿ ಮಕ್ಕಳ ಪ್ರಾಯ, ಪ್ರತಿಭೆ ಮತ್ತು ಒಲವುಗಳಿಗೆ ಅನುಸಾರ, ಅವರಿಗೆ ಪ್ರಸಿದ್ಧಿಯನ್ನು ತಂದುಕೊಡಬಲ್ಲಂತಹ ಹೊಣೆಗಾರಿಕೆಗಳನ್ನು ವಹಿಸಿಕೊಡಬೇಕು. ಉದಾ: ತರಗತಿಯ ಮಾನಿಟರ್, ಆಟದ ತಂಡದ ನಾಯಕ, ಸಂಘಟನೆಯ ಅಧ್ಯಕ್ಷ /ಕಾರ್ಯದರ್ಶಿ, ಕಾರ್ಯಕ್ರಮಗಳ ಸಂಚಾಲಕ ಇತ್ಯಾದಿ ಹೊಣೆಗಾರಿಕೆಗಳನ್ನು ವಹಿಸಲು ಅವಕಾಶ ಕೊಡಬೇಕು.

3. ಶಾಲೆಯಲ್ಲಿ ವಿವಿಧ ಕೆಲಸ ಮತ್ತು ಹವ್ಯಾಸಗಳ ವ್ಯವಸ್ಥೆ ಮಾಡಬೇಕು. ಅದರಲ್ಲಿ ಅತ್ಯುತ್ತಮ ನಿರ್ವಹಣೆ ತೋರುವ ಮಕ್ಕಳಿಗೆ ಬಹುಮಾನ, ಸ್ಥಾನಮಾನ ಮತ್ತು ಕಾಣಿಕೆಗಳನ್ನು ನೀಡುವ ಅಥವಾ ಅವರ ಹೆಸರನ್ನು ಆಯಕಟ್ಟಿನ ಜಾಗದಲ್ಲಿ ಪ್ರಕಟಿಸುವ ವ್ಯವಸ್ಥೆ ಮಾಡಬೇಕು.

4. ಪ್ರತಿಯೊಂದು ಮಗುವೂ ತನ್ನ ಗುಂಪಿನಲ್ಲಿ ಮತ್ತು ತನ್ನ ತರಗತಿಯಲ್ಲಿ ಪ್ರಸಿದ್ಧನಾಗಲು ಬಯಸುತ್ತದೆ. ಆದ್ದರಿಂದ ಮಿತ್ರರ ಸಾಂಗತ್ಯದಿಂದ ಬಹಳ ಪ್ರಭಾವಿತನಾಗುತ್ತಾನೆ. ಹಾಗೆಯೇ ಅವರ ಅಭಿಪ್ರಾಯ, ಭಾವನೆ ಮತ್ತು ಸಲಹೆಗಳನ್ನು

ಪರಿಗಣಿಸುತ್ತ ಪ್ರಸಿದ್ಧನಾಗಲು ಪ್ರಯತ್ನಿಸುತ್ತಾನೆ. ಆದ್ದರಿಂದ ಮಕ್ಕಳಿಗೆ ಉತ್ತಮ ಸಾಂಗತ್ಯ ಸಿಗುವಂತೆ ಪ್ರಯತ್ನಿಸಬೇಕು. ತನ್ನ ಗುಣ ವೈಶಿಷ್ಟ್ಯಗಳಿಂದಾಗಿ ಹಿರಿಯರ ಮುಂದೆ ಪ್ರಸಿದ್ಧನಾಗುವ ಮಗು, ಹೆಚ್ಚಿನ ವೇಳೆ ತನ್ನ ಮಿತ್ರರ ಅಸೂಯೆ ಮತ್ತು ದ್ವೇಷಕ್ಕೆ ಈಡಾಗುತ್ತಾನೆ; ತರತರದ ಪೀಡನೆಗೆ ಒಳಗಾಗುತ್ತಾನೆ. ಪ್ರಸಿದ್ಧನಾಗಲು ತಪ್ಪುದಾರಿಯನ್ನು ತುಳಿಯುವಂತಾಗಬಾರದು ಮತ್ತು ಒಳ್ಳೆಯ ಮಕ್ಕಳನ್ನು ಸತಾಯಿಸಲೂ ಮುಂದಾಗಬಾರದು ಎಂದಿದ್ದರೆ ಪ್ರತಿಯೊಂದು ಮಗುವಿಗೂ ತನ್ನ ಸಾಮರ್ಥ್ಯ ಮತ್ತು ಒಲವಿನಂತೆ ಪ್ರಸಿದ್ಧನಾಗಲು ಅವಕಾಶ ದೊರೆಯಬೇಕು.

5. ಹದಿಹರೆಯಕ್ಕೆ ಕಾಲಿಡುತ್ತಿರುವ ಮಕ್ಕಳಿಗೆ ಹಂತಹಂತವಾಗಿ ಪ್ರವಾದಿಗಳ, ಸುಧಾರಕರ ಚರಿತ್ರೆ ಮತ್ತು ಸಾಧನೆಗಳನ್ನು ತಿಳಿಸಿಕೊಡಬೇಕು. ಈ ಮೂಲಕ ಅವರು ಅಲ್ಲಾಹ್ ಮತ್ತು ಪ್ರವಾದಿಯವರ(ಸ) ದೃಷ್ಟಿಯಲ್ಲಿ ಉತ್ತಮರೆನಿಸಿಕೊಳ್ಳಲು ಹಾಗೂ ಉತ್ತಮ ಸಾಧನೆಗೈಯಲು ಪ್ರೇರಿತರಾಗುವರು. ಇದರಲ್ಲಿ ಇಹಪರಗಳ ಒಳಿತಿದೆ. ತೋರಿಕೆ, ಆಡಂಬರ ಅಥವಾ ಕಾಪಟ್ಯವು ಅವುಗಳ ಪ್ರತಿಫಲವನ್ನು ಅಳಿಸಿ ಹಾಕುತ್ತದೆ. ಮಾತ್ರವಲ್ಲ, ಅವರು ಇತರರ ಅಸೂಯೆ ಮತ್ತು ದ್ವೇಷಕ್ಕೆ ಈಡಾಗುವರು, ಅವರ ಒಳ್ಳೆಯ ಕಾರ್ಯಗಳನ್ನು ಪ್ರಶಂಸಿಸದಿದ್ದರೆ ನಿರಾಶರಾಗುತ್ತಾರೆ.

ಕೀಳರಿಮೆ

ಇದು ಮೇಲರಿಮೆಯ ವಿರುದ್ಧ ಪದವಾಗಿದೆ. ಅಂದರೆ ಹಿರಿಯರ ಮುಂದೆ ತನ್ನನ್ನು ತುಚ್ಛನೆಂದು ಭಾವಿಸುವುದು. ಈ ಸ್ವಭಾವದೊಂದಿಗೆ ಸಮರ್ಪಣಾ ಮತ್ತು ಸೇವಾ ಮನೋಭಾವ ಹಾಗೂ ಅನುಸರಣಶೀಲತೆಯ ಭಾವನೆಯಿರುತ್ತದೆ. ಇದೂ ಕೂಡ ಪ್ರಮುಖ ಮತ್ತು ಮೂಲಭೂತವಾದ ಸ್ವಭಾವವಾಗಿದೆ. ಇದರ ಕಾರಣವಾಗಿ ವ್ಯಕ್ತಿಯು ತನ್ನ ಅಹಂಭಾವ, ಆತ್ಮಸ್ತುತಿ, ಸ್ವಚ್ಛಂದತೆ ಮತ್ತು ಒರಟು ಸ್ವಭಾವವನ್ನು ದೂರ ಮಾಡಬಲ್ಲನು ಹಾಗೂ ಹಿರಿಯರ ಮುಂದೆ ವಿನಮ್ರವಾಗಿ ವ್ಯವಹರಿಸುವನು. ಸಾಮೂಹಿಕ ಮತ್ತು ಕೌಟುಂಬಿಕ ಜೀವನದಲ್ಲಿ ಹೊಣೆಗಾರರನ್ನು ಅನುಸರಿಸುವನು, ಹಿರಿಯರನ್ನು ಗೌರವಿಸುವನು; ದೇವಸಂಪ್ರೀತಿ, ಪ್ರವಾದಿಯ ಅನುಸರಣೆ ಮತ್ತು ನೀತಿನಿಯಮ, ಸತ್ಯನಿಷ್ಠೆಗೆ ತನ್ನನ್ನು ಅಣಿಗೊಳಿಸುವನು. ಆದರೆ ಇದೇ ಸ್ವಭಾವವು ತಪ್ಪು ದಿಕ್ಕಿನಲ್ಲಿ ಸಾಗಿದರೆ, ಭಟ್ಟಂಗಿತನ, ಮುಖಸ್ತುತಿ ಮತ್ತು ಅಕ್ರಮಿಯ ಮುಂದೆ ಮಂಡಿಯೂರಲು ಪ್ರೇರೇಪಿಸುವ ಮೂಲಕ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಕೆಡಿಸಿಬಿಡುತ್ತದೆ. ಎಲ್ಲಿಯ ವರೆಗೆಂದರೆ ಮಾನವನು ಪ್ರಾಣಿಗಿಂತಲೂ ಕೀಳಾಗಿ ಬಿಡುವನು. ಮನೆ ಮತ್ತು ಶಾಲೆಯ ಶಿಸ್ತು ಕಾಪಾಡಲಿಕ್ಕಾಗಿ ಹೆತ್ತವರು ಮತ್ತು ಅಧ್ಯಾಪಕರು, ಮಕ್ಕಳ ಈ ಸ್ವಭಾವವನ್ನು ಉದ್ದೀಪಿಸಿ ಅವರಿಗೆ ವಿವಿಧ ಸಂದರ್ಭಗಳ ಶಿಷ್ಟಾಚಾರ ಪಾಲಿಸಲು ಹಾಗೂ ಹಿರಿಯರನ್ನು ಗೌರವಿಸಲು ಕಲಿಸಬೇಕು.

ಅದೇ ವೇಳೆ, ಮಕ್ಕಳ ವ್ಯಕ್ತಿತ್ವ ಮತ್ತು ವೈಯಕ್ತಿಕತೆಗೆ ಯಾವುದೇ ಪೆಟ್ಟು ಬೀಳದಂತೆಯೂ ನೋಡಿಕೊಳ್ಳಬೇಕು. ಹೀಗೆ ಕ್ರಮೇಣ ಅವರು ಅಲ್ಲಾಹ್ ಮತ್ತು ಪ್ರವಾದಿಯ(ಸ) ಆದೇಶಕ್ಕೆ ವಿರುದ್ಧವಾಗಿ ಇತರ ಯಾರನ್ನೂ ಅನುಸರಿಸದಂತಹ ಮತ್ತು ಎಲ್ಲ ಅನುಸರಣೆಗಳನ್ನು ದೇವ ಮತ್ತು ದೇವ ಪ್ರವಾದಿಯ ಆದೇಶಗಳಿಗೆ ಬದ್ಧಗೊಳಿಸುವಂತಹ ಸ್ಥಿತಿಗೆ ಬಂದು ತಲಪುವಂತಾಗಬೇಕು. ಮಕ್ಕಳ ಈ ಸ್ವಭಾವದಿಂದ ಪ್ರಯೋಜನ ಪಡೆಯಬೇಕಾದರೆ,

1. ಹಿರಿಯರು ಅಗತ್ಯಕ್ಕಿಂತ ಹೆಚ್ಚು ಸಲುಗೆಯಿಂದ ಇರಬಾರದು.
2. ಯಾವ ಸ್ಥಿತಿಯಲ್ಲೂ ನೀತಿ ನಿಯಮಗಳ ಪಾಲನೆಯಾಗಬೇಕು ಮತ್ತು ಕಿರಿಯರ ಮುಂದೆ ಸ್ವಾಭಿಮಾನವನ್ನು ಬಿಟ್ಟು ಕೊಡಬಾರದು.
3. ನೀವು ಮಾಡಬಯಸುವುದೆಲ್ಲವೂ ಅಲ್ಲಾಹ್ ಮತ್ತು ರಸೂಲರ(ಸ) ಆದೇಶಗಳಿಗನುಸಾರವಾಗಿಯೇ ಇರಬೇಕು. ಅದೇ ರೀತಿ ಅದರಲ್ಲಿಯೇ ನಮ್ಮೆಲ್ಲರ ಒಳಿತಿದೆ ಎಂಬುದನ್ನು ಮಕ್ಕಳಿಗೆ ಆಗಾಗ ನೆನಪಿಸುತ್ತಲಿರಬೇಕು.
4. ಹಿಂಸೆ ಅಥವಾ ನಿಮ್ಮ ಜೋರು ವ್ಯಕ್ತಿತ್ವದಿಂದ ಅನುಸರಣೆ ಮಾಡಿಸಲು ಹೆಚ್ಚು ಪ್ರಯತ್ನಿಸುವುದರಿಂದ ಮಕ್ಕಳ ವ್ಯಕ್ತಿತ್ವದ ಮೇಲೆ ಪ್ರತಿಕೂಲ ಪರಿಣಾಮವುಂಟಾಗುತ್ತದೆ. ಅದನ್ನು ಸಾಧ್ಯಂತ ವರ್ಜಿಸಬೇಕು.

ಕಲಹಪ್ರಿಯತೆ

ಇದೂ ಕೂಡಾ ಅತ್ಯಂತ ಪ್ರಮುಖ ಸ್ವಭಾವವಾಗಿದೆ. ಸರಿಯಾದ ದಿಕ್ಕಿನಲ್ಲಿ ಸಾಗಿದರೆ ಮಹಾನ್ ಹೋರಾಟಗಾರ, ಶೂರ, ಹುತಾತ್ಮ ಇತ್ಯಾದಿ ಸ್ಥಾನಗಳಿಗೇರಿಸುತ್ತದೆ. ತಪ್ಪು ದಾರಿಗಿಳಿದರೆ ಅಕ್ರಮಿ, ದರೋಡೆಕೋರರನ್ನಾಗಿ ಮಾಡಿ ಬಿಡುತ್ತದೆ. ಪೌರುಷ, ಧೀಮಂತಿಕೆ, ದೃಢನಿಶ್ಚಯ, ಸತ್ಯದ ರಕ್ಷಣೆ, ಮಿಥ್ಯದ ನಿರ್ಮೂಲನೆ, ಒಳಿತಿನ ಸ್ಥಾಪನೆ, ಕೆಡುಕಿನ ವಿರೋಧ, ಮರ್ದಿತನಿಗೆ ಸಹಾಯ, ಅಕ್ರಮಿಯ ದಮನ, ಜೀವನದ ಸಂಘರ್ಷದಲ್ಲಿ ಪ್ರಯತ್ನಶೀಲತೆ ಮತ್ತು ಆತ್ಮಗೌರವದ ರಕ್ಷಣೆಗಳಂತಹ ಉನ್ನತ ಗುಣ ವಿಶೇಷಗಳು ಈ ಸ್ವಭಾವದ ಕಾರಣವಾಗಿಯೇ ಬೆಳೆದು ಬರುತ್ತದೆ. ಅದೇ ವೇಳೆ, ಸಂಕುಚಿತ ಸ್ವಭಾವ, ದೌರ್ಜನ್ಯ, ಸಿಡಿಮಿಡಿ, ಅಕ್ರಮ, ಅನ್ಯಾಯ, ಹಿಂಸೆ, ಕ್ಷೋಭೆ, ಕೊಲೆಗಡುಕತನ, ದಾಂಧಲೆ, ಭ್ರಷ್ಟಾಚಾರ, ವೈರ–ದ್ವೇಷ, ತಿರಸ್ಕಾರ, ಅಸೂಯೆ ಇತ್ಯಾದಿ ದುಷ್ಕೃತ್ಯಗಳೂ ಇದರ ಕಾರಣವಾಗಿಯೇ ಉಂಟಾಗುತ್ತವೆ. ಈ ಸ್ವಭಾವವು ವಸ್ತುತಃ ಅಪ್ರಿಯ ಕೃತ್ಯಗಳ ಮೂಲಕವೇ ಬೆಳಕಿಗೆ ಬರುತ್ತವೆ. ಆದ ಕಾರಣ ಹಿರಿಯರು ಮಕ್ಕಳ ಈ ಸ್ವಭಾವವನ್ನು ಸರಿಯಾದ ದಿಕ್ಕಿನಲ್ಲಿ ನಡೆಯಲು ಪ್ರಯತ್ನಿಸುವುದರ ಬದಲು, ಅದನ್ನು ತುಳಿಯಲು ತೊಡಗುತ್ತಾರೆ. ಅದರಿಂದಾಗಿ ಮಗುವಿನಲ್ಲಿ ಪುಕ್ಕಲುತನ, ಅಧೈರ್ಯ, ನಿರ್ಲಜ್ಜೆ, ಅಸಾಮರ್ಥ್ಯ, ಹತಾಶೆ ಮತ್ತು ದೌರ್ಬಲ್ಯಗಳು ಬೆಳೆದು ಬರುತ್ತದೆ. ಆದ್ದರಿಂದ ಅತ್ಯಂತ ಜಾಗರೂಕತೆಯಿಂದ ಆ ಸ್ವಭಾವವನ್ನು ಪೋಷಿಸಬೇಕು.

ಈ ಸ್ವಭಾವದ ಜತೆಯಲ್ಲೇ ಕೋಪ ಮತ್ತು ಪ್ರಚೋದನಾತ್ಮಕ ಭಾವನೆಯೂ ಕಾರ್ಯನಿರತವಾಗಿರುತ್ತದೆ. ಒಬ್ಬ ವ್ಯಕ್ತಿಯ ಸ್ವಾಭಾವಿಕ ಆಗ್ರಹದ ಈಡೇರಿಕೆಯಲ್ಲಿ ಅಥವಾ ಪ್ರಮುಖ ಸ್ವಭಾವದ ಬೇಡಿಕೆಗಳ ಪೂರೈಕೆಯಲ್ಲಿ ಅಡೆ-ತಡೆಯುಂಟಾದರೆ ಅಥವಾ ಅವನ ಜೀವ-ಸೊತ್ತು-ಮಾನದ ಮೇಲೆ ಆಕ್ರಮಣವಾದರೆ ಆತ ಉದ್ರಿಕ್ತನಾಗುತ್ತಾನೆ; ಆ ಅಡೆ-ತಡೆಯನ್ನು ದೂರ ಮಾಡಲು ಮತ್ತು ಆಕ್ರಮಣವನ್ನು ಎದುರಿಸಲು ಸಾಧ್ಯಂತ ಪ್ರಯತ್ನಿಸುತ್ತಾನೆ. ಅವನ ದೇಹದ ಒಂದೊಂದು ಅಂಗವೂ ಹಾನಿಯನ್ನು ದೂರಗೊಳಿಸುವತ್ತ ಗಮನವೀಯುತ್ತದೆ. ಇನ್ನು ಆ 'ವಿರೋಧಿ'ಯನ್ನು ಸಂಪೂರ್ಣ ಸೋಲಿಸುವ ವರೆಗೂ ಕೋಪ ತಣಿಯುವುದಿಲ್ಲ.

ಈ ಸ್ವಭಾವದ ತರಬೇತಿಯ ನಿಟ್ಟಿನಲ್ಲಿ ಕೆಳಗೆ ನೀಡಿರುವ ವಿಷಯಗಳನ್ನು ಗಮನದಲ್ಲಿರಿಸಬೇಕು:

1. ಮನೆ ಮತ್ತು ಶಾಲೆಯ ವಾತಾವರಣವನ್ನು ಪರಸ್ಪರ ಪ್ರೀತಿ, ಅನುಕಂಪ, ಸದ್ಭಾವನೆ, ಸಹವಾಸ, ಸಹಕಾರ, ಐಕ್ಯತೆ/ಸಮಾನತೆಯ ಭಾವನೆ ಬೆಳೆಯುವಂತೆ ರೂಪಿಸಬೇಕು. ಅದೇ ವೇಳೆ ಕೋಪೋದ್ರಿಕ್ತತೆ, ಅಣಕ, ವ್ಯಂಗ್ಯ, ಕೆಟ್ಟ ಗುಮಾನಿ, ಮನಸ್ತಾಪ, ಗದರಿಕೆ, ಜಗಳ, ಅಡ್ಡ ಹೆಸರು ಹಾಕುವುದು, ಚೇಷ್ಟೆ ಮಾಡುವುದು, ಚುಡಾಯಿಸುವುದು ಮತ್ತು ಸತಾಯಿಸುವುದರ ದುಷ್ಪರಿಣಾಮಗಳನ್ನು ತಿಳಿಸುತ್ತಾ ಅವುಗಳನ್ನು ತಡೆಯುವ ಪ್ರಯತ್ನ ಮಾಡಬೇಕು.

2. ಮಕ್ಕಳ ಬಾಲಿಶ ತಪ್ಪುಗಳನ್ನು ಆದಷ್ಟು ಕ್ಷಮಿಸಬೇಕು ಮತ್ತು ಕಡೆಗಣಿಸಬೇಕು. ಹಾಗೆಯೇ ತಮ್ಮ ತಪ್ಪೊಪ್ಪಿಕೊಳ್ಳಲು, ಅದಕ್ಕಾಗಿ ಕ್ಷಮೆ ಯಾಚಿಸಲು ಮಕ್ಕಳನ್ನು ಪ್ರೇರೇಪಿಸುತ್ತಲೂ ಇರಬೇಕು. ಹೆಚ್ಚಿನ ವೇಳೆ ತಮ್ಮ ತಪ್ಪನ್ನು ಒಪ್ಪಿಕೊಳ್ಳಲು ಸಿದ್ಧರಾಗದಿರುವುದರಿಂದ ಮಾತಿಗೆ ಮಾತು ಬೆಳೆದು ಕೋಪ, ಮನಸ್ತಾಪಕ್ಕೆ ಕಾರಣವಾಗುತ್ತದೆ. ಹಾಗಾಗಿ ತಪ್ಪೊಪ್ಪಿಗೆ ಮತ್ತು ತಪ್ಪಿಗೆ ಕ್ಷಮೆ ಕೇಳುವುದನ್ನು ಬಾಲ್ಯದಲ್ಲಿಯೇ ಅಭ್ಯಾಸ ಮಾಡಿಸಿದರೆ ಅದಕ್ಕೆ ಆಸ್ಪದವೇ ಇರುವುದಿಲ್ಲ.

3. ಮಗು ಯಾರ ಮೇಲಾದರೂ ಕೋಪ-ಅಸಮಾಧಾನಗೊಂಡಿದ್ದರೆ ಆ ಸಮಯದಲ್ಲಿ ಬುದ್ಧಿಮಾತು ಅಥವಾ ಗದರಿಕೆಯು ಫಲ ನೀಡುವುದರ ಬದಲು ಸಾಮಾನ್ಯವಾಗಿ ತೀವ್ರ ಪ್ರತಿರೋಧಕ್ಕೆಡೆ ಮಾಡುತ್ತದೆ ಮತ್ತು ಅದರ ಪರಿಣಾಮವು ಅಪಾಯಕಾರಿಯಾಗುವ ಸಾಧ್ಯತೆ ಇದೆ. ಹಾಗಾಗಿ ಕೋಪ ತಣಿಯುವ ವರೆಗೆ ಮಗುವನ್ನು ಅದರ ಪಾಡಿಗೆ ಬಿಟ್ಟು ಬಿಡಬೇಕು. ಅದೇ ವೇಳೆ, ಮಗುವಿನ ಮುಂದೆ ಹಾನಿಯುಂಟು ಮಾಡುವ ವಸ್ತುವೇನಾದರೂ ಇದ್ದರೆ ಅದನ್ನು ಅಲ್ಲಿಂದ ತೆಗೆದು ಬಿಡಬೇಕು. ಹೀಗೆ ಮಾಡುವುದರಿಂದಲೂ ಮಗುವಿನ ಕೋಪ ಕಡಿಮೆಯಾಗಲು ಸಾಧ್ಯವಿದೆ. ಕೋಪ ತಣಿದ ಮೇಲೆ ಬುದ್ಧಿ ಮಾತು ಹೇಳಿದರೆ ಅದು ಪರಿಣಾಮಕಾರಿಯಾಗುತ್ತದೆ.

4. ಕುಸ್ತಿ ಮತ್ತಿತರ ಸ್ಪರ್ಧೆಗಳನ್ನೇರ್ಪಡಿಸಬೇಕು. ಇದರಿಂದ ಪ್ರಸ್ತುತ ಸ್ವಭಾವಕ್ಕೆ ಈ ಮೂಲಕ ಸಮಾಧಾನ ಒದಗಿಸುವ ಅವಕಾಶ ಲಭಿಸುತ್ತದೆ. ಇದರಿಂದ ಮಕ್ಕಳು ಹೊಡೆದಾಟ, ಗಲಾಟೆಗಳಿಂದ ದೂರವುಳಿಯುತ್ತಾರೆ ಹಾಗೂ ಈ ಸ್ವಭಾವ ಅಳಿದು ಹೋಗುವುದೂ ಇಲ್ಲ.

5. ಇಬ್ಬರು ಮಕ್ಕಳು ಹೊಡೆದಾಡುತ್ತಿದ್ದರೆ, ಚಾಣಾಕ್ಷತೆಯಿಂದ ತಪ್ಪಿತಸ್ಥನನ್ನು ಕಂಡು ಹಿಡಿಯಬೇಕು. ತಪ್ಪೆಸಗಿದವನನ್ನು ಕ್ಷಮೆ ಯಾಚಿಸಲು ಪ್ರೇರೇಪಿಸಬೇಕು.

6. ಜಗಳಗಂಟಿ, ತುಂಟ ಹುಡುಗರನ್ನು ದುರ್ಬಲ ಹುಡುಗರ ಜತೆಗಾರರನ್ನಾಗಿ ಮಾಡಬೇಕು. ಇದರಿಂದ ಅವರ ಸ್ವಭಾವದ ಹಕ್ಕನ್ನೂ ತೀರಿಸಿದಂತಾಗುತ್ತದೆ ಮತ್ತು ಅವರಲ್ಲಿ ದುರ್ಬಲರಿಗೆ ಸಹಾಯ ಮಾಡುವ ಗುಣವೂ ಬೆಳೆಯುತ್ತದೆ.

7. ಧಾಂದಲೆ, ಅಕ್ರಮ, ಹಿಂಸೆ-ಮರ್ದನ, ಹಕ್ಕುಚ್ಯುತಿ, ಮಾನಹಾನಿ ಮತ್ತು ಕೇಡುಕು ಇತ್ಯಾದಿಗಳ ಬಗ್ಗೆ ತಿರಸ್ಕಾರ ಭಾವವನ್ನು ಪ್ರಕಟಿಸಬೇಕು. ಅವುಗಳ ನಿವಾರಣೆಯಲ್ಲಿ ಸಕ್ರಿಯತೆಯನ್ನು ತೋರಬೇಕು. ಮಕ್ಕಳೂ ಆ ಸಂಗತಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರೆ, ಅವರನ್ನು ಗದರಿಸಬಾರದು; ಬದಲಿಗೆ ಅವುಗಳನ್ನು ದಿಟ್ಟವಾಗಿ ಎದುರಿಸುವ ಮತ್ತು ನಿವಾರಿಸುವ ಉಪಾಯಗಳನ್ನು ತಿಳಿ ಹೇಳಬೇಕು.

8. ತನ್ನ ಕೊರತೆ-ತಪ್ಪು ಮತ್ತು ದೌರ್ಬಲ್ಯಗಳ ವಿರುದ್ಧ ಹೋರಾಡಲು ಹಾಗೂ ಅವುಗಳ ಮೇಲೆ ನಿಯಂತ್ರಣ ಹೊಂದಲು ವಿವಿಧ ಪಠ್ಯ ವಿಷಯಗಳಿಗೆ ಸಂಬಂಧಿಸಿದ ಕ್ಲಿಷ್ಟಕರ ಸಮಸ್ಯೆಗಳನ್ನು ನೀಡಿ ಅವುಗಳನ್ನು ಪರಿಹರಿಸುವಂತೆ ಪ್ರೇರೇಪಿಸಬೇಕು. ಅಂತೆಯೇ ಜೀವನದ ಸಂಕಷ್ಟಗಳನ್ನು ದಿಟ್ಟವಾಗಿ ಎದುರಿಸಲು ಉಪದೇಶಿಸುತ್ತಾ ಇರಬೇಕು.

9. ಕೋಪದ ಸ್ಥಿತಿಯಲ್ಲಿರುವಾಗ ನೀರು ಕುಡಿಯುವುದು, ನಿಂತಿದ್ದಾಗ ಕುಳಿತುಕೊಳ್ಳುವುದು, ಕುಳಿತಿದ್ದರೆ ಮಲಗುವುದು, ಉದ್ರಿಕ್ತ ಸ್ಥಳದಿಂದ ದೂರ ಸರಿಯುವುದು ಅಥವಾ ಯಾವುದಾದರೂ ಶ್ರಮದ ಕೆಲಸ ಮಾಡುವುದರಿಂದ ಕೋಪ ತಗ್ಗುತ್ತದೆ. ಈ ಉಪಾಯಗಳನ್ನು ಕಲಿಸಬೇಕು. ಅಭ್ಯಾಸ ಮಾಡಿಸಬೇಕು.

ಇವು ಮಕ್ಕಳ ಪ್ರಮುಖ ಸ್ವಭಾವಗಳಾಗಿವೆ. ಇವಲ್ಲದೆ ಇನ್ನೂ ಕೆಲವು ಪ್ರಮುಖ ಸ್ವಾಭಾವಿಕ ಇಚ್ಛೆ ಮತ್ತು ಮೂಲಭೂತ ಒಲವುಗಳಿವೆ. ಅವು ಶಿಕ್ಷಣ ತರಬೇತಿಯ ದೃಷ್ಟಿಯಲ್ಲಿ ಅಪಾರ ಮಹತ್ವವನ್ನು ಹೊಂದಿವೆ. ಅವು ಮಕ್ಕಳ ಗುಣ, ಸ್ವಭಾವ, ಚಾರಿತ್ರ್ಯ ಮತ್ತು ನಡತೆಯ ಮೇಲೆ ದೂರಗಾಮಿ ಪ್ರಭಾವವನ್ನು ಬೀರುತ್ತವೆ. ಉದಾ: ಅನುಸರಣೆ, ಸಹಾನುಭೂತಿ, ತಕರಾರು, ಆಟ ಇತ್ಯಾದಿ.

ಅನುಕರಣೆ ಅಥವಾ ಅನುಸರಣೆ

ಇದು ಅತ್ಯಂತ ಪ್ರಭಾವಶಾಲಿ ಸ್ವಾಭಾವಿಕ ಇಚ್ಛೆ ಅಥವಾ ಗುಣವಾಗಿದೆ. ಹಿರಿಯ -ಕಿರಿಯರೆಲ್ಲರೂ ಅನುಕರಣೆ ಮಾಡುತ್ತಾರೆ. ನಾಲ್ಕೈದು ವರ್ಷ ಪ್ರಾಯದ ವರೆಗಂತೂ ಈ

ಗುಣ ತೀವ್ರವಾಗಿರುತ್ತದೆ. ಮಕ್ಕಳ ಹೆಚ್ಚಿನ ಸಮಯವು ಇತರರನ್ನು ಅನುಕರಿಸುವುದರಲ್ಲಿಯೇ ಕಳೆದು ಹೋಗುತ್ತದೆ. ಅವರು ತಮ್ಮ ಸುತ್ತಮುತ್ತ ಕಾಣುವವುಗಳನ್ನು ತಿಳಿದೋ ತಿಳಿಯದೆಯೋ ಅನುಕರಿಸುತ್ತಲಿರುತ್ತಾರೆ. ಕೂರುವ, ನಿಲ್ಲುವ, ನಡೆದಾಡುವ, ಆಹಾರ ಪಾನೀಯ ಸೇವನೆ, ಆಟ, ಮಾತು, ಚರ್ಚೆ, ವ್ಯವಹಾರ, ಶಿಷ್ಟಾಚಾರ, ವಿವಿಧ ಕಲೆಗಾರಿಕೆ, ಸ್ವಭಾವ-ಭಾವನೆಗಳನ್ನು ಪ್ರಕಟಿಸುವ ವಿಧಾನ, ಎಲ್ಲಿಯ ವರೆಗೆಂದರೆ ಒಲವು, ಆಸಕ್ತಿ, ಧಾರ್ಮಿಕ ಆಚಾರಗಳು ಮತ್ತು ನೈತಿಕ-ಸಾಮಾಜಿಕ-ಆಧ್ಯಾತ್ಮಿಕ ಮೌಲ್ಯಗಳ ವರೆಗೂ ನಾವು ಇದೇ ಗುಣದ ಪ್ರಭಾವದಲ್ಲಿ ಕಲಿಯುತ್ತೇವೆ. ಶೈಶವದಲ್ಲಿ ಬುದ್ಧಿ, ಅನುಭವ ಮತ್ತು ಒಳಿತು-ಕೆಡುಕುಗಳ ಅರಿವು ಇಲ್ಲದಿರುವ ಕಾರಣ ಮಕ್ಕಳು ಹಾನಿ-ಪ್ರಯೋಜನ ಮತ್ತು ತಪ್ಪು-ಸರಿಗಳ ವ್ಯತ್ಯಾಸವನ್ನು ಅರಿಯದೆ ಹೋಗುತ್ತಾರೆ. ಹಾಗಾಗಿ ಅವರು ಅರಿಯದೆಯೇ ತಮ್ಮ ಸ್ವಭಾವವನ್ನು ಕೆಡಿಸುವ ಮತ್ತು ಚಾರಿತ್ರ್ಯವನ್ನು ಕಳಂಕಿತಗೊಳಿಸುವಂತಹ ವಿಷಯಗಳನ್ನು ಕಲಿತು ಬಿಡುತ್ತಾರೆ. ಆದ್ದರಿಂದ ಪರಿಸರವನ್ನು ಪರಿಶುದ್ಧವಾಗಿರಿಸಲು, ಮಕ್ಕಳನ್ನು ಕೆಟ್ಟ ಸಹವಾಸದಿಂದ ರಕ್ಷಿಸಲು, ಒಳ್ಳೆಯವರ ಸಹವಾಸಕ್ಕೆ ಪ್ರೇರೇಪಿಸಲು ಮತ್ತು ಅವರ ಮುಂದೆ ಅನುಕರಣಾರ್ಹ ಮಾದರಿಯಾಗಿ ವ್ಯವಹರಿಸಲು ಒತ್ತು ಕೊಡಲಾಗುತ್ತದೆ. ಮಕ್ಕಳು ಮೆಚ್ಚುಗೆಯ ಸ್ವಭಾವ-ಗುಣಗಳನ್ನು ಬೆಳೆಸಬೇಕಾದರೆ, ಮಾತಾಪಿತರು ಮತ್ತು ಅಧ್ಯಾಪಕರು ಅವರ ಮುಂದೆ ಉತ್ತಮ ಗುಣ-ಸ್ವಭಾವಗಳನ್ನು ಪ್ರದರ್ಶಿಸಬೇಕಾಗಿದೆ. ಅನ್ಯಥಾ ತಮ್ಮ ದೋಷ-ದೌರ್ಬಲ್ಯಗಳನ್ನು ಮಕ್ಕಳಿಗೆ ಕಲಿಸಿದ ಪಾಪಕ್ಕೆ ಗುರಿಯಾಗುತ್ತಾರೆ. ಈ ರೀತಿ ಅವರ ಕೆಡುಕಿನಲ್ಲಿ ಅವರು ಪಾಲುದಾರರಾಗುತ್ತಾರೆ.

ಅನುಕರಣೆ ಮತ್ತು ಇತರರನ್ನು ನಕಲು ಮಾಡುವುದನ್ನು ತಿರಸ್ಕಾರದಿಂದ ನೋಡಲಾಗುತ್ತದೆ. ವಸ್ತುತಃ ಪ್ರತಿಯೋರ್ವ ವ್ಯಕ್ತಿಯೂ ಅದನ್ನು ಮಾಡಲು ಸ್ವಭಾವತಃ ನಿರ್ಬಂಧಿತನಾಗಿರುತ್ತಾನೆ. ಹಲವು ಗುಣ ವಿಶೇಷಗಳು ಅವನಲ್ಲಿ ಬೆಳೆದು ಬರಲು ಈ ಸ್ವಭಾವವೇ ಕಾರಣವಾಗಿದೆ. ಇಸ್ಲಾಮಿನ ಅನುಗ್ರಹವೂ ನಮಗೆ ಇದೇ ಸ್ವಭಾವದಿಂದ ದೊರೆಯುತ್ತದೆ. ಸಚ್ಚಾರಿತ್ರ್ಯ ಮತ್ತು ಮಾದರಿ ವ್ಯಕ್ತಿತ್ವವನ್ನು ಅನುಕರಿಸುವ ಮೂಲಕವೇ ಒಬ್ಬ ವ್ಯಕ್ತಿಯು ಉನ್ನತ ಸ್ಥಾನವನ್ನು ಗಳಿಸಬಲ್ಲನು. ಹಿಂದಿನ ಸಂಶೋಧನೆಗಳನ್ನು ಅನುಸರಿಸಿ ಮುಂದುವರಿದಾಗಲೇ ಹೊಸ ಆವಿಷ್ಕಾರಗಳು ಬೆಳಕಿಗೆ ಬರುವುದು. ಆದರೆ ಅಂಧಾನುಕರಣೆ ಸರಿಯಲ್ಲ, ಹಂತಹಂತವಾಗಿ ಬುದ್ಧಿಯನ್ನು ಉಪಯೋಗಿಸಿ ಪ್ರಯೋಜನಕಾರಿ, ಯೋಗ್ಯ ಮತ್ತು ಸೂಕ್ತವಾದ ಆಯ್ಕೆ ಮಾಡಲು ಮಕ್ಕಳನ್ನು ಪ್ರೇರೇಪಿಸಬೇಕು.

ಅನುಕರಣೆಯನ್ನು ತರಬೇತುಗೊಳಿಸುವ ನಿಟ್ಟಿನಲ್ಲಿ ಈ ಕೆಳಗಿನ ವಿಷಯಗಳು ಗಮನಾರ್ಹವಾಗಿವೆ:

1. ಮನೆ ಮತ್ತು ಶಾಲೆಯ ಪರಿಸರವನ್ನು ಪರಿಶುದ್ಧವಾಗಿರಿಸಲು ಹಾಗೂ ಎರಡೂ ಕಡೆಗಳಲ್ಲಿ ಸಭ್ಯ ಸ್ವಭಾವಗಳನ್ನು ಅಭ್ಯಾಸ ಮಾಡಲು ಪ್ರಯತ್ನಿಸಬೇಕು. ಇದರಿಂದ ಮಕ್ಕಳಿಗೆ ಅನುಕರಿಸಲು ಉತ್ತಮ ಸಂಗತಿಗಳು ದೊರೆಯುವುದು.

2. ಪುಟ್ಟ ಮಕ್ಕಳಿಗೆ ಆರಂಭದಲ್ಲಿಯೇ ಆಟ ಆಡಿಸುತ್ತಾ, ಪ್ರೀತಿಯಿಂದ ಉತ್ತಮ ಸ್ವಭಾವ-ಶಿಷ್ಟಾಚಾರಗಳನ್ನು ಕಲಿಸಬೇಕು. ಕೂರುವ, ನಿಲ್ಲುವ, ಮಾತನಾಡುವ, ಬರೆಯುವ, ಸ್ವಚ್ಛತೆ, ಸಮಯ ಪಾಲನೆ ಇತ್ಯಾದಿ ವಿಷಯಗಳನ್ನು ಆರಂಭದಲ್ಲಿಯೇ ಅವಲೋಕಿಸುತ್ತಾ ಇರಬೇಕು. ಅಗತ್ಯ ಕಂಡರೆ ಪ್ರಾಯೋಗಿಕವಾಗಿ ಕಲಿಸಲೂ ಬೇಕು.

3. ಅಧ್ಯಾಪಕನು ಉನ್ನತ ಸ್ವರ, ಉತ್ತಮ ಮಾತು, ಉಚ್ಚಾರಗಳ ಪ್ರಕಾರ, ಸುಂದರ ಕೈಬರಹ, ಕಲೆ ಇತ್ಯಾದಿಗಳ ಅತ್ಯುತ್ತಮ ಮಾದರಿಯನ್ನು ತೋರಿಸಿ ಅದನ್ನು ಅನುಕರಿಸುವಂತೆ/ ನಕಲು ಮಾಡುವಂತೆ ಮಕ್ಕಳನ್ನು ಪ್ರೇರೇಪಿಸುತ್ತಾ ಇರಬೇಕು. ತೊದಲುವ, ಉಗ್ಗುವ, ತಡವರಿಸುತ್ತಾ ಓದುವ ಮಕ್ಕಳನ್ನು ತರಗತಿಯಲ್ಲಿ ಇತರರ ಎದುರಲ್ಲಿಯೇ ಓದಿಸಬಾರದು. ಬದಲಾಗಿ ಅಂತಹವರ ಬಗ್ಗೆ ವೈಯಕ್ತಿಕ ಗಮನ ಹರಿಸಬೇಕು.

4. ಅನುಕರಣೆಯಲ್ಲಿ ವಿಕಾಸವನ್ನು ಪರಿಗಣಿಸಬೇಕು. ಏಕೆಂದರೆ ಮೊಳಕೆಯು ತನ್ನ ಸ್ಥಿತಿಯಲ್ಲೇ ಉಳಿಯಬಾರದು. ಸೂಕ್ತ ಮೇರೆಯೊಳಗಿದ್ದುಕೊಂಡು ಬದಲಾವಣೆಗೆ ಅವಕಾಶವನ್ನೂ ಇರಿಸಬೇಕು. ಉದಾ: ಕಲೆಯ ಯಾವುದಾದರೂ ಮಾದರಿಯ ನಕಲು ಮಾಡುವಾಗ ಬಣ್ಣ, ಗಾತ್ರ ಅಥವಾ ವಿನ್ಯಾಸದಲ್ಲಿ ಭಿನ್ನತೆಗೆ ಅವಕಾಶವಿರಲಿ.

5. ಅಪ್ರಜ್ಞಾಪೂರ್ವಕ ಮಾಡುವ ಅನುಕರಣೆಯು ಬಹಳ ಪರಿಣಾಮಕಾರಿಯಾಗಿರುತ್ತದೆ. ಉದಾ: ಸಹಪಾಠಿಗಳು ಮತ್ತು ಅಧ್ಯಾಪಕರ ಅನುಕರಣೆ. ಆದ್ದರಿಂದ ಮಕ್ಕಳಿಗೆ ಕೆಟ್ಟ ಸಹವಾಸದಿಂದ ದೂರವಿರುವ ಮತ್ತು ಉತ್ತಮ ಸಹವಾಸವನ್ನು ಹೊಂದುವ ಅವಕಾಶವನ್ನು ಒದಗಿಸಿಕೊಡಬೇಕು. ಅವರನ್ನು ಹಲವು ರೀತಿಯಲ್ಲಿ ಉತ್ತಮವಾಗಿರುವ ಶಾಲೆ ಮತ್ತು ಅಧ್ಯಾಪಕರ ಸುಪರ್ದಿಗೊಪ್ಪಿಸಬೇಕು. ಅನ್ಯಥಾ ಮಕ್ಕಳು ಕೆಟ್ಟು ಹೋಗುವ ಸಂಭವವಿದೆ. ಸಿಗರೇಟು ಸೇವನೆ, ಸಿನೆಮಾ ವೀಕ್ಷಣೆ, ದುರ್ನಡತೆ ಇತ್ಯಾದಿ ಕೆಟ್ಟ ಗುಣಗಳು ಸಹವಾಸ ದೋಷದ ಕಾರಣವಾಗಿ ಹುಟ್ಟಿಕೊಳ್ಳುತ್ತದೆ.

ಪುನರುಚ್ಚರಿಸುವ ಅಥವಾ ಪುನರಾವರ್ತಿಸುವ ಆಗ್ರಹ

ಇದೂ ಒಂದು ಸ್ವಾಭಾವಿಕ ಗುಣವಾಗಿದೆ. ಪುನರುಚ್ಚಾರ ಮತ್ತು ಪುನರಾವರ್ತನೆಯಲ್ಲಿ ಮಕ್ಕಳಿಗೆ ಬಹಳ ಸಂತೋಷವಾಗುತ್ತದೆ. ಅವರು ಕಂಡು ಕೇಳಿದ ವಿಷಯಗಳನ್ನು ತಮ್ಮದೇ ಮಾತಿನಲ್ಲಿ ಅಥವಾ ಕೃತಿಯಲ್ಲಿ ಆಗಾಗ ಪುನರಾವರ್ತಿಸುತ್ತಾ ಇರುತ್ತಾರೆ. ಯಾವುದಾದರೂ ಪದ, ವಾಕ್ಯ ಅಥವಾ ಪದ್ಯ ಕಲಿತುಬಿಟ್ಟರೆ ಮತ್ತೇನು... ಅರ್ಥ ತಿಳಿಯಲಿ ಅಥವಾ ತಿಳಿಯದಿರಲಿ, ಅದನ್ನು ಪದೇ ಪದೇ ಉಚ್ಚರಿಸುತ್ತಿರುತ್ತಾರೆ. ಒಳ್ಳೆಯ ಅಥವಾ ಕೆಟ್ಟ ಯಾವುದೇ ಕೃತ್ಯ ಮಕ್ಕಳ ಕಣ್ಣ ಮುಂದೆ ಘಟಿಸಿದರೆ, ಅವರು ಅದನ್ನು ತಮ್ಮ ಆಟದಲ್ಲಿ

ನಕಲು ಮಾಡುತ್ತಾ ಇರುತ್ತಾರೆ. ಒಂದೇ ಆಟವನ್ನು ಹಲವು ಬಾರಿ ಆಡುವರು. ಆದರೂ ಅದರಿಂದ ಬೇಸರಗೊಳ್ಳಲಾರರು. ದಿನನಿತ್ಯ, ತಿಂಗಳುಗಟ್ಟಲೆ ಮಾತ್ರವಲ್ಲ, ವರ್ಷಗಟ್ಟಲೆ ಒಂದೇ ಆಟವನ್ನು ಪುನರಾವರ್ತಿಸುತ್ತಿರುತ್ತಾರೆ. ಏನನ್ನಾದರೂ ರಚಿಸುವರು ಮತ್ತು ಅಳಿಸುವರು; ಪುನಃ ರಚಿಸುವರು ಮತ್ತು ಪುನಃ ಅಳಿಸುವರು. ಇದು ಹಲವಾರು ಬಾರಿ ನಡೆಯುತ್ತಾ ಇರುವುದು. ಅಜ್ಜಿಯಿಂದ ಒಂದೇ ಕಥೆಯನ್ನು ಹಲವು ಬಾರಿ ಕೇಳುವರು. ಯಾವುದಾದರೂ ಕಥೆಯು ನೆನಪಿನಲ್ಲಿ ಉಳಿದರೆ, ತನ್ನದೇ ಶೈಲಿಯಲ್ಲಿ ಇತರರಿಗೆ ಕೇಳಿಸುತ್ತಾ ತಿರುಗುವರು. ಯಾವುದಾದರೂ ಕಥೆಯಲ್ಲಿ ಒಂದೇ ಪದವು ಆಗಾಗ ಪುನರಾವರ್ತಿಸಲ್ಪಡುತ್ತಿದ್ದರೆ, ಆ ಪದ ಬಂದಾಗಲೆಲ್ಲ ಅವರು ಕಣ್ಣರಳಿಸುವರು. ಆ ಪದವು ಒಂದು ವೇಳೆ ಪ್ರತಿಬಾರಿಯೂ ಬೆಳೆಯುತ್ತಾ ವಿಸ್ತಾರವಾಗುತ್ತಾ ಸಾಗಿದರೆ ಕೇಳಲೇಬೇಡಿ... ಪುನರಾವರ್ತನೆಯಲ್ಲಿ ವೈವಿಧ್ಯತೆ ಮತ್ತು ಸೊಬಗು ಇದ್ದರೆ ಸಂತೋಷವನ್ನು ಇಮ್ಮಡಿಗೊಳಿಸುತ್ತದೆ.

ಈ ಪುನರಾವರ್ತನೆಯಲ್ಲಿ ಮಕ್ಕಳಿಗಿರುವ ಅಸಾಮಾನ್ಯ ಆಸಕ್ತಿಯು, ಅವರನ್ನು ಹೊಸ ವಿಷಯವನ್ನು ಕಲಿಯಲು ಮತ್ತು ಅವುಗಳ ಮೇಲೆ ಹಿಡಿತ ಸಾಧಿಸುವಲ್ಲಿ ಅತ್ಯಧಿಕ ಸಹಕಾರಿಯಾಗಿದೆ. ಅವರು ಆಗಾಗ ಪುನರಾವರ್ತಿಸುವ ಮಾತುಗಳು ಅವರಿಗೆ ತುಂಬಾ ಚೆನ್ನಾಗಿ ಕಂಠಪಾಠವಾಗಿ ಬಿಡುತ್ತದೆ. ಅವರು ಹಲವು ಬಾರಿ ಮಾಡಿದ ಕೆಲಸದಲ್ಲಿ ಅವರಿಗೆ ಪಾವೀಣ್ಯತೆ ದೊರೆಯುತ್ತದೆ. ಪುನರಾವರ್ತನೆಯ ಗುಣದಿಂದಾಗಿಯೇ ಹಲವು ವಿಷಯಗಳ ಅಭ್ಯಾಸಗಳಲ್ಲಿ ಸೇರ್ಪಡೆಗೊಳ್ಳುತ್ತದೆ ಮತ್ತು ಅವುಗಳನ್ನು ಎಸಗುವಲ್ಲಿ ಯಾವುದೇ ತೊಂದರೆ ಕಾಣಲಾರರು.

ಮಕ್ಕಳು ಏನಿದ್ದರೂ ಪುನರಾವರ್ತನೆಯಿಂದಲೇ ಕಲಿಯುತ್ತಾರೆ. ವಿವಿಧ ಪ ವಿಷಯಗಳೆಲ್ಲ ಈ ಗುಣದ ಕಾರಣವೇ ಅಭ್ಯಾಸವಾಗುತ್ತವೆ. ಇದರಲ್ಲಿ ಮಕ್ಕಳಿಗೆ ಸಂತೋಷವು ಆಗುತ್ತದಾದ್ದರಿಂದ ಅವರು ಹಿರಿಯರಂತೆ ಬಲು ಬೇಗನೇ ಬೇಸರಗೊಳ್ಳುವುದೂ ಇಲ್ಲ. ಆದ್ದರಿಂದಲೇ ಶಾಲೆಗಳಲ್ಲಿ ಪುನರಾವರ್ತನೆಗೆ ಹೆಚ್ಚು ಒತ್ತು ಕೊಟ್ಟು ಹೇಳಲಾಗುತ್ತದೆ. ಗಣಿತದಲ್ಲಿ ಎಣಿಕೆಗಳನ್ನು, ಮಗ್ಗಿಯನ್ನು ಮತ್ತು ಪ್ರಮೇಯಗಳನ್ನು ಬಾಯಿಪಾಠ ಮಾಡಿಸಲಾಗುತ್ತದೆ. ಲಿಪಿಯನ್ನು ಕಲಿಸುವಾಗಲೂ ಅದನ್ನು ಚೆನ್ನಾಗಿ ಅಭ್ಯಾಸ ಮಾಡಿಸಲಾಗುತ್ತದೆ. ಇದು ಪ್ರಶ್ನೆಗಳಿಗೆ ತಕ್ಷಣ ಸರಿಯಾದ ಉತ್ತರವನ್ನು ನೀಡುವಂತಾಗಬೇಕ ಎಂಬ ಕಾರಣಕ್ಕಾಗಿದೆ. ಓದುವಾಗ ಸರಾಗವಾಗಿ ಓದಲು ಸುಲಭವಾಗಲಿಕ್ಕಾಗಿ ಮೌಖಿಕವಾ ಕಲಿಸಲಾಗುವುದನ್ನು ಆಗಾಗ ಪುನರಾವರ್ತಿಸಲಾಗುತ್ತದೆ. ವಾಕ್ಯಗಳ ಉಚ್ಚಾರ, ಸ್ವರ ವ್ಯಂಜನ, ಅಕ್ಷರ ಸಂಯೋಜನೆ ಹಾಗೂ ಪದ್ಯಗಳನ್ನು ಅಡೆತಡೆಯಿಲ್ಲದೆ ಓದುವುದು ಮತ್ತು ಬಾಯಿಪಾಠ ಮಾಡುವುದು ವಸ್ತುತಃ ಈ ಪುನರಾವರ್ತನೆಯ ಅಭ್ಯಾಸದಿಂದಲೇ ಸುಲಭವಾಗುತ್ತದೆ. ಸುಂದರ ಕೈ ಬರಹ, ಚಿತ್ರಕಲೆ, ಕರಕುಶಲಕಲೆಯಲ್ಲಿ ಆರೋಗ್ಯ ಮತ್ತು

ಸ್ವಚ್ಛತೆ, ವಿವಿಧ ಕಲೆಗಾರಿಕೆಗಳಲ್ಲಿ ಪರಿಣತಿ, ಭೂಗೋಳದಲ್ಲಿ ಸ್ಥಳಗಳ ಹೆಸರು ಕಂಠಪಾಠ ಮಾಡುವುದು ಮತ್ತು ನಕಾಶೆ ಬಿಡಿಸುವ ಅಭ್ಯಾಸ, ಇತಿಹಾಸದಲ್ಲಿ ಊರುಗಳ ಹೆಸರು ಮತ್ತು ಘಟನೆಗಳ ಇಸವಿಗಳನ್ನು ನೆನಪಿಸುವುದು; ಕಿರಾಅತ್ ಮತ್ತು ಉಚ್ಚಾರ ಸಮತೋಲನ, ಪಠಣದಲ್ಲಿ ಸರಾಗತೆ, ದಿಕ್ರ್‌ಗಳು, ದುಆಗಳು ಮತ್ತು ಅಧ್ಯಾಯ(ಸೂರ)ಗಳನ್ನು ಕಂಠಪಾಠ ಮಾಡುವುದು- ಇವೆಲ್ಲವೂ ಚೆನ್ನಾಗಿ ಪುನರಾವರ್ತಿಸಲ್ಪಟ್ಟಾಗಲೇ ಸಾಧ್ಯವಾಗುವುದು.

ಈ ನಿಟ್ಟಿನಲ್ಲಿ ಈ ಕೆಳಗಿನ ವಿಷಯಗಳನ್ನು ದೃಷ್ಟಿಯಲ್ಲಿರಿಸಬೇಕು:

1. ಸಣ್ಣ ಮಕ್ಕಳು ಅರಿಯದೆಯೇ ಪುನರಾವರ್ತಿಸುತ್ತಿರುತ್ತಾರೆ. ಅದರಿಂದ ಅವರಿಗೆ ಸಂತೋಷವೂ ದೊರೆಯುತ್ತದೆ. ಆದರೆ ಪ್ರಾಯ ಹೆಚ್ಚಾದಂತೆಲ್ಲ ಪುನರಾವರ್ತನೆಯಲ್ಲಿನ ರುಚಿ ಕಡಿಮೆಯಾಗುತ್ತಾ ಹೋಗುತ್ತದೆ. ದೊಡ್ಡ ಮಕ್ಕಳು ಕೇವಲ ಉದ್ದೇಶ ಮತ್ತು ಪ್ರಯೋಜನವಿದೆಯೆಂದು ತಿಳಿದು ಬರುವ ವಿಷಯಗಳನ್ನು ಪುನರಾವರ್ತಿಸುವುದರಿಂದ ಮಾತ್ರವೇ ಸಂತೋಷ ಪಡುತ್ತಾರೆ. ಆದ್ದರಿಂದ ಒಂದು ವಿಷಯದ ಪ್ರಯೋಜನ ಮತ್ತು ಉದ್ದೇಶವನ್ನು ಮಕ್ಕಳಿಗೆ ಚೆನ್ನಾಗಿ ಮನನ ಮಾಡಿಸಿ ಕೊಡಬೇಕು.

2. ಹತ್ತು-ಹನ್ನೊಂದು ವರ್ಷ ಪ್ರಾಯದ ತನಕ ಅಭ್ಯಾಸ, ಪುನರಾವರ್ತನೆ ಮತ್ತು ಕಂಠಪಾಠ ಮಾಡಲು ಹೆಚ್ಚೆಚ್ಚು ಒತ್ತು ನೀಡಬೇಕು. ಆದರೆ ಉನ್ನತ ತರಗತಿಗಳಲ್ಲಿ ಹಂತಹಂತವಾಗಿ ಪುನರಾವರ್ತನೆಯನ್ನು ಕಡಿಮೆಗೊಳಿಸುತ್ತಾ ಚಿಂತನೆಯ ಕಾರ್ಯ ಹೆಚ್ಚಿಸುವಲ್ಲಿ ಗಮನವೀಯಬೇಕು.

3. ಪುನರಾವರ್ತನೆಯಲ್ಲಿ ವೈವಿಧ್ಯತೆ ಮತ್ತು ವೈಶಿಷ್ಟ್ಯತೆಗಳ ಒಗ್ಗರಣೆ ನೀಡಿದರೆ, ರುಚಿ ಇನ್ನಷ್ಟು ಹೆಚ್ಚುತ್ತದೆ. ಒಂದೇ ವಿಧಾನದಿಂದ ಏಕತಾನತೆ ಮತ್ತು ಕಿರಿಕಿರಿಯ ಅನುಭವವಾಗುವ ಸಾಧ್ಯತೆ ಇದೆ.

4. ತಿಳುವಳಿಕೆಯಿಲ್ಲದ ಕಾರಣ ಮಕ್ಕಳು ಹಲವೊಮ್ಮೆ ಅಪ್ರಿಯ ಕೃತ್ಯ ಮತ್ತು ಅಸಭ್ಯ ಮಾತುಗಳನ್ನು ಪುನರಾವರ್ತಿಸತೊಡಗುತ್ತಾರೆ. ಹೀಗೆ ಹಲವು ಕೆಟ್ಟ ಗುಣಗಳಿಗೆ ಈಡಾಗಿ ಬಿಡುತ್ತಾರೆ. ಈ ಅಭ್ಯಾಸವನ್ನು ತಡೆಯುವ ಕುರಿತು ಗಮನ ಹರಿಸಬೇಕು ಮತ್ತು ಪರಿಸರವನ್ನು ಅಸಂಬದ್ಧ ಮತ್ತು ನಿರರ್ಥಕ ವಿಷಯಗಳಿಂದ ಮುಕ್ತಗೊಳಿಸಬೇಕು.

ಆಟ

ಮಕ್ಕಳು ಆಟವಾಡುವುದನ್ನು ಬಹಳ ಇಷ್ಟಪಡುತ್ತಾರೆ. ಆಸಕ್ತಿ ಮತ್ತು ಉತ್ಸಾಹದಿಂದ ಆಟದೆಡೆಗೆ ದೌಡಾಯಿಸುತ್ತಾರೆ. ಅವರಿಗೆ ಆಟಕ್ಕಿಂತ ಹೆಚ್ಚು ಇಷ್ಟದ ಕೆಲಸ ಬಹುಶಃ ಲೋಕದಲ್ಲಿ ಬೇರೆ ಇರಲಾರದು. ಆಟದಲ್ಲಿ ಅವರ ತನ್ಮಯತೆ ನೋಡಿರಿ. ತನು-ಮನದ ಪರಿವೆ ಇರುವುದಿಲ್ಲ, ಗಮನ ಸಂಪೂರ್ಣ ಆಟದಲ್ಲಿ ಕೇಂದ್ರೀಕೃತವಾಗಿರುತ್ತದೆ. ಹಸಿವಾದರೂ, ಬಟ್ಟೆ ಹಾಳಾದರೂ, ದಣಿದು ಬಳಲಿ ಬೆಂಡಾದರೂ ಪರಿವೆಯಿಲ್ಲ;

ಚಳಿಯಿರಲಿ-ಬಿಸಿಲಿರಲಿ, ಕೆಸರಿರಲಿ-ನೀರಿರಲಿ, ಅವರ ಆಟ ಜಾರಿಯಲ್ಲಿರುತ್ತದೆ. ಆಟಕ್ಕೆ ಯಾವುದೇ ಸಮಯ ಮತ್ತು ಸ್ಥಳ ಎಂದೂ ನಿಗದಿಯಿಲ್ಲ. ಯಾವಾಗೆಂದರೆ ಆವಾಗ, ಎಲ್ಲೆಂದರಲ್ಲಿ ಅವಕಾಶ ಸಿಕ್ಕ ಕೂಡಲೇ ಆಟಕ್ಕೆ ಸಿದ್ಧ. ತರಗತಿ ಬಿಟ್ಟಾಗ, ಹಾಸಿಗೆಯಿಂದೆದ್ದಾಗ ಆಟದಲ್ಲಿ ತೊಡಗುತ್ತಾರೆ. ಹೆತ್ತವರ ಕೋಪ, ಅಧ್ಯಾಪಕರ ಗದರಿಕೆ, ಸ್ನೇಹಿತರ ಉಪೇಕ್ಷೆ ಯಾವುದೂ ಅವರ ಆಟಕ್ಕೆ ಬಾಧಕವಲ್ಲ. ಅವರು ಎಂಥ ದುಃಖ ಸಹಿಸಿಯೂ ಆಟವಾಡುವರು.

ಮಕ್ಕಳು ಅಂದರೆ ಸುಮ್ಮನೆ ಕೂರುವವರಲ್ಲ. ಸುಮ್ಮನಿರುವುದೆಂದರೆ ಕಾಯಿಲೆ ಅಥವಾ ಮಂದ ಬುದ್ಧಿಯ ಲಕ್ಷಣವಾಗಿದೆ. ಓಡಾಟ, ಜಿಗಿದಾಟ, ಗುಲ್ಲು ಗದ್ದಲ ಇವೆಲ್ಲವೂ ಬಾಲ್ಯದ ಅನಿವಾರ್ಯ ಗುಣಗಳಾಗಿವೆ; ಆರೋಗ್ಯವು ಶಕ್ತಿ ಮತ್ತು ಬುದ್ಧಿವಂತಿಕೆಯು ಜೀವಂತಿಕೆಯ ಲಕ್ಷಣಗಳಾಗಿವೆ. ಈ ಗುಣಗಳಿಂದ ವಂಚಿತವಾಗಿರುವ ಮಕ್ಕಳು ಮಕ್ಕಳೇ ಅಲ್ಲ, ವೃದ್ಧರಾಗಿದ್ದಾರೆ. ಈ ಎಲ್ಲ ಕೃತ್ಯಗಳು ಅವರ ಜನ್ಮಸಿದ್ಧ ಹಕ್ಕುಗಳಾಗಿವೆ. ಈ ಹಕ್ಕುಗಳಿಂದ ಅವರನ್ನು ವಂಚಿತಗೊಳಿಸುವುದು ಸಲ್ಲ.

ಮಕ್ಕಳಿಗೆ ನೈಜ ಸಂತೋಷವು ಆಟದಲ್ಲಿಯೇ ಸಿಗುವುದು. ಆಟಿಕೆ ಮತ್ತು ಆಡಲು ಸಂಗಡಿಗರು ದೊರೆತರೆ ಸಾಕು, ಅವರ ಆಸೆ ಈಡೇರಿದಂತೆ! ಸ್ವರ್ಗದ ಈ ಪುಷ್ಪಗಳು ಅರಳಿ ನಳನಳಿಸುವುದು; ಮುದ್ದು ಮುಖದಲ್ಲಿ ಹೂನಗು ಮತ್ತು ಆನಂದ ಲಾಸ್ಯವಾಡುವುದು. ಅವರಿಗಂತೂ ಸಂತೋಷವಾಗುತ್ತದೆ. ಅದೇ ವೇಳೆ ನಗುತ್ತಾ ನಲಿಯುವ ಆ ಮಕ್ಕಳನ್ನು ಕಂಡು ಸಂತೋಷ ಪಡದವರು ಯಾರಿದ್ದಾರೆ? ಆಟದಲ್ಲಿ ಮಕ್ಕಳ ತನ್ಮಯತೆ ಮತ್ತು ಹೃದ್ಯ ಪ್ರೀತಿಯು ವಸ್ತುತಃ ಆಟವು ಒಂದು ಪ್ರಬಲ ಇಚ್ಛೆ ಹಾಗೂ ಸ್ವಾಭಾವಿಕ ಒಲವು ಆಗಿದ್ದು ಅದು ಸಹ್ಯ ಮೇರೆಯೊಳಗೆ ಪೂರೈಸಲ್ಪಡಬೇಕಾದುದು ಎಂಬುದರ ಸೂಚನೆಯಾಗಿದೆ. ಮಕ್ಕಳನ್ನು ಆಟವಾಡುವುದರಿಂದ ತಡೆಯುವವರು ವಸ್ತುತಃ ಪ್ರಕೃತಿಯೊಂದಿಗೆ ಸಮರ ಹೂಡುತ್ತಾ ಮಕ್ಕಳ ಮೇಲೆ ಆಕ್ರಮವೆಸಗುತ್ತಾರೆ. ಪ್ರಕೃತಿಯು ಈ ಪ್ರಬಲ ಗುಣವನ್ನು ವಿನಾಕಾರಣ ಇರಿಸಿರುವುದಲ್ಲ. ಮಕ್ಕಳ ದೈಹಿಕ, ಬೌದ್ಧಿಕ, ಸಾಮಾಜಿಕ ಮತ್ತು ನೈತಿಕ ಬೆಳವಣಿಗೆಯಲ್ಲಿ ಆಟಕ್ಕೆ ಮಹತ್ತರ ಪಾತ್ರವಿದೆ.

ಮಕ್ಕಳು ಯಾಕೆ ಆಟವಾಡುತ್ತಾರೆ?

ಈ ವಿಷಯದಲ್ಲಿ ಹಲವಾರು ಅಭಿಪ್ರಾಯಗಳಿವೆ. ಉದಾ:

1. ಮಕ್ಕಳು ಆಟದ ಮೂಲಕ ಹೆಚ್ಚುವರಿ ಕ್ಯಾಲೊರಿ(ಶಕ್ತಿ)ಯನ್ನು ಕರಗಿಸುತ್ತಾರೆ. ಮಕ್ಕಳೇ ದೈಹಿಕ ಎತ್ತರಕ್ಕಿಂತ ಹೆಚ್ಚು ಕ್ಯಾಲೊರಿ ಶೇಖರವಾಗುತ್ತದೆ. ಈ ಶಕ್ತಿಯನ್ನು ಯಾವುದಾದರೂ ಗಂಭೀರ ಕೆಲಸದಲ್ಲಿ ತೊಡಗಿಸಿಕೊಳ್ಳುವ ಅಗತ್ಯ ಅವರಿಗಿರುವುದಿಲ್ಲ. ಏಕೆಂದರೆ

ಜೀವನಾವಶ್ಯಕ ವಸ್ತುಗಳನ್ನು ಅವರ ಪೋಷಕರೇ ಗಳಿಸುತ್ತಾರೆ ಮತ್ತು ಒದಗಿಸಿಕೊಡುತ್ತಾರೆ. ಮಕ್ಕಳಾದರೋ ಸದಾ ಆರಾಮ-ವಿರಾಮದಲ್ಲೇ ಇರುತ್ತಾರೆ. ನಾಳೆಯ ಚಿಂತೆ ಅವರಿಗಿಲ್ಲ, ಹಾಗಾಗಿ ತಮ್ಮಲ್ಲಿರುವ ಹೆಚ್ಚಿನ ಕ್ಯಾಲೊರಿಗಳನ್ನು ಆಟದಲ್ಲಿ ಕರಗಿಸುತ್ತಾರೆ. ಒಂದು ವೇಳೆ ಅವರು ಆ ರೀತಿ ಮಾಡದೆ ಇದ್ದರೆ, ಅನಗತ್ಯ ಆವಿಯು ಇಂಜಿನನ್ನು ಕೆಡಿಸಿದಂತೆ ಅನಗತ್ಯ ಕ್ಯಾಲೊರಿಗಳು ಮಕ್ಕಳ ದೇಹವನ್ನು ಬಾಧೆಗೀಡು ಮಾಡುತ್ತವೆ.

2. ಆಟದ ಮೂಲಕ ಮಕ್ಕಳು ತಮ್ಮನ್ನು ಭವಿಷ್ಯದ ಹೊಣೆಗಾರಿಕೆಗಳಿಗೆ ಸಿದ್ಧಗೊಳಿಸುತ್ತಾರೆ. ಬೊಂಬೆಯಾಟ ಆಡುವ ಮೂಲಕ ಗೃಹ ಕೃತ್ಯಗಳನ್ನು ಕಲಿತುಕೊಳ್ಳುತ್ತಾರೆ. ಅಂತೆಯೇ ನಕಲು-ನಾಟಕದಂತಹ ಆಟಗಳ ಮೂಲಕ ವಿಭಿನ್ನ ರೀತಿಯ ಕರ್ತವ್ಯಗಳನ್ನು ನಿಭಾಯಿಸುವ ವಿಧಾನವನ್ನು ಕಲಿಯುತ್ತಾರೆ.

3. ಮಾನವನು ದಾಟಿ ಬಂದು ಇಂದಿನ ಸ್ಥಿತಿಗೆ ತಲುಪಿರುವಂತಹ ಪ್ರಗತಿಯ ಹಂತಗಳನ್ನು ಮಕ್ಕಳು ಆಟದ ಮೂಲಕ ಪುನರಾವರ್ತಿಸುತ್ತಿರುತ್ತಾರೆ. ಮಕ್ಕಳು ಆಟದಲ್ಲಿ ಓಡುವುದು, ಜಿಗಿದಾಡುವುದು, ಬೆನ್ನಟ್ಟುವುದು, ಮರ ಹತ್ತುವುದು, ಗುಹೆ-ಸುರಂಗದೊಳಗೆ ನುಸುಳುವುದು, ಬೇಟೆಯಾಡುವುದು, ಮೀನು ಹಿಡಿಯುವುದು, ಮನೆ-ಗೂಡು ಕಟ್ಟುವುದು ಇತ್ಯಾದಿಗಳೆಲ್ಲವೂ ಆರಂಭಿಕ ಕಾಲದ ಮಾನವನನ್ನು ನೆನಪಿಸುತ್ತವೆ. ಈ ಪ್ರಕಾರ ಅವರು ಹಲವು ತರದ ಅನುಭವ ಹಾಗೂ ವಿಭಿನ್ನ ಪ್ರತಿಭೆಗಳನ್ನು ಬೆಳೆಸಿಕೊಳ್ಳುತ್ತಾರೆ.

4. ಮಕ್ಕಳಿಗೂ ತಮ್ಮದೇ ಆದ ಗೊಂದಲ ಮತ್ತು ಚಿಂತೆಗಳಿರುತ್ತವೆ. ಅವರ ಅದೆಷ್ಟೋ ಸ್ವಾಭಾವಿಕ ಬೇಡಿಕೆಗಳು ಮತ್ತು ಮೂಲಭೂತ ಆಕಾಂಕ್ಷೆಗಳು ಈಡೇರುವುದಿಲ್ಲ, ಅವರ ಭಾವನೆಗಳೂ ಹಲವೊಮ್ಮೆ ಘಾಸಿಗೊಳ್ಳುತ್ತವೆ. ಈ ಎಲ್ಲ ಕ್ಲೇಷಗಳನ್ನು ದೂರ ಮಾಡಲಿಕ್ಕಾಗಿ ಮಕ್ಕಳು ಆಟವಾಡುತ್ತಾರೆ ಮತ್ತು ಆಟದ ಮೂಲಕ ತಮ್ಮ ಮನಸ್ಸನ್ನು ಹಗುರಗೊಳಿಸುತ್ತಾರೆ.

5. ಪ್ರತಿ ಮಗುವಿನಲ್ಲೂ ರಾಗ-ದ್ವೇಷ ಮತ್ತು ಸ್ಪರ್ಧಾ ಮನೋಭಾವ ಇರುತ್ತದೆ. ಆಟವು ಅದನ್ನು ಪ್ರಕಟಿಸಲು ಸಾಕಷ್ಟು ಅವಕಾಶವನ್ನೊದಗಿಸುವ ಕಾರಣ, ಆ ಮೂಲಕ ಮಕ್ಕಳು ತಂತಮ್ಮ ಭಾವನೆಗಳಿಗೆ ಸಮಾಧಾನವನ್ನು ಒದಗಿಸಿಕೊಳ್ಳುತ್ತಾರೆ.

6. ಮಕ್ಕಳ ಆಟವು ಅವರ ಸೃಜನಾತ್ಮಕ ಚಟುವಟಿಕೆಗಳಿಗೆ ವೇದಿಕೆಯನ್ನೊದಗಿಸಿ ಕೊಡುತ್ತದೆ. ಮಕ್ಕಳು ತಮ್ಮ ಸ್ವಭಾವಕ್ಕೆ ಬದ್ಧರು. ಸುಮ್ಮನೆ ಕೂತಿರಲಾರರು. ಸದಾ ಏನನ್ನಾದರೂ ಮಾಡುತ್ತಲಿರುತ್ತಾರೆ. ಆಟವು ಅವರ ಈ ಆಗ್ರಹವನ್ನು ಈಡೇರಿಸಲಿಕ್ಕಿರುವ ಮಾಧ್ಯಮವಾಗಿದೆ.

7. ಬೆಳವಣಿಗೆ ಮತ್ತು ಪೋಷಣೆಯ ವಿವಿಧ ಹಂತಗಳು ದೇಹ ಮತ್ತು ಮನಸ್ಸು ವಿಭಿನ್ನ ರೀತಿಯ ಚಟುವಟಿಕೆಗಳನ್ನು ಬಯಸುತ್ತವೆ. ವಿಭಿನ್ನ ರೀತಿಯ ಆಟಗಳು ಆ ಬೇಡಿಕೆಗಳನ್ನು ಈಡೇರಿಸುತ್ತವೆ. ಆದುದರಿಂದ ಮಕ್ಕಳು ತರತರದ ಆಟಗಳನ್ನು ಆಡುತ್ತಾರೆ.

ಇವು ಹಲವು ಮಂದಿ ಮನಃಶಾಸ್ತ್ರಜ್ಞರು ಮಕ್ಕಳಾಟಗಳಿಗೆ ಸಂಬಂಧಿಸಿ ತಂತಮ್ಮ ಅನುಭವ ಮತ್ತು ಕಲ್ಪನೆಗಳಿಂದ ವ್ಯಕ್ತಪಡಿಸಿರುವ ವಿಭಿನ್ನ ಅಭಿಪ್ರಾಯಗಳಾಗಿವೆ. ಅವರ ಅಭಿಪ್ರಾಯಗಳ ಬಗ್ಗೆ ಸಂಪೂರ್ಣ ಸಹಮತವಿರಬೇಕೆಂದೇನೂ ಇಲ್ಲ. ಆದರೆ ಮಕ್ಕಳ ಬೆಳವಣಿಗೆಯಲ್ಲಿ ಆಟದ ಅಗತ್ಯ ಬಹಳವಿದೆ ಎಂಬುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ.

ಆಟದ ವಿಧಗಳು

ಮಕ್ಕಳು ವಿಭಿನ್ನ ರೀತಿಯ ಆಟಗಳನ್ನಾಡುತ್ತಾರೆ. ಒಂದು ಮಗು ಯಾವ ರೀತಿಯ ಆಟ, ಆಟಿಕೆಗಳಲ್ಲಿ ಆಸಕ್ತಿ ವಹಿಸುತ್ತದೆ ಎಂಬುದು ಅದರ ಪ್ರಾಯ, ಲಿಂಗ, ಸ್ವಭಾವ, ಪರಿಸರ, ಋತುಮಾನ ಮತ್ತು ಸೌಲಭ್ಯ-ಸೌಕರ್ಯ ಇತ್ಯಾದಿಗಳನ್ನು ಅವಲಂಬಿಸಿದೆ. ಪುಟ್ಟ ಮಕ್ಕಳು ಒಬ್ಬಂಟಿಯಾಗಿ ಆಡುವುದನ್ನು ಇಷ್ಟಪಡುತ್ತಾರೆ. ದೊಡ್ಡ ಮಕ್ಕಳು ತಂಡ ರಚಿಸಿ ಆಡಲು ಇಷ್ಟಪಡುತ್ತಾರೆ. ಮಕ್ಕಳಿಗೆ ನಾಟಕ-ಅನುಕರಣೆಯ ಆಟದಲ್ಲಿ ಆಸಕ್ತಿ ಇದ್ದರೆ, ಹದಿಹರೆಯದವರಿಗೆ ಸ್ಪರ್ಧಾತ್ಮಕ ಆಟಗಳಲ್ಲಿ; ಹುಡುಗರು ಚಿನ್ನಿ-ದಾಂಡು ಮತ್ತು ಚೆಂಡಿನಾಟ ಆಡಿದರೆ, ಹುಡುಗಿಯರು ಗೊಂಬೆಯಾಟದಲ್ಲಿ ಮನಃಸಂತೃಪ್ತಿ ಹೊಂದುತ್ತಾರೆ. ದುರ್ಬಲರು ಒಳಾಂಗಣ ಆಟದಲ್ಲಿ ಆಸಕ್ತಿ ವಹಿಸಿದರೆ, ಬಲಶಾಲಿಗಳು ಹೊರಾಂಗಣದಲ್ಲಿ ಆಡುತ್ತಾರೆ. ಬುದ್ಧಿವಂತ ಮಕ್ಕಳು ಹೆಚ್ಚು ಆಟ ಆಡುತ್ತಾರೆ, ಜತೆಗೂಡಿ ಆಡುತ್ತಾರೆ ಅಥವಾ ಚಿಂತನೆಗೆ ಗ್ರಾಸವಾಗುವಂತಹ ಆಟವನ್ನಾಡಲು ಇಷ್ಟಪಡುತ್ತಾರೆ. ಮಂದಬುದ್ಧಿಯ ಮತ್ತು ತಿಳಿಗೇಡಿ ಮಕ್ಕಳು ಆಟದಿಂದಲೇ ದೂರವುಳಿಯುತ್ತಾರೆ, ಜಗಳಾಡುತ್ತಾರೆ ಅಥವಾ ತಮಗಿಂತ ಕಿರಿಯ ಮಕ್ಕಳೊಡನೆ ಆಟವಾಡುವುದನ್ನು ಇಷ್ಟಪಡುತ್ತಾರೆ. ನಗರದ ಮಕ್ಕಳ ಆಟದಲ್ಲಿ ವೈವಿಧ್ಯತೆ ಮತ್ತು ನಾವೀಣ್ಯತೆಯಿದ್ದರೆ, ಗ್ರಾಮೀಣ ಮಕ್ಕಳ ಆಟದಲ್ಲಿ ಸರಳತೆ ಮತ್ತು ಏಕರೂಪತೆಯಿರುತ್ತದೆ. ಸೆಖೆ ಮತ್ತು ಮಳೆಗಾಲದಲ್ಲಿ ಒಳಾಂಗಣ ಆಟವಾಡಿದರೆ, ಮಳೆ ನಿಂತ ಮೇಲೆ ಕೆಸರಿನಾಟ ಮತ್ತು ಈಜಿನಾಟ. ಚಳಿಗಾಲದಲ್ಲಿ ಪಿಕ್‌ನಿಕ್‌ಗೆ ಹೋಗುವುದರಲ್ಲಿ ಹೆಚ್ಚು ಆನಂದವಿದ್ದರೆ, ವಸಂತ ಋತುವಿನಲ್ಲಿ ಓಟ ಮತ್ತು ಕಣ್ಣಾಮುಚ್ಚಾಲೆಯನ್ನು ಇಷ್ಟ ಪಡುತ್ತಾರೆ.

ಇಲ್ಲಿ ವಿವಿಧ ಪ್ರಾಯದ ವಿವಿಧ ಆಟಗಳ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಲಾಗಿದೆ:

1. ತನ್ನ ದೇಹದೊಂದಿಗೇ ಆಡುವುದು

ಮಕ್ಕಳ ಆರಂಭಿಕ ಆಟವು ಅವರ ಸ್ವ-ದೇಹದ ಕುರಿತಾಗಿರುತ್ತದೆ. ಜನನದ ಕೆಲವು ದಿನಗಳ ತರುವಾಯವೇ ಮಗು ಕೈಕಾಲು ಆಡಿಸಲು ಮತ್ತು ಚಿಲ್ಲಾಡಲು ತೊಡಗುತ್ತದೆ.

ಈ ಕ್ರಿಯೆಗಳಿಂದ ಸ್ನಾಯುಗಳು ಮತ್ತು ನರಗಳು ಸುದೃಢವಾಗುತ್ತವೆ. ಆ ಬಳಿಕ ತೆವಳಲು, ಕುಳಿತುಕೊಳ್ಳಲು, ನಿಲ್ಲಲು ಮತ್ತು ನಡೆಯಲು ಪ್ರಯತ್ನಿಸುತ್ತದೆ. ಈ ಪ್ರಯತ್ನಗಳ ಕಾರಣವಾಗಿ ಕ್ರಮೇಣ ಅದು ತನ್ನ ದೇಹ ಮತ್ತು ಅಂಗಾಂಗಗಳ ಮೇಲೆ ನಿಯಂತ್ರಣವನ್ನು ಪಡೆದುಕೊಳ್ಳುತ್ತದೆ. ಪುಟ್ಟ ಮಕ್ಕಳನ್ನು ಕೈಕಾಲು ಆಡಿಸಲು ಮತ್ತು ತನ್ನ ದೇಹವನ್ನು ಸಂಭಾಳಿಸಲು ಸಂಪೂರ್ಣ ಅವಕಾಶ ಒದಗಿಸಿಕೊಡಬೇಕು. ಕೆಲವರು ತಿಳಿಗೇಡಿತನದಿಂದ ಅಥವಾ ಅತಿಯಾದ ಮುದ್ದಿನಿಂದಾಗಿ ಮಕ್ಕಳನ್ನು ಕೈ ಕೂಸನ್ನಾಗಿ ಮಾಡುತ್ತಾರೆ. ಇದು ಅತಿ ದೊಡ್ಡ ತಪ್ಪು, ಇದರಿಂದ ಮಕ್ಕಳ ಬೆಳವಣಿಗೆ ಕುಂಠಿತವಾಗುತ್ತದೆ ಮತ್ತು ಅವರ ಅಂಗಾಂಗಗಳು ದುರ್ಬಲಗೊಳ್ಳುತ್ತವೆ.

2. ವಸ್ತುಗಳಿಂದ ಆಟವಾಡುವುದು

ತನ್ನ ದೇಹದ ಮೇಲೆ ಒಂದು ಹಂತದ ವರೆಗೆ ನಿಯಂತ್ರಣ ಸಾಧಿಸಿದ ಬಳಿಕ ಮಕ್ಕಳು ತನ್ನ ಸುತ್ತಮುತ್ತಲ ವಸ್ತುಗಳಿಂದ ಆಡಲು ಮತ್ತು ಅಸಂಬದ್ಧ ಶಬ್ದಗಳನ್ನು ಹೊರಡಿಸಲು ತೊಡಗುತ್ತದೆ. ಸಿಕ್ಕಸಿಕ್ಕ ವಸ್ತುವನ್ನೆಲ್ಲ ಸ್ಪರ್ಶಿಸಲು, ಹಿಡಿಯಲು, ತನ್ನೆಡೆಗೆ ಸೆಳೆಯಲು, ಎತ್ತಲು, ಬಾಯಿಗಿಡಲು, ಎಸೆಯಲು, ಒಡೆಯಲು ಮತ್ತು ಅದರಿಂದ ಶಬ್ದ ಹೊರಡಿಸಲು, ತೂತು ಕಂಡರೆ ಬೆರಳು ತೂರಿಸಲು ಮತ್ತು ಉಗುರಿನಿಂದ ಕೆರೆಯಲು, ಅಗೆಯಲು ಪ್ರಯತ್ನಿಸುತ್ತಾರೆ. ಈ ರೀತಿ ಅವರು ಹಲವು ವಸ್ತುಗಳ ಆಕಾರ, ಗಾತ್ರ, ಬಣ್ಣ, ರುಚಿ, ತೂಕ ಇತ್ಯಾದಿಗಳ ಕುರಿತು ಅನೈಚ್ಛಿಕವಾಗಿಯೇ ಹಲವು ಮಾಹಿತಿಗಳನ್ನು ತಿಳಿದುಕೊಳ್ಳುತ್ತಾರೆ. ಈ ಹಂತದಲ್ಲಿ ಮಕ್ಕಳಿಗೆ ಬಣ್ಣಬಣ್ಣದ, ಶಬ್ದ ಹೊರಡಿಸುವ ಮತ್ತು ಚಲಿಸುವಂತಹ ಕಟ್ಟಿಗೆ, ರಬ್ಬರು ಅಥವಾ ಪ್ಲಾಸ್ಟಿಕ್‌ನ ಆಟಿಕೆ ಮತ್ತು ಖಾಲಿ ಡಬ್ಬ ಇತ್ಯಾದಿ ಕೊಡಬೇಕು. ಅವುಗಳ ಬಣ್ಣ ಎದ್ದು ಹೋಗಬಾರದು. ಏಕೆಂದರೆ ಬಾಯಿಗಿಟ್ಟರೆ ಅಥವಾ ನೀರು ಬಿದ್ದರೆ ಬಣ್ಣ ಎದ್ದು ತೊಂದರೆಯಾದೀತು. ಹಾಗೆಯೇ ಸುಲಭದಲ್ಲಿ ಒಡೆದು ಹೋಗುವಂತೆಯೂ ಇರಬಾರದು ಮತ್ತು ಬೇಗನೇ ಮೈಲಿಗೆ ಅಥವಾ ಹಾಳಾಗುವಂತೆಯೂ ಇರಬಾರದು. ಅದೇ ರೀತಿ ಮುಟ್ಟಿದರೆ ಅಥವಾ ಬಾಯಿಗಿಟ್ಟರೆ ಮಕ್ಕಳಿಗೆ ಹಾನಿಯಾಗುವಂತಹ ಅಥವಾ ಒಡೆಯುವ ಮತ್ತು ಹಾಳಾಗುವ ಸಾಧ್ಯತೆಯಿರುವಂತಹ ವಸ್ತುಗಳನ್ನು ಮಕ್ಕಳ ಕೈಗೆಟುಕದಂತೆ ಜೋಪಾನವಾಗಿರಿಸಬೇಕು. ಉದಾಹರಣೆಗೆ, ಗಾಜು-ಪಿಂಗಾಣಿಯ ಪಾತ್ರೆಗಳು, ಗಡಿಯಾರ, ಕನ್ನಡಕ, ಲೇಖನಿ ಇತ್ಯಾದಿ. ಈ ಪ್ರಾಯದಲ್ಲಿ ಕೆಲವು ಮಕ್ಕಳಲ್ಲಿ ಇದ್ದಿಲು, ಮಣ್ಣು, ಬೂದಿ ಇತ್ಯಾದಿ ತಿನ್ನುವ ಮತ್ತು ಮಲಮೂತ್ರದಲ್ಲಿ ಆಟವಾಡುವಂತಹ ಕೊಳಕು ಸ್ವಭಾವವೂ ಹುಟ್ಟಿಕೊಳ್ಳುತ್ತದೆ. ಆದ್ದರಿಂದ ಕಣ್ಗಾವಲಿನಿಂದ ಪಾಲನೆ ಪೋಷಣೆ ಮಾಡಬೇಕಾಗುತ್ತದೆ.

ಆದರೆ ಗದ್ದಲವೆಬ್ಬಿಸುವಂತಹ ಈ ಆಟಗಳಿಂದ ಮಕ್ಕಳೆಲ್ಲಾದರೂ ವಸ್ತುಗಳನ್ನು ಒಡೆದು ಹಾಕಿದರೆ ಆತಂಕಿತರಾಗಬಾರದು ಮತ್ತು ಹೆಚ್ಚು ತಡೆಯಬಾರದು, ಗದರಿಸಬಾರದು.

ಏಕೆಂದರೆ ಅದು ಸೃಜನಾತ್ಮಕತೆಯೆಡೆಗಿನ ಅವರ ಪ್ರಥಮ ಹೆಜ್ಜೆಯಾಗಿದೆ. ಆ ಮೂಲಕವೇ ಮಕ್ಕಳು ಹಂತಹಂತವಾಗಿ ಜೋಡಿಸುವ ಮತ್ತು ನಿರ್ಮಿಸುವ ಕಡೆಗೆ ಗಮನ ಹರಿಸುತ್ತಾರೆ. ಅಂತೆಯೇ ಮನೆ, ಗೂಡು ಮತ್ತು ಮಣ್ಣಿನ ಪಾತ್ರೆ ಇತ್ಯಾದಿಗಳನ್ನು ತಯಾರಿಸಲು ಪ್ರಯತ್ನಿಸುತ್ತಾರೆ. ಶಾಲೆಯಲ್ಲಿ ಮಣ್ಣು, ಕಾಗದ ಮತ್ತು ಕೈ ಕೆಲಸವನ್ನು ಜಾರಿಯಲ್ಲಿರಿಸುವ ಮೂಲಕ ಮತ್ತು ಶೈಕ್ಷಣಿಕ ಆಟ ಅಂದರೆ ಕಟ್ಟಿಗೆ ಮತ್ತು ಪ್ಲಾಸ್ಟಿಕ್‌ನ ಬ್ಲಾಕ್, ಮೆಕ್ಕೋಸ್ ಇತ್ಯಾದಿಗಳ ವ್ಯವಸ್ಥೆ ಮಾಡುವ ಮೂಲಕ ಆಟದಲ್ಲಿ ಮಕ್ಕಳ ಸೃಜನಾತ್ಮಕ ಪ್ರತಿಭೆಗಳನ್ನು ಉತ್ತೇಜಿಸಲು ಮತ್ತು ಸರಿಯಾದ ದಿಕ್ಕಿನಲ್ಲಿ ಸಾಗಿಸಲು ಸಾಧ್ಯವಿದೆ.

3. ಒಟ್ಟು ಸೇರಿ ಆಡುವುದು

ನಾಲ್ಕೈದು ವರ್ಷ ಪ್ರಾಯದ ವರೆಗಿನ ಮಕ್ಕಳು ಸಾಮಾನ್ಯವಾಗಿ ಒಂದೋ ಒಬ್ಬಂಟಿಯಾಗಿ ಆಡುತ್ತಾರೆ. ಇಲ್ಲವೇ ಇತರ ಮಕ್ಕಳ ಜತೆ ಕುಳಿತುಕೊಂಡು ತಂತಮ್ಮ ಆಟಿಕೆಗಳೊಂದಿಗೆ ಪ್ರತ್ಯೇಕವಾಗಿ ಆಡುವುದನ್ನು ಇಷ್ಟ ಪಡುತ್ತಾರೆ. ಈ ಪ್ರಾಯದ ಗಂಡು, ಹೆಣ್ಣು ಮಕ್ಕಳ ಆಟದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ, ಆ ಬಳಿಕ ಕ್ರಮೇಣ ತಂಡ ರಚಿಸಿ, ಒಟ್ಟು ಸೇರಿ ಆಟವಾಡಲು ಪ್ರಾರಂಭಿಸುತ್ತಾರೆ. ಹುಡುಗರು ಹುಡುಗರ ಜತೆ ಮತ್ತು ಹುಡುಗಿಯರು ಹುಡುಗಿಯರ ಜತೆ. ಇನ್ನು ಎಲ್ಲ ಮಕ್ಕಳೂ ಒಟ್ಟು ಸೇರಿ ಗುಲ್ಲೆಬ್ಬಿಸುವವರು, ಅರ್ಥಹೀನ ಶಬ್ದ ಹೊರಡಿಸುವವರು, ವ್ಯರ್ಥ ಮಾತುಕತೆಯಲ್ಲಿ ತೊಡಗುವವರು, ರಾಗ-ತಾಳದೊಂದಿಗೆ ಅನರ್ಥ ಪದ್ಯ ಹಾಡುವವರು, ಶಬ್ದಗಳನ್ನು ಅನುಕರಿಸುವವರು, ವಿಭಿನ್ನ ವೇಷ ಹಾಕುವವರು, ಮದುವೆಯಾಟ ಆಡುವವರು. ಆಟದಲ್ಲಿಯೇ ಹಲವು ಸಭೆಗಳನ್ನು ನಡೆಸುವರು. ಓಡಾಟ, ಜಿಗಿದಾಟ, ಪರಸ್ಪರ ಹಿಂಬಾಲಿಸುವುದು ಅಡಗುವುದು, ಹುಡುಕುವುದು, ಜಾನುವಾರುಗಳ ಹಿಂದೆ ಓಡುವುದು, ಅವುಗಳನ್ನು ತರತರವಾಗಿ ಪೀಡಿಸುವುದು ಮತ್ತು ಅವುಗಳ ಮೇಲೆ ಸವಾರರಾಗುವುದು, ತಂಡ ಕಟ್ಟಿ ಅಲ್ಲಿಇಲ್ಲಿ ತಿರುಗಾಡುವುದು, ಮರ ಹತ್ತುವುದು, ಹೊಂಡ-ಸುರಂಗದೊಳಗೆ ನುಸುಳುವುದು ಇತ್ಯಾದಿಗಳು ಅವರ ಹಂತಹಂತದ ಆಟಗಳಾಗಿರುತ್ತವೆ. ಹೀಗೆ ಪ್ರತಿಯೊಂದು ಮಗುವಿಗೂ ಆಡಲು ಮತ್ತು ತನ್ನ ಆಟವನ್ನು ತೋರಿಸಲು ಅವಕಾಶ ದೊರೆಯುವಂತಾಗಲು ಆರಂಭದಲ್ಲಿ ತಂಡಗಳು ಸಣ್ಣದಾಗಿರುತ್ತವೆ. ಸ್ಪರ್ಧಾತ್ಮಕ ಆಟಗಳನ್ನಾಡುವಾಗ ಮಕ್ಕಳು ಮೊದಮೊದಲು ಭಯಪಡುತ್ತಾರೆ. ಏಕೆಂದರೆ ಅವರು ಸೋಲಲು ಇಷ್ಟಪಡುವುದಿಲ್ಲ. ಒಂದು ವೇಳೆ ಸ್ಪರ್ಧೆ ಏರ್ಪಟ್ಟು, ಅದರಲ್ಲಿ ಮಕ್ಕಳು ಸೋತು ಹೋದರೆಂದಿಟ್ಟುಕೊಳ್ಳಿ, ಆಗ ಅವರು ಅತ್ತು ರಂಪಾಟ ಶುರು ಮಾಡುತ್ತಾರೆ, ಜಗಳಾಡುತ್ತಾರೆ, ಕಿರುಚಾಡುತ್ತಾರೆ ಅಥವಾ ಆಟವನ್ನೇ ಹಾಳು ಮಾಡುತ್ತಾರೆ, ಮೋಸ ಮಾಡುತ್ತಾರೆ ಮತ್ತು ಸುಳ್ಳು ಹೇಳಲು ತೊಡಗುತ್ತಾರೆ. ಈ ಹಂತದಲ್ಲಿ ಮಕ್ಕಳನ್ನು ವಿಶೇಷವಾಗಿ ಸಂಭಾಳಿಸುವ ಅಗತ್ಯವಿದೆ. ಕ್ರಮೇಣ ಅವರಲ್ಲಿ

ಸ್ಪರ್ಧಾ ಮನೋಭಾವವನ್ನು ಬೆಳೆಸಬೇಕಾಗಿದೆ ಮತ್ತು ಜಯಾಪಜಯಗಳನ್ನು ಲೆಕ್ಕಿಸದೆ ಪ್ರಾಮಾಣಿಕತೆಯೊಂದಿಗೆ ಆಟವಾಡಲು ಉಪದೇಶಿಸಬೇಕು. ಆರಂಭದಲ್ಲಿ ಒಟ್ಟು ಸೇರಿ ಆಡುವಂತಹ ಮತ್ತು ಸ್ಪರ್ಧೆ, ಹೋಲಿಕೆ ಕಡಿಮೆಯಿರುವಂತಹ ಆಟಗಳನ್ನು ಆಡಿಸಬೇಕು. ಉದಾ: ನಾಟಕ. ಇದರಲ್ಲಿ ಪ್ರತಿ ಮಗುವಿಗೂ ವಿಭಿನ್ನ ಪಾತ್ರ ಇರುತ್ತದೆ. ಒಂದು ಮಗು ಡಾಕ್ಟರ್ ಆದರೆ, ಇನ್ನೊಂದು ರೋಗಿ, ಮತ್ತೊಂದು ಕಂಪೌಂಡರಾದರೆ ಮಗದೊಂದು ಶುಶ್ರೂಷಕ... ಕೆಲವು ಮಕ್ಕಳು ಅತಿಥಿಗಳಾಗುತ್ತಾರೆ. ಇನ್ನು ಕೆಲವು ಮಕ್ಕಳು ಆತಿಥೇಯರು. ಕ್ರಮೇಣ ಮಕ್ಕಳು ಸ್ಪರ್ಧಾತ್ಮಕ ಆಟಗಳಲ್ಲಿ ಆಸಕ್ತಿ ಹೊಂದುತ್ತಾರೆ ಮತ್ತು ನೀತಿ-ನಿಯಮಗಳಿಗೆ ಬದ್ಧರಾಗುತ್ತಾರೆ ಹಾಗೂ ತಂಡದ ನಾಯಕರ ಅನುಸರಣೆ ಮಾಡುತ್ತಾರೆ. ಆರಂಭದಲ್ಲಿ ಅವರಿಗೆ ಕಪ್ಪೆ ಓಟ; ಚಮಚದಲ್ಲಿ ಜಿಲೇಬಿ ಅಥವಾ ಲಿಂಬೆ ಇತ್ಯಾದಿಯಿಟ್ಟು ಓಟ, ಹುಲಿ ಹುಲ್ಲೆ, ಕಣ್ಣಾಮುಚ್ಚಾಲೆ, ಕಣ್ಣಿಗೆ ಪಟ್ಟಿ ಕಟ್ಟಿ ಹಿಡಿಯುವಾಟ ಇತ್ಯಾದಿಗಳನ್ನು ಆಡಿಸಬೇಕು. ಎಂಟರಿಂದ ಹದಿಮೂರು ವರ್ಷದ ವರೆಗೆ ವಿಭಿನ್ನ ರೀತಿಯ ಓಟ, ಎತ್ತರ-ಉದ್ದ ಜಿಗಿತ, ಚೆಂಡು-ದಾಂಡು, ಕಬಡ್ಡಿ, ಹಗ್ಗಜಗ್ಗಾಟ ಇತ್ಯಾದಿಗಳಲ್ಲಿ ಭಾಗವಹಿಸಲು ಅವಕಾಶ ಒದಗಿಸಬೇಕು. ಕೆಲವೊಮ್ಮೆ ಶೈಕ್ಷಣಿಕ ಪ್ರವಾಸ ಅಥವಾ ಪಿಕ್‌ನಿಕ್‌ಗಾಗಿ ಹೊರಗೆ ಕರಕೊಂಡು ಹೋಗಬೇಕು. ದುರ್ಬಲ ಮತ್ತು ವಿವಶರೊಂದಿಗೆ ಸಹಾನುಭೂತಿಯ ವ್ಯವಹಾರ ಹಾಗೂ ಅವರ ಪೋಷಣೆಯ ಭಾವನೆಯು ಸ್ವಾಭಾವಿಕವಾಗಿದೆ. ಈ ಭಾವನೆಯನ್ನು ಹೆಚ್ಚಿಸಲು ಯಾವುದಾದರೂ ಪಕ್ಷಿ ಅಥವಾ ಪ್ರಾಣಿ ಉದಾ: ಕೋಳಿ, ಪಾರಿವಾಳ, ಆಡು, ಮೊಲ ಇತ್ಯಾದಿಗಳನ್ನು ಸಾಕುವ; ಹೂಗಿಡ ಬೆಳೆಸುವ, ಪುಟ್ಟ ತಮ್ಮ-ತಂಗಿಯರ ಅಥವಾ ದುರ್ಬಲ ಮಿತ್ರರ ಮೇಲ್ವಿಚಾರಣೆಯ ಹೊಣೆಯನ್ನು ಅವರ ಸುಪರ್ದಿಗೆ ಒಪ್ಪಿಸಬೇಕು. ಇದರಿಂದಾಗಿ ಮಕ್ಕಳು ಆಟದಲ್ಲಿ ಜಾನುವಾರುಗಳನ್ನು ಸತಾಯಿಸುವುದರಿಂದ, ದುರ್ಬಲರನ್ನು ದಮನಿಸುವುದರಿಂದ ಮತ್ತು ಪರಸ್ಪರ ಜಗಳಾಡುವುದರಿಂದ ದೂರವುಳಿಯುವರು.

ಹದಿಹರೆಯಕ್ಕೆ ಕಾಲಿಸಿರಿದ ಮೇಲೆ ಮಕ್ಕಳ ಆಟವು ಹೆಚ್ಚು ವ್ಯವಸ್ಥಿತವಾಗತೊಡಗುತ್ತದೆ. ಸ್ಪರ್ಧಾ ಮನೋಭಾವ ಹೆಚ್ಚುತ್ತದೆ. ಗುಲ್ಲುಗದ್ದಲ ಕಡಿಮೆಯಾಗಿ ಚಟುವಟಿಕೆ ಹೆಚ್ಚುತ್ತದೆ. ಸ್ಥಾಯಿ ತಂಡಗಳು ಮತ್ತು ಕ್ಲಬ್ಬುಗಳು ರಚನೆಯಾಗುತ್ತವೆ. ಇತರ ಟೀಮು ಮತ್ತು ಕ್ಲಬ್ಬುಗಳಿಗೆ ಸವಾಲೊಡ್ಡುವ ಮತ್ತು ಅವುಗಳನ್ನೆದುರಿಸುವ ಚಿಂತೆ ಬೆಳೆದು ಬರುತ್ತದೆ. ತಂಡ ರಚಿಸಿ ವಿಹಾರಕ್ಕಾಗಿ ಮನೆಯಿಂದ ಬಹುದೂರ ಹೊರಡುವ ಆಸಕ್ತಿ ಬೆಳೆಯುತ್ತದೆ. ಬೌದ್ಧಿಕ ಸ್ಪರ್ಧೆ, ಒಗಟು ಬಿಡಿಸುವುದು, ಕೈಚಳಕ ಮತ್ತು ಪ್ರದರ್ಶನಾ ಆಟಗಳಲ್ಲಿ ಆಸಕ್ತಿ ಬೆಳೆಯುತ್ತದೆ. ಈ ಹಂತದಲ್ಲಿ ಹುಡುಗರಿಗೆ ಫುಟ್‌ಬಾಲ್, ವಾಲಿಬಾಲ್, ರಿಂಗ್‌ಬಾಲ್, ಬ್ಯಾಡ್ಮಿಂಟನ್, ಪಿಂಗ್‌ಪಾಂಗ್, ಕ್ರಿಕೆಟ್, ಹಾಕಿ, ಹಗ್ಗಜಗ್ಗಾಟ, ಕಬಡ್ಡಿ, ದೊಣ್ಣೆ ಕಾಳಗ, ಈಜು, ಸೈಕಲ್ ರೇಸ್, ಜಿಮ್, ಜಿಮ್ನಾಸ್ಟಿಕ್ ಮತ್ತು ಮ್ಯಾಚ್, ಸ್ಪರ್ಧೆ ಇತ್ಯಾದಿಗಳಲ್ಲಿ ಪಾಲ್ಗೊಳ್ಳುವ

ಅವಕಾಶ ಒದಗಬೇಕು. ಅಂತೆಯೇ ಹುಡುಗಿಯರಿಗೆ ತ್ರೋಬಾಲ್, ಹೋಮ್ ಪಿಕ್‌ನಿಕ್, ಇಂಡೋರ್ ಗೇಮ್ಸ್ ಮತ್ತು ಲಘು ವ್ಯಾಯಾಮಗಳಿಗೆ ಅವಕಾಶವಿರಬೇಕು. ಕ್ರಮೇಣ ಪರಿಶ್ರಮ ಮತ್ತು ಕಲೆ-ಪ್ರತಿಭೆಯ ಕೆಲಸಗಳಲ್ಲಿ ಸ್ಪರ್ಧಾ ಮನೋಭಾವ ಹುಟ್ಟಿಸಿ ಹುಡುಗ-ಹುಡುಗಿಯರಿಗೆ ಅದರ ಅಭ್ಯಾಸ ಮಾಡಿಸಬೇಕು. ಈ ಮೂಲಕ ಆರೋಗ್ಯವೂ ಉತ್ತಮವಾಗಿರುವುದು ಮತ್ತು ಅವರ ಸಮಯವು ಪ್ರಯೋಜನಕಾರಿ ಹಾಗೂ ಉಪಯುಕ್ತ ಕೆಲಸಗಳಲ್ಲಿ ಬಳಸಲ್ಪಡುವುದು.

ಆಟ, ಕೆಲಸ ಮತ್ತು ಬಿಟ್ಟಿ ಕೆಲಸ

ಈ ಮೂರೂ ವಿಧಗಳು ಮತ್ತು ಅವುಗಳಲ್ಲಿನ ವ್ಯತ್ಯಾಸವನ್ನು ಅರಿಯಬೇಕಾದರೆ ಈ ಕೆಳಗಿನ ಉದಾಹರಣೆಗಳನ್ನು ಅವಲೋಕಿಸುವುದು ಉತ್ತಮ:

1. ಒಬ್ಬಳು ಹುಡುಗಿ ತನ್ನ ಗೊಂಬೆಗಳಿಗೆ ಬಟ್ಟೆ ತಯಾರಿಸುತ್ತಿದ್ದಾಳೆ. ಆಕೆ ಹೊಲಿಯುವ ಮತ್ತು ಪೋಣಿಸುವ ಕೆಲಸದಲ್ಲಿ ಮಗ್ನಳಾಗಿದ್ದಾಳೆ ಅಥವಾ ಆಕೆ ತನ್ನ ಗೊಂಬೆಗಳ ವಿವಾಹ ನಡೆಸುತ್ತಿದ್ದಾಳೆ ಮತ್ತು ಅತಿಥಿಗಳಿಗೆ ಔತಣವೇರ್ಪಡಿಸುತ್ತಿದ್ದಾಳೆ.
2. ಅದೇ ಹುಡುಗಿ ಶಾಲೆಗೆ ಹೋಗುತ್ತಾಳೆ. ಶಾಲೆಯಲ್ಲಿ ಹೊಲಿಗೆ ಅಥವಾ ಅಡುಗೆ ತಯಾರಿಯ ತರಬೇತಿಗೆ ಒಂದು ತರಗತಿಯನ್ನಿರಿಸಲಾಗಿದೆ. ಹೊಲಿಗೆ ತರಬೇತಿ ಸಮಯದಲ್ಲಿ ಆಕೆ ಹೊಲಿಯುವುದರಲ್ಲಿಯೂ ಅಡುಗೆ ತಯಾರಿಯ ತರಬೇತಿ ಸಮಯದಲ್ಲಿ ಅಡುಗೆ ಮಾಡುವುದರಲ್ಲಿಯೂ ಮಗ್ನಳಾಗಿದ್ದಾಳೆ.
3. ಅದೇ ಹುಡುಗಿ ತನ್ನ ಗೊಂಬೆಗಳೊಂದಿಗೆ ಆಟವಾಡುತ್ತಿದ್ದಾಳೆ. ಅವಳ ಗೆಳತಿಯೂ ಅವಳ ಜತೆ ಕುಳಿತು ಗೊಂಬೆಯ ವಸ್ತ್ರ-ಆಭರಣಗಳನ್ನೆಲ್ಲ ನೋಡುತ್ತಿದ್ದಾಳೆ. ಅಷ್ಟರಲ್ಲಿ ಅವಳ ತಾಯಿ, ಅವಳನ್ನೆಬ್ಬಿಸಿ ಅಡುಗೆ ತಯಾರಿಸಲು ಅಥವಾ ತಮ್ಮನ ಇಜಾರು ಹೊಲಿಯಲು ಹೇಳುತ್ತಾಳೆ. ಈಗ ಆ ಹುಡುಗಿ ಅಡುಗೆ ತಯಾರಿ ಅಥವಾ ಇಜಾರು ಹೊಲಿಯುವುದರಲ್ಲಿ ವ್ಯಸ್ತಳಾಗಿದ್ದಾಳೆ.

ಈ ಮೇಲಿನ ಮೂರೂ ಸ್ಥಿತಿಯಲ್ಲಿ ಕೆಲಸವು ಒಂದೇ ರೀತಿಯದ್ದಾಗಿದೆ. ಅಂದರೆ ಹೊಲಿಗೆ ಅಥವಾ ಅಡುಗೆ. ಆದರೆ ಈ ಮೂರು ಸ್ಥಿತಿಯಲ್ಲೂ ನಿಬಿಡತೆಯ ಸಮಯ ಆ ಹುಡುಗಿಯ ಮನ-ಮಸ್ತಿಷ್ಕಗಳ ಅವಸ್ಥೆ ಒಂದೇ ತೆರನಾಗಿರುವುದಿಲ್ಲ, ಬದಲಾಗಿ ಭಿನ್ನಭಿನ್ನವಾಗಿರುತ್ತದೆ. ಬೌದ್ಧಿಕ ಮತ್ತು ಮಾನಸಿಕ ಅವಸ್ಥೆಗಳಲ್ಲಿನ ವೈರುಧ್ಯದ ಕಾರಣವಾಗಿಯೇ ಆ ಕೆಲಸಗಳಲ್ಲಿ, ಮೊದಲನೆಯದು ಹುಡುಗಿಯ ಮಟ್ಟಿಗೆ ಆಟವಾಗಿಯೂ ಎರಡನೆಯದು ಕೆಲಸವಾಗಿಯೂ ಮೂರನೆಯದು ಬಿಟ್ಟಿ ಕೆಲಸವಾಗಿಯೂ ಕಾಣುತ್ತದೆ.

ಅಂದರೆ ಆಟ, ಕೆಲಸ ಮತ್ತು ಬಿಟ್ಟಿ ಕೆಲಸಗಳು ಕೆಲಸದ ರೀತಿ ಮತ್ತು ಅವಸ್ಥೆಯನ್ನು ಅವಲಂಬಿಸಿರುವುದಲ್ಲ, ಬದಲಾಗಿ ಒಂದು ಕೆಲಸದಲ್ಲಿ ತೊಡಗಿಕೊಳ್ಳುವಾಗಿನ ಸಮಯದಲ್ಲಿ

ಮನಮಸ್ತಿಷ್ಕಗಳಲ್ಲಿ ಉಂಟಾಗುವ ಅವಸ್ಥೆಯನ್ನು ಅವಲಂಬಿಸಿದೆ ಎಂಬುದು ಇದರಿಂದ ಚೆನ್ನಾಗಿ ತಿಳಿದುಕೊಳ್ಳಬಹುದಾಗಿದೆ.

ಆಟ: ಅನ್ವೆಚ್ಛಿಕವಾಗಿ ಗಮನ ಕೇಂದ್ರಿತವಾಗುವಂತಹ, ಸ್ವಾಭಾವಿಕವಾಗಿ ಆಸಕ್ತಿ ಹುಟ್ಟಿಕೊಳ್ಳುವಂತಹ ಮತ್ತು ಸ್ವತಂತ್ರ್ಯ, ಸಂತೋಷದ ಅನುಭವವಾಗುವಂತಹ ಕಾರ್ಯ.

ಕೆಲಸ: ಇದರಲ್ಲಿ ಗಮನ ಮತ್ತು ಆಸಕ್ತಿಯು ಐಚ್ಛಿಕವಾಗಿರುತ್ತದೆ. ನೇರವಾಗಿ ಈ ಕಾರ್ಯದಲ್ಲಿ ಸ್ವಾಭಾವಿಕ ಆಕರ್ಷಣೆ ಇರುವುದಿಲ್ಲ, ಸ್ವಾತಂತ್ರ್ಯವೂ ಸೀಮಿತವಾಗಿರುತ್ತದೆ. ಒಂದು ನಿರ್ದಿಷ್ಟ ವಿಧಾನದಲ್ಲಿಯೇ ಅದನ್ನು ನೆರವೇರಿಸಬೇಕಾಗುತ್ತದೆ. ಈ ಕಾರ್ಯದಲ್ಲಿ ಸಂತೋಷ ಇರಬೇಕೆಂದೇನೂ ಇಲ್ಲ.

ಬಿಟ್ಟಿ ಕೆಲಸ: ತದ್ವಿರುದ್ಧವಾಗಿ ವ್ಯಕ್ತಿಯ ಆಸಕ್ತಿಯನ್ನು ಕಡೆಗಣಿಸಿ ಮತ್ತು ಆತನ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿ ಆತನ ಮೇಲೆ ಬಾಹ್ಯವಾಗಿ ಹೇರಲಾಗುವ ಕಾರ್ಯವೇ ಬಿಟ್ಟಿ ಕೆಲಸ. ಆತ ತನ್ನ ಇಚ್ಛೆಗೆ ವಿರುದ್ಧವಾಗಿ ಅದನ್ನು ಮಾಡಬೇಕಾಗುತ್ತದೆ.

ಆಟವೆಂಬುದು ಸ್ವಯಂ ಒಂದು ಉದ್ದೇಶವಾಗಿರುವ ಕಾರ್ಯವಾಗಿದೆ. ಕೆಲಸವೆಂಬುದು ಸ್ವತಃ ಒಂದು ಉದ್ದೇಶವಾಗಿರುವುದಿಲ್ಲ, ಬದಲಾಗಿ ಯಾವುದೋ ಒಂದು ಪ್ರಜ್ಞಾಪೂರ್ವಕವಾದ ಉದ್ದೇಶದ ಈಡೇರಿಕೆಯ ಮಾಧ್ಯಮವಾಗಿದೆ. ಆ ಕಾರ್ಯವೆಸಗುತ್ತಿರುವವನ ದೃಷ್ಟಿಯು ಸದಾ ಅದರಲ್ಲಿಯೇ ನೆಟ್ಟಿರುತ್ತದೆ. ಬಿಟ್ಟಿ ಕೆಲಸದಲ್ಲಿ ವ್ಯಕ್ತಿಯು ಬೇರೊಬ್ಬರ ಉದ್ದೇಶ ಈಡೇರಿಕೆಯ ಸಾಧನವಾಗುತ್ತಾನೆ ಅಥವಾ ಉದ್ದೇಶವು ಅವನ ದೃಷ್ಟಿಯಿಂದ ಮರೆಯಾಗಿರುತ್ತದೆ ಮತ್ತು ಇತರರ ಕೆಲಸವೆಂದು ಬಗೆದು ಬೇರೆ ವಿಧಿಯಿಲ್ಲದೆ ಮಾಡಬೇಕಾಗುತ್ತದೆ.

ಕಾರ್ಯನಿರ್ವಹಣೆಯ ಇದೇ ವಿಶೇಷತೆಯು ಕೆಲವೊಮ್ಮೆ ಆಟವನ್ನು ಕೆಲಸವನ್ನಾಗಿ ಮಾತ್ರವಲ್ಲ, ಬಿಟ್ಟಿ ಕೆಲಸವನ್ನಾಗಿ ಮಾರ್ಪಡಿಸುತ್ತದೆ. ಉದಾಹರಣೆಗೆ: ಮಗು ತನ್ನ ಶಾಲೆಯಲ್ಲಿ ಸಂಜೆಯ ಆಟದಲ್ಲಿ ಸ್ವ ಇಚ್ಛೆಯಿಂದ ಭಾಗಿಯಾಗುತ್ತಾನೆ. ಈ ಸ್ಥಿತಿಯಲ್ಲಿ ಆತನಿಗೆ ಅದು ನಿಜವಾದ ಆಟವಾಗಿದೆ. ಇನ್ನೊಬ್ಬನೂ ಅದರಲ್ಲಿ ಸೇರುತ್ತಾನೆ– ಆದರೆ ಆಟವಾಡಿದರೆ ತನ್ನ ಆರೋಗ್ಯ ಉತ್ತಮವಿರುತ್ತದೆ ಅಥವಾ ಮಿತ್ರರನ್ನು ಸಂಧಿಸುವ ಅವಕಾಶ ಇರುತ್ತದೆ ಎಂಬ ಉದ್ದೇಶದಿಂದ ಆಡುತ್ತಾನೆ. ಈ ಸ್ಥಿತಿಯಲ್ಲಿ ಆಟವು ಅವನ ಪಾಲಿಗೆ ಕೆಲಸವಾಗಿರುತ್ತದೆಂಬುದು ಸ್ಪಷ್ಟ. ಮತ್ತೊಬ್ಬ ಹುಡುಗನಿಗೆ ಬೇರೆಯೇ ವಿಷಯದಲ್ಲಿ ಆಸಕ್ತಿ. ಆದರೆ ಆತ ನಿಯಮಕ್ಕೆ ಬದ್ಧನಾಗಿ ಮತ್ತು ಶಿಕ್ಷೆಗೆ ಹೆದರಿ ಆಟದಲ್ಲಿ ಭಾಗಿಯಾಗುತ್ತಾನೆ. ಹಾಗಾಗಿ ಆಟವು ಅವನ ಮಟ್ಟಿಗೆ ಬಿಟ್ಟಿ ಕೆಲಸವಾಗುತ್ತದೆ. ಅದೇ ರೀತಿ ಆಟದ ಮೇಲ್ವಿಚಾರಕನ ಕಠಿಣ ಧೋರಣೆ ಮತ್ತು ಅನಗತ್ಯ ನಿರ್ಬಂಧಗಳೂ ಆಟವನ್ನು ಸಾಮಾನ್ಯವಾಗಿ ಕೆಲಸ ಮತ್ತು ಬಿಟ್ಟಿ ಕೆಲಸವನ್ನಾಗಿ ಮಾರ್ಪಡಿಸುತ್ತದೆ.

ತದ್ವಿರುದ್ಧವಾಗಿ, ಕೆಲಸದಲ್ಲಿ ಆಟದ ಉತ್ಸಾಹವನ್ನು ಹುಟ್ಟಿಸಿದರೆ, ಅಂದರೆ ಮಕ್ಕಳ ಆಸಕ್ತಿ, ಸ್ವಾತಂತ್ರ್ಯ ಮತ್ತು ಸಂತೋಷವನ್ನು ಸಾದ್ಯಂತ ಪರಿಗಣಿಸಿದರೆ ಹಾಗೂ ಬಾಹ್ಯ ಒತ್ತಡ ಮತ್ತು ನಿರ್ಬಂಧವು ಆದಷ್ಟು ಕಡಿಮೆ ಇದ್ದರೆ, ಅವರು ಕೆಲಸವನ್ನು ಆಟವೆಂದೇ ಭಾವಿಸಿ ಅದರಲ್ಲಿ ಸಂಪೂರ್ಣ ಗಮನ ಮತ್ತು ಏಕಾಗ್ರತೆಯೊಂದಿಗೆ ಪಾಲುಗೊಳ್ಳುವರು. ಬಲವಂತದಿಂದಾಗಿ ಅವರ ವ್ಯಕ್ತಿತ್ವ ಮತ್ತು ಕಾರ್ಯಕ್ಷಮತೆಯ ಮೇಲೆ ಉಂಟಾಗುವ ದುಷ್ಪರಿಣಾಮಗಳಿಂದಲೂ ಅವರು ಸುರಕ್ಷಿತರಾಗಿರುವರು.

ಆಟದೊಂದಿಗೆ ಶಿಕ್ಷಣ

ಸಣ್ಣ ಮಕ್ಕಳು ಆಟವನ್ನು ಬಹಳ ಇಷ್ಟಪಡುತ್ತಾರೆ, ಕೆಲಸಕ್ಕೆ ಅವರು ಅಂಜುತ್ತಾರೆ ಮತ್ತು ಬಿಟ್ಟಿ ಕೆಲಸವು ಅವರ ಸ್ವತಂತ್ರ ಪ್ರವೃತ್ತಿಯ ಮೇಲೆ ಭಾರವಾಗಿ ಪರಿಣಮಿಸುತ್ತದೆ. ಆಟದಲ್ಲಿ ಅವರು ಮನಸಾರೆ ತೊಡಗಿಕೊಳ್ಳುತ್ತಾರೆ ಮತ್ತು ಸಂಪೂರ್ಣ ಆಸಕ್ತಿ ಹಾಗೂ ತನ್ಮಯತೆಯೊಂದಿಗೆ ಭಾಗಿಯಾಗುತ್ತಾರೆ. ಇತರ ಯಾವುದೇ ಕೆಲಸವಿದ್ದರೂ ತಪ್ಪಿಸಿಕೊಳ್ಳುತ್ತಾರೆ. ಆಟವು ಮಕ್ಕಳ ಇಷ್ಟದ ಕಾರ್ಯ ಮಾತ್ರವಲ್ಲ, ಜೀವಂತಿಕೆಯ ಲಕ್ಷಣವಾಗಿದೆ. ಆರೋಗ್ಯ ಮತ್ತು ಕ್ಷೇಮದ ರೂವಾರಿ, ಬೆಳವಣಿಗೆಗೆ ಸಹಕಾರಿ ಮತ್ತು ಶಿಕ್ಷಣ-ತರಬೇತಿಯ ಪರಿಣಾಮಕಾರಿ ಮಾಧ್ಯಮವಾಗಿದೆ. ತದ್ವಿರುದ್ಧವಾಗಿ ಸಾಂಪ್ರದಾಯಿಕ ಪಾಠ ಪದ್ಧತಿಯು ಸಾಮಾನ್ಯವಾಗಿ ಅವರ ಮಟ್ಟಿಗೆ ಬಿಟ್ಟಿ ಕೆಲಸ ಮತ್ತು ಕೋಮಲ ಸ್ವಭಾವದ ಮೇಲೆ ಹೊರೆಯಾಗಿ ಪರಿಣಮಿಸುತ್ತದೆ. ಓದು-ಬರೆಹದಂತಹ ಶುಷ್ಕ ಮತ್ತು ಏಕತಾನತೆಯ ಕೆಲಸದಿಂದ ಅವರ ಮನ ರೋಸಿ ಹೋಗುತ್ತದೆ. ಹಾಗಾಗಿ ಅವರು ಬೇಕೋ ಬೇಡವೋ ಎಂಬಂತೆ ಒಲ್ಲದ ಮನಸ್ಸಿನಿಂದ ಅದರಲ್ಲಿ ಭಾಗಿಯಾಗುತ್ತಾರೆ. ಆದ್ದರಿಂದ ಸಣ್ಣ ಮಕ್ಕಳಿಗೆ ಆಟವಾಡಿಸುತ್ತ ಶಿಕ್ಷಣ ನೀಡುವ ಮತ್ತು ಶಾಲೆಯ ವಿವಿಧ ಕೆಲಸಗಳಲ್ಲಿ ಆಟದ ರೂಪ ನೀಡುವ ಬಗ್ಗೆ ಬಹಳ ಒತ್ತು ನೀಡಲಾಗುತ್ತದೆ. ಆದರೆ ಮಕ್ಕಳಿಗೆ ಜೀವನ ಪರ್ಯಂತ ಆಟ ವಿನೋದಗಳನ್ನೇ ಅಭ್ಯಾಸ ಮಾಡಿಸಬೇಕೆಂದು ಅದರ ಅರ್ಥವಲ್ಲ, ಬದಲಾಗಿ ಪುಟ್ಟ ಮಕ್ಕಳಿಗೆ ಆಟವಾಡಲು ಹೆಚ್ಚು ಅವಕಾಶ ನೀಡಬೇಕು, ಆಟವನ್ನು ಸಾದ್ಯಂತ ಶಿಕ್ಷಣದ ಮಾಧ್ಯಮವನ್ನಾಗಿ ಮಾಡಬೇಕು ಮತ್ತು ಕೆಲಸಗಳಲ್ಲಿ ಆಟದ ಹುಮ್ಮಸ್ಸನ್ನು ಹುಟ್ಟಿಸಿ, ಹಂತಹಂತವಾಗಿ ಪರಿಶ್ರಮ ಹಾಗೂ ತನ್ಮಯತೆಯೊಂದಿಗೆ ಕೆಲಸ ಮಾಡಲು ಅಭ್ಯಾಸ ಮಾಡಿಸಬೇಕು. ಉದ್ದೇಶ ಶಿಕ್ಷಣ-ತರಬೇತಿಯಾಗಿದೆಯಷ್ಟೇ. ಆಟವು ಅದನ್ನು ಪೂರೈಸುವ ಮಾಧ್ಯಮವಾಗಿದೆ.

ಆಟದ ಪ್ರಯೋಜನಗಳು

ಆಟಗಳಿಂದ ಮಕ್ಕಳಿಗೆ ನೈಜ ಆನಂದ ದೊರೆಯುತ್ತದೆ, ಅವರ ದುಗುಡ ದೂರವಾಗುತ್ತದೆ, ಅವರ ಗೊಂದಲ-ಸಮಸ್ಯೆಗಳು ನಿವಾರಣೆಯಾಗುತ್ತವೆ, ಅವರ

ಮುಖಗಳು ಪ್ರಫುಲ್ಲವಾಗಿರುತ್ತವೆ. ಅವರ ಭಾವನೆಗಳಿಗೆ ಸಮಾಧಾನವೊದಗುತ್ತದೆ ಮತ್ತು ಒಟ್ಟಾರೆಯಾಗಿ ಅವರ ವ್ಯಕ್ತಿತ್ವವನ್ನು ಪರಿಪೂರ್ಣವಾಗಿ ಬೆಳೆಸುವಲ್ಲಿ ಬಹಳಷ್ಟು ಸಹಾಯವೊದಗುತ್ತದೆ.

ಆಟಗಳಿಂದ ಮಕ್ಕಳಿಗೆ ಈ ಕೆಳಗಿನ ಪ್ರಯೋಜನಗಳು ದೊರೆಯುತ್ತವೆ:

1. ದೈಹಿಕ ಪ್ರಯೋಜನ

ಆಟದಲ್ಲಿ ದೇಹವು ಸಾಕಷ್ಟು ಚಟುವಟಿಕೆಯಿಂದಿರುತ್ತದೆ ಮತ್ತು ದೈಹಿಕ ಪರಿಶ್ರಮದ ಅಗತ್ಯ ಬೀಳುತ್ತದೆ. ಆದ್ದರಿಂದ ಶ್ವಾಸೋಚ್ಛ್ವಾಸ, ರಕ್ತಸಂಚಲನೆ, ಪಚನ ವ್ಯವಸ್ಥೆ, ಮಲಮೂತ್ರ ವಿಸರ್ಜನೆ ಎಲ್ಲವೂ ಸ್ವಸ್ಥವಾಗಿರುತ್ತವೆ. ದೇಹದ ಅಂಗಾಂಗಗಳ ಮೇಲೆ ನಿಯಂತ್ರಣ ಲಭಿಸುತ್ತದೆ. ಅಂಗಾಂಗಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತವೆ. ಉದ್ಯೋಗ, ಪರಿಶ್ರಮಕ್ಕಾಗಿ ದೇಹದಲ್ಲಿ ಶಕ್ತಿ ತುಂಬುತ್ತದೆ ಮತ್ತು ರೋಗ ನಿರೋಧಕ ಶಕ್ತಿಯು ಹುಟ್ಟಿಕೊಳ್ಳುತ್ತದೆ. ಒಟ್ಟಿನಲ್ಲಿ ಆರೋಗ್ಯ ಸುಸ್ಥಿತಿಯಲ್ಲಿರುತ್ತದೆ ಮತ್ತು ಬೆಳವಣಿಗೆಯಲ್ಲಿ ತುಂಬ ಸಹಕಾರಿಯಾಗಿರುತ್ತದೆ.

2. ಬೌದ್ಧಿಕ ಪ್ರಯೋಜನ

ಆಟದಲ್ಲಿ ಮಕ್ಕಳಿಗೆ ವಿಭಿನ್ನ ರೀತಿಯ ಪರಿಸ್ಥಿತಿ ಮತ್ತು ಹಲವು ತರದ ಸಂಗಡಿಗರನ್ನು ಎದುರಿಸಬೇಕಾಗಿ ಬರುತ್ತದೆ. ಅವೆಲ್ಲವನ್ನೂ ಮತ್ತು ಅವರೆಲ್ಲರನ್ನೂ ನಿಭಾಯಿಸಲು ಮಕ್ಕಳಿಗೆ ಚಿಂತಿಸುವ, ತಕ್ಕ ಸಮಯದಲ್ಲಿ ತೀರ್ಮಾನ ಮತ್ತು ಕ್ರಮ ಕೈಗೊಳ್ಳುವ ಅಗತ್ಯ ತಲೆದೋರುತ್ತದೆ. ಪರಿಸರ ಮತ್ತು ವಿಭಿನ್ನ ವಸ್ತುಗಳ ಕುರಿತು ತರತರವಾದ ಮಾಹಿತಿಗಳು ಲಭಿಸುತ್ತವೆ. ವಸ್ತುಗಳನ್ನು ಒಡೆಯುವ ಮತ್ತು ಜೋಡಿಸುವ ಹಾಗೂ ಹಿರಿಯರ ನಕಲು ಮಾಡುವ ಆಟದಿಂದ ಮಕ್ಕಳ ವಿಚಾರಶಕ್ತಿ ಹೆಚ್ಚುತ್ತದೆ; ಸಂಶೋಧನೆಯ ಪ್ರತಿಭೆ ಬೆಳೆದು ಬರುತ್ತದೆ. ತನ್ನ ಸಾಮರ್ಥ್ಯಗಳನ್ನು ಸರಿಯಾಗಿ ಅಂದಾಜಿಸುವ ಅವಕಾಶವೊದಗುತ್ತದೆ. ಲಕ್ಷ್ಯ ಮತ್ತು ಕಾರ್ಯ ಮಗ್ನತೆಯ ತರಬೇತಿ ದೊರೆಯುತ್ತದೆ. ಅನುಭವದಲ್ಲಿ ಹೆಚ್ಚಳವುಂಟಾಗುತ್ತದೆ. ವಾಸ್ತವ ಜಗತ್ತಿನಲ್ಲಿ ಹೆಚ್ಚಿನ ವೇಳೆ ಮಕ್ಕಳ ಪ್ರಾಕೃತಿಕ ಬೇಡಿಕೆ ಮತ್ತು ಸ್ವಾಭಾವಿಕ ಇಚ್ಛೆಗಳು ಈಡೇರುವುದಿಲ್ಲ, ಇದರಿಂದಾಗಿ ಅವರು ಚಿಂತೆ ಮತ್ತು ಮಾನಸಿಕ ದುಗುಡಕ್ಕೆ ಒಳಗಾಗುತ್ತಾರೆ. ಆಟಗಳ ಮುಖಾಂತರ ಅವರು ತಮ್ಮ ಕಲ್ಪನಾ ಲೋಕದಿಂದಲೇ ಆ ಎಲ್ಲ ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಾರೆ. ಈ ಪ್ರಕಾರ, ಅವರಿಗೆ ಸಮಸ್ಯೆಯಿಂದ ಮುಕ್ತಿ ದೊರೆಯುತ್ತದೆ ಹಾಗೂ ಮನಃಶ್ಶಾಂತಿ ಲಭಿಸುತ್ತದೆ.

3. ಸಾಮಾಜಿಕ ಪ್ರಯೋಜನ

ಸಾಮೂಹಿಕ ಆಟಗಳ ಮೂಲಕ ಮಕ್ಕಳು ತಮ್ಮ ಸಂಗಡಿಗರೊಂದಿಗೆ ಸಹಕಾರ, ಸಹಾನುಭೂತಿ; ನೀತಿನಿಯಮಗಳ ಪಾಲನೆ, ಸ್ಪರ್ಧೆಯಲ್ಲಿ ಸಮತೋಲನ,

ಅನುಸರಣೆ-ನೇತೃತ್ವ, ಹಕ್ಕುಚ್ಯುತಿ ಮತ್ತು ದಾಂಧಲೆಯನ್ನು ಎದುರಿಸುವ ಹಾಗೂ ತನ್ನ ಪಾಳಿಯನ್ನು ಕಾಯುವ ತರಬೇತಿಯನ್ನು ಪಡೆಯುತ್ತಾರೆ. ಸಂಗಡಿಗರನ್ನು ಗೌರವಿಸುವುದು, ಅರಾಜಕತೆಯ ವರೆಗೆ ಮುಂದುವರಿಯುವ ಸ್ವಾತಂತ್ರ್ಯವನ್ನು ಇತರರಿಗಾಗಿ ನಿಯಂತ್ರಿಸುವುದು ಮತ್ತು ಸಾಮೂಹಿಕ ಹಿತವನ್ನು ಪರಿಗಣಿಸಿ ತನ್ನ ಇಚ್ಛೆ ಹಾಗೂ ವೈಯಕ್ತಿಕ ಆಸಕ್ತಿಗಳನ್ನು ತ್ಯಜಿಸುವುದು ಇತ್ಯಾದಿಗಳನ್ನು ಮಕ್ಕಳು ಸಂಘಟಿತ ಆಟಗಳ ಮೂಲಕ ಕಲಿಯುತ್ತಾರೆ.

4. ನೈತಿಕ ಪ್ರಯೋಜನ

ಆಟಗಳ ಮೂಲಕ ಮಕ್ಕಳಲ್ಲಿ ಹಲವು ರೀತಿಯ ನೈತಿಕ ಗುಣಗಳೂ ಬೆಳೆಯುತ್ತವೆ. ಉದಾಹರಣೆಗೆ: ಸ್ಥಿರತೆ-ದೃಢತೆ, ಆತ್ಮನಿಯಂತ್ರಣ, ಆತ್ಮ ವಿಶ್ವಾಸ, ಪ್ರಾಮಾಣಿಕತೆ, ಅನುಸರಣಶೀಲತೆ ಇತ್ಯಾದಿ.

ಒಟ್ಟಿನಲ್ಲಿ ಆಟಗಳ ಮೂಲಕ ಮಕ್ಕಳ ಬೆಳವಣಿಗೆಯಲ್ಲಿ ಬಹಳ ಸಹಾಯವೊದಗುತ್ತದೆ. ಆ ಕಾರಣವಾಗಿ ಅಪ್ಪಟ ವ್ಯಕ್ತಿತ್ವ ಬೆಳೆಯುತ್ತದೆ. ಆದರೆ ನೆನಪಿರಲಿ, ಆ ಗುಣಗಳ ಬದಲು ಆಟವನ್ನೇ ಜೀವನವೆಂದು ಭಾವಿಸಿದರೆ ಅದು ಕೇವಲ ಆಟದ ಮೈದಾನದಲ್ಲಿ ಮಾತ್ರ ಪ್ರದರ್ಶನಕ್ಕೆ ಅರ್ಹವಾಗಿರುವುದು. ದೈನಂದಿನ ಜೀವನ ಮತ್ತಿತರ ರಂಗಗಳಲ್ಲಿ ಈ ಗುಣಗಳು ಪ್ರಕಟವಾಗಲೇ ಬೇಕೆಂದೇನೂ ಇಲ್ಲ. ಆದ್ದರಿಂದ ಆಟವನ್ನು ಕೇವಲ ಮಾಧ್ಯಮವನ್ನಾಗಿ ಪರಿಗಣಿಸಬೇಕು ಮತ್ತು ವಿಭಿನ್ನ ಕೆಲಸಗಳಲ್ಲಿ ಆಟದ ಹುಮ್ಮಸ್ಸನ್ನು ಹುಟ್ಟಿಸಿ ಕ್ರಮೇಣ ಆ ಗುಣಗಳನ್ನು ಬೆಳೆಸಲು ಪ್ರಯತ್ನಿಸಬೇಕು.

ಇವು ಮಕ್ಕಳ ಕೆಲವು ಪ್ರಮುಖ ಸ್ವಭಾವ ಮತ್ತು ಸ್ವಾಭಾವಿಕ ಒಲವುಗಳಾಗಿವೆ. ಮಕ್ಕಳ ಸರ್ವತೋಮುಖ ಬೆಳವಣಿಗೆ ಮತ್ತು ಸಂತುಲಿತ ಚಾರಿತ್ರ್ಯ ನಿರ್ಮಾಣಕ್ಕಾಗಿ ಅವುಗಳನ್ನು ಸರಿಯಾದ ದಿಕ್ಕಿನಲ್ಲಿ ನಡೆಸಲು ಸಂಪೂರ್ಣ ಪ್ರಯತ್ನಿಸಬೇಕು. ಅವುಗಳನ್ನು ತುಳಿಯುವುದು, ದಮನಿಸುವುದು ಅಥವಾ ತಪ್ಪು ಹಾದಿಗೆಳೆಯುವುದರಿಂದ ಮಕ್ಕಳ ವ್ಯಕ್ತಿತ್ವ ಘಾಸಿಗೊಳ್ಳುತ್ತದೆ ಹಾಗೂ ಅವರಲ್ಲಿ ತರತರದ ಕೆಡುಕುಗಳು ಬೇರು ಬಿಡುತ್ತವೆ. ಮಕ್ಕಳ ಶಿಕ್ಷಣ ತರಬೇತಿಯಲ್ಲಿ ಅವುಗಳನ್ನು ಸಾದ್ಯಂತ ಪರಿಗಣಿಸಬೇಕು.

◆ ◆ ◆

ಅಧ್ಯಾಯ - 12

ಮಕ್ಕಳ ತರಬೇತಿ

ತರಬೇತಿಯ ಶಬ್ದಾರ್ಥ ಪೋಷಿಸುವುದು ಎಂದಾಗಿದೆ. ಆದರೆ ಪಾರಿಭಾಷಿಕದಲ್ಲಿ ಚಾರಿತ್ರ್ಯ ಮತ್ತು ವ್ಯಕ್ತಿತ್ವವನ್ನು ಸುಧಾರಿಸುವುದಕ್ಕೆ ತರಬೇತಿ ಎನ್ನಲಾಗುತ್ತದೆ. ಮಕ್ಕಳಿಗೆ ತಮ್ಮ ಇಹ-ಪರಗಳಲ್ಲಿ ಯಶಸ್ಸು ಮತ್ತು ಮೋಕ್ಷ ಗಳಿಸಲು ಅಗತ್ಯವಿರುವ ಗುಣಗಳನ್ನು ಹಂತಹಂತವಾಗಿ ಬೆಳೆಸಿಕೊಳ್ಳಲು ಈ ಶಿಕ್ಷಣ-ತರಬೇತಿಯು ಸಹಕಾರಿಯಾಗುತ್ತದೆ.

ಈ ಕಾರ್ಯವು ಬಹಳ ಶ್ರಮದಾಯಕವಾಗಿದ್ದು, ಆದಕ್ಕೆ ಅಪಾರ ಸಹನೆಯ ಅಗತ್ಯವಿದೆ ಎಂಬುದು ಸ್ಪಷ್ಟ. ಅದಕ್ಕಾಗಿ ಕ್ರಮವಾಗಿ ಈ ಕೆಳಗಿನ ಅಂಶಗಳ ಕಡೆಗೆ ಗಮನ ಹರಿಸಬೇಕು-

1. ಮಕ್ಕಳ ಚಿಂತನಾ ವಿಧಾನ, ಜೀವನ ಸಿದ್ಧಾಂತ ಮತ್ತು ಒಳಿತು-ಕೆಡುಕುಗಳ ಪ್ರಜ್ಞೆ ಹಾಗೂ ಆಯ್ಕೆಯು ಅವರ ಸೃಷ್ಟಿಯ ಉದ್ದೇಶ ಮತ್ತು ಪರಮ ಗುರಿಯೊಂದಿಗೆ ತಾಳೆಯಾಗುವಂತಿರಬೇಕು. ಅಂದರೆ ವಿವಿಧ ವಿಷಯಗಳಲ್ಲಿ ಚಿಂತಿಸುವ ರೀತಿ, ಜೀವನದ ಕುರಿತು ಅವರ ಕಲ್ಪನೆ ಮತ್ತು ಒಳಿತು-ಕೆಡುಕುಗಳ ವ್ಯತ್ಯಾಸವನ್ನು ಅರಿಯುವ ಅವರ ಮಾನದಂಡವು ಅಲ್ಲಾಹನ ಸಜ್ಜನ ದಾಸನಲ್ಲಿ ಇರುವ ರೀತಿಯಂತೆ ತರಬೇತುಗೊಳಿಸಬೇಕು.
2. ಮಕ್ಕಳ ವಿಚಾರ, ಕಲ್ಪನೆ, ಚಿಂತನೆ, ಆಧಾರ-ಪ್ರಮಾಣಗಳು, ವಿಶ್ವಾಸ, ಭರವಸೆ ಮತ್ತು ಇರಾದೆಗಳನ್ನು ಉನ್ನತ, ಸ್ಪಷ್ಟ, ಯೋಗ್ಯ ಹಾಗೂ ಸುದೃಢಗೊಳಿಸಬೇಕು. ಏಕೆಂದರೆ ಇದುವೇ ಸುದೃಢ ಚಾರಿತ್ರ್ಯದ ಬುನಾದಿ ಮತ್ತು ಪರಿಶುದ್ಧ ನಡತೆಯ ಚಾಲಕ ಶಕ್ತಿಯಾಗಿದೆ.
3. ಅವರ ಸ್ವಭಾವ-ಭಾವನೆ ಮತ್ತು ಇಚ್ಛೆ-ಒಲವುಗಳಲ್ಲಿ ಬದ್ಧತೆಯನ್ನು ಬೆಳೆಸಿ ಅವುಗಳ ಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ನಡೆಸಬೇಕು.
4. ಅವರ ಕೊರತೆ ಮತ್ತು ದೌರ್ಬಲ್ಯಗಳನ್ನು ಸೂಕ್ತ ವಿಧಾನದಿಂದ ಸುಧಾರಿಸಬೇಕು. ಅವುಗಳ ಮೇಲೆ ನಿಯಂತ್ರಣ ಸಾಧಿಸಲು ಅವರಲ್ಲಿ ಆತ್ಮವಿಶ್ವಾಸ ಮತ್ತು ಪಶ್ಚಾತ್ತಾಪದ ಭಾವನೆಯನ್ನು ಬೆಳೆಸಬೇಕು.

5. ಅತ್ಯಂತ ಸಹನೆ ಮತ್ತು ಶಾಂತಚಿತ್ತತೆಯೊಂದಿಗೆ ಉತ್ತಮ ಅಭ್ಯಾಸಗಳನ್ನು ಮೈಗೂಡಿಸಿಕೊಳ್ಳುವಂತೆ ಹಾಗೂ ಅಪ್ರಿಯ ಕಾರ್ಯಗಳನ್ನು ತೊರೆಯುವಂತೆ ತರಬೇತುಗೊಳಿಸಬೇಕು.
6. ಪ್ರೀತಿ ಮತ್ತು ಕರುಣೆಯೊಂದಿಗೆ ವಿವಿಧ ಸಂದರ್ಭಗಳ ಶಿಷ್ಟಾಚಾರ ಹಾಗೂ ಸ್ವಭಾವಗಳನ್ನು ಕಲಿಸಬೇಕು.
7. ಅವರ ಅರ್ಹತೆಗೆ ಅನುಸಾರ ಅವರ ಕೆಲಸ ಕಾರ್ಯಗಳು ಮತ್ತು ಚಿಂತನಾ ಸಾಮರ್ಥ್ಯಗಳನ್ನು ಅಭಿವ್ಯಕ್ತಗೊಳಿಸಲು ಅವಕಾಶ ಮಾಡಿಕೊಡಬೇಕು. ಈ ಮೂಲಕ ಸೂಕ್ತ ಪ್ರಾಯೋಗಿಕ ತರಬೇತಿ ನೀಡಿದಂತಾಗುತ್ತದೆ.

ಸ್ವಭಾವ ಮತ್ತು ಭಾವನೆಗಳ ತರಬೇತಿಯ ಕುರಿತು ಕೆಲವು ವಿಷಯಗಳನ್ನು ಮೇಲೆ ಪ್ರಸ್ತಾಪಿಸಲಾಗಿದೆ. ಮುಂದಿನ ಪುಟಗಳಲ್ಲಿ ಸ್ವಾಭಾವಿಕ ಒಲವು ಮತ್ತು ಅವುಗಳ ತರಬೇತಿಯ ಕುರಿತು ಇನ್ನಷ್ಟು ವಿವರಗಳನ್ನು ನೀಡುತ್ತಿದ್ದೇವೆ.

ಮೂಲಭೂತ ಒಲವುಗಳು ಮತ್ತು ಅವುಗಳ ತರಬೇತಿ

ಪ್ರತಿಯೋರ್ವ ವ್ಯಕ್ತಿಗೂ ಸ್ವಾಭಾವಿಕವಾಗಿ ಈ ಕೆಳಗಿನ ಆಕಾಂಕ್ಷೆಗಳಿರುತ್ತವೆ:

- ನಾನು ಸುಖ-ನೆಮ್ಮದಿಯಿಂದ ಇರಬೇಕು ಮತ್ತು ನನಗೆ ಉತ್ತಮ ಆಹಾರ ಹಾಗೂ ವಸ್ತ್ರ ದೊರೆಯಬೇಕು.
- ನನ್ನ ಜೀವ, ಸೊತ್ತು ಹಾಗೂ ಮಾನವು ಸುರಕ್ಷಿತವಾಗಿರಬೇಕು.
- ಎಲ್ಲರೂ ನನ್ನನ್ನು ಪ್ರೀತಿಸಬೇಕು, ನನ್ನನ್ನು ಉತ್ತಮ ದೃಷ್ಟಿಯಿಂದ ನೋಡಬೇಕು ಮತ್ತು ನನ್ನ ಕೆಲಸ-ಕಾರ್ಯಗಳನ್ನು ಹೊಗಳಬೇಕು.
- ನನ್ನ ವಿರುದ್ಧ ಲಿಂಗಿಯನ್ನು ನನ್ನೆಡೆಗೆ ಆಕರ್ಷಿಸಬೇಕು, ಮದುವೆಯಾಗಬೇಕು ಮತ್ತು ಮಕ್ಕಳು ಮರಿಗಳನ್ನು ಹೊಂದಬೇಕು (ಹದಿಹರೆಯದ ಬಳಿಕ ಪ್ರೌಢತೆಯ ಸಮಯದಲ್ಲಿ).
- ಮನೆಮಂದಿ ಮತ್ತು ದುರ್ಬಲರ ಹಾಗೂ ಅಸಹಾಯಕರ ಪೋಷಣೆ ಮಾಡಬೇಕು. (ಈ ಆಗ್ರಹವು ಸಾಮಾನ್ಯವಾಗಿ ದುರ್ಬಲವಾಗಿರುತ್ತದೆ).
- ಇತರರ ಮೇಲೆ ನನ್ನ ಹಿರಿಮೆ ಮತ್ತು ಮಾನ್ಯತೆ ಹೆಚ್ಚಬೇಕು, ಕಿರಿಯರು ಮತ್ತು ದುರ್ಬಲರು ನನ್ನ ಆದೇಶ ಪಾಲಿಸಬೇಕು ಹಾಗೂ ನನ್ನನ್ನು ಗೌರವದಿಂದ ಕಾಣಬೇಕು.
- ಪ್ರಭಾವಿ ಮತ್ತು ಗಣ್ಯ ವ್ಯಕ್ತಿಗಳನ್ನು ಸ್ವತಃ ಗೌರವಿಸಬೇಕು ಹಾಗೂ ವಿವಿಧ ವಿಷಯಗಳಲ್ಲಿ ಅವರ ಅನುಸರಣೆಯನ್ನೂ ಮಾಡಬೇಕು.
- ಸ್ವ ವರ್ಗದವರ ಮೈತ್ರಿ, ಸಾಮೀಪ್ಯ ಮತ್ತು ಸಹಾನುಭೂತಿ ಸಿಗಬೇಕು.
- ಕೆಲವು ವಸ್ತುಗಳು ಇತರ ಯಾರದೇ ಪಾಲುದಾರಿಕೆಯಿಲ್ಲದೆ ನನ್ನ ವಶ ಮತ್ತು ಉಪಯೋಗದಲ್ಲಿ ಇರಬೇಕು.

ನನ್ನನ್ನು ಒಬ್ಬರಿಗೆ ಸಮರ್ಪಿಸಬೇಕು. ಅವರ ಸಂಪ್ರೀತಿಯನ್ನು ಬಯಸಬೇಕು ಮತ್ತು ಸಂಕಷ್ಟದಲ್ಲಿ ಅವರನ್ನು ಆಶ್ರಯಿಸಬೇಕು.

ವ್ಯಕ್ತಿಗಳಲ್ಲಿ ಈ ಆಗ್ರಹಗಳು ಅವರ ನೈಸರ್ಗಿಕ ಒಲವು ಅಥವಾ ಸ್ವಾಭಾವಿಕ ಬೇಡಿಕೆಗಳಿಗೆ ಅನುಸಾರ ಬೆಳೆದು ಬರುತ್ತವೆ ಮತ್ತು ಅವು ಪ್ರಬಲವೂ ಆಗಿರುತ್ತವೆ. ಹೀಗೆ ಅವುಗಳ ಈಡೇರಿಕೆಯಿಂದ ವಿಶಿಷ್ಟ ರೀತಿಯ ಸಂತೋಷವೂ ಆಹ್ಲಾದಕರ ಅವಸ್ಥೆಯೂ ಅನುಭವಕ್ಕೆ ಬರುತ್ತದೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಆ ನಿಟ್ಟಿನಲ್ಲಿ ಅಪಾರ ಸಕ್ರಿಯತೆಯನ್ನು ಪ್ರದರ್ಶಿಸುತ್ತಾನೆ. ಅವುಗಳ ಈಡೇರಿಕೆಗಾಗಿ ಸಾಕಷ್ಟು ಪರಿಶ್ರಮವನ್ನೂ ಪಡುತ್ತಾನೆ. ಅವನ ಈ ಮೂಲಭೂತ ಆಗ್ರಹವು ಈಡೇರಿದರೆ ಅವನು ಆನಂದ ತುಂದಿಲನಾಗುತ್ತಾನೆ. ಅವನಿಗೆ ಮಾನಸಿಕ ಶಾಂತಿ ಮತ್ತು ಸಮಾಧಾನವೊದಗುತ್ತದೆ. ಅವನಲ್ಲಿ ಸಂಪೂರ್ಣ ಹಾಗೂ ಸಂತುಲಿತ ವ್ಯಕ್ತಿತ್ವ ಬೆಳೆದುಬರುತ್ತದೆ. ಆದರೆ ಅವನ ಆಗ್ರಹಗಳ ಈಡೇರಿಕೆಯಲ್ಲಿ ಅಡೆತಡೆ ಎದುರಾದರೆ ಅದನ್ನು ದೂರ ಮಾಡಲು ತನ್ನೆಲ್ಲ ಶಕ್ತಿಯನ್ನು ಬಳಸುತ್ತಾನೆ. ಆಗಲೂ ಈಡೇರದಿದ್ದರೆ ನಿರಾಶ, ದುಃಖಿತ ಮತ್ತು ಮೌನಿಯಾಗಿಬಿಡುತ್ತಾನೆ. ಹಾಗೆಯೇ ನಿರಂತರ ಹತಾಶೆಯ ಕಾರಣವಾಗಿ ಅವನ ವ್ಯಕ್ತಿತ್ವವು ಪ್ರಭಾವಿತವಾಗುತ್ತದೆ.

ಈ ಆಗ್ರಹಗಳ ಈಡೇರಿಕೆಯಲ್ಲಿ ಹಲವು ವಿಧಾನಗಳಿರುತ್ತವೆ. ಕೆಲವು ಉತ್ತಮ, ಆಹ್ಲಾದಕರ ಮತ್ತು ಸಹ್ಯ. ಇನ್ನು ಕೆಲವು ಅಪ್ರಿಯ, ಅಸಹ್ಯಕರ ಮತ್ತು ಅನೈತಿಕ. ಪ್ರತಿಯೋರ್ವನೂ ಸ್ವಾಭಾವಿಕವಾಗಿ ಈಡೇರಿಕೆಯ ಉತ್ತಮ ವಿಧಾನವನ್ನೇ ಇಷ್ಟಪಡುತ್ತಾನೆ. ಅಪ್ರಿಯ ವಿಧಾನವನ್ನು ಪ್ರತಿಯೊಬ್ಬನ ಚಿತ್ತವು ನಿರಾಕರಿಸುತ್ತದೆ. ಆದರೆ ಅನುವದನೀಯ ವಿಧಾನದಿಂದ ಈಡೇರಿಕೆಯು ಕಷ್ಟಸಾಧ್ಯವೆಂದು ತೋರಿದರೆ, ಅವನು ಅನೈತಿಕ ಅಥವಾ ಅಪ್ರಿಯ ವಿಧಾನವನ್ನು ಅನುಸರಿಸುವ ಕುರಿತು ಯೋಚಿಸತೊಡಗುವನು. ಇಂತಹ ಸ್ಥಿತಿಯಲ್ಲಿ ಅವನು ವಿಚಿತ್ರವಾದ ಮಾನಸಿಕ ಸಂಘರ್ಷಕ್ಕೆ ಈಡಾಗುತ್ತಾನೆ. ಆಗ್ರಹವು ಒಂದು ಕಡೆಗೆ ಎಳೆದರೆ, ಆತ್ಮಸಾಕ್ಷಿಯು ಇನ್ನೊಂದು ಕಡೆಗೆ ಎಳೆಯತೊಡಗುತ್ತದೆ. ಇಂತಹ ಸಂಘರ್ಷಗಳನ್ನು ಪ್ರತಿಯೊಬ್ಬನೂ ಪ್ರತಿದಿನವೂ ಹಲವು ಬಾರಿ ಎದುರಿಸುತ್ತಾನೆ. ಸಂಘರ್ಷದ ಈ ಸಂದರ್ಭಗಳಲ್ಲಿ ತರಬೇತಿ, ಅನುಭವ, ಬುದ್ಧಿ, ನಿಶ್ಚಯದಾರ್ಢ್ಯ, ವಿಶ್ವಾಸ-ಆಚಾರಗಳು ಮತ್ತು ಪರಮ ಗುರಿಯು ಹಸ್ತಕ್ಷೇಪ ನಡೆಸುತ್ತವೆ. ಈ ವಸ್ತುಗಳು ಎಷ್ಟಂಶ ವ್ಯಕ್ತಿಗೆ ದೊರೆತಿರುವುದೋ ಅಷ್ಟರ ಮಟ್ಟಿಗೆ ಅವನು ಸಂಘರ್ಷವನ್ನು ಎದುರಿಸುತ್ತಾನೆ. ಅದನ್ನು ಹಿಮ್ಮೆಟ್ಟಿಸಿದರೆ, ತನ್ನನ್ನು ಸಂಭಾಳಿಸುತ್ತಾನೆ ಮತ್ತು ಯಶಸ್ಸನ್ನು ಗಳಿಸುತ್ತಾನೆ. ಸ್ವಯಂ ಹಿಮ್ಮೆಟ್ಟಿದರೆ, ತನ್ನ ಚಾರಿತ್ರ್ಯವನ್ನೂ ಹಾಳು ಮಾಡುತ್ತಾನೆ ಮತ್ತು ಕೆಡುಕಿನ ಸಂಕೋಲೆಯಲ್ಲಿ ಬಿಗಿಯಲ್ಪಟ್ಟು ಅವನತಿಯೆಡೆಗೆ ಸಾಗುತ್ತಾನೆ.

ಸಣ್ಣ ಮಕ್ಕಳ ಈ ಆಗ್ರಹಗಳು ಬಹಳ ಪ್ರಬಲವಾಗಿರುತ್ತವೆ. ಅವುಗಳ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಬಯಸುತ್ತಾರೆ. ಅವರು ಮುಗ್ಧರಾಗಿರುವ ಕಾರಣ, ಒಳಿತು-ಕೆಡುಕುಗಳ ವ್ಯತ್ಯಾಸ ಆವರಿಗಿರುವುದಿಲ್ಲ, ಜತೆಗೆ ಅನುಭವ, ಬುದ್ಧಿ, ನಿಶ್ಚಯದಾರ್ಢ್ಯದ ಕೊರತೆಯೂ ಇರುತ್ತದೆ. ಹಾಗಾಗಿ ಅವರು ಸಂಘರ್ಷದಲ್ಲಿ ಸೋಲುಂಡು, ಕೆಟ್ಟ ದಾರಿ ತುಳಿಯುವ ಸಾಧ್ಯತೆ ಬಹಳ ಇರುತ್ತದೆ. ಒಂದು ಮಗು ತನ್ನ ಆಗ್ರಹ ಈಡೇರಿಕೆಗೆ ಸಹ್ಯ ದಾರಿ ಕಾಣದಿದ್ದರೆ, ಅಪ್ರಿಯ ವಿಧಾನವನ್ನು ಅನುಸರಿಸುತ್ತದೆ. ಅದರಿಂದ ಆ ಮಗುವಿಗೆ ಸಿಗುವ ರುಚಿ ಮತ್ತು ಸಂತೋಷವು ಅದನ್ನು ಪುನರಾವರ್ತಿಸಲು ಪ್ರೇರೇಪಿಸುತ್ತದೆ. ಹಲವು ಬಾರಿ ಹಾಗೆ ಮಾಡುವುದರಿಂದ, ಮಗುವಿಗೆ ಆ ಅಸಹ್ಯ ಕೃತ್ಯವು ಅಭ್ಯಾಸವಾಗಿ ಹೋಗುತ್ತದೆ. ಅಭ್ಯಾಸಗಳು ಗಟ್ಟಿಯಾಗಿ ಸ್ವಭಾವದ ಒಂದಂಗವಾಗಿಬಿಡುತ್ತದೆ. ಹಾಗೊಂದು ವೇಳೆ ಸಂಭವಿಸಿದರೆ, ಅದನ್ನು ತೊರೆಯುವುದು ತೀರಾ ದುಸ್ತರವಾಗಿ ಬಿಡುತ್ತದೆ. ಸಾಮಾನ್ಯವಾಗಿ ಅದು ಜೀವನಪೂರ್ತಿ ಇರುವ ಸಾಧ್ಯತೆ ಹೆಚ್ಚು.

ಆಗ್ರಹಗಳ ತರಬೇತಿ

1. ಈ ಆಗ್ರಹಗಳು ಸ್ವಾಭಾವಿಕ. ಪ್ರತಿಯೊರ್ವರಲ್ಲೂ ಇರುತ್ತವೆ, ಪೂರೈಸಲ್ಪಡಲು ಬಹಳ ಒತ್ತು ನೀಡುತ್ತವೆ. ಸಹ್ಯ ವಿಧಾನದಲ್ಲಿ ಈಡೇರದಿದ್ದರೆ, ಅನೈತಿಕ ವಿಧಾನವನ್ನು ಅನುಸರಿಸುವ ಆತಂಕ ಸದಾ ಇರುತ್ತದೆ. ಈಡೇರದ ಸ್ಥಿತಿಯಲ್ಲಿ ಮಾನಸಿಕ ತುಮುಲಕ್ಕೆ ಕಾರಣವಾಗುತ್ತದೆ. ಇದು ವ್ಯಕ್ತಿತ್ವದ ಮೇಲೆ ತೀರಾ ಕೆಟ್ಟ ಪರಿಣಾಮ ಬೀರುತ್ತದೆ. ಆದ್ದರಿಂದ ಪರಿಪೂರ್ಣ ವ್ಯಕ್ತಿತ್ವವನ್ನು ಬೆಳೆಸಲು ಮತ್ತು ಅನೈತಿಕ ಅಥವಾ ಅಪ್ರಿಯ ಕಾರ್ಯವಿಧಾನದಿಂದ ದೂರವಿರಬೇಕಾದರೆ, ಅರ್ಹ ಮೇರೆಯೊಳಗೆ ಸಾಧ್ಯಂದ ಅವುಗಳ ಈಡೇರಿಕೆಯ ವ್ಯವಸ್ಥೆಯಾಗಬೇಕಾಗಿದೆ.

2. ಒಂದು ವೇಳೆ ಈಡೇರಿಕೆ ಅಸಾಧ್ಯವಾಗಿದ್ದರೆ ಅಥವಾ ಸೂಕ್ತವಲ್ಲವೆನಿಸಿದರೆ... ಉದಾ: ಮಗು ಆಗ್ರಹಿಸುವ ವಸ್ತು ತೀರಾ ದುಬಾರಿಯಾಗಿದ್ದರೆ ಅಥವಾ ಉಪಲಬ್ಧವಿಲ್ಲದಿದ್ದರೆ ಅಥವಾ ಆ ಪ್ರಾಯದಲ್ಲಿ ಒದಗಿಸಿ ಕೊಡುವುದು ಸರಿಯಲ್ಲ ಎನಿಸಿದರೆ, ಅತ್ಯಂತ ನಮ್ರವಾಗಿ, ನಿಜವಾದ ವಿವಶತೆಯನ್ನು ತಿಳಿಸಿಕೊಡಬೇಕು. ಒಂದು ವೇಳೆ ಬೇರೆ ಪರ್ಯಾಯ ಸಾಧ್ಯವಿದ್ದರೆ, ಅದರ ವ್ಯವಸ್ಥೆ ಮಾಡಬೇಕು. ಆಗ ಮಗು ಸಮಾಧಾನಗೊಳ್ಳುವುದೆಂದು ನಿರೀಕ್ಷಿಸಬಹುದು. ಈ ವಿಷಯದಲ್ಲಿ ಕಾಠಿಣ್ಯ ಸಲ್ಲದು. ಅನ್ಯಥಾ ನಿಮ್ಮ ಕಣ್ತಪ್ಪಿಸಿ ಅನೈತಿಕ ಮತ್ತು ಅಪ್ರಿಯ ವಿಧಾನವನ್ನು ಅನುಸರಿಸುವ ಸಾಧ್ಯತೆ ಇದೆ. ಮಾತ್ರವಲ್ಲ, ನಿಮ್ಮ ಮೇಲೆ ಮನದಲ್ಲೇ ಹಗೆತನ ಕಟ್ಟಿಕೊಳ್ಳಲೂ ಬಹುದು.

3. ಜಗತ್ತಿನಲ್ಲಿ ಯಾರದೇ ಎಲ್ಲ ಆಗ್ರಹಗಳೂ ಪೂರೈಸಲ್ಪಟ್ಟದ್ದಿಲ್ಲ, ಎಲ್ಲ ಸಮಯದಲ್ಲಿ ಎಲ್ಲ ತರದ ಆಗ್ರಹಗಳು ಪೂರೈಕೆಯಾಗುತ್ತವೆ ಅನ್ನುವಂತೆಯೂ ಇಲ್ಲ, ಅವೆಲ್ಲ ಸ್ವರ್ಗದಲ್ಲಿ

ಮಾತ್ರವೇ ಸಾಧ್ಯವಾಗುವುದು ಎಂಬ ವಾಸ್ತವವನ್ನು ಮಗುವಿಗೆ ಸಣ್ಣದರಲ್ಲೇ ಮನವರಿಕೆ ಮಾಡಿಸಿಕೊಡಬೇಕು. ಜಗತ್ತಿನಲ್ಲಿ ಆಗ್ರಹಗಳ ಹಾದಿಗೆ ಅಡ್ಡವಾಗಿ ತರತರದ ಅಡೆತಡೆಗಳಿರುತ್ತವೆ. ಅವು ಸ್ವತಃ ನಮ್ಮ ಸ್ವಂತ ಪ್ರಯೋಜನಕ್ಕೆ ಅಗತ್ಯವಾಗಿವೆ. ಒಂದು ವೇಳೆ ಆಗ್ರಹಗಳಿಗೆ ನಿಯಂತ್ರಣವಿಲ್ಲದಿರುತ್ತಿದ್ದರೆ, ಮಾನವನಿಗೆ ಬಹಳ ತೊಂದರೆಯಾಗುತ್ತಿತ್ತು. ಅವನು ಪ್ರಾಣಿಗಳಂತಾಗಿ ಬಿಡುತ್ತಿದ್ದನು. ಮಾತ್ರವಲ್ಲ, ಪ್ರಾಣಿಗಳಿಗಿಂತಲೂ ಕೀಳಾಗಿ ಬಿಡುತ್ತಿದ್ದನು. ಆದ್ದರಿಂದಲೇ ಆತ್ಮನಿಯಂತ್ರಣಕ್ಕೆ ಬಹಳ ಮಹತ್ವ ಇರುವುದು. ಅದಕ್ಕಿರುವ ಉತ್ತಮ ಹಾದಿಯೆಂದರೆ ಕಡ್ಡಾಯ ಮತ್ತು ನಫಿಲ್(ಐಚ್ಛಿಕ) ಆರಾಧನೆಗಳು. ವಿಶೇಷತಃ ನಮಾಝ್ ಮತ್ತು ಉಪವಾಸವ್ರತಗಳು. ಮಕ್ಕಳು ಆಗ್ರಹಗಳನ್ನು ನಿಯಂತ್ರಿಸಲು ಸಾಧ್ಯವಾಗುವಷ್ಟು ಪ್ರಾಯಕ್ಕೆ ಬೆಳೆದರೆ, ಅವರಿಗೆ ಸುಲಭದಲ್ಲಿ ಪೂರ್ತಿಕೆಯಾಗುವ ವಿಷಯಗಳಲ್ಲಿ ಸಂಯಮ ಪಾಲಿಸಲು ಕಲಿಸಬೇಕು. ಉದಾ: ದಾಹವಾಗಿದ್ದರೆ, ತರಗತಿಯ ಮಧ್ಯದಲ್ಲಿ ಎದ್ದು ಹೋಗುವ ಬದಲು, ಗಂಟೆ ಬಾರಿಸುವ ತನಕ ಕಾಯಬೇಕು. ಬಿಡುವಿನ ವೇಳೆ ಜೇಬು ಖರ್ಚಿಗೆ ಕೊಟ್ಟ ಹಣದಿಂದ ಮಿಠಾಯಿ ಖರೀದಿಸಲು ಮನಸ್ಸಾದರೆ, ಅದರ ಬದಲಿಗೆ ಕಿತ್ತಳೆ ಹಣ್ಣು ಖರೀದಿಸಬೇಕು ಇತ್ಯಾದಿ. ಮಕ್ಕಳ ಪ್ರಾಯ ಮತ್ತು ಸಾಮರ್ಥ್ಯಕ್ಕೆ ಅನುಸಾರ ಆರಂಭದಲ್ಲಿಯೇ ಆಗ್ರಹಗಳನ್ನು ನಿಯಂತ್ರಿಸಲು ಅಭ್ಯಾಸ ಮಾಡಿಸಬೇಕು. ಈ ರೀತಿ ಅವರು ಕ್ರಮೇಣ ಆತ್ಮಸಂಯಮವನ್ನು ಕಲಿಯಬಲ್ಲರು. ಆಗ ಅವರ ವ್ಯಕ್ತಿತ್ವದ ಮೇಲೆ ಕೆಟ್ಟ ಪರಿಣಾಮವೂ ಬೀಳದು. ಸ್ಪರ್ಧಾಗುಣವನ್ನು ಬೆಳೆಸುವ ಮೂಲಕ ಈ ಕಾರ್ಯವನ್ನು ಆಟದ ರೂಪದಲ್ಲಿ ಕೂಡ ಕಲಿಸಬಹುದು.

4. ಮಕ್ಕಳ ಸ್ವಾಭಾವಿಕ ಆಗ್ರಹಗಳ ಮೇಲೆ ಏಕಾಏಕಿ ಅಂಕುಶ ಹೇರಬಾರದು. ಬದಲಾಗಿ ಹಂತಹಂತವಾಗಿ ಅವುಗಳ ಮೇಲೆ ನಿಯಂತ್ರಣ ಸಾಧಿಸಲು ತರಬೇತಿ ನೀಡಬೇಕು. ಉದಾ: ನೀವು ಮಾರುಕಟ್ಟೆಗೆ ಹೋಗುತ್ತೀರಿ. ಮಗುವೂ ನಿಮ್ಮೊಂದಿಗೆ ಇರುತ್ತದೆ. ಹಣ್ಣು ಮಿಠಾಯಿಗಳು ಕಣ್ಣ ಮುಂದೆ ಕಾಣತೊಡಗುತ್ತವೆ. ಮಗು ಅದು ಬೇಕು, ಇದು ಬೇಕು ಎನ್ನುತ್ತದೆ. ನೀವೂ ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಮಗುವಿಗಾಗಿ ಏನನ್ನಾದರೂ ಖರೀದಿಸಿ ಕೊಡುತ್ತೀರಿ. ಕೈಗೆ ಸಿಕ್ಕ ಕೂಡಲೇ ತಿಂಡಿಯನ್ನು ಬಾಯಿಗಿಡಲು ಮಗು ಹವಣಿಸುತ್ತದೆ. ಆದರೆ ಬೀದಿ ಬದಿಯಲ್ಲಿ ತಿನ್ನುವುದು ನಿಮಗೆ ಇಷ್ಟವಿಲ್ಲ, ಆಗ ನೀವು ಮಗುವಿನೊಡನೆ, ''ಇಲ್ಲಿ ತಿನ್ನುವುದು ಸರಿಯಲ್ಲ, ಸ್ವಲ್ಪ ಸಹನೆ ವಹಿಸು, ಬೇರೆಲ್ಲಾದರೂ ಕುಳಿತು ಸಮಾಧಾನದಿಂದ ತಿನ್ನುವಿಯಂತೆ'' ಎಂದು ಹೇಳಿ ಸಮಾಧಾನಿಸುವಿರಿ. ಆರಂಭದಲ್ಲಿ ಹೆಚ್ಚು ಕಾಲ ಸಹನೆ ವಹಿಸಲು ಅದರಿಂದಾಗದು. ಆದ್ದರಿಂದ ಸಾಧ್ಯವಾದಷ್ಟು ಬೇಗ ಯಾವುದಾದರೂ ಸೂಕ್ತ ಜಾಗವನ್ನು ಹುಡುಕಿ, ಮಗುವಿಗೆ ಸಮಾಧಾನದಿಂದ ತಿನ್ನಲು ಅನುವು ಮಾಡಿ ಕೊಡಬೇಕು. ಮಗು ಬೆಳೆದ ಮೇಲೆ ಕೊಂಚ ಹೆಚ್ಚೇ ಸಹನೆ ವಹಿಸಲು

ಕಲಿಸಬೇಕು. ಮನೆಗೆ ಹೋದ ಮೇಲೆ ತಿನ್ನುವಿಯಂತೆ ಅನ್ನಬೇಕು. ತರುವಾಯ ಹಂತಹಂತವಾಗಿ ಸೋದರ-ಸೋದರಿಯರನ್ನೂ ಸೇರಿಸಲು ಮತ್ತು ಹಂಚಿ ತಿನ್ನಲು ಪ್ರೋತ್ಸಾಹಿಸಬೇಕು. ಖರೀದಿಸುವಾಗಲೂ ''ಇದರಲ್ಲಿ ಎಲ್ಲರಿಗೂ ಪಾಲಿದೆ'' ಎಂದು ತಿಳಿಸಬೇಕು. ಬಳಿಕ ದಿನ ನಿತ್ಯದ ಬದಲು ದಿನ ಬಿಟ್ಟು ದಿನ ತಿಂಡಿ ತಂದು ಕೊಡಬೇಕು. ಮಗು ಬೆಳೆದಂತೆಲ್ಲ ದಿನಗಳಲ್ಲಿ ಅಂತರ ಹೆಚ್ಚಿಸಬೇಕು. ಈ ರೀತಿ ಕ್ರಮೇಣ ಮಗು ತನ್ನ ಆಗ್ರಹಗಳನ್ನು ನಿಯಂತ್ರಿಸಲು ಕಲಿಯುತ್ತದೆ.

ಚಿತ್ತಕ್ಕೆ ಅದರದೇ ಆದ ಹಕ್ಕುಗಳಿವೆ. ಅರ್ಹ ಮೇರೆಯಲ್ಲಿ ಅವುಗಳ ಈಡೇರಿಕೆಯಾಗಬೇಕಾದುದು ಅಗತ್ಯ. ಆತ್ಮ ಸಂಯಮ ಅಂದ ಕೂಡಲೇ ಸನ್ಯಾಸವನ್ನು ಸ್ವೀಕರಿಸಬೇಕೆಂದು ಖಂಡಿತ ಅರ್ಥ ಅಲ್ಲ, ಬದಲಾಗಿ ಚಿತ್ತವನ್ನು ಆಕಾಂಕ್ಷೆಗಳ ಗುಲಾಮನನ್ನಾಗಿ ಮಾಡುವುದನ್ನು ಮತ್ತು ಆಗ್ರಹಗಳಿಗೇ ಪ್ರಥಮ ಆದ್ಯತೆ ನೀಡುವುದನ್ನು ವಿರೋಧಿಸಲಾಗಿದೆ. ಆಗ್ರಹಗಳನ್ನು ಸದಾ ಚಿತ್ತದ ನಿಯಂತ್ರಣದಲ್ಲಿರಿಸಲು ಪ್ರಯತ್ನಿಸಬೇಕಾಗಿದೆ. ಏಕೆಂದರೆ ಅವು ಅರ್ಹ ಮತ್ತು ಸೂಕ್ತ ವಿಧಾನದಿಂದ ಈಡೇರುವಂತಾಗಬೇಕು. ಆಗ್ರಹಗಳನ್ನು ಸಂಪೂರ್ಣ ದಮನಿಸುವುದರಿಂದಲೂ ಪ್ರಕೃತಿಯು ಪ್ರಬಲವಾಗಿ ಪ್ರತೀಕಾರ ತೀರಿಸುತ್ತದೆ.

ಹಸಿವು ಇಂಗಿಸುವ, ಜೀವ ಉಳಿಸುವ, ದೊಡ್ಡಸ್ತಿಕೆ ಮೆರೆಯುವ ಅಥವಾ ಬೆಳೆದಿದ್ದೇನೆ ಎಂದು ತೋರ್ಪಡಿಸುವ ಆಗ್ರಹ, ದೈಹಿಕ ಹಾಗೂ ಒಡೆತನದ ಆಗ್ರಹಗಳು ಬಹಳ ಪ್ರಬಲವಾಗಿರುತ್ತವೆ. ಅದನ್ನು ಪೂರೈಸಲು ಮಾನವನು ಏನೆಲ್ಲ ಮಾಡುತ್ತಾನೆ. ಅವುಗಳ ಮೇಲೆ ನಿಯಂತ್ರಣವಿಲ್ಲದಿದ್ದರೆ ಉಡಾಳತನದ ಸಾಧ್ಯತೆ ಮತ್ತು ಆತಂಕ ಇರುತ್ತದೆ. ಈ ವಿಷಯದಲ್ಲಿ ಹಾದಿ ತಪ್ಪುವುದರಿಂದಲೇ ವಿವಿಧ ನೈತಿಕ ಕೇಡುಗಳು ಬೇರುಬಿಡುತ್ತವೆ. ಸುಳ್ಳು, ಕಳ್ಳತನ, ಪರನಿಂದೆ, ಅಸೂಯೆ, ಸ್ವಾರ್ಥ, ಮೋಸ-ವಂಚನೆ, ಲಂಚಗುಳಿತನ, ದುರಾಚಾರ, ಬಡ್ಡಿಕೋರತನ, ಜೂಜುಗಾರಿಕೆ, ಕಳ್ಳವ್ಯಾಪಾರ, ಅಕ್ರಮ ದಾಸ್ತಾನು, ಭಟ್ಟಂಗಿತನ, ಆತ್ಮವಂಚನೆ, ಇತರರ ಮುಂದೆ ಮಂಡಿಯೂರುವುದು, ದುಂದುವ್ಯಯ, ಜನಪೀಡನೆ, ವಿಷಯಲಂಪಟತನ ಇತ್ಯಾದಿಗಳ ಹಿಂದೆ ಈ ಆಗ್ರಹಗಳೇ ಕಾರ್ಯಾಚರಿಸುತ್ತಿವೆ. ತದ್ವಿರುದ್ಧವಾಗಿ ಇವೇ ಆಗ್ರಹಗಳು ಧನಾತ್ಮಕ ಕಾರ್ಯಗಳಿಗೆ ಮತ್ತು ಉತ್ತಮ ಸಾಧನೆಗಳಿಗೆ ಮಾನವನಿಂದ ಕಠಿಣ ಪರಿಶ್ರಮವನ್ನು ಮಾಡಿಸುತ್ತವೆ. ಜಗತ್ತಿನಲ್ಲಿ ಎಷ್ಟೆಲ್ಲ ಮಹತ್ಸಾಧನೆಗಳು ಕಾಣುತ್ತವೋ ಅವುಗಳ ಹಿಂದೆಯೂ ಸಾಮಾನ್ಯವಾಗಿ ಇವೇ ಆಗ್ರಹಗಳ ಕೈವಾಡವಿರುತ್ತದೆ. ಆದ್ದರಿಂದ ಇವುಗಳ ತರಬೇತಿಯ ಕಡೆಗೆ ವಿಶೇಷ ಗಮನ ಹರಿಸಬೇಕಾಗಿದೆ. ಇವುಗಳನ್ನು ದಮನಿಸುವ ಬದಲು ಇವುಗಳ ಮೇಲೆ ಹತೋಟಿ ಸಾಧಿಸಲು ಮತ್ತು ಸರಿಯಾದ ದಾರಿಯಲ್ಲಿ ನಡೆಸಲು ಪ್ರಯತ್ನಿಸಬೇಕಾಗಿದೆ. ಉದಾ:

(i) ನಿಮ್ಮ ಸಾಮರ್ಥ್ಯಕ್ಕೆ ಅನುಸಾರ ಆಹಾರ-ಪಾನೀಯ, ವಸ್ತ್ರ ಆಟದ ವಿಷಯದಲ್ಲಿ ಮಕ್ಕಳ ಆಗ್ರಹಗಳನ್ನೂ ಪರಿಗಣಿಸಬೇಕು. ಸಾಧ್ಯವಿಲ್ಲದ ವಿಷಯಗಳ ಬಗ್ಗೆ ನಯವಾಗಿ

ತಿಳಿಹೇಳಬೇಕು. ಆದರೆ ಆ ವಿಷಯದಲ್ಲಿ ಅವರನ್ನು ಹೆಚ್ಚು ಪರೀಕ್ಷೆಗೆ ಒಡ್ಡಬಾರದು, ಅರ್ಹ ಬೇಡಿಕೆಗಳಿಗೆ ಹೆಚ್ಚು ಅಂಕುಶವನ್ನೂ ಹೇರಬಾರದು.

(ii) ಮಕ್ಕಳಲ್ಲಿ ಮರಣದ ಭಯವು ಹಿರಿಯರ ಅನುಕರಣೆಯಲ್ಲಿ ಬೆಳೆದು ಬರುವಂತಹದ್ದು. ಈ ವಿಷಯದಲ್ಲಿ ನಿಮ್ಮದೇ ವಿಶ್ವಾಸವನ್ನು ದೃಢಗೊಳಿಸಬೇಕು ಮತ್ತು ಜೀವನ-ಮರಣ ಹಾಗೂ ಜೀವನಾಧಾರವನ್ನು ಅಲ್ಲಾಹನು ತನ್ನ ಬಳಿಯೇ ಇರಿಸಿದ್ದಾನೆ, ಅವುಗಳ ಮೇಲೆ ಬೇರೆ ಯಾರಿಗೂ ಅಧಿಕಾರವಿಲ್ಲ ಎಂಬುದನ್ನು ಮಕ್ಕಳಿಗೆ ಚೆನ್ನಾಗಿ ಮನವರಿಕೆ ಮಾಡಿಸಿಕೊಡಬೇಕು. ಅದನ್ನು ತಿಳಿಹೇಳಲು ಕಥೆ ಮತ್ತು ಘಟನೆಗಳ ಸಹಾಯ ಪಡೆಯಬೇಕು ಹಾಗೂ ನಿಮ್ಮ ಮಾತು-ಕೃತಿಗಳಲ್ಲಿ ಅದಕ್ಕೆ ಸಾಕ್ಷಿಗಳಾಗಬೇಕು.

(iii) ಲಜ್ಜೆ, ನಾಚಿಕೆ, ಅಭಿಮಾನ ಮತ್ತು ಪಶ್ಚಾತ್ತಾಪದ ಭಾವನೆಗಳನ್ನು ಮುರುಟಲು ಬಿಡಬಾರದು. ಬದಲಾಗಿ, ಅವುಗಳನ್ನು ಆದಷ್ಟು ಹೆಚ್ಚು ಜೀವಂತವಿರಿಸಬೇಕು. ಇವು ಪರಿಸ್ಥಿತಿಯನ್ನು ದಿಟ್ಟತನದಿಂದ ಎದುರಿಸಲು ಹಾಗೂ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವಲ್ಲಿ ಬಹಳ ಸಹಕಾರಿಯಾಗುವಂತಹ ಪ್ರಬಲ ಆಯುಧಗಳಾಗಿವೆ. ಅತಿಯಾದ ಗದರಿಕೆ, ಹೊಡೆತ ಮತ್ತು ಇತರರ ಮುಂದೆ ದೂರುವುದು ಅಥವಾ ಮೂದಲಿಸುವುದರಿಂದ ಈ ಭಾವನೆಗಳು ಸತ್ತು ಹೋಗುತ್ತವೆ. ಈ ವಿಷಯದಲ್ಲಿ ಸಾಧ್ಯಂತ ಜಾಗರೂಕತೆ ಪಾಲಿಸಬೇಕಾದ ಅಗತ್ಯವಿದೆ.

(iv) ಮನೆಯ ಒಂದು ಭಾಗದಲ್ಲಿ ಸ್ವಲ್ಪ ಸ್ಥಳ ಮತ್ತು ಒಂದು ಸಂದೂಕ ಅಥವಾ ಕಪಾಟು ಇತ್ಯಾದಿಯನ್ನು ಮಗುವಿಗಾಗಿ ಮೀಸಲಿಡಬೇಕು. ಅಲ್ಲಿ ಮಗು ತನ್ನ ವಸ್ತುಗಳನ್ನು ಕ್ರಮಬದ್ಧವಾಗಿ, ಅಚ್ಚುಕಟ್ಟಾಗಿ ಮತ್ತು ಸುರಕ್ಷಿತವಾಗಿರಿಸಲು ಹೇಳಿ ಕೊಡಬೇಕು. ಅದರಲ್ಲಿ ಕೇವಲ ಮಗುವಿನದೇ ಅಧಿಕಾರವಿರಬೇಕು. ಕಾಲ ಕ್ರಮೇಣ ತನಗೆ ಸಿಗುವ ಹಣವನ್ನು ಮಿತವ್ಯಯದೊಂದಿಗೆ ಬಳಸಲು, ಆದರಿಂದ ಒಂದಿಷ್ಟು ಉಳಿತಾಯ ಮಾಡಿ ಉಪಯುಕ್ತ ವಸ್ತುಗಳನ್ನು ಖರೀದಿಸಲು ಅಥವಾ ಆಪ್ತೇಷ್ಟರಿಗೆ ಏನಾದರೂ ಉಡುಗೊರೆ ನೀಡಲು ಬಳಸುವಂತೆ ಉಪದೇಶಿಸಬೇಕು. ಕೆಲವೊಮ್ಮೆ ಮಕ್ಕಳ ಕೈಯಿಂದ ಅಂಗವಿಕಲರಿಗೆ ಮತ್ತು ಬಡವರಿಗೆ ಸಹಾಯ ಮಾಡಿಸಬೇಕು. ಹೀಗೆ ಸಮಾಜ ಸೇವೆಯ ಕಾರ್ಯಗಳಲ್ಲಿ ತರಬೇತಿಯನ್ನು ನೀಡಿದಂತಾಗುತ್ತದೆ.

(v) ಸ್ವಲ್ಪ ದೊಡ್ಡವರಾದ ಮೇಲೆ ಅವರಿಗೆ ತಮ್ಮ-ತಂಗಿಯರ ಮತ್ತು ಸಾಕುಪ್ರಾಣಿಗಳ ಮೇಲ್ವಿಚಾರಣೆಯ ಕೆಲವು ಕಾರ್ಯಗಳನ್ನು ವಹಿಸಿಕೊಡಬೇಕು. ತಾರುಣ್ಯದ ಕಾಲದಲ್ಲಿ ಇನ್ನೂ ಮುಂದುವರಿದು ಸಣ್ಣಪುಟ್ಟ ಪ್ರಯೋಜನಕಾರಿ ಮತ್ತು ಆಸಕ್ತಿದಾಯಕ ಹವ್ಯಾಸಗಳಲ್ಲಿ ತೊಡಗಿಕೊಳ್ಳುವ ವ್ಯವಸ್ಥೆ ಮಾಡಿಸಿಕೊಡಬೇಕು. ಜತೆಗೆ ಅವರಿಂದ ಕೆಟ್ಟ ಸಾಂಗತ್ಯ, ಸಿನೆಮಾ ವೀಕ್ಷಣೆ ಮತ್ತು ಅಶ್ಲೀಲ ಸಾಹಿತ್ಯ ವಾಚನದ ಸಾಧ್ಯತೆಯನ್ನೇ ದೂರ ಮಾಡಬೇಕು. ಸಾಂಗತ್ಯಕ್ಕೆ ಉತ್ತಮ ಮಿತ್ರರನ್ನು ಮತ್ತು ವಾಚನಕ್ಕೆ ಸುಧಾರಣಾ ಹಾಗೂ ಸಾಮಾಜಿಕ

ಕಾದಂಬರಿಗಳು, ಪ್ರವಾದಿ ಚರಿತ್ರೆ, ಸುಧಾರಕರ ಚರಿತ್ರೆ ಮತ್ತು ಅವರ ಸಾಧನೆಗಳನ್ನು ಅರುಹುವ ಸಾಹಿತ್ಯವನ್ನು ಪರ್ಯಾಯವಾಗಿ ಒದಗಿಸಿಕೊಡಬೇಕು. ಸುಂದರವಾದ ವಸ್ತುಗಳನ್ನು ತಯಾರಿಸಲು, ಆರ್ಟ್-ಕ್ರಾಫ್ಟ್, ಹೊಲಿಗೆ ಮತ್ತಿತರ ಕಲೆಗಾರಿಕೆಗಳಲ್ಲಿ ಪ್ರತಿಭೆ ಮೆರೆಯುವಂತೆ ಮಾಡಲು ಪ್ರಯತ್ನಿಸಬೇಕು. ಅದಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಿಕೊಡಬೇಕು. ಆ ಮೂಲಕ ಆಸಕ್ತಿಯನ್ನು ತಣಿಸುವಂತಹ ಸಮ್ಮತಾರ್ಹ ದಾರಿಯು ತೆರೆಯಲ್ಪಡುತ್ತದೆ. ಪ್ರೌಢತೆಗೆ ಬಂದಾಗ ಮದುವೆ ಮಾಡಿಸುವಲ್ಲಿ ತ್ವರೆ ಮಾಡಬೇಕು. ಅದರ ವ್ಯವಸ್ಥೆಯಾಗುವ ತನಕ ನಫಿಲ್ ಆರಾಧನೆಗಳು - ವಿಶೇಷತಃ ಉಪವಾಸ ವ್ರತಾಚರಣೆ, ಕುರ್‌ಆನ್ ಪಾರಾಯಣ ಹಾಗೂ ಶರೀಅತ್‌ನ ಬೇಡಿಕೆಗಳನ್ನು ಅರಿಯಲು ಸಹಕಾರಿಯಾಗುವಂತಹ ಕೃತಿಗಳ ವಾಚನಕ್ಕೆ ಪ್ರೋತ್ಸಾಹಿಸಬೇಕು. ಆದರಿಂದ ಆಗ್ರಹಗಳ ಮೇಲೆ ನಿಯಂತ್ರಣ ಹೊಂದಲು ಸಾಧ್ಯವಾಗುತ್ತದೆ.

♦ ♦ ♦

ಅಧ್ಯಾಯ-13

ಹೆತ್ತವರು ಮತ್ತು ತರಬೇತಿ

''ಸತ್ಯವಿಶ್ವಾಸಿಗಳೇ, ಮಾನವರೂ ಶಿಲೆಗಳೂ ಇಂಧನವಾಗಲಿರುವ ಅಗ್ನಿಯಿಂದ ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ರಕ್ಷಿಸಿ ಕೊಳ್ಳಿರಿ. ಅದರ ಮೇಲೆ ಅತ್ಯಂತ ಕಠೋರ ಮತ್ತು ಉಗ್ರರಾದ ದೇವಚರರು ನಿಯುಕ್ತರಾಗುವರು. ಅವರೆಂದೂ ಅಲ್ಲಾಹನ ಆಜ್ಞೋಲ್ಲಂಘನೆ ಮಾಡುವುದಿಲ್ಲ ಮತ್ತು ಅವರಿಗೆ ನೀಡಲಾಗುವ ಪ್ರತಿಯೊಂದು ಅಪ್ಪಣೆಯನ್ನೂ ಪಾಲಿಸುತ್ತಾರೆ.'' (ಪವಿತ್ರ ಕುರ್‌ಆನ್, 66:6)

''ನೆನಪಿಡಿರಿ. ನಿಮ್ಮಲ್ಲಿ ಪ್ರತಿಯೊಬ್ಬರೂ ಹೊಣೆಗಾರರಾಗಿದ್ದೀರಿ. ಪ್ರತಿಯೋರ್ವರಿಂದಲೂ ಅವರ ಅಧೀನದವರ ಬಗ್ಗೆ ವಿಚಾರಣೆ ನಡೆಸಲಾಗುವುದು.'' (ಬುಖಾರಿ)

ಮಕ್ಕಳ ಒಳಿತು-ಕೆಡುಕುಗಳಲ್ಲಿ ಅತಿ ಹೆಚ್ಚು ಪ್ರಭಾವ ಬೀರುವವರು ಹೆತ್ತವರಾಗಿದ್ದಾರೆ. ಏಕೆಂದರೆ ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ಬಣ್ಣ ತುಂಬುವವರು ಅವರೇ ಆಗಿದ್ದಾರೆ. ರೂಪ-ಲಕ್ಷಣದ ಜತೆಗೆ ಅವರ ಚಾರಿತ್ರ್ಯ-ಗುಣಗಳು, ಆಚಾರ-ವಿಚಾರಗಳು, ಭಾವನೆ-ಒಲವುಗಳು ಎಲ್ಲವುಗಳಲ್ಲೂ ಹೆತ್ತವರ ಛಾಯೆ ಇರುತ್ತದೆ. ಮಕ್ಕಳು ಏನೆಲ್ಲ ಹೆತ್ತವರಿಂದ ವಿಶೇಷತಃ ಮಾತೆಯ ಮಡಿಲಿನಿಂದ ಕಲಿಯುತ್ತಾರೋ, ಅದರ ಗಾಢಛಾಪು ಜೀವನ ಪೂರ್ತಿ ಇರುತ್ತದೆ. ಆದ್ದರಿಂದಲೇ ತರಬೇತಿಯ ಮೂಲ ಹೊಣೆಗಾರಿಕೆಯನ್ನು ಹೆತ್ತವರ ಹೆಗಲಿಗೇರಿಸಲಾಗಿದೆ. ಈ ವಿಷಯವಾಗಿ ಅವರನ್ನು ನೇರವಾಗಿ ಮತ್ತು ಅತಿ ಹೆಚ್ಚಾಗಿ ವಿಚಾರಿಸಲಾಗುವುದು.

ಹೊಣೆಗಾರಿಕೆಗಳು

- ಮಗು ಹುಟ್ಟಿದಾಕ್ಷಣ, ಸ್ವಚ್ಛಗೊಳಿಸಿ, ಅದರ ಕಿವಿಗಳಲ್ಲಿ ಅದಾನ್ ನೀಡಬೇಕು.
- ಮಗುವಿಗೆ ಉತ್ತಮ ಹೆಸರನ್ನಿಡಬೇಕು.
- ಸಾಮರ್ಥ್ಯವಿದ್ದರೆ ಏಳನೆಯದಿನ ಅಕೀಕ ಮಾಡಬೇಕು.
- ಪ್ರೀತಿ ಮತ್ತು ಹೃದಯ ವೈಶಾಲ್ಯದೊಂದಿಗೆ ಮಗುವಿನ ಪೋಷಣೆ ಮಾಡಬೇಕು.

- ಹಲಾಲ್ ಮತ್ತು ಪರಿಶುದ್ಧವಾದ ಗಳಿಕೆಯಿಂದ ಬೆಳೆಸಬೇಕು.
- ಆಟವಾಡಲು ಮತ್ತು ಸಂತೋಷವಾಗಿರಲು ಸಾಧ್ಯಂತ ಅವಕಾಶ ನೀಡಬೇಕು.
- ಪ್ರೀತಿಯಿಂದ ಶಿಷ್ಟಾಚಾರವನ್ನು ಕಲಿಸಿಕೊಡಬೇಕು.
- ಐದಾರು ವರ್ಷವಾದಾಗ ಉತ್ತಮ ಹಾಗೂ ಸಜ್ಜನರಾದ ಅಧ್ಯಾಪಕರಿಂದ ಶಿಕ್ಷಣದ ವ್ಯವಸ್ಥೆ ಮಾಡಬೇಕು.
- ಆಹಾರ ಸೇವನೆ, ಆಟ, ಸ್ನಾನ-ಸ್ವಚ್ಛತೆ, ಕೆಲಸ ಮತ್ತು ವಿಶ್ರಾಂತಿಯನ್ನು ಆರೋಗ್ಯ ಹಾಗೂ ಬೆಳವಣಿಗೆಗೆ ಸಹಕಾರಿಯಾಗುವ ರೀತಿಯಲ್ಲಿ ವ್ಯವಸ್ಥೆಗೊಳಿಸಬೇಕು.
- ಕ್ರಮೇಣ ಅದನ್ನು ಮಕ್ಕಳ ದಿನಚರಿಯಾಗಿ ಮಾರ್ಪಡಿಸಬೇಕು.
- ಏಳು ವರ್ಷ ಪ್ರಾಯವಾದಾಗ ನಮಾಝ್ ನಿರ್ವಹಿಸಲು ಪ್ರೇರೇಪಿಸಬೇಕು.
- ಹತ್ತನೇ ವರ್ಷ ಮಗುವಿನ ಹಾಸಿಗೆಯನ್ನು ಬೇರ್ಪಡಿಸಬೇಕು.
- ಹನ್ನೆರಡನೇ ವರ್ಷದಿಂದ ಮಕ್ಕಳ ಚಲನ-ವಲನಗಳ ಮೇಲೆ ನಿಗಾ ಇರಿಸಬೇಕು.
- ತಪ್ಪು ಮತ್ತು ಪ್ರಮಾದಗಳ ನೈಜ ಕಾರಣವನ್ನು ಕಂಡು ಹಿಡಿದು ಅದನ್ನು ದೂರ ಮಾಡುವ ಬಗ್ಗೆ ಚಿಂತಿಸಬೇಕು.
- ಸಾಮಾನ್ಯವಾಗಿ ನಿಮ್ಮ ವರ್ತನೆಯು ಮೃದು ಮತ್ತು ಅನುನಯದಿಂದ ಕೂಡಿರಲಿ.
- ಸಾಧ್ಯಂತ ಕ್ಷಮೆಯ ಧೋರಣೆಯನ್ನು ಅನುಸರಿಸಬೇಕು.
- ಅನಿವಾರ್ಯವೆನಿಸಿದರೆ ಶಿಕ್ಷಿಸುವುದರಲ್ಲಿ ಹಿಂದೆ ಸರಿಯ ಬಾರದು. ಆದರೆ ತಕ್ಷಣವೇ ಸದ್ವರ್ತನೆಯ ಮೂಲಕ ಮಗುವನ್ನು ರಮಿಸಬೇಕು.
- ಮಕ್ಕಳು ಬೆಳೆದ ಮೇಲೆ ಶೌರ್ಯ, ಧೀಮಂತಿಕೆ ಮತ್ತು ಸ್ಪರ್ಧಾಗುಣವನ್ನು ಬೆಳೆಸಬೇಕು. ಸ್ಪರ್ಧಾತ್ಮಕತೆಯನ್ನು ಕಲಿಸಬೇಕು.
- ಹುಡುಗನಿಗೆ ಧರ್ಮಸಮ್ಮತ ಮತ್ತು ಗೌರವಪೂರ್ಣವಾದ ಉದ್ಯೋಗ ಹಾಗೂ ಹುಡುಗಿಗೆ ಮನೆವಾರ್ತೆಯ ತರಬೇತಿ ನೀಡಬೇಕು.
- ಪ್ರೌಢತೆಗೆ ಬಂದ ಮೇಲೆ ವಿವಾಹ ಮಾಡಿಸಲು ತ್ವರೆ ಮಾಡಬೇಕು.

ತರಬೇತಿ

ಮಕ್ಕಳ ತರಬೇತಿಗೆ ಸಂಬಂಧಿಸಿದಂತೆ ಹೆತ್ತವರು ಈ ಕೆಳಗಿನ ಮಾರ್ಗದರ್ಶಗಳನ್ನು ಪಾಲಿಸಬೇಕಾದುದು ಅಗತ್ಯ-

- ಮನೆಯ ವಾತಾವರಣ/ಪರಿಸರ ಪರಿಶುದ್ಧವಾಗಿರಬೇಕು ಮತ್ತು ಅದನ್ನು ಸಾಧ್ಯಂತ ಉದ್ವೇಗ, ಅಸಮಾಧಾನ ಮತ್ತು ಸಂಘರ್ಷದಿಂದ ಮುಕ್ತಗೊಳಿಸಬೇಕು.
- ಮಕ್ಕಳ ಮುಂದೆ ಅನುಸರಣಾರ್ಹ ಮಾದರಿಯನ್ನು ಪ್ರದರ್ಶಿಸಿರಿ.

- ಸಾಧ್ಯವಾದಷ್ಟರ ಮಟ್ಟಿಗೆ ಮಕ್ಕಳನ್ನು ಮುದ್ದು ಮಾಡಿರಿ ಮತ್ತು ಅವರ ಅರ್ಹ ಇಚ್ಛೆಗಳನ್ನು ಪೂರೈಸಿರಿ.
- ಆದರೆ ಅವರನ್ನು ಕೈಗೊಂಬೆಯನ್ನಾಗಿ ಮಾಡದಿರಿ ಮತ್ತು ಅತಿ ಮುದ್ದಿನಿಂದ ಅವರನ್ನು ನಿರುಪಯೋಗಿಯೋ ಅಸಮರ್ಥರೋ ಆಗಿಸಬೇಡಿರಿ. ಬದಲಾಗಿ,
- ಆತ್ಮವಿಶ್ವಾಸ ಬೆಳೆಸಲಿಕ್ಕಾಗಿ ಆಹಾರ ಪಾನೀಯ ಸೇವನೆ, ವಸ್ತ್ರಧಾರಣೆ ಮತ್ತು ತನ್ನ ವಸ್ತುಗಳನ್ನು ಒಪ್ಪ-ಓರಣವಾಗಿಡುವ ಹಾಗೂ ಸಂರಕ್ಷಿಸುವ ಹೊಣೆಗಾರಿಕೆಯನ್ನು ಸಾಧ್ಯಂತ ಮಕ್ಕಳೇ ಹೊರುವಂತೆ ನೋಡಿಕೊಳ್ಳಿ.
- ಮಕ್ಕಳನ್ನು ಮುದ್ದಿನ ಹೆಸರಿನಿಂದ ಕರೆಯಿರಿ. ಆದರೆ ಎಂದೂ ಹೆಸರನ್ನು ಅಪಭ್ರಂಶಗೊಳಿಸದಿರಿ ಮತ್ತು ಇತರರಿಗೂ ಅಂತಹ ಅವಕಾಶ ನೀಡದಿರಿ.
- ಸದಾ ಉತ್ತಮ ಮಾತಿನಿಂದ ಅಭಿಸಂಬೋಧಿಸಿರಿ ಮತ್ತು ಸಲಾಮ್ ಹೇಳಲು ನೀವೇ ಮೊದಲು ಮಾಡಿ.
- ಮಕ್ಕಳ ಮುಂದೆ ನೀವು ಪರಸ್ಪರ ಜಗಳಾಡಬೇಡಿರಿ ಮತ್ತು ಅವರಲ್ಲಿ ಪರಸ್ಪರ ದೂರಲೂ ಬೇಡಿರಿ.
- ಮುಗ್ಧರೆಂದು ಭಾವಿಸಿ, ಮಕ್ಕಳ ಮುಂದೆ ನಿಮ್ಮ ದಾಂಪತ್ಯದ ಖಾಸಗಿ ಕೃತ್ಯಗಳನ್ನು ಎಸಗಬೇಡಿರಿ. ಮೊದಲನೆಯದಾಗಿ ಅದು ನಿರ್ಲಜ್ಜೆಯಾಗಿದೆ. ಎರಡನೆಯದಾಗಿ, ಅದರಿಂದ ನಿಮ್ಮ ಸ್ಥಾನ-ಮಾನ, ಘನತೆ-ಗೌರವ ಕುಂದುತ್ತದೆ. ಮಾತ್ರವಲ್ಲ, ಮಕ್ಕಳ ಮನಸ್ಸಿನಲ್ಲಿ ಅವಧಿಪೂರ್ವ ಲೈಂಗಿಕ ಕುತೂಹಲ ಬೆಳೆದು ಬಂದು, ಅವರು ಕೆಟ್ಟ ಕೃತ್ಯಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆಯೂ ಇದೆ. ನೀವು ಪರಸ್ಪರ ಮತ್ತು ಮಕ್ಕಳ ಬಗ್ಗೆ ಬಹಳ ಕಾಳಜಿ ವಹಿಸುತ್ತೀರಿ, ಪ್ರೀತಿಯಿಂದ ವ್ಯವಹರಿಸುತ್ತೀರಿ ಮತ್ತು ಸುಖ-ಸೌಲಭ್ಯದ ಕುರಿತು ಚಿಂತಿಸುತ್ತೀರಿ ಎಂಬುದನ್ನು ನಿಮ್ಮ ಮಾತು-ಕೃತಿಗಳ ಮೂಲಕ ಮಕ್ಕಳಿಗೆ ಮನವರಿಕೆ ಮಾಡಿಸಿರಿ.
- ಮಕ್ಕಳಲ್ಲಿ ಪರಸ್ಪರ ದ್ವೇಷ ಹುಟ್ಟಲು ಅವಕಾಶ ನೀಡಬೇಡಿರಿ. ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಿರಿ. ಎಲ್ಲರೊಡನೆಯೂ ಸಮಾನ ಪ್ರೀತಿ-ಅನುನಯದಿಂದ ವ್ಯವಹರಿಸಿರಿ. ಆಹಾರ-ಪಾನೀಯ, ವಸ್ತ್ರ ಮತ್ತಿತರ ಅಗತ್ಯಗಳನ್ನು ಪೂರೈಸುವಾಗ ಯಾರೊಂದಿಗೂ ಪಕ್ಷಪಾತ ತೋರದಿರಿ. ಒಬ್ಬನ ಯಶಸ್ಸನ್ನು ಇನ್ನೊಬ್ಬನ ಪಶ್ಚಾತ್ತಾಪಕ್ಕೆ ಬಳಸದಿರಿ. ಇದರಿಂದ ಪ್ರಯೋಜನದ ಬದಲು ನಷ್ಟವೇ ಜಾಸ್ತಿ. ಮಾತ್ರವಲ್ಲ, ಇದರಿಂದ ಮಕ್ಕಳಲ್ಲಿ ಪರಸ್ಪರರ ವಿರುದ್ಧ ದ್ವೇಷ, ಅಸೂಯೆ, ಹಗೆತನ ಬೆಳೆದು ಬರುತ್ತದೆ ಮತ್ತು ಅದು ಜೀವನ ಪೂರ್ತಿ ಬೇರು ಬಿಡುತ್ತದೆ.
- ಮಕ್ಕಳಿಗೆ ಪರಸ್ಪರ ಪ್ರೀತಿಯಿಂದ ಬಾಳಲು, ಒಟ್ಟು ಸೇರಿ ಆಡಲು, ಹಂಚಿ ತಿನ್ನಲು ಮತ್ತು ಪರಸ್ಪರರ ಬಗ್ಗೆ ಕಾಳಜಿ ವಹಿಸಲು ಉಪದೇಶಿಸುತ್ತಲಿರಿ. ಅದಕ್ಕೆ ಸಾಕಷ್ಟು

ಅವಕಾಶಗಳನ್ನು ಒದಗಿಸುತ್ತಲಿರಿ. ಎಂದಾದರೂ ಪರಸ್ಪರ ಮನಸ್ತಾಪವುಂಟಾದರೆ, ಆದಷ್ಟು ಬೇಗ ರಾಜಿ ಮಾಡಿಸಿಕೊಳ್ಳಿ.

- ಮನೆಯ ವಸ್ತುಗಳನ್ನು ಸೂಕ್ತ ರೀತಿಯಲ್ಲಿ ಬಳಸುವುದು, ವಸ್ತುಗಳನ್ನು ಅನುಮತಿ ಪಡೆದೇ ತೆಗೆದು ಕೊಳ್ಳುವುದು ಮತ್ತು ಉಪಯೋಗಿಸಿದ ಬಳಿಕ ಅದರ ಜಾಗದಲ್ಲೇ ಇರಿಸುವುದು, ಅನುಮತಿ ಪಡೆದೇ ಎಲ್ಲಾದರೂ ಹೋಗಿ ಬರುವುದು ಮತ್ತು ಕೆಲಸಗಳನ್ನು ಅದರ ನಿರ್ದಿಷ್ಟ ಸಮಯದಲ್ಲಿ ನಿರ್ವಹಿಸುವುದು ಇತ್ಯಾದಿಗಳಿಗೆ ಸಂಬಂಧಿಸಿ ಕೆಲವು ಸುಲಭ ಹಾಗೂ ಸಂಕ್ಷಿಪ್ತ ನಿಯಮಗಳನ್ನು ರಚಿಸಿ ಮಕ್ಕಳಿಗೆ ಚೆನ್ನಾಗಿ ಮನವರಿಕೆ ಮಾಡಿಸಿ ಕೊಡಿರಿ. ಅವುಗಳನ್ನು ಸ್ವತಃ ಪಾಲಿಸಿರಿ ಮತ್ತು ಮಕ್ಕಳಿಂದಲೂ ಹಾಗೆಯೇ ಮಾಡಿಸಿರಿ. ಇದರಿಂದ ಮಕ್ಕಳಲ್ಲಿ ಶಿಷ್ಟಾಚಾರ ಬೆಳೆದು ಬರುತ್ತದೆ ಮತ್ತು ಇಡೀ ಕುಟುಂಬಕ್ಕೆ ಸೌಲಭ್ಯ ಒದಗುತ್ತದೆ. ಮಕ್ಕಳನ್ನು ಮನಬಂದಂತೆ ವರ್ತಿಸಲು ಬಿಟ್ಟರೆ, ಅದು ಅವರಿಗೂ ಹಾನಿಕಾರಕವಾಗುತ್ತದೆ, ಇತರರಿಗೂ ಕಿರಿಕಿರಿಗೆ ಕಾರಣವಾಗುತ್ತದೆ.
- ನೀವಿಬ್ಬರೂ ಪರಸ್ಪರರ ಗೌರವ, ಅನುಸರಣೆ ಮತ್ತು ಸೇವೆಗೆ ಮಕ್ಕಳನ್ನು ಪ್ರೇರೇಪಿಸುತ್ತಲಿರಿ. ತಂದೆಯು ತಾಯಿಗಾಗಿ ಮತ್ತು ತಾಯಿಯು ತಂದೆಗಾಗಿ ಮಕ್ಕಳಿಗೆ ನಿರಂತರ ಉಪದೇಶಿಸುತ್ತಿರಬೇಕು.
- ಆಟೋಟ ಮತ್ತು ಮಕ್ಕಳಾಟಿಕೆಗಳಿಗೆ ಹೆಚ್ಚು ತಡೆಯುಂಟು ಮಾಡಬೇಡಿರಿ. ಹಾಗೆಯೇ ಗದರಿಸುತ್ತ ಹೊಡೆಯುತ್ತ ಕೆಲಸ ಮಾಡಿಸಬೇಡಿರಿ. ಅನ್ಯಥಾ ವಿದ್ರೋಹ ಮತ್ತು ಮನೆ ಬಿಟ್ಟು ಹೋಗುವ ಸಾಧ್ಯತೆ ಇದೆ.
- ಮಕ್ಕಳೊಡನೆ ಎಂದೂ ಸುಳ್ಳು ಹೇಳಬೇಡಿರಿ, ಸುಳ್ಳು ವಾಗ್ದಾನವನ್ನೂ ಮಾಡದಿರಿ. ಇದು ಪಾಪ ಕಾರ್ಯವಾಗಿದೆ. ಮಾತ್ರವಲ್ಲ, ಮಕ್ಕಳಲ್ಲಿ ನಿಮ್ಮ ಗೌರವವೂ ಕುಂದುತ್ತದೆ.
- ತಪ್ಪುಗಳಿಗೆ ಸಾಧ್ಯಂತ ಸಹನೆ ಮತ್ತು ಕ್ಷಮೆಯ ಧೋರಣೆಯಿರಲಿ.
- ಸುಧಾರಣೆಯ ಕುರಿತಂತೆ ನಿರಾಶರಾಗಬೇಡಿರಿ ಮತ್ತು ಮಕ್ಕಳನ್ನೂ ನಿರಾಶೆಗೊಳ ಪಡಿಸದಿರಿ.
- ತಪ್ಪುಗಳಿಗೆ ಶಿಕ್ಷೆ ನೀಡುವುದು ಅನಿವಾರ್ಯವಾಗಿ ಬಿಟ್ಟರೆ, ಏಕಾಂತದಲ್ಲಿ ನೀಡಿರಿ ಮತ್ತು ಏಕಾಂತದಲ್ಲಿಯೇ ಬುದ್ಧಿ ಮಾತು ಹೇಳಿರಿ. ಎಲ್ಲರ ಮುಂದೆ ಗದರಿಸಬೇಡಿ, ಶಿಕ್ಷಿಸಲೂ ಬೇಡಿರಿ.
- ಮಿತ್ರರೊಂದಿಗೆ ಬೆರೆಯಲು ಅವಕಾಶ ನೀಡಿರಿ. ಆದರೆ ಅವರ ಗುಣ-ನಡತೆಯ ಬಗ್ಗೆ ಕಣ್ಣಿಟ್ಟಿರಿ.
- ನಿಮ್ಮ ಮಕ್ಕಳ ಗೆಳೆಯರನ್ನು ಗೌರವಿಸಿರಿ. ಕೆಲವೊಮ್ಮೆ ಅವರನ್ನು ಮನೆಗೆ ಆಹ್ವಾನಿಸಲು ಹೇಳಿ ಮತ್ತು ಅವರಿಗೆ ಆತಿಥ್ಯ ನೀಡಿರಿ.

- ನಿಮ್ಮ ಮಕ್ಕಳಿಗೆ ಅವರ ಗೆಳೆಯರ ಎದುರಲ್ಲೇ ಶಿಕ್ಷಿಸದಿರಿ ಮತ್ತು ಜರೆಯಲೂ ಬೇಡಿರಿ.
- ನಿಮ್ಮ ಪರಿಚಯಸ್ಥರು ಮತ್ತು ಅತಿಥಿಗಳು ಬಂದರೆ, ಅವರ ಮುಂದೆ ಮಕ್ಕಳ ತಪ್ಪುಗಳನ್ನು ಎಣಿಸಬೇಡಿರಿ. ಬದಲಾಗಿ ಅವರ ಒಳಿತುಗಳನ್ನು ಪ್ರಶಂಸಿಸಿರಿ.
- ಮಕ್ಕಳ ಪ್ರಾಯ ಮತ್ತು ಸಾಮರ್ಥ್ಯಕ್ಕೆ ಅನುಸಾರ ಅವರಿಗೆ ಮನೆಯ ಸಣ್ಣ ಪುಟ್ಟ ಹೊಣೆಗಾರಿಕೆಗಳನ್ನು ವಹಿಸಿಕೊಡಿ. ಉತ್ತಮ ನಿರ್ವಹಣೆಗೆ ಹೊಗಳಿರಿ. ಒಳ್ಳೆಯ ಕೆಲಸಗಳನ್ನು ಮನಬಿಚ್ಚಿ ಪ್ರೋತ್ಸಾಹಿಸಿರಿ. ಇದರಿಂದ ಅವರಲ್ಲಿ ಧೈರ್ಯ ಹುಟ್ಟುತ್ತದೆ. ಚುರುಕುತನ, ಸಂತೃಪ್ತಿ ಮತ್ತು ಆತ್ಮವಿಶ್ವಾಸ ಬೆಳೆದು ಬರುತ್ತದೆ.
- ಕ್ರಮೇಣ ಸರಳ ಜೀವನ ಮತ್ತು ಪರಿಶ್ರಮದ ಅಭ್ಯಾಸ ಮಾಡಿಸಿರಿ. ಆದರೆ ಯಾವುದೇ ಕೆಲಸವನ್ನು ಶಿಕ್ಷೆಯ ರೂಪದಲ್ಲೋ ಬಿಟ್ಟಿ ಕೆಲಸದ ರೂಪದಲ್ಲೋ ನೀಡಬೇಡಿರಿ. ಬದಲಾಗಿ ಸಂತೋಷವಾಗಿ ಆಟದೊಂದಿಗೇ ಮಾಡಿಸಿರಿ.
- ಯಾವುದೇ ಆದೇಶ ನೀಡುವಾಗಲೂ ಮಕ್ಕಳ ಮಾನಸಿಕ ಸ್ಥಿತಿಯನ್ನು ಅಂದಾಜಿಸಿರಿ. ಈ ಮೂಲಕ ಅವರನ್ನು ಅವಿಧೇಯತೆ ಮತ್ತು ಆಜ್ಞೋಲ್ಲಂಘನೆಯಿಂದ ತಡೆಯ ಬಹುದು. ಆಗಾಗ ಆದೇಶ ನೀಡುತ್ತ ಇರಬೇಡಿ. ನಿರ್ದಿಷ್ಟ ಪದಗಳಲ್ಲಿಯೇ ಆದೇಶ ನೀಡಿರಿ. ನಿಮ್ಮ ಮಾತಿನಲ್ಲಿ ಅನಿಶ್ಚಿತತೆ ಇರಬಾರದು. ಅನ್ಯಥಾ ಮಕ್ಕಳು ಅವಿಧೇಯತೆಗೆ ನಿರ್ಬಂಧಿತರಾದಾರು.
- ತಪ್ಪು ಸಂಭವಿಸಿದರೆ ಅಥವಾ ಶಿಕ್ಷೆ ನೀಡಲ್ಪಟ್ಟಿದ್ದರೆ, ಅದನ್ನು ಆಗಾಗ ನೆನಪಿಸಬೇಡಿರಿ. ಇತರ ಮಕ್ಕಳಿಗೂ ಮೂದಲಿಸಲು ಅವಕಾಶ ನೀಡಬೇಡಿರಿ.
- ಮಕ್ಕಳಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಮುಕ್ತ ಅವಕಾಶ ನೀಡಿರಿ. ಅವರ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡಲು ಪ್ರಯತ್ನಿಸಿರಿ.
- ಅವರಿಗೆ ಸಂಬಂಧಿಸಿದ ವಿಷಯಗಳಲ್ಲಿ ಅವರೊಡನೆ ಸಮಾಲೋಚಿಸಿರಿ. ಕೆಲವೊಮ್ಮೆ ಮಾರ್ಗದರ್ಶನ ನೀಡಿ, ಅವರಿಗೇ ಸ್ವಯಂ ತೀರ್ಮಾನಿಸಲು ಬಿಡಿ.
- ನಿಮ್ಮ ಪರಿಚಯಸ್ಥರು ಮತ್ತು ಬಂಧುಗಳ ಮನೆಗೆ ಆಗಾಗ ಮಕ್ಕಳನ್ನು ಕರೆದುಕೊಂಡು ಹೋಗಿರಿ.
- ಅತಿಥಿಗಳನ್ನು ಸತ್ಕರಿಸುವ ವಿಷಯದಲ್ಲಿಯೂ ಮಕ್ಕಳ ಸಹಾಯ ಪಡೆಯಿರಿ. ಈ ಮೂಲಕ ಅವರ ಸಾಮಾಜಿಕ ತರಬೇತಿಯೂ ಆಗುತ್ತದೆ ಮತ್ತು ಶಿಷ್ಟಾಚಾರವನ್ನೂ ಕಲಿಸಿದಂತಾಗುವುದು.
- ಸಭೆ-ಸಮಾರಂಭಗಳು ಮತ್ತು ಹಬ್ಬಗಳಲ್ಲಿ ಮಕ್ಕಳಿಗೂ ಅವರ ಸಾಮರ್ಥ್ಯಕ್ಕೆ ತಕ್ಕಂತೆ ವ್ಯಾವಹಾರಿಕವಾಗಿ ಪಾಲುಗೊಳ್ಳಲು ಅವಕಾಶ ನೀಡಿರಿ.

- ಸಾಮೂಹಿಕ ಕಾರ್ಯಗಳಲ್ಲಿ ವಿಶೇಷತಃ ಸಮಾಜ ಸೇವೆ ಮತ್ತು ಜನಕಲ್ಯಾಣ ಕಾರ್ಯಗಳಲ್ಲಿ ನೀವೂ ಪಾಲ್ಗೊಳ್ಳುತ್ತಲಿರಿ ಮತ್ತು ಮಕ್ಕಳನ್ನೂ ಪ್ರೇರೇಪಿಸುತ್ತಲಿರಿ. ಈ ಕಾರ್ಯಗಳಲ್ಲಿ ಸ್ವಯಂ ನಿಮ್ಮ ಆಸಕ್ತಿಗಳು ಅವರ ಮಟ್ಟಿಗೆ ಉತ್ತೇಜನವಾಗಿ ಕೆಲಸ ಮಾಡುತ್ತದೆ.
- ಮೇಲ್ನೋಟವಿರಿಸುತ್ತ ಹಣ ಖರ್ಚು ಮಾಡಲು, ತನ್ನ ಮತ್ತು ಮನೆಯ ಅಗತ್ಯದ ವಸ್ತು ಕೊಳ್ಳಲು ಅವಕಾಶ ನೀಡಿರಿ.
- ಮಕ್ಕಳಿಗೆ ಐತಿಹಾಸಿಕ ಮತ್ತು ನೀತಿಕತೆಗಳು, ಖ್ಯಾತನಾಮರ ಸಾಧನೆಗಳು ಮತ್ತು ಪಾಠಬೋಧಕ ಘಟನೆಗಳನ್ನು ನಿರಂತರ ಹೇಳುತ್ತಿರಬೇಕು. ಬಾಲ್ಯದಲ್ಲಿ ಅವುಗಳು ಬಹಳ ಪ್ರಭಾವ ಬೀರುತ್ತವೆ. ಮಕ್ಕಳ ಚಾರಿತ್ರ್ಯ ನಿರ್ಮಾಣ, ಅವರಲ್ಲಿ ಸದ್ಭಾವನೆ ಮತ್ತು ಉನ್ನತ ಗುಣಗಳು ಬೆಳೆದು ಬರುವಲ್ಲಿ ಇವು ಉಪದೇಶಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿವೆ.
- ನಿಲ್ಲುವ, ಕೂರುವ, ನಡೆಯುವ, ತಿನ್ನುವ, ಕುಡಿಯುವ, ಸಂಧಿಸುವ, ಸಂಭಾಷಿಸುವ, ಇತರರಿಗೆ ಉಡುಗೊರೆ ನೀಡುವ ಅಥವಾ ಅವರಿಂದ ಸ್ವೀಕರಿಸುವ ಇತ್ಯಾದಿ ಎಲ್ಲ ವಿಷಯಗಳಲ್ಲೂ ಸುಸಂಸ್ಕೃತ ವಿಧಾನಗಳನ್ನು ಕಲಿಸಿರಿ.
- ತಪ್ಪು ಅಥವಾ ನಷ್ಟ ಸಂಭವಿಸಿದಾಗ ಕ್ಷಮೆ ಕೇಳುವ ಅಭ್ಯಾಸ ಮಾಡಿಸಬೇಕು ಮತ್ತು ಉಪಕಾರಕ್ಕೆ ಕೃತಜ್ಞತೆ ಸಲ್ಲಿಸುವುದನ್ನು ರೂಢಿಸಿಕೊಳ್ಳಬೇಕು.
- ಆರಂಭದಲ್ಲಿಯೇ ವಿವಿಧ ಸಂದರ್ಭಗಳ ದಿಕ್ರ್-ದುಆಗಳನ್ನು ಅಭ್ಯಾಸ ಮಾಡಿಸಿರಿ ಮತ್ತು ಸ್ವತಃ ಅದನ್ನು ಪಾಲಿಸಿರಿ. ಉದಾ: 'ಬಿಸ್ಮಿಲ್ಲಾ' ಹೇಳಿ ಆಹಾರ ಸೇವಿಸುವುದು; ಉಂಡ ಬಳಿಕ, ಸೀನು ಬಂದಾಗ ಅಥವಾ ಕ್ಷೇಮ ವಿಚಾರಿಸಿದಾಗ 'ಅಲ್‌ಹಮ್ದುಲಿಲ್ಲಾಹ್' ಹೇಳುವುದು, ಯಾರಿಂದ ಏನಾದರೂ ದೊರೆತರೆ ಅಥವಾ ಪ್ರಯೋಜನವಾದರೆ 'ಜಝಾಕಲ್ಲಾಹ್' ಹೇಳುವುದು, ಮಸೀದಿಗೆ ಪ್ರವೇಶಿಸುವಾಗ ಮತ್ತು ನಿರ್ಗಮಿಸುವಾಗ ಹೇಳುವ ದುಆ ಪಠಿಸುವುದು ಇತ್ಯಾದಿ. ಪ್ರವಾದಿಗಳ, ಸಹಾಬಿಗಳ, ಧಾರ್ಮಿಕ ಹಿರಿಯ ವಿದ್ವಾಂಸರ ಹೆಸರುಗಳನ್ನು ಬಹಳ ಗೌರವ ಪೂರ್ಣವಾಗಿ ಹೇಳುವುದನ್ನು ಕಲಿಸಿರಿ.

ಇವೆಲ್ಲವೂ ಸಾಧ್ಯವಾಗುವುದು ಮಾತಾಪಿತರೀರ್ವರೂ ಸ್ವಯಂ ಮಾದರಿಯಾದಾಗ ಮಾತ್ರ. ಮಕ್ಕಳು ಮೌಖಿಕ ಉಪದೇಶಗಳಿಗಿಂತ ಹೆಚ್ಚಾಗಿ ಹಿರಿಯರ ಕ್ರಿಯೆಗಳಿಂದ ಅಪ್ರಜ್ಞಾ ಪೂರ್ವಕವಾಗಿ ಪ್ರಭಾವಿತರಾಗುತ್ತಾರೆ. ಈ ಪ್ರಭಾವಗಳೇ ಹೆಚ್ಚು ಸ್ಥಿರ ಮತ್ತು ದೀರ್ಘಕಾಲಿಕವಾಗಿರುತ್ತವೆ. ಕೊನೆಯದಾಗಿ, ಆದರೆ ಅತಿ ಪ್ರಮುಖವಾಗಿ ನಿಮ್ಮ ಮತ್ತು ನಿಮ್ಮ ಕುಟುಂಬದ ಒಳಿತು, ಸುಧಾರಣೆ ಮತ್ತು ಮೋಕ್ಷಕ್ಕಾಗಿ ಸೃಷ್ಟಿಕರ್ತನಲ್ಲಿ ನಿರಂತರ

ಪ್ರಾರ್ಥಿಸುತ್ತ ಇರಬೇಕು. ಏಕೆಂದರೆ ಪ್ರಯತ್ನಗಳಿಗೆ ಸಮೃದ್ಧಿ ಒದಗುವುದು ಅವನ ಇಚ್ಛೆಯನ್ನು ಅವಲಂಬಿಸಿಯಾಗಿರುತ್ತದೆ.

ಅಲ್ಲಾಹ್ ಹೀಗೆ ಪ್ರಾರ್ಥಿಸಲು ಕಲಿಸಿದ್ದಾನೆ,

''ನಮ್ಮ ಪ್ರಭೂ, ನಮ್ಮ ಪತ್ನಿಯರಿಂದಲೂ ಮಕ್ಕಳಿಂದಲೂ ಕಣ್ಮನಗಳನ್ನು ತಣಿಸು ಮತ್ತು ನಮ್ಮನ್ನು ಧರ್ಮನಿಷ್ಠರ ನಾಯಕರಾಗಿ ಮಾಡು.''(ಪವಿತ್ರ ಕುರ್‌ಆನ್, 25:74)

◆ ◆ ◆

ಅಧ್ಯಾಯ-14

ಶಿಕ್ಷಕ ಮತ್ತು ತರಬೇತಿಯ ನಿಯಮಗಳು

ಹೆತ್ತವರಿಂದ ಸ್ವತಃ ತರಬೇತಿ ನೀಡಲು ಸಾಧ್ಯವಾಗದ ಸಂದರ್ಭದಲ್ಲಿ, ಮಕ್ಕಳ ತರಬೇತಿಯ ಹೊಣೆಯನ್ನು ಯಾರಾದರೂ ಗುರು ಅಥವಾ ಶಿಕ್ಷಕನಿಗೆ ವಹಿಸಿಕೊಡಬೇಕು. ಗುರುವೆಂಬ ನೆಲೆಯಲ್ಲಿ ಒಬ್ಬ ವ್ಯಕ್ತಿಯು ಮಕ್ಕಳ ಪಾಲಿಗೆ ಹೆತ್ತವರ ಪರ್ಯಾಯವಾದಾಗ ಮಾತ್ರ ಆತನಿಂದ ಆ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಲು ಸಾಧ್ಯವಾಗುವುದು. ಏಕೆಂದರೆ ಈ ಕೆಳಗೆ ಸೂಚಿಸಲಾಗಿರುವ ಗುಣಗಳನ್ನು ಹೊಂದಿರುವ ವ್ಯಕ್ತಿಯ ಸುಧಾರಣಾ ಪ್ರಯತ್ನಗಳಿಂದ ಮಾತ್ರವೇ ಮಕ್ಕಳು ಪ್ರಭಾವಿತರಾಗುತ್ತಾರೆ.

1. ಅವನು ತಮ್ಮ ಹಿತಚಿಂತಕನೆಂದು ಮಕ್ಕಳಿಗೆ ಮನವರಿಕೆಯಾಗಿರಬೇಕು. ಅಂತೆಯೇ ಅವನ ಉಪಕಾರ, ತ್ಯಾಗ ಮತ್ತು ಸದ್ವರ್ತನೆಯು ಮಕ್ಕಳಿಗೆ ಸ್ವಯಂ ಅರಿವಿಗೆ ಬಂದಿರಬೇಕು.
2. ಅವನಿಗೆ ಮಕ್ಕಳ ಮೇಲೆ ಸ್ವಾಭಾವಿಕವಾಗಿಯೇ ಪ್ರೀತಿ ಇರಬೇಕು.
3. ಅವನು ಉತ್ತಮ ಸ್ವಭಾವದವನಾಗಿರಬೇಕು ಮತ್ತು ಅರ್ಹ ಮೇರೆಯೊಳಗೆ ಮಕ್ಕಳ ಆಸಕ್ತಿ ಹಾಗೂ ಸ್ವಾಭಾವಿಕ ಬೇಡಿಕೆಗಳನ್ನು ಪರಿಗಣಿಸುವವನಾಗಿರಬೇಕು.
4. ಅವನ ಪೋಷಣೆಯಲ್ಲಿ ಮಕ್ಕಳು ಎಲ್ಲ ರೀತಿಯಿಂದಲೂ ಸುರಕ್ಷಿತತೆ ಹಾಗೂ ಅವನ ಸಾಂಗತ್ಯದಲ್ಲಿ ಸಂತೋಷವನ್ನು ಕಾಣುವಂತಿರಬೇಕು.
5. ಮಕ್ಕಳ ಒಳಿತು ಮತ್ತು ಉತ್ತಮ ಕಾರ್ಯಗಳನ್ನು ಮುಕ್ತವಾಗಿ ಹೊಗಳುವವನಾಗಿರಬೇಕು. ಅಂತೆಯೇ ಅವರ ತಪ್ಪು ಮತ್ತು ಪ್ರಮಾದಗಳಿಗೆ ಶಿಕ್ಷೆ ನೀಡುವಲ್ಲಿ ಹಾಗೂ ಎಚ್ಚರಿಕೆ ನೀಡುವಲ್ಲಿ ಜಾಗರೂಕತೆ ಪಾಲಿಸುವವನಾಗಿರಬೇಕು.
6. ಮಕ್ಕಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಶಕ್ತನಿರಬೇಕು ಮತ್ತು ಅವರೊಡನೆ ಮಾಡಿರುವ ವಾಗ್ದಾನವನ್ನು ಪಾಲಿಸುವವನಾಗಿರಬೇಕು.
7. ಮಕ್ಕಳ ಮುಗ್ಧ ಸಮಸ್ಯೆಗಳನ್ನು ಮತ್ತು ತೊಂದರೆಗಳನ್ನು ಗಮನಗೊಟ್ಟು ಆಲಿಸುವವನಾಗಿರಬೇಕು. ಹಾಗೆಯೇ ಸಹಾನುಭೂತಿಯೊಂದಿಗೆ ಆ ಕುರಿತು

ಮಕ್ಕಳೊಡನೆಯೇ ಚರ್ಚೆ ನಡೆಸಿ, ಅವುಗಳನ್ನು ದೂರೀಕರಿಸಲು ಸಹಾಯ ಮಾಡುವವನಾಗಿರಬೇಕು.

8. ಅವನು ಸಹನೆ ಮತ್ತು ತಾಳ್ಮೆ ಉಳ್ಳವನಾಗಿರಬೇಕು.
9. ಮಕ್ಕಳ ಸ್ವಾಭಿಮಾನ ಮತ್ತು ಆತ್ಮಗೌರವವನ್ನು ಪರಿಗಣಿಸುವವನಾಗಿರಬೇಕು.
10. ಸ್ವತಃ ಕರ್ತವ್ಯ ಪಾಲಕ, ನಿಯಮ ಪಾಲಕ ಮತ್ತು ತನ್ನ ಭಾವನೆಗಳ ನಿಯಂತ್ರಕನಾಗಿರಬೇಕು.
11. ಅವನ ಮಾತು-ಕೃತಿಗಳಲ್ಲಿ ಸಾದೃಶವಿರಬೇಕು.

ಓರ್ವ ಪೋಷಕ ಅಥವಾ ಉತ್ತಮ ಅಧ್ಯಾಪಕನಲ್ಲಿ ಈ ಮೇಲಿನ ಗುಣಗಳು ಇಲ್ಲದಿದ್ದರೆ, ಆತ ತರಬೇತಿಯ ಹೊಣೆಯನ್ನು ಉತ್ತಮವಾಗಿ ನಿರ್ವಹಿಸಲಾರನು.

ಅಧ್ಯಾಪಕನ ವರ್ತನೆ

ಇವಿಷ್ಟಲ್ಲದೆ, ತರಬೇತಿಯ ಕರ್ತವ್ಯವನ್ನು ಉತ್ತಮ ರೀತಿಯಲ್ಲಿ ನಿಭಾಯಿಸಲು, ಪೋಷಕನು ತನ್ನ ವರ್ತನೆಯಲ್ಲಿಯೂ ಸುಧಾರಣೆ ತರಬೇಕಾದುದು ಅಗತ್ಯ.

1. ಮಕ್ಕಳಿಗಾಗಿ ತನ್ನಲ್ಲಿ ಪ್ರೀತಿ, ಸಹಾನುಭೂತಿ, ಹಿತಚಿಂತನೆಯ ಭಾವನೆಗಳನ್ನು ಬೆಳೆಸಬೇಕು.
2. ಮಕ್ಕಳ ನ್ಯೂನತೆಗಳನ್ನು ಅರಿತು, ಅವುಗಳನ್ನು ದೂರ ಮಾಡುವುದು ತನ್ನ ಕರ್ತವ್ಯವೆಂದೇ ಭಾವಿಸಬೇಕು.
3. ಹೃದಯದಲ್ಲಿ ಮಕ್ಕಳ ಸುಧಾರಣೆಯ ಕುರಿತು ನಿಷ್ಕಳಂಕ ಭಾವನೆ ಬೆಳೆಸಿಕೊಳ್ಳಬೇಕು ಮತ್ತು ತನ್ನ ಪ್ರಯತ್ನಗಳ ಜತೆಗೇ ಅಲ್ಲಾಹನಲ್ಲಿ ತನ್ನ ಹಾಗೂ ಮಕ್ಕಳ ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸುತ್ತಲೂ ಇರಬೇಕು.
4. ಸುಧಾರಣೆಯ ಕುರಿತಾಗಿ ಆಶಾಭಾವನೆಯಿರಿಸಬೇಕು. ಮಕ್ಕಳಲ್ಲೂ ಅದನ್ನು ಬೆಳೆಯಿಸಿಕೊಳ್ಳಬೇಕು. ಮಕ್ಕಳೇನಿದ್ದರೂ ಮಕ್ಕಳೇ. ಅವರ ಮೇಲೆ ಅತಿಯಾದ ಮತ್ತು ಉನ್ನತವಾದ ನಿರೀಕ್ಷೆಗಳನ್ನಿರಿಸಿದರೆ ನಿರಾಶೆ ಕಟ್ಟಿಟ್ಟ ಬುತ್ತಿ. ಏಕೆಂದರೆ ಅವರಿಂದ ಮಕ್ಕಳಾಟಿಕೆ ಖಂಡಿತ ಸಂಭವಿಸುತ್ತದೆ. ನಿರೀಕ್ಷೆಗಳು ಹೆಚ್ಚು ಇದ್ದರೆ, ಇಂತಹ ಸಂದರ್ಭಗಳಲ್ಲಿ ನಿರಾಶೆ ಖಂಡಿತ ಆಗುತ್ತದೆ. ಆದ್ದರಿಂದ ಅಂತಹ ಅತಿಯಾದ ನಿರೀಕ್ಷೆಗಳಿಂದ ದೂರವಿರಬೇಕು.
5. ಸಾದ್ಯಂತ ಸದ್ಭಾವನೆಯೊಂದಿಗೆ ಕಾರ್ಯವೆಸಗಬೇಕು. ಯಾಕೆಂದರೆ ಮಕ್ಕಳನ್ನು ಯಾವ ರೀತಿ ಕಲ್ಪಿಸುತ್ತೇವೋ ಹಾಗೆಯೇ ಮೂಡಿ ಬರುತ್ತಾರೆ. ಆದರೆ ಜಾಗರೂಕತೆ ಮತ್ತು ಮೇಲ್ನೋಟದಿಂದ ಅಲಕ್ಷ್ಯರಾಗಿರಬೇಕೆಂದು ಅದರರ್ಥ ಖಂಡಿತ ಅಲ್ಲ. ಬದಲಾಗಿ ಕೆಟ್ಟ ಗುಮಾನಿ ಮತ್ತು ತಪ್ಪು ಹುಡುಕುವುದರಿಂದ ದೂರವಿರಬೇಕು.

6. ಮಕ್ಕಳ ಆತ್ಮಾಭಿಮಾನ, ಆತ್ಮಗೌರವ ಮತ್ತು ಸ್ವಾಭಿಮಾನವನ್ನು ಪರಿಗಣಿಸುತ್ತ ಗೇಲಿ, ಮೂದಲಿಕೆ, ನಿಂದನೆ ಇತ್ಯಾದಿಗಳಿಂದ ದೂರವಿರಬೇಕು.
7. ಅಧಿಕಾರ ಚಲಾಯಿಸುವ ಬದಲು ಸುಧಾರಕನಂತೆ ವ್ಯವಹರಿಸಬೇಕು. ಅಂದರೆ ಹಿಂದೆ ಆದ ತಪ್ಪಿಗೆ ಶಿಕ್ಷೆ ನೀಡಿ ಸಮಾಧಾನ ಪಟ್ಟುಕೊಳ್ಳುವ ಬದಲು, ಮೂಲ ಕಾರಣಗಳನ್ನು ಪತ್ತೆ ಹಚ್ಚಿ ಅವುಗಳನ್ನು ದೂರ ಮಾಡಲು ಚಿಂತಿಸಬೇಕು. ಅಂದರೆ ಮುಂದೆ ಆ ತಪ್ಪುಗಳು ಮರುಕಳಿಸದಂತೆ ಮುಂಜಾಗ್ರತೆ ವಹಿಸಬೇಕು. ಆದದ್ದು ಆಯಿತು. ಮುಂದಕ್ಕೆ ಸನ್ಮನಸ್ಸಿನಿಂದ ಪಶ್ಚಾತ್ತಾಪ ಪಟ್ಟು ಮರಳಲು ಉಪದೇಶಿಸಬೇಕು.

ಅಧ್ಯಾಪಕನು ಸ್ವಯಂ ತನ್ನ ಸುಧಾರಣೆಗೆ ಪ್ರಯತ್ನಿಸದೆ ಇದ್ದರೆ ಮತ್ತು ತನ್ನ ಸ್ವಭಾವ-ವರ್ತನೆಯಲ್ಲಿ ಸೂಕ್ತ ಬದಲಾವಣೆ ತರದಿದ್ದರೆ, ಮಕ್ಕಳ ಸುಧಾರಣೆ-ತರಬೇತಿಯ ಅವನ ಪ್ರಯತ್ನಗಳು ಫಲಕಾರಿಯಾಗಲಾರವು.

ತರಬೇತಿಯ ವಿಧಾನ

1. ತರಬೇತಿಯಲ್ಲಿರುವ ಮಕ್ಕಳ ವ್ಯಾವಹಾರಿಕ, ನೈತಿಕ, ಬೌದ್ಧಿಕ ಮತ್ತು ದೈಹಿಕ ಪರಿಸ್ಥಿತಿಯ ಅವಲೋಕನ ನಡೆಸಿ, ವ್ಯಕ್ತವಾಗುವ ಒಳಿತು-ಕೆಡುಕುಗಳ ಒಂದು ಕೋಷ್ಟಕವನ್ನು(Chart) ಸಿದ್ಧಪಡಿಸಬೇಕು.
2. ಮಕ್ಕಳ ಪ್ರಾಯ, ಮನೆಯ ಪರಿಸ್ಥಿತಿ, ಮನೆಮಂದಿ ಹಾಗೂ ಮಕ್ಕಳೊಂದಿಗಿನ ಅವರ ವ್ಯವಹಾರ, ನಿಕಟ ಪರಿಸರದ ಸ್ಥಿತಿಗತಿ, ಸ್ನೇಹಿತರ ನಡೆ-ನುಡಿ ಮತ್ತು ಆಸಕ್ತಿಗಳಿಗೆ ಸಂಬಂಧಿಸಿ ಆಗತ್ಯದ ಮಾಹಿತಿಗಳನ್ನು ಒದಗಿಸಬೇಕು.
3. ಈ ಮೇಲಿನ ಮಾಹಿತಿಗಳಲ್ಲಿ ಮಕ್ಕಳ ಪ್ರಾಯ ಮತ್ತು ಬೌದ್ಧಿಕ-ಮಾನಸಿಕ ಸ್ಥಿತಿಗಳನ್ನು ಪರಿಗಣಿಸುತ್ತ ಕೆಲವು ಒಳಿತು-ಕೆಡುಕುಗಳನ್ನು ಪ್ರತ್ಯೇಕಿಸಬೇಕು. ಕ್ರಮೇಣ ಒಳಿತುಗಳನ್ನು ಹೆಚ್ಚಿಸಲು ಮತ್ತು ಕೆಡುಕುಗಳನ್ನು ದೂರ ಮಾಡಲು ಪ್ರಯತ್ನಿಸಬೇಕು.
4. ಕೆಡುಕುಗಳಿಗೆ ಕೆಲವು ಮೂಲಭೂತ ಕಾರಣ, ಪ್ರೇರಣೆ ಮತ್ತು ಅನಿವಾರ್ಯತೆಗಳಿರುತ್ತವೆ. ಸೂಕ್ಷ್ಮ ದೃಷ್ಟಿಯಿಂದ ಅವುಗಳನ್ನು ಪತ್ತೆಹಚ್ಚಿ ದೂರೀಕರಿಸಲು ಚಿಂತಿಸಬೇಕು. ಇದರಿಂದ ಸುಧಾರಣೆಯು ಖಾತರಿಯಾಗುತ್ತದೆ.
5. ಏಕಾಂತದಲ್ಲಿ ಮಗುವಿನ ಒಳಿತುಗಳನ್ನು ಹೊಗಳುತ್ತ, ಸೂಕ್ಷ್ಮವಾಗಿ ಮಗುವಿನಲ್ಲಿರಬಹುದಾದ ಕೆಡುಕುಗಳ ಪ್ರಸ್ತಾಪವನ್ನೆತ್ತಬೇಕು. ಅವುಗಳನ್ನು ನಿಯಂತ್ರಿಸಲಿಕ್ಕಾಗಿ ಮಗುವಿನಲ್ಲಿ ಆತ್ಮವಿಶ್ವಾಸ ಮತ್ತು ನಿಶ್ಚಯದಾರ್ಢ್ಯವನ್ನು ಬೆಳೆಸುತ್ತ ಸೂಕ್ತ ಉಪಾಯಗಳನ್ನು ಹೇಳಿಕೊಡಬೇಕು.
6. ಕಥೆಗಳ ಮೂಲಕ ತಪ್ಪುಗಳನ್ನು ಸೂಚ್ಯವಾಗಿ ತಿಳಿಯಪಡಿಸುವುದು ಉತ್ತಮ. ಬುದ್ಧಿವಂತ ಹಾಗೂ ಸೂಕ್ಷ್ಮಮತಿ ಮಕ್ಕಳು ಇದರಿಂದ ಹೆಚ್ಚು ಪ್ರಭಾವಿತರಾಗುತ್ತಾರೆ. ಹೀಗೆ ಸುಲಭದಲ್ಲಿ ಉದ್ದೇಶ ಈಡೇರುತ್ತದೆ.

7. ಇತರರ ಮುಂದೆ ಮಕ್ಕಳನ್ನು ದೂಷಿಸುವುದು, ಹಳಿಯುವುದು ಅಥವಾ ವಿನಾಕಾರಣ ವಿಮರ್ಶಿಸುವುದು ಸಲ್ಲದು. ತಪ್ಪುಗಳನ್ನು ಘಂಟಾಘೋಷವಾಗಿ ಹೇಳಲೂ ಬಾರದು. ಇದರಿಂದ ಸುಧಾರಣೆಯ ಬದಲು ನಿರ್ಲಜ್ಜೆ ಮತ್ತು ತಪ್ಪುಗಳನ್ನು ಸಮರ್ಥಿಸುವ ಗುಣ ಬೆಳೆದು ಬರುತ್ತದೆ.
8. ಇತರರ ಮುಂದೆ ಮಕ್ಕಳ ಕೇವಲ ಒಳಿತುಗಳನ್ನು ಪ್ರಸ್ತಾಪಿಸಬೇಕು. ಒಳ್ಳೆಯ ಕಾರ್ಯಗಳಿಗೆ ಬೆನ್ನು ತಟ್ಟಬೇಕು. ಇದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆದು ಬರುತ್ತದೆ, ಅಂತೆಯೇ ನ್ಯೂನತೆಗಳ ಮೇಲೆ ನಿಯಂತ್ರಣ ಹೊಂದುವ ಮನೋಬಲವೂ ಬೆಳೆಯುತ್ತದೆ.
9. ಸೃಜನಾತ್ಮಕ ನೈತಿಕತೆಯನ್ನು ಪೋಷಿಸಲು ಮತ್ತು ಅಪ್ರಿಯ ಕೃತ್ಯಗಳಿಂದ ಸುರಕ್ಷಿತವಾಗಿರಿಸಲು ಮಕ್ಕಳ ಪ್ರಾಯ ಮತ್ತು ಆಸಕ್ತಿಗಳನ್ನು ಪರಿಗಣಿಸುತ್ತ ಆಟ, ಹವ್ಯಾಸ, ಪಠ್ಯೇತರ ಚಟುಚಟಿಕೆಗಳು, ಕ್ಲಬ್ಬುಗಳು ಹಾಗೂ ಸಂಘಟನಾ ಕಾರ್ಯ ಇತ್ಯಾದಿಗಳಿಗೆ ಹೆಚ್ಚೆಚ್ಚು ಅವಕಾಶಗಳನ್ನು ಒದಗಿಸಿ ಕೊಡಬೇಕು.
10. ಬಾಲ್ಯದ ಮಕ್ಕಳಾಟಿಕೆಗೆ ಸಾಕಷ್ಟು ಅವಕಾಶವಿರಲಿ. ತಿಳಿಗೇಡಿತನಗಳಿಗೆ ಹೇತುವಾಗುವಂತಹ ಅಪ್ರಿಯ ಕಾರ್ಯಗಳಿಗೆ ಶಿಕ್ಷೆ ನೀಡುವ ಬದಲು ತಿಳಿ ಹೇಳಿ ಕ್ಷಮಿಸಬೇಕು. ಒಮ್ಮೆ ಆಗಿ ಹೋದ ತಪ್ಪನ್ನು ಆಗಾಗ ನೆನಪಿಸುತ್ತಲಿರಬಾರದು.
11. ಹನ್ನೆರಡು ವರ್ಷಕ್ಕಿಂತ ಕೆಳಗಿನ ಮಕ್ಕಳು ಒಣ ಉಪದೇಶ ಮತ್ತು ನೈತಿಕ ಉಪನ್ಯಾಸಗಳಿಂದ ಪ್ರಭಾವಿತರಾಗುವುದು ಬಹಳ ಕಡಿಮೆ. ಅಲ್ಲದೆ ಹೆಚ್ಚಿನ ವೇಳೆ ಪ್ರತಿಕ್ರಿಯೆಯು ತದ್ವಿರುದ್ಧ ಮತ್ತು ತೀಕ್ಷ್ಣವಾಗಿರಲಿಕ್ಕೂ ಸಾಕು. ಅದನ್ನು ಸಾದ್ಯಂತ ಪರಿಗಣಿಸಬೇಕು.
12. ಉಪನ್ಯಾಸದ ಕಹಿ ಕಷಾಯ ಕುಡಿಸುವ ಬದಲು ಮೆಚ್ಚಿಕೆಯ ಅಭ್ಯಾಸಗಳನ್ನು ಮಾಡಿಸಬೇಕು. ಜತೆಗೆ ವ್ಯಾವಹಾರಿಕ ನಡೆ-ನುಡಿ ಮತ್ತು ಶಿಷ್ಟಾಚಾರವನ್ನು ಕಲಿಸಲು ಪ್ರಯತ್ನಿಸಬೇಕು. ಅನುಸರಣೆಗೆ ನಿಮ್ಮಲ್ಲಿಯೇ ಉತ್ತಮ ಮಾದರಿಯನ್ನು ತೋರಿಸಿ ಕೊಡಬೇಕು.
13. ನೀತಿಕತೆಗಳು, ನೀತಿಯುತ ಹಾಸ್ಯಗಳು, ಪ್ರವಾದಿಗಳ ಮತ್ತು ಸಮುದಾಯ ಸುಧಾರಕರ ಜನನಾಯಕರ ವೃತ್ತಾಂತವನ್ನು ಮನಮೋಹಕ ಶೈಲಿಯಲ್ಲಿ ಪ್ರಸ್ತುತ ಪಡಿಸಬೇಕು.
14. ಭವ್ಯ ಭವಿಷ್ಯದ ಬಗ್ಗೆ ವಿಶ್ವಾಸವನ್ನು ಹುಟ್ಟಿಸಬೇಕು. ಅಂತೆಯೇ ಹತಾಶೆಯು ಅವರ ಹತ್ತಿರ ಸುಳಿಯದಂತೆ ನೋಡಿಕೊಳ್ಳಬೇಕು.
15. ಮಕ್ಕಳ ವ್ಯವಹಾರದಲ್ಲಿ ಪ್ರೀತಿಯ ಅಧ್ಯಾಪಕ ಮತ್ತು ದರ್ಪದ ಆಡಳಿತಾಧಿಕಾರಿಯ ವ್ಯತ್ಯಾಸವನ್ನು ಸದಾ ಪರಿಗಣಿಸುತ್ತ ಇರಬೇಕು. ಅಂತೆಯೇ ಅವರ ನಡೆ-ನುಡಿಯನ್ನು ಅವರ ದೃಷ್ಟಿಯಲ್ಲಿಯೇ ನೋಡಿಕೊಳ್ಳಬೇಕು.

◆ ◆ ◆

ಅಧ್ಯಾಯ-15

ಅಭ್ಯಾಸ ಮತ್ತು ವರ್ತನೆಗಳು

ನಮ್ಮ ಚಾರಿತ್ರ್ಯದ ಅವಲೋಕನ ನಡೆಸಿದರೆ, ಅದು ಹಲವು ಗುಣಗಳ ಒಂದು ಸಂಗ್ರಹವಾಗಿ ನಮಗೆ ತೋರಬಹುದು. ಆ ಪೈಕಿ ಕೆಲವು ಉತ್ತಮ, ಇನ್ನು ಕೆಲವು ಅಪ್ರಿಯ ಇರಬಹುದು. ನಮ್ಮ ಅಭ್ಯಾಸ ಮತ್ತು ವರ್ತನೆಗಳೇ ನಮ್ಮ ಚಾರಿತ್ರ್ಯದ ಕೈಗನ್ನಡಿಯಾಗಿರುತ್ತವೆ. ಅವುಗಳ ಆಧಾರದಲ್ಲಿಯೇ ನಮಗೆ ಸಜ್ಜನರು ಅಥವಾ ದುರ್ಜನರು ಎಂಬ ಮೊಹರು ಬೀಳುತ್ತದೆ. ನಮ್ಮ ಅಭ್ಯಾಸಗಳು ಒಟ್ಟಾರೆಯಾಗಿ ಉತ್ತಮವಿದ್ದರೆ ನಾವು ಸಜ್ಜನರ ಸಾಲಿನಲ್ಲ ಸೇರುತ್ತೇವೆ, ಅನ್ಯಥಾ ದುರ್ಜನರೆನಿಸಿಕೊಳ್ಳುವೆವು.

ಅಭ್ಯಾಸಗಳು ಅಂದರೆ ಏನು?

ಸ್ವಾಭಾವಿಕ ಆಗ್ರಹಗಳು ಮತ್ತು ಪ್ರಾಕೃತಿಕ ಬೇಡಿಕೆಗಳ ಈಡೇರಿಕೆಗಾಗಿ ನಾವು ಬಾಲ್ಯ ಕಾಲದಿಂದಲೇ ಏನಾದರೊಂದು ಮಾಡುತ್ತ ಇರುತ್ತೇವೆ. ನಾವು ಯಾವುದಾದರೊಂದು ಕೆಲಸವನ್ನು ವಿಶೇಷ ರೀತಿಯಲ್ಲಿ ಮಾಡುವಾಗ, ಅದರಿಂದಾಗಿ ನಮ್ಮ ಯಾವುದಾದರೂ ಮೂಲಭೂತ ಬೇಡಿಕೆಯು ಪೂರೈಸಲ್ಪಡುತ್ತದೆಂದಿಟ್ಟುಕೊಳ್ಳಿ, ಅನಂತರ ಅಂತಹುದೇ ಪರಿಸ್ಥಿ ಎದುರಾದಾಗ, ನಾವು ಅದೇ ಕೆಲಸವನ್ನು ಇನ್ನೂ ಉತ್ತಮವಾಗಿ ಮಾಡಿ ಬಿಡುತ್ತೇವೆ. ಹೀಗೆ ಮಾಡುವುದರಿಂದ ನಾವು ಆ ಕೆಲಸದಲ್ಲಿ ಪರಿಣತರಾಗುತ್ತೇವೆ. ಅಂದರೆ ಅದನ್ನು ಮಾಡಲು ನಮ್ಮಲ್ಲಿ ಸ್ಥಿರವಾದ ಇಚ್ಛೆ ಹುಟ್ಟಿಕೊಳ್ಳುತ್ತದೆ.

ಹೀಗೆ ಒಂದು ಕಾರ್ಯವನ್ನು ವಿಶಿಷ್ಟ ರೀತಿಯಲ್ಲಿ ಆಗಾಗ ಮಾಡುವುದನ್ನೆ 'ಅಭ್ಯಾಸ' ಎನ್ನುತ್ತೇವೆ. ಅಭ್ಯಾಸವು ಸ್ವಯಂ ಒಂದು ಸ್ವಾಭಾವಿಕ ಕ್ರಿಯೆಯಾಗಿರುವುದಿಲ್ಲ ಆದರೆ ಪ್ರತಿಯೊಂದು ಅಭ್ಯಾಸದ ಹಿಂದೆ ಯಾವುದಾದರೂ ಸ್ವಭಾವ, ಮೂಲಭೂ ಬೇಡಿಕೆ ಇರುತ್ತದೆ. ಆದ್ದರಿಂದಲೇ ಅಭ್ಯಾಸಗಳು ಸ್ಥಿರವಾದ ಮೇಲೆ ಅವನ್ನು ದೂ ಮಾಡುವುದು ಬಹಳ ಕಷ್ಟವೆನಿಸುವುದು.

ಸ್ವಭಾವ ಮತ್ತು ಪ್ರಾಕೃತಿಕ ಬೇಡಿಕೆಗಳು ಪ್ರತಿಯೋರ್ವರಲ್ಲೂ ಏಕಪ್ರಕಾರವಾ ಇರುತ್ತವೆ. ಆದರೆ ಅವುಗಳನ್ನು ವ್ಯಕ್ತಪಡಿಸುವ ರೀತಿಯು ಅನುಕರಣೆ, ಅನುಭವ, ತರಬೇ

ಮತ್ತು ಬುದ್ಧಿಮತ್ತೆಯ ಕಾರಣದಿಂದ ಪ್ರತಿಯೋರ್ವರಲ್ಲಿ ಭಿನ್ನ ಭಿನ್ನವಾಗಿರುತ್ತದೆ. ಈ ವಿಧಾನವೇ ಕ್ರಮೇಣ ಸ್ಥಿರವಾಗುತ್ತ ಅಭ್ಯಾಸ ಮತ್ತು ವರ್ತನೆಯಾಗಿ ಮಾರ್ಪಡುತ್ತದೆ. ಆದ್ದರಿಂದಲೇ ಬೇರೆ ಬೇರೆ ಜನರ ಅಭ್ಯಾಸ ಮತ್ತು ವರ್ತನೆಗಳು ಹಾಗೂ ಚಾರಿತ್ರ್ಯದಲ್ಲಿ ಸಾದೃಶ್ಯದ ಬದಲು ವಿಪರೀತ ಭಿನ್ನತೆ ಕಾಣಸಿಗುತ್ತದೆ.

ಅಭ್ಯಾಸಕ್ಕೆ ಸಂಬಂಧಿಸಿ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಬೇಕಾಗಿದೆ–

- ಇದು ಸ್ವಾಭಾವಿಕ ಅಥವಾ ಪ್ರಾಕೃತಿಕ ಅಲ್ಲ, ಬದಲು ಕ್ರಿಯಾತ್ಮಕವಾಗಿದೆ. ಅಂದರೆ ಹುಟ್ಟಿನಿಂದ ಬಂದ ಗುಣವಲ್ಲ, ಬದಲು ಪರಿಸರದ ಪ್ರಭಾವದಿಂದ ಬೆಳೆದುದಾಗಿರುತ್ತದೆ. ಇತರರ ಮುಖಾಂತರ ಅಥವಾ ಸ್ವಪ್ರೇರಣೆಯಿಂದ ಅಭ್ಯಾಸವಾಗಿರುತ್ತದೆ.
- ಸ್ವಾಭಾವಿಕವಲ್ಲದಿದ್ದರೂ ನಿರಂತರದ ಅಭ್ಯಾಸದಿಂದ ಅದು ಸ್ಥಿರಸ್ವಭಾವವಾಗಿ ಬಿಡುತ್ತದೆ. ಬಳಿಕ ಸುಲಭದಲ್ಲಿ ಬಿಟ್ಟು ಹೋಗುವುದಿಲ್ಲ, ಸ್ವಾಭಾವಿಕ ಬೇಡಿಕೆಗಳಂತೆಯೇ ಇದರಲ್ಲೂ ಅಪಾರವಾದ ಆಕರ್ಷಣೆಯಿರುತ್ತದೆ. ಅವುಗಳಿಗೆ ನಾವು ಎಷ್ಟು ಒಗ್ಗಿ ಹೋಗಿರುತ್ತೇವೆಂದರೆ, ಒಂದು ಅಭ್ಯಾಸದ ಕಾರ್ಯವನ್ನು ಸ್ವಾಭಾವಿಕ ಇಚ್ಛೆ ಅಥವಾ ಬೇಡಿಕೆಯ ಈಡೇರಿಕೆಯಂತೆ ಮಾಡಿ ಬಿಡುತ್ತೇವೆ. ಆದ್ದರಿಂದಲೇ ಅಭ್ಯಾಸವನ್ನು 'ಎರಡನೆಯ ಸ್ವಭಾವ' ಎನ್ನಲಾಗುತ್ತದೆ.
- ಅಭ್ಯಾಸ ಮಾಡಿಸುವ ಅಥವಾ ಬಿಡಿಸುವ ಸೂಕ್ತಕಾಲ ಬಾಲ್ಯವಾಗಿದೆ. ವಿಶೇಷತಃ ಹನ್ನೆರಡು ಹದಿಮೂರು ವರ್ಷ ಪ್ರಾಯದ ತನಕದ ಕಾಲ. ಅನಂತರ ಬಹಳ ಕಷ್ಟವೂ ಆಗುತ್ತದೆ ಮತ್ತು ದೃಢವಾದ ಸಂಕಲ್ಪವೂ ಬೇಕಾಗುತ್ತದೆ.
- ಒಂದು ಕೆಲಸವು ಅಭ್ಯಾಸವಾಗಿ ಬಿಟ್ಟರೆ, ಅದನ್ನೆಸಗುವುದು ಬಹಳ ಸುಲಭವಾಗಿ ಬಿಡುತ್ತದೆ. ಮೆದುಳಿಗೆ ಹೊರೆ ಬೀಳುವುದಿಲ್ಲ, ಸಂಕಲ್ಪಿಸುವ ಅಗತ್ಯ ಬೀಳುವುದಿಲ್ಲ ಮತ್ತು ಸ್ವಭಾವದ ಮೇಲೆ ಒತ್ತಡವೂ ಬೀಳುವುದಿಲ್ಲ, ಬದಲಾಗಿ ಪೂರ್ಣ ಸನ್ನದ್ಧತೆಯೊಂದಿಗೆ ತ್ವರಿತವಾಗಿ ಮತ್ತು ಪಕ್ವತೆಯೊಂದಿಗೆ ಅದು ಆಗಿಹೋಗುತ್ತದೆ.
- ಒಂದು ಕೆಲಸವನ್ನು ನಿರಂತರ ಮಾಡುವುದರಿಂದ ಅದು ಅಭ್ಯಾಸವಾಗಿಬಿಡುವುದಿಲ್ಲ, ಬದಲಾಗಿ ಪ್ರತಿಯೊಂದು ಅಭ್ಯಾಸಕ್ಕೂ ಈ ಕೆಳಗಿನ ಅಂಶಗಳು ಅಗತ್ಯವಾಗಿವೆ.

  1. ಸನ್ನದ್ಧತೆ: ಅಂದರೆ ಒಂದು ಕಾರ್ಯವನ್ನೆಸಗಲು ಸನ್ನದ್ಧರಾಗುವುದು. ಏಕೆಂದರೆ ಅದರ ಹೊರತು ಆ ಕಾರ್ಯವು ಮೊದಲ ಬಾರಿಯೂ ಪೂರ್ತಿಯಾಗಲಾರದು.

  2. ಉತ್ತಮ ಪ್ರಭಾವ: ಅಂದರೆ ಆ ಕಾರ್ಯವು ಪೂರ್ಣಗೊಳ್ಳುವುದರಿಂದಾಗುವ ಸಂತೋಷ. ಏಕೆಂದರೆ ಆ ಕಾರ್ಯವನ್ನೆಸಗುವ ಇಚ್ಛೆಯುಂಟಾಗುವುದು ಈ ಸಂತೋಷಕ್ಕಾಗಿಯೇ ಆಗಿದೆ.

3. ಪುನರಾವರ್ತನೆ: ಅಂದರೆ ಆ ಕಾರ್ಯವನ್ನು ಆಗಾಗ ಮಾಡುತ್ತಿರುವುದು. ಏಕೆಂದರೆ ಪುನರಾವರ್ತನೆಯ ಹೊರತು ಅಭ್ಯಾಸ ಆಗುವುದಿಲ್ಲ.

ಈ ಮೇಲಿನ ಅಂಶಗಳ ಪೈಕಿ ಯಾವುದಾದರೂ ಒಂದರ ಕೊರತೆಯಾದರೂ ಅಭ್ಯಾಸ ಹತ್ತಲಾರದು. ಏಕೆಂದರೆ ಒಂದು ಕಾರ್ಯಕ್ಕೆ ಸನ್ನದ್ಧವೇ ಆಗದಿದ್ದರೆ ಅಥವಾ ಅದನ್ನೆಸಗುವುದರಿಂದ ಹಿತಕರ ಫಲಿತಾಂಶ ದೊರೆಯದಿದ್ದರೆ ಅಥವಾ ಅದರಿಂದ ಕಷ್ಟವೆನಿಸುವುದಾದರೆ ಅಥವಾ ಅದನ್ನು ಪುನರಾವರ್ತಿಸಲು ಅವಕಾಶವೇ ಒದಗದಿದ್ದರೆ ಅದು ಖಂಡಿತವಾಗಿಯೂ ಅಭ್ಯಾಸ ಆಗಲಾರದು. ಆದ್ದರಿಂದಲೇ ಹಲವೊಮ್ಮೆ ಒಬ್ಬನ ಇಚ್ಛೆಗೆ ವಿರುದ್ಧವಾಗಿ ವರ್ಷಗಟ್ಟಳೆ ಏನಾದರೊಂದು ಕಾರ್ಯವನ್ನು ನಿರಂತರ ಮಾಡಿಸುತ್ತಿದ್ದರೂ ಅದು ಅವನಿಗೆ ಅಭ್ಯಾಸವಾಗುವುದಿಲ್ಲ. ಮಾತ್ರವಲ್ಲ, ಬಾಹ್ಯ ಒತ್ತಡದಿಂದ ಮುಕ್ತನಾಗುತ್ತಲೇ ಅದಕ್ಕೆ ವಿರುದ್ಧವಾದ ಕ್ರಿಯೆಗಳು ಸಂಭವಿಸಿ ಬಿಡುತ್ತವೆ. ಹಲವು ವರ್ಷಗಳ ತನಕ ನಮಾಝನ್ನು ಪಾಲಿಸುತ್ತಿದ್ದ ಮಕ್ಕಳನೇಕರು (ಮದ್ರಸದಿಂದ) ಮುಕ್ತರಾಗುತ್ತಲೇ ನಮಾಝ್ ತೊರೆಯುವುದು ನಮಗೆಲ್ಲರಿಗೂ ತಿಳಿದಿದೆ.

ಅಭ್ಯಾಸದಿಂದಾಗುವ ಪ್ರಯೋಜನಗಳು

ಅಭ್ಯಾಸಗಳು ಉತ್ತಮವಿದ್ದರೆ ಅವುಗಳಿಂದ ಅನೇಕಾರು ಪ್ರಯೋಜನಗಳಿರುತ್ತವೆ. ಉದಾ:

1. ಮಾನಸಿಕ ತುಮುಲದಿಂದ ದೂರವಿರುತ್ತಾನೆ. ಉತ್ತಮ ಕಾರ್ಯಗಳನ್ನೆಸಗಲು ಚಿತ್ತದೊಂದಿಗೆ ನಿರಂತರ ಸಮರ ಹೂಡುವ ಅಗತ್ಯವಿರುವುದಿಲ್ಲ. ಚಿತ್ತದ ಬೇಡಿಕೆ ಒಂದಿದ್ದು ಈಮಾನ್, ಚಾರಿತ್ರ್ಯ, ಸಜ್ಜನಿಕೆ ಮತ್ತು ಮಾನವೀಯತೆಯ ಬೇಡಿಕೆ ಬೇರೆಯೇ ಇರುವಂತಹ ಅನೇಕ ಪ್ರಸಂಗಗಳು ದಿನನಿತ್ಯ ವ್ಯಕ್ತಿಯೊಬ್ಬನಿಗೆ ಎದುರಾಗುತ್ತಲಿರುತ್ತವೆ. ಈ ಸಂಘರ್ಷದಿಂದ ಹೊರಬರುವುದು ಬಹಳ ಕಷ್ಟ. ಹೆಚ್ಚಿನ ವೇಳೆ ವ್ಯಕ್ತಿಗಳು ಚಿತ್ತದ ಮುಂದ ಸೋಲೊಪ್ಪಿಕೊಳ್ಳುತ್ತಾರೆ. ಒಂದು ವೇಳೆ ಉತ್ತಮ ಕಾರ್ಯಗಳು ಅಭ್ಯಾಸವಾಗಿದ್ದರೆ ಇಂತಹ ಸಂಘರ್ಷಗಳಿಗೆ ಅವಕಾಶ ಬಹಳ ಕಡಿಮೆಯಿರುತ್ತದೆ. ಒಂದು ವೇಳ ಸಂಘರ್ಷವೇರ್ಪಟ್ಟರೂ ಬಹಳ ಸುಲಭದಲ್ಲಿ ನಿಯಂತ್ರಿಸಲು ಸಾಧ್ಯವಿದೆ.

2. ಪರಿಸ್ಥಿತಿ ಪ್ರತಿಕೂಲವಿದ್ದರೂ ಉತ್ತಮ ಕಾರ್ಯದ ಅಭ್ಯಾಸವಿರುವವನು ಅದನ್ನು ಮಾಡಿಯೇ ತೀರುತ್ತಾನೆ. ಉದಾ: ಪ್ರಯಾಣದ ಆಯಾಸ, ಅನಾರೋಗ್ಯ ಅಥವಾ ಪ್ರತಿಕೂಲ ವಾತಾವರಣವಿದ್ದರೂ ತಕ್ಕ ಸಮಯದಲ್ಲಿ ನಮಾಝ್ ನಿರ್ವಹಿಸುವುದು. ಬಡತನವಿದ್ದಾಗಲೂ ಇತರರಿಗೆ ಸಹಾಯ-ಸೇವೆ, ತನ್ನನ್ನು ಅಪಾಯಕ್ಕೊಡ್ಡಿಯಾದರೂ ಇತರರಿಗೆ ಸಹಕಾರ ನೀಡುವುದು ಇತ್ಯಾದಿ. ಒಟ್ಟಿನಲ್ಲಿ ಚಿತ್ತದ ವಿದ್ರೋಹ ಮತ್ತು ಪರಿಸ್ಥಿತಿಯ ಒತ್ತಡಗಳಿಗೆ ಇಂಥ ಮಂದಿ ಮಹತ್ವ ನೀಡುವುದಿಲ್ಲ.

3. ಅಭ್ಯಾಸವಾಗಿರುವ ಕಾರ್ಯಗಳು ಅತ್ಯಂತ ಸುಲಲಿತವಾಗಿ ಸಂಭವಿಸುತ್ತವೆ. ಆದ ಕಾರಣ ಇತರರಿಗೆ ಪ್ರಯೋಜನವಾಗುವಂತಹ ಕಾರ್ಯಗಳಿಗೂ ಸಮಯಾವಕಾಶ ಒದಗುತ್ತದೆ. ಕೆಲಸವೂ ಉತ್ತಮವಾಗುತ್ತದೆ, ಹೆಚ್ಚು ಶಕ್ತಿ ಮತ್ತು ಗಮನ ವ್ಯಯಿಸುವ ಅಗತ್ಯವೂ ಬೀಳುವುದಿಲ್ಲ.

4. ಅಭ್ಯಾಸದ ಕಾರಣವಾಗಿ ಕಾರ್ಯಕ್ಷಮತೆಯು ಉತ್ತಮಗೊಳ್ಳುತ್ತದೆ. ಏಕೆಂದರೆ ಅಭ್ಯಾಸವಾದ ಕಾರ್ಯಗಳಲ್ಲಿ ದಣಿವಾಗುವುದು ಕಡಿಮೆ ಮತ್ತು ಹೆಚ್ಚು ಪರಿಶ್ರಮ ಪಡಬೇಕಾಗಿಯೂ ಬರುವುದಿಲ್ಲ. ಅಭ್ಯಾಸವಿಲ್ಲದ ಯಾವುದೇ ಕೆಲಸವಿದ್ದರೂ ಪರಿಶ್ರಮ ಪಡಲೇ ಬೇಕಾಗುತ್ತದೆ ಹಾಗೂ ವ್ಯಕ್ತಿಯು ಬಲು ಬೇಗನೇ ದಣಿಯುತ್ತಾನೆ. ಉದಾಹರಣೆಗೆ: ಅಧ್ಯಯನ ನಡೆಸಲು ಹೆಚ್ಚು ಹೊತ್ತು ಕುಳಿತುಕೊಳ್ಳುವುದು ಅಥವಾ ದೈಹಿಕ ಶ್ರಮದ ಯಾವುದೇ ಕೆಲಸ ಮಾಡುವುದಿದ್ದರೆ, ಅದು ಅಭ್ಯಾಸವಾಗಿದ್ದರೆ ಗಂಟೆಗಟ್ಟಲೆ ಮುಂದುವರಿದರೂ ದಣಿವಾಗದು. ಅಭ್ಯಾಸವಿಲ್ಲದಿದ್ದರೆ ಬಲು ಬೇಗನೇ ದಣಿವಾಗುತ್ತದೆ.

5. ಅಭ್ಯಾಸವಿರುವ ಕಾರ್ಯವನ್ನು ಎಸಗುತ್ತಿರುವಾಗಲೇ ಮನಸ್ಸನ್ನು ಇತರ ಕೆಲಸದಲ್ಲೂ ತೊಡಗಿಸಲು ಸಾಧ್ಯವಿದೆ. ಏಕೆಂದರೆ ಅಭ್ಯಾಸವಿರುವ ಕಾರ್ಯದಲ್ಲಿ ಹೆಚ್ಚು ಗಮನವೀಯುವ ಅಗತ್ಯವಿರಲಾರದಷ್ಟೆ. ಅಲ್ಲದೆ, ಆ ಕೆಲಸವು ಯಾಂತ್ರಿಕವಾಗಿ ನಡೆಯುತ್ತಲೇ ಇರುತ್ತದೆ. ಉದಾಹರಣೆಗೆ: ಸ್ವೆಟರ್ ಹೊಲಿಯುತ್ತಿರುವಾಗ ಅಥವಾ ಯಾವುದೇ ಮೆಶೀನಿನಲ್ಲಿ ಕೆಲಸ ಮಾಡುತ್ತಿರುವಾಗ ಕೈಯಿಂದ ಕೆಲಸ ನಡೆಯುತ್ತಿರುತ್ತದೆ ಮತ್ತು ಮನಸ್ಸು ಏನಾದರೂ ಉತ್ತಮವಾದುದನ್ನು ಆಲೋಚಿಸುವುದರಲ್ಲಿ, ಇತರರ ಮಾತನ್ನು ಆಲಿಸುವುದರಲ್ಲಿ ಅಥವಾ ಇತರರಿಗೆ ಏನಾದರೂ ಹೇಳಿಕೊಡುವುದರಲ್ಲಿ ವ್ಯಸ್ತವಾಗಿರುತ್ತದೆ. ಬೀಡಿ ಸುರುಟುತ್ತಿರುವ ಅಥವಾ ನೂಲು ನೇಯುತ್ತಿರುವ ಕಾರ್ಮಿಕರಿಗೆ ಆ ಕಾರ್ಯದ ಜತೆಯಲ್ಲಿಯೇ ಬಹಳಷ್ಟನ್ನು ಮೌಖಿಕವಾಗಿ ಕಲಿಸಲು ಸಾಧ್ಯವಿದೆ.

ಒಟ್ಟಿನಲ್ಲಿ ಅಭ್ಯಾಸದ ಕಾರಣವಾಗಿ ಏಕಕಾಲದಲ್ಲಿ ಎರಡೆರಡು ಕಾರ್ಯಗಳನ್ನು ಮಾಡಬಹುದಾಗಿದೆ.

ಶಿಕ್ಷಣ-ತರಬೇತಿಯಲ್ಲಿ ಅಭ್ಯಾಸಗಳಿಗೆ ಇರುವ ಪ್ರಾಮುಖ್ಯತೆ

ಉತ್ತಮ ಅಭ್ಯಾಸಗಳಿಗೆ ಜೀವನದಲ್ಲಿ ಬಹಳ ಮಹತ್ವ ಇದೆ ಎಂಬುದು ಅಭ್ಯಾಸಗಳ ಈ ಮೇಲಿನ ಪ್ರಯೋಜನಗಳಿಂದ ಚೆನ್ನಾಗಿ ತಿಳಿದು ಕೊಳ್ಳಬಹುದಾಗಿದೆ. ಬಾಲ್ಯದಲ್ಲಿಯೇ ಉತ್ತಮ ಅಭ್ಯಾಸವನ್ನು ಮಾಡಿಸುವಲ್ಲಿ ಗಮನ ಹರಿಸಿದರೆ, ವ್ಯಕ್ತಿಯು ಪ್ರಗತಿ ಪಥದಲ್ಲಿ ಸಾಗಲು ಅದು ಸೌಲಭ್ಯವನ್ನು ಒದಗಿಸುತ್ತದೆ. ಒಂದು ಮಗುವಿಗೆ ಸಮಯಕ್ಕೆ ಸರಿಯಾಗಿ ಊಟ, ಆಟ, ನಿದ್ರೆ, ಎಚ್ಚರದ ಅಭ್ಯಾಸವಾದರೆ; ಅಧ್ಯಯನ ಮತ್ತು ಪರಿಶ್ರಮದ ಕಾರ್ಯಗಳಿಗೆ ಸಮಯವನ್ನು ಬಳಸುತ್ತಿದ್ದರೆ, ಉತ್ತಮ ಸ್ವಭಾವ ಮತ್ತು ಶಿಷ್ಟಾಚಾರವನ್ನು

ಪಾಲಿಸುತ್ತಿದ್ದರೆ, ಅವನ ಆರೋಗ್ಯ ಮತ್ತು ಚಾರಿತ್ರ್ಯವೂ ಉತ್ತಮವಾಗುವುದು, ಮುಂದುವರಿಯಲು ಹಾಗೂ ಪ್ರಗತಿ ಹೊಂದಲು ಹಲವಾರು ಅವಕಾಶಗಳೂ ಒದಗುವವು. ಆತ ಸಮಯ, ಅವಕಾಶ ಮತ್ತು ಬಿಡುವಿನ ಕೊರತೆಯನ್ನೆಂದೂ ದೂರಲಾರ. ಆತನಿಗೆ ದಿನನಿತ್ಯದ ಕೆಲಸ-ಕಾರ್ಯಗಳನ್ನು ಪಾಲಿಸುವಲ್ಲಿ ತನ್ನ ಮನಸ್ಸಿನ ಮೇಲೆ ಹೆಚ್ಚು ಒತ್ತಡ ಹೇರಬೇಕಾಗಿಯೂ ಇರುವುದಿಲ್ಲ. ಆದ್ದರಿಂದಲೇ ಉತ್ತಮ ಅಭ್ಯಾಸ ಮತ್ತು ನಡತೆಯನ್ನು ಕಲಿಸುವ ಬಗ್ಗೆ ಅಪಾರ ಗಮನವೀಯಲಾಗುತ್ತದೆ.

ಉತ್ತಮ ಅಭ್ಯಾಸಗಳನ್ನು ಮಾಡಿಸುವ ವಿಧಾನ

ಯಾವುದೇ ಒಂದು ವಿಷಯವನ್ನು ಅಭ್ಯಾಸ ಮಾಡಿಸಬೇಕಾದರೆ,

- ಮೊತ್ತಮೊದಲು ಮಗುವಿಗೆ ಸಾಮಾನ್ಯ ಸರಳ ಭಾಷೆಯಲ್ಲಿ ಕಥೆ, ಪೋಸ್ಟರ್, ಚಿತ್ರ, ಘಟನೆ, ಸಂಭಾಷಣೆ ಮತ್ತು ಖ್ಯಾತನಾಮರ ಜೀವನ ಚರಿತ್ರೆ ಇತ್ಯಾದಿಗಳ ಮೂಲಕ ಉತ್ತಮ ಅಭ್ಯಾಸಗಳ ಪ್ರಯೋಜನ, ಮಹತ್ವ ಹಾಗೂ ಅಗತ್ಯವನ್ನು ಮನವರಿಕೆ ಮಾಡಿಸಿಕೊಡಬೇಕು. ಎಲ್ಲಿಯ ವರೆಗೆಂದರೆ, ಮಗು ಸ್ವ-ಇಚ್ಛೆಯಿಂದ ಅದಕ್ಕೆ ಮುಂದಾಗಬೇಕು.
- ತರುವಾಯ, ಈ ನಿಟ್ಟಿನಲ್ಲಿ ಏನೆಲ್ಲ ಅಗತ್ಯವಿದೆ, ಅಲ್ಲಿಯ ವರೆಗೆ ತಲುಪುವ ಸುಲಭ ದಾರಿ ಯಾವುದು ಮತ್ತು ಅಗತ್ಯವಿರುವುದನ್ನು ಸುಲಭದಲ್ಲಿ ಹೇಗೆ ಗಳಿಸಿಕೊಳ್ಳಬಹುದು ಎಂಬಿತ್ಯಾದಿ ವಿಷಯಗಳನ್ನು ಸಂಕ್ಷಿಪ್ತ ಹಾಗೂ ಸರಳ ಭಾಷೆಯಲ್ಲಿ ಮನವರಿಕೆ ಮಾಡಿಸಿಕೊಡಬೇಕು.
- ಬಳಿಕ ಮಗುವಿನಿಂದ ವಾಗ್ದಾನ ಪಡೆಯಬೇಕು. ಈ ವಾಗ್ದಾನವು ಸಾಮೂಹಿಕ ಮತ್ತು ಹಲವು ಮಕ್ಕಳು ಅಥವಾ ಇಡೀ ತರಗತಿಯಿಂದ ಪಡೆಯುವುದಿದ್ದರೆ, ಇನ್ನೂ ಉತ್ತಮ. ಒಟ್ಟಿನಲ್ಲಿ ಈ ಕ್ರಿಯೆಯು ಪ್ರಬಲವಾಗಿ ನಡೆದು ಹೋಗಬೇಕು. ಈ ಮೂಲಕ ಮಗು ತನ್ನ ವಾಗ್ದಾನ ಪೂರೈಸಲು ಕಟಿಬದ್ಧವಾಗಬೇಕು.
- ನಂತರ ವಾಗ್ದಾನವನ್ನು ಕಾರ್ಯರೂಪಕ್ಕೆ ತರಲು ಮತ್ತು ನಿರಂತರ ಪುನರಾವರ್ತಿಸಲು ಅವಕಾಶ ಹಾಗೂ ಸೌಲಭ್ಯವನ್ನು ಒದಗಿಸಿ ಕೊಡಬೇಕು.
- ಒಂದು ನಿರ್ದಿಷ್ಟ ಅವಧಿಯ ವರೆಗೆ, ಗಮನಕೊಟ್ಟು ನಿರಂತರ ಅಭ್ಯಾಸ ಮಾಡಿಸಬೇಕು. ಆದರೆ ಅಭ್ಯಾಸದಲ್ಲಿ ಪೂರ್ಣ ಸಿದ್ಧತೆ ಮತ್ತು ಸಂತೋಷವನ್ನು ಪರಿಗಣಿಸಬೇಕು. ಇನ್ನು ಉತ್ತಮ ಅಭ್ಯಾಸ ಮತ್ತು ವರ್ತನೆಗಳಿಗೆ ಸಪ್ತಾಹವನ್ನು ನಿಗದಿ ಪಡಿಸಿದರೆ ಬಹಳ ಒಳ್ಳೆಯದು.
- ಅಭ್ಯಾಸ ಮಾಡಿಸುವ ವೇಳೆ ಉಲ್ಲಂಘನೆಯ ಅವಕಾಶವನ್ನು ಎಳ್ಳಷ್ಟೂ ನೀಡಬಾರದು. ಅದಕ್ಕಾಗಿ ಕಟ್ಟುನಿಟ್ಟಿನ ಮೇಲ್ವಿಚಾರಣೆ ಮತ್ತು ತಕ್ಷಣದ ಹಿಡಿತವೂ ಅಗತ್ಯವಿದೆ.

- ಅಭ್ಯಾಸ ಮತ್ತು ಪುನರಾವರ್ತನೆಯ ಕಾರ್ಯವನ್ನು ವೈಯಕ್ತಿಕವಾಗಿ ಮಾಡುವುದರ ಬದಲು ಸಾಮೂಹಿಕವಾಗಿ ಮಾಡಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಏಕೆಂದರೆ, ಇದರಿಂದ ಸನ್ನದ್ಧತೆ, ಸಂತೋಷ ಮತ್ತು ಸವಲತ್ತು ಈ ಮೂರೂ ಸಮಸ್ಯೆಗಳು ಒಟ್ಟಿಗೇ ಪರಿಹರಿಸಲ್ಪಡುತ್ತವೆ. ಒಬ್ಬನಿಂದ ಇನ್ನೊಬ್ಬನಿಗೆ ಬಲವೊದಗುತ್ತದೆ. ಇಸ್ಲಾಮೀ ಆರಾಧನೆ, ಸಂಸ್ಕರಣೆಯನ್ನು ಸಮಯ ಪಾಲನೆಯೊಂದಿಗೆ ಸಾಮೂಹಿಕವಾಗಿ ನಿರ್ವಹಿಸುವುದು ಕಡ್ಡಾಯವೆಂದು ಸಾರಿರುವುದರಿಂದಲೇ ಅದು ಅತ್ಯುತ್ತಮ ಹಾಗೂ ಪರಿಣಾಮಕಾರಿಯಾಗಿ ಸಾಬೀತಾಗಿರುವುದು.
- ಹೇಳಿದ ಕೆಲಸ ಮಾಡುವಲ್ಲಿ ಸೌಲಭ್ಯ ಮತ್ತು ಸಂತೋಷವಾಗುವಂತೆಯೂ ಉಲ್ಲಂಘನೆಗೆ ಅವಕಾಶವಿಲ್ಲದಂತೆಯೂ ವಾತಾವರಣವನ್ನು ನಿರ್ಮಿಸಬೇಕು.
- ಹತ್ತಿರದ ಪರಿಸರದಲ್ಲಿ ಉಲ್ಲಂಘನೆಯ ಗಂಧಗಾಳಿಯೂ ಬೀಸುವಂತಿರಬಾರದು.
- ಅಧ್ಯಾಪಕ/ಪೋಷಕ ಸ್ವಯಂ ಆ ಅಭ್ಯಾಸ-ವರ್ತನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ತನ್ನ ಚಾರಿತ್ರ್ಯ ಮತ್ತು ವ್ಯಕ್ತಿತ್ವದಿಂದ ಮಕ್ಕಳಿಗೆ ಅನುಸರಣೆ ಹಾಗೂ ಪ್ರಭಾವ ಹೊಂದುವ ಅವಕಾಶ ನೀಡಬೇಕು.
- ಅಭ್ಯಾಸ ಮಾಡಿಸುವಾಗ ಒಂದಕ್ಕೊಂದು ಸಹಕಾರಿಯಾಗುವ ರೀತಿಯಲ್ಲಿ ಯೋಜನೆ ತಯಾರಿಸಬೇಕು. ಉದಾ: ಫಜ್ರ್ ನಮಾಝ್ ನಿರ್ವಹಿಸಿದ ಬಳಿಕ ಅದೇ ವುಝೂವಿನಲ್ಲಿ ಕುರ್‌ಆನ್ ಪಾರಾಯಣ, ವುಝೂ ಮಾಡುವಾಗ ಹಲ್ಲುಜ್ಜುವ ಅಭ್ಯಾಸ ಇತ್ಯಾದಿ.
- ಉತ್ತಮ ಅಭ್ಯಾಸ-ವರ್ತನೆಗಳು ಮತ್ತು ಸತ್ಕರ್ಮಗಳಿಗೆ ರಜೆ ಇರುವುದಿಲ್ಲ ಎಂಬುದನ್ನು ಗಮನದಲ್ಲಿರಿಸಬೇಕು. ಅವು ನಿರಂತರ ವ್ಯಕ್ತವಾಗುತ್ತ ಇರಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿದರೆ ಕೆಲಸ ಕೆಡಲು ಆರಂಭವಾಗುತ್ತದೆ ಮತ್ತು ಮಾಡಿದ್ದೆಲ್ಲವೂ ನೀರಿನಲ್ಲಿಟ್ಟ ಹೋಮದಂತೆ ಆದೀತು.

ಉತ್ತಮ ಅಭ್ಯಾಸ ಮತ್ತು ವರ್ತನೆಗಳು

ಈ ಮೇಲಿನ ನಿಯಮಗಳನ್ನು ಪರಿಗಣಿಸುತ್ತ ಮಕ್ಕಳಿಗೆ ಹಂತ ಹಂತವಾಗಿ ಈ ಕೆಳಗೆ ನಮೂದಿಸಿರುವ ಉತ್ತಮ ಅಭ್ಯಾಸ ಮತ್ತು ವರ್ತನೆಗಳನ್ನು ಕಲಿಸಬೇಕು.

- ಸ್ವಚ್ಛತೆಯ ಪಾಲನೆ. ವಿಶೇಷತಃ ದೇಹದ ಅಂಗಾಂಗಗಳ ಸ್ವಚ್ಛತೆ. ಸ್ನಾನ ಮಾಡುವುದು, ಹಲ್ಲುಜ್ಜುವುದು, ಕೈತೊಳೆಯುವುದು, ಕೂದಲು ಮತ್ತು ಉಗುರು ಕತ್ತರಿಸುವುದು ಇತ್ಯಾದಿ; ವಸ್ತ್ರ, ಹಾಸಿಗೆ, ಸಾಮಾನ್ಯ ಬಳಕೆಯ ವಸ್ತುಗಳು, ಶೈಕ್ಷಣಿಕ ಸಾಮಗ್ರಿಗಳು, ತರಗತಿ, ಕೊಠಡಿ, ವರಾಂಡ ಮತ್ತು ತೋಡು ಇತ್ಯಾದಿಗಳ ಸ್ವಚ್ಛತೆ ಹಾಗೂ ವಸ್ತುಗಳನ್ನು ಒಪ್ಪ-ಓರಣವಾಗಿರಿಸುವುದು.

- ಶೌಚ್ಯದ ವಿಧಾನ ಮತ್ತು ಬಚ್ಚಲು-ಪಾಯಿಖಾನೆಯ ಸರಿಯಾದ ಬಳಕೆ.
- ರಾತ್ರಿ ಬೇಗ ಮಲಗುವುದು ಮತ್ತು ಬೆಳಿಗ್ಗೆ ಬೇಗನೇ ಏಳುವುದು.
- ಚೊಕ್ಕವಾಗಿ ವುಝೂ ಮಾಡುವುದು ಮತ್ತು ನಮಾಝಿನ ವಿಧಿಗಳನ್ನರಿತು ಉತ್ತಮವಾಗಿ ನಿರ್ವಹಿಸುವುದು.
- ಸಮಯಪಾಲನೆ. ವಿಶೇಷತಃ ನಮಾಝ್, ಕುರ್‌ಆನ್ ಪಾರಾಯಣ, ಹಾಜರಿ, ಆಟೋಟ, ಊಟ, ಸಭೆಗಳು, ಅಧ್ಯಯನ ಮತ್ತು ವ್ಯಾಯಾಮಗಳಲ್ಲಿ.
- ಸಲಾಮ್ ಹೇಳುವುದು, ಕ್ಷೇಮ ವಿಚಾರಿಸುವುದು ಮತ್ತು ಸಾಧ್ಯಂತ ಮೊದಲು ಸಲಾಮ್ ಹೇಳುವುದು.
- ಉತ್ತಮ ರೀತಿಯಲ್ಲಿ ಕೂರುವುದು, ಏಳುವುದು, ನಡೆದಾಡುವುದು, ನಿಲ್ಲುವುದು, ಮಾತನಾಡುವುದು, ಆಹಾರ ಪಾನೀಯ ಸೇವಿಸುವುದು, ವಸ್ತ್ರ ಧರಿಸುವುದು ಇತ್ಯಾದಿ.
- ಸತ್ಯವನ್ನೇ ಹೇಳುವುದು ಮತ್ತು ವಿವಿಧ ವ್ಯವಹಾರಗಳಲ್ಲಿ ವಿಶೇಷತಃ ಆಟ, ಪರೀಕ್ಷೆ ಮತ್ತು ಹಣಕಾಸಿನ ವಿಷಯದಲ್ಲಿ ಪ್ರಾಮಾಣಿಕತೆ ಮೆರೆಯುವುದು.
- ನಗುಮೊಗದೊಂದಿಗೆ ತನ್ನ ತಪ್ಪನ್ನು ಒಪ್ಪಿಕೊಳ್ಳುವುದು ಮತ್ತು ಪ್ರಮಾದಗಳಿಗೆ ಕ್ಷಮೆ ಯಾಚಿಸುವುದು.
- ಮಾತನಾಡಲು, ಪ್ರಶ್ನಿಸಲು, ಉತ್ತರಿಸಲು ಅಥವಾ ಯಾವುದಾದರೂ ವಸ್ತುವನ್ನು ಪಡೆಯಲು ತನ್ನ ಸರದಿ ಬರುವುದನ್ನು ಕಾಯುವುದು.
- ತನಗೆ ವಹಿಸಿ ಕೊಟ್ಟ ಕೆಲಸ ಅಥವಾ ಕರ್ತವ್ಯಗಳನ್ನು ಕಟ್ಟುನಿಟ್ಟಾಗಿ ಮತ್ತು ತತ್ಪರತೆಯೊಂದಿಗೆ ಪಾಲಿಸುವುದು.
- ತಂಡಗಳಲ್ಲಿ ಸಹಕಾರ ಮತ್ತು ಸ್ನೇಹಪೂರ್ವಕವಾಗಿ ವ್ಯವಹರಿಸುವುದು.
- ವಾಗ್ದಾನ ಈಡೇರಿಸುವುದು ಅಥವಾ ಪೂರೈಸಲಾಗದಿದ್ದರೆ ಅಥವಾ ಯಾವುದಾದರೂ ಅಡಚಣೆಯಿದ್ದರೆ ಸಾಧ್ಯಂತ ಮೊದಲೇ ಅಥವಾ ಕನಿಷ್ಠ ಪಕ್ಷ ತಕ್ಕ ಸಮಯದಲ್ಲಿ ಕ್ಷಮೆಯಾಚಿಸುವುದು.
- ವಸ್ತುಗಳನ್ನು ಬಳಸಿದ ಬಳಿಕ ಅವುಗಳ ನಿಗದಿತ ಜಾಗದಲ್ಲಿ ಅಚ್ಚುಕಟ್ಟಾಗಿ ಇರಿಸುವುದು.
- ಸಮಾಜ ಸೇವೆ, ವಿಕಲಾಂಗರ ಹಾಗೂ ವಿವಶರ ಸೇವೆ ಮಾಡುವುದು.
- ಅನುಮತಿ ಪಡೆದು ಪ್ರವೇಶಿಸುವುದು.
- ಕೃತಜ್ಞತೆ ಸಲ್ಲಿಸುವುದು. ಅದು ಎಷ್ಟೇ ಸಣ್ಣದಾದ ಸಹಾಯವಾಗಿದ್ದರೂ ಸರಿ.
- ವಿನಮ್ರತೆಯೊಂದಿಗೆ ಅಭಿಸಂಬೋಧಿಸುವುದು ಮತ್ತು ಗೌರವದೊಂದಿಗೆ ಹೆಸರೆತ್ತುವುದು.
- ಎಲ್ಲಾ ಸಂದರ್ಭಗಳ ಶಿಷ್ಟಾಚಾರವನ್ನು ಪಾಲಿಸುವುದು.

- ವಿವಿಧ ಸಂದರ್ಭಗಳ ದಿಕ್ರ್, ದುಆಗಳನ್ನು ಪಠಿಸುವುದು ಇತ್ಯಾದಿ ಇತ್ಯಾದಿ.

ನೆನಪಿಡಿ- ಉತ್ತಮ ಹಾಗೂ ಮೆಚ್ಚುಗೆಯ ಅಭ್ಯಾಸ-ವರ್ತನೆಗಳನ್ನು ಮತ್ತು ಸ್ವೀಕಾರಯೋಗ್ಯ ಚಾರಿತ್ರ್ಯವನ್ನು ಕಲಿಸಲು ಪ್ರಯತ್ನಿಸದಿದ್ದರೆ, ಮಕ್ಕಳಂತೂ ತಮ್ಮ ಸ್ವಾನುಭವ ಮತ್ತು ಇತರರ ಅನುಕರಣೆಯಲ್ಲಿ ಏನಾದರೂ ಅಭ್ಯಾಸವನ್ನು ಮೈಗೂಡಿಸಿಯೇ ತೀರುವರು. ಇಂತಹ ಸ್ಥಿತಿಯಲ್ಲಿ ಉತ್ತಮ ಅಭ್ಯಾಸಗಳ ತರಬೇತಿಯ ಕೊರತೆಯಿಂದಾಗಿ ಅಪ್ರಿಯವಾದ ಅಭ್ಯಾಸಗಳನ್ನು ನೆಚ್ಚಿಕೊಳ್ಳುವ ಸಾಧ್ಯತೆ ಇದ್ದೇ ಇದೆ. ಅದು ಅವರ ವ್ಯಕ್ತಿತ್ವ ಮತ್ತು ಚಾರಿತ್ರ್ಯವನ್ನು ಇತರರ ದೃಷ್ಟಿಯಲ್ಲಿ ಅಸಹ್ಯಕರವಾಗಿ ಮಾಡಿಬಿಡುವುದು. ಆ ಬಳಿಕ ಸುಧಾರಣೆ ಕಷ್ಟದ ಮಾತು.

ಮಕ್ಕಳು ಯಾಕೆ ಕೆಡುತ್ತಾರೆ?

ದಾರಿತಪ್ಪಿದ ಮಕ್ಕಳ ಬಗ್ಗೆ ಅವಲೋಕನ ನಡೆಸಿದಾಗ, ಅವರು ಕೆಡಲು ಈ ಕೆಳಗಿನ ಕಾರಣಗಳ ಪೈಕಿ ಯಾವುದಾದರೂ ಒಂದು ಅಥವಾ ಕೆಲವು ಅಂಶಗಳು ಕಾರ್ಯಾಚರಿಸಿವೆ ಎಂದು ತಿಳಿದು ಬರುತ್ತದೆ. ಸರಿಯಾದ ಕಾರಣವನ್ನು ಹುಡುಕಿ, ಅದರ ನಿವಾರಣೆಗೆ ಚಿಂತಿಸದಿದ್ದರೆ ಸುಧಾರಣೆ ಕಷ್ಟ.

1. ಹೆತ್ತವರು ಅಥವಾ ಹಿರಿಯರ ಕೆಟ್ಟ ಮಾದರಿ: ಮಕ್ಕಳು ಸಾಮಾನ್ಯವಾಗಿ ಪರಿಸರದ ಉತ್ಪನ್ನವಾಗಿರುತ್ತಾರೆ. ತಮ್ಮ ಸುತ್ತಮುತ್ತಲು ಕಂಡದನ್ನು-ಕೇಳಿದ್ದನ್ನು ತಿಳಿದೋ ತಿಳಿಯದೆಯೋ ಅನುಸರಿಸುತ್ತಾರೆ. ಮನೆಯ ವಾತಾವರಣವೇ ಮಲಿನವಾಗಿದ್ದರೆ ಮತ್ತು ಪರಿಸರದ ಜನರು ಹಲವು ರೀತಿಯ ಕೆಡುಕುಗಳಲ್ಲಿ ಮುಳುಗಿದ್ದರೆ ಮಕ್ಕಳ ಮೇಲೆ ಅದರ ಪ್ರಭಾವ ಬೀರಿಯೇ ತೀರುತ್ತದೆ.
2. ಹೆತ್ತವರ ಅಥವಾ ಹಿರಿಯರ ಪರಸ್ಪರ ಸಂಬಂಧದಲ್ಲಿ ಬಿರುಕು: ಹೆತ್ತವರು ಅಥವಾ ಮನೆಯ ಇತರ ಮಂದಿಯ ಪರಸ್ಪರ ಸಂಬಂಧದಲ್ಲಿ ಬಿರುಕು ಬಿಟ್ಟಿದ್ದರೂ ಮಕ್ಕಳು ಕೆಡಲು ಕಾರಣವಾಗುತ್ತದೆ. ದಿನನಿತ್ಯದ ಜಗಳ, ಮೂದಲಿಕೆ, ದೂರುಗಳು ಎಂತಹ ಉತ್ತಮ ಮನೆಯನ್ನೂ ನರಕವನ್ನಾಗಿಸಿ ಬಿಡುತ್ತದೆ. ಇಂತಹ ಮನೆಗಳಲ್ಲಿ ಬೆಳೆಯುವ ಮಕ್ಕಳು ಸಾಮಾನ್ಯವಾಗಿ ತರತರದ ನೈತಿಕ ಮತ್ತು ಮಾನಸಿಕ ರೋಗಗಳಿಗೆ ತುತ್ತಾಗುತ್ತಾರೆ. ಅಧ್ಯಾಪಕರ ಪರಸ್ಪರ ಸಂಬಂಧ ಕೆಟ್ಟು ಹೋಗಿರುವ ಶಾಲೆಗಳೂ ಕೂಡ ಮಕ್ಕಳನ್ನು ಕೆಡಿಸುವ ಅಡ್ಡೆಗಳಾಗಿ ಮಾರ್ಪಡುತ್ತವೆ.
3. ಕೆಟ್ಟ ವರ್ತನೆ: ಮಕ್ಕಳು ಕೆಡಲು ಇದೂ ಕೂಡ ಪ್ರಮುಖ ಕಾರಣವಾಗಿದೆ. ಈ ಕೆಟ್ಟ ವರ್ತನೆಯು ಮಾತಾಪಿತರಿಂದ ಆಗಿರಬಹುದು ಅಥವಾ ಅಧ್ಯಾಪಕ ರಿಂದಾಗಿರಬಹುದು, ಸೋದರ ಸೋದರಿಯರಿಂದ, ಸಹಪಾಠಿಗಳಿಂದ ಮತ್ತು ಮಿತ್ರರಿಂದಲೂ ಆಗಿರಬಹುದು. ಉದಾಹರಣೆಗೆ-ದ್ವೇಷ, ತಾತ್ಸಾರ, ಗೇಲಿ, ನಿರಂತರ

ಹೊಡೆದಾಟ, ಬೆದರಿಕೆ, ಸಂಶಯ, ಕೆಟ್ಟ ಗುಮಾನಿ, ಸುಧಾರಣೆಯ ಕುರಿತು ನಿರಾಶೆ ಮತ್ತು ಇತರರನ್ನು ದೂರುತ್ತ ಇರುವುದು ಇತ್ಯಾದಿ.

4. ಕೀಳರಿಮೆ(ಬೌದ್ಧಿಕ-ದೈಹಿಕ ನ್ಯೂನತೆ ಅಥವಾ ದೌರ್ಬಲ್ಯದಿಂದಾಗಿರಬಹುದು ಅಥವಾ ನೈತಿಕ ಮೌಲ್ಯಹೀನತೆಯಿಂದಾಗಿರಬಹುದು): ಕೆಲವು ತಪ್ಪುಗಳು, ದೌರ್ಬಲ್ಯಗಳು ಅಥವಾ ದೈಹಿಕ ನ್ಯೂನತೆಯ ಕಾರಣವಾಗಿ ಒಂದು ಮಗುವನ್ನು ಸಾಮಾನ್ಯವಾಗಿ ನೀಚನೆಂದು ಭಾವಿಸಲಾಗುತ್ತದೆ ಅಥವಾ ಛೇಡಿಸಲಾಗುತ್ತದೆ. ಇದರಿಂದಾಗಿ ಕೀಳರಿಮೆಗೆ ತುತ್ತಾಗುವ ಮಗು ಕೆಟ್ಟು ಹೋಗುತ್ತದೆ.

5. ಕೆಟ್ಟ ಸಹವಾಸ: ಕೆಟ್ಟ ಮತ್ತು ದಾರಿತಪ್ಪಿದ ಮಕ್ಕಳ ಸಹವಾಸದಿಂದಲೂ ಹೆಚ್ಚಿನ ವೇಳೆ ಸಭ್ಯ ಮಾತಾಪಿತರ ಮಕ್ಕಳು ಕೆಟ್ಟ ದಾರಿ ತುಳಿಯುತ್ತಾರೆ.

6. ಮಿತ್ರರ ಸಹವಾಸದ ಕೊರತೆ: ಕೆಟ್ಟ ಸಹವಾಸದಿಂದ ಒಳ್ಳೆಯ ಮಕ್ಕಳು ಕೆಡುವಂತೆಯೇ ಮಿತ್ರರ ಸಹವಾಸದಿಂದ ವಂಚಿತರಾದ ಮಕ್ಕಳೂ ಕೆಡುಕಿನೆಡೆಗೆ ವಾಲತೊಡಗುತ್ತಾರೆ. ಮಕ್ಕಳು ಹಲವು ವಿಷಯಗಳನ್ನು ಆಟದ ಮೂಲಕ ಕಲಿಯುತ್ತಾರೆ. ಸಂತುಲಿತ ವ್ಯಕ್ತಿತ್ವ ಬೆಳೆದು ಬರಬೇಕಾದರೆ, ಮಗುವಿಗೆ ಸ್ನೇಹಿತರ ಸಹವಾಸದ ಅಗತ್ಯವೂ ಬಹಳಷ್ಟಿದೆ.

7. ಶೈಕ್ಷಣಿಕ ಹವ್ಯಾಸ ಮತ್ತು ಆಸಕ್ತಿಕರ ಚಟುವಟಿಕೆಗೆ ಅವಕಾಶವಿಲ್ಲದಿರುವುದು: ಮಕ್ಕಳು ಸದಾ ಏನನ್ನಾದರೂ ಮಾಡುತ್ತ ಕೆಡವುತ್ತ ಇರುತ್ತಾರೆ. ಬಿಡುವಿನ ವೇಳೆಯಲ್ಲಿ ಸೂಕ್ತ ಚಟುವಟಿಕೆಯ ವ್ಯವಸ್ಥೆ ಇಲ್ಲದಿದ್ದರೆ ಮಾಡಲು ಕೆಲಸವಿಲ್ಲದ ಮಕ್ಕಳು ಕೆಡುವ ಸಾಧ್ಯತೆಯೇ ಹೆಚ್ಚು.

8. ಪ್ರಮುಖ ಸ್ವಾಭಾವಿಕ ಬೇಡಿಕೆಗಳ ಪೂರೈಕೆಯಲ್ಲಿ ಅಡಚಣೆ: ಅಂದರೆ ಆಟ, ಊಟ ಮತ್ತು ವಸ್ತ್ರಧಾರಣೆಗೆ ಸಂಬಂಧಿಸಿರುವ ಸ್ವಾಭಾವಿಕ ಆಗ್ರಹಗಳ ಈಡೇರಿಕೆಯಲ್ಲಿ ಆಗಾಗ ಅಡಚಣೆ ಉಂಟಾಗುವುದು. ಅರ್ಹ ವಿಧಾನದಿಂದ ಅವು ಈಡೇರದಿರುವಾಗ, ಮಕ್ಕಳು ಅಪ್ರಿಯ ವಿಧಾನವನ್ನು ಅನುಸರಿಸಿ ಅದರ ಈಡೇರಿಕೆಗೆ ಪ್ರಯತ್ನಿಸುತ್ತಾರೆ.

9. ಧಾರಾಳ ಕುತೂಹಲ ಮತ್ತು ಸ್ವಾನುಭವ ಪಡೆಯುವ ಆಸಕ್ತಿ: ಮಕ್ಕಳು ಕೆಲವು ಅನುಚಿತ ವಿಷಯಗಳನ್ನು ಸ್ವಯಂ ಅನುಭವಿಸಿ ತಿಳಿಯಲು ಬಯಸುತ್ತಾರೆ. ಆ ರೀತಿ ಮಾಡುವುದರಿಂದ ಏನಾಗುತ್ತದೆ ಎಂದು ಅರಿಯಲು ಪ್ರಯತ್ನಿಸುತ್ತಾರೆ. ಇದು ಅವರಲ್ಲಿ ಹಲವು ಕೊರತೆ, ತಪ್ಪುಗಳಿಗೆ ಹೇತುವಾಗುತ್ತದೆ. ಈ ತಿಳಿಗೇಡಿ ಅನುಭವದ ಕಾರಣವಾಗಿ ಹಲವು ಕೇಡುಗಳು ಉದ್ಭವಿಸುತ್ತವೆ.

10. ಬಾಲ್ಯದಲ್ಲಿ ಅಗತ್ಯವಾಗಿ ಇರಬೇಕಾದಂತಹ ಆತ್ಮವಿಶ್ವಾಸ ಮತ್ತು ನಿಶ್ಚಯದಾರ್ಢ್ಯತೆಯ ಕೊರತೆಯೂ ಮಕ್ಕಳು ಕೆಡಲು ಕಾರಣವಾಗುತ್ತದೆ.

11. ನಾನು ದೊಡ್ಡವನಾಗಿದ್ದೇನೆ ಎಂದು ಬಿಂಬಿಸಲು ಮತ್ತು ಸ್ನೇಹಿತರ ನಡುವೆ ಖ್ಯಾತಿ ಗಳಿಸಲು ಪ್ರಯತ್ನಿಸುವುದರಿಂದಲೂ ಹಲವು ರೀತಿಯ ಅನುಚಿತ ಕೃತ್ಯಗಳು ಸಂಭವಿಸಿ

ಹೋಗುತ್ತದೆ. ಏಕೆಂದರೆ ಈ ಭಾವನೆಯನ್ನು ವ್ಯಕ್ತ ಪಡಿಸಲು ಸೂಕ್ತ ದಾರಿ ಸಿಗದಿದ್ದರೆ, ಅಡ್ಡ ದಾರಿಗಿಳಿದಾದರೂ ಆಶೆ ಪೂರೈಸುತ್ತಾರೆ.

12. ಪ್ರೀತಿ, ಅನುಕಂಪ ಮತ್ತು ಅರ್ಹವಾದ ಮುದ್ದಿನ ಕೊರತೆಯೂ ಮಗು ಕೆಟ್ಟು ಹೋಗಲು ಕಾರಣವಾಗುತ್ತದೆ.
13. ಅನಗತ್ಯ ಮತ್ತು ಅತಿಯಾದ ಮುದ್ದು ಕೂಡ ಮಗುವನ್ನು ಕೆಡಿಸುತ್ತದೆ.
14. ತಿಳಿಗೇಡಿತನ ಮತ್ತು ಅನನುಭವ ಹಾಗೂ ಪರಿಣಾಮದ ಬಗ್ಗೆ ಗಮನ ಇಲ್ಲದಿರುವುದು.
15. ಉನ್ನತ ಚಿಂತನೆ, ಪರಿಶುದ್ಧ ಕಲ್ಪನೆ ಮತ್ತು ಸಂತುಲಿತ ಆದರ್ಶದ ಕೊರತೆ.
16. ಆಲಸ್ಯ, ಔದಾಸೀನ್ಯ ಮತ್ತು ವ್ಯರ್ಥ ಕಾಲಹರಣ-ಅದು ಸ್ವಾರ್ಥ, ನಿರ್ಲಕ್ಷ್ಯ ಮತ್ತು ಅನಾದರದಿಂದಾಗಿರಬಹುದು ಅಥವಾ ದೈಹಿಕ ಮತ್ತು ಮಾನಸಿಕ ದೌರ್ಬಲ್ಯದಿಂದ ಆಗಿರಬಹುದು.
17. ದಿನೇ ದಿನೇ ಹೆಚ್ಚುತ್ತಿರುವ ಅಶ್ಲೀಲತೆ, ನಿರ್ಲಜ್ಜತೆ ಮತ್ತು ಫ್ಯಾಶನ್ ಪ್ರಿಯತೆಯು ಎಷ್ಟೋ ಮಂದಿಯನ್ನು ಹಾಳುಗೆಡಹಿದೆ.
18. ಮೈ ನವಿರೇಳಿಸುವ ಚಲನ ಚಿತ್ರಗಳು, ಪತ್ತೇದಾರಿ ಕಾದಂಬರಿಗಳು, ನಗ್ನ ಚಿತ್ರಗಳು ಮತ್ತು ಅಶ್ಲೀಲ ಸಾಹಿತ್ಯ.
19. ನಾಸ್ತಿಕತೆ, ದೇವನಿರಪೇಕ್ಷತೆ ಮತ್ತು ಭೌತಿಕತೆ ಇತ್ಯಾದಿಗಳ ಪರಿಣಾಮವಾಗಿ ಸಾಮೂಹಿಕ ಕ್ಷೋಭೆ ಹರಡುತ್ತಿದೆ. ಇದರಿಂದ ನವಪೀಳಿಗೆಯೂ ತೀವ್ರಗತಿಯಲ್ಲಿ ಪ್ರಭಾವಿತಗೊಳ್ಳುತ್ತಿದೆ.
20. ಶಿಕ್ಷಣ-ತರಬೇತಿಯ ಅಪೂರ್ಣ ವ್ಯವಸ್ಥೆಯೂ ಸಾಮಾನ್ಯವಾಗಿ ಮಕ್ಕಳು ಹಾಳಾಗಲು ಕಾರಣವಾಗುತ್ತದೆ.

ನಿಸ್ಸಂದೇಹವಾಗಿಯೂ ನಮ್ಮ ಮಡಿಲಿಗೆ ಅಮಾಯಕತೆಯೊಂದಿಗೇ ನೀಡಲ್ಪಡುವ ಈ ಮುಗ್ಧ ಮಕ್ಕಳು ಪ್ರೌಢತೆಗೆ ತಲುಪುವುದಕ್ಕೆ ಮುನ್ನವೇ ಎಂತೆಂತಹ ಅಪ್ರಿಯ ಅಭ್ಯಾಸ ಮತ್ತು ಗುಣಗಳನ್ನು ಬೆಳೆಸುತ್ತಾರೆಂದರೆ, ಅದನ್ನು ಕೇಳುವಾಗಲೇ ನಾವು ಲಜ್ಜೆಯಿಂದ ತಲೆ ತಗ್ಗಿಸಿ ಬಿಡುತ್ತೇವೆ. ಇಂದು ನವತರುಣರಲ್ಲಿ ಇಲ್ಲದ ಅಪರಾಧ ಗುಣ ಯಾವುದಿದೆ? ಮಾತಾಪಿತರ ಅನುಸರಣೆ ಮತ್ತು ಅಧ್ಯಾಪಕರ ಗೌರವ ಹೊರಟುಹೋಗಿದೆ. ಕರುಣೆ ಮತ್ತು ಸಹಾನುಭೂತಿ ಎಂಬ ಭಾವನೆಯೇ ಅವರ ಮನ-ಮಸ್ತಿಷ್ಕದಿಂದ ಅಳಿದು ಬಿಟ್ಟಿದೆ. ಹೃದಯ ವೈಶಾಲ್ಯತೆ, ಆತ್ಮ ನಿಯಂತ್ರಣ ಮತ್ತು ಸೌಹಾರ್ದತೆಯೆಂಬುದು ಅವರಿಂದ ಮಾರು ದೂರ ಸಾಗಿಬಿಟ್ಟಿದೆ. ಪಾಶ್ಚಾತ್ಯ ದೇಶಗಳ ಬಗ್ಗೆ ಹೇಳುವುದೇನು! ಅಲ್ಲಿನ ನವಪೀಳಿಗೆಯಲ್ಲಂತೂ ಅಪರಾಧಕೃತ್ಯ ಮಾಮೂಲಾಗಿ ಬಿಟ್ಟಿದೆ. ಹತ್ತರಿಂದ ಹದಿನಾಲ್ಕು ವರ್ಷ ಪ್ರಾಯದ ಮಕ್ಕಳೇ ಅಪಹರಣ, ಕೊಲೆ, ಸುಲಿಗೆ, ದರೋಡೆ ಮತ್ತು ವ್ಯಭಿಚಾರದಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ನಮ್ಮಲ್ಲಿಯೂ ಈ ಗುಣಗಳು ಆತಂಕಕಾರಿಯಾಗಿ ಬೆಳೆಯುತ್ತ ಇದೆ.

ಪರಿಹಾರ

ಈ ಕೆಡುಕಿಗೆ ಪರಿಹಾರವನ್ನು ಸಾಮಾನ್ಯವಾಗಿ ಜನರು ಶಿಕ್ಷೆಯ ರೂಪದಲ್ಲಿ ಅಥವಾ ಕಠಿಣ ನಿರೀಕ್ಷಣೆಯಿಂದ ತಡೆಯುವ ಮೂಲಕ ಕಂಡುಕೊಳ್ಳುತ್ತಾರೆ. ನಿಶ್ಚಯವಾಗಿಯೂ ಈ ಎರಡು ವಿಧಾನಗಳು ಪ್ರಯೋಜನಕ್ಕೆ ಬರುತ್ತವೆ. ಮಗುವಿಗೆ ತನ್ನ ಅಸಭ್ಯ ವರ್ತನೆಗೆ ಕಠಿಣ ಶಿಕ್ಷೆಯಾದಾಗ, ಅದರ ನೋವಿನ ಅನುಭವದಿಂದಲಾದರೂ ತನ್ನ ಕೃತ್ಯವನ್ನು ತೊರೆಯ ಬಹುದು. ಅದೇ ರೀತಿ, ಅಪ್ರಿಯ ಕೃತ್ಯವನ್ನು ಎಸಗಲು ಬಹಳ ದಿನಗಳ ವರೆಗೆ ಅವಕಾಶವೇ ಸಿಗದಿದ್ದಾಗ ಕೂಡ ಅದರೆಡೆಗಿನ ಒಲವು ಹೊರಟು ಹೋಗಬಹುದು. ಆದರೆ ಹೆಚ್ಚಿನ ವೇಳೆ ಮಗು, ಶಿಕ್ಷೆಯಿಂದಾಗಿ ಹೆಚ್ಚು ಹಠಮಾರಿಯಾಗುತ್ತದೆ ಮತ್ತು ಕೆಟ್ಟ ಅಭ್ಯಾಸಗಳು ಬೇರು ಬಿಡುತ್ತವೆ. ಅಂತೆಯೇ ಆಂತರಿಕವಾದ ಸಿದ್ಧತೆಯಿಲ್ಲದೆ ಬಾಹ್ಯದಿಂದ ಒತ್ತಾಯಪೂರ್ವಕ ಏನಾದರೂ ಗುಣವನ್ನು ಬಿಡಿಸಿದರೂ, ಅವಕಾಶ ಸಿಕ್ಕ ಕೂಡಲೇ ಇನ್ನಷ್ಟು ಪ್ರಬಲವಾಗಿ ಆ ಗುಣ ಪ್ರಕಟವಾಗಬಹುದು. ಹಾಗಾಗಿ ಈ ಎರಡೂ ವಿಧಾನಗಳ ಮೇಲೆ ಹೆಚ್ಚು ಭರವಸೆ ಇಡುವ ಹಾಗಿಲ್ಲ. ಪ್ರತಿಯೊಂದು ಮಗುವಿನಲ್ಲಿಯೂ ಕೆಡುಕಿನ ರೂಪ ಮತ್ತು ಕಾರಣಗಳು ಭಿನ್ನ ಭಿನ್ನವಾಗಿರುತ್ತವೆ. ಆದ್ದರಿಂದ ಎಲ್ಲರಿಗೂ ಒಂದೇ ತೆರನಾದ ಚಿಕಿತ್ಸೆ ಫಲಕಾರಿಯಾಗದು. ಮೊತ್ತ ಮೊದಲು ಕೆಡುಕಿನ ಮೂಲಭೂತ ಕಾರಣವನ್ನು ಕಂಡುಹಿಡಿಯಬೇಕು ಮತ್ತು ಅದನ್ನು ದೂರ ಮಾಡಲು ಪ್ರಯತ್ನಿಸಬೇಕು. ಬೇರು ಇರುವಷ್ಟು ಕಾಲ, ಕೆಡುಕಿನ ರೂಪ ಬದಲಾದರೂ ಸಂಪೂರ್ಣ ಸುಧಾರಣೆಯಾಗಲಾರದು. ಇಲ್ಲಿ ಕೆಲವು ಸಲಹೆಗಳನ್ನು ನೀಡಲಾಗುತ್ತದೆ. ಎಲ್ಲ ರೀತಿಯ ಕೆಡುಕಿಗೂ ಈ ಉಪಾಯಗಳು ಪರಿಣಾಮಕಾರಿಯಾಗಬಲ್ಲುದು. ಮೊದಲು ಇವುಗಳನ್ನು ಪ್ರಯೋಗಿಸಿ ನೋಡಿ.

- ಮಗುವಿನ ಪ್ರಮಾದಗಳ ಕಾರಣ, ನಿಮ್ಮ ವರ್ತನೆಯಲ್ಲಿ ಬದಲಾವಣೆಯಾಗಿದ್ದರೆ, ಅದರ ಸುಧಾರಣೆ ಮೊದಲು ಮಾಡಿರಿ. ಮಗು ನಿಮ್ಮ ಪ್ರೀತಿಯನ್ನು ಬಯಸುತ್ತದೆ. ಅವನನ್ನು ನಿಶ್ಶರ್ತವಾಗಿ ಪ್ರೀತಿಸಿರಿ. ಅಂದರೆ ಆತನ ಅಸ್ತಿತ್ವವನ್ನು ಪ್ರೀತಿಸಿರಿ, ಅವನ ಗುಣವನ್ನಲ್ಲ. ಹಾಗೆಯೇ ನಿಮ್ಮ ಮಾತು-ಕೃತಿ ಮತ್ತು ವರ್ತನೆ-ವ್ಯವಹಾರಗಳ ಮೂಲಕ ನಿಮ್ಮ ಪ್ರೀತಿಯನ್ನು ಪ್ರಕಟಿಸುತ್ತಲಿರಿ. ನೂರಾರು ಪ್ರಮಾದಗಳಿಗೆ ಇದೊಂದೇ ಪರಿಣಾಮಕಾರಿ ಚಿಕಿತ್ಸೆಯಾಗಿದೆ. ಇನ್‌ಶಾ ಅಲ್ಲಾಹ್, ನಿಮಗೆ ಹತಾಶರಾಗುವ ಅವಕಾಶವಿರದು.
- ಆಸಕ್ತಿ, ಪ್ರಾಯ ಮತ್ತು ಸಾಮರ್ಥ್ಯಾನುಸಾರ ಸೃಜನಾತ್ಮಕ ಹವ್ಯಾಸ ಮತ್ತು ಮನೆಯ ಹೊಣೆಗಾರಿಕೆಗಳಲ್ಲಿ ತೊಡಗಿಕೊಳ್ಳಲು ಅವಕಾಶ ಒದಗಿಸಿರಿ.
- ಪ್ರಮಾದಗಳ ಬಗ್ಗೆ ಏಕಾಂತದಲ್ಲಿ, ಪ್ರೀತಿಪೂರ್ವಕ ತಿಳಿಹೇಳಿರಿ. ಇತರರ ಮುಂದೆ ತಡೆಯುವುದೋ ಶಿಕ್ಷೆ ನೀಡುವುದೋ ಮಾಡಬೇಡಿರಿ. ಸಹಾನುಭೂತಿ ಮತ್ತು

ಪ್ರೀತಿಯಿಂದ ಪ್ರಮಾದಗಳನ್ನು ನಿಯಂತ್ರಿಸಿಕೊಳ್ಳಲು ಪ್ರಾಯೋಗಿಕ ವಿಧಾನ ತಿಳಿಸಿ ಕೊಡಿ.

- ಅತಿಯಾದ ನಿರೀಕ್ಷೆಯನ್ನಿರಿಸ ಬೇಡಿರಿ, ಪ್ರಾಯ, ಅನುಭವ ಮತ್ತು ತಿಳುವಳಿಕೆಗಳಿಗೆ ಸಾದ್ಯಂತ ವಿನಾಯಿತಿ ನೀಡಿರಿ. ಮಕ್ಕಳೇನಿದ್ದರೂ ಬುದ್ಧಿ ಮತ್ತು ಅನುಭವ ಕಡಿಮೆ. ಅವರಿಂದ ಹೆಚ್ಚಿನ ಕೃತ್ಯಗಳನ್ನು ಮೂಲಭೂತ ಅಗ್ರಹ ಮತ್ತು ಸ್ವಾಭಾವಿಕ ಗುಣಗಳಿಂದಾಗಿ ಸಂಭವಿಸುತ್ತವೆ.
- ಆಟ ಮತ್ತು ಒಳ್ಳೆಯ ಮಿತ್ರರೊಡನೆ ಬೆರೆಯಲು ಸಾಕಷ್ಟು ಅವಕಾಶ ಒದಗಿಸಿರಿ.
- ನಿಮ್ಮ ವರ್ತನೆಯನ್ನು ಸ್ಥಿರವಾಗಿರಿಸಿರಿ. ಈ ಮೂಲಕ ಮಕ್ಕಳು ನಿಮ್ಮ ಸ್ವಭಾವವನ್ನು ಚೆನ್ನಾಗಿ ತಿಳಿಯ ಬಲ್ಲರು ಮತ್ತು ನಿಮ್ಮ ಸಂತೋಷವನ್ನು ಪರಿಗಣಿಸುವರು.
- ಮಕ್ಕಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ ಮತ್ತು ಅವರ ಮೇಲೂ ವಿಶ್ವಾಸ ವ್ಯಕ್ತಪಡಿಸಿರಿ.
- ಮಕ್ಕಳ ಭಾವನೆ ಮತ್ತು ದೃಷ್ಟಿಕೋನಕ್ಕೆ ಮಹತ್ವ ನೀಡಿರಿ, ಅವರ ವೈಯಕ್ತಿಕತೆಯನ್ನು ಅಂಗೀಕರಿಸಿರಿ ಮತ್ತು ಅವರ ವ್ಯಕ್ತಿತ್ವದ ಘನತೆಯನ್ನು ಪರಿಗಣಿಸಿರಿ.
- ಆಸಕ್ತಿದಾಯಕ ಮತ್ತು ಪಾಠಬೋಧಕ ಕಥೆ, ಘಟನೆ-ವೃತ್ತಾಂತ ಇತ್ಯಾದಿಗಳ ಮೂಲಕ ಒಳಿತಿನೆಡೆಗೆ ಆಕರ್ಷಣೆ ಮತ್ತು ಕೆಡುಕಿನ ಮೇಲೆ ದ್ವೇಷವನ್ನು ಬೆಳೆಸಿರಿ.
- ಅನಿವಾರ್ಯ ಪರಿಸ್ಥಿತಿಯಲ್ಲಿ ಪರಿಸರವನ್ನು ಬದಲಿಸಿ, ನಿಮ್ಮ ಮಕ್ಕಳ ತಪ್ಪುಗಳನ್ನು ಅರಿಯದ ಜನರ ಮಧ್ಯೆ ನೆಲೆಸಿರಿ. ಹಾಗೆಯೇ ಮಕ್ಕಳ ವ್ಯಕ್ತಿತ್ವವನ್ನು ಗೌರವಿಸಿರಿ. ಈ ರೀತಿಯಾಗಿ ಹೊಸ ಪರಿಸರದಲ್ಲಿ, ಮಕ್ಕಳು ತನ್ನ ಕಳೆದು ಹೋದ ಸ್ಥಾನಮಾನವನ್ನು ಪುನಃ ಗಳಿಸಿಕೊಳ್ಳಬಹುದು ಮತ್ತು ಅದನ್ನು ನಿರಂತರವಾಗಿರಿಸಿಕೊಳ್ಳುವಲ್ಲಿ ಪ್ರಮಾದಗಳನ್ನು ಎಸಗಲಾರರು.

ಅಪ್ರಿಯ ಅಭ್ಯಾಸ ಮತ್ತು ಗುಣಗಳು

ಮಕ್ಕಳು ಸಾಮಾನ್ಯವಾಗಿ ಈ ಕೆಳಗಿನ ಅಪ್ರಿಯ ಅಭ್ಯಾಸ ಮತ್ತು ಗುಣಗಳಿಗೆ ಈಡಾಗುತ್ತಾರೆ. ಸತತ ಪ್ರಯತ್ನದಿಂದ ಅವುಗಳನ್ನು ತೊರೆಯುವಂತೆ ಮಾಡಬೇಕಾದ ಅಗತ್ಯವಿದೆ.

ಸುಳ್ಳು ಹೇಳುವುದು, ಕಳ್ಳತನ, ಚಾಡಿ ಹೇಳುವುದು, ಅಣಕಿಸುವುದು, ಹಾಸಿಗೆ ಒದ್ದೆ ಮಾಡುವುದು, ವಿಳಂಬಿಸುವುದು, ಕತ್ತಲಲ್ಲಿ ಭಯಪಡುವುದು, ಮರುತ್ತರ ನೀಡುವುದು, ಹಠ ಮತ್ತು ಸಿಡುಕು, ಬೀಡಿ-ಸಿಗರೇಟು ಸೇವನೆ, ಬೈದಾಡುವುದು, ಸಿನೆಮಾ ವೀಕ್ಷಿಸುವುದು, ಬಡಾಯಿ ಕೊಚ್ಚುವುದು, ಪತ್ತೇದಾರಿ ಕಾದಂಬರಿಗಳನ್ನು ಓದುವುದು, ಸಣ್ಣ ಮಕ್ಕಳಿಗೆ ಹೊಡೆಯುವುದು, ದುರ್ವ್ಯಯ, ಗೆಳೆಯರನ್ನು ಸತಾಯಿಸುವುದು, ಹುಂಬತನ, ಜಾನುವಾರುಗಳೊಡನೆ ನಿರ್ದಯೆ, ಮೈಗಳ್ಳತನ, ಮನೆ ಅಥವಾ ಶಾಲೆಯಿಂದ

ಓಡಿಹೋಗುವುದು, ಜಗಳಾಡುವುದು ಮತ್ತು ಆಟವನ್ನು ಕೆಡಿಸಿ ಹಾಕುವುದು, ಉಡಾಳತನ, ಗೊಂದಲವೆಬ್ಬಿಸುವುದು, ಹೆಸರು ಕೆಡಿಸುವುದು, ಆಜ್ಞೋಲ್ಲಂಘನೆ, ಮೋಸ ಮಾಡುವುದು, ನಿರ್ಲಜ್ಜೆಯ ಕಾರ್ಯ ಇತ್ಯಾದಿ.

ಕೆಟ್ಟ ಗುಣ ಬಿಡಿಸುವ ವಿಧಾನ

- ಮೊತ್ತಮೊದಲು ಮಗುವಿನ ಅಪ್ರಿಯ ಅಭ್ಯಾಸ-ಗುಣಗಳ ಪೈಕಿ ಕೆಲವು ಮೂಲಭೂತ ಮತ್ತು ಪ್ರಮುಖ ಕೆಡುಕನ್ನು ಗುರುತಿಸಿಕೊಳ್ಳಿ.
- ತರುವಾಯ ಒಂದೊಂದೇ ಕೆಡುಕಿನ ಬಗ್ಗೆ ಗಮನ ಹರಿಸಿರಿ. ಮೊದಲು ಆ ದುರಭ್ಯಾಸದ ಮೂಲ ಕಾರಣವನ್ನು ಸೂಕ್ಷ್ಮವಾಗಿ ಅವಲೋಕಿಸಿರಿ. ಆ ಮೇಲೆ ಅವುಗಳನ್ನು ದೂರ ಮಾಡಲು ಚಿಂತಿಸಿರಿ. ಇದರಿಂದ ಪರಿಪೂರ್ಣ ಸುಧಾರಣೆ ಸಾಧ್ಯವಾಗುತ್ತದೆ.
- ಸೂಕ್ತ ಅವಕಾಶವನ್ನು ಹುಡುಕಿಕೊಂಡು ಸುಲಭ ಗ್ರಾಹ್ಯ ವಿಧಾನದಲ್ಲಿ ಪಾಠಬೋಧಕ ಕಥೆ ಇತ್ಯಾದಿಗಳ ಮೂಲಕ, ಆ ಕೆಟ್ಟ ಗುಣದ ಕೆಟ್ಟ ಪರಿಣಾಮವನ್ನು ತಿಳಿಸಿಕೊಡಿರಿ.
- ಆ ಮೇಲೆ ಯಾವುದನ್ನೆಲ್ಲ ತೊರೆಯಬೇಕೆಂಬುದನ್ನು ಸೂಕ್ಷ್ಮವಾಗಿ ಹೇಳಿ ಕೊಡಿ ಮತ್ತು ಅದನ್ನು ತೊರೆಯುವ ವಿಧಾನವನ್ನು ತಿಳಿಸಿ ಕೊಡಿ.
- ಕೆಟ್ಟ ಗುಣವನ್ನು ತೊರೆಯುವಂತೆ ಪ್ರೇರೇಪಿಸಿ, ಮಕ್ಕಳಿಂದ ವಾಗ್ದಾನವನ್ನೂ ಪಡೆಯಿರಿ. ಒಂದು ವೇಳೆ ಅವರು ಸ್ವಯಂ ವಾಗ್ದಾನ ಉಲ್ಲಂಘಿಸಿದರೆ, ಅದಕ್ಕೆ ಸದಕಾ, ಜುಲ್ಮಾನೆ ಮತ್ತು ಶಿಕ್ಷೆಯನ್ನು ನಿಗದಿ ಪಡಿಸಿದರೆ ಹೆಚ್ಚು ಉತ್ತಮ.
- ಸುಧಾರಣೆಯ ಕುರಿತು ಹತಾಶೆಗೆ ಅವಕಾಶವನ್ನು ನೀಡಬೇಡಿರಿ. ಬದಲು ಉತ್ತಮ ಭವಿಷ್ಯದಲ್ಲಿ ವಿಶ್ವಾಸವನ್ನು ಬೆಳೆಸಿರಿ.
- ತನ್ನ ಈ ದುರ್ಗುಣವನ್ನು ಬಿಟ್ಟು ಬಿಡಬಲ್ಲೆ ಎಂಬ ಆತ್ಮ ವಿಶ್ವಾಸವನ್ನು ಮಕ್ಕಳಲ್ಲಿ ಬೆಳೆಸಿರಿ.
- ಕೇವಲ ಕಠಿಣ ಧೋರಣೆ ತಳೆಯುವುದರಿಂದ ಅಥವಾ ಕೇವಲ ದುರ್ಗುಣವನ್ನು ಎಸಗಲು ಅವಕಾಶ ನೀಡದಿರುವುದರಿಂದ ಕೆಟ್ಟ ಅಭ್ಯಾಸ ತೊರೆದು ಹೋಗುವುದಿಲ್ಲ, ಬದಲಾಗಿ ಒತ್ತಾಯ-ಬಲಾತ್ಕಾರದಿಂದಾಗಿ ಇನ್ನಷ್ಟು ಕೆಟ್ಟ ಗುಣ ಬೆಳೆದು ಬರುವ ಸಾಧ್ಯತೆ ಇದೆ. ಕಳ್ಳತನದ ಜತೆ ಸುಳ್ಳು ಮತ್ತು ಮೋಸ ಇತ್ಯಾದಿ. ಅದೇ ರೀತಿ ಸ್ವಪ್ರೇರಣೆಯಿಲ್ಲದ್ದೆ, ಕೆಟ್ಟ ಅಭ್ಯಾಸವನ್ನು ಎಸಗಲು ಅವಕಾಶ ಸಿಗದಿರುವುದರಿಂದ ಕೆಲವು ದುರ್ಗುಣಗಳು ದಮನಿಸಲ್ಪಡುತ್ತವೇನೋ ಸರಿ. ಆದರೆ ಅವಕಾಶ ದೊರೆತೊಡನೆ ಆ ಗುಣ ಇನ್ನಷ್ಟು ಪ್ರಬಲವಾಗಿ ಮೂಡಿಬರಬಹುದು. ದುರ್ಗುಣ ತೊರೆಯಲು ಮೂಲ ಕಾರಣದ ನಿವಾರಣೆ ಮತ್ತು ಮಗುವಿನಲ್ಲಿ ಅಂತಃಕರಣದ ಪ್ರೇರಣೆ ಹಾಗೂ ನಿಶ್ಚಯದಾರ್ಢ್ಯದ ಅಗತ್ಯವಿದೆ.

- ಆತ್ಮವಿಶ್ವಾಸ ಬೆಳೆಸಲಿಕ್ಕಾಗಿ ಮಗುವಿನ ಯಾವುದಾದರೂ ಉತ್ತಮ ಗುಣದ ಸಹಾಯ ಪಡೆಯಿರಿ ಮತ್ತು ಇಂತಿಂತಹ ವಿಷಯದಲ್ಲಿ ಇಷ್ಟು ಉತ್ತಮವಾಗಿ ನಿರ್ವಹಣೆ ತೋರುತ್ತೀಯಲ್ಲ, ಹಾಗಿದ್ದಮೇಲೆ ಈ ಒಂದು ಸಾಮಾನ್ಯ ದುರ್ಗುಣವನ್ನು ತೊರೆಯಲು ಏನಡ್ಡಿ ಎಂದು ಮಗುವಿಗೆ ಹೇಳಿರಿ.
- ನಿಕಟ ಪರಿಸರವನ್ನು ಪರಿವರ್ತಿಸುವ ಮೂಲಕ ದುರ್ಗುಣ ತೊರೆಯುವಲ್ಲಿ ಸೌಲಭ್ಯ ಮತ್ತು ಸಂತೋಷ ಕಾಣುವಂತೆಯೂ ದುರ್ಗುಣವನ್ನು ಮುಂದುವರಿಸಲು ಕಷ್ಟ ಮತ್ತು ವೇದನೆ ತೋರುವಂತೆಯೂ ರೂಪಿಸಿರಿ.
- ಅಗತ್ಯವಿದ್ದರೆ ಮಗುವಿನ ವಿಶ್ರಾಂತಿಯ ಜಾಗ ಅಥವಾ ಕೋಣೆಯನ್ನು ಬದಲಾಯಿಸಿರಿ.
- ಕೆಟ್ಟ ಗುಣ ತೊರೆಯುವಂತೆ ಮಾಡುವಲ್ಲಿ ಸಾಮೂಹಿಕತೆಗಿಂತ ವೈಯಕ್ತಿಕ ಗಮನವು ಹೆಚ್ಚು ಪರಿಣಾಮಕಾರಿಯಾಗಿದೆ. ಆದ್ದರಿಂದ ಪ್ರತಿಯೊಂದು ಮಗುವಿನ ಬಗ್ಗೆಯೂ ಪ್ರತ್ಯೇಕ ಗಮನವೀಯಬೇಕು.
- ಮಗು ಸ್ವಲ್ಪ ಮಟ್ಟಿಗೆ ಯಶಸ್ವಿಯಾದರೂ ಭೇಶ್ ಅನ್ನಿ ಮತ್ತು ಇನ್ನೂ ಪ್ರೋತ್ಸಾಹಿಸಿರಿ.
- ಆಜ್ಞೋಲ್ಲಂಘನೆಗೆ ಅವಕಾಶವನ್ನು ನೀಡದಿರಿ.
- ಹೆಚ್ಚಿನ ವೇಳೆ ಉತ್ತಮ ಅಭ್ಯಾಸ-ಗುಣಗಳನ್ನು ಕಲಿಸಲಾಗದ ಕಾರಣ ಕೆಟ್ಟ ಅಭ್ಯಾಸ-ಗುಣಗಳು ಬೆಳೆದು ಬರುತ್ತವೆ. ಹಾಗಾಗಿ ಸ್ವೀಕಾರಯೋಗ್ಯ ಚಾರಿತ್ರ್ಯ ಮತ್ತು ಉತ್ತಮ ಅಭ್ಯಾಸ-ಗುಣಗಳನ್ನು ಬೆಳೆಸಲು ಪ್ರಯತ್ನಿಸಿರಿ. ಆಮೇಲೆ ಅಪ್ರಿಯ ಅಭ್ಯಾಸ-ಗುಣ ಮತ್ತು ಕೆಟ್ಟ ಚಾರಿತ್ರ್ಯಕ್ಕೆ ಅವಕಾಶವೇ ಇರದು.
- ಕೆಟ್ಟ ಅಭ್ಯಾಸ-ಗುಣ, ಅವುಗಳಿಂದಾಗುವ ನಷ್ಟ ಮತ್ತು ಅವುಗಳ ತೊರೆಯುವಿಕೆ ಇತ್ಯಾದಿಗಳನ್ನು ಹೆಚ್ಚು ಪ್ರಸ್ತಾಪಿಸಬೇಡಿರಿ. ವಿಶೇಷತಃ ಒಳ್ಳೆಯ ಮಕ್ಕಳ ಮುಂದೆ. ಅನ್ಯಥಾ ಅದರ ಬಗ್ಗೆ ಕುತೂಹಲ ಹುಟ್ಟಬಹುದು ಮತ್ತು ಕೆಡುಕಿನ ಕುರಿತಾದ ದ್ವೇಷವು ಕಡಿಮೆಯಾಗ ಬಹುದು. ಸುಳ್ಳನ್ನು ತೊರೆಯಲು ಉಪದೇಶಿಸುವುದರ ಬದಲು ಸತ್ಯ ಹೇಳುವುದರ ಸತ್ಪರಿಣಾಮ ಮತ್ತು ಪ್ರಯೋಜನಗಳನ್ನು ತಿಳಿಸಿ ಕೊಡಿ. ದುರ್ಬಲರನ್ನು ಸತಾಯಿಸುವುದನ್ನು ಬಿಡಿಸಲು, ಅವರ ಬಗ್ಗೆ ಅನುಕಂಪ ಬೆಳೆಸಲು ಮತ್ತು ಅವರಿಗೆ ಸಹಾಯ ಮಾಡಲು ಪ್ರೇರೇಪಿಸಿರಿ.
- ನಿಮ್ಮಿಂದ ಸಾಧ್ಯವಾದಷ್ಟರ ಮಟ್ಟಿಗೆ ನಿರಂತರ ಪ್ರಯತ್ನಿಸಿರಿ. ಯಶಸ್ವಿಯಾಗುವಿರೆಂದು ನಿರೀಕ್ಷಿಸಬಹುದು. ಪ್ರಯತ್ನ ಫಲ ನೀಡದಿದ್ದರೂ ಮಗು ನಿಮ್ಮ ಉಪಕಾರವನ್ನು ಜೀವನ ಪರ್ಯಂತ ನೆನಪಿಡಬಹುದು. ಜೀವನದ ಯಾವುದಾದರೂ ತಿರುವಿನಲ್ಲಿ ಸುಧಾರಣೆ ಕಾಣಬಹುದು. ಕನಿಷ್ಠ ಆತನ ಸುಧಾರಣೆಗಾಗಿ ನೀವು ನಡೆಸಿದ ಪ್ರಯತ್ನಗಳ ಬಗ್ಗೆಯಾದರೂ ಇತರರಲ್ಲಿ ಪ್ರಸ್ತಾಪಿಸುವನು. ಅಲ್ಲಾಹ್ ನಿಮ್ಮ ಸತ್ ಪ್ರಯತ್ನಗಳನ್ನು ಯಶಸ್ವಿಗೊಳಿಸಲಿ.

◆ ◆ ◆

ಅಧ್ಯಾಯ-16

ಶಿಕ್ಷಣ ಸಂಸ್ಥೆಗಳ ಯಶಸ್ಸಿಗೆ ಇರುವ ಶರ್ತಗಳು

ಶಿಕ್ಷಣ ಸಂಸ್ಥೆಗಳ ಮೇಲೆ ವಿಶೇಷತಃ ಮದ್ರಸಗಳ ಮೇಲೆ ಅಪಾರವಾದ ನಿರೀಕ್ಷೆಗಳನ್ನು ಇರಿಸಲಾಗುತ್ತದೆ. ಯಾಕಿಲ್ಲ, ಇಂದು ನಾವು ಎದುರಿಸುತ್ತಿರುವ ಪರಿಸ್ಥಿತಿ ಮತ್ತು ನಮ್ಮ ಮುಂದಿನ ಪೀಳಿಗೆಯ ಭವಿಷ್ಯದ ಮೇಲೆ ಆಚ್ಛಾದಿಸಿರುವ ಅಂಧಕಾರದಲ್ಲಿ ಈ ಮದ್ರಸಗಳಂತಹ ಮಿನುಗುದೀಪಗಳಿಂದ ಮಾತ್ರವೇ ಸುಧಾರಣೆಯ ಆಶಾಕಿರಣ ಗೋಚರಿಸುತ್ತದೆ. ಹಾಗಾಗಿ ಅಲ್ಲಾಹನು ಯಾರಿಗೆಲ್ಲ ಅಂತಃಕರಣವನ್ನು ನೀಡಿರುವನೋ ಅವರು ಈ ಮಿನುಗುದೀಪಗಳನ್ನು ಆರುವುದರಿಂದ ತಡೆಯಲು ಮತ್ತು ಹೊಸ ಮಿನುಗುದೀಪಗಳನ್ನು ಬೆಳಗಿಸಲು ಪ್ರಯತ್ನಿಸುತ್ತ ಇರುತ್ತಾರೆ. ಆದರೆ ಸಂಪನ್ಮೂಲಗಳ ಕೊರತೆಯಿಂದಾಗಿ ಅವರಿಗೆ ಅನೇಕ ಎಡರುತೊಡರುಗಳು ಎದುರಾಗುತ್ತಲೂ ಇರುತ್ತವೆ.

ಇನ್ನು, ಸಾಮಾನ್ಯ ಶಿಕ್ಷಣ ಸಂಸ್ಥೆಗಳಲ್ಲಿ ಕೇವಲ ಶಿಕ್ಷಣವನ್ನು ನಿರೀಕ್ಷಿಸಬಹುದಾಗಿದೆ. ಆದರೆ ಮದ್ರಸಗಳ ಕರ್ತವ್ಯಗಳಲ್ಲಿ ಮೂರು ಪ್ರಮುಖ ಅಂಶಗಳಿರುತ್ತವೆ.

1. ವಿವಿಧ ಪಠ್ಯಗಳ ಮಾನದಂಡವು ಸಾಮಾನ್ಯ ಶಿಕ್ಷಣ ಸಂಸ್ಥೆಗಳಿಗಿಂತ ಉನ್ನತವಾಗಿರಬೇಕು.
2. ದೀನಿನ ಮೂಲಭೂತ ಶಿಕ್ಷಣವನ್ನು ಮಾತೃಭಾಷೆಯಲ್ಲಿಯೇ ನೀಡಬೇಕು.
3. ಧಾರ್ಮಿಕ, ನೈತಿಕ ಮತ್ತು ಸಾಮಾಜಿಕ ದೃಷ್ಟಿಕೋನದಂತೆ ವಿದ್ಯಾರ್ಥಿಗಳ ತರಬೇತಿ ನಡೆಯಬೇಕು. ಅದು ಅವರನ್ನು ಧರ್ಮದಲ್ಲಿ ಸ್ಥಿರವಾಗಿರಲು, ಅಲ್ಲಾಹನ ಸಜ್ಜನ ದಾಸರು, ಸಮಾಜದ ನಿಷ್ಕಾಮಸೇವಕರು ಮತ್ತು ದೇಶದ ಸತ್ಪ್ರಜೆಗಳನ್ನಾಗಿ ಮಾಡಲು ಸಹಕಾರಿಯಾಗಬೇಕು. ಹಾಗೆಯೇ ನಾಸ್ತಿಕತೆ, ಭೌತಿಕತೆ ಮತ್ತು ಅನೈತಿಕತೆಗಳ ಹಾವಳಿಗೆ ತುತ್ತಾಗುವುದರಿಂದ ರಕ್ಷಿಸುವಂತಿರಬೇಕು.

ಪ್ರಸಕ್ತ ಪರಿಸ್ಥಿತಿಯಲ್ಲಿ ಅಸಾಮಾನ್ಯ ನಿರೀಕ್ಷೆಗಳನ್ನಿರಿಸುವುದು ಅನಿರೀಕ್ಷಿತವೇನಲ್ಲ. ಆದರೆ ನಿರೀಕ್ಷೆಗಳು ಈಡೇರಬೇಕಾದರೆ, ಕೆಲವು ಅನಿವಾರ್ಯ ಶರ್ತಗಳನ್ನು ಪೂರೈಸಬೇಕಾದುದೂ ಅಗತ್ಯ. ಎಷ್ಟರ ಮಟ್ಟಿಗೆ ಈ ಶರ್ತಗಳು ಈಡೇರುವುದೋ ಅಷ್ಟರ ಮಟ್ಟಿಗೆ ಹಿತಕರ ಫಲಿತಾಂಶ ಹೊರಬೀಳುವುದು. ಸಂಸ್ಥೆಯ ಸಕಲ ಸಿಬಂದಿಗಳೂ ಈ ಶರ್ತಗಳನ್ನು ಈಡೇರಿಸಲು ಸದಾ ಚಿಂತಿಸುತ್ತ ಇರಬೇಕಾಗಿದೆ.

ಶರ್ತಗಳು ಈ ಕೆಳಗಿನಂತಿವೆ-

(1) ನಿಷ್ಕಳಂಕ ಕಾರ್ಯಕರ್ತ

ಅತಿ ಪ್ರಮುಖವಾದ ಶರ್ತವಾಗಿದೆ ಇದು. ಸಂಸ್ಥೆಗೆ ಅಗತ್ಯಾನುಸಾರ ಅರ್ಹ ಮತ್ತು ನಿಷ್ಕಳಂಕ ಕಾರ್ಯಕರ್ತರು ದೊರೆತರೆ ಉಳಿದ ಶರ್ತಗಳು ಇನ್‌ಶಾ ಅಲ್ಲಾಹ್ ಸುಲಭವಾಗಿ ಈಡೇರುವುದು. ಸಂಸ್ಥೆಯು ಸುಸೂತ್ರವಾಗಿ ಮತ್ತು ಯಶಸ್ವಿಯಾಗಿ ನಡೆಯುವುದು.

ಕಾರ್ಯಕರ್ತರಲ್ಲಿ ಈ ಕೆಳಗಿನ ಗುಣಗಳು ಇರಬೇಕಾದುದು ಅಗತ್ಯ:

- ಸಂಸ್ಥೆ ಮತ್ತು ಅದರ ಉದ್ದೇಶದೊಂದಿಗೆ ಗಾಢ ಸಂಬಂಧ; ಅದರ ನಿರ್ಮಾಣ, ಪ್ರಗತಿಗೆ ಹೊಸ ಹಾದಿ ಹುಡುಕುವ ಮತ್ತು ಅಡೆತಡೆಗಳನ್ನು ನಿವಾರಿಸುವ ದೃಢ ಸಂಕಲ್ಪ
- ಪಾಠ ಮತ್ತು ತರಬೇತಿ ನೀಡುವ ಅರ್ಹತೆ.
- ತನ್ನ ಶೈಕ್ಷಣಿಕ ಮತ್ತು ಅಧ್ಯಾಪನಾ ಸಾಮರ್ಥ್ಯಗಳನ್ನು ಹೆಚ್ಚಿಸುವ ಚಿಂತೆ.
- ವಿದ್ಯಾರ್ಥಿಗಳಿಗೆ ಸಂಪೂರ್ಣ ಪ್ರಯೋಜನ ಒದಗಿಸುವ ಆಗ್ರಹ.
- ಮಕ್ಕಳೊಡನೆ ಸ್ವಾಭಾವಿಕವಾದ ಪ್ರೀತಿ, ಸಹಾನುಭೂತಿ ಮತ್ತು ಮಮತೆಯ ಭಾವನೆ.
- ಸಂಸ್ಥೆಯ ನೀತಿ-ನಿಯಮ ಮತ್ತು ಸಮಯದ ಪಾಲನೆ.
- ವಿದ್ಯಾರ್ಥಿಗಳ ಮುಂದೆ ಉನ್ನತ ಚಾರಿತ್ರ್ಯದ ಮಾದರಿ ಮತ್ತು ಸಂತುಲಿತ ನಡತೆಯ ಪ್ರದರ್ಶನ.
- ಸಹ ಕಾರ್ಯಕರ್ತರು ಮತ್ತು ಹೊಣೆಗಾರರೊಂದಿಗೆ ಸಹಕಾರ ಮನೋಭಾವ ಮತ್ತು ಟೀಂ ವರ್ಕ್‌ನ ಸಾಮರ್ಥ್ಯ.
- ಹೊಣೆಗಾರಿಕೆಯ ಪ್ರಜ್ಞೆ ಮತ್ತು ಶ್ರದ್ಧೆಯೊಂದಿಗೆ ತನ್ನ ಕರ್ತವ್ಯವನ್ನು ನಿಭಾಯಿಸುವ ಪ್ರಯತ್ನ.
- ವಿದ್ಯಾರ್ಥಿಗಳ ಶಿಕ್ಷಣ-ತರಬೇತಿ ಮತ್ತು ಪರಿಸರದ ಸುಧಾರಣೆಯಲ್ಲಿ ಅವರ ಪೋಷಕರ ಸಹಕಾರ ಪಡೆಯುವ ಕುರಿತು ಚಿಂತನೆ.
- ಮದ್ರಸದ ಅಗತ್ಯ ಮತ್ತು ಪ್ರಯೋಜನಗಳನ್ನು ಸಮಾಜಕ್ಕೆ ಮನವರಿಕೆ ಮಾಡಿಸುವ ಸಾಮರ್ಥ್ಯ.
- ತ್ಯಾಗ, ಅಲ್ಪದರಲ್ಲಿ ತೃಪ್ತಿಯ ಹೊರತು ಇಂದಿನ ಕಾಲದಲ್ಲಿ ಧಾರ್ಮಿಕ ಶಿಕ್ಷಣವನ್ನು ಪ್ರಚಾರ ಪಡಿಸುವುದು ಅಸಾಧ್ಯವಲ್ಲದಿದ್ದರೂ ಕಷ್ಟವಂತೂ ಹೌದು.

(2) ನಿರ್ದಿಷ್ಟ ಮತ್ತು ಸ್ಪಷ್ಟ ಉದ್ದೇಶ

ಸಂಸ್ಥೆಯ ಮೂಲಭೂತ ಉದ್ದೇಶವು ನಿಶ್ಚಿತವಾಗಿರಬೇಕಾದುದು ಮಾತ್ರವಲ್ಲ, ಅದು ಅಧ್ಯಾಪಕರು, ವಿದ್ಯಾರ್ಥಿಗಳು, ಮೇಲ್ವಿಚಾರಕರು ಮತ್ತು ಜನತೆ ಎಲ್ಲರಿಗೂ ಸ್ಪಷ್ಟವಾಗಿ

ತಿಳಿದಿರಬೇಕು. ಏಕೆಂದರೆ ಇಡೀ ವ್ಯವಸ್ಥೆಯು ಅದರ ಆಧಾರದಲ್ಲಿಯೇ ನಡೆಯಬೇಕು, ಕಾರ್ಯಕರ್ತರು ಅದನ್ನು ದೃಷ್ಟಿಯಲ್ಲಿರಿಸಿ ಕಾರ್ಯಪ್ರವೃತ್ತರಾಗಬೇಕು, ನೋಡುಗರು ಅದರ ಮಾನದಂಡದಲ್ಲೇ ಪರಿಶೀಲಿಸುವಂತಾಗಬೇಕು ಮತ್ತು ಎಲ್ಲರ ಸಾಮೂಹಿಕ ಪ್ರಯತ್ನಗಳೂ ಆ ಉದ್ದೇಶವನ್ನು ಗಳಿಸುವುದಕ್ಕಾಗಿರಬೇಕು. ಉದ್ದೇಶವು ನಿರ್ಧರಿಸಿಲ್ಲದಿದ್ದರೆ ಅಥವಾ ಅದನ್ನು ಸ್ಪಷ್ಟಪಡಿಸಿರದಿದ್ದರೆ ಪ್ರತಿಯೋರ್ವರೂ ತನ್ನದೇ ದೃಷ್ಟಿಕೋನದಂತೆ ಸಂಸ್ಥೆಯನ್ನು ಬಳಸತೊಡಗುವರು. ಜನರ ವೈಯಕ್ತಿಕ ಪ್ರಯತ್ನಗಳು ವಿಭಿನ್ನ ಮಾತ್ರವಲ್ಲ, ಕೆಲವೊಮ್ಮೆ ತದ್ವಿರುದ್ಧ ದಿಕ್ಕಿನಲ್ಲಿ ನಡೆಯತೊಡಗುತ್ತವೆ. ಈ ಭಿನ್ನಾಭಿಪ್ರಾಯ ಮತ್ತು ಕಾಲೆಳೆಯುವಿಕೆಯಲ್ಲಿ ಮೂಲ ಉದ್ದೇಶವೇ ನಶಿಸಿ ಹೋಗುತ್ತದೆ. ಹೀಗೆ ಉದ್ದೇಶರಹಿತ ಸಂಸ್ಥೆಯನ್ನು ನಡೆಸುವುದರಿಂದ ಸಮಯ ಮತ್ತು ಶಕ್ತಿಯು ಪೋಲಾಗುವುದಲ್ಲದೆ ಬೇರೇನೂ ಸಾಧನೆಯಿರದು.

(3) ಜನರ ಸಹಕಾರ

ಸಂಸ್ಥೆಗಳ ಯಶಸ್ಸಿಗೆ ಇದೂ ಕೂಡ ಪ್ರಮುಖ ಶರ್ತವಾಗಿದೆ. ಇದರ ಹೊರತು ಸಾಮಾನ್ಯ ಶಾಲೆಗಳೂ ನಡೆಯಲಾರವು. ಧಾರ್ಮಿಕ ಮದ್ರಸಗಳು ದೂರದ ಮಾತು. ಸಾಮಾನ್ಯ ಶಾಲೆಗಳ ಹಿಂದೆ ಸರಕಾರ ಮತ್ತು ಸಂಪನ್ಮೂಲಗಳೂ ಇರುತ್ತವೆ; ಒತ್ತಾಯ ಮತ್ತು ಪ್ರೇರಣೆಯೂ ಇರುತ್ತದೆ. ಮೇಲಾಗಿ ಸ್ವತಃ ವಿದ್ಯಾರ್ಥಿಗಳ ಲೌಕಿಕ ಭವಿಷ್ಯದ ಪ್ರಶ್ನೆಯೂ ಇರುತ್ತದೆ. ತದ್ವಿರುದ್ಧವಾಗಿ ಮದ್ರಸಗಳಲ್ಲಿ ಎಲ್ಲ ಸವಲತ್ತುಗಳ ಕೊರತೆಯೂ ಇರುತ್ತದೆ. ಹಲವು ಅಡೆತಡೆಗಳು ಎದುರಾಗುತ್ತಲೂ ಇರುತ್ತವೆ. ಅವು ಜನರ ಸಹಕಾರದ ಹೊರತು ನಡೆಯಲು ಸಾಧ್ಯವೇ ಇಲ್ಲವೆಂಬುದು ಸ್ಪಷ್ಟ. ಏಕೆಂದರೆ ಜನರಿಂದಲೇ ಮಕ್ಕಳು (ವಿದ್ಯಾರ್ಥಿಗಳು) ಸಿಗುವರಷ್ಟೇ. ಜನರ ಸಹಕಾರದಿಂದಲೇ ವಂತಿಗೆ, ದೇಣಿಗೆ ಒದಗಬಲ್ಲದು, ಜನರ ಒತ್ತಡ ಮತ್ತು ಪ್ರಭಾವದಿಂದಲೇ ಅಡೆತಡೆಗಳು ದೂರವಾಗಬಲ್ಲುದು, ಅವರು ಸಹಕರಿಸದಿದ್ದರೆ ಸಂಸ್ಥೆ ಹೇಗೆ ತಾನೇ ನಡೆಯಬಲ್ಲುದು?

ನಿರ್ದಿಷ್ಟವಾದೊಂದು ಪ್ರತಿಷ್ಠೆಯಿರುವ ಮತ್ತು ತನ್ನ ಅಸಾಮಾನ್ಯ ಪರಿಶ್ರಮದಿಂದ ತನ್ನ ಅಗತ್ಯ ಹಾಗೂ ಪ್ರಯೋಜನವನ್ನು ಸಾಬೀತು ಪಡಿಸಿರುವಂತಹ ಸಂಸ್ಥೆಗಳೆಡೆಗೆ ಮಾತ್ರವೇ ಜನರು ಗಮನ ಹರಿಸುವರು. ಅಂತಹ ಸಂಸ್ಥೆಗಳಿಗೆ ಮಾತ್ರವೇ ಸಹಕಾರ ನೀಡುವರು:

ಆದ್ದರಿಂದ ಜನರ ಸಹಕಾರ ಪಡೆಯಲು ಸಂಸ್ಥೆಯ ಕಾರ್ಯಕರ್ತರು,

- ಸಚ್ಚಾರಿತ್ರ್ಯವಂತರು ಮತ್ತು ಸ್ನೇಹ ಜೀವಿಗಳಾಗಿರಬೇಕು.
- ಜನರೊಂದಿಗೆ ಸಂಪರ್ಕವಿರಿಸಲು ಹೆಚ್ಚೆಚ್ಚು ಅವಕಾಶವನ್ನು ಹುಡುಕುವವರಾಗಿರಬೇಕು.
- ಮದ್ರಸದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಆಮಂತ್ರಿಸುವವರಾಗಿರಬೇಕು.

- ಜನವಸತಿಯ ಕಲ್ಯಾಣ ಮತ್ತು ಅದರ ಧಾರ್ಮಿಕ, ನೈತಿಕ ಹಾಗೂ ಸಾಮಾಜಿಕ ಸುಧಾರಣೆಯ ಜತೆಗೆ ಸಾಮೂಹಿಕ ಮತ್ತು ಶುಭ ಕಾರ್ಯಗಳಲ್ಲಿ ಸಂಪೂರ್ಣ ಆಸಕ್ತಿ ವಹಿಸುವವರಾಗಿರಬೇಕು. ಅಂತೆಯೇ ವಿವಿಧ ಸಂದರ್ಭಗಳಲ್ಲಿ ಜನರಿಗೆ ಮಾರ್ಗದರ್ಶನ ಮತ್ತು ಸಹಾಯ ಮಾಡುವವರಾಗಿರಬೇಕು.
- ಸಮುದಾಯವು ಎದುರಿಸುತ್ತಿರುವ ಗುಂಪುಗಾರಿಕೆಯಿಂದ ದೂರವಿರುವುದು ಮಾತ್ರವಲ್ಲ, ಜನರನ್ನೂ ಆ ಆಪತ್ತಿನಿಂದ ರಕ್ಷಿಸುವ ಕಾರ್ಯವನ್ನು ಮಾಡಬೇಕು.
- ಒಳಿತು ಮತ್ತು ಧರ್ಮನಿಷ್ಠೆಯ ಕಾರ್ಯದಲ್ಲಿ ಪರಸ್ಪರ ಸಹಕರಿಸುವಂತೆಯೂ ಕೆಡುಕಿನ ಕಾರ್ಯದಲ್ಲಿ ಯಾರೊಂದಿಗೂ ಸಹಕರಿಸದಿರುವಂತೆಯೂ ಜನರಿಗೆ ನಿರಂತರ ಉಪದೇಶಿಸುತ್ತ ಇರಬೇಕು.
- ಜನರಿಗೆ ಧಾರ್ಮಿಕ ಶಿಕ್ಷಣದ ಮಹತ್ವ ಮತ್ತು ಅದಕ್ಕಾಗಿ ಮದ್ರಸದ ಅಗತ್ಯ ಹಾಗೂ ಪ್ರಯೋಜನಗಳನ್ನು ನಿರಂತರ ಸ್ಪಷ್ಟ ಪಡಿಸುತ್ತ ಇರಬೇಕು.
- ಧರ್ಮದ ಕ್ಷುಲ್ಲಕ ಮತ್ತು ಆಂಶಿಕ ಭಿನ್ನಾಭಿಪ್ರಾಯಗಳಿಂದ ದೂರವಿರುತ್ತ, ಕೇವಲ ತತ್ವ ಮತ್ತು ಮೂಲಭೂತ ವಿಷಯಗಳ ಬಗ್ಗೆ ಮಾತ್ರ ಒತ್ತು ನೀಡಬೇಕು. ಅಂತೆಯೇ ಎಲ್ಲ ಮದ್‌ಹಬ್‌ನವರ ಸಹಕಾರ ಪಡೆಯಲು ಪ್ರಯತ್ನಿಸಬೇಕು.
- ಸಂಸ್ಥೆಯ ವಿರುದ್ಧ ಹರಡಿರುವ ಅಥವಾ ಹರಡಿಸಿರುವ ತಪ್ಪು ಕಲ್ಪನೆ ಮತ್ತು ಕೆಟ್ಟ ಗುಮಾನಿಗಳನ್ನು ದೂರ ಮಾಡಲು ಸಂಬಂಧಿತ ವ್ಯಕ್ತಿಗಳನ್ನು ಕಾಲ ಕಾಲಕ್ಕೆ ಭೇಟಿಯಾಗಿ ನಯವಾಗಿ ಸ್ಪಷ್ಟೀಕರಣ ನೀಡಬೇಕು. ಆಕ್ಷೇಪಗಳನ್ನು ನಗುಮೊಗದಿಂದಲೇ ಆಲಿಸಬೇಕು ಮತ್ತು ಅದನ್ನು ದೂರ ಮಾಡಲು ಶ್ರಮಿಸಬೇಕು.

(4) ಸೂಕ್ತವಾದ ಕಟ್ಟಡ

ಮದ್ರಸಕ್ಕೆ ತನ್ನದೇ ಆದ ಕಟ್ಟಡವಿರಬೇಕಾದುದು ಇನ್ನೊಂದು ಪ್ರಮುಖ ಶರ್ತವಾಗಿದೆ. ಕಟ್ಟಡವು ಕಾಂಕ್ರೀಟು ಅಥವಾ ಭವ್ಯವಾಗಿರಬೇಕೆಂದೇನೂ ಇಲ್ಲ, ಸಾಮಾನ್ಯವಾದ ಕಟ್ಟಡವೂ ಬಹಳ ಉಪಯುಕ್ತವಾಗಬಲ್ಲುದು. ಅದರಲ್ಲಿ ಈ ಕೆಳಗಿನ ವಿಷಯಗಳು ಇರಬೇಕು.

- ಕಟ್ಟಡವು ಸೂಕ್ತವಾದ ಜಾಗದಲ್ಲಿ ಕಟ್ಟಿರಬೇಕು ಮತ್ತು ಪರಿಸರ ಉತ್ತಮವಾಗಿರಬೇಕು.
- ಸ್ಥಳದ ಆಯ್ಕೆ ಮತ್ತು ಕಟ್ಟಡದ ವಿನ್ಯಾಸದಲ್ಲಿ ಎಲ್ಲ ಋತುಮಾನಗಳನ್ನು ಪರಿಗಣಿಸಿರಬೇಕು.
- ಗಾಳಿ ಮತ್ತು ಬೆಳಕಿಗೆ ಮುಕ್ತ ಅವಕಾಶವಿರಬೇಕು.
- ಪ್ರತಿಯೊಂದು ತರಗತಿ ಮತ್ತು ವಿಭಾಗಕ್ಕೆ ಅಗತ್ಯದ ಸ್ಥಳಾವಕಾಶವಿರಬೇಕು.
- ಕುಡಿಯುವ ನೀರು ಮತ್ತು ಶೌಚಾಲಯದ ಸೂಕ್ತ ವ್ಯವಸ್ಥೆಯಾಗಿರಬೇಕು.
- ಸ್ವಚ್ಛತೆಯನ್ನು ಸಂಪೂರ್ಣವಾಗಿ ಪಾಲಿಸುತ್ತಿರಬೇಕು.

(5) ಅಗತ್ಯದ ವಸ್ತುಗಳು

ಸಂಸ್ಥೆಯ ಯಶಸ್ಸಿಗೆ ಈ ಕೆಳಗಿನ ವಸ್ತುಗಳೂ ಅಗತ್ಯ:

- ಸೂಕ್ತ ಪಠ್ಯ ಪುಸ್ತಕ, ಅವುಗಳ ಆಯ್ಕೆಯಲ್ಲಿ ಜಾಗರೂಕತೆ ಮತ್ತು ಸೂಕ್ತ ಸಮಯಕ್ಕೆ ಪೂರೈಕೆ.
- ಬರವಣಿಗೆ ಮತ್ತು ಸೃಜನಾತ್ಮಕ ಹವ್ಯಾಸಗಳಿಗಾಗಿ ವಿದ್ಯಾರ್ಥಿಗಳ ಬಳಿ ಅಗತ್ಯದ ವಸ್ತುಗಳು.

  ಉದಾ: ಲೇಖನಿ, ಶಾಯಿ, ಪೆನ್ಸಿಲು, ಸ್ಲೇಟು, ಕಾಪಿ ಪುಸ್ತಕ, ಕಂಪಾಸ್ ಪೆಟ್ಟಿಗೆ, ಬಣ್ಣ, ಬ್ರಶ್ ಇತ್ಯಾದಿ.
- ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಭೆ-ತರಗತಿಗಳಿಗೆ ಸ್ವಚ್ಛ ನೆಲ, ಜಮಖಾನೆ, ಬೆಂಚು, ಡೆಸ್ಕು, ಮೇಜು ಇತ್ಯಾದಿ ಅಗತ್ಯ ವಸ್ತುಗಳು.
- ಕಪ್ಪು ಹಲಗೆ (Black Board), ಬಳಪ (Chalk), ನಕಾಶೆ, ಗೋಲ (Globe), ಚಾರ್ಟ್, ಮಾದರಿ (Models), ವಿಜ್ಞಾನದ ಪ್ರಯೋಗಗಳಿಗೆ ಅಗತ್ಯದ ವಸ್ತುಗಳು.
- ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಉಪಯೋಗಕ್ಕೆ ಗ್ರಂಥಾಲಯ, ವಾಚನಾಲಯಗಳಲ್ಲಿ ಪತ್ರಿಕೆ, ನಿಯತಕಾಲಿಕಗಳು.
- ಪಠ್ಯೇತರ ಚಟುವಟಿಕೆ ಮತ್ತು ಹವ್ಯಾಸಗಳಿಗೆ ಹಾಗೂ ಸೃಜನಾತ್ಮಕ ಪ್ರತಿಭೆಗಳ ಪ್ರೋತ್ಸಾಹಕ್ಕೆ ಅಗತ್ಯವಿರುವ ವಸ್ತುಗಳು.

(6) ಆಟದ ಮೈದಾನ

ಶಾಲಾ/ಮದ್ರಸ ಕಟ್ಟಡದ ಹತ್ತಿರವೇ,

- ಸಾಮೂಹಿಕ ಹಾಜರಿ, ಕಾರ್ಯಕ್ರಮ ಮತ್ತು ಆಟಕ್ಕೆ ಒಂದು ಮೈದಾನವಿರಬೇಕು.
- ಆದರಲ್ಲಿ ಹೂ ಗಿಡ ಮತ್ತು ತರಕಾರಿ ಗಿಡಗಳನ್ನು ಬೆಳೆಯಲು ಅವಕಾಶವಿರಬೇಕು.
- ಪುಟ್ಟ ಮಕ್ಕಳಿಗೆ ಆಟದೊಂದಿಗೇ ಶಿಕ್ಷಣ ನೀಡುವ ಯೋಜನೆಯನ್ನು ಜಾರಿಗೆ ತರುವಂತಹ ಜಾಗವಿರಬೇಕು.

(7) ಶಿಸ್ತು ವ್ಯವಸ್ಥೆ

- ಪಾಠಶಾಲೆಯ ಶಿಸ್ತು ವ್ಯವಸ್ಥೆಯು ಉತ್ತಮ ಇರಬೇಕು.
- ಒಳಾಂಗಣ ವಾತಾವರಣವು ಮಕ್ಕಳ ಶಿಕ್ಷಣ-ತರಬೇತಿಗೆ ಅನುಕೂಲವಾಗಿರಬೇಕು.
- ಅಧ್ಯಾಪಕರ ಪರಸ್ಪರ ಸಂಬಂಧ ಉತ್ತಮವಿರಬೇಕು. ಅವರು ಪರಸ್ಪರ ಮತ್ತು ಮುಖ್ಯೋಪಾಧ್ಯಾಯರ ಜತೆ ಸಹಕಾರಿ ಮನೋಭಾವ ಪ್ರದರ್ಶಿಸಬೇಕು.
- ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಂಬಂಧ ಹಿತಕರವಾಗಿರಬೇಕು.

- ಪಾಠಶಾಲೆಯ ನಿತ್ಯ ಕಾರ್ಯಗಳನ್ನು ಎಲ್ಲರೂ ಪಾಲಿಸುತ್ತಿರಬೇಕು.
- ವಿದ್ಯಾರ್ಥಿಗಳಿಗೆ ಶಿಕ್ಷೆ ನೀಡುವ ಅಥವಾ ಯಾರಾದರೂ ಅಧ್ಯಾಪಕರ ವಿರುದ್ಧ ಕ್ರಮ ಕೈಗೊಳ್ಳುವ ಅಗತ್ಯ ಬೀಳಬಾರದು.
- ಶಾಲೆಯ ನೀತಿ-ನಿಯಮ ಮತ್ತು ಮುಖ್ಯೋಪಾಧ್ಯಾಯರ ಹಾಗೂ ಆಡಳಿತ ಮಂಡಳಿಯ ಆದೇಶಗಳನ್ನು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಗೌರವಿಸಬೇಕು.
- ಹಾಜರಿ ಮತ್ತು ಸಮಯ ಪಾಲನೆ ಕಟ್ಟುನಿಟ್ಟಾಗಿರಬೇಕು.
- ತರಗತಿ, ಆಟದ ಮೈದಾನ ಮತ್ತು ಬೋರ್ಡಿಂಗ್‌ನಲ್ಲಿ ವಿದ್ಯಾರ್ಥಿಗಳು ರಂಪಾಟ ಮತ್ತು ನೈತಿಕ ಕೇಡುಗಳಿಂದ ದೂರವಿರಬೇಕು.
- ವಿವಿಧ ಸಂದರ್ಭಗಳ ಶಿಷ್ಟಾಚಾರವನ್ನು ಪಾಲಿಸಬೇಕು.
- ಶಿಸ್ತು ಪಾಲನೆಯಲ್ಲಿ ಜನರ ಸಹಕಾರ ಪಡೆಯಬೇಕಾದರೆ, ಅವರ ಸಲಹೆಗಳಿಗೆ ಸಾಧ್ಯಂತ ಮಹತ್ವ ನೀಡಬೇಕು. ಸಂಸ್ಥೆಗೆ ನಷ್ಟವಾಗದ ರೀತಿಯಲ್ಲಿ ಜನರಿಗೆ ಸಾಧ್ಯಂತ ಸವಲತ್ತುಗಳನ್ನು ಒದಗಿಸಿಕೊಡಬೇಕು.
- ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಲ್ಲಿ ಸ್ವಯಂ ಶಿಸ್ತು ಬೆಳೆಸಲು ಚಿಂತಿಸಬೇಕು. ಏಕೆಂದರೆ ಬಾಹ್ಯ ಒತ್ತಡದ ಅವಕಾಶ ಆದಷ್ಟು ಕಡಿಮೆ ಸಿಗುವಂತಾಗಬೇಕು.

ಇವು ಶಿಕ್ಷಣ ಸಂಸ್ಥೆಗಳ ಯಶಸ್ಸಿಗೆ ಅಗತ್ಯವಿರುವ ಶರ್ತಗಳಾಗಿವೆ. ಆದರೆ ಈ ಶರ್ತಗಳು ಪೂರ್ತಿಯಾಗುವ ವರೆಗೆ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಬಾರದೆಂದೋ ಅಥವಾ ಮೊದಲೇ ಸ್ಥಾಪಿಸಲಾಗಿದ್ದರೆ, ಅದರ ಯಶಸ್ಸಿನ ಬಗ್ಗೆ ಹತಾಶರಾಗಬೇಕೆಂದೋ ಅರ್ಥವಲ್ಲ. ಬದಲಾಗಿ, ಸಂಸ್ಥೆಯ ಕಾರ್ಯಕರ್ತರು ಮತ್ತಿತರ ಹೊಣೆಗಾರರು ಈ ಶರ್ತಗಳನ್ನು ಪಾಲಿಸಲು ಪ್ರಯತ್ನಿಸಬೇಕು ಹಾಗೂ ಅಪಾರವಾದ ನಿರೀಕ್ಷೆಗಳನ್ನಿರಿಸಿದ ಬಳಿಕ ಅನಿರೀಕ್ಷಿತ ಫಲಿತಾಂಶ ಕಂಡು ಮನನೊಂದು ಕೊಳ್ಳಬಾರದೆಂಬುದೇ ಇದರ ಉದ್ದೇಶವಾಗಿದೆ. ಕಾರ್ಯಕರ್ತರು ಸಮರ್ಥರಾಗಿದ್ದರೆ ಮತ್ತು ಕೆಲಸಗಳ ಇಡೀ ಚಿತ್ರಣ ಅವರ ಮುಂದಿದ್ದರೆ, ಕ್ರಮೇಣ ಕ್ಲಿಷ್ಟತೆಯ ಮೇಲೆ ಹತೋಟಿ ಸಾಧಿಸಬಹುದಾಗಿದೆ. ಅಂತೆಯೇ ಸಂಸ್ಥೆಯನ್ನು ಸುಸೂತ್ರವಾಗಿ ನಡೆಸಲು ಅಗತ್ಯವಿರುವ ಶರ್ತಗಳನ್ನೂ ಪಾಲಿಸಿದಂತಾಗುತ್ತದೆ. ಸಂಪನ್ಮೂಲಗಳ ಕೊರತೆಯಿಂದ ಕೆಲಸ ಸ್ಥಗಿತಗೊಳ್ಳುವುದಿಲ್ಲ, ತಮ್ಮ ಪರಿಶ್ರಮ ಹಾಗೂ ಪ್ರಾಮಾಣಿಕತೆಯಿಂದ ಆ ಅರ್ಹತೆಯನ್ನು ಹುಟ್ಟಿಸಿದರೆ, ಅಲ್ಲಾಹ್ ಯಾರನ್ನೂ ನಿರಾಶಗೊಳಿಸಲಾರನು. ಅಲ್ಲಾಹನ ಅನುಗ್ರಹ ಭಂಡಾರವು ಅನಂತವಾದುದು.

◆ ◆ ◆

ಅಧ್ಯಾಯ-17

ಅಧ್ಯಾಪಕನ ಗುಣಗಳು

ಅಧ್ಯಾಪಕನ ಸ್ಥಾನಮಾನ ಬಹಳ ಉನ್ನತವಾದುದು. ಅವನು ವಿದ್ಯಾರ್ಥಿಗಳ ಆಧ್ಯಾತ್ಮಿಕ ತಂದೆ ಮತ್ತು ಸಮುದಾಯದ ನಿರ್ಮಾಪಕನಾಗಿದ್ದಾನೆ. ಮುಂದಿನ ಪೀಳಿಗೆಯ ಚಾರಿತ್ರ್ಯ ನಿರ್ಮಾಣ ಆತನ ಹೊಣೆಯಾಗಿದೆ. ಭವಿಷ್ಯದ ನಾಗರಿಕರ ಒಳಿತು-ಕೆಡುಕುಗಳು ಬಹುತೇಕ ಅಧ್ಯಾಪಕನ ಪ್ರಯತ್ನಗಳನ್ನು ಆಧರಿಸಿದೆ. ಹಾಗಾಗಿ ಈ ಪ್ರಮುಖ ಸ್ಥಾನವನ್ನು ಪರಿಗಣಿಸಿ, ಅವನು ಉತ್ತಮ ಗುಣವಿಶೇಷಗಳನ್ನು ಹೊಂದಿರಬೇಕಾದುದು ಅಗತ್ಯ.

ಓರ್ವ ಅಧ್ಯಾಪಕನಿಗೆ ವಿದ್ಯಾರ್ಥಿಗಳೊಂದಿಗೆ ಮಾತ್ರವಲ್ಲ, ಅವರ ಹೆತ್ತವರು ಮತ್ತು ಪೋಷಕರೊಂದಿಗೂ ಸಂಸ್ಥೆಯ ಹೊಣೆಗಾರರೊಂದಿಗೂ ಸಾಮಾನ್ಯ ಜನತೆಯೊಂದಿಗೂ ಸಂಬಂಧವಿರುತ್ತದೆ. ಆ ಪೈಕಿ ಪ್ರತಿಯೊಬ್ಬರ ದೃಷ್ಟಿಯೂ ಅಧ್ಯಾಪಕನಲ್ಲಿ ಕೆಲವು ಉನ್ನತ ಗುಣಗಳನ್ನು ಹುಡುಕುತ್ತದೆ. ಅದು ಅಗತ್ಯವೂ ಹೌದು. ಆದ್ದರಿಂದ ಅಧ್ಯಾಪಕನು ತನ್ನ ಕರ್ತವ್ಯವನ್ನು ಉತ್ತಮವಾಗಿ ನಿರ್ವಹಿಸಲು ಮತ್ತು ಆ ಎಲ್ಲ ನಿರೀಕ್ಷೆಗಳ ಮಟ್ಟಕ್ಕೆ ತಲುಪಲು, ತನ್ನಲ್ಲಿ ಅಂತಹ ಗುಣ ವಿಶೇಷಗಳನ್ನು ಬೆಳೆಸಿಕೊಳ್ಳಬೇಕಾಗಿದೆ.

ಅಧ್ಯಾಪಕ ಹೇಗಿರಬೇಕು?

(ಅ) ವಿದ್ಯಾರ್ಥಿಗಳ ದೃಷ್ಟಿಯಲ್ಲಿ

ಈ ಪ್ರಶ್ನೆಗೆ ಉತ್ತರವಾಗಿ ವಿವಿಧ ಅರ್ಹತೆ ಮತ್ತು ಒಲವಿರುವ ವಿದ್ಯಾರ್ಥಿಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಇಲ್ಲಿ ನೀಡುತ್ತಿದ್ದೇವೆ. ಉತ್ತಮ ಅಧ್ಯಾಪಕನನ್ನು ಪರೀಕ್ಷಿಸಲು ಸ್ವತಃ ವಿದ್ಯಾರ್ಥಿಗಳೇ ಉತ್ತಮ ಮಾನದಂಡವನ್ನು ಒದಗಿಸಿದ್ದಾರೆ.

1. ಸಮುದಾಯದ ನಿರ್ಮಾಪಕನೆಂಬ ನೆಲೆಯಲ್ಲಿ, ವಿದ್ಯಾರ್ಥಿಗಳ ಮೇಲೆ ತನ್ನ ವ್ಯಕ್ತಿತ್ವದ ಪ್ರಭಾವ ಬೀರಲು ಅಧ್ಯಾಪಕನು ಉನ್ನತ ಚಾರಿತ್ರ್ಯವನ್ನು ಹೊಂದಿರಬೇಕು.
2. ಆತನು ವಸ್ತ್ರಧಾರಣೆ, ರೂಪ ವಿನ್ಯಾಸದಲ್ಲಿ ಸರಳತೆಯ ಜತೆಗೆ ಪರಿಶುದ್ಧತೆಯನ್ನು ಪಾಲಿಸಬೇಕು. ಫ್ಯಾಶನ್, ಇತರರ ಅನುಕರಣೆ ಅಥವಾ ಹುಂಬತನ ಅಂತೆಯೇ ವಸ್ತ್ರ ವಿನ್ಯಾಸದಲ್ಲಿ ನಿರ್ಲಕ್ಷ್ಯ ಧೋರಣೆಯು ಅಧ್ಯಾಪಕನಿಗೆ ಹಿಡಿಸುವಂತಹದ್ದಲ್ಲ.

3. ವಿದ್ಯಾರ್ಥಿಗಳೊಂದಿಗೆ ವರ್ತನೆಯಲ್ಲಿ ನ್ಯಾಯ-ಸಮಾನತೆಯನ್ನು ಪಾಲಿಸಬೇಕು. ಯಾರೊಡನೆಯೂ ಅತಿರೇಕ ಅಥವಾ ಯಾರೊಡನೆಯೂ ವಿಶೇಷ ಒಲವು ತೋರಬಾರದು. ಎಲ್ಲರೊಡನೆಯೂ ಏಕಪ್ರಕಾರವಾಗಿ ವ್ಯವಹರಿಸಬೇಕು.
4. ಶಿಕ್ಷೆ ನೀಡುವಾಗ ಜಾಗರೂಕನಾಗಿರಬೇಕು. ರೋಷ ಪ್ರಕಟಿಸುವುದು, ಗದರಿಸುವುದು, ಮೂದಲಿಸುವುದು ಇತ್ಯಾದಿಗಳ ಬದಲು ವಿದ್ಯಾರ್ಥಿಗಳ ಭಾವನೆ ಮತ್ತು ಆತ್ಮಾಭಿಮಾನವನ್ನು ಪರಿಗಣಿಸಬೇಕು. ಸಮಾಧಾನ ಚಿತ್ತದೊಂದಿಗೆ ಅವರ ಸಮಸ್ಯೆಗಳನ್ನು ಅರಿಯಲು ಮತ್ತು ಅವುಗಳನ್ನು ಪರಿಹರಿಸಲು ಪ್ರಯತ್ನಿಸಬೇಕು.
5. ಪರಿಶ್ರಮ ಪಟ್ಟು ಕಲಿಸಬೇಕು ಮತ್ತು ವಿದ್ಯಾರ್ಥಿಗಳಿಂದಲೂ ಪರಿಶ್ರಮ ಪಡೆಯಬೇಕು. ಅದರ ಜತೆಯಲ್ಲಿಯೇ ಆಟಕ್ಕೆ ಅವಕಾಶ ನೀಡಬೇಕು ಮತ್ತು ಅದಕ್ಕೆ ಸೂಕ್ತ ಬಂದೋಬಸ್ತು ಮಾಡಬೇಕು.
6. ಹೋಮ್ ವರ್ಕ್ ಖಂಡಿತ ನೀಡಬೇಕು. ಆದರೆ ಹೆಚ್ಚು ಹೊರೆಯನ್ನು ಹೊರಿಸಬಾರದು.
7. ಹೋಮ್ ವರ್ಕ್ ಮತ್ತು ಇತರ ಬರವಣಿಗೆಯ ಕಾರ್ಯಗಳನ್ನು ಕಾಲಕಾಲಕ್ಕೆ ಪರಿಶೀಲಿಸುತ್ತ ಇರಬೇಕು. ತಿದ್ದಿದ ಬಳಿಕ ಕಾಪಿಗಳನ್ನು ಆದಷ್ಟು ಬೇಗ ಮರಳಿಸಬೇಕು. ಅನ್ಯಥಾ ವಿದ್ಯಾರ್ಥಿಗಳಲ್ಲಿ ಆಲಸ್ಯ ಬೆಳೆಯಬಹುದು.
8. ಪಾಠ ಮಾಡುವಾಗ ವಿದ್ಯಾರ್ಥಿಗಳ ಆಸಕ್ತಿ ಮತ್ತು ಗಮನವನ್ನು ಪರಿಗಣಿಸಬೇಕು. ನಿರಾಸಕ್ತಿ ಉಂಟಾಗದಂತೆ ನೋಡಿಕೊಳ್ಳಬೇಕು.
9. ತರಗತಿಯ ಎಲ್ಲ ಮಕ್ಕಳ ಅಭ್ಯಾಸ ಮತ್ತು ಗುಣಗಳನ್ನು ತಿಳಿದಿರಬೇಕು ಹಾಗೂ ಇಡೀ ತರಗತಿಯ ಮೇಲೆ ದೃಷ್ಟಿ ನೆಟ್ಟಿರಬೇಕು.
10. ಚೆನ್ನಾಗಿ ಕಲಿತವ ಮತ್ತು ಯೋಗ್ಯನಾಗಿರಬೇಕು. ಪಾಠಗಳನ್ನು ಚೆನ್ನಾಗಿ ಮನವರಿಕೆ ಮಾಡಿಸಲು ಶಕ್ತನಿರಬೇಕು.
11. ವಿದ್ಯಾರ್ಥಿಗಳ ಪ್ರಶ್ನೆ ಮತ್ತು ಆಕ್ಷೇಪಗಳಿಗೆ ಕೋಪಗೊಳ್ಳುವ ಬದಲು, ನಗುಮೊಗದಿಂದ ಉತ್ತರಿಸಿ, ಅವರನ್ನು ಸಮಾಧಾನಿಸಲು ತಿಳಿದಿರಬೇಕು.
12. ಮನಸಾರೆ ಕಲಿಸಬೇಕು. ಕೇವಲ ಶಾಸ್ತ್ರಕ್ಕೆ ಕರ್ತವ್ಯ ನಿರ್ವಹಿಸುವಂತಾಗಬಾರದು.
13. ಸಚ್ಚಾರಿತ್ರ್ಯವಂತ, ಸ್ನೇಹಜೀವಿ, ಸತ್‌ಸ್ವಭಾವಿ ಮತ್ತು ಮೃದುಭಾಷಿಯಾಗಿರಬೇಕು.
14. ಸರಳ ಮತ್ತು ಸುಲಭ ಭಾಷೆಯಲ್ಲಿ ಆಕರ್ಷಕವಾಗಿ ತಿಳಿಹೇಳುವ ಸಾಮರ್ಥ್ಯ ಇರಬೇಕು.
15. ಹಿಂದಿನ ದಿನದ ಪಾಠಗಳನ್ನು ಪುನರಾವರ್ತಿಸಿ, ಚೆನ್ನಾಗಿ ಕಂಠಪಾಠ ಮಾಡಿಸಬೇಕು.
16. ನಿರಂತರ ಪಾಠ ಮಾಡಬೇಕು. ಆದರೆ ಕೆಲವೊಮ್ಮೆ ಆಸಕ್ತಿದಾಯಕ ಮಾತುಕತೆಗೆ ಅವಕಾಶ ನೀಡಬೇಕು.

17. ಮಾತಿನ ಧಾಟಿ ಸಿಹಿಯಾಗಿರಬೇಕು. ಕಹಿ ಮಾತುಗಳನ್ನು ಕೆಲವೊಮ್ಮೆ ಆಡಬೇಕಾಗಿ ಬರಬಹುದು. ಆದರೆ ಬೆನ್ನು ಹತ್ತುವಂತಿರಬಾರದು.
18. ಅಂಕ ನೀಡುವುದರಲ್ಲಿ ಹೃದಯ ವೈಶಾಲ್ಯವಿರಬೇಕು.
19. ತನ್ನ ತರಗತಿಯ ಕೀರ್ತಿ ಹೆಚ್ಚಿಸಲು ಪ್ರಯತ್ನಿಸಬೇಕು.
20. ವಿದ್ಯಾರ್ಥಿಗಳ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಅವುಗಳನ್ನು ಪೂರೈಸಲು ಪ್ರಯತ್ನಿಸಬೇಕು. ಬಡ ವಿದ್ಯಾರ್ಥಿಗಳ ಪೋಷಣೆಯ ವ್ಯವಸ್ಥೆ ಮಾಡಿಸಬೇಕು.
21. ಕೆಲವೊಮ್ಮೆ ವಿಹಾರಕ್ಕೆ ಜತೆಯಲ್ಲಿ ಕರಕೊಂಡು ಹೋಗಬೇಕು ಮತ್ತು ಪ್ರೇಕ್ಷಣೀಯ ಸ್ಥಳಗಳ ಪರಿಚಯ ಮಾಡಿಸಿ ಕೊಡಬೇಕು.
22. ವಿದ್ಯಾರ್ಥಿಗಳಿಗೆ ವಿದ್ಯೆಯಲ್ಲಿ ಆಸಕ್ತಿ ಹುಟ್ಟುವಂತಹ ಉಪದೇಶ ನೀಡಬೇಕು.
23. ವಿದ್ಯಾರ್ಥಿಗಳಿಗೆ ಕಷ್ಟಗಳನ್ನೆದುರಿಸಲು ಅಭ್ಯಾಸ ಮಾಡಿಸಬೇಕು ಮತ್ತು ಸಂಕಷ್ಟದ ವೇಳೆ ಅವರಿಗೆ ಸಹಾಯ ಮಾಡಬೇಕು.
24. ತನ್ನ ಕುರಿತಾಗಿ ವಿದ್ಯಾರ್ಥಿಗಳ ಅಭಿಪ್ರಾಯ ಉತ್ತಮವಿರಿಸಲು ಪ್ರಯತ್ನಿಸಬೇಕು. ಎಂದೂ ತನ್ನ ವಿರುದ್ಧ ದ್ವೇಷ ಬೆಳೆಯದಂತೆ ನೋಡಿಕೊಳ್ಳಬೇಕು.

ಇವು ವಿದ್ಯಾರ್ಥಿಗಳು ತಮ್ಮ ಅಧ್ಯಾಪಕನಲ್ಲಿ ಕಾಣಬಯಸುವ ಗುಣಗಳಾಗಿವೆ. ಆ ಮುಗ್ಧರ ಯಾವ ಆಗ್ರಹವು ನ್ಯಾಯಕ್ಕೆ ವಿರುದ್ಧವಾಗಿದೆ? ಅವರ ಆಗ್ರಹಗಳನ್ನು ಕಡೆಗಣಿಸಿ ನಾವು ಯಶಸ್ವಿ ಅಧ್ಯಾಪಕರಾಗಬಲ್ಲೆವೇ?

(ಆ) ಹೆತ್ತವರ/ಪೋಷಕರ ದೃಷ್ಟಿಯಲ್ಲಿ

ಮಕ್ಕಳ ಹೆತ್ತವರು/ಪೋಷಕರು ಅಧ್ಯಾಪಕನಲ್ಲಿ ಈ ಕೆಳಗಿನ ಗುಣಗಳನು ಕಾಣ ಬಯಸುತ್ತಾರೆ.

1. ಸಚ್ಚಾರಿತ್ರ್ಯವಂತನೂ ಸ್ನೇಹಜೀವಿಯೂ ಆಗಿರಬೇಕು. ಮಕ್ಕಳೊಡನೆ ಮುಕ್ತವಾಗಿ ಬೆರೆಯಬೇಕು.
2. ನಮ್ಮ ಮಕ್ಕಳ ಮೇಲೆ ಸಾಧ್ಯವಾದಷ್ಟರ ಮಟ್ಟಿಗೆ ವೈಯಕ್ತಿಕ ಗಮನ ಹರಿಸಬೇಕು.
3. ಮಕ್ಕಳನ್ನು ಶೈಕ್ಷಣಿಕ ಮತ್ತು ನೈತಿಕ ಉನ್ನತಿಯ ಕುರಿತು ಜಾಗೃತಗೊಳಿಸಬೇಕು.
4. ನಮ್ಮೊಂದಿಗೆ ಸಂಪರ್ಕದಲ್ಲಿರಬೇಕು. ಮಕ್ಕಳ ಕುರಿತು ನಮಗೆ ಸಲಹೆ ನೀಡುತ್ತ, ನಮ್ಮಿಂದ ಸಲಹೆ ಪಡೆಯುತ್ತ ಇರಬೇಕು.
5. ನಮ್ಮ ಅಭಿಪ್ರಾಯಗಳನ್ನು ತಿಳಿಯಬೇಕು ಮತ್ತು ನಮ್ಮ ವಿಮರ್ಶೆಗಳನ್ನು ನಗುಮೊಗದೊಂದಿಗೆ ಆಲಿಸಬೇಕು.
6. ನಮ್ಮ ಮಕ್ಕಳೊಡನೆ ಪ್ರೀತಿಯಿಂದ ವ್ಯವಹರಿಸಬೇಕು. ಅವರಿಗೆ ಮಾತಾಪಿತರ ಸೇವೆ ಮತ್ತು ಅನುಸರಣೆಯ ಉಪದೇಶ ನೀಡುತ್ತಿರಬೇಕು.

7. ನಮ್ಮ ಮಕ್ಕಳ ಮುಂದೆ ನಮ್ಮ ಅಥವಾ ನಮ್ಮ ಮನೆಯ ಕುಂದು ಕೊರತೆಯನ್ನು ಎತ್ತಿ ತೋರಿಸಬಾರದು.
8. ನಮ್ಮ ಮಕ್ಕಳ ಶಿಕ್ಷಣ ಮತ್ತು ವ್ಯವಹಾರಗಳಲ್ಲಿ ನಮ್ಮ ಪ್ರಯತ್ನಗಳ ಪ್ರಭಾವವನ್ನು ಅವರಿಗೆ ಮನವರಿಕೆ ಮಾಡಿಸಿ ಕೊಡಬೇಕು.
9. ನಮ್ಮೊಡನೆ ನಮ್ಮ ಮಕ್ಕಳ ಕುಂದು ಕೊರತೆಯನ್ನು ತಿಳಿಸುವಾಗ ಜಾಗರೂಕತೆ ಪಾಲಿಸಬೇಕು.
10. ನಮ್ಮ ಮಕ್ಕಳ ತರಬೇತಿ, ಸುಧಾರಣೆ ಮತ್ತು ಭವಿಷ್ಯದ ಯಶಸ್ಸಿನ ಬಗ್ಗೆ ಸ್ವತಃ ಆಶಾಭಾವನೆಯನ್ನಿರಿಸಬೇಕು ಮತ್ತು ನಮ್ಮನ್ನು ನಿರಾಶೆಗೊಳಿಸಬಾರದು.

(ಇ) ಸಂಸ್ಥೆಯ ಹೊಣೆಗಾರರ ದೃಷ್ಟಿಯಲ್ಲಿ

ಸಂಸ್ಥೆಯ ಹೊಣೆಗಾರರು ಅಧ್ಯಾಪಕನಲ್ಲಿ ಈ ಕೆಳಗಿನ ಗುಣಗಳನ್ನು ಕಾಣಲು ಬಯಸುತ್ತಾರೆ:

1. ತನ್ನ ವಾಗ್ದಾನ ಮತ್ತು ಸ್ಥಾನಕ್ಕೆ ಅರ್ಹನಾಗಿರಬೇಕು.
2. ಕರ್ತವ್ಯ ಪಾಲಕನಾಗಿರಬೇಕು. ತನ್ನ ಕರ್ತವ್ಯಗಳನ್ನು ಚೆನ್ನಾಗಿ ಅರಿತುಕೊಂಡು ಉತ್ತಮ ರೀತಿಯಲ್ಲಿ ನಿರ್ವಹಿಸಬೇಕು.
3. ಸಂಸ್ಥೆಯ ಹಿತ ಬಯಸುವವನಾಗಿರಬೇಕು. ಅದರ ವಿಶ್ವಾಸಾರ್ಹತೆಯನ್ನು ಕಾಪಾಡಿ ಕೊಂಡುಬರಲು ಪ್ರಯತ್ನಿಸಬೇಕು. ಅದಕ್ಕಾಗಿ ತನ್ನ ಕರ್ತವ್ಯಕ್ಕಿಂತ ಹೆಚ್ಚೇ ಕೆಲಸ ಮಾಡಬೇಕು.
4. ಸ್ವಾಭಿಮಾನಿ, ಮರ್ಯಾದಸ್ಥ ಮತ್ತು ಸ್ವಲ್ಪದರಲ್ಲಿ ತೃಪ್ತಿ ಪಡುವವನಾಗಿರಬೇಕು. ಹಕ್ಕು, ಸೌಲಭ್ಯಗಳ ಆಸೆಯನ್ನಿರಿಸಿರಬಾರದು.
5. ಇತರರೊಡನೆ ಸೇರಿಕೊಂಡು ಕೆಲಸ ಮಾಡುವವನಾಗಿರಬೇಕು. ತನ್ನ ಸಹೋದ್ಯೋಗಿಗಳು ಮತ್ತು ಸಂಸ್ಥೆಯ ಹೊಣೆಗಾರರಿಗೆ ಸಂಪೂರ್ಣ ಸಹಕಾರವನ್ನು ನೀಡಬೇಕು.
6. ಮಾರ್ಗದರ್ಶನ, ಸಲಹೆಗಳನ್ನು ಆಸಕ್ತಿಯಿಂದ ಅನುಸರಿಸಬೇಕು.
7. ವಿಮರ್ಶೆ/ಟೀಕೆಗಳನ್ನು ಮುಕ್ತವಾಗಿ ಸ್ವೀಕರಿಸಬೇಕು ಮತ್ತು ತನ್ನ ಸುಧಾರಣೆಯೆಡೆಗೆ ಗಮನವೀಯಬೇಕು.
8. ಸಂಸ್ಥೆಯ ನಿಯಮ ಮತ್ತು ಸಮಯವನ್ನು ತಾನೂ ಪಾಲಿಸಬೇಕು ಮತ್ತು ವಿದ್ಯಾರ್ಥಿಗಳನ್ನೂ ಪಾಲಿಸುವಂತೆ ನೋಡಿಕೊಳ್ಳಬೇಕು.
9. ತನ್ನ ಕೆಲಸದಲ್ಲಿ ನೈಜ ಆಸಕ್ತಿ ಬೆಳೆಸಬೇಕು. ಅದನ್ನು ಒಂದು ಹೊರೆಯಂತೆ ಭಾವಿಸಬಾರದು.
10. ತನ್ನ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತ ಇರಬೇಕು.

ಸಂಸ್ಥೆಯ ವಿವಿಧ ಕಾರ್ಯಗಳನ್ನು ನೆರವೇರಿಸಲು ಬೇಕಾದ ಪ್ರತಿಭೆಯನ್ನು ಹೊಂದಲು ಪ್ರಯತ್ನಿಸಬೇಕು.

(ಈ) ಜನತೆಯ ದೃಷ್ಟಿಯಲ್ಲಿ

1. ಸಚ್ಚಾರಿತ್ರ್ಯವಂತ ಮತ್ತು ಸ್ನೇಹಜೀವಿಯಾಗಿರಬೇಕು.
2. ಜನರ ಒಳಿತಿನಲ್ಲಿ ಆಸಕ್ತಿ ಹೊಂದಿರಬೇಕು.
3. ಸಮಾಜ ಸುಧಾರಣೆಯಲ್ಲಿ ಜನರಿಗೆ ಸಹಕಾರ ಮತ್ತು ಮಾರ್ಗದರ್ಶನ ನೀಡಬೇಕು.
4. ಅವರ ಪರಸ್ಪರ ಜಗಳಗಳಲ್ಲಿ ನಿಷ್ಪಕ್ಷಪಾತಿಯಾಗಿದ್ದುಕೊಂಡು, ಅವರ ಸುಧಾರಣೆಗೆ ಪ್ರಯತ್ನಿಸಬೇಕು.
5. ಸಂಸ್ಥೆಯ ಸಮಾರಂಭಗಳಲ್ಲಿ ಭಾಗವಹಿಸಲು ಜನರನ್ನು ಆಹ್ವಾನಿಸಬೇಕು.
6. ಕೆಲವೊಮ್ಮೆ ಖ್ಯಾತ ವ್ಯಕ್ತಿಗಳಿಂದ ಸಾರ್ವಜನಿಕ ಭಾಷಣದ ವ್ಯವಸ್ಥೆ ಮಾಡಬೇಕು ಮತ್ತು ಜನರಿಗೆ ಅವರೊಡನೆ ಭೇಟಿಯಾಗಲು ಅವಕಾಶ ಒದಗಿಸಬೇಕು.
7. ಅವರ ಆಕ್ಷೇಪಗಳು, ಟೀಕೆ-ಟಿಪ್ಪಣಿಗಳು ಮತ್ತು ಸಲಹೆಗಳನ್ನು ಮುಕ್ತವಾಗಿ ಆಲಿಸಬೇಕು ಹಾಗೂ ಸಮಾಧಾನ ಚಿತ್ತದೊಂದಿಗೆ ಅವರ ಪ್ರಶ್ನೆಗಳಿಗೆ ಉತ್ತರಿಸಬೇಕು.

(ಉ) ಶಿಕ್ಷಣ ತಜ್ಞರ ದೃಷ್ಟಿಯಲ್ಲಿ

ಈ ಎಲ್ಲ ಕಾರಣಗಳ ಬೆಳಕಿನಲ್ಲಿ ಶಿಕ್ಷಣ ತಜ್ಞರು ಅಧ್ಯಾಪಕನಲ್ಲಿ ಈ ಕೆಳಗಿನ ಗುಣಗಳಿರಬೇಕಾದುದು ಅಗತ್ಯ ಎಂದು ಸಾರಿದ್ದಾರೆ:

1. ಉನ್ನತ ಚಾರಿತ್ರ್ಯ.
2. ಶೈಕ್ಷಣಿಕ ಸಾಮರ್ಥ್ಯ ಮತ್ತು ಅಧ್ಯಾಪನಾ ಪ್ರತಿಭೆ.
3. ಮಕ್ಕಳ ಮನಃಶಾಸ್ತ್ರ ಮತ್ತು ಶಿಕ್ಷಣ ವಿಧಾನದ ಅರಿವು.
4. ಆರೋಗ್ಯ ಮತ್ತು ಶಕ್ತಿ.
5. ಸಹನೆ-ಸಂಯಮ, ವ್ಯವಹಾರಜ್ಞಾನ ಮತ್ತು ತೀರ್ಮಾನ ಶಕ್ತಿ.
6. ಮಕ್ಕಳೊಡನೆ ಸ್ವಾಭಾವಿಕ ಪ್ರೀತಿ.
7. ಅಧ್ಯಾಪನ ವೃತ್ತಿಯಲ್ಲಿ ಸ್ವಾಭಾವಿಕ ಒಲವು.
8. ವಿದ್ಯಾರ್ಜನೆಯಲ್ಲಿ ಮುಗಿಯದ ಆಸಕ್ತಿ.
9. ಶಿಸ್ತು ಪಾಲಿಸುವ ಸಾಮರ್ಥ್ಯ.
10. ಉತ್ತಮ ವಾಕ್ಚಾತುರ್ಯ ಮತ್ತು ಪರಿಣಾಮಕಾರಿ ಮಾತುಗಾರಿಕೆ.
11. ನಿಷ್ಠೆ ಮತ್ತು ಉತ್ಸಾಹ.
12. ಸಹಾನುಭೂತಿ ಮತ್ತು ಸುಧಾರಣೆಯ ಭಾವನೆ.
13. ಸಚ್ಚಾರಿತ್ರ್ಯ ಮತ್ತು ಸ್ನೇಹಪರತೆ.

ಇವು ಪ್ರತಿಯೊಬ್ಬ ಅಧ್ಯಾಪಕನೂ ತನ್ನಲ್ಲಿ ಬೆಳೆಸಿಕೊಳ್ಳಬೇಕಾದ ಗುಣಗಳಾಗಿವೆ. ಇವುಗಳ ಹೊರತು ಶಿಕ್ಷಣ ತರಬೇತಿಯಂತಹ ಸೂಕ್ಷ್ಮ ಕಾರ್ಯವು ಪರಿಣಾಮಕಾರಿಯಾಗಲಾರವು.

ಇನ್ನು ಮದ್ರಸಾ ಅಧ್ಯಾಪಕರ ವಿಷಯದಲ್ಲಿ ಹೇಳುವುದಾದರೆ, ಅವರಲ್ಲಿ ಹೆಚ್ಚುವರಿಯಾಗಿ ಈ ಕೆಳಗಿನ ಗುಣಗಳು ಇರಬೇಕಾದುದು ಅಗತ್ಯ.

1. ವಿಶ್ವಾಸ, ವಿಚಾರ ಹಾಗೂ ಕರ್ಮ ಜೀವನದಲ್ಲಿ ಸಜ್ಜನನಾಗಿರಬೇಕು.
2. ಧಾರ್ಮಿಕ ಜ್ಞಾನವನ್ನು ಹೊಂದಿರುವುದರ ಜತೆಯಲ್ಲಿಯೇ ವಿಶ್ವಾಸ, ಚಿಂತನೆಯಲ್ಲಿಯೂ ಮುಸ್ಲಿಮನಾಗಿರಬೇಕು.
3. ಇಸ್ಲಾಮೀ ಆದೇಶಗಳನ್ನು ಪಾಲಿಸುವವನೂ ಚಾರಿತ್ರ್ಯದಲ್ಲಿ ಉನ್ನತನೂ ಆಗಿರಬೇಕು.
4. ಮಿಥ್ಯ ಸಿದ್ಧಾಂತಗಳಿಂದ ಪ್ರೇರಿತನಾಗಬಾರದು, ಅವುಗಳ ಮುಂದೆ ಮಂಡಿಯೂರಲೂ ಬಾರದು.
5. ಜ್ಞಾನ-ಕರ್ಮದ ಅಹಂ ಬೆಳೆಸಿಕೊಳ್ಳಬಾರದು.
6. ಅಲ್ಪದರಲ್ಲಿ ತೃಪ್ತಿ ಮತ್ತು ತ್ಯಾಗ ಗುಣವನ್ನು ಬೆಳೆಸಿಕೊಳ್ಳಬೇಕು.
7. ಅಧಿಕಾರ-ಸಂಪತ್ತಿನ ಆಸೆಯಿರಬಾರದು.
8. ತನ್ನ ಕುಟುಂಬವನ್ನು ಶರೀಅತ್ ಪಾಲನೆ ಮಾಡುವಂತೆ ಪ್ರೇರೇಪಿಸಬೇಕು.

ಏಕೆಂದರೆ ಈ ಗುಣಗಳ ಹೊರತು ಧಾರ್ಮಿಕ ಶಿಕ್ಷಣವು ಪರಿಣಾಮ ಕಾರಿಯಾಗಲಾರದು.

◆ ◆ ◆

ಅಧ್ಯಾಯ-18

ಮುಖ್ಯೋಪಾಧ್ಯಾಯ ಮತ್ತು ಆತನ ಕರ್ತವ್ಯಗಳು

ದೇಹದಲ್ಲಿ ಮೆದುಳಿಗೆ ಮತ್ತು ಗಾಡಿಯಲ್ಲಿ ಚಾಲಕನಿಗೆ ಇರುವಷ್ಟೇ ಮಹತ್ವ ಶಾಲೆಯಲ್ಲಿ ಮುಖ್ಯೋಪಾಧ್ಯಾಯನಿಗಿರುತ್ತದೆ. ಸಂಸ್ಥೆಯನ್ನು ನಡೆಸಲು ಮತ್ತು ಶಿಕ್ಷಣ-ತರಬೇತಿಯ ವ್ಯವಸ್ಥೆಯನ್ನು ಸುಸೂತ್ರವಾಗಿ ಜಾರಿಯಲ್ಲಿರಿಸಲು ಆತನೇ ಹೊಣೆಗಾರನಾಗಿರುತ್ತಾನೆ. ಶಾಲೆಯ ಯಶಸ್ಸು-ವೈಫಲ್ಯ ಮತ್ತು ಉನ್ನತಿ-ಅವನತಿಯು ಬಹುತೇಕ ಆತನನ್ನೇ ಅವಲಂಬಿಸಿದೆ. ಸಂಸ್ಥೆಯ ಹೊಣೆಗಾರರು, ಅಧ್ಯಾಪಕರು, ವಿದ್ಯಾರ್ಥಿಗಳು, ವಿದ್ಯಾರ್ಥಿಗಳ ಪೋಷಕರು ಮತ್ತು ಸಾಮಾನ್ಯ ಜನತೆಯನ್ನು ಸಂತೃಪ್ತಿ ಪಡಿಸುವುದು ಹಾಗೂ ಅವರೆಲ್ಲರ ಸಹಕಾರವನ್ನು ಪಡೆಯುವುದು ಅವನ ಹೊಣೆಗಾರಿಕೆಯಾಗಿದೆ. ಶಾಲೆಯ ಸ್ಥಾನಮಾನ ಮತ್ತು ವ್ಯವಸ್ಥೆಯು ಅವನನ್ನೇ ಅವಲಂಬಿಸಿದೆ. ಇಷ್ಟು ವ್ಯಾಪಕವಾದ ಹೊಣೆಗಾರಿಕೆಗಳನ್ನು ವಹಿಸುವಲ್ಲಿ ಮತ್ತು ತನ್ನ ಸ್ಥಾನದ ಘನತೆಯನ್ನು ಪಾಲಿಸಿಕೊಂಡು ಬರುವಲ್ಲಿ ಮುಖ್ಯೋಪಾಧ್ಯಾಯನು ಈ ಕೆಳಗಿನ ಗುಣಗಳನ್ನು ಹೊಂದಿರಬೇಕಾದುದು ಅಗತ್ಯ.

ಗುಣಗಳು

1. ಉನ್ನತ ಚಾರಿತ್ರ್ಯ.
2. ಅಪ್ರತಿಮ ಹೊಣೆಗಾರಿಕಾ ಪ್ರಜ್ಞೆ.
3. ಕರ್ತವ್ಯ ನಿಷ್ಠೆ, ತನ್ಮಯತೆ ಮತ್ತು ಕ್ರಿಯಾಶೀಲತೆಯೊಂದಿಗೆ ಸ್ವಯಂ ಕೆಲಸ ಮಾಡುವ ಮತ್ತು ಇತರರಲ್ಲೂ ಅದೇ ಹುಮ್ಮಸ್ಸನ್ನು ಹುಟ್ಟಿಸುವ ಚಿಂತನೆ.
4. ಜನ ಸಂಪರ್ಕ.
5. ವ್ಯವಹಾರ ಚತುರತೆ ಮತ್ತು ತೀರ್ಮಾನಶಕ್ತಿ.
6. ವ್ಯವಸ್ಥಾಪನಾ ಸಾಮರ್ಥ್ಯ.
7. ಸಜ್ಜನಿಕೆ ಮತ್ತು ಸ್ನೇಹಪರತೆ.
8. ಸಹನೆ-ಸಂಯಮ.

9. ಸಂಕಲ್ಪದಂತೆ ಮುಂದುವರಿಯುವ ಚಿಂತನೆ.
10. ಹಿತಚಿಂತನೆ-ಸಹಾನುಭೂತಿ.
11. ನಗುಮೊಗದೊಂದಿಗೆ ಟೀಕೆಗಳನ್ನು ಸಹಿಸುವ, ಆಕ್ಷೇಪಕರನ್ನು ಸಂತೃಪ್ತಿ ಪಡಿಸುವ ಮತ್ತು ಜನರ ಸಲಹೆಗಳನ್ನು ಸಮಾಧಾನದಿಂದ ಪರಿಶೀಲಿಸುವ ಸಾಮರ್ಥ್ಯ.
12. ಶೈಕ್ಷಣಿಕ ಸಾಮರ್ಥ್ಯ, ಅನುಭವ ಮತ್ತು ವ್ಯವಹಾರಗಳನ್ನು ಅವಲೋಕಿಸುವ ಆಸಕ್ತಿ.
13. ಸಹಕಾರ ನೀಡುವ ಮತ್ತು ಇತರರ ಸಹಕಾರ ಪಡೆಯುವ ಗುಣ.
14. ಆತ್ಮವಿಶ್ವಾಸ ಮತ್ತು ಇತರರನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳುವ ಹಾಗೂ ಇತರರ ವಿಶ್ವಾಸ ಗಳಿಸುವ ಸಾಮರ್ಥ್ಯ.
15. ನಿಷ್ಪಕ್ಷಪಾತ, ಗುಂಪುಗಾರಿಕೆಯಿಂದ ದೂರ ಮತ್ತು ಸತ್ಯ-ನ್ಯಾಯವನ್ನು ಗೌರವಿಸುವ ಗುಣ.
16. ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮತ್ತು ಇತರರನ್ನು ಪಾಲಿಸುವಂತೆ ಮಾಡುವ ಪ್ರಯತ್ನ.

ಕರ್ತವ್ಯಗಳು

ಮುಖ್ಯೋಪಾಧ್ಯಾಯನ ಕರ್ತವ್ಯ ಮತ್ತು ಹೊಣೆಗಾರಿಕೆಗಳು ಬಹಳ ವ್ಯಾಪಕ ಹಾಗೂ ವಿಭಿನ್ನ ಪ್ರಕಾರದಲ್ಲಿರುತ್ತವೆ. ಶಾಲೆಯ ಪ್ರತಿಯೊಂದು ಸಣ್ಣ-ದೊಡ್ಡ ಎಲ್ಲ ಕಾರ್ಯಗಳ ಮೇಲ್ನೋಟ ಮತ್ತು ಅವುಗಳಿಗೆ ಉತ್ತರದಾಯಿತ್ವ ಅವನ ಮೇಲಿರುತ್ತದೆ. ಆತನ ಕರ್ತವ್ಯಗಳು ನಾನಾ ಬಗೆಯಲ್ಲಿರುತ್ತವೆ. ಇಲ್ಲಿ ವಿವಿಧ ಶೀರ್ಷಿಕೆಯಡಿಯಲ್ಲಿ ಆತನ ಪ್ರಮುಖ ಕರ್ತವ್ಯಗಳನ್ನು ನೀಡುತ್ತಿದ್ದೇವೆ.

(ಅ) ವ್ಯವಸ್ಥೆ

1. ಶಾಲಾ ಕಟ್ಟಡದ ವಿಸ್ತರಣೆ, ರಿಪೇರಿ ಮತ್ತು ಸ್ವಚ್ಛತೆಯ ವ್ಯವಸ್ಥೆಯನ್ನು ಸ್ವತಃ ಮಾಡುವುದು ಅಥವಾ ಆ ಕುರಿತ ಹೊಣೆಗಾರರ ಗಮನಕ್ಕೆ ತರುವುದು.

2. ಪೀಠೋಪಕರಣಗಳು, ಕಪ್ಪುಹಲಗೆ, ತರಗತಿಯ ವಸ್ತುಗಳು ಇತ್ಯಾದಿಗಳನ್ನು ಒದಗಿಸುವುದು. ಅವುಗಳ ರಿಪೇರಿ, ಸ್ವಚ್ಛತೆ ಮತ್ತು ಬಣ್ಣ ಬಳಿಸುವುದು.

3. ಸಾಮರ್ಥ್ಯಾನುಸಾರ ಆಗತ್ಯದ ಶೈಕ್ಷಣಿಕ ಸಾಮಗ್ರಿಗಳಿಂದ ನಕಾಶೆ, ಗೋಳ, ಕೋಷ್ಟಕ, ವಿಜ್ಞಾನದ ಮತ್ತು ಅಕ್ಷರಗಳ ಮಾದರಿಗಳು, ಅಧ್ಯಾಪಕರಿಗೆ ಉಪಯುಕ್ತವಾದ ಪುಸ್ತಕ ಇತ್ಯಾದಿಗಳನ್ನು ಕಾಲಕಾಲಕ್ಕೆ ಒದಗಿಸುವುದು.

4. ವಿವಿಧ ರೀತಿಯ ಆಟದ ಸಾಮಾನುಗಳನ್ನು ಒದಗಿಸುವುದು.

5. ಸಿಬ್ಬಂದಿಗಳು (ಅಧ್ಯಾಪಕರು ಮತ್ತಿತರರು) ಹಾಗೂ ಅವರ ಹೊಣೆಗಾರಿಕೆಗಳಲ್ಲಿ ಆಗತ್ಯಾನುಸಾರ ಅವಕಾಶ ಮತ್ತು ಹೆಚ್ಚಳ, ಬದಲಾವಣೆ ಇತ್ಯಾದಿ. ಈ ಕಾರ್ಯವನ್ನು

ಸಾದ್ಯಂತ ತರಗತಿ ಆರಂಭವಾಗುವುದಕ್ಕೆ ಮುಂಚೆಯೇ ಮಾಡಬೇಕು. ಏಕೆಂದರೆ ಶೈಕ್ಷಣಿಕ ಕಾರ್ಯವು ಆರಂಭವಾಗುವುದರಲ್ಲಿ ಅಡಚಣೆಯಾಗಬಾರದಷ್ಟೇ.

6. ಇಡೀ ವರ್ಷದ ಕಾರ್ಯಗಳ ಒಟ್ಟು ವರದಿಗಳು ಮತ್ತು ಮುಂದಿನ ಯೋಜನೆಯನ್ನು ತಯಾರಿಸುವುದು.

7. ಪ್ರಾಯ ಮತ್ತು ಸಾಮರ್ಥ್ಯಕ್ಕನುಸಾರ ಮಕ್ಕಳ ದಾಖಲಾತಿ ಹಾಗೂ ತರಗತಿ ರಚನೆ.

8. ವಿವಿಧ ಸಿಬ್ಬಂದಿ ವರ್ಗದ ಸಾಮರ್ಥ್ಯಕ್ಕೆ ಅನುಸಾರ ಕರ್ತವ್ಯಗಳ ವಿಂಗಡನೆ ಮತ್ತು ಅವುಗಳ ಪಾಲನೆಯ ಕುರಿತಾಗಿ ಅಗತ್ಯದ ವಿವರಣೆಗಳು, ಮಾರ್ಗದರ್ಶನಗಳನ್ನು ನೀಡುವುದು.

9. ಪಠ್ಯ ವಿಷಯ ಮತ್ತು ಪಠ್ಯೇತರ ಚಟುವಟಿಕೆಗಳು, ದೈಹಿಕ ಮತ್ತು ನೈತಿಕ ತರಬೇತಿಯ ಯೋಜನೆ ಹಾಗೂ ವೇಳಾ ಪಟ್ಟಿಯನ್ನು ತಯಾರಿಸುವುದು. ಅಂತೆಯೇ ಅಗತ್ಯಾನುಸಾರ ಅವುಗಳಲ್ಲಿ ಬದಲಾವಣೆ ತರುವುದು.

10. ತರಗತಿಯ ಮಾನಿಟರ್, ಆಟದ ಕಪ್ತಾನ, ವಿದ್ಯಾರ್ಥಿ ಸಮಾವೇಶ ಮತ್ತಿತರ ಪಠ್ಯೇತರ ಚಟುವಟಿಕೆಗಳಿಗೆ ವಿವಿಧ ಮೇಲ್ವಿಚಾರಕರ ನೇಮಕ ಅಥವಾ ಹೆಸರು ಸೂಚಿಸುವುದು ಇತ್ಯಾದಿ.

11. ಶಾಲಾಕಡತಗಳನ್ನು (Records) ಅಂದರೆ ದಾಖಲಾತಿ ಪುಸ್ತಕ, ಹಾಜರಿ ಪುಸ್ತಕ, ಸಿಬಂದಿಗಳ ಸ್ಟಾಕ್ ರಿಜಿಸ್ಟರ್, ಅವಲೋಕನ ಪುಸ್ತಕ, ಅಧ್ಯಾಪಕರುಗಳ ಡೈರಿಗಳು, ವಿದ್ಯಾರ್ಥಿಗಳ ಪ್ರಗತಿಯ ಕೋಷ್ಟಕ, ಲೆಕ್ಕ ಪತ್ರಗಳ ರಿಜಿಸ್ಟರ್ ಇತ್ಯಾದಿಗಳನ್ನು ಅಚ್ಚುಕಟ್ಟಾಗಿ ಮತ್ತು ನಿಯಮಿತವಾಗಿ ದಾಖಲುಗೊಳಿಸುವುದು.

(ಆ) ಮೇಲ್ವಿಚಾರಣೆ

ಶಾಲೆಯಲ್ಲಿ ನಡೆಯುವ ಎಲ್ಲ ಸಣ್ಣ-ದೊಡ್ಡ ಪಠ್ಯ ಮತ್ತು ಪಠ್ಯೇತರ ಕಾರ್ಯಗಳ ಮೇಲ್ವಿಚಾರಣೆಯು ಮುಖ್ಯೋಪಾಧ್ಯಾಯನ ಹೊಣೆಯಲ್ಲಿರುತ್ತದೆ. ಎಲ್ಲ ಕೆಲಸ ಕಾರ್ಯಗಳು ಉತ್ತಮವಾಗಿ ನಡೆಯುತ್ತಿವೆಯೇ ಎಂಬುದನ್ನು ನೋಡುವುದು ಅವನ ಕರ್ತವ್ಯವಾಗಿದೆ. ಯಾವುದಾದರೂ ವಿಷಯದಲ್ಲಿ ಏನಾದರೂ ಕೊರತೆ ಕಂಡುಬಂದರೆ ಅದರ ನಿವಾರಣೆಗೆ ಸೂಕ್ತ ವ್ಯವಸ್ಥೆ ಮಾಡುವುದು. ವಿಶೇಷತಃ,

1. **ಹಾಜರಿ ಮತ್ತು ಸಮಯ ಪಾಲನೆಯ ಮೇಲ್ನೋಟ:** ನಿರ್ದಿಷ್ಟ ಸಮಯಕ್ಕೆ ಗಂಟೆ ಬಾರಿಸುತ್ತದೋ ಮತ್ತು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿಯನ್ನು ಪಾಲಿಸುತ್ತಾರೋ ಎಂಬುದನ್ನು ನಿರಂತರ ಪರಿಶೀಲಿಸುತ್ತ ಇರಬೇಕಾದುದು ಮುಖ್ಯೋಪಾಧ್ಯಾಯನ ಕರ್ತವ್ಯವಾಗಿದೆ. ಸೂಕ್ತ ಕಾರಣವಿಲ್ಲದೆ ಗೈರು ಹಾಜರಾಗುವುದನ್ನು ಮತ್ತು ತಡವಾಗಿ ಬರುವುದನ್ನು ಎಂದಿಗೂ ಸಹಿಸಬಾರದು. ಅಂತೆಯೇ ಅನುಮತಿಯಿಲ್ಲದೆ

ತರಗತಿಯಿಂದ ಅಥವಾ ಶಾಲೆಯಿಂದ ಹೊರ ಹೋಗಗೊಡಬಾರದು. ಇವೆರಡಕ್ಕೂ ಹಾಜರಿ ಪುಸ್ತಕವನ್ನು ಇರಿಸಬೇಕು. ಸಮಯಕ್ಕೆ ಸರಿಯಾಗಿ ಹಾಜರಿಯೂ ಆಗಬೇಕು, ಹೊರಹೋಗಲು ಕೂಡ ಲಿಖಿತ ಅನುಮತಿಯನ್ನು ಪಡೆಯಲು ನಿರ್ಬಂಧಿಸಬೇಕು.

2. ತರಗತಿಯ ಮೇಲ್ನೋಟ: ಓದು-ಬರೆಹ ಸರಿಯಾಗಿ ನಡೆಯುತ್ತದೆಯೇ, ತರಗತಿಯ ಶಿಸ್ತು ಪಾಲನೆಯಾಗುತ್ತಿದೆಯೇ, ಕಪ್ಪು ಹಲಗೆ ಮತ್ತು ಶೈಕ್ಷಣಿಕ ವಸ್ತುಗಳ ಬಳಕೆಯಾಗುತ್ತದೆಯೇ ಎಂಬಿತ್ಯಾದಿ ವಿಷಯಗಳ ಬಗ್ಗೆ ದಿನನಿತ್ಯ ಕನಿಷ್ಠ ಒಂದು ಬಾರಿ ಗಸ್ತು ತಿರುಗುತ್ತ ಪರಿಶೀಲಿಸುತ್ತಲಿರಬೇಕು. ಕೆಲವೊಮ್ಮೆ ವಿದ್ಯಾರ್ಥಿಗಳ ಕಾಪಿಗಳನ್ನು ತರಿಸಿ, ಬರವಣಿಗೆಯ ಕಾರ್ಯವು ಸ್ವಚ್ಛ, ಶುದ್ಧವಾಗಿ ನಡೆಯುತ್ತದೆಯೇ ಮತ್ತು ಕಾಪಿಗಳನ್ನು ಕಾಲಕಾಲಕ್ಕೆ ಪರಿಶೀಲಿಸಲಾಗುತ್ತದೆಯೇ ಎಂಬುದನ್ನು ಅವಲೋಕಿಸುತ್ತ ಇರಬೇಕು. ಅದೇ ರೀತಿ ಆರ್ಟ್-ಕ್ರಾಫ್ಟ್‌ನಲ್ಲಿ ಮಕ್ಕಳು ಮಾಡಿರುವ ಕೆಲಸವನ್ನು ಆಗಾಗ ಅವಲೋಕಿಸುತ್ತ ಇರಬೇಕು. ನೂತನ ಮತ್ತು ಅನನುಭವಿ ಅಧ್ಯಾಪಕರ ಕಾರ್ಯದ ಬಗ್ಗೆ ತುಸು ಹೆಚ್ಚೇ ಮೇಲ್ನೋಟ ವಹಿಸಬೇಕು. ಆದರೆ ನೆನಪಿರಲಿ, ಈ ಎಲ್ಲ ಪರಿಶೀಲನಾ ಕಾರ್ಯಗಳನ್ನು ಅಧ್ಯಾಪಕರ ತಪ್ಪುಗಳನ್ನು ಹುಡುಕುವ ಉದ್ದೇಶದಿಂದ ಎಸಗಬಾರದು. ಬದಲಾಗಿ ಅಧ್ಯಾಪಕರ ತೊಂದರೆಗಳನ್ನು ದೂರೀಕರಿಸಲು, ಕೆಲಸವನ್ನು ಅತ್ಯುತ್ತಮವಾಗಿ ನಿರ್ವಹಿಸುವಂತೆ ಮಾರ್ಗದರ್ಶನ ನೀಡಲು ಮತ್ತು ಸೃಜನಾತ್ಮಕ, ಹಿತಚಿಂತನಾ ವಿಮರ್ಶೆಯ ಉದ್ದೇಶದಿಂದ ಆಗಬೇಕು. ವಿದ್ಯಾರ್ಥಿಗಳ ಎದುರಲ್ಲೇ ಅಧ್ಯಾಪಕರ ತಪ್ಪು ಮತ್ತು ಕೊರತೆಗಳನ್ನು ಎತ್ತಿ ಹೇಳಬಾರದು. ಬದಲಾಗಿ ಕಚೇರಿಗೆ ಕರೆಸಿ, ವೈಯಕ್ತಿಕವಾಗಿ ಆ ಬಗ್ಗೆ ಗಮನ ಸೆಳೆಯಬೇಕು.

3. ತರಬೇತಿ ಕಾರ್ಯದ ಮೇಲ್ನೋಟ: ವಿದ್ಯಾರ್ಥಿಗಳ ಅಭ್ಯಾಸ-ಗುಣಗಳ ಬಗ್ಗೆ ಕಟ್ಟು ನಿಟ್ಟಿನ ಮೇಲ್ನೋಟವಿರಬೇಕು. ಅವರ ಧಾರ್ಮಿಕ, ನೈತಿಕ ಮತ್ತು ಪ್ರಾಯೋಗಿಕ ತರಬೇತಿಯ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸುತ್ತ ಇರಬೇಕು. ಕೊರತೆ ಮತ್ತು ಶಿಸ್ತು ಉಲ್ಲಂಘನೆ ಕಂಡರೆ ತಕ್ಷಣ ಕ್ರಮ ಜರುಗಿಸಲು ಮುಂದಾಗಬೇಕು. ಅದರ ನಿವಾರಣೆಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಅಧ್ಯಾಪಕರು ಮತ್ತು ಮೇಲ್ವಿಚಾರಕರನ್ನು ಈ ಕುರಿತು ನಿರಂತರ ಮೇಲ್ನೋಟವಿರಿಸಲು ಸೂಚಿಸುತ್ತ ಇರಬೇಕು. ಅಂತೆಯೇ ಸ್ವಯಂ ಆ ಬಗ್ಗೆ ಸಾಕಷ್ಟು ಗಮನವೀಯಬೇಕು. ಶಿಕ್ಷಣದ ಉನ್ನತ ಮಾನದಂಡಗಳೂ ಕೂಡ ತರಬೇತಿಯಲ್ಲಿನ ಕೊರತೆಯನ್ನು ನೀಗಿಸಲಾರವು. ಆದ್ದರಿಂದ ತರಬೇತಿಯ ವಿಷಯದಲ್ಲಿ ಯಾವುದೇ ಕೊರತೆಯನ್ನು ಸಹಿಸಬಾರದು.

4. ಕಚೇರಿ ಕಾರ್ಯದ ಮೇಲ್ನೋಟ: ರಿಜಿಸ್ಟರ್‌ಗಳ ಪಾಲನೆ, ಅರ್ಜಿಗಳ ವಿಚಾರಣೆ, ಪತ್ರಗಳಿಗೆ ಕಾಲ ಕಾಲಕ್ಕೆ ಉತ್ತರ ನೀಡುವುದು, ಲೆಕ್ಕಪತ್ರಗಳ ಪಾಲನೆ ಮತ್ತು ಅಧ್ಯಾಪಕರಿಗೆ ಸಂಬಂಧಿಸಿ ಮಾಸಿಕ ವರದಿ, ಡೈರಿ, ಹಾಜರಿ ರಿಜಿಸ್ಟರ್, ವಿದ್ಯಾರ್ಥಿಗಳ ಪ್ರಗತಿ ಕಾರ್ಡ್‌ಗಳ ವಿವರಣೆ ಇತ್ಯಾದಿಗಳ ಮೇಲೆ ಗಮನವೀಯುತ್ತಿರಬೇಕು.

5. ಆರೋಗ್ಯ ಮತ್ತು ಸ್ವಚ್ಛತೆಯ ಮೇಲ್ನೋಟ: ವಿದ್ಯಾರ್ಥಿಗಳ ದೇಹ ಮತ್ತು ವಸ್ತ್ರ ಶಾಲಾ ಕೊಠಡಿ, ಆರಾಧನಾ ಕೊಠಡಿ, ವರಾಂಡ ಮತ್ತು ಹಿತ್ತಲು, ಶೌಚಾಲಯ, ಚರಂಡಿ ಇತ್ಯಾದಿಗಳ ಸ್ವಚ್ಛತೆಯ ಕುರಿತು ನಿರಂತರ ಮೇಲ್ನೋಟವನ್ನು ಇರಿಸಿಕೊಳ್ಳಬೇಕು. ಆಗಾಗ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮತ್ತು ಔಷಧಿ-ಚುಚ್ಚು ಮದ್ದುಗಳ ವ್ಯವಸ್ಥೆಯೂ ಆಗುತ್ತಿರಬೇಕು.

6. ಆಟಗಳ ಮೇಲ್ನೋಟ: ಮಕ್ಕಳ ಮಟ್ಟಿಗೆ ಆಟವೂ ಅತಿ ಅಗತ್ಯವಾದುದು. ಮಕ್ಕಳ ಪ್ರಾಯ ಮತ್ತು ದೈಹಿಕ ಕ್ಷಮತೆಯ ಆಧಾರದಲ್ಲಿ ತಂಡಗಳನ್ನು ರಚಿಸಬೇಕು. ವಿವಿಧ ರೀತಿಯ ಆಟಗಳು, ಡ್ರಿಲ್, ಪಿ.ಟಿ. ಇತ್ಯಾದಿಗಳ ವ್ಯವಸ್ಥೆಯಾಗಬೇಕು. ಆಟದಲ್ಲಿ ಆಸಕ್ತಿ ಇರುವ ಅಧ್ಯಾಪಕರನ್ನು ಆ ತಂಡಗಳ ಮೇಲ್ವಿಚಾರಕರಾಗಿ ನೇಮಿಸಬೇಕು. ಅಂತೆಯೇ ಆಟಗಳು ನಿಯಮಿತವಾಗಿ ನಡೆಯುತ್ತಿದೆಯೇ ಮತ್ತು ಹೊಣೆಗಾರ ಅಧ್ಯಾಪಕರು ಆಸಕ್ತಿ ಹಾಗೂ ಶಿಸ್ತಿನೊಂದಿಗೆ ಮೇಲ್ನೋಟ ವಹಿಸುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸುತ್ತಿರಬೇಕು. ಕೆಲವೊಮ್ಮೆ ಸ್ವತಃ ಆಟದಲ್ಲಿ ಪಾಲ್ಗೊಳ್ಳುವುದರಿಂದ ಆಸಕ್ತಿಯು ಹೆಚ್ಚುತ್ತದೆ. ಅದೇ ರೀತಿ, ಆಟದಲ್ಲಿ ಮೋಸ, ಸ್ಪರ್ಧೆಯಲ್ಲಿ ಜಗಳ ಇತ್ಯಾದಿ ಸಂಭವಿಸದಂತೆ ಹೆಚ್ಚು ಜಗರೂಕತೆ ವಹಿಸಬೇಕು. ಸೋಲು-ಗೆಲುವಿಗಿಂತ ಪ್ರಾಮಾಣಿಕತೆಗೆ ಹೆಚ್ಚು ಮಹತ್ವ ಕಲ್ಪಿಸಬೇಕು ಮತ್ತು ಸೋತರೂ ಗೆದ್ದರೂ ಸಂಯಮ ತಪ್ಪಬಾರದು, ಬದಲಾಗಿ ಆಟದಲ್ಲಿ ಕೇವಲ ಸ್ಪರ್ಧಾಮನೋಭಾವ ಇರಬೇಕು ಎಂದು ಮಕ್ಕಳಿಗೆ ಮನವರಿಕೆ ಮಾಡಿಸಿಕೊಡಬೇಕು.

7. ಹಾಸ್ಟೆಲ್‌ನ ಮೇಲ್ನೋಟ: ವಿದ್ಯಾರ್ಥಿಗಳ ತರಬೇತಿ ಮತ್ತು ಪೋಷಣೆ ಉತ್ತಮ ರೀತಿಯಲ್ಲಿ ಆಗಬೇಕು ಎಂಬ ನಿಟ್ಟಿನಲ್ಲಿ ಅವರನ್ನು ಹಾಸ್ಟೆಲಿನಲ್ಲಿರಿಸಲಾಗುತ್ತದೆ. ಇಂತಹ ಹಾಸ್ಟೆಲುಗಳಿರುವ ಕಡೆ, ಮಕ್ಕಳ ನೈತಿಕ ಮತ್ತು ಪ್ರಾಯೋಗಿಕ ತರಬೇತಿ ಉತ್ತಮ ರೀತಿಯಲ್ಲಿ ಆಗುತ್ತಿದೆಯೇ, ಆಹಾರದ ವ್ಯವಸ್ಥೆ ಸಮಾಧಾನಕರವಾಗಿದೆಯೇ, ಆರೋಗ್ಯ ಮತ್ತು ಸ್ವಚ್ಛತೆಯನ್ನು ಪಾಲಿಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವ ಹೊಣೆಗಾರಿಕೆ ಮುಖ್ಯೋಪಾಧ್ಯಾಯನ ಮೇಲಿದೆ. ಹಾಸ್ಟೆಲುಗಳಲ್ಲಿ ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಸಮಸ್ಯೆ ಇರುವುದು ಆಹಾರದ ಕುರಿತಾಗಿದೆ. ಅದರ ಕಡೆಗೆ ವಿಶೇಷ ಗಮನ ಹರಿಸಬೇಕಾಗುತ್ತದೆ. ಆಹಾರದ ವ್ಯವಸ್ಥೆಯಲ್ಲಿ ಸಾಧ್ಯಂತ ವಿದ್ಯಾರ್ಥಿಗಳ ಇಷ್ಟ ಮತ್ತು ಸಲಹೆಗಳನ್ನು ಪರಿಗಣಿಸಬೇಕು. ಈ ಬಗ್ಗೆ ಅವರಿಗೆ ಅಸಮಾಧಾನವಿರಬಾರದು. ಹಾಸ್ಟೆಲುಗಳಲ್ಲಿ ತರಬೇತಿಗೆ ಉತ್ತಮ ಅವಕಾಶಗಳಿರುತ್ತವೆಯಾದರೂ ಕೆಲವು ಮಂದಿ ಕೆಟ್ಟ ಮಕ್ಕಳ ಕಾರಣದಿಂದಾಗಿ ನೈತಿಕ ಕೇಡುಗಳುಂಟಾಗುವ ಸಾಧ್ಯತೆಯೂ ಇರುತ್ತದೆ. ಈ ಕುರಿತಾಗಿ ಹೆಚ್ಚು ಕಟ್ಟುನಿಟ್ಟಿನ ಮೇಲ್ನೋಟವಿರಬೇಕು.

ಹಾಸ್ಟೆಲ್‌ನ ಸ್ವಚ್ಛತೆ, ಶೌಚ್ಯದ ವ್ಯವಸ್ಥೆ, ಅನಾರೋಗ್ಯ ಪೀಡಿತ ವಿದ್ಯಾರ್ಥಿಗಳ ಶುಶ್ರೂಷೆ, ಆಹಾರ-ಪಾನೀಯದ ವ್ಯವಸ್ಥೆ, ನಮಾಝ್ ಸಂಸ್ಥಾಪನೆ, ವಾಚನಾಲಯ

ಮತ್ತು ಮಕ್ಕಳಂಗಡಿ ಇತ್ಯಾದಿ ವ್ಯವಸ್ಥೆಯನ್ನು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ವಿದ್ಯಾರ್ಥಿಗಳು ಸ್ವತಃ ನೋಡಿಕೊಳ್ಳುವಂತೆ ಪ್ರೇರೇಪಿಸಬೇಕು. ಸರಳ ಜೀವನ, ಪರಿಶ್ರಮ ಹಾಗೂ ತನ್ನೆಲ್ಲ ಕಾರ್ಯವನ್ನು ಸ್ವತಃ ಮಾಡುವ ಅಭ್ಯಾಸ ಅವರಲ್ಲಿ ಬೆಳೆಯಬೇಕು. ಆರೋಗ್ಯ ಸೂತ್ರ ಮತ್ತು ಸಾಮಾಜಿಕ ಶಿಷ್ಟಾಚಾರಗಳನ್ನು ಪಾಲಿಸುವಂತಾಗಬೇಕು. ಬಿಡುವಿನ ವೇಳೆಯಲ್ಲಿ ಅವರ ಚಟುವಟಿಕೆ ಮತ್ತು ಆಸಕ್ತಿಯನ್ನು ಸಂಪೂರ್ಣವಾಗಿ ಪರಿಗಣಿಸಬೇಕು.

8. ಹವ್ಯಾಸ ಮತ್ತು ಯೋಜನೆಗಳ ಮೇಲ್ನೋಟ: ಮಕ್ಕಳ ತರಬೇತಿ ಮತ್ತು ಭಾಷಣ ತರಗತಿಗಳು, ಗಾಯನ, ಚರ್ಚಾಗೋಷ್ಠಿ, ಸಂವಾದಗೋಷ್ಠಿ, ಸಮಾಜ ಸೇವಾ ವಿಭಾಗ, ಹವ್ಯಾಸಗಳು, ಪಿಕ್‌ನಿಕ್, ಶೈಕ್ಷಣಿಕ ಪ್ರವಾಸ, ಗಣ್ಯವ್ಯಕ್ತಿಗಳಿಂದ ಭಾಷಣ, ಶೈಕ್ಷಣಿಕ ಸಪ್ತಾಹಾಚರಣೆ ಮತ್ತು ಶಾಲೆಯ ಇನ್ನಿತರ ಸಮಾರಂಭಗಳು, ಪ್ರಾಥಮಿಕ ಚಿಕಿತ್ಸೆ, ಶಾಲೆಯ ಅಂಗಡಿ, ಕ್ಯಾಂಟೀನ್, ವಸ್ತುಸಂಗ್ರಹಾಲಯ, ಪ್ರದರ್ಶನಾಲಯ ಇತ್ಯಾದಿಗಳ ಮೇಲ್ನೋಟ ಮುಖ್ಯೋಪಾಧ್ಯಾಯನ ಹೊಣೆಯಾಗಿದೆ. ಇವೆಲ್ಲವುಗಳ ಕಾರ್ಯ ಚಟುವಟಿಕೆಗಳು ಅತ್ಯುತ್ತಮ ರೀತಿಯಲ್ಲಿ ನಡೆಯಬೇಕು.

9. ವಾಚನಾಲಯ ಮತ್ತು ಗ್ರಂಥಾಲಯದ ಮೇಲ್ನೋಟ: ವಾಚನಾಲಯದಲ್ಲಿ ಅಗತ್ಯದ ಮತ್ತು ಪ್ರಯೋಜನಕಾರಿಯಾದ ಪತ್ರಿಕೆ, ನಿಯತಕಾಲಿಕಗಳನ್ನು ತರಿಸಬೇಕು. ಅಂತೆಯೇ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಅವರಿಂದ ಸಂಪೂರ್ಣ ಪ್ರಯೋಜನ ಪಡೆಯುವಂತೆ ವ್ಯವಸ್ಥೆ ಮಾಡಬೇಕು. ಅದೇ ರೀತಿ ಗ್ರಂಥಾಲಯದಲ್ಲೂ ವಿವಿಧ ವಿಷಯಗಳಿಗೆ ಸಂಬಂಧಿಸಿದ ಅಗತ್ಯದ ಮತ್ತು ಪ್ರಯೋಜನಕಾರಿ ಪುಸ್ತಕಗಳನ್ನು ಇರಿಸಬೇಕು. ಅದರಿಂದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಂಪೂರ್ಣ ಪ್ರಯೋಜನ ಪಡೆಯುವಂತೆ ವ್ಯವಸ್ಥೆ ರೂಪಿಸಬೇಕು.

10. ನೆನಪಿರಲಿ, ಈ ಎಲ್ಲ ವಿಷಯಗಳ ಹೊಣೆಗಾರಿಕೆಯು ಅಧ್ಯಾಪಕರು, ಮಾನಿಟರ್ ಅಥವಾ ವಿದ್ಯಾರ್ಥಿಗಳ ತಂಡದ ಮೇಲಿರುವುದು. ಅವರಿಗೆ ಅವರವರ ವಿವೇಚನೆಗೆ ತಕ್ಕಂತೆ ಕೆಲಸ ಮಾಡುವ ಅವಕಾಶ ಒದಗಿಸಬೇಕು. ಆದರೆ ಅವೆಲ್ಲದರ ಮೇಲ್ನೋಟವನ್ನು ಮುಖ್ಯೋಪಾಧ್ಯಾಯನು ವಹಿಸಿರಬೇಕು. ಅವರ ತಪ್ಪುಗಳನ್ನು ಹುಡುಕುವುದು ಈ ಮೇಲ್ನೋಟದ ಉದ್ದೇಶವಾಗಿರಬಾರದು. ಬದಲಾಗಿ ಹೊಣೆಗಾರಿಕೆಗಳನ್ನು ಚೆನ್ನಾಗಿ ನಿರ್ವಹಿಸಲು ಸೂಕ್ತ ಸಲಹೆ ನೀಡುವುದು, ಉಪಾಯಗಳನ್ನು ಹೇಳಿಕೊಡುವುದು ಮತ್ತು ಸರಿಯಾದ ಮಾರ್ಗದರ್ಶನ ಮಾಡುವುದಾಗಿರಬೇಕು.

(ಇ) ಬೋಧನಾ ಕಾರ್ಯ

ಮುಖ್ಯೋಪಾಧ್ಯಾಯನು ಅಧಿಕೃತವಾಗಿ ಬೋಧನಾ ಕಾರ್ಯದಲ್ಲಿ ಏನಾದರೂ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬೇಕು. ಆದರೆ ಈ ಬೋಧನಾ ಕಾರ್ಯವು ಕೇವಲ

ಒಂದೇ ತರಗತಿಗೆ ಸೀಮಿತವಾಗಬಾರದು. ಬದಲಾಗಿ ಹೆಚ್ಚಿನ ತರಗತಿಗಳೊಂದಿಗೆ ಸಂಪರ್ಕ ಹೊಂದುವ ನಿಟ್ಟಿನಲ್ಲಿ ಬೇರೆ ಬೇರೆ ತರಗತಿಗಳಿಗೆ ಕಲಿಸುವ ಹೊಣೆಯನ್ನು ವಹಿಸಿಕೊಳ್ಳಬೇಕು. ಈ ಪ್ರಕಾರ ಆತ ಮಕ್ಕಳ ನೈತಿಕ ಮತ್ತು ಪ್ರಾಯೋಗಿಕ ಪ್ರಗತಿಯನ್ನು ನೇರವಾಗಿ ಅಂದಾಜಿಸಬಲ್ಲನು ಮತ್ತು ವಿವಿಧ ಪಠ್ಯಗಳಿಗೆ ಸಂಬಂಧಿಸಿ ಬೋಧನೆಯ ಪ್ರಾಯೋಗಿಕ ಮಾದರಿಯನ್ನು ನೀಡಬಲ್ಲನು. ಆದರೆ ಈ ಬೋಧನೆಯ ಕಾರ್ಯವು ವಾರದಲ್ಲಿ ಹದಿನೆಂಟು ಪೀರಿಯಡ್‌ಗಳಿಗೆ ಮೀರಬಾರದು. ಏಕೆಂದರೆ ಇತರ ಕರ್ತವ್ಯಗಳನ್ನು ನಿಭಾಯಿಸಲಿಕ್ಕೂ ಸಮಯ ಮೀಸಲಿಡಬೇಕಷ್ಟೇ.

(ಈ) ಪರೀಕ್ಷೆಗಳು, ಮೌಲ್ಯಮಾಪನ, ಅವಲೋಕನ ಇತ್ಯಾದಿಗಳ ವ್ಯವಸ್ಥೆ

ವಿದ್ಯಾರ್ಥಿಗಳ ಶಿಕ್ಷಣ-ತರಬೇತಿಯ ನಿಟ್ಟಿನಲ್ಲಿ ಸಂಸ್ಥೆಯ ಸಂಘಟಿತ ಪ್ರಯತ್ನಗಳನ್ನು ಅಂದಾಜಿಸಲಿಕ್ಕಾಗಿ ಪರೀಕ್ಷೆಗಳು ಮತ್ತು ಅವಲೋಕನ ಇತ್ಯಾದಿಗಳಿಗೆ ಅಪಾರ ಮಹತ್ವ ಇದೆ. ಅದಕ್ಕಾಗಿ ಸಾಪ್ತಾಹಿಕ ಮತ್ತು ಮಾನಸಿಕ ಪರಿಶೀಲನೆ; ತ್ರೈಮಾಸಿಕ, ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಗಳು; ಕಾಲಕಾಲಕ್ಕೆ ಧಾರ್ಮಿಕ, ನೈತಿಕ, ಸಾಮಾಜಿಕ ಹಾಗೂ ಪ್ರಾಯೋಗಿಕ ಜೀವನದ ಅವಲೋಕನ; ಭಾಷಣ-ಲೇಖನ ಕಲೆ, ಹಾಡುಗಾರಿಕೆ, ಉತ್ತಮ-ಕೈಬರಹ, ಕಲೆಗಾರಿಕೆ ಮತ್ತು ಆಟಗಳಲ್ಲಿ ಸ್ಪರ್ಧೆ; ಬೌದ್ಧಿಕ ಪರೀಕ್ಷೆಗಳು, ಅಲ್ಲದೆ ಕಾಲಕಾಲಕ್ಕೆ ಸಂಸ್ಥೆಯ ಹೊಣೆಗಾರರು ಮತ್ತು ಶಿಕ್ಷಣ ತಜ್ಞರಿಂದ ಪರಿಶೀಲನೆಯ ವ್ಯವಸ್ಥೆಯಾಗಬೇಕಾಗಿದೆ. ಈ ಅವಲೋಕನದಲ್ಲಿ ಈ ಕೆಳಗೆ ನಮೂದಿಸಿರುವ ವಿಷಯಗಳನ್ನು ಪರಿಗಣಿಸಬೇಕಾಗಿದೆ.

1. ಎಲ್ಲ ಸಂದರ್ಭದಲ್ಲೂ ಪ್ರಾಮಾಣಿಕತೆ ಪಾಲಿಸಬೇಕು ಮತ್ತು ಸೋಲು-ಗೆಲುವುಗಳಿಗಿಂತ ಹೆಚ್ಚಾಗಿ ಪ್ರಾಮಾಣಿಕತೆಗೆ ಆದ್ಯತೆ ನೀಡಬೇಕು.
2. ಸರಿಯಾದ ಅವಲೋಕನ ನಡೆಸಲು ಪ್ರಯತ್ನಿಸಬೇಕು. ಅಭಿಪ್ರಾಯ, ಗುಮಾನಿ ಮತ್ತು ಅವಲೋಕನ ನಡೆಸುವವರ ವೈಯಕ್ತಿಕ ಅಭಿಪ್ರಾಯಗಳಿಗೆ ಆದಷ್ಟು ಕಡಿಮೆ ಅವಕಾಶವಿರಲಿ.
3. ಅದಕ್ಕಾಗಿ ಕೃತಕವಾದ ವ್ಯವಸ್ಥೆ ಮಾಡಬಾರದು. ಬದಲಾಗಿ ಈ ಅವಲೋಕನವು ಶಾಲೆಯ ನಿತ್ಯಕ್ರಿಯೆಗಳ ಒಂದಂಗವೆಂದೇ ಭಾಸವಾಗುವಂತಿರಬೇಕು. ಅವಲೋಕನ ಅಥವಾ ಪರಿಶೀಲನೆ ನಡೆಸುವವರ ಮೇಲೆ ಪ್ರಭಾವ ಬೀರಲು, ಅಂತಹ ಸಂದರ್ಭದಲ್ಲಿ ಕೆಲವರು ವಿಶೇಷ ವ್ಯವಸ್ಥೆಯನ್ನು ಮಾಡುತ್ತಾರೆ. ಅದು ಒಂದು ರೀತಿಯ ಮೋಸವಾಗಿದೆ. ಆದರಿಂದ ಸಂಸ್ಥೆ ಮತ್ತು ಮುಖ್ಯೋಪಾಧ್ಯಾಯರ ಸಮೇತ ಸಿಬ್ಬಂದಿಗಳ ಘನತೆಯೂ ಕುಂದುತ್ತದೆ. ಇಂತಹ ಕೃತ್ಯಗಳಿಂದ ಆದಷ್ಟು ದೂರವಿರಬೇಕಾಗಿದೆ.
4. ಅವಲೋಕನದ ಫಲಿತಾಂಶದ ಬಗ್ಗೆ ವಿದ್ಯಾರ್ಥಿಗಳ ಪೋಷಕರು ಮತ್ತು ಸಂಸ್ಥೆಯ

ಹೊಣೆಗಾರರಿಗೆ ನಿರಂತರ ಮಾಹಿತಿ ನೀಡುತ್ತಲಿರಬೇಕು ಹಾಗೂ ಸುಧಾರಣೆಗಾಗಿ ಸೂಕ್ತ ಸಲಹೆ, ಉಪಾಯ, ಮಾರ್ಗದರ್ಶನಗಳನ್ನು ನೀಡುತ್ತಿರಬೇಕು.

5. ಫಲಿತಾಂಶದ ಬೆಳಕಿನಲ್ಲಿ ಸಿಬ್ಬಂದಿಗಳು ತಮ್ಮ ಪ್ರಯತ್ನ, ಶಿಕ್ಷಣ-ತರಬೇತಿಯ ವಿಧಾನ ಇತ್ಯಾದಿಗಳಲ್ಲಿ ಸೂಕ್ತ ಬದಲಾವಣೆ ತರಬೇಕು. ಅಂತೆಯೇ ಕೊರತೆಗಳೇನಿದ್ದರೂ ಅವುಗಳ ನಿವಾರಣೆಗೆ ಪ್ರಯತ್ನಿಸಬೇಕು.

(ಉ) ಸಂಪರ್ಕ

ತನ್ನ ಕರ್ತವ್ಯಗಳನ್ನು ಅತ್ಯುತ್ತಮ ರೀತಿಯಲ್ಲಿ ನಿಭಾಯಿಸಿಕೊಂಡು ಹೋಗಬೇಕಾದರೆ, ಮುಖ್ಯೋಪಾಧ್ಯಾಯನಿಗೆ ಇತರರ ಸಹಕಾರದ ಅಗತ್ಯ ಬಹಳವಿರುತ್ತದೆ. ಇನ್ನು ಯಾರಿಂದೆಲ್ಲ ಸಹಕಾರದ ನಿರೀಕ್ಷೆ ಇಡಲಾಗುತ್ತದೋ ಅವರೆಲ್ಲರ ಜತೆಯಲ್ಲಿ ಉತ್ತಮ ಸಂಪರ್ಕವನ್ನು ಇರಿಸಬೇಕಾಗುತ್ತದೆ ಎಂಬುದು ಸ್ಪಷ್ಟ ತಾನೇ? ಉದಾ:

1. ಅಧ್ಯಾಪಕರೊಂದಿಗೆ ಸಂಪರ್ಕ: ಅಧ್ಯಾಪಕರೊಡನೆ ಹಿತಚಿಂತನೆ ಮತ್ತು ಆತ್ಮೀಯ ಸಂಬಂಧ ಇರಿಸಬೇಕಾದುದು ಅತ್ಯಂತ ಅಗತ್ಯ. ಇವರೇ ಮುಖ್ಯೋಪಾಧ್ಯಾಯನ ಕೈಕಾಲುಗಳಾಗಿರುವರು. ಶಿಕ್ಷಣ-ತರಬೇತಿಯ ಕಾರ್ಯಗಳನ್ನು ಇವರ ಸಹಕಾರದಿಂದಲೇ ಪೂರೈಸಲಾಗುತ್ತದೆ. ಅವರನ್ನು ಸಂತೃಪ್ತಿ ಪಡಿಸುವುದು, ಅವರ ಸಲಹೆಗಳಿಂದ ಸಂಪೂರ್ಣ ಪ್ರಯೋಜನ ಪಡೆಯುವುದು, ಅವರ ತೊಂದರೆಗಳನ್ನು ನೀಗಿಸಲು ಪ್ರಯತ್ನಿಸುವುದು, ಅವರೊಡನೆ ಉತ್ತಮವಾಗಿ ಮತ್ತು ಪ್ರೀತಿಯಿಂದ ವ್ಯವಹರಿಸುವುದು ಅಗತ್ಯ. ಅದಕ್ಕಾಗಿ ಅವರೊಡನೆ ವೈಯಕ್ತಿಕ ಭೇಟಿ, ಸಿಬ್ಬಂದಿಗಳ ಸಭೆ ನಡೆಸುವುದು, ವಹಿಸಿ ಕೊಟ್ಟ ಕರ್ತವ್ಯಗಳನ್ನು ನೆರವೇರಿಸುವ ನಿಟ್ಟಿನಲ್ಲಿ ಅವರಿಂದ ಯೋಜನೆ ಹಾಕಿಸುವುದು ಮತ್ತು ಸಾಧ್ಯವಾದಷ್ಟರ ಮಟ್ಟಿಗೆ ಸಹಾಯ-ಮಾರ್ಗದರ್ಶನ ನೀಡುವುದು ತೀರಾ ಅಗತ್ಯ. ಅದೇ ವೇಳೆ ಸದ್ವರ್ತನೆ ತೋರುವುದೆಂದರೆ ನೀತಿ-ನಿಯಮಗಳಲ್ಲಿ ಸಡಿಲತೆ ತೋರುವುದೆಂದು ಖಂಡಿತ ಅರ್ಥವಲ್ಲ; ಮೈಗಳ್ಳತನ, ನಿರ್ಲಕ್ಷ್ಯ, ಅಶಿಸ್ತು ಹಾಗೂ ಆಕ್ಷೇಪಾರ್ಹ ಕೃತ್ಯಗಳಿಗೆ ಮುಕ್ತ ಅವಕಾಶವೆಂದೂ ಅರ್ಥವಲ್ಲ, ಇಂಥ ವಿಷಯಗಳಲ್ಲೆಲ್ಲ ಕಠಿಣ ನಿಲುವು ತೋರಬೇಕು ಹಾಗೂ ಸುಧಾರಣೆಗೆ ಸಾದ್ಯಂತ ಶ್ರಮಿಸಬೇಕು.

2. ವಿದ್ಯಾರ್ಥಿಗಳೊಡನೆ ಸಂಪರ್ಕ: ಶಾಲೆಯ ಎಲ್ಲ ವಿದ್ಯಾರ್ಥಿಗಳೊಡನೆ ಮುಖ್ಯೋಪಾಧ್ಯಾಯರು ಸಂಪರ್ಕವನ್ನಿರಿಸಲು ಪ್ರಯತ್ನಿಸಬೇಕು. ಒಂದು ವೇಳೆ ವಿದ್ಯಾರ್ಥಿಗಳ ಸಂಖ್ಯೆ ಬಹಳ ಹೆಚ್ಚಿದ್ದರೆ, ಕನಿಷ್ಠ ಎಲ್ಲ ತರಗತಿಗಳ ಮಾನಿಟರ್, ವಿವಿಧ ತಂಡಗಳ ನಾಯಕ, ಆಟದ ನಾಯಕ, ಸಂಘಟನೆಯ ಮೇಲ್ವಿಚಾರಕ ಮತ್ತಿತರರೊಡನೆ ಸಂಪರ್ಕವನ್ನು ಇರಿಸಲೇ ಬೇಕು. ಈ ರೀತಿಯಾಗಿ ವಿದ್ಯಾರ್ಥಿಗಳನ್ನು ಸಂತೃಪ್ತಿ ಪಡಿಸಲು ಮತ್ತು ಅವರ ಸಹಕಾರವನ್ನು ಪಡೆಯಲು, ಆ ಮೂಲಕ ಅವರಿಗೆ ಸೂಕ್ತ ತರಬೇತಿ ನೀಡಲು ಅವಕಾಶ ಒದಗುವುದು.

3. ವಿದ್ಯಾರ್ಥಿಗಳ ಪೋಷಕರೊಡನೆ ಸಂಪರ್ಕ: ಮಕ್ಕಳ ಶಿಕ್ಷಣ-ತರಬೇತಿಯಲ್ಲಿ ಅವರ ಪೋಷಕರ ಸಹಕಾರವನ್ನು ಪಡೆಯಲಿಕ್ಕಾಗಿ ಅವರೊಡನೆ ಭೇಟಿ ಅಥವಾ ಪತ್ರ ವ್ಯವಹಾರಗಳ ಮೂಲಕ ಮತ್ತು ಶಾಲೆಯ ಸಮಾರಂಭಗಳಿಗೆ ಆಹ್ವಾನಿಸುವ ಮೂಲಕ ಉತ್ತಮ ಸಂಪರ್ಕ ಬೆಳೆಸಬೇಕು. ಭೇಟಿಯ ವೇಳೆ ಅವರೊಡನೆ ಸಭ್ಯ ರೀತಿಯಲ್ಲಿ ವ್ಯವಹರಿಸಬೇಕು. ಅವರ ವಿಮರ್ಶೆಗಳನ್ನು ಮುಕ್ತ ಮನಸ್ಸಿನೊಂದಿಗೆ ಆಲಿಸಬೇಕು. ಹಾಗೆಯೇ ಅವರ ಕರ್ತವ್ಯಗಳನ್ನು ತಿಳಿ ಹೇಳಬೇಕು.

4. ಇತರ ಶಿಕ್ಷಣ ಸಂಸ್ಥೆಗಳ ಹೊಣೆಗಾರರೊಡನೆ ಸಂಪರ್ಕ: ನೆರೆಕರೆಯ ಅಥವಾ ಪರಿಸರದ ಇತರ ಶಿಕ್ಷಣ ಸಂಸ್ಥೆಗಳೊಡನೆಯೂ ಸಂಪರ್ಕವನ್ನಿರಿಸಬೇಕು. ಕೆಲವೊಮ್ಮೆ ಅವರಲ್ಲಿಗೆ ಹೋಗಿ, ಅವರ ಕಾರ್ಯ ಚಟುವಟಿಕೆಗಳ ಅವಲೋಕನ ನಡೆಸಬೇಕು. ಅವರೊಡನೆ ಅಭಿಪ್ರಾಯ ವಿನಿಮಯ ಮಾಡುವ ಮೂಲಕ ಅವರ ಅನುಭವ ಮತ್ತು ಸಲಹೆಗಳಿಂದ ಪ್ರಯೋಜನ ಪಡೆಯಬಹುದು. ಅವರನ್ನು ಶಾಲೆಯ ಕಾರ್ಯಕ್ರಮಗಳಿಗೆ ಆಹ್ವಾನಿಸಬೇಕು.

5. ಜನರೊಡನೆ ಸಂಪರ್ಕ: ಧಾರ್ಮಿಕ ಶಿಕ್ಷಣ ಸಂಸ್ಥೆಗಳಿಗೆ ಜನರ ಸಹಕಾರದ ಅಗತ್ಯ ಬಹಳವಿದೆ. ಜನನಾಯಕರೊಡನೆ ಸಂಪರ್ಕ ಸ್ಥಾಪಿಸಲು ಮತ್ತು ಮದ್ರಸದ ಪ್ರಗತಿಗಾಗಿ ಅವರಿಂದ ಸಹಕಾರ ಪಡೆಯಲು ಪ್ರಯತ್ನಿಸಬೇಕು. ಮುಖ್ಯೋಪಾಧ್ಯಾಯನು ರಾಜಕೀಯ ಪಕ್ಷ ಅಥವಾ ಗುಂಪುಗಾರಿಕೆಯಿಂದ ದೂರವಿದ್ದು ಜನರ ಒಳಿತಿಗಾಗಿ ಮತ್ತು ಅವರ ಸುಧಾರಣೆಗಾಗಿ ತನ್ನಿಂದಾದಷ್ಟು ಪ್ರಯತ್ನಿಸುತ್ತಿದ್ದರೆ ಮಾತ್ರವೇ ಜನರ ಸಹಕಾರ ದೊರೆಯಬಲ್ಲುದು.

ಈ ಮೇಲಿನ ಚರ್ಚೆಯಿಂದ, ಮುಖ್ಯೋಪಾಧ್ಯಾಯನ ಹೊಣೆಗಾರಿಕೆಗಳು ಬಹಳ ವಿಸ್ತಾರವಾದುದು ಮತ್ತು ವಿಭಿನ್ನ ರೀತಿಯದ್ದು ಎಂದು ತಿಳಿದು ಬರುತ್ತದೆ. ಅಂತೆಯೇ ಮುಖ್ಯೋಪಾಧ್ಯಾಯನು ಕರ್ತವ್ಯನಿಷ್ಠೆ, ಕಠಿಣ ಪರಿಶ್ರಮ, ದೇವನಿಷ್ಠೆ, ಸಚ್ಚಾರಿತ್ರ್ಯ ಮತ್ತು ಸಹನೆ-ಸಂಯಮದೊಂದಿಗೆ ಕಾರ್ಯ ನಿರತನಾದರೆ, ತನ್ನ ಕರ್ತವ್ಯಗಳನ್ನು ಸರಾಗವಾಗಿ ನೆರವೇರಿಸಬಲ್ಲನು.

◆ ◆ ◆

ಅಧ್ಯಾಯ-19

ತರಗತಿ ಅಧ್ಯಾಪಕ (Class Teacher) ಮತ್ತು ಅವನ ಕರ್ತವ್ಯಗಳು

ವಿದ್ಯಾರ್ಥಿಗಳ ಪ್ರಾಯ, ಪ್ರತಿಭೆ ಮತ್ತು ಸಾಮರ್ಥ್ಯಕ್ಕೆ ಅನುಸಾರ ಅವರನ್ನು ವಿವಿಧ ತರಗತಿಗಳಾಗಿ ವಿಂಗಡಿಸಲಾಗುತ್ತದೆ. ಪ್ರತಿಯೊಂದು ತರಗತಿಯಲ್ಲಿ ಹೆಚ್ಚುಕಮ್ಮಿ 25-30 ವಿದ್ಯಾರ್ಥಿಗಳಿರುತ್ತಾರೆ. ಬೋಧನೆಗೆ ಸಂಬಂಧಿಸಿ ಒಂದು ತರಗತಿಯಲ್ಲಿ ಬೇರೆ ಬೇರೆ ಪಠ್ಯ ವಿಷಯ (Subject) ಮತ್ತು ಚಟುವಟಿಕೆಗಳಿಗೆ ಬೇರೆ ಬೇರೆ ಅಧ್ಯಾಪಕರು ಇರುತ್ತಾರೆ. ಆದರೆ ಪ್ರಾಥಮಿಕ ತರಗತಿಗಳಲ್ಲಿ, ತರಗತಿಯೊಂದರ ಹೆಚ್ಚಿನ ಪಠ್ಯ ವಿಷಯಗಳು ಒಬ್ಬನೇ ಅಧ್ಯಾಪಕನ ಹೊಣೆಯಲ್ಲಿರಬೇಕು ಎಂಬುದು ಸಾಮಾನ್ಯ ನಿಯಮ. ಅಂತೆಯೇ ಒಂದು ತರಗತಿಯ ಹೆಚ್ಚಿನ ಪಠ್ಯ ವಿಷಯಗಳನ್ನು ಹೊಂದಿರುವ ಅಧ್ಯಾಪಕನನ್ನು ತರಗತಿಯ ಮುಖ್ಯ ಅಧ್ಯಾಪಕನಾಗಿ (Class teacher) ನೇಮಿಸಲಾಗುತ್ತದೆ.

ಕ್ಲಾಸ್ ಟೀಚರ್‌ಗೆ ಹೆಚ್ಚು ಪಠ್ಯಗಳ ಹೊಣೆಗಾರಿಕೆ ಇರುವಂತೆಯೇ ತನ್ನ ತರಗತಿಯ ಕುರಿತಾಗಿ ಅವನಿಗೆ ಈ ಕೆಳಗಿನ ಹೊಣೆಗಾರಿಕೆಗಳಿರುತ್ತವೆ:

1. ನಿಯಮಿತವಾಗಿ ಸಮಯ ಪಾಲನೆಯೊಂದಿಗೆ ತರಗತಿಯ ಹಾಜರಿ ತೆಗೆದುಕೊಳ್ಳುವುದು.
2. ಹಾಜರಿಯ ಬಳಿಕ ಶಿಕ್ಷಣ-ತರಬೇತಿಯ ಕುರಿತಾಗಿ ವಿದ್ಯಾರ್ಥಿಗಳಿಗೆ ಅಗತ್ಯದ ಮಾರ್ಗದರ್ಶನವನ್ನೀಯುವುದು. ಅಂತೆಯೇ ಮಾರ್ಗದರ್ಶನದ ಪಾಲನೆಯನ್ನು ಅವಲೋಕಿಸುತ್ತಿರುವುದು.
3. ಕಟ್ಟುನಿಟ್ಟಾಗಿ ಸಮಯ ಪಾಲನೆಯೊಂದಿಗೆ ತರಗತಿಗೆ ಹಾಜರಾಗಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು. ಅಗತ್ಯ ಕಂಡರೆ ಅವರ ಪೋಷಕರ ಗಮನ ಸೆಳೆದು ಸಮಯಪಾಲನೆಯ ಅಭ್ಯಾಸ ಮಾಡಿಸುವುದು.
4. ಗೈರುಹಾಜರಾದರೆ, ಕಾರಣದ ಸತ್ಯಾಸತ್ಯತೆಯನ್ನು ಅರಿಯಲು ಪ್ರಯತ್ನಿಸುವುದು. ಅಗತ್ಯ ಬಿದ್ದರೆ ಪೋಷಕರನ್ನು ಸಂಪರ್ಕಿಸುವುದು.

5. ವಿದ್ಯಾರ್ಥಿ ಅನಾರೋಗ್ಯಕ್ಕೀಡಾದರೆ, ಸಮಯ ತೆಗೆದುಕೊಂಡು ಸಂದರ್ಶಿಸುವುದು. ಮಗುವಿಗಾಗಿ ಏನನ್ನಾದರೂ ಸಹಕಾರ ನೀಡಲು ಸಾಧ್ಯವಿದ್ದರೆ, ಅದನ್ನು ಮಾಡುವುದು.
6. ಸೂಕ್ತ ಕಾರಣವಿಲ್ಲದೆ ತರಗತಿಗೆ ಗೈರು ಹಾಜರಾಗಬಾರದೆಂದು ಮಕ್ಕಳಿಗೆ ತಿಳಿ ಹೇಳುವುದು. ಇನ್ನು ಸೂಕ್ತ ಕಾರಣವಿದ್ದರೆ ಮತ್ತು ಗೈರು ಹಾಜರಿ ಅಥವಾ ನಿರ್ಗಮನದ ಅಗತ್ಯ ಕಂಡುಬಂದಲ್ಲಿ ಮನವಿ ಮಾಡಿಕೊಳ್ಳುವ ಮೂಲಕ ಅನುಮತಿ ಪಡೆಯಬೇಕು ಹಾಗೂ ಸ್ವತಃ ಮಾಡಲಾಗದಿದ್ದರೆ ತನ್ನ ಪೋಷಕರ ಮೂಲಕ ಮನವಿ ಮಾಡಬೇಕು ಎಂದು ಕಲಿಸಿಕೊಡುವುದು.
7. ಸೂಕ್ತ ಕಾರಣವಿಲ್ಲದೆ ಅಥವಾ ಅನುಮತಿ ಪಡೆಯದೆ ಗೈರು ಹಾಜರಾದರೆ, ಕಠಿಣವಾಗಿ ವಿಚಾರಿಸಬೇಕು ಮತ್ತು ಮುಂದೆ ಅದು ಪುನರಾವರ್ತಿಸದಿರಲು ಪೋಷಕರ ಗಮನಕ್ಕೆ ತರಬೇಕು.
8. ವಿದ್ಯಾರ್ಥಿಗಳಿಂದ ತರಗತಿಯ ಶಿಷ್ಟಾಚಾರ ಪಾಲಿಸುವಂತೆ ಮಾಡಬೇಕು. ಉದಾ:

   i) ತರಗತಿಗೆ ಬರುವಾಗ ಮತ್ತು ನಿರ್ಗಮಿಸುವಾಗ ಸಲಾಮ್ ಹೇಳುವುದು.

   ii) ಅನುಮತಿ ಪಡೆದೇ ತರಗತಿಯಿಂದ ಹೊರ ಹೋಗುವುದು.

   iii) ನೆಲದಲ್ಲಿ ಕುಳಿತುಕೊಳ್ಳುವುದಿದ್ದರೆ, ಪಾದರಕ್ಷೆಯನ್ನು ಒಂದೆಡೆ ತೆಗೆದಿಡುವುದು.

   iv) ತರಗತಿಯಲ್ಲಿ ಗುಲ್ಲು-ಗದ್ದಲ ಅಥವಾ ಜಗಳ ಮತ್ತು ಛೇಡಿಸುವಿಕೆಯಿಂದ ದೂರವಿರುವುದು.

   v) ಸಲಾಮ್ ಹೇಳಿ ಮತ್ತು ಅನುಮತಿ ಪಡೆದು ಇತರ ತರಗತಿಗೆ ಹೋಗುವುದು.

   vi) ತಡವಾಗಿ ಬಂದರೆ, ಅನುಮತಿ ಪಡೆದೇ ಒಳಗೆ ಪ್ರವೇಶಿಸುವುದು.

   vii) ಮಾತನಾಡುವಾಗ ಶಿಷ್ಟಾಚಾರ ಪಾಲಿಸುವುದು, ವಿನಯದೊಂದಿಗೆ ಪ್ರಶ್ನಿಸುವುದು ಮತ್ತು ಉತ್ತರಿಸುವುದು. (ಮುಗುಳ್ನಗುತ್ತ, ತಲೆ ಕೆರೆಯುತ್ತ, ಬಾಯಿ-ಮೂಗಿಗೆ ಬೆರಳು ತೂರಿಸುತ್ತ ಅಥವಾ ಅಸ್ತವ್ಯಸ್ತವಾಗಿ ನಿಂತು ಪ್ರಶ್ನಿಸಿದರೆ, ಉತ್ತರಿಸಿದರೆ ತಕ್ಷಣ ಸುಧಾರಣೆ ಮಾಡಬೇಕು.)

   viii) ಪ್ರಶ್ನೋತ್ತರ, ಮಾತುಕತೆ, ವಸ್ತುಗಳ ಹಂಚುವಿಕೆ ಇತ್ಯಾದಿ ಹಾಗೂ ಕಾರ್ಯಕ್ರಮಗಳ ವೇಳೆ ತನ್ನ ಸರದಿ ಬರುವ ವರೆಗೆ ಕಾಯುವುದು.

   ix) ತನ್ನ ಜಾಗವನ್ನು ಸ್ವಚ್ಛ ಮತ್ತು ತನ್ನ ವಸ್ತುಗಳನ್ನು ಅಚ್ಚುಕಟ್ಟಾಗಿ ಇರಿಸುವುದು.

   x) ತನ್ನ ಸರದಿಯಲ್ಲಿ ತರಗತಿ, ವರಾಂಡ ಅಥವಾ ಮೊಗಸಾಲೆಯನ್ನು ಸ್ವಚ್ಛಗೊಳಿಸುವುದು ಮತ್ತು ವಸ್ತುಗಳನ್ನು ಅಚ್ಚುಕಟ್ಟಾಗಿ ಇರಿಸುವುದು.

   xi) ಸ್ವಚ್ಛತೆಯ ಬಳಿಕ ಕಸಕಡ್ಡಿಗಳನ್ನು ಒಂದೆಡೆ ಬುಟ್ಟಿಗೆ ಹಾಕಿ ಅದನ್ನು ಕಸ ಹಾಕುವಲ್ಲಿ ಕೊಂಡುಹೋಗಿ ಹಾಕುವುದು.

xii) ಕಾಗದದ ತುಂಡು, ಹಣ್ಣುಗಳ ಬೀಜ ಇತ್ಯಾದಿಗಳನ್ನು ಅಲ್ಲಲ್ಲಿ ಎಸೆಯುವ ಬದಲು ಕಸದ ಬುಟ್ಟಿಗೆ ಹಾಕುವುದು.

xiii) ತರಗತಿಯ ಮಾನಿಟರ್, ಆಟದ ನಾಯಕ, ತಂಡದ ಮೇಲ್ವಿಚಾರಕ, ಸಭೆಗಳ ಸಂಚಾಲಕ ಮತ್ತಿತರರನ್ನು ಅನುಸರಿಸುವುದು ಹಾಗೂ ಕರ್ತವ್ಯ ಪಾಲನೆಯಲ್ಲಿ ಅವರಿಗೆ ಸಂಪೂರ್ಣ ಸಹಕಾರ ನೀಡುವುದು.

xiv) ತರಗತಿಯ ಶೃಂಗಾರ, ಸ್ವಚ್ಛತೆ ಮತ್ತು ಒಳಿತಿಗಾಗಿ ಪರಸ್ಪರ ಸಹಕರಿಸುವುದು.

9. ತಿಂಗಳಲ್ಲಿ ಕನಿಷ್ಠ ಒಂದು ಬಾರಿ–

i) ವಿದ್ಯಾರ್ಥಿಗಳ ಶೈಕ್ಷಣಿಕ ವಸ್ತುಗಳು, ಪುಸ್ತಕ, ಕಾಪಿಗಳು, ಕಂಪಾಸ್ ಪೆಟ್ಟಿಗೆ, ಬಣ್ಣದ ಡಬ್ಬಿ, ಕ್ರಾಫ್ಟ್‌ನ ಸಾಮಾನು ಇತ್ಯಾದಿಗಳನ್ನು ಪರಿಶೀಲಿಸಬೇಕು ಮತ್ತು ಆ ವಸ್ತುಗಳನ್ನು ಸುರಕ್ಷಿತವಾಗಿ, ಅಚ್ಚುಕಟ್ಟಾಗಿ, ಸ್ವಚ್ಛತೆಯೊಂದಿಗೆ ಇರಿಸಲು ಮಾರ್ಗದರ್ಶನ ನೀಡಬೇಕು.

ii) ವಾತಾವರಣ ಅನುಕೂಲಕರವಿದ್ದರೆ ಶೈಕ್ಷಣಿಕ ಪ್ರವಾಸ ಅಥವಾ ಪಿಕ್‌ನಿಕ್‌ಗೆ ಕರಕೊಂಡು ಹೋಗಬೇಕು. ಹೀಗೆ ಹೊರಡುವುದಕ್ಕೆ ಮುಂಚೆಯೇ ಅದರ ಉದ್ದೇಶವನ್ನು ಮಕ್ಕಳಿಗೆ ತಿಳಿಸಬೇಕು. ಬಳಿಕ ತಯಾರಿ ನಡೆಸಿ, ಒಟ್ಟು ಅಗತ್ಯದ ಕಾರ್ಯಗಳನ್ನು ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ಅಥವಾ ತಂಡ ರಚಿಸಿ ವಿಂಗಡಿಸಬೇಕು. ಸಾಧ್ಯವಾದಷ್ಟರ ಮಟ್ಟಿಗೆ ಎಲ್ಲ ಕೆಲಸಗಳನ್ನು ತನ್ನ ಮೇಲ್ನೋಟದಲ್ಲಿ ವಿದ್ಯಾರ್ಥಿಗಳೇ ಮಾಡುವಂತಾಗಬೇಕು. ಈ ಮೂಲಕ ಶೈಕ್ಷಣಿಕ ಪ್ರವಾಸದ ಉದ್ದೇಶ ಸಂಪೂರ್ಣವಾಗಿ ಈಡೇರುವಂತಾಗಬೇಕು.

iii) ಆರೋಗ್ಯ ಮತ್ತು ಸ್ವಚ್ಛತೆಯ ಅವಲೋಕನ ನಡೆಸಬೇಕು. ದೇಹ–ವಸ್ತ್ರದ ಸ್ವಚ್ಛತೆ, ಸ್ನಾನ, ಕ್ಷೌರ, ಉಗುರು ಕತ್ತರಿಸುವುದು ಇತ್ಯಾದಿಗಳಿಗೆ ಸಂಬಂಧಿಸಿ ಅಗತ್ಯಾನುಸಾರ ಮಾರ್ಗದರ್ಶನ ನೀಡುವುದು.

iv) ವಿದ್ಯಾರ್ಥಿಗಳ ಸಾಪ್ತಾಹಿಕ ಕಾರ್ಯಕ್ರಮಗಳಲ್ಲಿ ಪ್ರತಿ ಮಗುವಿಗೂ ಕನಿಷ್ಠ ತಿಂಗಳಲ್ಲಿ ಒಂದು ಬಾರಿಯಾದರೂ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕು. ಉದಾ: ಭಾಷಣ, ಪದ್ಯ ಅಥವಾ ಕಥೆ ಇತ್ಯಾದಿ.

v) ಪ್ರತಿಯೊಂದು ಮಗುವಿನೊಡನೆಯೂ ವೈಯಕ್ತಿಕವಾಗಿ ಭೇಟಿಯಾಗಿ ಓದು–ಬರೆಹ ಅಥವಾ ಅಭ್ಯಾಸಗಳಿಗೆ ಸಂಬಂಧಿಸಿ ಗಮನಾರ್ಹ ವಿಷಯಗಳನ್ನು ಅವಲೋಕಿಸುವುದು.

vi) ಪ್ರಗತಿಯ ಅವಲೋಕನ ನಡೆಸಿ ಫಲಿತಾಂಶದ ಬಗ್ಗೆ ಪೋಷಕರಿಗೆ ತಿಳಿಸುವುದು.

10. ತನ್ನ ತರಗತಿಯ ವಿದ್ಯಾರ್ಥಿಗಳ ಪೋಷಕರೊಡನೆ ವೈಯಕ್ತಿಕ ಸಂಪರ್ಕವನ್ನಿರಿಸುವುದು. ಕೆಲವೊಮ್ಮೆ ಪೋಷಕರನ್ನು ಭೇಟಿಯಾಗಿ ಅಥವಾ ಪತ್ರಗಳ ಮುಖಾಂತರ, ಅವರ

ಮಕ್ಕಳ ಶಿಕ್ಷಣ-ತರಬೇತಿಗೆ ಸಂಬಂಧಿಸಿ ಸೂಕ್ತ ಸಲಹೆಗಳನ್ನು ನೀಡುವುದು ಮತ್ತು ಅವರಿಂದ ಸಹಕಾರ ಪಡೆಯುವುದು.

11. ತರಗತಿಯ ಸ್ವಚ್ಛತೆ, ಕಾರ್ಯಕ್ರಮ, ಪಿಕ್‌ನಿಕ್, ಶೈಕ್ಷಣಿಕ ಪ್ರವಾಸ, ಕೈಬರಹದ ಪತ್ರಿಕೆಗಳು, ತರಗತಿಯ ಅಲಂಕಾರ, ಶೈಕ್ಷಣಿಕ ಸಪ್ತಾಹ ಅಥವಾ ಶಾಲೆಯ ವಿವಿಧ ಸಮಾರಂಭಗಳು ಮತ್ತು ಇತರ ಪಠ್ಯೇತರ ಚಟುವಟಿಕೆ ಇತ್ಯಾದಿಗಳ ವ್ಯವಸ್ಥೆಯಲ್ಲಿ ತರಗತಿಯ ಎಲ್ಲ ಮಕ್ಕಳನ್ನು ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಹೊಣೆಗಾರಿಕೆಗಳನ್ನು ವಹಿಸಿಕೊಡುವುದು ಹಾಗೂ ಅವುಗಳನ್ನು ನಿಭಾಯಿಸುವ ವಿಧಾನವನ್ನು ತಿಳಿಹೇಳುವುದು.

12. ವಿದ್ಯಾರ್ಥಿಗಳ ಸಾಪ್ತಾಹಿಕ ಸಭೆಗಳನ್ನು ನಿಯಮಿತವಾಗಿ ಆಯೋಜಿಸುವುದು. ಶಾಲೆಯ ಮಾಸಿಕ ಸಭೆ ಅಥವಾ ಇತರ ಸಮಾರಂಭಗಳಲ್ಲಿ ತನ್ನ ತರಗತಿಯ ಸೂಕ್ತ ಪ್ರಾತಿನಿಧಿತ್ವಕ್ಕೆ ಮಕ್ಕಳನ್ನು ತಯಾರುಗೊಳಿಸುವುದು. ಕೆಲವೊಮ್ಮೆ ತರಗತಿಯ ಎಲ್ಲ ಮಕ್ಕಳಿಗಾಗಿ ಸಾಮೂಹಿಕ ಭೋಜನದ ವ್ಯವಸ್ಥೆ ಮಾಡುವುದು.

13. ತನ್ನ ತರಗತಿಯ ಎಲ್ಲ ಮಕ್ಕಳ ಧಾರ್ಮಿಕ, ಶೈಕ್ಷಣಿಕ, ನೈತಿಕ ಮತ್ತು ದೈಹಿಕ ಸ್ಥಿತಿಗಳ ಮೇಲೆ ಗಮನವೀಯುವುದು. ಆ ನಿಟ್ಟಿನಲ್ಲಿ ಅಗತ್ಯದ ಮಾಹಿತಿಯನ್ನು ಇರಿಸುವುದು. ಅಗತ್ಯಾನುಸಾರ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಗಮನ ಸೆಳೆಯುವುದು. ತರುವಾಯ ಸುಧಾರಣೆಗೆ ಪ್ರಯತ್ನಿಸುವುದು.

14. ಕೊರತೆ, ದೌರ್ಬಲ್ಯಗಳನ್ನು ನಿಯಂತ್ರಿಸಲಿಕ್ಕಾಗಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ಪಶ್ಚಾತ್ತಾಪದ ಭಾವನೆ ಬೆಳೆಸುವುದು. (ಇದು ವಿದ್ಯಾರ್ಥಿಗಳೊಡನೆ ಪ್ರೀತಿ ಮತ್ತು ಅನುಕಂಪದಿಂದ ವ್ಯವಹರಿಸಿದಾಗ ಮತ್ತು ಅವರ ಆತ್ಮಾಭಿಮಾನವನ್ನು ಗೌರವಿಸಿದಾಗ ಮಾತ್ರವೇ ಸಾಧ್ಯವಾಗುವುದು. ಶಿಕ್ಷಣ-ತರಬೇತಿಯಲ್ಲಿ ಮೂದಲಿಕೆ, ಗದರಿಕೆ, ದೈಹಿಕ ಶಿಕ್ಷೆಗಳಿಂದ ಆದಷ್ಟು ದೂರವಿರಬೇಕು. ಪ್ರೀತಿ, ಸಹಾನುಭೂತಿಯ ಮಾದರಿಯಾಗಿರಬೇಕು.)

15. ತರಗತಿಯ ಮುಂದೆ ಅನುಸರಣಾರ್ಹ ಚಾರಿತ್ರ್ಯವನ್ನು ಪ್ರದರ್ಶಿಸಬೇಕು. (ವಿದ್ಯಾರ್ಥಿಗಳ ಚಾರಿತ್ರ್ಯದ ಮೇಲೆ ಅಧ್ಯಾಪಕನ ನೈತಿಕ ಮತ್ತು ಕರ್ಮ ಜೀವನವು ಅತ್ಯಧಿಕ ಪ್ರಭಾವ ಬೀರುತ್ತದೆ. ಮಕ್ಕಳು ಅಧ್ಯಾಪಕನಲ್ಲಿ ವಿಶೇಷತಃ ಕ್ಲಾಸ್ ಟೀಚರ್‌ನಲ್ಲಿ ಆಪ್ತತೆಯನ್ನು ಕಾಣುತ್ತಾರೆ ಹಾಗೂ ಅವರ ಚಾರಿತ್ರ್ಯದಿಂದ ಪ್ರಭಾವಿತರಾಗುತ್ತಾರೆ. ಮಕ್ಕಳ ಮುಂದೆ ಯಾವೆಲ್ಲ ಒಳಿತು-ಕೆಡುಕುಗಳನ್ನು ಪ್ರದರ್ಶಿಸಲಾಗುತ್ತದೋ ಅವುಗಳನ್ನೇ ಅವರು ತಿಳಿದೋ ತಿಳಿಯದೆಯೋ ಅನುಸರಿಸತೊಡಗುತ್ತಾರೆ. ಅಧ್ಯಾಪಕನ ಮಾತು-ಕೃತಿಯಲ್ಲಿ ಸಾಮ್ಯತೆ ಇಲ್ಲದಿದ್ದರೆ, ವಿದ್ಯಾರ್ಥಿಗಳ ಚಾರಿತ್ರ್ಯವೂ ಅದರ ಪ್ರಭಾವಕೊಳಗಾಗುತ್ತದೆ. ಆದ್ದರಿಂದ ಅಧ್ಯಾಪಕನು ಅತ್ಯುತ್ತಮ ಚಾರಿತ್ರ್ಯವನ್ನು

ಪ್ರದರ್ಶಿಸಬೇಕಾಗಿದೆ. ವಿಶೇಷತಃ ನಿಯಮ, ಶಿಸ್ತು ಮತ್ತು ಸಮಯದ ಪಾಲನೆ; ಸಭ್ಯ ರೀತಿಯ ಮಾತುಗಾರಿಕೆ, ಇಸ್ಲಾಮೀ ರೂಪ-ಲಾವಣ್ಯ, ಸಚ್ಚಾರಿತ್ರ್ಯ, ಸಹಾನುಭೂತಿ, ತ್ಯಾಗ, ಸಹಕಾರ, ಕರ್ತವ್ಯ ಪಾಲನೆಯಲ್ಲಿ ಮಗ್ನತೆ ಮತ್ತು ಉತ್ಸಾಹ ಇತ್ಯಾದಿಗಳಲ್ಲಿ

16. ಹಾಜರಿ ಪುಸ್ತಕ, ಡೈರಿ, ಪ್ರಗತಿ ಚಾರ್ಟ್ ಮತ್ತು ತರಗತಿಯ ಇತರ ಕಡತಗಳನ್ನು ಇರಿಸುವುದು.

♦ ♦ ♦

ಅಧ್ಯಾಯ-20

ಪಠ್ಯ ಬೋಧಕ (Subject Teacher) ಮತ್ತು ಅವನ ಕರ್ತವ್ಯಗಳು

ಪ್ರತಿಯೋರ್ವ ಅಧ್ಯಾಪಕನಿಗೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳನ್ನು ಬೋಧಿಸಬೇಕಾಗಿ ಬರುತ್ತದೆ. ನಿರ್ದಿಷ್ಟ ಪಠ್ಯವನ್ನು ಕಲಿಸುವವನೆಂಬ ನೆಲೆಯಲ್ಲಿ ಪ್ರತಿಯೊಬ್ಬ ಅಧ್ಯಾಪಕನೂ ಈ ಕೆಳಗಿನ ವಿಷಯಗಳನ್ನು ಅರಿತಿರಬೇಕಾದುದು ಅಗತ್ಯ.

1. ಗಂಟೆ ಬಾರಿಸುತ್ತಲೇ ತರಗತಿಗೆ ತಲುಪುವುದು ಮತ್ತು ಗಂಟೆ ಬಾರಿಸುತ್ತಲೇ ಇತರ ಅಧ್ಯಾಪಕರಿಗಾಗಿ ಜಾಗ ಖಾಲಿ ಮಾಡುವುದು.

2. ಸಲಾಮ್ ಹೇಳಿ ತರಗತಿಗೆ ಪ್ರವೇಶಿಸುವುದು ಮತ್ತು ಸಲಾಮ್ ಹೇಳಿಯೇ ನಿರ್ಗಮಿಸುವುದು.

3. ತರಗತಿಗೆ ಪ್ರವೇಶಿಸುತ್ತಲೇ ಈ ಕೆಳಗಿನ ವಿಷಯಗಳ ಮೇಲೆ ಪಕ್ಷಿನೋಟ ಹರಿಸುವುದು ಮತ್ತು ಪಾಠ ಆರಂಭಿಸುವುದಕ್ಕೆ ಮೊದಲು ಸಾದ್ಯಂತ ಸೂಕ್ತ ಕ್ರಮ ಕೈಗೊಳ್ಳುವುದು.

i) ಮಕ್ಕಳ ಪಾದರಕ್ಷೆಗಳು ಒಂದೆಡೆ ಅಚ್ಚುಕಟ್ಟಾಗಿ ಇರಿಸಲಾಗಿದೆಯೇ ಎಂದು ನೋಡುವುದು. (ಮಕ್ಕಳು ನೆಲದಲ್ಲಿ ಕುಳಿತುಕೊಳ್ಳುವ ಸಂದರ್ಭದಲ್ಲಿ)

ii) ತರಗತಿ ಸ್ವಚ್ಛವಿದೆಯೇ ಮತ್ತು ಎಲ್ಲ ವಸ್ತುಗಳು (ಡೆಸ್ಕ್, ಬೆಂಚು, ಕಪ್ಪು ಹಲಗೆ ಇತ್ಯಾದಿ) ಸರಿಯಾದ ಜಾಗದಲ್ಲಿ ಇದೆಯೇ ಎಂದು ನೋಡುವುದು.

iii) ಎಲ್ಲ ವಿದ್ಯಾರ್ಥಿಗಳು ಹಾಜರಿದ್ದಾರೆಯೇ? ಇಲ್ಲವೆಂದಾದರೆ ಗೈರು ಹಾಜರಿಯ ಕಾರಣ?

iv) ಕಪ್ಪು ಹಲಗೆಯ ಸ್ವಚ್ಛತೆ.

v) ವಿದ್ಯಾರ್ಥಿಗಳ ಶೈಕ್ಷಣಿಕ ಸಾಮಗ್ರಿಗಳು (ಸಂಬಂಧಿತ ಪಠ್ಯದಿಂದ ಪಠ್ಯೇತರ ವಸ್ತುಗಳು) ಅಲ್ಲಿ ಇಲ್ಲಿ ಹರಡಿಕೊಂಡಿವೆಯೇ?

vi) ವಿದ್ಯಾರ್ಥಿಗಳು ಪಠ್ಯಕ್ಕೆ ಸಂಬಂಧಿಸದ ಕಾರ್ಯದಲ್ಲಿ ತೊಡಗಿದ್ದಾರೆಯೇ?

vii) ಚಾಕ್, ಡಸ್ಟರ್, ಚಾರ್ಟ್, ನಕಾಶೆ, ಗೋಲ ಇತ್ಯಾದಿ ಇವೆಯೇ?

4. ಸೂಕ್ತ ಮತ್ತು ಸಂಕ್ಷಿಪ್ತ ಪೀಠಿಕೆಯ ಮೂಲಕ ವಿದ್ಯಾರ್ಥಿಗಳ ಗಮನ ಕೇಂದ್ರೀಕರಿಸುತ್ತ ಪಠ್ಯ ಆರಂಭಿಸುವುದು.

5. ಹೊಸ ಅಧ್ಯಾಯ ಪ್ರಾರಂಭಿಸುವುದಕ್ಕೆ ಮೊದಲು ಸಂಕ್ಷಿಪ್ತವಾಗಿ ಹಿಂದಿನ ಅಧ್ಯಾಯವನ್ನು ಪುನರಾವರ್ತಿಸುವುದು.

6. ಬೋಧನೆಯ ಕಾರ್ಯವನ್ನು ಸದಾ ಮಧ್ಯಮ ಸಾಮರ್ಥ್ಯದ ವಿದ್ಯಾರ್ಥಿಗಳ (ತರಗತಿಯಲ್ಲಿ ಅವರ ಸಂಖ್ಯೆ ಸಾಧಾರಣವಾಗಿ ಅರ್ಧಕ್ಕಿಂತ ಹೆಚ್ಚಿರುತ್ತದೆ) ಗತಿಗೆ ಅನುಸಾರ ಮಾಡಬೇಕು. (ಆದರೂ ಬುದ್ಧಿವಂತ ಹಾಗೂ ದುರ್ಬಲ ವಿದ್ಯಾರ್ಥಿಗಳನ್ನು ಕಡೆಗಣಿಸಬಾರದು. ಬದಲಾಗಿ ಅವರನ್ನು ಅವರ ಗತಿಯಂತೆ ಮುಂದುವರಿಯಲು ಅವಕಾಶ ಒದಗಿಸಿ ಕೊಡಬೇಕು ಮತ್ತು ಅಗತ್ಯಾನುಸಾರ ಅವರು ಮುಂದುವರಿಯಲು ವಿಶೇಷ ಗಮನ ಹರಿಸಬೇಕಾಗುತ್ತದೆ. ದುರ್ಬಲ ವಿದ್ಯಾರ್ಥಿಗಳು ವೈಯಕ್ತಿಕ ಗಮನಕ್ಕೆ ಹೆಚ್ಚು ಅರ್ಹರಾಗಿರುತ್ತಾರೆ. ಅವರನ್ನು ಒಟ್ಟೊಟ್ಟಿಗೆ ಕೊಂಡು ಹೋಗಬೇಕಾಗುತ್ತದೆ).

7. ಪಾಠ ಮಾಡುವಾಗ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಬೇಕು.

i) ಮಾತು ಸರಳ, ಸುಲಭಗ್ರಾಹ್ಯ ಮತ್ತು ಆಕರ್ಷಕವಾಗಿರಬೇಕು.

ii) ಪಾಠ ಮಾಡುವಾಗ ಅಧ್ಯಾಪಕನಿಗೆ ಸ್ವಯಂ ಸಂತೋಷವಾಗ ಬೇಕು ಮತ್ತು ಅದರಲ್ಲಿ ಆಸಕ್ತಿ, ಒಲವು ಇರುವುದು ಮಕ್ಕಳಿಗೆ ಗೋಚರವಾಗಬೇಕು.

iii) ಕೆಲವೊಮ್ಮೆ ಪ್ರಶ್ನೆಗಳನ್ನು ಕೇಳುವ ಮೂಲಕ ಪಾಠವನ್ನು ಮಕ್ಕಳು ಚೆನ್ನಾಗಿ ಮನನ ಮಾಡಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳಬೇಕು.

iv) ವಿದ್ಯಾರ್ಥಿಗಳು ಕುಳಿತುಕೊಳ್ಳುವ ಮತ್ತು ನಿಲ್ಲುವ ರೀತಿ, ಪುಸ್ತಕ ಹಿಡಿಯುವ ವಿಧಾನ, ಪುಸ್ತಕ ಮತ್ತು ಕಣ್ಣುಗಳ ನಡುವಿನ ಅಂತರ ಎಲ್ಲವನ್ನೂ ಅವಲೋಕಿಸುತ್ತಿರಬೇಕು.

v) ಪಾಠವನ್ನು ಮುಂದುವರಿಸಲು ವಿದ್ಯಾರ್ಥಿಗಳು ಆಸಕ್ತಿ ಹೊಂದಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳಬೇಕು.

vi) ಇಡೀ ತರಗತಿಯು ಪಾಠದ ಕಡೆಗೆ ಗಮನ ಕೊಡುತ್ತಿದೆಯೇ, ಯಾರಾದರೂ ಪಠ್ಯಕ್ಕೆ ಹೊರತಾದ ವಿಷಯದಲ್ಲಿ ತಲ್ಲೀನನಾಗಿಲ್ಲ ತಾನೇ ಎಂಬುದರ ಕಡೆಗೆ ಗಮನವಿರಬೇಕು.

vii) ಕಪ್ಪು ಹಲಗೆಯ ಸೂಕ್ತ ಬಳಕೆಯಾಗುತ್ತಿರಬೇಕು. ಪಾಠವನ್ನು ಸ್ಪಷ್ಟಪಡಿಸಲು ವಿವರಣೆ, ಉಪಮೆ, ಚರ್ಚೆ ಇತ್ಯಾದಿಗಳ ಸಹಾಯ ಪಡೆಯುತ್ತಿರಬೇಕು.

viii) ಪ್ರಶ್ನೋತ್ತರ ಅಥವಾ ಚರ್ಚೆಯಲ್ಲಿ ವಿದ್ಯಾರ್ಥಿಗಳೂ ತಮ್ಮ ಸರದಿ ಮತ್ತು ಶಿಷ್ಟಾಚಾರವನ್ನು ಪಾಲಿಸುತ್ತಿದ್ದಾರೆಯೇ ಎಂಬುದರ ಕಡೆಗೆ ಗಮನವಿರಬೇಕು.

ix) ವಿದ್ಯಾರ್ಥಿಗಳ ಪ್ರಶ್ನೆ ಅಥವಾ ಆಕ್ಷೇಪಗಳಿಗೆ ಸಮಾಧಾನಕರ ಉತ್ತರವನ್ನು ನೀಡುತ್ತಿರಬೇಕು.

x) ದೈನಂದಿನ ಜೀವನದಲ್ಲಿ ಪಾಠವು ಪರಿಣಾಮ ಬೀರುವಂತಿರಬೇಕು.

xi) ಪಾಠವನ್ನು ಯಾವಾಗಲೂ ಬಿಸ್ಮಿಲ್ಲಾದೊಂದಿಗೆ ಆರಂಭಿಸಬೇಕು.

8. ಕ್ರಿಯಾತ್ಮಕ ಮತ್ತು ಬರವಣಿಗೆಯ ಕಾರ್ಯದ ವೇಳೆ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಬೇಕು.

i) ವಿದ್ಯಾರ್ಥಿಗಳು ಕುಳಿತುಕೊಳ್ಳುವ ರೀತಿಯನ್ನು ಗಮನಿಸಬೇಕು. ಸೊಂಟ ನೇರವಾಗಿರಬೇಕು, ಕಾಪಿ ಪುಸ್ತಕ ಮತ್ತು ಕಣ್ಣುಗಳ ನಡುವೆ ಸೂಕ್ತ ಅಂತರವಿರಬೇಕು.

ii) ಲೇಖನಿ ಅಥವಾ ಬ್ರಶ್ ಸರಿಯಾಗಿ ಹಿಡಿದಿರಬೇಕು. ಕೆಲಸ ಆರೋಗ್ಯಪೂರ್ಣ ಮತ್ತು ಸ್ವಚ್ಛತೆಯೊಂದಿಗೆ ಆಗಬೇಕು.

iii) ತರಗತಿಯಲ್ಲಿ ಅತ್ತಿತ್ತ ನಡೆದಾಡುತ್ತ, ಅಗತ್ಯಾನುಸಾರ ವೈಯಕ್ತಿಕ ಸಹಕಾರವನ್ನು ನೀಡುತ್ತಿರಬೇಕು.

iv) ಮಾರ್ಜಿನು, ದಿನಾಂಕ, ಶೀರ್ಷಿಕೆ, ಪ್ಯಾರಾಗ್ರಾಫ್, ಅಡ್ಡಗೆರೆ (Dash) ಇತ್ಯಾದಿಗಳನ್ನು ಪರಿಗಣಿಸುತ್ತಿರಬೇಕು.

v) ವಿದ್ಯಾರ್ಥಿಗಳಿಗೆ ಶಾಯಿ ಅಥವಾ ಬಣ್ಣವನ್ನು ಅಲ್ಲಲ್ಲಿ ಹರಡುತ್ತಿರಲು, ಚಿಮುಕಿಸುತ್ತಿರಲು ಅಥವಾ ಬೆರಳಲ್ಲಿ ಅದ್ದಿ ತೆಗೆಯಲು ಅವಕಾಶ ನೀಡಬಾರದು.

vi) ಕಾಪಿಪುಸ್ತಕ, ಪೆನ್ನು, ಪೆನ್ಸಿಲು ಅಥವಾ ಇನ್ನಿತರ ವಸ್ತುಗಳ ಸದ್ಬಳಕೆಯಾಗುತ್ತಿರಬೇಕು.

9. ನೋಟ್ಸ್ ಅಥವಾ ಹೋಮ್‌ವರ್ಕನ್ನು ಆದಷ್ಟು ಬೇಗ ಪರಿಶೀಲಿಸಿ ಪುಸ್ತಕವನ್ನು ಮರಳಿಸಬೇಕು.

10. ವಾರದಲ್ಲಿ ಐದು ದಿನ ಪಾಠ ಮಾಡಬೇಕು, ಒಂದು ದಿನವನ್ನು ಪುನರಾವರ್ತನೆಗೆ ಮೀಸಲಿಡಬೇಕು. ಹೆಚ್ಚು ಕಲಿಸುವ ಭರದಲ್ಲಿ ಪುನರಾವರ್ತನೆಯನ್ನು ಕಡೆಗಣಿಸುವುದು ಹಾನಿಕರವಾಗಿದೆ.

11. ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಪರಿಶೀಲನಾ ಪರೀಕ್ಷೆ ನಡೆಸಿ ವರದಿಯನ್ನು ತೆಗೆದಿಡಬೇಕು.

12. ಇಡೀ ವರ್ಷದ ಕೆಲಸವನ್ನು ಅವಧಿ, ಮಾಸ, ವಾರಗಳ ಲೆಕ್ಕದಲ್ಲಿ ವಿಂಗಡಿಸಬೇಕು. ತರುವಾಯ ಸಾದ್ಯಂತ ಆ ಯೋಜನೆಯಂತೆ ಕೆಲಸ ಮಾಡಬೇಕು. ಆದರೆ ಪುನರಾವರ್ತನೆಗೆ ಸಂಪೂರ್ಣ ಅವಕಾಶವನ್ನಿಟ್ಟಿರಬೇಕು.

13. ವಿದ್ಯಾರ್ಥಿಗಳ ಪ್ರಾಯ, ಆಸಕ್ತಿ, ಆರೋಗ್ಯ ಮತ್ತು ಅವಕಾಶಗಳನ್ನು ಅನುಸರಿಸಿ ಹೋಮ್ ವರ್ಕ್ ನೀಡಬೇಕು.

14. ಕಿರಿಯ ಪ್ರಾಥಮಿಕ ತರಗತಿಗಳಲ್ಲಿ ಸಾಧ್ಯವಾದಷ್ಟರ ಮಟ್ಟಿಗೆ ತರಗತಿಗಳಲ್ಲಿ ಮಾಡಿದ ಪಾಠಕ್ಕೇ ಸೀಮಿತವಾಗಲು ಪ್ರಯತ್ನಿಸಬೇಕು.
15. ಹೋಮ್ ವರ್ಕ್‌ನ ಮೇಲೆ ಹೆಚ್ಚು ಭರವಸೆ ಇಡಬಾರದು.
16. ಪಾಠವನ್ನು ಸುಲಭ ಮತ್ತು ಆಸಕ್ತಿಕರಗೊಳಿಸಲಿಕ್ಕಾಗಿ, ಅಗತ್ಯದ ವಿವರಣಾತ್ಮಕ ಸಾಮಗ್ರಿಗಳು ಮತ್ತು ಚಾರ್ಟ್ ಇತ್ಯಾದಿಗಳನ್ನು ಒದಗಿಸಬೇಕು ಅಥವಾ ಸಿದ್ಧಪಡಿಸಬೇಕು.
17. ತರಗತಿಯ ವೇಳೆ ವಿದ್ಯಾರ್ಥಿಗಳಿಂದ ನೈತಿಕ ದೌರ್ಬಲ್ಯ ಅಥವಾ ಶಿಷ್ಟಾಚಾರಕ್ಕೆ ವಿರುದ್ಧವಾದ ಕೃತ್ಯ ಸಂಭವಿಸುವ ಲಕ್ಷಣ ಕಂಡರೆ, ತಕ್ಷಣವೇ ಸುಧಾರಣೆಗೆ ಮುಂದಾಗಬೇಕು ಅಥವಾ ಪರಿಸ್ಥಿತಿ ಸೂಕ್ತ ಅಲ್ಲವೆಂದು ಕಂಡರೆ, ಬಳಿಕ ಪ್ರತ್ಯೇಕವಾಗಿ ಕರೆದು ತಿಳಿ ಹೇಳಬೇಕು.
18. ತನ್ನ ಪಠ್ಯ ವಿಷಯದಲ್ಲಿ ತಿಳುವಳಿಕೆಯನ್ನು ಹೆಚ್ಚಿಸಲು ಮತ್ತು ಬೋಧನಾ ಕಾರ್ಯವನ್ನು ಅತ್ಯುತ್ತಮವಾಗಿ ನೆರವೇರಿಸಲು ಅಧ್ಯಾಪಕನು ನಿಯಮಿತವಾಗಿ ಅಧ್ಯಯನ ನಡೆಸುತ್ತ ಇರಬೇಕು.
19. ವಿದ್ಯಾರ್ಥಿಗಳಲ್ಲಿ ಪಠ್ಯದ ಬಗ್ಗೆ ಆಸಕ್ತಿ ಹುಟ್ಟಿಸಿದರೆ, ಅದುವೇ ಪಠ್ಯ ಬೋಧಕನ ಅತಿದೊಡ್ಡ ಯಶಸ್ಸಾಗಿದೆ. ಅದಕ್ಕಾಗಿ ಅಧ್ಯಾಪಕನು ಸ್ವಯಂ ತನ್ನ ಪಾಠದಲ್ಲಿ ಆಸಕ್ತನಾಗಬೇಕು ಹಾಗೂ ಬೋಧನೆಯ ವೇಳೆ ವಿದ್ಯಾರ್ಥಿಗಳ ಆಸಕ್ತಿ ಮತ್ತು ಸೌಲಭ್ಯವನ್ನು ಪರಿಗಣಿಸಬೇಕು.
20. ವಿದ್ಯಾರ್ಥಿಗಳ ಮುಂದೆ ಉತ್ತಮ ಚಾರಿತ್ರ್ಯವನ್ನು ಪ್ರದರ್ಶಿಸಬೇಕು.

ಧಾರ್ಮಿಕ ಪಾಠ ಶಾಲೆಯ ಅಧ್ಯಾಪಕರ ಹೆಚ್ಚುವರಿ ಕರ್ತವ್ಯಗಳು

ಇವು ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಅಧ್ಯಾಪಕರು ನಿರ್ವಹಿಸಬೇಕಾದ ಕರ್ತವ್ಯಗಳಾಗಿವೆ. ಇನ್ನು ಮದ್ರಸಾ ಅಧ್ಯಾಪಕರ ಮೇಲೆ ಇನ್ನೂ ಹೆಚ್ಚಿನ ನಿರೀಕ್ಷೆಗಳನ್ನು ಇರಿಸಲಾಗುತ್ತದೆ. ಉದಾ:

1. ಇತರರಿಗಿಂತ ಹೆಚ್ಚು ಪರಿಶ್ರಮ ಹಾಗೂ ಪ್ರಾಮಾಣಿಕತೆಯಿಂದ ಬೋಧಿಸಬೇಕು.
2. ಬೌತಿಕತೆಯ ಈ ಕಾಲದಲ್ಲಿ ಪ್ರತಿಯೋರ್ವರೂ ಲೌಕಿಕ ಶಿಕ್ಷಣದೆಡೆಗೇ ಹೆಚ್ಚು ದಾಪುಗಾಲಿಡುತ್ತಿರುವಾಗ ಮತ್ತು ಶಾಲಾ ಕಾಲೇಜುಗಳಿಗೇ ಹೆಚ್ಚು ಮಹತ್ವ ಕಲ್ಪಿಸುವಾಗ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ಧಾರ್ಮಿಕ ಶಿಕ್ಷಣದ ಅಗತ್ಯ ಹಾಗೂ ಮಹತ್ವವನ್ನು ಮನವರಿಕೆ ಮಾಡಿಸಿ ಕೊಡಬೇಕು.
3. ಸೀಮಿತ ಸೌಲಭ್ಯ-ಸಂಪನ್ಮೂಲ ಮತ್ತು ಸೀಮಿತ ಸಿಬ್ಬಂದಿಗಳೊಂದಿಗೆ ಕೆಲಸ ಮಾಡಬೇಕಾಗುವುದು.

4. ಧಾರ್ಮಿಕ ಶಿಕ್ಷಣ ಮತ್ತು ಮಾತೃಭಾಷೆಯ ಜತೆಯಲ್ಲಿಯೇ ಇತರ ಪಠ್ಯಗಳಲ್ಲಿಯೂ ಪ್ರಾವೀಣ್ಯತೆ ಗಳಿಸಬೇಕು.
5. ವೇತನದ ಕೊರತೆಯಲ್ಲಿ ಕನಾಅತ್ (ಅಲ್ಪದರಲ್ಲಿ ಸಂತೃಪ್ತಿ) ಮತ್ತು ಹೆಚ್ಚುವರಿ ಕೆಲಸದ ಹೊರೆ ಇದ್ದಾಗ ಸಮಾಧಾನ ಚಿತ್ತರಾಗುವುದು.
6. ಶಿಕ್ಷಣದ ಜತೆಗೆ ಪ್ರೀತಿ, ಅನುಕಂಪದಿಂದ ಮಕ್ಕಳಿಗೆ ತರಬೇತಿ ನೀಡುವುದು, ಸಂಸ್ಕರಿಸುವುದು.
7. ತನ್ನ ಸದ್ವರ್ತನೆ ಮತ್ತು ಪರಿಶುದ್ಧ ಚಾರಿತ್ರ್ಯದಿಂದ ಧರ್ಮ, ಸಮುದಾಯ, ಧಾರ್ಮಿಕ ಸಂಸ್ಥೆ ಮತ್ತು ವ್ಯಕ್ತಿತ್ವಗಳ ಮೇಲೆ ಪ್ರೀತಿ ಹುಟ್ಟಿಸುವುದು.
8. ಮದ್ರಸವನ್ನು ಜನತೆಯ ಗಮನ ಮತ್ತು ಆಸಕ್ತಿಯ ಕೇಂದ್ರವನ್ನಾಗಿ ಮಾಡುವುದು. ಹಾಗೆಯೇ ಅದರ ಏಳಿಗೆಗಾಗಿ ಎಲ್ಲರ ಸಹಕಾರ ಪಡೆಯುವುದು.
9. ಮದ್ರಸವನ್ನು ಪರಿಸರದಲ್ಲಿ ಧಾರ್ಮಿಕ ಸಂದೇಶ ಪ್ರಚಾರದ ಕೇಂದ್ರವನ್ನಾಗಿ ಮಾರ್ಪಡಿಸವುದು. ಅದಕ್ಕಾಗಿ ಮಕ್ಕಳ ಪೋಷಕರಿಗೂ ಧಾರ್ಮಿಕ ತರಬೇತಿ ನೀಡುವುದು.
10. ಗುಂಪುಗಾರಿಕೆಯಿಂದ ದೂರವಿರುತ್ತ ಎಲ್ಲ ಪಂಗಡದವರ ಅನುಕಂಪವನ್ನು ಗಳಿಸುವುದು.
11. ಸಾದ್ಯಂತ ಸ್ವತಃ ಫಂಡ್ ಗಳಿಸಿಕೊಳ್ಳುವುದು ಮತ್ತು ಮದ್ರಸವನ್ನು ತನ್ನ ಸಾಮರ್ಥ್ಯದಲ್ಲೇ ನಡೆಸುವುದು.
12. ಸಂಸ್ಥೆಯ ವ್ಯವಸ್ಥೆ ನೋಡಿಕೊಳ್ಳುವವರನ್ನು ಸಂತೃಪ್ತಗೊಳಿಸುವುದು ಮತ್ತು ಆಕ್ಷೇಪಕರ ಆಕ್ಷೇಪ ಹಾಗೂ ಸಂಶಯಗಳನ್ನು ದೂರ ಮಾಡುವುದು.
13. ಶಿಕ್ಷಣ ಸಚಿವಾಲಯದ ಸ್ಥಾನೀಯ ಅಧಿಕಾರಿಗಳೊಂದಿಗೆ ಸೂಕ್ತವಾಗಿ ವ್ಯವಹರಿಸುವುದು.

ಅಲ್ಲಾಹ್ ಈ ಎಲ್ಲ ಕರ್ತವ್ಯಗಳನ್ನು ಉತ್ತಮವಾಗಿ ನಿರ್ವಹಿಸಲು ಮದ್ರಸಾ ಅಧ್ಯಾಪಕರುಗಳಿಗೆ ಅನುಗ್ರಹ ದಯಪಾಲಿಸಲಿ (ಆಮೀನ್).

◆ ◆ ◆

ಅಧ್ಯಾಯ-21

ದೈಹಿಕ ತರಬೇತಿ

ಅಲ್ಲಾಹನು ಮಾನವನನ್ನು ತನ್ನ ಖಲೀಫನನ್ನಾಗಿ (ಪ್ರತಿನಿಧಿ ಅಥವಾ ಮಾನಿಟರ್) ಮಾಡಿದ್ದಾನೆ. ಈ ಸ್ಥಾನಮಾನಕ್ಕೆ ಅನುಗುಣವಾಗಿ ಮಾನವನಿಗೆ ಸುಂದರವಾದ ದೇಹಾಕೃತಿಯನ್ನು ನೀಡಿದ್ದಾನೆ. ಆ ದೇಹದಲ್ಲಿ ಹಲವು ಅಗತ್ಯದ ಮತ್ತು ಸಂತುಲಿತ ಅಂಗಾಂಗಗಳನ್ನು ಇರಿಸಿದ್ದಾನೆ. ತರತರವಾದ ಶಕ್ತಿ-ಸಾಮರ್ಥ್ಯಗಳನ್ನು ಕರುಣಿಸಿದ್ದಾನೆ. ಮಾನವನ ಈ ಶಕ್ತಿ-ಸಾಮರ್ಥ್ಯಗಳು ಸರಿಯಾಗಿ ಬಳಕೆಯಾಗಬೇಕಾದರೆ, ದೇಹವು ಆರೋಗ್ಯಪೂರ್ಣವಾಗಿರಬೇಕಾದುದು ಅಗತ್ಯ. ಆದ್ದರಿಂದ ನಾವು ಮಕ್ಕಳ ದೈಹಿಕ ಬೆಳವಣಿಗೆ ಮತ್ತು ಆರೋಗ್ಯದ ಕಡೆಗೂ ಲಕ್ಷ್ಯ ಹರಿಸಬೇಕಾಗಿದೆ. ಈ ಕಾರ್ಯವು ಮನೆ ಮತ್ತು ಶಾಲೆಗಳೆರಡರ ಪರಸ್ಪರ ಸಹಕಾರವಿಲ್ಲದಿದ್ದರೆ ಸಿದ್ಧಿಸದು.

ದೈಹಿಕ ಬೆಳವಣಿಗೆಗೆ ಅಗತ್ಯವಿರುವ ಸಂಗತಿಗಳು

ಆರೋಗ್ಯ ಮತ್ತು ಶಕ್ತಿಗೆ ಈ ಕೆಳಗಿನ ವಸ್ತುಗಳು ಅಗತ್ಯ:

1) ಸಂತುಲಿತ ಆಹಾರ
2) ಶುದ್ಧ ನೀರು
3) ಸ್ವಚ್ಛಗಾಳಿ
4) ಸಾಕಷ್ಟು ಬೆಳಕು
5) ದೈಹಿಕ ಶ್ರಮ ಅಥವಾ ಆಟ-ವ್ಯಾಯಾಮ
6) ಉತ್ತಮ ವಸ್ತ್ರ
7) ಸ್ವಚ್ಛತೆ
8) ಗಾಢ ನಿದ್ರೆ
9) ಸಂತೋಷ
10) ಪರಿಶುದ್ಧ ಚಾರಿತ್ರ್ಯ.

1) ಸಂತುಲಿತ ಆಹಾರ

ಉತ್ತಮ ದೈಹಿಕ ಬೆಳವಣಿಗೆಗೆ ಎಲ್ಲಕ್ಕಿಂತ ಮುಖ್ಯವಾಗಿ ಅಗತ್ಯವಿರುವುದು ಸಂತುಲಿತ ಆಹಾರವಾಗಿದೆ. ಜನನವಾದ ಬಳಿಕ ಮಗುವಿಗೆ ಅತ್ಯುತ್ತಮ ಆಹಾರ ತಾಯಿಯ ಎದೆಹಾಲು. ತಾಯಿಯ ಹಾಲಿನಿಂದ ವಂಚಿತವಾದ ಮಕ್ಕಳು ಸಾಮಾನ್ಯವಾಗಿ ತರತರವಾದ ದೈಹಿಕ ದೌರ್ಬಲ್ಯಗಳಿಗೆ ಈಡಾಗುತ್ತಾರೆ. ಆದ್ದರಿಂದ ತೀರಾ ವಿವಶಾವಸ್ಥೆಯ ಹೊರತು ಮಗುವನ್ನು

ಮಾತೆಯ ಹಾಲಿನಿಂದ ವಂಚಿತಗೊಳಿಸಬಾರದು. ಮೊಲೆ ಹಾಲು ಬಿಡಿಸಿದ ಮೇಲೂ ಮಗುವಿಗೆ ಸಾಕಷ್ಟು ಪ್ರಮಾಣದಲ್ಲಿ ಹಾಲು ಮತ್ತು ಸುಲಭದಲ್ಲಿ ಜೀರ್ಣವಾಗಬಲ್ಲ ವಸ್ತುಗಳನ್ನು ನೀಡುತ್ತಿರಬೇಕು. ಆ ಬಳಿಕ ಗೌರವ-ಮರ್ಯಾದೆಯೊಂದಿಗೆ ಅರ್ಹ ವಿಧಾನದಲ್ಲಿ ಗಳಿಸಿದ ಶುದ್ಧ ಆಹಾರವನ್ನು ಸಂತುಲಿತವಾಗಿ ತಿನ್ನಬೇಕು ಹಾಗೂ ತಿನ್ನಿಸಬೇಕು. ಅದೇ ವೇಳೆ, ಆಹಾರದಲ್ಲಿ ಈ ಕೆಳಗಿನ ವಿಷಯಗಳನ್ನು ಪರಿಗಣಿಸಬೇಕು.

- ಆಹಾರವು ಸಾದ್ಯಂತ ಸಂತುಲಿತವಾಗಿರಬೇಕು. ಅಂದರೆ ದೇಹದ ಸರಿಯಾದ ಬೆಳವಣಿಗೆಗೆ ಅಗತ್ಯವಿರುವ ಎಲ್ಲ ವಸ್ತುಗಳೂ ಆಹಾರದಲ್ಲಿ ಸರಿಯಾದ ಪ್ರಮಾಣದಲ್ಲಿ ಇರಬೇಕು.
- ಸರಳ ಮತ್ತು ಬೇಗ ಜೀರ್ಣವಾಗುವಂತಹದ್ದಾಗಿರಬೇಕು. ಅಂದರೆ ಹೆಚ್ಚು ಮಸಾಲೆಯುಕ್ತ, ಜಿಡ್ಡುಯುಕ್ತ ಅಥವಾ ಸಿಹಿಯದ್ದಾಗಿರಬಾರದು. ದೇಹದಲ್ಲಿ ಉದ್ರೇಕವನ್ನುಂಟು ಮಾಡುವಂತಹ ಅಥವಾ ಅಮಲು ಬರಿಸುವಂತಹದ್ದಾಗಿರಬಾರದು.
- ಸ್ವಚ್ಛ ಮತ್ತು ಶುದ್ಧವಾಗಿರಬೇಕು. ಅಂದರೆ ಧಾನ್ಯ ಮತ್ತು ತರಕಾರಿ ಇತ್ಯಾದಿಗಳನ್ನು ಬೇಯಿಸುವುದಕ್ಕಿಂತ ಮುಂಚೆ ಚೆನ್ನಾಗಿ ತೊಳೆಯಬೇಕು. ಸ್ವಚ್ಛ ಪಾತ್ರೆಯಲ್ಲಿ ಬೇಯಿಸಬೇಕು, ಸ್ವಚ್ಛ ತಟ್ಟೆಯಲ್ಲಿ ಸೇವಿಸಬೇಕು. ನೊಣ, ಧೂಳು ಇತ್ಯಾದಿಗಳಿಂದ ಆಹಾರವನ್ನು ರಕ್ಷಿಸಬೇಕು.
- ಆಹಾರವು ಸ್ವಾದಿಷ್ಟ ಮತ್ತು ಸುಲಭದಲ್ಲಿ ಜೀರ್ಣಗೊಳ್ಳುವಂತಾಗಲು ಅಚ್ಚುಕಟ್ಟಾಗಿ ಬೇಯಿಸಿರಬೇಕು. ಹಾಗಾದಾಗ ಮಕ್ಕಳು ಇಷ್ಟಪಟ್ಟು ತಿನ್ನುತ್ತಾರೆ ಮತ್ತು ಅದು ದೇಹಕ್ಕೂ ಒಗ್ಗುತ್ತದೆ.
- ಋತುಮಾನಕ್ಕೆ ತಕ್ಕ ಹಣ್ಣುಹಂಪಲು ಮತ್ತು ತರಕಾರಿ, ಹಾಲು, ತುಪ್ಪ, ಮೀನು, ಮೊಟ್ಟೆಗಳ ಪೈಕಿ ಯಾವುದು ದೊರೆಯುತ್ತದೋ ಅದನ್ನು ಆಹಾರದಲ್ಲಿ ಸೇರಿಸಬೇಕು. ಪರಿಸರದಲ್ಲಿ ಬೆಳೆಯುವ ಹಣ್ಣು-ತರಕಾರಿಗಳನ್ನು ಗಳಿಸಲು ಪ್ರಯತ್ನಿಸಬೇಕು.
- ಆಹಾರವು ಸಾದ್ಯಂತ ತಾಜಾ ಆಗಿರಬೇಕು. ಕೊಳೆತ ಅಥವಾ ಡಬ್ಬದಲ್ಲಿ ತುಂಬಿಸಿರುವ ಸಿದ್ಧ ಆಹಾರವನ್ನು ಮುಟ್ಟಲೇ ಬಾರದು.
- ಚೆನ್ನಾಗಿ ಹಸಿವಾದಾಗ ತಿನ್ನಬೇಕು ಮತ್ತು ಹಸಿವು ಇನ್ನೂ ಉಳಿದಿದೆಯೆನ್ನುವಾಗ ತಿನ್ನುವುದನ್ನು ನಿಲ್ಲಿಸಬೇಕು.
- ಆಹಾರವನ್ನು ಸಾವಧಾನವಾಗಿ, ಚೆನ್ನಾಗಿ ಅಗಿದು ತಿನ್ನಬೇಕು.
- ಎರಡು ಆಹಾರಗಳ ನಡುವೆ ಕನಿಷ್ಠ ಮೂರು ಗಂಟೆಯ ಅಂತರವಿರಬೇಕು. ಏಕೆಂದರೆ ಅದರಿಂದ ಆಹಾರ ಪಚನವಾಗಲು ಸುಲಭವಾಗುತ್ತದೆ.
- ಸಂತೋಷದೊಂದಿಗೆ ಬಿಸ್ಮಿಲ್ಲಾ ಹೇಳಿ ತಿನ್ನಬೇಕು ಮತ್ತು ತಿಂದಾದ ಬಳಿಕ ಅಲ್ಲಾಹನನ್ನು ಸ್ತುತಿಸಬೇಕು.

• ದೇಹಕ್ಕೆ ಅಗತ್ಯವಿರುವ ಮತ್ತು ಆಹಾರ ಸೇವನೆಯ ಉದ್ದೇಶವನ್ನು ಪೂರ್ತಿಗೊಳಿಸುವಂತಹ ಎಲ್ಲ ವಸ್ತುಗಳೂ ಸರಿಯಾದ ಪ್ರಮಾಣದಲ್ಲಿ ಇದ್ದರೆ ಅದನ್ನೇ ಸಂತುಲಿತ ಆಹಾರ ಅನ್ನುವುದು. ಆಹಾರ ಸೇವಿಸುವುದರ ಉದ್ದೇಶ ಸಾಮಾನ್ಯವಾಗಿ ಈ ರೀತಿ ಇದೆ.

- ಕೆಲಸ ಮಾಡಲು ದೈಹಿಕ ಶಕ್ತಿ ಮತ್ತು ಹುರುಪು ದೊರೆಯಬೇಕು.
- ಕೆಲಸಕಾರ್ಯ ಅಥವಾ ಚಟುವಟಿಕೆಗಳ ವೇಳೆ ದೇಹದ ಯಾವುದಾದರೂ ಅಂಗ ಬಳಲಿದರೆ ಅದಕ್ಕೆ ಸೂಕ್ತ ಬಲವೊದಗಬೇಕು.
- ದೇಹ ಬೆಳೆಯಲು ಮತ್ತು ವಿಕಾಸ ಹೊಂದಲು ಸಹಾಯಕವಾಗಬೇಕು.
- ರೋಗಾಣುಗಳೊಡನೆ ಹೋರಾಡುವ ಶಕ್ತಿಯು ದೇಹಕ್ಕೆ ಒದಗಬೇಕು.

ಈ ಎಲ್ಲ ಉದ್ದೇಶಗಳು ಈಡೇರಬೇಕಾದರೆ, ಕೆಳಗೆ ನಮೂದಿಸಿರುವ ವಸ್ತುಗಳು ಆಹಾರದಲ್ಲಿ ಇರಬೇಕಾದುದು ಅಗತ್ಯ.

ಅ) ಕಾರ್ಬೋಹೈಡ್ರೇಟ್ ಆ) ಕೊಬ್ಬು
ಇ) ಪ್ರೊಟೀನ್ ಈ) ಖನಿಜಾಂಶ
ಉ) ನೀರು ಊ) ವಿಟಾಮಿನ್

ಅ) ಕಾರ್ಬೋಹೈಡ್ರೇಟ್(ಶರ್ಕರಪಿಷ್ಟ): ಆಹಾರದಲ್ಲಿರುವ ಈ ಅಂಶವು ಆಮ್ಲಜನಕದೊಂದಿಗೆ ಸೇರಿ ದೇಹಕ್ಕೆ ಶಕ್ತಿ ಮತ್ತು ಶಾಖವನ್ನು ಒದಗಿಸುತ್ತದೆ. ಬಾರ್ಲಿ, ಜೋಳ, ಅಕ್ಕಿ, ಬಟಾಟೆ, ಕ್ಯಾರೆಟ್, ಸಾಗು, ಗೋದಿ, ಬೆಲ್ಲ, ಸಕ್ಕರೆ, ಬೀಟ್‌ರೂಟ್, ದ್ರಾಕ್ಷೆ ಇತ್ಯಾದಿಗಳಿಂದ ಅದು ಹೇರಳವಾಗಿ ದೊರೆಯುತ್ತದೆ.

ಆ) ಕೊಬ್ಬು: ಇದೂ ಕೂಡ ಆಮ್ಲಜನಕದೊಂದಿಗೆ ಸೇರಿ ಕರಗುತ್ತದೆ ಮತ್ತು ದೇಹಕ್ಕೆ ಶಕ್ತಿ-ಶಾಖವನ್ನು ಒದಗಿಸುತ್ತದೆ. ಕೂದಲು, ಚರ್ಮ ಹಾಗೂ ಉಗುರುಗಳನ್ನು ಉತ್ತಮ ಸ್ಥಿತಿಯಲ್ಲಿ ಇರಿಸುತ್ತದೆ. ಇತರ ವಸ್ತುಗಳನ್ನು ಕರಗಿಸಲೂ ಉಪಯೋಗವಾಗುತ್ತದೆ. ಎಣ್ಣೆ ತುಪ್ಪ ಬೆಣ್ಣೆ ಮತ್ತು ಕೊಬ್ಬುಗಳಿಂದ ಇದು ದೊರೆಯುತ್ತದೆ. ಈ ಕೊಬ್ಬಿನಂಶಗಳಲ್ಲಿ ವಿಟಮಿನ್ 'ಎ' ಮತ್ತು 'ಡಿ' ಹೇರಳವಾಗಿರುತ್ತದೆ.

ಇ) ಪ್ರೊಟೀನ್: ಆಹಾರದ ಈ ಅಂಶವು ಕರಗಿ ದೇಹದ ಬೆಳವಣಿಗೆ ಮತ್ತು ಒಡೆದ ಅಂಗಗಳ ರಿಪೇರಿಯಲ್ಲಿ ಸಹಾಯಕವಾಗುತ್ತದೆ. ಬಟಾಣಿ, ವಿವಿಧ ಬಗೆಯ ಬೇಳೆ, ಮಾಂಸ, ಮೊಟ್ಟೆ, ಮೀನು, ಹಾಲು, ಮೊಸರು ಮತ್ತು ಧಾನ್ಯಗಳ ಕವಚದಲ್ಲಿ (ಅದನ್ನು ಹೊಟ್ಟು ಎಂದು ಹೇಳಿ ಸಾಮಾನ್ಯವಾಗಿ ಎಸೆದು ಬಿಡುತ್ತಾರೆ) ಈ ಅಂಶವು ಹೇರಳವಾಗಿರುತ್ತದೆ.

ಈ) ಖನಿಜಾಂಶ (Minarals): ಈ ಭಾಗವು ಮೂಳೆ, ಹಲ್ಲು, ಜೊಲ್ಲು, ನರ ಇತ್ಯಾದಿಗಳ ಬೆಳವಣಿಗೆಯಲ್ಲಿ ಉಪಯೋಗಕ್ಕೆ ಬರುತ್ತದೆ. ರಕ್ತಕಣಗಳ ಸೃಷ್ಟಿ ಮತ್ತು ದೇಹದ ಸಂತುಲಿತ ಬೆಳವಣಿಗೆಯಲ್ಲಿ ಸಹಾಯಕವಾಗಿದೆ. ಇದರಲ್ಲಿ ಉಪ್ಪು (Sodium), ಕಬ್ಬಿಣಾಂಶ (Iron), ಸುಣ್ಣ(Calcium Carbonate) ಮತ್ತು ರಂಜಕ (Phosphorous) ಇತ್ಯಾದಿಗಳಿರುತ್ತವೆ. ಖಾದ್ಯ ಉಪ್ಪು, ಹಣ್ಣು, ತರಕಾರಿ, ಮಾಂಸ, ಮೊಟ್ಟೆ, ಮೀನು ಇತ್ಯಾದಿಗಳಲ್ಲಿ ಇದು ಹೇರಳವಾಗಿದೆ.

ಉ) ನೀರು: ಇದು ಆಹಾರದ ಪ್ರಮುಖವಾದ ಅಂಶವಾಗಿದೆ. ಇದರ ಸಹಾಯದಿಂದಲೇ ಆಹಾರ ಜೀರ್ಣವಾಗುತ್ತದೆ ಮತ್ತು ತೆಳುವಾಗಿ ದೇಹದ ಇತರ ಅಂಗಾಂಗಗಳಿಗೆ ಹರಡುತ್ತದೆ. ರಕ್ತ ಸಂಚಲನೆಗೂ ಇದುವೇ ಮೂಲ ವಸ್ತುವಾಗಿದೆ. ದೇಹದಲ್ಲಿರುವ ತ್ಯಾಜ್ಯ ವಸ್ತು ಇದರಿಂದ ತೊಳೆಯಲ್ಪಟ್ಟು ಹೊರಸೂಸುತ್ತದೆ. ದೇಹದ ವಿವಿಧ ಭಾಗಗಳಲ್ಲಿ ಹೊರಡುವ ಬೆವರು ಕೂಡ ನೀರಿನ ಸಹಾಯದಿಂದಲೇ ಉಂಟಾಗುತ್ತದೆ. ಆದ್ದರಿಂದ ಆಹಾರ ಸೇವನೆಯ ಜೊತೆಯಲ್ಲಿ ಸ್ವಲ್ಪ ನೀರು ಕುಡಿಯಬೇಕು ಮತ್ತು ಸೇವನೆಯ ಬಳಿಕ ಒಂದೆರಡು ಗಂಟೆ ಬಿಟ್ಟು ಧಾರಾಳ ನೀರು ಕುಡಿಯಬೇಕು.

ಊ) ಜೀವಸತ್ವ (Vitamin): ಇದರ ಹೆಸರೇ ಸೂಚಿಸುವಂತೆ, ಜೀವಿಸಲು ಮತ್ತು ಆರೋಗ್ಯದಿಂದಿರಲು ತೀರಾ ಅಗತ್ಯವಿರುವ ವಸ್ತುವಾಗಿದೆ. ಇವುಗಳ ಹೊರತು-

i) ಆರೋಗ್ಯ ಚೆನ್ನಾಗಿರುವುದಿಲ್ಲ.
ii) ದೈಹಿಕ ಬೆಳವಣಿಗೆ ಕುಂಠಿತವಾಗುತ್ತದೆ.
iii) ರೋಗ ನಿರೋಧಕ ಶಕ್ತಿಯೂ ಕುಂದುತ್ತದೆ.
iv) ದೇಹವು ತರತರದ ರೋಗಗಳಿಗೆ ತುತ್ತಾಗುತ್ತದೆ.

ಜೀವಸತ್ವಗಳಲ್ಲಿ ಹಲವು ವಿಧಗಳಿರುತ್ತವೆ. ಆ ಪೈಕಿ ಪ್ರಮುಖವಾದವು ಇವು-

'ಎ' ಜೀವಸತ್ವ: ದೈಹಿಕ ಬೆಳವಣಿಗೆಗೆ, ಅಂಟು ರೋಗದಿಂದ ರಕ್ಷಣೆಗೆ ಮತ್ತು ರೋಗ ನಿರೋಧಕ ಶಕ್ತಿಗೆ ವಿಟಮಿನ್'ಎ' ತೀರಾ ಅಗತ್ಯ. ಇದರಿಂದ ಶ್ವಾಸಕೋಶ ಮತ್ತು ಹಲ್ಲುಗಳು ಗಟ್ಟಿಯಾಗುತ್ತವೆ. ಕಣ್ಣು ಮತ್ತು ಚರ್ಮವನ್ನು ಆರೋಗ್ಯಪೂರ್ಣವಾಗಿರಿಸಲು ಇದರಿಂದ ಸಹಾಯವೊದಗುತ್ತದೆ. ಜಾನುವಾರುಗಳ ಯಕೃತ್ತು (Liver), ಮೂತ್ರ ಜನಕಾಂಗ (Kidney), ಸೊಪ್ಪು ತರಕಾರಿ, ಹಾಲು, ಬೆಣ್ಣೆ, ಮೊಟ್ಟೆ ಇತ್ಯಾದಿಗಳಲ್ಲಿ ಇದು ಹೇರಳವಾಗಿರುತ್ತದೆ. ಅಧಿಕ ಉಷ್ಣಾಂಶದಲ್ಲಿ ಬೇಯಿಸುವುದರಿಂದ ಅಥವಾ ಹುರಿಯುವುದರಿಂದ 'ಎ' ಜೀವಸತ್ವ ಹಾಳಾಗುತ್ತದೆ. ಇದನ್ನು ನೆನಪಿನಲ್ಲಿರಿಸಬೇಕು. ಹಣ್ಣು-ತರಕಾರಿಗಳು, ಸಲಾಡ್ ಇತ್ಯಾದಿಗಳನ್ನು ಆದಷ್ಟು ಹಸಿಯಾಗಿಯೇ ತಿನ್ನಬೇಕು. 'ಎ' ಜೀವಸತ್ವದ ಕೊರತೆಯಿಂದಾಗಿ ಇರುಳುಗಣ್ಣು ಬಾಧಿಸುತ್ತದೆ ಮತ್ತು ಮಕ್ಕಳ ಬೆಳವಣಿಗೆಯೂ ಕುಂಠಿತವಾಗುತ್ತದೆ.

'ಬಿ' ಜೀವಸತ್ವ: ಹಸಿವು ಹೆಚ್ಚಿಸಲು, ಪಚನಕ್ರಿಯೆ ಸುಗಮಗೊಳಿಸಲು, ಕೆಂಪು ರಕ್ತಕಣಗಳ ಹುಟ್ಟಿಗೆ ಇದು ಅಗತ್ಯ. ಇದರಿಂದ ಮಲಬದ್ಧತೆ, ಸೆಡವು ಮತ್ತು ತಲೆನೋವು

ಶಮನವಾಗುತ್ತದೆ. ಹಾಲು, ಮೊಟ್ಟೆ, ಹುಳಿ ಬರಿಸಿದ ಹಿಟ್ಟು, ಮೊಗ್ಗು ಬರಿಸಿದ ಕಡಲೆ, ಸೋಸದ ಗೋದಿ ಹಿಟ್ಟಿನಲ್ಲಿ ಇದು ಹೇರಳವಾಗಿರುತ್ತದೆ. ಅಕ್ಕಿಯ ಮೇಲ್ಪದರದಲ್ಲಿಯೂ ಇರುತ್ತದೆ. ಆದರೆ ತುಸು ಹೆಚ್ಚು ಸ್ವಚ್ಛ ಮಾಡಿದರೆ ಅಥವಾ ಪಾಲಿಶ್ ಮಾಡಿದರೆ ಅದು ನಷ್ಟವಾಗುತ್ತದೆ. ವಿಟಮಿನ್ 'ಬಿ'ಯ ಕೊರತೆಯಿಂದ ದೇಹ ಉಬ್ಬರಿಸುತ್ತದೆ, ಕೈ ಕಾಲುಗಳು ದುರ್ಬಲವಾಗುತ್ತವೆ ಮತ್ತು ತರತರವಾದ ದೈಹಿಕ ತೊಂದರೆಯುಂಟಾಗುವ ಸಾಧ್ಯತೆಯಿದೆ.

'ಸಿ' ಜೀವಸತ್ವ: ಇದು ಹಲ್ಲುಗಳಿಗೆ ಅಗತ್ಯ. ಇದರ ಕೊರತೆಯಿಂದ ವಸಡುಗಳಲ್ಲಿ ಬಾವು ಬರುತ್ತದೆ ಮತ್ತು ಅವುಗಳಿಂದ ರಕ್ತ ಒಸರುತ್ತದೆ. ಚರ್ಮರೋಗ ಬಾಧಿಸುವ ಸಾಧ್ಯತೆಯೂ ಇದೆ. ಕಪ್ಪು ಒಣದ್ರಾಕ್ಷೆ, ಲಿಂಬೆ, ಕಿತ್ತಳೆ, ಕ್ಯಾರೆಟ್, ಆಲೂಗಡ್ಡೆ ತಾಜಾಹಣ್ಣು-ತರಕಾರಿಗಳಲ್ಲಿ ಇದು ಹೇರಳವಾಗಿರುತ್ತದೆ. ಹಣ್ಣು ತರಕಾರಿ ಒಣಗಿದರೆ ಅದು ನಷ್ಟವಾಗುತ್ತದೆ.

'ಡಿ' ಜೀವಸತ್ವ: ಹಾಲು, ಬೆಣ್ಣೆ, ಮೊಟ್ಟೆ, ಜಾನುವಾರುಗಳ ಯಕೃತ್ತು, ಮೀನಿನ ಎಣ್ಣೆ ಮತ್ತು ಸೂರ್ಯ ಬೆಳಕಿನಲ್ಲಿ ಇದು ಹೇರಳವಾಗಿರುತ್ತದೆ. ಮೂಳೆಗಳ ಸಂಯೋಜನೆ, ದೈಹಿಕ ಬೆಳವಣಿಗೆ ಮತ್ತು ದೇಹ ಶಕ್ತಿಗೆ ಸಹಾಯಕವಾಗಿದೆ. ಇದರ ಕೊರತೆಯಿಂದ ಮಕ್ಕಳಲ್ಲಿ ಕ್ಷಯ ಅಥವಾ ಮೂಳೆಗಳ ರಚನೆಯಲ್ಲಿ ತೊಂದರೆಯುಂಟಾಗುವ ಸಾಧ್ಯತೆಯಿದೆ.

'ಈ' ಜೀವಸತ್ವ: ಸಂತಾನ ಶಕ್ತಿಗೆ ಅತ್ಯಗತ್ಯ. ಸೊಪ್ಪು ತರಕಾರಿ, ವನಸ್ಪತಿ ತೈಲ, ಹತ್ತಿ ಕಾಳು, ಬಟಾಣಿ, ಬಾದಾಮಿ, ಪಿಸ್ತಾ, ಖರ್ಜೂರ, ಉತ್ತುತ್ತೆ, ಕರಬೂಜದ ಬೀಜ ಇತ್ಯಾದಿಗಳಲ್ಲಿ ಇದು ಹೇರಳವಾಗಿರುತ್ತದೆ. ಇದರ ಕೊರತೆಯಿಂದ ಲೈಂಗಿಕ ದೌರ್ಬಲ್ಯ ಉಂಟಾಗುವ ಸಾಧ್ಯತೆಯಿದೆ.

ಸಂತುಲಿತ ಆಹಾರದಲ್ಲಿ ಈ ಎಲ್ಲ ವಸ್ತುಗಳು ಇರಬೇಕಾದುದು ಅಗತ್ಯವೆಂಬುದು ಸ್ಪಷ್ಟವೇ. ಹಾಗಾಗಿ ದೈನಂದಿನ ಆಹಾರದಲ್ಲಿ ಕನಿಷ್ಠ-

- ➔ ಶರ್ಕರಪಿಷ್ಟ (carbohydrates) – ಅರ್ಧಕಿಲೋ
- ➔ ಸಸಾರಜನಕ (Protein) – 125 ಗ್ರಾಂ
- ➔ ಕೊಬ್ಬು (Fat) – 90ರಿಂದ 100 ಗ್ರಾಂ
- ➔ ಖನಿಜಾಂಶ (Minerals) – 50 ಗ್ರಾಂ ಸಿಗುತ್ತ ಇರಬೇಕು.

ಹಾಲಿನಲ್ಲಿ ಸರಿಸುಮಾರು ಈ ಎಲ್ಲ ವಸ್ತುಗಳು ದೊರಕುತ್ತವೆ. ತಾಜಾ ಹಣ್ಣು-ತರಕಾರಿ, ಸೊಪ್ಪು, ಮಾಂಸ, ಮೀನು, ಮೊಟ್ಟೆ, ಇತ್ಯಾದಿಗಳಲ್ಲಿಯೂ ಹೆಚ್ಚಿನ ಅಂಶಗಳಿರುತ್ತವೆ. ಹಾಗಾಗಿ ಮಕ್ಕಳಿಗೆ ಈ ಎಲ್ಲ ವಸ್ತುಗಳು ದೊರಕುತ್ತಿರಬೇಕು. ಒಂದಿಡೀ ದಿನದ ವಿವಿಧ ಸಮಯಗಳಲ್ಲಿ ಸುಮಾರು ಏಳರಿಂದ ಹದಿನೈದು ವರ್ಷ ಪ್ರಾಯದ ಮಕ್ಕಳಿಗೆ ಕೊಡಬೇಕಾದ ಸಂತುಲಿತ ಆಹಾರದ ಒಟ್ಟು ಪ್ರಮಾಣವು ಹೆಚ್ಚು ಕಡಿಮೆ ಈ ಕೆಳಗಿನಂತೆ ಇರಬೇಕು-

- ಗೋಧಿ ಹಿಟ್ಟು, ಅಕ್ಕಿ ಇತ್ಯಾದಿ - 450 ಗ್ರಾಂ.
- ಸೊಪ್ಪು ತರಕಾರಿ, ಆಲೂಗಡ್ಡೆ, ಮಾಂಸ, ಮೀನು, ಮೊಟ್ಟೆ ಬೇಳೆ ಇತ್ಯಾದಿ - 250 ಗ್ರಾಂ.
- ಹಾಲು - 250 ಗ್ರಾಂ.
- ತುಪ್ಪ, ಬೆಣ್ಣೆ, ಎಣ್ಣೆ ಅಥವಾ ಕೊಬ್ಬು - 60 ಗ್ರಾಂ.
- ಹಣ್ಣು ಹಂಪಲು, ಕ್ಯಾರೆಟ್, ಟೊಮೇಟೋ ಇತ್ಯಾದಿ - 100 ಗ್ರಾಂ.
- ಬೆಲ್ಲ ಅಥವಾ ಸಕ್ಕರೆ - 90 ಗ್ರಾಂ.

2. ಶುದ್ಧನೀರು

ಇದು ಆರೋಗ್ಯಕ್ಕೆ ಅಗತ್ಯವಿರುವ ಇನ್ನೊಂದು ಬಹುಮುಖ್ಯ ವಸ್ತುವಾಗಿದೆ. ಪ್ರತಿಯೋರ್ವ ವ್ಯಕ್ತಿಯೂ ಒಂದಿಡೀ ದಿನದಲ್ಲಿ ಕನಿಷ್ಠ ಒಂದೂವರೆ ಲೀಟರ್ ನೀರು ಕುಡಿಯಬೇಕಾದುದು ಅಗತ್ಯ.

ನೀರಿನ ಸಹಾಯದಿಂದ-

- ರಕ್ತ ಸಂಚಲನೆ ಸುಗಮವಾಗಿರುತ್ತದೆ ಮತ್ತು ಅದು ದೇಹದ ಎಲ್ಲ ಅಂಗಾಂಗಗಳಿಗೂ ಸುಲಭದಲ್ಲಿ ತಲಪುತ್ತದೆ.
- ಆಹಾರ ಚೆನ್ನಾಗಿ ಪಚನವಾಗುತ್ತದೆ ಮತ್ತು ದೇಹದಲ್ಲಿ ಸಂಪೂರ್ಣವಾಗಿ ಬೆರೆಯುತ್ತದೆ.
- ದೇಹದ ಉಷ್ಣತೆ ಸಂತುಲಿತವಾಗಿರುತ್ತದೆ.
- ದೇಹದೊಳಗಿನ ತ್ಯಾಜ್ಯವು ಮೂತ್ರ, ಬೆವರು, ಉಗುಳು, ಕಫ ಇತ್ಯಾದಿಗಳೊಂದಿಗೆ ಹೊರಹೋಗುತ್ತದೆ.
- ಜಠರ, ಕರುಳು ಮತ್ತು ನಾಳಗಳು ಸ್ವಚ್ಛವಾಗಿರುತ್ತವೆ.

ನೀರು ತಾಜಾ ಮತ್ತು ಶುದ್ಧವಾಗಿರಬೇಕು. ನೀರಿನಲ್ಲಿ ಯಾವುದೇ ರೀತಿಯ ಬಣ್ಣ ವಾಸನೆ, ರುಚಿ ಇಲ್ಲದಿರುವುದೇ ಶುದ್ಧ ನೀರಿನ ಲಕ್ಷಣವಾಗಿದೆ. ಮಲಿನ ನೀರು ಆರೋಗ್ಯಕ್ಕೆ ತೀರಾ ಅಪಾಯಕಾರಿಯಾಗಿದೆ. ಅದರಿಂದ ಹಲವು ರೀತಿಯ ಮಾರಕ ರೋಗಗಳು ಹರಡುತ್ತವೆ. ಆದ್ದರಿಂದ ಶುದ್ಧ ಮತ್ತು ತಾಜಾ ನೀರನ್ನು ಪಡೆಯುವ ವ್ಯವಸ್ಥೆ ಮಾಡಬೇಕು. ಸಾಂಕ್ರಾಮಿಕ ರೋಗಗಳು ಹರಡಿರುವ ವೇಳೆ ನೀರನ್ನು ಕುದಿಸದೆ ಕುಡಿಯಬಾರದು.

3. ಸ್ವಚ್ಛಗಾಳಿ

ಆರೋಗ್ಯ ರಕ್ಷಣೆಯಲ್ಲಿ ಮೂರನೆಯ ಪ್ರಮುಖ ವಸ್ತು ಸ್ವಚ್ಛ ಗಾಳಿಯಾಗಿದೆ. ಜೀವಿಸಲಿಕ್ಕೆ ಗಾಳಿಯ ಅಗತ್ಯ ಮತ್ತು ಮಹತ್ವವನ್ನು ಹೇಳಬೇಕಾಗಿಲ್ಲ ತಾನೇ. ಶುದ್ಧ ನೀರಿನಂತೆಯೇ ಸ್ವಚ್ಛ ಗಾಳಿಯಲ್ಲಿಯೂ ಯಾವುದೇ ಬಣ್ಣ, ರುಚಿ, ವಾಸನೆ ಇರುವುದಿಲ್ಲ.

ಗಾಳಿಯಲ್ಲಿ ವಿವಿಧ ರೀತಿಯ ರಾಸಾಯನಿಕಗಳು ಇರುತ್ತವೆ. ಆ ಪೈಕಿ ಪ್ರಮುಖವಾಗಿರುವುದು–

1. ಆಮ್ಲಜನಕ 21ಶೇಕಡಾ. ಅಂದರೆ ಸುಮಾರು ಐದನೇ ಒಂದು ಭಾಗ.
2. ನೈಟ್ರೋಜನ್ 78ಶೇಕಡಾ. ಅಂದರೆ ಸುಮಾರು ಐದನೇ ನಾಲ್ಕು ಭಾಗ.

ಉಳಿದ ಒಂದು ಶೇಕಡದಲ್ಲಿ ಆರ್ಗನ್ ಮತ್ತು ಕಾರ್ಬನ್ ಡೈ ಆಕ್ಸೈಡ್ (ಅಂಗಾರಾಮ್ಲ), ನೀರಿನ ಅಂಶ (ಆವಿ), ಧೂಳು ಇತ್ಯಾದಿ ಇರುತ್ತವೆ.

ವಸ್ತುಗಳನ್ನು ಉರಿಯಲು ಸಹಾಯಕವಾಗುವುದು ಆಮ್ಲ ಜನಕದ ವಿಶೇಷತೆಯಾಗಿದೆ. ನೈಟ್ರೋಜನ್‌ನ ಕಾರ್ಯವು ಆಮ್ಲಜನಕದ ತೀವ್ರತೆಯನ್ನು ಸಂತುಲಿತವಾಗಿರಿಸಿ, ಸಹ್ಯಗೊಳಿಸುವುದಾಗಿದೆ. ಆಮ್ಲಜನಕವು ದೇಹಕ್ಕೆ ತೀರಾ ಅಗತ್ಯವಾಗಿದೆ. ಅದರ ಕಾರಣದಿಂದಲೇ–

- ದೇಹದಲ್ಲಿ ಹುರುಪು, ರಕ್ತದಲ್ಲಿ ಉಷ್ಣತೆ ಉಂಟಾಗುತ್ತದೆ.
- ದೇಹದೊಳಗಿನ ವಿಷಾಂಶವು ಗಾಳಿಯ ರೂಪ ಪಡೆದು ಹೊರ ಸೂಸುತ್ತದೆ.

ದೇಹಕ್ಕೆ ಸಾಕಷ್ಟು ಆಮ್ಲಜನಕ ಒದಗದೆ ಇದ್ದಲ್ಲಿ ಜೀವನವೇ ದುಸ್ತರವಾಗಿ ಬಿಡುತ್ತದೆ.

ಗಾಳಿಯು ಮಲಿನವಾಗುವುದೇಕೆ?

ಗಾಳಿಯು ಮಲಿನವಾಗುವುದರಲ್ಲಿ ಸಾಮಾನ್ಯವಾಗಿ ಈ ಕೆಳಗಿನ ಕಾರಣಗಳಿರುತ್ತವೆ–

- ಉಸಿರಾಟದಿಂದ ದೇಹದೊಳಗಿನ ವಿಷಯುಕ್ತ ಅನಿಲವು ಗಾಳಿಯಲ್ಲಿ ಸೇರಿ ವಾಯು ಮಾಲಿನ್ಯವಾಗುತ್ತದೆ.
- ಬೆಂಕಿ ಉರಿಸುವುದರಿಂದ ಆಮ್ಲಜನಕ ಖರ್ಚಾಗುತ್ತದೆ ಮತ್ತು ಅಂಗಾರಾಮ್ಲವು ಗಾಳಿಯಲ್ಲಿ ಸೇರಿ ವಾಯು ಮಾಲಿನ್ಯವಾಗುತ್ತದೆ.
- ವಸ್ತುಗಳು ಕೊಳೆಯುವುದರಿಂದ ಉಂಟಾಗುವ ದುರ್ಗಂಧ ಮತ್ತು ವಿಷಯುಕ್ತ ಅನಿಲ ಉತ್ಪತ್ತಿಯಾಗಿ ವಾತಾವರಣದಲ್ಲಿ ಸೇರಿ ಗಾಳಿಯನ್ನು ಮಲಿನಗೊಳಿಸುತ್ತದೆ.
- ಗಾಳಿಯಲ್ಲಿ ಧೂಳು ಸೇರುವ ಮೂಲಕವೂ ಆರೋಗ್ಯಕ್ಕೆ ಹಾನಿಕಾರಕವಾಗುತ್ತದೆ.

ಆದ್ದರಿಂದಲೇ ಮುಖಮುಚ್ಚಿ ಅಥವಾ ಕೋಣೆಯನ್ನು ಸಂಪೂರ್ಣ ಬಂದ್ ಮಾಡಿ ಮಲಗುವುದು, ಮುಚ್ಚಿದ ಕೋಣೆಯಲ್ಲಿ ಬೆಂಕಿ ಹೊತ್ತಿಸಿ ಅಥವಾ ಅಗ್ಗಿಷ್ಟಿಕೆ ಹಾಕಿ ಮಲಗುವುದು, ದುರ್ನಾತ ಬೀರುವ ಗಾಳಿಯಲ್ಲಿ ಉಸಿರಾಡುವುದು ಅಥವಾ ಧೂಳು ತುಂಬಿರುವೆಡೆ ಮೂಗಿಗೆ ಕರವಸ್ತ್ರ ಅಡ್ಡ ಇಡದಿರುವುದು ಆರೋಗ್ಯಕ್ಕೆ ಹಾನಿಕಾರಕವಾಗಿದೆ. ಮಾತ್ರವಲ್ಲ, ಕೆಲವೊಮ್ಮೆ ಪ್ರಾಣಾಂತಿಕವೂ ಆಗುವ ಸಾಧ್ಯತೆಯಿದೆ.

ಗಾಳಿಯನ್ನು ಸ್ವಚ್ಛಗೊಳಿಸುವ ನೈಸರ್ಗಿಕ ಮೂಲಗಳು

- ಗಿಡ-ಮರಗಳು: ಗಾಳಿಯನ್ನು ಸ್ವಚ್ಛಗೊಳಿಸುವಲ್ಲಿ ಗಿಡ-ಮರಗಳ ಪಾತ್ರ ಹಿರಿದು. ಜೀವಿಗಳು ಉಸಿರಾಡುವಾಗ ಹೊರಸೂಸುವ ಮಲಿನ ಗಾಳಿಯನ್ನು ಇವು

ಸೆಳೆದುಕೊಂಡು ಆಮ್ಲಜನಕವನ್ನು ಹೊರ ಬಿಡುತ್ತವೆ. ಈ ಪ್ರಕಾರ ಗಾಳಿ ಸ್ವಚ್ಛಗೊಳ್ಳುತ್ತಾ ಇರುತ್ತದೆ.

ಸೂರ್ಯ: ಸೂರ್ಯ ಕಿರಣಗಳು ಗಾಳಿಯಲ್ಲಿ ಸೇರಿಕೊಂಡು ಸೂಕ್ಷ್ಮ ರೋಗಾಣುಗಳನ್ನು ಅಳಿಸಿ ಗಾಳಿಯನ್ನು ಸ್ವಚ್ಛಗೊಳಿಸುತ್ತವೆ.

ಮಳೆ: ಮಳೆ ನೀರಿನ ಜತೆಯಲ್ಲಿ ವಾತಾವರಣದಲ್ಲಿರುವ ಧೂಳಿನ ಕಣಗಳು ಕೆಳ ಬೀಳುತ್ತವೆ ಮತ್ತು ಆರೋಗ್ಯಕ್ಕೆ ಮಾರಕವಾದ ಅನಿಲಗಳೂ ಶಕ್ತಿ ಕಳಕೊಳ್ಳುತ್ತವೆ.

ಗಾಳಿ ಬೀಸುವುದು: ಗಾಳಿ ಬೀಸುತ್ತ ಇರುವ ಕಾರಣದಿಂದಲೂ ಮಾಲಿನ್ಯ ದೂರವಾಗುತ್ತ ಇರುತ್ತದೆ.

ಆಮ್ಲಜನಕ: ಗಾಳಿಯಲ್ಲಿರುವ ಆಮ್ಲಜನಕವೂ ಸ್ವತಃ ವಾಯು ಮಾಲಿನ್ಯವನ್ನು ಒಡೆದು ಸ್ವಚ್ಛಗೊಳಿಸುತ್ತ ಇರುತ್ತದೆ.

ಸ್ವಚ್ಛ ಗಾಳಿಯನ್ನು ಗಳಿಸಬೇಕಾದರೆ, ಮನೆಯಲ್ಲಿ ಗಾಳಿಗೆ ಸಾಕಷ್ಟು ಸ್ಥಳಾವಕಾಶವನ್ನು ನೀಡಬೇಕು. ತೆರೆದ ಮೈದಾನದಲ್ಲಿ ಆಡುವ, ತೋಟ ಮತ್ತು ಪಾರ್ಕುಗಳಲ್ಲಿ ನಡೆದಾಡುವ ಅವಕಾಶ ಒದಗುತ್ತ ಇರಬೇಕು. ಗಾಳಿಯಾಡುವ ಸ್ಥಳದಲ್ಲಿ ಮುಖ ತೆರೆದು ಮಲಗುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಹಿತ್ತಲಲ್ಲಿ ಗಿಡಗಳನ್ನು ಬೆಳೆಸಲು ಅವಕಾಶವಿದ್ದರೆ, ಒಂದಿಷ್ಟು ಗಿಡಗಳನ್ನು ಖಂಡಿತ ಬೆಳೆಸಬೇಕು.

4. ಬೆಳಕು

ಇದು ಆರೋಗ್ಯಕ್ಕೆ ಅಗತ್ಯವಿರುವ ನಾಲ್ಕನೇ ಬಹುಮುಖ್ಯ ವಸ್ತುವಾಗಿದೆ. ಬೆಳಕು ದೊರೆಯದ ಗಿಡ ಮರಗಳು ಮೊದಲು ಹಳದಿ ವರ್ಣಕ್ಕೆ ತಿರುಗುತ್ತವೆ. ಆ ಮೇಲೆ ಬಾಡಿ ಹೋಗುತ್ತವೆ. ಸಂಕೀರ್ಣ ಮತ್ತು ಕತ್ತಲ ಗಲ್ಲಿಗಳಲ್ಲಿ ಹಾಗೂ ಉಸಿರುಗಟ್ಟುವ ವಾತಾವರಣದಲ್ಲಿ ಬದುಕುವ ನಗರವಾಸಿಗಳನ್ನು, ಮುಕ್ತ ವಾತಾವರಣದಲ್ಲಿ ಸಾಕಷ್ಟು ಗಾಳಿ-ಬೆಳಕು ಇರುವ ಗ್ರಾಮ ವಾಸಿಗಳಿಗೆ ಹೋಲಿಸಿದಾಗ ಬೆಳಕಿನ ಅಗತ್ಯ ಹಾಗೂ ಪ್ರಯೋಜನಗಳನ್ನು ಚೆನ್ನಾಗಿ ಅರ್ಥೈಸಬಹುದಾಗಿದೆ. ಬೆಳಕನ್ನು ಗಳಿಸಲು ಎರಡು ದಾರಿಗಳಿವೆ-

1. ಸ್ವಾಭಾವಿಕ (ನೈಸರ್ಗಿಕ): ಅಂದರೆ ಸೂರ್ಯ ಮತ್ತು ಚಂದ್ರಗಳಿಂದ.
2. ಕೃತಕ: ಅಂದರೆ ದೀಪ, ಲಾಟೀನು ಮತ್ತು ವಿದ್ಯುತ್ ಇತ್ಯಾದಿಗಳಿಂದ.

ಸೂರ್ಯನ ಬೆಳಕು ಆರೋಗ್ಯಕ್ಕೆ ಅತಿ ಅಗತ್ಯವಾದುದು. ಮನೆಯೊಳಗಡೆ ಬೆಳಕು/ ಬಿಸಿಲು ಹರಿದಾಡಲು ಸಂಪೂರ್ಣ ಅವಕಾಶವಿರಬೇಕು. ಇದರಿಂದ ಮನೆಯಲ್ಲಿ ಪಸೆಗೆ ಅವಕಾಶ ಇರುವುದಿಲ್ಲ ಮತ್ತು ಸೂಕ್ಷ್ಮ ರೋಗಾಣುಗಳೂ ಸಾಯುತ್ತವೆ. ಮನೆಯ ವಸ್ತುಗಳಿಗೂ ಕೆಲವೊಮ್ಮೆ ಬಿಸಿಲು ತಾಗುತ್ತಿರಬೇಕು. ಬಿಸಿಲು ಹರಿದಾಡದಂತಹ ಮನೆಗಳಲ್ಲಿ ಮತ್ತು ಪಸೆ/ಪಾಚಿಗಳು ಹರಡಿರುವಂತಹ ಮನೆಗಳಲ್ಲಿ ತರತರವಾದ ಸೂಕ್ಷ್ಮಾಣು ಜೀವಿಗಳು

ಬೆಳೆಯುತ್ತವೆ. ಅವು ಆರೋಗ್ಯದ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತವೆ. ಕೋಣೆಗಳೊಳಗೆ ಸೂರ್ಯ ಕಿರಣಗಳು ಹರಿದಾಡದಂತಹ ಸ್ಥಿತಿಯಿದ್ದರೆ ಅಥವಾ ಪಸೆ/ಪಾಚಿ ಕಟ್ಟಿಕೊಂಡಿದ್ದರೆ, ಕಾಲ ಕಾಲಕ್ಕೆ ಸುಣ್ಣ ಬಳಿಯ ಬೇಕು ಮತ್ತು ಲೋಬಾನದಂತಹ ವಸ್ತುಗಳನ್ನು ಹೊತ್ತಿಸುತ್ತಿರಬೇಕು. ಓದಲು-ಬರೆಯಲು ಮತ್ತು ಸೂಕ್ಷ್ಮ ಕೆಲಸ ಕಾರ್ಯಗಳನ್ನು ಮಾಡಲು ಸಾಕಷ್ಟು ಬೆಳಕಿನ ಅಗತ್ಯವಿರುತ್ತದೆ. ಆದರೆ ಬೆಳಕು ಎದುರಿನಲ್ಲಿಯೋ ಬಲಬದಿಯಲ್ಲಿಯೋ ಇರಬಾರದು. ಬದಲಾಗಿ ಎಡಬದಿ, ಹಿಂಬದಿ ಅಥವಾ ಮೇಲ್ಭಾಗದಲ್ಲಿರಬೇಕು. ಹೀಗಿದ್ದರೆ ಕಣ್ಣಿನ ಮೇಲೆ ಭಾರ ಬೀಳುವುದಿಲ್ಲ. ಮಂದ ಬೆಳಕು ಮತ್ತು ತೀಕ್ಷ್ಣ ಬೆಳಕಿನ ಎರಡೂ ಸ್ಥಿತಿಯಲ್ಲಿ ಕಣ್ಣಿಗೆ ಅಪಾಯವಿದೆ. ಓದು-ಬರೆಹ ಮತ್ತು ಸೂಕ್ಷ್ಮ ಕೆಲಸಗಳಲ್ಲಿ ಇರುವವರು ಬೆಳಕಿನ ಬಳಕೆಯ ಕುರಿತು ಬಹಳ ಜಾಗರೂಕರಾಗಿರಬೇಕಾಗಿದೆ. ಅಂತಹವರು ಸಾಕಷ್ಟು ಬೆಳಕು ಇರುವೆಡೆ ಕೆಲಸ ಮಾಡಬೇಕು ಮತ್ತು ಕಣ್ಣಿಗೆ ನೇರವಾಗಿ ಬೆಳಕು ಬೀಳದಂತೆ ನೋಡಿಕೊಳ್ಳಬೇಕು.

5. ದೈಹಿಕ ಶ್ರಮ ಅಥವಾ ಆಟ-ವ್ಯಾಯಾಮ

ಅಲ್ಲಾಹನು ನಮಗೆ ಈ ಸುದೃಢ ದೇಹವನ್ನು ಪರಿಶ್ರಮ ಪಡಲು ಮತ್ತು ಕೆಲಸ ಮಾಡಲು ನೀಡಿದ್ದಾನೆ. ದೈಹಿಕ ಶ್ರಮದಿಂದಲೇ ಅಂಗಾಂಗಗಳು ಬಲಶಾಲಿಯಾಗಿರುತ್ತವೆ. ಅದರಲ್ಲಿ ಹುರುಪು ಮತ್ತು ಶಕ್ತಿ ಬೆಳೆಯುತ್ತದೆ. ಚೆನ್ನಾಗಿ ಹಸಿವಾಗುತ್ತದೆ, ಗಾಢ ನಿದ್ರೆ ಆವರಿಸುತ್ತದೆ, ಆಹಾರ ಚೆನ್ನಾಗಿ ಪಚನವಾಗುತ್ತದೆ ಮತ್ತು ಸೇವಿಸಿದ ಆಹಾರವು ದೇಹದ ಮಾಂಸಖಂಡಗಳಲ್ಲಿ ಸೇರಿ ಹೋಗುತ್ತದೆ. ದೇಹದೊಳಗಿನ ತ್ಯಾಜ್ಯವು ಸುಲಭದಲ್ಲಿ ಹೊರಹೋಗುತ್ತದೆ. ಹೀಗೆ ಆರೋಗ್ಯವು ಚೆನ್ನಾಗಿರುತ್ತದೆ. ಯಾವ ಅಂಗದಿಂದ ಕೆಲಸ ನಡೆಯುವುದಿಲ್ಲವೋ, ಅದು ಕ್ರಮೇಣ ದುರ್ಬಲಗೊಂಡು ನಿಷ್ಪ್ರಯೋಜಕವಾಗಿ ಬಿಡುತ್ತದೆ. ಆದ್ದರಿಂದ ಪರಿಶ್ರಮ ಪಡುವ ಅಭ್ಯಾಸವನ್ನು ಬೆಳೆಸಬೇಕು. ಮಕ್ಕಳು ಆಟವನ್ನು ಬಹಳ ಇಷ್ಟ ಪಡುತ್ತಾರೆ. ಅವರು ಆಟದ ಮೂಲಕವೇ ಸಾಕಷ್ಟು ಪರಿಶ್ರಮ ಪಡುತ್ತಾರೆ. ಆದರೆ ಅವರಿಗೆ ಆಟದ ಸವಲತ್ತುಗಳು ದೊರೆಯಬೇಕು. ಅದೇ ವೇಳೆ ಓದು-ಬರೆಹ ಮತ್ತು ಬೌದ್ಧಿಕ ಕೆಲಸ ಮಾಡುವವರು ಹಾಗೂ ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡುವವರಿಗೆ ಸಾಮಾನ್ಯವಾಗಿ ದೈಹಿಕ ಶ್ರಮದ ಅವಕಾಶ ಬಹಳ ಕಡಿಮೆ ಇರುತ್ತದೆ. ಅಂತಹವರು ದಿನದಲ್ಲಿ ಒಂದಿಷ್ಟು ಸಮಯವನ್ನು ದೈಹಿಕ ವ್ಯಾಯಾಮ ಅಥವಾ ಆಟಕ್ಕೆ ಖಂಡಿತ ಮೀಸಲಿಡಬೇಕು. ಪ್ರಾಯಸ್ಥರು ಬೆಳಗು-ಬೈಗುಗಳಲ್ಲಿ ವಾಯು ವಿಹಾರದ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಪರಿಶ್ರಮದ ಕೆಲಸಗಳಲ್ಲಿ ಆಟದ ಮನೋಭಾವವನ್ನು ಬೆಳೆಸಿದರೆ, ಮಕ್ಕಳು ಅದನ್ನು ಆಟದಂತೆಯೇ ಭಾವಿಸಿ, ಬಹಳಷ್ಟು ಪ್ರಯೋಜನಕಾರಿ ಕಾರ್ಯಗಳನ್ನು ಮಾಡಬಲ್ಲರು. ಮಾತ್ರವಲ್ಲ, ಅವರಿಗೆ ಅಗತ್ಯವಿರುವ ದೈಹಿಕ ಶ್ರಮವೂ ಆಗಿಹೋಗುತ್ತದೆ.

ದೈಹಿಕ ಶ್ರಮದಿಂದ ಹಿಂದೇಟು ಹಾಕುವಂತಹವರ ಆರೋಗ್ಯವೂ ಸದಾ ಕೆಡುತ್ತಿರುತ್ತದೆ. ಅವರು ಆಲಸಿಗಳಾಗಿ, ಇತರರ ಮೇಲೆ ಹೊರೆಯಾಗಿ ಬಿಡುತ್ತಾರೆ (ಮಕ್ಕಳ ಆಟದ ಬಗ್ಗೆ ವಿವರಣಾತ್ಮಕವಾಗಿ ಈ ಹಿಂದಿನ ಪುಟಗಳಲ್ಲಿ ಬಂದಿದೆ. ನೋಡಿರಿ: ಪುಟ 131 ರಿಂದ 141)

6. ಉತ್ತಮ ವಸ್ತ್ರ

ಆರೋಗ್ಯಕ್ಕೆ ಉತ್ತಮ ವಸ್ತ್ರದ ಅಗತ್ಯವೂ ಇದೆ. ಉತ್ತಮ ವಸ್ತ್ರ ಅಂದರೆ, ಅದರಿಂದ...

- ಮೈಮುಚ್ಚುವಂತಿರಬೇಕು, ನಗ್ನತೆಗೆ ಎಡೆಗೊಡುವಂತಿರಬಾರದು.
- ಸೆಖೆ, ಚಳಿ ಮತ್ತು ಋತುಮಾನದ ಪ್ರಭಾವಗಳಿಂದ ದೇಹವು ಸುರಕ್ಷಿತವಾಗಬೇಕು.
- ದೇಹಕ್ಕೆ ಯಾವುದೇ ರೀತಿಯ ನೋವು ಅಥವಾ ಹಾನಿಯುಂಟು ಮಾಡುವಂತಿರಬಾರದು.
- ದೇಹದ ಸೌಂದರ್ಯವನ್ನು ಹೆಚ್ಚಿಸುವಂತಿರಬೇಕು.
- ಸೌಮ್ಯತೆ, ಘನತೆ, ಅಚ್ಚುಕಟ್ಟುತನ, ಸಾಮುದಾಯಿಕ ಗೌರವವನ್ನು ಪ್ರಕಟಿಸುವಂತಿರಬೇಕು.

ವಸ್ತ್ರವು ಹಲವು ರೀತಿಯ ವಸ್ತುಗಳಿಂದ ತಯಾರಿಸಲ್ಪಡುತ್ತದೆ. ಆದರೆ ನಮ್ಮ ದೇಶದ ಹೆಚ್ಚಿನ ಪ್ರದೇಶಗಳ ಜನರು ಸಾಮಾನ್ಯವಾಗಿ ಹತ್ತಿ ಬಟ್ಟೆಯನ್ನು ಉಡುತ್ತಾರೆ. ಏಕೆಂದರೆ,

- ಅದು ತುಲನಾತ್ಮಕವಾಗಿ ಅಗ್ಗ ಮತ್ತು ಗಟ್ಟಿಮುಟ್ಟಾಗಿರುತ್ತದೆ.
- ಸುಲಭದಲ್ಲಿ ತೊಳೆಯಬಹುದಾಗಿದೆ.
- ಬೆವರನ್ನು ಚೆನ್ನಾಗಿ ಹೀರುತ್ತದೆ.
- ಎಲ್ಲ ಋತುಮಾನಗಳಿಗೂ ಸೂಕ್ತವಾಗಿದೆ. ಚಳಿ-ಸೆಖೆ ಎರಡರಿಂದಲೂ ದೇಹವನ್ನು ರಕ್ಷಿಸುತ್ತದೆ.
- ಹತ್ತಿಯು ಕೃಷಿ ಉತ್ಪನ್ನವಾಗಿದೆ ಮತ್ತು ಬಹಳಷ್ಟು ಜನರ ಅಗತ್ಯಗಳು ಅದರಿಂದ ಈಡೇರುತ್ತದೆ.

ಸೆಖೆಗಾಲದಲ್ಲಿ ತೆಳುವಾದ ಮತ್ತು ಸಾಧ್ಯಂತ ಲಘುವಾದ ಬಣ್ಣ ಅಥವಾ ಬಿಳಿ ಬಣ್ಣದ ವಸ್ತ್ರ ಸೂಕ್ತವಾಗಿದೆ. ಚಳಿಗಾಲದಲ್ಲಿ ದಪ್ಪ ಮತ್ತು ಗಾಢ ಬಣ್ಣದ ವಸ್ತ್ರ ಉತ್ತಮ. ಏಕೆಂದರೆ ಬಿಳಿ ಅಥವಾ ತೆಳು ಬಣ್ಣದ ವಸ್ತ್ರಗಳಿಗಿಂತ ಗಾಢಬಣ್ಣದ ವಸ್ತ್ರಗಳು ಸೂರ್ಯ ಕಿರಣವನ್ನು ಹೀರಿ ಬೇಗನೇ ಬಿಸಿಯಾಗುತ್ತವೆ. ಉಳ್ಳವರು ಚಳಿಗಾಲದಲ್ಲಿ ಉಣ್ಣೆ ಬಟ್ಟೆ ಧರಿಸಿದರೆ ಇನ್ನೂ ಉತ್ತಮ. ಅದೇ ರೀತಿ ಶ್ರೀಮಂತ ಮಹಿಳೆಯರು ರೇಶ್ಮೆ ಬಟ್ಟೆ ಧರಿಸಿದರೆ, ಅದು ಸೌಂದರ್ಯದೊಂದಿಗೆ ಆರೋಗ್ಯಕ್ಕೂ ಉತ್ತಮವಾಗಿದೆ.

ಬಿಗುವಾದ ಬಟ್ಟೆ ಧರಿಸುವುದರಿಂದ ಆರೋಗ್ಯಕ್ಕೆ ಹಾನಿಯಿದೆ. ಇದರಿಂದ ರಕ್ತಸಂಚಲನೆಗೆ ತೊಡಕುಂಟಾಗುತ್ತದೆ. ದೇಹಕ್ಕೆ ಅಗತ್ಯವಿರುವಷ್ಟು ಪ್ರಮಾಣದ ಸ್ವಚ್ಛ

ಗಾಳಿಯೂ ದೊರೆಯುವುದಿಲ್ಲ, ಮಾತ್ರವಲ್ಲ, ದೇಹದೊಳಗಿನ ಮತ್ತು ಹೊರಗಿನ ಶಾಖವು ಏಕಪ್ರಕಾರ ಇರುತ್ತದೆ.

ವಸ್ತ್ರದಲ್ಲಿ ಸತ್ರ್‌ನ (ಅಗತ್ಯದ ಮೈಮುಚ್ಚುವುದು) ಕುರಿತು ನಿರ್ಲಕ್ಷ್ಯ, ಅನ್ಯರ ಅನುಕರಣೆ, ಅನಗತ್ಯ ದಾಕ್ಷಿಣ್ಯ ಮತ್ತು ಕೃತ್ರಿಮತೆ ಅಥವಾ ಮಾಲಿನ್ಯ ಮತ್ತು ನಿರ್ಲಕ್ಷ್ಯ ಇತ್ಯಾದಿಗಳು ವಿವಿಧ ರೀತಿಯ ನೈತಿಕ ಹಾಗೂ ಮಾನಸಿಕ ರೋಗಗಳಿಗೆ ಈಡುಮಾಡುತ್ತದೆ. ಅದು ನೇರವಾಗಿ ದೈಹಿಕಾರೋಗ್ಯಕ್ಕೆ ಮಾರಕವಾಗುತ್ತದೆ. ಹಾಗಾಗಿ ಅವುಗಳಿಂದ ದೂರವಿರಬೇಕಾಗಿದೆ.

7. ಸ್ವಚ್ಛತೆ

ಆರೋಗ್ಯ ಮತ್ತು ಸ್ವಚ್ಛತೆಯ ನಡುವೆ ಗಳಸ್ಯ ಕಂಠಸ್ಯವಿದೆ. ಇಸ್ಲಾಮ್, ಸ್ವಚ್ಛತೆಯನ್ನು ವಿಶ್ವಾಸದ ಅರ್ಧಾಂಶವೆಂದಿದೆ. ಆರೋಗ್ಯ ರಕ್ಷಣೆಗೆ ದೇಹ, ವಸ್ತ್ರ ವಾಸಸ್ಥಳ, ಪಾತ್ರೆ-ಪಗಡೆಗಳು, ಚರಂಡಿ ಮತ್ತು ಪರಿಸರದ ಸ್ವಚ್ಛತೆಯ ವ್ಯವಸ್ಥೆ ಮಾಡಬೇಕಾದುದು ತೀರಾ ಅಗತ್ಯ. ಅವುಗಳ ಪೈಕಿ ಯಾವುದೇ ವಸ್ತುವಿನ ಸ್ವಚ್ಛತೆಯ ಬಗ್ಗೆ ನಿರ್ಲಕ್ಷ್ಯವು ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ.

ದೇಹದ ಸ್ವಚ್ಛತೆ

ದೇಹದಲ್ಲಿ ತರತರದ ತ್ಯಾಜ್ಯ, ಮಾಲಿನ್ಯ ಮತ್ತು ವಿಷಯುಕ್ತ ವಸ್ತುಗಳು ಜಮೆಯಾಗುತ್ತ ಇರುತ್ತವೆ. ಅವುಗಳನ್ನು ಹೊರಹಾಕುತ್ತ ಇರಬೇಕಾದುದು ಅಗತ್ಯ. ಏಕೆಂದರೆ ಯಾವುದೇ ರೀತಿಯ ಕೆಟ್ಟ ವಸ್ತು ದೇಹದಲ್ಲಿ ಉಳಿದು ಬಿಟ್ಟರೆ ವ್ಯಕ್ತಿ ಅನಾರೋಗ್ಯಕ್ಕೆ ತುತ್ತಾಗುತ್ತಾನೆ. ಈ ಕೊಳೆಯು ಮಲ, ಮೂತ್ರ, ಬೆವರು. ಮತ್ತು ಕಫದ ರೂಪದಲ್ಲಿ ಬೇರೆ ಬೇರೆ ರಂಧ್ರಗಳಿಂದ ಹೊರ ಹೋಗುತ್ತ ಇರುತ್ತದೆ. ಈ ಕೊಳೆಗಳು ಹೊರ ಹೋಗಲು ಸರಿಯಾದ ವ್ಯವಸ್ಥೆಯಾಗಬೇಕು. ಅಂತೆಯೇ ಅವು ಹೊರ ಹೋಗುವ ಸ್ಥಳಗಳನ್ನು (ರಂಧ್ರಗಳನ್ನು) ಸ್ವಚ್ಛವಾಗಿಟ್ಟುಕೊಳ್ಳಬೇಕು. ಏಕೆಂದರೆ ಆ ಕೊಳೆಗಳು ಹೊರ ಹೋದಂತೆಯೇ, ಅದರ ಹೋಗುವ ದಾರಿಯನ್ನು ಮಲಿನಗೊಳಿಸುತ್ತವೆ. ಮಲ-ಮೂತ್ರ ವಿಸರ್ಜನೆಯ ಬಳಿಕ ಚೆನ್ನಾಗಿ ನೀರಿನಿಂದ ತೊಳೆಯುವುದು, ನಿಯಮಿತವಾಗಿ ಹಲ್ಲುಜ್ಜುವುದು, ಮೂಗಿಗೆ ನೀರು ಹಾಕಿ ಸ್ವಚ್ಛಗೊಳಿಸುವುದು, ಕಣ್ಣು-ಕಿವಿಗಳನ್ನು ಚೆನ್ನಾಗಿ ಸ್ವಚ್ಛಗೊಳಿಸುತ್ತಿರುವುದು, ಕೂದಲು-ಉಗುರುಗಳನ್ನು ಕಾಲಕಾಲಕ್ಕೆ ಕತ್ತರಿಸುತ್ತ ಇರುವುದು ತೀರಾ ಅಗತ್ಯವಾಗಿದೆ. ಅಂತೆಯೇ ಬೆವರು ಹರಿಯುವ ಮೂಲಕ ಮುಚ್ಚಲ್ಪಟ್ಟಿರುವ ರಂಧ್ರಗಳನ್ನು ಸ್ನಾನ ಮಾಡಿ ಸ್ವಚ್ಛಗೊಳಿಸುತ್ತಿರಬೇಕು. ಆರಂಭದಿಂದಲೇ ಮಕ್ಕಳಿಗೆ ಸ್ವಚ್ಛತೆಯನ್ನು ಪಾಲಿಸುವ ಅಭ್ಯಾಸ ಮಾಡಿಸಬೇಕು.

ವಸ್ತ್ರದ ಸ್ವಚ್ಛತೆ

ಕೊಳಕು ಬಟ್ಟೆಯು ಚರ್ಮವನ್ನು ಕೊಳಕಾಗಿಸಿ, ವಿವಿಧ ರೀತಿಯ ಚರ್ಮರೋಗ ಕಾರಣವಾಗುತ್ತದೆ. ಹಾಗಾಗಿ ವಸ್ತ್ರದ ಸ್ವಚ್ಛತೆಯ ವ್ಯವಸ್ಥೆಯಾಗಬೇಕು. ನಿಯಮಿತವಾ ಬಟ್ಟೆ ಬದಲಿಸುವ ಮತ್ತು ಅದನ್ನು ತೊಳೆಯುವ ಬಗ್ಗೆ ಸೂಕ್ತ ಗಮನ ಹರಿಸಬೇಕಾಗಿದೆ

ವಾಸಸ್ಥಳದ ಸ್ವಚ್ಛತೆ

ಕೋಣೆ, ಮೊಗಸಾಲೆ, ಅಂಗಳದಲ್ಲಿ ದಿನನಿತ್ಯ ಕಸ ಗುಡಿಸುತ್ತಿರಬೇಕು. ವಸ್ತುಗಳನ ಧೂಳಿನಿಂದ ಸುರಕ್ಷಿತವಾಗಿರಿಸಬೇಕು. ವಸ್ತುಗಳನ್ನು ಚೆನ್ನಾಗಿ ತೊಳೆದು ಅಥವಾ ಧೂಳ ಝಾಡಿಸಿ, ಒರೆಸಿ ಒಪ್ಪ ಓರಣವಾಗಿರಿಸಬೇಕು. ಅಡುಗೆ ಕೋಣೆ, ಚರಂಡಿಗಳು ಮತ್ತ ಬಚ್ಚಲು ಕೋಣೆ, ಪಾಯಿಖಾನೆ ಇತ್ಯಾದಿಗಳ ಸ್ವಚ್ಛತೆಯ ಕಡೆಗೆ ಸಂಪೂರ್ಣ ಗಮನವೀಯಬೇಕು. ಮನೆಯ ಪರಿಸರದಲ್ಲಿಯೂ ಯಾವುದೇ ಕೊಳೆ-ಮಾಲಿನ ಇರಬಾರದು. ಅನ್ಯಥಾ ಕ್ರಿಮಿಗಳು ಹುಟ್ಟಿ ಬೆಳೆದು ಇಡೀ ಮನೆಯ ಆರೋಗ್ಯವನ ಕೆಡಿಸುತ್ತವೆ.

8. ಗಾಢ ನಿದ್ರೆ

ಆರೋಗ್ಯಕ್ಕೆ ಗಾಢ ನಿದ್ರೆಯು ಅತಿ ಅಗತ್ಯವಾಗಿದೆ. ಬೌದ್ಧಿಕ-ದೈಹಿಕ ಕೆಲಸ ಮತ್ತ ಪರಿಶ್ರಮಗಳು, ಆಟ, ವ್ಯಾಯಾಮ ಹಾಗೂ ದೇಹದೊಳಗೆ ಸಂಭವಿಸುವಂತಹ ಚಲನವಲನಗಳ ಕಾರಣದಿಂದಾಗಿ ದೇಹವು ದಣಿದಿರುತ್ತದೆ. ಈ ದಣಿವನ್ನು ದೂ ಮಾಡಲು ಮತ್ತು ಪ್ರಫುಲ್ಲತೆಯನ್ನು ಹೊಂದಿ ಪುನಃ ಕೆಲಸದಲ್ಲಿ ತೊಡಗಿಕೊಳ್ಳಲು ವಿಶ್ರಾಂ ಹಾಗೂ ಗಾಢ ನಿದ್ರೆಯು ಅಗತ್ಯ.

ನಿದ್ರೆಗೆ ಸಂಬಂಧಿಸಿ ಈ ಕೆಳಗಿನ ವಿಷಯಗಳನ್ನು ಪರಿಗಣಿಸಬೇಕು:

- ಅಲ್ಲಾಹನು ನಿದ್ರಿಸಲಿಕ್ಕಾಗಿ ರಾತ್ರಿಯನ್ನು ಆವಿಷ್ಕರಿಸಿರುವನು. ಸಖೆಗಾಲದ ಹೊರತ ಹಗಲಿನಲ್ಲಿ ನಿದ್ರಿಸುವುದರಿಂದ ಸಾಧ್ಯಂತ ದೂರವಿರಿ.
- ಮಧ್ಯರಾತ್ರಿಗಿಂತ ಮುಂಚಿನ ಒಂದು ಗಂಟೆಯ ನಿದ್ರೆಯು, ನಂತರದ ಎರಡ ಗಂಟೆಯ ನಿದ್ರೆಗೆ ಸಮ. ಹಾಗಾಗಿ ಸಾಧ್ಯವಾದಷ್ಟರ ಮಟ್ಟಿಗೆ ಇಶಾ ನಮಾಝು ಆದ ಕೂಡಲೇ ನಿದ್ರಿಸುವ ಅಭ್ಯಾಸ ಮಾಡಿಕೊಳ್ಳಿರಿ. ಇದರಿಂದ ಚೆನ್ನಾಗಿ ನಿದ್ರೆಯು ಬರುತ್ತದೆ ಮತ್ತು ಬೆಳಗಾತ ಬೇಗನೇ ಏಳಲೂ ಸಾಧ್ಯವಾಗುತ್ತದೆ.
- ಊಟ ಮತ್ತು ನಿದ್ರೆಯ ನಡುವೆ ಎರಡ್ಮೂರು ಗಂಟೆಯ ಅಂತರವಿರಬೇಕು ಆದ್ದರಿಂದ ಮಗ್ರಿಬ್ ಆದ ಕೂಡಲೇ ಊಟ ಮಾಡುವುದು ಒಳ್ಳೆಯದು.
- ಮಲಗುವಾಗ ಎಲ್ಲ ವ್ಯವಹಾರಗಳನ್ನು ಅಲ್ಲಾಹನಿಗೇ ಸಮರ್ಪಿಸಿ, ಮುಕ್ತ ಮನಸ್ಸಿನಿಂ

ಮತ್ತು ನಿಶ್ಚಿಂತೆಯಿಂದ ಮಲಗಬೇಕು. ಇದರಿಂದ ಗಾಢ ನಿದ್ರೆಯು ಆವರಿಸುತ್ತದೆ.

- ಅಂಗಾತ ಅಥವಾ ಬೋರಲಾಗಿ ಮಲಗಬೇಡಿರಿ. ಹಾಗೆಯೇ ಎದೆಯ ಮೇಲೆ ಕೈಯಿಟ್ಟು ನಿದ್ರಿಸಬೇಡಿರಿ. ಏಕೆಂದರೆ, ಅದರಿಂದ ಕೆಟ್ಟ ಕನಸುಗಳು ಬೀಳುತ್ತವೆ ಮತ್ತು ಗಾಢ ನಿದ್ರೆಗೆ ತೊಡಕುಂಟಾಗುತ್ತದೆ. ಮಗ್ಗುಲು ಬದಲಿಸುವುದನ್ನು ಅಭ್ಯಾಸ ಮಾಡಿಕೊಳ್ಳಿ.
- ನಿದ್ರೆಗೆ ಮುಂಚೆ ಮಕ್ಕಳಿಗೆ ಭಯಹುಟ್ಟಿಸುವ ಕಥೆ, ಪ್ರಸಂಗಗಳನ್ನು ಹೇಳಲೇ ಬೇಡಿರಿ. ಅನ್ಯಥಾ ಅವರಿಗೆ ಕೆಟ್ಟ ಮತ್ತು ಭಯಾನಕ ಕನಸುಗಳು ಬೀಳಬಹುದು.
- ಮುಖ ಮುಚ್ಚಿಕೊಂಡು ಅಥವಾ ಕೋಣೆಯ ಕಿಟಕಿ ಬಾಗಿಲುಗಳನ್ನೆಲ್ಲ ಮುಚ್ಚಿ ಮಲಗಬಾರದು. ಹೀಗೆ ಮಾಡುವುದರಿಂದ ಉಸಿರಾಡಲು ಸ್ವಚ್ಛ ಗಾಳಿ ಸಿಗಲಾರದು.
- ಮಲಗುವುದಕ್ಕೆ ಮುಂಚೆ ದೀಪ ಆರಿಸಬೇಕು. ಬೆಂಕಿಯನ್ನು ಆರಿಸಬೇಕು ಮತ್ತು ಮಕ್ಕಳಿಗೆ ಮೂತ್ರ ಮಾಡಿಸಬೇಕು.
- ಮಕ್ಕಳಿಗೆ ನಿದ್ರಿಸಲು ಸಾಕಷ್ಟು ಅವಕಾಶ ಇರಬೇಕು. ಯುವಕರಿಗೆ ಸುಮಾರು ಎಂಟು ಗಂಟೆ, ಹಿರಿಯ ಪುರುಷರಿಗೆ ಆರು ಮತ್ತು ಮಹಿಳೆಯರಿಗೆ ಏಳು ಗಂಟೆಯ ಗಾಢ ನಿದ್ರೆಯು ಉತ್ತಮ ಆರೋಗ್ಯಕ್ಕೆ ಸಾಕಾಗುವುದು.
- ಮಕ್ಕಳನ್ನು ಮಾತಾಪಿತರಿಂದ ಪ್ರತ್ಯೇಕವಾಗಿ ಮಲಗಿಸುವ ಅಭ್ಯಾಸ ಮಾಡಿಸಬೇಕು. ಹತ್ತು ವರ್ಷ ಪ್ರಾಯವಾದ ಮೇಲೆ ಅವರ ಹಾಸಿಗೆಯನ್ನು ಬೇರ್ಪಡಿಸಲೇ ಬೇಕು.
- ಮಕ್ಕಳನ್ನು ಸಾಧ್ಯಂತ ಮಂಚದ ಮೇಲೆ ಮಲಗಿಸಿರಿ. ಇದರಿಂದ ವಿಷಜಂತುಗಳು, ಕ್ರಿಮಿಕೀಟಗಳು, ಧೂಳು, ಮಣ್ಣು ಮತ್ತು ಆರೋಗ್ಯಕ್ಕೆ ಮಾರಕವಾದ ಅನಿಲಗಳಿಂದ ಅವರ ದೇಹವು ಸುರಕ್ಷಿತವಾಗಿರುತ್ತದೆ.
- ಹೊಟ್ಟೆ ತುಂಬಾ ತಿಂದು ಮಲಗುವುದರಿಂದ ಅಥವಾ ಖಾಲಿ ಹೊಟ್ಟೆಯಲ್ಲೇ ಮಲಗುವುದರಿಂದ ಗಾಢ ನಿದ್ರೆ ಆವರಿಸುವುದಿಲ್ಲ.
- ಸೊಳ್ಳೆ, ವಿಷಕೀಟ ಮತ್ತು ತಿಗಣೆಗಳಿಂದ ರಕ್ಷಿಸುವ ಎಲ್ಲ ಏರ್ಪಾಟು ಮಾಡಬೇಕು. ಹೀಗೆ ಮಾಡುವುದರಿಂದ ನಿದ್ರೆಗೆ ಭಂಗವುಂಟಾಗುವುದಿಲ್ಲ ಮತ್ತು ರೋಗ ರುಜಿನಗಳಿಂದಲೂ ಸುರಕ್ಷಿತರಾಗಿರುವಿರಿ.

9. ಸಂತೋಷ

ದುಃಖ-ದುಮ್ಮಾನವು ಗೆದ್ದಲಿನಂತೆ ದೇಹವನ್ನು ಟೊಳ್ಳಾಗಿಸುತ್ತದೆ. ಕೆಲವೊಮ್ಮೆ ಕ್ಷಯರೋಗಕ್ಕೂ ಕಾರಣವಾಗುತ್ತದೆ. ಮತಿ ವಿಕಲತೆ, ಆತ್ಮಹತ್ಯೆ, ಹೃದಯ ಸ್ತಂಭನ, ಅವಧಿ ಪೂರ್ವ ವೃದ್ಧಾಪ್ಯ ಇತ್ಯಾದಿಗಳೆಲ್ಲವೂ ದುಃಖ-ದುಮ್ಮಾನದ ಕೊಡುಗೆಗಳಾಗಿವೆ. ಸಂತೋಷವಾಗಿರುವುದರಿಂದ ಆರೋಗ್ಯ ಉತ್ತಮವಾಗಿರುತ್ತದೆ ಮತ್ತು ರೋಗನಿರೋಧಕ

ಶಕ್ತಿಯೂ ಬೆಳೆದು ಬರುತ್ತದೆ. ಸ್ವತಃ ಸಂತೋಷವಾಗಿರಬೇಕು ಮತ್ತು ಮಕ್ಕಳನ್ನ ಸಂತೋಷವಾಗಿರಿಸಲು ಪ್ರಯತ್ನಿಸಬೇಕು. ದುಃಖ-ದುಮ್ಮಾನಗಳು ಎದುರಾದರೂ ಆದಷ ಬೇಗ ಅವುಗಳನ್ನು ಮರೆಯಲು ಅಥವಾ ಅದನ್ನು ನೀಗಿಸಲು ಚಿಂತಿಸಬೇಕು. ಅನ್ಯಥಾ ದೇಹವನ್ನು ಆ ಗೆದ್ದಲು ತಿಂದು ಬಿಡುತ್ತದೆ. ಅಲ್ಲಾಹನ ಮೇಲೆ ಭರವಸೆಯು (ತವಕ್ಕುಲ್ ಮಾನವನನ್ನು ದುಃಖ ದುಮ್ಮಾನದಿಂದ ಸಂರಕ್ಷಿಸುತ್ತದೆ. ಎಲ್ಲ ಸಂದರ್ಭದಲ್ಲೂ ಅಲ್ಲಾಹ ಮೇಲೆಯೇ ಭರವಸೆಯನ್ನಿರಿಸಬೇಕು.

10. ಪರಿಶುದ್ಧ ಚಾರಿತ್ರ್ಯ

ಕೊನೆಯದಾಗಿ, ಆರೋಗ್ಯಕ್ಕೆ ಅತಿ ಅಗತ್ಯ ಮತ್ತು ಪ್ರಮುಖ ಶರತ್ತು ಪರಿಶುದ್ಧ ಚಾರಿತ್ರ್ಯವಾಗಿದೆ. ಎಲ್ಲವೂ ಲಭ್ಯವಿದ್ದು ಚಾರಿತ್ರ್ಯವು ಕೆಟ್ಟಿದ್ದರೆ ಮಾನವನ ಆರೋಗ್ಯವ ಕ್ರಮೇಣ ಹದಗೆಡುತ್ತ ಹೋಗುತ್ತದೆ. ತದ್ವಿರುದ್ಧವಾಗಿ ವಿಶ್ವಾಸ, ಸತ್ಕರ್ಮ, ಸಚ್ಚಾರಿತ್ರ್ಯ ಉತ್ತಮ ಅಭ್ಯಾಸ ಮತ್ತು ಗುಣ, ಸ್ನೇಹಪರತೆ, ಸದ್ವರ್ತನೆ, ಉಪದೇಶ ಮತ್ತು ಹಿತಚಿಂತನೆ ಜನಸೇವೆ ಇತ್ಯಾದಿಗಳಿಂದ ಅಲ್ಲಾಹ್ ಮತ್ತು ಅಲ್ಲಾಹನ ದಾಸರು ಎಲ್ಲರೂ ಸಂತುಷ್ಟರಾಗುತ್ತಾರೆ. ಇದರಿಂದ ಮನಃಶಾಂತಿ ಲಭಿಸುತ್ತದೆ. ಮಾನವನು ಒಣರೊಟ್ಟಿ ತಿಂದಾದರೂ ಸಂತೋಷದಿಂದಿರುತ್ತಾನೆ. ಆವನ ಆರೋಗ್ಯ ಸುಧಾರಿಸುತ್ತದೆ ಮತ್ತು ಆಯುಷ್ಯ ಹೆಚ್ಚುತ್ತದೆ. ದುರಾಚಾರ ಮತ್ತು ಕೆಟ್ಟ ಅಭ್ಯಾಸ ಮತ್ತು ಗುಣಗಳು ಮಾನವನನ್ನು ತರತರವಾದ ಮಾರಕ ರೋಗಗಳಿಗೆ ಈಡು ಮಾಡುತ್ತವೆ ಎಂಬುದನ್ನು ನಾವು ದಿನನಿತ್ಯ ಕಾಣುತ್ತಿರುತ್ತೇವೆ. ಪರಲೋಕ ಯಶಸ್ಸಿನೊಂದಿಗೆ ಆರೋಗ್ಯ ಮತ್ತು ಐಹಿಕ ಯಶಸ್ಸಿಗೂ ಪರಿಶುದ್ಧ ಚಾರಿತ್ರ್ಯ ಮತ್ತು ಉತ್ತಮ ಅಭ್ಯಾಸ-ಗುಣಗಳು ಅತಿ ಅಗತ್ಯವಾಗಿದೆ. ಮುಂದಿನ ಪೀಳಿಗೆಯ ಹಿತವನ್ನು ಬಯಸುವವರೆಲ್ಲರೂ ಈ ಕುರಿತು ಗಮನ ಹರಿಸಬೇಕಾದುದು ಕಡ್ಡಾಯವಾಗಿದೆ.

ಮಕ್ಕಳ ಆರೋಗ್ಯ ಮತ್ತು ಶಾಲೆಗಳು

- ಶಾಲೆಯ ಕಾರ್ಯಭಾರವು, ಸಾಮಾನ್ಯವಾಗಿ ಭಾವಿಸುವಂತೆ ಓದು, ಬರೆಹ ಕಲಿಸುವುದಷ್ಟೇ ಅಲ್ಲ, ಬದಲಾಗಿ ವಿದ್ಯಾರ್ಥಿಗಳ ಆರೋಗ್ಯ ಮತ್ತು ದೈಹಿಕ ತರಬೇತಿಯ ಕಡೆಗೆ ಗಮನ ಹರಿಸುವುದೂ ಕೂಡ ಶಾಲೆಯ ಮೂಲಭೂತ ಕರ್ತವ್ಯವಾಗಿದೆ. ಏಕೆಂದರೆ
- ದೈಹಿಕವಾಗಿ ಮಕ್ಕಳ ಬೆಳವಣಿಗೆಯ ಪ್ರಮುಖ ಮತ್ತು ದೀರ್ಘ ಸಮಯವು ಶಾಲೆಯಲ್ಲೇ ಕಳೆಯುತ್ತದೆ.
- ಮಾತಾಪಿತರ ಅಜ್ಞಾನ, ಆರೋಗ್ಯ ರಕ್ಷಣೆಯ ಬಗ್ಗೆ ಅರಿವಿಲ್ಲದಿರುವುದು, ಜೀವನ ಕ್ರಮದಲ್ಲಿನ ಕೊರತೆಗಳು ಹಾಗೂ ಸಮಾಜದ ದೈನೇಸಿತನದ ಈ ಕಾಲದಲ್ಲಿ ಮಕ್ಕಳ

ಆರೋಗ್ಯಕ್ಕೆ ಸಂಬಂಧಿಸಿ ಸೂಕ್ತ ಸಹಾಯ ಮತ್ತು ಮಾರ್ಗದರ್ಶನವನ್ನು ಶಾಲೆಯಿಂದ ಮಾತ್ರವೇ ನಿರೀಕ್ಷಿಸಲು ಸಾಧ್ಯ.

- ಮಕ್ಕಳ ಆರೋಗ್ಯವೇ ಚೆನ್ನಾಗಿಲ್ಲದಿದ್ದರೆ, ಅವರ ಶಿಕ್ಷಣ-ತರಬೇತಿ ಹೇಗೆ ಸುಗಮವಾದೀತು?

ಆದ್ದರಿಂದಲೇ ಆರೋಗ್ಯವನ್ನು ಪಣಕ್ಕಿಟ್ಟು ಓದು-ಬರೆಹ ಕಲಿಯುವ ಕಲ್ಪನೆಯೇ ಅತ್ಯಂತ ಮಾರಕವಾದುದು ಎಂದು ಈ ಮೂಲಕ ತಿಳಿಯಬಹುದಾಗಿದೆ. ಶಾಲೆಯಿಂದ ಪಾರಂಗತರಾಗಿ ಮರಳುವಾಗ ಕೇವಲ ಮೂಳೆ, ಚರ್ಮವಷ್ಟೇ ವಾಪಸಾಗಬಾರದು, ಬದಲಾಗಿ ವೈಯಕ್ತಿಕ ಮತ್ತು ಸಾಮೂಹಿವಾದ ಹೊಣೆಗಾರಿಕೆಗಳನ್ನು ನಿಭಾಯಿಸಲು ಶಕ್ತವಾದ ಆರೋಗ್ಯಪೂರ್ಣ ಶರೀರವು ವಾಪಸಾಗಬೇಕು.

ಶಾಲೆಯ ಹೊಣೆಗಾರಿಕೆಗಳು

ಆರೋಗ್ಯಕ್ಕೆ ಸಂಬಂಧಿಸಿ ಶಾಲೆಯು ಈ ಕೆಳಗಿನ ವಿಷಯಗಳ ಕಡೆಗೆ ಗಮನ ಹರಿಸಬೇಕಾಗಿದೆ:

1. ಶಾಲೆಯ ಕಾರ್ಯಕಾರಣ: ಶಾಲೆಯು ಸಾಧ್ಯಂತ ಜನವಸತಿಯಿಂದ ದೂರ, ಮುಕ್ತ ವಾತಾವರಣ ಹಾಗೂ ಸ್ವಚ್ಛ ಪರಿಸರದಲ್ಲಿರಬೇಕು. ಸುತ್ತಲೂ ಗಿಡ-ಮರಗಳನ್ನು ಬೆಳೆಸಿರಬೇಕು.

2. ಕಟ್ಟಡ ಹೇಗೇ ಇರಲಿ. ಹೆಂಚಿನ ಮಾಡು ಅಥವಾ ತಾರಸಿಯಿರಲಿ, ಸಾಮಾನ್ಯವಾದುದಿರಲಿ ಅಥವಾ ಭವ್ಯವಾಗಿರಲಿ, ಒಟ್ಟಿನಲ್ಲಿ ವಿಶಾಲ ಮತ್ತು ಸಾಕಷ್ಟು ಗಾಳಿಗೆ ಅವಕಾಶವಿರಬೇಕು.

3. ಕೋಣೆಗಳಲ್ಲಿ ಸಾಕಷ್ಟು ಗಾಳಿ ಮತ್ತು ಬೆಳಕು ಹರಿಯುವಂತಿರಬೇಕು. ಎತ್ತರದ ಗೋಡೆಗಳು, ಅಗಲವಾದ ಕಿಟಕಿಗಳು, ದೊಡ್ಡ ಬಾಗಿಲು, ಅಂತೆಯೇ ವಿದ್ಯಾರ್ಥಿಗಳ ಸಂಖ್ಯೆಗನುಸಾರ ಕುಳಿತು ಕೊಳ್ಳಲು ವಿಶಾಲ ಸ್ಥಳ ಇರಬೇಕು.

4. ಕರಿ ಹಲಗೆಯನ್ನು (Black Board) ತರಗತಿಯ ಎಲ್ಲ ಮಕ್ಕಳಿಗೂ ಚೆನ್ನಾಗಿ ಕಾಣುವ ಜಾಗದಲ್ಲಿ ಇರಿಸಬೇಕು. ಅಂತೆಯೇ ಆದರ ಮೇಲೆ ಬೀಳುವ ಬೆಳಕು ಬೋರ್ಡ್‌ನಲ್ಲಿ ಪ್ರತಿಫಲಿಸುವಂತಿರಬಾರದು. ಬೋರ್ಡಿನಲ್ಲಿ ದಪ್ಪ ಮತ್ತು ಸ್ಪಷ್ಟ ಅಕ್ಷರಗಳಲ್ಲಿ ಬರೆಯಬೇಕು. ಅದನ್ನು ಓದುವಾಗ ಮಕ್ಕಳ ಕಣ್ಣಿಗೆ ಭಾರವೆನಿಸಬಾರದು. ಮಕ್ಕಳು ಕುಳಿತು ಕೊಳ್ಳುವ ಜಾಗಕ್ಕೆ ಎಡಬದಿ ಮತ್ತು ಹಿಂಬದಿಯಿಂದ ಬೆಳಕು ಬೀಳುವಂತಿರಬೇಕು. ಬಲಬದಿ ಮತ್ತು ಮುಂದಿನಿಂದ ಬೆಳಕು ಬಿದ್ದರೆ ಕಣ್ಣಿಗೆ ಒಳ್ಳೆಯದಲ್ಲ. ಓದುವಾಗ, ಬರೆಯುವಾಗ ಪುಸ್ತಕ ಮತ್ತು ಕಣ್ಣಿನ ಮಧ್ಯೆ ಒಂದು ಅಡಿಯಷ್ಟಾದರೂ ಅಂತರವಿರಬೇಕು. ಕುಳಿತು ಕೊಳ್ಳುವಾಗಲೂ ಬೆನ್ನ ಮೂಳೆ ನೇರವಾಗಿ ಇರುವಂತೆ ನೋಡಿಕೊಳ್ಳಬೇಕು. ಮಕ್ಕಳು ಕುಳಿತು

ಕೊಳ್ಳುವ ಭಂಗಿಯ ಕಡೆಗೆ ಈ ನಿಟ್ಟಿನಲ್ಲಿ ವಿಶೇಷ ಗಮನ ಹರಿಸಬೇಕು. ಅನ್ಯಥಾ ದೃಷ್ಟಿಯೂ ಹಾಳಾಗುತ್ತದೆ ಮತ್ತು ಬೆನ್ನ ಮೂಳೆಯೂ ಬಾಗುತ್ತದೆ.

5. ತರಗತಿ, ಮೊಗಸಾಲೆ, ಅಂಗಳ, ಶೌಚಾಲಯ, ಮೂತ್ರ ದೊಡ್ಡಿ, ಚರಂಡಿ ಇತ್ಯಾದಿಗಳ ಸ್ವಚ್ಛತೆಯ ಸಂಪೂರ್ಣವಾಗಿ ಪಾಲನೆಯಾಗಬೇಕು. ಹಾಗೆಯೇ ಕಸಕಡ್ಡಿ, ತ್ಯಾಜ್ಯ ಇತ್ಯಾದಿಗಳನ್ನು ದೂರ ಎಸೆಯುವ ವ್ಯವಸ್ಥೆಯಾಗಬೇಕು. ಕುಡಿಯುವ ನೀರನ್ನು ಮಕ್ಕಳಿಂದ ಮಲಿನವಾಗದಂತೆ ನೋಡಿಕೊಳ್ಳಬೇಕು. ಹೆಚ್ಚಿನ ಮಾರಕ ರೋಗಗಳು ಜಲಮಾಲಿನ್ಯದಿಂದಲೇ ಹರಡುತ್ತದೆ.

6. ತರತಿಗಳನ್ನು ನಿರಂತರ ಕ್ಲಿಷ್ಟಕರ ಮತ್ತು ದಣಿಸುವಂತಹ ಪಠ್ಯಗಳಿರದಂತೆ ವ್ಯವಸ್ಥೆಗೊಳಿಸಬೇಕು. ಅಂದರೆ, ಸುಲಭ ಮತ್ತು ಕಷ್ಟದ ಪಠ್ಯಗಳು, ಮೌಖಿಕ ಮತ್ತು ಬರವಣಿಗೆ, ಬೌದ್ಧಿಕ ಮತ್ತು ದೈಹಿಕ ತರಗತಿಗಳು ಒಂದರ ಹಿಂದೆ ಒಂದು ಬರುವ ಹಾಗೆ ನೋಡಿಕೊಳ್ಳಬೇಕು. ಸುಧಾರಿಸಿಕೊಳ್ಳಲು ತರಗತಿಗಳ ಮಧ್ಯೆ ಬಿಡುವನ್ನು ನೀಡಬೇಕು. ಬಿಡುವು ಊಟ, ತಿಂಡಿ, ನಮಾಝ್ ಮತ್ತು ಆಟಗಳಿಗೆ ಸಾಕಷ್ಟು ಸಮಯ ಸಿಗುವ ರೀತಿಯಲ್ಲಿರಬೇಕು.

7. ಪಾಠ ಆರಂಭಿಸುವುದಕ್ಕೆ ಮುಂಚೆ 15-20 ನಿಮಿಷ ಕಾಲವನ್ನು ಸಾಮೂಹಿಕ ಸಭೆ (Assembly) ಮೀಸಲಿಡಬೇಕು. ಅದರಲ್ಲಿ ಎತ್ತರ ಮತ್ತು ತರಗತಿಯ ಆಧಾರದಲ್ಲಿ ಎಲ್ಲ ವಿದ್ಯಾರ್ಥಿಗಳನ್ನು ಪಂಕ್ತಿಬದ್ಧವಾಗಿ ನಿಲ್ಲಿಸಬೇಕು. ಕೆಲವೊಮ್ಮೆ ಅವರ ಆರೋಗ್ಯ ಮತ್ತು ಸ್ವಚ್ಛತೆಯನ್ನು ಪರಿಶೀಲಿಸಬೇಕು. ವಿಶೇಷವಾಗಿ ದೇಹ ಮತ್ತು ವಸ್ತ್ರಗಳ ಸ್ವಚ್ಛತೆ; ಉಗುರು, ಹಲ್ಲು, ಕಣ್ಣು, ಕಿವಿ, ಮೂಗು ಇತ್ಯಾದಿಗಳ ಸ್ವಚ್ಛತೆಯನ್ನು ಪರಿಶೀಲಿಸಬೇಕು. ಆಗತ್ಯಾನುಸಾರ ವೈಯಕ್ತಿಕ ಮತ್ತು ಸಾಮೂಹಿಕ ಮಾರ್ಗದರ್ಶನವನ್ನು ನೀಡಬೇಕು. ಸಾಮೂಹಿಕವಾಗಿ ಡ್ರಿಲ್ ಅಥವಾ ಪಿ.ಟಿ.(ದೈಹಿಕ ತರಬೇತಿ)ಯ ಲಘುವಾದ ಕಾರ್ಯಕ್ರಮವನ್ನು ಇರಿಸಬೇಕು. ಹಾಗೆಯೇ ಕೆಲವು ನಿಮಿಷಗಳ ಮಟ್ಟಿಗೆ ಎಲ್ಲರೂ ಒಟ್ಟಾಗಿ ಪ್ರಾರ್ಥನೆ ಅಥವಾ ಪದ್ಯ (ತರಾನಾ) ಇತ್ಯಾದಿಗಳ ವ್ಯವಸ್ಥೆಯೂ ಮಾಡಬೇಕು.

8. ಪೂರ್ವ ಪ್ರಾಥಮಿಕ ತರಗತಿಯ ಮಕ್ಕಳಿಗೆ ಆಟದೊಂದಿಗೆ ಕಲಿಸುವ ವ್ಯವಸ್ಥೆಯಾಗಬೇಕು (ಉದಾ: ನಲಿ-ಕಲಿ). ಅವರನ್ನು ಹೆಚ್ಚು ಹೊತ್ತು ಸುಮ್ಮನೆ ಕುಳಿತುಕೊಳ್ಳಲು ನಿರ್ಬಂಧಿಸಬಾರದು. ಪಾಠದ ಸಮಯದಲ್ಲಿಯೇ ಅವರ ಆಟ ಮತ್ತು ದೈಹಿಕ ತರಬೇತಿಗೆ ವ್ಯವಸ್ಥೆ ಮಾಡಬೇಕು.

9. ಆರೋಗ್ಯ ಕೇಂದ್ರಗಳ ಹೊಣೆಗಾರರೊಂದಿಗೆ ನಿರಂತರ ಸಂಪರ್ಕವನ್ನಿರಿಸಬೇಕು. ಕಾಲಕಾಲಕ್ಕೆ ಅವರಿಂದ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ನಡೆಸಬೇಕು. ಹಾಗೆಯೇ ಸಿಡುಬು, ವಾಂತಿಬೇದಿ, ಟೈಫಾಯ್ಡ್, ಪ್ಲೇಗು ಇತ್ಯಾದಿಗಳ ನಿರೋಧಕ ಚುಚ್ಚುಮದ್ದುಗಳನ್ನು ಕೊಡಿಸುವ ವ್ಯವಸ್ಥೆ ಮಾಡಬೇಕು. ವಿಶೇಷವಾಗಿ ಮಕ್ಕಳ ದೃಷ್ಟಿ ಮತ್ತು ಶ್ರವಣ ಶಕ್ತಿಗಳನ್ನು ತಪಾಸಿಸುತ್ತಿರಬೇಕು.

10. ವಿದ್ಯಾರ್ಥಿಗಳಿಗೆ ಹಂತ ಹಂತವಾಗಿ ಆರೋಗ್ಯ ರಕ್ಷಣೆಯ ಅಗತ್ಯ ಸೂತ್ರಗಳನ್ನು ತಿಳಿಸಿ ಕೊಡಬೇಕು ಮತ್ತು ಅವುಗಳನ್ನು ಪಾಲಿಸುವ ವಿಧಾನವನ್ನು ವಿವರವಾಗಿ ಹೇಳಿಕೊಡಬೇಕು. ಹಿರಿಯ ಪ್ರಾಥಮಿಕ ಮಕ್ಕಳಿಗೆ ಪ್ರಥಮ ಚಿಕಿತ್ಸೆ ಮತ್ತು ಶುಶ್ರೂಷೆಗೆ ಸಂಬಂಧಿಸಿ ಆಗತ್ಯದ ಮಾಹಿತಿಗಳನ್ನು ಒದಗಿಸಿ ಕೊಡಬೇಕು. ಗಾಯಗಳಿಗೆ ಪಟ್ಟಿ ಕಟ್ಟುವುದು, ಜ್ವರ ತಪಾಸಿಸುವುದು, ಉಪಚರಿಸುವುದು ಇತ್ಯಾದಿಗಳಿಗೆ ಸಂಬಂಧಿಸಿ ತರಬೇತಿಯನ್ನು ನೀಡಬೇಕು. ಆಟದ ವೇಳೆ ಮಕ್ಕಳಿಗೆ ಪೆಟ್ಟಾದರೆ ಮತ್ತು ಗಾಯವಾದರೆ ಅಥವಾ ಯಾವುದಾದರೂ ಅವಘಡ ಸಂಭವಿಸಿದರೆ ತಕ್ಷಣದ ವೈದ್ಯಕೀಯ ಸಹಾಯ ನೀಡಲು, ಶಾಲೆಯಲ್ಲಿ ಪ್ರಥಮ ಚಿಕಿತ್ಸಾ ಸಾಮಗ್ರಿಗಳನ್ನು ಇರಿಸಬೇಕು.

11. ಸಣ್ಣ ಮಕ್ಕಳಿಗೆ ಹೋಮ್‌ವರ್ಕ್‌ನ (ಮನೆಯಲ್ಲಿ ಓದುವ ಬರೆಯುವ) ಹೊರೆಯನ್ನು ಹೊರಿಸಲೇ ಬಾರದು. ಅವರು ಬಿಡುವಿನ ವೇಳೆಯಲ್ಲಿ ನಿಶ್ಚಿಂತರಾಗಿ ಆಟವಾಡುತ್ತ ಕಾಲ ಕಳೆಯುವಂತಾಗಬೇಕು. ನಂತರದ ತರಗತಿಗಳಿಗೆ ಕೂಡ ಸ್ವತಂತ್ರ ಅಧ್ಯಯನ ಅಥವಾ ಹವ್ಯಾಸಗಳಿಗೆ ಸಂಬಂಧಿಸಿಯೇ ಹೋಮ್‌ವರ್ಕ್ ನೀಡಬೇಕು. ಏಕೆಂದರೆ ಮಕ್ಕಳು ಯಾವುದನ್ನೂ ಹೊರೆಯೆಂದು ಭಾವಿಸುವಂತೆ ಆಗಬಾರದು ಮತ್ತು ಬಿಡುವಿನ ವೇಳೆಯನ್ನು ಸಂತೋಷದಿಂದ, ಪ್ರಯೋಜನಕಾರಿ ಹವ್ಯಾಸಗಳಲ್ಲಿ ಕಳೆಯುವಂತಾಗಬೇಕು.

12. ಶಾಲೆಯ ವತಿಯಿಂದ ಆಟ, ವ್ಯಾಯಾಮ, ದೈಹಿಕ ತರಬೇತಿ, ಪಠ್ಯೇತರ ಚಟುವಟಿಕೆ ಮತ್ತು ಹವ್ಯಾಸಗಳ (ಉದಾ: ತೋಟಗಾರಿಕೆ, ಶೈಕ್ಷಣಿಕ ಪ್ರವಾಸ, ಪಿಕ್‌ನಿಕ್, ಸಮಾಜಸೇವೆ ಇತ್ಯಾದಿ) ವ್ಯವಸ್ಥೆಯಾಗಬೇಕು. ಅದಕ್ಕಾಗಿ ವೇದಿಕೆ ಮತ್ತು ಅಗತ್ಯ ವಸ್ತುಗಳನ್ನು ಒದಗಿಸಬೇಕು. ಆಟಗಳಲ್ಲಿ ಪರಸ್ಪರ ಸ್ಪರ್ಧೆ ಮತ್ತು ಇತರ ಶಿಕ್ಷಣ ಸಂಸ್ಥೆಗಳೊಂದಿಗೆ ಸ್ಪರ್ಧೆ, ಮ್ಯಾಚ್‌ಗಳನ್ನು ಆಯೋಜಿಸುತ್ತ ಇರಬೇಕು.

13. ಆಹಾರ ಪಾನೀಯ ಸೇವನೆ, ಓದು-ಬರೆಹ, ನಿದ್ರೆ-ಎಚ್ಚರ, ಸ್ನಾನ, ಆಟ ಮತ್ತು ಸ್ವಚ್ಛತೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿ ಆರೋಗ್ಯಪೂರ್ಣ ಅಭ್ಯಾಸವನ್ನು ಮಾಡಿಸಬೇಕು. ಕ್ಲಾಸ್ ಟೀಚರ್‌ಗಳು ತಮ್ಮ ತರಗತಿಗಳ ಮಕ್ಕಳಿಗೆ ಈ ಕುರಿತಾಗಿ ನಿರಂತರ ಉಪದೇಶಿಸುತ್ತ ಇರಬೇಕಾಗಿದೆ.

14. ಒಂದು ಹಂತದ ವರೆಗೆ ಮುಂಜಾಗ್ರತಾ ಕ್ರಮಗಳನ್ನು ಕಲಿಸಿಕೊಡಬೇಕು. ಉದಾ: ಅನಾರೋಗ್ಯವುಂಟಾದರೆ ಹಿರಿಯರಿಗೆ ತಿಳಿಸುವುದು, ಅನಾರೋಗ್ಯದ ವೇಳೆ ಔಷಧಿ ಮತ್ತು ಪಥ್ಯವನ್ನು ಪಾಲಿಸುವುದು, ಬೀದಿಯಲ್ಲಿ ನಡೆಯುವ ರೀತಿ-ನೀತಿ ಮತ್ತು ಸಾಂಕ್ರಾಮಿಕ ರೋಗದ ಸಮಯ ಪಾಲಿಸುವ ಮುಂಜಾಗರೂಕತೆ ಇತ್ಯಾದಿ.

15. ಗಮನಕ್ಕೆ ಅರ್ಹವಾದ ಮಕ್ಕಳಿಗೆ ಸಂಬಂಧಿಸಿ ಅವರ ಪೋಷಕರ ಗಮನ ಸೆಳೆಯುತ್ತ, ಸೂಕ್ತ ಕ್ರಮ ಕೈಗೊಳ್ಳುವಂತೆ ಪ್ರೇರೇಪಿಸಬೇಕು.

◆ ◆ ◆

ಅಧ್ಯಾಯ-22

ಕಲಿಯುವುದು (ವಿದ್ಯೆ-ಕಲೆಯ ಸ್ವಾರ್ಜನೆ)

ಶಿಕ್ಷಣ-ತರಬೇತಿಯ ಇಡೀ ವ್ಯವಸ್ಥೆಯನ್ನು ವಸ್ತುತಃ ಕಲಿಯಲು ಮತ್ತು ಕಲಿಸಲು ಸ್ಥಾಪಿಸಲಾಗಿದೆ. ಮುಗ್ಧ ಮತ್ತು ಅಜ್ಞ ಮಕ್ಕಳಿಗೆ ತಿಳಿದಿಲ್ಲದ ಅಥವಾ ಅವರು ತಿಳಿಯಲೇ ಬೇಕಾದಂತಹ ವಿಷಯಗಳನ್ನು ಕಲಿಸಲಿಕ್ಕಾಗಿಯೇ ಶಾಲೆಗಳನ್ನು ತೆರೆಯಲಾಗಿದೆ. ಉದಾ: ಓದು, ಬರೆಹ, ವಿವಿಧ ವಿದ್ಯೆ-ಕಲೆಗಳಲ್ಲಿ ಪರಿಣತಿ, ಉತ್ತಮ ಅಭ್ಯಾಸ ಮತ್ತು ಗುಣಗಳು, ವಿವಿಧ ಸಂದರ್ಭಗಳ ಶಿಷ್ಟಾಚಾರ ಹಾಗೂ ಜನರೊಡನೆ ಉತ್ತಮವಾಗಿ ವರ್ತಿಸುವುದು ಇತ್ಯಾದಿ. ಕಲಿಯುವ ಈ ಪ್ರಕ್ರಿಯೆಯು ಜನನದಿಂದ ಮರಣದ ವರೆಗೆ ನಿರಂತರ ಜಾರಿಯಲ್ಲಿರುತ್ತದೆ.

ಕಲಿಯುವ ಕಾರ್ಯವು ಸಾಮಾನ್ಯವಾಗಿ ಈ ಕೆಳಗಿನ ವಿಧಾನಗಳಿಂದ ನೆರವೇರುತ್ತದೆ:

ಸ್ವತಃ ಕಲಿಯುವುದು

ಮಕ್ಕಳು ಸ್ವಭಾವತಃ ಚಂಚಲರಾಗಿರುತ್ತಾರೆ. ಅವರು ಕೂತಲ್ಲಿ ಕೂರುವವರಲ್ಲ, ಯಾವಾಗ ನೋಡಿದರೂ ಏನಾದರೊಂದು ಮಾಡುತ್ತಲೇ ಇರುತ್ತಾರೆ, ಕಟ್ಟುತ್ತ ಕೆಡವುತ್ತ ಇರುತ್ತಾರೆ. ಈ ಎಲ್ಲ ಚಟುಚಟಿಕೆಗಳ ನಡುವೆಯೇ ಅವರು ಹಲವು ರೀತಿಯ ಅನುಭವಗಳನ್ನು ಪಡೆದುಕೊಳ್ಳುತ್ತಾರೆ. ಆ ಪೈಕಿ ಕೆಲವು ಕಹಿ ಮತ್ತು ಕೆಲವು ಹಿತಕರವಾಗಿರುತ್ತವೆ. ಕೆಲವೊಮ್ಮೆ ಗುರಿ ತಾಗುತ್ತದೆ, ಇನ್ನು ಕೆಲವೊಮ್ಮೆ ತಪ್ಪಿ ಹೋಗುತ್ತದೆ. ಈ ಪ್ರಕಾರ ಅವರು ಅನುಭವಗಳ ಮೂಲಕ ಹಲವು ವಿಷಯಗಳನ್ನು ಕಲಿತುಕೊಳ್ಳುತ್ತಾರೆ.

ತರಬೇತಿಯಿಂದ ಕಲಿಯುವುದು

ಮಾತಾ ಪಿತರು, ಅಧ್ಯಾಪಕರು ಮತ್ತಿತರ ಸಂಬಂಧಿತ ವ್ಯಕ್ತಿಗಳು ಮಕ್ಕಳ ತರಬೇತಿಯನ್ನು ತಮ್ಮ ಕರ್ತವ್ಯವೆಂದೇ ಭಾವಿಸುತ್ತಾರೆ. ಅವರು ಮಕ್ಕಳಿಗೆ ಪ್ರೀತಿ, ಮಮತೆಯಿಂದ ಮತ್ತು ಕಠಿಣವಾಗಿಯೂ ನಮ್ರತೆಯಿಂದಲೂ ಏನನ್ನಾದರೂ ಕಲಿಸುತ್ತ ಇರುತ್ತಾರೆ. ಮಕ್ಕಳಿಂದ ಏನಾದರೂ ತಪ್ಪು ಕಂಡು ಬಂದರೆ, ತಡೆದು ಸುಧಾರಣೆಗೆ ಪ್ರಯತ್ನಿಸುತ್ತಾರೆ ಮತ್ತು

ಸರಿಯಾದ ವಿಧಾನವನ್ನು ತಿಳಿಸಿ ಕೊಡುತ್ತಾರೆ. ಹೀಗೆ ಹಲವು ವಿಷಯಗಳನ್ನು ಮಕ್ಕಳು ತರಬೇತಿಯ ಮುಖಾಂತರ ಕಲಿಯುತ್ತಾರೆ.

ವೀಕ್ಷಣೆ ಮತ್ತು ಅನುಸರಣೆಯಿಂದ ಕಲಿಯುವುದು

ಪ್ರತಿಯೊಬ್ಬನ ಜ್ಞಾನದ ಅತಿ ಪ್ರಮುಖ ಮಾಧ್ಯಮ ಅವನ ಕಣ್ಣುಗಳಾಗಿವೆ. ಅವನಿಗೆ ತಿಳಿದಿರುವ ವಿಷಯಗಳ ಪೈಕಿ 80% ಭಾಗವು ಆತ ನೋಡಿ ಕಲಿತವುಗಳಾಗಿವೆ. ಅವನ ಕಣ್ಣುಗಳು ಸದಾ ಹಲವು ವಿಷಯಗಳನ್ನು ವೀಕ್ಷಿಸುತ್ತ, ಅವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಮೆದುಳಿಗೆ ರವಾನಿಸುತ್ತ ಇರುತ್ತವೆ. ಹೆಚ್ಚಿನ ಸಂಗತಿಗಳನ್ನು ಮಕ್ಕಳು ಇತರರನ್ನು ಕಂಡು ಮತ್ತು ಅವರನ್ನು ಅನುಕರಿಸುತ್ತ ಕಲಿಯುತ್ತಾರೆ. ಒಟ್ಟಿನಲ್ಲಿ ವೀಕ್ಷಣೆ ಮತ್ತು ಅನುಸರಣೆಯು ಕಲಿಯಲಿಕ್ಕಿರುವ ಪ್ರಮುಖ ಮಾಧ್ಯಮವಾಗಿದೆ.

ತಿಳುವಳಿಕೆಯೊಂದಿಗೆ ಕಲಿಯುವುದು

ಪ್ರತಿಯೊಂದು ಮಗುವಿಗೂ ಹಲವು ರೀತಿಯ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬರುತ್ತದೆ. ಚೆಂಡು ಉರುಳಿ ಹೋಗಿ ತೋಡಿಗೆ ಬೀಳುತ್ತದೆ, ಅದನ್ನು ಹೊರತೆಗೆಯುವ ಸಮಸ್ಯೆ ಎದುರಾಗುತ್ತದೆ. ಗಾಳಿಪಟದ ನೂಲು ಯಾವುದೋ ವಸ್ತುವಿಗೆ ಸಿಲುಕಿಕೊಳ್ಳುತ್ತದೆ, ಅದನ್ನು ಬಿಡಿಸುವ ಪ್ರಶ್ನೆ ಏಳುತ್ತದೆ. ತಿನ್ನುವ-ಕುಡಿಯುವ ವಸ್ತು ಕೈಗೆಟುಕದ ಜಾಗದಲ್ಲಿರುತ್ತದೆ, ಅದನ್ನು ಗಳಿಸಿಕೊಳ್ಳುವ ಚಿಂತೆಯುಂಟಾಗುತ್ತದೆ. ಕೆಲವೊಮ್ಮೆ ಅಧ್ಯಾಪಕರ ಕ್ರೋಧದಿಂದ ತಪ್ಪಿಸುವ, ಇನ್ನು ಕೆಲವೊಮ್ಮೆ ಮಾತಾಪಿತರ ಸಂತುಷ್ಟಿಯನ್ನು ಗಳಿಸುವ ಅಗತ್ಯ ಬೀಳುತ್ತದೆ ಇತ್ಯಾದಿ. ಒಟ್ಟಿನಲ್ಲಿ ತರತರವಾದ ಸಮಸ್ಯೆಗಳನ್ನು ಎದುರಿಸಬೇಕಾಗಿ ಬರುತ್ತದೆ. ಅವೆಲ್ಲವುಗಳನ್ನು ನಿಭಾಯಿಸಲು ಮತ್ತು ಯಶಸ್ಸು ಹೊಂದಲು ಮಕ್ಕಳಿಗೆ ತಿಳುವಳಿಕೆ ಹಾಗೂ ಚಿಂತನೆಯ ಜತೆಗೆ ಅಪಾರ ಪರಿಶ್ರಮ ಪಡಬೇಕಾಗಿ ಬರುತ್ತದೆ. ವಿಭಿನ್ನ ರೀತಿಯ ಪರಿಹಾರಗಳು ಅವರ ಮುಂದೆ ಬರುತ್ತವೆ ಮತ್ತು ಅವುಗಳನ್ನು ಪ್ರಯೋಗಿಸಿಯೂ ನೋಡುತ್ತಾರೆ. ತಮ್ಮ ಪ್ರಯತ್ನಗಳಲ್ಲಿ ಅವರು ಬಹುತೇಕ ಯಶಸ್ವಿಯೂ ಆಗುತ್ತಾರೆ. ಈ ಪ್ರಕಾರ ಹಲವು ವಿಷಯಗಳನ್ನು ತಿಳುವಳಿಕೆಯೊಂದಿಗೆ ಕಲಿಯುತ್ತ ಹೋಗುತ್ತಾರೆ.

ಅನುಭವದಿಂದ ಕಲಿಯುವುದು

ತಮ್ಮ ಸ್ವಾಭಾವಿಕ ಬೇಡಿಕೆಗಳ ಈಡೇರಿಕೆಯ ವೇಳೆ ಮಕ್ಕಳಿಗೆ ಹಲವು ರೀತಿಯ ಅನುಭವಗಳುಂಟಾಗುತ್ತವೆ. ಈ ಅನುಭವಗಳೇ ಮಕ್ಕಳಿಗೆ ಯಾವುದಾದರೂ ವಿಷಯದ ಕುರಿತು ತಮ್ಮ ವರ್ತನೆಯನ್ನು ನಿರ್ಧರಿಸುವಲ್ಲಿ ಸಹಾಯಕವಾಗುತ್ತವೆ. ಉದಾ: ಮಾತಾಪಿತರ ಮತ್ತು ಸೋದರ-ಸೋದರಿಯರ ಪ್ರೀತಿ, ಅಧ್ಯಾಪಕರ ಗೌರವ, ಪಠ್ಯಗಳ ಒಲವು, ಹವ್ಯಾಸಗಳಲ್ಲಿ ಆಸಕ್ತಿ, ಕತ್ತಲೆ ಮತ್ತು ಅಪಾಯಕಾರಿ ಪ್ರಾಣಿಗಳ ಭಯ ಇತ್ಯಾದಿ. ಇವು

ಕಲಿಯುವ ಪ್ರಕ್ರಿಯೆಯಲ್ಲಿ ಸಹಾಯಕವಾಗುವಂತಹ ವಿವಿಧ ವಿಶ್ವಾಸ ಮತ್ತು ಮಾಧ್ಯಮಗಳಾಗಿವೆ.

ಕಲಿಕೆಯ ನಿಯಮಗಳು

ಕಲಿಕೆಯ ಮೂರು ಮೂಲಭೂತ ನಿಯಮಗಳಿವೆ:

1. ಸನ್ನದ್ಧತೆಯ ನಿಯಮ 2. ಪ್ರಭಾವದ ನಿಯಮ 3. ಅಭ್ಯಾಸದ ನಿಯಮ.

1. ಸನ್ನದ್ಧತೆಯ ನಿಯಮ

ಕಲಿಯುವವನು ಕಲಿಯಲಿಕ್ಕೆ ಸಿದ್ಧನಿದ್ದರೆ ಮಾತ್ರವೇ ಕಲಿಕೆಯ ಕಾರ್ಯ ಸುಗಮವಾಗಿ ನೆರವೇರುತ್ತದೆ. ಸಿದ್ಧತೆಯಿಲ್ಲದಿದ್ದರೆ ಯಾವುದನ್ನೂ ಕಲಿಯಲಿಕ್ಕಾಗದು. ಏಕೆಂದರೆ ಅಂತಹ ಸ್ಥಿತಿಯಲ್ಲಿ ಆತ ಕಲಿಯಲು ಪ್ರಯತ್ನವನ್ನೇ ಮಾಡಲಾರ. ಆದ್ದರಿಂದಲೇ ಪಾಠ ಮಾಡುವಾಗ ಅಥವಾ ಏನನ್ನಾದರೂ ಕಲಿಯುವಾಗ, ಮೊದಲು ಮಕ್ಕಳನ್ನು ಅದಕ್ಕೆ ಸಿದ್ಧಗೊಳಿಸುವುದು ಮತ್ತು ಅವರ ಆಸಕ್ತಿಯನ್ನು ಕೆರಳಿಸುವುದರ ಬಗ್ಗೆ ಬಹಳ ಒತ್ತು ನೀಡಲಾಗುತ್ತದೆ. ಶಿಕ್ಷೆಯ ಭಯ ಅಥವಾ ಬಾಹ್ಯ ಒತ್ತಡ ಮತ್ತು ಬಲವಂತದಿಂದ ಕೆಲಸ ಮಾಡಿಸಿದರೆ, ಅದರಲ್ಲಿ ಮಕ್ಕಳು ಸ್ವಲ್ಪವೂ ಸಿದ್ಧರಾಗಿರುವುದಿಲ್ಲ, ಆದ್ದರಿಂದಲೇ ಫಲಿತಾಂಶ ಬಹಳ ಕಡಿಮೆಯಾಗುವುದು. ತದ್ವಿರುದ್ಧವಾಗಿ ಮಕ್ಕಳ ಸ್ವಾಭಾವಿಕ ಒಲವು ಮತ್ತು ಆಸಕ್ತಿಗಳನ್ನು ಪರಿಗಣಿಸುತ್ತ ಹಾಗೂ ಕಲಿಕೆಯ ಅಗತ್ಯ ಮತ್ತು ಪ್ರಯೋಜನವನ್ನು ಚೆನ್ನಾಗಿ ಮನವರಿಕೆ ಮಾಡಿಸುತ್ತ ಕಲಿಸಿದರೆ, ಅವರು ಸಂಪೂರ್ಣ ಆಸಕ್ತಿಯಿಂದ ಕಲಿಯುತ್ತಾರೆ. ಅಲ್ಲದೆ ಅದನ್ನು ಪೂರ್ಣಗೊಳಿಸುವಲ್ಲಿ ತಮ್ಮೆಲ್ಲ ಶಕ್ತಿಯನ್ನು ಬೆಳಸುತ್ತಾರೆ. ಹೀಗೆ ಆ ಕಾರ್ಯವು ಫಲಕಾರಿಯಾಗುತ್ತದೆ.

2. ಪ್ರಭಾವದ ನಿಯಮ

ಒಂದು ಕೆಲಸದಿಂದ ಹಿತಕರವಾದ ಫಲಿತಾಂಶ ಸಿಗುವುದಾದರೆ, ಆ ಕಾರ್ಯದಲ್ಲಿ ಆಸಕ್ತಿ ಮತ್ತು ಮಗ್ನತೆ ಇರುತ್ತದೆ. ಒಂದು ವೇಳೆ ಯಾವುದಾದರೂ ಕೆಲಸ ಮಾಡುವುದರಿಂದ ಸಂಕಷ್ಟ ಎದುರಾದರೆ ಅಥವಾ ಕಹಿ ಅನುಭವವುಂಟಾದರೆ, ಯಾರೂ ಅದರ ಹತ್ತಿರವೂ ಸುಳಿಯಲಾರರು. ಮಕ್ಕಳು ಬಾಲ್ಯದಲ್ಲಿ ತಿಳಿಯದೆ ಮಾಡುವ ಕಾರ್ಯಗಳಿಂದ ಕಷ್ಟದಾಯಕ ಫಲಿತಾಂಶವನ್ನು ಹೊಂದುತ್ತಾರೆ. ಆದರೆ ಆ ಕಹಿ ಅನುಭವಗಳೇ ಮುಂದೆ ಆ ಕಾರ್ಯವನ್ನು ಎಸಗುವುದರಿಂದ ಅವರನ್ನು ತಡೆಯುತ್ತವೆ. ತದ್ವಿರುದ್ಧವಾಗಿ, ಅವರಿಗೆ ಮನಶ್ಶಾಂತಿ, ಸಂತೋಷ ಮತ್ತು ನೆಮ್ಮದಿ ದೊರೆಯುವಂತಹ ಕಾರ್ಯಗಳನ್ನು ಅವರು ಪದೇಪದೇ ಮಾಡುತ್ತಾರೆ. ಅದೇ ನಿಯಮದ ಆಧಾರದಲ್ಲಿ ಅಪ್ರಿಯ ಕಾರ್ಯಗಳ ಜತೆ ಕಹಿ ಅನುಭವ ಮತ್ತು ಉತ್ತಮ ಕೃತ್ಯ ಮೊಂದಿಗೆ ಹಿತಕರ ಅನುಭವವನ್ನು ದೊರಕಿಸಿ ಕೊಡಲಿಕ್ಕಾಗಿಯೇ ತಪ್ಪುಗಳಿಗೆ ಶಿಕ್ಷೆ ವಿಧಿಸಲಾಗುತ್ತದೆ ಮತ್ತು ಉತ್ತಮ ಕಾರ್ಯಗಳಿಗೆ ಪ್ರಶಂಸೆ ಹಾಗೂ ಬಹುಮಾನ ನೀಡಲಾಗುತ್ತದೆ.

3. ಅಭ್ಯಾಸದ ನಿಯಮ

ಒಂದು ಕೆಲಸವನ್ನು ಪದೇ ಪದೇ ಮಾಡುವುದರಿಂದ ಅದರಲ್ಲಿ ನಿಪುಣತೆ ಬೆಳೆಯುತ್ತದೆ ಮತ್ತು ಆ ಕಾರ್ಯವು ಸರಾಗವಾಗಿ ನಡೆದು ಹೋಗುತ್ತದೆ. ಒಂದು ವೇಳೆ ಕೆಲವು ಸಮಯದ ವರೆಗೆ ಆ ಕೆಲಸವನ್ನು ಬಿಟ್ಟು ಬಿಟ್ಟರೆ, ಅದರಲ್ಲಿನ ಪರಿಣತಿ ಕಡಿಮೆಯಾಗುತ್ತ ಹೋಗುತ್ತದೆ. ಏನಾದರೂ ಕಲಿಸಲು ಮತ್ತು ಕೆಲಸದಲ್ಲಿ ನೈಪುಣ್ಯವನ್ನು ಉಂಟುಮಾಡಲು ಅಭ್ಯಾಸ ನಡೆಸುವ ಅವಕಾಶ ಸಾಕಷ್ಟು ದೊರೆಯುತ್ತ ಇರಬೇಕು. ಈ ನಿಯಮದ ಆಧಾರದಲ್ಲಿ ಯಾವುದಾದರೂ ಭಾಷೆ/ಲಿಪಿ ಕಲಿಸಲು ಮತ್ತು ಚೆನ್ನಾಗಿ ಮನವರಿಕೆ ಮಾಡಿಸಲು, ಯಾವುದಾದರೂ ಶಿಷ್ಟಾಚಾರ ಕಲಿಸಲು ಅಥವಾ ಉತ್ತಮ ಅಭ್ಯಾಸ-ಗುಣವನ್ನು ಮೈಗೂಡಿಸಲು ಪದೇಪದೇ ಅಭ್ಯಾಸ ಮಾಡಿಸಲಾಗುತ್ತದೆ. ಕೆಟ್ಟ ಅಭ್ಯಾಸ-ಗುಣಗಳನ್ನು ಬಿಡಿಸಲು ಮಕ್ಕಳಿಗೆ ಅವಕಾಶವನ್ನೇ ನಿರಾಕರಿಸಲಾಗುತ್ತದೆ ಮತ್ತು ಆ ಕೃತ್ಯ ಮರುಕಳಿಸದಂತೆ ನಿಗಾ ವಹಿಸಲಾಗುತ್ತದೆ. ಸಿಗರೇಟು ಸೇವನೆ ಅಥವಾ ಕಳ್ಳತನದ ಅಭ್ಯಾಸವನ್ನು ಬಿಡಿಸಲು ಸಾಮಾನ್ಯವಾಗಿ ತೊರೆಯುವಿಕೆಯನ್ನೇ ಅನುಸರಿಸಲಾಗುತ್ತದೆ.

ಕಲಿಕೆಯ ಪ್ರಗತಿಯ ಗತಿ

ಒಂದು ವಿಷಯವನ್ನು ಕಲಿಯುವಾಗಿನ ಪ್ರಗತಿಯ ವೇಗವು ಏಕ ಪ್ರಕಾರವಾಗಿರುವುದಿಲ್ಲ. ಒಂದು ವೇಳೆ ಆಸಕ್ತಿ ಮತ್ತು ಸಿದ್ಧತೆಯೊಂದಿಗೆ ಕೆಲಸ ಪ್ರಾರಂಭಿಸಲಾಗಿದ್ದರೆ, ಪರಿಶ್ರಮ ಹಾಗೂ ಮಗ್ನತೆಯೊಂದಿಗೆ ಕೆಲಸ ನಡೆಯುತ್ತಿದ್ದರೆ, ವಾತಾವರಣವೂ ಅನುಕೂಲಕರವಾಗಿದ್ದರೆ, ಪ್ರತಿರೋಧ ಮತ್ತು ವಿರೋಧದ ಸಾಧ್ಯತೆ ಇಲ್ಲದಿದ್ದರೆ, ಆ ಕೆಲಸದ ಅಗತ್ಯ ಮತ್ತು ಪ್ರಯೋಜನವೂ ಚೆನ್ನಾಗಿ ಮನವರಿಕೆಯಾಗಿದ್ದರೆ, ದಣಿವು ಮತ್ತು ಬೇಸರದ ಆತಂಕವಿಲ್ಲದಿದ್ದರೆ, ಅಭ್ಯಾಸಕ್ಕೆ ಸಾಕಷ್ಟು ಅವಕಾಶ ಒದಗುತ್ತಿದ್ದರೆ, ಫಲಿತಾಂಶವು ಹಿತಕರವಾಗಿಯೇ ಇರುವುದಾದರೆ, ಖಂಡಿತವಾಗಿಯೂ ಕಲಿಕೆಯು ತೀವ್ರಗತಿಯಲ್ಲಿ ಸಾಗುತ್ತದೆ. ಅನ್ಯಥಾ ಮಂದಗತಿಯಲ್ಲಿ ಸಾಗುತ್ತದೆ. ಆದ್ದರಿಂದ ಈ ಶರ್ತಗಳನ್ನೆಲ್ಲ ಪಾಲಿಸಲು ಸಂಪೂರ್ಣ ಪ್ರಯತ್ನ ನಡೆಸಬೇಕಾಗಿದೆ.

1. ಒಂದು ವೇಳೆ ಈ ಮೇಲಿನ ಶರ್ತಗಳೆಲ್ಲವೂ ಪೂರ್ತಿಯಾದರೆ, ಪ್ರಾರಂಭದಲ್ಲಿ ಕಲಿಕೆಯ ವೇಗ ತೀವ್ರವಾಗಿರುತ್ತದೆ. ಆದರೆ ಕಾಲಕ್ರಮೇಣ ಮಂದವಾಗುತ್ತ ಪ್ರಗತಿಯು ಸಂಪೂರ್ಣ ನಿಂತು ಹೋಗುತ್ತದೆ. ಇದು ಸ್ವಾಭಾವಿಕ. ಇಂತಹ ಸ್ಥಿತಿ ಎದುರಾದಾಗ, ದುಃಖ ಅಥವಾ ಹತಾಶೆಗೆ ಈಡಾಗಬಾರದು. ಕಲಿತ ವಿಷಯವು ಗಟ್ಟಿಗೊಳ್ಳಲು ಅಥವಾ ಮನದಾಳದಲ್ಲಿ ತಳವೂರಲು ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಆದರೆ ಪ್ರಗತಿಯು ಕುಂಠಿತಗೊಳ್ಳುವಲ್ಲಿ ಬೇರೇನಾದರೂ ಕಾರಣವಿದ್ದರೆ, ಅದನ್ನು ದೂರೀಕರಿಸಬೇಕಾಗುತ್ತದೆ.

2. ಸಂಪೂರ್ಣವಾಗಿ ಪರಿಣತಿ ಹೊಂದುವುದಕ್ಕೆ ಮುನ್ನ ಪ್ರಗತಿಯ ಗತಿಯಲ್ಲಿ ಈ ರೀತಿಯ ಏರಿಳಿತ ಕಂಡು ಬರುತ್ತದೆ- ಪ್ರಗತಿಯು ಕೆಲವೊಮ್ಮೆ ಬಹಳ ವೇಗವಾಗಿರುತ್ತದೆ, ಇನ್ನು ಕೆಲವೊಮ್ಮೆ ಮಂದಗತಿಯಲ್ಲಿ ಸಾಗುತ್ತದೆ, ಮತ್ತೆ ಕೆಲವೊಮ್ಮೆ ಸಂಪೂರ್ಣ ನಿಂತು ಹೋಗಿರುತ್ತದೆ.

3. ಪರಿಣತಿಗೆ ಒಂದು ಮಿತಿ ಇರುತ್ತದೆ. ಅಲ್ಲಿಗೆ ತಲುಪಿದ ಮೇಲೆ ಪ್ರಗತಿಯು ನಿಂತು ಹೋಗುತ್ತದೆ. ಇನ್ನು ಎಷ್ಟೇ ಪ್ರಯತ್ನ ಪಟ್ಟರೂ ಮತ್ತಷ್ಟು ಪ್ರಗತಿ ಸಾಧ್ಯವಿಲ್ಲದ ಮಾತು. ಆದ್ದರಿಂದ ಒಂದು ಕೆಲಸದಲ್ಲಿ ಸಂಪೂರ್ಣ ಪರಿಣತಿಯನ್ನು ಹೊಂದಿದ ಮೇಲೆ ಮತ್ತಷ್ಟು ಪ್ರಯತ್ನ ಪಡುವುದರಲ್ಲಿ ಸಮಯ ವ್ಯಯಿಸಬಾರದು. ಆದರೆ ಅಭ್ಯಾಸ ಮತ್ತು ಆ ಕಾರ್ಯವನ್ನು ಪುನರಾವರ್ತಿಸುವುದನ್ನು ನಿಲ್ಲಿಸಬಾರದು. ಏಕೆಂದರೆ ಅದರಿಂದ ಕೆಲಸ ಮರೆತು ಹೋದೀತು.

ಕಲಿಯುವುದರಲ್ಲಿ ಪರಿಣತಿ

ಕಲಿಯುವುದರಲ್ಲಿ ಪರಿಣತಿಯು ವಿಭಿನ್ನ ವಿಷಯಗಳನ್ನು ಅವಲಂಬಿಸಿದೆ.

1. ಕಲಿಯಬೇಕೆನ್ನುವ ಅಚಲ ನಿರ್ಧಾರ

ಕಲಿಯಬೇಕೆನ್ನುವ ಅಚಲ ನಿರ್ಧಾರವೇ ಕಲಿಕೆಯಲ್ಲಿ ಪರಿಣತಿ ಹೊಂದಲಿಕ್ಕಿರುವ ಅತಿ ಪ್ರಮುಖ ಶರ್ತವಾಗಿದೆ. ಎಲ್ಲಿಯ ವರೆಗೆ ಕಲಿಯುವವನು ಸ್ವತಃ ಅಚಲ ನಿರ್ಧಾರ ತಳೆಯುವುದಿಲ್ಲವೋ, ಅಲ್ಲಿಯ ವರೆಗೆ ಆತ ಖಂಡಿತವಾಗಿಯೂ ಏನನ್ನೂ ಕಲಿಯಲಾರ. ಕಲಿಸುವವನು ಎಷ್ಟೇ ದೊಡ್ಡ ಪರಿಣತನಿರಲಿ ಮತ್ತು ಕಲಿಸಲು ಎಷ್ಟೇ ಪರಿಶ್ರಮ ಪಡಲಿ, ಆದರೆ ಕಲಿಯುವವನಲ್ಲಿ ಆಸಕ್ತಿ ಮತ್ತು ಸಂಕಲ್ಪ ಇಲ್ಲದಿದ್ದರೆ, ಆತ ಎಂದೂ ಯಶಸ್ವಿಯಾಗಲಾರ. ಅಚಂಚಲ ನಿರ್ಧಾರಕ್ಕೆ ಪ್ರಬಲ ಪ್ರೇರಣೆಯನ್ನು ನೀಡಬೇಕಾಗಿ ಬರುತ್ತದೆ. ಕೆಲಸದ ಪ್ರಯೋಜನ ಮತ್ತು ಮಹತ್ವವನ್ನು ಚೆನ್ನಾಗಿ ಮನವರಿಕೆ ಮಾಡಿಸಿ ಕೊಡಬೇಕಾಗುತ್ತದೆ. ಜತೆಗೆ ಆತ ಆ ಕಾರ್ಯವನ್ನು ಕಲಿಯ ಬಲ್ಲನೆಂಬ ನಿರೀಕ್ಷೆಯನ್ನೂ ಇರಿಸಬೇಕಾಗುತ್ತದೆ.

2. ಕಲಿಯುವ ಪ್ರಯತ್ನ

ಕೇವಲ ನಿರ್ಧಾರದಿಂದ ಕೆಲಸ ಆಗದು. ಕಲಿಯಬೇಕಾದರೆ ಅದಕ್ಕಾಗಿ ಕಾರ್ಯತಃ ಪ್ರಯತ್ನ ಪಡಬೇಕು. ಕೈಕಾಲು ಆಡಿಸದೆ ಏನನ್ನೂ ಕಲಿಯಲಾಗದು. ಸ್ವತಃ ಕೆಲಸ ಮಾಡುವುದರಿಂದಲೇ ಪರಿಣತಿ ಸಾಧ್ಯ. ಉದಾ: ಈಜು. ಅದರ ತರಬೇತುದಾರನು ಬಹಳ ದೊಡ್ಡ ಪರಿಣತ ಈಜುಗಾರನಾಗಿದ್ದಾನೆ, ಆತ ಸಂಪೂರ್ಣ ಆಸಕ್ತಿಯೊಂದಿಗೆ ತನ್ನ ವಿದ್ಯೆಯನ್ನೆಲ್ಲ ಧಾರೆಯೆರೆದು ಈಜುವ ವಿಧಾನವನ್ನು ಕಲಿಸಿಕೊಡುತ್ತಾನೆ. ಅಥವಾ ಸ್ವತಃ

ಈಜಿ ತೋರಿಸುತ್ತಾನೆ. ಕಲಿಯುವವನೂ ಬಹಳ ಆಸಕ್ತಿಯಿಂದ ಆತನ ಮಾತನ್ನು ಆಲಿಸುತ್ತಾನೆ ಮತ್ತು ತರಬೇತುದಾರನು ಈಜುವುದನ್ನು ಗಮನಗೊಟ್ಟು ನೋಡುತ್ತಾನೆ. ಆದರೆ ಎಲ್ಲಿಯ ವರೆಗೆ ಅವನು ಈಜು ಕೊಳದಲ್ಲಿ ಇಳಿದು ಕೈಕಾಲು ಆಡಿಸುವುದಿಲ್ಲವೋ ಅಲ್ಲಿಯವರೆಗೆ ಈಜಲು ಕಲಿಯಲಾರ. ಆದ್ದರಿಂದಲೇ ಶಾಲೆಗಳಲ್ಲಿ ಕಲಿತುದನ್ನು ಕಾರ್ಯರೂಪಕ್ಕೆ ತರಲು ಮತ್ತು ಸ್ವತಃ ಆಚರಿಸಿ ಕಲಿಸಲು ಒತ್ತು ನೀಡಲಾಗುತ್ತದೆ. ಏಕೆಂದರೆ, ಆಲಸಿ ವೀಕ್ಷಕನಾಗಿದ್ದರೆ, ಯಾವುದೇ ಕೆಲಸದಲ್ಲಿ ಪರಿಣತಿ ಗಳಿಸಲು ಸಾಧ್ಯವಿಲ್ಲ.

3. ಕೆಲಸಕ್ಕೆ ಸೂಕ್ತ ಪರಿಸ್ಥಿತಿ ಇರಬೇಕು

ಕಲಿಯಲಿಕ್ಕೆ ಪರಿಸ್ಥಿತಿಯು ಎಷ್ಟು ಅನುಕೂಲಕರವಾಗಿರುವುದೋ ಕಲಿಯುವುದರಲ್ಲೂ ಅಷ್ಟೇ ಸೌಲಭ್ಯ ಒದಗುತ್ತದೆ. ಸುತ್ತ ಮುತ್ತಲ ಪರಿಸರವು ಪ್ರಶಾಂತವಾಗಿದ್ದರೆ, ವಾತಾವರಣ ಅನುಕೂಲಕರ ಮತ್ತು ಗಮನ ಕೇಂದ್ರೀಕರಿಸಲು ಹಾಗೂ ಏಕಾಗ್ರತೆಯೊಂದಿಗೆ ಕೆಲಸದಲ್ಲಿ ತೊಡಗಿಕೊಳ್ಳಲು ಸಾಧ್ಯವಾದರೆ, ಕಲಿಯುವುದು ಸುಲಭವಾಗುತ್ತದೆ. ಆದೇ ವೇಳೆ ಏಕಾಗ್ರತೆಗೆ ಭಂಗ ತರುವಂತಹ, ಬೇಸರ ಹುಟ್ಟಿಸುವಂತಹ ಮತ್ತು ಕೆಲಸದಲ್ಲಿ ಅಡೆತಡೆಯನ್ನು ಉಂಟು ಮಾಡುವಂತಹ ಪರಿಸ್ಥಿತಿ ಇದ್ದರೆ, ಕಲಿಯುವಾಗ ಬಹಳ ತೊಂದರೆಯಾಗುತ್ತದೆ. ಬಹಳ ತ್ರಾಸದಿಂದ ಏನಾದರೂ ಕಲಿಯಬಹುದಷ್ಟೇ. ಆದ್ದರಿಂದ ಪ್ರಶಾಂತ ವಾತಾವರಣ ಮತ್ತು ಅನುಕೂಲಕರ ಪರಿಸರದಲ್ಲಿ ಶಿಕ್ಷಣ ನೀಡುವ ಕುರಿತು ಒತ್ತು ನೀಡಲಾಗುತ್ತದೆ. ಹಾಗೆಯೇ ಏಕಾಗ್ರತೆಗೆ ಭಂಗ ತರುವಂತಹ ವಿಷಯಗಳನ್ನು ಮಕ್ಕಳಿಂದ ದೂರವಿರಿಸಲಾಗುತ್ತದೆ.

4. ಕಠಿಣ ಪರಿಶ್ರಮ

ಪರಿಣತಿ ಗಳಿಸಬೇಕಾದರೆ ಸಂಪೂರ್ಣ ಏಕಾಗ್ರತೆ, ಕಾರ್ಯಮಗ್ನತೆ ಮತ್ತು ಪರಿಶ್ರಮದ ಕೆಲಸ ಮಾಡಬೇಕಾಗುವುದು. ಸಂಪೂರ್ಣ ಪ್ರಯತ್ನ ಮತ್ತು ಕಠಿಣ ಪರಿಶ್ರಮದ ಹೊರತು ಪರಿಣತಿ ಹೊಂದಲಾಗದು. ಪರಿಣತಿ ಮತ್ತು ಕರಕುಶಲ ಕಲೆಗಳಲ್ಲಿ ವೇಗ ಮತ್ತು ಚಾಕಚಕ್ಯತೆಯ ಕಡೆಗೆ ಗಮನ ಹರಿಸಬೇಕು. ಸಮಾಧಾನ ಚಿತ್ತದೊಂದಿಗೆ ಕೆಲಸ ಮಾಡುವುದು ಅಗತ್ಯವಾದರೂ ನಿಧಾನ ಗತಿಯಲ್ಲಿ ಮತ್ತು ಆಲಸ್ಯದೊಂದಿಗೆ ಕೆಲಸ ಮಾಡಬೇಕೆಂದು ಅದರ ಅರ್ಥ ಖಂಡಿತ ಅಲ್ಲ, ಕಲಾಕಾರರು ಸಾಮಾನ್ಯವಾಗಿ ನಿಧಾನಗತಿಯನ್ನು ಪ್ರದರ್ಶಿಸುತ್ತಾರೆ. ಆರಂಭದಲ್ಲಿಯೇ ಈ ಬಗ್ಗೆ ಗಮನ ಹರಿಸಿದರೆ ಪರಿಣತಿಯೊಂದಿಗೆ ವೇಗವೂ (ತೀವ್ರಗತಿಯೂ) ಸುಲಭದಲ್ಲಿ ಸಾಧಿತವಾಗುತ್ತದೆ.

5. ಅನುಭವದ ಅವಧಿ

ಅನುಭವ ಗಳಿಸುವ ಅವಧಿಯು, ಮಕ್ಕಳು ದಣಿದು ಬಿಡುವಷ್ಟು ದೀರ್ಘವೂ ಆಗಬಾರದು ಮತ್ತು ಫಲಿತಾಂಶವೇ ದೊರೆಯಲಾರದಷ್ಟು ಹ್ರಸ್ವವೂ ಆಗಬಾರದು. ಬದಲಾಗಿ ಪ್ರಾಯ ಮತ್ತು ಆರೋಗ್ಯಕ್ಕೆ ಅನುಸಾರ ಅವಧಿಯನ್ನು ನಿರ್ಧರಿಸಬೇಕು.

ಮಕ್ಕಳು ದಣಿಯುತ್ತಿದ್ದಾರೆ ಎಂದು ಭಾಸವಾದ ಕೂಡಲೇ, ಕೆಲಸ ನಿಲ್ಲಿಸಿ ವಿಶ್ರಾಂತಿಗೆ ಅವಕಾಶ ನೀಡಬೇಕು. ತೀರಾ ದಣಿವು ಮತ್ತು ದುಃಖದ ಸ್ಥಿತಿಯಲ್ಲಿ ಕೆಲಸ ಮಾಡುವುದು ಆರೋಗ್ಯಕ್ಕೂ ಮಾರಕ. ಜತೆಗೆ ನಿಷ್ಪ್ರಯೋಜಕ ಕೂಡ. ತರಗತಿಯ ಸಮಯವನ್ನು ನಿಗದಿ ಪಡಿಸುವಾಗ ದಣಿವು ಮತ್ತು ಬೇಸರವನ್ನು ಪರಿಗಣಿಸಲು ಅದುವೇ ಕಾರಣ.

ಮಕ್ಕಳ ಕಲಿಕೆಯ ಮೇಲೆ ಪ್ರಭಾವ ಬೀರುವ ವಿಷಯಗಳು

ಮಕ್ಕಳ ಕಲಿಕೆಯ ಮೇಲೆ ಈ ಕೆಳಗಿನ ವಿಷಯಗಳು ಬಹಳ ಪ್ರಭಾವ ಬೀರುತ್ತವೆಂದು ಸಂಶೋಧನೆಯಿಂದ ತಿಳಿದು ಬರುತ್ತದೆ.

1. ಬುದ್ಧಿಮತ್ತೆ

ಮಕ್ಕಳು ಎಷ್ಟು ಬುದ್ಧಿವಂತರಾಗಿರುತ್ತಾರೋ ಅಷ್ಟೇ ಸುಲಭದಲ್ಲಿ ಕಲಿಯುತ್ತಾರೆ. ಹಾಗೆಯೇ ಕಲಿತ ವಿಷಯಗಳನ್ನು ಹೊಸ ಪರಿಸ್ಥಿತಿಯ ಮೇಲೆ ಹತೋಟಿ ಸಾಧಿಸಲು ಅಥವಾ ಅದನ್ನು ನಿಭಾಯಿಸಲು ಬಳಸಬಹುದು.

2. ಪ್ರಾಯ

ಹದಿನೈದು-ಹದಿನಾರು ವರ್ಷಗಳ ವರೆಗೆ ಮಕ್ಕಳ ಬದ್ಧಿಮತ್ತೆಯು ಬೆಳೆಯುತ್ತ ಇರುತ್ತದೆ. ಹಾಗಾಗಿ ಕಲಿಯುವ ಕಾರ್ಯವು ವೇಗ ಮತ್ತು ಸೌಲಭ್ಯದೊಂದಿಗೆ ಜಾರಿಯಲ್ಲಿರುತ್ತದೆ. ಈ ಪ್ರಾಯದ ವರೆಗೆ ಮಕ್ಕಳಿಗೆ ಬಹಳಷ್ಟನ್ನು ಕಲಿಸಬಹುದಾಗಿದೆ. ಆ ಬಳಿಕ ಬೌದ್ಧಿಕ ಬೆಳವಣಿಗೆ ನಿಧಾನವಾಗುತ್ತದೆ ಮತ್ತು ಕಲಿಯುವ ವೇಗವೂ ಮಂದವಾಗುತ್ತದೆ. ಆ ಮೇಲೆ ಕೇವಲ ವಿಶೇಷವಾದ ಕಲೆ ಅಥವಾ ಕೆಲವೇ ವಿಷಯಗಳಲ್ಲಿ ಪರಿಣತಿ ಗಳಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಕಲಿಕೆಯಲ್ಲಿ ಆಸಕ್ತಿ ಹುಟ್ಟಿಸುವ ಮತ್ತು ವಿವಿಧ ಜ್ಞಾನ ಹಾಗೂ ಕಲೆಗಾರಿಕೆಯಲ್ಲಿ ಒಲವು ಬೆಳೆಸುವ ಅವಧಿಯು ಈ ಹದಿನೈದು-ಹದಿನಾರು ವರ್ಷ ಪ್ರಾಯದ ವರೆಗೆ ಮಾತ್ರವೇ ಇರುವುದು. ಈ ಅವಧಿಯಲ್ಲಿ ಮಕ್ಕಳಿಗೆ ವಿವಿಧ ಜ್ಞಾನ ಮತ್ತು ಕಲೆಗಾರಿಕೆಯನ್ನು ಕಲಿಸಿ ಬಿಡಬೇಕು. ಈ ಮೂಲಕ ಅವರು ಸ್ವತಃ ಅಥವಾ ಅವರ ಹಿರಿಯರು ನಂತರದ ಹಂತಗಳಿಗೆ ಸೂಕ್ತ ಪಥ್ಯ ಹಾಗೂ ಅಭ್ಯಾಸಗಳನ್ನು ಆಯ್ದುಕೊಳ್ಳಬಹುದು.

3. ಅನುಭವ

ಕಲಿತ ವಿಷಯವನ್ನು ಕಾರ್ಯರೂಪಕ್ಕೆ ತಂದು, ಅದರಲ್ಲಿ ಅನುಭವ ಗಳಿಸಲು ಅವಕಾಶ ದೊರೆತಷ್ಟೂ ಹೆಚ್ಚು ಪರಿಣತಿ ಹೊಂದಲು ಸಾಧ್ಯವಾಗುತ್ತದೆ. ಹಾಗೆಯೇ ಆ ಕಾರ್ಯಕ್ಕೆ ಸಂಬಂಧಿಸಿ ಇನ್ನಷ್ಟು ಕಲಿಯಲು ಅಥವಾ ಅಂತಹ ಬೇರೆ ವಿಷಯಗಳನ್ನು ಕಲಿಯಲು ಸುಲಭವಾಗುತ್ತದೆ. ಆದ್ದರಿಂದ ಅನುಭವಕ್ಕೆ ಆದಷ್ಟು ಹೆಚ್ಚು ಅವಕಾಶ ಒದಗಿಸಬೇಕಾಗುತ್ತದೆ.

4. ಪ್ರಚೋದನೆ

ಕಲಿಯುವ ನಿಟ್ಟಿನಲ್ಲಿ ಎಷ್ಟು ಪ್ರಬಲವಾಗಿ ಪ್ರಚೋದಿಸಲಾಗುವುದೋ ಮತ್ತು ಮಕ್ಕಳಲ್ಲಿ ಎಷ್ಟರ ಮಟ್ಟಿಗೆ ಆಸಕ್ತಿ ಹುಟ್ಟುತ್ತದೋ ಅಷ್ಟೇ ಮಟ್ಟದಲ್ಲಿ ಅವರು ಶಕ್ತಿಯನ್ನು ಬಳಸುವರು ಮತ್ತು ಪರಿಶ್ರಮ ಪಡುವರು. ಪರಿಣಾಮವಾಗಿ ಅಷ್ಟೇ ಹೆಚ್ಚು ಯಶಸ್ವಿಯಾಗುವರು. ಆದ್ದರಿಂದ ಮಕ್ಕಳಿಗೆ ಏನನ್ನಾದರೂ ಕಲಿಸುವುದಕ್ಕೆ ಮುಂಚೆ, ಆ ಬಗ್ಗೆ ಅವರ ಆಸಕ್ತಿಯನ್ನು ಕೆರಳಿಸಬೇಕು.

5. ಹಿತಕರ ಫಲಿತಾಂಶ

ಕಲಿಕೆಯ ವೇಳೆ ಪರಿಶ್ರಮದ ಸಮಾಧಾನಕರ ಫಲಿತಾಂಶವೂ ಕಣ್ಣ ಮುಂದೆ ಬರುತ್ತಾ ಇದ್ದರೆ, ಪರಿಶ್ರಮದಲ್ಲಿಯೂ ಹೆಚ್ಚಳವುಂಟಾಗುತ್ತದೆ. ಯಶಸ್ಸು ಸ್ವತಃ ಒಂದು ದೊಡ್ಡ ಪ್ರಚೋದನೆಯಾಗಿದೆ. ಆದ್ದರಿಂದ ಮಕ್ಕಳಿಗೆ, ತಮ್ಮ ಪ್ರಯತ್ನಗಳ ಫಲಿತಾಂಶವನ್ನು ತಿಳಿಯುವ ಅವಕಾಶ ಸದಾ ಒದಗುತ್ತಿರಬೇಕು.

6. ಪುಷ್ಟಿ ನೀಡುವುದು

ಕಲಿಕೆಯ ವೇಳೆ ಬಹುಮಾನ ಅಥವಾ ಹೊಗಳಿಕೆಯ ಮೂಲಕ ನಿರಂತರವಾಗಿ ಪುಷ್ಟಿ ನೀಡುತ್ತ ಇರಬೇಕು. ಇದರಿಂದ ಕಲಿಕೆಯು ಸುಲಭವಾಗುತ್ತದೆ ಮತ್ತು ಪ್ರಗತಿಯ ವೇಗದಲ್ಲಿ ಹೆಚ್ಚಳ ಉಂಟಾಗುತ್ತದೆ. ಮಕ್ಕಳು ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾದಷ್ಟೂ ಅವರನ್ನು ಹೊಗಳುತ್ತ ಇರಬೇಕು ಮತ್ತು ಅವರ ಪ್ರಯತ್ನಗಳನ್ನು ಮೆಚ್ಚುಗೆಯ ದೃಷ್ಟಿಯಲ್ಲಿ ನೋಡುತ್ತ ಇರಬೇಕು. ಹಾಗೆಯೇ ಹಲವು ವಿಧಗಳಿಂದ ಅವರನ್ನು ಪ್ರೋತ್ಸಾಹಿಸುತ್ತ ಇರಬೇಕು. ಇದರಿಂದ ಚುರುಕುತನ ಬೆಳೆಯುತ್ತದೆ, ಸಂತೃಪ್ತಿಯುಂಟಾಗುತ್ತದೆ ಮತ್ತು ಕಾರ್ಯಕ್ಷಮತೆಯು ಹೆಚ್ಚುತ್ತದೆ. ಬಹುಮಾನ, ಸ್ಥಾನಮಾನ, ಅಂಕ, ಪದವಿ ಇತ್ಯಾದಿಗಳನ್ನು ಈ ವಿಷಯದಲ್ಲಿ ಬಳಸಬಹುದಾಗಿದೆ.

7. ಪುನರಾವರ್ತನೆ

ಪುನರಾವರ್ತನೆಗೆ ಹೆಚ್ಚು ಅವಕಾಶ ದೊರೆತಷ್ಟೂ ಕಲಿಕೆಯು ಸುಲಭವಾಗುತ್ತದೆ ಮತ್ತು ಫಲಿತಾಂಶವೂ ವೇಗ ಪಡೆಯುತ್ತದೆ. ಇದಕ್ಕೆ ಸಂಬಂಧಿಸಿ ಹೊಸ ಹೊಸ ವಿಷಯಗಳನ್ನು ಕಲಿಯಲು ಪ್ರಚೋದನೆಯೂ ದೊರೆಯುತ್ತದೆ.

8. ಮಾನಸಿಕ ಸಂಬಂಧ

ಮಕ್ಕಳಲ್ಲಿ ಹೊಸ ಹೊಸ ವಿಷಯವನ್ನು ಕಲಿಯಲು ಎಷ್ಟು ಇಚ್ಛೆ ಮತ್ತು ಉತ್ಸಾಹ ಇರುತ್ತದೋ ಅಷ್ಟೇ ಹೆಚ್ಚು ಮಗ್ನತೆ ಮತ್ತು ಪರಿಶ್ರಮದಿಂದ ಅದನ್ನು ಕಲಿಯುತ್ತಾರೆ. ಉತ್ಸಾಹ ಮತ್ತು ಇಚ್ಛೆಯನ್ನು ಹುಟ್ಟಿಸುವುದರಿಂದ ಅಥವಾ ಆಸಕ್ತಿಯನ್ನು ಕೆರಳಿಸುವುದರಿಂದ ಕಲಿಕೆಯು ಸುಲಭವಾಗುತ್ತದೆ. ಮಾನಸಿಕ ಸಂಬಂಧದ ಹೊರತು ಏನನ್ನೂ ಕಲಿಯುವುದು ಅಥವಾ ಕಲಿಸುವುದು ಸಾಧ್ಯವಿಲ್ಲ.

◆ ◆ ◆

ಅಧ್ಯಾಯ-23

ಗಮನ ಮತ್ತು ಆಸಕ್ತಿ

ಒಂದು ವಸ್ತುವಿನ ಕುರಿತು ಸಾಕಷ್ಟು ಮಾಹಿತಿಗಳನ್ನು ಕಲೆ ಹಾಕುವ ನಿಟ್ಟಿನಲ್ಲಿ ಮನಸ್ಸನ್ನು ಬೇರೆಲ್ಲ ವಸ್ತುಗಳಿಂದ ಸರಿಸಿ ಆ ಒಂದು ವಸ್ತುವಿನ ಮೇಲೆಯೇ ಕೇಂದ್ರೀಕರಿಸಿಕೊಂಡಿರುವ ಅವಸ್ಥೆಗೆ ಗಮನ ಎನ್ನುತ್ತೇವೆ.

ಅಧ್ಯಾಪಕರು ಸಾಮಾನ್ಯವಾಗಿ ಗಮನ ವಹಿಸಲು ಹೇಳುತ್ತ ಇರುತ್ತಾರೆ. ಅವರ ಈ ಬೇಡಿಕೆಯು ಉಪಯುಕ್ತವೇ ಆಗಿದೆ. ಏಕೆಂದರೆ, ಎಲ್ಲಿಯ ವರೆಗೆ ವಿದ್ಯಾರ್ಥಿಗಳು ಓದು-ಬರೆಹ, ಅಧ್ಯಾಪಕರ ಮಾತನ್ನು ಆಲಿಸಲು ಮತ್ತು ವಹಿಸಿಕೊಟ್ಟ ಕೆಲಸಗಳನ್ನು ಪಾಲಿಸುವಲ್ಲಿ ಸಂಪೂರ್ಣ ಗಮನ ಕೊಡುವುದಿಲ್ಲವೋ ಅಲ್ಲಿಯವರೆಗೆ ಶಿಕ್ಷಣ-ತರಬೇತಿಯು ಫಲಕಾರಿಯಾಗದು.

• ಜಾಗೃತ ಮತ್ತು ಪ್ರಜ್ಞೆಯ ಸ್ಥಿತಿಯಲ್ಲಿ ಮನಸ್ಸು ನಿರಂತರವಾಗಿ ಯಾವುದಾದರೊಂದು ವಿಷಯದಲ್ಲಿ ಮಗ್ನವಾಗಿರುತ್ತದೆ. ಒಮ್ಮೆ ಸುತ್ತಮುತ್ತಲ ವಸ್ತುಗಳಲ್ಲಿ, ಇನ್ನೊಮ್ಮೆ ಯಾರದಾದರೂ ಮಾತು-ಕೃತಿಗಳಲ್ಲಿ, ಮತ್ತೊಮ್ಮೆ ಸ್ವತಃ ತನ್ನ ಕೆಲಸ ಅಥವಾ ಕಲ್ಪನೆ-ಆಲೋಚನೆಗಳಲ್ಲಿ, ನಾವು ಸುಮ್ಮನೆ ಕುಳಿತುಕೊಂಡಿದ್ದರೂ ಆ ಸಮಯದಲ್ಲಿಯೂ ಆಲೋಚನೆ ಮತ್ತು ಕಲ್ಪನೆಗಳ ಧಾರೆಯು ನಿರಂತರ ಹರಿಯುತ್ತಿರುತ್ತದೆ. ಒಮ್ಮೆ ಒಂದು ವಿಷಯ ಮನಸ್ಸಿನಲ್ಲಿ ಉದ್ಭವಿಸಿದರೆ, ಇನ್ನೊಮ್ಮೆ ಬೇರೊಂದು ವಿಷಯ ಬರುತ್ತದೆ.

• ಮನಸ್ಸು ಒಂದು ವಿಷಯದಲ್ಲಿ ಮಗ್ನವಾಗಿ ಬಿಟ್ಟರೆ, ಸ್ವಲ್ಪ ಹೊತ್ತಿನ ಮಟ್ಟಿಗೆ ಆ ವಸ್ತು ಮನಸ್ಸಿನಲ್ಲಿ ಕೇಂದ್ರೀಕೃತವಾಗುತ್ತದೆ. ಉಳಿದೆಲ್ಲವೂ ಬದಿಗೆ ಸರಿಸಲ್ಪಡುತ್ತದೆ. ಒಂದು ಬಾರಿಗೆ ಒಂದೇ ವಿಷಯ ಮನಸ್ಸಿನಲ್ಲಿ ಕೇಂದ್ರೀಕೃತವಾಗಿರುತ್ತದೆ. ಆದರೆ ಇನ್ನೊಂದು ವಿಷಯ ಗಮನ ಕೇಂದ್ರಕ್ಕೆ ಬಂದುಬಿಟ್ಟರೆ, ಮೊದಲ ವಿಷಯವು ಬದಿಗೆ ಸರಿಸಲ್ಪಡುತ್ತದೆ. ಪ್ರಜ್ಞೆಯ ಸ್ಥಿತಿಯಲ್ಲಿ ಇದೇ ಕ್ರಿಯೆ ನಿರಂತರವಾಗಿರುತ್ತದೆ.

• ಒಂದೇ ವಸ್ತು ಬಹಳ ಹೊತ್ತಿನ ತನಕ ಗಮನ ಕೇಂದ್ರದಲ್ಲಿ ಇರುವುದಿಲ್ಲ. ಒಂದು ವಿಷಯ ನಾಲ್ಕೈದು ಬಾರಿಯಾದರೂ ಗಮನ ತಪ್ಪುತ್ತ ಇರುತ್ತದೆ. ಸಣ್ಣ ಮಕ್ಕಳ ಗಮನವಂತೂ ಐದಾರು ಸೆಕೆಂಡುಗಳಿಗಿಂತ ಹೆಚ್ಚು ಹೊತ್ತು ಒಂದೇ ವಸ್ತುವಿನಲ್ಲಿ ಇರುವುದಿಲ್ಲ. ಆ

ವಸ್ತುವಿನ ವಿಭಿನ್ನ ಮಗ್ಗುಲುಗಳನ್ನು ಆಗಾಗ ಮಕ್ಕಳ ಮುಂದೆ ಅನಾವರಣಗೊಳಿಸದ ಹೊರತು. ಅಂತಹ ಸ್ಥಿತಿಯಲ್ಲಿ ಸ್ವಲ್ಪ ಹೊತ್ತಿನ ವರೆಗೆ ಗಮನ ಕೇಂದ್ರೀಕೃತಗೊಳ್ಳುತ್ತದೆ. ಹಾಗೆ ಮಾಡದೆ ಇದ್ದರೆ ಕೆಲವೇ ಸೆಕಂಡುಗಳಲ್ಲಿ ಗಮನ ಬೇರೆ ವಸ್ತುಗಳೆಡೆಗೆ ಹೊರಳುತ್ತದೆ. ನಮಾಝ್‌ನಲ್ಲಿ ಗಮನ ಕೇಂದ್ರೀಕೃತಗೊಳ್ಳಬೇಕಾದರೆ, ಅದರಲ್ಲಿ ಏನೆಲ್ಲ ಪಠಿಸಲಾಗುತ್ತದೋ ಅದರ ಅರ್ಥ, ವ್ಯಾಖ್ಯಾನ ಮತ್ತು ಬೇಡಿಕೆಗಳ ಕಡೆಗೂ ಗಮನ ಹೊರಳಬೇಕು. ಅನ್ಯಥಾ ಮನಸ್ಸಿನಲ್ಲಿ ಎಂತೆಂತಹ ಆಲೋಚನೆಗಳು ಸುಳಿದು ಬರುತ್ತವೆ ಎಂಬುದನ್ನು ಹೇಳಲಾಗದು.

• ಒಬ್ಬ ವ್ಯಕ್ತಿ ಒಂದು ಬಾರಿಗೆ ಒಂದೇ ವಿಷಯದಲ್ಲಿ ಗಮನ ಹರಿಸಬಲ್ಲನು. ಯಾರಾದರೂ ಏಕಕಾಲದಲ್ಲಿ ಹಲವು ವಿಷಯಗಳಲ್ಲಿ ಗಮನ ಹರಿಸಲು ಪ್ರಯತ್ನಿಸುತ್ತಾರೆಂದಾದರೆ, ಅವರು ಬಹುದೊಡ್ಡ ತಪ್ಪನ್ನೆಸಗುತ್ತಿದ್ದಾರೆಂದರ್ಥ. ಹೀಗೆ ಅವರು ಏಕಾಗ್ರತೆಯೊಂದಿಗೆ ಯಾವುದೇ ವಸ್ತುವಿನ ಮೇಲೆ ಸಂಪೂರ್ಣ ಗಮನ ನೀಡಲಾರದು. ಅದೇ ವೇಳೆ, ಹಲವು ವಿಷಯಗಳು ಸೇರಿ ಒಂದು ಬೇರೆಯೇ ವಸ್ತುವಿನ ರೂಪ ತಾಳಿದ್ದರೆ, ಆ ಹಲವು ವಸ್ತುಗಳೂ ಒಟ್ಟಿಗೇ ಗಮನ ಕೇಂದ್ರದಲ್ಲಿ ಒಳಪಡಲು ಸಾಧ್ಯವಿದೆ. ಉದಾ: ತಾರೆಗಳ ಗುಂಪು (ಕೃತಿಕಾ ನಕ್ಷತ್ರ) ಅಥವಾ ವಿವಿಧ ಅಂಗಾಂಗಗಳು ಸೇರಿ ಉಂಟಾಗಿರುವ ಮಾನವ ದೇಹ ಅಥವಾ ಹಲವು ವಸ್ತುಗಳು ಸೇರಿರುವಂತಹ ದೃಶ್ಯಾವಳಿ. ಇವುಗಳ ಮೇಲೆ ಒಂದೇ ನೋಟದಲ್ಲಿ ಗಮನ ಹರಿಸಬಹುದಾಗಿರುತ್ತದೆ. ಆದರೆ, ಅವುಗಳ ಪೈಕಿ ಒಂದು ನಿರ್ದಿಷ್ಟ ಅಂಗದ ಬಗ್ಗೆ ಗಮನ ಹರಿಸಬೇಕಾಗಿ ಬಂದರೆ, ಆ ಸಂದರ್ಭದಲ್ಲಿಯೂ ಇತರ ಅಂಗಾಂಗ/ವಸ್ತುಗಳು ಗಮನದಿಂದ ಬದಿಗೆ ಸರಿಸಲ್ಪಡುತ್ತವೆ.

• ಕೆಲವು ಮಕ್ಕಳು ಓದು-ಬರೆಹ ಅಥವಾ ಕಂಠಪಾಠ ಮಾಡುತ್ತ ಇರುವಾಗ ಏನನ್ನಾದರೂ ತಿನ್ನುತ್ತಲೂ ಇರುತ್ತಾರೆ ಅಥವಾ ಅತ್ತಿತ್ತ ನೋಡುತ್ತಲೋ ಶೈಕ್ಷಣಿಕ ಸಾಮಗ್ರಿಗಳನ್ನು ಅನಗತ್ಯವಾಗಿ ಸ್ಪರ್ಶಿಸುತ್ತಲೋ ಅಥವಾ ಅದರೊಂದಿಗೆ ಆಡುತ್ತಲೋ ಇರುತ್ತಾರೆ. ಇದು ಸರಿಯಲ್ಲ, ಈ ರೀತಿ ಗಮನ ಒಂದು ವಸ್ತುವಿನಲ್ಲಿ ಕೇಂದ್ರೀಕೃತವಾಗಲಾರದು. ಬದಲಾಗಿ ಅದರಿಂದ ಗಮನ ತಪ್ಪಿ ಇತರೆಡೆಗೆ ಹೊರಳುತ್ತದೆ. ಇಂತಹ ಕೃತ್ಯಗಳಿಂದ ಮಕ್ಕಳನ್ನು ತಡೆಯಬೇಕಾಗಿದೆ. ಒಂದು ಸಮಯದಲ್ಲಿ ಒಂದೇ ಕೆಲಸ ಆಗಲು ಸಾಧ್ಯ.

ಗಮನದ ಶರ್ತಗಳು

ಅಧ್ಯಾಪಕರು ಮತ್ತು ಮಾತಾಪಿತರು ಸಾಮಾನ್ಯವಾಗಿ ಮಕ್ಕಳ ಬಗ್ಗೆ ಹೀಗೆ ದೂರುವುದಿದೆ- ಮಕ್ಕಳು ಓದು ಬರೆಹ ಅಥವಾ ಇನ್ನಿತರ ಗಂಭೀರ ಕೆಲಸದಲ್ಲಿ ಸರಿಯಾಗಿ ಗಮನ ಹರಿಸುವುದೇ ಇಲ್ಲ, ಅವರೇನಿದ್ದರೂ ಆಟವಾಡುವುದರಲ್ಲಿ, ಹುಡುಗಾಟಿಕೆಯಲ್ಲಿ, ಹರಟೆ ಹೊಡೆಯುವುದರಲ್ಲಿ ಅಥವಾ ಏನನ್ನಾದರೂ ಮಾಡುತ್ತ-ಹಾಳುಗೆಡಹುತ್ತಾ ಇರುವುದರಲ್ಲಿ ಸಮಯ ಪೋಲು ಮಾಡುತ್ತಾ ಇರುತ್ತಾರೆ. ಶಿಕ್ಷಣದ ಬದಲು ಅವರ

ಗಮನ ಇತರ ನಿಷ್ಪ್ರಯೋಜಕ ಮತ್ತು ನಿರರ್ಥಕ ಕಾರ್ಯಗಳಲ್ಲಿಯೇ ಕೇಂದ್ರಿತವಾಗಿರುತ್ತದೆ ಇತ್ಯಾದಿ. ಅವರ ದೂರುಗಳಲ್ಲಿ ವಾಸ್ತವಿಕಾಂಶ ಇದೆಯೇನೋ ಸರಿ, ಆದರೆ ಅದರಲ್ಲಿ ಕೇವಲ ಮಕ್ಕಳ ತಪ್ಪು ಇರುವುದಲ್ಲ, ಬದಲಾಗಿ ಅವರೂ ಅದರಲ್ಲಿ ಸಮಾನ ತಪ್ಪುಗಾರರು. ಏಕೆಂದರೆ ಮಕ್ಕಳ ಓದು-ಬರೆಹ ಮತ್ತಿತರ ಕಾರ್ಯಗಳಲ್ಲಿ ಗಮನ ಹರಿಸಬೇಕಾದಂತಹ ಶರ್ತಗಳನ್ನು ಅವರು ಪಾಲಿಸಿರುವುದಿಲ್ಲ.

ಒಂದು ವಿಷಯದಲ್ಲಿ ಗಮನ ಸೆಳೆಯಲು ಹಲವು ಶರ್ತಗಳಿರುತ್ತವೆ. ಅವುಗಳಲ್ಲಿ ಕೆಲವು ಬಾಹ್ಯ ಮತ್ತು ಕೆಲವು ಆಂತರಿಕವಾಗಿವೆ.

ಬಾಹ್ಯ ಶರ್ತಗಳು

ಬಾಹ್ಯ ಶರ್ತಗಳು ಈ ಕೆಳಗಿನಂತಿವೆ:

- **ತೀವ್ರತೆ:** ಒಂದು ವಸ್ತುವಿನಲ್ಲಿ ತೀವ್ರತೆ ಹೆಚ್ಚಿದ್ದು ಗಾತ್ರವು ದೊಡ್ಡದಿದ್ದಷ್ಟು ಅದರೆಡೆಗಿನ ಗಮನವೂ ತೀವ್ರವಾಗಿರುತ್ತದೆ. ಉದಾ: ಗಾಢ ಬಣ್ಣ, ಪ್ರಖರ ಬೆಳಕು, ಉಚ್ಚ ಸ್ವರ, ಸುಂದರ ರೂಪ, ದೊಡ್ಡ ಪೋಸ್ಟರ್ ಇತ್ಯಾದಿ. ತದ್ವಿರುದ್ಧವಾಗಿ ಗಾತ್ರದಲ್ಲಿ ಸಣ್ಣದಾದ ಮತ್ತು ತೀವ್ರತೆ ಕಡಿಮೆಯಿರುವ ವಸ್ತುಗಳು ಕಡೆಗಣಿಸಲ್ಪಡುತ್ತವೆ. ಆದ್ದರಿಂದ ಕಪ್ಪುಹಲಗೆಯಲ್ಲಿ ಸ್ಕೆಚ್ ಮಾಡುವಾಗ ದೊಡ್ಡದಾಗಿ ಮತ್ತು ಬರೆಯುವಾಗ ದುಂಡುದುಂಡಾಗಿ ಇರುವಂತೆ ನೋಡಿಕೊಳ್ಳಬೇಕು. ಸಣ್ಣ ಮಕ್ಕಳಿಗೆ ತೋರಿಸುವ ಚಿತ್ರದಲ್ಲಿ ಬಣ್ಣವು ಗಾಢವಾಗಿರಬೇಕು ಮತ್ತು ಸಾಧ್ಯವಾದಷ್ಟರ ಮಟ್ಟಿಗೆ ಬಣ್ಣದ ಬಳಪವನ್ನು ಬಳಸಬೇಕು. ವಿದ್ಯಾರ್ಥಿಗಳ ಮುಂದೆ ಮೆಲುದನಿಯಲ್ಲಿ ಮಾತನಾಡುವುದು ಅಷ್ಟು ಸರಿಯಲ್ಲ, ಬದಲಾಗಿ ಇಡೀ ತರಗತಿಗೆ ಕೇಳಿಸುವಷ್ಟು ಉಚ್ಚ ಸ್ವರದಲ್ಲಿ ಮಾತನಾಡಬೇಕು. ಆದರೆ ಬೊಬ್ಬಿರಿದು ಮಾತನಾಡುವುದು ಎಳ್ಳಷ್ಟೂ ಸರಿಯಲ್ಲ.
- **ಪುನರಾವರ್ತನೆ:** ಒಂದು ಪದ ಅಥವಾ ವಾಕ್ಯವನ್ನು ಆಗಾಗ ಪುನರಾವರ್ತಿಸುವುದರಿಂದ ಬಹಳ ಸುಲಭದಲ್ಲಿ ಗಮನವನ್ನು ಸೆಳೆಯ ಬಹುದಾಗಿದೆ. ಉದಾ: ಓಡಿ..!ಓಡಿ!! ಹಾವು..! ಹಾವು!! ಕಳ್ಳ..! ಕಳ್ಳ!! ನಾಶವಾದ..! ನಾಶವಾದ!! ಇತ್ಯಾದಿ. ಅದೇ ರೀತಿ ಒಂದೇ ಪದ ಆಗಾಗ ಪುನರಾವರ್ತನೆಯಾಗುವಂತಹ ಕಥೆಗಳನ್ನು ಆಲಿಸುವುದರಲ್ಲಿಯೂ ಮಕ್ಕಳಿಗೆ ಬಹಳ ಆಸಕ್ತಿಯಿರುತ್ತದೆ. ಅಂತೆಯೇ ಆಗಾಗ ಪುನರಾವರ್ತಿಸಲ್ಪಡುವ ಜಾಹೀರಾತುಗಳು ಮಕ್ಕಳ ಗಮನವನ್ನು ಸೆಳೆಯುತ್ತವೆ.
- **ಕ್ರಿಯೆ ಅಥವಾ ಬದಲಾವಣೆ:** ಕ್ರಿಯಾಶೀಲವಾಗಿರುವ, ಹರಡುವ, ಬೆಳೆಯುವ ಅಥವಾ ಆಗಾಗ ರೂಪ ಬದಲಾಯಿಸುವಂತಹ ವಸ್ತುಗಳು ಗಮನವನ್ನು ಸುಲಭದಲ್ಲಿ ಸೆಳೆಯುತ್ತವೆ ಮತ್ತು ಬಹಳ ಹೊತ್ತಿನ ತನಕ ಗಮನ ಕೇಂದ್ರೀಕರಿಸಲ್ಪಡುತ್ತವೆ. ಸೈನ್ ಬೋರ್ಡ್‌ಗಳಲ್ಲಿ ಬಲ್ಬುಗಳು ಉರಿಯುತ್ತ ಆರುತ್ತ ಇರುತ್ತವೆ. ಅದನ್ನು ಜನರ ಗಮನ

ಸೆಳೆಯುವ ನಿಟ್ಟಿನಲ್ಲಿಯೇ ಅಳವಡಿಸಲಾಗಿರುತ್ತದೆ. ಸ್ವರದಲ್ಲಿ ಏರಿಳಿತವೂ ಗಮನವನ್ನು ಸೆಳೆಯುತ್ತದೆ. ನಡೆಯುತ್ತಾ ಇರುವಾಗ ಯಾರಾದರೂ ಕಾಲು ಜಾರಿ ಬೀಳುವುದು, ಉರಿಯುತ್ತಿರುವ ದೀಪ ಒಮ್ಮೆಲೇ ಆರಿ ಹೋಗುವುದು, ಬೆಳಕು ಮಂದವಾಗ ತೊಡಗುವುದು ಅಥವಾ ತಿರುಗುತ್ತಿರುವ ಫ್ಯಾನು ಒಮ್ಮೆಲೇ ನಿಂತು ಬಿಡುವುದು. ಸಾಮಾನ್ಯ ಸ್ಥಿತಿಯಲ್ಲಿ ಇಂತಹವುಗಳ ಮೇಲೆ ಗಮನ ಹರಿಯುವುದಿಲ್ಲ, ಆದರೆ ಅವುಗಳ ರೀತಿಯಲ್ಲಿ ಯಾವುದಾದರೂ ಬದಲಾವಣೆ ಕಂಡು ಬಂದ ಕೂಡಲೇ ಗಮನ ಅತ್ತ ಹರಿದು ಬಿಡುತ್ತದೆ.

- **ಹೊಸತನ:** ಯಾವುದಾದರೂ ಹೊಸ ವಸ್ತು ಎದುರಾದರೆ ತಕ್ಷಣವೇ ಗಮನವನ್ನು ಸೆಳೆದು ಬಿಡುತ್ತದೆ. ಪರಿಚಿತ ವಸ್ತುವಾದರೂ ಅನಿರೀಕ್ಷಿತವಾಗಿ ಒಂದು ವೇಳೆ ತನ್ನ ರೂಪ ಬದಲಿಸಿ ಅಥವಾ ಅಸಾಮಾನ್ಯ ರೀತಿಯಲ್ಲಿ ಎದುರಿಗೆ ಬಂದರೆ ಗಮನ ಸೆಳೆಯುತ್ತದೆ. ಉದಾ: ಮಿತ್ರನು ವಿಚಿತ್ರ ವಸ್ತ್ರ ತೊಟ್ಟು ಎದುರಾಗುವುದು. ಆದರೆ ಹೊಸ ವಸ್ತು ಸಂಪೂರ್ಣ ಅಪರಿಚಿತವಾಗಿರುವುದು ಒಳ್ಳೆಯದಲ್ಲ, ಹಿಂದಿನ ಮಾಹಿತಿಗಳಿಂದ ಹೊಸ ವಸ್ತುವಿನ ಪರಿಚಯ ಆಗುವಂತಿರಬೇಕು. ಈ ಪರಿಚಯವು ಪೂರಕವಲ್ಲದಿದ್ದರೆ, ವಿರುದ್ಧವಾಗಿದ್ದರೂ ಸರಿ. ಅನ್ಯಥಾ ಕಡೆಗಣಿಸಲ್ಪಡುವುದು ಅಥವಾ ಮಕ್ಕಳು ಅದರಿಂದ ಭೀತರಾಗುವರು.
- **ಸ್ಪಷ್ಟತೆ:** ಸ್ವಚ್ಛ, ಸುಂದರ ಮತ್ತು ಸ್ಪಷ್ಟವಾಗಿರುವಂತಹ ವಸ್ತು ಹೆಚ್ಚು ಗಮನ ಸೆಳೆಯುತ್ತದೆ. ಅಲ್ಲದೆ ಸುಲಭದಲ್ಲಿ ಅರ್ಥವೂ ಆಗುತ್ತದೆ. ಅಸ್ಪಷ್ಟ ಮತ್ತು ಸಂಶಯಾಸ್ಪದ ವಸ್ತುವಿನೆಡೆಗೆ ಗಮನ ಹೊರಳುವುದೇ ಇಲ್ಲ.
- **ತುಲನೆ:** ಎರಡು ಭಿನ್ನ ವಸ್ತುಗಳನ್ನು ಒಂದಕ್ಕೊಂದು ಎದುರು ಬದುರಾಗಿ ಇರಿಸಿದರೆ ಅದು ಗಮನವನ್ನು ಬೇಗನೇ ಸೆಳೆದು ಬಿಡುತ್ತದೆ. ಎರಡು ವಿರುದ್ಧ ಬಣ್ಣಗಳಲ್ಲಿ ಮಾಡಿದ ಚಿತ್ರ ಅಥವಾ ಚಾರ್ಟ್, ಎರಡು ಪ್ರದೇಶಗಳ ಉತ್ಪನ್ನಗಳು, ಇಬ್ಬರು ವ್ಯಕ್ತಿಗಳ ಆದಾಯಗಳು, ಎರಡು ದೇಶಗಳ ಮರಣ ಪ್ರಮಾಣ ಇತ್ಯಾದಿಗಳಲ್ಲಿ ಸ್ಪಷ್ಟವಾದ ವ್ಯತ್ಯಾಸ ಇದ್ದರೆ, ಅವುಗಳನ್ನು ಒಟ್ಟಿಗೇ ನೀಡುವಾಗ ಸುಲಭದಲ್ಲಿ ಗಮನವನ್ನು ಸೆಳೆದು ಬಿಡುತ್ತದೆ.

ಇವು ಬಾಹ್ಯ ಶರತ್ತುಗಳಾಗಿವೆ. ಇನ್ನು ಆಂತರಿಕ ಶರ್ತಗಳು ಈ ಕೆಳಗಿನಂತಿವೆ.

ಆಂತರಿಕ ಶರ್ತಗಳು

- **ಆಸಕ್ತಿ:** ನಮಗೆ ಸ್ವಾಭಾವಿಕವಾಗಿ ಆಸಕ್ತಿ ಮತ್ತು ಸಾಮ್ಯತೆ ಇರುವಂತಹ ವಸ್ತುಗಳ ಬಗ್ಗೆಯೇ ನಾವು ಸಾಮಾನ್ಯವಾಗಿ ಗಮನ ಹರಿಸುತ್ತೇವೆ. ಒಂದು ಮಗು ಆಹಾರ ಮತ್ತು ಆಟದ ವಸ್ತುಗಳ ಕಡೆಗೆ ಹೆಚ್ಚು ಸುಲಭದಲ್ಲಿ ಗಮನ ಹರಿಸುತ್ತದೆ. ಅದೇವೇಳೆ ಸಂಶೋಧಕನು ಲಿಖಿತ ಕಡತಗಳ ಮತ್ತು ಪತ್ರಗಳ ಕಡೆಗೆ ಗಮನ ಹರಿಸುತ್ತಾನೆ.

- **ಅಭ್ಯಾಸ:** ತರಬೇತಿಯ ಮೂಲಕ ಯಾವ ವಸ್ತುವಿನ ಮೇಲೆ ಗಮನ ಹರಿಸಲು ಅಭ್ಯಾಸ ಮಾಡಿಸಲಾಗುವುದೋ ಕ್ರಮೇಣ ಆ ವಸ್ತುವಿನಲ್ಲಿ ಗಮನ ಕೇಂದ್ರಿತವಾಗ ತೊಡಗುವುದು. ಅದು ಗಮನಾರ್ಹವಾದ ವಸ್ತು ಆಗಿಲ್ಲದಿದ್ದರೂ ಸರಿ. ಓರ್ವ ಇಂಜಿನಿಯರ್ ಯಂತ್ರದಲ್ಲಿ, ಕಾರಿಯು ಕಿರಾಆತ್‌ನಲ್ಲಿ ಮತ್ತು ವೈದ್ಯ ಔಷಧಿಗಳಲ್ಲಿ ಸುಲಭವಾಗಿ ಗಮನ ಕೇಂದ್ರೀಕರಿಸಬಲ್ಲನು. ಏಕೆಂದರೆ ಅವುಗಳ ಮೇಲೆ ಗಮನ ಹರಿಸಲು ಅಭ್ಯಾಸವಾಗಿ ಬಿಟ್ಟಿರುತ್ತದೆ. ಆದ್ದರಿಂದಲೇ ವಿವಿಧ ಇಲಾಖೆಯಲ್ಲಿ ಕೆಲಸ ಮಾಡುವ ಜನರು ಪರಸ್ಪರ ಭೇಟಿಯಾದಾಗಲೆಲ್ಲ ತಮ್ಮ ಇಲಾಖೆಗಳ ಬಗ್ಗೆಯೇ ಚರ್ಚಿಸುತ್ತಾರೆ. ವಸುತಃ ಇಲಾಖೆಗಳ ಕಾರ್ಯವು ಸಾಮಾನ್ಯವಾಗಿ ಶುಷ್ಕವಾಗಿರುತ್ತವೆ.
- **ಸ್ವಾಭಾವಿಕ ಒಲವುಗಳು ಮತ್ತು ಜೈವಿಕ ಬೇಡಿಕೆಗಳು:** ತಮ್ಮ ಸ್ವಾಭಾವಿಕ ಇಚ್ಛೆ ಮತ್ತು ಜೈವಿಕ ಅಗತ್ಯಗಳನ್ನು ಪೂರ್ತೀಕರಿಸಬಲ್ಲಂತಹ ವಸ್ತುಗಳ ಮೇಲೆ ಸುಲಭದಲ್ಲಿ ಮಕ್ಕಳ ಗಮನ ಹರಿಯುತ್ತದೆ. ಉದಾ: ಆಹಾರ ಮತ್ತು ಆಟಿಕೆಗಳು ಇತ್ಯಾದಿ.
- **ಸ್ವಭಾವ/ಮನೋವೃತ್ತಿ:** ಗಮನದ ಮೇಲೆ ಸ್ವಭಾವದ ಪ್ರಭಾವವೂ ಅಧಿಕವಿರುತ್ತದೆ. ಕೆಲವರು ತಮ್ಮ ಸ್ವಭಾವದ ಕಾರಣದಿಂದಲೇ ತಮ್ಮ ಕಲ್ಪನಾ ಲೋಕದಲ್ಲಿ ಮಗ್ನರಾಗಿರುತ್ತಾರೆ. ಇನ್ನು ಕೆಲವರು ಬಾಹ್ಯ ಜಗತ್ತು ಹಾಗೂ ಪರಿಸದಲ್ಲಿ ಹೆಚ್ಚು ಆಸಕ್ತರಾಗಿರುತ್ತಾರೆ ಅವುಗಳ ಮೇಲೆ ಗಮನ ಕೇಂದ್ರೀಕರಿಸುತ್ತಾರೆ. ಅದೇ ರೀತಿ ಅಸಮಾಧಾನವಿದ್ದಾಗ, ಸುತ್ತಮುತ್ತಲ ಸಾಮಾನ್ಯ ಅಸಮತೋಲನಗಳೂ ಗಮನ ಸೆಳೆದು ಬಿಡುತ್ತವೆ ಮತ್ತು ಕೋಪವನ್ನು ಹೆಚ್ಚಿಸಿ ಬಿಡುತ್ತವೆ. ಅದೇ ವೇಳೆ, ಸಂತೋಷದಿಂದ ಇರುವಾಗ, ಇಂತಹ ಸಣ್ಣ ಪುಟ್ಟ ಕೊರತೆಗಳೆಲ್ಲವೂ ಕಡೆಗಣಿಸಲ್ಪಡುತ್ತವೆ. ಅಂತಹವುಗಳ ಮೇಲೆ ಗಮನ ಹರಿಯುವುದೇ ಇಲ್ಲ.
- **ಬೌದ್ಧಿಕ ಶಕ್ತಿ:** ಸಮಾಧಾನ ಮತ್ತು ಪ್ರಫುಲ್ಲತೆಯ ಸಂದರ್ಭದಲ್ಲಿ ಒಂದು ವಸ್ತುವಿನೆಡೆಗೆ ಬಹಳ ಹೊತ್ತಿನ ತನಕ ಗಮನ ಕೇಂದ್ರಿತವಾಗಿರಲು ಸಾಧ್ಯವಿದೆ. ಆದರೆ ದುಃಖ-ದುಮ್ಮಾನದ ಸಂದರ್ಭದಲ್ಲಿ ಬಾಹ್ಯದ ಬದಲು ಆಂತರ್ಯದ ವಸ್ತುಗಳಲ್ಲಿ ಗಮನ ಹರಿಯುತ್ತದೆ. ದಣಿದ ಸ್ಥಿತಿಯಲ್ಲಿ ಆಗಾಗ ಗಮನ ಚಂಚಲವಾಗುತ್ತದೆ ಮತ್ತು ಮನಸ್ಸು ಯಾವುದೇ ಒಂದು ವಸ್ತುವಿನಲ್ಲಿ ಕೇಂದ್ರೀಕರಿಸಲ್ಪಡುವುದಿಲ್ಲ.

ಗಮನದ ವಿಧಗಳು.

ಗಮನದಲ್ಲಿ ಹಲವು ವಿಧಗಳಿವೆ:

1. ಉದ್ದೇಶಿತ ಮತ್ತು ಉದ್ದೇಶ ರಹಿತ ಗಮನ

- ಯಾವುದಾದರೊಂದು ಉದ್ದೇಶದ ಪೂರೈಕೆಗಾಗಿ ಒಂದು ವಿಷಯದಲ್ಲಿ ಗಮನ ಹರಿಸುವುದನ್ನು ಉದ್ದೇಶಿತ ಗಮನ ಎನ್ನುತ್ತೇವೆ. ಉದಾ: ಪರೀಕ್ಷೆಯಲ್ಲಿ ಉತ್ತೀರ್ಣವಾಗಲು,

ಇತರರಿಗಿಂತ ಹೆಚ್ಚು ಅಂಕ ಗಳಿಸಲು, ಅಧ್ಯಾಪಕರ ಸಂತುಷ್ಟಿ ಗಳಿಸಲು ಅಥವಾ ಹೆತ್ತವರ ದೃಷ್ಟಿಯಲ್ಲಿ ಪ್ರೀತಿ ಪಾತ್ರನಾಗಲು ಶಿಕ್ಷಣ ಅಥವಾ ಇತರ ರಂಗದಲ್ಲಿ ಗಮನ ಹರಿಸುವುದು.

- ಇನ್ನು ಯಾವುದಾದರೂ ವಸ್ತು ಸ್ವಯಂ ಆಕರ್ಷಣೀಯವಾಗಿದ್ದರೆ ಮತ್ತು ಅದರೆಡೆಗೆ ಗಮನ ಹರಿಸಲು ಸಂಕಲ್ಪ ಹೊಂದಬೇಕಾದ ಅಗತ್ಯವಿಲ್ಲವೆಂದಾದರೆ ಅದನ್ನು ಉದ್ದೇಶ ರಹಿತ ಗಮನ ಎನ್ನಲಾಗುತ್ತದೆ. ಉದಾ: ತೀಕ್ಷ್ಣ ಶಬ್ದ, ಗಾಢ ಬಣ್ಣ, ಗಲ್ಲು-ಗಲಾಟೆ, ಡೋಲಿನ ಶಬ್ದ, ಚಲಿಸುತ್ತಿರುವ ರೈಲು, ಹಾರುತ್ತಿರುವ ವಿಮಾನ, ಹೊರಡುತ್ತಿರುವ ಜಾತ್ರೆ ಇತ್ಯಾದಿಗಳೆಡೆಗೆ ಗಮನ ಹರಿಯುವುದು.

ಉದ್ದೇಶಿತ ಮತ್ತು ಉದ್ದೇಶರಹಿತ ಗಮನಗಳಲ್ಲಿ ಇನ್ನೂ ಎರಡೆರಡು ವಿಧಗಳಿವೆ. ಅವು ಈ ಕೆಳಗಿನಂತಿವೆ:

- ಗಮನ
  - ಉದ್ದೇಶಿತ
    - ಸ್ಪಷ್ಟ ಉದ್ದೇಶ
    - ಅಸ್ಪಷ್ಟ ಉದ್ದೇಶ
  - ಉದ್ದೇಶ ರಹಿತ
    - ಒತ್ತಾಯಪೂರ್ವಕ
    - ಅನೈಚ್ಛಿಕ

- **ಸ್ಪಷ್ಟ ಉದ್ದೇಶಿತ ಗಮನ:** ಒಂದು ವಸ್ತುವಿನೆಡೆಗೆ ಗಮನ ಹರಿಸಲು ಕೇವಲ ಒಮ್ಮೆ ಸಂಕಲ್ಪ ಮಾಡಿದರೆ ಸಾಕೆಂದಿದ್ದರೆ ಅದು ಸ್ಪಷ್ಟ ಉದ್ದೇಶಿತ ಗಮನ ಎನಿಸುತ್ತದೆ. ಉದಾ: ಸಂಕಲ್ಪ ಮಾಡಿ ಅಧ್ಯಯನದಲ್ಲಿ ತೊಡಗುವುದು ಅಥವಾ ಒಂದು ಕಾರ್ಯದಲ್ಲಿ ಏಕಾಗ್ರತೆಯಿಂದ ತೊಡಗಿಕೊಳ್ಳುವುದು.
- **ಅಸ್ಪಷ್ಟ ಉದ್ದೇಶಿತ ಗಮನ:** ಯಾವುದಾದರೂ ಕಾರಣದಿಂದ ಗಮನ ತಪ್ಪುತ್ತ ಇರುವುದು ಮತ್ತು ಯಾವುದಾದರೊಂದು ವಸ್ತುವಿನ ಮೇಲೆ ಗಮನ ನೆಟ್ಟುಕೊಳ್ಳಲು ಆಗಾಗ ಸಂಕಲ್ಪ ಮಾಡಿಕೊಳ್ಳುವ ಮತ್ತು ಪ್ರಯತ್ನಿಸುವ ಅಗತ್ಯ ತಲೆದೋರಿದರೆ ಅದನ್ನು ಅಸ್ಪಷ್ಟ ಉದ್ದೇಶಿತ ಗಮನ ಎನ್ನಲಾಗುತ್ತದೆ. ಉದಾ: ಅಧ್ಯಯನ ಅಥವಾ ಕೆಲಸದ ವೇಳೆ ತನ್ನೆಡೆಗೆ ಗಮನ ಸೆಳೆಯುವಂತಹ ಹಲವು ವಸ್ತುಗಳು ಸುತ್ತಮುತ್ತ ಇರುವುದು ಅಥವಾ ಯಾವುದಾದರೂ ಆಲೋಚನೆಯು ಆಗಾಗ ಮನದಲ್ಲಿ ಮೂಡಿ, ಗಮನವನ್ನು ತಪ್ಪಿಸುತ್ತ ಇರುವುದು. ಆದರೆ ಆಗಾಗ ಅವುಗಳನ್ನು ಕಡೆಗಣಿಸುತ್ತಾ ಗಮನವನ್ನು ಕೆಲಸದಲ್ಲಿ ಕೇಂದ್ರೀಕರಿಸಲು ಪ್ರಯತ್ನಿಸುವುದು.
- **ಒತ್ತಾಯ ಪೂರ್ವಕ ಅನುದ್ದೇಶಿತ ಗಮನ:** ಇಚ್ಛೆ ಮತ್ತು ಸಂಕಲ್ಪಕ್ಕೆ ವಿರುದ್ಧವಾಗಿ ಒತ್ತಾಯ ಪೂರ್ವಕ ಯಾವುದಾದರೊಂದು ವಸ್ತುವಿನೆಡೆಗೆ ಗಮನ ಹರಿದರೆ ಅದನ್ನು ಒತ್ತಾಯ ಪೂರ್ವಕ ಅನುದ್ದೇಶಿತ ಗಮನ ಎನ್ನಲಾಗುತ್ತದೆ. ಉದಾ: ಹುಡುಗನೊಬ್ಬ

ಉದ್ದೇಶ ಪೂರ್ವಕ ಅಧ್ಯಯನಕ್ಕೆ ಕುಳಿತುಕೊಳ್ಳುತ್ತಾನೆ. ಪರೀಕ್ಷೆ ಹತ್ತಿರವಿದ್ದೆ, ಆತ ಪರಿಶ್ರಮ ಪಟ್ಟು ತಯಾರಿ ನಡೆಸಲು ಬಯಸುತ್ತಾನೆ. ಆದರೆ ಸುತ್ತ ಮುತ್ತ ಗುಲ್ಲು ಗದ್ದಲ ಅಥವಾ ಜನರು ಬರುತ್ತ ಹೋಗುತ್ತ ಇರುವ ಕಾರಣ ಆತನ ಗಮನ ಅನಿವಾರ್ಯವಾಗಿ ಅಧ್ಯಯನ ಬಿಟ್ಟು ಇತರೆಡೆಗೆ ಹೊರಳುತ್ತದೆ.

- **ಅನೈಚ್ಛಿಕ ಅನುದ್ದೇಶಿತ ಗಮನ:** ಸ್ವಾಭಾವಿಕ ಆಸಕ್ತಿ ಅಥವಾ ಹಾರ್ದಿಕ ಸಂಬಂಧದ ಕಾರಣವಾಗಿ ಮನಸ್ಸು ಯಾವುದಾದರೂ ವಸ್ತುವಿನೆಡೆಗೆ ಏಕಾಏಕಿ ಗಮನ ಹರಿದರೆ, ಅದನ್ನು ಅನೈಚ್ಛಿಕ ಅನುದ್ದೇಶಿತ ಗಮನ ಎನ್ನುತ್ತೇವೆ. ಉದಾ: ಅಧ್ಯಯನದ ವೇಳೆ ಆಪ್ತ ಮಿತ್ರನ ಆಗಮನ ಅಥವಾ ಕಣ್ಣ ಮುಂದೆ ಗೆಳೆಯರು ಏನಾದರೂ ಆಸಕ್ತಿದಾಯಕ ಆಟ ಪ್ರಾರಂಭಿಸುವುದು ಇತ್ಯಾದಿ. ಇಂತಹ ಸ್ಥಿತಿಯಲ್ಲಿ ಮಗು ಉತ್ಸಾಹ ಪಟ್ಟು ಅಥವಾ ಸ್ವಾಭಾವಿಕ ಆಸಕ್ತಿಯ ಕಾರಣ, ತನ್ನ ಮುಖ್ಯ ಕಾರ್ಯವನ್ನು ಮರೆತು ತನ್ನಿಂತಾನೇ ಇತರೆಡೆಗೆ ಆಕರ್ಷಿಸಲ್ಪಡುವುದು.

2. ಕೇಂದ್ರೀಕೃತ ಮತ್ತು ವಿಸ್ತೃತ ಗಮನ

ಕೆಲವು ಮಂದಿ ಸ್ವಾಭಾವಿಕವಾಗಿಯೇ ಆಳ ಗಮನವನ್ನು ಹೊಂದಿದವರಾಗಿರುತ್ತಾರೆ ಮತ್ತು ಒಂದೇ ವಿಷಯದ ಮೇಲೆ ಬಹಳ ಹೊತ್ತಿನ ತನಕ ಗಮನ ಕೇಂದ್ರೀಕರಿಸಲು ಶಕ್ತರಾಗಿರುತ್ತಾರೆ. ಇನ್ನು ಕೆಲವರ ಗಮನವು ವಿಸ್ತೃತವಾಗಿರುತ್ತದೆ. ಅಂದರೆ ಸ್ವಲ್ಪ ಸ್ವಲ್ಪ ಹೊತ್ತಿಗೆ ಬೇರೆ ಬೇರೆ ವಸ್ತುಗಳ ಮೇಲೆ ಏಕ ಕಾಲದಲ್ಲಿ ಗಮನ ಹರಿಸಲು ಶಕ್ತರಾಗಿರುತ್ತಾರೆ. ಶೈಕ್ಷಣಿಕ ಕಾರ್ಯಗಳಿಗೆ ಆಳ ಗಮನದ ಅಗತ್ಯವಿರುತ್ತದೆ ಮತ್ತು ಶಿಕ್ಷಕೇತರ ಅಥವಾ ವ್ಯವಸ್ಥಾಪನಾ ಕಾರ್ಯಗಳಿಗೆ ವಿಸ್ತೃತ ಗಮನದ ಅಗತ್ಯ ಇರುತ್ತದೆ. ಹುಡುಗಿಯರು ವಿಸ್ತೃತ ಗಮನ ಹೊಂದಿರುತ್ತಾರೆ. ಹಾಗಾಗಿಯೇ ಅವರು ಹೆಚ್ಚಾಗಿ ಗಣಿತದಲ್ಲಿ ಹಿಂದೆ ಬೀಳುತ್ತಾರೆ. ಏಕೆಂದರೆ ಅದಕ್ಕೆ ಆಳ, ಕೇಂದ್ರೀಕೃತ ಗಮನದ ಅಗತ್ಯವಿರುತ್ತದೆ.

3. ಚಂಚಲ ಮತ್ತು ಸ್ಥಿರ ಗಮನ

ಸಣ್ಣ ಮಕ್ಕಳ ಗಮನ ಆಗಾಗ ತಪ್ಪುತ್ತಿರುತ್ತದೆ. ಅವರು ಯಾವುದೇ ಒಂದು ವಸ್ತುವಿನಲ್ಲಿ ಬಹಳ ಹೊತ್ತು ಗಮನ ಕೇಂದ್ರೀಕರಿಸಲಾರರು. ಅದೇ ವೇಳೆ ಹಿರಿಯರ ಗಮನ ಸಾಮಾನ್ಯವಾಗಿ ಸ್ಥಿರವಾಗಿರುತ್ತದೆ ಮತ್ತು ಅವರು ಒಂದೇ ವಸ್ತುವಿನ ಮೇಲೆ ಬಹಳ ಹೊತ್ತು ಗಮನ ಕೇಂದ್ರೀಕರಿಸಬಲ್ಲರು. ಅನಾರೋಗ್ಯ ಅಥವಾ ದಣಿವಿನ ಕಾರಣದಿಂದಲೂ ಗಮನ ತಪ್ಪುತ್ತಾ ಇರುತ್ತದೆ.

ಗಮನ ಮತ್ತು ಆಸಕ್ತಿ

ಗಮನ ಮತ್ತು ಆಸಕ್ತಿಯ ಮಧ್ಯೆ ಗಾಢ ಸಂಬಂಧವಿರುತ್ತದೆ. ಪ್ರತಿಯೋರ್ವ

ವ್ಯಕ್ತಿಯೂ ತನಗೆ ಆಸಕ್ತಿ ಇರುವ ವಸ್ತುಗಳೆಡೆಗೇ ಹೆಚ್ಚು ಗಮನವೀಯುತ್ತಾನೆ. ನಮಗೆಲ್ಲರಿಗೂ ತಿಳಿದಿರುವಂತೆ ಮಕ್ಕಳು...

- ಪರಿಶ್ರಮದಿಂದ ದೂರ ಓಡುತ್ತಾರೆ ಮತ್ತು ಏಕಾಗ್ರತೆಯಿಂದ ಕೆಲಸ ಮಾಡಲು ಇಷ್ಟ ಪಡುವವರಲ್ಲ.
- ರಜೆಗಳನ್ನು ಅಪಾರವಾಗಿ ನಿರೀಕ್ಷಿಸುತ್ತಾರೆ. ವಿಹಾರ ಮತ್ತು ಆಟದ ಯೋಜನೆಗಳನ್ನು ಹಾಕುತ್ತಾರೆ.
- ಸ್ವಾತಂತ್ರ್ಯವನ್ನು ಇಷ್ಟ ಪಡುವವರಾಗಿದ್ದಾರೆ. ಯಾವುದೇ ಒತ್ತಡ ಮತ್ತು ಹಸ್ತಕ್ಷೇಪವನ್ನು ಇಷ್ಟ ಪಡುವುದಿಲ್ಲ ಮತ್ತು ಯಾವುದೇ ನಿರ್ಬಂಧವನ್ನು ಸಹಿಸಲಾರರು.
- ಗಮನ ಮತ್ತು ತನ್ಮಯತೆಯಿಂದ ಬಹಳ ದೂರ ಓಡುತ್ತಾರೆ.
- ವಸ್ತುಗಳನ್ನು ಹಾಳುಗೆಡಹುವುದು, ಗುಲ್ಲು-ಗಲಾಟೆ, ಗದ್ದಲವುಂಟು ಮಾಡುವುದು, ಆಟವಾಡುವುದು ಎಲ್ಲವೂ ಅವರಿಗೆ ಬಹಳ ಪ್ರಿಯ.
- ಇಂತಹ ಸೃಷ್ಟಿಗಳನ್ನು ಓದು-ಬರೆಹ ಅಥವಾ ಯಾವುದಾದರೂ ಗಂಭೀರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಸುಲಭದ ಕೆಲಸವಲ್ಲ ಎಂಬುದು ಸ್ಪಷ್ಟವೇ. ಆ ಕಾರ್ಯಗಳನ್ನು ಮಕ್ಕಳ ಪಾಲಿಗೆ ಆಸಕ್ತಿದಾಯಕವನ್ನಾಗಿ ಮಾರ್ಪಡಿಸಿದಾಗಲಷ್ಟೇ ಅವುಗಳಲ್ಲಿ ಗಮನ ಹರಿಸಬಲ್ಲರು.

ಪಠ್ಯವನ್ನು ಆಸಕ್ತಿದಾಯಕ ಗೊಳಿಸಲು ಈ ಕೆಳಗಿನ ಉಪಾಯಗಳು ಪ್ರಯೋಜನಕ್ಕೆ ಬರಬಹುದು:

- ಮೊತ್ತ ಮೊದಲು ಪಠ್ಯದ ಉದ್ದೇಶವನ್ನು ಮಕ್ಕಳಿಗೆ ಚೆನ್ನಾಗಿ ಮನವರಿಕೆ ಮಾಡಿಸಿ ಕೊಡಬೇಕು. ಎಲ್ಲಿಯ ವರೆಗೆಂದರೆ, ಅವರು ಸ್ವಯಂ ಅದರ ಅಗತ್ಯ ಮತ್ತು ಪ್ರಯೋಜನವನ್ನು ತಿಳಿದುಕೊಳ್ಳುವಂತಾಗಬೇಕು.
- ಪಠ್ಯವನ್ನು ಮಕ್ಕಳ ಯಾವುದಾದರೂ ಮೂಲಭೂತ ಆಗ್ರಹ, ಸ್ವಾಭಾವಿಕ ಒಲವು, ಪ್ರಾಕೃತಿಕ ಬೇಡಿಕೆ ಅಥವಾ ವೈಯಕ್ತಿಕ ಉದ್ದೇಶವು ಪೂರ್ತಿಯಾಗುವ ರೀತಿಯಲ್ಲಿ ಅವರ ಮುಂದಿರಿಸಬೇಕು. ಉದಾಹರಣೆಗೆ, ಆಟದೊಂದಿಗೆ ಶಿಕ್ಷಣ ನೀಡುವುದು ಅಥವಾ ಕುತೂಹಲ ಕೆರಳಿಸಿ, ಆ ಕುತೂಹಲವನ್ನು ತಣಿಸುವ ವ್ಯವಸ್ಥೆ ಮಾಡುವುದು. ಒಂದಿಷ್ಟು ಅವಕಾಶವನ್ನು ನಿರ್ಮಾಣ-ಸಂಹಾರಕ್ಕೂ ನೀಡಬೇಕು. ಗೆಳೆಯರ ಗೌರವ, ಹಿರಿಯರ ಪ್ರೋತ್ಸಾಹ, ಅಧ್ಯಾಪಕರ ಸಂಪ್ರೀತಿ ಇತ್ಯಾದಿ ಗಳಿಸುವ ವಿಧಾನವನ್ನು ತಿಳಿಸಿ ಕೊಡಬೇಕು.
- ಸಾಧ್ಯವಾದರೆ ಪಾಠದ ವಿಷಯವನ್ನು ಕಥೆ ಅಥವಾ ಸಂವಾದದ ರೂಪದಲ್ಲಿ ನೀಡಬೇಕು.

- ಮೂಲಭೂತ ವಿಷಯ ಮತ್ತು ಪ್ರತ್ಯೇಕ ಕಲ್ಪನೆಗಳನ್ನು ಮಾದರಿ ವಸ್ತು, ಆಸಕ್ತಿದಾಯಕ ಉದಾಹರಣೆ, ನಕಾಶೆ ಮತ್ತು ಚಾರ್ಟು ಇತ್ಯಾದಿಗಳ ಸಹಾಯದಿಂದ ತಿಳಿಸಿ ಕೊಡಬೇಕು.
- ವಿವರಣೆಯ ವಸ್ತುಗಳು, ಗ್ಲೋಬ್, ಚಾರ್ಟ್, ನಕಾಶೆ, ಚಿತ್ರ ಮಾದರಿಗಳು, ಬಣ್ಣದ ಬಳಪದಿಂದ ಬರೆಯುವುದು ಇತ್ಯಾದಿಗಳ ಮೂಲಕ ಪಾಠವನ್ನು ವಿಶದ ಪಡಿಸಬೇಕು.
- ಮಕ್ಕಳ ವ್ಯಕ್ತಿತ್ವ ಮತ್ತು ಅವರ ಪ್ರಯತ್ನಗಳಿಗೆ ಪ್ರಾಮುಖ್ಯತೆ ನೀಡಬೇಕು. ಪಾಠವನ್ನು ಮುಂದುವರೆಸಲು ಅವರಿಂದಲೇ ಸಹಕಾರ ಪಡೆಯಬೇಕು, ಸಲಹೆ ಕೇಳಬೇಕು. ಅದರಲ್ಲಿ ವೈಫಲ್ಯಕ್ಕೆ ಅವಕಾಶವನ್ನು ನೀಡಬಾರದು.
- ಒಂದು ಹಂತದ ವರೆಗೆ ಸ್ಪರ್ಧೆಯ ಅವಕಾಶವನ್ನು ನೀಡಬೇಕು.
- ಮಕ್ಕಳಿಗೆ ತಮ್ಮ ಪ್ರಯತ್ನಗಳ ಸತ್ಪರಿಣಾಮವನ್ನು ಸ್ವತಃ ನೋಡುವ ವ್ಯವಸ್ಥೆ ಮಾಡಬೇಕು.
- ಪ್ರಯತ್ನಗಳಲ್ಲಿ ಯಶಸ್ವಿಯಾದಾಗ ಮನಬಿಚ್ಚಿ ಹೊಗಳಬೇಕು ಮತ್ತು ಪ್ರೋತ್ಸಾಹಿಸಬೇಕು.
- ಪಾಠವನ್ನು ಮಕ್ಕಳ ದೈನಂದಿನ ಜೀವನಕ್ಕೆ ಸಾಮ್ಯಗೊಳಿಸಿ ನೀಡಬೇಕು. ಅದಕ್ಕೆ ಸಂಬಂಧಿಸಿದಂತೆ ಅವರ ಸ್ವಾಭಾವಿಕ ಬೇಡಿಕೆಯು ಪೂರ್ತಿಯಾಗುವಂತಹ ಕೆಲಸಗಳನ್ನು ನೀಡಬೇಕು. ಉದಾ: ಅಂಚೆಚೀಟಿ, ಎಲೆ, ಬೀಜ ಇತ್ಯಾದಿ ಸಂಗ್ರಹಿಸುವುದು; ಯಾವುದಾದರೂ ಮಾದರಿಯನ್ನು ತಯಾರಿಸುವುದು ಇತ್ಯಾದಿ.
- ಬೆಳಗ್ಗೆ ಮಕ್ಕಳು ಶಾಲೆಗೆ ಬರುವ ಸಮಯದಲ್ಲಿ, ಅವರ ಗಮನವು ಒಂದೇ ಕಡೆ ಇರುವುದಿಲ್ಲ. ಆದ್ದರಿಂದ ಮೊದಲ ಪೀರಿಯಡ್‌ನಲ್ಲಿ ಯಾವುದಾದರೂ ಸುಲಭದ ಅಥವಾ ಸ್ವಾಭಾವಿಕ ಆಸಕ್ತಿಯಿರುವಂತಹ ಪಾಠಗಳನ್ನು ಇರಿಸಬೇಕು.
- ಕೊಂಚ ಹೊತ್ತಿನ ಬಳಿಕ ಮಕ್ಕಳ ಗಮನವು ಪ್ರಬಲವಾಗ ತೊಡಗುತ್ತದೆ. ಕ್ರಮೇಣ ಅದು ಒಂದು ವಿಷಯದಲ್ಲಿ ಕೇಂದ್ರೀಕೃತಗೊಳ್ಳುವಷ್ಟು ಗಟ್ಟಿಗೊಳ್ಳುತ್ತದೆ. ಹಾಗಾಗಿ ನಂತರದ ಪೀರಿಯಡ್‌ಗಳಲ್ಲಿ ಹೆಚ್ಚು ಗಮನ ಅಗತ್ಯವಿರುವ ಮತ್ತು ಕ್ಲಿಷ್ಟಕರ ಪಠ್ಯಗಳನ್ನು ಇರಿಸಬೇಕು. ಉದಾ: ಗಣಿತ, ಅರಬಿ ಮತ್ತು ಮಾತೃಭಾಷೆ ಇತ್ಯಾದಿ.
- ಸಣ್ಣ ಮಕ್ಕಳ ಗಮನವು ಬಹಳ ಬೇಗನೇ ತಪ್ಪುತ್ತ ಇರುತ್ತದೆ. ಅವರು ಬಹಳ ಹೊತ್ತಿನ ತನಕ ಯಾವುದೇ ವಸ್ತುವಿನಲ್ಲಿ ಗಮನ ಕೇಂದ್ರೀಕರಿಸಲಾರರು. ಆದ್ದರಿಂದ ಅವರಿಗೆ ಸಣ್ಣ ಸಣ್ಣ ಪೀರಿಯಡ್‌ಗಳನ್ನು ಇರಿಸಬೇಕು. ಹಾಗೆಯೇ ಬಹಳ ಹೊತ್ತು ಗಮನ ಕೇಂದ್ರೀಕರಿಸಲು ಅಭ್ಯಾಸ ಮಾಡಬೇಕಾದರೆ ವಿಷಯವನ್ನು ಬದಲಿಸುತ್ತ ಮತ್ತು ಆಕರ್ಷಕಗೊಳಿಸುತ್ತ ಕಲಿಸಬೇಕು. ಈ ಮೂಲಕ ಮಕ್ಕಳ ಗಮನ ಸೆಳೆಯ ಬಹುದಾಗಿದೆ.
- ಮಕ್ಕಳ ಗಮನ ಸೆಳೆಯಲು ಮತ್ತು ಪಾಠದಲ್ಲಿ ಅವರ ಆಸಕ್ತಿಯನ್ನು ಮುಂದುವರಿಸುವಂತೆ ಮಾಡಲು ಅಧ್ಯಾಪಕನೂ ತನ್ನ ಕೆಲಸದಲ್ಲಿ ಅಸಾಮಾನ್ಯ

ಗಮನ ಹರಿಸಬೇಕು ಹಾಗೂ ಪಾಠದಲ್ಲಿ ಸಂಪೂರ್ಣ ಗಮನ ಮತ್ತು ಆಸಕ್ತಿಯನ್ನು ಪ್ರಕಟಿಸಬೇಕು.

- ಮಕ್ಕಳಿಗೆ ಒಂದು ಪಾಠವು ಇನ್ನೊಂದು ಪಾಠದ ಮುಕ್ತಾಯ ಅಥವಾ ಆರಂಭವೆಂಬಂತೆ ತೋರುವ ರೀತಿಯಲ್ಲಿ ಪಠ್ಯದ ವಿವಿಧ ಅಧ್ಯಾಯಗಳನ್ನು ಪರಸ್ಪರ ಜೋಡಿಸಬೇಕು. ಹೀಗೆ ಸ್ವಾಭಾವಿಕವಾಗಿ ಮಕ್ಕಳ ಗಮನವು ಮುಂದಿನ ಪಾಠದ ಕಡೆಗೆ ಹೊರಳುತ್ತದೆ. ಹೀಗೆ ಒಂದು ಪಾಠ ಮುಗಿಯುತ್ತಲೇ ಮಕ್ಕಳ ಗಮನ ಇತರೆಡೆಗೆ ಹೊರಳಲು ಎಂದಿಗೂ ಅವಕಾಶ ನೀಡಬಾರದು.
- ಅದೇ ರೀತಿ ವಿವಿಧ ಪಠ್ಯಗಳ ನಡುವೆಯೂ ಕೊಂಡಿ ಜೋಡಿಸಿ ಕಲಿಸಬೇಕು. ಈ ಮೂಲಕ ಸ್ವಾಭಾವಿಕವಾಗಿಯೇ ಮಕ್ಕಳ ಗಮನವು ಒಂದು ಪಠ್ಯದಿಂದ ಇನ್ನೊಂದು ಪಠ್ಯಕ್ಕೆ ಹೊರಳುತ್ತದೆ ಹಾಗೂ ಒಂದು ಪಠ್ಯ ಮುಗಿದ ಕೂಡಲೇ ಅವರ ಗಮನ ಇತರೆಡೆಗೆ ಹೊರಳುವುದು ತಪ್ಪುತ್ತದೆ.
- ಪ್ರತಿಯೊಂದು ಹೊಸ ವಿಷಯವನ್ನು ಹಿಂದಿನ ವಿಷಯಕ್ಕೆ ಜೋಡಿಸಿ ಹೇಳಬೇಕು. ಈ ಮೂಲಕ ಪ್ರತಿಯೊಂದು ಪಾಠವು ಮಕ್ಕಳಿಗೆ ಪರಿಚಿತವೂ ಅರ್ಥಪೂರ್ಣವೂ ಆಗಿ ತೋರುತ್ತದೆ.
- ಪ್ರಾಥಮಿಕ ತರಗತಿಗಳಲ್ಲಿ ಮಕ್ಕಳು ಕೇವಲ ಅವರ ಸ್ವಾಭಾವಿಕ ಆಸಕ್ತಿ ಇರುವ ಅಥವಾ ಸ್ವಯಂ ಗಮನ ಸೆಳೆಯುವಂತಹ ವಿಷಯಗಳಲ್ಲಿಯೇ ಹೆಚ್ಚು ಗಮನವೀಯುತ್ತಾರೆ. ಉದಾ: ಆಟ, ಆರ್ಟ್-ಕ್ರಾಫ್ಟ್, ಗಾಢ ಬಣ್ಣ ತೀಕ್ಷ್ಣ ಸ್ವರ, ಚಲನಶೀಲ ಮತ್ತು ಹರಡುವ ವಸ್ತುಗಳು ಇತ್ಯಾದಿ. ಈ ವಸ್ತುಗಳ ಮುಖಾಂತರ ಶಿಕ್ಷಣ ನೀಡಿದರೆ, ಸಣ್ಣ ಮಕ್ಕಳ ಗಮನದ ಸಮಸ್ಯೆ ಪರಿಹಾರವಾಗುತ್ತದೆ. ಉದಾ: ಆಟದೊಂದಿಗೆ ಶಿಕ್ಷಣ (ನಲಿ-ಕಲಿ), ಪಾಠ ಮಾಡುವಾಗ ಬಣ್ಣದ ಚಿತ್ರಗಳನ್ನು ಬಳಸುವುದು ಇತ್ಯಾದಿ. ಆದರೆ ಕ್ರಮೇಣ ಮಕ್ಕಳಲ್ಲಿ ಸ್ವಯಂ ಉದ್ದೇಶಿತ ಗಮನದ ಅಭ್ಯಾಸ ಮಾಡಿಸಬೇಕು. ಏಕೆಂದರೆ ಜೀವನದಲ್ಲಿ ಸ್ವಯಂ ಆಸಕ್ತಿದಾಯವಲ್ಲದ ಹಲವಾರು ಕಾರ್ಯಗಳನ್ನು ಎಸಗಬೇಕಾಗಿ ಬರುತ್ತದೆ. ಈ ಮೂಲಕ ಅವರ ಮಟ್ಟಿಗೆ ಪ್ರಯೋಜನಕಾರಿ ಮತ್ತು ಅಗತ್ಯದ, ಆದರೆ ಸ್ವಾಭಾವಿಕವಾಗಿ ಆಸಕ್ತಿ ಕೆರಳಿಸುವಂತಹ, ಕೆಲಸಗಳಲ್ಲಿ ಗಮನ ಹರಿಸುವಂತಾಗಬೇಕು.
- ಪಾಠ ಪ್ರವಚನವನ್ನು ಪ್ರಶಾಂತ ವಾತಾವರಣದಲ್ಲಿ ಮತ್ತು ಪರಿಶುದ್ಧ ಪರಿಸರದಲ್ಲಿ ನೀಡಬೇಕು. ಇದರಿಂದ ಮಕ್ಕಳು ಸುಲಭದಲ್ಲಿ ಗಮನ ಕೇಂದ್ರೀಕರಿಸುತ್ತಾರೆ. ಪಠ್ಯಕ್ಕೆ ಸಂಬಂಧ ಪಡದ ವಸ್ತುಗಳನ್ನು ಪಾಟಿಚೀಲದೊಳಗೆ ಇರಿಸುವಂತೆ ಹೇಳಬೇಕು. ಕಪ್ಪುಹಲಗೆಯಲ್ಲಿ ಸಂಬಂಧಪಡದ ಬರವಣಿಗೆ ಇದ್ದರೆ ಅಳಿಸಿ ಹಾಕಬೇಕು. ಸಂಬಂಧ ಪಡದ ಚಾರ್ಟ್, ಚಿತ್ರಗಳಿದ್ದರೆ ಮಕ್ಕಳ ದೃಷ್ಟಿಯಿಂದ ದೂರ ಮಾಡಬೇಕು.

- ಮಕ್ಕಳ ಗಮನ ಸೆಳೆಯಲಿಕ್ಕೆ ಆಗಾಗ ಹೆದರಿಸುವುದು, ಗದರಿಸುವುದು, ಮೇಜಿಗೆ ಗುದ್ದುವುದು, ಬೆತ್ತ ತೋರಿಸುವುದು, ಬೊಬ್ಬೆ ಹೊಡೆಯುವುದು ಉಚಿತವಲ್ಲ. ಹೀಗೆ ಮಾಡುವುದರಿಂದ ಮಕ್ಕಳು ಸ್ವಲ್ಪ ಹೊತ್ತಿಗೆ ಗಮನ ನೀಡಬಹುದು. ಅದರಲ್ಲಿ ನಿರಂತರತೆ ಇರುವುದಿಲ್ಲ. ಕೆಲವೊಮ್ಮೆ ಆ ರೀತಿ ಮಾಡುವುದರಿಂದ, ಮೂಲ ವಸ್ತುವಿನಲ್ಲಿ ಗಮನವನ್ನು ಹರಿಸಲಾಗದಂತಹ ಭಾವನೆಗಳು ಬೆಳೆದು ಬರುತ್ತವೆ. ಕೆಲವು ದಿನಗಳ ಬಳಿಕ ಈ ರೀತಿಯ ಪ್ರಯತ್ನಗಳು ಪರಿಣಾಮ ಕಳಕೊಳ್ಳುತ್ತವೆ. ನಂತರ ಅದರಲ್ಲಿ ಯಾವುದೇ ಪ್ರಯೋಜನ ಇರುವುದಿಲ್ಲ.
- ತರಗತಿಯಲ್ಲಿ ನಿರಂತರ ದೃಷ್ಟಿಯಿರಿಸಬೇಕು. ಕಪ್ಪು ಹಲಗೆಯ ಮೇಲೆ ಬರೆಯುವಾಗಲೂ ತರಗತಿಗೆ ಬೆನ್ನು ಹಾಕಬಾರದು. ಬದಲಾಗಿ ಒಂದು ಕಡೆಯಿಂದ ಬರೆಯುತ್ತ, ಆಗಾಗ ತರಗತಿಯ ಕಡೆಗೆ ನೋಡುತ್ತ ಇರಬೇಕು. ಗಮನ ಹರಿಸದಿರುವ ವಿದ್ಯಾರ್ಥಿಯಲ್ಲಿ ಅನಿರೀಕ್ಷಿತವಾಗಿ ಪ್ರಶ್ನೆ ಕೇಳಬೇಕು. ಈ ಪ್ರಕಾರ ತರಗತಿಯಲ್ಲಿ ಎಲ್ಲ ಮಕ್ಕಳೂ ಪಾಠದಲ್ಲಿ ಗಮನ ಹರಿಸುವಂತಾಗುವುದು.
- ಮಕ್ಕಳ ಗಮನದ ಪರಿಧಿ ಬಹಳ ಸಣ್ಣದಿರುತ್ತದೆ. ಒಂದು ಸಮಯದಲ್ಲಿ ಕೆಲವೇ ವಸ್ತುಗಳು ಅವರ ಮನಃಪಟಲದಲ್ಲಿ ಅಚ್ಚೊತ್ತ ಬಲ್ಲದು. ಆದ್ದರಿಂದ ಕಲಿಸುವ ವೇಳೆ ಸಣ್ಣ ಸಣ್ಣ ಪದ-ವಾಕ್ಯಗಳನ್ನು ಬಳಸಬೇಕು. ತಡೆತಡೆದು ಹೇಳಬೇಕು. ಡಿಕ್ಟೇಶನ್ ನೀಡುವಾಗ ಹ್ರಸ್ವಪದಗಳನ್ನು ಹೆಚ್ಚಾಗಿ ಬಳಸಬೇಕು.

◆ ◆ ◆

ಅಧ್ಯಾಯ-24

ಸ್ಮರಣ ಶಕ್ತಿ

ಸ್ಮರಣೆ ಅಥವಾ ಜ್ಞಾಪಕ ಶಕ್ತಿ ಅನ್ನೋದು ನಮ್ಮ ಮನಸ್ಸಿನ ಒಂದು ವಿಶೇಷವಾದ ಸಾಮರ್ಥ್ಯವಾಗಿದೆ. ಆಲಿಸಿದ ಮಾತು, ವೀಕ್ಷಿಸಿದ ಘಟನೆ, ಅನುಭವಗಳು ಮತ್ತು ಮುಖಚಹರೆ ಇತ್ಯಾದಿಗಳನ್ನು ಅದರ ಮೂಲಕ ನಾವು ಮನಸ್ಸಿನಲ್ಲಿ ತುಂಬಿಸಿಕೊಳ್ಳುತ್ತೇವೆ. ಆ ಬಳಿಕ ಈ ಹಿಂದಿನ ಅವಸ್ಥೆಯ ಆಧಾರದಲ್ಲಿ ಅವುಗಳನ್ನು ನೆನಪಿಸುತ್ತೇವೆ, ಗುರುತಿಸಿಕೊಳ್ಳುತ್ತೇವೆ.

ಸ್ಮರಣ ಶಕ್ತಿಯ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ಪ್ರತ್ಯೇಕವಾಗಿ ವಿವರಿಸುವ ಅಗತ್ಯವಿಲ್ಲ, ಅದರ ಹೊರತು ನಾವು ಒಂದು ಹೆಜ್ಜೆಯೂ ಮುಂದಿರಿಸಲಾರೆವು. ಕೊಂಚ ಯೋಚಿಸಿ ನೋಡಿ. ಒಂದು ವೇಳೆ ನಾವು ನಮ್ಮ ಹಿಂದಿನ ಅನುಭವಗಳನ್ನೆಲ್ಲ ಮರೆಯುತ್ತಾ ಸಾಗಿದರೆ, ನಮ್ಮ ವಾಗ್ದಾನ, ಸಾಲ ಮತ್ತು ವಹಿವಾಟುಗಳೆಲ್ಲ ನೆನಪೇ ಆಗದಿದ್ದರೆ... ವಿವಿಧ ಸ್ಥಳಗಳು, ಅಲ್ಲಿಗೆ ಹೋಗಿ ಬರುವ ದಾರಿ, ಪರಿಚಿತ ಮುಖಗಳು, ಜನರೊಂದಿಗಿನ ಸಂಬಂಧಗಳು ಹಾಗೂ ಅವರ ಮಾತು-ರೂಪಗಳು ಒಂದು ವೇಳೆ ನಮ್ಮ ಸ್ಮರಣೆಯಿಂದ ದೂರವಾದರೆ... ಅಥವಾ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ(ಸ) ಮಾರ್ಗದರ್ಶನಗಳು ನಮಗೆ ನೆನಪೇ ಆಗದಿದ್ದರೆ... ಯೋಚಿಸಿ! ಜೀವನ ಎಷ್ಟೊಂದು ದುರ್ಭರವಾಗುತ್ತಿತ್ತು!! ಸ್ಮರಣ ಶಕ್ತಿಯ ಕೊರತೆಯಿಂದ ನಮಗೆ ಏನೆಲ್ಲ ಕಷ್ಟಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂಬುದನ್ನು ಪ್ರತಿಯೋರ್ವರೂ ಸುಲಭವಾಗಿ ಅಂದಾಜಿಸಬಲ್ಲರು.

ಸ್ಮರಣೆ ಅನ್ನುವುದು ಒಂದು ಸ್ವಾಭಾವಿಕ ಶಕ್ತಿಯಾಗಿದೆ. ಅದು ನಮ್ಮ ಮೆದುಳಿನ ಸ್ವಾಭಾವಿಕ ರಚನೆಯನ್ನು ಆಧರಿಸಿರುತ್ತದೆ. ಒಂದು ವೇಳೆ ಸ್ಮರಣ ಶಕ್ತಿಯಲ್ಲಿ ಹೆಚ್ಚು ಕಮ್ಮಿಯಾದರೆ ಅದರಲ್ಲಿ ಏನೂ ಸಮಸ್ಯೆ ಇಲ್ಲ, ಅಲ್ಲಾಹನು ಎಷ್ಟನ್ನು ದಯಪಾಲಿಸಿರುವನೋ ಅಷ್ಟೇ ಪ್ರಮಾಣದಲ್ಲಿ ಅದಿರುತ್ತದೆ. ಆದರೆ ಅದರಿಂದ ಕೆಲಸವನ್ನು ಪಡೆಯುವ ಪ್ರತಿಭೆ ಇದ್ದರೆ ಸಾಮಾನ್ಯ ಸ್ಮರಣಶಕ್ತಿಯುಳ್ಳವನೂ ಇನ್‌ಶಾ ಅಲ್ಲಾಹ್, ತನ್ನ ಕೆಲಸವನ್ನು ಚೆನ್ನಾಗಿ

ಮಾಡಬಲ್ಲನು. ಆದ್ದರಿಂದ ಈ ಶಕ್ತಿಯ ಮೂಲಕ ಸೂಕ್ತ ಕೆಲಸವನ್ನು ಪಡೆಯುವ ವಿಧಾನವನ್ನು ಪ್ರತಿಯೋರ್ವನೂ ತಿಳಿದುಕೊಳ್ಳುವುದು ಅಗತ್ಯ.

ಸ್ಮರಣ ಶಕ್ತಿಯಲ್ಲಿ ಈ ಕೆಳಗಿನ ಅಂಶಗಳಿದ್ದರೆ, ಅದು ಉತ್ತಮ ಸ್ಮರಣ ಶಕ್ತಿಯಾಗಿದೆ ಎಂದರ್ಥ:

- ಬೇಗ ಬಾಯಿಪಾಠವಾಗುವುದು.
- ಬಹಳ ಹೊತ್ತಿನ ತನಕ ನೆನಪಿರುವುದು.
- ಅಗತ್ಯದ ವೇಳೆ ನೆನಪಾಗುವುದು.
- ನಿರರ್ಥಕ ವಿಷಯಗಳನ್ನು ಮರೆಯುವುದು.

ಒಂದು ವೇಳೆ ನಾವು ಈ ಶಕ್ತಿಯಿಂದ ಸರಿಯಾಗಿ ಕೆಲಸ ಪಡೆಯಲು ಕಲಿತೆವೆಂದರೆ ಸ್ಮರಣ ಶಕ್ತಿಯಲ್ಲಿ ಈ ಗುಣಗಳು ಬೆಳೆಯಲು ಸಾಧ್ಯವಿದೆ. ಈ ವಿಷಯವಾಗಿ ಉಪಾಯಗಳ ಬಗ್ಗೆ ಚಿಂತಿಸುವುದಕ್ಕೆ ಮುಂಚೆ ಸ್ಮರಣ ಶಕ್ತಿಯ ಉಪಯೋಗದ ಬಗ್ಗೆ ಅಗತ್ಯದ ವಿಷಯಗಳನ್ನು ಅರಿಯಬೇಕಾಗಿದೆ.

ಸ್ಮರಣ ಶಕ್ತಿಯ ಅಂಗಗಳು

ಸ್ಮರಣ ಶಕ್ತಿಯ ಪ್ರತಿಯೊಂದು ಕ್ರಿಯೆಯಲ್ಲೂ ಈ ಕೆಳಗಿನ ಅಂಗಗಳಿರುತ್ತವೆ:

1. ಶೇಖರಣೆ

ಅಂದರೆ ಒಂದು ಘಟನೆ, ಮಾತು ಅಥವಾ ವಸ್ತು ಮನಸ್ಸಿನಲ್ಲಿ ಸೇರಿಕೊಳ್ಳುವುದು. ಯಾವ ವಿಷಯ ಮನಸ್ಸಿನಲ್ಲಿ ಎಷ್ಟು ಸ್ಪಷ್ಟತೆಯೊಂದಿಗೆ ಸೇರುವುದೋ ಮತ್ತು ಎಷ್ಟು ಗಮನದಿಂದ ಸೇರಿಸಲಾಗುತ್ತದೋ ಅದು ಮನಸ್ಸಿನಲ್ಲಿ ಅಷ್ಟೇ ಗಾಢವಾಗಿ ಅಚ್ಚೊತ್ತಲ್ಪಡುತ್ತದೆ ಮತ್ತು ದೀರ್ಘಕಾಲ ಶೇಖರವಾಗಿರುತ್ತದೆ. ಒಂದು ವೇಳೆ ಆ ವಿಷಯದಲ್ಲಿ ಅಲಕ್ಷ್ಯ ತೋರಿದರೆ ಅಥವಾ ಅದರ ಮೇಲೆ ಆತುರದ ಗಮನ ಹರಿಸಿದರೆ ಅದರ ಪ್ರಭಾವವೂ ಮಂದವಾಗುತ್ತದೆ ಮತ್ತು ಬೇಗನೇ ಮರೆತು ಹೋಗುತ್ತದೆ. ಕಂಠಪಾಠ ಮಾಡಿಸುವುದಕ್ಕೆ ಮುಂಚೆ ಅದರ ಅರ್ಥ, ವ್ಯಾಖ್ಯಾನ, ಅಗತ್ಯ ಮತ್ತು ಪ್ರಯೋಜನಗಳನ್ನು ಚೆನ್ನಾಗಿ ಮನನ ಮಾಡಿಸಿ ಕೊಟ್ಟರೆ, ಅದು ಅರ್ಥವತ್ತಾಗಿ ಮತ್ತು ಹೆಚ್ಚು ಗಮನದೊಂದಿಗೆ ಕಂಠಪಾಠವಾಗುವುದು ಹಾಗೂ ಹೆಚ್ಚು ಸಮಯ ಅದು ನೆನಪಿನಲ್ಲಿರುವುದು. ಆರಂಭದಲ್ಲಿ ಮಕ್ಕಳು ಹಲವು ವಿಷಯಗಳನ್ನು ತಮಗರಿವಿಲ್ಲದೆಯೇ ಕೇವಲ ಆಲಿಸುವ ಮೂಲಕ ಮತ್ತು ಆಗಾಗ ಪುನರಾವರ್ತಿಸುವ ಮೂಲಕ ಅನುಕರಿಸುತ್ತಲೇ ಬಾಯಿಪಾಠ ಮಾಡುತ್ತಾರೆ. ಈ ರೀತಿಯೂ ಅವರಿಗೆ ಹಲವು ವಿಷಯಗಳನ್ನು ಕಲಿಸಬಹುದಾಗಿದೆ. ಈ ರೀತಿ ಕಂಠಪಾಠ ಮಾಡಿಸಿದ ವಿಷಯಗಳೂ ಬಹಳ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ಹೊಂದಿವೆ. ಉದಾ: ದುಆಗಳು, ದಿಕ್ರ್‌ಗಳು, ಪದ್ಯಗಳು, ಲೋಕೋಕ್ತಿಗಳು, ಗಾದೆಗಳು ಇತ್ಯಾದಿ.

ಆದರೆ ಒಂದು ವೇಳೆ ಕಂಠಪಾಠ ಮಾಡಿಸುವುದಕ್ಕೆ ಮುನ್ನ ಮಕ್ಕಳಿಗೆ ಆದರ ಅರ್ಥ ತಿಳಿಸಿದರೆ ಮತ್ತು ಆದರ ಪ್ರಯೋಜನ, ಮಹತ್ವಗಳನ್ನು ವಿವರಿಸಿ ಕೊಟ್ಟರೆ ಅಥವಾ ಆಟದೊಂದಿಗೇ ಕಲಿಸಿದರೆ ಅವರಿಗೆ ಸುಲಭದಲ್ಲಿ ಕಂಠಪಾಠವಾಗುತ್ತದೆ. ಒಂದು ವಿಷಯವನ್ನು ಗಮನ ಮತ್ತು ಆಸಕ್ತಿಯೊಂದಿಗೆ ಕಲಿಸಿದರೆ ಅದು ಹೆಚ್ಚು ದಿನಗಳ ವರೆಗೆ ನೆನಪಿನಲ್ಲಿರುತ್ತದೆ. ಅಲ್ಲದೆ, ಒಬ್ಬನಿಗೆ ಹೆಚ್ಚು ಆಸಕ್ತಿ ಮತ್ತು ಒಲವು ಇರುವ ವಿಷಯಗಳೇ ಹೆಚ್ಚು ನೆನಪಿನಲ್ಲಿ ಉಳಿಯುವುದು ಮಾನವೀಯ ಪ್ರಕೃತಿಯಾಗಿದೆ.

2. ಸ್ಮರಣೆ

ಅಂದರೆ ಶೇಖರಿಸಿದ ಅಥವಾ ಸಂರಕ್ಷಿಸಿದ ವಸ್ತುಗಳನ್ನು ಅಗತ್ಯಾನುಸಾರ ಪುನಃ ನೆನಪಿಸುವುದು. ಇದು ಕೂಡಾ ಸ್ಮರಣ ಶಕ್ತಿಯ ಅತಿ ಪ್ರಮುಖವಾದ ಅಂಗವಾಗಿದೆ. ನಮ್ಮ ಮನಸ್ಸಿನಲ್ಲಿ ಹಲವು ವಿಷಯಗಳ ಭಂಡಾರವಿದ್ದು, ಸೂಕ್ತ ಸಮಯದಲ್ಲಿ ಅದು ನೆನಪೇ ಆಗದಿದ್ದರೆ ಅದರಿಂದೇನು ಪ್ರಯೋಜನ? ತದ್ವಿರುದ್ಧವಾಗಿ ಗೊತ್ತಿರುವಷ್ಟು ವಿಷಯವು ಅಗತ್ಯದ ಸಮಯದಲ್ಲಿ ನೆನಪಾದರೆ ಅದುವೇ ಪ್ರಯೋಜನಕಾರಿಯಾಗಿದೆ.

- ಒಂದು ವಿಷಯವನ್ನು ಎಷ್ಟು ಉತ್ತಮವಾಗಿ ಕಲಿಸಲಾಗುತ್ತದೋ ಅದು ಅಷ್ಟೇ ಸುಲಭದಲ್ಲಿ ಅಗತ್ಯಾನುಸಾರ ನೆನಪಿಗೆ ಬರುತ್ತದೆ. ಕಂಠಪಾಠ ಮಾಡಿಸುವಾಗ ಈ ಕೆಳಗಿನ ವಿಷಯಗಳನ್ನು ಪರಿಗಣಿಸಿದರೆ ಸ್ಮರಣೆಯಲ್ಲಿ ಸಹಕಾರಿಯಾಗುತ್ತದೆ.
- ಒಂದು ವಿಷಯವನ್ನು ಇನ್ನೊಂದು ವಿಷಯದ ಆಧಾರದಲ್ಲಿ ಸುಲಭವಾಗಿ ನೆನಪಿಸಬಹುದು. ತದ್ವಿರುದ್ಧವಾಗಿ ಪ್ರತಿಯೊಂದು ವಿಷಯವನ್ನು ಬೇರೆಬೇರೆಯಾಗಿ ಮನಸ್ಸಿನಲ್ಲಿ ತುರುಕಿಸಿದರೆ ಅಗತ್ಯದ ಸಮಯದಲ್ಲಿ ಅದು ನೆನಪಾಗಲು ಕಷ್ಟವೆನಿಸುತ್ತದೆ. ಆದ್ದರಿಂದ ಯಾವುದೇ ಹೊಸ ವಿಷಯವನ್ನು ಕಂಠಪಾಠ ಮಾಡಿಸುವಾಗ, ಹಿಂದಿನ ಮಾಹಿತಿಯೊಂದಿಗೆ ತಳಕು ಹಾಕಬೇಕು. ಉದಾ: ಅಲ್ಲಾಮಾ ಶಿಬ್ಲಿಯವರ ಜನನದ ವೇಳೆ (1887) ಸಿಪಾಯಿದಂಗೆ ಎದ್ದಿತ್ತು ಹಾಗೂ ಅವರ ಮರಣದ ವೇಳೆ (1914) ಜಾಗತಿಕ ಯುದ್ಧವೇರ್ಪಟ್ಟಿತ್ತು. ಮೌಲಾನಾ ಆಝಾದ್‌ರ ಜನನ ಇಸವಿಯಲ್ಲಿ (1888) ಮೂರು ಎಂಟುಗಳಿವೆ ಮತ್ತು ಅವರು ಪಂಡಿತ ನೆಹರೂರವರಿಗಿಂತ (1889) ಒಂದು ವರ್ಷ ಹಿರಿಯರು.

ವಿವಿಧ ವಸ್ತುಗಳಲ್ಲಿ ಈ ತಳಕು ಮತ್ತು ಸಂಬಂಧವನ್ನು ಮೂರು ರೀತಿಯಲ್ಲಿ ಕಲ್ಪಿಸಬಹುದಾಗಿದೆ:-

ಅ. ಸಂಯೋಗದ ಮೂಲಕ

ಎರಡು ಅಥವಾ ಹೆಚ್ಚು ವಸ್ತುಗಳಲ್ಲಿ ಪರಸ್ಪರ ಸಾಮ್ಯತೆ, ಸಾಮೀಪ್ಯ ಅಥವಾ ಸಂಯೋಗ ಹೆಚ್ಚು ಇದ್ದಷ್ಟು ಅವು ಪರಸ್ಪರ ಹೆಚ್ಚು ಪೂರಕವಾಗುತ್ತವೆ ಹಾಗೂ ಒಂದನ್ನೊಂದು

ನೆನಪಿಸಲು ಮಾಧ್ಯಮವಾಗಿ ಕೆಲಸಮಾಡುತ್ತವೆ. ಉದಾ: ಇಬ್ಬರು ಮಿತ್ರರನ್ನು ಹಲವು ಬಾರಿ ಒಟ್ಟಿಗೆ ನೋಡುತ್ತಿದ್ದರೆ ಒಬ್ಬನನ್ನು ನೋಡುವಾಗ ಇನ್ನೊಬ್ಬನ ನೆನಪಾಗುತ್ತದೆ. ಅದಾನ್ ಕರೆ ಕೇಳುತ್ತಲೇ ನಮಾಝ್‌ನ ನೆನಪಾಗುವುದು ಅನಿವಾರ್ಯ. ಏಕೆಂದರೆ ಅವೆರಡೂ ಪರಸ್ಪರ ಸಂಬಂಧವಿರುವ ವಿಷಯಗಳಾಗಿವೆ. ಈ ರೀತಿ ಎರಡು ವಿಷಯಗಳಲ್ಲಿ ಸಂಬಂಧ ಕಲ್ಪಿಸಿದರೆ ಸಂರಕ್ಷಣೆ ಮತ್ತು ಸ್ಮರಣೆ ಎರಡೂ ಸುಲಭವಾಗುತ್ತದೆ.

ಆ. ಸಾಮ್ಯತೆ ಅಥವಾ ಹೋಲಿಕೆಯ ಮೂಲಕ

ಹೊಸ ವಸ್ತುವನ್ನು ಪರಿಚಿತ ವಸ್ತುವಿನೊಂದಿಗೆ ಹೋಲಿಸಿ ಅವೆರಡರಲ್ಲಿನ ಸಾಮ್ಯತೆಯನ್ನು ಚೆನ್ನಾಗಿ ಮನವರಿಕೆ ಮಾಡಿಸಿದರೆ, ಒಂದನ್ನು ನೆನಪಿಸುತ್ತಲೇ ಇನ್ನೊಂದು ಸ್ವಯಂ ನೆನಪಿಗೆ ಬರುತ್ತದೆ. ಉದಾ: ಝೀಬ್ರಾವನ್ನು ಕತ್ತೆಗೆ, ಒಂಟೆಯನ್ನು ಜಿರಾಫೆಗೆ ಹೋಲಿಸುವುದು. ಆದರೆ ನೆನಪಿರಲಿ, ಈ ಹೋಲಿಕೆ ಬಹಳ ಹೆಚ್ಚಾದರೆ, ಗುರುತಿಸುವಾಗ ತೊಡಕುಂಟಾಗುವ ಸಾಧ್ಯತೆ ಇದೆ. ಈರ್ವರು ತದ್ರೂಪಿ ಸಹೋದರರನ್ನು ಗುರುತಿಸುವಲ್ಲಿ ಜನರು ಹೆಚ್ಚಾಗಿ ಮೋಸಹೋಗುತ್ತಾರೆ. ಆದ್ದರಿಂದ ಸಾಮ್ಯತೆ ಮತ್ತು ಹೋಲಿಕೆಯನ್ನು ತಿಳಿಸುವುದರ ಜೊತೆಯಲ್ಲೇ ಅವುಗಳ ನಡುವಿನ ಸ್ಪಷ್ಟ ವ್ಯತ್ಯಾಸಗಳನ್ನು ತಿಳಿಸಿಕೊಡಬೇಕು. ಝೀಬ್ರಾ ಮತ್ತು ಕತ್ತೆ, ಜಿರಾಫೆ ಮತ್ತು ಒಂಟೆಗಳಲ್ಲಿರುವ ವ್ಯತ್ಯಾಸವೇನೆಂದರೆ, ಝೀಬ್ರಾದ ದೇಹದಲ್ಲಿ ಕಪ್ಪು ಮತ್ತು ಬಿಳಿಯ ಪಟ್ಟಿಗಳಿರುತ್ತವೆ ಹಾಗೂ ಜಿರಾಫೆಯ ದೇಹದಲ್ಲಿಡೀ ಮಚ್ಚೆಗಳಿರುತ್ತವೆ... ಇತ್ಯಾದಿ. ಪವಿತ್ರ ಕುರ್‌ಆನಿನ ಪದಗಳಲ್ಲಿ ಪರಸ್ಪರ ಹೋಲಿಕೆಯಿರುವ, ವಿಷಯಗಳಲ್ಲಿ ಸಾಮ್ಯತೆಯಿರುವ ಅಥವಾ ಸಂಪೂರ್ಣ ಸಮಾನವಾದ ವಚನಗಳಿರುತ್ತವೆ. ಕಾರ್ಯಕಾರಣಕ್ಕೆ ಸಂಬಂಧಿಸಿದಂತೆ, ಅಂತಹ ವಚನಗಳಲ್ಲಿ ಪರಸ್ಪರ ಸಂಬಂಧ ಕಲ್ಪಿಸಿ, ಅವುಗಳಲ್ಲಿನ ವ್ಯತ್ಯಾಸವನ್ನು ಮನವರಿಕೆ ಮಾಡಿಸಿಕೊಡಬೇಕು. ಈ ಮೂಲಕ ಹಿಫ್ಝ್ ಕಲಿಯುವವರು ಅವುಗಳಿಂದ ಮೋಸಹೋಗುವುದನ್ನು ತಪ್ಪಿಸಬಹುದಾಗಿದೆ.

ಇ. ತದ್ವಿರುದ್ಧ ವಸ್ತುಗಳನ್ನು ಮುಖಾಮುಖಿಗೊಳಿಸುವ ಮೂಲಕ

ಪರಿಚಿತ ವಸ್ತುವಿನೊಂದಿಗೆ ಹೊಸ ವಸ್ತುವನ್ನು ಮುಖಾಮುಖಿಗೊಳಿಸುವ ಮೂಲಕ ಅವುಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ ಕೊಟ್ಟರೆ, ಒಂದರ ಮೂಲಕ ಇನ್ನೊಂದನ್ನು ನೆನಪಿಸಲು ಮತ್ತು ಒಂದರಿಂದಾಗಿ ಇನ್ನೊಂದರ ನೆನಪಾಗಲು ಸುಲಭವಾಗುತ್ತದೆ. ವಸ್ತುಗಳು ತಮ್ಮ ವಿರುದ್ಧ ವಸ್ತುಗಳ ಮೂಲಕ ಸುಲಭದಲ್ಲಿ ಗುರುತಿಸಲ್ಪಡುತ್ತವೆ. ತ್ಯಾಗ-ಬಲಿದಾನದ ಘಟನೆಯ ಜತೆಯಲ್ಲಿ ಸ್ವಾರ್ಥದ ಘಟನೆ, ಧಾರ್ಮಿಕ ನೀತಿಗೆ ಸಂಬಂಧಿಸಿ ಔರಂಗಝೇಬ್ ಮತ್ತು ಅಕ್ಬರನ ತುಲನೆ ಇತ್ಯಾದಿ.

ಒಟ್ಟಿನಲ್ಲಿ ವಿವಿಧ ವಿಧಾನಗಳ ಮೂಲಕ ಹಿಂದಿನ ಮಾಹಿತಿಗಳಿಗೆ ಹೊಸ ವಿಷಯಗಳನ್ನು ಜೋಡಿಸುವುದರಿಂದ (ಅದು ಸಾಮೀಪ್ಯದ ಮೂಲಕವಾಗಲಿ ಅಥವಾ

ಮುಖಾಮುಖಿ ಮತ್ತು ತುಲನೆ ಮಾಡುವ ಮೂಲಕವಾಗಲಿ) ವಿಷಯವು ಚೆನ್ನಾಗಿ ಮನವರಿಕೆಯಾಗುತ್ತದೆ. ಸಂರಕ್ಷಣೆ ಹಾಗೂ ಸ್ಮರಣೆಯಲ್ಲಿಯೂ ಅದು ಸಹಾಯಕವಾಗುತ್ತದೆ. ಆದ್ದರಿಂದ ಮಕ್ಕಳಿಗೆ ಪಾಠ ಮಾಡುವ ವೇಳೆ, ಇದನ್ನು ಸಾದ್ಯಂತ ಪರಿಗಣಿಸಬೇಕು. ಪ್ರತಿಯೊಂದು ವಿಷಯವನ್ನು ಹಿಂದಿನ ವಿಷಯದೊಂದಿಗೆ ತಳುಕು ಹಾಕಬೇಕು ಹಾಗೂ ತುಲನೆ ಮತ್ತು ಮುಖಾಮುಖಿ ಇತ್ಯಾದಿಗಳ ಮೂಲಕ ಮನವರಿಕೆ ಮಾಡಿಸಿ ಕೊಡಬೇಕು.

- ಯಾವುದೇ ಭಾಷಣ ಅಥವಾ ಪಠ್ಯದ ವಿಷಯವನ್ನು ನೆನಪಿನಲ್ಲಿರಿಸಬೇಕಾದರೆ, ಅದರ ಉತ್ತಮ ವಿಧಾನವೆಂದರೆ, ಅದಕ್ಕೊಂದು ಸೂಕ್ತ ಶೀರ್ಷಿಕೆಯನ್ನು ನಿಶ್ಚಯಿಸಬೇಕು. ಬಳಿಕ ಉಪಶೀರ್ಷಿಕೆ ಮತ್ತು ಪ್ರಮುಖ ಅಂಶಗಳಲ್ಲಿ ನೋಟ್ಸ್‌ನ ರೂಪ ನೀಡಬೇಕು. ಶೀರ್ಷಿಕೆಯ ಮುಖಾಂತರ ಆ ಭಾಷಣ ಅಥವಾ ಪ್ರಬಂಧ ನೆನಪಾಗುತ್ತದೆ. ಉಪ ಶೀರ್ಷಿಕೆ ಮತ್ತು ಪ್ರಮುಖ ಅಂಶಗಳಿಂದ ಆ ಇಡೀ ವಿಷಯ ವಿಸ್ತೃತವಾಗಿ ಜ್ಞಾಪಕಕ್ಕೆ ಬರುತ್ತ ಇರುತ್ತದೆ.
- ಕಂಠಪಾಠ ಮಾಡುವಾಗ ಸಂಪೂರ್ಣ ಆತ್ಮವಿಶ್ವಾಸವನ್ನು ಹೊಂದಿರಬೇಕು. ಸಂಶಯಕ್ಕೆ ಯಾವುದೇ ಎಡೆ ಇರಗೊಡಬಾರದು. ಹಾಗಿದ್ದಾಗ ನೆನಪಾಗುವಾಗ ತೊಡಕುಂಟಾಗುವುದಿಲ್ಲ, ಅನ್ಯಥಾ ಮರೆಯುವ ಸಾಧ್ಯತೆ ಹೆಚ್ಚಿರುತ್ತದೆ.
- ಯಾವುದಾದರೂ ವಸ್ತು, ಜಾಗ ಅಥವಾ ಸಮಯದ ಜತೆಯಲ್ಲಿ ತಳುಕು ಹಾಕುವುದರಿಂದಲೂ ಸುಲಭದಲ್ಲಿ ನೆನಪಿಗೆ ಬರುತ್ತದೆ.
- ಮಕ್ಕಳ ಪ್ರಜ್ಞಾ ವಲಯವು ಬಹಳ ಸಣ್ಣದಾಗಿರುತ್ತದೆ. ಅವರು ಒಂದು ಬಾರಿಗೆ ಎರಡ್ಮೂರು ವಿಷಯಗಳನ್ನಷ್ಟೇ ನೆನಪಿಸಬಲ್ಲರು. ಆದ್ದರಿಂದ ಅವರ ಪುಸ್ತಕಗಳಲ್ಲಿ ವಾಕ್ಯವು ಹ್ರಸ್ವವಾಗಿಯೂ ಪದವು ಸಣ್ಣದಾಗಿಯೂ ಇರಬೇಕು. ಪದಬಂಧಗಳಂತಹ ಪ್ರಶ್ನೆಗಳಲ್ಲೂ ಆದಷ್ಟು ಕಡಿಮೆ ಕ್ಲಿಷ್ಟತೆಯನ್ನಿರಿಸಬೇಕು. ಒಂದು ಬಾರಿಗೆ ಹಲವು ವಿಷಯಗಳನ್ನು ಆದೇಶಿಸಬಾರದು. ಅನ್ಯಥಾ ಹೆಚ್ಚಿನ ವಿಷಯಗಳು ಮರೆತು ಹೋಗಬಹುದು. ಅಂಗಡಿಯಿಂದ ಸಾಮಾನು ತರಿಸುವಾಗಲೂ ಒಂದೇ ಬಾರಿ ಎಂಟು-ಹತ್ತು ವಸ್ತುಗಳನ್ನು ತರಲು ಹೇಳಬಾರದು. ಹಾಗೆ ತರಿಸಲೇ ಬೇಕಿದ್ದರೆ ಚೀಟಿಯಲ್ಲಿ ಬರೆದು ಕಳುಹಿಸಬೇಕು. ಅನ್ಯಥಾ ಅದು ಅವರ ನೆನಪಿನಲ್ಲಿ ಉಳಿಯುವ ಸಾಧ್ಯತೆ ಕಡಿಮೆ.

ಪರಿಚಯ ಮತ್ತು ವ್ಯಕ್ತಿತ್ವ

ಅಂದರೆ ಎದುರಿಗೆ ಕಾಣಿಸುತ್ತಲೇ ಅಥವಾ ಮನಸ್ಸಿನಲ್ಲಿ ಕಲ್ಪಿಸುತ್ತಲೇ ಹಿಂದಿನ ವಿಷಯ ಅಥವಾ ವಸ್ತುಗಳೆಲ್ಲ ನೆನಪಿಗೆ ಬರುವುದು ಮತ್ತು ಅವುಗಳನ್ನು ಗತ ಅರ್ಹತೆಯಲ್ಲಿ ಚೆನ್ನಾಗಿ ಪರಿಚಯ ಹೊಂದುವುದು. ಇದು ಕೂಡಾ ಸ್ಮರಣಶಕ್ತಿಯ ಅತ್ಯಂತ ಪ್ರಮುಖ

ಅಂಗವಾಗಿದೆ. ಒಂದು ವೇಳೆ ನಾವು ಕಂಠಪಾಠ ಮಾಡಿದ ವಿಷಯಗಳನ್ನು ಹಿಂದಿನ ರೂಪದಲ್ಲಿ ಗುರುತಿಸಲು ವಿಫಲರಾದರೆ ಬಹಳ ತೊಡಕಾದೀತು. ಅವುಗಳ ಜತೆ ವ್ಯವಹರಿಸಬೇಕಾದ ರೀತಿಯಲ್ಲಿ ವ್ಯವಹರಿಸಲಾರೆವು. ಅಂತಹ ಸಂದರ್ಭದಲ್ಲೆಲ್ಲ ತೀರಾ ಲಜ್ಜಿತರಾಗಬೇಕಾಗಿ ಬರುತ್ತದೆ. ಹಿಂದೆ ಎಂದೋ ಭೇಟಿಯಾದ ವ್ಯಕ್ತಿ ಬಹಳ ಸಮಯದ ಬಳಿಕ ಸಂಧಿಸಿದಾಗ, ನಮಗೆ ಅವರನ್ನೆಲ್ಲೋ ನೋಡಿದ ನೆನಪಾಗುತ್ತದೆ. ಆದರೆ ಹೆಸರು, ಸ್ಥಳವನ್ನು ಮರೆತಿರುತ್ತೇವೆ. ಹೀಗೆ ಸರಿಯಾದ ರೀತಿಯಲ್ಲಿ ನೆನಪಿಸುವಲ್ಲಿ ಎಡವುತ್ತೇವೆ. ಅವರಾದರೋ ನಮ್ಮೊಂದಿಗೆ ಹಿಂದಿನಂತೆಯೇ ಮುಕ್ತವಾಗಿ ವ್ಯವಹರಿಸಲು ಬಯಸುತ್ತಾರೆ ಮತ್ತು ಹಲವು ವಿಷಯಗಳನ್ನು ನೆನಪಿಸುತ್ತಾರೆ. ಆದರೆ ನಾವು ಇನ್ನೂ ಕತ್ತಲಲ್ಲೇ ಇರುತ್ತೇವೆ ಮತ್ತು ಮುಕ್ತ ಮನಸ್ಸಿನೊಂದಿಗೆ ಅವರನ್ನು ಸ್ವಾಗತಿಸುವಲ್ಲಿ ವಿಫಲರಾಗುತ್ತೇವೆ. ಆದ್ದರಿಂದ ವ್ಯಕ್ತಿ ಮತ್ತು ವಸ್ತುಗಳ ಜತೆಗೆ ಹೆಸರು ಮತ್ತು ಸ್ಥಾನಮಾನ ಹಾಗೂ ವಿಷಯ ಮತ್ತು ಘಟನೆಗಳ ಜತೆಗೆ ಹಿನ್ನೆಲೆಗಳನ್ನು ನೆನಪಿಸಬೇಕಾಗುತ್ತದೆ. ಆದರಿಂದ ಗುರುತು ಹಿಡಿಯುವುದು ಸುಲಭವಾಗುತ್ತದೆ.

ಮಕ್ಕಳು ಪಾಠವನ್ನು ಗಿಳಿಪಾಠದಂತೆ ಕಲಿತುಕೊಳ್ಳುತ್ತಾರೆ. ಆದರೆ ಅಕ್ಷರ ಅಥವಾ ಪದ, ವಾಕ್ಯಗಳನ್ನು ಗುರುತಿಸುವಲ್ಲಿ ವಿಫಲರಾಗುತ್ತಾರೆ ಎಂಬುದು ಎಷ್ಟು ಹಾನಿಕರ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಹಾಗಾಗಿ ಸಂರಕ್ಷಣೆ ಮತ್ತು ಸ್ಮರಣೆಯ ಜತೆಗೆ ಪರಿಚಯದ ಅಭ್ಯಾಸವನ್ನು ಮಾಡಬೇಕಾಗಿದೆ.

ತರಗತಿಯ ವಿದ್ಯಾರ್ಥಿಗಳ ಹೆಸರನ್ನು ನೆನಪಿಸುವುದು ಮತ್ತು ಹೆಸರೆತ್ತಿ ಅವರನ್ನು ಕರೆಯುವುದು ಅವರೊಂದಿಗೆ ಅಪಾರ ಬಾಂಧವ್ಯ ಮತ್ತು ನಂಟಿಗೆ ಸಾಕ್ಷಿಯಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ತಮ್ಮ ಮಹತ್ವ ಹಾಗೂ ವ್ಯಕ್ತಿತ್ವದ ಪ್ರಜ್ಞೆ ಬೆಳೆಯುತ್ತದೆ. ಹಾಗಾಗಿ ಅಧ್ಯಾಪಕನು ತರಗತಿಯ ಪ್ರತಿಯೊಂದು ಮಗುವಿನ ಕೇವಲ ರೂಪವನ್ನು ಗುರುತಿಸುವುದಕ್ಕಷ್ಟೇ ಸೀಮಿತವಾಗಬಾರದು. ಬದಲಾಗಿ ಅವರ ಹೆಸರನ್ನು ನೆನಪಿಸಬೇಕು, ಏನಾದರೂ ಆದೇಶಿಸುವಾಗ ಮತ್ತು ಯಾವುದಾದರೂ ವಿಷಯದಿಂದ ತಡೆಯುವಾಗ ಕೇವಲ ಕೈಯಿಂದ ಸನ್ನೆ ಮಾಡುವುದಕ್ಕಿಂತ ಹೆಸರೆತ್ತುವುದರಿಂದ ಹೆಚ್ಚು ಪ್ರಭಾವ ಇರುತ್ತದೆ. ಇದರಿಂದ ತರಗತಿಯ ನಿಯಂತ್ರಣವೂ ಸುಲಭವಾಗುತ್ತದೆ.

ಕಂಠಪಾಠ ಮಾಡಿಸುವ ವಿಧಾನ ಮತ್ತು ಉಪಾಯಗಳು

ಕಂಠಪಾಠ ಮಾಡಿಸುವಲ್ಲಿ ಈ ಕೆಳಗಿನ ವಿಧಾನ ಮತ್ತು ಉಪಾಯಗಳು ಬಹಳ ಪ್ರಯೋಜನಕಾರಿಯಾಗಿವೆ. ಇವುಗಳನ್ನು ಅನುಸರಿಸುವುದರಿಂದ ಬಲು ಬೇಗನೇ ಬಾಯಿಪಾಠವಾಗುತ್ತದೆ, ಬಹಳ ಹೊತ್ತಿನ ವರೆಗೆ ನೆನಪಿನಲ್ಲಿ ಇರುತ್ತದೆ ಮತ್ತು ಅಗತ್ಯದ ಸಮಯದಲ್ಲಿ ನೆನಪಿಗೆ ಬರುತ್ತದೆ.

1. ಆಹ್ಲಾದದಿಂದಿರುವಾಗ ಬಾಯಿಪಾಠ ಮಾಡಿಸಬೇಕು

ದಣಿವು, ಕ್ಲೇಶ, ಆಘಾತದ ಸ್ಥಿತಿಯಲ್ಲಿ ಬಾಯಿಪಾಠ ಮಾಡಿಸುವುದು ಆರೋಗ್ಯಕ್ಕೂ ಅಪಾಯಕಾರಿಯಾಗಿದೆ. ಜತೆಗೆ ಬಹಳ ಸಮಯ ಮತ್ತು ಪರಿಶ್ರಮವನ್ನು ವ್ಯಯಿಸಿಯೂ ನಿರೀಕ್ಷಿತ ಫಲ ಸಿಗಲಾರದು. ಆದ್ದರಿಂದ ಮನಸ್ಸು ಪ್ರಫುಲ್ಲವಾಗಿರುವಂತಹ ಸಂದರ್ಭದಲ್ಲಿಯೇ ಬಾಯಿಪಾಠ ಮಾಡಿಸಬೇಕು.

2. ಬಿಡಿ ಬಿಡಿಯಾಗಿ ಕಲಿಸುವ ಬದಲು ಇಡಿಯಾಗಿ ಕಲಿಸುವುದು

ಅಂದರೆ ಇಡೀ ವಿಷಯವನ್ನು ಬಿಡಿ ಬಿಡಿಯಾಗಿ ವಿಂಗಡಿಸಿ ಕಂಠಪಾಠ ಮಾಡಿಸುವುದರ ಬದಲು ಇಡಿಯಾಗಿ ಕಲಿಸಲು ಪ್ರಯತ್ನಿಸಬೇಕು. ಸಣ್ಣ ಅಧ್ಯಾಯ, ಸಣ್ಣ ರುಕೂಅ್, ಸಂಕ್ಷಿಪ್ತ ದುಆ, ಕೆಲವು ಪದ್ಯ ಸಾಲುಗಳು ಅಥವಾ ಸಣ್ಣ ಪ್ರಬಂಧಗಳನ್ನು ಕಂಠಪಾಠ ಮಾಡಿಸಬೇಕಿದ್ದರೆ ಅದನ್ನು ಇಡಿಯಾಗಿ ಒಂದೇ ಬಾರಿಗೆ ಕಂಠಪಾಠ ಮಾಡಿಸುವುದು ಒಳ್ಳೆಯದು. ಇಡೀ ಅಧ್ಯಾಯ, ರುಕೂಅ್ ಅಥವಾ ಪದ್ಯವನ್ನು ಆಗಾಗ ಪುನರಾವರ್ತಿಸುತ್ತ ಇರಬೇಕು. ಕಂಠಪಾಠವಾದ ಭಾಗವನ್ನು ನೋಡದೆ ಮತ್ತು ಕಂಠಪಾಠವಾಗದ ಭಾಗವನ್ನು ನೋಡಿ ಓದುವಂತೆ ಪ್ರೇರೇಪಿಸಬೇಕು. ಹೀಗೆ ಪುನರಾವರ್ತಿಸುತ್ತ ಇದ್ದರೆ ಬಲು ಬೇಗನೇ ಕಂಠಪಾಠವಾಗುತ್ತದೆ. ಒಂದೊಂದು ವಾಕ್ಯ ಅಥವಾ ಪದ್ಯದ ಸಾಲನ್ನು ಪ್ರತ್ಯೇಕವಾಗಿ ಕಲಿಸುವುದರಿಂದ ಉಚ್ಚರಿಸುವಾಗ ಸುಲಲಿತತೆ ಇರುವುದಿಲ್ಲ ಮತ್ತು ಸಮಯವೂ ಬಹಳ ಪೋಲಾಗುತ್ತದೆ.

3. ವಿವಿಧ ಭಾಗಗಳಾಗಿ ಕಲಿಸುವುದು

ಅಧ್ಯಾಯ, ಪದ್ಯ, ಭಾಷಣ ಅಥವಾ ಪ್ರಬಂಧವು ದೀರ್ಘವಾಗಿದ್ದರೆ, ಒಂದೆರಡು ಬಾರಿ ಇಡೀ ವಿಷಯ ಓದಿಸಿ, ಅದರ ಅರ್ಥ ವ್ಯಾಖ್ಯಾನವನ್ನು ಚೆನ್ನಾಗಿ ಮನನ ಮಾಡಲು ಅವಕಾಶ ನೀಡಬೇಕು. ಬಳಿಕ ಅದನ್ನು ಸೂಕ್ತ ವಿಭಾಗಗಳಲ್ಲಿ ವಿಂಗಡಿಸಿ, ಈ ಮೇಲೆ ತಿಳಿಸಿದ ರೀತಿಯಲ್ಲಿ ಕಲಿಸಬೇಕು. ಅದೇ ವೇಳೆ ಪ್ರತಿಯೊಂದು ಭಾಗದಲ್ಲೂ ವಿಷಯವು ಸಂಪೂರ್ಣವಾಗಿರುವಂತೆಯೂ ನೋಡಿಕೊಳ್ಳಬೇಕು. ಉದಾ: ದೀರ್ಘವಾದ ಪದ್ಯವನ್ನು ಕಂಠಪಾಠ ಮಾಡಿಸಬೇಕಿದ್ದರೆ, ಅದರ ಪ್ರತಿಯೊಂದು ಚರಣವನ್ನು ಪ್ರತ್ಯೇಕ ಭಾಗವಾಗಿ ವಿಂಗಡಿಸಬೇಕು. ಆದರೆ ಪ್ರತಿ ಚರಣದ ಕೊನೆಯ ಪದಕ್ಕೆ ಅದರ ನಂತರದ ಮೊದಲ ಪದದೊಂದಿಗೆ ತಳಕು ಹಾಕಬೇಕು. ಇದರಿಂದ ನಿರಂತರತೆಯು ಜಾರಿಯಲ್ಲಿರುತ್ತದೆ.

4. ವಿರಾಮ ನೀಡಿ ಕಂಠಪಾಠ ಮಾಡಿಸುವುದು

ಒಂದೇ ಬಾರಿಗೆ ಸಂಪೂರ್ಣ ಕಂಠಪಾಠ ಮಾಡಿಸುವುದರ ಬದಲು, ಅಲ್ಪ ಸ್ವಲ್ಪ ವಿರಾಮ ನೀಡುತ್ತ ಕಂಠಪಾಠ ಮಾಡಿಸಿದರೆ, ಅದು ಶಾಶ್ವತವಾಗಿರುತ್ತದೆ ಅಥವಾ ದೀರ್ಘಕಾಲ ನೆನಪಿನಲ್ಲಿ ಉಳಿಯುತ್ತದೆ. ಈ ಪ್ರಕ್ರಿಯೆಯಲ್ಲಿ ಕಡಿಮೆ ಸಮಯ

ವ್ಯಯವಾಗುತ್ತದೆ. ಏಕೆಂದರೆ ಪ್ರತಿಯೊಂದು ಬಾರಿಯೂ ಮನಸ್ಸು ಪ್ರಫುಲ್ಲವಾಗಿರುತ್ತದೆ. ಮಗು ಚುರುಕಾಗಿ ಕಂಠಪಾಠ ಮಾಡುತ್ತದೆ. ಅಲ್ಲದೆ ವಿರಾಮ ನೀಡುವುದರಿಂದ ವಿಷಯವನ್ನು ಮನದಲ್ಲಿ ಬೇರೂರಿಸಲು ಅವಕಾಶವೊದಗುತ್ತದೆ. ಸ್ವಲ್ಪ ಸಮಯ ಕಳೆದು ಪುನರಾವರ್ತಿಸುವುದರಿಂದ ಸ್ಮರಣೆಯಲ್ಲಿಯೂ ಸುಲಭವಾಗುತ್ತದೆ.

5. ಕಂಠಪಾಠದ ಬಳಿಕ ಸ್ವಲ್ಪ ಹೊತ್ತು ಖಾಲಿ ಬಿಡುವುದು

ಮನಸ್ಸನ್ನು ನಿರಂತರ ಕೆಲಸದಲ್ಲಿ ತೊಡಗಿಸಿ ಕೊಳ್ಳುವುದರಿಂದ ಪ್ರಯತ್ನದ ಮೇಲೆ ತಣ್ಣೀರೆರಚಿದಂತಾಗುತ್ತದೆ. ಆದ್ದರಿಂದ ಒಂದು ವಿಷಯವನ್ನು ಕಂಠಪಾಠ ಮಾಡಿಸಿದ ಬಳಿಕ ಆ ವಿಷಯವನ್ನು ಮೆಲುಕು ಹಾಕಲು ಸ್ವಲ್ಪ ಕಾಲಾವಕಾಶ ನೀಡಬೇಕು.

6. ಬೇರೆ ಬೇರೆ ವಸ್ತುಗಳನ್ನು ಪರಸ್ಪರ ಜೋಡಿಸಿ ಕಲಿಸುವುದು

ಮೊದಲೇ ಕಂಠಪಾಠವಿರುವ ವಿಷಯದ ಜತೆಗೆ ಹೊಸ ವಿಷಯವನ್ನು ತಳಕು ಹಾಕಿ ಕಲಿಸಿದರೆ ಬೇಗನೇ ಕಂಠಪಾಠವಾಗುತ್ತದೆ. ಮಾತ್ರವಲ್ಲ ಮೊದಲಿನ ವಿಷಯದ ಮೂಲಕ ಅಗತ್ಯಾನುಸಾರ ಸುಲಭದಲ್ಲಿ ನೆನಪೂ ಆಗಿಬಿಡುತ್ತದೆ. ಅಸಂಯೋಜಿತ ಮತ್ತು ಪರಸ್ಪರ ಸಂಬಂಧಿಸದ ವಿಷಯಗಳನ್ನು ಕಂಠಪಾಠ ಮಾಡಿಸುವುದು ಮತ್ತು ನೆನಪಿನಲ್ಲಿರಿಸುವುದು ಬಹಳ ಕಷ್ಟ. ಅದೇ ವೇಳೆ ಸಂಯೋಜಿತ ಮತ್ತು ಸಂಬಂಧಿತ ವಿಷಯಗಳು ಬಹಳ ಸುಲಭದಲ್ಲಿ ನೆನಪಾಗುತ್ತವೆ ಮತ್ತು ಚೆನ್ನಾಗಿ ನೆನಪಿನಲ್ಲಿ ಉಳಿಯುತ್ತವೆ. ಪದಗಳ ಅಕ್ಷರ, ಪದ್ಯದ ಸಾಲು, ವಾಕ್ಯಗಳ ಪದಗಳು ಮತ್ತು ಒಗಟುಗಳ ವಾಕ್ಯ, ಐತಿಹಾಸಿಕ ಘಟನೆಗಳು ಮತ್ತು ಇಸವಿಗಳು ಇತ್ಯಾದಿಗಳಲ್ಲಿ ಪರಸ್ಪರ ವಿಶೇಷ ಸಂಬಂಧ ಮತ್ತು ಕ್ರಮವಿರುತ್ತದೆ. ಅವುಗಳನ್ನು ಪರಿಗಣಿಸಿದರೆ ಕಂಠಪಾಠ ಮಾಡಲು ಸುಲಭವಾಗುತ್ತದೆ.

7. ಕಂಠಪಾಠ ಮಾಡಿದ ವಿಷಯಗಳನ್ನು ಪುನರಾವರ್ತಿಸುತ್ತಿರಬೇಕು

ಕಂಠಪಾಠ ಮಾಡಿದ ವಿಷಯಗಳಲ್ಲಿ ಕೆಲವು ಒಂದೆರಡು ದಿನಗಳಲ್ಲಿ ಇನ್ನು ಹಲವು ವಿಷಯಗಳು ವಾರ ಕಳೆಯುವಷ್ಟರಲ್ಲಿ ಮರೆತುಹೋಗುತ್ತವೆ. ಆದ್ದರಿಂದ ಕಂಠಪಾಠ ಮಾಡಿಸಿದ ಬಳಿಕ ಸುಮ್ಮನೆ ಬಿಟ್ಟು ಬಿಡಬಾರದು. ಬದಲಾಗಿ ಮೂರ್ನಾಲ್ಕು ದಿನಗಳ ವರಗೆ ನಿರಂತರವಾಗಿ ಪುನರಾವರ್ತಿಸುತ್ತಿರಬೇಕು. ಹೀಗೆ ಚೆನ್ನಾಗಿ ಮನನವಾಗುತ್ತದೆ ಮತ್ತು ಮರೆತು ಬಿಡುವ ಸಾಧ್ಯತೆ ಕಡಿಮೆಯಾಗುತ್ತದೆ.

8. ಕಲಿಸುವುದಕ್ಕೆ ಮುನ್ನ ಮನಸ್ಸನ್ನು ಅದಕ್ಕಾಗಿ ಸಿದ್ಧಗೊಳಿಸುವುದು

ಒಂದು ವಿಷಯದ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ಚೆನ್ನಾಗಿ ಮನವರಿಕೆ ಮಾಡಿಸಿ, ಅದರಲ್ಲಿ ಆಸಕ್ತಿ ಹುಟ್ಟಿಸಿದ ಬಳಿಕ ಕಂಠಪಾಠ ಮಾಡಿಸಬೇಕು. ಮನಸ್ಸು ಸಿದ್ಧವಾದಷ್ಟೂ ಕಲಿಯುವುದು ಸುಲಭವಾಗುತ್ತದೆ.

ಸ್ಮರಣ ಶಕ್ತಿಯ ವಿಧಗಳು

ಸ್ಮರಣಶಕ್ತಿಯಲ್ಲಿ ಹಲವು ವಿಧಗಳಿರುತ್ತವೆ:

• ತ್ವರಿತ ಸ್ಮರಣೆ: ಅಂದರೆ ಸಂದರ್ಭಕ್ಕೆ ಅನುಸಾರ ಉಪಯೋಗಕ್ಕೆ ಬರುವಂತಹುದು ಮತ್ತು ಕೆಲಸ ಮುಗಿದ ಬಳಿಕ ಅದು ಮರೆತುಹೋಗುತ್ತದೆ. ಉದಾ: ಚರ್ಚೆಯಲ್ಲಿ ತನ್ನ ಪಾತ್ರ ಅಥವಾ ಯಾವುದಾದರೂ ನಿರ್ದಿಷ್ಟ ಸಂದರ್ಭಕ್ಕಾಗಿ ತಯಾರಿಸಿದ ಭಾಷಣ ಇತ್ಯಾದಿ.

• ದೀರ್ಘಕಾಲಿಕ ಸ್ಮರಣೆ: ಅಂದರೆ ದೀರ್ಘಕಾಲದ ವರೆಗೆ ಉಪಯೋಗಕ್ಕೆ ಬರುವಂತಹುದು. ಉದಾ: ಪದಗಳ ಅರ್ಥ, ಮಗ್ಗಿ, ಪ್ರಮೇಯ, ಐತಿಹಾಸಿಕ ಘಟನೆಗಳು, ಇಸವಿಗಳು ಇತ್ಯಾದಿ.

• ಗಿಳಿಪಾಠ: ಇದರಲ್ಲಿ ಪದಾನುಪದ ಕಂಠಪಾಠ ಮಾಡಿ ಅಗತ್ಯಾನುಸಾರ ಗಿಳಿಪಾಠ ಒಪ್ಪಿಸುವುದಾಗಿದೆ. ಇಂತಹ ಕಂಠಪಾಠಗಳಲ್ಲಿ ಅರ್ಥ ಅರಿಯುವ ಅಗತ್ಯ ಇರುವುದಿಲ್ಲ. ಮಕ್ಕಳು ಸಾಮಾನ್ಯವಾಗಿ ಅರ್ಥವರಿಯದೆ ಕಂಠಪಾಠ ಮಾಡುವುದಿದೆ.

• ವ್ಯಾಖ್ಯಾನದ ಸ್ಮರಣೆ: ಅಂದರೆ ವಿಷಯದ ಅರ್ಥ ವ್ಯಾಖ್ಯಾನವನ್ನು ಮನನ ಮಾಡಲಾಗುತ್ತದೆ. ಬಳಿಕ ಅಗತ್ಯಾನುಸಾರ ತನ್ನದೇ ಮಾತಿನಲ್ಲಿ ಅದನ್ನು ಪುನರಾವರ್ತಿಸಲಾಗುತ್ತದೆ.

• ಶೀಘ್ರ ಸ್ಮರಣೆ: ಅಂದರೆ ಕಡಿಮೆ ಅವಧಿಯಲ್ಲಿ ಕಂಠಪಾಠ ಮಾಡುವ ಸಾಮರ್ಥ್ಯ.

• ನಿಧಾನ ಸ್ಮರಣೆ: ಬಹಳ ಸಮಯ ವ್ಯಯಿಸಿದ ಬಳಿಕ ಕಂಠಪಾಠ ಮಾಡಲು ಶಕ್ತನಾಗುವುದು.

• ನಿರ್ದಿಷ್ಟ ಸ್ಮರಣೆ: ಕೆಲವರು ಕಂಡದ್ದನ್ನು ನೆನಪಿನಲ್ಲಿರಿಸುತ್ತಾರೆ, ಇನ್ನು ಕೆಲವರು ಕೇಳಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಕಂಡದ್ದನ್ನು ಕಲಿಯುವ ಸಾಮರ್ಥ್ಯವುಳ್ಳವರು ಸ್ವಯಂ ಓದದೆ, ಕೇವಲ ಮೌಖಿಕ ಪಾಠದಿಂದ ಕಲಿಯಲಾರರು. ಅಂತಹವರು ಪಾಠ ಒಪ್ಪಿಸುವಾಗ, ಪುಸ್ತಕದ ಹಾಳೆಗಳನ್ನು ಮತ್ತು ಗೆರೆಗಳನ್ನು ಅಥವಾ ಕರಿಹಲಗೆಯಲ್ಲಿನ ಚಿತ್ರ ಮತ್ತು ವಾಕ್ಯಗಳನ್ನು ಮನಃಪಟಲದಲ್ಲಿ ತರುತ್ತಾರೆ. ಕೆಲವು ಮಂದಿ ಹಾಫಿಝ್‌ಗಳು ಪವಿತ್ರ ಕುರ್‌ಆನನ್ನು ಪಠಿಸುವಾಗ, ಅದನ್ನು ನೋಡಿ ಓದುತ್ತಿರುವಂತೆ ಕಲ್ಪಿಸಿಕೊಳ್ಳುತ್ತಾರೆ. ಎಲ್ಲಿಯ ವರೆಗೆ ಅಂದರೆ, ಅವರಿಗೆ ಪುಟಗಳನ್ನು ತಿರುವುತ್ತಿರುವಂತೆಯೂ ಭಾಸವಾಗುತ್ತದೆ. ಇಂತಹ ಸ್ಮರಣ ಶಕ್ತಿ ಇರುವ ಮಂದಿಗೆ ಮುಖ ಚಹರೆಗಳನ್ನು ನೆನಪಿನಲ್ಲಿರಿಸುವುದು ಬಹಳ ಸುಲಭ. ಒಬ್ಬರನ್ನು ಒಮ್ಮೆ ಭೇಟಿಯಾದರೂ ಬಹಳ ಕಾಲ ಕಳೆದ ಬಳಿಕ ಸಂಧಿಸಿದಾಗ ತಕ್ಷಣ ಅವರನ್ನು ಗುರುತಿಸಬಲ್ಲರು. ತದ್ವಿರುದ್ಧವಾಗಿ ಆಲಿಸಿ ನೆನಪಿಸುವ ಸಾಮರ್ಥ್ಯವುಳ್ಳವರು ಯಾವುದೇ ವಿಷಯವನ್ನು ಒಮ್ಮೆ ಆಲಿಸಿದರೆ ಸಾಕು, ಅದು ಅವರ ನೆನಪಿನಲ್ಲಿ ಉಳಿದು ಬಿಡುತ್ತದೆ. ಮಾತ್ರವಲ್ಲ, ಅದನ್ನು ಇದಮಿತ್ಥಂ ನೆನಪಿಸಿಕೊಳ್ಳುತ್ತಾರೆ. ಇಂತಹವರಿಗೆ ಕಿರಾಅತ್, ದ್ವಿಪದಿಗಳು, ರಾಗ, ಪದ್ಯ ಇತ್ಯಾದಿಗಳನ್ನು ಅನುಕರಿಸುವುದು ಬಹಳ ಸುಲಭದ ಕಾರ್ಯ.

• **ಅಸಂಘಟಿತ ಸ್ಮರಣೆ:** ಅಂದರೆ ಸಣ್ಣ ಮಕ್ಕಳ ಸ್ಮರಣ ಶಕ್ತಿಯಲ್ಲಿ ಕ್ರಮಬದ್ಧತೆ ಇರುವುದಿಲ್ಲ, ಅವರು ಹಲವು ವಿಷಯ ಮತ್ತು ವಾಕ್ಯಗಳನ್ನು ಹಾಗೆಯೇ ಕಲಿತು ಬಿಡುತ್ತಾರೆ. ಆರಂಭದಲ್ಲಿ ಅವರು ಕಲಿಯುವ ವಿಷಯಗಳಲ್ಲಿ ಪರಸ್ಪರ ಸಂಬಂಧ ಇರುವುದಿಲ್ಲ, ಕ್ರಮೇಣ ಅನುಭವ ಮತ್ತು ಚಿಂತನೆಯ ಮೂಲಕ ಅವರು ವಿಷಯಗಳಲ್ಲಿ ಪರಸ್ಪರ ಸಂಬಂಧ ಜೋಡಿಸಲು ಕಲಿತುಕೊಳ್ಳುತ್ತಾರೆ.

ಗಮನಾರ್ಹ ವಿಷಯಗಳು

1. ಮಕ್ಕಳು ಪ್ರಫುಲ್ಲರಾಗಿರುವ ಸಂದರ್ಭದಲ್ಲಿಯೇ ಕಂಠಪಾಠ ಮಾಡಿಸಬೇಕು.

2. ಕಂಠಪಾಠ ಮಾಡಿಸಬೇಕಿರುವ ವಿಷಯದಲ್ಲಿ ಅವರಿಗೆ ಆಸಕ್ತಿಯನ್ನುಂಟು ಮಾಡಬೇಕು. ವಿಷಯದ ಅರ್ಥ-ವ್ಯಾಖ್ಯಾನ ಮತ್ತು ಪ್ರಯೋಜನ-ಮಹತ್ವಗಳನ್ನು ಚೆನ್ನಾಗಿ ಮನನ ಮಾಡಿಸಿಕೊಟ್ಟು ಕಂಠಪಾಠ ಮಾಡಿಸಲು ಪ್ರಯತ್ನಿಸಬೇಕು. ವಿಷಯಕ್ಕೆ ಸಂಬಂಧಿಸಿ ಯಾವುದೇ ಸಂಶಯ-ಗುಮಾನಿ ಇರದಂತೆ ನೋಡಿಕೊಳ್ಳಬೇಕು.

3. ಮಕ್ಕಳಲ್ಲಿ ಆತ್ಮವಿಶ್ವಾಸ ಹುಟ್ಟಿಸಬೇಕು. ಅವರು ಸುಲಭದಲ್ಲಿ ಕಲಿತುಕೊಳ್ಳುವರು ಎಂಬ ಭರವಸೆಯನ್ನು ಬೆಳೆಸಿಕೊಳ್ಳಬೇಕು.

4. ವಿಷಯವನ್ನು ಆಗಾಗ ಓದಲು ಅವಕಾಶ ಒದಗಿಸಿ ಕೊಡಬೇಕು. ಪುನರಾವರ್ತನೆಯಾದಷ್ಟೂ ಅದು ನೆನಪಿನಲ್ಲಿ ಉಳಿಯಲು ಸಾಧ್ಯವಾಗುತ್ತದೆ.

5. ಸ್ವಲ್ಪ ಹೊತ್ತು ಕಲಿತ ಮೇಲೆ ಮಕ್ಕಳು ನೋಡದೆಯೇ ಪರಸ್ಪರರಿಗೆ ಓದಿ ಕೇಳಿಸಲು ಪ್ರಯತ್ನ ಪಟ್ಟರೆ ಬಹಳ ಉತ್ತಮ. ಈ ರೀತಿ ಪರಸ್ಪರ ಹೇಳಿಕೊಳ್ಳುತ್ತ ಕಂಠಪಾಠ ಸುಲಭವಾಗುತ್ತದೆ.

6. ಕಲಿತ ವಿಷಯವನ್ನು ಆಗಾಗ ನೆನಪಿಸುತ್ತ ಇರಬೇಕು. ಇದರಿಂದ ವಿಷಯವು ಮನಸ್ಸಿನಿಂದ ಮರೆಯಾಗುವುದಿಲ್ಲ.

7. ಒಂದೇ ಬಾರಿಗೆ ಇಡೀ ಕಂಠಪಾಠ ಮಾಡಿಸುವುದರ ಬದಲು ಕಾಲಾವಕಾಶ ನೀಡುತ್ತ, ಹಂತಹಂತವಾಗಿ ಕಲಿಸುವುದು ಉತ್ತಮ. ಈ ರೀತಿ ಕಲಿತ ವಿಷಯ ಮನಸ್ಸಿನಲ್ಲಿ ಗಟ್ಟಿಯಾಗಿ ತಳವೂರುತ್ತದೆ.

8. ಹೊಸ ವಿಷಯಗಳನ್ನು ಸಂಯೋಜಿತ ರೂಪದಲ್ಲಿ ಕಲಿಸಬೇಕು ಮತ್ತು ಹಳೆಯ ವಿಷಯದೊಂದಿಗೆ ಅದರ ಗಾಢ ಸಂಬಂಧವನ್ನು ಸ್ಪಷ್ಟಪಡಿಸಬೇಕು.

9. ಆದಷ್ಟು ಪ್ರಜ್ಞಾಪೂರ್ವಕವಾಗಿ ಕಲಿಯಲು ಅವಕಾಶ ನೀಡಬೇಕು. ಅಂದರೆ ಕಲಿಸುವ ವಿಷಯವನ್ನು ಮೊದಲು ಉತ್ತಮ ರೀತಿಯಲ್ಲಿ ಮೌಖಿಕವಾಗಿ ತಿಳಿಸಬೇಕು. ಬಳಿಕ ಕರಿಹಲಗೆಯಲ್ಲಿ ಬರೆದು ಅಥವಾ ಪಠ್ಯಪುಸ್ತಕದಲ್ಲಿ ಇರುವುದನ್ನು ತೋರಿಸಬೇಕು. ಸಾಧ್ಯವಾದರೆ ಕಾಪಿ ಪುಸ್ತಕದಲ್ಲಿ ಮಕ್ಕಳಿಂದ ಬರೆಸಬೇಕು. ಪ್ರಜ್ಞಾಪೂರ್ವಕ ಕಲಿಯಲು ಅವಕಾಶ ಸಿಕ್ಕಿದಷ್ಟೂ ಪ್ರಬಲವಾಗಿ ಕಂಠಪಾಠವಾಗುತ್ತದೆ.

10. ಸ್ವಲ್ಪ ಹೊತ್ತು ಕಲಿತ ಬಳಿಕ ಅದನ್ನು ನೋಡದೆ ಹೇಳಲು ತಿಳಿಸಬೇಕು. ಅದರಿಂದ ಎಷ್ಟಂಶ ಕಂಠಪಾಠವಾಯಿತು ಹಾಗೂ ಎಲ್ಲೆಲ್ಲ ಕೊರತೆಯಿದೆ ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ನೆನಪಾಗದ ವಿಷಯದ ಬಗ್ಗೆ ಹೆಚ್ಚಿನ ಗಮನವನ್ನು ನೀಡಲು ಸಾಧ್ಯವಾಗುತ್ತದೆ.

11. ಬಾಲ್ಯದಲ್ಲಿನ ಸ್ಮರಣ ಶಕ್ತಿಯಿಂದ ಸಾಧ್ಯಂತ ಪ್ರಯೋಜನ ಪಡೆಯಬೇಕು. ಹಲವು ಅಗತ್ಯದ ವಿಷಯಗಳನ್ನು (ಅಂದರೆ ಪವಿತ್ರ ಕುರ್‌ಆನಿನ ವಚನಗಳು, ದಿಕ್ರ್-ದುಆಗಳು, ಪದ್ಯಸಾಲುಗಳು, ಗಾದೆಗಳು, ಲೋಕೋಕ್ತಿಗಳು ಇತ್ಯಾದಿ) ಚೆನ್ನಾಗಿ ಕಂಠಪಾಠ ಮಾಡಿಸಬೇಕು. ಏಳೆಂಟು ವರ್ಷದ ಮಗುವಿಗೆ ಪ್ರೀತಿಪೂರ್ವಕವಾಗಿ, ಗಮನಗೊಟ್ಟು ಕಲಿಸಬೇಕು ಮತ್ತು ದಿನನಿತ್ಯ ಮಾತೃಭಾಷೆ ಹಾಗೂ ಸಾಮಾನ್ಯ ಗಣಿತವನ್ನು ಕಲಿಸಲು ಕೊಂಚ ಸಮಯ ಮೀಸಲಿರಿಸಬೇಕು ಹೀಗೆ ಹತ್ತು-ಹನ್ನೊಂದು ವರ್ಷ ಪ್ರಾಯವಾಗುವಾಗ ಕುರ್‌ಆನ್ ಹಾಫಿಝ್ ಆಗಲು ಸಾಧ್ಯವಿದೆ. ಮಾತ್ರವಲ್ಲ, ಅಂತಹ ಮಕ್ಕಳು ಆರಂಭದಲ್ಲಿಯೇ ಸಕಲ ವಿಷಯಗಳನ್ನು ಹೊತ್ತುಕೊಂಡು ಹೋಗುತ್ತಿರುವ ಮತ್ತು ಹಿಫ್ಝ್‌ನ ಸೌಭಾಗ್ಯದಿಂದ ವಂಚಿತರಾದ ಮಕ್ಕಳಿಗಿಂತ ಹೆಚ್ಚು ಪ್ರಯೋಜನಕ್ಕೆ ಬರುವರು.

◆ ◆ ◆

ಅಧ್ಯಾಯ-25

ಶಿಕ್ಷಣ (ಓದು-ಬರೆಹ)

ಶಿಕ್ಷಣ ಎಂದರೇನು?

ಶಿಕ್ಷಣ ಎಂದರೆ ಪಾಠ ಮಾಡುವುದು, ಓದಲು-ಬರೆಯಲು ಕಲಿಸುವುದು ಅಥವಾ ವಿವಿಧ ಕಲೆ-ವಿದ್ಯೆಗಳಲ್ಲಿ ಪರಿಣತಿಯನ್ನು ಗಳಿಸಿಕೊಡುವುದಾಗಿದೆ. ಶಿಕ್ಷಣದ ಮೂಲಕ ಅಧ್ಯಾಪಕನು ಹಂತಹಂತವಾಗಿ ಮಕ್ಕಳಿಗೆ ಹಲವು ರೀತಿಯ ಮಾಹಿತಿಗಳನ್ನು ಒದಗಿಸಿ ಕೊಡುತ್ತಾನೆ. ಅವರಿಗೆ ವಿವಿಧ ವಿಷಯಗಳನ್ನು ಅರಿಯುವ, ಕಲಿಯುವ ಅಥವಾ ಮಾಡುವ ಅವಕಾಶ ಒದಗಿಸಿ ಕೊಡುತ್ತಾನೆ. ಹಾಗೆಯೇ ಭಾವೀ ಜೀವನಕ್ಕಾಗಿ ಅವರನ್ನು ಸಿದ್ಧಗೊಳಿಸುತ್ತಾನೆ.

ಶಿಕ್ಷಣದ ಕಾರ್ಯವು ಮೂರು ವಿಷಯಗಳನ್ನು ಅವಲಂಬಿಸಿದೆ:

1) ಅದನ್ನು ಕಲಿಯುವವ (ಮಗು),

2) ಕಲಿಸುವವ (ಶಿಕ್ಷಕ) ಮತ್ತು

3) ಕಲಿಸುವ ವಿಷಯ (ಪಠ್ಯ ಇತ್ಯಾದಿ).

ಶಿಕ್ಷಣದ ಮೂಲಕ ಅಧ್ಯಾಪಕನು ಮಗು ಮತ್ತು ಪಠ್ಯ ವಿಷಯದ ನಡುವೆ ಸಂಬಂಧ ಏರ್ಪಡಿಸುತ್ತಾನೆ.

ಶಿಕ್ಷಣದ ಕಾರ್ಯ ಮತ್ತು ಇತರ ಕೆಲಸಗಳಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಅಕ್ಕಸಾಲಿಗ, ಬಡಗಿ, ಕಮ್ಮಾರ ಮುಂತಾದವರಿಗೆ ತಮ್ಮ ಉದ್ಯೋಗದಲ್ಲಿ ಕೇವಲ ನಿರ್ಜೀವ ವಸ್ತುಗಳೊಂದಿಗೆ ವ್ಯವಹರಿಸಬೇಕಾಗಿರುತ್ತದೆ. ಅವುಗಳಿಗೆ ತಮ್ಮದೇ ಆದ ಸಂಕಲ್ಪ ಅಂತ ಇರುವುದಿಲ್ಲ. ಈ ಕಚ್ಚಾವಸ್ತುಗಳು ಸಂಪೂರ್ಣವಾಗಿ ಅವರ ನಿಯಂತ್ರಣದಲ್ಲಿ ಇರುತ್ತದೆ. ಅವರು ತಮ್ಮ ಕಲೆಗಾರಿಕೆಯನ್ನು ಯಾವ ರೀತಿ ಬೇಕಾದರೂ ಪ್ರದರ್ಶಿಸಬಲ್ಲರು. ಈ ವಸ್ತುಗಳು ಯಾವುದೇ ಪ್ರತಿರೋಧ ಒಡ್ಡಲಾರವು. ಹಾಗಾಗಿ ಅವರು ಪೆಟ್ಟು ಕೊಟ್ಟಷ್ಟೂ ಇವು ಏನಾದರೊಂದು ರೂಪ ಪಡೆದುಕೊಳ್ಳುವುದು ಖಂಡಿತ. ಆದರೆ ಅಧ್ಯಾಪಕನಿಗೆ ಪ್ರಜ್ಞೆ ಇರುವ ವ್ಯಕ್ತಿತ್ವ(ಮಗು)ದೊಂದಿಗೆ ವ್ಯವಹರಿಸಬೇಕಾಗುತ್ತದೆ. ಆ ಮಗುವಿಗೆ ಒಂದು ಸಂಕಲ್ಪ ಇರುತ್ತದೆ, ಅದಕ್ಕೆ ತನ್ನದೇ ಆದ ಆಶೆ-ಆಕಾಂಕ್ಷೆ ಮತ್ತು ಆಸಕ್ತಿಗಳಿರುತ್ತವೆ. ಒಂದು ವೇಳೆ ಮಗು ಸಿದ್ಧನಾಗದಿದ್ದರೆ ಅದರ ಆಸಕ್ತಿ

ಅಥವಾ ಸಂಕಲ್ಪ, ಗಮನ ಮತ್ತು ಇಚ್ಛೆ ಶಾಮೀಲಾಗದಿದ್ದರೆ ಅಥವಾ ಆದರ ಪ್ರಾಯ, ಸಾಮರ್ಥ್ಯ ಮತ್ತು ಗತ ಮಾಹಿತಿಗಳನ್ನು ಪರಿಗಣಿಸದೆ ಇದ್ದರೆ ಅಧ್ಯಾಪಕ ಎಷ್ಟೇ ಪ್ರಯತ್ನ ಪಟ್ಟರೂ ಪರಿಣಾಮ ಶೂನ್ಯವಾಗಿರುತ್ತದೆ. ಆತ ಗಂಟೆಗಟ್ಟಲೆ ಗಂಟಲು ಬಿರಿದರೂ ಯಾವುದೇ ಪ್ರಯೋಜನವಾಗಲಾರದು. ಹಾಗಾಗಿ,

- ಮಗುವನ್ನು, ಪಠ್ಯವಿಷಯ ಮತ್ತು ಶಿಕ್ಷಣದ ವಿಧಾನವನ್ನು ಚೆನ್ನಾಗಿ ಅರಿತಿರಬೇಕಾದುದು ಹಾಗೂ ಮಕ್ಕಳನ್ನು ಸರಿಯಾಗಿ ಸಂಭಾಳಿಸುವ ಮತ್ತು ಅವರಿಗೆ ಪ್ರಯೋಜನಗಳನ್ನು ಒದಗಿಸಿ ಕೊಡಲು ಬೇಕಾದ ಗುಣಗಳನ್ನು ಹೊಂದಿರ ಬೇಕಾದುದು ಓರ್ವ ಅಧ್ಯಾಪಕನ ಮಟ್ಟಿಗೆ ತೀರಾ ಅನಿವಾರ್ಯವಾಗಿದೆ.
- ಮಕ್ಕಳ ಸ್ವಭಾವ ಏನು, ಬೆಳವಣಿಗೆಯ ವಿವಿಧ ಹಂತಗಳು ಯಾವುವು, ಪ್ರತಿಯೊಂದು ಹಂತದ ಮಾನಸಿಕವಾದ ಭಿನ್ನತೆಗಳೇನು; ಮಕ್ಕಳ ಇಚ್ಛೆ, ಒಲವು, ಆಸಕ್ತಿಗಳೇನು; ಅವರು ಯಾವ ರೀತಿ ಗಮನ ಹರಿಸುತ್ತಾರೆ, ಆಸಕ್ತಿ ಹೊಂದುತ್ತಾರೆ, ಕಂಠಪಾಠ ಮಾಡುತ್ತಾರೆ ಅಥವಾ ಒಂದು ವಸ್ತುವನ್ನು ಹೇಗೆ ಅಭ್ಯಾಸ ಮಾಡುತ್ತಾರೆ; ಅವರು ಯಾವ ರೀತಿಯಲ್ಲಿ ಹಂತಹಂತವಾಗಿ ಮುಂದುವರಿಯುತ್ತಾರೆ ಮತ್ತು ಯಾವ ರೀತಿಯಲ್ಲಿ ಹೊಸ ವಿಷಯಗಳನ್ನು ಕಲಿಯುತ್ತಾರೆ, ಅವರ ಕಾರ್ಯ ವಿಧಾನ ಹೇಗಿರುತ್ತದೆ, ಯಾವ ರೀತಿಯ ಕ್ರಿಯೆಯಲ್ಲಿ ಅವರಿಗೆ ಆಸಕ್ತಿ ಇದೆ, ಯಾವ ವಿಷಯದಲ್ಲಿ ಅವರು ಹಿರಿಯರಿಗಿಂತ ಭಿನ್ನರಾಗಿರುತ್ತಾರೆ ಎಂಬಿತ್ಯಾದಿ ವಿಷಯಗಳನ್ನು ಅಧ್ಯಾಪಕನು ಅರಿತಿರಬೇಕಾದುದು ಅಗತ್ಯ.
- ಅಧ್ಯಾಪಕನಿಗೆ ತನ್ನ ಪಠ್ಯದಲ್ಲಿ ಒಲವು ಮತ್ತು ಪಠ್ಯವಿಷಯದ ಬಗ್ಗೆ ಚೆನ್ನಾಗಿ ಅರಿವು ಇರಬೇಕಾಗಿದೆ. ತನ್ನ ಮಾಹಿತಿಯನ್ನು (ಜ್ಞಾನವನ್ನು) ಹೆಚ್ಚಿಸುತ್ತ ಇರಬೇಕು.
- ಮಕ್ಕಳಿಗೆ ಏನನ್ನು ಕಲಿಸಬೇಕು, ಯಾವ ಕ್ರಮದಲ್ಲಿ ವಿಷಯಗಳನ್ನು ತಿಳಿಸಬೇಕು ಮತ್ತು ಓದು ಬರೆಹ ಕಲಿಯಲು ಯಾವ ವಿಧಾನವನ್ನು ಅನುಸರಿಸಬೇಕು ಎಂಬುದರ ಅರಿವು ಅಧ್ಯಾಪಕನಿಗೆ ಇರಬೇಕು.

ಈ ಮೇಲಿನ ವಿಷಯಗಳ ಹೊರತು ಶಿಕ್ಷಣವು ಪರಿಣಾಮಕಾರಿಯಾಗಲಾರದು.

ಯಶಸ್ವೀ ಕಲಿಕೆಯ ಕೆಲವು ಸೂತ್ರಗಳು

- ವಿದ್ಯಾರ್ಥಿಗಳಲ್ಲಿ ತಮ್ಮ ವಿದ್ಯೆ-ಕಲೆಗಾರಿಕೆಯನ್ನು ಹೆಚ್ಚಿಸುವ ಆಸಕ್ತಿಯನ್ನು ಹುಟ್ಟಿಸಬೇಕು.
- ಅದಕ್ಕಾಗಿ ಮೊದಲೇ ಸಿದ್ಧತೆ ನಡೆಸಿರಬೇಕು ಮತ್ತು ತರಗತಿಯನ್ನು ಪೂರ್ವ ನಿರ್ಧರಿತ ಪಠ್ಯ-ಪದ್ಧತಿಯಂತೆಯೇ ನೀಡುತ್ತ ಇರಬೇಕು.
- ಕಲಿಕೆಯ ವೇಳೆ ತರಗತಿಯಲ್ಲಿ ಪ್ರೀತಿ-ಸಹಾನುಭೂತಿಯ ವಾತಾವರಣ ಇರಬೇಕು. ಗದರಿಕೆ-ಪೆಟ್ಟು ಕೊಡುವ ಅವಕಾಶವೇ ಕಡಿಮೆ ಇರಬೇಕು.

• ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಮಧ್ಯೆ ಸಹಕಾರದ ಸ್ಫೂರ್ತಿ ಹುಟ್ಟಿಸುವಂತಿರಬೇಕು. ಅಧ್ಯಾಪಕನು ತನ್ನ ವಿದ್ಯಾರ್ಥಿಗಳ ಆಸಕ್ತಿ ಮತ್ತು ಗಮನವನ್ನು ನಿರಂತರವಾಗಿ ತನ್ನತ್ತ ಸೆಳೆಯುವಲ್ಲಿ ಸಫಲನಾಗಿರಬೇಕು.

• ತರಗತಿಯಲ್ಲಿ ಹೊಸ ವಿಷಯವನ್ನು ಹಳೆಯ ವಿಷಯ ಮತ್ತು ದೈನಂದಿನ ಜೀವನದೊಂದಿಗೆ ಸಮನ್ವಯಗೊಳಿಸಿ ಅಥವಾ ಅದಕ್ಕೆ ಹೋಲಿಸಿ ಕಲಿಸುವಂತಿರಬೇಕು.

• ವಿದ್ಯಾರ್ಥಿಗಳ ವೈಯಕ್ತಿಕ ಮತ್ತು ಸಾಮೂಹಿಕ ಸಮಸ್ಯೆಗಳನ್ನು ದೂರ ಮಾಡುವ ಕುರಿತು ಸಂಪೂರ್ಣ ಗಮನವನ್ನು ಹರಿಸುತ್ತಿರಬೇಕು.

• ವಿದ್ಯಾರ್ಥಿಗಳಲ್ಲಿ ಚಿಂತನಾ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ, ಆತ್ಮವಿಶ್ವಾಸ ಮತ್ತು ತಮ್ಮ ಜ್ಞಾನದ ಮೇಲೆ ವಿಶ್ವಾಸ ಹಾಗೂ ಭರವಸೆಯನ್ನು ಉಂಟು ಮಾಡಬೇಕು.

• ಕಲಿತುದನ್ನು ಆಚರಣೆಗೆ ತರುವ ವಿಧಾನವನ್ನು ಕಲಿಸಬೇಕು ಮತ್ತು ಅನುಭವಕ್ಕಾಗಿ ಸಾಕಷ್ಟು ಅವಕಾಶವನ್ನೂ ಒದಗಿಸಿ ಕೊಡಬೇಕು.

◆ ◆ ◆

ಅಧ್ಯಾಯ-26

ಶಿಕ್ಷಣದ ವಿಧಾನ (ಪವಿತ್ರ ಕುರ್‌ಆನಿನ ಬೆಳಕಿನಲ್ಲಿ)

ಶಿಕ್ಷಣ-ತರಬೇತಿಗೆ ಸಂಬಂಧಿಸಿ ಪ್ರವಾದಿವಚನಗಳ ಬೆಳಕಿನಲ್ಲಿ ಈ ಹಿಂದೆಯೇ ಸಂಕ್ಷಿಪ್ತ ವಿವರಣೆಯನ್ನು ಓದಿದ್ದೇವೆ. ಈಗ ಪವಿತ್ರ ಕುರ್‌ಆನಿನಲ್ಲಿ ಶಿಕ್ಷಣ ವಿಧಾನದ ಮೇಲೆ ಯಾವ ರೀತಿ ಬೆಳಕು ಚೆಲ್ಲಲಾಗಿದೆ ಎಂಬುದನ್ನು ನೋಡೋಣ.

ವಿದ್ಯಾರ್ಥಿಯ ಇಚ್ಛೆ ಮತ್ತು ಸಿದ್ಧತೆ

ಶಿಕ್ಷಣ ಮತ್ತು ಬೋಧನೆಗೆ ಸಂಬಂಧಿಸಿ ವಿದ್ಯಾರ್ಥಿಯಲ್ಲಿ ಇಚ್ಛೆ ಮತ್ತು ಸ್ವಯಂ ಸಿದ್ಧತೆ ಅಗತ್ಯ ಎಂಬುದನ್ನು ಪವಿತ್ರ ಕುರ್‌ಆನನ್ನು ತೆರೆಯುವಾಗಲೇ ತಿಳಿದು ಬರುತ್ತದೆ. ಎಲ್ಲಿಯ ವರೆಗೆ ವಿದ್ಯಾರ್ಥಿಯು ಸ್ವಯಂ ಇಚ್ಛಿಸುವುದಿಲ್ಲವೋ ಮತ್ತು ಅವನ ಮನ-ಮಸ್ತಿಷ್ಕಗಳು ಸಿದ್ಧವಾಗುವುದಿಲ್ಲವೋ ಅಲ್ಲಿಯ ವರೆಗೆ ಶಿಕ್ಷಣ-ಬೋಧನೆಯು ಪರಿಣಾಮಕಾರಿ ಯಾಗಲಾರದು. ಅವನಿಗೆ ಕಲಿಸುವವನು ಎಷ್ಟೇ ದೊಡ್ಡ ಪ್ರಭಾವಶಾಲಿ ವ್ಯಕ್ತಿತ್ವವನ್ನು ಹೊಂದಿದ್ದರೂ ಪ್ರಯೋಜನವೆನಿಸದು. ಫಾತಿಹಾ ಅಧ್ಯಾಯದಲ್ಲಿ ವಿದ್ಯಾರ್ಥಿಯ ಕಡೆಯಿಂದ...

''ನಮಗೆ ಸನ್ಮಾರ್ಗವನ್ನು ತೋರಿಸು.'' (ಪವಿತ್ರ ಕುರ್‌ಆನ್ 1:6)

ಎಂಬ ನಿಷ್ಕಳಂಕ ಬೇಡಿಕೆಯೇ ಅದಕ್ಕೆ ಸ್ಪಷ್ಟ ಪುರಾವೆಯಾಗಿದೆ. ಆದ್ದರಿಂದ ಅಧ್ಯಾಪಕನು ವಿದ್ಯಾರ್ಥಿಯಲ್ಲಿ ಜ್ಞಾನದಾಹ ಮತ್ತು ವಿದ್ಯಾಕಾಂಕ್ಷೆಯನ್ನು ಹುಟ್ಟಿಸಬೇಕಾದುದು ಹಾಗೂ ಶಿಕ್ಷಣ ಗಳಿಸಲು ಸಿದ್ಧಗೊಳಿಸಬೇಕಾದುದು ಅಗತ್ಯ. ಅದರ ಹೊರತು ಅವನ ಎಲ್ಲ ಪ್ರಯತ್ನಗಳೂ ವ್ಯರ್ಥವೆನಿಸುವುದು. ಈ ಉದ್ದೇಶವನ್ನಿಟ್ಟುಕೊಂಡು ಅಧ್ಯಾಪಕನು ವಿದ್ಯಾರ್ಥಿಗಳಿಗೆ ಜ್ಞಾನಿ-ಅಜ್ಞಾನಿಯ ವ್ಯತ್ಯಾಸ, ಜ್ಞಾನಿಗಳ ಮೇಲೆ ಅಲ್ಲಾಹನ ವಿಶೇಷ ಅನುಗ್ರಹ, ವಿದ್ಯೆಯ ಅಗತ್ಯ ಮತ್ತು ಮಹತ್ವವನ್ನು ಮನಮುಟ್ಟುವ ಶೈಲಿಯಲ್ಲಿ ಆಧಾರ-ಪ್ರಮಾಣಗಳ ಸಹಿತ ಮತ್ತು ಘಟನೆಗಳ ಆಧಾರದಲ್ಲಿ ನಿರಂತರ ಉಪದೇಶಿಸುತ್ತಾ ಇರಬೇಕು. ಈ ಮೂಲಕ ಅವರಲ್ಲಿ ಆಸಕ್ತಿ ಹುಟ್ಟಬೇಕು ಮತ್ತು ವಿದ್ಯೆ ಗಳಿಸಲು ಎಲ್ಲ ರೀತಿಯಿಂದಲೂ ಅವರು ಸಿದ್ಧರಾಗಬೇಕು.

ಸ್ವತಃ ಪವಿತ್ರ ಕುರ್‌ಆನ್, ಈ ಕೆಳಗಿನ ವಚನಗಳ ಮೂಲಕ ಶಿಕ್ಷಣ ಗಳಿಸಲು ಉಪದೇಶಿಸಿದೆ:

''ಜ್ಞಾನಿಗಳು ಮತ್ತು ಅಜ್ಞಾನಿಗಳು ಇವರಿಬ್ಬರು ಎಂದಾದರೂ ಸರಿಸಮಾನರಾಗಬಲ್ಲರೇ?'' (ಪವಿತ್ರ ಕುರ್‌ಆನ್: 39:9)

''ಸದ್ವಿವೇಕ ಪ್ರಾಪ್ತವಾದವನಿಗೆ ವಾಸ್ತವದಲ್ಲಿ ಮಹಾ ಸಂಪತ್ತು ಪ್ರಾಪ್ತವಾಯಿತೆಂದೇ ಅರ್ಥ.'' (ಪವಿತ್ರ ಕುರ್‌ಆನ್, 2:269)

''ನಿಮ್ಮ ಪೈಕಿ ಸತ್ಯವಿಶ್ವಾಸವುಳ್ಳವರಿಗೆ ಮತ್ತು ಜ್ಞಾನವು ನೀಡಲ್ಪಟ್ಟಿರುವವರಿಗೆ ಅಲ್ಲಾಹನು ಉನ್ನತ ಪದವಿಗಳನ್ನು ದಯಪಾಲಿಸುವನು.'' (ಪವಿತ್ರ ಕುರ್‌ಆನ್, 58:11)

''ವಾಸ್ತವದಲ್ಲಿ ಅಲ್ಲಾಹನ ದಾಸರಲ್ಲಿ ಜ್ಞಾನವುಳ್ಳವರು ಮಾತ್ರ ಅವನನ್ನು ಭಯಪಡುತ್ತಾರೆ.'' (ಪವಿತ್ರ ಕುರ್‌ಆನ್, 35:28)

ಅಧ್ಯಾಪಕನ ಜ್ಞಾನದ ಮೇಲೆ ಭರವಸೆ

ಅಧ್ಯಾಪಕನ ಜ್ಞಾನದ ಮೇಲೆ ಅಪಾರವಾದ ಭರವಸೆಯನ್ನಿರಿಸುವುದು ವಿದ್ಯೆ ಗಳಿಸಲಿಕ್ಕಿರುವ ಎರಡನೆಯ ಅನಿವಾರ್ಯ ಶರ್ತವಾಗಿದೆ. ವಿದ್ಯಾರ್ಥಿಗಳಿಗೆ ತಿಳಿದಿಲ್ಲದ ವಿಷಯಗಳನ್ನು ಅವರಿಗೆ ಕಲಿಸಿಕೊಡುವುದೇ ಅಧ್ಯಾಪಕನ ಕರ್ತವ್ಯವಾಗಿದೆ. ಒಂದು ವೇಳೆ ಅಧ್ಯಾಪಕನ ಅಜ್ಞಾನ ಅಥವಾ ಕೊರತೆಯ ಕಾರಣ ವಿದ್ಯಾರ್ಥಿಗಳ ಭರವಸೆಯೇ ಹೊರಟು ಹೋದರೆ ಮತ್ತು ಅಧ್ಯಾಪಕ ಹೇಳುತ್ತಿರುವುದೆಲ್ಲವೂ ಸರಿ ಹಾಗೂ ಅದರಲ್ಲಿಯೇ ಒಳಿತಿದೆ ಎಂಬ ವಿಶ್ವಾಸವೇ ಇಲ್ಲವಾದರೆ, ಅವನ ಉಪದೇಶದಿಂದ ಯಾವುದೇ ಪ್ರಯೋಜನವಾಗಲಾರದು.

''ಇದು(ದೈವಿಕ) ಗ್ರಂಥ; ಸಂದೇಹಾತೀತವಿದು. ಭಯಭಕ್ತಿಯುಳ್ಳವರಿಗೆ ಇದು ಮಾರ್ಗದರ್ಶಿ. ಪರೋಕ್ಷದ ಮೇಲೆ ವಿಶ್ವಾಸವಿರಿಸುವವರಿಗೆ, ನಮಾಝನ್ನು ಸಂಸ್ಥಾಪಿಸುವವರಿಗೆ, ನಾವು ನೀಡಿರುವ ಸಂಪತ್ಸೌಕರ್ಯಗಳಿಂದ ವ್ಯಯಿಸುವವರಿಗೆ.''

(ಪವಿತ್ರ ಕುರ್‌ಆನ್: 2:2-3)

ಪರೋಕ್ಷದ ಮೇಲೆ ವಿಶ್ವಾಸವಿರಿಸುವುದೆಂದರೆ, ಕೇವಲ ಪವಿತ್ರ ಕುರ್‌ಆನ್ ಹೇಳಿದ ಮಾತ್ರಕ್ಕೆ, ಮಾನವನ ಬುದ್ಧಿಗೆ ನಿಲುಕದ ಮತ್ತು ಪ್ರತ್ಯಕ್ಷವಾಗಿ ಸಾಮಾನ್ಯ ಮಾನವರಿಗೆ ಕಾಣದ ವಿಷಯಗಳ ಮೇಲೆ ಸಂಪೂರ್ಣ ವಿಶ್ವಾಸವಿರಿಸುವುದು. ಉದಾ: ಅಲ್ಲಾಹನ ಗುಣ ವಿಶೇಷಗಳು, ದೇವಚರರು, ದಿವ್ಯವಾಣಿ, ಸ್ವರ್ಗ-ನರಕ ಇತ್ಯಾದಿ.

ಈ ವಚನದಿಂದ ಪ್ರಸ್ತುತ ಶರ್ತಕ್ಕೆ ಪುಷ್ಟಿ ದೊರೆಯುತ್ತದೆ. ಹಾಗಾಗಿ ಅಧ್ಯಾಪಕನು ವಿದ್ಯಾರ್ಥಿಗಳ ವಿಶ್ವಾಸವನ್ನು ಗಳಿಸಿಕೊಳ್ಳಬೇಕು. ಇದು ಅವನು ಶೈಕ್ಷಣಿಕವಾಗಿ ಅಗತ್ಯವಾದ

ಗುಣವಿಶೇಷಗಳನ್ನು ಹೊಂದಿದಾಗ ಮಾತ್ರವೇ ಸಾಧ್ಯವಾಗುವುದು. ಹಾಗಾಗಿ ಅಧ್ಯಾಪಕನು ಆದಷ್ಟು ಕಲಿತಿರಬೇಕು ಮತ್ತು ಕಲಿಸುವ ಸಾಮರ್ಥ್ಯವನ್ನು ಗಳಿಸಿರಬೇಕು.

ಅಲ್ಲಾಹನೇ ವಿದ್ಯೆಯ ಮೂಲ ಎಂಬ ವಿಶ್ವಾಸ

ಒಬ್ಬನ ವಿದ್ಯೆಯು ಸ್ವಯಂ ಅವನಿಗೂ ಸಮಾಜ ಮತ್ತು ಮಾನವೀಯತೆಗೂ ಪ್ರಯೋಜನವೆನಿಸಬೇಕಾದರೆ, ಅದು ಅಲ್ಲಾಹನ ನಾಮದೊಂದಿಗೆ ಆರಂಭವಾಗಿರಬೇಕು; ಅಲ್ಲಾಹನ ಗುಣ-ವಿಶೇಷಗಳನ್ನು ಕಣ್ಣ ಮುಂದಿರಿಸಿ, ಅವನ ಆಶ್ರಯದಲ್ಲಿ ಗಳಿಸಿರಬೇಕು, ಅವನನ್ನು ವಿದ್ಯೆಯ ಮೂಲ ಸೆಲೆ ಎಂದು ಅಂಗೀಕರಿಸಿರಬೇಕು, ಜ್ಞಾನವು ಅಲ್ಲಾಹನ ಬಳಿಯೇ ಇರುವುದು ಮತ್ತು ಯಾರಿಗಾದರೂ ವಿದ್ಯೆ ದೊರೆಯಿತೆಂದರೆ ಅಲ್ಲಾಹನ ಅನುಗ್ರಹವೆಂದೇ ನಂಬಬೇಕು. ಹೀಗಿದ್ದಾಗ ಮಾತ್ರವೇ ವ್ಯಕ್ತಿಯು ತನ್ನ ವಿದ್ಯೆಯು ಅಹಂಕಾರದಲ್ಲಿ ಬೀಳುವುದರಿಂದ, ಅಡ್ಡ ಮಾರ್ಗದ ಮೂಲಕ ವಿದ್ಯೆ ಗಳಿಸುವುದರಿಂದ ಮತ್ತು ಕೆಟ್ಟ ಉದ್ದೇಶಗಳಿಗಾಗಿ ಅದನ್ನು ಬಳಸುವುದರಿಂದ ಹಾಗೂ ಶೈಕ್ಷಣಿಕ ರಂಗದಲ್ಲಿ ಶೈತಾನನನ್ನು ಅನುಸರಿಸುವುದರಿಂದ ಸುರಕ್ಷಿತನಾಗಿರಲು ಸಾಧ್ಯ. ಮಾತ್ರವಲ್ಲ ವಿದ್ಯೆಯ ಹೆಚ್ಚಳಕ್ಕಾಗಿ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಲೂ ಇರುವನು. ಈ ಎಲ್ಲ ವಾಸ್ತವಿಕತೆಗಳಿಗೆ ಈ ಕೆಳಗಿನ ವಚನಗಳು ಪುರಾವೆ ಒದಗಿಸುತ್ತವೆ.

''ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ.'' (ಪವಿತ್ರ ಕುರ್‌ಆನ್: 49:13)

''ಅಲ್ಲಾಹ್ ನಿಮಗೆ ಸುಸ್ಪಷ್ಟ ಆದೇಶಗಳನ್ನೀಯುತ್ತಾನೆ ಮತ್ತು ಅವನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.'' (ಪವಿತ್ರ ಕುರ್‌ಆನ್: 24:18)

''ಅಲ್ಲಾಹನು ತಾನಿಚ್ಛಿಸಿದವರಿಗೆ ತನ್ನ ಪ್ರಕಾಶದೆಡೆಗೆ ಮಾರ್ಗದರ್ಶನ ನೀಡುತ್ತಾನೆ. ಅವನು ಜನರಿಗೆ ಉಪಮೆಗಳ ಮೂಲಕ ಮನವರಿಕೆ ಮಾಡಿಸುತ್ತಾನೆ. ಅಲ್ಲಾಹ್ ಸಕಲ ವಸ್ತುಗಳನ್ನೂ ಬಲ್ಲವನಾಗಿರುತ್ತಾನೆ.'' (ಪವಿತ್ರ ಕುರ್‌ಆನ್: 24:35)

''ನನ್ನ ಪ್ರಭುವಿನ ಜ್ಞಾನವು ಪ್ರತಿಯೊಂದು ವಸ್ತುವನ್ನಾವರಿಸಿ ಕೊಂಡಿದೆ.''
(ಪವಿತ್ರ ಕುರ್‌ಆನ್: 6:80)

''(ಸಂದೇಶವಾಹಕರೇ) ಓದಿರಿ, ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದೊಂದಿಗೆ.'' (ಪವಿತ್ರ ಕುರ್‌ಆನ್: 96:1)

''ನೀವು ಕುರ್‌ಆನನ್ನು ಪಠಿಸಲಾರಂಭಿಸುವಾಗ ಶಪಿತ ಶೈತಾನನಿಂದ ಅಲ್ಲಾಹನ ಅಭಯ ಯಾಚಿಸಿಕೊಳ್ಳಿರಿ.'' (ಪವಿತ್ರ ಕುರ್‌ಆನ್: 16:98)

"ಶೈತಾನನು ನಿಮ್ಮನ್ನೆಂದಾದರೂ ಪ್ರಚೋದಿಸಿದರೆ ಅಲ್ಲಾಹನ ಅಭಯ ಯಾಚಿಸಿರಿ. ಅವನು ಸಕಲವನ್ನೂ ಆಲಿಸುವವನೂ ಅರಿಯುವವನೂ ಆಗಿರುತ್ತಾನೆ."

(ಪವಿತ್ರ ಕುರ್‌ಆನ್: 7:200, 41:36)

ಒಟ್ಟಿನಲ್ಲಿ ವಿದ್ಯೆಯ ಮೂಲ ಸೆಲೆಯು ಸರ್ವಶಕ್ತನಾದ ಅಲ್ಲಾಹನಾಗಿದ್ದಾನೆ ಎಂಬುದನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬೇರೂರಿಸುವ ಕೆಲಸ ಅಧ್ಯಾಪಕನದ್ದಾಗಿದೆ. ಅವನ ಜ್ಞಾನವು ಸಕಲ ವಸುಗಳನ್ನೂ ಆವರಿಸಿದೆ. ಜ್ಞಾನದ ಒಂದಂಶವು ಯಾರಿಗಾದರೂ ದೊರೆತರೆ ಅದು ಅಲ್ಲಾಹನ ಅನುಗ್ರಹವೇ ಆಗಿದೆ.

ಓದಲು ಬರೆಯಲು ಪ್ರಾರಂಭಿಸುವಾಗ ಅಧ್ಯಾಪಕನು ಸ್ವಯಂ 'ಅಊದು ಬಿಲ್ಲಾಹಿ ಮಿನಶ್ಶೈತಾನಿರ್‍ರಜೀವ್, ಬಿಸ್ಮಿಲ್ಲಾಹಿರ್‍ರಹ್ಮಾನಿರ್‍ರಹೀವ್' ಪಠಿಸಬೇಕು. ಜತೆಗೆ ವಿದ್ಯಾರ್ಥಿಗಳಿಂದಲೂ ಓದಿಸಬೇಕು ಮತ್ತು ಈ ರೀತಿ ಪ್ರಾರ್ಥಿಸುತ್ತಲೂ ಇರಬೇಕು,

"ಓ ನನ್ನ ಪ್ರಭೂ ನನಗೆ ಇನ್ನಷ್ಟು ಜ್ಞಾನ ದಯಪಾಲಿಸು."

(ಪವಿತ್ರ ಕುರ್‌ಆನ್: 20:114)

ಮತ್ತು ವಿದ್ಯಾರ್ಥಿಗಳಿಗೂ ಹೀಗೆ ಪ್ರಾರ್ಥಿಸಲು ತಾಕೀತು ಮಾಡುತ್ತಿರಬೇಕು. ಈ ಮೂಲಕ ಸ್ವಯಂ ಅಧ್ಯಾಪಕ ಮತ್ತು ವಿದ್ಯಾರ್ಥಿಗಳೂ ತಮ್ಮ ಜ್ಞಾನದ ಬಗ್ಗೆ ಅಹಂಕಾರ ಮೆರೆಯುವುದರಿಂದ, ವಿದ್ಯೆಯನ್ನು ಅಕ್ರಮವಾಗಿ ಗಳಿಸುವುದರಿಂದ ಮತ್ತು ಅಕ್ರಮ ಉದ್ದೇಶಗಳಿಗೆ ಬಳಸುವುದರಿಂದ, ಹಾಗೆಯೇ ವಿದ್ಯೆಯ ಹಾದಿಯಲ್ಲಿ ಶೈತಾನನನ್ನು ಅನುಸರಿಸುವುದರಿಂದ ಸುರಕ್ಷಿತರಾಗಿರಬಲ್ಲರು.

ಏನಾದರೂ ತಿಳಿಸುವುದಕ್ಕೆ ಮುನ್ನ ಚೆನ್ನಾಗಿ ಗಮನ ಸೆಳೆಯಬೇಕು

ಒಂದು ವಿಷಯದ ಬಗ್ಗೆ ಸಂಪೂರ್ಣ ಗಮನ ಹರಿದಿದ್ದಾಗ ಮತ್ತು ಆ ಕುರಿತು ಕುತೂಹಲ ತಾಳಿರುವಾಗ ಮಾತ್ರವೇ ಅದನ್ನು ಮನಗೊಟ್ಟು ಆಲಿಸಲಾಗುತ್ತದೆ ಹಾಗೂ ಸಮಾಧಾನ ಚಿತ್ತದಿಂದ ಆ ಬಗ್ಗೆ ಆಲೋಚಿಸಲು ಸಾಧ್ಯವಾಗುತ್ತದೆ. ಪವಿತ್ರ ಕುರ್‌ಆನ್ ಆ ಕುತೂಹಲವನ್ನು ಬಡಿದೆಬ್ಬಿಸಲು ಮತ್ತು ವ್ಯಕ್ತಿಯ ಸಂಪೂರ್ಣ ಗಮನವನ್ನು ಸೆಳೆಯಲು ವಿವಿಧ ವಿಧಾನಗಳನ್ನು ಅನುಸರಿಸಿದೆ. ಉದಾಹರಣೆಗೆ:

1. ಬಿಡಿ ಅಕ್ಷರಗಳಿಂದ ಆರಂಭಿಸುತ್ತದೆ–

الٓمٓ الٓر حمٓ

2. ಪ್ರಶ್ನೆಗಳನ್ನು ಕೇಳುತ್ತದೆ,

"ಸತ್ಯವಿಶ್ವಾಸಿಗಳೇ, ನಿಮ್ಮನ್ನು ವೇದನಾಯುಕ್ತ ಯಾತನೆಯಿಂದ ರಕ್ಷಿಸುವಂತಹ ಒಂದು ವ್ಯಾಪಾರವನ್ನು ನಾನು ನಿಮಗೆ ತೋರಿಸಿಕೊಡಲೇ?" (ಪವಿತ್ರ ಕುರ್‌ಆನ್: 61:10)

''ಓ ಪೈಗಂಬರರೇ, ಇವರೊಡನೆ ಹೇಳಿರಿ; ತಮ್ಮ ಕರ್ಮಗಳಲ್ಲಿ ಅತ್ಯಧಿಕ ವಿಫಲರು ಯಾರೆಂದು ನಿಮಗೆ ತಿಳಿಸಲೇ?'' (ಪವಿತ್ರ ಕುರ್‌ಆನ್: 18:103)

3. ಯಾವುದಾದರೂ ಘಟನಾವಳಿಯನ್ನು ಉಲ್ಲೇಖಿಸುತ್ತದೆ,

''ಭೂಮಿಯು ತನ್ನ ಸಂಪೂರ್ಣ ಉಗ್ರತೆಯೊಂದಿಗೆ ಕುಲುಕಲ್ಪಡುವಾಗ, ಅದು ತನ್ನೊಳಗಿನ ಸಕಲ ಹೊರೆಗಳನ್ನೂ ಹೊರ ಹಾಕಿ ಬಿಡುವಾಗ ಮತ್ತು ಮನುಷ್ಯನು 'ಇದಕ್ಕೇನಾಗುತ್ತದೆ?' ಎನ್ನುವಾಗ...'' (ಪವಿತ್ರ ಕುರ್‌ಆನ್: 99:1-3)

''ಆಕಾಶವು ಒಡೆದು ಸೀಳುವಾಗ, ನಕ್ಷತ್ರಗಳು ಚದುರಿ ಹೋಗುವಾಗ, ಸಮುದ್ರಗಳು ಭೇದಿಸಲ್ಪಡುವಾಗ ಮತ್ತು ಸಮಾಧಿಗಳು ತೆರೆಯಲ್ಪಡುವಾಗ...''

(ಪವಿತ್ರ ಕುರ್‌ಆನ್: 82:1-4)

ಹಾಗೆಯೇ ಅರ್ರಹ್ಮಾನ್ ಮತ್ತು ಅಲ್‌ವಾಕಿಅಃ ಅಧ್ಯಾಯಗಳಲ್ಲಿ ಬಹಳ ವಿಸ್ತಾರವಾಗಿ ದೃಶ್ಯಾವಳಿಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ.

4. ಇತರರ ಪ್ರಶ್ನೆ ಹಾಗೂ ಆಕ್ಷೇಪಗಳನ್ನು ಮುಂದಿರಿಸಿ, ಅವುಗಳ ಉತ್ತರದ ಕಡೆಗೆ ಮನಸ್ಸುಗಳನ್ನು ಸೆಳೆಯುತ್ತದೆ.

ಬೇಡುವವನೊಬ್ಬನು ಯಾತನೆಯನ್ನು ಬೇಡಿದ್ದಾನೆ. ಅದು (ಆ ಯಾತನೆಯು) ಖಂಡಿತವಾಗಿಯೂ ಸಂಭವಿಸಿಯೇ ತೀರುವುದು.'' (ಪವಿತ್ರ ಕುರ್‌ಆನ್: 70:1)

''ಅವರು ನಿಮ್ಮೊಡನೆ ಕೇಳುತ್ತಾರೆ...'' ಎಂದು ಹದಿನೈದು ಕಡೆಗಳಲ್ಲಿ ಮಾತನ್ನಾರಂಭಿಸುತ್ತದೆ.

''ನಾವು ಎಲುಬುಗಳೂ ಮಣ್ಣಾಗಿ ಹೋದ ಬಳಿಕ ನಮ್ಮನ್ನು ಹೊಸದಾಗಿ ಸೃಷ್ಟಿಸಿ ಎಬ್ಬಿಸಲಾಗುವುದೇ?'' (ಪವಿತ್ರ ಕುರ್‌ಆನ್: 17:98)

''ಅಲ್ಲಾಹನು ಸಂದೇಶವಾಹಕನಾಗಿ ಮಾನವನನ್ನು ಕಳುಹಿಸಿದನೇ?''

(ಪವಿತ್ರ ಕುರ್‌ಆನ್: 17:94)

5. ಏಕಾಏಕಿ ಯಾವುದಾದರೂ ಘಟನೆಯ ಸುದ್ದಿ ತಿಳಿಸಿ ಅಥವಾ ಮುನ್ಸೂಚನೆ ನೀಡಿ, ಜನರಲ್ಲಿ ಆಲಿಸುವ ಆಸಕ್ತಿಯನ್ನು ಹುಟ್ಟಿಸುತ್ತದೆ.

''ಅಲಿಫ್ ಲಾಮ್ಮೀಮ್, ರೋಮನರು ಸಮೀಪದ ಭೂಭಾಗದಲ್ಲಿ ಪರಾಜಿತರಾದರು ಮತ್ತು ತಮ್ಮ ಈ ಪರಾಜಯದ ತರುವಾಯ ಕೆಲವೇ ವರ್ಷಗಳಲ್ಲಿ ಅವರು ವಿಜಯಿಗಳಾಗುವರು.'' (ಪವಿತ್ರ ಕುರ್‌ಆನ್: 30:1-4)

ರೋಮನರು ಇರಾನಿಯರಿಂದ ಸಂಪೂರ್ಣವಾಗಿ ಪರಾಜಿತರಾಗಿದ್ದು ಮತ್ತೆ ಜಯಿಸುವ ಯಾವುದೇ ಲಕ್ಷಣ ಗೋಚರಿಸದಿದ್ದಂತಹ ಸಂದರ್ಭದಲ್ಲಿ, ಅವರು ವಿಜಯಿಗಳಾಗುವರೆಂಬ ಭವಿಷ್ಯವಾಣಿಯನ್ನು ಈ ವಚನದಲ್ಲಿ ಸೂಚಿಸಲಾಗಿದೆ.

"ಸಂದೇಶವಾಹಕರೇ, ನಾವು ನಿಮಗೆ ಸುಸ್ಪಷ್ಟ ವಿಜಯ ಪ್ರದಾನ ಮಾಡಿದೆವು."
(ಪವಿತ್ರ ಕುರ್‌ಆನ್: 48:1)

ಇದು ಹುದೈಬಿಯಾದಲ್ಲಿ ಮುಸ್ಲಿಮರು ಮಕ್ಕಾದ ಸತ್ಯನಿಷೇಧಿಗಳ ಮುಂದೆ ಮೇಲ್ನೋಟಕ್ಕೇ ಸೋತು ಒಪ್ಪಂದ ಮಾಡಿಕೊಂಡ ಸಂದರ್ಭದಲ್ಲಿ ಅವತೀರ್ಣವಾದ ವಚನವಾಗಿದೆ.

6. ಬಲವಾಗಿ ಎಚ್ಚರಿಸುವ ಅಥವಾ ಹೆದರಿಸುವುದಕ್ಕಾಗಿ ಹೆಚ್ಚಿನ ಕಡೆ ಈ ಕೆಳಗಿನ ರೂಪದಲ್ಲಿ ಒಂದೇ ಬಾರಿಗೆ ಹಲವು ವಿಷಯಗಳನ್ನು ಪ್ರಸ್ತಾಪಿಸುತ್ತದೆ.

"ಮಹಾ ದುರಂತ. ಏನಿದು ಮಹಾ ದುರಂತ? ಆ ಮಹಾ ದುರಂತವೇನೆಂದು ನಿಮಗೇನು ಗೊತ್ತು? ಅಂದು ಜನರು ಚದುರಿದ ಹಾತೆಗಳಂತಾಗುವರು ಮತ್ತು ಪರ್ವತಗಳು ಬಣ್ಣ ಬಣ್ಣದ ಹಿಂಜಿದ ಉಣ್ಣೆಯಂತಾಗಿ ಬಿಡುವುವು..."(ಪವಿತ್ರ ಕುರ್‌ಆನ್: 101:1-5)

ಈ ವಚನಗಳಲ್ಲಿ ಸುದ್ದಿ, ಪ್ರಶ್ನೆ, ದೃಶ್ಯಾವಳಿ ಎಲ್ಲವನ್ನೂ ಒಟ್ಟಿಗೇ ಉಲ್ಲೇಖಿಸಿ ಮನಸ್ಸುಗಳನ್ನು ತನ್ನೆಡೆಗೆ ಸೆಳೆಯಲಾಗಿದೆ.

ಅಧ್ಯಾಪಕನೂ ಸಮಯ ಸಂದರ್ಭ ನೋಡಿಕೊಂಡು, ಸೂಕ್ತವಾದ ವಿವಿಧ ವಿಧಾನಗಳನ್ನು ಅನುಸರಿಸುತ್ತ ಪಾಠ ಆರಂಭಿಸುವುದಕ್ಕೆ ಮುಂಚೆ ವಿದ್ಯಾರ್ಥಿಗಳ ಸಂಪೂರ್ಣ ಗಮನವನ್ನು ತನ್ನೆಡೆಗೆ ಸೆಳೆಯಬೇಕು. ಆ ನಂತರ ವಿಷಯವನ್ನು ಮಂಡಿಸಬೇಕು.

ವಿಷಯ ಮಂಡನೆ:

ಸತ್ಯದ ಆಗ್ರಹ ಹುಟ್ಟಿಸಿ ಮತ್ತು ತನ್ನೆಡೆಗೆ ಗಮನವನ್ನು ಸೆಳೆದ ಬಳಿಕ ಪವಿತ್ರ ಕುರ್‌ಆನ್ ತನ್ನ ವಿಷಯವನ್ನು ಮುಂದಿರಿಸುತ್ತದೆ. ಈ ವಿಷಯ ಮಂಡನೆಗೆ ಅದು ಪ್ರವಚನದ ವಿಧಾನವನ್ನು ಅನುಸರಿಸುತ್ತದೆ. ನಿಶ್ಚಯವಾಗಿಯೂ ಇದುವೇ ಪರಿಣಾಮಕಾರಿ ವಿಧಾನವಾಗಿದೆ. ಪವಿತ್ರ ಕುರ್‌ಆನಿನಲ್ಲಿ ಹಲವು ಸಣ್ಣ ಮತ್ತು ದೊಡ್ಡ ಪ್ರವಚನಗಳು ಅವತೀರ್ಣವಾಗಿವೆ. ಅವುಗಳನ್ನು ಪ್ರವಾದಿವರ್ಯರು(ಸ) ಪ್ರವಚನದ ರೂಪದಲ್ಲಿಯೇ ಜನರಿಗೆ ಬೋಧಿಸುತ್ತಿದ್ದರು. ಪವಿತ್ರ ಕುರ್‌ಆನಿನ ಪ್ರವಚನದಲ್ಲಿ ಉಲ್ಲೇಖ ಎಷ್ಟು ಪ್ರಬಲ ಮತ್ತು ಘನತೆಯಿಂದ ಕೂಡಿರುತ್ತದೆಂದರೆ, ಅದನ್ನು ಆಲಿಸುವವ ಮಂತ್ರಮುಗ್ಧಗೊಳ್ಳುತ್ತಾನೆ. ಯಾರ ಕಿವಿಗಳಿಗೆ ಈ ಪ್ರವಚನ ಕೇಳಿಯೂ ಆತ ಪ್ರಭಾವಿತನಾಗುವುದಿಲ್ಲವೋ, ಅವನು ಖಂಡಿತವಾಗಿಯೂ ನತದೃಷ್ಟನಾಗಿದ್ದಾನೆ ಎಂದರ್ಥ. ಇಸ್ಲಾಮಿನ ಕಡುವೈರಿ ಉತ್ಬಾ, ಪವಿತ್ರ ಕುರ್‌ಆನಿನ ಕೆಲವು ವಚನಗಳನ್ನು ಆಲಿಸಿ ಶಸ್ತ್ರ ಕೆಳಗಿರಿಸುತ್ತಾನೆ ಮತ್ತು ಹೌಹಾರುತ್ತಾನೆ. ಪವಿತ್ರ ಕುರ್‌ಆನಿನ ಒಂದು ಭಾಗವು ಉಮರ್‌ರಂತಹ(ರ) ಪ್ರಬಲ ವಿರೋಧಿಯ ಜೀವನದಲ್ಲಿ ಸತ್ಕ್ರಾಂತಿಯನ್ನು ತರುತ್ತದೆ. ಪವಿತ್ರ ಕುರ್‌ಆನಿನ ಪ್ರಭಾವ-ಪರಿಣಾಮಗಳನ್ನು ಎಷ್ಟೆಂದು ಎಣಿಸುವುದು! ಪವಿತ್ರ ಕುರ್‌ಆನ್ ತನ್ನ ಪರಿಶುದ್ಧ ಉಪದೇಶ, ವಾಕ್‌ಶೈಲಿ,

ಘನವಾದ ಅಭಿಸಂಬೋಧನಾ ವಿಧಾನ, ಅಸಾಮಾನ್ಯ ಪ್ರಭಾವ ಮತ್ತು ಪ್ರಬಲವಾದ ಉಲ್ಲೇಖಗಳ ಮೂಲಕ ಜನರ ಮನವನ್ನು ಪ್ರಭಾವಿತಗೊಳಿಸಿ ಬಿಡುತ್ತದೆ. ಪವಿತ್ರ ಕುರ್‌ಆನ್ ಅಂತೂ ಅಲ್ಲಾಹನ ವಾಣಿಯಾಗಿದೆ; ಅದರ ಪ್ರಭಾವವನ್ನು ಹೇಳುವುದೇನು. ಯಾರಾದರೂ ತಮ್ಮ ಅಭಿಸಂಬೋಧನೆ ಮತ್ತು ಉಲ್ಲೇಖನಾ ವಿಧಾನದಲ್ಲಿ ಪವಿತ್ರ ಕುರ್‌ಆನಿನ ಸಣ್ಣ ಪ್ರತಿಬಿಂಬವನ್ನು ತೋರಿದರೂ ಸಾಕು. ಹಲವರ ಜೀವನದಲ್ಲಿ ಕ್ರಾಂತಿಯ ಕಿಡಿಯನ್ನು ಹೊತ್ತಿಸಬಲ್ಲರು. ಮೌಲಾನಾ ರೂಮಿ ತಮ್ಮ ದ್ವಿಪದಿ, ಅಲ್ಲಾಮಾ ಇಕ್ಬಾಲ್ ತಮ್ಮ ಪದ್ಯ, ಇಖ್ವಾನುಸ್ಸಫಾ ತಮ್ಮ ನಿಯತಕಾಲಿಕ, ಮೌಲಾನಾ ಆಝಾದ್ ಮತ್ತು ಮೌಲಾನಾ ಮೌದೂದಿ ತಮ್ಮ ಭಾಷಣ-ಲೇಖನಗಳಲ್ಲಿ ಪವಿತ್ರ ಕುರ್‌ಆನಿನ ಸಹಾಯದಿಂದ ಅದರ ಉಲ್ಲೇಖ ವಿಧಾನದ ಸಣ್ಣ ಪ್ರಭಾವವನ್ನು ಪ್ರತಿಬಿಂಬಿಸಿದರು. ಅದು ಓದುಗನಲ್ಲಿ ನಿಶ್ಚಿತ ಬದಲಾವಣೆಯನ್ನು ಉಂಟುಮಾಡಿತು.

ಅಧ್ಯಾಪಕನೂ ತನ್ನ ಮಾತಿನಲ್ಲಿ ಇಂತಹ ಗಟ್ಟಿತನವನ್ನು ಬೆಳೆಸಬೇಕು. ಇದು ಆತನಲ್ಲಿ ತನ್ನ ಜ್ಞಾನದ ಮೇಲೆ ಸಂಪೂರ್ಣ ವಿಶ್ವಾಸವಿದ್ದಾಗ, ಅವನಲ್ಲಿ ಉಲ್ಲೇಖಿಸಲು ವಿಷಯ ಇದ್ದಾಗ ಹಾಗೂ ಮಾತು ಹೃದಯಾಂತರಾಳದಿಂದ ಹೊರಹೊಮ್ಮಿದಾಗ ಮಾತ್ರವೇ ಸಾಧ್ಯವಾಗುವುದು.

ಸ್ಪಷ್ಟೀಕರಣ ಮತ್ತು ವಿವರಣೆ

ಪವಿತ್ರ ಕುರ್‌ಆನ್ ವಿಷಯಗಳನ್ನು ಪ್ರಬಲ ಉಲ್ಲೇಖಕ್ಕೆ ಸೀಮಿತಗೊಳಿಸುವುದಿಲ್ಲ, ಬದಲಾಗಿ ತನ್ನ ಮಾತನ್ನು ಸ್ಪಷ್ಟಗೊಳಿಸಲು ಮತ್ತು ಚೆನ್ನಾಗಿ ಮನನ ಮಾಡಿಸಿಕೊಡಲಿಕ್ಕಾಗಿ:

1. ಆಕಾಶಗಳಿಂದಲೂ ಸ್ವತಃ ಮಾನವ ಶರೀರಗಳಿಂದಲೂ ಸಾಕ್ಷ್ಯಾಧಾರಗಳನ್ನು ನೀಡುತ್ತದೆ.
2. ಪರಿಸರದ ಉದಾಹರಣೆಗಳನ್ನು ನೀಡುತ್ತದೆ.
3. ದಿನನಿತ್ಯದ ಅನುಭವ ಮತ್ತು ದರ್ಶನಗಳನ್ನು ಸಾಕ್ಷ್ಯವಾಗಿ ನೀಡುತ್ತದೆ.
4. ತರತರವಾದ ಉದಾಹರಣೆಗಳನ್ನು, ಉಪಮೆಗಳನ್ನು ಮುಂದಿರಿಸುತ್ತದೆ.
5. ಜನರಿಗೆ ತಿಳಿದಿರುವ ಐತಿಹಾಸಿಕ ಘಟನೆಗಳು ಮತ್ತು ಗತಿಸಿ ಹೋದ ಜನವಸತಿಯ ಪಳೆಯುಳಿಕೆಗಳಿಂದ ಸಾಕ್ಷ್ಯಗಳನ್ನು ಒದಗಿಸುತ್ತದೆ.
6. ಹಲವು ಘಟನೆಗಳನ್ನು ಉಲ್ಲೇಖಿಸಿ, ಉದ್ದೇಶಿತ ಪರಿಣಾಮಗಳನ್ನು ಆಯ್ದುಕೊಳ್ಳುತ್ತದೆ.
7. ಪ್ರವಾದಿಗಳು ಮತ್ತು ಜನಾಂಗಗಳ ವೃತ್ತಾಂತಗಳಿಂದ ಸಹಾಯ ಪಡೆಯುತ್ತದೆ.
8. ಎಲ್ಲ ರೀತಿಯ ಸಾಮರ್ಥ್ಯ ಮತ್ತು ಪ್ರತಿಭೆಯುಳ್ಳವರಿಗೆ ಚೆನ್ನಾಗಿ ಅರ್ಥವಾಗುವಂತೆ ಒಂದೇ ಘಟನೆಯನ್ನು ವಿಭಿನ್ನ ರೀತಿಯಲ್ಲಿ ಉಲ್ಲೇಖಿಸುತ್ತದೆ.
9. ಪದ-ವಾಕ್ಯಗಳಲ್ಲಿ, ದೃಶ್ಯಾವಳಿಗಳು ಕಣ್ಣ ಮುಂದೆ ನಡೆಯುತ್ತಾ ಇದೆಯೇನೋ ಎಂಬಷ್ಟು ಸ್ಪಷ್ಟತೆ ಇರುತ್ತದೆ.

10. ಜನರ ಸಮಸ್ಯೆ ಮತ್ತು ಸಂಶಯಗಳನ್ನು ಸಾಕ್ಷ್ಯಾಧಾರಗಳಿಂದ ದೂರಗೊಳಿಸುತ್ತದೆ.

ಅಧ್ಯಾಪಕನು ಕೂಡ ವಿವರಣೆ, ಸ್ಪಷ್ಟೀಕರಣಕ್ಕೆ ಸಂಬಂಧಿಸಿ, ಅಗತ್ಯಾನುಸಾರ ಈ ಮೇಲಿನ ವಿಧಾನಗಳಿಂದ ಸಹಾಯ ಪಡೆಯುವ ಅಗತ್ಯವಿದೆ.

ಪ್ರಶ್ನೆಗಳು

1. ಗಮನ ಕೇಂದ್ರೀಕರಿಸಲು ಮತ್ತು ಚಿಂತನೆಯ ಆಹ್ವಾನವೀಯಲು ಮಧ್ಯೆ ಮಧ್ಯೆ ಪ್ರಶ್ನೆಗಳನ್ನು ಕೇಳುತ್ತದೆ...

''ನಿಮ್ಮ ಪ್ರಭು ಉನ್ನತ ಸ್ತಂಭಗಳ ಆದ್ ಇರಮ್‌ನವರೊಂದಿಗೆ ಹೇಗೆ ವರ್ತಿಸಿದನೆಂಬುದನ್ನು ನೀವು ನೋಡಲಿಲ್ಲವೇ?'' (ಪವಿತ್ರ ಕುರ್‌ಆನ್: 89:6-7)

''ಒಂಟೆಗಳು ಹೇಗೆ ಸೃಷ್ಟಿಸಲ್ಪಟ್ಟಿವೆ, ಆಕಾಶವು ಹೇಗೆ ಎತ್ತರಿಸಲ್ಪಟ್ಟಿದೆ, ಪರ್ವತಗಳು ಹೇಗೆ ನಾಟಲ್ಪಟ್ಟಿವೆ ಮತ್ತು ಭೂಮಿಯನ್ನು ಹೇಗೆ ಹಾಸಲಾಗಿದೆಯೆಂಬುದನ್ನು ಇವರು ನೋಡುವುದಿಲ್ಲವೇ?'' (ಪವಿತ್ರ ಕುರ್‌ಆನ್: 20:17)

2. ಕೆಲವೊಮ್ಮೆ ಸ್ವಯಂ ಪ್ರಶ್ನಿಸಿ, ಸ್ವತಃ ಉತ್ತರವನ್ನೂ ನೀಡುತ್ತದೆ.

''ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವರು ಯಾರೆಂದು ನೀವು ಇವರೊಡನೆ ಕೇಳಿದರೆ, ಇವರು ಅಲ್ಲಾಹನೆಂದೇ ಹೇಳುವರು.'' (ಪವಿತ್ರ ಕುರ್‌ಆನ್: 31:25, 39:38)

ಅಧ್ಯಾಪಕನು ಪಾಠಮಾಡುವಾಗ ಮಧ್ಯೆಮಧ್ಯೆ ವಿದ್ಯಾರ್ಥಿಗಳೊಡನೆ ಪ್ರಶ್ನಿಸಬೇಕು ಮತ್ತು ಅವರಿಗೂ ಪ್ರಶ್ನೆ ಕೇಳಲು ಅವಕಾಶ ನೀಡಬೇಕು. ವಿದ್ಯಾರ್ಥಿಗಳಿಂದ ವ್ಯಕ್ತವಾಗುವ ಪ್ರಶ್ನೆ, ಸಂಶಯ ಅಥವಾ ಆಕ್ಷೇಪಗಳಿಗೆ ಸಮಾಧಾನಕರ ಉತ್ತರವನ್ನೂ ನೀಡಬೇಕು. ವಿದ್ಯಾರ್ಥಿಗಳ ಉತ್ತರವನ್ನು ಸಮಾಧಾನದಿಂದ ಆಲಿಸಬೇಕು ಮತ್ತು ಅವರ ಮನಸ್ಸಿನಲ್ಲೇನಿದೆ ಎಂಬುದನ್ನು ತಿಳಿಯಲು ಅವರಿಗೆ ತಮ್ಮ ಮನದ ಮಾತನ್ನು ಹೇಳಲು ಅವಕಾಶ ನೀಡಬೇಕು.

ಸಂಕ್ಷಿಪ್ತತೆ

ಪವಿತ್ರ ಕುರ್‌ಆನ್ ಆಗಾಗ ಕೆಲವು ವಿಷಯಗಳನ್ನು ಸಾರಾಂಶ ಅಥವಾ ಸಂಕ್ಷಿಪ್ತವಾಗಿ ಉಲ್ಲೇಖಿಸುತ್ತದೆ. ಆರಂಭದ ಅಧ್ಯಾಯ, ಪ್ರವಚನ, ರುಕೂಅ್‌ಗಳಲ್ಲಿ ವಿಷಯವನ್ನು ವಿಸ್ತಾರವಾಗಿ ಉಲ್ಲೇಖಿಸುತ್ತದೆ. ಕೊನೆಯ ಅಧ್ಯಾಯಗಳಲ್ಲಿ ಅವೇ ವಿಷಯಗಳನ್ನು ಸಂಕ್ಷಿಪ್ತವಾಗಿ, ಅಷ್ಟೇ ಸಮಗ್ರವಾಗಿ ಹೇಳುತ್ತದೆ ಅಥವಾ ಸೂಚನೆ-ಸಂಜ್ಞೆಗಳ ಮೂಲಕ ಇಡೀ ಮಾತನ್ನು ಹೇಳುತ್ತದೆ. ಈ ಮೂಲಕ ಕಂಠಪಾಠ ಮಾಡಲು ಸುಲಭವಾಗುತ್ತದೆ ಮತ್ತು ಸದಾ ನೆನಪಿನಲ್ಲಿರುತ್ತದೆ.

30ನೆಯ ಕಾಂಡದ (ಅಮ್ಮಜುಝ್) ಕೊನೆಯ ಅಧ್ಯಾಯಗಳ ಬಗ್ಗೆ ಕೊಂಚ ಚಿಂತಿಸಿ ನೋಡಿ. ಹೂಜಿಯಲ್ಲಿ ಸಾಗರವನ್ನೇ ತುಂಬಿಸಿಟ್ಟಂತೆ ಭಾಸವಾಗಬಹುದು. ಉದಾ:

''ಕಾಲದಾಣೆ, ನಿಜವಾಗಿ ಮಾನವನು ಮಹಾನಷ್ಟದಲ್ಲಿದ್ದಾನೆ. ಸತ್ಯವಿಶ್ವಾಸ ಸ್ವೀಕರಿಸಿದ, ಸತ್ಕರ್ಮ ಮಾಡುತ್ತಿದ್ದ ಮತ್ತು ಪರಸ್ಪರ ಸತ್ಯ ಹಾಗೂ ಸಹನೆಯನ್ನು ಉಪದೇಶಿಸುತ್ತಿದ್ದವರ ಹೊರತು.'' **(ಪವಿತ್ರ ಕುರ್‌ಆನ್: 103:1-3)**

ಈ ಒಂದು ಸಣ್ಣ ಅಧ್ಯಾಯದಲ್ಲಿ ಇಡೀ ಪವಿತ್ರ ಕುರ್‌ಆನಿನ ವಿಷಯವನ್ನು ಸಾರಾಂಶದ ರೂಪದಲ್ಲಿ ನೀಡಲಾಗಿದೆ.

ಆದ್ದರಿಂದ ಅಧ್ಯಾಪಕನೂ ಪಾಠದ ಒಂದೊಂದು ಅಧ್ಯಾಯವನ್ನು ವಿವರವಾಗಿ ಕಲಿಸಿದ ಬಳಿಕ ಕೊನೆಯಲ್ಲಿ ಸಾರಾಂಶವನ್ನೂ ನೀಡಬೇಕು. ಈ ಪ್ರಕಾರ ವಿದ್ಯಾರ್ಥಿಗಳಿಗೆ ಇಡೀ ವಿಷಯವನ್ನು ಮನನ ಮಾಡಲು ಮತ್ತು ನೆನಪಿನಲ್ಲಿರಿಸಲು ಸುಲಭವಾಗುತ್ತದೆ.

ಪುನರಾವರ್ತನೆ

ಪವಿತ್ರ ಕುರ್‌ಆನ್ ಪುನರಾವರ್ತನೆಯ ವಿಧಾನವನ್ನು ಬಳಸಿದೆ. ಒಂದೇ ವಿಷಯವನ್ನು ಬೇರೆ ಬೇರೆ ರೀತಿಯಲ್ಲಿ ಪದೇ ಪದೇ ಮುಂದಿರಿಸುತ್ತದೆ. ಇದರಿಂದ ಓದುಗರಿಗೆ ಚೆನ್ನಾಗಿ ಮನವರಿಕೆಯಾಗುತ್ತದೆ. ಪವಿತ್ರ ಕುರ್‌ಆನಿನಲ್ಲಿ ಅದರ ಮೂಲ ಸಂದೇಶ ಅಥವಾ ಅದರ ಒಂದಂಶವನ್ನು ತಿಳಿಸದ ಯಾವುದೇ ಪುಟ ಇರಲಿಕ್ಕಿಲ್ಲ. ಆದರೆ ಪುನರಾವರ್ತನೆಯ ವಿಧಾನದಲ್ಲಿ ಎಷ್ಟು ವೈವಿಧ್ಯತೆ ಇದೆಯೆಂದರೆ, ಒಂದೇ ಮಾತನ್ನು ಪ್ರತಿ ಬಾರಿ ಓದಿದಾಗಲೂ ಹೊಸ ರುಚಿಯನ್ನು ನೀಡುತ್ತದೆ.

ಅಧ್ಯಾಪಕನೂ ಪುನರಾವರ್ತನೆಯ ಕಡೆಗೆ ಸಂಪೂರ್ಣ ಗಮನ ನೀಡಬೇಕು. ಆದರೆ ವಿದ್ಯಾರ್ಥಿಗಳಲ್ಲಿ ಅಸಹನೆ, ಆಯಾಸ ಉಂಟಾಗದ ಹಾಗೆ ವಿಭಿನ್ನ ರೀತಿಯಲ್ಲಿ ಪುನರಾವರ್ತಿಸಬೇಕು.

ಕೆಲಸ ವಹಿಸಿ ಕೊಡುವುದು

ತನ್ನ ಮಾತನ್ನು ಸ್ಪಷ್ಟವಾಗಿ ವಿವರಿಸಿ, ಸಾಕ್ಷ್ಯಾಧಾರಗಳಿಂದ ಸ್ಪಷ್ಟಪಡಿಸಿ, ಉಪದೇಶಗಳ ಮೂಲಕ ತಿಳಿಸುವುದಕ್ಕೆ ಸೀಮಿತಗೊಳಿಸದೆ, ಕೆಲವು ಪ್ರಶ್ನೆಗಳನ್ನು ಕೇಳಿ ಸ್ವತಃ ಚಿಂತನೆ ನಡೆಸಿ ಸಮಾಧಾನ ಪಟ್ಟುಕೊಳ್ಳಲು ಆಹ್ವಾನಿಸುತ್ತದೆ. ತರುವಾಯ ಮನಃಸ್ಸಮಾಧಾನ ಪಡೆಯಲು ಅನುಭವ ಮತ್ತು ವೀಕ್ಷಣೆಗೆ ಕೆಲಸವನ್ನೂ ವಹಿಸಿಕೊಡುತ್ತದೆ. ಅಷ್ಟೇ ಅಲ್ಲ, ಬಲ್ಲವರಿಂದ ಕೇಳಿ ತಿಳಿದುಕೊಳ್ಳಲೂ ಸೂಚಿಸುತ್ತದೆ.

''ಯಸೀರೂ ಫಿಲ್‌ಅರ್ದಿ'' (ಕೊಂಚ ಭೂಮಿಯಲ್ಲಿ ಸಂಚರಿಸಿ ನೋಡಲಿ) ಎಂಬ ಆಹ್ವಾನವು ಪವಿತ್ರ ಕುರ್‌ಆನಿನಲ್ಲಿ ಆರು ಕಡೆಗಳಲ್ಲಿ ನೀಡಲಾಗಿದೆ. ಅಂತೆಯೇ 'ಅಫಲಂ

ಯಸೀರೂ ಫಿಲ್ ಅರ್ದ್' (ಅವರು ಭೂಮಿಯಲ್ಲಿ ಸಂಚರಿಸಲಿಲ್ಲವೇ?) ಎಂದು ಏಳು ಕಡೆಗಳಲ್ಲಿ ಪ್ರಶ್ನಿಸುವ ಮೂಲಕ ಸ್ವಯಂ ದೃಷ್ಟಾಂತಗಳನ್ನು ವೀಕ್ಷಿಸಿ ಸಮಾಧಾನ ಪಟ್ಟುಕೊಳ್ಳಲು ಆಹ್ವಾನಿಸುತ್ತದೆ.

ಅದೇ ರೀತಿ 'ಕೇಳಿರಿ' (ಸಲ್, ಫಸ್‌ಅಲ್, ವಸ್‌ಅಲ್, ಫಸ್‌ಅಲೂ) ಎಂದು ಒಂಭತ್ತು ಕಡೆಗಳಲ್ಲಿ ಹೇಳುವ ಮೂಲಕ ಬಲ್ಲವರೊಂದಿಗೆ ಕೇಳಿ ಸಮಾಧಾನ ಪಟ್ಟುಕೊಳ್ಳುವ ಬಗ್ಗೆ ಗಮನ ಸೆಳೆಯುತ್ತದೆ.

ಅಧ್ಯಾಪಕನೂ ವಿದ್ಯಾರ್ಥಿಗಳಿಗೆ ಕಲಿಸಿದ ವಿಷಯಗಳಿಗೆ ಸಂಬಂಧಿಸಿ ಯಾವುದಾದರೂ ಕೆಲಸ ನೀಡಿ ಅನುಭವ ಹಾಗೂ ವೀಕ್ಷಣೆಗೆ ಅವಕಾಶವನ್ನು ಒದಗಿಸಿಕೊಡಬೇಕು. ಈ ಮೂಲಕ ಅವರು ಕಲಿತ ವಿಷಯಗಳ ಬಗ್ಗೆ ಸಮಾಧಾನವನ್ನೂ ಪಟ್ಟುಕೊಳ್ಳುತ್ತಾರೆ ಮತ್ತು ಕಲಿತುದನ್ನು ಆಚರಣೆಗೆ ತರಲು ಹಾಗೂ ಪರಿಶೀಲಿಸಲು ಮುಂದಾಗುತ್ತಾರೆ.

ಇದಾಗಿದೆ ಪವಿತ್ರ ಕುರ್‌ಆನಿನ ಯುಕ್ತಿಪೂರ್ಣ ಶಿಕ್ಷಣ ವಿಧಾನದ ಪಕ್ಷಿನೋಟ. ಈ ರೀತಿಯಾಗಿ ಅದು ತನ್ನ ಬೋಧನೆಗಳನ್ನು ಜನರ ಪಾಲಿಗೆ ಬಹಳ ಸುಲಭಗೊಳಿಸಿಕೊಟ್ಟಿದೆ.

''ನಾವು ಈ ಕುರ್‌ಆನನ್ನು ಉಪದೇಶಕ್ಕಾಗಿ ಸುಲಭ ಸಾಧನವಾಗಿ ಮಾಡಿರುವೆವು. ಉಪದೇಶ ಪಡೆಯುವವರು ಯಾದಾದರೂ ಇದ್ದಾರೆಯೇ?''

(ಪವಿತ್ರ ಕುರ್‌ಆನ್: 54:17, 22, 32, 40)

◆ ◆ ◆

ಅಧ್ಯಾಯ- 27

ಬೋಧನೆಯ ಸಾಮಾನ್ಯ ನಿಯಮ

ಇಲ್ಲಿ ನಾವು ಬೋಧನೆಯ ಕೆಲವು ಸಾಮಾನ್ಯ ನಿಯಮಗಳನ್ನು ಉಲ್ಲೇಖಿಸುತ್ತಿದ್ದೇವೆ. ಇದನ್ನು ಸುದೀರ್ಘ ಬೋಧನಾ ಅನುಭವ ಮತ್ತು ಮಕ್ಕಳ ಮಾನಸಿಕತೆಯ ಬೆಳಕಿನಲ್ಲಿ ರಚಿಸಲಾಗಿದೆ. ಎಲ್ಲ ಪಾಠ ಮತ್ತು ಎಲ್ಲ ರೀತಿಯ ವಿಷಯಗಳ ಬೋಧನೆಯ ವೇಳೆ ಇದನ್ನು ಗಮನದಲ್ಲಿರಿಸಿದರೆ, ಬೋಧನೆಯು ಪ್ರಯೋಜನಕಾರಿಯಾಗುವುದು.

ಸಿದ್ಧತೆಯ ನಿಯಮ

ಅಂದರೆ ವಿದ್ಯಾರ್ಥಿಗಳನ್ನು ಚೆನ್ನಾಗಿ ಸಿದ್ಧಗೊಳಿಸಿ ಪಾಠ ಆರಂಭಿಸಬೇಕು. ಏಕೆಂದರೆ ಯಾವ ಕೆಲಸಕ್ಕಾಗಿ ಮನಸ್ಸು ಸಂಪೂರ್ಣವಾಗಿ ಸಿದ್ಧಗೊಂಡಿರುವುದೋ ಆ ಕೆಲಸವು ಚುರುಕುತನ ಮತ್ತು ಶ್ರದ್ಧೆಯೊಂದಿಗೆ ನಡೆಯುತ್ತದೆ. ತದ್ವಿರುದ್ಧವಾಗಿ ಒತ್ತಾಯಪೂರ್ವಕ ಅಥವಾ ಬಲವಂತದಿಂದ ಮಾಡಿಸುವ ಕಾರ್ಯವನ್ನು ಬಿಟ್ಟಿ ಕೆಲಸವೆಂದು ಭಾವಿಸಿ ಮುಂದೂಡಲಾಗುತ್ತದೆ. ನಮಗೆಲ್ಲ ತಿಳಿದಿರುವಂತೆ, ಮಕ್ಕಳು ತನ್ಮಯತೆಯಿಂದ ದೂರ ಓಡುತ್ತಾರೆ, ಯಾವುದೇ ರೀತಿಯ ಒತ್ತಡ-ಬಲವಂತವನ್ನು ಇಷ್ಟ ಪಡುವುದಿಲ್ಲ, ಓದು ಬರೆಹದಂತಹ ಶುಷ್ಕ ಕೆಲಸದಲ್ಲಿ ಅವರಿಗೆ ಎಳ್ಳಷ್ಟೂ ಆಸಕ್ತಿ ಇಲ್ಲ, ಹಾಗಾಗಿಯೇ ಅವರನ್ನು ಓದಲು-ಬರೆಯಲು ಸಿದ್ಧಗೊಳಿಸುವ ನಿಟ್ಟಿನಲ್ಲಿ ಅಧ್ಯಾಪಕರು ಬೆದರಿಕೆ ಮತ್ತು ಒತ್ತಡದ ವಿಧಾನವನ್ನು ಅನುಸರಿಸುತ್ತಾರೆ. ತತ್ಪರಿಣಾಮವಾಗಿ, ಹೆಚ್ಚಿನ ಮಕ್ಕಳು ಆ ಶುಷ್ಕ ಕಾರ್ಯದಿಂದ ಇನ್ನೂ ದೂರ ಓಡುತ್ತಾರೆ ಮತ್ತು ವಿದ್ಯಾರ್ಜನೆಯಿಂದ ತಪ್ಪಿಸತೊಡಗುತ್ತಾರೆ. ಇನ್ನು ಒತ್ತಡಕ್ಕೆ ಮಣಿದು ಓದಲು ಕುಳಿತ ಮಕ್ಕಳು ಪಾಠದಲ್ಲಿ ಸಂಪೂರ್ಣ ಆಸಕ್ತಿಯನ್ನು ಹೊಂದಿರುವುದಿಲ್ಲ, ಆದ್ದರಿಂದ ಪಾಠ ಮಾಡುವುದಕ್ಕೆ ಮುನ್ನ ಮಕ್ಕಳನ್ನು ಅದಕ್ಕಾಗಿ ಸಿದ್ಧಗೊಳಿಸುವುದು ತೀರಾ ಅಗತ್ಯ. ಅದಕ್ಕಾಗಿ ಸಂದರ್ಭಾನುಸಾರ ಈ ಕೆಳಗಿನ ಉಪಾಯಗಳನ್ನು ಅನುಸರಿಸಬಹುದಾಗಿದೆ:

1. ಸೂಕ್ತ-ಸಾಂದರ್ಭಿಕ ಪ್ರಶ್ನೆ, ಹ್ರಸ್ವ ಚರ್ಚೆ-ಸಂವಾದ, ರಂಗುರಂಗಿನ ಚಿತ್ರಗಳು, ಗಮನಾರ್ಹ ಮಾದರಿ ಇತ್ಯಾದಿಗಳ ಮುಖಾಂತರ ಹೊಸ ವಿಷಯದ ಬಗ್ಗೆ ಮಕ್ಕಳಲ್ಲಿ ಕುತೂಹಲ ಹುಟ್ಟಿಸಬೇಕು.

2. ತರುವಾಯ ಪಾಠದ ಉದ್ದೇಶ ಮತ್ತು ಅಗತ್ಯ ಹಾಗೂ ಪ್ರಯೋಜನಗಳನ್ನು ಚೆನ್ನಾಗಿ ಮನವರಿಕೆ ಮಾಡಿಸಬೇಕು.
3. ಕೆಲಸ(ಪಾಠ)ದಲ್ಲಿ ಆಟ ಮತ್ತು ಸ್ಪರ್ಧೆಯ ಮನೋಭಾವ ಬೆಳೆಸಬೇಕು ಅಥವಾ ಪಠ್ಯ ವಿಷಯವನ್ನು ಕಥೆಯ ರೂಪದಲ್ಲಿ ಪ್ರಸ್ತುತ ಪಡಿಸಬೇಕು.
4. ಮಕ್ಕಳಿಗೆ ಏನನ್ನಾದರೂ ಮಾಡುವ ಮತ್ತು ಕ್ರಿಯಾಶೀಲರಾಗಿರುವ ಅವಕಾಶ ಒದಗಿಸುತ್ತ ಇರಬೇಕು.
5. ಪಾಠವನ್ನು ಮುಂದುವರಿಸಲಿಕ್ಕಾಗಿ ಮಕ್ಕಳ ಸಲಹೆ-ಸಹಕಾರಗಳಿಗೆ ಮಹತ್ವ ನೀಡಬೇಕು.

ಸಿದ್ಧತೆಯ ಬಳಿಕ ಗಮನ ಮತ್ತು ಆಸಕ್ತಿಯ ಸಮಸ್ಯೆಯು ಸಾಕಷ್ಟು ಪರಿಹಾರವಾಗುತ್ತದೆ. ಏಕೆಂದರೆ ಒಂದು ಕಾರ್ಯವನ್ನು ಎಸಗಲಿಕಾಗಿ ಮಕ್ಕಳು ಸ್ವಯಂ ಸಿದ್ಧರಾದರೆ, ಅದರಲ್ಲಿ ಸಂಪೂರ್ಣ ಗಮನವನ್ನು ಕೇಂದ್ರೀಕರಿಸುತ್ತಾರೆ. ನಂತರ ಎಷ್ಟೇ ತೊಡಕುಗಳು ಎದುರಾದರೂ ಸಂಪೂರ್ಣ ಮಗ್ನತೆಯೊಂದಿಗೆ ಕಾರ್ಯವೆಸಗುತ್ತಾರೆ.

ಆಯ್ಕೆಯ ನೀತಿ

ಮಕ್ಕಳಿಗೆ ಅತ್ಯಗತ್ಯ, ಪ್ರಯೋಜನಕಾರಿ, ಸೂಕ್ತ ಮತ್ತು ಅವರ ಸ್ವಭಾವ-ಸಾಮರ್ಥ್ಯ ಹಾಗೂ ಉದ್ದೇಶಕ್ಕೆ ಪೂರಕವಾದಂತಹ ವಿಷಯಗಳನ್ನಷ್ಟೇ ಕಲಿಸಬೇಕು. ಅಂತೆಯೇ ಅದನ್ನು ಅಧ್ಯಾಪಕನು ತನ್ನ ಸೀಮಿತ ಸೌಲಭ್ಯ-ಸವಲತ್ತುಗಳಿಂದ ಚೆನ್ನಾಗಿ ನಿರ್ವಹಿಸುವಂತಿರಬೇಕು.

ನಮಗೆಲ್ಲ ತಿಳಿದಿರುವಂತೆ ವಿದ್ಯೆ ಎಂಬುದು ಅನಂತವಾದ ಭಂಡಾರವಾಗಿದೆ. ಅದೇ ವೇಳೆ, ಶಿಕ್ಷಣ ಗಳಿಕೆಯ ಅವಧಿಯು ತೀರಾ ಅಲ್ಪವಾಗಿದೆ; ಜೀವಿತಾವಧಿಯೂ ಸೀಮಿತ ವಾಗಿದೆ. ಜೀವನ ಪೂರ್ತಿ ಈ ಜ್ಞಾನಸಾಗರದಲ್ಲಿ ಮುಳುಗಿ ಎದ್ದರೂ ಪಾದ ಒದ್ದೆಯಾಗುವಷ್ಟನ್ನು ಮಾತ್ರವೇ ಗಳಿಸಬಲ್ಲೆವು. ಅಲ್ಲದೆ ಕೆಲವು ಹರಳುಗಲ್ಲುಗಳ ಹೊರತು ಬೇರೆ ಏನೂ ದೊರಕದು. ಮೇಲಾಗಿ ಹಲವು ಸಂಗತಿಗಳು ಮಕ್ಕಳ ಪಾಲಿಗೆ ಅವಧಿಪೂರ್ವ ಆಗಿರುತ್ತವೆ. ಆದ್ದರಿಂದ ಅಧ್ಯಾಪಕನು ತೀರಾ ಜಾಗರೂಕತೆಯಿಂದ ಆಯ್ಕೆ ಮಾಡಬೇಕಾಗುತ್ತದೆ ಹಾಗೂ ನಿಜವಾಗಿ ಅಗತ್ಯ ಇರುವ ಮತ್ತು ಪ್ರಯೋಜನಕಾರಿಯಾಗಿರುವ ಸಂಗತಿಗಳಿಗಾಗಿ ಮಾತ್ರವೇ ಮಕ್ಕಳ ಸಮಯವನ್ನು ಉಪಯೋಗಿಸಬೇಕು. ನಿರರ್ಥಕ ವಿಷಯ ಮತ್ತು ನಿಷ್ಪ್ರಯೋಜಕ ಕಾರ್ಯಗಳಲ್ಲಿ ಮಕ್ಕಳ ಸಮಯವನ್ನು ಪೋಲು ಮಾಡಬಾರದು. ಆದರೆ ಪಾಠವನ್ನು ಆಸಕ್ತಿದಾಯಕಗೊಳಿಸಲಿಕ್ಕಾಗಿ ಅಗತ್ಯಬಿದ್ದಾಗ ಹಾಗೆ ಮಾಡಬಹುದಾಗಿದೆ.

ಜೀವನದೊಂದಿಗೆ ಜೋಡಿಸುವ ನೀತಿ

ಅಂದರೆ ಹೊಸ ವಿಷಯಗಳನ್ನು ಸಾಧ್ಯವಾದಷ್ಟರ ಮಟ್ಟಿಗೆ ಮಕ್ಕಳ ದೈನಂದಿನ ಜೀವನದ ಘಟನೆಗಳು, ಅವರ ಹಿಂದಿನ ಜ್ಞಾನ, ಅನುಭವಗಳು ಮತ್ತು ದರ್ಶನಗಳು,

ಸಾಮಾಜಿಕ ಹಾಗೂ ಪ್ರಾಕೃತಿಕ ಪರಿಸರದೊಂದಿಗೆ ಜೋಡಿಸಿ ಕಲಿಸಬೇಕು. ಈ ರೀತಿ ವಿಷಯವು ಸುಲಭದಲ್ಲಿ ಅರ್ಥವಾಗುವುದು ಮತ್ತು ಚೆನ್ನಾಗಿ ಮನವರಿಕೆಯಾಗುವುದು. ಜತೆಗೆ ಮಕ್ಕಳಿಗೆ ಹೊಸ ವಿಷಯದ ಅಗತ್ಯ ಮತ್ತು ಪ್ರಯೋಜನಗಳನ್ನು ಸ್ಪಷ್ಟಪಡಿಸಲು ಹಾಗೂ ದೈನಂದಿನ ಜೀವನದಲ್ಲಿ ಅದನ್ನು ಬಳಸುವ ವಿಧಾನ ಕಲಿಸಲೂ ಸಹಾಯಕವಾಗುವುದು. ಒಂದು ವಸ್ತುವಿಗೆ ಜೀವನದೊಂದಿಗೆ ಯಾವುದೇ ಸಂಬಂಧವಿಲ್ಲದಿದ್ದರೆ ಅಥವಾ ಅದರಿಂದ ಅಗತ್ಯ-ಪ್ರಯೋಜನಗಳು ಕಾಣದಿದ್ದರೆ, ಅದನ್ನು ಕಲಿಯಲು ಮನಸ್ಸು ಮುಂದಾಗಲಾರದು. ಮಾತ್ರವಲ್ಲ, ಅದು ಹೆಚ್ಚು ಹೊತ್ತು ಮನಸ್ಸಿನಲ್ಲಿ ಸುರಕ್ಷಿತವಾಗಿ ಇರುವುದೂ ಇಲ್ಲ. ಉದಾ: ಸ್ವಚ್ಛತೆ ಇತ್ಯಾದಿ ವಿಷಯಗಳು. ಇವುಗಳ ಅಗತ್ಯವು ಪ್ರೌಢತೆಯ ಬಳಿಕವಷ್ಟೇ ಇರುವುದು. ಮೊದಲಾಗಿ, ಅದು ಸಣ್ಣ ಮಕ್ಕಳ ಪಾಲಿಗೆ ಅವಧಿಪೂರ್ವ ಶಿಕ್ಷಣವಾಗಿರುವ ಕಾರಣ ಅದು ಮಕ್ಕಳಿಗೆ ಅರ್ಥವಾಗುವುದಿಲ್ಲ. ಎರಡನೆಯದಾಗಿ, ಆ ಪ್ರಾಯದಲ್ಲಿ ಅದರ ಅಗತ್ಯ ಬೀಳದ ಕಾರಣ ಹೆಚ್ಚು ಸಮಯ ಅದು ನೆನಪಿನಲ್ಲಿ ಉಳಿಯುವುದೂ ಇಲ್ಲ.

ಸ್ವತಃ ಮಾಡಿ ಕಲಿಯುವ ನೀತಿ

ಅಂದರೆ ಇಡೀ ವಿಷಯವನ್ನು ಸ್ವಯಂ ಹೇಳಿಕೊಡುವುದರ ಬದಲು ಮಕ್ಕಳಿಗೆ ಸ್ವತಃ ಮಾಡಿ ಕಲಿಯಲು ಹೆಚ್ಚೆಚ್ಚು ಅವಕಾಶ ನೀಡುತ್ತ ಪ್ರಾಯೋಗಿಕತೆಯು ಇರಬೇಕು. ಯಾವ ಪಾಠಗಳಲ್ಲಿ ಅವಕಾಶ ಇಲ್ಲವೋ ಆ ಪಾಠಗಳನ್ನು ಕೂಡಾ ಕನಿಷ್ಠ ಯಾವುದಾದರೂ ಕೆಲಸದೊಂದಿಗೆ ಮುಗಿಸಬೇಕು. ಉದಾ: ಮೌಖಿಕವಾಗಿ ಕಲಿಸಿದ ಬಳಿಕ, ಅದನ್ನು ಬರೆಸುವುದು. ಮಾಹಿತಿ ಪಠ್ಯಗಳಿಗೆ ಸಂಬಂಧಿಸಿ, ಮಕ್ಕಳಿಗೆ ಸ್ವತಃ ಮಾಡಿ ಕಲಿಯುವಂತೆ ಕೆಲಸ ನೀಡಬೇಕು. ಉದಾ: ಅಂಚೆ ಚೀಟಿ ಅಥವಾ ಚಿತ್ರ ಸಂಗ್ರಹಿಸುವುದು, ಯಾವುದಾದರೂ ಮಾದರಿ ಅಥವಾ ಚಿತ್ರ ರಚಿಸುವುದು, ಎಲೆ-ಹೂ ಇತ್ಯಾದಿಗಳನ್ನು ಸಂಗ್ರಹಿಸುವುದು.

ಮಕ್ಕಳಂತೂ ಸದಾ ಏನ್ನನಾದರೂ ಮಾಡುತ್ತ-ಕೆಡಹುತ್ತ ಇರುತ್ತಾರೆ, ಅದರಲ್ಲಿಯೇ ಅವರಿಗೆ ಸಂತೋಷವೂ ಆಗುತ್ತದೆ. ಈ ಮೂಲಕ ಅವರು ಬಹಳಷ್ಟನ್ನು ಕಲಿಯುತ್ತ, ಅನುಭವ ಗಳಿಸುತ್ತ ಇರುತ್ತಾರೆ. ಆದ್ದರಿಂದ ಒಂದು ವೇಳೆ ಪಾಠ ಮಾಡುವಾಗ ಇದರ ವ್ಯವಸ್ಥೆ ಮಾಡಿದರೆ, ಶಿಕ್ಷಣವು ಹೆಚ್ಚು ಸುಲಭ, ಪರಿಣಾಮಕಾರಿ ಮತ್ತು ಆಸಕ್ತಿದಾಯಕವಾಗುತ್ತದೆ. ಈ ವಿಧಾನದಲ್ಲಿ ಮಕ್ಕಳು ಕಲಿತ ವಿಷಯದಲ್ಲಿ ಹೆಚ್ಚು ಪಕ್ವತೆ ಮತ್ತು ಬಾಳಿಕೆ ಇರುತ್ತದೆ. ಉದಾ: ವುಝೂ ಮತ್ತು ನಮಾಝಿನ ವಿಧಾನಗಳನ್ನು ಮೌಖಿಕವಾಗಿ ಹೇಳಿಕೊಡುವ ಬದಲು ಪ್ರಾಯೋಗಿಕವಾಗಿ ಮಾಡಿಸಿದರೆ ಹಾಗೂ ಅಗತ್ಯಾನುಸಾರ ಅವರಲ್ಲಿ ಸುಧಾರಣೆ ಮಾಡುತ್ತಿದ್ದರೆ ಮಕ್ಕಳು ಸಂಪೂರ್ಣ ಆಸಕ್ತಿಯೊಂದಿಗೆ ಕಲಿಯುವರು ಮತ್ತು ಅವರಿಗೆ ಸುಲಭದಲ್ಲಿ ನೆನಪಾಗುತ್ತದೆ.

ವಿಂಗಡಣೆಯ ನೀತಿ:

ಅಂದರೆ ಕಲಿಸಲಿಕ್ಕಿರುವ ವಿಷಯವನ್ನು ಸೂಕ್ತ ವಿಭಾಗಗಳಾಗಿ ವಿಂಗಡಿಸಿ ಕಲಿಸುವುದು. ಈ ವಿಂಗಡನೆಯು ಹೇಗಿರಬೇಕು ಎಂದರೆ ಪ್ರತಿಯೊಂದು ಭಾಗವೂ ತನ್ನ ಹಿಂದಿನ ಮತ್ತು ಮುಂದಿನ ಭಾಗದೊಂದಿಗೆ ಸಂಬಂಧಿಸಿಯೂ ಇರಬೇಕು. ಹೀಗೆ ಒಂದು ರೀತಿಯಲ್ಲಿ ಅದು ಮಧ್ಯದ ಕೊಂಡಿಯ ರೂಪದಲ್ಲಿಯೂ ಇರಬೇಕು. ಈ ಪ್ರಕಾರ ಹಂತಹಂತವಾಗಿ ಮುಂದುವರಿಯುವುದರಿಂದ ಮತ್ತು ಸೂಕ್ತ ಭಾಗಗಳಲ್ಲಿ ವಿಂಗಡಿಸುವುದರಿಂದ ವಿಷಯಗಳನ್ನು ಕಲಿಸುವ ಕಾರ್ಯವೂ ಸುಲಭವಾಗುತ್ತದೆ. ಹಾಗೆಯೇ ಅನುಕ್ರಮದಂತೆ ನೆನಪಿನಲ್ಲಿಯೂ ಉಳಿಯುತ್ತದೆ. ಈ ರೀತಿಯಲ್ಲಿ ಕಲಿಸದಿದ್ದರೆ ಮಾಹಿತಿಗಳು ಗೊಂದಲದಿಂದ ಕೂಡಿರುವುದು ಮತ್ತು ಗೋಜಲುಗೋಜಲಾಗಿ ಬಿಡುವುದು. ಹಾಗೆಯೇ ಅಗತ್ಯದ ವೇಳೆ ಸರಿಯಾಗಿ ಉಪಯೋಗಕ್ಕೂ ಬರದಿರಲಾರದು.

ಪುನರಾವರ್ತನೆಯ ನೀತಿ

ಅಂದರೆ ಕಲಿಸಿದ ವಿಷಯವನ್ನು ಪುನರಾವರ್ತಿಸುತ್ತ, ಆ ಮೂಲಕ ಚೆನ್ನಾಗಿ ನೆನಪಿನಲ್ಲಿ ಉಳಿಯುವಂತೆ ಮಾಡುವುದು. ಹೆಚ್ಚು ವಿಷಯಗಳನ್ನು ಕಲಿಸುವ ಭರದಲ್ಲಿ ಅಧ್ಯಾಪಕರು ಸಾಮಾನ್ಯವಾಗಿ ಪುನರಾವರ್ತನೆಯನ್ನು ಕಡೆಗಣಿಸುತ್ತಾರೆ. ಅದರ ಫಲವನ್ನು ನಂತರ ಉಣ್ಣಬೇಕಾಗಿ ಬರುವುದು. ಏಕೆಂದರೆ ಮಕ್ಕಳಿಗೆ ಹಿಂದಿನ ವಿಷಯ ಮರೆತು ಹೋಗಿರುತ್ತದೆ, ಹಾಗಾಗಿ ಮುಂದಿನದು ಅರ್ಥವಾಗುವುದಿಲ್ಲ. ಹಾಗಾಗಿ ಪುನರಾವರ್ತನೆಯ ಕಡೆಗೆ ಆದಷ್ಟು ಹೆಚ್ಚು ಗಮನ ಹರಿಸಬೇಕಾದುದು ಅಗತ್ಯ. ಪಾಠದ ಪ್ರತಿಯೊಂದು ಭಾಗವನ್ನು ಕಲಿಸಿದ ಬಳಿಕ ಆಯಾ ಭಾಗದ ಸಾರಾಂಶ ಮತ್ತು ಅಧ್ಯಾಯ ಮುಗಿದ ಬಳಿಕ ಇಡೀ ಅಧ್ಯಾಯದ ಸಾರಾಂಶವನ್ನು ಪುನರಾವರ್ತಿಸಬೇಕು. ಯಾವುದೇ ವಿಷಯವನ್ನು ಕಲಿಸಿದರೂ ಅದನ್ನು ಚೆನ್ನಾಗಿ ಪುನರಾವರ್ತಿಸಬೇಕು. ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಒಂದಿಷ್ಟು ಸಮಯವನ್ನು ಹಾಗೂ ವಾರದಲ್ಲಿ ಒಂದು ದಿನ ಪುನರಾವರ್ತನೆಗೆ (Revision) ಮೀಸಲಿರಿಸಬೇಕು. ಈ ಮೂಲಕ ವಾರದ ಕೆಲಸವು ಚೆನ್ನಾಗಿ ಮನವರಿಕೆಯಾಗುವುದು. ಪುನರಾವರ್ತಿಸದೆ ಯಾವುದೇ ವಿಷಯದಲ್ಲೂ ಮುಂದಕ್ಕಡಿಯಿಡಬಾರದು. ಯೋಚಿಸಿ ನೋಡಿ. ಯಾವ ವಿದ್ಯೆಯ ಮೇಲೆ ಮಕ್ಕಳಿಗೆ ಸಂಪೂರ್ಣ ಹಿಡಿತ ಸಾಧಿತವಾಗುವುದಿಲ್ಲವೋ ಅದನ್ನು ಕಲಿಸುವುದರ ಪ್ರಯೋಜನವಾದರೂ ಏನು!

◆ ◆ ◆

ಅಧ್ಯಾಯ-28

ಬೋಧನೆಯ ಸಿದ್ಧಾಂತ

ಬೋಧನೆಯ ಸಾಮಾನ್ಯ ನಿಯಮಗಳನ್ನು ತಿಳಿದ ಬಳಿಕ ಈಗ ನಾವು, ಪ್ರಾಥಮಿಕ ತರಗತಿಗಳ ವಿದ್ಯಾರ್ಥಿಗಳಿಗೆ ಕಲಿಸಿದ ಅನುಭವದಿಂದ ಪ್ರಭಾವಿತವಾದಂತಹ ಕೆಲವು ಸಿದ್ಧಾಂತಗಳನ್ನು ಉಲ್ಲೇಖಿಸುತ್ತಿದ್ದೇವೆ. ಇವುಗಳಿಗೆ ಶಿಕ್ಷಣ ಕಲೆಯಲ್ಲಿ ಸರ್ವಾಂಗೀಕೃತ ನಿಯಮದ ಸ್ಥಾನಮಾನ ದೊರೆತಿದೆ. ಈ ಸಿದ್ಧಾಂತವು ಮನಃಶಾಸ್ತ್ರದ ಒರೆಗಲ್ಲಿನಲ್ಲಿ ಅಪ್ಪಟವಾಗಿ ಸಾಬೀತಾಗಿದೆ ಮತ್ತು ಬುದ್ಧಿ-ವಿವೇಕವೂ ಅವುಗಳ ಪ್ರಯೋಜನದ ಬಗ್ಗೆ ಸಾಕ್ಷ್ಯ ನುಡಿಯುತ್ತದೆ. ಆದ್ದರಿಂದ ಅವುಗಳನ್ನು ಸಾದ್ಯಂತ ಪಾಲಿಸಬೇಕು. ಅದೇ ವೇಳೆ ಅಧ್ಯಾಪಕನು ಅಗತ್ಯಾನುಸಾರ ಅವುಗಳಲ್ಲಿ ಒಂದಿಷ್ಟನ್ನು ಬಳಸುತ್ತಲೂ ಇರಬೇಕು. ವಿಶೇಷತಃ ಸೀಮಿತ ಸಮಯವಿರುವಾಗ ಅಥವಾ ಹಿರಿಯ ಪ್ರಾಯದ ಮಕ್ಕಳಿಗೆ ಅಥವಾ ಪ್ರೌಢರಿಗೆ ಕಲಿಸುವಾಗ.

ಅರಿವಿನಿಂದ ಅರಿವಿಲ್ಲದರ ಕಡೆಗೆ

ಅಂದರೆ ಮಕ್ಕಳು ಮೊದಲೇ ತಿಳಿದಿರುವಂತಹ ವಿಷಯಗಳ ಆಧಾರದಲ್ಲಿಯೇ ಅವರಿಗೆ ಹೊಸ ವಿಷಯಗಳನ್ನು ತಿಳಿಸುವುದು ಅಥವಾ ಕಲಿಸುವುದು. ಇದು ಬೋಧನೆಯ ಸ್ವಾಭಾವಿಕ ವಿಧಾನವಾಗಿದೆ. ಈ ಪ್ರಕಾರವೇ ವಿಷಯವು ಸರಿಯಾಗಿ ಮನದಟ್ಟಾಗುತ್ತದೆ. ಏಕೆಂದರೆ ಮಕ್ಕಳ ಮನಸ್ಸು ವಿಶೇಷತೆ, ಹೊಸತನದ ಜತೆಗೆ ಅವರಿಗೆ ಇಷ್ಟವಿರುವಂತಹ ವಸ್ತುಗಳ ಮೇಲಷ್ಟೇ ಹೆಚ್ಚು ಗಮನ ಹಾಗೂ ಆಸಕ್ತಿಯನ್ನು ವ್ಯಕ್ತಪಡಿಸುತ್ತದೆ. ತೀರಾ ಹೊಸ ವಸ್ತು-ಅದಕ್ಕೆ ಹಿಂದಿನ ಅನುಭವ, ದರ್ಶನದೊಂದಿಗೆ ಯಾವುದೇ ಸಂಬಂಧವಿಲ್ಲದಿದ್ದರೆ ಅದು ಮಕ್ಕಳ ಮಟ್ಟಿಗೆ ಗಮನಾರ್ಹವೆನಿಸುವುದಿಲ್ಲ, ಎರಡನೆಯದಾಗಿ ಹೊಸ ವಿಷಯಗಳ ವಿವರಣೆಯನ್ನು ಹಿಂದಿನ ಮಾಹಿತಿಗಳ ಬೆಳಕಿನಲ್ಲೇ ನೀಡಬೇಕಾಗುತ್ತದೆ.

ಬೋಧನೆಯಲ್ಲಿ ಈ ಕೆಳಗೆ ನೀಡಲಾದ ವಿಷಯಗಳನ್ನು ಗಮನದಲ್ಲಿರಿಸುವುದು ಪ್ರಸ್ತುತ ಸಿದ್ಧಾಂತದ ಬೇಡಿಕೆಯಾಗಿದೆ:

1. ಪ್ರತಿಯೊಂದು ಹೊಸ ಪಾಠಕ್ಕೆ ಸಂಬಂಧಿಸಿ ಮೊತ್ತಮೊದಲು ಮಕ್ಕಳ ಹಿಂದಿನ ಸಾಮರ್ಥ್ಯವನ್ನು ಸರಿಯಾಗಿ ಮನದಟ್ಟು ಮಾಡಿರಬೇಕು. ಏಕೆಂದರೆ ಅದರ ಆಧಾರದಲ್ಲಿಯೇ ಹೊಸ ವಿಷಯಗಳನ್ನು ಕಲಿಸಲು ಸಾಧ್ಯ.
2. ಪಾಠದ ಪೀಠಿಕೆಯಲ್ಲಿ, ಮಕ್ಕಳಿಗೆ ಆ ವಿಷಯಕ್ಕೆ ಸಂಬಂಧಿಸಿ ಹಿಂದಿನ ಅರಿವು ಹೇಗೆ ಇದೆ ಎಂಬುದನ್ನು ಚೆನ್ನಾಗಿ ತಿಳಿಯುವ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಬೇಕು. ಪ್ರಶ್ನೆಗಳು ವಿಷಯಕ್ಕೆ ಸಂಬಂಧಿಸಿರುವುದರ ಜತೆಗೆ, ಮಕ್ಕಳಿಗೆ ಉತ್ತರ ಹೇಳಲು ಕಷ್ಟವಾಗದಂತಿರಬೇಕು. ಅದೇ ರೀತಿ ಅವರು ತಮ್ಮ ಮನಸ್ಸಿನಲ್ಲಿರುವುದನ್ನೆಲ್ಲ ಹೊರಗೆಡಹುವ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಬೇಕು.
3. ಒಂದು ಪಠ್ಯ ವಿಷಯವನ್ನು ಹಲವು ಭಾಗಗಳಾಗಿ ವಿಂಗಡಿಸಬೇಕು. ಪ್ರತಿಯೊಂದು ಭಾಗವೂ ಹಿಂದಿನ ಭಾಗದೊಂದಿಗೆ ಸಂಬಂಧಿಸಿರುವಂತೆ ಇರಬೇಕು.
4. ಪ್ರತಿಯೊಂದು ಅಧ್ಯಾಯವನ್ನು ಮಕ್ಕಳ ದೈನಂದಿನ ಜೀವನ ಅಥವಾ ಅವರ ಅನುಭವಗಳೊಂದಿಗೆ ಜೋಡಿಸಿ ಕಲಿಸಬೇಕು.
5. ಹೊಸ ವಿಷಯಗಳನ್ನು ಮಕ್ಕಳ ಹಿಂದಿನ ಮಾಹಿತಿಗಳೊಂದಿಗೆ ತುಲನೆ ಮಾಡಿ ಅವುಗಳ ಸಾಮ್ಯತೆ ಅಥವಾ ವ್ಯತ್ಯಾಸವನ್ನು ಚೆನ್ನಾಗಿ ಮನದಟ್ಟು ಮಾಡಿಸಿಕೊಡಬೇಕು.
6. ಮಕ್ಕಳ ಅನುಭವಗಳು ಅಪೂರ್ಣ ಮತ್ತು ಕಲ್ಪನೆಗಳು ಅಸ್ಪಷ್ಟವಾಗಿರುತ್ತವೆ. ಆದ್ದರಿಂದ ಅವರ ಹಿಂದಿನ ಸಾಮರ್ಥ್ಯದಿಂದ ಪಠ್ಯದಲ್ಲಿ ಪ್ರಯೋಜನ ಪಡೆಯುವಾಗ, ಅವರ ಹಿಂದಿನ ಕಲ್ಪನೆಗಳನ್ನು ಸ್ಪಷ್ಟವಾಗಿ ತಿಳಿದುಕೊಂಡಿರಬೇಕು.

ಸುಲಭದಿಂದ ಕಷ್ಟದೆಡೆಗೆ

ಅಂದರೆ ಪ್ರತಿಯೊಂದು ಅಧ್ಯಾಯದ ಆರಂಭವು ಸುಲಭದೊಂದಿಗೆ ಆಗಬೇಕು ಮತ್ತು ಕ್ರಮೇಣ ಕಷ್ಟದೆಡೆಗೆ ಸಾಗಿಸಬೇಕು. ಇದು ಬೋಧನೆಯ ಅತಿ ಯೋಗ್ಯವಾದ ಸಿದ್ಧಾಂತವಾಗಿದೆ. ಈ ರೀತಿ ಮಕ್ಕಳು ತಮಗರಿವಿಲ್ಲದೆಯೇ ಕ್ರಮೇಣ ಸಂಕಷ್ಟದ ಮೇಲೆ ನಿಯಂತ್ರಣ ಹೊಂದುತ್ತ ಸಾಗುತ್ತಾರೆ. ಅವರ ಮನಸ್ಸು ಬೆಳೆಯುತ್ತದೆ. ಅವರ ಆಸಕ್ತಿಯು ನಿರಂತರವಾಗಿರುತ್ತದೆ. ಅವರು ಸಂಕಷ್ಟವನ್ನು ಪರಿಹರಿಸಲಸಾಧ್ಯ ಎಂದು ಭಾವಿಸುವುದಿಲ್ಲ, ಬದಲಾಗಿ ಅಚಲವಾಗಿ ನಿಂತು ಅವುಗಳನ್ನು ಎದುರಿಸುತ್ತಾರೆ. ತದ್ವಿರುದ್ಧವಾಗಿ, ಮೊದಲಿಂದಲೇ ಅವರನ್ನು ಕಷ್ಟದ ಕೆಲಸದಲ್ಲಿ ಸಿಲುಕಿಸಿಬಿಟ್ಟರೆ, ಅವರು ಧೈರ್ಯಗುಂದಿ ಬಿಡುತ್ತಾರೆ ಮತ್ತು ಹತಾಶೆಯಿಂದ ಪ್ರಯತ್ನವನ್ನು ಬಿಟ್ಟು ಬಿಡುತ್ತಾರೆ.

ಈ ನಿಟ್ಟಿನಲ್ಲಿ ಕೆಳಗೆ ನೀಡಲಾದ ವಿಷಯಗಳನ್ನು ಗಮನದಲ್ಲಿರಿಸಬೇಕು:

1. ಸುಲಭ ಮತ್ತು ಕಷ್ಟ ಎನ್ನುವುದು ಹೆಚ್ಚುವರಿ ಪರಿಪದಗಳಾಗಿವೆ. ಒಂದೇ ವಿಷಯವು ಒಬ್ಬನಿಗೆ ಸುಲಭವಾಗಿಯೂ ಇನ್ನೊಬ್ಬನಿಗೆ ಕಷ್ಟಕರವಾಗಿಯೂ ತೋರುತ್ತದೆ. ಅದೇ

ರೀತಿ ಕಲಿಯುವುದಕ್ಕೆ ಮುನ್ನ ಕಷ್ಟಕರ ಎಂದು ಭಾಸವಾದ ಕೆಲಸವು, ಕಲಿತ ಮೇಲೆ ಸುಲಭವಾಗಿ ಕಾಣುತ್ತದೆ. ಆದ್ದರಿಂದ ಸುಲಭ ಮತ್ತು ಕಷ್ಟದ ತೀರ್ಮಾನವನ್ನು ಸಂಬಂಧಿತ ಮಕ್ಕಳ ಮಾನದಂಡದಿಂದ ಅಳೆಯಬೇಕೇ ಹೊರತು ನಿಮ್ಮ ಅಥವಾ ಇತರ ಅಧ್ಯಾಪಕರ ಮಾನದಂಡದಿಂದಲ್ಲ, ಈ ವಿಷಯದಲ್ಲಿ ಅಧ್ಯಾಪಕರಿಂದ ಹೆಚ್ಚಿನ ವೇಳೆ ಪ್ರಮಾದಗಳುಂಟಾಗುತ್ತವೆ. ಅವರು ಒಂದು ವಿಷಯವನ್ನು ಸುಲಭ ಎಂದು ಭಾವಿಸಿ, ವಿದ್ಯಾರ್ಥಿಗಳ ಮೇಲೆ ಬಲವಂತದಿಂದ ಹೇರಲು ಪ್ರಯತ್ನಿಸುತ್ತಾರೆ. ವಸ್ತುತಃ ಅದು ಮಕ್ಕಳ ಮಟ್ಟಿಗೆ ತೀರಾ ಕಷ್ಟ ಮತ್ತು ಬುದ್ಧಿಗೆ ನಿಲುಕದ್ದಾಗಿರುತ್ತದೆ. ಹಾಗಾಗಿ ಮಕ್ಕಳು ಅರ್ಥೈಸದಿದ್ದಾಗ ಅಥವಾ ಕೆಲವು ಮಕ್ಕಳಿಗೆ ಅರ್ಥವಾಗಿ, ಇನ್ನು ಕೆಲವರಿಗೆ ಅರ್ಥವಾಗದಿದ್ದರೆ, ಅಧ್ಯಾಪಕ ಕೆರಳುತ್ತಾನೆ ಮತ್ತು ಕೆಲವೊಮ್ಮೆ ಪೆಟ್ಟು ಕೊಡಲೂ ಮುಂದಾಗುತ್ತಾನೆ. ವಸ್ತುತಃ ಮಕ್ಕಳಾದರೋ ಅಸಹಾಯಕರೂ ಅಮಾಯಕರೂ ಆಗಿರುತ್ತಾರೆ.

2. ಶಾಲೆಯ ಆರಂಭದಲ್ಲಿಯೇ ಪ್ರತಿಯೊಂದು ವಿಷಯದ ಅಧ್ಯಾಯಗಳನ್ನು ಸುಲಭ ಮತ್ತು ಕಷ್ಟದ ಆಧಾರದಲ್ಲಿ ವಿಂಗಡಿಸಬೇಕು. ಕಲಿಸುವಾಗಲೂ ಮೊದಲು ಸುಲಭದ ಅಧ್ಯಾಯ, ಆ ಮೇಲೆ ಕಷ್ಟದ ಅಧ್ಯಾಯ ಬರುವಂತೆ ನೋಡಿಕೊಳ್ಳಬೇಕು.
3. ಅಧ್ಯಾಯಗಳು ತುಂಬಾ ಕಷ್ಟಕರವಿದ್ದಲ್ಲಿ ಹತಾಶೆ, ನಿರಾಶೆ ಹುಟ್ಟಿಕೊಳ್ಳುವಂತೆಯೇ ಬಹಳ ಸುಲಭವಿದ್ದರೆ ಅದು ಬೇಸರಿಕೆ, ಅಲಕ್ಷ್ಯಕ್ಕೆ ಕಾರಣವಾಗುತ್ತದೆ. ಈ ರೀತಿಯಾಗಿ ಸಮಯ ವ್ಯಯಿಸುವುದರಿಂದ ಯಾವುದೇ ಪ್ರಯೋಜನವಿಲ್ಲ, ಆದ್ದರಿಂದ ಪಾಠದ ಆರಂಭದಲ್ಲಿ ಸುಲಭದ ಅಧ್ಯಾಯಗಳನ್ನು ಕಲಿಸುತ್ತ ಕ್ರಮೇಣ ಕಷ್ಟದ ಅಧ್ಯಾಯದೆಡೆಗೆ ಸಾಗಬೇಕು. ಈ ಮೂಲಕ ಮಕ್ಕಳಲ್ಲಿ ಸಮಸ್ಯೆ-ಸಂಕಷ್ಟಗಳನ್ನು ಎದುರಿಸುವ ಆತ್ಮಸ್ಥೈರ್ಯ ಬೆಳೆದು ಬರುವುದು.

ಸರಳತೆಯಿಂದ ಕ್ಲಿಷ್ಟತೆಯೆಡೆಗೆ

ಅಂದರೆ ಪ್ರತಿಯೊಂದು ವಿಷಯದಲ್ಲಿ ಸರಳ ವಿಷಯಗಳನ್ನು ಮೊದಲು ತೆಗೆದುಕೊಂಡು ಕ್ರಮೇಣ ಹಂತಹಂತವಾಗಿ ಕ್ಲಿಷ್ಟಕರವಾದುದನ್ನು ಕಲಿಸಬೇಕು. ಅದೇ ರೀತಿ ಮಕ್ಕಳ ಪ್ರಾಯ, ಬುದ್ಧಿಮತ್ತೆ, ಅನುಭವ-ದರ್ಶನಗಳನ್ನು ಮುಂದಿರಿಸಿ ಪ್ರತಿಯೊಂದು ಪಠ್ಯವನ್ನು ಸರಳ ಮತ್ತು ಸುಲಭದಲ್ಲಿ ಅರ್ಥವಾಗುವಂತಹ ವಿಷಯಗಳು ಮೊದಲು ಬರುವಂತೆಯೂ ಕ್ರಮೇಣ ಮಿಶ್ರ ಮತ್ತು ಕ್ಲಿಷ್ಟಕರವಾದ ವಿಷಯಗಳು ಸೇರುವಂತೆಯೂ ನೋಡಿಕೊಳ್ಳಬೇಕು. ಉದಾ: ಗಣಿತದಲ್ಲಿ ಒಂದು ಸೂತ್ರವನ್ನು ಕಲಿಸಿದ ಬಳಿಕ, ಅಭ್ಯಾಸಕ್ಕೆ ಆ ಸೂತ್ರದಿಂದ ಸುಲಭವಾಗಿ ಪರಿಹಾರವಾಗುವ ಕೆಲವು ಪ್ರಶ್ನೆಗಳನ್ನು ನೀಡಬೇಕು. ಆ ಮೇಲೆ ಕ್ರಮೇಣ ಅಂಕಿ-ಸಂಖ್ಯೆಗಳಲ್ಲಿ ಕ್ಲಿಷ್ಟತೆಯನ್ನು ತರಬೇಕು. ಕೊನೆಯಲ್ಲಿ ಕಷ್ಟದ

ಪ್ರಶ್ನೆಗಳನ್ನು ಕೇಳಬೇಕು. ಅವುಗಳನ್ನು ಪರಿಹರಿಸಲು ಆ ಸೂತ್ರದೊಂದಿಗೆ ಈ ಹಿಂದೆ ಕಲಿತ ಸೂತ್ರಗಳನ್ನೂ ಬಳಸಬೇಕಾಗಿ ಬರುವಂತಿರಬೇಕು. ಸೂತ್ರ, ಪ್ರಮೇಯಗಳನ್ನು ಕಲಿಸುವಾಗಲೂ ಈ ನೀತಿಯನ್ನು ಗಮನದಲ್ಲಿರಿಸಬೇಕು. ಅಂದರೆ ಮೊದಲು ಸರಳ, ಬಳಿಕ ಹಂತಹಂತವಾಗಿ ಕ್ಲಿಷ್ಟಕರ ಸೂತ್ರಗಳನ್ನು ಕಲಿಸಬೇಕು. ಆದರೆ ಈ ಸರಳತೆ ಮತ್ತು ಕ್ಲಿಷ್ಟತೆಯ ತೀರ್ಮಾನವು ಮಕ್ಕಳ ಮಾನದಂಡದಲ್ಲಿ ಆಗಬೇಕು. ಏಕೆಂದರೆ ಒಂದು ವಿಷಯವು ಹಿರಿಯರಿಗೆ ಸರಳವಾಗಿ ಕಂಡರೂ ಮಕ್ಕಳ ಮಟ್ಟಿಗೆ ಅದರಲ್ಲಿ ಹಲವು ಕ್ಲಿಷ್ಟತೆಗಳು ಕಾಣಬಹುದು. ಅದು ಬಹಳ ಕಷ್ಟದಿಂದಲೇ ಅವರಿಗೆ ಅರ್ಥವಾದೀತು.

ಘನ ವಸ್ತುಗಳ ಸಹಾಯ ಪಡೆಯುವುದು

ನಿರ್ದಿಷ್ಟ ಕಲ್ಪನೆಗಳನ್ನು ಸ್ಥಾಪಿಸಲಿಕ್ಕಾಗಿ ಘನ ವಸ್ತುಗಳಿಂದ ಸಹಾಯ ಪಡೆಯಬೇಕು. ಉದಾ: ಮಕ್ಕಳಿಗೆ ಎಣಿಕೆ, ಮಗ್ಗಿ, ಸಂಕಲನ, ವ್ಯವಕಲನ ಇತ್ಯಾದಿ ಕಲಿಸಲು ಬೆರಳು, ಬಾಲ್‌ಫ್ರೇಮ್, ಗೋಲಿ ಮತ್ತು ಹುಣಸೆಯ ಬೀಜ ಇತ್ಯಾದಿಗಳಿಂದ ಸಹಾಯ ಪಡೆದರೆ ಕಲಿಸುವುದು ಸುಲಭವಾಗುತ್ತದೆ. ಕ್ರಮೇಣ ಮಕ್ಕಳು ಯಾವುದೇ ವಸ್ತುವಿನ ಸಹಾಯವಿಲ್ಲದೆಯೇ ಸಂಕಲನ, ವ್ಯವಕಲನ ಮಾಡುತ್ತಾರೆ. ಅದೇ ರೀತಿ ಮಾಡೆಲ್, ಚಿತ್ರಗಳು, ನಕ್ಷೆ ಇತ್ಯಾದಿಗಳ ಸಹಾಯದಿಂದ ನಿರ್ದಿಷ್ಟ ಪಾಠಗಳನ್ನು ಕಲಿಸಬಹುದಾಗಿದೆ. ಸಂಪೂರ್ಣವಾಗಿ ಹೊಸದಾದ ಅಥವಾ ಪರಿಚಯವೇ ಇಲ್ಲದ ವಿಷಯವನ್ನು ಕಲಿಸುವಾಗಲೂ ಅದರ ಮಾಡೆಲ್, ಚಿತ್ರಗಳನ್ನು ತೋರಿಸಿದರೆ ಅದರ ಕುರಿತಾದ ಕಲ್ಪನೆಯು ಸ್ಪಷ್ಟವಾಗುತ್ತದೆ.

ಈ ಸಿದ್ಧಾಂತದಿಂದ ಪ್ರಯೋಜನ ಪಡೆಯಲಿಕ್ಕಾಗಿ ಈ ಕೆಳಗಿನ ವಿಷಯಗಳನ್ನು ದೃಷ್ಟಿಯಲ್ಲಿರಿಸಿರಿ:

1. ಪಾಠವನ್ನು ಘನವಸ್ತು ಮತ್ತು ನಿರ್ದಿಷ್ಟ ಉದಾಹರಣೆಗಳಿಂದ ಆರಂಭಿಸಬೇಕು. ಆದರೆ ಅಂತ್ಯವು ನಿರ್ದಿಷ್ಟ ಕಲ್ಪನೆಯಿಂದಲೇ ಆಗಬೇಕು.

2. ಘನವಸ್ತು ಮತ್ತು ನಿರ್ದಿಷ್ಟ ಉದಾಹರಣೆಗಳನ್ನು ಅಗತ್ಯವಿದ್ದಷ್ಟು ಮಾತ್ರವೇ ಬಳಸಬೇಕು. ಕ್ರಮೇಣ ನಿರ್ದಿಷ್ಟ ಕಲ್ಪನೆಗಳನ್ನು ಸ್ಥಾಪಿಸಲು ಹೆಚ್ಚು ಗಮನವೀಯಬೇಕು.

3. ನಿರ್ದಿಷ್ಟ ಕಲ್ಪನೆಯು ಸ್ಥಾಪಿತವಾದ ಬಳಿಕ ಅದನ್ನು ಹಾಗೆಯೇ ಬಿಟ್ಟು ಬಿಡಬಾರದು. ಬದಲಾಗಿ ಬಳಿಕ ಘನ ವಸ್ತು ಹಾಗೂ ಉದಾಹರಣೆಗಳನ್ನು ಬಳಸಿ ಇನ್ನಷ್ಟು ವಿವರಗಳನ್ನು ನೀಡಬೇಕು.

ಅನಿರ್ದಿಷ್ಟ ಮತ್ತು ಅಸ್ಪಷ್ಟ ಕಲ್ಪನೆಗಳನ್ನು ನಿರ್ದಿಷ್ಟ ಮತ್ತು ಸ್ಪಷ್ಟಗೊಳಿಸುವುದು

ಮಕ್ಕಳ ಅನುಭವ ಮತ್ತು ವೀಕ್ಷಣೆಯು ಬಹಳ ಸೀಮಿತ ಹಾಗೂ ಅಪೂರ್ಣವಾಗಿರುತ್ತದೆ. ಆದ್ದರಿಂದ ವಿವಿಧ ವಸ್ತುಗಳ ಕುರಿತಾದ ಅವರ ಕಲ್ಪನೆ ಅನಿರ್ದಿಷ್ಟ

ಮತ್ತು ಅಸ್ಪಷ್ಟವಾಗಿರುತ್ತದೆ. ಅವುಗಳನ್ನು ಹಂತ ಹಂತವಾಗಿ ನಿರ್ದಿಷ್ಟ ಮತ್ತು ಸ್ಪಷ್ಟಗೊಳಿಸುವುದು ಅಧ್ಯಾಪಕನ ಹೊಣೆಯಾಗಿದೆ. ಈ ಮೂಲಕ ಮಕ್ಕಳ ಜ್ಞಾನವು ಪಕ್ವ ಮತ್ತು ವಿಶ್ವಸನೀಯವಾಗಿ ಮಾರ್ಪಡುತ್ತದೆ. ಇದನ್ನು ಮಕ್ಕಳಿಗೆ ಅನುಭವ ಮತ್ತು ವೀಕ್ಷಣೆಗೆ ಸಾಕಷ್ಟು ಅವಕಾಶ ಒದಗಿಸಿಕೊಡುವ ಮೂಲಕ ಸಾಧಿಸಬಹುದು. ಹಾಗೆಯೇ ಅವರ ವೀಕ್ಷಣಾಶಕ್ತಿಗೆ ಸಾದ್ಯಂತ ತರಬೇತಿಯನ್ನೂ ನೀಡಬೇಕು. ಮಕ್ಕಳ ತಪ್ಪು ಮತ್ತು ಅಪೂರ್ಣಕಲ್ಪನೆಯನ್ನು ಸುಧಾರಿಸಲು ಚಿತ್ರಗಳು, ನಕಾಶೆ, ವಿವರಣೆ ಮತ್ತು ಉದಾಹರಣೆಗಳ ಸಹಾಯ ಪಡೆಯಬೇಕು. ನಮ್ಮಲ್ಲಿ ಸಾಮಾನ್ಯವಾಗಿ ಪಾರಿಭಾಷಿಕ ಪದಗಳ ಪರಿಚಯ ಮತ್ತು ಕ್ಲಿಷ್ಟ ಪದಗಳ ಅರ್ಥವನ್ನು ಬಾಯಿಪಾಠ ಮಾಡಿಸಿ ಕೈತೊಳೆದುಕೊಳ್ಳಲಾಗುತ್ತದೆ. ವಸ್ತುತಃ ಈ ರೀತಿಯಾಗಿ ಕಲ್ಪನೆಗಳು ಸ್ಪಷ್ಟವಾಗುವುದೂ ಇಲ್ಲ, ವಿವರಣೆಯು ಅರ್ಥವಾಗುವುದೂ ಇಲ್ಲ. ಅದನ್ನು ಈ-ಮೇಲಿನ ವಿಧಾನಗಳ ಮೂಲಕ ನೀಗಿಸಬೇಕಾಗಿದೆ.

ವಿಶೇಷದಿಂದ ಸಾಮಾನ್ಯದ ಕಡೆಗೆ

ಅಂದರೆ ವಿಶೇಷ ಘಟನೆಗಳನ್ನು ಮೊದಲು ಮತ್ತು ಸಾಮಾನ್ಯ ಚರ್ಚೆಗಳನ್ನು ನಂತರ ತಿಳಿಸಬೇಕು. ಒಂದು ಸಾಮಾನ್ಯ ನಿಯಮ ತಿಳಿಯಲು ಅಥವಾ ಯಾವುದಾದರೂ ತೀರ್ಮಾನಕ್ಕೆ ಬರಲು ಮಕ್ಕಳಿಗೆ ವಿಶ್ಲೇಷಿಸಲು ಮತ್ತು ಅನುಭವ ಪಡೆಯಲು ಸಾಕಷ್ಟು ಅವಕಾಶ ನೀಡಬೇಕು. ನೈತಿಕ ನೀತಿ-ನಿಯಮಗಳನ್ನು ತಿಳಿಸಲು ಕೇವಲ ವಿಷಯವನ್ನು ಚರ್ಚೆಗೆತ್ತಿಕೊಳ್ಳುವುದರ ಬದಲು, ನಿರ್ದಿಷ್ಟ ಘಟನೆಗಳನ್ನು ಉಲ್ಲೇಖಿಸಬೇಕು. ಐತಿಹಾಸಿಕ ವ್ಯಕ್ತಿತ್ವಗಳ ಆಯ್ದ ಘಟನೆಗಳನ್ನು ಮೊದಲು ಹೇಳಬೇಕು. ಅದಾದ ಬಳಿಕ ಇಡೀ ಇತಿಹಾಸ ಮತ್ತು ಜನಾಂಗಗಳ ಉತ್ಥಾನ-ಪತನದ ವೃತ್ತಾಂತವನ್ನು ಹಂತಹಂತವಾಗಿ ತಿಳಿಸಬೇಕು.

ಪಠ್ಯವನ್ನು ಸುಲಭಗೊಳಿಸಲು ಅಧ್ಯಾಪಕರು ಸಾಮಾನ್ಯವಾಗಿ ವರ್ಣಾಕ್ಷರಗಳನ್ನು ಮತ್ತು ಸೂತ್ರ-ಪ್ರಮೇಯಗಳನ್ನು ಬಾಯಿಪಾಠ ಮಾಡಿಸುತ್ತಾರೆ. ಆದರೆ ವಿದ್ಯಾರ್ಥಿಗಳಿಗೆ ಸ್ವತಃ ಅನುಭವ ಗಳಿಸಿ ಅದರ ಫಲಿತಾಂಶವನ್ನು ತಲುಪುವ ಅವಕಾಶವನ್ನು ನೀಡುವುದಿಲ್ಲ. ಇದು ಸರಿಯಲ್ಲ. ಏಕೆಂದರೆ ಈ ಮೂಲಕ ಮಕ್ಕಳು ಇತರರ ಭರವಸೆಯ ಮೇಲೆ ಒಂದು ವಿಷಯವನ್ನು ಕಲಿಯುತ್ತಾರೆ. ಆದರೆ ಅದನ್ನು ಚೆನ್ನಾಗಿ ಅರ್ಥೈಸಲಾಗದ ಕಾರಣ ಬಲು ಬೇಗನೇ ಮರೆತು ಬಿಡುತ್ತಾರೆ.

ಅದೇ ವೇಳೆ ಅನುಭವ, ವಿಶ್ಲೇಷಣೆ ಇತ್ಯಾದಿಗಳಿಗಾಗಿ ವಿದ್ಯಾರ್ಥಿಗಳಿಗೆ ಅಗತ್ಯವಿರುವಷ್ಟು ಸಮಯವನ್ನು ಮಾತ್ರವೇ ನೀಡಬೇಕು. ಒಂದು ನಿಯಮ-ಸೂತ್ರ ಕಲಿತ ಮೇಲೆ ಇನ್ನಷ್ಟು ಪರಿಶೀಲನೆ, ವಿಶ್ಲೇಷಣೆ, ಅನುಭವ ಮತ್ತು ಉದಾಹರಣೆಗಳಲ್ಲಿ ಸಮಯ ವ್ಯಯಿಸಬಾರದು. ಬದಲಾಗಿ ಕಲಿತ ಆ ಸೂತ್ರವನ್ನು ಇನ್ನಷ್ಟು ಸಮಸ್ಯೆಗಳನ್ನು ಪರಿಹರಿಸಲು ಬಳಸಿಕೊಳ್ಳಬೇಕು.

ಸಂಪೂರ್ಣದಿಂದ ಭಾಗಗಳೆಡೆಗೆ

ಅಂದರೆ ಮೊದಲು ಸಂಪೂರ್ಣ ವಿಷಯದ ಮೇಲೆ ಒಟ್ಟಾರೆಯಾಗಿ ಪಕ್ಷಿನೋಟ ಬೀರಬೇಕು. ತರುವಾಯ ಒಂದೊಂದು ಭಾಗ, ಅಂಶದ ಬಗ್ಗೆ ವಿವರವಾದ ಮಾಹಿತಿಗಳನ್ನು ನೀಡಬೇಕು. ಈ ರೀತಿ ಆರಂಭದಲ್ಲಿ ಒಂದು ಸಂಕ್ಷಿಪ್ತವಾದ ಚಿತ್ರಣ ಮನದಲ್ಲಿ ಮೂಡುತ್ತದೆ ಮತ್ತು ಅದು ಮನಸ್ಸಿನಲ್ಲಿ ಸಂಪೂರ್ಣವಾಗಿ ಸುರಕ್ಷಿತವಾಗಿರುವುದು. ಕ್ರಮೇಣ ಮಕ್ಕಳು ಒಂದೊಂದು ಅಂಗದ ವಿವರಣೆಯಿಂದಲೂ ಚೆನ್ನಾಗಿ ಪರಿಚಿತರಾಗುವರು.

ಆರಂಭದಲ್ಲಿ ಮಕ್ಕಳ ದೃಷ್ಟಿಯು ಭಾಗ ಮತ್ತು ಅದರ ವಿವರಣೆಯ ಮೇಲೆ ಬೀಳುವುದಿಲ್ಲ, ಬದಲಾಗಿ ಅವರು ಇಡೀ ವಿಷಯದ ಮೇಲೆ ಒಟ್ಟಾರೆಯಾಗಿ ದೃಷ್ಟಿ ಬೀರುತ್ತಾರೆ ಮತ್ತು ಪ್ರತಿಯೊಂದು ವಸ್ತುವಿನ ಸಂಕ್ಷಿಪ್ತವಾದ ಕಲ್ಪನೆಯನ್ನು ಮನದಲ್ಲಿ ಇರಿಸುತ್ತಾರೆ. ಅಧ್ಯಾಪಕನು ಹಂತಹಂತವಾಗಿ ಒಂದೊಂದು ಅಂಶದ ವಿವರಣೆಯನ್ನು ನೀಡುತ್ತಾ ಇಡೀ ವಿಷಯದ ಬಗ್ಗೆ ಹೆಚ್ಚು ಸ್ಪಷ್ಟವಾದ ಮತ್ತು ನಿರ್ದಿಷ್ಟವಾದ ಕಲ್ಪನೆಯನ್ನು ರೂಪಿಸಬೇಕಾಗಿದೆ. ಭಾಗಗಳ ಬಗ್ಗೆ ವಿವರಿಸಿದ ಬಳಿಕ ಸಂಪೂರ್ಣ ವಿಷಯದೊಂದಿಗೆ ಅವುಗಳನ್ನು ಜೋಡಿಸಬೇಕು.

ಸ್ವಭಾವವನ್ನು ಅನುಸರಿಸಬೇಕು

ಅಂದರೆ ಮಕ್ಕಳು ಬೌದ್ಧಿಕ ಮತ್ತು ದೈಹಿಕವಾಗಿ ಯಾವ ಹಂತದಲ್ಲಿ ಸಾಗುತ್ತಿರುವರೋ ಆ ಹಂತದ ವಿಶೇಷತೆಯನ್ನು ದೃಷ್ಟಿಯಲ್ಲಿರಿಸಬೇಕು ಮತ್ತು ಅವರ ಸ್ವಭಾವವು ಅಂಗೀಕರಿಸುವಂತಹ ವಿಷಯಗಳನ್ನು ಓದಿಸಿ ಕಲಿಸಬೇಕು. ಸ್ವಾಭಾವಿಕ ಬೇಡಿಕೆ ಮತ್ತು ಮೂಲಭೂತ ಆಗ್ರಹ, ಒಲವು, ಆಸಕ್ತಿಗಳನ್ನು ಪರಿಗಣಿಸಬೇಕು ಹಾಗೂ ಅರ್ಹ ಮೇರೆಯೊಳಗೆ ಅವುಗಳಿಗೆ ಸಂಪೂರ್ಣ ರಿಯಾಯಿತಿಯನ್ನು ನೀಡಬೇಕು. ಮಕ್ಕಳ ಸ್ವಭಾವದೊಂದಿಗೆ ಸಮರ ಹೂಡಬಾರದು ಮತ್ತು ಸ್ವಭಾವಕ್ಕೆ ವಿರುದ್ಧವಾದುದನ್ನು ಅವರ ಮೇಲೆ ಹೇರಲೂ ಬಾರದು. ಅದರಿಂದ ಪ್ರಯೋಜನದ ಬದಲು ನಷ್ಟವೇ ಆಗುವುದು. ಪರಿಶ್ರಮವಂತೂ ವ್ಯರ್ಥವಾಗುತ್ತದೆ, ಜತೆಗೆ ಪ್ರತಿಕ್ರಿಯೆಯೂ ವಿಪರೀತವಾಗಿರುತ್ತದೆ. ಕೆಲವರು ಮಕ್ಕಳನ್ನು ಅವಧಿಗಿಂತ ಮುಂಚೆಯೇ ಬೌದ್ಧಿಕವಾಗಿ ಪ್ರೌಢರನ್ನಾಗಿಸಲು ಪ್ರಯತ್ನಿಸುತ್ತಾರೆ. ಇದು ಸರಿಯಲ್ಲ, ಮಕ್ಕಳನ್ನು ಮಕ್ಕಳಾಗಿಯೇ ಬೆಳೆಯಲು ಬಿಡಬೇಕು. ಮಾತ್ರವಲ್ಲ, ಬೋಧನೆಯಲ್ಲೂ ಸ್ವತಃ ಮಕ್ಕಳ ಪ್ರಾಯ, ದೈಹಿಕ-ಮಾನಸಿಕ ಸ್ಥಿತಿ, ಸ್ವಭಾವ, ಒಲವು, ಭಾವನೆ ಇತ್ಯಾದಿಗಳನ್ನು ಗಮನದಲ್ಲಿರಿಸಬೇಕು. ಈ ರೀತಿಯಲ್ಲಾದರೆ ಮಾತ್ರವೇ ಬೋಧನೆಯು ಯಶಸ್ವಿ ಮತ್ತು ಪರಿಣಾಮಕಾರಿಯಾಗುತ್ತದೆ.

ತರ್ಕಶಾಸ್ತ್ರದ ಬದಲು ಮನಃಶಾಸ್ತ್ರದಂತೆ ವ್ಯವಹರಿಸಬೇಕು

ಅಂದರೆ, ಪಠ್ಯ ಪುಸ್ತಕದಲ್ಲಿ ನೀಡಿದ ಅನುಕ್ರಮದಂತೆ ವಿಷಯಗಳನ್ನು ಮಕ್ಕಳ ಮುಂದಿರಿಸುವುದರ ಬದಲಾಗಿ ಮಕ್ಕಳ ಮನಸ್ಸು ಒಪ್ಪುವಂತಹ ಕ್ರಮದಲ್ಲಿ ನೀಡಬೇಕು. ಉದಾಹರಣೆಗೆ: ಶಿಕ್ಷಣದ ಸಾಂಪ್ರದಾಯಿಕ ವಿಧಾನವೇನೆಂದರೆ, ಮೊದಲು ಅಕ್ಷರ ಮಾಲೆಯನ್ನು ಕಲಿಸಲಾಗುತ್ತದೆ, ನಂತರ ಸ್ವರ-ಚಿಹ್ನೆಗಳನ್ನು ಕಲಿಸಲಾಗುತ್ತದೆ; ಆ ಮೇಲೆ ಎರಡಕ್ಷರದ ಪದ, ಮೂರಕ್ಷರದ ಪದ, ನಾಲ್ಕಕ್ಷರದ ಪದಗಳನ್ನು ಕಲಿಸಲಾಗುತ್ತದೆ. ಅವುಗಳಲ್ಲಿ ಅಕ್ಷರಗಳು ಭಿನ್ನಭಿನ್ನವಾಗಿರುತ್ತವೆ. ತರುವಾಯ ಪದಗಳ ಜೋಡನೆ, ಮಿಶ್ರ ಪದಗಳು, ಬಳಿಕ ವಾಕ್ಯ ಮತ್ತು ಕೊನೆಯಲ್ಲಿ ಪಾಠವನ್ನು (ಪ್ಯಾರಾಗ್ರಾಫ್‌ಗಳಾಗಿ) ಕಲಿಸಲಾಗುತ್ತದೆ. ಈ ವಿಧಾನವು ತಾರ್ಕಿಕವಾಗಿ ಸರಿಯೆಂದೇ ಕಾಣುತ್ತದೆ. ಆದರೆ ಈ ಅನುಕ್ರಮವು ಮಕ್ಕಳಿಗೆ ಶುಷ್ಕ ಮತ್ತು ಅರ್ಥಹೀನವಾಗಿ ತೋರುತ್ತದೆ ಹಾಗೂ ಅವರು ಅದರಲ್ಲಿ ಎಳ್ಳಷ್ಟೂ ಆಸಕ್ತಿ ಹೊಂದುವುದಿಲ್ಲ ಎಂಬುದು ಅನುಭವಗಳಿಂದ ಸಾಬೀತಾಗಿದೆ. ತದ್ವಿರುದ್ಧವಾಗಿ ಮಕ್ಕಳಿಗೆ ಸುಂದರ ಬಣ್ಣದ, ಆಕರ್ಷಕ ಮತ್ತು ದೊಡ್ಡ ಚಿತ್ರಗಳು ಅಥವಾ ನೈಜ ವಸ್ತುಗಳ ಸಹಾಯದಿಂದ ಸಣ್ಣ ಸಣ್ಣ ವಾಕ್ಯಗಳನ್ನು ಕಲಿಸಿ (ಅದರಲ್ಲಿ ಅಕ್ಷರವು ಪುನರಾವರ್ತನೆಯಾಗುವಂತಿರಬೇಕು), ಆಮೇಲೆ ಅವುಗಳನ್ನು ವಿಶ್ಲೇಷಿಸಿ ಪದಗಳಾಗಿಯೂ ಪದಗಳನ್ನು ವಿಂಗಡಿಸಿ ಅಕ್ಷರವಾಗಿಯೂ ಮತ್ತು ಅಕ್ಷರಗಳ ಉಚ್ಚಾರವನ್ನು ಕಲಿಸಿದರೆ ಮಕ್ಕಳ ಮಟ್ಟಿಗೆ ಅದು ಅರ್ಥಪೂರ್ಣವೂ ಆಸಕ್ತಿದಾಯಕವೂ ಆಗಿ ತೋರುತ್ತದೆ. ಅದೇ ರೀತಿ ಗಣಿತದಲ್ಲಿಯೂ ಮೊದಲು ಚುಕ್ಕೆ, ಗೆರೆಗಳು, ಆಮೇಲೆ ಕೋನ, ಬಳಿಕ ಮೇಲ್ಮೈ ಆಕಾರ ಮತ್ತು ಕೊನೆಯಲ್ಲಿ ಘನ ವಸ್ತುವಿನ ಬಗ್ಗೆ ಚರ್ಚೆ ಬರುವುದು ವಾಡಿಕೆ. ಆದರೆ ಮಕ್ಕಳ ಮಟ್ಟಿಗೆ ಮೊದಲು ಘನವಸ್ತು ಹಾಗೂ ಮೇಲ್ಮೈ-ಆಕಾರವನ್ನು ಕಲಿಸುವುದು ಹೆಚ್ಚು ಪ್ರಯೋಜನಕಾರಿಯಾಗಿದೆ. ಗೆರೆ ಮತ್ತು ಚುಕ್ಕೆಗಳ ಚರ್ಚೆ ನಂತರ ಬರಲಿ.

ಆದರೆ ನೆನಪಿರಲಿ, ಪಠ್ಯಕ್ರಮದ ತಾರ್ಕಿಕವಾದ-ಸಾಂಪ್ರದಾಯಿಕ ಅನುಕ್ರಮವು ಬಹಳ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ಹೊಂದಿದೆ. ಈ ವಿಧಾನವನ್ನು ಅನುಸರಿಸಿಯೇ ವಿದ್ಯೆ ಮತ್ತು ಕಲೆಗಾರಿಕೆಯಲ್ಲಿ ಪಾರಂಗತವಾಗಲು ಸಾಧ್ಯವಿದೆ. ಅಲ್ಲದೆ ಕೊನೆಗೆ ಮಕ್ಕಳನ್ನು ಹಂತ ಹಂತವಾಗಿ ಅದರೆಡೆಗೇ ತರಬೇಕಾಗುತ್ತದೆ. ಆದ್ದರಿಂದ ಬೋಧನೆಯನ್ನು ಪರಿಣಾಮಕಾರಿಯಾಗಿಸಲಿಕ್ಕಾಗಿ ತರಗತಿಗಳಲ್ಲಿ ಅನುಕ್ರಮವನ್ನು ತಿರುವು ಮುರುವುಗೊಳಿಸಬೇಕು, ಅದೂ ಅನಿವಾರ್ಯ ಹಂತದ ವರೆಗೆ ಮಾತ್ರ. ಪರಿಣಾಮಕಾರಿಯನ್ನಾಗಿ ಮಾಡಲು ಸಾಂಪ್ರದಾಯಿಕ ಅನುಕ್ರಮದಂತೆ ಪಾಠ ಮಾಡಲು ಅವಕಾಶ ದೊರೆತರೆ, ಅದನ್ನೇ ಅನುಸರಿಸಬೇಕು.

◆ ◆ ◆

ಅಧ್ಯಾಯ-29

ಬೋಧನೆಯ ಪೂರಕ ವಸ್ತುಗಳು ಮತ್ತು ಉಪಾಯಗಳು

ಬೋಧನೆಯ ಯಶಸ್ಸಿಗೆ ಅನುಸರಿಸಬೇಕಾದ ನೀತಿ-ನಿಯಮಗಳು ಇರುವಂತೆಯೇ, ಅಗತ್ಯಾನುಸಾರ ಬಳಸಬೇಕಾದಂತಹ ಉಪಾಯಗಳು ಮತ್ತು ಪೂರಕ ಸಾಧನಗಳೂ ಇರುತ್ತವೆ. ಉದಾಹರಣೆಗೆ:

1. ಪ್ರಶ್ನೋತ್ತರ
2. ಉಲ್ಲೇಖ
3. ಕಪ್ಪುಹಲಗೆ
4. ವಿವರಣೆ
5. ನಕ್ಷೆ, ಮಾಡೆಲ್, ಚಾರ್ಟ್, ಚಿತ್ರ ಇತ್ಯಾದಿ.
6. ಶೈಕ್ಷಣಿಕ ಪ್ರವಾಸ, ಪಿಕ್‌ನಿಕ್ ಮತ್ತಿತರ ಪೂರಕ ವಸ್ತುಗಳು
7. ಮನೆಗೆಲಸ
8. ಪಠ್ಯ ಪುಸ್ತಕ
9. ಗ್ರಂಥಾಲಯ/ವಾಚನಾಲಯ
10. ಪರೀಕ್ಷೆ, ಪರಿಶೀಲನೆ ಮತ್ತು ಅವಲೋಕನ.

1. ಪ್ರಶ್ನೋತ್ತರ

ಬೋಧನೆಯಲ್ಲಿ ಪ್ರಶ್ನೆಗಳಿಗೆ ಅಪಾರ ಮಹತ್ವ ಇದೆ. ನಿರಂತರ ಮಾತನಾಡುತ್ತಿರುವ ಮತ್ತು ಸ್ವತಃ ಪ್ರಶ್ನೆಗಳನ್ನು ಕೇಳದೆ, ವಿದ್ಯಾರ್ಥಿಗಳಿಗೂ ಪ್ರಶ್ನಿಸಲು ಅವಕಾಶ ನೀಡದೆ ಇರುವ ಅಧ್ಯಾಪಕರಿಂದ ವಿದ್ಯಾರ್ಥಿಗಳಿಗೆ ಬಹಳ ಕಡಿಮೆ ಪ್ರಯೋಜನ ಸಿಗುವುದು. ಅಂತಹ ತರಗತಿಗಳಲ್ಲಿ ಮಕ್ಕಳು ಆಸಕ್ತಿ ವಹಿಸುವುದು ತೀರಾ ಕಡಿಮೆ.

ಪ್ರಶ್ನೆಗಳ ಪ್ರಾಮುಖ್ಯತೆ ಮತ್ತು ಪ್ರಯೋಜನಗಳು

ಸೂಕ್ತ ಪ್ರಶ್ನೆಗಳಿಗೆ ಬಹಳ ಪ್ರಾಮುಖ್ಯತೆ ಮತ್ತು ಪ್ರಯೋಜನಗಳಿವೆ. ಅವುಗಳ ಮೂಲಕ:

- ಕುತೂಹಲ ಕೆರಳಿಸಿ, ಮಕ್ಕಳನ್ನು ಪಾಠ ಕೇಳಲು ಸಿದ್ಧಗೊಳಿಸಬಹುದಾಗಿದೆ.
- ಪಾಠದಲ್ಲಿ ಅವರ ಗಮನ ಮತ್ತು ಆಸಕ್ತಿಯನ್ನು ಕೇಂದ್ರೀಕರಿಸಲು ಸಾಧ್ಯವಿದೆ.

- ಗಮನ ಹರಿಸದಿರುವ ವಿದ್ಯಾರ್ಥಿಗಳ ಗಮನ ಸೆಳೆಯಲು ಮತ್ತು ಮಂದಗತಿಯ ವಿದ್ಯಾರ್ಥಿಗಳನ್ನು ಚುರುಕುಗೊಳಿಸಲು ಹಾಗೂ ಅವರಲ್ಲೂ ಧೈರ್ಯ ತುಂಬಲು ಸಾಧ್ಯವಿದೆ.
- ವಿದ್ಯಾರ್ಥಿಗಳನ್ನು ಚಿಂತನೆಗೆ ಮತ್ತು ವಿಶ್ಲೇಷಣೆಗೆ ಪ್ರೇರೇಪಿಸಬಹುದಾಗಿದೆ.
- ಅವರ ಪ್ರತಿಭೆ-ಸಾಮರ್ಥ್ಯಗಳನ್ನು ಪರಿಶೀಲಿಸಬಹುದಾಗಿದೆ.
- ವಿದ್ಯಾರ್ಥಿಗಳಲ್ಲಿ ಅವರ ತಪ್ಪುಗಳ ಅರಿವು ಮೂಡಿಸಬಹುದಾಗಿದೆ.
- ಪಾಠವನ್ನು ಮುಂದುವರಿಸಲು ಸಹಾಯ ಪಡೆಯಬಹುದಾಗಿದೆ.
- ಪಾಠವನ್ನು ಪುನರಾವರ್ತಿಸಬಹುದಾಗಿದೆ.

ಉದ್ದೇಶಗಳು

ಪಾಠ ಮಾಡುವಾಗ ಅಧ್ಯಾಪಕನು ತರತರದ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಕೆಲವು ಪಾಠದ ಆರಂಭದಲ್ಲಿ, ಇನ್ನು ಕೆಲವು ಮಧ್ಯದಲ್ಲಿ, ಮತ್ತೆ ಕೆಲವು ಕೊನೆಯಲ್ಲಿ.

(ಅ) ಆರಂಭದ ಪ್ರಶ್ನೆಗಳು: ಇದನ್ನು ಪಾಠದ ಆರಂಭದಲ್ಲಿ ಕೇಳಲಾಗುತ್ತದೆ. ಸಂಖ್ಯೆಗಳು ಕಡಿಮೆಯೂ ಸರಳವೂ ಆಗಿರುತ್ತವೆ. ವಿಷಯಕ್ಕೆ ತೀರಾ ಹತ್ತಿರವಿರುತ್ತದೆ. ಇದರ ಉದ್ದೇಶ ಈ ರೀತಿ ಇದೆ-

- ಮಕ್ಕಳ ಬುದ್ಧಿಮತ್ತೆಯನ್ನು ತಿಳಿಯಬಹುದಾಗಿದೆ ಮತ್ತು ಅದರ ಆಧಾರದಲ್ಲಿ ಹೊಸ ವಿಷಯವನ್ನು ಕಲಿಸಲು ಸುಲಭವಾಗುತ್ತದೆ.
- ಮಕ್ಕಳ ಮನಸ್ಸನ್ನು ಪಾಠಕ್ಕಾಗಿ ಸಿದ್ಧಗೊಳಿಸಬಹುದು ಮತ್ತು ಗಮನ ಸೆಳೆಯಬಹುದು.
- ಪಾಠದ ಉದ್ದೇಶ, ಅಗತ್ಯ ಮತ್ತು ಪ್ರಯೋಜನಗಳನ್ನು ಅವರಿಗೆ ಚೆನ್ನಾಗಿ ಮನವರಿಕೆ ಮಾಡಿಸಿ ಕೊಡಲು ಸುಲಭವಾಗುತ್ತದೆ.

(ಆ) ನಡುವಿನ ಪ್ರಶ್ನೆಗಳು: ಪಾಠದ ನಡು ನಡುವೆ ಹಲವು ತರದ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಅವುಗಳ ಉದ್ದೇಶ ಈ ರೀತಿ ಇದೆ-

- ಮಕ್ಕಳು ಪಾಠವನ್ನು ಸರಿಯಾಗಿ ಅರ್ಥೈಸುತ್ತಿದ್ದಾರೋ ಎಂದು ಅಧ್ಯಾಪಕನು ತಿಳಿಯಲು.
- ಪಾಠದಲ್ಲಿ ಮಕ್ಕಳ ಆಸಕ್ತಿ ಮತ್ತು ಗಮನವನ್ನು ನಿರಂತರವಿರಿಸಲು.
- ಪಾಠ ಮುಂದುವರಿಸುವಲ್ಲಿ ವಿದ್ಯಾರ್ಥಿಗಳೂ ಪಾತ್ರ ವಹಿಸಲು.
- ಪಾಠದಲ್ಲಿರುವ ಕಷ್ಟದ ವಿಷಯಗಳನ್ನು ಸ್ಪಷ್ಟಗೊಳಿಸಲು ಮತ್ತು ಮನವರಿಕೆ ಮಾಡಿಸಲು.
- ಚಿಂತನೆಗೆ ಅವಕಾಶವೊದಗಿಸಲು ಮತ್ತು ಮಾಹಿತಿಯ ನಿರಂತತೆಗೆ.
- ಹೊಸ ವಿಷಯಕ್ಕೆ ಹಳೆಯ ವಿಷಯದೊಂದಿಗೆ ಸಂಬಂಧ ಕಲ್ಪಿಸಲು.

- ಮಕ್ಕಳ ದೈನಂದಿನ ಘಟನೆ, ಅನುಭವ, ವಿಶ್ಲೇಷಣೆ ಇತ್ಯಾದಿಗಳೊಡನೆ ಹೊಸ ವಿಷಯವನ್ನು ಹೋಲಿಸಲು.
- ಕೆಲವು ವಿಶ್ಲೇಷಣೆಗೆ ಅಥವಾ ವಿಷಯದ ಮೇಲೆ ಗಮನ ಕೇಂದ್ರೀಕರಿಸಲು ಸಹಕಾರಿ.
- ಪಾಠದಲ್ಲಿ ಗಮನ ಹರಿಸದ ಮಕ್ಕಳ ಗಮನ ಸೆಳೆಯಲು ಮತ್ತು ಮಂದಗತಿಯ ಮಕ್ಕಳನ್ನು ಪಾಠದ ವೇಗದ ಜತೆಗೆ ಸೇರಿಸಲು.

(ಇ) **ಕೊನೆಯ ಪ್ರಶ್ನೆಗಳು:** ಪಾಠದ ಕೊನೆಯಲ್ಲಿ ಈ ಕೆಳಗಿನ ಉದ್ದೇಶಕ್ಕಾಗಿ ಪ್ರಶ್ನೆಗಳನ್ನು ಕೇಳಲಾಗುತ್ತದೆ-

- ಇಡೀ ಪಾಠದ ಪುನರಾವರ್ತನೆಗಾಗಿ.
- ಪಾಠದಲ್ಲಿ ತಿಳಿಸಲಾದ ಅಥವಾ ಕಲಿಸಲಾದ ವಿಷಯಗಳನ್ನು ಬಳಸಲು ಮಕ್ಕಳಿಗೆ ಅವಕಾಶ ನೀಡಲು.
- ಮಕ್ಕಳನ್ನು ಮನೆಗೆಲಸ ಅಥವಾ ಯಾವುದಾದರೂ ಪ್ರಾಯೋಗಿಕ ಕೆಲಸಕ್ಕೆ ಪ್ರೇರೇಪಿಸಲು ಅಥವಾ ಕೆಲವು ಸಮಸ್ಯೆಗಳನ್ನು ನೀಡಿ ಪರಿಹರಿಸುವಂತೆ ಮಾಡಲು.

ಪ್ರಶ್ನೆಗಳು ಹೇಗಿರಬೇಕು?

ಕೆಲವು ಪ್ರಶ್ನೆಗಳಲ್ಲಿ ಈ ಕೆಳಗಿನ ವಿಶೇಷತೆಗಳಿದ್ದರೆ ಮಾತ್ರವೇ ಮೇಲಿನ ಉದ್ದೇಶಗಳು ಈಡೇರಲು ಸಾಧ್ಯ...

- ಪ್ರಶ್ನೆಗಳ ಭಾಷೆ ಸ್ಪಷ್ಟ, ಸರಳ, ಅರ್ಥಪೂರ್ಣವಾಗಿರಬೇಕು ಮತ್ತು ಹೆಚ್ಚುವರಿ ಪದಗಳಿಂದ ಮುಕ್ತವಾಗಿರಬೇಕು. ಏಕೆಂದರೆ ನೀವು ಏನನ್ನು ಕೇಳಬಯಸುತ್ತೀರಿ ಎಂಬುದು ಮಕ್ಕಳಿಗೆ ಸರಿಯಾಗಿ ಮನವರಿಕೆಯಾಗಬೇಕು. ಮಾತಿನಲ್ಲಿನ ಸರಳತೆಯು ಅವರ ಗಮನವನ್ನು ಸೆಳೆಯಲು ಮತ್ತು ಆಲೋಚಿಸಲು ಪ್ರೇರೇಪಿಸಬೇಕು. ಕೆಲವರು ಪ್ರಶ್ನೆಗಳಲ್ಲಿ ಅನಗತ್ಯವಾದ ಪದಗಳನ್ನು ಬಳಸುತ್ತಾರೆ. ಉದಾಹರಣೆಗೆ ''ಪ್ರವಾದಿವರ್ಯರು(ಸ) ಎಷ್ಟನೇ ಇಸವಿಯಲ್ಲಿ ಜನಿಸಿದರು?'' ಎಂದು ಕೇಳ ಬೇಕಾದ ಪ್ರಶ್ನೆಯನ್ನು, ''ಪ್ರವಾದಿವರ್ಯರು(ಸ) ಎಷ್ಟನೇ ಇಸವಿಯಲ್ಲಿ ಜನ್ಮ ತಾಳಿದರು ಎಂಬುದನ್ನು ನೀವು ಹೇಳಬಲ್ಲಿರಾ ಅಥವಾ ನಿಮ್ಮಲ್ಲಿ ಯಾರಿಗೆ ತಿಳಿದಿದೆ?'' ಇಂತಹ ಅತಿರಿಕ್ತ ಪದಗಳಿಂದ ಪ್ರಶ್ನೆಗಳು ಮುಕ್ತವಾಗಿರಬೇಕು.
- ಮೌಖಿಕ ಪ್ರಶ್ನೆಯು ಸಣ್ಣದಾಗಿಯೂ ಅದರ ತಾತ್ಪರ್ಯವು ಹ್ರಸ್ವವಾಗಿಯೂ ಇರಬೇಕು. ಅಂದರೆ ಮಕ್ಕಳ ಮನಸ್ಸಿನಲ್ಲಿ ಪ್ರಶ್ನೆಯು ಸಂಪೂರ್ಣವಾಗಿ ಭದ್ರವಾಗಿರಬೇಕು. ಉದಾ: ''ಪ್ರವಾದಿವರ್ಯರು(ಸ) ಯಾಕಾಗಿ ವಲಸೆ ಹೋದರು?'' ಎಂಬುದು ಪ್ರಶ್ನೆಯಾಗಬೇಕು. ಅದು ಬಿಟ್ಟು ಆ ಪ್ರಶ್ನೆಯನ್ನು ಎಳೆದು ಹೀಗೆ ಕೇಳಿದರೆ ಹೇಗಾದೀತು? ''ಪ್ರವಾದಿವರ್ಯರು(ಸ) ಅವರ ಹುಟ್ಟೂರು ಮತ್ತು ಅರಬರ

ಕೇಂದ್ರ ಸ್ಥಾನವಾಗಿರುವ ಮಕ್ಕಾವನ್ನು ತೊರೆದು, ಅವರಿಗೆ ತೀರಾ ಅಪರಿಚಿತವೂ ಮಕ್ಕಾದಿಂದ ದೂರವೂ ಆಗಿರುವ ಮದೀನಕ್ಕೆ ಯಾಕಾಗಿ ವಲಸೆ ಹೋದರು?'' ಈ ಪ್ರಶ್ನೆ ಮಕ್ಕಳ ಪಾಲಿಗೆ ಬಹಳ ಜಟಿಲವಾದೀತು.

- ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಗಮನದಲ್ಲಿರಿಸಿಯೇ ಪ್ರಶ್ನೆಗಳನ್ನು ರಚಿಸಬೇಕು. ವಿದ್ಯಾರ್ಥಿಗಳು ಅದರ ಮೇಲೆ ಗಮನ ಹರಿಸುವ ಅಥವಾ ಚಿಂತಿಸುವ ಅಗತ್ಯವೇ ಬೀಳದಷ್ಟು ಸುಲಭವೂ ಆಗಿರಬಾರದು ಮತ್ತು ಉತ್ತರ ನೀಡಲು ಧೈರ್ಯ ತೋರದಷ್ಟು ಕ್ಲಿಷ್ಟಕರವೂ ಆಗಿರಬಾರದು.
- ಕೇಳಲಾಗುವ ಪ್ರಶ್ನೆಗಳು ಪರಸ್ಪರ ಸಂಬಂಧಿಸಿರಬೇಕು ಮತ್ತು ಒಂದು ಇನ್ನೊಂದರ ಅನಿವಾರ್ಯ ಅಂಗದಂತಿರಬೇಕು. ಅವೆಲ್ಲವೂ ಮೂಲ ಪಾಠದೊಂದಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಸಂಬಂಧಿಸಿರಬೇಕು. ಈ ಪ್ರಕಾರ ಆಲೋಚನೆಗಳಲ್ಲಿ ನಿರಂತರತೆ ಇರುತ್ತದೆ ಮತ್ತು ಅನಗತ್ಯ ವಿಷಯಗಳಿಗೆ ಸಮಯ ಪೋಲಾಗುವುದಿಲ್ಲ.
- ಎರಡು ಅಥವಾ ಹೆಚ್ಚು ಪ್ರಶ್ನೆಗಳನ್ನು ಒಟ್ಟಿಗೇ ಕೇಳಬಾರದು. ಉದಾ: ''ನಮಾಝಿನ ಸಮಯ, ರಕಅತ್‌ಗಳು ಮತ್ತು ಪ್ರಯೋಜನಗಳನ್ನು ತಿಳಿಸಿರಿ.'' ''ಮಹ್ಮೂದ್ ಗಝ್ನವಿಯು ಎಲ್ಲೆಲ್ಲಿ ಮತ್ತು ಯಾಕೆ ಆಕ್ರಮಣ ನಡೆಸಿದ?''
- ಪ್ರಶ್ನೆಗಳು ಸ್ಪಷ್ಟ ಮತ್ತು ನಿಶ್ಚಿತವಾಗಿರಬೇಕು. ಏಕೆಂದರೆ ಮಕ್ಕಳ ಮನಸ್ಸು ನೇರವಾಗಿ ನೈಜ ಉತ್ತರದೆಡೆಗೆ ಹೊರಳುವಂತಾಗಬೇಕು. ಒಂದಕ್ಕಿಂತ ಹೆಚ್ಚು ಉತ್ತರ ಬರಬಹುದಾದಂತಹ ಪ್ರಶ್ನೆಗಳನ್ನು ಕೇಳಬಾರದು. ಉದಾ: ನಿಮ್ಮ ಎದುರು ಏನಿದೆ? ಅಥವಾ ನಕ್ಷೆಯಲ್ಲಿ ಏನು ಕಾಣುತ್ತದೆ? ಇವೆರಡೂ ಸ್ಥಿತಿಯಲ್ಲಿ ಒಂದಕ್ಕಿಂತ ಹೆಚ್ಚು ಉತ್ತರ ಬರಲು ಸಾಧ್ಯವಿದೆ.
- ಪ್ರಶ್ನೆಗಳು ಕೇವಲ ಬಾಯಿಪಾಠ ಅಥವಾ ಸ್ಮರಣಶಕ್ತಿಗೆ ಸಂಬಂಧಿಸಿರಬಾರದು. ಬದಲಾಗಿ ಚಿಂತನಾರ್ಹವೂ ಆಗಿರಬೇಕು. ಅದು ಮಕ್ಕಳನ್ನು ಚಿಂತಿಸಲು ಮತ್ತು ಆಲೋಚಿಸಲು ಪ್ರೇರೇಪಿಸಬೇಕು.
- ಸಣ್ಣ ತರಗತಿಗಳಲ್ಲಿ ಪ್ರಶ್ನೆಗಳು ತೀರಾ ಸರಳ ಮತ್ತು ಮಕ್ಕಳಿಗೆ ಹೆಚ್ಚು ಮಾತನಾಡಲು ಪ್ರೇರೇಪಿಸುವಂತಿರಬೇಕು. ಆದರೆ ಉನ್ನತ ತರಗತಿಗಳಲ್ಲಿ ಪ್ರಶ್ನೆಗಳು ಕ್ಲಿಷ್ಟಕರವಾಗಬೇಕು. ಅದು ಮಕ್ಕಳನ್ನು ಚಿಂತಿಸಲು ಮತ್ತು ಆಧಾರ ಪ್ರಮಾಣಗಳ ಮೂಲಕ ಉತ್ತರಿಸಲು ಪ್ರೇರೇಪಿಸುವಂತಿರಬೇಕು.
- ಸರಿಯಾದ ಸೂಚನೆ ನೀಡದೆ ಮೋಸಗೊಳಿಸುವಂತಹ ಪ್ರಶ್ನೆಗಳನ್ನು ಕೇಳಬಾರದು. ಉದಾ: ಒಬ್ಬ ಹುಡುಗ ಒಂದು ಗಂಟೆಯಲ್ಲಿ ಮೂರು ಮೈಲಿ ನಡೆಯುತ್ತಾನೆ. ಹಾಗಾದರೆ ಐದು ಮಂದಿ ಹುಡುಗರು ಒಂದು ಗಂಟೆಯಲ್ಲಿ ಎಷ್ಟು ಮೈಲಿ ನಡೆಯುತ್ತಾರೆ?

- 'ಹೌದು', 'ಇಲ್ಲ' ಅಥವಾ ಒಂದೇ ಪದದ ಉತ್ತರ ಬರುವಂತಹ ಪ್ರಶ್ನೆಗಳನ್ನು ಕೇಳಬಾರದು. ಅಂತಹ ಪ್ರಶ್ನೆಗಳನ್ನು ಕೇಳಲೇ ಬೇಕೆಂದಿದ್ದರೆ, ಯಾಕೆ ಅಥವಾ ಹೇಗೆ ಎಂಬಿತ್ಯಾದಿ ಉಪಪ್ರಶ್ನೆಯನ್ನು ಜತೆಗಿರಿಸಬೇಕು. ಏಕೆಂದರೆ ವಿದ್ಯಾರ್ಥಿಯು ಉತ್ತರ ಹೇಳಲು ಕೊಂಚ ಪರಿಶ್ರಮ ಪಡುವಂತಾಗಬೇಕು ಮತ್ತು ಅಧ್ಯಾಪಕನಿಗೂ ತನ್ನ ವಿದ್ಯಾರ್ಥಿ ಚಿಂತನೆ ನಡೆಸಿಯೇ 'ಹೌದು' ಅಥವಾ 'ಇಲ್ಲ' ಎಂದಿದ್ದಾನೆಂದು ಸಮಾಧಾನ ಇರುವುದು.
- ಪ್ರಶ್ನೆಯು ಉತ್ತರವನ್ನು ಅಡಕಗೊಂಡಿರುವಂತೆ ಇರಬಾರದು. ಅಂದರೆ ಸ್ವಯಂ ಉತ್ತರದೆಡೆಗೆ ಸೂಚಿಸುವಂತೆ ಪ್ರಶ್ನೆ ಇರಬಾರದು. ಉದಾ: ''ಹ. ಈಸಾರವರು(ಅ) ಪ್ರವಾದಿಯಾಗಿರಲಿಲ್ಲವೇ?'' ''ಘೇಂಡಾಮೃಗ ಸಸ್ಯಹಾರಿ ಪ್ರಾಣಿಯೋ ಮಾಂಸಾಹಾರಿಯೋ?'' ಇತ್ಯಾದಿ.
- ಒಂದು ವಿಷಯ ತಿಳಿಸಿದ ತಕ್ಷಣವೇ ಪ್ರಶ್ನೆ ಕೇಳಬಾರದು. ಉದಾ: ''ಪ್ರವಾದಿವರ್ಯರು(ಸ) ಕ್ರಿ.ಶ. 571ರಲ್ಲಿ ಜನಿಸಿದರು. ಪ್ರವಾದಿಯವರು(ಸ) ಯಾವ ಇಸವಿಯಲ್ಲಿ ಜನಿಸಿದರು?'' ಆದರೆ ಯಾರಾದರೂ ಪಾಠದಲ್ಲಿ ಗಮನ ಕೊಡದಿದ್ದರೆ ಅಥವಾ ಯಾವುದೋ ಚಿಂತೆಯಲ್ಲಿ ಬಿದ್ದಿದ್ದರೆ, ಆತನೊಡನೆ ಈ ರೀತಿ ಪ್ರಶ್ನಿಸಬಹುದಾಗಿದೆ. ಅಂತೆಯೇ ''ಇಂತಿಂತಹ ಹುಡುಗ ಯಾವ ಉತ್ತರ ನೀಡಿದ?'' ಎಂಬಂತಹ ಪ್ರಶ್ನೆಗಳನ್ನು ಕೇಳಬಹುದು.

ಪ್ರಶ್ನೆ ಕೇಳುವ ವಿಧಾನ

ಸೂಕ್ತ ಪ್ರಶ್ನೆಗಳನ್ನು ತಯಾರಿಸುವುದು ಒಂದು ಕಲೆಯಾಗಿದೆ. ಅದರಲ್ಲಿ ಸಾಕಷ್ಟು ಜಾಗರೂಕತೆ, ಚಿಂತನೆ, ಪರಿಶ್ರಮ ಹಾಗೂ ಪರಿಣತಿಯ ಅಗತ್ಯವಿದೆ. ಅದೇ ರೀತಿ, ಪ್ರಶ್ನೆ ಕೇಳುವುದರಲ್ಲಿಯೂ ಕಲಾ ನೈಪುಣ್ಯತೆಯ ಅಗತ್ಯವಿದೆ. ಪ್ರಶ್ನೆಗಳನ್ನು ಕೇಳುವಾಗ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಬೇಕು.

- ಇಡೀ ತರಗತಿಯನ್ನು ಅಭಿಸಂಬೋಧಿಸಿ ಪ್ರಶ್ನೆ ಕೇಳಬೇಕು. ಯಾರೆಡೆಗೂ ಸಂಜ್ಞೆಮಾಡಿ ಅಥವಾ ಯಾರದೇ ಹೆಸರೆತ್ತಿ ಪ್ರಶ್ನೆ ಕೇಳಬಾರದು. ಆದರೆ ಉತ್ತರವನ್ನು ಒಂದು ಮಗುವಿನಿಂದ ಪಡೆದರೆ ಸಾಕು.
- ಪ್ರಶ್ನೆ ಕೇಳಿದ ಬಳಿಕ ಉತ್ತರವನ್ನು ನೆನಪಿಸಲು ಅವಕಾಶ ಒದಗಿಸಬೇಕು. ತಕ್ಷಣವೇ ಉತ್ತರ ಕೇಳಬಾರದು.
- ನಿರ್ದಿಷ್ಟ ಮಕ್ಕಳೊಂದಿಗೆ ಮಾತ್ರವೇ ಪ್ರಶ್ನೆ ಕೇಳಬಾರದು ಬದಲಾಗಿ ಸರದಿ ಪ್ರಕಾರ ಎಲ್ಲರೊಡನೆಯೂ ಪ್ರಶ್ನೆ ಕೇಳಬೇಕು. ಇದರಲ್ಲಿ ಒಂದು ನಿರ್ದಿಷ್ಟವಾದ ಅನುಕ್ರಮವನ್ನು ಇರಿಸಬಾರದು. ಅನ್ಯಥಾ ಈಗಾಗಲೇ ಉತ್ತರಿಸಿದ ಅಥವಾ ಇನ್ನು ಉತ್ತರಿಸಲಿಕ್ಕಿರುವ ಮಕ್ಕಳು ಪ್ರಶ್ನೆಯ ಬಗ್ಗೆ ಗಮನ ಹರಿಸಲಾರರು.

- ಪ್ರಶ್ನೆಗಳನ್ನು ಸ್ಪಷ್ಟ ಶಬ್ದಗಳಲ್ಲಿ ಕೇಳಬೇಕು. ಅದು ಇಡೀ ತರಗತಿಗೆ ಕೇಳಿಸುವಂತಿರಬೇಕು ಮತ್ತು ಪ್ರಶ್ನೆಯ ಮೂಲ ಉದ್ದೇಶ ಸ್ಪಷ್ಟವಾಗುವಂತಹ ಪದಗಳ ಉಚ್ಚಾರದ ಬಗ್ಗೆ ವಿಶೇಷ ಒತ್ತು ನೀಡಬೇಕು.
- ಪ್ರಶ್ನೆಗಳನ್ನು ಎಂದಿಗೂ ಪುನರಾವರ್ತಿಸಬಾರದು. ವಿದ್ಯಾರ್ಥಿಗಳಿಗೆ ಕೇಳಿಸದೆ ಇದ್ದರೆ ಅಥವಾ ಪ್ರಶ್ನೆಯು ಅರ್ಥವಾಗದೆ ಇದ್ದರೆ ಮಾತ್ರ ಪುನರುಚ್ಚರಿಸಬೇಕು ಅಥವಾ ಯಾವುದಾದರೂ ಸುಲಭದ ಪ್ರಶ್ನೆಯನ್ನು ಕೇಳಿ, ಮುಖ್ಯ ಪ್ರಶ್ನೆಯ ಕಡೆಗೆ ಮಾರ್ಗದರ್ಶನವೀಯಬೇಕು.
- ಅವಕಾಶವಿದ್ದರೆ ಮತ್ತು ಅಗತ್ಯ ಕಂಡರೆ ಕಪ್ಪುಹಲಗೆಯಲ್ಲಿ ಪ್ರಶ್ನೆಗಳನ್ನು ಬರೆಯಬೇಕು. ವಿಶೇಷತಃ ಪರಿಶೀಲನೆ ಅಥವಾ ಮನೆಗೆಲಸಕ್ಕಾಗಿ ಪ್ರಶ್ನೆಗಳನ್ನು ಕಪ್ಪುಹಲಗೆಯಲ್ಲಿ ಬರೆಯುವುದು ಉತ್ತಮ.
- ಅಲಕ್ಷ್ಯದಿಂದಿರುವ ವಿದ್ಯಾರ್ಥಿಗಳೊಡನೆ ಅನಿರೀಕ್ಷಿತವಾಗಿ ಪ್ರಶ್ನೆಗಳನ್ನು ಕೇಳಬೇಕು.
- ಪ್ರಶ್ನೆಗಳನ್ನು ಕೇಳುವ ರೀತಿಯು ನಮ್ರತೆ ಮತ್ತು ಸಹಾನುಭೂತಿಯಿಂದ ಕೂಡಿರಬೇಕು. ಈ ಮೂಲಕ ಮಕ್ಕಳು ಆತ್ಮವಿಶ್ವಾಸದಿಂದ ಉತ್ತರ ನೀಡಲು ಪ್ರೇರಿತರಾಗಬೇಕು. ಭಯ ಅಥವಾ ಅಳುಕು ಉಂಟಾಗಬಾರದು.
- ಉತ್ತರಕ್ಕಾಗಿ ಹೆಚ್ಚು ಸಮಯವನ್ನು ವ್ಯಯಿಸಬಾರದು.
- ಒಂದು ಮಗು ಸರಿಯಾದ ಉತ್ತರ ನೀಡಿದರೂ ಇತರ ಮಕ್ಕಳಿಂದಲೂ ಉತ್ತರ ಕೇಳಬೇಕು.
- ಕೆಲವೊಮ್ಮೆ ಮಕ್ಕಳಿಗೂ ಪ್ರಶ್ನೆ ಕೇಳಲು ಅವಕಾಶ ನೀಡಬೇಕು ಮತ್ತು ಪ್ರಶ್ನೆ ಕೇಳಲು ಅವರನ್ನು ಪ್ರೇರೇಪಿಸಬೇಕು. ಪಾಠ ಮಾಡುವಾಗ ಮಕ್ಕಳಿಗೆ ಏನಾದರೂ ಅರ್ಥವಾಗದಿದ್ದರೆ, ಅಳುಕಿಲ್ಲದೆ ಮಕ್ಕಳು ಪ್ರಶ್ನಿಸುವಂತಹ ವಾತಾವರಣವನ್ನು ತರಗತಿಯಲ್ಲಿ ಉಂಟುಮಾಡಬೇಕು. ಇದರಿಂದ ಮಕ್ಕಳಿಗೆ ತಿಳುವಳಿಕೆ, ಚಿಂತನೆ, ಪಾಠದಲ್ಲಿ ಸಂಪೂರ್ಣ ಆಸಕ್ತಿಯನ್ನು ಹೊಂದಲು ಸಹಾಯಕವಾಗುತ್ತದೆ. ಆದೇ ವೇಳೆ, ಅನಗತ್ಯ ಪ್ರಶ್ನೆಗಳನ್ನು ಕಡೆಗಣಿಸಬೇಕು. ಪಠ್ಯಕ್ಕೆ ಸಂಬಂಧ ಪಡದ ಪ್ರಶ್ನೆ ಕೇಳಿದರೆ, ಅದು ಅಗತ್ಯವೆಂದು ಕಂಡರೆ ತರಗತಿಯ ನಂತರ ಪ್ರತ್ಯೇಕವಾಗಿ ಉತ್ತರಿಸಬಹುದಾಗಿದೆ.
- ಪ್ರಶ್ನೆಗಳನ್ನು ಸಮಾಧಾನ ಚಿತ್ತದಿಂದ ಕೇಳಬೇಕು. ಗಡಿಬಿಡಿ ಅಥವಾ ಪ್ರಶ್ನೆಗಳ ಸರಮಾಲೆಯನ್ನೇ ಸುರಿಸುವುದು ಸರಿಯಲ್ಲ, ಆದರಿಂದ ಮಕ್ಕಳು ಭಯಪಡುತ್ತಾರೆ, ಹೌಹಾರುತ್ತಾರೆ.

ವಿದ್ಯಾರ್ಥಿಗಳ ಉತ್ತರ

ಮಕ್ಕಳ ಉತ್ತರಕ್ಕೆ ಸಂಬಂಧಿಸಿ, ಸರಿಯಾದ ವಿಧಾನವನ್ನು ಅನುಸರಿಸಿದರೆ, ಪ್ರಶ್ನೆಗಳಿಂದ ಸಂಪೂರ್ಣ ಪ್ರಯೋಜನಗಳನ್ನು ಪಡೆಯಬಹುದಾಗಿದೆ. ಈ ವಿಷಯದಲ್ಲಿ ಈ ಕೆಳಗಿನ ವಿಷಯಗಳನ್ನು ಪರಿಗಣಿಸಬೇಕು.

- ಮಕ್ಕಳ ಉತ್ತರಗಳನ್ನು ಮುಗುಳ್ನಗುವಿನೊಂದಿಗೆ ಆಲಿಸಬೇಕು. ಅವರಿಗೆ ಉತ್ತರ ನೀಡಲು ಪ್ರೋತ್ಸಾಹ ನೀಡಬೇಕು. ಸರಿಯಾದ ಉತ್ತರ ನೀಡಿದರೆ ಹೊಗಳಬೇಕು. ತಪ್ಪು ಅಥವಾ ಮೂರ್ಖತನದ ಉತ್ತರಕ್ಕೆ ಮೂದಲಿಸಬಾರದು. ಅರ್ಥವಿಲ್ಲದ ಮತ್ತು ಸಂಬಂಧವಿಲ್ಲದ ಉತ್ತರಗಳನ್ನು ಕಡೆಗಣಿಸಬೇಕು.
- ವಿದ್ಯಾರ್ಥಿಗಳ ಕೆಲವು 'ಸ್ವಾರಸ್ಯಕರ' ತಪ್ಪು ಉತ್ತರಗಳಿಂದ ತರಗತಿಯಲ್ಲಿ ನಗು ಮತ್ತು ಸಂತೋಷದ ಅಲೆಯನ್ನು ಎಬ್ಬಿಸಬಹುದಾಗಿದೆ. ಆದರೆ ಹಾಗೆ ಮಾಡುವಾಗ, ಉತ್ತರ ನೀಡಿದವರ ಭಾವನೆಗಳನ್ನು ಪರಿಗಣಿಸಬೇಕು.
- ಕೇವಲ ಈ ಉತ್ತರಗಳನ್ನು ಸರಿಯೆಂದು ಪರಿಗಣಿಸಬೇಕು:

  (i) ಭಾಷೆ ಮತ್ತು ಉಚ್ಚಾರಕ್ಕೆ ಅನುಸಾರ ಸರಿಯಿರಬೇಕು.

  (ii) ಪ್ರಶ್ನೆಗೆ ಸಂಬಂಧಿಸಿರಬೇಕು.

  (iii) ಕೇಳಿದ್ದಕ್ಕಿಂತ ಕಡಿಮೆಯೂ ಇರಬಾರದು, ಅಧಿಕವೂ ಇರಬಾರದು.

  (iv) ಇಡೀ ವಾಕ್ಯದಲ್ಲಿ ಉತ್ತರಿಸಿರಬೇಕು. ಆದರೆ ಅದಕ್ಕಾಗಿ ಯಾವಾಗಲೂ ಒತ್ತಾಯಿಸಬಾರದು. ಏಕೆಂದರೆ ಕೆಲವೊಮ್ಮೆ ಸ್ವಾಭಾವಿಕ ಉತ್ತರವು ಅಪೂರ್ಣ ವಾಕ್ಯದಿಂದಲೂ ದೊರೆಯುತ್ತದೆ.

  (v) ಇಡೀ ತರಗತಿ ಕೇಳಿಸುವಂತೆ, ಉಚ್ಚ ಸ್ವರದಲ್ಲಿ ನೀಡಿರಬೇಕು.

  ಈ ಮಗ್ಗುಲುಗಳಲ್ಲಿ ಕೊರತೆಯೇನಾದರೂ ಇದ್ದರೆ, ಅದನ್ನು ಸ್ವೀಕರಿಸುವುದಕ್ಕೆ ಮುಂಚೆ ಅದರಲ್ಲಿ ಸುಧಾರಣೆಯನ್ನು ತಂದಿರಬೇಕು.
- ಸಾಧ್ಯವಾದಷ್ಟರ ಮಟ್ಟಿಗೆ ಮಕ್ಕಳ ಉತ್ತರಗಳನ್ನೇ ಸೂಕ್ತ ಬದಲಾವಣೆಯ ಬಳಿಕ ಅಂಗೀಕರಿಸಬೇಕು. ಒಂದು ವೇಳೆ ಇಡೀ ಉತ್ತರ ಸರಿಯಿಲ್ಲದಿದ್ದರೆ, ಸರಿಯಿರುವಷ್ಟು ಭಾಗವನ್ನಷ್ಟೇ ಅಂಗೀಕರಿಸಬೇಕು. ಉಳಿದ ಭಾಗವನ್ನು ಇನ್ನಷ್ಟು ಪ್ರಶ್ನೆಗಳನ್ನು ಕೇಳುವ ಮೂಲಕ ಅಥವಾ ಅದಕ್ಕೆ ಸಮಯಾವಕಾಶ ಇಲ್ಲದಿದ್ದರೆ ಸ್ವತಃ ಹೇಳಿಕೊಟ್ಟು ಪೂರ್ಣಗೊಳಿಸಬೇಕು. ಇದರಿಂದ ಮಕ್ಕಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ.
- ಸರಿಯುತ್ತರಗಳನ್ನು ಇತರ ವಿದ್ಯಾರ್ಥಿಗಳ ಮೂಲಕ ಪುನರಾವರ್ತಿಸಬೇಕು. ಕೆಲವೊಮ್ಮೆ ವಿದ್ಯಾರ್ಥಿಗಳ ಉತ್ತಮ ಉತ್ತರಗಳನ್ನು ತರಗತಿಯ ಮುಂದೆ ಮಾದರಿಯಾಗಿ ತೋರಿಸಬೇಕು.
- ಸರಿಯುತ್ತರಗಳನ್ನು ತಕ್ಷಣ ಸ್ವೀಕರಿಸುವ ಬದಲು, ಇನ್ನೂ ಕೆಲವು ವಿದ್ಯಾರ್ಥಿಗಳನ್ನು ಪ್ರಶ್ನಿಸಿದ ಬಳಿಕ ಸ್ವೀಕರಿಸಬೇಕು. ಇದರಿಂದ ಇತರ ಮಕ್ಕಳ ಬುದ್ಧಿಮತ್ತೆಯ ಬಗ್ಗೆಯೂ ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ.

- ಉತ್ತರವನ್ನು ನೆನಪಿಸುತ್ತಿರುವಾಗ ಮಾತನಾಡಬಾರದು. ಅಂತೆಯೇ ಉತ್ತರಿಸುತ್ತಿರುವಾಗ ಮಧ್ಯದಲ್ಲಿ ತಡೆಯಬಾರದು. ಸಹಾಯದ ಅಗತ್ಯವಿದ್ದರೆ ಇತರ ಮಕ್ಕಳಿಂದ ಕೊಡಿಸಬೇಕು.
- ಒಂದು ಮಗು ತಪ್ಪು ಉತ್ತರ ನೀಡಿದರೆ ಅಥವಾ ಉತ್ತರಿಸಲಾಗದಿದ್ದರೆ, ತಕ್ಷಣ ಸರಿಯುತ್ತರ ಹೇಳಿಕೊಡಬಾರದು. ಬದಲಿಗೆ ಇನ್ನಷ್ಟು ಪ್ರಶ್ನೆಗಳನ್ನು ಕೇಳುವ ಮೂಲಕ ಉತ್ತರದೆಡೆಗೆ ಮಾರ್ಗದರ್ಶನ ನೀಡಬೇಕು ಅಥವಾ ಇತರ ಮಕ್ಕಳಿಂದ ಸರಿಯುತ್ತರ ದೊರೆತ ಬಳಿಕ ಅದನ್ನು ಆ ಮಗುವಿನಿಂದ ಪುನರಾವರ್ತಿಸಬೇಕು.
- ವಿದ್ಯಾರ್ಥಿಗಳ ಎಲ್ಲ ತಪ್ಪು ಉತ್ತರಗಳು ಕಡೆಗಣನಾರ್ಹವಾಗಿರುವುದಿಲ್ಲ. ಆದರೆ ಮಗು ಸ್ವಲ್ಪವೂ ಅರ್ಥ ಮಾಡಿಕೊಂಡಿಲ್ಲವೆಂದು ತೋರುವಂತಹ ಉತ್ತರಗಳನ್ನು ಖಂಡಿತವಾಗಿಯೂ ಸರಿಪಡಿಸಬೇಕಾದ ಅಗತ್ಯವಿದೆ. ಜತೆಗೆ ಉತ್ತರ ಯಾಕೆ ತಪ್ಪು ಎಂಬುದನ್ನು ಸ್ಪಷ್ಟ ಪಡಿಸಬೇಕು.
- ನಿರ್ಲಕ್ಷ್ಯ ಅಥವಾ ಉದ್ಧಟತನದಿಂದ ನೀಡಿದ ಉತ್ತರಕ್ಕೆ ಕೆಲವೊಮ್ಮೆ ಸಹಾನುಭೂತಿಯ ಬದಲು ಶಿಕ್ಷೆಯೇ ಪ್ರಯೋಜನಕಾರಿಯೆನಿಸುವುದು.
- ಸಾಮಾನ್ಯವಾಗಿ ಸಾಮೂಹಿಕ ಉತ್ತರಗಳನ್ನು ಕೇಳಬಾರದು ಮತ್ತು ಅದನ್ನು ಅಂಗೀಕರಿಸಲೂ ಬಾರದು. ಆದರೆ ಪುನರಾವರ್ತನೆ ಅಥವಾ ಅಭ್ಯಾಸದ ರೂಪದಲ್ಲಿ ಸಮಯ ಉಳಿಸಲು ಕೆಲವೊಮ್ಮೆ ಹಾಗೆ ಮಾಡಬಹುದಾಗಿದೆ.
- ಯಾರೊಂದಿಗೆ ಪ್ರಶ್ನಿಸಲಾಗುತ್ತದೋ ಅವನೇ ಉತ್ತರಿಸುವ ಅಭ್ಯಾಸವನ್ನು ಮಕ್ಕಳಿಗೆ ಮಾಡಿಸಬೇಕು. ಇತರರು ಹೇಳಬಾರದು. ಏಕೆಂದರೆ ಹಲವೊಮ್ಮೆ ಬುದ್ಧಿವಂತ ಮಕ್ಕಳು ನೀಡುವ ಉತ್ತರದಿಂದಾಗಿ, ಎಲ್ಲರಿಗೂ ತಿಳಿದಿದೆ ಎಂಬ ಭ್ರಮೆ ಉಂಟಾಗುತ್ತದೆ. ಆದರೆ ಹೆಚ್ಚಿನ ಮಕ್ಕಳು ಅರ್ಥಮಾಡಿಯೇ ಇಲ್ಲವೆಂದು ಆ ಮೇಲೆ ತಿಳಿದು ಬರುತ್ತದೆ.
- ಒಂದು ವೇಳೆ ಇಡೀ ತರಗತಿ ಅಥವಾ ತರಗತಿಯ ಹೆಚ್ಚಿನ ಮಕ್ಕಳು ತಪ್ಪು ಉತ್ತರ ನೀಡಿದರೆ, ಅದರ ಕಾರಣವನ್ನು ಪತ್ತೆ ಹಚ್ಚಿ, ಅದನ್ನು ದೂರೀಕರಿಸಬೇಕು. ಕಾರಣಗಳು ಸಾಮಾನ್ಯವಾಗಿ ಹೀಗಿರುತ್ತವೆ:

  (i) ಪ್ರಶ್ನೆಗಳು ವಿದ್ಯಾರ್ಥಿಗಳ ಬುದ್ಧಿಗೆ ನಿಲುಕುತ್ತಿಲ್ಲ.

  (ii) ಬೋಧನಾ ವಿಧಾನದಲ್ಲಿಯೇ ಕೊರತೆಗಳಿದ್ದು, ಮಕ್ಕಳಿಗೆ ಪಾಠವು ಅರ್ಥವಾಗಿರುವುದಿಲ್ಲ.

  (iii) ತರಗತಿಯಲ್ಲಿ ಶಿಸ್ತು ಪಾಲನೆಯಾಗುತ್ತಿಲ್ಲ.

  (iv) ಮಕ್ಕಳು ದಣಿದಿರುವರು.

  (v) ಪಾಠವು ಶುಷ್ಕ, ಸತ್ವಹೀನ ಮತ್ತು ಅನಾಸಕ್ತಿಕರವಾಗಿವೆ.

2. ಉಲ್ಲೇಖ

ಬೋಧನೆಯಲ್ಲಿ ಉಲ್ಲೇಖಕ್ಕೂ ಬಹಳ ಮಹತ್ವವಿದೆ. ಹೊಸ ವಿಷಯವನ್ನು ಕಲಿಸುವಾಗ ಅಧ್ಯಾಪಕನು ಸಾಮಾನ್ಯವಾಗಿ ಆ ಕುರಿತು ಸಾಕಷ್ಟು ಅಭ್ಯಸಿಸಿರಬೇಕಾಗುತ್ತದೆ. ವಿಶೇಷತಃ ಇತಿಹಾಸ, ಭೂಗೋಳ, ಜೀವನ ಚರಿತ್ರೆ ಮತ್ತು ಕಥೆಗಳನ್ನು ಹೇಳುವುದಕ್ಕೆ ಸಂಬಂಧಿಸಿ. ಅಧ್ಯಾಪಕನಿಗೆ ಒಮ್ಮೆ ಒಂದು ಘಟನೆಯನ್ನು ಹೇಳಬೇಕಾಗಿ ಬರುತ್ತದೆ, ಇನ್ನೊಮ್ಮೆ ವ್ಯಕ್ತಿ, ವಸ್ತು ಅಥವಾ ಸ್ಥಳದ ಬಗ್ಗೆ ಹೇಳಬೇಕಾಗಿ ಬರುತ್ತದೆ. ಹೆಚ್ಚಾಗಿ ಕಥೆ ಹೇಳಬೇಕಾಗುತ್ತದೆ. ಆದ್ದರಿಂದ ಎಲ್ಲಿಯ ವರೆಗೆ ಅಧ್ಯಾಪಕನಿಗೆ ಉಲ್ಲೇಖದಲ್ಲಿ ಹಿಡಿತವಿರುವುದಿಲ್ಲವೋ ಮತ್ತು ಅವನ ಉಲ್ಲೇಖನಾ ರೀತಿ ಪರಿಣಾಮಕಾರಿಯಾಗಿರುವುದಿಲ್ಲವೋ ಆತ ಖಂಡಿತವಾಗಿಯೂ ಯಶಸ್ವೀ ಅಧ್ಯಾಪಕನಾಗಲಾರ.

ಅ) ವಸ್ತು, ಸ್ಥಳ ಅಥವಾ ವ್ಯಕ್ತಿಯ ಬಗ್ಗೆ ಉಲ್ಲೇಖ

ವ್ಯಕ್ತಿ, ಸ್ಥಳ, ಪ್ರಾಣಿ, ವಸ್ತು ಅಥವಾ ಘಟನೆಯ ಬಗ್ಗೆ ಉಲ್ಲೇಖಿಸುವಾಗ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿರಿಸಬೇಕಾಗಿದೆ:

- ಆ ಕುರಿತು ಅಧ್ಯಾಪಕನಿಗೆ ಸ್ವಯಂ ನೋಡಿರುವೆನೋ ಎಂಬಷ್ಟು ಸ್ಪಷ್ಟ ಅರಿವು ಇರಬೇಕು. ಇದು ಆ ಕುರಿತು ಆಳ ಅಧ್ಯಯನ ನಡೆಸಿದಾಗಲಷ್ಟೇ ಸಾಧ್ಯ.
- ಮಕ್ಕಳಿಗೆ ಚೆನ್ನಾಗಿ ಮನವರಿಕೆಯಾಗಬೇಕಾದರೆ, ಸುಲಭ ವಾಕ್ಯಗಳಲ್ಲಿ, ಸರಳ ಭಾಷೆಯಲ್ಲಿ ವಿಷಯದ ಸ್ಪಷ್ಟ ಚಿತ್ರಣವನ್ನು ನೀಡಬೇಕು.
- ಸಾಧ್ಯಂತ ಚುಟುಕಾಗಿ ವಿವರಿಸಬೇಕು. ಅತಿಯಾದ ವಿವರಣೆಯಿಂದ ಮಕ್ಕಳ ಮನಸ್ಸು ಗೊಂದಲಕ್ಕೀಡಾಗುತ್ತದೆ. ಆದರೆ ಹೇಳಿದಷ್ಟು ವಿಷಯದ ಸ್ಪಷ್ಟ ಚಿತ್ರಣ ಕಣ್ಣಿಗೆ ಕಟ್ಟುವ ರೀತಿಯಲ್ಲಿ ವಿವರಿಸಬೇಕು.
- ಮೊದಲು ಇಡೀ ವಿಷಯವನ್ನು ಚುಟುಕಾಗಿ ತಿಳಿಸಬೇಕು. ಬಳಿಕ ಒಂದು ನಿರ್ದಿಷ್ಟ ಅನುಕ್ರಮದೊಂದಿಗೆ ವಿವರಣೆ ನೀಡುತ್ತ ಸಾಗಬೇಕು.
- ಕೇವಲ ಮೌಖಿಕ ವಿವರಣೆಗೇ ತೃಪ್ತಿ ಪಟ್ಟುಕೊಳ್ಳಬಾರದು. ಬದಲಾಗಿ, ಅಗತ್ಯಾನುಸಾರ ಮಾದರಿ, ಚಿತ್ರ, ಚಾರ್ಟ್ ಮತ್ತು ನಕ್ಷೆ ಇತ್ಯಾದಿಗಳಿಂದ ಸಹಾಯ ಪಡೆಯಬೇಕು.
- ಕಾಣದ ಮತ್ತು ಅಪರಿಚಿತವಾದ ವಸ್ತುಗಳ ಬಗ್ಗೆ ತಿಳಿಸುವಾಗ, ಕಂಡಿರುವ ಅಥವಾ ಪರಿಚಿತ ವಸ್ತುಗಳಿಗೆ ಹೋಲಿಸಬೇಕು. ಈ ಮೂಲಕ ವ್ಯತ್ಯಾಸ ಮತ್ತು ಸಾಮ್ಯತೆಯು ಚೆನ್ನಾಗಿ ಮನವರಿಕೆಯಾಗಬಹುದು.
- ಉಲ್ಲೇಖಿಸಲು ಉದ್ದೇಶಿಸಿರುವ ವಿಷಯದ ಸಂಕ್ಷಿಪ್ತ ವಿವರವನ್ನು ಮೊದಲೇ ತಯಾರಿಸಿಟ್ಟುಕೊಳ್ಳಬೇಕು ಮತ್ತು ಕಲಿಸುವಾಗ ಅದರ ಅನುಕ್ರಮವನ್ನು ಅನುಸರಿಸಬೇಕು. ಇವರಿಂದ ಒಂದೊಂದು ವಿಷಯವೂ ಪರಸ್ಪರ ಸಂಬಂಧಿಸಿ ಇರುತ್ತದೆ.

- ಉಲ್ಲೇಖಿಸಬೇಕಾಗಿರುವ ವಿಷಯವನ್ನು ನಿರಂತರವಾಗಿ ಒಂದೇ ಬಾರಿಗೆ ಹೇಳಿ ಮುಗಿಸುವುದಲ್ಲ, ಬದಲಾಗಿ ಎರಡು ಅಥವಾ ಮೂರು ಭಾಗಗಳಾಗಿ ವಿಂಗಡಿಸಿ, ಒಂದರ ನಂತರ ಇನ್ನೊಂದರಂತೆ ಉಲ್ಲೇಖಿಸಬೇಕು. ಪ್ರತಿಯೊಂದು ಭಾಗದ ಕೊನೆಯಲ್ಲಿ ಪ್ರಶ್ನೆ ಕೇಳುವ ಮೂಲಕ ಪುನರಾವರ್ತನೆಯನ್ನು ಮಾಡಬೇಕು. ಆಮೇಲೆ ಸಾರಾಂಶವನ್ನು ಬರೆಸಬೇಕು.

ಆ) ಕಥೆ ಹೇಳುವುದು

ಕಥೆಯು ಮೊದಲಿಂದಲೇ ಶಿಕ್ಷಣ-ತರಬೇತಿಯಲ್ಲಿ ಅತ್ಯಂತ ಆಸಕ್ತಿಕರ ಮತ್ತು ಪರಿಣಾಮಕಾರಿ ಮಾಧ್ಯಮವಾಗಿವೆ. ಕಥೆಗಳಿಂದ ಯಾರಿಗೆ ಸಂತೋಷವಾಗುವುದಿಲ್ಲ? ಆದರೆ ಮಕ್ಕಳಿಗಂತೂ ಕಥೆಗಳೆಂದರೆ ಪಂಚಪ್ರಾಣ. ಅಜ್ಜಿಯ ಜತೆ ಮೊಮ್ಮಕ್ಕಳು ಹೆಚ್ಚೆಚ್ಚು ಬೆರೆಯುವುದಕ್ಕೆ ಹಲವು ಕಾರಣಗಳಿರುತ್ತವೆ. ಆ ಪೈಕಿ ಕಥೆ ಅತಿ ಪ್ರಮುಖವಾದುದು. ಕಥೆ ಹೇಳಲು ಮಕ್ಕಳು ದುಂಬಾಲು ಬೀಳುವುದರಿಂದಲೇ ಅವರಿಗೆ ಕಥೆಯಲ್ಲಿ ಸ್ವಾಭಾವಿಕವಾಗಿ ಎಷ್ಟು ಆಸಕ್ತಿ ಇದೆ ಎಂಬುದು ತಿಳಿದು ಬರುತ್ತದೆ. ಅವರು ಮೈಯೆಲ್ಲ ಕಿವಿಯಾಗಿಸಿ ಕಥೆ ಕೇಳುತ್ತಾರೆ. ಎಲ್ಲಿಯ ವರೆಗೆಂದರೆ ಆದರಲ್ಲಿ ಅವರ ನಿದ್ರೆಯೂ ಹಾರಿಹೋಗಿರುತ್ತದೆ. ಮೊಮ್ಮಕ್ಕಳು ಕಥೆ ಕೇಳುತ್ತ ನಿದ್ರೆಗೆ ಜಾರಿದ ಮೇಲೆ ಹಾಗೆ ಅಜ್ಜಿಗೆ ಸಮಾಧಾನ ಮತ್ತು ವಿಶ್ರಾಂತಿ ಸಿಗುವುದು.

ಪ್ರಾಮುಖ್ಯತೆ ಮತ್ತು ಪ್ರಯೋಜನಗಳು

- ಕಥೆಗಳಿಂದ ಮಕ್ಕಳ ಮಾನಸಿಕ, ನೈತಿಕ ಮತ್ತು ಸಾಮಾಜಿಕ ತರಬೇತಿಯಲ್ಲಿ ಬಹಳ ಸಹಾಯವೊದಗುತ್ತದೆ. ಅವರು ತಮ್ಮನ್ನು ಕಥಾನಾಯಕನ ಉತ್ತರಾಧಿಕಾರಿಯಾಗಿ ಭಾವಿಸಿ ತಮ್ಮಲ್ಲಿ ಕಥಾ ನಾಯಕನ ಗುಣವನ್ನೆಲ್ಲ ಹೇರುತ್ತಾರೆ. ಕಥೆ ಕೇಳುತ್ತ ಜಿಗಿದು ಬಿಡುತ್ತಾರೆ. ಕಥಾನಾಯಕನಿಗಾಗುತ್ತಿರುವ ಅನುಭವವನ್ನು ಇವರ ಮನ-ಮಸ್ತಿಷ್ಕಗಳೂ ಅನುಭವಿಸುತ್ತಿವೆ ಎಂಬುದು ಇವರ ಮುಖಭಾವ ಮತ್ತು ಅಂಗಭಾಷೆಯಿಂದ ಸ್ಪಷ್ಟವಾಗಿ ಗೋಚರಿಸುತ್ತದೆ.
- ಕಲ್ಪನಾಶಕ್ತಿಯ ಪೋಷಣೆ, ಪರಮೋದ್ದೇಶ ಮತ್ತು ಆದರ್ಶದ ರಚನೆ, ಚಾರಿತ್ರ್ಯ ನಿರ್ಮಾಣ ಮತ್ತು ಉನ್ನತ ಚಿಂತನೆಯನ್ನು ಬೆಳೆಸುವಲ್ಲಿ ಕಥೆಗಳು ಬಹಳ ಸಹಕಾರಿಯಾಗಿರುತ್ತವೆ.
- ಕಷ್ಟದ ಮತ್ತು ಶುಷ್ಕ ಪಾಠಗಳು ಕಥೆಗಳ ಸಹಾಯದಿಂದ ಸುಲಭ, ಆಸಕ್ತಿದಾಯಕ ಮತ್ತು ಸ್ವೀಕಾರಾರ್ಹಗೊಳ್ಳುತ್ತವೆ.
- ಕೆಲವು ನಿರ್ದಿಷ್ಟ ಕಲ್ಪನೆಗಳು ಮತ್ತು ಮೂಲಭೂತ ವಿಷಯಗಳನ್ನು ಕಥೆಗಳ ಮುಖಾಂತರ ಸುಲಭದಲ್ಲಿ ಅರ್ಥ ಮಾಡಿಕೊಡಬಹುದು.

- ಭಾಷೆ ಕಲಿಸಲು, ಪದಗಳ ಭಂಡಾರದಲ್ಲಿ ಹೆಚ್ಚಳವನ್ನುಂಟು ಮಾಡಲು, ಭಾವನೆ-ಚಿಂತನೆಗಳ ಪ್ರಕಟನೆಯಲ್ಲಿ ನಿಯಂತ್ರಣ ಸಾಧಿಸಲು ಕೂಡಾ ಕಥೆಗಳು ಬಹಳ ಸಹಕಾರಿಯಾಗುತ್ತವೆ.
- ಇಸ್ಲಾಮಿಯಾತ್, ಇತಿಹಾಸ, ಭೂಗೋಳ, ವ್ಯಕ್ತಿ ಚರಿತ್ರೆ ಇತ್ಯಾದಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಕಥೆಗಳ ಮೂಲಕ ಸುಲಭದಲ್ಲಿ ಕಲಿಸಬಹುದು. ಅದು ಮಕ್ಕಳಿಗೆ ಕಥೆಗಳ ರೂಪದಲ್ಲಿ ಚೆನ್ನಾಗಿ ನೆನಪಿನಲ್ಲಿಯೂ ಉಳಿದು ಬಿಡುತ್ತದೆ.

ಗಮನಾರ್ಹ ವಿಷಯಗಳು

- ಆರಂಭದಲ್ಲಿ ಕಥೆಗಳು ಸರಳ ಮತ್ತು ಸಂಕ್ಷಿಪ್ತವಾಗಿರಬೇಕು. ಕ್ರಮೇಣ ದೀರ್ಘ ಮತ್ತು ಜಟಿಲವಾಗುತ್ತಾ ಸಾಗಬೇಕು.
- ಸುಲಭ ಪದಗಳು, ಸಣ್ಣ ವಾಕ್ಯಗಳು ಮತ್ತು ಆಕರ್ಷಕ ಶೈಲಿಯಲ್ಲಿರಬೇಕು.
- ಘಟನೆಗಳು ಪರಸ್ಪರ ಸಂಬಂಧಿಸಿರಬೇಕು. ಅಂತೆಯೇ ಅವು ಮಕ್ಕಳ ಜೀವನಕ್ಕೆ ಸಂಬಂಧಿಸಿ ಹಾಗೂ ಅವರ ಆಸಕ್ತಿ, ಬುದ್ಧಿ, ಚಿಂತನೆ ಮತ್ತು ಅನುಭವಕ್ಕೆ ನಿಕಟವಾಗಿರಬೇಕು.
- ಕಥಾನಾಯಕ ಸಾದ್ಯಂತ ಬಾಲಕನಾಗಿರಬೇಕು ಮತ್ತು ಅವನ ಕೃತ್ಯಗಳು ಅಥವಾ ಸಾಧನೆಗಳನ್ನು ಸ್ಪಷ್ಟ ಹಿನ್ನೆಲೆಯಲ್ಲಿ ಉಲ್ಲೇಖಿಸಬೇಕು.
- ಕಥೆಯ ವಿಷಯವನ್ನು ಮಕ್ಕಳ ಪ್ರಾಯ, ಬುದ್ಧಿ, ಮಾನಸಿಕ ವಿಶೇಷತೆಗಳು ಮತ್ತು ಆಸಕ್ತಿಗಳನ್ನು ದೃಷ್ಟಿಯಲ್ಲಿರಿಸಿಯೇ ಆಯ್ದುಕೊಳ್ಳಬೇಕು.
- ಕಥೆಯ ಪಾತ್ರಗಳು, ಸ್ಥಳಗಳು ಮತ್ತು ವಸ್ತುಗಳನ್ನು ನಿರ್ದಿಷ್ಟವಾಗಿ ತಿಳಿಸಬೇಕು.
- ಕಥೆಗಳು ಕ್ರಿಯಾಶೀಲ ಮತ್ತು ಆವೇಶಪೂರ್ಣವಾಗಿರಬೇಕು. ಅವುಗಳಲ್ಲಿ ಓಡಾಟ, ಜಿಗಿದಾಟ, ಸ್ಪರ್ಧೆ, ಧೈರ್ಯ-ಸ್ಥೈರ್ಯ, ಮನರಂಜನೆ, ಯುದ್ಧ ಮತ್ತು ಸಂಶೋಧನೆ ಇತ್ಯಾದಿ ಘಟನೆಗಳಿರಬೇಕು.
- ಸಂಭಾಷಣೆಯು ಭರಪೂರವಾಗಿರಬೇಕು.
- ಕಥೆಯು ನಿರಂತರವಾಗಿ ವಿಸ್ತಾರಗೊಳ್ಳುತ್ತಿರಬೇಕು. ಗಮನವನ್ನು ಕೇಂದ್ರೀಕೃತಗೊಳಿಸಲು ಮತ್ತು ಆಸಕ್ತಿಯನ್ನು ನಿರಂತರವಾಗಿಸಲು ಇದು ಸಹಕಾರಿ.
- ಒಂದು ಆಕರ್ಷಕ ವಾಕ್ಯವು ಕಥೆಯಲ್ಲಿ ಪುನರಾವರ್ತನೆಗೊಳ್ಳುತ್ತ ಇದ್ದರೆ ಸಣ್ಣ ಮಕ್ಕಳಿಗೆ ಬಹಳ ಆನಂದವಾಗುತ್ತದೆ.
- ಕಥೆಯು ಯಾವುದೇ ವಿಷಯಕ್ಕೆ ಸಂಬಂಧಿಸಿದ್ದರೂ ಅದರಲ್ಲಿ ವೃತ್ತಾಂತವು ಪ್ರಮುಖವಾಗಿರಬೇಕು. ಆದರೆ ಯಾವ ಉದ್ದೇಶಕ್ಕಾಗಿ ಕಥೆ ಹೇಳಲಾಗುತ್ತದೋ ಅದು ಸದಾ ಗಮನದಲ್ಲಿರಬೇಕು.

- ಪ್ರಖ್ಯಾತವಾಗಿರುವ ಕಥೆಗಳನ್ನು ಇದ್ದಕ್ಕಿದ್ದ ಹಾಗೆ ಹೇಳುವ ಬದಲು, ಅಗತ್ಯಾನುಸಾರ ಮಕ್ಕಳ ಬುದ್ಧಿ ಮತ್ತು ಸಾಮರ್ಥ್ಯಕ್ಕೆ ಅನುಸಾರ ಪರಿವರ್ತಿಸಿಯೂ ಹೇಳಬಹುದು. ಆದರೆ ಐತಿಹಾಸಿಕ ಕಥೆಗಳನ್ನು ಹೇಳುವಾಗ ಐತಿಹಾಸಿಕ ವಾಸ್ತವಿಕತೆಗಳು ಮತ್ತು ಘಟನೆಗಳಿಗೆ ಚ್ಯುತಿ ಬಾರದಂತೆ ನೋಡಿಕೊಳ್ಳಬೇಕು.
- ಕೆಲವು ಕಥೆಗಳನ್ನು ವೃತ್ತಾಂತದ ಬದಲು ಆತ್ಮಕಥೆಯ ರೂಪದಲ್ಲಿ ಹೇಳಿದರೆ ಹೆಚ್ಚು ಖುಷಿಕೊಡುತ್ತವೆ. ಇಂತಹ ಕಥೆಗಳು ಮಕ್ಕಳಿಗೆ ಬಹಳ ಬೇಗನೇ ನೆನಪಾಗುತ್ತವೆ ಮತ್ತು ಅವುಗಳನ್ನು ಸುಲಭದಲ್ಲಿ ಉಲ್ಲೇಖಿಸಬಲ್ಲರು. ಆದ್ದರಿಂದ ಕೆಲವೊಮ್ಮೆ ಕಥಾನಾಯಕನ ಬಾಯಿಯಿಂದಲೇ ಕಥೆ ಹೇಳಿಸಬೇಕು.
- ಬಾಲ್ಯದಲ್ಲಿ ಭೂತ-ಪ್ರೇತ ಮತ್ತು ಜಿನ್ನ್ (ಯಕ್ಷ), ದೇವಕನ್ಯೆಗಳ ಕಥೆಯಿಂದ ಸಂಶಯ ಪ್ರವೃತ್ತಿ ಬೆಳೆದು ಬರುತ್ತದೆ. ಹಾಗೆಯೇ ಹದಿಹರೆಯದಲ್ಲಿ ಪತ್ತೆದಾರಿ ಅಥವಾ ಪ್ರಣಯ ಕಥೆಗಳಿಂದ ಅಶ್ಲೀಲತೆ ಮತ್ತು ಅಪರಾಧ ಪ್ರವೃತ್ತಿ ಬೆಳೆಯುತ್ತದೆ. ಆದ್ದರಿಂದ ಅಂತಹ ಕಥೆಗಳಿಂದ ಮಕ್ಕಳನ್ನು ದೂರವಿರಿಸಬೇಕು.
- ಕಥೆ ಹೇಳುವಾಗ ಅದರ ನಿರಂತರತೆಯು ತಪ್ಪದಿರಬೇಕಾದರೆ, ಅಧ್ಯಾಪಕನಿಗೆ ಆ ಕಥೆ ಚೆನ್ನಾಗಿ ನೆನಪಿನಲ್ಲಿರಬೇಕು. ಮಧ್ಯಮಧ್ಯೆ ಸ್ತಬ್ಧವಾಗುವುದು ಮತ್ತು ಪುಸ್ತಕ ತೆರೆದು ನೋಡುವುದೆಲ್ಲ ತಪ್ಪಬೇಕು, ಅನ್ಯಥಾ ಕಥೆಯ ಆನಂದವೇ ಹಾಳಾಗಿ ಬಿಡುತ್ತದೆ.
- ಕಥೆಗಳ ಕೆಲವು ಭಾಗಗಳನ್ನು ಮಾತುಕತೆಯ ರೂಪದಲ್ಲಿ ತಿಳಿಸಲು ಸಾಧ್ಯವಿದ್ದರೆ ತರಗತಿ ಅಥವಾ ಗುಂಪಿನ ಮುಂದೆ ಮಾತುಕತೆಯ ರೂಪದಲ್ಲಿ ತಿಳಿಸಲು ಪ್ರಯತ್ನಿಸಬೇಕು. ಆದರೆ ಕಥೆಯಲ್ಲಿ ಯಾವುದೇ ಕಾರಣಕ್ಕೂ ಯಾರಿಗೂ ಕೆಟ್ಟ ಪಾತ್ರವನ್ನು ನಿರ್ವಹಿಸಬೇಕಾಗಿ ಬರುವಂತಹ ಭಾಗವನ್ನು ಮಾತುಕತೆಗೆ ಆಯ್ದುಕೊಳ್ಳಬಾರದು. ಅನ್ಯಥಾ ಮಗುವಿನ ಮನಸ್ಸಿನಲ್ಲಿ ಆ ಪಾತ್ರವೇ ಬೇರು ಬಿಡಬಹುದು ಎಂಬ ಆತಂಕವಿರುತ್ತದೆ.

ಕಥೆ ಹೇಳುವ ವಿಧಾನ

- ಕಥೆಗಳನ್ನು ಯಾವಾಗಲೂ ಮೌಖಿಕವಾಗಿ ಹೇಳಬೇಕು. ಓದಿ ಕೇಳಿಸುವುದರಿಂದ ಸಂತೋಷವೂ ಆಗುವುದಿಲ್ಲ, ಕಥೆ ಹೇಳುವುದರ ಅವಸ್ಥೆಯೂ ಅನುಭವಕ್ಕೆ ಬರುವುದಿಲ್ಲ, ಒಂದು ವೇಳೆ ಓದಿ ಕೇಳಿಸಲೇ ಬೇಕೆಂದಿದ್ದರೆ, ಅದು ಮೌಖಿಕವಾಗಿ ಹೇಳುವ ರೀತಿಯಲ್ಲಿರಬೇಕು.
- ವಿಧಾನವು ಆಹ್ಲಾದಕರ ಮತ್ತು ಉಚ್ಚಾರವು ಸ್ವಾಭಾವಿಕವಾಗಿರಬೇಕು. ಅಗತ್ಯ ಬಿದ್ದಾಗಲೆಲ್ಲ, ಮಾತಿನ ಓಘದಲ್ಲಿ ಏರಿಳಿತ ಮತ್ತು ಆಂಗಿಕ ಭಾಷೆಯಲ್ಲಿ ಆವೇಶ-ಹುಮ್ಮಸ್ಸು ಪ್ರಕಟವಾಗಬೇಕಾದುದು ಅಗತ್ಯ.
- ಅಧ್ಯಾಪಕ ಸ್ವಯಂ ಆಸಕ್ತಿಯಿಂದ ಕಥೆ ಹೇಳುವಾಗ ಮತ್ತು ಘಟನೆಗಳ ಪ್ರಭಾವವನ್ನು ಪ್ರಕಟಿಸುವಾಗ, ಮಕ್ಕಳೂ ಆಸಕ್ತಿ ಹೊಂದುತ್ತಾರೆ ಮತ್ತು ಪ್ರಭಾವಿತರಾಗುತ್ತಾರೆ.

ಆದ್ದರಿಂದ ಭಾಷೆ, ಉಲ್ಲೇಖ ಮತ್ತು ಶೈಲಿಯಲ್ಲಿ ಅಗತ್ಯದ ಅವಸ್ಥೆ ಮತ್ತು ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸಬೇಕು.

- ಕಥೆಯನ್ನು ನಿರಂತರವಾಗಿ ಹೇಳುತ್ತ ಹೋಗುವುದರ ಬದಲು ಎರಡ್ಮೂರು ವಿಭಾಗಗಳಾಗಿ ವಿಂಗಡಿಸಿ ಹೇಳಬೇಕು. ಒಂದು ಭಾಗವನ್ನು ಹೇಳಿಕೊಟ್ಟ ಬಳಿಕ ಸೂಕ್ತ ಪ್ರಶ್ನೆಯ ಮುಖಾಂತರ ಪ್ರಮುಖ ಘಟನೆಯನ್ನು ಪುನರಾವರ್ತಿಸಿ, ಆ ಬಳಿಕ ಮುಂದಿನ ಭಾಗದೆಡೆಗೆ ಸಾಗಬೇಕು. ಕೊನೆಯಲ್ಲಿ ಪ್ರಶ್ನೆಗಳನ್ನು ಕೇಳುತ್ತಾ ಇಡೀ ಕಥೆಯ ಸಾರಾಂಶವನ್ನು ಹೇಳಬೇಕು.
- ಪದಗಳಲ್ಲಿ ಸ್ಪಷ್ಟ ಚಿತ್ರಣವನ್ನು ರಚಿಸಿ, ಪ್ರತಿಯೊಂದು ಘಟನೆಯ ಹಿನ್ನೆಲೆಯನ್ನು ಉಲ್ಲೇಖಿಸಿದ ಬಳಿಕವೂ ಸಾಧ್ಯವಾದಷ್ಟರ ಮಟ್ಟಿಗೆ ವಿಸ್ತೃತ ಚಿತ್ರಣವನ್ನು ತೋರಿಸಿ ಕೊಡಬೇಕು. ಅಂತೆಯೇ ಕರಿಹಲಗೆಯ ಸಹಾಯದಿಂದ ಇನ್ನಷ್ಟು ಸ್ಪಷ್ಟನೆಯನ್ನು ನೀಡಬೇಕು.
- ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿ ಹೇಳುವ ಕಥೆಗಳಲ್ಲಿ, ಯಾವ ಮಾಹಿತಿಗಾಗಿ ಕಥೆಯನ್ನು ಹೇಳಲಾಗಿದೆಯೋ ಅದನ್ನು ಮನವರಿಕೆ ಮಾಡಿಸಿ ಕೊಡುವಂತಹ ಪ್ರಶ್ನೆಗಳನ್ನು ಕೇಳಬೇಕು.
- ಯಾವ ಉದ್ದೇಶಕ್ಕಾಗಿ ಕಥೆ ಹೇಳಲಾಗುತ್ತಿದೆಯೋ ಆ ಉದ್ದೇಶವನ್ನು ಕಥೆ ಹೇಳುತ್ತಿರುವಾಗ ಸದಾ ನೆನಪಿನಲ್ಲಿರಿಸಿಕೊಂಡಿರಬೇಕು.
- ಕಥೆಯ ಯಾವ ಭಾಗವನ್ನು ಮಕ್ಕಳಿಂದ ಪರಸ್ಪರ ಮಾತುಕತೆಯ ರೂಪದಲ್ಲಿ ಉಲ್ಲೇಖಿಸಲಿಕ್ಕಿದೆಯೋ ಅದನ್ನು ಮಾತುಕತೆಯ ರೂಪದಲ್ಲಿಯೇ ಉಲ್ಲೇಖಿಸಬೇಕು.
- ಒಮ್ಮೊಮ್ಮೆ ಮಕ್ಕಳಿಗೂ ಕಥೆ ಹೇಳಲು ಅವಕಾಶ ನೀಡಬೇಕು. ಈ ನಿಟ್ಟಿನಲ್ಲಿ ಆಯ್ಕೆ, ಉಲ್ಲೇಖ ಇತ್ಯಾದಿಗಳಿಗೆ ಸಂಬಂಧಿಸಿ ಸೂಕ್ತ ಮಾರ್ಗದರ್ಶನವನ್ನು ನೀಡಬೇಕು.

3. ಕರಿಹಲಗೆ (Black Board)

ಬೋಧನೆಯನ್ನು ಸುಲಭ, ಆಸಕ್ತಿಕರ ಮತ್ತು ಪರಿಣಾಮಕಾರಿಯನ್ನಾಗಿ ಮಾಡುವಲ್ಲಿ ಕರಿಹಲಗೆಯ ಪಾತ್ರ ಬಹಳ ಹಿರಿದು. ಪಾಠವನ್ನು ಸ್ಪಷ್ಟಪಡಿಸುವಲ್ಲಿ ಇದರಿಂದ ಬಹಳ ಸಹಾಯ ಒದಗುತ್ತದೆ. ಆದರೆ ಇದರಿಂದ ಬಹಳ ಕಡಿಮೆ ಮಂದಿ ಅಧ್ಯಾಪಕರು ಪ್ರಯೋಜನ ಪಡೆಯುತ್ತಾರೆ ಎಂಬುದು ತೀರಾ ವಿಷಾದನೀಯ.

ಮಹತ್ವ ಮತ್ತು ಪ್ರಯೋಜನಗಳು

- ಪಠ್ಯದ ಕ್ಲಿಷ್ಟಕರ ಭಾಗದ ವಿವರಣೆಯಲ್ಲಿ ಕರಿಹಲಗೆಯು ಬಹಳ ಅಗ್ಗದ ಮತ್ತು ತೀರಾ ಸೂಕ್ತವಾದ ಮಾಧ್ಯಮವಾಗಿದೆ. ಅಗತ್ಯಾನುಸಾರ ಇದರಲ್ಲಿ ಸ್ಪಷ್ಟ ಮತ್ತು ವರ್ಣರಂಜಿತ ಚಿತ್ರಗಳು, ಚಾರ್ಟ್ ಮತ್ತು ನಕ್ಷೆ ಇತ್ಯಾದಿಗಳನ್ನು ರಚಿಸಬಹುದು.

ಇದರಲ್ಲಿ ಸಮಯ ಮತ್ತು ಹಣವೂ ಉಳಿತಾಯವಾಗುತ್ತದೆ. ಚಿತ್ರರಚನೆ ತಿಳಿದಿದ್ದರೆ, ಮೊದಲೇ ಮುದ್ರಿತವಾಗಿರುವ ಅಥವಾ ರಚಿತವಾಗಿರುವ ವಸ್ತುಗಳ ಮುಂದೆ ಇದು ಹೆಚ್ಚು ಪರಿಣಾಮಕಾರಿಯಾಗಿದೆ.

- ಮಕ್ಕಳ ಎದುರಲ್ಲೇ ಕರಿಹಲಗೆಯಲ್ಲಿ ಬರೆದ ಅಥವಾ ರಚಿಸಿದ ವಿಷಯವನ್ನು ಮಕ್ಕಳು ಹೆಚ್ಚು ಗಮನಗೊಟ್ಟು ನೋಡುತ್ತಾರೆ. ಅದು ಅವರಿಗೆ ಚೆನ್ನಾಗಿ ಮನವರಿಕೆಯೂ ಆಗುತ್ತದೆ ಮತ್ತು ಅಗತ್ಯ ಕಂಡರೆ ಸುಲಭದಲ್ಲಿ ಅದನ್ನು ಅನುಕರಿಸಲೂ ಬಹುದು.
- ಮೌಖಿಕವಾಗಿ ಕಲಿಸುತ್ತಲೇ ಇದ್ದರೆ, ಮಕ್ಕಳ ಕಿವಿಗಳಿಗೆ ಮಾತ್ರ ಕೆಲಸ ಸಿಗುತ್ತದೆ. ಅಲ್ಲದೆ ನಿರಂತರವಾಗಿ ಆಲಿಸುತ್ತಾ ಇರುವುದರಿಂದ ಅವರು ಬೇಗನೇ ಆಯಾಸಗೊಳ್ಳುತ್ತಾರೆ. ಕರಿಹಲಗೆಯ ಬಳಕೆಯಿಂದಾಗಿ ಮಕ್ಕಳ ಕಣ್ಣುಗಳಿಗೂ ಕೆಲಸ ದೊರೆಯುತ್ತದೆ. ಅಂತೆಯೇ ಅಧ್ಯಾಪಕರು ಮಾತನಾಡುವುದನ್ನು ನಿಲ್ಲಿಸಿ ಕರಿಹಲಗೆಯಲ್ಲಿ ಬರೆಯಲು ತೊಡಗುವಾಗ, ಕೆಲಸದ ಅವಸ್ಥೆಯಲ್ಲಿ ಬದಲಾವಣೆಯುಂಟಾಗುತ್ತದೆ. ಈ ಕಾರಣವಾಗಿ ಆಯಾಸವೂ ದೂರವಾಗುತ್ತದೆ ಮತ್ತು ಆಸಕ್ತಿ ಹುಟ್ಟಿಸುವಲ್ಲಿ ಸಹಕಾರಿಯೂ ಆಗುತ್ತದೆ. ಜತೆಗೆ ಒಂದಕ್ಕಿಂತ ಹೆಚ್ಚು ವಿಧಾನಗಳಿಂದ ಕೆಲಸ ಮಾಡುವುದರಿಂದ ತಿಳಿಯಲು ಮತ್ತು ನೆನಪಿನಲ್ಲಿರಿಸಲು ಸಹಕಾರಿಯಾಗುತ್ತದೆ.
- ವಿದ್ಯಾರ್ಥಿಗಳಿಗೆ ಮೌಖಿಕವಾಗಿ ಯಾವುದಾದರೂ ಮಾರ್ಗದರ್ಶನ ನೀಡಿದಾಗ ಅಥವಾ ಪರಿಹರಿಸಲು ಯಾವುದಾದರೂ ಸಮಸ್ಯೆಯನ್ನು ನೀಡಿದಾಗ ಅಥವಾ ಮನೆಗೆಲಸ ನೀಡಿದಾಗ, ಅವರು ಕೆಲವೊಮ್ಮೆ ತಪ್ಪು ಕಲ್ಪನೆಗಳಿಗೆ ಈಡಾಗುವ ಸಾಧ್ಯತೆ ಇರುತ್ತದೆ. ಅಧ್ಯಾಪಕರು ಹೇಳುವುದೊಂದು, ಮಕ್ಕಳು ಮಾಡುವುದೊಂದು. ಕರಿಹಲಗೆಯಲ್ಲಿ ಬರೆಯುವುದರಿಂದ ಕೆಲಸವು ಸ್ಪಷ್ಟವಾಗಿ ತಿಳಿಯುತ್ತದೆ. ಅಲ್ಲದೆ ವಿದ್ಯಾರ್ಥಿಗಳು ತಪ್ಪುವುದರಿಂದ ಅಥವಾ ಸಂಶಯಗ್ರಸ್ತರಾಗುವುದರಿಂದ ಪಾರಾಗುತ್ತಾರೆ.
- ಕರಿಹಲಗೆಯಿಂದಾಗಿ ಪಾಠದ ಸಾರಾಂಶವು ಸಂಕ್ಷಿಪ್ತ ರೂಪದಲ್ಲಿ ಸ್ಪಷ್ಟವಾಗಿ ವಿದ್ಯಾರ್ಥಿಗಳಿಗೆ ದೊರೆಯುತ್ತದೆ. ಅದನ್ನವರು ಸುಲಭದಲ್ಲಿ ನೆನಪಿನಲ್ಲಿರಿಸಬಲ್ಲರು ಮತ್ತು ತಮ್ಮ ಕಾಪಿಯಲ್ಲಿ ಚೊಕ್ಕವಾಗಿ ಬರೆಯಬಲ್ಲರು. ಪಾಠದ ಪ್ರಮುಖ ಅಂಶಗಳ ಬಗ್ಗೆ ಗಮನ ಸೆಳೆಯಲಿಕ್ಕೂ ಕರಿಹಲಗೆಯಿಂದ ಬಹಳ ಸಹಾಯವೊದಗುತ್ತದೆ.

ಉಪಯೋಗ

- ಕರಿಹಲಗೆಯನ್ನು ಅಧ್ಯಾಪಕನು ನಿಂತಿರುವ ಜಾಗದ ಎಡಭಾಗದಲ್ಲಿ ಇರಿಸಬೇಕು. ಹಲಗೆಯು ಬೆಳಕಿಗೆ ಮಿನುಗದಂತೆ ಮತ್ತು ಇಡೀ ತರಗತಿಗೆ ಕಾಣುವಂತೆ ಇರಿಸಬೇಕು.

ಅಂತೆಯೇ ಅಧ್ಯಾಪಕನಿಗೆ ಅದರೆಡೆಗೆ ತಲುಪಲು ಮತ್ತು ಬರೆಯಲು ಸುಲಭವಾಗುವಂತಿರಬೇಕು.

- ಬಳಸುವುದಕ್ಕೆ ಮುಂಚೆ ಬೋರ್ಡನ್ನು ಚೆನ್ನಾಗಿ ಸ್ವಚ್ಛಗೊಳಿಸಬೇಕು. ಒರೆಸುವ ವಸ್ತು ಕೊಂಚ ಆರ್ದ್ರವಾಗಿದ್ದರೆ ಉತ್ತಮ, ಆದರೆ ಹೆಚ್ಚು ಒದ್ದೆಯಾಗಿರಬಾರದು. ಕೆಲಸವಾದ ಬಳಿಕ ಬೋರ್ಡನ್ನು ಸ್ವಚ್ಛಗೊಳಿಸಿ ಬಿಡಬೇಕು.
- ಬೋರ್ಡಿನಲ್ಲಿ ಬರೆದ ಅಥವಾ ರಚಿಸಿದ ವಸ್ತುಗಳು ಸ್ಪಷ್ಟ, ಸ್ವಚ್ಛ, ನೇರ ಮತ್ತು ದುಂಡಗೆ ಇರಬೇಕು. ಅಕ್ಷರಗಳು ಏಕಪ್ರಕಾರದ ಗಾತ್ರದಲ್ಲಿರಬೇಕು.
- ಬಳಪದ (Chalk) ತುದಿಯನ್ನು 45° ಕೋನದಲ್ಲಿ ಹಿಡಿದು ಬರೆಯಬೇಕು. ದಪ್ಪ ಅಕ್ಷರಗಳಲ್ಲಿ ಬರೆಯಬೇಕಿದ್ದರೆ ಬಳಪದ ತುದಿಯನ್ನು ಓರೆಯಾಗಿ ತಿಕ್ಕಬೇಕು. ದೊಡ್ಡ ಗೆರೆಯನ್ನು ಎಳೆಯಬೇಕಾದರೆ ಅದರ ಎರಡು ಬಿಂದುಗಳನ್ನು ನಿರ್ಧರಿಸಿ ಅವುಗಳ ಮಧ್ಯೆ ಗೆರೆ ಎಳೆಯಬೇಕು. ಬಣ್ಣ ಹಚ್ಚ ಬೇಕಿದ್ದರೆ ಕರಿಹಲಗೆಯನ್ನು ಬೋರಲಾಗಿರಿಸಬೇಕು.
- ಬರೆಯುವಾಗ ಚಾಕ್‌ನಿಂದ ಖರ್‌ಖರ್ ಶಬ್ದವಾಗಬಾರದು. ಅನ್ಯಥಾ ಗಮನ ಅತ್ತಿತ ಹೊರಳಬಹುದು. ಕೆಲವೊಮ್ಮೆ ಚಾಕ್‌ನಲ್ಲಿ ಕಲ್ಲು ಇದ್ದರೆ ಅಂತಹ ಶಬ್ದ ಬರುತ್ತದೆ. ಅಂತಹ ಸ್ಥಿತಿಯಲ್ಲಿ ಚಾಕನ್ನು ತುಂಡರಿಸಿ ಕಲ್ಲು ತೆಗೆದು ಬಿಡಬೇಕು.
- ಇಡೀ ತರಗತಿಯನ್ನು ಪರಿಗಣಿಸುತ್ತ ಬೋರ್ಡಿನಲ್ಲಿ ಬರೆಯಬೇಕು. ಕೆಲವೊಮ್ಮೆ ಹಿಂದೆ ಸರಿದು ಬರೆದದ್ದು ಚೆನ್ನಾಗಿ ಕಾಣುತ್ತದೋ ಎಂಬುದನ್ನು ಪರಿಶೀಲಿಸಬೇಕು.
- ತರಗತಿಗೆ ಬೆನ್ನು ಹಾಕಿ ಬರೆಯಬಾರದು. ಬದಲಾಗಿ ಒಂದು ಕಡೆಗೆ ಹೊರಳಿ ನಿಂತು ಬರೆಯಬೇಕು. ಬರೆಯುವಾಗ ತರಗತಿಯ ಕಡೆಗೆ ತಿರುಗಿ ನೋಡುತ್ತಾ ಏನಾದರೂ ಹೇಳುತ್ತಾ ಅಥವಾ ಪ್ರಶ್ನೆ ಕೇಳುತ್ತಾ ಇರಬೇಕು. ಇದರಿಂದ ತರಗತಿಯ ಶಿಸ್ತು ಪಾಲನೆಯಾಗುತ್ತಿರುತ್ತದೆ.
- ಬರೆದುದನ್ನು ಒಂದೋ ಉಚ್ಚಸ್ವರದಲ್ಲಿ ಪಠಿಸಬೇಕು. ಇಲ್ಲವೇ ಮಕ್ಕಳಿಂದ ಓದಿಸಬೇಕು. ಈ ಮೂಲಕ ಬಿಟ್ಟುಹೋದ ಅಥವಾ ಓದಲು ಕಷ್ಟವಾಗುವ ಪದ, ಅಕ್ಷರವನ್ನು ಸರಿಪಡಿಸಬಹುದು.
- ಸ್ಪಷ್ಟ ಮತ್ತು ಸುಂದರ ಕೈ ಬರಹ ಮತ್ತು ಸ್ಕೆಚ್ ಮಾಡಲು ಚೆನ್ನಾಗಿ ಅಭ್ಯಸಿಸಬೇಕು. ಲೈನ್ ಡ್ರಾಯಿಂಗ್ ಸುಲಭವೂ ಪರಿಣಾಮಕಾರಿಯೂ ಆಗಿರುತ್ತದೆ. ಅಲ್ಲದೆ ಸಣ್ಣ ಮಟ್ಟಿನ ಅಭ್ಯಾಸದಿಂದ ಅದನ್ನು ಕಲಿಯಬಹುದು. ನೆನಪಿಡಿ- ತಪ್ಪು ಅಥವಾ ಕೆಟ್ಟ ಕೈ ಬರಹದಲ್ಲಿ ಬರೆಯುವುದಕ್ಕಿಂತ ಬರೆಯದಿರುವುದೇ ಉತ್ತಮ. ಏಕೆಂದರೆ ಕೆಟ್ಟ ಕೈ ಬರಹದಿಂದ ಮಕ್ಕಳ ಮೇಲೆ ಕೆಟ್ಟ ಪ್ರಭಾವವುಂಟಾಗುತ್ತದೆ ಆದ್ದರಿಂದ ಆರೋಗ್ಯ ಮತ್ತು ಸ್ವಚ್ಛತೆಯ ಬಗ್ಗೆ ವಿಶೇಷ ಗಮನ ಹರಿಸಬೇಕು.

- ಕಿರಿಯ ಪ್ರಾಥಮಿಕ ತರಗತಿಗಳಲ್ಲಿ ಸಾದ್ಯಂತ ಬಣ್ಣದ ಚಾಕ್‌ಗಳನ್ನು ಬಳಸಬೇಕು. ಇದರಿಂದ ಮಕ್ಕಳ ಗಮನ ಮತ್ತು ಆಸಕ್ತಿಯನ್ನು ಸೆಳೆಯಲು ಸುಲಭವಾಗುತ್ತದೆ. ಆದೇ ವೇಳೆ ಉನ್ನತ ತರಗತಿಗಳಲ್ಲಿ ಸಾಮಾನ್ಯವಾಗಿ ಬಿಳಿ ಚಾಕ್‌ಗಳನ್ನು ಬಳಸಬೇಕು. ಪ್ರಮುಖ ಅಂಶ, ತಲೆಬರಹ, ಶೀರ್ಷಿಕೆಗಳನ್ನು ಬಣ್ಣದ ಚಾಕ್‌ನಲ್ಲಿ ಬರೆಯಬೇಕು.
- ಪಾಠದ ಸಾರಾಂಶವನ್ನು ಆದಷ್ಟು ಚುಟುಕಾಗಿ ಬರೆಯಬೇಕು. ಪಾಠ ಮಾಡುತ್ತ ಇರುವಾಗ ಸಾರಾಂಶವನ್ನು ಬರೆಯುತ್ತ ಹೋದರೆ ಉತ್ತಮ. ಈ ರೀತಿ ಪಾಠ ಮುಗಿಯುವಷ್ಟರಲ್ಲಿ ಸಾರಾಂಶವೂ ಸಿದ್ಧವಾಗಿರುತ್ತದೆ.
- ಕೆಲವೊಮ್ಮೆ ವಿದ್ಯಾರ್ಥಿಗಳಿಗೂ ಬೋರ್ಡನ್ನು ಬಳಸಲು ಅವಕಾಶ ನೀಡಬೇಕು.

4. ವಿವರಣೆ

ಪಾಠ ಮಾಡುವಾಗ ಅಧ್ಯಾಪಕನು ಕಷ್ಟದ, ಅಪರಿಚಿತವಾದ, ಅಸ್ಪಷ್ಟವಾದ ಮತ್ತು ಸಂಶಯಾಸ್ಪದವಾದ ವಿಷಯಗಳನ್ನು ವಿವರಿಸಬೇಕಾದಂತಹ ಹಲವು ಸಂದರ್ಭಗಳು ಎದುರಾಗುತ್ತವೆ. ಆ ಮೂಲಕ ವಿಷಯದ ರೂಪ-ಕಲ್ಪನೆಗಳು ಸ್ಪಷ್ಟವಾಗುತ್ತವೆ ಹಾಗೂ ವಿಷಯವು ಚೆನ್ನಾಗಿ ಮನವರಿಕೆಯಾಗುತ್ತದೆ.

ಈ ವಿವರಣೆಯು ಎರಡು ರೀತಿಯಲ್ಲಿರುತ್ತದೆ.

(i.) ಮೌಖಿಕ

(ii.) ಗೋಚರ ವಸ್ತು. ಅಂದರೆ ಚಿತ್ರಗಳು, ನಕ್ಷೆಗಳು, ಗ್ಲೋಬ್, ಚಾರ್ಟ್ ಇತ್ಯಾದಿ.

ಮೌಖಿಕ ವಿವರಣೆ

ಮೌಖಿಕವಾಗಿ ವಿವರಿಸುವಾಗ ಅಗತ್ಯಾನುಸಾರ ಮತ್ತು ಸಂದರ್ಭಾನುಸಾರ ವಿಭಿನ್ನವಾದ ಉಪಾಯಗಳನ್ನು ಅನುಸರಿಸಲಾಗುತ್ತದೆ. ಉದಾ:

- ಕಷ್ಟದ ಪದಗಳ ಅರ್ಥವನ್ನು ತಿಳಿಸಿಕೊಡಲಿಕ್ಕಾಗಿ ಒಂದೋ ಸುಲಭದ ಪರ್ಯಾಯ ಪದಗಳನ್ನು ನೀಡಲಾಗುತ್ತದೆ, ಇಲ್ಲವೇ ಅವುಗಳ ವಿರುದ್ಧ ಪದಗಳನ್ನು ಹೇಳಲಾಗುತ್ತದೆ ಅಥವಾ ಅದನ್ನು ವಾಕ್ಯದಲ್ಲಿ ಬಳಸಿ, ಅದರ ಅರ್ಥವನ್ನು ಸೂಚ್ಯವಾಗಿ ತಿಳಿಸಲಾಗುತ್ತದೆ. ಜತೆಗೆ ಅದರ ಬಳಕೆಯನ್ನು ಹೇಳಿಕೊಡಲಾಗುತ್ತದೆ. ಉಲ್ಲೇಖನಾರ್ಹ ವಾಕ್ಯವಾಗಿದ್ದರೆ, ಸಂಕ್ಷಿಪ್ತವಾಗಿ ಘಟನೆಯನ್ನು ತಿಳಿಸಲಾಗುತ್ತದೆ. ಪಾರಿಭಾಷಿಕ ಪದವಾಗಿದ್ದರೆ, ಅದರ ಅರ್ಥವ್ಯಾಖ್ಯಾನವನ್ನು ನೀಡಿ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿ ಕೊಡಲಾಗುತ್ತದೆ.
- ಅಪರಿಚಿತ ವಸ್ತುವಿನ ಚಿತ್ರಣವನ್ನು ನೀಡಬೇಕಾದರೆ, ಯಾವುದಾದರೂ ಪರಿಚಿತ ವಸ್ತುವಿನ ಉಪಮೆ ನೀಡಲಾಗುತ್ತದೆ ಅಥವಾ ಅದರೊಂದಿಗೆ ಹೋಲಿಸಿ ಹೇಳಲಾಗುತ್ತದೆ ಮತ್ತು ವ್ಯತ್ಯಾಸವನ್ನು ಸ್ಪಷ್ಟಪಡಿಸಲಾಗುತ್ತದೆ.

- ವೃತ್ತಾಂತ, ಕಥೆ, ಚುಟುಕು, ಹಾಸ್ಯ, ಗಾದೆಮಾತು ಇತ್ಯಾದಿಗಳ ಸಹಾಯದಿಂದ ನಿರ್ದಿಷ್ಟ ಕಲ್ಪನೆಯನ್ನು ವಿವರಿಸಿ ಕೊಡಲಾಗುತ್ತದೆ.
- ಕ್ಲಿಷ್ಟಕರ ವಾಕ್ಯದ ಅರ್ಥವನ್ನು ಸುಲಭ ಪದಗಳಲ್ಲಿ ಸರಳವಾಗಿ ಹೇಳಿಕೊಡಲಾಗುತ್ತದೆ.

ಗಮನಾರ್ಹ ವಿಷಯಗಳು

- ಮಕ್ಕಳು ಗಮನಗೊಟ್ಟು ಆಸಕ್ತಿಯಿಂದ ಆಲಿಸುವಂತಾಗಬೇಕಾದರೆ ವಿವರಣೆ ನೀಡುವುದಕ್ಕೆ ಮುನ್ನ ಅದರ ಅಗತ್ಯವನ್ನು ಮನಗಾಣಿಸಬೇಕು. ವಿವರಣೆ ನೀಡುವುದಕ್ಕೆ ಮುನ್ನವೇ ಮಕ್ಕಳಿಗೆ ಸಮಸ್ಯೆಯನ್ನು ಪರಿಹರಿಸಲು ತಿಳಿಸಿದರೆ, ಅವರು ವಿವರಣೆಯ ಅಗತ್ಯವನ್ನು ಸುಲಭದಲ್ಲಿ ಮನಗಾಣುವರು.
- ಮಕ್ಕಳ ಭಾಷೆಯಲ್ಲಿ ಮಕ್ಕಳದೇ ಶೈಲಿಯಲ್ಲಿ ವಿವರಣೆ ನೀಡಬೇಕು. ಇದರಿಂದ ಮಕ್ಕಳಿಗೆ ಸುಲಭದಲ್ಲಿ ಅರ್ಥವಾಗುವುದು ಮತ್ತು ಅಗತ್ಯಾನುಸಾರ ಸ್ವಯಂ ವಿವರಣೆಯನ್ನು ನೀಡಬಲ್ಲರು.
- ವಿವರಿಸುವಾಗ ಪಾಠದ ಉದ್ದೇಶವು ದೃಷ್ಟಿಯಲ್ಲಿರಬೇಕು ಮತ್ತು ಸಾದ್ಯಂತ ಚುಟುಕಾಗಿ ತಿಳಿಹೇಳಬೇಕು. ಸಂಬಂಧವಿಲ್ಲದ ಮತ್ತು ಅರ್ಥವಿಲ್ಲದ ವಿವರಣೆಗಳಿಂದ ಸಮಯ ಪೋಲಾಗುತ್ತದೆ.
- ವಿವರಣೆಯ ಮುಖ್ಯಾಂಶಗಳನ್ನು ಕರಿಹಲಗೆಯಲ್ಲಿ ಬರೆದರೆ ಹೆಚ್ಚು ಪ್ರಯೋಜನಕಾರಿ.
- ಮೌಖಿಕ ವಿವರಣೆಗೆ ಸೀಮಿತಗೊಳಿಸಬಾರದು. ಬದಲಾಗಿ, ಸಾಧ್ಯವಿರುವಷ್ಟರ ಮಟ್ಟಿಗೆ ಕರಿಹಲಗೆಯಲ್ಲಿ ಚಿತ್ರ, ಗ್ರಾಫ್ ಇತ್ಯಾದಿಗಳನ್ನು ಬರೆದು ಸ್ಪಷ್ಟ ವಿವರಣೆಯನ್ನು ನೀಡಬೇಕು.
- ವಿವರಣೆ ನೀಡುವಾಗ, ವಿದ್ಯಾರ್ಥಿಗಳಿಗೆ ಹೆಚ್ಚೆಚ್ಚು ಪ್ರಶ್ನೆ ಕೇಳುವ ಅವಕಾಶವನ್ನು ನೀಡಬೇಕು.

5. ಚಿತ್ರ, ಮಾದರಿ, ಚಾರ್ಟ್ ಇತ್ಯಾದಿ

ಪ್ರಾಥಮಿಕ ಹಂತದಲ್ಲಿ ಪರಿಣಾಮಕಾರಿ ಬೋಧನೆಗೆ ವಿವಿಧ ವಸ್ತುಗಳು, ಅವುಗಳ ಮಾದರಿಗಳು, ಚಿತ್ರ ಮತ್ತು ಚಾರ್ಟ್ ಇತ್ಯಾದಿಗಳ ಬಳಕೆಯು ಅತ್ಯಂತ ಪ್ರಯೋಜನಕಾರಿ ಮತ್ತು ಅಗತ್ಯವಾಗಿದೆ. ಏಕೆಂದರೆ ಅವುಗಳ ಸಹಾಯದಿಂದ...

- ಹೊಸ ವಿಷಯಗಳನ್ನು ಸುಲಭದಲ್ಲಿ ಕಲಿಸಲು ಮತ್ತು ಮನವರಿಕೆ ಮಾಡಿಸಲು ಸಾಧ್ಯವಿದೆ.
- ಮಕ್ಕಳ ಕಲ್ಪನೆಗಳು ಸರಿ ಮತ್ತು ಸ್ಪಷ್ಟವಾಗುತ್ತದೆ.
- ಪಾಠದಲ್ಲಿ ಆಸಕ್ತಿ ಹುಟ್ಟುತ್ತದೆ ಮತ್ತು ಮಕ್ಕಳು ಗಮನ ಕೇಂದ್ರೀಕರಿಸುತ್ತಾರೆ.
- ಚೆನ್ನಾಗಿ ವಿವರಿಸಲು ಸಾಧ್ಯವಿದೆ.

- ಮೌಖಿಕ ವಿವರಣೆಗಿಂತ ಇವುಗಳ ಕಾರಣವಾಗಿ ಮನಸ್ಸಿನಲ್ಲಿ ಗಾಢ ಛಾಪು ಮೂಡುತ್ತದೆ. ಹಾಗಾಗಿ ವಿಷಯವು ಬಹಳ ದಿನಗಳ ವರೆಗೆ ನೆನಪಿನಲ್ಲಿ ಉಳಿಯುತ್ತದೆ.
- ವೀಕ್ಷಣೀಯ ತರಬೇತಿಯಾಗುತ್ತದೆ ಮತ್ತು ಗಮನಾರ್ಹ ಮಗ್ಗುಲುಗಳಲ್ಲಿ ಮಕ್ಕಳು ದೃಷ್ಟಿ ನೆಟ್ಟುಕೊಳ್ಳಲು ಶಕ್ತರಾಗುತ್ತಾರೆ.

ವಿಧಗಳು

ದೃಷ್ಟಿಗೋಚರ ವಿವರಣೆಯು ಈ ಕೆಳಗಿನ ವಿಧಗಳಲ್ಲಿರುತ್ತವೆ-

ಅ) ಮೂಲವಸ್ತು.

ಆ) ಮಾದರಿ, ಸ್ಟೇಂಡಿನಲ್ಲಿ ದೃಶ್ಯ ಚಿತ್ರ, ಗ್ಲೋಬ್ ಇತ್ಯಾದಿ.

ಇ) ಚಿತ್ರಗಳು, ಭಾವಚಿತ್ರಗಳು, ದೃಶ್ಯಾವಳಿಗಳು, ಪೋಸ್ಟರ್‌ಗಳು ಇತ್ಯಾದಿ.

ಈ) ನಕ್ಷೆ, ಗ್ರಾಫ್, ಚಾರ್ಟ್ ಇತ್ಯಾದಿ.

ಉ) ಮಾಡಿತೋರಿಸುವುದು ಇಲ್ಲವೇ ಅನುಭವಕ್ಕೆ ತಂದು ತೋರಿಸುವುದು ಅಥವಾ ವೀಕ್ಷಣೆಗೆ ಕರಕೊಂಡು ಹೋಗುವುದು.

ಅ) ಮೂಲವಸ್ತು

ಕಲಿಸುವಾಗ ಮೂಲವಸ್ತು ಮಕ್ಕಳ ಮುಂದಿದ್ದರೆ ಮತ್ತು ಮಕ್ಕಳಿಗೆ ಅವುಗಳನ್ನು ನೋಡಲು, ಮುಟ್ಟಲು ಹಾಗೂ ಖಾದ್ಯ ವಸ್ತುವಾದರೆ ಆಘ್ರಾಣಿಸಲು ಮತ್ತು ರುಚಿ ನೋಡಲು ಅವಕಾಶ ದೊರೆತರೆ ವಿಷಯವು ಸ್ಪಷ್ಟಗೊಳ್ಳುವುದು ಮತ್ತು ಕಲ್ಪನೆಗಳು ಸರಿಯಾದ ದಿಕ್ಕಿನಲ್ಲಿ ಸಾಗುವವು. ಆದ್ದರಿಂದ ಸುಲಭದಲ್ಲಿ ದೊರೆಯುವಂತಹ ಮತ್ತು ತರಗತಿಯಲ್ಲಿ ತರಲಾಗುವಂತಹ ವಸ್ತುಗಳಿದ್ದರೆ ಅಥವಾ ಅವುಗಳೆಡೆಗೆ ಮಕ್ಕಳನ್ನು ಕರಕೊಂಡು ಹೋಗಲು ಸಾಧ್ಯವಿದ್ದರೆ ಅವುಗಳಿಂದ ಪ್ರಯೋಜನ ಪಡೆಯುವುದೊಳಿತು. ಸಣ್ಣ ಮಕ್ಕಳ ಮಟ್ಟಿಗೆ, ಹಾಗೆ ಮಾಡುವುದು ತೀರಾ ಅಗತ್ಯ. ಏಕೆಂದರೆ ಅವರ ಅನುಭವ ಮತ್ತು ವೀಕ್ಷಣೆಯು ಅಪೂರ್ಣ ಮತ್ತು ಸೀಮಿತವಾಗಿರುತ್ತದೆ. ಅವರು ಚಿತ್ರ, ನಕ್ಷೆ ಮತ್ತು ಚಾರ್ಟ್‌ಗಳಿಂದ ಚೆನ್ನಾಗಿ ಅರ್ಥೈಸಿಕೊಳ್ಳಲಾರರು. ಮೂಲ ವಸ್ತುವನ್ನು ಸಾದ್ಯಂತ ಅದರ ಹಿನ್ನೆಲೆಯಲ್ಲಿಯೇ ತೋರಿಸಬೇಕು. ವೀಕ್ಷಣೆಯ ವೇಳೆ ಪ್ರಮುಖ ಅಂಶಗಳೆಡೆಗೆ ಮಕ್ಕಳ ಗಮನವನ್ನು ಸೆಳೆಯಬೇಕು. ಅನ್ಯಥಾ ಹಲವು ವಿಷಯಗಳನ್ನು ಅವರು ಸ್ವಯಂ ನೋಡಲಾರರು ಮತ್ತು ವೀಕ್ಷಣಾ ಸಾಮರ್ಥ್ಯದ ತರಬೇತಿಯೂ ಆಗಲಾರದು.

ಆ) ಮಾದರಿ

ಭೂಗೋಳ, ಇತಿಹಾಸ ಮತ್ತು ಸಾಮಾನ್ಯ ವಿಜ್ಞಾನದಲ್ಲಿ ಹಲವು ದೃಶ್ಯಾವಳಿಗಳು ಹಾಗೂ ವಸ್ತುಗಳ ಕುರಿತು ಮಾಹಿತಿಗಳನ್ನು ನೀಡಬೇಕಾಗಿ ಬರುತ್ತದೆ. ಆ ಪೈಕಿ ಕೆಲವು ನಮ್ಮ

ಕೈಗೆಟುಕದಷ್ಟು ಅಂತರದಲ್ಲಿರುತ್ತವೆ, ಇನ್ನು ಕೆಲವದರಕಡೆಗೆ ತಲುಪುವುದು ಅಸಾಧ್ಯವಾಗಿರುತ್ತದೆ ಮತ್ತು ಕೆಲವು ತರಗತಿಗೆ ತರಲಾರದಷ್ಟು ದೊಡ್ಡದಾಗಿರುತ್ತವೆ. ಹಾಗಾಗಿ ಅನಿವಾರ್ಯವಾಗಿ ಅವುಗಳ ಮಾದರಿಯಿಂದ ಕೆಲಸ ಪಡೆಯ ಬೇಕಾಗುತ್ತದೆ. ಮಾದರಿಗಳನ್ನು ಅಗ್ಗದಲ್ಲಿ ಆದರೆ ಸ್ವಚ್ಛವಾಗಿ ತಯಾರಿಸಲು ಅಥವಾ ಖರೀದಿಸಲು ಪ್ರಯತ್ನಿಸಬೇಕು. ಮಾದರಿಯು ವಸ್ತುಗಳಿಗೂ ಇರುತ್ತವೆ, ದೃಶ್ಯಗಳಿಗೂ ಇರುತ್ತವೆ. ಅವು ಗೋಚರ ವಸ್ತುವಾಗಿರುವುದರಿಂದ ಮಕ್ಕಳಿಗೂ ಸುಲಭದಲ್ಲಿ ಅರ್ಥವಾಗುತ್ತವೆ. ಮಾತ್ರವಲ್ಲ, ಆಕರ್ಷಣೀಯವೂ ಆಗಿರುತ್ತದೆ. ಆದರೆ ಮಾದರಿಗಳು ಮೂಲ ವಸ್ತುವಿಗಿಂತ ಸಣ್ಣದಾಗಿರುವ ಕಾರಣ, ಅವುಗಳನ್ನು ನೋಡಿ ಮಕ್ಕಳಲ್ಲಿ ತಪ್ಪುಕಲ್ಪನೆ ಬೇರೂರಲಿಕ್ಕೂ ಸಾಕು. ಆದ್ದರಿಂದ ಮಾದರಿಗಳ ಜತೆಗೆ ಅವುಗಳ ನೈಜ ವಸ್ತುವಿನ ಚಿತ್ರವನ್ನು ತೋರಿಸಬೇಕು. ಆ ಮೂಲಕ ಅದರ ಗಾತ್ರ ಮತ್ತು ಹಿನ್ನೆಲೆ ಇತ್ಯಾದಿಗೆ ಸಂಬಂಧಿಸಿ ಸರಿಯಾದ ಕಲ್ಪನೆಯು ಸ್ಥಾಪಿತವಾಗಬಹುದು.

ಇ) ಚಿತ್ರ, ಪೋಸ್ಟರ್ ಇತ್ಯಾದಿ

ಮಕ್ಕಳು ಕಥೆಗಳಂತೆಯೇ ಚಿತ್ರಗಳನ್ನೂ ಇಷ್ಟಪಡುತ್ತಾರೆ. ಒಂದು ಚಿತ್ರ ಕಣ್ಣ ಮುಂದಿದ್ದರೆ ಅದನ್ನು ಗಮನವಿಟ್ಟು ನೋಡುತ್ತಾರೆ ಮತ್ತು ಅದರ ಬಗ್ಗೆ ಮಾಹಿತಿ ಗಳಿಸಲು ಇಷ್ಟಪಡುತ್ತಾರೆ. ಹಾಗಾಗಿ ವರ್ಣರಂಜಿತ ಪೋಸ್ಟರ್ ಮತ್ತು ಚಿತ್ರಗಳಿಂದ ಪಾಠವು ಆಸಕ್ತಿದಾಯಕವೂ ಆಗುತ್ತದೆ ಮತ್ತು ಅರ್ಥಪೂರ್ಣವೂ ಆಗುತ್ತದೆ. ಸ್ಪಷ್ಟ ಕಲ್ಪನೆಗಳನ್ನು ಸ್ಥಾಪಿಸಲಿಕ್ಕಾಗಿ ಅವುಗಳಿಂದ ಸಾಕಷ್ಟು ಸಹಕಾರ ಪಡೆಯಬಹುದಾಗಿದೆ. ಈ ವಿಷಯದಲ್ಲಿ ಗಮನದಲ್ಲಿರಿಸಬೇಕಾದ ಅಂಶಗಳನ್ನು ಇಲ್ಲಿ ನೀಡುತ್ತಿದ್ದೇವೆ.

- ಚಿತ್ರ ದೊಡ್ಡದಾಗಿ, ಸುಂದರ ಬಣ್ಣದಿಂದ ಕೂಡಿದ್ದು ಆಕರ್ಷಕವಾಗಿರಬೇಕು. ಅದರಲ್ಲಿ, ಮಕ್ಕಳಿಗೆ ತಿಳಿಸಬೇಕಾಗಿರುವಂತಹ ವಿವರಗಳನ್ನು ಮಾತ್ರವೇ ಎದ್ದು ಕಾಣುವಂತೆ ನಮೂದಿಸಿರಬೇಕು.
- ಸ್ವತಃ ರಚಿಸಿದ್ದರೆ ಅಥವಾ ಇತರ ಅಧ್ಯಾಪಕರ ಸಹಾಯದಿಂದ ರಚಿಸಿದ್ದರೆ ಉತ್ತಮ.
- ತನ್ನ ಪಠ್ಯ ವಿಷಯಕ್ಕೆ ಸಂಬಂಧಿಸಿದ ಚಿತ್ರಗಳನ್ನು ನಿರಂತರ ಸಂಗ್ರಹಿಸಿಡುವಂತಹ ಒಂದು ಅಲ್ಬಂ ಪ್ರತಿಯೋರ್ವ ಅಧ್ಯಾಪಕನ ಬಳಿಯೂ ಇರಬೇಕು. ಅದನ್ನು ಸಂದರ್ಭಾನುಸಾರ ವಿದ್ಯಾರ್ಥಿಗಳಿಗೆ ತೋರಿಸಲು ಸುಲಭವಾಗುತ್ತದೆ.
- ಪೋಸ್ಟರ್ ಇತ್ಯಾದಿಗಳನ್ನು ತಯಾರಿಸುವಲ್ಲಿ ದೊಡ್ಡ ಮಕ್ಕಳ ಸಹಕಾರ ಪಡೆಯಬಹುದು.
- ಪ್ರತಿಯೋರ್ವ ಅಧ್ಯಾಪಕನೂ ಆಧುನಿಕ ಚಿತ್ರಕಲೆಯನ್ನು ಅಭ್ಯಾಸ ಮಾಡಬೇಕು. ಸರಳವಾದ ರೇಖಾಚಿತ್ರಗಳನ್ನು ಸುಲಭದಲ್ಲಿ ಮತ್ತು ಕಡಿಮೆ ಸಮಯದಲ್ಲಿ ರಚಿಸಬಹುದಾಗಿದೆ. ಅಲ್ಲದೆ ಅವು ಬಹಳ ಪರಿಣಾಮಕಾರಿಯಾಗಿರುತ್ತವೆ. ಮಕ್ಕಳು ಅದನ್ನು ಬಹಳ ಇಷ್ಟಪಡುತ್ತಾರೆ.

ಈ) ನಕ್ಷೆ, ಚಾರ್ಟ್, ಗ್ರಾಫ್ ಇತ್ಯಾದಿ

ಎಂಟು-ಹತ್ತು ವರ್ಷದ ಮಕ್ಕಳು ಮೂಲ ವಸ್ತು ಅಥವಾ ಅದರ ಮಾದರಿ ಮತ್ತು ಚಿತ್ರಗಳಿಗಿಂತ ನಕ್ಷೆ ಮತ್ತು ಕೋಷ್ಟಕಗಳ ಸಹಾಯದಿಂದ ಹೆಚ್ಚು ಅರ್ಥ ಮಾಡಿಕೊಳ್ಳುತ್ತಾರೆ. ಆದ್ದರಿಂದ ಹಂತಹಂತವಾಗಿ ಅವುಗಳಿಂದ ಪ್ರಯೋಜನ ಪಡೆಯಲು ಪ್ರಾರಂಭಿಸಬೇಕು. ಇತಿಹಾಸದಲ್ಲಿ ನಕ್ಷೆ ಮತ್ತು ಟೈಮ್ ಚಾರ್ಟ್ ಮುಖಾಂತರ ಹಾಗೂ ಭೂಗೋಳ ಮತ್ತು ವಿಜ್ಞಾನದಲ್ಲಿ ವಿವಿಧ ರೀತಿಯ ಕೋಷ್ಟಕ, ನಕ್ಷೆ, ಗ್ಲೋಬ್, ಗ್ರಾಫ್ ಮತ್ತು ಚಾರ್ಟ್ ಇತ್ಯಾದಿಗಳಿಂದ ಸಹಾಯ ಪಡೆಯಬೇಕು.

ಉ) ಕ್ರಿಯೆ, ಅನುಭವ, ವೀಕ್ಷಣೆ:

ಮೌಖಿಕ ವಿವರಣೆಯ ಬದಲು ಮಕ್ಕಳಿಗೆ ಪ್ರಾಯೋಗಿಕವಾಗಿ ಮಾಡಿ ತೋರಿಸಿದರೆ, ಉದಾ: ನಮಾಝ್ ನಿರ್ವಹಿಸುವ ವಿಧಾನವನ್ನು ಮಾಡಿ ತೋರಿಸಿದರೆ, ಮಕ್ಕಳಿಗೆ ಸುಲಭದಲ್ಲಿ ಅರ್ಥವಾಗುತ್ತದೆ. ಇಂತಹ ಎಲ್ಲ ಸಂದರ್ಭಗಳಲ್ಲಿ ಮೌಖಿಕಕ್ಕಿಂತ ಪ್ರಾಯೋಗಿಕ ಪ್ರದರ್ಶನ ಹೆಚ್ಚು ಸೂಕ್ತವಾಗಿದೆ. ಅದೇ ರೀತಿ ಸಾಮಾನ್ಯ ವಿಜ್ಞಾನ ಮತ್ತು ಭೂಗೋಳ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಪ್ರಾಯೋಗಿಕವಾಗಿ ತೋರಿಸುವುದು ಮತ್ತು ಮಕ್ಕಳಿಗೂ ಪ್ರಾಯೋಗಿಕ ಅನುಭವ ಹಾಗೂ ವೀಕ್ಷಣೆಯ ಅವಕಾಶವನ್ನು ಒದಗಿಸಿಕೊಡುವುದು ಕೂಡಾ ವಿಷಯವನ್ನು ಸ್ಪಷ್ಟಪಡಿಸುವಲ್ಲಿ ಬಹಳ ಸಹಕಾರಿಯಾಗುತ್ತದೆ. ಅವುಗಳಿಂದಲೂ ಸಂಪೂರ್ಣ ಪ್ರಯೋಜನ ಪಡೆಯಬೇಕಾಗಿದೆ.

ಗಮನಾರ್ಹ ವಿಷಯಗಳು

- ವಿವರಣೆಯನ್ನು ಆಯ್ಕೆ ಮಾಡುವಾಗ ಮಕ್ಕಳ ಪ್ರಾಯ, ಬೌದ್ಧಿಕ ಸಾಮರ್ಥ್ಯ ಮತ್ತು ಆಸಕ್ತಿಗಳನ್ನು ಪರಿಗಣಿಸಬೇಕಾಗುತ್ತದೆ. ಏಕೆಂದರೆ ಅದು ಮಕ್ಕಳಿಗೆ ಗಮನಾರ್ಹವಾಗಿಯೂ ಅರ್ಥಪೂರ್ಣವಾಗಿಯೂ ಕಾಣಬೇಕಾಗಿದೆಯಷ್ಟೇ. ಈ ಮೂಲಕ ವಿಷಯವೂ ಚೆನ್ನಾಗಿ ಮನವರಿಕೆಯಾಗುವುದು ಮತ್ತು ನೆನಪಿನಲ್ಲಿಯೂ ಉಳಿಯುವುದು.
- ಯಾವ ವಿಷಯದ ವಿವರಣೆಗೆ ಈ ವಸ್ತುಗಳನ್ನು ಬಳಸಲಾಗುತ್ತಿರುವುದೋ ಅದಕ್ಕೆ ಈ ವಸ್ತುಗಳು ನೇರವಾಗಿ ಸಂಬಂಧಿಸಿರಬೇಕು. ಅದೇ ರೀತಿ ಸಾದ್ಯಂತ ಅಗತ್ಯದ ವಿವರಣೆಗಳನ್ನಷ್ಟೇ ಹೊಂದಿರಬೇಕು. ಸಂಬಂಧವಿಲ್ಲದ ಮತ್ತು ಅನಗತ್ಯ ವಿವರಣೆಗಳಿಂದ ವಿಷಯವು ಸ್ಪಷ್ಟವಾಗುವುದರ ಬದಲು ಇನ್ನಷ್ಟು ಜಟಿಲವಾಗಿ ಪರಿಣಮಿಸುವುದು.
- ಪ್ರತಿಯೋರ್ವ ವಿದ್ಯಾರ್ಥಿಯೂ ಚೆನ್ನಾಗಿ ನೋಡಿ ಕಲಿಯುವಂತಾಗಲು, ತರಗತಿಯ ಮುಂದೆ ಸ್ಪಷ್ಟವಾಗಿ ಅಚ್ಚುಕಟ್ಟಾಗಿ ಇರಿಸಬೇಕು. ಗಮನಾರ್ಹ ಅಂಶಗಳೆಡೆಗೆ ಸೂಕ್ತ ಪ್ರಶ್ನೆ ಅಥವಾ ಮಾರ್ಗದರ್ಶನಗಳ ಮೂಲಕ ಮಕ್ಕಳ ಗಮನವನ್ನು ಸೆಳೆಯಬೇಕು.

ಈ ಮೂಲಕ ಅಗತ್ಯದ ವಿಷಯಗಳು ವೀಕ್ಷಣೆಯಿಂದ ತಪ್ಪಿಹೋಗದಂತೆ ನೋಡಿಕೊಳ್ಳಬಹುದು.

- ವಿವರಣೆಗಳಿಗೆ ಸಂಬಂಧಿಸಿ ಮಕ್ಕಳಿಗೆ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಲು ಅವಕಾಶ ನೀಡಿದಷ್ಟೂ ಹೆಚ್ಚು ಪ್ರಯೋಜನಕಾರಿಯಾಗುತ್ತದೆ. ಉದಾ: ನೋಡುವ, ಸ್ಪರ್ಶಿಸುವ, ಆಘ್ರಾಣಿಸುವ, ರುಚಿ ನೋಡುವ, ಶಬ್ದ ಬರುವಂತಹ ವಸ್ತುವಿದ್ದರೆ ಅದನ್ನು ಆಲಿಸುವ ಅವಕಾಶ. ಈ ಪ್ರಕಾರ ಹೆಚ್ಚು ಸ್ಪಷ್ಟವಾದ ಕಲ್ಪನೆಯು ರೂಪು ತಾಳುತ್ತದೆ.
- ಪ್ರಾಥಮಿಕ ಹಂತದಲ್ಲಿ ಮೂಲವಸ್ತು ಅಥವಾ ಅದರ ಮಾದರಿಯನ್ನು ತೋರಿಸಬೇಕು. ಕ್ರಮೇಣ ಹಂತಹಂತವಾಗಿ ಚಿತ್ರ, ನಕ್ಷೆ ಮತ್ತು ಗ್ರಾಫ್ ಇತ್ಯಾದಿಗಳಿಂದ ಸಹಾಯ ಪಡೆಯಬೇಕು.
- ಎಲ್ಲ ವಿವರಣಾ ವಸ್ತುಗಳನ್ನು ಒಟ್ಟಿಗೇ ಮಕ್ಕಳ ಮುಂದೆ ತರಬಾರದು. ಬದಲಾಗಿ ಅದನ್ನು ಮರೆಯಲ್ಲಿರಿಸಬೇಕು. ತರುವಾಯ ಸಂದರ್ಭ ಮತ್ತು ಅಗತ್ಯಾನುಸಾರ ಒಂದೊಂದಾಗಿ ತರಗತಿಯ ಮುಂದೆ ತರಬೇಕು. ಅನ್ಯಥಾ, ಮಕ್ಕಳ ಗಮನ ಬೇರೆಡೆಗೆ ಹೊರಳುತ್ತದೆ. ಅಲ್ಲದೆ ಕುತೂಹಲ ಹೊರಟು ಹೋದ ಮೇಲೆ, ಆ ಪೂರಕ ವಸ್ತುವನ್ನು ತೋರಿಸುವಾಗ ಇರಬೇಕಾದ ಆಕರ್ಷಣೆಯೂ ಇಲ್ಲವಾಗಿ ಬಿಡುತ್ತದೆ.
- ವಸ್ತುಗಳನ್ನು ಮಕ್ಕಳ ಮುಂದೆ ಇರಿಸಿದ ಕೂಡಲೇ ಅಲ್ಲಿಂದ ತೆರವುಗೊಳಿಸಬಾರದು. ಬದಲಾಗಿ ಅವರಿಗೆ ಸಮಾಧಾನವಾಗುವ ವರೆಗೆ ಮತ್ತು ಅಗತ್ಯದ ವಿಷಯ ಮನವರಿಕೆಯಾಗುವ ವರೆಗೆ ಅವರ ಮುಂದೆ ಇರಿಸಬೇಕು.
- ಪ್ರತಿಯೊಂದು ಶಾಲೆಯಲ್ಲಿಯೂ ನಕ್ಷೆ, ಗ್ಲೋಬ್, ಮಾದರಿ, ಆಲ್ಬಂ, ಪೋಸ್ಟರ್‌ಗಳು, ಚಿತ್ರ, ಚಾರ್ಟ್ ಮತ್ತಿತರ ವಸ್ತುಗಳನ್ನು ಸಂಗ್ರಹಿಸುವ ಹಾಗೂ ರಚಿಸುವ ವ್ಯವಸ್ಥೆಯಾಗಬೇಕು. ಏಕೆಂದರೆ ಪಾಠ ಮಾಡುವಾಗ ವಿಷಯವನ್ನು ಪರಿಣಾಮಕಾರಿ ಹಾಗೂ ಆಸಕ್ತಿದಾಯಕಗೊಳಿಸಲು ಅಧ್ಯಾಪಕರಿಗೆ ಅವುಗಳಿಂದ ಸಹಾಯ ಪಡೆಯಲು ಸುಲಭವಾಗಬೇಕು. ಇಂದು ಹಲವು ಸಂಸ್ಥೆಗಳು ತರತರದ ಪಠ್ಯ ವಿಷಯಗಳಿಗೆ ಸಂಬಂಧಿಸಿದ ವಸ್ತುಗಳನ್ನು ತಯಾರಿಸುವ ಕಾರ್ಯದಲ್ಲಿ ನಿರತವಾಗಿವೆ.

6. ಶೈಕ್ಷಣಿಕ ಪ್ರವಾಸ, ಪಿಕ್‌ನಿಕ್ ಇತ್ಯಾದಿ

ಸಾಮಾಜಿಕ ಮತ್ತು ಪ್ರಾಕೃತಿಕ ಪರಿಸರಕ್ಕೆ ಸಂಬಂಧಿಸಿದಂತೆ, ಪುಸ್ತಕದಿಂದ ಸ್ಪಷ್ಟ ಕಲ್ಪನೆ ಸಿಗಲು ಸಾಧ್ಯವಿಲ್ಲದಂತಹ ಮತ್ತು ತರಗತಿಯಲ್ಲಿ ಕೂರಿಸಿ ಸಾಂಪ್ರದಾಯಿಕ ಬೋಧನೆಯಿಂದ ತಿಳಿಸಿಕೊಡಲಾಗದಂತಹ ಹಲವು ಪಾಠಗಳು ಪಠ್ಯಪುಸ್ತಕದಲ್ಲಿರುತ್ತವೆ. ಅವುಗಳ ಕುರಿತು, ಮಕ್ಕಳನ್ನು ಆಯಾ ಸ್ಥಳಕ್ಕೆ ಕರೆದುಕೊಂಡು ಹೋಗಿಯೇ ಅವುಗಳ ದರ್ಶನ

ಮಾಡಿಸುವುದರಿಂದಷ್ಟೇ ಸರಿಯಾದ ಮಾಹಿತಿ ದೊರೆಯಬಲ್ಲುದು. ಉದಾ: ಕಾರ್ಖಾನೆ, ಮಾರುಕಟ್ಟೆ, ನದಿ, ನಾಲೆ, ಹೊಲ-ಗದ್ದೆಗಳು ಮತ್ತು ಪ್ರಾಕೃತಿಕ ದೃಶ್ಯಾವಳಿಗಳು ಇತ್ಯಾದಿ. ಅದೇ ರೀತಿ ಕೆಲವು ಸಾಮೂಹಿಕ, ವೈಯಕ್ತಿಕ ಮತ್ತು ಸಾಮಾಜಿಕ ಗುಣಗಳ ತರಬೇತಿಯನ್ನು ತರಗತಿಯಲ್ಲಿ ಕುಳಿತು ನೀಡಲು ಕಷ್ಟಸಾಧ್ಯ. ಆದಕ್ಕಾಗಿ ಮುಕ್ತ ವಾತಾವರಣಕ್ಕೆ ಕರಕೊಂಡು ಹೋಗಲೇ ಬೇಕಾಗುತ್ತದೆ.

ಸಾಂಪ್ರದಾಯಿಕ ಬೋಧನೆಯಿಂದ ಸಾಮಾನ್ಯವಾಗಿ ಮಕ್ಕಳು ಭಯಪಡುತ್ತಾರೆ ಮತ್ತು ರಜಾದಿನಗಳನ್ನು ಕಾತರದಿಂದ ಕಾಯುತ್ತಿರುತ್ತಾರೆ. ಅದೇ ವೇಳೆ ಪ್ರವಾಸಗಳಲ್ಲಿ ಅವರಿಗೆ ಬಹಳ ಸಂತೋಷ ದೊರೆಯುತ್ತದೆ. ಅವರು ಅದರಲ್ಲಿ ಬಹಳ ಆಸಕ್ತಿ ಮತ್ತು ತತ್ಪರತೆಯಿಂದ ಪಾಲುಗೊಳ್ಳುತ್ತಾರೆ. ಅದರಲ್ಲಿ ಎದುರಾಗಬಹುದಾದ ಕಷ್ಟ-ತೊಂದರೆಗಳನ್ನು ಸಂತೋಷದಿಂದ ಸಹಿಸುತ್ತಾರೆ ಕೂಡ. ಹಾಗಾಗಿ ಶಿಕ್ಷಣ-ತರಬೇತಿಯ ಇಂತಹ ಪ್ರಯೋಜನಕಾರಿ ಮತ್ತು ಪರಿಣಾಮಕಾರಿ ಮಾಧ್ಯಮದಿಂದ ಸಹಾಯ ಪಡೆಯಲು ಸಾದ್ಯಂತ ಶ್ರಮಪಡಬೇಕಾದುದು ಅಗತ್ಯ ಎಂಬುದು ಸ್ಪಷ್ಟ.

ಶೈಕ್ಷಣಿಕ ಪ್ರವಾಸಗಳು ಶೈಕ್ಷಣಿಕ ಉದ್ದೇಶಗಳಿಗಾಗಿಯೇ ಇರಬೇಕು. ಹಾಗೆಯೇ ಪಿಕ್‌ನಿಕ್‌ಗಳಲ್ಲಿ ತರಬೇತಿ. ಆದರೆ ತರಗತಿಯ ವಾತಾವರಣ ಇಲ್ಲಿಯೂ ಆವರಿಸಿರಬೇಕೆಂದು ಇದರ ಅರ್ಥ ಅಲ್ಲ, ಬದಲಾಗಿ ಅರ್ಹ ಮೇರೆಯೊಳಗೆ ಮಕ್ಕಳಿಗೆ ಸ್ವಾತಂತ್ರ್ಯ, ಆಸಕ್ತಿ ಮತ್ತು ವಿಹಾರದ ಸಂಪೂರ್ಣ ಅವಕಾಶವನ್ನೀಯಬೇಕು.

ಶೈಕ್ಷಣಿಕ ಉದ್ದೇಶಗಳೆಂದರೆ, ಯಾವ ದೃಶ್ಯ/ವಸ್ತುವಿನ ವೀಕ್ಷಣೆಯ ಉದ್ದೇಶವನ್ನಿರಿಸಲಾಗಿದೆಯೋ ಮಕ್ಕಳು ಆ ದೃಶ್ಯ/ವಸ್ತುವನ್ನು ಚೆನ್ನಾಗಿ ವೀಕ್ಷಿಸುವಂತಾಗಬೇಕು; ಅವರ ವೀಕ್ಷಣಾ ಸಾಮರ್ಥ್ಯದ ತರಬೇತಿಯಾಗಬೇಕು, ಅವರ ಕಲ್ಪನೆಗಳು ಸ್ಪಷ್ಟಗೊಳ್ಳಬೇಕು, ಜ್ಞಾನದಲ್ಲಿ ಹೆಚ್ಚಳವಾಗಬೇಕು. ಪಾಠದ ಉದ್ದೇಶ ಚೆನ್ನಾಗಿ ಪೂರೈಸಲ್ಪಡಬೇಕು. ಅಂತೆಯೇ ಪ್ರಾಕೃತಿಕ ಮತ್ತು ಸಾಮಾಜಿಕ ಪರಿಸರ ಹಾಗೂ ಅವುಗಳ ವಸ್ತುಗಳ ಬಗ್ಗೆ ಸರಿಯಾದ ಜ್ಞಾನವನ್ನು ಗಳಿಸುವ ಆಸಕ್ತಿಯು ಬೆಳೆದು ಬರಬೇಕು.

ತರಬೇತಿಯ ಉದ್ದೇಶಗಳೆಂದರೆ, ಮಕ್ಕಳು ನಡೆ-ನುಡಿ ಮತ್ತು ಭೇಟಿಯ ಶಿಷ್ಟಾಚಾರವನ್ನು ಕಲಿಯಬೇಕು, ಪ್ರಯಾಣ ಮತ್ತದರ ವ್ಯವಸ್ಥೆಯ ಅನುಭವ ಗಳಿಸಬೇಕು, ಹಂಚಿ ತಿನ್ನುವ ಗುಣ ಬೆಳೆಸಬೇಕು, ಪರಸ್ಪರ ಸಹಕರಿಸಬೇಕು, ಮನೆಯ ಹೊರಗಿನ ಪರಿಶ್ರಮ ಜೀವನದ ಅನುಭವವಾಗಬೇಕು. ಅಂತೆಯೇ ಯಾತ್ರೆಯಲ್ಲಿ ಅನ್ನ-ಪಾನೀಯ, ನಮಾಝ್ ಮತ್ತು ವಿಶ್ರಾಂತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಗತ್ಯದ ವ್ಯವಸ್ಥೆಗೆ ಹಾದಿ ಸುಗಮಗೊಳಿಸುವ ಪ್ರತಿಭೆ ಬೆಳೆಯಬೇಕು.

ಪ್ರಾರಂಭಿಕ ತರಗತಿಗಳಲ್ಲಿ ಈ ಕಾರ್ಯಕ್ರಮವು ಹೆಚ್ಚು ದೀರ್ಘವಾಗಿರಬಾರದು. ಸಣ್ಣ ಮಕ್ಕಳ ಮಟ್ಟಿಗೆ ಸಾಮಾನ್ಯವಾಗಿ ಒಂದೆರಡು ಗಂಟೆಯ ಮತ್ತು ಶಾಲೆಗೆ ಹತ್ತಿರವಿರುವ

ಪ್ರೇಕ್ಷಣೀಯ ಸ್ಥಳಗಳಿಗೆ ಪಿಕ್‌ನಿಕ್ ಹೋಗುವ ವ್ಯವಸ್ಥೆ ಸಾಕು. ದೊಡ್ಡ ಮಕ್ಕಳಿಗಾದರೆ ಶಾಲೆಯಿಂದ ಅನತಿ ದೂರದ ಸ್ಥಳಗಳಿಗೆ ಅರ್ಧ ದಿನ, ಅಗತ್ಯವಿದ್ದರೆ ಒಂದು ದಿನದ ಪ್ರವಾಸ ಕಾರ್ಯಕ್ರಮವನ್ನಿಡುವುದೊಳಿತು. ಇದು ವಾರಾಂತ್ಯದಲ್ಲಿ ಅಥವಾ ರಜಾದಿನಗಳ ಆರಂಭದಲ್ಲಿ ಇರಿಸಿದರೆ ಇನ್ನೂ ಉತ್ತಮ. ಏಕೆಂದರೆ ಮರಳಿ ಬಂದ ಮೇಲೆ ವಿಶ್ರಾಂತಿಗೆ ಭರಪೂರ ಅವಕಾಶವೂ ಒದಗಬೇಕು. ಇಡೀ ದಿನದ ಕಾರ್ಯಕ್ರಮದಲ್ಲಿ ಶೈಕ್ಷಣಿಕ ಮತ್ತು ತರಬೇತಿಯ ಎರಡೂ ಉದ್ದೇಶಗಳನ್ನು ಈಡೇರಿಸಲು ಸಾಧ್ಯವಿದೆ.

ಗಮನಾರ್ಹ ವಿಷಯಗಳು

ಈ ಕೆಳಗಿನ ವಿಷಯಗಳನ್ನು ಪರಿಗಣಿಸಿದರೆ, ಶೈಕ್ಷಣಿಕ ಪ್ರವಾಸ ಮತ್ತು ಪಿಕ್‌ನಿಕ್‌ಗಳ ಉದ್ದೇಶವನ್ನು ಚೆನ್ನಾಗಿ ಈಡೇರಿಸಬಹುದಾಗಿದೆ.

- ವಿದ್ಯಾರ್ಥಿಗಳ ಸಂಖ್ಯೆಯು ಸಂಭಾಳಿಸಲು ಸಾಧ್ಯವಾಗುವಷ್ಟರ ಮಟ್ಟಿಗೆ ಸೀಮಿತ ಇರಬೇಕು.
- ಹೊರಡುವುದಕ್ಕೆ ಮುಂಚೆ, ಪ್ರವಾಸದ ಉದ್ದೇಶವನ್ನು ಮಕ್ಕಳಿಗೆ ಚೆನ್ನಾಗಿ ಮನವರಿಕೆ ಮಾಡಿಸಬೇಕು.
- ಮಕ್ಕಳ ಸಲಹೆಯನ್ನು ಕೇಳಿಯೇ ಪ್ರಯಾಣದ ರೂಪುರೇಷೆಯನ್ನು ತಯಾರಿಸಬೇಕು. ಅಗತ್ಯದ ವಸ್ತುಗಳ ಪಟ್ಟಿಯನ್ನು ತಯಾರಿಸಬೇಕು ಮತ್ತು ಅವುಗಳನ್ನು ತರುವ ಹಾಗೂ ಮೇಲ್ನೋಟವಿರಿಸುವ ಕೆಲಸವನ್ನು ವಿದ್ಯಾರ್ಥಿಗಳ ಆಯ್ದ ತಂಡಗಳಿಗೇ ವಹಿಸಿ ಕೊಡಬೇಕು.
- ತಲುಪುವ ಸ್ಥಳಕ್ಕೆ ಮೊದಲು ಅಧ್ಯಾಪಕರು ಹೋಗಿ ಪರಿಶೀಲಿಸಿ ಬರಬೇಕು.
- ಆದಷ್ಟು ಕಡಿಮೆ ಸಮಯ ಮತ್ತು ಹಣ ಖರ್ಚಾಗುವಂತೆ ನೋಡಬೇಕು. ಏಕೆಂದರೆ ಪ್ರವಾಸವು ಶಿಕ್ಷಣಕ್ಕೆ ಅಡ್ಡಿ ಮತ್ತು ಜೇಬಿಗೆ ಭಾರವಾಗಿ ಪರಿಣಮಿಸಬಾರದು.
- ಎಲ್ಲ ಕೆಲಸವನ್ನು ಸಾಧ್ಯಂತ ಮಕ್ಕಳಿಂದಲೇ ಮಾಡಿಸಬೇಕು.
- ಅರ್ಹ ಮೇರೆಯೊಳಗೆ ಮಕ್ಕಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು.

ಇತರ ಪೂರಕ ವಸ್ತುಗಳು

ಮೇಲಿನ ಅಂಶಗಳಲ್ಲದೆ, ಸಾಧ್ಯವಿದ್ದರೆ ಈ ಕೆಳಗಿನ ಅಂಶಗಳಿಂದಲೂ ಬೋಧನೆಯನ್ನು ಪರಿಣಾಮಕಾರಿ ಮತ್ತು ಆಸಕ್ತಿದಾಯಕಗೊಳಿಸಲು ಸಾಧ್ಯವಿದೆ. ಅಲ್ಲದೆ ವಿದ್ಯಾರ್ಥಿಗಳಿಗೆ ಹಲವು ವಿಧದ ಹೊಸ ವಿಷಯಗಳನ್ನು ಇವುಗಳ ಸಹಾಯದಿಂದ ಕಲಿಸಬಹುದಾಗಿದೆ.

- ರೇಡಿಯೋ, ಟೆಲಿವಿಶನ್‌ಗಳ ಮುಖಾಂತರ ಮಕ್ಕಳ ಶಿಕ್ಷಣ-ತರಬೇತಿಯ ನಿಟ್ಟಿನಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳು.

- ಉಚ್ಚಾರ, ವ್ಯಾಕರಣಗಳಿಗೆ ಸಂಬಂಧಿಸಿ ಪಾಠಗಳುಳ್ಳ ಗ್ರಾಮೋಫೋನ್ ರೆಕಾರ್ಡ್(ಈಗಿನ ಕಾಲದ ಸಿ.ಡಿ.)ಗಳು.
- ಮ್ಯಾಜಿಕ್ ಲ್ಯಾಂಟೀನುಗಳ ಮುಖಾಂತರ ತೋರಿಸಲಾಗುವ ಚಿತ್ರ ಮತ್ತು ದೃಶ್ಯಗಳು.
- ಮಕ್ಕಳ ಚಲನಚಿತ್ರ, ವಿಶೇಷತಃ ಶಿಕ್ಷಣ-ತರಬೇತಿಗಾಗಿ ತಯಾರಿಸಲ್ಪಟ್ಟವುಗಳು.
- ಬಾಲಸಾಹಿತ್ಯ ಮತ್ತು ಮಕ್ಕಳಿಗಾಗಿಯೇ ಹೊರಡಿಸಲಾಗುವ ಪತ್ರಿಕೆ, ನಿಯತಕಾಲಿಕಗಳು.

7. ಮನೆಗೆಲಸ (Home Work)

ಓದು-ಬರಹ ಅಥವಾ ಪ್ರಾಯೋಗಿಕ ಮತ್ತು ನೈತಿಕ ತರಬೇತಿಗಾಗಿ ಮನೆಯಲ್ಲಿ ಮಾಡಲು ನೀಡುವ ಕೆಲಸಗಳನ್ನು ಹೋಮ್‌ವರ್ಕ್ ಎನ್ನಲಾಗುತ್ತದೆ.

ಮಕ್ಕಳಲ್ಲಿ ಅವರವರ ಎತ್ತರಕ್ಕೆ ಅನುಗುಣವಾಗಿ ಸಾಕಷ್ಟು ಶಕ್ತಿ ಇರುತ್ತದೆ. ಅವರು ಸದಾ ಏನಾದರೊಂದು ಚಟುವಟಿಕೆಯನ್ನು ಬಯಸುತ್ತಿರುತ್ತಾರೆ. ಮಕ್ಕಳು ಶಾಲೆಯಲ್ಲಿ ಕೆಲವು ಗಂಟೆಗಳನ್ನಷ್ಟೇ ಕಳೆಯುತ್ತಾರೆ. ಮನೆಯಲ್ಲಿಯೂ ಅವರಿಗೆ ಹೇಳಿಕೊಳ್ಳುವಂತಹ ಕೆಲಸ ಇರುವುದಿಲ್ಲ, ಹಾಗಾಗಿ ಅವರಲ್ಲಿ ಹೆಚ್ಚಿನ ಶಕ್ತಿ ಇನ್ನೂ ಉಳಿದಿರುತ್ತದೆ ಮತ್ತು ಬಿಡುವಿನ ಸಮಯವೂ ಬಹಳ ಇರುತ್ತದೆ. ಆದರೆ ಸೂಕ್ತ ಮಾರ್ಗದರ್ಶನ ಮತ್ತು ಕೆಲಸ ಇರದ ಕಾರಣ ಹೆಚ್ಚಿನ ವೇಳೆ ಅವರ ಶಕ್ತಿಯು ತಪ್ಪು ದಿಕ್ಕಿನಲ್ಲಿ ಬಳಕೆಯಾಗುತ್ತದೆ. ಹೀಗೆ ಅವರ ಅಮೂಲ್ಯ ಸಮಯ ಮತ್ತು ಶಕ್ತಿಯು ವ್ಯರ್ಥ ಹಾಗೂ ನಿಷ್ಪ್ರಯೋಜಕ ಕಾರ್ಯಗಳಲ್ಲಿ ವ್ಯಯವಾಗುತ್ತದೆ. ಹಾಗಾಗಿ ಮಕ್ಕಳ ಅತಿರಿಕ್ತ ಶಕ್ತಿ ಮತ್ತು ಬಿಡುವಿನ ಸಮಯವನ್ನು ಉಪಯುಕ್ತ ಮತ್ತು ಲಾಭದಾಯಕಗೊಳಿಸುವುದಕ್ಕಾಗಿ ಅವರಿಗೆ ಮನೆಗೆಲಸವನ್ನು ನೀಡುವುದು ತೀರಾ ಅಗತ್ಯ.

ಮನೆಗೆಲಸ ನೀಡುವ ಸಾಂಪ್ರದಾಯಿಕ ವಿಧಾನ ಹೇಗಿರುತ್ತದೆಂದರೆ, ಓದು ಬರೆಹ, ಪದಗಳ ಅರ್ಥ, ಗದ್ಯ-ಅನುವಾದ ಮತ್ತು ವ್ಯಾಕರಣದ ಅಭ್ಯಾಸಗಳು ಅಥವಾ ಗಣಿತದ ಸಮಸ್ಯೆಗಳನ್ನು ಪರಿಹರಿಸುವ ಯಾವ ಶುಷ್ಕ ಕೆಲಸವನ್ನು ದಿನವಿಡೀ ಶಾಲೆಯಲ್ಲಿ ಮಾಡಿಸಲಾಗುತ್ತದೋ ಅದರ ಉಳಿದ ಭಾಗವನ್ನು ಮನೆಯಲ್ಲಿ ಪೂರ್ತಿಗೊಳಿಸಲು ನೀಡಲಾಗುತ್ತದೆ. ಅದನ್ನು ಪೂರ್ತಿಗೊಳಿಸುವುದು ಪೋಷಕರ ಹೊಣೆ ಎಂದು ಭಾವಿಸಲಾಗುತ್ತದೆ. ಹಾಗಾಗಿ ಅದನ್ನು ಕೊಟ್ಟ ಸಮಯದಲ್ಲಿ ಪೂರ್ಣಗೊಳಿಸಿ ತರುವ ವಿದ್ಯಾರ್ಥಿಗಳನ್ನು ಆಜ್ಞಾಪಾಲಕರೆಂದು ಪರಿಗಣಿಸಲಾಗುತ್ತದೆ. ಹಾಗೆಯೇ ಈ ನಿಟ್ಟಿನಲ್ಲಿ ಸಂಪೂರ್ಣ ಸಹಕರಿಸುವ ಪೋಷಕರು ಒಳ್ಳೆಯವರೆಂದು ಪರಿಗಣಿಸಲ್ಪಡುತ್ತಾರೆ. ಅದಕ್ಕಾಗಿ ಅವರಿಗೆ ಟ್ಯೂಟರ್‌ಗಳನ್ನು ನೇಮಿಸಬೇಕಾಗಿ ಬಂದರೂ ಸರಿ. ತದ್ವಿರುದ್ಧವಾಗಿ ಮನೆಗೆಲಸವನ್ನು ಪೂರ್ತಿಗೊಳಿಸಿ ತರದ ವಿದ್ಯಾರ್ಥಿಯು ಶಿಕ್ಷೆಗೆ ಅರ್ಹನಾಗುತ್ತಾನೆ. ಹಾಗೆಯೇ ಅದಕ್ಕಾಗಿ

ಸೂಕ್ತ ಬಂದೋಬಸ್ತು ಮಾಡದಂತಹ ಪೋಷಕರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ. ಮನೆಗೆಲಸದ ಈ ಸಾಂಪ್ರದಾಯಿಕ ವಿಧಾನದಲ್ಲಿ ಹಲವು ನ್ಯೂನತೆಗಳಿವೆ. ಆದ್ದರಿಂದ ಆ ಬಗ್ಗೆ ಬಹಳಷ್ಟು ಟೀಕೆಗಳು ವ್ಯಕ್ತವಾಗುತ್ತಿವೆ. ಉದಾ:

- ಮಕ್ಕಳ ಮೇಲೆ ಕೆಲಸದ ಹೊರೆ ಬೀಳುತ್ತದೆ. ಅದರಿಂದ ಅವರ ಮೇಲೆ ಪ್ರತಿಕೂಲ ಪರಿಣಾಮವುಂಟಾಗುತ್ತದೆ.
- ಯಾವ ಕೆಲಸವನ್ನು ಮಕ್ಕಳು ದಿನವಿಡೀ ಶಾಲೆಯಲ್ಲಿ ಮಾಡಿರುತ್ತಾರೋ ಮತ್ತು ಅದರಿಂದಾಗಿ ಸುಸ್ತಾಗಿರುತ್ತಾರೋ ಅವೇ ಕೆಲಸಗಳನ್ನು ಮನೆಯಲ್ಲಿ ಮಾಡಬೇಕಾಗಿ ಬರುವಾಗ, ಅದನ್ನವರು ಬಿಟ್ಟಿ ಕೆಲಸವೆಂದೇ ಭಾವಿಸತೊಡಗುವರು. ಹಾಗಾಗಿ ಅದನ್ನು ಮನಃ ಪೂರ್ವಕ ಮಾಡಲು ಅವರು ಸಿದ್ಧರಾಗುವುದಿಲ್ಲ, ತತ್ಪರಿಣಾಮವಾಗಿ ಮನೆಗೆಲಸವನ್ನು ಪೂರ್ತಿಗೊಳಿಸಲಿಕ್ಕಾಗಿ ಅವರನ್ನು ಶಿಕ್ಷಿಸಲಾಗುತ್ತದೆ. ಅದರಿಂದಾಗಿ ಮಕ್ಕಳು ಶಿಕ್ಷಣದಿಂದ ದೂರವೇ ಓಡತೊಡಗುತ್ತಾರೆ.
- ಮಕ್ಕಳಿಗೆ ತಮ್ಮ ಇಷ್ಟದ ಹವ್ಯಾಸಗಳಲ್ಲಿ ಮುಕ್ತವಾಗಿ ತೊಡಗಿಕೊಳ್ಳಲು ಸಮಯ ಸಿಗುವುದಿಲ್ಲ.
- ಮಕ್ಕಳ ಕೌಟುಂಬಿಕ ಜೀವನವೇ ಹಾಳಾಗುತ್ತದೆ. ತಮ್ಮ ಸೋದರ-ಸೋದರಿಯರೊಡನೆ ಆಟವಾಡಲು ಮತ್ತು ಪ್ರೀತಿಯಿಂದ ವ್ಯವಹರಿಸಲು, ಮನೆಯ ಕೆಲಸಗಳಲ್ಲಿ ಸಹಾಯ ಮಾಡಲು, ಮಾತಾಪಿತರ ಸೇವೆಗೈಯಲು ಮತ್ತು ಸಾಮಾಜಿಕ ಸಂಬಂಧಗಳನ್ನು ಸ್ಥಾಪಿಸಲು ಮಕ್ಕಳಿಗೆ ಸಮಯಾವಕಾಶವೇ ದೊರೆಯುವುದಿಲ್ಲ.
- ಇನ್ನು ಎಷ್ಟೋ ಮಕ್ಕಳಿಗೆ ಮನೆಯಲ್ಲಿ ಹೋಮ್‌ವರ್ಕ್ ಮಾಡಲು ಅವಕಾಶ ಇಲ್ಲದಂತಹ ಪರಿಸ್ಥಿತಿ ಇರುತ್ತದೆ ಅಥವಾ ಅವರಿಗೆ ಸ್ವಯಂ ಮಾಡಲಾಗುವುದಿಲ್ಲ. ಅಂತಹ ಮಕ್ಕಳು ಶಿಕ್ಷೆಯ ಭಯದಿಂದ ಇತರರನ್ನು ನಕಲು ಮಾಡಲು ಮತ್ತು ಅಧ್ಯಾಪಕರಿಗೆ ಮೋಸ ಮಾಡಲು ಕಲಿತುಕೊಳ್ಳುತ್ತಾರೆ.
- ಅಧ್ಯಾಪಕನು ತನ್ನ ಹೊಣೆಗಾರಿಕೆಯಿಂದ ನುಣಿಚಿಕೊಳ್ಳುತ್ತ ಅದನ್ನು ಪೋಷಕರ ಮೇಲೆ ಹೇರುತ್ತಾನೆ. ಹೀಗೆ ವಿದ್ಯಾರ್ಥಿಗಳೇ ಕೊನೆಯಲ್ಲಿ ಚಿಂತೆಗೀಡಾಗುತ್ತಾರೆ.

ಮಹತ್ವ ಮತ್ತು ಪ್ರಯೋಜನಗಳು

ಆದರೆ ಈ ಆಕ್ಷೇಪ, ಟೀಕೆಗಳೆಲ್ಲವೂ ಮನೆಗೆಲಸದ ಪ್ರಮಾಣ, ವಿಧಾನ ಮತ್ತು ಆ ಕುರಿತ ಅಧ್ಯಾಪಕನ ವ್ಯವಹಾರಗಳಿಗೆ ಸಂಬಂಧಿಸಿದ್ದಾಗಿವೆ. ಇವು ನಿವಾರಣೆಯಾದುವೆಂದರೆ ಮನೆಗೆಲಸದ ಮಹತ್ವ ಮತ್ತು ಪ್ರಯೋಜನಗಳ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯ ಇರಲಾರದು. ಮನೆಗೆಲಸವನ್ನು ನೀಡುವ ರೀತಿಯಲ್ಲಿ ನೀಡಿದರೆ ಮತ್ತು ಅದನ್ನು ಸಹಾನುಭೂತಿಯೊಂದಿಗೆ ಪರಿಶೀಲಿಸಿದರೆ, ಅದು ಶಿಕ್ಷಣದ ಅತಿ ಪರಿಣಾಮಕಾರಿ ಮಾಧ್ಯಮವಾಗುವುದರಲ್ಲಿ ಸಂಶಯವಿಲ್ಲ. ಅದರಿಂದ ಈ ಕೆಳಗಿನ ಪ್ರಯೋಜನಗಳಿವೆ:

- ಮಕ್ಕಳು ಬಿಡುವಿನ ಸಮಯವನ್ನು ಹುಡುಗಾಟಿಕೆ ಅಥವಾ ತುಂಟಾಟದಲ್ಲಿ ಕಳೆಯುವ ಬದಲು ಮನೆಯಲ್ಲಿಯೇ ಇದ್ದುಕೊಂಡು ಪ್ರಯೋಜನಕಾರಿ ಕೆಲಸಗಳಲ್ಲಿ ವ್ಯಯಿಸುವರು.
- ಇತರರ ಸಹಾಯ, ಹಸ್ತಕ್ಷೇಪವಿಲ್ಲದೆ ಸ್ವಯಂ ಪಟ್ಟಿ ತಯಾರಿಸಿ ಕೆಲಸ ಮಾಡುವ ಪ್ರತಿಭೆ ಬೆಳೆಯುತ್ತದೆ ಹಾಗೂ ಸ್ವತಂತ್ರ ಅಧ್ಯಯನದ ಅಭ್ಯಾಸವೂ ಆಗುತ್ತದೆ.
- ತರಗತಿಯಲ್ಲಿ ಮಾಡಿದ ಕೆಲಸಗಳ ಅಭ್ಯಾಸ ಮಾಡಲು ಮತ್ತು ಅದರಲ್ಲಿ ಪರಿಣತಿ ಹೊಂದಲು ಹಾಗೂ ಕಲಿತ ವಿಷಯಗಳನ್ನು ಪರಿಶೀಲಿಸಲು ಅಥವಾ ಪುನರಾವರ್ತಿಸಲು ಅವಕಾಶವೊದಗುತ್ತದೆ.
- ಪಠ್ಯೇತರ ಚಟುವಟಿಕೆಗಳು ಮತ್ತು ಹವ್ಯಾಸಗಳು ಈಗ ಪಠ್ಯದ ಪ್ರಮುಖ ಅಂಶವಾಗಿ ಪರಿಗಣಿಸಲ್ಪಡುತ್ತವೆಯಾದ್ದರಿಂದ ಅವುಗಳನ್ನು ಈಡೇರಿಸುವಲ್ಲಿ ಸಹಾಯವೊದಗುತ್ತದೆ. ಅಲ್ಲದೆ ಹೆಚ್ಚು ಆಸಕ್ತಿ ಇರುವ ವಿಷಯ ಅಥವಾ ಹವ್ಯಾಸದಲ್ಲಿ ಹೆಚ್ಚು ಗಮನ ಹರಿಸಲು ಅವಕಾಶ ದೊರೆಯುತ್ತದೆ.
- ಮಕ್ಕಳು ಸ್ವಯಂ ಮಾಡಬಲ್ಲಂತಹ ಕೆಲವು ಕಾರ್ಯಗಳಿವೆ. ಅವುಗಳಲ್ಲಿ ಅಧ್ಯಾಪಕನ ಶ್ರಮ ವ್ಯಯವಾಗುವುದು ತಪ್ಪುತ್ತದೆ. ಹಾಗಾಗಿ ಆ ಉಳಿದ ಸಮಯವನ್ನು ಬೋಧನೆಯ ಇತರ ಅಗತ್ಯ ಕಾರ್ಯಗಳಿಗೆ ಬಳಸುವ ಅವಕಾಶ ಅಧ್ಯಾಪಕನಿಗೆ ಒದಗಿ ಬರುತ್ತದೆ.
- ಸಮಾಜದ ಜಟಿಲತೆ ಮತ್ತು ವಿಸ್ತಾರದ ಹೆಚ್ಚಳದೊಂದಿಗೇ ಬೆಳೆಯುತ್ತಿರುವ ಪಠ್ಯಪದ್ಧತಿಯನ್ನು ನಿಭಾಯಿಸಲು ಮನೆಗೆಲಸದ ಸಹಾಯವಿಲ್ಲದೆ ಸಾಧ್ಯವಾಗದು.
- ಪೋಷಕರಿಗೆ ತಮ್ಮ ಮಕ್ಕಳ ಪ್ರಗತಿಯ ಗತಿಯ ಅರಿವಾಗುವುದು. ಅವರು ಅಧ್ಯಾಪಕನ ಸಹಕಾರದಿಂದ ಮತ್ತು ಸಲಹೆಯಂತೆ ಸೂಕ್ತ ಕ್ರಮಕೈಗೊಳ್ಳಬಲ್ಲರು. ಈ ಪ್ರಕಾರ, ಮನೆಗೆಲಸವು ಪೋಷಕರೊಂದಿಗಿನ ಸಂಪರ್ಕ ಹಾಗೂ ಶಾಲೆ ಮತ್ತು ಮನೆಯ ಸಹಕಾರದ ಮಾಧ್ಯಮವಾಗುವುದು.
- ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ. ಅವರು ತಮ್ಮ ಜ್ಞಾನ ಹಾಗೂ ಅಭ್ಯಾಸ-ಪರಿಣತಿಯ ಹೆಚ್ಚಳಕ್ಕಾಗಿ ನಿಯಮಿತವಾಗಿ ಪರಿಶ್ರಮ ಪಡುವುದನ್ನು ಕಲಿಯುವರು.
- ಮನೆಗೆಲಸದ ಮುಖಾಂತರ ವಿದ್ಯಾರ್ಥಿಗಳಲ್ಲಿ ಬಿಡುವಿನ ಸಮಯವನ್ನು ಸದುಪಯೋಗ ಪಡಿಸುವ ಆಸಕ್ತಿಯು ಹುಟ್ಟಿ ಬೆಳೆಯುತ್ತದೆ.

ಗಮನಾರ್ಹ ವಿಷಯಗಳು

ಮನೆಗೆಲಸ ನೀಡುವಾಗ ಮಕ್ಕಳ ಪ್ರಾಯ, ದೈಹಿಕ-ಬೌದ್ಧಿಕ ಸ್ಥಿತಿ, ಅವರ ಮನೆಯ ಪರಿಸ್ಥಿತಿ, ಅವರ ಪ್ರತಿಭೆ-ಸಾಮರ್ಥ್ಯ ಮತ್ತು ಆಸಕ್ತಿಗಳನ್ನು ಗಮನದಲ್ಲಿರಿಸಬೇಕಾಗಿದೆ.

ಮಕ್ಕಳ ಬಾಲ್ಯವು ತಿನ್ನಲು ಮತ್ತು ಆಟವಾಡಲು ಇರುತ್ತದೆ. ಅವರಿಗೆ ಅದರ ಸಂಪೂರ್ಣ ಅವಕಾಶ ಇರಬೇಕು. ಆರೇಳು ವರ್ಷ ಪ್ರಾಯದ ವರೆಗೆ ಅವರಿಗೆ ಯಾವುದೇ ಮನೆಗೆಲಸವನ್ನು ನೀಡದಿರುವುದೇ ಉತ್ತಮ. ಹತ್ತು ವರ್ಷ ಪ್ರಾಯದವರೆಗೆ ತರಗತಿಯಲ್ಲಿ ಕಲಿಸಿದಷ್ಟರ ಮೇಲೆಯೇ ಭರವಸೆಯಿಡಬೇಕು. ಆದರೆ ಶಾಲೆಯ ವಸ್ತು ಸಂಗ್ರಹಾಲಯಕ್ಕಾಗಿ ಹೂ, ಎಲೆ, ಹಕ್ಕಿಪುಕ್ಕ, ಹೂಗಳ ಬೀಜ, ಚಿಪ್ಪು, ಗಾಜು ಮತ್ತು ಪಿಂಗಾಣಿಯ ಸುಂದರ ತುಂಡುಗಳು, ಅಂಚೆ ಚೀಟಿ, ಚಿತ್ರ ಇತ್ಯಾದಿಗಳನ್ನು ಸಂಗ್ರಹಿಸುವ ಕೆಲಸವನ್ನು ಅವರಿಗೆ ನೀಡಬಹುದು. ಅಂತೆಯೇ ವೀಕ್ಷಣೆ ಮತ್ತು ಜ್ಞಾನದಲ್ಲಿ ಹೆಚ್ಚಳವನ್ನುಂಟು ಮಾಡಲು ವ್ಯವಸ್ಥಿತ ಕಾರ್ಯಕ್ರಮದ ಅಂಗವಾಗಿ ಪ್ರವಾಸ ಹೊರಡುವುದು, ಗಿಡ ನೆಡುವುದು, ಪಾರಿವಾಳ, ಆಡು, ಮೊಲ ಇತ್ಯಾದಿಗಳನ್ನು ಸಾಕುವುದು; ಮಾದರಿ ಅಥವಾ ಯಾವುದಾದರೂ ವಸ್ತುವಿನ ಚಿತ್ರ ರಚನೆ, ಮನೆಯ ಕೆಲಸಗಳಲ್ಲಿ ಸಹಾಯ, ಮಾತಾಪಿತರ ಸೇವೆ, ಬಡವರು ನಿರ್ಗತಿಕರಿಗೆ ಸಹಾಯ, ಕಿರಿಯ ಸೋದರ-ಸೋದರಿಯರ ಪಾಲನೆ, ಮಸೀದಿಯ ಸ್ವಚ್ಛತೆ ಇತ್ಯಾದಿ ಕೆಲಸಗಳನ್ನು ನೀಡಬಹುದು ಅಥವಾ ಓದಲು ಸರಳ ಭಾಷೆಯ ಚಿತ್ರ ಕಥೆ, ಸಾಧಕರ ವೃತ್ತಾಂತ, ಅಭಿಯಾನ ಮತ್ತು ಪ್ರವಾಸ ಕಥನ; ಸರಳವಾದ ಕವನ ಸಾಲು ಇತ್ಯಾದಿಗಳನ್ನೂ ನೀಡಬಹುದು. ನಂತರದ ತರಗತಿಗಳಲ್ಲಿಯೂ ವಿದ್ಯಾರ್ಥಿಗಳ ವೈಯಕ್ತಿಕ ಆಸಕ್ತಿ, ಸಾಮರ್ಥ್ಯ, ಮನೆಯ ಪರಿಸ್ಥಿತಿ, ಮನೆಯಲ್ಲಿ ಅವರ ಹೊಣೆಗಾರಿಕೆ, ಮಾತಾಪಿತರ ಕೆಲಸ ಕಾರ್ಯಗಳು, ರೋಗರುಜಿನಗಳು, ಆರ್ಥಿಕ ಸ್ಥಿತಿ ಇತ್ಯಾದಿಗಳನ್ನು ಪರಿಗಣಿಸಬೇಕು. ಅಲ್ಲದೆ ಇತರರ ಸಹಾಯವಿಲ್ಲದೆ ಸೀಮಿತ ಸಮಯದಲ್ಲಿ ಮಕ್ಕಳು ಸ್ವತಃ ಮಾಡಿ ಮುಗಿಸಬಲ್ಲಂತಹ ಕೆಲಸವನ್ನಷ್ಟೇ ಅವರಿಗೆ ನೀಡಬೇಕು.

- ಬೇರೆ ಬೇರೆ ವಿಷಯಗಳ ಅಧ್ಯಾಪಕರು ಒಟ್ಟು ಸೇರಿ ಮನೆಗೆಲಸದ ಒಂದು ವೇಳಾಪಟ್ಟಿಯನ್ನು (Time Table) ತಯಾರಿಸಬೇಕು. ಇದರಿಂದ ಅವರು ನೀಡಿದ ಮನೆಗೆಲಸದಲ್ಲಿ ಸೌಲಭ್ಯ ಒದಗುತ್ತದೆ ಮತ್ತು ಮಕ್ಕಳ ಮೇಲೆ ಹೆಚ್ಚು ಭಾರವೂ ಆಗಲಾರದು. ಅಲ್ಲದೆ ಪ್ರತಿಯೋರ್ವ ಅಧ್ಯಾಪಕನೂ ತನ್ನ ಸರದಿಯಲ್ಲಿ ಅಗತ್ಯದ ಮನೆಗೆಲಸವನ್ನು ನೀಡಬಲ್ಲನು. ಪ್ರಾಧ್ಯಾಪಕರು ಈ ಕುರಿತಾಗಿ ವಿಶೇಷ ಗಮನವನ್ನು ಹರಿಸಬೇಕು. ಅನ್ಯಥಾ ಪ್ರತಿಯೋರ್ವ ಅಧ್ಯಾಪಕನೂ ತನ್ನ ಪಾಠದ ಬಗ್ಗೆಯೇ ಹೆಚ್ಚು ಕೆಲಸ ಪಡೆಯಲು ಬಯಸುತ್ತಾನೆ ಮತ್ತು ಇದರಿಂದ ಮಕ್ಕಳಿಗೆ ವಿನಾ ಕಾರಣ ಸಂಕಷ್ಟ ಪಡಬೇಕಾಗಿ ಬರುತ್ತದೆ. ಅದೇ ರೀತಿ ಸೀಮಿತ ಮತ್ತು ನಿರ್ಧಾರಿತ ಸಮಯಕ್ಕಿಂತ ಹೆಚ್ಚು ಕೆಲಸ ಪಡೆಯದಿರಲಿಕ್ಕಾಗಿ ವೇಳಾಪಟ್ಟಿಯ ಪಾಲನೆಯು ನ್ಯಾಯಯುತವಾಗಿರಬೇಕು.
- ಶಾಲೆಗಳಲ್ಲಿ ರಜೆಗಳನ್ನು ನೀಡುವುದೇಕೆಂದರೆ, ಮಕ್ಕಳು ಪಾಠದ ಚಿಂತೆಯಿಂದ ಮುಕ್ತರಾಗಿ ಇತರ ಕಾರ್ಯಚಟುವಟಿಕೆಗಳಲ್ಲಿ ಆಸಕ್ತಿ ವಹಿಸಲಿ ಮತ್ತು ತೊಡಗಿಕೊಳ್ಳಲಿ ಎಂಬುದಕ್ಕಾಗಿದೆ. ಆದರೆ ಅಧ್ಯಾಪಕರು ಸಾಮಾನ್ಯವಾಗಿ ರಜಾದಿನಗಳಲ್ಲೂ ಶೈಕ್ಷಣಿಕ

ರೂಪದ ಮನೆಗೆಲಸದ ಹೊರೆಯನ್ನೇ ಮಕ್ಕಳ ಮೇಲೆ ಹೊರಿಸಿ ಬಿಡುತ್ತಾರೆ. ಇದು ಮಕ್ಕಳ ಸ್ವಭಾವಕ್ಕೆ ಭಾರವೂ ಆಗುತ್ತದೆ ಮತ್ತು ಇತರ ಆಸಕ್ತಿದಾಯಕ ಹಾಗೂ ಅಗತ್ಯದ ಚಟುವಟಿಕೆಗಳಿಂದಾಗಿ ಅದನ್ನು ಮಾಡದೆ ಇರುವ ಸಾಧ್ಯತೆಯೂ ಹೆಚ್ಚಿರುತ್ತದೆ. ತತ್ಪರಿಣಾಮವಾಗಿ ವಿನಾಕಾರಣ ಶಿಕ್ಷೆಗೀಡಾಗುತ್ತಾರೆ. ಈ ರಜಾಕಾಲವು ಮಕ್ಕಳ ಆರೋಗ್ಯ ಮತ್ತು ಶುಚಿತ್ವ; ದೈಹಿಕ, ನೈತಿಕ, ಧಾರ್ಮಿಕ ಹಾಗೂ ಸಾಮಾಜಿಕ ತರಬೇತಿಗಾಗಿ ವಿಸ್ತೃತ ಅವಕಾಶಗಳನ್ನು ಒದಗಿಸಿ ಕೊಡುತ್ತದೆ. ಆದ್ದರಿಂದ ರಜಾಕಾಲದಲ್ಲಿ ನೀಡಲಾಗುವ ಮನೆಗೆಲಸದಲ್ಲಿ ಈ ಎಲ್ಲ ಚಟುವಟಿಕೆಗಳನ್ನು ಒಳಗೊಂಡಿರುವಂತಿರಬೇಕು ಮತ್ತು ಮನೆಯ ಸದಸ್ಯರೂ ಅದರಲ್ಲಿ ಪಾಲುಗೊಳ್ಳುವಂತಿರಬೇಕು.

- ಕೋಪದಲ್ಲಿರುವಾಗ ಅಥವಾ ಶಿಕ್ಷೆಯ ರೂಪದಲ್ಲಿ ಎಂದಿಗೂ ಮನೆಗೆಲಸವನ್ನು ನೀಡಬಾರದು. ಅಂತೆಯೇ ಮಕ್ಕಳಿಗೆ ತೀರಾ ಕಷ್ಟ ಮತ್ತು ಪರಿಹರಿಸಲಾಗದಂತಹ ಕೆಲಸವನ್ನೂ ನೀಡಬಾರದು. ಬದಲಾಗಿ, ಮನೆಗೆಲಸಕ್ಕೆ ಅವರನ್ನು ಹುರಿದುಂಬಿಸಬೇಕು ಮತ್ತು ನೀಡುವಾಗ, 'ಸ್ವಲ್ಪ ಪ್ರಯತ್ನ ಪಟ್ಟರೆ ಪರಿಹರಿಸಲು ಸಾಧ್ಯ' ಎಂಬಂತೆ ಅವರಿಗೆ ಭರವಸೆಯನ್ನೂ ನೀಡಬೇಕು. ಅಲ್ಲದೆ, ಮಕ್ಕಳು ಸ್ವಂತ ಪ್ರಯತ್ನದಿಂದ ಮಾಡಿ ಮುಗಿಸಲು ಸಾಧ್ಯವಿರುವಂತಹ ಕೆಲಸವನ್ನಷ್ಟೇ ನೀಡುವುದೊಳಿತು. ಈ ರೀತಿಯಾಗಿ ಹೆಚ್ಚಿನ ಕೆಲಸಕ್ಕೆ ಅವರಲ್ಲಿ ಧೈರ್ಯ ತುಂಬುತ್ತದೆ. ಒಂದು ವೇಳೆ ಪ್ರಯತ್ನ ಪಟ್ಟು ಪರಿಹರಿಸಲಾಗದಂತಹ ಕೆಲಸವಾಗಿದ್ದರೆ, ಅವರಲ್ಲಿ ಹತಾಶೆ ಮೂಡುತ್ತದೆ ಮತ್ತು ಹೆಚ್ಚಿನ ಕೆಲಸಕ್ಕೆ ಅವರ ಮನಸ್ಸು ತಯಾರಾಗಲಾರದು.
- ಮನೆಗೆಲಸ ನೀಡುವಾಗ, ಅದರಿಂದ ಮಕ್ಕಳ ಬಿಡುವಿನ ವೇಳೆಯನ್ನು ಅವರ ಶಿಕ್ಷಣ-ತರಬೇತಿಯಲ್ಲಿ ಸೌಲಭ್ಯವೊದಗಿಸಲು ಸಹಕಾರಿಯಾಗುತ್ತದೆಂದೂ ಅವರು ಸ್ವಂತ ನೆಲೆಯಲ್ಲಿ ಅಧ್ಯಯನ ಅಥವಾ ಯಾವುದಾದರೂ ಪ್ರಯೋಜನಕಾರಿ ಹವ್ಯಾಸದಲ್ಲಿ ತೊಡಗಿಕೊಳ್ಳಲು ಸಹಾಯಕವಾಗುವುದೆಂದೂ ಅವರಿಗೆ ಮನವರಿಕೆ ಮಾಡಿಸಿ ಕೊಡಬೇಕು.
- ಉಪಯೋಗದ ರೀತಿ-ನೀತಿ, ಬಳಕೆಯ ವಿಧಾನ ಇತ್ಯಾದಿ ತಿಳಿಸುವ ಹಾಗೂ ಪ್ರಾಥಮಿಕ ಕೆಲಸಗಳನ್ನು ತರಗತಿಯಲ್ಲೇ ಮಾಡಿಸಬೇಕು. ತರುವಾಯ ಹೆಚ್ಚಿನ ಅಭ್ಯಾಸಕ್ಕಾಗಿ, ಮಕ್ಕಳು ಮನೆಯಲ್ಲಿ ಸ್ವತಃ ಪರಿಶ್ರಮ ಪಟ್ಟು ಪರಿಹರಿಸಲು ಸಾಧ್ಯವಾಗುವಂತಹ ಕೆಲಸಗಳನ್ನು ನೀಡಬೇಕು.
- ಮನೆಗೆಲಸವನ್ನು ತಕ್ಕ ಸಮಯದಲ್ಲಿ ಪರಿಶೀಲಿಸಬೇಕು. ಅಗತ್ಯವಿದ್ದಲ್ಲಿ ಸುಧಾರಣೆಯನ್ನೂ ಮಾಡಬೇಕು. ಅನ್ಯಥಾ ಮಕ್ಕಳ ಉತ್ಸಾಹ ತಣ್ಣಗಾಗಬಹುದು ಮತ್ತು ಅವರಲ್ಲಿ ಉದಾಸೀನತೆ ಮನೆ ಮಾಡಬಹುದು.

ಬರವಣಿಗೆಯ ಪರಿಶೀಲನೆ ಮತ್ತು ಸುಧಾರಣೆ

ಮಕ್ಕಳಿಗೆ ತರಗತಿಯಲ್ಲಿ ಮತ್ತು ಮನೆಯಲ್ಲಿ ಮಾಡಲು ನೀಡುವ ಬರವಣಿಗೆಯ ಕೆಲಸವನ್ನು ಪರಿಶೀಲಿಸುವುದು ಕಷ್ಟದ ಕೆಲಸವಾದರೂ ಅತಿ ಪ್ರಾಮುಖ್ಯದ್ದಾಗಿದೆ. ಏಕೆಂದರೆ ಅದರಿಂದ ಮಕ್ಕಳು ತಮ್ಮ ತಪ್ಪುಗಳನ್ನು ಅರಿತುಕೊಂಡು ಅದನ್ನು ಸುಧಾರಿಸಲು ಪ್ರಯತ್ನಿಸಬಹುದು.

ಈ ವಿಷಯದಲ್ಲಿ ಕೆಲವು ಪ್ರಮುಖ ಅಂಶಗಳನ್ನು ಇಲ್ಲಿ ನೀಡುತ್ತಿದ್ದೇವೆ:

- ಕೆಲಸ ಪೂರ್ತಿಯಾದ ತಕ್ಷಣವೇ ಅದನ್ನು ಪರಿಶೀಲಿಸಬೇಕು. ಅದರಲ್ಲಿ ಸುಧಾರಣೆಯನ್ನು ಮಾರ್ಗದರ್ಶನವೀಯುವ ಮುಖಾಂತರ ಸ್ವಯಂ ಮಗುವಿನಿಂದಲೇ ಮಾಡಿಸಿದರೆ ಉತ್ತಮ. ಅಲ್ಲದಿದ್ದರೂ ಕನಿಷ್ಠ ಮಗುವಿನ ಮುಂದೆಯೇ ಆಗಬೇಕು. ಈ ಪ್ರಕಾರ ಮಗುವಿಗೆ ತನ್ನ ತಪ್ಪುಗಳ ಅರಿವುಂಟಾಗುತ್ತದೆ ಮತ್ತು ಸುಲಭದಲ್ಲಿ ತನ್ನ ತಪ್ಪನ್ನು ತಿದ್ದಲೂ ಬಹುದು.
- ಬರವಣಿಗೆಯ ಕೆಲಸಕ್ಕೆ ಮುಂಚೆ ಮೌಖಿಕ ಅಭ್ಯಾಸ ಮಾಡಿಸಿದರೆ ತಪ್ಪುಗಳು ಕಡಿಮೆಯಾಗುತ್ತವೆ. ಅಲ್ಲದೆ ಸುಧಾರಣೆಯಲ್ಲಿ ಹೆಚ್ಚು ಕಷ್ಟವಾಗಲಾರದು.
- ತಿದ್ದುಪಡಿಗೆ ಕೆಲವು ಚಿಹ್ನೆಗಳನ್ನು ನಿಶ್ಚಯಿಸಿ ಅವುಗಳನ್ನು ಮಕ್ಕಳಿಗೆ ತಿಳಿಸಿ ಕೊಡಬೇಕು. ಈ ರೀತಿ ಕಡಿಮೆ ಸಮಯದಲ್ಲಿ ಸುಧಾರಣೆ ತರಲು ಸಾಧ್ಯ.
- ಸಮಾನ ತಪ್ಪುಗಳ ಸುಧಾರಣೆಯನ್ನು ಸಾಮೂಹಿಕವಾಗಿ ಮಾಡಿಸಬೇಕು. ಏಕೆಂದರೆ ಒಂದೇ ವಿಷಯವನ್ನು ಪ್ರತಿಯೊಬ್ಬರಿಗೂ ತಿಳಿಸಿಕೊಡಬೇಕಾಗಿ ಬರುವುದಿಲ್ಲ.
- ಉತ್ತಮ ಕೆಲಸಕ್ಕೆ ಸೂಕ್ತ ಷರಾ ಮತ್ತು ತಪ್ಪೆಸಗಿದರೆ ಅಗತ್ಯದ ಮಾರ್ಗದರ್ಶನ ನೀಡುತ್ತಿರಬೇಕು. ಇದರಿಂದ ಮುಂದಿನ ಕೆಲಸ ಸುಲಭವಾಗುತ್ತದೆ.

8. ಪಠ್ಯ ಪುಸ್ತಕ

ಬೋಧನೆಯ ಕಾರ್ಯದಲ್ಲಿ ಸೂಕ್ತ ಪಠ್ಯಪುಸ್ತಕಕ್ಕೆ ಬಹಳ ಮಹತ್ವ ಇದೆ. ಅದರಿಂದ ಅಧ್ಯಾಪಕನ ಕಾರ್ಯವು ಬಹಳ ಸುಲಭವಾಗುತ್ತದೆ. ಏಕೆಂದರೆ ಅದರಿಂದಾಗಿ ಪಾಠಗಳಿಗೆ ನೋಟ್ಸ್ ತೆಗೆದುಕೊಳ್ಳುವ ಮತ್ತು ಅಭ್ಯಾಸಗಳನ್ನು ತಯಾರಿಸುವ ಅಗತ್ಯ ತಲೆದೋರುವುದಿಲ್ಲ. ಕಡಿಮೆ ಪ್ರತಿಭೆಯುಳ್ಳ ಅಧ್ಯಾಪಕರೂ ಅದರಿಂದ ಚೆನ್ನಾಗಿ ಕೆಲಸ ಪಡೆಯಬಲ್ಲರು. ಅಭ್ಯಾಸ ಮತ್ತು ಪುನರಾವರ್ತನೆಗೆ ಮಕ್ಕಳ ಬಳಿ ಸದಾ ಪುಸ್ತಕದ ರೂಪದಲ್ಲಿ ನೋಟ್ಸ್ ಇರುತ್ತದೆ.

ಸೂಕ್ತ ಪಠ್ಯ ಪುಸ್ತಕದ ಆಯ್ಕೆ

ಮಾರುಕಟ್ಟೆಯಲ್ಲಿ ತರತರವಾದ ಪಠ್ಯ ಪುಸ್ತಕಗಳು ದೊರೆಯುತ್ತವೆ. ಆದರೆ ವಿವಿಧ ಕಾರಣಗಳಿಂದಾಗಿ ಅವುಗಳಲ್ಲಿ ವಿಷಯಗಳು ಕಡಿಮೆ ಸಿಗುತ್ತವೆ. ಮಕ್ಕಳಿಗಾಗಿ ಆಯ್ದುಕೊಳ್ಳಬಹುದಾದ ಪುಸ್ತಕಗಳ ವಿಶೇಷತೆ ಈ ಕೆಳಗಿನಂತಿರಬೇಕು-

- ಪಕ್ಷಪಾತ, ಸಂಕುಚಿತತೆ, ಸತ್ಯನಿಷೇಧ ಮತ್ತು ಬಹುದೇವ ವಿಶ್ವಾಸದಿಂದ ಮುಕ್ತವಿರಬೇಕು.
- ಉನ್ನತ ಜೀವನೋದ್ದೇಶ, ಪರಿಶುದ್ಧ ಜೀವನ ದರ್ಶನವನ್ನು ತೋರಿಸುವಂತಹ ಮತ್ತು ಚಾರಿತ್ರ್ಯವನ್ನು ಉತ್ತಮಗೊಳಿಸುವ ಹಾಗೂ ಚಿಂತನೆಗಳನ್ನು ಉನ್ನತಿಗೇರಿಸುವಂತಹ ವಿಷಯಗಳನ್ನು ಒಳಗೊಂಡಿರಬೇಕು.
- ಸರಳ ಭಾಷೆ ಮತ್ತು ನುಡಿಗಟ್ಟಿನಿಂದ ಕೂಡಿರಬೇಕು. ಆಕರ್ಷಕ ಶೈಲಿಯಲ್ಲಿ ಮಕ್ಕಳಿಗೆ ಆಸಕ್ತಿದಾಯಕ ಮತ್ತು ಅರ್ಥವಾಗುವ ರೀತಿಯಲ್ಲಿರಬೇಕು.
- ಪುಸ್ತಕದ ಕಾಗದ ಗಟ್ಟಿ, ಶೀರ್ಷಿಕೆಯು ಚಿತ್ತಾಕರ್ಷಕ, ಮುದ್ರಣವು ಸ್ವಚ್ಛವಾಗಿರಬೇಕು. ಅಕ್ಷರಗಳು ಸ್ಪಷ್ಟ ಮತ್ತು ದೊಡ್ಡದಾಗಿರಬೇಕು. ಬೆಲೆಯೂ ಕಡಿಮೆಯಿದ್ದು ಅದರ ಗಾತ್ರವು ಶಾಲೆಗೆ ತರಲು ಮತ್ತು ಕೊಂಡೊಯ್ಯಲು ಕಷ್ಟವಾಗದಂತಿರಬೇಕು. ಅಲ್ಲದೆ ಅದು ಸುಲಭದಲ್ಲಿ ಮಾರುಕಟ್ಟೆಯಲ್ಲಿ ಸಿಗುವಂತಿರಬೇಕು.
- ಪಠ್ಯದಲ್ಲಿ ಮಂಜೂರು ಮಾಡಲಾಗಿರುವ ವಿಷಯಗಳನ್ನು ಒಳಗೊಂಡಿರಬೇಕು. ಏಕೆಂದರೆ ಪುಸ್ತಕ ಬಿಟ್ಟು ಹೊರಗಿನಿಂದ ಸಹಾಯ ಪಡೆಯುವ ಅಗತ್ಯ ತಲೆದೋರಬಾರದು.
- ಆಕರ್ಷಕ ಬಣ್ಣದ ಚಿತ್ರ ಮತ್ತು ಅಗತ್ಯದ ಭಾವಚಿತ್ರ ಹಾಗೂ ಕೋಷ್ಟಕಗಳನ್ನು ಒಳಗೊಂಡಿರಬೇಕು.
- ಸೂಕ್ತ ಅಭ್ಯಾಸ ಮತ್ತು ಶಿಕ್ಷಣ ವಿಧಾನ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಗತ್ಯದ ಮಾರ್ಗದರ್ಶನಗಳನ್ನೂ ಹೊಂದಿರಬೇಕು.
- ಅದರ ತಯಾರಿಯಲ್ಲಿ ಪ್ರಸಕ್ತ ಪರಿಸ್ಥಿತಿ ಮತ್ತು ಅಗತ್ಯಗಳನ್ನು ಪರಿಗಣಿಸಿರಬೇಕು. ಅದರ ವಿಷಯಗಳು ಮಕ್ಕಳ ಅನುಭವ, ವೀಕ್ಷಣೆ ಮತ್ತು ದೈನಂದಿನ ಜೀವನಕ್ಕೆ ಸಂಬಂಧಿಸಿರುವಂತೆ ಇರಬೇಕು.
- ಅದರ ಪಾಠಗಳು ಮಕ್ಕಳ ಕುತೂಹಲವನ್ನು ಕೆರಳಿಸುವಂತೆ ಮತ್ತು ಅವರನ್ನು ಓದಲು ಪ್ರೇರೇಪಿಸುವಂತೆ ಇರಬೇಕು. ಅವರ ಗಮನವನ್ನು ತನ್ನೆಡೆಗೆ ಸೆಳೆಯುವಲ್ಲಿ ಮತ್ತು ಅವರ ಆಸಕ್ತಿಯನ್ನು ನಿರಂತರವಾಗಿರಿಸುವಲ್ಲಿ ಸಹಾಯಕವಾಗಿರಬೇಕು.

ಪಠ್ಯ ಪುಸ್ತಕದ ಬಳಕೆ

- ಕೇವಲ ಪಠ್ಯ ಪುಸ್ತಕವನ್ನು ಕಲಿಸುವುದಕ್ಕೆ ಸೀಮಿತವಾಗಬಾರದು. ಜತೆಗೆ ಅಗತ್ಯದ ವಿಷಯಗಳನ್ನು ತನ್ನ ವತಿಯಿಂದಲೂ ತಿಳಿಸಿ ಕೊಡಬೇಕು.
- ಪ್ರತಿಯೊಂದು ಪುಸ್ತಕದ ಎಲ್ಲ ಪಾಠಗಳೂ ಏಕಪ್ರಕಾರ ಅಗತ್ಯ ಮತ್ತು ಪ್ರಯೋಜನಕಾರಿಯಾಗಿರುವುದಿಲ್ಲ, ಆದ್ದರಿಂದ ಇಡೀ ಪುಸ್ತಕವನ್ನು ಪಾಠಗಳ

ಅನುಕ್ರಮದಲ್ಲಿ ಓದಿಸಲು ಮತ್ತು ಬಾಯಿಪಾಠ ಮಾಡಿಸಲು ಪ್ರಯತ್ನಿಸಬಾರದು. ಬದಲಾಗಿ ಕೆಲವು ಅನಗತ್ಯ ಅಥವಾ ಕಡಿಮೆ ಪ್ರಯೋಜನವುಳ್ಳ ಪಾಠಗಳನ್ನು ಕೈಬಿಟ್ಟು, ಆ ಜಾಗದಲ್ಲಿ ಅಗತ್ಯವಿದ್ದರೆ ಬೇರೆ ವಿಷಯವನ್ನು ಕಲಿಸಬೇಕು. ಅಂತೆಯೇ ಸುಲಭವಿರುವ ಪಾಠಗಳ ಕೆಲವು ಭಾಗವನ್ನು ಕಲಿಸಿ ಉಳಿದುದನ್ನು ಮಕ್ಕಳಿಗೆ ಸ್ವಯಂ ಕಲಿಯಲು ಬಿಟ್ಟು ಬಿಡಬೇಕು.

- ಅಭ್ಯಾಸ ಮತ್ತು ಶಿಕ್ಷಣ ವಿಧಾನಕ್ಕೆ ಸಂಬಂಧಿಸಿದ ಮಾರ್ಗದರ್ಶನಗಳು ಪಠ್ಯ ಪುಸ್ತಕದ ಜೀವಾಳವಾಗಿರುತ್ತವೆ. ಆದರೆ ಬಹಳ ಕಡಿಮೆ ಅಧ್ಯಾಪಕರು ಅದರಿಂದ ಸಂಪೂರ್ಣ ಪ್ರಯೋಜನ ಪಡೆಯುತ್ತಾರೆ. ಕೆಲವರಂತೂ ಅದನ್ನು ಸಂಪೂರ್ಣ ಕಡೆಗಣಿಸಿ ಬಿಡುತ್ತಾರೆ. ಇದು ಸರಿಯಲ್ಲ, ಅದರಿಂದ ಸಂಪೂರ್ಣ ಪ್ರಯೋಜನ ಪಡೆಯಲು ಪ್ರಯತ್ನಿಸಬೇಕು. ಅವುಗಳನ್ನು ಮೌಖಿಕ ಬರವಣಿಗೆಯ ಮೂಲಕ ಪರಿಹರಿಸಲು ಪ್ರಯತ್ನಿಸಬೇಕು.
- ಕಲಿಸುವಾಗ ತನ್ನ ವತಿಯಿಂದಲೂ ಪ್ರಶ್ನೆಗಳನ್ನು ಮತ್ತು ಅಭ್ಯಾಸಗಳನ್ನು ನೀಡುವ ಮೂಲಕ ಮಕ್ಕಳಿಗೆ ತೀಕ್ಷ್ಣಗುಣದ ಪರೀಕ್ಷೆ ಮಾಡಲು ಅವಕಾಶ ನೀಡಬೇಕು.
- ಕನಿಷ್ಠ ಪಠ್ಯಪುಸ್ತಕದಿಂದ ಕೆಲಸವಾಗುವಂತೆ ಪ್ರಯತ್ನಿಸಬೇಕು.
- ಭೂಗೋಳ, ಸಾಮಾನ್ಯ ವಿಜ್ಞಾನ ಮತ್ತಿತರ ಮಾಹಿತಿಪೂರ್ಣ ಪಾಠಗಳಲ್ಲಿ ಪಠ್ಯ ಪುಸ್ತಕದ ಜತೆಗೆ ವೀಕ್ಷಣೆ ಮತ್ತು ಅನುಭವದ ಬಗ್ಗೆ ಸಂಪೂರ್ಣ ಗಮನವೀಯಬೇಕು.

9. ಗ್ರಂಥಾಲಯ ಮತ್ತು ವಾಚನಾಲಯ

ಪಠ್ಯ ಪುಸ್ತಕಗಳು ಎಷ್ಟೇ ಉತ್ತಮ ಹಾಗೂ ಪ್ರಯೋಜನಕಾರಿಯಾಗಿದ್ದರೂ ಮಕ್ಕಳ ಜ್ಞಾನದ ಹೆಚ್ಚಳಕ್ಕಾಗಿ, ಪದಗಳ ಭಂಡಾರಕ್ಕಾಗಿ, ಅಧ್ಯಯನ ಬಲಕ್ಕೆ, ಪುಸ್ತಕದ ಮೇಲೆ ಆಸಕ್ತಿಗೆ, ಚಿಂತೆಯ ಔನ್ನತ್ಯಕ್ಕೆ, ಆದರ್ಶದ ಒಲವಿಗೆ, ಅಭಿಪ್ರಾಯ ಪ್ರಕಟನೆಯ ಸಾಮರ್ಥ್ಯಕ್ಕೆ, ಇತರರ ಚಿಂತನೆ ಮತ್ತು ದೃಷ್ಟಿಕೋನವನ್ನು ಅರಿಯುವ ಪ್ರತಿಭೆಗೆ ಹಾಗೂ ಬಿಡುವಿನ ಸಮಯದ ಸೂಕ್ತ ಬಳಕೆಗೆ ಇನ್ನಷ್ಟು ಉಪಯುಕ್ತ ಪುಸ್ತಕ, ಪತ್ರಿಕೆ ಮತ್ತು ನಿಯತಕಾಲಿಕ ಇತ್ಯಾದಿಗಳ ಅಧ್ಯಯನವೂ ಅಗತ್ಯ.

ಸ್ವತಃ ಅಧ್ಯಾಪಕರಿಗೂ ತಮ್ಮ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಲು, ತಮ್ಮ ಜ್ಞಾನವನ್ನು ಅಪ್‌ಡೇಟ್ ಆಗಿ ಇರಿಸಲು, ವಿವರಣೆಯಲ್ಲಿ ಸಹಾಯ ಪಡೆಯಲು ಮತ್ತು ವಿವರಗಳನ್ನು ಉಲ್ಲೇಖಿಸಲು ಪುಸ್ತಕ ಹಾಗೂ ನಿಯತಕಾಲಿಕಗಳ ಅಗತ್ಯ ಬೀಳುತ್ತದೆ. ಆದ್ದರಿಂದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಈ ಅಗತ್ಯಗಳ ಈಡೇರಿಕೆಗಾಗಿ ಪ್ರತಿಯೊಂದು ಶಾಲೆಯಲ್ಲೂ ಅದರದೇ ಆದ ಗ್ರಂಥಾಲಯ ಇರಬೇಕು. ಗ್ರಂಥಾಲಯದಲ್ಲಿ ಅಧ್ಯಾಪಕರು ಮತ್ತು ಎಲ್ಲ ಹಂತದ ಪ್ರಾಯ, ಸಾಮರ್ಥ್ಯ ಹಾಗೂ ಆಸಕ್ತಿಯಿರುವ ಮಕ್ಕಳಿಗಾಗಿ ಉಪಯುಕ್ತ ಮತ್ತು ಅಗತ್ಯದ ಪುಸ್ತಕಗಳ ಭಂಡಾರ ಇರಬೇಕು. ಅದರಲ್ಲಿ ವರ್ಷಂಪ್ರತಿ

ಗತ್ಯಾನುಸಾರ ಪುಸ್ತಕಗಳು ಸೇರ್ಪಡೆಯಾಗುತ್ತಲೂ ಇರಬೇಕು. ಗ್ರಂಥಾಲಯದ ಜತೆಗೇ ಾಚನಾಲಯವೂ ಇರಬೇಕಾದುದು ಅಗತ್ಯ. ಅದರಲ್ಲಿ ಮಕ್ಕಳ ಮತ್ತು ಹಿರಿಯರ ಸಕ್ತಿಯನುಸಾರ ಉತ್ತಮ ಪತ್ರಿಕೆ, ನಿಯತಕಾಲಿಕಗಳು ಬರುತ್ತಿರಬೇಕು. ಇದಕ್ಕಾಗಿ ಾಪನ್ಮೂಲದ ಕೊರತೆ ಇದ್ದರೆ, ಪುಸ್ತಕ ಮತ್ತು ಪತ್ರಿಕೆಗಳ ಪೂರೈಕೆಗಾಗಿ ಜನರಿಂದ ಹಕಾರವನ್ನೂ ಪಡೆಯಬಹುದಾಗಿದೆ. ಪತ್ರಿಕೆ, ನಿಯತಕಾಲಿಕಗಳನ್ನು ತರಿಸುವ ಅಥವಾ ಸ್ತಕಗಳನ್ನು ಖರೀದಿಸುವ ಸಹೃದಯಿಗಳಿಂದ ಅವುಗಳನ್ನು ಶಾಲೆಗಾಗಿ ಸಾಲದ ರೂಪದಲ್ಲಿ ಡೆಯಬಹುದಾಗಿದೆ ಅಥವಾ ಅವುಗಳ ಪೈಕಿ ಕೆಲವು ಓದಿದ ಬಳಿಕ ರುಪಯುಕ್ತವಾಗುತ್ತವೆ. ಅಂತಹವುಗಳನ್ನು ಶಾಲೆಯ ಗ್ರಂಥಾಲಯಕ್ಕೆಂದು ಶಾಶ್ವತವಾಗಿ ರಿಸಬಹುದು. ಕೆಲವು ಮನೆಗಳಲ್ಲಿ ಉತ್ತಮ ಪುಸ್ತಕಗಳ ಭಂಡಾರವೇ ನಿರುಪಯುಕ್ತವಾಗಿ ವ್ದಲುಗಳಿಗೆ ಆಹಾರವಾಗುತ್ತದೆ ಅಥವಾ ಮಕ್ಕಳು ಕಲಿತ ಪುಸ್ತಕಗಳು ಅಲ್ಲೇ ರುಪಯುಕ್ತವಾಗಿ ಬಿದ್ದುಕೊಂಡಿರುತ್ತವೆ. ಈ ಬಗ್ಗೆ ಗಂಭೀರವಾಗಿ ಚಿಂತಿಸಿದರೆ, ಉಚಿತವಾಗಿ ಥವಾ ಕಡಿಮೆ ಬೆಲೆಯಲ್ಲಿ ಅವುಗಳನ್ನು ಶಾಲೆಗಾಗಿ ಗಳಿಸಬಹುದಾಗಿದೆ. ಪತ್ರಿಕೆ, ಯತಕಾಲಿಕ ಮತ್ತು ಪುಸ್ತಕಗಳ ಪ್ರಕಾಶಕರು ಶಾಲೆಗಳಿಗೆ ಹಾಗೂ ಗ್ರಂಥಾಲಯಗಳಿಗೆ ಶೇಷ ರಿಯಾಯಿತಿಯನ್ನು ನೀಡುತ್ತಾರೆ. ಆದರಿಂದಲೂ ಪ್ರಯೋಜನ ಪಡೆಯಬಹುದು. ನಿವಾರ್ಯ ಕಾರಣಗಳಿಂದ ಶುಲ್ಕ ಅಥವಾ ದೇಣಿಗೆಯ ವ್ಯವಸ್ಥೆ ಮಾಡಬೇಕಾಗಿ ಂದರೂ, ಗ್ರಂಥಾಲಯದ ಅಗತ್ಯ ಮತ್ತು ಪ್ರಯೋಜನವನ್ನು ದೃಷ್ಟಿಯಲ್ಲಿರಿಸಿಕೊಂಡು ಆ ೀತಿಯೂ ಮಾಡಬಹುದಾಗಿದೆ.

ೆಯ್ಕೆ

ಪ್ರಕಾಶನದ ಸವಲತ್ತು ಹಾಗೂ ಶಿಕ್ಷಣದ ವ್ಯಾಪಕತೆಯ ಕಾರಣವಾಗಿ ಒಳ್ಳೆಯ, ಕೆಟ್ಟ ಲ್ಲ ರೀತಿಯ ಪುಸ್ತಕಗಳು ಪ್ರಕಟವಾಗುತ್ತವೆ ಮತ್ತು ಲಾಭದಾಯಕ, ನಷ್ಟಕಾರಕ ಎಲ್ಲ ರದ ಪತ್ರಿಕೆ, ನಿಯತಕಾಲಿಕಗಳು ಮುದ್ರಣಗೊಳ್ಳುತ್ತವೆ. ಹಾಗಾಗಿ ಅವುಗಳನ್ನು ಆಯ್ಕೆ ಾಡುವಲ್ಲಿ ಬಹಳ ಜಾಗರೂಕತೆ ವಹಿಸಬೇಕಾದ ಅಗತ್ಯವಿದೆ. ಶಾಲೆಗೆ ಪರಿಶುದ್ಧ ುತ್ತಮ ಹಾಗೂ ಪ್ರಯೋಜನಕಾರಿ ವಸ್ತುಗಳು ಮಾತ್ರವೇ ಬರಬೇಕು. ಅವುಗಳ ಆಯ್ಕೆಯ ೊಣೆಯನ್ನು ಕೇವಲ ಒಬ್ಬ ವ್ಯಕ್ತಿಗೆ ವಹಿಸಿ ಕೊಡಬಾರದು. ಬದಲಾಗಿ ಅಧ್ಯಯನಾಸಕ್ತರಾದ ುತ್ತು ಆಯ್ಕೆಯ ಸಾಮರ್ಥ್ಯವುಳ್ಳ ಹಲವು ಮಂದಿ ಅಧ್ಯಾಪಕರ ಸಲಹೆಯೊಂದಿಗಾಗಬೇಕು. ಯ್ಕೆ ಮಾಡುವಾಗ ವಿವಿಧ ಪ್ರಾಯ, ಆಸಕ್ತಿ ಮತ್ತು ಸಾಮರ್ಥ್ಯದ ವಿದ್ಯಾರ್ಥಿಗಳ ಭಿರುಚಿ ಮತ್ತು ಅಗತ್ಯದ ಜತೆಗೆ ವಿವಿಧ ಪಠ್ಯ ವಿಷಯಗಳೂ ದೃಷ್ಟಿಯಲ್ಲಿರಬೇಕು. ೊಡ್ಡದೊಡ್ಡ ಪ್ರಕಾಶನ ಸಂಸ್ಥೆಗಳು ವರ್ಷಂಪ್ರತಿ ತಮ್ಮ ಪ್ರಕಟನೆಗಳ ಸಂಕ್ಷಿಪ್ತ ಪರಿಚಯಗಳ ಟ್ಟಿಯನ್ನು ಬಿಡುಗಡೆ ಮಾಡುತ್ತವೆ. ಆಯ್ಕೆ ಮಾಡುವಾಗ ಅವುಗಳಿಂದಲೂ ಸಹಾಯ ದಗುತ್ತದೆ.

ಗ್ರಂಥಾಲಯದಲ್ಲಿ ಪಾಠಬೋಧಕ ಕಥೆ, ಪ್ರಸಂಗಗಳು, ಕವನ ಸಂಕಲನಗಳು ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳು ಹಾಗೂ ನಾಟಕಗಳು, ಪ್ರವಾದಿಗಳ ಮತ ಸಮಾಜ ಸುಧಾರಕರ ಚರಿತ್ರೆಗಳು, ಸಾಧಕರ ವೃತ್ತಾಂತಗಳು, ಸಂಶೋಧನೆಗಳ ವಿವರ ಯಾತ್ರಿಗಳ ಪ್ರವಾಸಕಥನ, ಇಸ್ಲಾಮಿಯಾತ್, ಸಾಹಿತ್ಯ, ಇತಿಹಾಸ, ಭೂಗೋಳ, ವಿಜ್ಞಾನ ಸಾಮಾನ್ಯ ಜ್ಞಾನ, ಕೈಗಾರಿಕೆ ಮತ್ತು ವಾಣಿಜ್ಯ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಸಣ ದೊಡ್ಡ ವಿವಿಧ ಪ್ರಕಾರದ ಪುಸ್ತಕಗಳು ಇರಬೇಕು. ಅಧ್ಯಾಪಕರಿಗಾಗಿ ವಿವಿಧ ಭಾಷೆಗ ನಿಘಂಟು, ಉಲ್ಲೇಖಗಳುಳ್ಳ ಪುಸ್ತಕ, ಮಕ್ಕಳ ಮನಃಶಾಸ್ತ್ರ ಮತ್ತು ಶಿಕ್ಷಣಕ್ಕೆ ಸಂಬಂಧಿಸಿ ಕೃತಿಗಳು, ಎನ್‌ಸೈಕ್ಲೋಪೀಡಿಯಾ ಇತ್ಯಾದಿಗಳನ್ನು ಇರಿಸಲು ಪ್ರಯತ್ನಿಸಬೇಕು.

ಏಳೆಂಟು ವರ್ಷಗಳ ವರೆಗೆ ಮಕ್ಕಳು ನಿರಂತರ ಓದಲು ಮತ್ತು ಕಲಿಯಲ ಶಕ್ತರಾಗಿರುವುದಿಲ್ಲ, ಆದ್ದರಿಂದ ಅವರಿಗಾಗಿ ಚಿತ್ರ ಕಥೆಗಳು ಅಥವಾ ಸರಳ ಭಾಷೆಯ ಮತ್ತು ದಪ್ಪಕ್ಷರಗಳಲ್ಲಿ ಮುದ್ರಿಸಲಾದ ಕಿರುಗತೆಗಳು, ಸಣ್ಣ ಸಣ್ಣ ವಾಕ್ಯಗಳುಳ್ಳ ಕವನಗ ಪುಸ್ತಕ ಇತ್ಯಾದಿಗಳನ್ನು ಇರಿಸಬೇಕು. ಇವೆಲ್ಲದರಲ್ಲಿ ದೊಡ್ಡದಾಗಿ ಚಿತ್ರಗಳ ಮುದ್ರಣಗೊಂಡಿರಬೇಕು. ಚಿತ್ರಗಳೂ ಆದಷ್ಟು ವರ್ಣರಂಜಿತವಾಗಿದ್ದರೆ ಇನ್ನೂ ಉತ್ತಮ

ಏಳೆಂಟು ವರ್ಷದಿಂದ ಹನ್ನೊಂದು-ಹನ್ನೆರಡು ವರ್ಷ ಪ್ರಾಯದ ವರೆಗಿನ ಮಕ್ಕಳಿ ಕಥೆ, ಶೋಧನೆ-ಸಂಶೋಧನೆ, ಪ್ರವಾಸ ಕಥನ, ಬೇಟೆ ಇತ್ಯಾದಿಗಳಿಗೆ ಸಂಬಂಧಿಸಿ ವೃತ್ತಾಂತಗಳುಳ್ಳ ಸರಳ, ಆಸಕ್ತಿಕರ ಮತ್ತು ಚಿತ್ರಗಳುಳ್ಳ ಪುಸ್ತಕಗಳೂ ಸೂಕ್ತವಾಗಿರುತ್ತದೆ.

ಹದಿಮೂರರಿಂದ ಹದಿನೆಂಟರ ವರೆಗಿನ ಮಕ್ಕಳು ಸಾಹಸಗಾಥೆಗಳು, ಪ್ರಸಿದ್ಧ ಸಾಧನೆಗಳು, ಉನ್ನತ ಚಾರಿತ್ರ್ಯವಂತರ ಆತ್ಮಕತೆಗಳು, ಶುದ್ಧ ಕತೆಗಳು, ಐತಿಹಾಸಿಕ ಮತ ಸುಧಾರಣಾತ್ಮಕ ಕಾದಂಬರಿಗಳು, ಸ್ಫೂರ್ತಿದಾಯಕ ಪದ್ಯಗಳು ಹಾಗೂ ಸಾಹಿತ್ಯದ ಪರಿಶು ಪ್ರಕಾರಗಳಿಂದ ಸಂಪೂರ್ಣ ಪ್ರಯೋಜನವನ್ನು ಪಡೆಯಬಲ್ಲರು. ಪುಸ್ತಕದ ಆಯ್ಕೆಯ ಈ ಪ್ರಾಯದ ಮಕ್ಕಳ ಆಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳಬೇಕು.

ಗಮನಾರ್ಹ ವಿಷಯಗಳು

- ಗ್ರಂಥಾಲಯ ಮತ್ತು ವಾಚನಾಲಯಕ್ಕೆ ಒಂದು ಕೋಣೆಯನ್ನು ಮೀಸಲಿರಿಸಬೇಕು ಅಲ್ಲಿ ಪುಸ್ತಕಗಳನ್ನು ಸುರಕ್ಷಿತವಾಗಿ, ಅಚ್ಚುಕಟ್ಟಾಗಿ ಇರಿಸಲು ಕಪಾಟುಗಳಿರಬೇಕು ಅದರ ಗೋಡೆಗಳು ನೀತಿವಾಕ್ಯ, ಗಾದೆಗಳು ಮತ್ತು ವರ್ಣರಂಜಿತ ಪೋಸ್ಟರ್‌ಗಳಿಂ ರಾರಾಜಿಸಿರಬೇಕು.
- ಪುಸ್ತಕಗಳಲ್ಲಿ ಆಸಕ್ತಿ ಇರುವ, ಅವುಗಳನ್ನು ಸುರಕ್ಷಿತ ಮತ್ತು ಅಚ್ಚುಕಟ್ಟಾಗಿ ಇರಿಸಬ ಹಾಗೂ ಅದಕ್ಕಾಗಿ ಸಾಕಷ್ಟು ಸಮಯ ನೀಡಬಲ್ಲ ಅಧ್ಯಾಪಕನನ್ನು ಗ್ರಂಥಪಾಲಕನನ್ನಾ ನೇಮಿಸಬೇಕು.

- ಯಾವ ಪುಸ್ತಕ ಎಲ್ಲಿದೆ, ಯಾವುದರಲ್ಲಿದೆ, ಏನೇನು ವಿಷಯವಿದೆ ಮತ್ತು ಯಾರಿಗೆ ಅದರಿಂದ ಪ್ರಯೋಜನವಿದೆ ಎಂಬಿತ್ಯಾದಿ ವಿಷಯಗಳು ಗ್ರಂಥಪಾಲಕನಿಗೆ ತಿಳಿದಿರಬೇಕು. ಪುಸ್ತಕ ಪಡೆಯಲು ಒಂದೊಂದು ತರಗತಿಗೂ ಒಂದೊಂದು ದಿನವನ್ನು ನಿಗದಿಪಡಿಸಬೇಕು. ಮಕ್ಕಳು ಪುಸ್ತಕ ಪಡೆಯಲು ಬಂದಾಗ, ಅವರೊಡನೆ ಉತ್ತಮ ರೀತಿಯಲ್ಲಿ ವ್ಯವಹರಿಸಬೇಕು. ಅವರ ಪ್ರಾಯ, ಯೋಗ್ಯತೆ, ಇಷ್ಟ ಮತ್ತು ಅಗತ್ಯಕ್ಕೆ ಅನುಗುಣವಾಗಿ ಸೂಕ್ತವಾದ ಪುಸ್ತಕವನ್ನು ತೋರಿಸಿಕೊಡಬೇಕು.
- ಗ್ರಂಥಾಲಯದ ಪುಸ್ತಕಗಳನ್ನು ಅಮಾನತ್ ಎಂದು ಭಾವಿಸಲು, ಸುರಕ್ಷಿತವಾಗಿ ಇರಿಸಲು ಕಲೆ–ಕೊಳೆಯಾಗದಂತೆ ಮತ್ತು ಹರಿಯದಂತೆ ನೋಡಿಕೊಳ್ಳಲು, ಅಂತೆಯೇ ನಿರ್ಧರಿತ ಸಮಯದೊಳಗೆ ಮರಳಿಸಲು ಮಕ್ಕಳಿಗೆ ತರಬೇತಿ ನೀಡಬೇಕು.
- ಮಕ್ಕಳಲ್ಲಿ ಪುಸ್ತಕ ಓದುವ ಅಭಿರುಚಿಯನ್ನು ಬೆಳೆಸುವ ಹೊಣೆ ಕ್ಲಾಸ್ ಟೀಚರ್‌ರದ್ದಾಗಿದೆ. ಪ್ರತಿಯೊಂದು ತರಗತಿಯ ಮಟ್ಟದ ಕೆಲವು ಪುಸ್ತಕಗಳನ್ನು ಆಯ್ದುಕೊಂಡು, ತರಗತಿಯಲ್ಲಿಯೂ ಅವುಗಳನ್ನು ಇರಿಸುವುದು ಉತ್ತಮ. ಅವುಗಳ ಸಹಾಯದಿಂದ ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಪಠ್ಯೇತರ ಅಧ್ಯಯನದ ಆಸಕ್ತಿಯನ್ನು ಹುಟ್ಟಿಸಬೇಕು. ಅಲ್ಲದೆ ಅಗತ್ಯ ಮತ್ತು ಇಚ್ಛೆಯಂತೆ ಸದಾ ಮಕ್ಕಳಿಗೆ ಪುಸ್ತಕಗಳು ಸಿಗುವಂತಿರಬೇಕು. ಅಧ್ಯಾಪಕರು ಕೆಲವೊಮ್ಮೆ ತರಗತಿಯಲ್ಲಿ ಉತ್ತಮ ಪುಸ್ತಕಗಳ ಪ್ರಸ್ತಾಪವನ್ನು ಎತ್ತುತ್ತಾ ಇರಬೇಕು. ಅವುಗಳ ಉದ್ಧರಣೆಗಳನ್ನು ಓದಿ ಕೇಳಿಸಬೇಕು. ಅವುಗಳ ಅಧ್ಯಯನದ ಅಗತ್ಯ ಮತ್ತು ಪ್ರಾಮುಖ್ಯತೆಯನ್ನು ಸ್ಪಷ್ಟ ಪಡಿಸಬೇಕು. ಅಂತೆಯೇ ವಿದ್ಯಾರ್ಥಿಗಳನ್ನು ತನ್ನ ಜತೆಯಲ್ಲಿ ಗ್ರಂಥಾಲಯಕ್ಕೆ ಕರಕೊಂಡು ಹೋಗಬೇಕು ಮತ್ತು ಪುಸ್ತಕಗಳನ್ನು ನೋಡಲು, ಇಷ್ಟವಾದವುಗಳನ್ನು ತೆಗೆದುಕೊಂಡು ಹೋಗಲು ಸಹಾಯ ಮಾಡಬೇಕು. ಮಕ್ಕಳಿಗೆ ಹೆಚ್ಚು ಇಷ್ಟವಿರುವಂತಹ ಪುಸ್ತಕಗಳ ಹಲವು ಪ್ರತಿಗಳನ್ನು ಗ್ರಂಥಾಲಯದಲ್ಲಿ ಇರಿಸಬೇಕು. ಇದರಿಂದ ಏಕಕಾಲದಲ್ಲಿ ಹಲವು ಮಂದಿ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವುದು. ಪ್ರತಿಯೊಂದು ಮಗು ತನ್ನ ಶೈಕ್ಷಣಿಕ ವರ್ಷದಲ್ಲಿ ಎಷ್ಟು ಪುಸ್ತಕಗಳನ್ನು ಓದಿದೆ ಎಂಬುದರ ದಾಖಲೆಯನ್ನು ಇರಿಸಬೇಕು. ಇದರಿಂದ ಮಕ್ಕಳಲ್ಲಿ ಹೋಲಿಕೆ ಮತ್ತು ಸ್ಪರ್ಧಾ ಮನೋಭಾವ ಬೆಳೆದು ಬರಲು ಸಾಧ್ಯವಿದೆ.
- ಗ್ರಂಥಾಲಯದಿಂದ ಪುಸ್ತಕಗಳನ್ನು ಪಡೆಯಲು ಸಾಧ್ಯವಿರುವ ಎಲ್ಲ ಸವಲತ್ತುಗಳನ್ನು ಒದಗಿಸಿ ಕೊಡಬೇಕು. ಆದರೆ ಮಾಹಿತಿ ಪುಸ್ತಕ, ನಿಘಂಟು ಅಥವಾ ಅಪರೂಪದ ಮತ್ತು ಅಮೂಲ್ಯವಾದ ಪುಸ್ತಕಗಳನ್ನು ಯಾರಿಗೂ ಮನೆಗೆ ಕೊಂಡೊಯ್ಯಲು ಅನುಮತಿಸಬಾರದು.
- ಪತ್ರಿಕೆ, ನಿಯತಕಾಲಿಕಗಳ ಕಡತವನ್ನಿರಿಸುವ ವ್ಯವಸ್ಥೆ ಮಾಡಬೇಕು. ಅಗತ್ಯ ಬಿದ್ದಾಗ ಅವುಗಳ ಉಪಯುಕ್ತ ಲೇಖನಗಳಿಂದ ಪ್ರಯೋಜನ ಪಡೆಯಲು ಸಾಧ್ಯವಿದೆ.

10. ಪರೀಕ್ಷೆ, ಅವಲೋಕನ ಮತ್ತು ಪ್ರಗತಿ

ಶಾಲೆಯ ಪ್ರಮುಖ ಕರ್ತವ್ಯಗಳ ಪೈಕಿ ಇದು ಒಂದು. ಅಂದರೆ ಕಾಲಕಾಲ ವಿದ್ಯಾರ್ಥಿಗಳ ಬುದ್ಧಿಮತ್ತೆ ಹಾಗೂ ಸಾಮರ್ಥ್ಯದ ಅವಲೋಕನ ನಡೆಸುತ್ತಿರುವುದು ಮತ್ತು ಅವರ ಪ್ರಗತಿಯ ವೇಗವನ್ನು ಪರಿಶೀಲಿಸುತ್ತಿರುವುದು. ಈ ಮೂಲಕ-

- ಅಧ್ಯಾಪಕರಿಗೆ ತಮ್ಮ ಪ್ರಯತ್ನಗಳ ಪ್ರಭಾವ ಕಾಣಬಹುದಾಗಿದೆ. ಅಗತ್ಯಾನುಸಾ ವೇಳಾಪಟ್ಟಿ ಮತ್ತು ಶಿಕ್ಷಣ ವಿಧಾನದಲ್ಲಿ ಸೂಕ್ತ ಮಾರ್ಪಾಟು ತರಬಹುದಾಗಿದೆ
- ವಿದ್ಯಾರ್ಥಿಗಳಿಗೂ ತಮ್ಮ ಪರಿಶ್ರಮ, ಗಮನ, ಅರ್ಹತೆ ಮತ್ತು ಸಾಮರ್ಥ್ಯ ಸಂಬಂಧಿಸಿ ಸರಿಯಾದ ಅಭಿಪ್ರಾಯವನ್ನು ರೂಪಿಸಲು ಸಹಾಯಕವಾಗುತ್ತದೆ.
- ಪೋಷಕರಿಗೆ ತಮ್ಮ ಮಕ್ಕಳ ಪ್ರಗತಿಯ ಗತಿಯನ್ನು ಅಂದಾಜಿಸಲು ಸುಲಭವಾಗುತ್ತದೆ.
- ಸಂಸ್ಥೆಯ ಹೊಣೆಗಾರರಿಗೆ ಅಧ್ಯಾಪಕರ ಸಾಧನೆ ಮತ್ತು ಪ್ರಯತ್ನಗಳ ಫಲಿತಾಂಶ ತಿಳಿಯುತ್ತದೆ.
- ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೀರ್ವರಿಗೂ ಪರಿಶ್ರಮ ಪಡಲು ಮತ್ತು ಪೂರ್ವ ಕಾರ್ಯಗಳ ಪರಿಶೀಲನೆ ಹಾಗೂ ಪುನರಾವರ್ತನೆಯ ಅವಕಾಶ ದೊರೆಯುತ್ತದೆ.
- ತರಗತಿ ರಚನೆ, ಪ್ರಗತಿ ಅಥವಾ ಮುಂದಿನ ಶಿಕ್ಷಣಕ್ಕೆ ಸಂಬಂಧಿಸಿ ಸೂಕ್ತ ಮಾರ್ಗದರ್ಶನವೊದಗುತ್ತದೆ.
- ವಿದ್ಯಾರ್ಥಿಗಳ ಸ್ಥಾನಮಾನ ನಿರ್ಧರಿಸಲು, ಮುಂದೆ ಅವರಿಗೆ ಏನಾದರೂ ಹೊಣೆಗಾರಿಕೆಯನ್ನು ವಹಿಸಿ ಕೊಡುವಂತಾಗಲು ಸಮಾಜಕ್ಕೆ ಪ್ರಮಾಣಪತ್ರಗಳ ರೂಪದಲ್ಲಿ ಯಾವುದಾದರೂ ಮಾನದಂಡ ದೊರಕಿಸಿ ಕೊಡಬಹುದಾಗಿದೆ.

ಪರೀಕ್ಷೆಗಳು

ಪರಿಶೀಲನೆ ಮತ್ತು ಅವಲೋಕನಕ್ಕೆ ಪರೀಕ್ಷೆ ನಡೆಸುವ ಪದ್ಧತಿ ಬಹಳ ಕಾಲದಿಂದ ನಡೆಯುತ್ತ ಬಂದಿದೆ. ನಮಗೆಲ್ಲರಿಗೂ ತಿಳಿದಿರುವಂತೆ, ವಿದ್ಯಾರ್ಥಿಗಳನ್ನು ಒಂದಿಷ್ಟು ಅಂತರದಲ್ಲಿ ಕೂರಿಸಿ, ಅವರಿಗೆ ಪ್ರಶ್ನೆ ಪತ್ರಿಕೆಗಳನ್ನು ನೀಡಲಾಗುತ್ತದೆ. ಪೂರ್ವ ನಿರ್ಧರಿತ ಸಮಯದಲ್ಲಿ (ಸಾಮಾನ್ಯವಾಗಿ ಮೂರು ಗಂಟೆ) ಅವರಿಂದ ಆ ಪ್ರಶ್ನೆಗಳಿಗೆ ಉತ್ತರವನ್ನು ಬರೆಸಲಾಗುತ್ತದೆ. ಈ ಅವಧಿಯಲ್ಲಿ ಆ ವಿದ್ಯಾರ್ಥಿಗಳ ಮೇಲೆ ತೀವ್ರ ನಿಗಾ ಇರಿಸಲಾಗುತ್ತದೆ. ನಿಗದಿತ ಸಮಯ ಮುಗಿಯುತ್ತಲೇ ಉತ್ತರ ಪತ್ರಿಕೆಯನ್ನು ಪಡೆದುಕೊಂಡು ಪರಿಶೀಲಕರಿಗೆ ನೀಡಲಾಗುತ್ತದೆ. ಅವರು ಅದನ್ನು ಪರಿಶೀಲಿಸಿ ಅಂಕಗಳನ್ನು ನೀಡುತ್ತಾರೆ. ಅವೇ ಅಂಕಗಳ ಆಧಾರದಲ್ಲಿ ಉತ್ತೀರ್ಣ-ಅನುತ್ತೀರ್ಣದ ನಿರ್ಧಾರವಾಗುತ್ತದೆ. ಈ ಪರೀಕ್ಷೆಗಳು ಸಾಮಾನ್ಯವಾಗಿ ಎರಡು ರೀತಿಯಲ್ಲಿರುತ್ತದೆ.

i) ಆಂತರಿಕ ಪರೀಕ್ಷೆ ii) ಸಾರ್ವತ್ರಿಕ ಪರೀಕ್ಷೆ

ಆಂತರಿಕ ಪರೀಕ್ಷೆ : ಈ ಪರೀಕ್ಷೆಯ ಸಕಲ ವ್ಯವಸ್ಥೆಯನ್ನೂ ಶಿಕ್ಷಣ ಸಂಸ್ಥೆಯೇ ಸ್ವಂತ ಶಾಲೆಯಲ್ಲಿ ಮಾಡುತ್ತದೆ. ಅದರಲ್ಲಿ ಪ್ರಶ್ನೆ ಪತ್ರಿಕೆ ರಚನೆ, ಉತ್ತರ ಪತ್ರಿಕೆಯ ಪರಿಶೀಲನೆ ಮತ್ತು ಉತ್ತೀರ್ಣ-ಅನುತ್ತೀರ್ಣದ ತೀರ್ಮಾನ ಕೈಗೊಳ್ಳುವ ಅಧಿಕಾರ ಅಧ್ಯಾಪಕರಿಗಿರುತ್ತದೆ. ಈ ಪರೀಕ್ಷೆಗಳು ಸಾಮಾನ್ಯವಾಗಿ ಅರ್ಧ ವಾರ್ಷಿಕ ಮತ್ತು ವಾರ್ಷಿಕವಾಗಿರುತ್ತವೆ. ಕೆಲವು ಶಾಲೆಗಳಲ್ಲಿ ಮಾಸಿಕ ಮತ್ತು ತ್ರೈಮಾಸಿಕವಾಗಿಯೂ ಪರೀಕ್ಷೆ ಬರೆಸಲಾಗುತ್ತದೆ.

ಸಾರ್ವತ್ರಿಕ ಪರೀಕ್ಷೆ: ಇದು ಪರೀಕ್ಷಾ ಮಂಡಳಿಯ ಅಧೀನದಲ್ಲಿ ನಡೆಯುವ ಪರೀಕ್ಷೆಯಾಗಿರುತ್ತದೆ. ಇದರಲ್ಲಿ ಪ್ರಶ್ನೆ ಪತ್ರಿಕೆ ರಚನೆ, ಉತ್ತರ ಪತ್ರಿಕೆ ಪರಿಶೀಲನೆ ಮತ್ತು ಉತ್ತೀರ್ಣ-ಅನುತ್ತೀಣದ ತೀರ್ಮಾನ ಕೈಗೊಳ್ಳುವ ಅಧಿಕಾರ ಪರೀಕ್ಷಾ ಮಂಡಳಿಯದ್ದಾಗಿರುತ್ತದೆ.

ಪರೀಕ್ಷಾ ವ್ಯವಸ್ಥೆಯ ನ್ಯೂನತೆಗಳು

ಪರೀಕ್ಷೆಯ ಪ್ರಸ್ತುತ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಹಲವು ಮೂಲಭೂತ ನ್ಯೂನತೆಗಳಿವೆ. ಅವುಗಳಿಂದಾಗಿ ಶಿಕ್ಷಣ-ತರಬೇತಿಯ ಇಡೀ ವ್ಯವಸ್ಥೆಗೇ ಅಪಾರವಾದ ನಷ್ಟವುಂಟಾಗುತ್ತದೆ. ಅಲ್ಲದೆ ಈ ಪರೀಕ್ಷೆಗಳನ್ನು ನಡೆಸುವ ಉದ್ದೇಶವೂ ಈಡೇರಿದಂತಾಗುವುದಿಲ್ಲ. ಉದಾ:

- ಪರೀಕ್ಷೆಯೇ ಶಿಕ್ಷಣದ ಪರಮ ಗುರಿಯಾಗಿಬಿಟ್ಟಿದೆ ಮತ್ತು ಶಿಕ್ಷಣ-ತರಬೇತಿಯ ಮೂಲಭೂತ ಉದ್ದೇಶವು ದೃಷ್ಟಿಯಿಂದ ಮರೆಯಾಗಿಬಿಟ್ಟಿದೆ. ಯಾವ ರೀತಿಯಲ್ಲಾದರೂ ಫಲಿತಾಂಶ ಉತ್ತಮವಾಗಬೇಕು ಎಂಬುದೇ ವಿದ್ಯಾರ್ಥಿಗಳು, ಪೋಷಕರು, ಅಧ್ಯಾಪಕರು ಹಾಗೂ ಸಂಸ್ಥೆಯ ಮೇಲ್ವಿಚಾರಕರ ಆಗ್ರಹ ಮತ್ತು ಪ್ರಯತ್ನವಾಗಿರುತ್ತದೆ. ಹಾಗಾಗಿ ಪರೀಕ್ಷೆಯೊಂದಿಗೆ ನೇರವಾದ ಸಂಬಂಧ ಇಲ್ಲದ ಎಲ್ಲ ಚಟುವಟಿಕೆ, ಹವ್ಯಾಸ, ಗುಣ ವಿಶೇಷತೆ ಮತ್ತು ಪ್ರತಿಭೆಗಳನ್ನು ಕಡೆಗಣಿಸಲಾಗುತ್ತದೆ. ಅವು ಶಿಕ್ಷಣ-ತರಬೇತಿಯ ದೃಷ್ಟಿಯಲ್ಲಿ ಎಷ್ಟೇ ಮಹತ್ವಪೂರ್ಣ ಮತ್ತು ಪ್ರಯೋಜನಕಾರಿಯಾಗಿದ್ದರೂ ಸರಿಯೇ. ಕೇವಲ ಪರೀಕ್ಷೆಗೆ ಪೂರಕವಾಗಿರುವಂತಹ ಪಾಠಗಳು, ಹವ್ಯಾಸಗಳು ಮತ್ತು ಪುಸ್ತಕಗಳಿಗೆ ಮಾತ್ರವೇ ಮಹತ್ವ ಕಲ್ಪಿಸಲಾಗುತ್ತದೆ. ಅದರಲ್ಲೂ ಕೇವಲ ಆಯ್ದ ಭಾಗಗಳನ್ನು ಕಲಿಸಲಾಗುತ್ತದೆ. ಸಾರಾಂಶ ಮತ್ತು ವಿವರಣೆಗಳಿಂದ ಕೆಲಸ ಪಡೆಯಲಾಗುತ್ತದೆ. ಯಶಸ್ಸಿಗಾಗಿ ತರತರದ ಉಪಾಯಗಳನ್ನೂ ಹೂಡಲಾಗುತ್ತದೆ. ಪ್ರಶ್ನೆ ಪತ್ರಿಕೆಗಳನ್ನು ಕದಿಯುವ, ಮೋಸ ಮಾಡುವ, ಪ್ರಶ್ನೆಪತ್ರಿಕೆ ಬಯಲುಗೊಳಿಸುವ, ನಕಲು ಮಾಡುವ, ಉತ್ತಮ ಸ್ಥಾನ ಗಳಿಸಲು ಪ್ರತಿಸ್ಪರ್ಧಿಗೆ ಹಾನಿಯುಂಟು ಮಾಡುವ, ಶಿಫಾರಸು ಮಾಡಿಸುವ, ಮಾತ್ರವಲ್ಲ, ಲಂಚ ನೀಡುವ ಮಟ್ಟಕ್ಕೂ ಜನ ಇಳಿದು ಬಿಡುತ್ತಾರೆ.

- ಸಾಂಪ್ರದಾಯಿಕ ಪರೀಕ್ಷೆಗಳು ತೀರಾ ಅವಿಶ್ವಸನೀಯವಾಗಿವೆ. ಅದರಿಂದ ವಿದ್ಯಾರ್ಥಿಗಳ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಸರಿಯಾಗಿ ಅಂದಾಜಿಸಲಾಗದು. ಏಕೆಂದರೆ,

  i. ಸಾಮಾನ್ಯವಾಗಿ ಕಂಠಪಾಠ ಮತ್ತು ಸ್ಮರಣಶಕ್ತಿಗೆ ಪೂರಕವಾದ ಪ್ರಶ್ನೆಗಳನ್ನಷ್ಟೇ ಕೇಳಲಾಗುತ್ತದೆ. ಹಾಗಾಗಿ ಅರ್ಥವರಿಯದೆ ಗಿಳಿಪಾಠ ನೀಡಿದರೂ ಅಂಕ ಸಿಗುತ್ತದೆ. ಇದರಿಂದ ಇತರ ಬೌದ್ಧಿಕ ಪ್ರತಿಭೆಯ ಕಡೆಗೆ ಗಮನ ಹರಿಯುವುದಿಲ್ಲ.

  ii. ಜ್ಞಾನ ಕಡಿಮೆಯಿದ್ದರೂ ವ್ಯಕ್ತಪಡಿಸುವ ಸಾಮರ್ಥ್ಯ ಮತ್ತು ಪದಗಳ ಮೇಲೆ ಹಿಡಿತವಿದ್ದರೆ ಉತ್ತಮ ಅಂಕ ಲಭಿಸುತ್ತದೆ. ಅದೇ ವೇಳೆ ಉತ್ತಮ ಜ್ಞಾನವಿದ್ದರೂ ವ್ಯಕ್ತಪಡಿಸುವ ಮತ್ತು ಪದ ಬಳಕೆಯ ಸಾಮರ್ಥ್ಯ ಕಡಿಮೆಯಿದ್ದರೆ ಅಂಕಗಳೂ ಕಡಿಮೆಯಾಗುತ್ತವೆ.

  iii. ಅಂಕ ನೀಡುವ ಸಾರ್ವತ್ರಿಕ ಮಾನದಂಡವೂ ಇರುವುದಿಲ್ಲ, ಎಲ್ಲವೂ ಪರಿಶೀಲಕರ ಇಷ್ಟಾನಿಷ್ಟ, ಸ್ವಭಾವ ಮತ್ತು ಮೂಡನ್ನು ಅನುಸರಿಸಿಕೊಂಡಿರುತ್ತದೆ. ಒಬ್ಬರು ಅಂಕ ನೀಡುವಲ್ಲಿ ತೀರಾ ಜಿಪುಣರಾಗಿದ್ದರೆ, ಇನ್ನೊಬ್ಬರು ತೀರಾ ಉದಾರಿಯಾಗಿರುತ್ತಾರೆ. ಒಬ್ಬರು ಕಠೋರವಾಗಿ ಪರಿಶೀಲಿಸಿದರೆ, ಇನ್ನೊಬ್ಬರು ತೀರಾ ಹಗುರವಾಗಿ ಪರಿಶೀಲಿಸುತ್ತಾರೆ. ಒಂದೇ ಉತ್ತರ ಪತ್ರಿಕೆಗೆ ವಿವಿಧ ಪರಿಶೀಲಕರು ನೀಡಿದ ಅಂಕಗಳಲ್ಲಿ 50 ಶೇಕಡಾ ವ್ಯತ್ಯಾಸ ಇರುವುದು ಅನುಭವದಿಂದ ಸಾಬೀತಾಗಿದೆ. ಉತ್ತರ ಪತ್ರಿಕೆ ತಿದ್ದುವಾಗ ಪರಿಶೀಲಕ ನೆಮ್ಮದಿಯಾಗಿ, ಸಮಾಧಾನದಿಂದಿದ್ದರೆ ಅಥವಾ ವಿದ್ಯಾರ್ಥಿಯ ಯಾವುದಾದರೂ ಉತ್ತರ ಇಷ್ಟವಾದರೆ ಉತ್ತಮ ಅಂಕ ದೊರೆಯುವುದು ದಿಟ. ಅದೇ ರೀತಿ ಪರಿಸ್ಥಿತಿ ತದ್ವಿರುದ್ಧವಾಗಿದ್ದರೆ ವಿದ್ಯಾರ್ಥಿಗಳಿಗೆ ನಷ್ಟ ಕಟ್ಟಿಟ್ಟ ಬುತ್ತಿ. ಒಟ್ಟಿನಲ್ಲಿ ಅಂಕಗಳ ಮೇಲೆ ಈ ಎಲ್ಲಾ ವಿಷಯಗಳ ಪ್ರಭಾವ ಇರುವುದು ಖಂಡಿತ.

  iv. ಯಾವ ಪ್ರಶ್ನೋತ್ತರಗಳನ್ನು ವಿದ್ಯಾರ್ಥಿಯು ಕಲಿತಿರುವನೋ ಅದುವೇ ಪರೀಕ್ಷೆಯಲ್ಲಿ ಕೇಳಲಾದರೆ ಸರಿ, ಇಲ್ಲದಿದ್ದರೆ ಕಲಿತದ್ದೆಲ್ಲ ಮಣ್ಣು ಪಾಲಾಯಿತೆಂದೇ ಅರ್ಥ.

  v. ಉತ್ತರ ಬರೆಯುವಾಗ ಮಗುವಿನ ಆರೋಗ್ಯ ಉತ್ತಮವಾಗಿದ್ದರೆ, ಪರೀಕ್ಷೆಯ ಭೀತಿ ಆವರಿಸಿರದಿದ್ದರೆ, ಮೂಡ್ ಚೆನ್ನಾಗಿದ್ದರೆ, ತಕ್ಕ ಸಮಯಕ್ಕೆ ಎಲ್ಲ ವಿಷಯಗಳೂ ನೆನಪಾದರೆ ಉತ್ತಮ ಅಂಕ ಗ್ಯಾರಂಟಿ. ಅನ್ಯಥಾ ಪಟ್ಟ ಪರಿಶ್ರಮಕ್ಕೆ ತಣ್ಣೀರೆರಚಿದಂತೆ!

  vi. ಸೀಮಿತ ಸಮಯದಲ್ಲಿ ಪರೀಕ್ಷೆ ಬರೆಸಲಾಗುತ್ತದೆ. ಇಷ್ಟು ಸಣ್ಣ ಸಮಯದಲ್ಲಿ ಮಕ್ಕಳ ಬುದ್ಧಿವಂತಿಕೆ ಮತ್ತು ಪ್ರತಿಭೆಯನ್ನು ಸರಿಯಾಗಿ ಅಂದಾಜಿಸಲು ಸಾಧ್ಯವಿಲ್ಲ.

- ಸಾಂಪ್ರದಾಯಿಕ ಪರೀಕ್ಷೆಯಿಂದ ಕೇವಲ ಕಲಿಕೆ ಮತ್ತು ಕಲೆಗೆ ಸಂಬಂಧಿಸಿದ ಪ್ರತಿಭೆಯ ಒಂದಿಷ್ಟು ಅಂದಾಜು ಸಿಗುತ್ತದೆ. ಅದೂ ಅಪೂರ್ಣ ಮತ್ತು ಅಸ್ಪಷ್ಟವಾಗಿ.

ವ್ಯಕ್ತಿತ್ವದ ಇತರೆಲ್ಲ ಮಗ್ಗುಲುಗಳ ಬಗ್ಗೆ ಇದರಿಂದ ಯಾವುದೇ ಅಂದಾಜು ಸಿಗಲಾರದು.

ವಿದ್ಯಾರ್ಥಿಗಳು ಕೇವಲ ಪರೀಕ್ಷೆಯ ಸಮಯದಲ್ಲಿ ಪರಿಶ್ರಮ ಪಡುತ್ತಾರೆ. ಅದರಲ್ಲೂ ಹೆಚ್ಚಿನಂಶ ಗಿಳಿ ಪಾಠಕ್ಕೇ ಆದ್ಯತೆ ನೀಡುತ್ತಾರೆ. ಹಾಗಾಗಿ ಆಗ ಕಲಿತದ್ದನ್ನು ಪರೀಕ್ಷೆಯ ಬಳಿಕ ಮರೆತು ಬಿಡುತ್ತಾರೆ.

ಕೆಲವು ವಿದ್ಯಾರ್ಥಿಗಳಂತೂ ಪರೀಕ್ಷೆಗಾಗಿ ಎಷ್ಟು ಕಠಿಣ ಪರಿಶ್ರಮ ಪಡುತ್ತಾರೆಂದರೆ, ಅವರ ಆರೋಗ್ಯವೇ ಅದರಿಂದಾಗಿ ಹಾಳಾಗುತ್ತದೆ.

ಪರೀಕ್ಷೆಯ ಭೂತವು ಮಕ್ಕಳನ್ನು ಪಠ್ಯೇತರ ಅಧ್ಯಯನಕ್ಕೆ ಅವಕಾಶ ನೀಡುವುದಿಲ್ಲ, ಅವರ ಎಲ್ಲ ಗಮನವೂ ಪಠ್ಯಪುಸ್ತಕದ ಸುತ್ತ ಗಿರಕಿ ಹೊಡೆಯುತ್ತಿರುತ್ತದೆ.

ಸಾರ್ವತ್ರಿಕ ಪರೀಕ್ಷೆಗಳಲ್ಲಿ, ಉತ್ತರ ಪತ್ರಿಕೆಯನ್ನು ತಿದ್ದುವವರು ತಮ್ಮ ವೃತ್ತಿಯಲ್ಲಿ ಎಷ್ಟೇ ಪರಿಣಿತರಾಗಿದ್ದರೂ ಮಕ್ಕಳ ಶಿಕ್ಷಣದ ಅನುಭವ ಅವರಿಗಿರುವುದಿಲ್ಲ. ಹಾಗಾಗಿ ಅವರು ಸರಿಯಾಗಿ ಅಂದಾಜಿಸುವಲ್ಲಿ ಎಡವುತ್ತಾರೆ.

ಒಟ್ಟಿನಲ್ಲಿ ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಯು ತೀರಾ ದೋಷಪೂರ್ಣವಾಗಿದೆ. ಆದರೆ ಈ ಪರೀಕ್ಷಾ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಇದರರ್ಥವಲ್ಲ. ಬದಲಾಗಿ ಅದನ್ನು ಪ್ರಯೋಜನಕಾರಿಯಾಗಿ ಮಾರ್ಪಡಿಸುವ ಪ್ರಯತ್ನ ಆಗಬೇಕಿದೆ.

ಪರೀಕ್ಷೆಯನ್ನು ಅನುಕೂಲಕರಗೊಳಿಸುವ ವಿಧಾನ

- ಪರೀಕ್ಷೆಯೇ ಪರಮ ಗುರಿಯಾಗುವುದರಿಂದ ತಡೆಯಬೇಕು. ಬದಲಿಗೆ ಅವುಗಳನ್ನು ನಡೆಸಲಿಕ್ಕಿರುವ ಉದ್ದೇಶಗಳನ್ನು ಗಳಿಸುವ ಮಾಧ್ಯಮವನ್ನಾಗಿ ಮಾಡಬೇಕು.
- ವ್ಯಕ್ತಿತ್ವದ ಎಲ್ಲ ಮಗ್ಗುಲುಗಳ ಅವಲೋಕನ ಪಡೆಯುವ ಪ್ರಯತ್ನವಾಗಬೇಕು.
- ತರಗತಿ ಮತ್ತು ಮನೆಗೆಲಸವನ್ನೂ ಪರೀಕ್ಷೆಯ ಅಂಗವಾಗಿ ಪರಿಗಣಿಸಬೇಕು. ಅವುಗಳಿಗೂ ಕೆಲವು ಅಂಕಗಳನ್ನು ಮೀಸಲಿರಿಸಬೇಕು. ಇದರಿಂದ ವರ್ಷಪೂರ್ತಿ ಕಲಿಕೆಯಲ್ಲಿಯೇ ಗಮನವಿರುತ್ತದೆ.
- ಪರೀಕ್ಷೆಯನ್ನೊಂದು ಭೂತದಂತೆ ಭಾವಿಸುವುದು ಅಥವಾ ಮಕ್ಕಳಲ್ಲಿ ಪರೀಕ್ಷೆಯ ಭಯ ಹುಟ್ಟಿಸುವುದು ಸರಿಯಲ್ಲ, ಬದಲಾಗಿ ಅದನ್ನು ಶಾಲೆಯ ಚಟುವಟಿಕೆಗಳಲ್ಲಿ ಒಂದೆಂಬ ಭಾವನೆಯನ್ನು ಹುಟ್ಟಿಸಬೇಕು.
- ಕೇವಲ ಸ್ಮರಣೆ ಅಥವಾ ಕಂಠಪಾಠಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದರ ಬದಲು ಚಿಂತನೆ, ಆಧಾರ-ಪ್ರಮಾಣ, ಫಲಿತಾಂಶ ಕಂಡುಹಿಡಿಯುವ ಮತ್ತು ಜ್ಞಾನವನ್ನು ಒರೆಗೆ ಹಚ್ಚುವ ಪ್ರತಿಭೆಯನ್ನು ತಿಳಿಯುವಂತಹ ಪ್ರಶ್ನೆಗಳನ್ನು ಕೇಳಬೇಕು.
- ಪ್ರಶ್ನೆಗಳು ಇಡೀ ಅಧ್ಯಾಯವನ್ನು ಆವರಿಸುವಂತಿರಬೇಕು. ಆಯ್ದ ಭಾಗಗಳ ಅಧ್ಯಯನ ಮಾಡುವ ಅಭ್ಯಾಸ ಬೆಳೆಯುವಂತಿರಬಾರದು.

- ಕೆಲವು ಅಂಕಗಳನ್ನು ಮೌಖಿಕ ಪರೀಕ್ಷೆಗಳಿಗೂ (Viva Voice) ಮೀಸಲಿರಿಸಬೇಕ ಈ ಮೂಲಕ ಮಾತುಕತೆಯ ವಿಧಾನ, ಭಾಷಣಕಲೆ ಮತ್ತು ಮೌಖಿಕ ಅಭಿಪ್ರಾಂ ವ್ಯಕ್ತಪಡಿಸುವ ಸಾಮರ್ಥ್ಯದ ಅರಿವುಂಟಾಗುತ್ತದೆ.
- ಪರೀಕ್ಷೆಯು ಒಂದು ಅದೃಷ್ಟದಾಟವೆಂದು ಭಾಸವಾಗದಂತೆ ಕ್ರಮ ಕೈಗೊಳ್ಳಬೇಕ ಸಂಬಂಧಿತ ಅಧ್ಯಾಪಕರ ಅಭಿಪ್ರಾಯ, ದೈನಂದಿನ ಕಲಿಕೆಯ ದಾಖಲೆ (Progre Chart), ಸಾಪ್ತಾಹಿಕ ಮತ್ತು ಮಾಸಿಕ ಅವಲೋಕನ, ಕಿರುಪರೀಕ್ಷೆಗಳ ಫಲಿತಾಂ ಪರೀಕ್ಷೆಯ ವೇಳೆ ದೈಹಿಕ-ಮಾನಸಿಕ ಸ್ಥಿತಿ ಇತ್ಯಾದಿಗಳನ್ನು ಪರಿಗಣಿಸಬೇಕು.
- ಸಾಮಾನ್ಯ ಜ್ಞಾನದ ಪ್ರಶ್ನೆಪತ್ರಿಕೆಯಲ್ಲಿ ಭಾಷೆ ಮತ್ತು ಸಾಹಿತ್ಯಕ್ಕೆ ಬಹಳ ಕಡಿ ಅವಕಾಶ ನೀಡಬೇಕು. ಅಂದರೆ ಅದರಲ್ಲಿ ಬಿಟ್ಟ ಪದ ತುಂಬುವ, ಸರಿ-ತ ಗುರುತಿಸುವ, ಸರಿಯುತ್ತರ ಆರಿಸುವಂತಹ ರೀತಿಯಲ್ಲಿ ಇರಬೇಕು. ಒಟ್ಟಿನಲ್ಲಿ ಹೆ ಬರೆಯುವಂತೆ ಇರಬಾರದು.
- ಉತ್ತರ ಪತ್ರಿಕೆ ತಿದ್ದುವ ಕಾರ್ಯವನ್ನು ಹೊಣೆಗಾರಿಕೆಯ ಪ್ರಜ್ಞೆಯುಳ್ಳ, ನ್ಯಾಯಪ್ರಿ ಮತ್ತು ವಿದ್ಯಾರ್ಥಿಗಳ ಬಗ್ಗೆ ಸಹಾನುಭೂತಿ ಇರುವ ಹಾಗೂ ಸ್ವತಃ ಅಧ್ಯಾಪ ಅನುಭವ ಇರುವಂತಹವರನ್ನು ನೇಮಿಸಬೇಕು. ವಿಶೇಷತಃ ಯಾವ ಪ್ರಾಯ ಮಕ್ಕಳ ಉತ್ತರ ಪತ್ರಿಕೆ ತಿದ್ದಲಾಗುತ್ತದೋ ಆ ಪ್ರಾಯದ ಮಕ್ಕಳಿಗೆ ಕಲಿಸಿ ಅನುಭ ಇರಬೇಕು.
- ಪ್ರಶ್ನೆಗಳು ಮಕ್ಕಳಿಗೆ ಚೆನ್ನಾಗಿ ಅರ್ಥವಾಗುತ್ತವೆಯೇ ಎಂಬುದನ್ನು ಪರಿಶೀಲಿಸಬೇಕ ಅವು ಅವರ ಪ್ರಾಯ ಮತ್ತು ಬುದ್ಧಿಗೆ ಪೂರಕವಾಗಿರಬೇಕು. ಅಲ್ಲದೆ ಶಿಕ್ಷಣ ಮೂಲಭೂತ ಉದ್ದೇಶವನ್ನೂ ಪೂರೈಸುವಂತಿರಬೇಕು.
- ಸಣ್ಣ ಮಕ್ಕಳ ಪರೀಕ್ಷೆಯು ಹೆಚ್ಚಾಗಿ ಮೌಖಿಕವಾಗಿರಬೇಕು. ಮಕ್ಕಳಿಗೆ ಹೆ ಪರಿಚಿತನಾದ ವ್ಯಕ್ತಿಯಿಂದ ಆ ಪರೀಕ್ಷೆ ಮಾಡಿಸಬೇಕು ಅಥವಾ ಅವರು ಮಕ್ಕ ಮನಗೆಲ್ಲುವ ಸಾಮರ್ಥ್ಯ ಇರುವವರಾಗಿರಬೇಕು.
- ವಿದ್ಯಾರ್ಥಿಗಳಿಗೆ ಏನೇನು ತಿಳಿದಿದೆ ಮತ್ತು ಅವರ ಪ್ರತಿಭೆ-ಸಾಮರ್ಥ್ಯ ಏನ ಎಂಬುದನ್ನು ಅರಿಯಲಿಕ್ಕೆ ಪರೀಕ್ಷೆ ನಡೆಸಬೇಕೇ ಹೊರತು, ಅವರಿಗೆ ಏನು ತಿಳಿದಿ ಎಂಬುದನ್ನು ಅರಿಯಲಿಕ್ಕಾಗಬಾರದು. ಇದು ಎಲ್ಲ ರೀತಿಯ ಮಾನಸಿಕತೆ ಮತ ಪ್ರತಿಭೆಯುಳ್ಳ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿರಿಸಿ ಪ್ರಶ್ನೆಪತ್ರಿಕೆ ತಯಾರಿಸಿದರಷ್ಟೆ ಸಾಧ್ಯ. ಅದರಲ್ಲಿ ಆಯ್ಕೆಗೆ ಸಾಕಷ್ಟು ಸ್ವಾತಂತ್ರ್ಯವೂ ಇರಬೇಕು.
- ಪ್ರಶ್ನೆಗಳು ಕೇವಲ ಪಠ್ಯಪುಸ್ತಕಕ್ಕೆ ಸೀಮಿತವಾಗಿರಬಾರದು. ವಿದ್ಯಾರ್ಥಿಗಳ ಸಾಮಾ ಜ್ಞಾನ ಮತ್ತು ನಿರ್ದಿಷ್ಟ ವಿಷಯದಲ್ಲಿ ಅವರ ಜ್ಞಾನವನ್ನು ಅಂದಾಜಿಸಬಲ್ಲಂತ ಪಠ್ಯೇತರ ಪ್ರಶ್ನೆಗಳನ್ನೂ ಕೇಳಬೇಕು.

- ಮಕ್ಕಳು ಧೈರ್ಯವಾಗಿ ಮತ್ತು ಸ್ಫೂರ್ತಿಯಿಂದ ಉತ್ತರಿಸುವಂತಾಗಲು ಸಾದ್ಯಂತ ಆಹ್ಲಾದಕರ ವಾತಾವರಣದಲ್ಲಿ ಪರೀಕ್ಷೆ ನಡೆಸಬೇಕು. ಪರೀಕ್ಷೆಯೆಂಬುದೇ ಮಕ್ಕಳನ್ನು ಭೀತಿ ಪಡಿಸಲು ಸಾಕು. ಒಂದು ವೇಳೆ ಕಾರಣವಶಾತ್ ಮಕ್ಕಳು ಧೈರ್ಯಗುಂದಿದರೆ ಉತ್ತರಿಸುವುದಾದರೂ ಹೇಗೆ?
- ಅನುತ್ತೀರ್ಣರಾಗುವ ವಿದ್ಯಾರ್ಥಿಗಳನ್ನು ಹತಾಶೆ ಮತ್ತು ನಿರಾಶೆಯಿಂದ ದೂರವಿರಿಸಲು ಸಾದ್ಯಂತ ಪ್ರಯತ್ನಿಸಬೇಕು. ಅವರೆಡೆಗೆ ಹೆಚ್ಚಿನ ಗಮನವನ್ನು ನೀಡುವ ಮೂಲಕ, ಮುಂದೆ ಯಶಸ್ವಿಯಾಗುವ ಭರವಸೆಯನ್ನು ಅವರಲ್ಲಿ ಮೂಡಿಸಬೇಕು.

ಪರೀಕ್ಷೆಗಳಿಗೆ ಸಂಬಂಧಿಸಿ ಇತರ ಅಗತ್ಯದ ವಿಷಯಗಳು

ವಿದ್ಯಾರ್ಥಿಗಳ ವ್ಯಕ್ತಿತ್ವದ ವಿವಿಧ ಮಗ್ಗುಲುಗಳ ಅವಲೋಕನ ಮತ್ತು ಅವರ ಪ್ರಗತಿಯ ವೇಗದ ಪರಿಶೀಲನೆ ಹಾಗೂ ಪ್ರಗತಿ ಚಾರ್ಟ್‌ನಲ್ಲಿ ಕಾಲಕಾಲಕ್ಕೆ ಫಲಿತಾಂಶಗಳನ್ನು ನಮೂದಿಸುವುದು. ಈ ಎಲ್ಲ ಕೆಲಸಗಳು ಸರಿಯಾಗಿ ನಡೆಯುತ್ತಿರಬೇಕು. ಆದರೆ ಅಧಿಕೃತ ಪರೀಕ್ಷೆಗಳು ವರ್ಷದಲ್ಲಿ ಎರಡು ಬಾರಿ ನಡೆದರೆ ಸಾಕು.

1. ಮಧ್ಯಾವಧಿ ಪರೀಕ್ಷೆ (ಶೈಕ್ಷಣಿಕ ವರ್ಷದ ಮಧ್ಯದಲ್ಲಿ).
2. ವಾರ್ಷಿಕ ಪರೀಕ್ಷೆ (ವರ್ಷದ ಕೊನೆಯಲ್ಲಿ).

ಪಠ್ಯವಿಷಯಗಳ ಪ್ರಾಮುಖ್ಯತೆ ಮತ್ತು ಪ್ರಯೋಜನಗಳ ಅನುಸಾರ ಪ್ರತಿಯೊಂದು ವಿಷಯದ ಅಂಕವನ್ನು ಅನುಕ್ರಮವಾಗಿ ನೀಡಲಾಗುತ್ತದೆ. ಆ ಪೈಕಿ ಕನಿಷ್ಠ ಇಪ್ಪತ್ತು ಶೇಕಡ ಅಂಕವನ್ನು ದೈನಂದಿನ ಕೆಲಸ ಮತ್ತು ಮಾಸಿಕ ಪರಿಶೀಲನೆ ಇತ್ಯಾದಿಗಳಿಗೆ ಮೀಸಲಿರಿಸಬೇಕು.

ತರಗತಿ 1 ಮತ್ತು 2ರಲ್ಲಿ ಪ್ರಥಮ ಭಾಷೆ, ಉಕ್ತಲೇಖನ (Dictation) ಬಿಟ್ಟಪದಗಳನ್ನು ತುಂಬುವುದು ಮತ್ತು ಲಿಖಿತ ಗಣಿತದ ಹೊರತು ಬೇರೆಲ್ಲ ವಿಷಯಗಳ ಪರೀಕ್ಷೆಯು ಮೌಖಿಕ ಅಥವಾ ಪ್ರಾಯೋಗಿಕವಾಗಿರಬೇಕು ಮೌಖಿಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಮುಂದೆ ಸ್ಪಷ್ಟ ಪದಗಳಲ್ಲಿ ಪ್ರಶ್ನೆಗಳನ್ನಿರಿಸಿದ ಬಳಿಕ, ಸ್ವಲ್ಪ ಹೊತ್ತು ಆಲೋಚಿಸಲು ಬಿಡಬೇಕು. ಆ ಮೇಲೆ ಉತ್ತರ ಕೇಳಬೇಕು. ಸಣ್ಣ ಮಕ್ಕಳು ಸಂಕೋಚದಿಂದಾಗಿ ಉತ್ತರ ತಿಳಿದಿದ್ದೂ ಸರಿಯಾಗಿ ಹೇಳಲಾರರು. ಅವರ ಸಂಕೋಚ ದೂರ ಮಾಡಿ, ಧೈರ್ಯ ತುಂಬುವ ಮೂಲಕ ಉತ್ತರ ಹೇಳಿಸಬೇಕು. ಮೌಖಿಕ ಪರೀಕ್ಷೆಗಳಲ್ಲಿ ಪ್ರಶ್ನೆ ಸಣ್ಣದಾಗಿಯೂ ಪದಗಳು ಅರ್ಥವತ್ತಾಗಿಯೂ ಚುಟುಕಾಗಿಯೂ ಇರಬೇಕು.

ಮೂರನೇ ಮತ್ತು ನಾಲ್ಕನೇ ತರಗತಿಗಳಲ್ಲಿ ಪ್ರಥಮ ಭಾಷೆಯ ಬರಹ, ಉಕ್ತಲೇಖನ, ದ್ವಿತೀಯ ಭಾಷೆಯ ಉಕ್ತಲೇಖನ, ಲಿಖಿತ ಗಣಿತದ ಹೊರತು ಬೇರೆಲ್ಲವೂ ಮೌಖಿಕ ಅಥವಾ ಪ್ರಾಯೋಗಿಕವಾಗಿರಬೇಕು. ಸಾಮಾನ್ಯ ಜ್ಞಾನದ ಪರೀಕ್ಷೆಯು ಲಿಖಿತವಾಗಿರಬೇಕು. ಆದರೆ ಉತ್ತರ ಆದಷ್ಟು ಚುಟುಕಾಗಿ ಬರೆಯುವಂತಿರಬೇಕು. ಅದರಲ್ಲಿ ಪ್ರಬಂಧ ಮತ್ತು ಸಾಹಿತ್ಯದ ಅಗತ್ಯ ತೀರಾ ಕಡಿಮೆ ಇರುವಂತೆ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಬೇಕು.

ಐದು ಮತ್ತು ಅದರ ನಂತರದ ತರಗತಿಗಳ ಪರೀಕ್ಷೆಗಳು ಲಿಖಿತವಾಗಿರಬೇಕು. ಆದರೆ ಪಠಣ, ಕಿರಾಅತ್, ಹಿಫ್ಝ್, ಮೌಖಿಕ ಗಣಿತ ಮತ್ತು ವಿವಿಧ ಭಾಷೆಗಳಲ್ಲಿ ಓದುವ ಹಾಗೂ ಮಾತನಾಡುವ ಸಾಮರ್ಥ್ಯವನ್ನು ಮೌಖಿಕ ಪರೀಕ್ಷೆಗಳಿಂದಷ್ಟೇ ಅರಿಯಲು ಸಾಧ್ಯ. ಆರ್ಟ್-ಕ್ರಾಫ್ಟ್‌ನ ಪರೀಕ್ಷೆ ಪ್ರಾಯೋಗಿಕವಾಗಿರಬೇಕು. ನೈತಿಕತೆ ಮತ್ತು ಸಮಾಜವು ಯಾವುದೇ ಪರೀಕ್ಷಾ ಪತ್ರವಲ್ಲ, ಆದರ ಅಂಕವು ದೈನಂದಿನ ಕರ್ಮ ಜೀವನದ ಅವಲೋಕನದ ಫಲಿತಾಂಶದಲ್ಲಿ ದೊರೆಯುವುದು. (ವಿವರಗಳನ್ನು ಮುಂದೆ 'ಅವಲೋಕನ' ಶೀರ್ಷಿಕೆಯಲ್ಲಿ ನೋಡೋಣ).

ಒಂದನೇ ಮತ್ತು ಎರಡನೇ ತರಗತಿಗಳಿಗೆ ಸೂಚಿತ ಅಂಕಗಳು

1. ಇಸ್ಲಾಮಿಯಾತ್ — 100 ಅಂಕಗಳು.
   i. ನೈತಿಕತೆ ಮತ್ತು ಸಮಾಜ-25 ii. ಕುರ್‌ಆನಿನ ಅಕ್ಷರಾಭ್ಯಾಸ-25
   iii. ವುಝೂ, ನಮಾಝ್ (ಪ್ರಾಯೋಗಿಕ) ಮತ್ತು ಕುರ್‌ಆನ್ ಅಧ್ಯಾಯಗಳು ಹಾಗೂ ದುಆಗಳು-25
   iv. ಪ್ರವಾದಿಗಳ ಕಥೆ ಮತ್ತು ಪ್ರವಾದಿ ಮುಹಮ್ಮದರ(ಸ) ಜೀವನದ ಘಟನೆಗಳು-25
2. ಪ್ರಥಮ ಭಾಷೆ — 100 ಅಂಕಗಳು.
   i. ಪಠಣ-50 ii. ಕಥೆ, ಕವನ, ಕಂಠಪಾಠ-20
   iii. ಉಕ್ತಲೇಖನ ಇತ್ಯಾದಿ-30
3. ಗಣಿತ - — 100 ಅಂಕಗಳು.
   i. ಲಿಖಿತ-50 ii. ಮೌಖಿಕ-50
4. ಸಾಮಾನ್ಯ ಜ್ಞಾನ — 50 ಅಂಕಗಳು.
   i. ಭೂಗೋಳ-25 ii. ವಿಜ್ಞಾನ-25
5. ಆರ್ಟ್-ಕ್ರಾಫ್ಟ್ — 50 ಅಂಕಗಳು.

ಒಟ್ಟು 400 ಅಂಕಗಳು

ಮೂರನೇ ಮತ್ತು ನಾಲ್ಕನೇ ತರಗತಿಗೆ ಸೂಚಿತ ಅಂಕಗಳು

1. ಇಸ್ಲಾಮಿಯಾತ್ — 150 ಅಂಕಗಳು
   i. ನೈತಿಕ ಮತ್ತು ಸಾಮಾಜಿಕ ಪಾಠ-50 ii. ಕುರ್‌ಆನ್-40
   iii. ಫಿಕ್ಹ್ ಮತ್ತು ಅಕಾಇದ್-30 iv. ಪ್ರವಾದಿ ಚರಿತ್ರೆ-30
2. ಪ್ರಥಮ ಭಾಷೆ — 100 ಅಂಕಗಳು.
   i. ಪಠಣ-50 ii. ಲಿಖಿತ-50

3. ದ್ವಿತೀಯ ಭಾಷೆ 50 ಅಂಕಗಳು
   i. ಪಠಣ–25 ii. ಲಿಖಿತ–25
4. ಗಣಿತ 100 ಅಂಕಗಳು
   i. ಲಿಖಿತ–75 ii. ಮೌಖಿಕ–25
5. ಸಾಮಾನ್ಯ ಜ್ಞಾನ 50 ಅಂಕಗಳು
   i. ಭೂಗೋಳ–25 ii. ವಿಜ್ಞಾನ–25
6. ಆರ್ಟ್–ಕ್ರಾಫ್ಟ್ 50 ಅಂಕಗಳು

ಒಟ್ಟು 500 ಅಂಕಗಳು

ಐದನೇ ಮತ್ತು ಆರನೇ ತರಗತಿಗೆ ಸೂಚಿತ ಅಂಕಗಳು

1. ಇಸ್ಲಾಮಿಯಾತ್ 200 ಅಂಕಗಳು
   i. ಕುರ್‌ಆನ್–50 ii. ಫಿಕ್ಹ್ ಮತ್ತು ಅಕಾಇದ್–50
   iii. ಪ್ರವಾದಿ ಚರಿತ್ರೆ–50 iv. ನೀತಿ ಮತ್ತು ಸಾಮಾಜಿಕ ಪಾಠ–50
2. ಪ್ರಥಮ ಭಾಷೆ 100 ಅಂಕಗಳು
   i. ಪಠಣ–50 ii. ಬರವಣಿಗೆ–50
3. ದ್ವಿತೀಯ ಭಾಷೆ 50 ಅಂಕಗಳು
   i. ಪಠಣ–25 ii. ಬರವಣಿಗೆ–25
4. ಅರಬಿ 50 ಅಂಕಗಳು
   i. ಪಠಣ–25 ii. ಬರವಣಿಗೆ–25
5. ಇಂಗ್ಲಿಷ್ 50 ಅಂಕಗಳು
   i. ಪಠಣ–25 ii. ಬರವಣಿಗೆ–25
6. ಗಣಿತ 100 ಅಂಕಗಳು
   i. ಲಿಖಿತ–75 ii. ಮೌಖಿಕ–25
7. ಸಾಮಾನ್ಯ ಜ್ಞಾನ 100 ಅಂಕಗಳು
   i. ಇತಿಹಾಸ ಮತ್ತು ಸಂಸ್ಕೃತಿ–40 ii. ಭೂಗೋಳ–30
   iii. ವಿಜ್ಞಾನ–30
8. ಆರ್ಟ್ ಆ್ಯಂಡ್ ಕ್ರಾಫ್ಟ್ 50 ಅಂಕಗಳು

ಒಟ್ಟು 700 ಅಂಕಗಳು

ಏಳು ಮತ್ತು ಅದಕ್ಕೆ ಮೇಲ್ಪಟ್ಟ ತರಗತಿಗಳಿಗೆ

ಈ ತರಗತಿಗಳಲ್ಲಿ ಇಸ್ಲಾಮಿಯಾತ್ ಮತ್ತು ಅರಬಿ ಮೂಲಭೂತ ಪಠ್ಯಗಳಾಗಿರುವುವು. ಅವುಗಳಿಗಾಗಿ ಹೆಚ್ಚು ಸಮಯವನ್ನು ಮೀಸಲಿರಿಸಬೇಕಾಗುತ್ತದೆ. ಕುರ್‌ಆನ್ ಮತ್ತು ಹದೀಸ್‌ಗಳ ಉದ್ಧರಣೆಗಳನ್ನು ಅರಬಿ ಭಾಷೆಯಲ್ಲಿಯೇ ಕಲಿಸಲಾಗುವುದು. ಇತರ ಪಠ್ಯಗಳಿಗೆ ದ್ವಿತೀಯ ಸ್ಥಾನವಿರುವುದು.

1. ಇಸ್ಲಾಮಿಯಾತ್ — 250 ಅಂಕಗಳು
- i. ಫಿಕ್ಹ್/ಅಕಾಇದ್–50
- ii. ಇಸ್ಲಾಮೀ ಇತಿಹಾಸ–50
- iii. ಸೀರತ್–50
- iv. ನೀತಿ ಮತ್ತು ಸಾಮಾಜಿಕ ಪಾಠ–100

2. ಅರಬಿ — 100 ಅಂಕಗಳು
- i. ಪಠಣ–50
- ii. ಬರವಣಿಗೆ ಮತ್ತು ಅನುವಾದ–50

3. ಪ್ರಥಮ ಭಾಷೆ — 100 ಅಂಕಗಳು
- i. ಗದ್ಯ ಮತ್ತು ಲೇಖನ–50
- ii. ಪದ್ಯ ಮತ್ತು ದ್ವಿತೀಯ ಭಾಷೆ–50

4. ಇಂಗ್ಲಿಷ್ — 100 ಅಂಕಗಳು
- i. ಪಠಣ–50
- ii. ಬರವಣಿಗೆ ಮತ್ತು ಅನುವಾದ–50

5. ಗಣಿತ — 100 ಅಂಕಗಳು
- i. ಅಂಕಗಣಿತ–50
- ii. ಬೀಜಗಣಿತ ಮತ್ತು ರೇಖಾಗಣಿತ–50

6. ವಿಜ್ಞಾನ — 150 ಅಂಕಗಳು
- i. ಇತಿಹಾಸ–50
- ii. ಭೂಗೋಳ–50
- iii. ವಿಜ್ಞಾನ–50

7. ಉದ್ಯೋಗ ತರಬೇತಿ (ಪ್ರಾಯೋಗಿಕ ಕಾರ್ಯಗಳು) ತರಗತಿ I, II ಮತ್ತು III.

ಒಟ್ಟು ಅಂಕಗಳು 800

ಫಲಿತಾಂಶ

1. ಪ್ರಾಥಮಿಕ ತರಗತಿಗಳಲ್ಲಿ ಒಟ್ಟು 40 ಶೇಕಡಾ ಅಂಕ ಗಳಿಸುವ ವಿದ್ಯಾರ್ಥಿಗಳು ಉತ್ತೀರ್ಣರಾಗಲು ಅರ್ಹರಾಗುತ್ತಾರೆ. ಆದರೆ ಯಾವುದೇ ಪಠ್ಯದಲ್ಲೂ 20 ಶೇಕಡಕ್ಕಿಂತ ಕಡಿಮೆ ಅಂಕ ಗಳಿಸಿರಬಾರದು. ಇತರ ತರಗತಿಗಳಲ್ಲಿ ಉತ್ತೀರ್ಣರಾಗಲು ಪ್ರತಿ ಪಠ್ಯವಿಷಯದಲ್ಲಿ 30 ಶೇಕಡಕ್ಕಿಂತ ಹೆಚ್ಚು ಅಂಕ ಗಳಿಸಿರಬೇಕು.

2. ಒಟ್ಟು ಅಂಕಗಳಲ್ಲಿ 44% ವರೆಗೆ ಅಂಕ ಗಳಿಸುವವರು ತೃತೀಯ, 45 ರಿಂದ 59 ವರೆಗೆ ದ್ವಿತೀಯ ಮತ್ತು 60% ರಿಂದ ಹೆಚ್ಚು ಅಂಕ ಗಳಿಸುವವರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವರು.

3. ಪ್ರೈಮರಿ ತರಗತಿಗಳಲ್ಲಿ ಕುರ್‌ಆನ್ ಪಠಣ ಮತ್ತು ಪ್ರಥಮ ಭಾಷೆ ಅಥವಾ ಗಣಿತದಲ್ಲಿ ದುರ್ಬಲರಾಗಿರುವ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಬಾರದು. ನಂತರದ ತರಗತಿಗಳಲ್ಲಿ ಇಸ್ಲಾಮಿಯಾತ್ ಮತ್ತು ಅರಬಿಯಲ್ಲಿ ದುರ್ಬಲರಾಗಿರುವ ವಿದ್ಯಾರ್ಥಿಗಳನ್ನು ಮುಂದುವರಿಯುವ ಅವಕಾಶ ನೀಡಬಾರದು.

4. ಅನಾರೋಗ್ಯ ಅಥವಾ ಇನ್ನಿತರ ಅರ್ಹ ಕಾರಣಗಳಿಂದ ಪರೀಕ್ಷೆಯಲ್ಲಿ ಹಾಜರಾಗದ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆಯ ವ್ಯವಸ್ಥೆ ಮಾಡಿಕೊಡಬೇಕು.

5. ಆರಂಭಿಕ ತರಗತಿಗಳಲ್ಲಿ, ಇಡೀ ವರ್ಷದ ನಿರ್ವಹಣೆ ಉತ್ತಮ ಇರುವ ಮಕ್ಕಳು ವಾರ್ಷಿಕ ಪರೀಕ್ಷೆಯಲ್ಲಿ ಕಾರಣವಶಾತ್ ಯಶಸ್ವಿಯಾಗದೆ ಇದ್ದರೆ, ಅವರ ವರ್ಷ ವ್ಯರ್ಥವಾಗಲು ಬಿಡಬಾರದು. ಬದಲಾಗಿ ವರ್ಷದ ನಿರ್ವಹಣೆಯ ಆಧಾರದಲ್ಲಿ ಉತ್ತೀರ್ಣರಾಗಿಸಬೇಕು. ಅದೇ ವೇಳೆ ದುರ್ಬಲ ನಿರ್ವಹಣೆ ತೋರಿದ ಮಕ್ಕಳನ್ನು ಮುಂದಿನ ತರಗತಿಗೆ ಸೇರಿಸುವಾಗ ಸಾಕಷ್ಟು ಜಾಗ್ರತೆ ವಹಿಸಬೇಕು.

ಫಲಿತಾಂಶ ನಮೂನೆ

ಫಲಿತಾಂಶವನ್ನು ಎರಡು ರೀತಿಯ ನಮೂನೆಯಲ್ಲಿ ಸಿದ್ಧಪಡಿಸಲಾಗುತ್ತದೆ. ಒಂದು ಇಡೀ ತರಗತಿಯ ಒಟ್ಟು ಫಲಿತಾಂಶ. ಅದು ಕಛೇರಿಯಲ್ಲಿ ದಾಖಲೆಯ ರೂಪದಲ್ಲಿ ಸುರಕ್ಷಿತವಾಗಿರುತ್ತದೆ. ಎರಡನೆಯದು ಪ್ರತಿ ವಿದ್ಯಾರ್ಥಿಯ ಪ್ರತ್ಯಪ್ರತ್ಯೇಕ ಫಲಿತಾಂಶ. ಅದನ್ನು ಆಯಾ ವಿದ್ಯಾರ್ಥಿಯ ಪೋಷಕರಿಗೆ ನೀಡಲಾಗುತ್ತದೆ. ಅಥವಾ ಅವರ ಪ್ರಗತಿ ದಾಖಲೆಯಲ್ಲಿ ಬರೆಯಲಾಗುತ್ತದೆ. ನಮೂನೆಗಳನ್ನು ಮುಂದಿನ ಪುಟಗಳಲ್ಲಿ ನೋಡಿ.

ಸರ್ವಶಕ್ತನಾದ ಅಲ್ಲಾಹನ ನಾಮದಿಂದ

ಪರೀಕ್ಷಾ ಫಲಿತಾಂಶ-ಅರ್ಧವಾರ್ಷಿಕ/ವಾರ್ಷಿಕ ದಿನಾಂಕ:...... ತರಗತಿ:...... ಶಾಲೆಯ ಹೆಸರು:.....

ಕ್ರಮ ಸಂಖ್ಯೆ	ದಾಖಲಾತಿ ಸಂಖ್ಯೆ	ವಿದ್ಯಾರ್ಥಿಯ ಹೆಸರು	ಇಸ್ಲಾಮಿಯಾತ್					ಪ್ರಥಮ ಭಾಷೆ			ದ್ವಿತೀಯ ಭಾಷೆ			ಅರಬಿ			ಇಂಗ್ಲಿಷ್			ಗಣಿತ			ಸಾಮಾನ್ಯಜ್ಞಾನ				ಆರ್ಟ್ ಮತ್ತು ಕ್ರಾಫ್ಟ್	ಒಟ್ಟು	ಶೇಕಡಾ	ಫಲಿತಾಂಶ	ಸ್ಥಾನ	ಷರಾ
			ಕುರ್‌ಆನ್	ತಫ್ಸೀರ್-ಅನುವಾದ	ಪ್ರವಾದಿ ಚರಿತ್ರೆ	ನೀತಿ-ಸಾಮಾಜಿಕ ನಡತೆ	ಒಟ್ಟು	ಪ್ರಥಮ ಪತ್ರಿಕೆ	ದ್ವಿತೀಯ ಪತ್ರಿಕೆ	ಒಟ್ಟು	ಪಠಣ / ಬರವಣಿಗೆ	ಅನುವಾದ	ಒಟ್ಟು	ಪಠಣ	ಬರವಣಿಗೆ/ಅನುವಾದ	ಒಟ್ಟು	ಪಠಣ	ಬರವಣಿಗೆ/ಅನುವಾದ	ಒಟ್ಟು	ಲಿಖಿತ	ಮೌಖಿಕ	ಒಟ್ಟು	ಇತಿಹಾಸ	ಭೂಗೋಳ	ವಿಜ್ಞಾನ	ಒಟ್ಟು						
1																																
2																																
3																																
4																																
5																																
6																																
7																																
8																																
9																																
10																																

ಒಟ್ಟುದಾಖಲಾತಿ:--- ಹಾಜರಾದವರು:--- ಉತ್ತೀರ್ಣ:--- ಪ್ರಗತಿ ಹೊಂದಿದವರು:--- ಅನುತ್ತೀರ್ಣ:--- I:--- II:--- III:---

ತರಗತಿಯ ಅಧ್ಯಾಪಕರ ಸಹಿ:--- ಮೇಲ್ವಿಚಾರಕರ ಸಹಿ:---

(ವಿ.ಸೂ: ಈ ಫಾರ್ಮನ್ನು ದೊಡ್ಡ ಕಾಗದದಲ್ಲಿ ಸ್ಪಷ್ಟವಾಗಿ ಬರೆಯಬೇಕು)

ಸರ್ವಶಕ್ತನಾದ ಅಲ್ಲಾಹನ ನಾಮದಿಂದ

ಪರೀಕ್ಷಾ ಫಲಿತಾಂಶ. ಅರ್ಧವಾರ್ಷಿಕ/ವಾರ್ಷಿಕ ದಿನಾಂಕ:---

ರೋಲ್ ನಂಬ್ರ:--- ವಿದ್ಯಾರ್ಥಿಯ ಹೆಸರು:--- ತರಗತಿ:---

ಕ್ರಮ ಸಂಖ್ಯೆ	ವಿಷಯ	ಒಟ್ಟು ಅಂಕ	ಪಡೆದ ಅಂಕ	ಫಲಿತಾಂಶ
1.	ಇಸ್ಲಾಮಿಯಾತ್ (ಕುರ್‌ಆನ್, ಹದೀಸ್, ಸೀರತ್, ಇಸ್ಲಾಮೀ ಇತಿಹಾಸ, ನೀತಿಪಾಠ)			
2.	ಪ್ರಥಮ ಭಾಷೆ			
3.	ಅರಬಿ (ಭಾಷೆ-ಸಾಹಿತ್ಯ)			
4.	ಇಂಗ್ಲಿಷ್			
5.	ದ್ವಿತೀಯ ಭಾಷೆ			
6.	ಗಣಿತ (ಅಂಕಗಣಿತ ಮೌಖಿಕ ಮತ್ತು ಲಿಖಿತ, ಬೀಜಗಣಿತ, ರೇಖಾಗಣಿತ)			
7.	ಸಾಮಾನ್ಯ ಜ್ಞಾನ (ಇತಿಹಾಸ, ಭೂಗೋಳ ಮತ್ತು ವಿಜ್ಞಾನ)			ಹಾಜರಿ:
8.	ಆರ್ಟ್ ಮತ್ತು ಕ್ರಾಫ್ಟ್			
	ಒಟ್ಟು			ಶೇಕಡಾ:

ಶ್ರೇಣಿ:---- ಸ್ಥಾನ:---

ತರಗತಿ ಅಧ್ಯಾಪಕರ ಸಹಿ:--- ದಿನಾಂಕ:---

ಮೇಲ್ವಿಚಾರಕರ ಸಹಿ:--- ಪೋಷಕರ ಸಹಿ:---

(ದಿನಾಂಕ ಸಹಿತ)

ಅವಲೋಕನ, ಪರಿಶೀಲನೆ ಮತ್ತು ಪ್ರಗತಿ ಚಾರ್ಟ್

ಸಂತುಲಿತ ಶಿಕ್ಷಣ-ತರಬೇತಿಗಾಗಿ ವಿದಾರ್ಥಿಯ ವ್ಯಕ್ತಿತ್ವದ ಎಲ್ಲ ಮಗ್ಗುಲುಗಳ ಮೇಲೂ ನಿರಂತರ ದೃಷ್ಟಿ ಹಾಯಿಸುತ್ತ ಇರಬೇಕು. ಹಾಗೆಯೇ ಕಾಲಕಾಲಕ್ಕೆ ಕೂಲಂಕುಶ ಅವಲೋಕನ ನಡೆಸುತ್ತ ವಿದ್ಯಾರ್ಥಿಯ ಪ್ರಗತಿ ಚಾರ್ಟನ್ನು★ ತಯಾರಿಸಬೇಕು. ಈ ಮೂಲಕ ಅಧ್ಯಾಪಕರು ಮತ್ತು ಪೋಷಕರು ಎಲ್ಲ ವಿದ್ಯಾರ್ಥಿಗಳ ಪರಿಸ್ಥಿತಿ ಹಾಗೂ ಪ್ರಗತಿಯ ಗತಿಯ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ ಅಗತ್ಯಾನುಸಾರ ಸುಧಾರಣೆಗೂ ಪ್ರಯತ್ನಿಸಬಹುದಾಗಿದೆ.

1. ದೈಹಿಕ ಸ್ಥಿತಿಗತಿಯ ಅವಲೋಕನ

ದಾಖಲಾತಿಯ ವೇಳೆ ಮತ್ತು ಪ್ರತಿಯೊಂದು ಶೈಕ್ಷಣಿಕ ವರ್ಷದ ಆರಂಭದಲ್ಲಿ ಈ ಕೆಳಗಿನ ವಿಷಯಗಳ ಅವಲೋಕನ ನಡೆಸಿ ಪ್ರಗತಿ ಪತ್ರದಲ್ಲಿ ನಮೂದಿಸಬೇಕು.

(i) ಎತ್ತರ (ii) ತೂಕ (iii) ದೃಕ್ಶಕ್ತಿ (iv) ಶ್ರವಣ ಶಕ್ತಿ (v) ಕಾಯಿಲೆ ಅಥವಾ ಅಂಟುರೋಗ (vi) ದೈಹಿಕ ಸ್ಥಿತಿ (vii) ಸಿಡುಬು ಅಥವಾ ಇತರ ಚುಚ್ಚು ಮದ್ದು (viii) ಅಗತ್ಯದ ಮಾರ್ಗದರ್ಶನ.

ಆರೋಗ್ಯ ತಪಾಸಣೆಗೆ ಕಾಲಕಾಲಕ್ಕೆ ಯಾರಾದರೂ ತಜ್ಞ ವೈದ್ಯರ ಸೇವೆ ಲಭಿಸುವುದಾದರೆ ಉತ್ತಮ.

ಕನಿಷ್ಠ ಮೂರು ತಿಂಗಳಿಗೊಮ್ಮೆ ಸಾಮಾನ್ಯ ದೈಹಿಕ ತಪಾಸಣೆ, ಆಟ, ವ್ಯಾಯಾಮ ಅಥವಾ ದೈಹಿಕ ಪರಿಶ್ರಮದ ಅಭ್ಯಾಸ ಮಾಡಿಸುವುದು ಮತ್ತು ಆರೋಗ್ಯ ರಕ್ಷಣೆಯ ಸೂತ್ರಗಳ ಪಾಲನೆಯನ್ನು ಪರಿಶೀಲಿಸುತ್ತ ಅದನ್ನು ಪ್ರಗತಿ ಪತ್ರದಲ್ಲಿ ನಮೂದಿಸಬೇಕು.

2. ಪ್ರಾಯೋಗಿಕ, ನೈತಿಕ ಮತ್ತು ಸಾಮಾಜಿಕ ಸ್ಥಿತಿಯ ಅವಲೋಕನ

ಶೈಕ್ಷಣಿಕ ವರ್ಷದ ಆರಂಭದಲ್ಲಿ ವಿವರವಾಗಿ ಮತ್ತು ಪ್ರತಿ ಮೂರನೇ ತಿಂಗಳು ಸಂಕ್ಷಿಪ್ತವಾಗಿ ತಮ್ಮ ವೀಕ್ಷಣೆ ಮತ್ತು ಪೋಷಕರ ವರದಿಯಿಂದ ಈ ಕೆಳಗಿನ ವಿಷಯಗಳನ್ನು ನಮೂದಿಸಬೇಕು.

- **ಮೆಚ್ಚುಗೆಯ ಅಭ್ಯಾಸ-ಗುಣಗಳು:** ನಮಾಝ್ ಪಾಲನೆ, ಸತ್ಯವಂತಿಕೆ, ವಿನಯಶೀಲತೆ ಇತ್ಯಾದಿ.
- **ಅಪ್ರಿಯ ಗುಣಗಳು:** ಸುಳ್ಳು, ಕಳ್ಳತನ, ಉದ್ಧಟತನ, ಹೊಗೆ ಬತ್ತಿ ಸೇವನೆ ಇತ್ಯಾದಿ.
- **ಸ್ವಚ್ಛತೆ-ಅಚ್ಚುಕಟ್ಟುತನ:** ದೇಹ, ವಸ್ತ್ರ ಮತ್ತು ಓದು ಬರೆಹದ ವಸ್ತುಗಳಿಗೆ ಸಂಬಂಧಿಸಿ.
- **ಶಿಷ್ಟಾಚಾರ:** ಮಸೀದಿಯ ಶಿಷ್ಟಾಚಾರ, ತರಗತಿಯ ಶಿಷ್ಟಾಚಾರ, ಸಾಮೂಹಿಕ

★ ವಿವರಣೆಗಳಿಗಾಗಿ ನೋಡಿರಿ: 'ವಿದ್ಯಾರ್ಥಿಗಳ ಪ್ರಗತಿ ಪತ್ರ'- ಪ್ರ: ಮರ್ಕಝಿ ಮುಕ್ತಬಾ ದೆಹಲಿ

ಶಿಷ್ಟಾಚಾರ; ಆಹಾರ-ಪಾನೀಯ ಸೇವನೆ, ನಡೆ-ನುಡಿ, ಭೇಟಿ ಮತ್ತು ಮಾತುಕತೆಯ ಶಿಷ್ಟಾಚಾರ.

- ಅಧ್ಯಾಪಕರು, ಹೆತ್ತವರು, ಒಡಹುಟ್ಟಿದವರು, ತರಗತಿ ಮತ್ತು ಶಾಲೆಯ ಸಹಪಾಠಿಗಳು ಹಾಗೂ ಗೆಳೆಯ/ಗೆಳತಿಯರೊಂದಿಗೆ ವ್ಯವಹಾರ.
- ಹೊಣೆಗಾರಿಕೆಯ ಪ್ರಜ್ಞೆ, ಪರಿಶ್ರಮ ಮತ್ತು ಮಗ್ನತೆ ವಿಶೇಷತಃ ಹಾಜರಿ ಮತ್ತು ಸಮಯ ಪಾಲನೆ, ಓದು-ಬರೆಹ ಮತ್ತು ಮನೆಗೆಲಸದಲ್ಲಿ ಆಸಕ್ತಿ, ತರಗತಿಯ ಸ್ವಚ್ಛತೆ ಮತ್ತು ಶೃಂಗಾರ, ಮನೆ ಮತ್ತು ತರಗತಿಯ ಕೆಲಸ-ಕಾರ್ಯಗಳಲ್ಲಿ ಸಹಾಯ ಹಾಗೂ ಪಠ್ಯೇತರ ಚಟುವಟಿಕೆ, ಶಾಲೆಯ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಿಕೆ ಇತ್ಯಾದಿ.

3. ಶೈಕ್ಷಣಿಕ ಸ್ಥಿತಿಯ ಅವಲೋಕನ

ಶೈಕ್ಷಣಿಕ ವರ್ಷದ ಪ್ರಥಮ ಹಂತದಲ್ಲಿ ಈ ಕೆಳಗಿನ ವಿಷಯಗಳನ್ನು ಅವಲೋಕಿಸಿ ದಾಖಲೆಯಲ್ಲಿ ನಮೂದಿಸಬೇಕು.

i. ಸಾಮಾನ್ಯ ಬೌದ್ಧಿಕ ಸ್ಥಿತಿ ii. ಹೆಚ್ಚು ಆಸಕ್ತಿ ವಹಿಸುವ ಪಠ್ಯ

iii. ದುರ್ಬಲವಾಗಿರುವ ಪಠ್ಯ iv. ದೌರ್ಬಲ್ಯ ದೂರ ಮಾಡಲಿಕ್ಕಿರುವ ಸಲಹೆ.

ತರುವಾಯ ದೈನಂದಿನ ಲಿಖಿತ ಮತ್ತು ಮೌಖಿಕ ಕೆಲಸ ಹಾಗೂ ಪರಿಶೀಲನೆಯ ಫಲಿತಾಂಶದ ಬೆಳಕಿನಲ್ಲಿ ಮಾಸಿಕ ವರದಿ, ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಯ ಫಲಿತಾಂಶ ನಮೂದಿಸಬೇಕು.

ಬಾಹ್ಯ ಅಧ್ಯಯನ (ಪಠ್ಯೇತರ) ವಿಶೇಷತಃ ಗ್ರಂಥಾಲಯ ಮತ್ತು ವಾಚನಾಲಯದಿಂದ ಪ್ರಯೋಜನ ಪಡೆಯುತ್ತಿರುವುದರ ಬಗ್ಗೆ ತ್ರೈಮಾಸಿಕ ವರದಿ ತಯಾರಿಸಬೇಕು. ಈ ವರದಿಗಳ ಫಲಿತಾಂಶವನ್ನು ವಿದ್ಯಾರ್ಥಿಗಳ ಪೋಷಕರಿಗೆ ತಿಳಿಸಬೇಕು. ಈ ಮೂಲಕ ವಿದ್ಯಾರ್ಥಿಗಳ ಶಿಕ್ಷಣ-ತರಬೇತಿಯಲ್ಲಿ ಅವರ ಸಹಕಾರವನ್ನು ಉತ್ತಮವಾಗಿ ಪಡೆಯಬಹುದು.

◆ ◆ ◆

ಅಧ್ಯಾಯ-30

ವೈಯಕ್ತಿಕ ಮತ್ತು ತರಗತಿ ಶಿಕ್ಷಣ

ನಮ್ಮಲ್ಲಿ ಸರಿಯಾಗಿ ತರಗತಿಗಳನ್ನು ರಚಿಸದಂತಹ ಅದೆಷ್ಟೋ ಪಾಠಶಾಲೆಗಳಿವೆ. ಪ್ರತಿಯೊಂದು ಮಗುವಿನ ಪಠ್ಯವೂ ಪ್ರತ್ಯೇಕವಾಗಿರುತ್ತದೆ. ಅಧ್ಯಾಪಕನು ಒಂದು ಮಗುವನ್ನು ಹತ್ತಿರಕ್ಕೆ ಕರೆಯುತ್ತಾನೆ ಮತ್ತು ಅದರ ಹಿಂದಿನ ಪಾಠವನ್ನು ಕೇಳುತ್ತಾನೆ. ಬಳಿಕ ಅದಕ್ಕೆ ಮುಂದಿನ ಪಾಠವನ್ನು ಹೇಳಿಕೊಟ್ಟು ಕಂಠಪಾಠ ಮಾಡಲು ಬಿಡುತ್ತಾನೆ. ಹೀಗೆ ಸರದಿ ಪ್ರಕಾರ ಎಲ್ಲ ಮಕ್ಕಳಿಗೂ ಪಾಠವನ್ನು ಕಲಿಸುತ್ತಾನೆ. ಕೆಲವೊಮ್ಮೆ ಪಾಠ ಕಲಿಸಲು ಅಥವಾ ಹೊಸ ಪಾಠ ನೀಡಲು ಇತರರಿಗಿಂತ ಚೂಟಿಯಾಗಿರುವ ಮತ್ತು ತನ್ನ ಪಾಠವನ್ನು ಬೇಗನೇ ಕಲಿತಿರುವ ಅಥವಾ ಪ್ರತಿಭೆ ಇತರ ಮಕ್ಕಳಿಗಿಂತ ಹೆಚ್ಚು ಪ್ರತಿಭೆಯಿರುವ ವಿದ್ಯಾರ್ಥಿಗಳಿಂದಲೂ ಸಹಾಯ ಪಡೆಯುತ್ತಾನೆ. ಈ ವಿಧಾನದಲ್ಲಿ ಈ ಕೆಳಗಿನ ಪ್ರಯೋಜನಗಳಿವೆ.

- ಪ್ರತಿಯೊಂದು ಮಗುವಿನ ಬಗ್ಗೆಯೂ ಅಧ್ಯಾಪಕ ವೈಯಕ್ತಿಕ ಗಮನ ನೀಡುತ್ತಾನೆ.
- ಪ್ರತಿ ಮಗುವಿಗೂ ತನ್ನ ಸ್ವಾಭಾವಿಕ ವೇಗದಂತೆ ಮುಂದುವರಿಯುವ ಅವಕಾಶವೊದಗುತ್ತದೆ.
- ಪ್ರತಿಯೊಂದು ಮಗುವೂ ತನ್ನ ಸಂಗಡಿಗರಿಗೆ ಪಾಠ ಕಲಿಯಲು ಸಹಾಯ ಮಾಡುತ್ತದೆ.
- ಇತರರಿಗೆ ಕಲಿಸುವುದರಿಂದ ತನ್ನ ಪಾಠವೂ ಚೆನ್ನಾಗಿ ಮನನವಾಗುತ್ತದೆ. ಇದರಿಂದ ಸಾಮರ್ಥ್ಯ ಹೆಚ್ಚುತ್ತದೆ. ಆದೇ ವೇಳೆ, ಈ ವಿಧಾನದಲ್ಲಿ ಕೆಲವು ನ್ಯೂನತೆಗಳೂ ಇರುತ್ತವೆ. ಉದಾ:
- ಒಂದು ಬಾರಿಗೆ ಅಧ್ಯಾಪಕನು ಒಂದೇ ಮಗುವಿನ ಬಗ್ಗೆ ಗಮನ ಹರಿಸಬಲ್ಲನು. ಇದರಿಂದ ಇತರ ಮಕ್ಕಳ ಹೆಚ್ಚಿನ ಸಮಯ ವ್ಯರ್ಥವಾಗುತ್ತದೆ.
- ಇಡೀ ದಿನದಲ್ಲಿ ಒಂದೆರಡು ಪಾಠಗಳಷ್ಟೇ ಕಲಿಸಲು ಸಾಧ್ಯವಾಗುತ್ತದೆ.
- ಸುಮ್ಮನೆ ಕುಳಿತುಕೊಳ್ಳುವುದರಿಂದ ಮಕ್ಕಳು ಸಾಮಾನ್ಯವಾಗಿ ತುಂಟಾಟಕ್ಕಿಳಿಯುತ್ತಾರೆ.

ಅವರನ್ನು ನಿಯಂತ್ರಣದಲ್ಲಿರಿಸಲಿಕ್ಕಾಗಿ ಅಧ್ಯಾಪಕನು ಕೊಂಚ ಹೆಚ್ಚೇ ಕಠೋರನಾಗಿ ಬಿಡುತ್ತದೆ.

- ಮಕ್ಕಳ ಮುಖಾಂತರ ಪಾಠ ಮಾಡಿಸುವುದರಿಂದ ಶಿಕ್ಷಣವು ತೀರಾ ಅಪೂರ್ಣವಾಗಿ ಬಿಡುತ್ತದೆ.
- ಶಿಕ್ಷಣ ನೀಡುವ ವಿಷಯದಲ್ಲಿ ಅಧ್ಯಾಪಕನು ಯಾವ ಮಕ್ಕಳಿಂದ ಸಹಾಯ ಪಡೆಯುತ್ತಾನೋ ಆ ಮಕ್ಕಳಲ್ಲಿ ತಮ್ಮ ವಿದ್ಯಾರ್ಹತೆಯ ಬಗ್ಗೆ ಜಂಭ ಮತ್ತು ಮೇಲರಿಮೆ ಹುಟ್ಟಿಕೊಳ್ಳುತ್ತದೆ. ಅವರು ತಮ್ಮ ಸಂಗಡಿಗರನ್ನು ಕೀಳಾಗಿ ಕಾಣುತ್ತಾರೆ ಮತ್ತು ಅವರೊಡನೆ ನಿಕೃಷ್ಟವಾಗಿ ವರ್ತಿಸತೊಡಗುತ್ತಾರೆ ಇತ್ಯಾದಿ.

ಒಟ್ಟಿನಲ್ಲಿ ವೈಯಕ್ತಿಕವಾಗಿ, ಪ್ರತಿಯೊಬ್ಬನಿಗೆ ಪ್ರತ್ಯಪ್ರತ್ಯೇಕವಾಗಿ ಕಲಿಸುವುದರಿಂದ ಶಿಕ್ಷಣ ಮತ್ತು ತರಬೇತಿ ಎರಡೂ ಬಹಳ ಪ್ರಭಾವಿತಗೊಳ್ಳುತ್ತದೆ. ತದ್ವಿರುದ್ಧವಾಗಿ ತರಗತಿಯನ್ನು ರಚಿಸಿ ಇಡೀ ತರಗತಿಗೆ ಒಟ್ಟಿಗೇ ಶಿಕ್ಷಣ ನೀಡುವ ಸಾಮಾನ್ಯ ಪದ್ಧತಿ ಇದೆಯಲ್ಲ, ಅದರಿಂದ ಬಹಳಷ್ಟು ಪ್ರಯೋಜನಗಳಿವೆ.

ತರಗತಿ ಶಿಕ್ಷಣದ ಪ್ರಯೋಜನಗಳು

- ಅಧ್ಯಾಪಕ ಮತ್ತು ವಿದ್ಯಾರ್ಥಿಗಳೀರ್ವರ ಸಮಯವು ಇತರ ಸೃಜನಾತ್ಮಕ ಕಾರ್ಯಗಳಿಗೆ ಉಳಿಯುತ್ತದೆ.
- ಒಬ್ಬನೇ ಅಧ್ಯಾಪಕ ಅನೇಕ ಮಕ್ಕಳಿಗೆ ಶಿಕ್ಷಣ ನೀಡಬಲ್ಲನು. ಹಾಗಾಗಿ ಕಡಿಮೆ ಪರಿಶ್ರಮದಲ್ಲಿ ಹೆಚ್ಚು ಕೆಲಸವಾಗುತ್ತದೆ.
- ಅಧ್ಯಾಪಕನು ಇಡೀ ತರಗತಿಯ ಮೇಲೆ ಏಕಕಾಲಕ್ಕೆ ಗಮನವೀಯಬಲ್ಲನು ಮತ್ತು ಎಲ್ಲ ಮಕ್ಕಳನ್ನೂ ಚಟುವಟಿಕೆಯಿಂದಿರಿಸಬಲ್ಲನು. ಇದರಿಂದ ಶಿಸ್ತು ಪಾಲನೆ ಸರಿಯಾಗಿರುತ್ತದೆ ಮತ್ತು ವಿದ್ಯಾರ್ಥಿಗಳ ಮೇಲೆ ಕಠೋರತೆ ಪಾಲಿಸುವ ಅಗತ್ಯ ಬಹಳ ಕಡಿಮೆ ಬೀಳುತ್ತದೆ.
- ವಿವಿಧ ವಿದ್ಯಾರ್ಥಿಗಳ ಸಮಾನ ಸಮಸ್ಯೆಗಳನ್ನು ಒಟ್ಟಿಗೇ ಪರಿಹರಿಸಬಹುದಾಗಿದೆ. ಪ್ರತಿಯೊಬ್ಬನಿಗೂ ಪ್ರತ್ಯೇಕ ಸಮಯ ನೀಡಬೇಕಾದ ಅಗತ್ಯ ಇರುವುದಿಲ್ಲ.
- ಯಾವುದೇ ಪಾಠವನ್ನು ಇಡೀ ತರಗತಿಗೆ ಮನವರಿಕೆ ಮಾಡಿಸಿಕೊಡಲು ವಿವಿಧ ರೀತಿಯಲ್ಲಿ ವಿವರಿಸಿ ಕೊಡಬೇಕಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ಒಂದೇ ವಿಷಯವನ್ನು ಬೇರೆ ಬೇರೆ ವಿಧಾನದಲ್ಲಿ ಪ್ರಸ್ತುತ ಪಡಿಸಲು ಕಲಿತುಕೊಳ್ಳುತ್ತಾರೆ.
- ವಿದ್ಯಾರ್ಥಿಗಳಿಗೆ ಅನುಕರಿಸಲು ವಿವಿಧ ಮಾದರಿಗಳು ದೊರೆಯುತ್ತವೆ.
- ಸಹವರ್ತಿಗಳ ಸಾಂಗತ್ಯದಿಂದ ಮಕ್ಕಳಿಗೆ ಅಸಾಮಾನ್ಯ ಸಂತೋಷದ ಅನುಭವವಾಗುತ್ತದೆ.

- ಸಹಕಾರ, ಸಹಾನುಭೂತಿ ಮತ್ತು ಇತರ ಸಾಮೂಹಿಕ ಗುಣಗಳು ಬೆಳೆದು ಬರುತ್ತವೆ.
- ಪುಸ್ತಕ ಮತ್ತು ಇತರ ಶೈಕ್ಷಣಿಕ ವಸ್ತುಗಳ ಕೊರತೆ ತಲೆದೋರುವುದಿಲ್ಲ, ಈ ವಿಷಯದಲ್ಲಿ ಪರಸ್ಪರ ಸಹಾಯ-ಸಹಕಾರ ನಡೆಯುತ್ತಿರುತ್ತದೆ.
- ವಿದ್ಯಾರ್ಥಿಗಳು ಪರಸ್ಪರರನ್ನು ಕಂಡು ಶೈಕ್ಷಣಿಕ ಕಾರ್ಯಗಳಲ್ಲಿ ಆಸಕ್ತಿ ವಹಿಸುತ್ತಾರೆ. ಇತರರು ಅಧ್ಯಾಪಕನಿಂದ ಪ್ರಭಾವಿತಗೊಳ್ಳುವುದನ್ನು ಕಂಡು ತಾವೂ ಪ್ರಭಾವಿತರಾಗುತ್ತಾರೆ. ಹೀಗೆ ಮಕ್ಕಳ ಆಸಕ್ತಿ-ಪ್ರಭಾವ ಕಂಡು ಅಧ್ಯಾಪಕನಲ್ಲೂ ಪಾಠ ಮಾಡುವುದರಲ್ಲಿ ಹೆಚ್ಚೆಚ್ಚು ಆಸಕ್ತಿ ಬೆಳೆದು ಬರುತ್ತದೆ. ಹೀಗೆ ಅಧ್ಯಾಪಕ ಮತ್ತು ವಿದ್ಯಾರ್ಥಿಗಳೀರ್ವರಲ್ಲೂ ತರಗತಿ ಶಿಕ್ಷಣದಲ್ಲಿ ಹೆಚ್ಚು ಆಸಕ್ತಿ ಬೆಳೆಯುತ್ತದೆ.
- ಸ್ಪರ್ಧೆಗೆ ಹೆಚ್ಚೆಚ್ಚು ಅವಕಾಶ ಒದಗುತ್ತದೆ. ಇದು ವಿದ್ಯಾರ್ಥಿಗಳಿಗೆ ಅಪಾರ ಪರಿಶ್ರಮ, ಗಮನ ಮತ್ತು ಆಸಕ್ತಿಯಿಂದ ಕೆಲಸ ಮಾಡಲು ಪ್ರೇರೇಪಿಸುತ್ತದೆ.

ನ್ಯೂನತೆಗಳು

ತರಗತಿ ಶಿಕ್ಷಣದಲ್ಲಿ ಹಲವು ಪ್ರಯೋಜನಗಳಿರುವಂತೆಯೇ ಕೆಲವು ಮೂಲಭೂತ ನ್ಯೂನತೆಗಳೂ ಇವೆ. ಉದಾಹರಣೆಗೆ:-

- ಎಲ್ಲ ಮಕ್ಕಳೂ ಸಮಾನ ಸಾಮರ್ಥ್ಯವನ್ನು ಹೊಂದಿರುತ್ತಾರೆ ಎಂಬ ಕಲ್ಪನೆಯೊಂದಿಗೆ ತರಗತಿ ಶಿಕ್ಷಣ ನೀಡಲಾಗುತ್ತದೆ. (ವಸ್ತುತಃ ದೇಹ, ಮನಸ್ಸು, ಸ್ವಭಾವ ಮತ್ತು ಪ್ರಕೃತಿಯ ಆಧಾರದಲ್ಲಿ ವ್ಯಕ್ತಿಗಳ ನಡುವೆ ವ್ಯತ್ಯಾಸವು ಸ್ವಾಭಾವಿಕವಾಗಿದೆ.) ಹಾಗಾಗಿ ಅವರ ಈ ವೈಯಕ್ತಿಕ ವ್ಯತ್ಯಾಸವನ್ನು ಕಡೆಗಣಿಸಿ ಎಲ್ಲರನ್ನೂ ಒಂದೇ ರೀತಿ ನಡೆಸಲಾಗುತ್ತದೆ.
- ತರಗತಿ ಶಿಕ್ಷಣದಲ್ಲಿ ಬುದ್ಧಿವಂತ ಮತ್ತು ಮಂದ ಬುದ್ಧಿ ಎರಡೂ ರೀತಿಯ ಮಕ್ಕಳಿಗೆ ನಷ್ಟವುಂಟಾಗುತ್ತದೆ. ಚತುರ ಮತ್ತು ವೇಗವಾಗಿ ಕಲಿಯುವ ಮಕ್ಕಳನ್ನು ನಿಧಾನವಾಗಲು ಮತ್ತು ನಿಧಾನಗತಿಯ ಮಕ್ಕಳನ್ನು ವೇಗವಾಗಲು ಒತ್ತಾಯಿಸಲಾಗುತ್ತದೆ. ಹೀಗೆ ಎರಡೂ ರೀತಿಯ ಮಕ್ಕಳು ತಮ್ಮ ಸ್ವಾಭಾವಿಕ ವೇಗದಂತೆ ಕಲಿಯುವ ಅವಕಾಶದಿಂದ ವಂಚಿತರಾಗುತ್ತಾರೆ.
- ಬೋಧನೆಯ ಕಾರ್ಯವನ್ನು ಮಧ್ಯಮ ಸಾಮರ್ಥ್ಯದ ಮಕ್ಕಳನ್ನು ಪರಿಗಣಿಸಿ ರೂಪಿಸಲಾಗುತ್ತದೆ. ಹಾಗಾಗಿ ಕಲಿಕೆಯ ವೇಗವು ಸಾಮಾನ್ಯವಾಗಿ ನಿಧಾನವಾಗಿರುತ್ತದೆ ಮತ್ತು ಅಧ್ಯಾಪಕ ಹಾಗೂ ವಿದ್ಯಾರ್ಥಿಗಳೀರ್ವರೂ ಕಲಿಕೆಯ ವೇಗದ ಬಗ್ಗೆ ಸಮಾಧಾನ ಹೊಂದಿರುವುದಿಲ್ಲ.
- ಗೈರು ಹಾಜರಿ ಅಥವಾ ಅನಾರೋಗ್ಯದ ಕಾರಣ ಹಿಂದುಳಿಯುವ ಮಕ್ಕಳ ಬಗ್ಗೆ ವೈಯಕ್ತಿಕ ಗಮನ ಹರಿಸಲಾಗುವುದಿಲ್ಲ, ಹೀಗಾಗಿ ಆ ಕೊರತೆ ಪೂರ್ತಿಯಾಗದ

ಕಾರಣ ಅವರು ಇನ್ನಷ್ಟು ಹಿಂದುಳಿಯುತ್ತಾರೆ. ಹಲವೊಮ್ಮೆ ಈ ಕೊರತೆಯೇ ಉತ್ತಮ ಹಾಗೂ ಬುದ್ಧಿವಂತ ಮಕ್ಕಳಲ್ಲಿ ನಿರಾಶೆ ಹಾಗೂ ಶಿಕ್ಷಣದ ಬಗ್ಗೆ ತಾತ್ಸಾರಕ್ಕೆ ಕಾರಣವಾಗುತ್ತದೆ.

- ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ನಡುವೆ ವೈಯಕ್ತಿಕ ಸಂಪರ್ಕಕ್ಕೆ ಅವಕಾಶ ತೀರಾ ಕಡಿಮೆ ಇರುತ್ತದೆ. ಹಾಗಾಗಿ ಅವರ ಶಿಕ್ಷಣ-ತರಬೇತಿ ಮತ್ತು ಪ್ರಗತಿಯ ಗತಿಯ ಬಗ್ಗೆ ಸರಿಯಾದ ಅಂದಾಜು ಇರುವುದಿಲ್ಲ, ಅಲ್ಲದೆ ಅವರೆಡೆಗೆ ಸೂಕ್ತ ಗಮನಕ್ಕೂ ಅವಕಾಶವಿರುವುದಿಲ್ಲ.
- ಕೆಟ್ಟ ಸಹಪಾಠಿಗಳ ಸಹವಾಸದಿಂದ ಬುದ್ಧಿ ಹಾಳಾಗುವ ಸಂಭವವೂ ಇರುತ್ತದೆ.
- ವಿದ್ಯಾರ್ಥಿಗಳಿಗೆ ಪಾಠದಲ್ಲಿ ಪ್ರಾಯೋಗಿಕ ಆಸಕ್ತಿಯನ್ನು ವಹಿಸಲು ಮತ್ತು ಸ್ವಯಂ ಮಾಡಿ ಕಲಿಯಲು ಕಡಿಮೆ ಅವಕಾಶವಿರುತ್ತದೆ.
- ಎಲ್ಲಕ್ಕಿಂತ ದೊಡ್ಡ ಕೊರತೆಯೇನೆಂದರೆ, ಮಗುವಿನ ಬದಲು ಶಿಕ್ಷಣವೇ ಕೇಂದ್ರೀಯ ವಿಷಯವಾಗಿ ಬಿಡುತ್ತದೆ ಮತ್ತು ಎಲ್ಲ ಗಮನವು ಹೆಚ್ಚೆಚ್ಚು ಕಲಿಸುವುದರಲ್ಲಿಯೇ ಕೇಂದ್ರೀಕೃತವಾಗುತ್ತದೆ. ಮಕ್ಕಳು ಅದರಿಂದ ಎಷ್ಟು ಪ್ರಯೋಜನ ಪಡೆಯುತ್ತಿದ್ದಾರೆ ಎಂಬುದರ ಬಗ್ಗೆ ಗಮನ ಹರಿಯುವುದು ತೀರಾ ಕಡಿಮೆ.

ನ್ಯೂನತೆಗಳನ್ನು ನೀಗಿಸುವ ಉಪಾಯಗಳು

ಶಿಕ್ಷಣದಲ್ಲಿ ನಿಶ್ಚಯವಾಗಿಯೂ ಅನೇಕ ನ್ಯೂನತೆಗಳಿವೆಯಾದರೂ ಹಲವು ಕಾರಣಗಳಿಂದ ಈ ವಿಧಾನವೇ ಅನಿವಾರ್ಯ ಮತ್ತು ಜಗತ್ತಿನಾದ್ಯಂತ ಅಂಗೀಕೃತವಾಗಿದೆ. ಶಿಕ್ಷಣವನ್ನು ಹೇಗಿದ್ದರೂ ತರಗತಿ ವಿಧಾನದಿಂದಲೇ ನೀಡಬೇಕಾಗಿದೆ. ಆದರೆ ಅದರ ಜೊತೆಗೇ ಈ ಮೇಲೆ ತಿಳಿಸಲಾಗಿರುವ ಅದರ ನ್ಯೂನತೆಗಳನ್ನು ನೀಗಿಸುವ ಪ್ರಯತ್ನವನ್ನು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಕೆಲವು ಉಪಾಯಗಳನ್ನು ಇಲ್ಲಿ ನೀಡುತ್ತಿದ್ದೇವೆ.

- ದಾಖಲಾತಿಯ ವೇಳೆ ಮತ್ತು ತರಗತಿ ರಚಿಸುವ ವೇಳೆ, ಒಂದು ತರಗತಿಯಲ್ಲಿ ಸಾಧ್ಯಂತ ಒಂದೇ ಪ್ರಾಯದ ಮತ್ತು ಸಮಾನ ಬೌದ್ಧಿಕ, ದೈಹಿಕ ಮತ್ತು ಶೈಕ್ಷಣಿಕ ಸಾಮರ್ಥ್ಯವುಳ್ಳ ಮಕ್ಕಳನ್ನು ಸೇರಿಸಬೇಕು.
- ಮಕ್ಕಳ ವೈಯಕ್ತಿಕ ವ್ಯತ್ಯಾಸ ಮತ್ತು ವಿಶೇಷತೆಗಳನ್ನು ಸಂಪೂರ್ಣವಾಗಿ ಪರಿಗಣಿಸಬೇಕು ಹಾಗೂ ಅವರ ಮೇಲೆ ವೈಯಕ್ತಿಕ ಗಮನ ಹರಿಸಲು ಖಂಡಿತವಾಗಿಯೂ ಸಮಯ ನಿಗದಿಪಡಿಸಬೇಕು.
- ವಿದ್ಯಾರ್ಥಿಗಳೊಂದಿಗೆ ಖಾಸಗಿ ಸಂಪರ್ಕ ಇರಿಸಲು ಅವರೊಡನೆ ವೈಯಕ್ತಿಕ ಭೇಟಿ ನಡೆಸುತ್ತಿರಬೇಕು ಮತ್ತು ಪ್ರಮುಖ ವಿಷಯಗಳ ಬಗ್ಗೆ ಗಮನವನ್ನು ಸೆಳೆಯಬೇಕು.

- ತರಗತಿ ಮತ್ತು ಶಾಲೆಯ ವಾತಾವರಣ ಹಾಗೂ ಸುತ್ತಮುತ್ತಲ ಪರಿಸರವನ್ನು ಪರಿಶುದ್ಧವಾಗಿರಿಸಲು ಸಂಪೂರ್ಣ ಪ್ರಯತ್ನಿಸಬೇಕು. ಮಕ್ಕಳು ಉತ್ತಮ ಸ್ವಭಾವಗಳಿಂದ ಪ್ರಭಾವಿತರಾಗುವಂತಾಗಲು ಮತ್ತು ಅವರನ್ನು ಕೆಟ್ಟ ಸಹವಾಸ, ಸ್ವಭಾವಗಳಿಂದ ಸುರಕ್ಷಿತವಾಗಿರಿಸಲು ಅವರ ಮುಂದೆ ಉತ್ತಮ ಮಾದರಿಯನ್ನು ಪ್ರದರ್ಶಿಸಬೇಕು.
- ಸಾಮರ್ಥ್ಯ-ಪ್ರತಿಭೆಯ ಆಧಾರದಲ್ಲಿ ತರಗತಿಯ ಮಕ್ಕಳನ್ನು ವಿವಿಧ ತಂಡ ಮತ್ತು ಗುಂಪುಗಳಾಗಿ ವಿಂಗಡಿಸಬೇಕು. ಪ್ರತಿಯೊಂದು ತಂಡಕ್ಕೂ ಒಬ್ಬ ಮೇಲ್ವಿಚಾರಕನಿರಬೇಕು, ಮಕ್ಕಳಿಗೆ ತಂಡದೊಂದಿಗೆ ಬೆರೆತು ಕೆಲಸ ಮಾಡಲು ಆದಷ್ಟು ಅವಕಾಶಗಳು ಒದಗುತ್ತಿರಬೇಕು. ಅಗತ್ಯಾನುಸಾರ ಪ್ರತಿಯೊಂದು ತಂಡಕ್ಕೂ ಸಹಾಯ-ಸಹಕಾರ ನೀಡಬೇಕು.
- ಹೆಚ್ಚೆಚ್ಚು ಸವಾಲು, ಅಭ್ಯಾಸ ಮತ್ತು ಬರವಣಿಗೆ ಹಾಗೂ ಪ್ರಾಯೋಗಿಕ ಕೆಲಸಗಳನ್ನು ನೀಡುತ್ತ ವೈಯಕ್ತಿಕ ಪರಿಶ್ರಮ ಮತ್ತು ಪ್ರತಿಭೆಗಳನ್ನು ಅವಲೋಕಿಸಲು ಅವಕಾಶಗಳನ್ನು ಒದಗಿಸುತ್ತಿರಬೇಕು.
- ವೈಯಕ್ತಿಕ ಸಾಮರ್ಥ್ಯ ಮತ್ತು ಒಲವುಗಳನ್ನು ಪರಿಗಣಿಸಿಯೇ ಮನೆಗೆಲಸವನ್ನು ನೀಡಬೇಕು.
- ಕಲಿಕೆಯಲ್ಲಿ ದುರ್ಬಲ ಮತ್ತು ಹಿಂದುಳಿದ ಮಕ್ಕಳು ವೈಯಕ್ತಿಕ ಗಮನಕ್ಕೆ ಹೆಚ್ಚು ಅರ್ಹರು. ಅವರನ್ನು ಇತರ ಮಕ್ಕಳಿಗೆ ಸರಿಸಾಟಿಯಾಗಿ ಕೊಂಡೊಯ್ಯಲು ಸಾಧ್ಯಂತ ಪ್ರಯತ್ನಿಸಬೇಕು. ಇತರ ಮಕ್ಕಳಿಗೆ ಬರವಣಿಗೆ ಅಥವಾ ಪ್ರಾಯೋಗಿಕ ಕೆಲಸ ನೀಡುವ ಮೂಲಕ ದುರ್ಬಲ ಮಕ್ಕಳ ಕಡೆಗೆ ವೈಯಕ್ತಿಕ ಗಮನ ಹರಿಸಬಹುದಾಗಿದೆ. ಒಟ್ಟಿನಲ್ಲಿ ಪ್ರತಿಯೊಬ್ಬನಿಗೂ ಅವನ ಪ್ರಾಕೃತಿಕ ಗತಿಯೊಂದಿಗೆ ಪ್ರಗತಿ ಹೊಂದಲು ಅವಕಾಶ ನೀಡಬೇಕು.

◆ ◆ ◆

ಅಧ್ಯಾಯ-31

ಪಠ್ಯಗಳ ಪರಸ್ಪರ ಸಂಬಂಧ

ಶಾಲೆಗಳಲ್ಲಿ ಪಠ್ಯಗಳ ಭಾರ ದಿನೇದಿನೇ ಹೆಚ್ಚುತ್ತಿದೆ. ಪ್ರತಿಯೊಂದು ಪಠ್ಯ ಪುಸ್ತಕವೂ ಜೀವನದ ಯಾವುದಾದರೊಂದು ರಂಗಕ್ಕೆ ಸಂಬಂಧಿಸಿದೆಯಾದ್ದರಿಂದ, ಯಾವುದೇ ಪಠ್ಯವನ್ನು ಕಡೆಗಣಿಸಲು ಸಾಧ್ಯವಿಲ್ಲ. ಇತರ ಶಾಲೆಗಳಿಗೆ ಹೋಲಿಸಿದರೆ, ಧಾರ್ಮಿಕ ಶಾಲೆಗಳಲ್ಲಿ ಪಠ್ಯಗಳ ಸಂಖ್ಯೆ ಇನ್ನೂ ಹೆಚ್ಚಿರುತ್ತವೆ. ಏಕೆಂದರೆ, ಅಲ್ಲಿ ಶಾಲಾಪಠ್ಯ ಪದ್ಧತಿಯಲ್ಲದೆ, ಇಸ್ಲಾಮಿಯಾತ್ ಮತ್ತು ಉರ್ದು ಶಿಕ್ಷಣ ನೀಡುವುದೂ ಅನಿವಾರ್ಯವಾಗಿದೆ. ಹಾಗಾಗಿ ಪ್ರೈಮರಿ ತರಗತಿಯ ಮಕ್ಕಳು ಈ ಕೆಳಗಿನ ಪಠ್ಯಗಳನ್ನು ಕಲಿಯಬೇಕಾಗಿ ಬರುತ್ತದೆ.

1. ಇಸ್ಲಾಮಿಯಾತ್,
2. ಉರ್ದು,
3. ಹಿಂದಿ (ಅಥವಾ ಪ್ರಾಂತೀಯ ಭಾಷೆ)
4. ಗಣಿತ
5. ಸಾಮಾಜಿಕ ಶಾಸ್ತ್ರ (ಭೂಗೋಳ, ಇತಿಹಾಸ, ನಾಗರಿಕ ತರಬೇತಿ)
6. ವಿಜ್ಞಾನ
7. ಆರ್ಟ್-ಕ್ರಾಫ್ಟ್

ಕೆಲವೊಮ್ಮೆ ಇಂಗ್ಲಿಷ್, ಅರಬಿ ಮತ್ತು ಫಾರ್ಸಿ ಭಾಷೆಗಳ ಅಭ್ಯಾಸವನ್ನು ಪ್ರೈಮರಿ ತರಗತಿಗಳಲ್ಲಿ ನೀಡಲಾಗುತ್ತದೆ. ಈಗ ಕೊಂಚ ಆಲೋಚಿಸಿ ನೋಡಿ. ಓರ್ವ ಎಳೆಪ್ರಾಯದ ಬಾಲಕ ಮತ್ತು ಇಷ್ಟೆಲ್ಲ ಪುಸ್ತಕಗಳ ಭಾರ! ಅದರ ಮೇಲೆ-

- ಪ್ರತಿಯೊಂದು ಪಠ್ಯ ವಿಷಯವನ್ನೂ ಪ್ರತ್ಯಪ್ರತ್ಯೇಕ ಕಲಿಸಲಾಗುತ್ತದೆ.
- ಈ ಪಠ್ಯಗಳನ್ನು ಇನ್ನಷ್ಟು ವಿಭಾಗಗಳಾಗಿ ವಿಂಗಡಿಸಿ, ಪ್ರತಿಯೊಂದು ಭಾಗಕ್ಕೂ ವೇಳಾಪಟ್ಟಿಯಲ್ಲಿ ಪ್ರತ್ಯೇಕ ಸಮಯಗಳನ್ನು (ತರಗತಿಗಳನ್ನು) ಇರಿಸಲಾಗುತ್ತದೆ. ಉದಾ: ಇಸ್ಲಾಮಿಯಾತನ್ನು ಪಠಣ, ಫಿಕ್ಹ್, ಅಕಾಇದ್, ಸೀರತ್ ಇತ್ಯಾದಿ. ಉರ್ದುವಿನಲ್ಲಿ ಗದ್ಯ ಮತ್ತು ಪದ್ಯ, ಸಾಹಿತ್ಯ-ವ್ಯಾಕರಣ, ಶುದ್ಧಬರಹ, ಕೈ ಬರಹ ಇತ್ಯಾದಿ. ಅದೇ ರೀತಿ ಇತರ ಭಾಷೆಗಳಲ್ಲೂ, ಸಾಮಾಜಿಕ ಶಿಕ್ಷಣದಲ್ಲಿ ಭೂಗೋಳ, ಇತಿಹಾಸ ಇತ್ಯಾದಿ. ವಿಜ್ಞಾನದಲ್ಲಿ ಪ್ರಕೃತಿ ಅಧ್ಯಯನ, ಆರೋಗ್ಯ ರಕ್ಷಣೆ ಇತ್ಯಾದಿ.
- ಸಾಮಾನ್ಯವಾಗಿ ಈ ಒಳ ಪಠ್ಯಗಳನ್ನು ಪ್ರತ್ಯಪ್ರತ್ಯೇಕವಾಗಿ ಕಲಿಸಲಾಗುತ್ತದೆ. ಒಂದೇ ಪಠ್ಯದ ವಿವಿಧ ಅಧ್ಯಾಯಗಳಲ್ಲೂ ಪರಸ್ಪರ ಸಂಬಂಧವಿರುವುದಿಲ್ಲ.

- ಕೆಲವೆಡೆ ಪ್ರಾಥಮಿಕ ತರಗತಿಗಳಲ್ಲಿಯೇ ಒಂದೇ ತರಗತಿಯ ವಿವಿಧ ಪಠ್ಯಗಳು ಬೇರೆ ಬೇರೆ ಅಧ್ಯಾಪಕರ ಹೊಣೆಯಲ್ಲಿರುತ್ತವೆ. ಇದರಿಂದ ಪಠ್ಯಗಳ ಪರಸ್ಪರ ವ್ಯತ್ಯಾಸವು ಇನ್ನೂ ಹೆಚ್ಚುತ್ತದೆ.

ಒಟ್ಟಿನಲ್ಲಿ ಕೆಲವು ಅನಿವಾರ್ಯತೆಗಳು ಮತ್ತು ಒಂದಿಷ್ಟು ನಮ್ಮ ಯುಕ್ತಿಹೀನತೆಯ ಕಾರಣವಾಗಿ ಪಠ್ಯಗಳ ಭಾರವು ಮಕ್ಕಳಿಗೆ ಹೊರಲಾಗದಷ್ಟು ಹೆಚ್ಚಾಗಿ ಬಿಡುತ್ತದೆ. ತತ್ಪರಿಣಾಮವಾಗಿ,

- ಆರಂಭದಲ್ಲೇ ಪಠ್ಯಗಳ ಭಾರದಡಿ ಸಿಲುಕಿ, ಅವರ ಆರೋಗ್ಯ ಕೆಡುತ್ತದೆ.
- ದೈಹಿಕ ಬೆಳವಣಿಗೆ ನಿಂತು ಹೋಗುತ್ತದೆ. ಮನಸ್ಸಿಗೆ ಕಹಿಯೆನಿಸಿ ಬಿಡುತ್ತದೆ.
- ಶಿಕ್ಷಣವನ್ನು ಒಂದು ಸಮಗ್ರವಾದ ಏಕವಸ್ತುವನ್ನಾಗಿ ಪರಿಗಣಿಸುವ ಬದಲು ಅದರ ವಿವಿಧ ವಿಭಾಗಗಳಾಗಿ ಕಲಿಸುವುದರಿಂದ ವಿದ್ಯಾರ್ಥಿಗಳು ಬೌದ್ಧಿಕ ಅಸ್ಥಿರತೆಗೆ ಈಡಾಗುತ್ತಾರೆ.
- ವಿವಿಧ ಪಠ್ಯಗಳು ಪರಸ್ಪರ ಮತ್ತು ಪಠ್ಯವೊಂದರ ವಿವಿಧ ಅಧ್ಯಾಯಗಳು ಪರಸ್ಪರ ಗಾಢ ಸಂಬಂಧವನ್ನು ಹೊಂದಿವೆ. ಒಂದು ವೇಳೆ ಅವುಗಳನ್ನು ಒಟ್ಟು ಸೇರಿಸಿ ಕಲಿಸಿದರೆ ಚೆನ್ನಾಗಿ ವಿವರಿಸಲೂ ಸುಲಭವಾಗುವುದು. ಮಕ್ಕಳಿಗೆ ಸರಿಯಾಗಿ ಮನವರಿಕೆಯೂ ಆಗುವುದು ಮತ್ತು ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಆಸಕ್ತಿಯನ್ನೂ ವಹಿಸುವರು. ಆದರೆ ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕಲಿಸುವುದರಿಂದ ಮಕ್ಕಳು ಆ ಸವಲತ್ತಿನಿಂದ ವಂಚಿತರಾಗುತ್ತಾರೆ. ಉದಾ: ಪಠ್ಯಪುಸ್ತಕದಲ್ಲಿ ಕಲಿಸುವುದನ್ನೇ ವ್ಯಾಕರಣ, ಬರೆಹ ಮತ್ತಿತರ ಕೆಲಸಗಳಲ್ಲೂ ಕಲಿಸಿದರೆ ಬಹಳ ಸುಲಭವಾಗುತ್ತದೆ. ಆದರೆ ಅವುಗಳನ್ನೇ ಪ್ರತ್ಯಪ್ರತ್ಯೇಕವಾಗಿ ಪರಿಗಣಿಸಿದರೆ ಭಾರ ಹೆಚ್ಚುವುದು.

ಆದ್ದರಿಂದ ಪಠ್ಯಗಳ ಭಾರವನ್ನು ಕಡಿಮೆಗೊಳಿಸಲು ಮತ್ತು ಬೋಧನೆಯನ್ನು ಪರಿಣಾಮಕಾರಿಯಾಗಿಸಲು ಪಠ್ಯಗಳನ್ನು ಸಾದ್ಯಂತ ಪರಸ್ಪರ ಜೋಡಿಸಿ ಕಲಿಸಬೇಕಾದುದು ಮತ್ತು ಒಂದು ಪಠ್ಯದ ವಿವಿಧ ಅಧ್ಯಾಯಗಳಲ್ಲಿ ಸಂಬಂಧ ಜೋಡಿಸಿ ಕಲಿಸಬೇಕಾದುದು ಅಗತ್ಯ. ಪ್ರಾಥಮಿಕ ತರಗತಿಗಳಲ್ಲಿ ಕ್ಲಾಸ್‌ಟೀಚರ್ ವ್ಯವಸ್ಥೆಯನ್ನು ಪಾಲಿಸಬೇಕು ಮತ್ತು ಒಂದು ತರಗತಿಯ ಹೆಚ್ಚಿನ ಪಠ್ಯಗಳನ್ನು ಓರ್ವನೇ ಅಧ್ಯಾಪಕ ಕಲಿಸುವಂತಾಗಬೇಕು. ಹಾಗಿದ್ದಾಗ ಆತ ಪಠ್ಯ ಮತ್ತು ಅಧ್ಯಾಯಗಳ ನಡುವೆ ಸಂಬಂಧವನ್ನು ಜೋಡಿಸಲು ಶಕ್ತನಾಗುವನು.

ಈ ಸಂಬಂಧ ಜೋಡಿಸುವ ಎರಡು ವಿಧಾನಗಳಿವೆ.

1. ಪರಸ್ಪರ ಸಂಬಂಧ: ಅಂದರೆ ವಿವಿಧ ಪಠ್ಯಗಳನ್ನು ಪರಸ್ಪರ ಮತ್ತು ಪ್ರತಿಯೊಂದು ಪಠ್ಯದ ಅಧ್ಯಾಯಗಳನ್ನು ಪರಸ್ಪರ ಜೋಡಿಸಿ ಕಲಿಸುವುದು.

2. ಕೇಂದ್ರೀಯ ವಿಷಯ: ಅಂದರೆ ಒಂದು ಪಠ್ಯವನ್ನು ಕೇಂದ್ರೀಯ ವಿಷಯವನ್ನಾಗಿಸಿ ಮತ್ತು ಇತರ ಪಠ್ಯಗಳನ್ನು ಅದರೊಂದಿಗೆ ಜೋಡಿಸಿ ಕಲಿಸುವುದು.

ಕೇಂದ್ರೀಯ ವಿಷಯದಲ್ಲಿ ನಿಶ್ಚಯವಾಗಿಯೂ ಎಲ್ಲ ವಿಷಯಗಳೂ ಒಂದೇ ಕೇಂದ್ರಕ್ಕೆ ಸಂಬಂಧಿಸಿ ಮತ್ತು ಪರಸ್ಪರ ಸಂಬಂಧಿತ ರೂಪದಲ್ಲಿ ಮನವರಿಕೆಯಾಗುತ್ತದೆ. ಹೀಗೆ ಮನಸ್ಸು ಅಸ್ತವ್ಯಸ್ತತೆಯಿಂದ ಮುಕ್ತವಾಗುತ್ತದೆ ಮತ್ತು ಅಗತ್ಯಾನುಸಾರ ಹಾಗೂ ಸಂದರ್ಭಾನುಸಾರ ತನ್ನ ಎಲ್ಲ ಸಂಬಂಧಿತ ವಿಷಯಗಳನ್ನು ಬಳಸಿಕೊಳ್ಳುತ್ತದೆ. ಆದರೆ ಮೊತ್ತ ಮೊದಲನೆಯದಾಗಿ, ಎಲ್ಲ ಪಠ್ಯಗಳ ಅಧ್ಯಾಯಗಳನ್ನು ಒಂದು ಪಠ್ಯದೊಂದಿಗೆ ಜೋಡಿಸುವುದು ತೀರಾ ಕಷ್ಟದ ಕೆಲಸವಾಗಿದೆ. ಎರಡನೆಯದಾಗಿ ಕೇಂದ್ರೀಯ ಪಠ್ಯಕ್ಕೆ ಅಸಾಮಾನ್ಯ ಪ್ರಾಮುಖ್ಯತೆ ಲಭಿಸುತ್ತದೆ ಮತ್ತು ಇತರ ಪಠ್ಯಗಳ ವಿಷಯವು ಸಾಮಾನ್ಯವಾಗಿಯೂ ಅಪೂರ್ಣವಾಗಿಯೂ ಉಳಿದುಬಿಡುತ್ತವೆ. ಧಾರ್ಮಿಕ ಶಾಲೆಗಳ ಅಧ್ಯಾಪಕರು ಇಸ್ಲಾಮಿಯಾತ್‌ಗೆ ಕೇಂದ್ರೀಯ ಸ್ಥಾನಮಾನ ನೀಡಿ ಇತರೆಲ್ಲ ಅಥವಾ ಹೆಚ್ಚಿನ ಪಠ್ಯಗಳನ್ನು ಅದರೊಡನೆ ಜೋಡಿಸಿ ಕಲಿಸಿದರೆ, ಶಿಕ್ಷಣದ ಉದ್ದೇಶ ಒಂದು ಹಂತದ ವರೆಗೆ ಪೂರ್ಣಗೊಳ್ಳಬಹುದು. ಆದರೆ ಅದಕ್ಕಾಗಿ ಏನೆಲ್ಲ ಪ್ರತಿಭೆ, ತಯಾರಿ ಮತ್ತು ಪಠ್ಯ ಪುಸ್ತಕಗಳ ಅಗತ್ಯವಿರುವುದೋ ಅವುಗಳ ಅನುಪಸ್ಥಿತಿಯಲ್ಲಿ ಈ ಸಲಹೆಯು ಪ್ರಾಯೋಗಿಕವೆನಿಸಲಾರದು.

ಇನ್ನು ಪಠ್ಯಗಳ ಪರಸ್ಪರ ಸಂಬಂಧದ ಕುರಿತು ಹೇಳುವುದಾದರೆ, ಇದು ಸುಲಭ ಮತ್ತು ಅನುಸರಣಾರ್ಹವಾಗಿದೆ. ಮಕ್ಕಳ ಭಾರ ಕಡಿಮೆಗೊಳಿಸ ಬಯಸುವವರು ಈ ಕುರಿತು ವಿಶೇಷ ಗಮನ ಹರಿಸಬೇಕಾಗಿದೆ.

ಪರಸ್ಪರ ಸಂಬಂಧದ ರೂಪಗಳು

- ಪ್ರತಿಯೊಂದು ಪಠ್ಯದ ಅಧ್ಯಾಯಗಳನ್ನು ಪರಸ್ಪರ ಸಂಬಂಧ ಇರುವ ರೀತಿಯಲ್ಲಿ ಅನುಕ್ರಮವಾಗಿ ಜೋಡಿಸಬೇಕು. ಪ್ರತಿಯೊಂದು ಹೊಸ ಅಧ್ಯಾಯವನ್ನು ಕಲಿಸುವಾಗ ಹಿಂದಿನ ಅಧ್ಯಾಯದೊಂದಿಗೆ ಸಂಬಂಧವನ್ನು ಚೆನ್ನಾಗಿ ಜೋಡಿಸಬೇಕು.
- ಪಠ್ಯಗಳ ಒಳ ವಿಂಗಡನೆಯನ್ನು ಖಂಡಿತವಾಗಿಯೂ ಮಾಡಬಾರದು. ಬದಲಾಗಿ ಪ್ರತಿಯೊಂದು ಪಠ್ಯದ ವಿವಿಧ ಭಾಗಗಳನ್ನು ಪರಸ್ಪರ ಜೋಡಿಸಿ ಕಲಿಸಬೇಕು. ಭಾಷಾಪಾಠದ ವ್ಯಾಕರಣ, ಗದ್ಯ, ಬರವಣಿಗೆ ಇತ್ಯಾದಿಗಳಿಗೆ ಸಂಬಂಧಿಸಿ ಅಭ್ಯಾಸಗಳನ್ನು ಪಠ್ಯಪುಸ್ತಕದಲ್ಲಿ ಕಲಿಸುವ ರೀತಿಯಲ್ಲೇ ಇರಿಸಬೇಕು. ಅದೇ ರೀತಿ ವಿಜ್ಞಾನ, ಸಾಮಾಜಿಕ ಪಾಠ, ಆರ್ಟ್-ಕ್ರಾಫ್ಟ್ ಮತ್ತು ಗಣಿತ ಇತ್ಯಾದಿಗಳಲ್ಲೂ ಇನ್ನಷ್ಟು ಒಳವಿಂಗಡನೆ ಮಾಡಬಾರದು. ಬದಲಾಗಿ, ಅವುಗಳಲ್ಲಿ ಪ್ರತಿಯೊಂದು ಗುಂಪನ್ನು ಒಂದೇ ಪಾಠವಾಗಿಸಿ ಕಲಿಸಬೇಕು.

- ಪ್ರತಿಯೊಂದು ಪಠ್ಯವೂ ಮಕ್ಕಳ ಜೀವನ, ಅವರ ಸ್ವಾಭಾವಿಕ ಮತ್ತು ಸಾಮಾಜಿಕ ಪರಿಸರ ಹಾಗೂ ಅವರ ಅನುಭವ-ದರ್ಶನಗಳೊಂದಿಗೆ ಸಂಬಂಧಿಸಿರಬೇಕು.
- ಎರಡು ವಿಭಿನ್ನ ಪಠ್ಯದ ಯಾವುದಾದರೂ ಅಧ್ಯಾಯಗಳನ್ನು ಪರಸ್ಪರ ಜೋಡಿಸಲು ಸಾಧ್ಯವಿದ್ದರೆ ಹಾಗೆ ಮಾಡಿ ಕಲಿಸಬೇಕು. ಉದಾ: ಕ್ರಾಫ್ಟ್‌ನಲ್ಲಿ ಏನೆಲ್ಲವನ್ನು ಮಾಡಿಸಲಾಗುತ್ತದೋ ಆರ್ಟ್‌ನಲ್ಲಿ ಅದರ ಛಾಯೆ ಇರಿಸಬೇಕು. ಇಸ್ಲಾಮಿಯಾತ್‌ನಲ್ಲಿ ಪಾಠ ನೀಡುವಾಗ, ಭೂಗೋಳದಲ್ಲಿ ಅರೇಬಿಯಾದ ಪರಿಸ್ಥಿತಿಯನ್ನು ಕಲಿಸಬೇಕು ಮತ್ತು ಉರ್ದುವಿನಲ್ಲಿ ಯಾವುದಾದರೂ ನಅತ್ (ಪ್ರವಾದಿಯ ಪ್ರಶಂಸಾ ಗೀತೆ) ಕಲಿಸಬೇಕು.

♦ ♦ ♦

ಅಧ್ಯಾಯ-32

ಬೋಧನೆಯ ವಿಧಾನಗಳು

ಆರಂಭದ ಮಕ್ಕಳಿಗೆ ಕಲಿಸುವ ಎರಡು ವಿಧಾನಗಳಿವೆ.

1. ನಾವು ವಿದ್ಯಾರ್ಥಿಗಳಿಗೆ ಯಾವುದಾದರೂ ಕಾಯ್ದೆ ನಿಯಮಗಳನ್ನು ಸ್ವಯಂ ಹೇಳಿಕೊಟ್ಟು, ಅವರು ನಮ್ಮ ಜ್ಞಾನದ ಮೇಲೆ ಭರವಸೆಯಿಟ್ಟು ಅದನ್ನು ಅಂಗೀಕರಿಸುವರೆಂದು ನಿರೀಕ್ಷಿಸುವುದು. ಆದರೂ ಹೆಚ್ಚಿನ ಸಮಾಧಾನಕ್ಕೆ ಆಧಾರ-ಪ್ರಮಾಣಗಳ ರೂಪದಲ್ಲಿ ಕೆಲವು ನಿರ್ದಿಷ್ಟ ಉದಾಹರಣೆಗಳನ್ನೂ ನೀಡುವೆವು. ಅವುಗಳನ್ನು ಪರಿಶೀಲಿಸಿ ಅವರು ನೀತಿ-ನಿಯಮಗಳ ವಾಸ್ತವಿಕತೆಗಳನ್ನು ಅರಿಯುವರು.

2. ನಾವು ವಿದ್ಯಾರ್ಥಿಗಳಿಗೆ ಅನುಭವ, ದರ್ಶನ ಮತ್ತು ಅಧ್ಯಯನ ಇತ್ಯಾದಿಗಳಿಗೆ ಅವಕಾಶಗಳನ್ನು ಒದಗಿಸಬೇಕು. ಆ ಮೂಲಕ ಅವರು ಸ್ವತಃ ಘಟನೆ ಮತ್ತು ವಾಸ್ತವಿಕತೆಗಳನ್ನು ಅನುಭವಿಸುವಂತಾಗುತ್ತದೆ. ತರುವಾಯ ಅವುಗಳನ್ನು ವಿಶ್ಲೇಷಿಸಿ ಯಾವುದಾದರೂ ತೀರ್ಮಾನಕ್ಕೆ ಬರಬೇಕು.



ಮೊದಲ ರೂಪದಲ್ಲಿ ಮಕ್ಕಳು ಪರೋಕ್ಷವಾಗಿ ಸತ್ಯಾಂಶಗಳೆಡೆಗೆ ತಲುಪುತ್ತಾರೆ. ಎರಡನೆಯ ರೂಪದಲ್ಲಿ ನೇರವಾಗಿ ತಲಪುತ್ತಾರೆ. ಈ ಎರಡೂ ವಿಧಾನಗಳು ತಮ್ಮದೇ ಆದ ಸ್ಥಾನಗಳನ್ನು ಹೊಂದಿವೆ. ಅಧ್ಯಾಪಕನು ಬೋಧನೆಯ ವೇಳೆ ಇವೆರಡರಿಂದಲೂ ಕೆಲಸ ಸಾಧಿಸಬೇಕಾಗುತ್ತದೆ. ಮೊದಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ಸತ್ಯಾಂಶದೆಡೆಗೆ ತಲುಪಲು ವಿಶೇಷವಾದ ಪರಿಶ್ರಮದ ಅಗತ್ಯವಿರುವುದಿಲ್ಲವಾದ್ದರಿಂದ, ಅವರು ಸೋಮಾರಿ ಕೇಳುಗರಾಗಿ ಮಾರ್ಪಡುತ್ತಾರೆ ಮತ್ತು ನಾಚಿಕೆ ಸ್ವಭಾವದವರಾಗಿ ಉಳಿಯುತ್ತಾರೆ. ಅಲ್ಲದೆ ಅವರ ಜ್ಞಾನವು ಇತರರಿಂದ ಎರವಲು ಪಡೆದುದಾಗಿರುತ್ತದೆ. ಅದು ಅವರಿಗೆ ಉಚಿತವಾಗಿ ದೊರೆಯುವ ಕಾರಣ ಅವರು ಸಾಮಾನ್ಯವಾಗಿ ಒಂದು ಕಿವಿಯಿಂದ ಆಲಿಸಿ, ಇನ್ನೊಂದು ಕಿವಿಯಿಂದ ಬಿಟ್ಟು ಬಿಡುತ್ತಾರೆ. ತದ್ವಿರುದ್ಧವಾಗಿ ಎರಡನೆಯ ರೂಪದಲ್ಲಿ ಅವರು ಪ್ರಾಯೋಗಿಕ ಆಸಕ್ತಿಯನ್ನು ವಹಿಸಲು ಮತ್ತು ಸತ್ಯಾಂಶಗಳೆಡೆಗೆ ತಲುಪಲು ಸಾಕಷ್ಟು ಪರಿಶ್ರಮ ಪಡಬೇಕಾಗುತ್ತದೆ. ಆದ್ದರಿಂದ ಅವರ ಸ್ಥಾನಮಾನವು ಕ್ರಿಯಾತ್ಮಕವಾಗಿರುತ್ತದೆ.

ಬೋಧನೆಯಲ್ಲಿ ಅವರ ಇರಾದೆ ಮತ್ತು ಪ್ರಯತ್ನಗಳ ದೊಡ್ಡ ಪಾತ್ರ ಇರುತ್ತದೆ. ಈ ಪ್ರಕಾರ ಅವರು ಸ್ವೀಕರಿಸುವ ನೀತಿ-ನಿಯಮಗಳು ಅವರ ಪರಿಶ್ರಮದ ಗಳಿಕೆಯಾಗಿರುತ್ತದೆ. ಅವುಗಳನ್ನು ಅವರು ತಮ್ಮ ಮನಸ್ಸಿನಲ್ಲಿ ಚೆನ್ನಾಗಿ ಸುರಕ್ಷಿತವಾಗಿರಿಸುತ್ತಾರೆ. ಬೋಧನೆಯ ಈ ಎರಡನೆಯ ವಿಧಾನವು ಮಕ್ಕಳ ಮಟ್ಟಿಗೆ ಹೆಚ್ಚು ಪ್ರಯೋಜನಕಾರಿಯಾಗಿರುತ್ತದೆ.

ಅನ್ವೇಷಣಾ ವಿಧಾನ

ವಿದ್ಯಾರ್ಥಿಗಳು ಅನೇಕ ಘಟನೆ, ವಾಸ್ತವಾಂಶ ಅಥವಾ ಉದಾಹರಣೆಗಳ ಅವಲೋಕನ ನಡೆಸುವ ಮೂಲಕ ಒಂದು ತೀರ್ಮಾನಕ್ಕೆ ತಲುಪುವುದು ಮತ್ತು ಯಾವುದಾದರೂ ನೀತಿ-ನಿಯಮವನ್ನು ಸ್ವೀಕರಿಸುವುದನ್ನು ಅನ್ವೇಷಣಾ ವಿಧಾನ ಎನ್ನಲಾಗುತ್ತದೆ. ಉದಾಹರಣೆಗೆ: ಅಜ್ಜಿ ನಿಧನರಾದರು, ತಾತ ಮರಣ ಹೊಂದಿದರು, ನಿನ್ನೆ ಹಾಮಿದ್ ಮರಣ ಹೊಂದಿದ, ಇವತ್ತು ಮಹ್ಮೂದಾ ಮರಣ ಹೊಂದಿದಳು..... ಜನರು ಸಾಯುತ್ತಿರುತ್ತಾರೆ. ಅಂದರೆ ಜೀವನವೆಂಬುದು ನಶ್ವರವಾಗಿದೆ.

ಈ ವಿಧಾನದಲ್ಲಿ ಅಧ್ಯಾಪಕನು ಒಂದು ನಿರ್ದಿಷ್ಟವಾದ ಅನುಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ವಿಶೇಷವಾದ ಘಟನೆ ಮತ್ತು ಉದಾಹರಣೆಗಳ ಅನುಭವ ವೀಕ್ಷಣೆ, ಅಧ್ಯಯನಕ್ಕೆ ಅವಕಾಶ ಒದಗಿಸಿಕೊಡುತ್ತಾನೆ. ಅಧ್ಯಾಪಕನ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಆ ಉದಾಹರಣೆಯನ್ನು ವಿಶ್ಲೇಷಿಸಿ ಮತ್ತು ಪರಸ್ಪರ ಹೋಲಿಕೆ-ತಾಳೆಹಾಕಿ ನೋಡಿ, ಅವುಗಳ ನಡುವೆ ಸಾದೃಶತೆ ಅಥವಾ ವ್ಯತ್ಯಾಸಗಳನ್ನು ಹುಡುಕುತ್ತಾರೆ. ಈ ರೀತಿಯಾಗಿ ಒಂದು ವಾಸ್ತವಿಕತೆಗೆ ತಲುಪುತ್ತಾರೆ ಮತ್ತು ನಿಯಮ-ನಿಬಂಧನೇ ನೀತಿಗಳನ್ನು ಸ್ವೀಕರಿಸುತ್ತಾರೆ. ಉದಾ: ವಿದ್ಯಾರ್ಥಿಗಳು 3ನ್ನು 5 ಬಾರಿ ಕೂಡಿಸುತ್ತಾರೆ (3+3+3+3+3=15) ಮತ್ತು ಮೂರರ ಮಗ್ಗಿಯಲ್ಲಿ 5ರ ವರೆಗೆ (3x5=15) ಉರು ಹೊಡೆಯುತ್ತಾರೆ. ಆಗ ಎರಡು ರೂಪದಲ್ಲಿಯೂ ಉತ್ತರ 15 ಆಗುತ್ತದೆ. ಇದೇ ವಿಧಾನವನ್ನು ಹಲವು ಸಂಖ್ಯೆಗಳಲ್ಲಿ ಮಾಡುತ್ತಾರೆ. 8ನ್ನು 4 ಬಾರಿ ಸೇರಿಸುತ್ತಾರೆ (8+8+8+8=32) ಅಥವಾ 8ರ 4ರ ವರೆಗೆ ಮಗ್ಗಿ ಹೇಳುತ್ತಾರೆ (8x4=32). ಆಗ ಎರಡೂ ಸ್ಥಿತಿಯಲ್ಲೂ ಉತ್ತರ 32 ಬರುತ್ತದೆ. ಹೀಗೆ ಈ ರೀತಿಯ ವಿವಿಧ ಉದಾಹರಣೆಗಳಿಂದ ''ಸಂಕಲನದ ಸುಲಭ ವಿಧಾನ ಗುಣಾಕಾರವಾಗಿದೆ'' ಎಂಬ ತೀರ್ಮಾನಕ್ಕೆ ಬರುತ್ತಾರೆ.

- ಅಥವಾ ಹಲವು ಪ್ರಕಾರದ ತ್ರಿಕೋನಗಳ ಮೂರೂ ಕೋನಗಳನ್ನು ತುಂಡರಿಸಿ ಹತ್ತಿರವಿರಿಸುತ್ತಾರೆ() ಅಥವಾ ಅವುಗಳನ್ನು ಅಳೆದು ಜೋಡಿಸುತ್ತಾರೆ,  ಆಗ ಪ್ರತಿಬಾರಿಯೂ ಒಟ್ಟು 180^0 (ಕ್ಷೇತ್ರಫಲ) ಆಗುತ್ತದೆ. ಹೀಗೆ ಅವರು, ''ತ್ರಿಕೋನದ ಮೂರು ಕೋನಗಳ ಒಟ್ಟು ಕ್ಷೇತ್ರಫಲವು 180^0 ಆಗುತ್ತದೆ'' ಎಂಬ ಅಂತಿಮ ತೀರ್ಮಾನಕ್ಕೆ ಬರುತ್ತಾರೆ.

- ಅದೇ ರೀತಿ ಒಂದು ರಂಧ್ರ ಅಥವಾ ಆವರಣದಲ್ಲಿ ಸುಲಭವಾಗಿ ಹಾದು ಹೋಗುವಂತಹ ಲೋಹದ ಗುಂಡನ್ನು ತೆಗೆದುಕೊಳ್ಳುತ್ತಾರೆ. ಬಳಿಕ ಅದನ್ನು ಬಿಸಿ ಮಾಡುತ್ತಾರೆ. ಈಗ ಅದು ಅಲ್ಲಿಂದ ಹಾದು ಹೋಗುವುದಿಲ್ಲ, ಈ ರೀತಿ ವಿವಿಧ ಲೋಹಗಳ ಗುಂಡುಗಳೊಡನೆಯೂ ಮಾಡುತ್ತಾರೆ. ಪ್ರತಿ ಬಾರಿಯ ಪರಿಣಾಮವೂ ಒಂದೇ ಆಗಿರುತ್ತದೆ. ಕೊನೆಗೆ ಅವರು, ''ವಸ್ತುಗಳು ಬಿಸಿಯಾದರೆ ವಿಕಸಿಸುತ್ತವೆ'' ಎಂಬ ತೀರ್ಮಾನಕ್ಕೆ ಬರುತ್ತಾರೆ.

ಇನ್ನು ಅದು ತಣ್ಣಗಾದ ಮೇಲೆ ಪುನಃ ವರ್ತುಲ ಅಥವಾ ರಂಧ್ರದಲ್ಲಿ ಹಾಕಿ ನೋಡುತ್ತಾರೆ. ಆಗ ಅದು ಹಾದು ಹೋಗುತ್ತದೆ. ಇದರಿಂದಾಗಿ ಅವರು ''ವಸ್ತುಗಳು ತಣ್ಣಗಾದ ಮೇಲೆ ಸಂಕುಚನಗೊಳ್ಳುತ್ತವೆ'' ಎಂಬ ತೀರ್ಮಾನಕ್ಕೆ ಬರುತ್ತಾರೆ.

ಈ ವಿಧಾನದ ವಿಶೇಷತೆಗಳು

- ಇದು ವಿದ್ಯೆ ಗಳಿಕೆಯ ಅತ್ಯುತ್ತಮ ಹಾಗೂ ಸರ್ವಾಂಗೀಕೃತ ವಿಧಾನವಾಗಿದೆ. ಅಧ್ಯಾಪಕನು ವಿಶೇಷವಾದ ಉದಾಹರಣೆ ಮತ್ತು ಘಟನೆಯನ್ನು ಕ್ರಮಬದ್ಧವಾಗಿ ಒದಗಿಸುತ್ತಾನೆ. ವಿದ್ಯಾರ್ಥಿಗಳು ಅದನ್ನು ವಿಶ್ಲೇಷಿಸಿ ತೀರ್ಮಾನಕ್ಕೆ ಬರುತ್ತಾರೆ.
- ವಿದ್ಯಾರ್ಥಿಗಳು ಪಾಠದಲ್ಲಿ ಕ್ರಿಯಾತ್ಮಕ ಆಸಕ್ತಿಯನ್ನು ವಹಿಸುತ್ತಾರೆ ಮತ್ತು ಸರ್ವ ಸಂಪೂರ್ಣವಾಗಿ ಗಮನ ಕೇಂದ್ರೀಕರಿಸಿರುತ್ತಾರೆ.
- ವಿದ್ಯಾರ್ಥಿಗಳಿಗೆ ಚಿಂತನೆ ನಡೆಸುವ, ಸಾಕ್ಷ್ಯ ಕಲೆಹಾಕುವ ಮತ್ತು ತೀರ್ಮಾನ ತೆಗೆದುಕೊಳ್ಳುವ ಅವಕಾಶ ಒದಗುತ್ತದೆ.
- ಸ್ವತಃ ಮಾಡಿ ಕಲಿಯುವ ಎಲ್ಲ ಪ್ರಯೋಜನಗಳೂ ದೊರೆಯುತ್ತವೆ. ಜ್ಞಾನದಲ್ಲಿ ಪಕ್ವತೆ, ಕಲಿಕೆಯನ್ನು ಕ್ರಿಯೆಯಲ್ಲಿ ತರುವ ವಿಧಾನ, ಯಶಸ್ಸಿನ ಸಂತೋಷ, ಸಮಸ್ಯೆಗಳನ್ನು ಸ್ವಯಂ ಎದುರಿಸುವ ಛಲ, ಸ್ವಾಭಾವಿಕ ಬೇಡಿಕೆ ಮತ್ತು ನೈಸರ್ಗಿಕ ಇಚ್ಛೆಯ ಈಡೇರಿಕೆ ಇತ್ಯಾದಿ.
- ಸ್ವಂತ ಪರಿಶ್ರಮದಿಂದ ಸತ್ಯಾಂಶವನ್ನು ಕಂಡುಕೊಳ್ಳುವ ವಿಧಾನ ಕಲಿಯುತ್ತಾರೆ, ದೈನಂದಿನ ಘಟನಾವಳಿಗಳಿಂದ ನೀತಿಯನ್ನು ಕಂಡುಕೊಳ್ಳುವುದರ ಕಡೆಗೆ ಗಮನ ಹರಿಯುತ್ತದೆ ಮತ್ತು ಕ್ರಮೇಣ ಪ್ರತಿಭೆ ಬೆಳೆಯುತ್ತದೆ.
- ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆದು ಬರುತ್ತದೆ. ಅವರು ಅಧ್ಯಾಪಕರನ್ನು ಹೆಚ್ಚಾಗಿ ಅವಲಂಬಿಸುವುದಿಲ್ಲ,
- ಶೋಧನೆ, ಅನ್ವೇಷಣೆಯ ಪ್ರತಿಭೆ ಬೆಳೆಯುತ್ತದೆ.
- ಮಾನವ ಕುಲವು ಎಲ್ಲ ಜ್ಞಾನವನ್ನು ಇದೇ ರೀತಿ ಗಳಿಸಿಕೊಂಡಿದೆ, ಸ್ವತಃ ಕಂಡು

ಅನುಭವಿಸಿದೆ, ಪ್ರತಿ ಬಾರಿಯೂ ಒಂದನ್ನು ಕಳಕೊಂಡು ಇನ್ನೊಂದನ್ನು ಗಳಿಸಿದೆ. ಆದ್ದರಿಂದ ಜ್ಞಾನ ಗಳಿಕೆಯ ಅತ್ಯುತ್ತಮ ಸ್ವಾಭಾವಿಕ ವಿಧಾನ ಇದುವೇ ಆಗಿದೆ.

ನ್ಯೂನತೆಗಳು

ಈ ವಿಧಾನವನ್ನು ಅನುಸರಿಸುವುದರಿಂದ ಕೆಲವು ನಷ್ಟಗಳು ಸಂಭವಿಸುವ ಸಾಧ್ಯತೆಯೂ ಇದೆ. ವಿದ್ಯಾರ್ಥಿಗಳನ್ನು ಅವುಗಳಿಂದ ಸುರಕ್ಷಿತವಾಗಿರಿಸಲು ಪ್ರಯತ್ನಿಸಬೇಕಾಗಿದೆ. ಉದಾ:

- ಕೆಲವೊಮ್ಮೆ ಸಂತೋಷದ ಭರದಲ್ಲಿ ಗಡಿಬಿಡಿಯಿಂದಾಗಿ ವಿದ್ಯಾರ್ಥಿಗಳು ತಪ್ಪು ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಧ್ಯತೆಯಿದೆ. ಹಲವು ಮಗ್ಗುಲುಗಳು ಅವರ ಮುಂದೆ ಬರದಿರಲೂ ಬಹುದು.
- ಕೆಲವು ನಿರ್ದಿಷ್ಟ ಘಟನೆ ಅಥವಾ ಉದಾಹರಣೆಗಳಿಂದ ಅಂತಿಮ ತೀರ್ಮಾನಕ್ಕೆ ಬರುತ್ತಾರೆ. ವಸ್ತುತಃ ಇತರ ಹಲವು ಉದಾಹರಣೆಗಳ ಮೇಲೆ ಅವರ ಗಮನವೇ ಹರಿದಿರುವುದಿಲ್ಲ.

ಉದಾ: ಉತ್ತಮ ವಸ್ತ್ರ ತೊಟ್ಟು ಬರುವವರಿಗೆ ಅಥವಾ ಸ್ಥಿತಿವಂತ ಜನರಿಗೆ ಹೆಚ್ಚು ಮನ್ನಣೆ ದೊರೆಯುತ್ತಿರುವುದನ್ನು ಮಗು ನೋಡುತ್ತದೆ. ಮಗು ತನ್ನ ಸೀಮಿತ ವೀಕ್ಷಣೆಯ ಆಧಾರದಲ್ಲಿ ಆ ಸಂಪತ್ತು ಹಾಗೂ ಉತ್ತಮ ವಸ್ತ್ರಗಳನ್ನು ಗೌರವದ ಸೋಪಾನವೆಂಬ ನಿರ್ಧಾರಕ್ಕೆ ಬರಬಹುದು. ವಾಸ್ತವದಲ್ಲಿ ಬಡ್ಡಿಕೋರ, ಲಂಚಕೋರ ಮತ್ತು ನಿಷಿದ್ಧ ಸಂಪಾದನೆಯಿಂದ ಸಂಪತ್ತು ಶೇಖರಿಸುವವರನ್ನು ಅಥವಾ ಫ್ಯಾಶನೇಬಲ್ ಕಿಸೆಗಳ್ಳರನ್ನು ಯಾರೂ ಗೌರವದ ದೃಷ್ಟಿಯಿಂದ ನೋಡುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳನ್ನು ಗಡಿಬಿಡಿ ಮಾಡುವುದರಿಂದ ತಡೆಯಬೇಕಾಗಿದೆ. ಜತೆಗೆ ಅವರು ತಳೆದುಕೊಂಡಿರುವ ತೀರ್ಮಾನವನ್ನು ಇತರ ಉದಾಹರಣೆ ಮತ್ತು ಘಟನೆಗಳ ಜತೆಯಲ್ಲಿ ತುಲನೆ ಮಾಡಿ, ಅದನ್ನು ಚೆನ್ನಾಗಿ ಪರಿಶೀಲಿಸಬೇಕೆಂದೂ ಗಡಿಬಿಡಿಯಿಂದ ಕೆಲವೇ ಉದಾಹರಣೆಗಳ ಆಧಾರದಲ್ಲಿ ನಿರ್ಧಾರ ತಳೆಯಬಾರದೆಂದೂ ಉಪದೇಶಪೂರ್ವಕ ಅವಕಾಶವನ್ನು ಒದಗಿಸಿಕೊಡಬೇಕು.

ಅವಲಂಬನಾ ವಿಧಾನ

ಇದು ಅನ್ವೇಷಣಾ ವಿಧಾನಕ್ಕೆ ವಿರುದ್ಧವಾದುದು. ಇದರಲ್ಲಿ ಅಧ್ಯಾಪಕನು ವಿದ್ಯಾರ್ಥಿಗಳಿಗೆ ಯಾವುದಾದರೂ ಸಾಮಾನ್ಯ ನಿಯಮ, ವ್ಯಾಕರಣ ಅಥವಾ ತತ್ವವನ್ನು ಸ್ವಯಂ ಹೇಳಿಕೊಡುತ್ತಾನೆ. ತರುವಾಯ ನಿರ್ದಿಷ್ಟ ಉದಾಹರಣೆಗಳಿಂದ ಅದನ್ನು ವಿವರಿಸುತ್ತಾನೆ. ವಿದ್ಯಾರ್ಥಿಗಳು ಅಧ್ಯಾಪಕನ ಮೇಲೆ ವಿಶ್ವಾಸವಿಟ್ಟು ಅದನ್ನು ಅಂಗೀಕರಿಸುತ್ತಾರೆ. ಬಳಿಕ ಹೆಚ್ಚಿನ ವಿವರಣೆಗೆ ಇನ್ನಷ್ಟು ಉದಾಹರಣೆಗಳ ಮೂಲಕ ಆ ತತ್ವವನ್ನು ಸಮೀಕರಿಸಲು ಅವಕಾಶ ನೀಡುತ್ತಾನೆ. ಉದಾ: ವ್ಯಾಕರಣದಲ್ಲಿ ಅಧ್ಯಾಪಕನು

ನಾಮಪದ, ಸರ್ವನಾಮ, ಕ್ರಿಯಾಪದ, ಗುಣವಾಚಕ ಪದಗಳನ್ನು ಕಲಿಸುತ್ತಾನೆ. ಬಳಿಕ ಕೆಲವು ಉದಾಹರಣೆಗಳ ಮೂಲಕ ಅದನ್ನು ವಿವರಿಸಿ ಕೊಡುತ್ತಾನೆ. ವಿದ್ಯಾರ್ಥಿಗಳು ಅಧ್ಯಾಪಕನ ಮೇಲೆ ಭರವಸೆಯಿಟ್ಟು ಅದನ್ನು ಅಂಗೀಕರಿಸುತ್ತಾರೆ. ತರುವಾಯ ಅಧ್ಯಾಪಕ ಒಂದು ಪ್ಯಾರಾಗ್ರಾಫನ್ನು ನೀಡಿ ಅದರಿಂದ ನಾಮ, ಕ್ರಿಯಾ, ಗುಣವಾಚಕ ಪದ ಇತ್ಯಾದಿಗಳನ್ನು ಸೂಚಿಸಲು ಹೇಳುತ್ತಾನೆ. ವಿದ್ಯಾರ್ಥಿಗಳು ಸರಿಯಾಗಿ ಅದನ್ನು ತೋರಿಸುತ್ತಾರೆ. ಇಲ್ಲಿಗೆ ಆ ಪಾಠ ಮುಕ್ತಾಯವಾಗುತ್ತದೆ. ಅದೇ ರೀತಿ ಗಣಿತದಲ್ಲಿ ಯಾವುದಾದರೂ ನಿಯಮ-ತತ್ವವನ್ನು ಹೇಳಿಕೊಟ್ಟು, ಉದಾಹರಣೆಗಳ ಮೂಲಕ ವಿವರಿಸಲಾಗುತ್ತದೆ. ಬಳಿಕ ವಿದ್ಯಾರ್ಥಿಗಳು ಅದೇ ನಿಯಮದಂತೆ ಇನ್ನಷ್ಟು ಪ್ರಶ್ನೆ/ಸಮಸ್ಯೆಗಳನ್ನು ಪರಿಹರಿಸುತ್ತಾರೆ. ಉದಾ: ಗುಣಿಸಬೇಕಾದರೆ ಮಗ್ಗಿ ಉರುಹೊಡೆಯುವುದು, ವ್ಯವಕಲನ ಮಾಡುವಾಗ ಮೇಲಿನ ಅಂಕೆ ಕಡಿಮೆ ಇದ್ದರೆ ದಶಾಂಶದ ಸಹಾಯ ಪಡೆಯುವುದು ಇತ್ಯಾದಿ. ವಿದ್ಯಾರ್ಥಿಗಳು ಅದನ್ನು ಬಳಸುತ್ತ ಸಾಗಿದರೆ ಪಾಠವು ಯಶಸ್ವಿಯೆಂದು ಪರಿಗಣಿಸಲಾಗುತ್ತದೆ.

ನ್ಯೂನತೆಗಳು

ಈ ವಿಧಾನದಲ್ಲಿ ಹಲವಾರು ನ್ಯೂನತೆಗಳಿವೆ. ಉದಾ:

- ವಿದ್ಯಾರ್ಥಿಗಳು ನಿಷ್ಕ್ರಿಯ ಶ್ರೋತೃಗಳಾಗಿ ಉಳಿಯುತ್ತಾರೆ. ಹಾಗಾಗಿ ಅವರು ಪಾಠದಲ್ಲಿ ಕ್ರಿಯಾಶೀಲ ಆಸಕ್ತಿಯನ್ನು ವಹಿಸುವುದಿಲ್ಲ.
- ವಾಸ್ತವಾಂಶದೆಡೆಗೆ ನೇರವಾಗಿ ಮತ್ತು ಸ್ವಂತ ಪರಿಶ್ರಮದಿಂದ ತಲುಪದ ಕಾರಣ, ವಿದ್ಯಾರ್ಥಿಗಳ ಜ್ಞಾನವು ಪಕ್ವ ಮತ್ತು ವಿಶ್ವಸನೀಯವಾಗುವುದಿಲ್ಲ. ಅದನ್ನು ಅಗತ್ಯಾನುಸಾರ ಕ್ರಿಯೆಗೆ ಇಳಿಸುವ ಮತ್ತು ಬಳಕೆಗೆ ತರುವ ಪ್ರತಿಭೆಯೂ ಬೆಳೆಯುವುದಿಲ್ಲ.
- ಶೈಕ್ಷಣಿಕ ಕೆಲಸಗಳಲ್ಲಿ ಹೆಚ್ಚಿನ ಭಾಗವು ವ್ಯಾಕರಣ, ನಿಯಮ, ಪ್ರಮೇಯ ಇತ್ಯಾದಿಗಳನ್ನು ಗಿಳಿಪಾಠದಂತೆ ಕಲಿಯುವುದಕ್ಕಷ್ಟೇ ಸೀಮಿತವಾಗುತ್ತದೆ. ಅದು ಬಹಳ ಸಮಯದ ವರೆಗೆ ಜ್ಞಾಪಕದಲ್ಲಿ ಉಳಿಯುವುದು ಕೂಡಾ ಇಲ್ಲ. ಏಕೆಂದರೆ ಅದು ಅವರ ಸ್ವಂತ ದುಡಿಮೆಯಾಗಿಲ್ಲವಷ್ಟೇ.
- ಈ ವಿಧಾನವು ಮಕ್ಕಳಿಗೆ 'ಸ್ವತಃ ಮಾಡಿ ಕಲಿ'ಯುವುದರಿಂದ ಮತ್ತು ಅದರ ಒಟ್ಟು ಪ್ರಯೋಜನಗಳಿಂದ ವಂಚಿತಗೊಳಿಸುತ್ತದೆ.
- ವಿದ್ಯಾರ್ಜನೆಯ ನಿಟ್ಟಿನಲ್ಲಿ ಇದು ಅಸ್ವಾಭಾವಿಕ ಮತ್ತು ಅವೈಜ್ಞಾನಿಕವಾದ ವಿಧಾನವಾಗಿದೆ. ಜನಜೀವನದಲ್ಲಿ ಹಲವು ಪ್ರಬಲ ವಾಸ್ತವಿಕತೆಗಳನ್ನು ಎದುರಿಸಬೇಕಾಗಿ ಬರುತ್ತದೆಯೇ ಹೊರತು ನಿರ್ದಿಷ್ಟ ಕಲ್ಪನೆಗಳನ್ನಲ್ಲ. ಈ ನಿರ್ದಿಷ್ಟ ಕಲ್ಪನೆಗಳೇನಿದ್ದರೂ ಆ ಪ್ರಬಲ ವಾಸ್ತವಿಕತೆಗಳ ಆಧಾರದಲ್ಲಿ ಮಾತ್ರವೇ ಮೂಡಿ ಬರಬಲ್ಲುದು.

ಪ್ರಯೋಜನಗಳು

ಈ ವಿಧಾನದಲ್ಲಿ ಕೆಲವು ಪ್ರಯೋಜನಗಳೂ ಇರುತ್ತವೆ. ಉದಾ:

- ಹಿರಿಯರು ಬಹಳ ಶ್ರಮ ಪಟ್ಟು ಮತ್ತು ಬಹಳಷ್ಟನ್ನು ಕಳಕೊಂಡು ಗಳಿಸಿದ ಜ್ಞಾನ ಮತ್ತು ಅನುಭವಗಳನ್ನು ಒಂದು ಸಣ್ಣ ಅವಧಿಯಲ್ಲಿ ಮಕ್ಕಳಿಗೆ ವರ್ಗಾಯಿಸುತ್ತಾರೆ. ಹಾಗಾಗಿ ಅವುಗಳನ್ನು ಸ್ವತಃ ಮಾಡಿ ಕಲಿಯುವ ಸಮಯವು ಮಕ್ಕಳಿಗೆ ಉಳಿತಾಯವಾಗುತ್ತದೆ. ಆದಕ್ಕಾಗಿ ಹಿರಿಯರು ಈಗಾಗಲೇ ತಮ್ಮ ಅಪಾರ ಸಮಯ, ಶಕ್ತಿ ಮತ್ತು ಧನವನ್ನು ವ್ಯಯಿಸುತ್ತಾರೆ.
- ಅಧ್ಯಾಪಕನ ಕಾರ್ಯ ಬಹಳ ಸುಲಭವಾಗುತ್ತದೆ. ಆತ ಒಂದು ವ್ಯಾಕರಣ ಅಥವಾ ಸೂತ್ರ ಹೇಳಿಕೊಡುತ್ತಾನೆ, ವಿದ್ಯಾರ್ಥಿಗಳು ಅದನ್ನು ಕಲಿಯುತ್ತಾರೆ ಮತ್ತು ಅದರ ಸಹಾಯದಿಂದ ಹಲವು ಸಮಸ್ಯೆಗಳನ್ನು ಬಿಡಿಸುತ್ತ ಹೋಗುತ್ತಾರೆ.
- ಎಲ್ಲ ವಿಷಯಗಳನ್ನು ಸ್ವತಃ ಮಾಡಿ ಕಲಿಯಲಾಗದು. ಎಲ್ಲರ ಬಳಿಯೂ ಆದಕ್ಕೆ ಅಷ್ಟು ಸಮಯವೂ ಇರುವುದಿಲ್ಲ, ಶಕ್ತಿ-ಸಾಮರ್ಥ್ಯವೂ ಇರುವುದಿಲ್ಲ. ಆದ್ದರಿಂದ ಅನಿವಾರ್ಯವಾಗಿ ಹಲವು ವಿಷಯಗಳನ್ನು ಈ ವಿಧಾನದಿಂದಲೇ ಕಲಿಯಬೇಕಾಗುತ್ತದೆ.

ಅದೇನಿದ್ದರೂ ಸಣ್ಣ ಮಕ್ಕಳಿಗೆ ಬೋಧಿಸಲು ಅನ್ವೇಷಣಾ ವಿಧಾನವು ಹೆಚ್ಚು ಪ್ರಯೋಜನಕಾರಿ ಮತ್ತು ಪರಿಣಾಮಕಾರಿಯಾಗಿದೆ. ಇದೇ ವಿಧಾನವನ್ನು ಸಾದ್ಯಂತ ಅನುಸರಿಸಬೇಕಾಗಿದೆ. ಅನಿವಾರ್ಯತೆಯೇನಾದರೂ ಇದ್ದರೆ, ಅದು ಬೇರೆ ವಿಷಯ. ಉದಾಹರಣೆಗೆ, ಸಮಯದ ಅಭಾವ, ಸ್ವಂತ ಅನುಭವ-ವೀಕ್ಷಣೆಯಿಂದ ವಿವಿಧ ರೀತಿಯ ಕಷ್ಟ-ನಷ್ಟಗಳು ಎದುರಾಗುವ ಆತಂಕ ಅಥವಾ ಹಾಗೆ ಮಾಡುವುದು ಯಾವ ನಿಟ್ಟಿನಲ್ಲೂ ಸರಿಯಲ್ಲದಿರುವುದು. ಅದೇ ವೇಳೆ, ದೊಡ್ಡ ವಿದ್ಯಾರ್ಥಿಗಳ ಕಲ್ಪನೆಗಳು ಸಣ್ಣ ಮಕ್ಕಳಿಗಿಂತ ಸ್ಪಷ್ಟವಿರುತ್ತದೆ. ಅವರಲ್ಲಿ ಚಿಂತನಾ ಶಕ್ತಿಯೂ ಕೊಂಚ ಮಟ್ಟಿಗೆ ಪಕ್ವವಾಗಿರುತ್ತದೆ. ಆದ್ದರಿಂದ ಅವರಿಗೆ ಅವಲಂಬನಾ ವಿಧಾನದಿಂದ ಕಡಿಮೆ ಸಮಯದಲ್ಲಿ ಹೆಚ್ಚು ವಿಷಯಗಳನ್ನು ಕಲಿಸಬಹುದಾಗಿದೆ. ಅವರಿಗೆ ಈ ವಿಧಾನ ಹೆಚ್ಚು ಪ್ರಯೋಜನಕಾರಿಯಾಗಿದೆ. ಆದರೆ ಅವರಿಗೆ ಅಭ್ಯಾಸ ಮತ್ತು ಪುನರಾವರ್ತನೆ ನಡೆಸಲು ಸಾಕಷ್ಟು ಅವಕಾಶವೂ ಒದಗಬೇಕು. ಅನ್ಯಥಾ ಈ ರೀತಿ ಗಳಿಸಿದ ವಿದ್ಯೆಯನ್ನು ಅವರು ಹೆಚ್ಚು ದಿನ ನೆನಪಿನಲ್ಲಿರಿಸಲಾರರು. ಅದನ್ನು ಜೀವನದಲ್ಲಿ ಅಳವಡಿಸುವಲ್ಲಿಯೂ ಅವರಿಗೆ ಬಹಳ ಕಷ್ಟವಾಗಬಹುದು.

ತುಲನೆ

ಅನ್ವೇಷಣಾ ವಿಧಾನ	ಅವಲಂಬನಾ ವಿಧಾನ
1. ನಿರ್ದಿಷ್ಟ ಘಟನೆ ಮತ್ತು ವೈಯಕ್ತಿಕ ಉದಾಹರಣೆಗಳ ಬಗ್ಗೆ ಮೊದಲು ಚಿಂತಿ	1. ಪರಿಚಯ, ವ್ಯಾಕರಣ, ಪ್ರಮೇಯಗಳನ್ನು ಮೊದಲೇ ತಿಳಿಸಿಕೊಡಲಾಗುತ್ತದೆ. ತರುವಾಯ

ಸಲಾಗುತ್ತದೆ. ಆಮೇಲೆ ಅವುಗಳ ಪರಿಚಯ, ವ್ಯಾಕರಣ, ಪ್ರಮೇಯ ಇತ್ಯಾದಿಗಳನ್ನು ತಿಳಿದುಕೊಳ್ಳಲಾಗುತ್ತದೆ.	ನಿರ್ದಿಷ್ಟ ಘಟನೆ ಅಥವಾ ಉದಾಹರಣೆಗಳ ಜತೆ ಅವುಗಳನ್ನು ಸಮೀಕರಿಸಲಾಗುತ್ತದೆ.
2. ಇದರಿಂದ ಆಧುನಿಕ ಜ್ಞಾನವನ್ನು ಗಳಿಸಲಾಗುತ್ತದೆ.	2. ಇದರಿಂದ ಗತಜ್ಞಾನವು ಹೆಚ್ಚು ದೃಢವಾಗುತ್ತದೆ.
3. ಇದು ಶೋಧನೆ-ಸಂಶೋಧನೆಯೆಡೆಗೆ ಮಾರ್ಗದರ್ಶನವೀಯುತ್ತದೆ.	3. ಇದರಿಂದ ಇತರರ ಜ್ಞಾನಕ್ಕೆ ಅನುಮೋದನೆ ದೊರೆಯುತ್ತದೆ.
4.ಇದು ತೀರಾ ನಿಧಾನಗತಿಯ ವಿಧಾನ ವಾಗಿದೆ: ಏಕೆಂದರೆ ಮಕ್ಕಳು ಸ್ವತಃ ಹಂತಹಂತವಾಗಿ ಅನುಭವ ಮತ್ತು ವೀಕ್ಷಣೆಯಿಂದ ಒಂದು ತೀರ್ಮಾನಕ್ಕೆ ಬರುತ್ತಾರೆ.	4.ಈ ವಿಧಾನದಿಂದ ಕೆಲಸವು ತ್ವರಿತಗತಿಯಲ್ಲಿ ಸಾಗುತ್ತದೆ. ಏಕೆಂದರೆ ಮಕ್ಕಳಿಗೆ ಸ್ವಯಂ ಅನುಭವ, ವೀಕ್ಷಣೆಯ ಅಗತ್ಯ ಬೀಳುವುದಿಲ್ಲ, ಹಿರಿಯರ ಜ್ಞಾನ-ಅನುಭವಗಳಿಂದ ಕೆಲಸ ನಡೆಯುತ್ತದೆ.
5. ವಿವಿಧ ಬೌದ್ಧಿಕ ಶಕ್ತಿ ಮತ್ತು ಸಾಮರ್ಥ್ಯಗಳ ತರಬೇತಿಯಾಗುತ್ತದೆ. ಉದಾ: ಚಿಂತನೆ, ಮಾಹಿತಿ ಸಂಗ್ರಹ, ತೀರ್ಮಾನ ಶಕ್ತಿ ಇತ್ಯಾದಿ.	5. ಹೆಚ್ಚಿನಂಶ ಸ್ಮರಣಶಕ್ತಿಯಿಂದಲೇ ಕೆಲಸ ನಡೆಯುತ್ತದೆ. ಮನಸ್ಸಿನ ಇತರ ಶಕ್ತಿಯನ್ನು ಬಳಸುವ ಅವಕಾಶ ಕಡಿಮೆ ಇರುತ್ತದೆ.
6. ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ.	6. ಅಧ್ಯಾಪಕರನ್ನೇ ಅವಲಂಬಿಸುವ ಅಭ್ಯಾಸ ಬೆಳೆಯುತ್ತದೆ.
7. ಇದರಿಂದ ಚಿಂತನೆಯ ದಿಕ್ಕು ಉನ್ನತಿಗೇರುತ್ತದೆ. ನಿರ್ದಿಷ್ಟ ಘಟನೆಗಳಿಂದ ತೀರ್ಮಾನಕ್ಕೆ ಬರುವ ಚಿಂತನೆ ಬೆಳೆದು ಬರುತ್ತದೆ.	7. ಚಿಂತನೆಯ ದಿಕ್ಕು ಹಿಂದುಳಿಯುತ್ತದೆ. ತೀರ್ಮಾನದಿಂದ ಘಟನೆಯೆಡೆಗೆ ಸಾಗಬೇಕಾಗಿ ಬರುತ್ತದೆ.
8. ಸ್ವತಃ ಮಾಡಿ ಕಲಿಯುವ ಅವಕಾಶ ಒದಗುತ್ತದೆ. ಹಾಗಾಗಿ ಜ್ಞಾನವು ಪಕ್ವ ಮತ್ತು ಪ್ರಯೋಜನಕಾರಿಯಾಗುತ್ತದೆ. ಅಗತ್ಯಾನುಸಾರ ಚೆನ್ನಾಗಿ ಜೀವನದಲ್ಲಿ ಅಳವಡಿಸಬಹುದಾಗಿದೆ.	8. ಇತರರು ಹೇಳಿಕೊಟ್ಟುದರ ಮೇಲೆ ಭರವಸೆ ಇಡಬೇಕಾಗುತ್ತದೆ. ಹಾಗಾಗಿ ಈ ವಿದ್ಯೆಯ ಮೇಲೆ ಸಂಪೂರ್ಣ ವಿಶ್ವಾಸವೂ ಬೆಳೆಯಲಾರದು. ಅದನ್ನು ಬಳಸುವ ವಿಧಾನವೂ ತಿಳಿಯಲಾರದು.
9. ಇದರಲ್ಲಿ ಹೆಚ್ಚು ತರಬೇತಿ ಮತ್ತು ಕಡಿಮೆ ಮಾಹಿತಿ ಇರುತ್ತದೆ.	9. ಇದರಲ್ಲಿ ಹೆಚ್ಚು ಮಾಹಿತಿ ಮತ್ತು ಕಡಿಮೆ ತರಬೇತಿಯಾಗುತ್ತದೆ.
10. ಈ ವಿಧಾನ ಸಣ್ಣ ಮಕ್ಕಳಿಗೆ ಸೂಕ್ತ.	10. ಈ ವಿಧಾನ ಹಿರಿಯ ಮಕ್ಕಳಿಗೆ ಸೂಕ್ತ.

ಸಂಶೋಧನಾ ವಿಧಾನ

'ಬೆಂಕಿಯು ಸುಡುತ್ತದೆ'- ಇದೊಂದು ಸಾಮಾನ್ಯ ವಾಸ್ತವಿಕತೆಯಾಗಿದೆ. ಇದರ ಜ್ಞಾನವು ನಮಗೆ ಸಣ್ಣ ಪ್ರಾಯದಲ್ಲೇ ವೀಕ್ಷಣೆ ಮತ್ತು ಅನುಭವದಲ್ಲಿ ಆಗಿರುತ್ತದೆ. ಒಂದು ಪುಟ್ಟ ಮಗುವಿನೊಡನೆ, ''ಮಗೂ! ಬೆಂಕಿ ಸುಡುತ್ತೆ, ಅದರಲ್ಲಿ ಕೈ ಹಾಕಬೇಡ. ಅನ್ಯಥಾ ಕೈ ಸುಟ್ಟು ಹೋದೀತು ಮತ್ತು ಅದರಿಂದ ಬಹಳ ನೋವಾಗುತ್ತದೆ'' ಎಂದು ಹೇಳಿದರೆ, ಬಹುಶಃ ನಮ್ಮ ಮೇಲಿನ ವಿಶ್ವಾಸದಿಂದ ಮಗು ಆ ವಾಸ್ತವಿಕತೆಯನ್ನು ಅಂಗೀಕರಿಸಬಹುದು ಮತ್ತು ಒಂದು ಹಂತದ ವರೆಗೆ ಬೆಂಕಿಯಿಂದ ದೂರವುಳಿಯಬಹುದು. ಆದರೆ ಅಮ್ಮ ಊಟ ತಯಾರಿಸುವಾಗ, ಕೈ ಸುಟ್ಟುಕೊಂಡು ನೋವನುಭವಿಸುವುದನ್ನು ಕಂಡಾಗ ಮಗುವಿನಲ್ಲಿ ಸರಿಯಾದ ವಿಶ್ವಾಸ ಮೂಡಬಹುದು. ಇನ್ನು ಅದರಿಂದ ಸುಟ್ಟುಕೊಳ್ಳುವ ಅನುಭವ ಸ್ವಂತಕ್ಕೆ ಆಗಿ ಬಿಟ್ಟರೆ, ಆ ವಿಶ್ವಾಸವು ಸಂಪೂರ್ಣಗೊಳ್ಳುತ್ತದೆ. ಆ ಮೇಲೆ ಮಗು, ಹಾಲು ಕಾಯಿಸಿ ಮಾಡಿದ ಸಿಹಿತಿಂಡಿಯನ್ನೂ ಊದಿ ತಿನ್ನಲು ಶುರುಮಾಡುತ್ತದೆ.

ಇತರರು ಹೇಳಿಕೊಟ್ಟುದರ ಮೇಲೆ ಬಹಳ ಕಡಿಮೆ ವಿಶ್ವಾಸ ತಾಳುವುದು ಮಕ್ಕಳ ಸ್ವಭಾವವಾಗಿದೆ. ಅವರಂತೂ ಸ್ವತಃ ಕಂಡು, ಅನುಭವಿಸಿ ಒಂದು ತೀರ್ಮಾನಕ್ಕೆ ಬರಲು ಹಾತೊರೆಯುತ್ತಾರೆ. ಈ ರೂಪದಲ್ಲಿಯೇ ಅವರ ಜ್ಞಾನವು ಪಕ್ವ ಮತ್ತು ವಿಶ್ವಾಸವು ಪರಿಪೂರ್ಣವಾಗುತ್ತದೆ. ಆದ್ದರಿಂದ ಬೋಧನೆಯ ವೇಳೆ ಮಕ್ಕಳಿಗೆ ಎಲ್ಲವನ್ನೂ ಕಲಿಸಿ ಬಿಡುವುದರ ಬದಲು, ಅವರಿಗೆ ಮಾಡಿ ಕಲಿಯಲು ಮತ್ತು ಸ್ವಂತ ಪರಿಶ್ರಮದಿಂದ ಸತ್ಯಾಂಶವನ್ನು ಕಂಡು ಹಿಡಿಯಲು ಹೆಚ್ಚೆಚ್ಚು ಅವಕಾಶ ನೀಡುತ್ತಾ ಇರಬೇಕು. ಈ ಉದ್ದೇಶದ ಈಡೇರಿಕೆಗಾಗಿಯೇ ಬೋಧನೆಯ ಸಂಶೋಧನಾ ವಿಧಾನವನ್ನು ರೂಪಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಸಂಶೋಧನೆ ಮತ್ತು ಹುಡುಕಾಟದ ಆಸಕ್ತಿಯು ಬೆಳೆದು ಬರುತ್ತದೆ. ಈ ರೀತಿಯಾಗಿ ಗಳಿಸಿದ ವಿದ್ಯೆಯು ಪಕ್ವವಾಗಿರುತ್ತದೆ.

ಈ ವಿಧಾನದಲ್ಲಿ ಮಕ್ಕಳ ಸ್ಥಾನವು ಶೋಧಕರಾಗಿಯೂ ಅಧ್ಯಾಪಕನ ಸ್ಥಾನವು ಸಲಹೆಗಾರ ಮತ್ತು ಮಾರ್ಗದರ್ಶಕನಾಗಿಯೂ ಇರುತ್ತದೆ. ಸ್ವಂತ ನೆಲೆಯಲ್ಲಿ ವಾಸ್ತವಾಂಶವನ್ನು ಕಂಡುಕೊಳ್ಳಲು ವಿದ್ಯಾರ್ಥಿಗಳಲ್ಲಿ ಕುತೂಹಲ ಕೆರಳಿಸಿ ಮತ್ತು ಅಗತ್ಯದ ಸಲಕರಣೆಗಳನ್ನು ಒದಗಿಸಿ, ಅವರಿಗೆ ಹೆಚ್ಚೆಚ್ಚು ಸ್ವಾತಂತ್ರ್ಯ ನೀಡಿ ಬಿಡಲಾಗುತ್ತದೆ. ಅಧ್ಯಾಪಕನು ಅವರ ಕುತೂಹಲವನ್ನು ಜಾಗೃತಾವಸ್ಥೆಯಲ್ಲಿರಿಸುತ್ತಾ ಅಗತ್ಯದ ಸಹಾಯವನ್ನು ನೀಡುತ್ತಿರುತ್ತಾನೆ. ಸೂಕ್ತ ಪ್ರಶ್ನೆ ಮತ್ತು ಸೂಚನೆಗಳ ಮೂಲಕ ಹಾಗೂ ಕೆಲವೊಮ್ಮೆ ನೇರವಾಗಿ ಮಾರ್ಗದರ್ಶನ ನೀಡುತ್ತಾ ವಾಸ್ತವಾಂಶಗಳಿಗೆ ತಲುಪುವಂತೆ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಾನೆ. ಈ ರೀತಿ ಮಕ್ಕಳು ಅಧ್ಯಾಪಕನ ಸಹಾಯದಿಂದ ವಾಸ್ತವಾಂಶಗಳನ್ನು ಕಂಡುಕೊಳ್ಳುತ್ತಾರೆ. ವಿಜ್ಞಾನ, ಗಣಿತ ಮತ್ತು ಸ್ಥಳೀಯ ಭೂಗೋಳಶಾಸ್ತ್ರ ಕಲಿಸುವಾಗ ಈ ವಿಧಾನದಿಂದ ಬಹಳ ಉಪಯೋಗವಿದೆ.

ಉಪಯೋಗಗಳು

ಈ ವಿಧಾನದಲ್ಲಿ ಹಲವು ರೀತಿಯ ಉಪಯೋಗಗಳಿವೆ. ಉದಾ:-

- ವಿದ್ಯಾರ್ಥಿಗಳಿಗೆ ಸ್ವಯಂ ಅನುಭವ ಮತ್ತು ವೀಕ್ಷಣೆಯ ಅವಕಾಶವಿರುವುದರಿಂದ ಅವರು ಪಾಠದಲ್ಲಿ ಸಕ್ರಿಯ ಆಸಕ್ತಿಯನ್ನು ತೋರಿಸುತ್ತಾರೆ.
- ಈ ವಿಧಾನದಿಂದ ಗಳಿಸಿದ ವಿದ್ಯೆಯು ದೃಢವಾಗಿರುತ್ತದೆ. ಜೀವನ ಪೂರ್ತಿ ನೆನಪಿನಲ್ಲಿರುತ್ತದೆ. ಇಂತಹ ವಿದ್ಯೆಯಲ್ಲಿ ಸಂಪೂರ್ಣ ವಿಶ್ವಾಸ ಮತ್ತು ಭರವಸೆ ಇರುತ್ತದೆ. ಅಗತ್ಯಾನುಸಾರ ಸೂಕ್ತವಾಗಿ ಜೀವನದಲ್ಲಿ ಅಳವಡಿಸಲೂ ಆಗುತ್ತದೆ.
- ಇದರಿಂದ ವಿದ್ಯಾರ್ಥಿಗಳಲ್ಲಿ ಸಂಶೋಧನೆಯ ಆಸಕ್ತಿ ಬೆಳೆಯುತ್ತದೆ. ಅವರು ತಮ್ಮ ಕೆಲಸವನ್ನು ಸ್ವಯಂ ಮಾಡಲು ಕಲಿಯುತ್ತಾರೆ. ಶಾಲೆಯ ಬಿಡುವಿನ ವೇಳೆಯಲ್ಲಿಯೂ ಹೊಸ ವಿಷಯಗಳ ಅಧ್ಯಯನ, ವೀಕ್ಷಣೆ, ಅನುಭವಗಳನ್ನು ಗಳಿಸುತ್ತಾ ಇರುತ್ತಾರೆ.
- ಮಾಡಿ ಕಲಿಯುವುದರಿಂದ ಮತ್ತು ಸ್ವ ಪ್ರಯತ್ನದಲ್ಲಿ ಯಶಸ್ವಿಯಾಗುವುದರಿಂದ ದೊರೆಯುವ ಸಂತೋಷವು ಇನ್ನಷ್ಟು ಪರಿಶ್ರಮಕ್ಕೆ ಪ್ರೇರಣೆಯಾಗುತ್ತದೆ.
- ಇದರಿಂದ ಚಿಂತನೆ, ಅವಲೋಕನ ಮತ್ತು ತೀರ್ಮಾನದ ಶಕ್ತಿಯು ಬೆಳೆದು ಬರುತ್ತದೆ.

ಆದರೆ ಮಕ್ಕಳಿಗೆ ಏನನ್ನೂ ತಿಳಿಸಿಕೊಡಲಿಕ್ಕಿಲ್ಲವೆಂದು ಈ ವಿಧಾನದ ಬಳಕೆಯ ಅರ್ಥ ಖಂಡಿತ ಅಲ್ಲ, ಎಲ್ಲವನ್ನೂ ಅವರಷ್ಟಕ್ಕೇ ಅನುಭವ, ವೀಕ್ಷಣೆಯಿಂದ ಕಲಿಯಲು ಬಿಡುವುದೆಂದೂ ಅರ್ಥವಲ್ಲ, ಅದೇ ರೀತಿ, ಈ ವಿಧಾನವು ಅಬೌದ್ಧಿಕವಾಗಿದೆಯೆಂದು ಕೆಲವರು ಇದನ್ನು ಟೀಕಿಸುತ್ತಾರೆ. ಅವರ ಪ್ರಕಾರ, ಹಿಂದೆ ಮಾಡಲಾದ ತಪ್ಪುಗಳನ್ನೆಲ್ಲ ಪುನರಾವರ್ತಿಸಲು ಅವಕಾಶ ನೀಡುವುದು ಮೂರ್ಖತನವಾಗಿದೆ. ಆ ತಪ್ಪುಗಳಿಂದಾಗಿ ಹಿಂದೆ ತೀರಾ ಕೆಟ್ಟ ಪರಿಣಾಮಗಳನ್ನು ಅನುಭವಿಸಲಾಗಿದೆ. ಹೀಗೆ ಮಕ್ಕಳು ಗತ ಅನುಭವಗಳ ಅರಿವಿನಿಂದ ವಂಚಿತರಾಗುತ್ತಾರೆ ಮತ್ತು ಹಿಂದಿನ ವಿದ್ಯೆಯ ಜತೆಗಿನ ಅವರ ಸಂಬಂಧವೂ ಕಡಿದು ಹೋಗುವುದು. ಅವರು ತಮ್ಮ ಇಡೀ ಜೀವನವನ್ನು ಸಣ್ಣ ಸಮಯದಲ್ಲಿ ಕಲಿಯಬಹುದಾದಂತಹ ಸಾಮಾನ್ಯವಾದ ನಿಷ್ಪ್ರಯೋಜಕ ಅಥವಾ ಅಪಾಯಕಾರಿ ವಿಷಯಗಳ ಪ್ರಯೋಗದಲ್ಲಿಯೇ ವ್ಯಯಿಸಿ ಬಿಡುವರು. ಈ ವಾದವನ್ನು ಒತ್ತಟ್ಟಿಗಿರಿಸಿ ಈ ವಿಧಾನದ ಬಗ್ಗೆ ಒಂದೇ ಮಾತಿನಲ್ಲಿ ಹೇಳುವುದಾದರೆ, ಮಕ್ಕಳಿಗೆ ಎಲ್ಲವನ್ನೂ ಹೇಳಿ ಬಿಡುವುದರ ಬದಲು ಸಾಧ್ಯವಾದಷ್ಟರ ಮಟ್ಟಿಗೆ ಸ್ವತಃ ಮಾಡಿ ಕಲಿಯುವ ಅವಕಾಶ ನೀಡುವುದು ಇದರ ಉದ್ದೇಶ ಎನ್ನಬಹುದು. ಆದರೆ ಕೆಲಸ ಕೆಡುವ ಅಥವಾ ಸಮಯ ಪೋಲಾಗುವ ಲಕ್ಷಣ ಕಂಡಲ್ಲಿ ಖಂಡಿತವಾಗಿಯೂ ಸೂಕ್ತ ಮಾರ್ಗದರ್ಶನ ನೀಡಬೇಕು. ಹಾಗೆಯೇ ಗಮನಾರ್ಹ ಅಥವಾ ಗಂಭೀರ ನಷ್ಟವುಂಟಾಗುವ ಆತಂಕ ಇಲ್ಲದಂತಹ ವಿಷಯಗಳಲ್ಲಿ ಕೊಂಚ ಹೆಚ್ಚೇ ಸ್ವಾತಂತ್ರ್ಯ ನೀಡಬೇಕು.

ಕಿಂಡರ್ ಗಾರ್ಟನ್ ವಿಧಾನ

ಕಿಂಡರ್ ಗಾರ್ಟನ್ ಅಂದರೆ 'ಮಕ್ಕಳ ಉದ್ಯಾನ' ಎಂದರ್ಥ. ಅಂದರೆ ಪು ಮಕ್ಕಳು ಆಡಿ ಬೆಳೆಯುವಂತಹ ಉದ್ಯಾನ. ಇದು ವಸ್ತುತಃ (ಮೂರ್ನಾಲ್ಕು ವರ್ಷದಿಂ ಆರೇಳು ವರ್ಷ ಪ್ರಾಯದ) ಪುಟ್ಟ ಮಕ್ಕಳಿಗಾಗಿ ಜರ್ಮನಿಯ ಫ್ರೋಬೆಲ್ ಎಂಬ ಶಿಕ್ಷ ತಜ್ಞ ತಯಾರಿಸಿದ ಯೋಜನೆಯಂತೆ ನಡೆಸಲಾಗುವ ಶಾಲೆಯಾಗಿದೆ. ಈ ಶಾಲೆಗಳ ಮಕ್ಕಳ ಸ್ಥಾನವು ಗಿಡಗಳಂತೆಯೂ ಅಧ್ಯಾಪಕರ ಸ್ಥಾನವು ತೋಟಗಾರನಂತೆಯೂ ಇರುತ್ತದೆ ಈ ಪುಟ್ಟ ಮಕ್ಕಳು ಆಡಿ ಬೆಳೆಯಲು ಅಧ್ಯಾಪಕನು ತೋಟಗಾರನಂತೆ ಸೂಕ್ತ ವಾತಾವರಣವನ ರೂಪಿಸಬೇಕು ಮತ್ತು ಅಗತ್ಯದ ವಸ್ತುಗಳನ್ನು ಒದಗಿಸಿ ಆ ಗಿಡಗಳಿಗೆ ತಮ್ಮ ಆಂತರಿ ಕ್ರಿಯಾಶೀಲತೆಯೊಂದಿಗೆ ಬೆಳೆಯಲು ಸಹಕರಿಸಬೇಕು.

ಈ ವಿಧಾನದ ಅನ್ವೇಷಕ ಫ್ರೋಬೆಲ್ 1783ರಲ್ಲಿ ಜನಿಸಿದನು. ಮಲ ತಾಯಿಯ ಉಪಟಳದಿಂದಾಗಿ ಆತ ಸದಾ ಮನೆಯಿಂದ ಹೊರಟು ಕಾಡಿನಲ್ಲಿ ಅಲೆದಾಡುತ್ತಿದ್ದ. ಅವ ಪ್ರಾಥಮಿಕ ಶಿಕ್ಷಣದ ಕಡೆಗೆ ಯಾರೂ ವಿಶೇಷ ಗಮನ ಹರಿಸಿರಲಿಲ್ಲ, ಬಳಿಕ ಅವನು ತಾನೆ ಪರಿಶ್ರಮ ಪಟ್ಟು ಶಿಕ್ಷಣ ವಿಧಾನಗಳಲ್ಲಿ ಪ್ರಾವೀಣ್ಯತೆಯನ್ನು ಗಳಿಸಿದನು. 1837ರಲ್ಲಿ ಆ ಪುಟ್ಟ ಮಕ್ಕಳಿಗಾಗಿ 'ಕಿಂಡರ್ ಗಾರ್ಟನ್' ಎಂಬ ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕಿದನು ಪುಟ್ಟ ಮಕ್ಕಳ ಶಿಕ್ಷಣ-ತರಬೇತಿಯನ್ನು ಪರಿಣಾಮಕಾರಿ ಮತ್ತು ಪ್ರಯೋಜನಕಾರಿಯಾಗಿಸುವ ನಿಟ್ಟಿನಲ್ಲಿ ಈ ಕ್ರಮವು ಕ್ರಾಂತಿಕಾರಿ ಹೆಜ್ಜೆಯಾಗಿ ಮಾರ್ಪಟ್ಟಿತು. ಅಲ್ಲಿಯ ತನಕ ಸಣ್ಣ ಮಕ್ಕ ಶಿಕ್ಷಣ-ತರಬೇತಿಯ ಅಪೂರ್ಣ ವ್ಯವಸ್ಥೆಯ ಬಗ್ಗೆ ಬೇಸರ ಪಡುವವರು ಹಲವರಿದ್ದರು ಆದರೆ ಒಂದು ವ್ಯವಸ್ಥಿತ ಯೋಜನೆಯಡಿ ಪ್ರಾಯೋಗಿಕ ಹೆಜ್ಜೆಯನ್ನು ಈತನೇ ಇರಿಸಿದ್ದನು 1852ರಲ್ಲಿ ಫ್ರೋಬೆಲ್ ಮರಣ ಹೊಂದಿದ. ಆತ ದೇವಾಸ್ತಿತ್ವವನ್ನು ಅಂಗೀಕರಿಸುವವ ಮತ್ತು ಧಾರ್ಮಿಕ ಜೀವನವನ್ನು ಇಷ್ಟ ಪಡುವವನಾಗಿದ್ದ. ಅವನ ಮಟ್ಟಿಗೆ ಶಿಕ್ಷಣ ಉದ್ದೇಶವು,

''ಉತ್ತಮ, ಪ್ರಾಮಾಣಿಕ, ನಿಷ್ಕಳಂಕ ಮತ್ತು ಶುದ್ಧ ಜೀವನ ಸಾಗಿಸಲು ಯೋಗ್ಯರನ್ನಾಗಿಸುವುದಾಗಿದೆ.''

ಈ ಉದ್ದೇಶವನ್ನು ಶುದ್ಧ ಧಾರ್ಮಿಕ ಜೀವನದಿಂದಲೇ ಗಳಿಸಲು ಸಾಧ್ಯವಾದ್ದರಿಂದ ಆತನು ಶಿಕ್ಷಣದ ಬುನಾದಿಯನ್ನು ಧರ್ಮದ ಆಧಾರದಲ್ಲಿರಿಸುವುದು ಅಗತ್ಯ ಎಂದ ಮನಗಂಡಿದ್ದನು. ಅವನ ಮಟ್ಟಿಗೆ ವ್ಯಕ್ತಿಯು ತನ್ನನ್ನು ತಾನು ಗುರುತಿಸುವ ಮತ್ತ ವಿವಿಧತೆಯಲ್ಲಿ ಏಕತೆಯ ಪ್ರಜ್ಞೆ ಬೆಳೆಸಿಕೊಳ್ಳುವ ರೀತಿಯಲ್ಲಿ ಶಿಕ್ಷಣವಿರಬೇಕು. ಆತ ಪ್ರಸ್ತು ಪಡಿಸಿದ ನೀತಿಗಳು ಈ ರೀತಿ ಇದೆ.

- ಸಾಮೂಹಿಕ ಸಂಸ್ಥೆಗಳ ಮೂಲಕವೇ ವೈಯಕ್ತಿಕತೆಯ ಸೂಕ್ತ ಬೆಳವಣಿಗೆಯಾಗಬಲ್ಲುದು

ಆದ್ದರಿಂದ ಮಕ್ಕಳಲ್ಲಿ ಸಹಜೀವನದ ಅಗತ್ಯವನ್ನು ಮನಗಾಣಿಸಬೇಕು ಮತ್ತು ತರಬೇತಿಯ ಮುಖಾಂತರ ಸಚ್ಚಾರಿತ್ರ್ಯ ಹಾಗೂ ಸಾಮೂಹಿಕ ಗುಣವನ್ನು ಬೆಳೆಸಬೇಕು.

- ಸೂಕ್ತ ವಾತಾವರಣ ಮತ್ತು ಅಗತ್ಯದ ಪೋಷಣೆ ದೊರೆತರೆ ಬೀಜವೊಂದರಲ್ಲಿ ಹೆಮ್ಮರವಾಗುವ ಶಕ್ತಿ ಇರುವಂತೆಯೇ ಮಕ್ಕಳಲ್ಲಿಯೂ ಪ್ರತಿಭೆಗಳು ಬೆಳೆದು ಬರುವ ಸಂಪೂರ್ಣ ಸಾಮರ್ಥ್ಯವಿದೆ. ಆದ್ದರಿಂದ ಅವರಲ್ಲಿರುವ ಸುಪ್ತ ಪ್ರತಿಭೆಗಳನ್ನು ಹೊರತರಲು ಮತ್ತು ಅವರ ವ್ಯಕ್ತಿತ್ವದ ಬೌದ್ಧಿಕ, ದೈಹಿಕ, ಕ್ರಿಯಾತ್ಮಕ, ನೈತಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಹೀಗೆ ವಿಭಿನ್ನ ಮಗ್ಗುಲುಗಳ ಸರ್ವತೋಮುಖ ಬೆಳವಣಿಗೆಗೆ ಸಹಾಯ ಮಾಡಬೇಕು. ಈ ಮೂಲಕ ಮಕ್ಕಳು ತಮ್ಮ ಆಂತರಿಕ ಸಕ್ರಿಯತೆಯಿಂದ ಚೆನ್ನಾಗಿ ಬೆಳೆದು ಬರುತ್ತಾರೆ.
- ಶಿಕ್ಷಣದ ಪ್ರಭಾವಶಾಲಿ ವಿಧಾನ ಮಕ್ಕಳ ಸ್ವಯಂ ಸಕ್ರಿಯತೆಯಾಗಿದೆ. ಅವರು ಪ್ರಾಯೋಗಿಕವಾಗಿ ಕಲಿಯುವುದರಿಂದ ಹೆಚ್ಚು ಉತ್ತಮವಾಗಿ ಕಲಿಯಬಲ್ಲರು. ಹಾಗಾಗಿ ಅವರ ಸ್ವಾಭಾವಿಕ ಮತ್ತು ಅಪ್ರಚೋದಿತ ಚಟುವಟಿಕೆ, ಹವ್ಯಾಸ ಇತ್ಯಾದಿಗಳ ಮೂಲಕ ಅವರಿಗೆ ಶಿಕ್ಷಣ ನೀಡಬೇಕು.
- ಮಕ್ಕಳ ಬೆಳವಣಿಗೆಗೆ ಆಟವು ತೀರಾ ಅನಿವಾರ್ಯ. ಹಾಗಾಗಿ ಆಟದೊಂದಿಗೆ ಪಾಠ ನೀಡಬೇಕು.
- ಶಾಲೆಯ ವಾತಾವರಣವನ್ನು ಮಕ್ಕಳು ಸ್ವಾತಂತ್ರ್ಯ ಮತ್ತು ಆನಂದವನ್ನು ಅನುಭವಿಸುವಂತೆ ರೂಪಿಸಬೇಕು. ಅಲ್ಲಿ ಅವರು ವಿವಿಧ ಮಾಧ್ಯಮಗಳಿಂದ (ಉದಾ: ಸೃಜನಾತ್ಮಕ ಅಭ್ಯಾಸ, ಗಾಯನ ಮತ್ತು ಅಭಿನಯದ ಆಟ ಇತ್ಯಾದಿಗಳಿಂದ) ತಮ್ಮ ಚಿಂತನೆ ಮತ್ತು ಭಾವನೆಗಳನ್ನು ಮುಕ್ತವಾಗಿ ಪ್ರಕಟಿಸುವಂತಹ ವಾತಾವರಣವಿರಬೇಕು. ಬಾಹ್ಯ ಒತ್ತಡ ಎಳ್ಳಷ್ಟೂ ಇರಬಾರದು. ಬದಲಾಗಿ ಹಂತಹಂತವಾಗಿ ಸ್ವಯಂ ನಿಯಂತ್ರಣವನ್ನು ಕಲಿಸಲು ಪ್ರಯತ್ನಿಸಬೇಕು.
- ಮಕ್ಕಳ ಸ್ವಭಾವ ಮತ್ತು ಅಗತ್ಯವನ್ನು ಗಮನದಲ್ಲಿರಿಸಿ ಶಿಕ್ಷಣ ನೀಡಬೇಕು. ಈ ನಿಟ್ಟಿನಲ್ಲಿ ಮಕ್ಕಳ ಮನಃಪೂರ್ವಕವಾದ ಸಹಕಾರವನ್ನು ಪಡೆಯಬೇಕು.

ಪಠ್ಯ ಮತ್ತು ಬೋಧನಾ ವಿಧಾನ ಇತ್ಯಾದಿ

ಪುಟ್ಟ ಮಕ್ಕಳಿಗೆ ಓದು-ಬರೆಹ ಅಥವಾ ಲೆಕ್ಕ ಇತ್ಯಾದಿ ನಿರ್ದಿಷ್ಟ ಪಠ್ಯ ಸೂಚಿಸಲಾಗದು. ಏಕೆಂದರೆ, ಆರು ವರ್ಷ ಪ್ರಾಯಕ್ಕಿಂತ ಮುಂಚೆ ಮಗು ಯಾವುದೇ ಪಠ್ಯದ ಭಾರವನ್ನು ಹೊರುವ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಆದ್ದರಿಂದ ಫ್ರೋಬೆಲ್, ಪುಟ್ಟ ಮಕ್ಕಳಿಗಾಗಿ ಏಳು ಕೊಡುಗೆಗಳು ಮತ್ತು ಇಪ್ಪತ್ತು ಚಟುವಟಿಕೆಗಳನ್ನು ಸೂಚಿಸಿರುವನು. ಇವೆಲ್ಲವೂ ಆಟ ಮತ್ತು ಆಟಿಕೆಗಳಾಗಿವೆ. ಮಕ್ಕಳು ಅವುಗಳನ್ನು ತಮ್ಮದೇ ಆದ ಶೈಲಿಯಲ್ಲಿ ಬಳಸುತ್ತಾರೆ. ಕೊಡುಗೆಗಳು ಮಕ್ಕಳ ಮಾನಸಿಕ

ತರಬೇತಿಗೆ ಸಹಾಯಕವಾಗಿವೆ ಮತ್ತು ಚಟುವಟಿಕೆಗಳು ವಿವಿಧ ರೀತಿಯ ಕೌಶಲ್ಯಗಳನ್ನು ಗಳಿಸುವಲ್ಲಿ ಸಹಕಾರಿಯಾಗಿವೆ.

- **ಮೊದಲ ಕೊಡುಗೆ:** ವಿವಿಧ ಬಣ್ಣದ ಆರು ತುಂಡು, ಮರದ ಕಡ್ಡಿ ಅಥವಾ ಉಣ್ಣೆಯ ಚೆಂಡುಗಳನ್ನು ಒಳಗೊಂಡಿರುತ್ತದೆ. ಅವುಗಳನ್ನು ಮಕ್ಕಳು ಸುಲಭದಲ್ಲಿ ನೇತಾಡಿಸುತ್ತ, ಅವುಗಳ ಮೂಲಕ ಬಣ್ಣ, ರೂಪ, ಗಾತ್ರ, ಚಲನೆ, ಕಾಠಿಣ್ಯ, ಕೋಮಲತೆ ಇತ್ಯಾದಿಗಳ ಜ್ಞಾನವನ್ನು ಗಳಿಸುತ್ತಾರೆ.
- **ಎರಡನೆಯ ಕೊಡುಗೆ:** ಉರುಟು, ಘನಾಕೃತಿ ಮತ್ತು ಲಟ್ಟಣಿಗೆಯ ರೂಪದ ಕಟ್ಟಿಗೆಯ ಆಟಿಕೆಗಳನ್ನು ಒಳಗೊಂಡಿರುತ್ತವೆ. ಅವುಗಳಿಂದ ವಿವಿಧ ಬಣ್ಣ ಹಾಗೂ ರೂಪದ ವಸ್ತುಗಳ ನಡುವಿನ ವ್ಯತ್ಯಾಸ ಮತ್ತು ಸಾಮ್ಯತೆಯನ್ನು ಅಂದಾಜಿಸುತ್ತಾರೆ.
- **ಮೂರನೆಯ ಕೊಡುಗೆ:** ಎಂಟು ಭಾಗಗಳುಳ್ಳ ಕಟ್ಟಿಗೆಯ ದೊಡ್ಡ ಘನಾಕೃತಿ. ಆ ಭಾಗಗಳನ್ನು ಕ್ರಮಬದ್ಧವಾಗಿ ಜೋಡಿಸುವ ಮೂಲಕ ಮಕ್ಕಳು ಮೇಜು, ಚೌಕಿ, ಬೆಂಚು, ಏಣಿ ಇತ್ಯಾದಿ ರಚಿಸುತ್ತಾರೆ. ಅವುಗಳ ಮುಖಾಂತರ ಎಣಿಕೆ, ಸಂಕಲನ, ವ್ಯವಕಲನಗಳ ಪ್ರಾಥಮಿಕ ಕಲ್ಪನೆಯೂ ಉಂಟಾಗುತ್ತದೆ.
- **ನಾಲ್ಕನೆಯ ಕೊಡುಗೆ:** ಮಕ್ಕಳ ಸೃಜನಾತ್ಮಕ ಪ್ರತಿಭೆಯನ್ನು ಉದ್ದೀಪಿಸಲು ಚೌಕಾಕಾರದ ಎಂಟು ಘನಾಕೃತಿಗಳನ್ನಿರಿಸಲಾಗುತ್ತದೆ. ಮೂರನೆಯ ಕೊಡುಗೆಯ ವಸ್ತುಗಳೊಂದಿಗೆ ಇವುಗಳನ್ನು ತುಲನೆ ಮಾಡಲಾಗುತ್ತದೆ. ಬಳಿಕ ಅವುಗಳನ್ನು ಕ್ರಮಬದ್ಧಗೊಳಿಸಿ ವಿವಿಧ ರೂಪಗಳನ್ನು ಮಾಡಿಸಲಾಗುತ್ತದೆ ಮತ್ತು ಡಿಸೈನ್‌ಗಳನ್ನು ತಯಾರಿಸಲಾಗುತ್ತದೆ.
- **ಐದನೆಯ ಕೊಡುಗೆ:** ಇಪ್ಪತ್ತೇಳು ಸಣ್ಣ ಸಣ್ಣ ಘನಾಕೃತಿಗಳನ್ನೊಳಗೊಂಡಿರುತ್ತದೆ. ಅವುಗಳನ್ನು ಕ್ರಮಬದ್ಧವಾಗಿರಿಸುವುದರಿಂದ ತರತರದ ಡಿಸೈನುಗಳು ಮತ್ತು ಕಟ್ಟಡಗಳು ರಚನೆಗೊಳ್ಳುತ್ತವೆ. ಮೂರನೆಯ ಕೊಡುಗೆಯ ವಸ್ತುಗಳಿಗೂ ಇವುಗಳಿಗೂ ಸಾಮ್ಯತೆ ಇರುತ್ತದೆ. ಇವು ಸಾಮಾನ್ಯವಾಗಿ ಜಟಿಲವಾಗಿರುತ್ತವೆ ಮತ್ತು ಪುಟ್ಟ ಮಕ್ಕಳಿಗೆ ನೀಡಲಾಗುವುದಿಲ್ಲ.
- **ಆರನೆಯ ಕೊಡುಗೆ:** ಇದರಲ್ಲಿ ಹದಿನೆಂಟು ದೊಡ್ಡ ಮತ್ತು ಒಂಭತ್ತು ಸಣ್ಣ ಘನಾಕೃತಿಗಳಿರುತ್ತವೆ. ನಾಲ್ಕನೆಯ ಕೊಡುಗೆಯೊಂದಿಗೆ ಇವುಗಳ ತುಲನೆ ಮಾಡಲಾಗುತ್ತದೆ. ಇವುಗಳನ್ನು ಕ್ರಮಬದ್ಧಗೊಳಿಸಿ, ಬೊಂಬೆಯ ಮನೆ, ಶಾಲೆ, ಹೊಲ-ತೋಟ ಇತ್ಯಾದಿ ಮಾಡಲಾಗುತ್ತದೆ. ಇದರಿಂದ ಹಲವು ರೀತಿಯ ಡಿಸೈನ್‌ಗಳನ್ನು ರಚಿಸಲಾಗುತ್ತದೆ.
- **ಏಳನೆಯ ಕೊಡುಗೆ:** ಈ ಮೇಲಿನ ಆರೂ ಕೊಡುಗೆಗಳು ಘನ ವಸ್ತುಗಳ ಬಗ್ಗೆ ಒಂದು ಕಲ್ಪನೆಯನ್ನು ರೂಪಿಸಲು ಉಪಯೋಗಿಸಲಾಗುತ್ತದೆ. ಏಳನೆಯ ಕೊಡುಗೆಯಲ್ಲಿ ರೇಖಾಗಣಿತದ ವಿವಿಧ ರೂಪಗಳನ್ನೊಳಗೊಂಡ ಎರಡು ಸಣ್ಣ ಸಂದೂಕಗಳಿರುತ್ತವೆ. ಅವುಗಳ ಸಹಾಯದಿಂದ ರೇಖಾಗಣಿತದ ವಿವಿಧ ರೂಪಗಳನ್ನು ತಿಳಿಯಲಾಗುತ್ತದೆ.

- ಇವುಗಳಲ್ಲದೆ ತಂತಿಯ ಉಂಗುರ, ನೂಲು, ಪೆನ್ಸಿಲುಗಳು, ಬಣ್ಣದ ಕಾಗದ, ಪ್ಲಾಸ್ಟಿಕ್ ತುಂಡುಗಳು, ಸುಣ್ಣದ ಕಡ್ಡಿ ಇತ್ಯಾದಿ ಹಲವು ಆಟಿಕೆಗಳಿರುತ್ತವೆ.

ಫ್ರೋಬೆಲ್‌ನ ಪ್ರಕಾರ, ಮಕ್ಕಳಿಗಾಗಿ ಈ ಕೆಳಗಿನ ವಿಷಯಗಳು ಮತ್ತು ಅಭ್ಯಾಸಗಳನ್ನು ಅಧ್ಯಾಪಕನು ಗಮನದಲ್ಲಿರಿಸಬೇಕು.

(i) ಧರ್ಮ ಮತ್ತು ಧಾರ್ಮಿಕ ತರಬೇತಿ.

(ii) ಪ್ರಕೃತಿಯ ಅಧ್ಯಯನ: ತೋಟಗಾರಿಕೆ ಮತ್ತು ಜಾನುವಾರು ಪಾಲನೆಯ ಮೂಲಕ.

(iii) ಎಣಿಕೆ: ಮೂಲ ವಸ್ತುಗಳ ಸಹಾಯದಿಂದ ಮತ್ತು ಪ್ರಾಥಮಿಕ ಸಂಕಲನ, ವ್ಯವಕಲನದ ಕಲ್ಪನೆ.

(iv) ಭಾಷಾ ಕಲಿಕೆ: ವೃತ್ತಾಂತ, ಕಥೆಗಳು ಮತ್ತು ಪದ್ಯ ಇತ್ಯಾದಿಗಳ ಮೂಲಕ.

(v) ಕೈ ಕೆಲಸ: ಸೃಜನಾತ್ಮಕ ಪ್ರತಿಭೆಗಳನ್ನು ಪ್ರೇರೇಪಿಸಲು ವಿವಿಧ ರೀತಿಯ ಅಭ್ಯಾಸಗಳು.

(vi) ಆಟ ಮತ್ತು ಸಂತುಲಿತ ಕ್ರಿಯೆಗಳ ಮೂಲಕ ದೈಹಿಕ ತರಬೇತಿ.

ಒಟ್ಟಿನಲ್ಲಿ ಮಕ್ಕಳು ಆಟದೊಂದಿಗೆ ಮತ್ತು ಕಥೆ, ಹಾಡು ಇತ್ಯಾದಿಗಳ ಮೂಲಕ ಬಹಳಷ್ಟನ್ನು ಕಲಿಯುವಂತಹ ರೀತಿಯ ವಿಧಾನವನ್ನು ಅನುಸರಿಸಬೇಕು. ಓದು ಬರೆಹದ ಸಾಂಪ್ರದಾಯಿಕ ಶೈಲಿಯನ್ನು ಈ ಪ್ರಾಯದಲ್ಲಿ ಎಂದಿಗೂ ಬಳಸಬಾರದು.

ಉಪಯೋಗಗಳು

- ಈ ವಿಧಾನದಿಂದ ಪುಟ್ಟ ಮಕ್ಕಳ ಶಿಕ್ಷಣ-ತರಬೇತಿಯ ಕಾರ್ಯವು ಬಹಳ ಆಸಕ್ತಿದಾಯಕ, ಪ್ರಭಾವಶಾಲಿ ಮತ್ತು ಪ್ರಯೋಜನಕಾರಿಯಾಗಿ ಮಾರ್ಪಡುತ್ತದೆ. ಈ ರೀತಿಯಾಗಿ ಪುಟ್ಟ ಮಕ್ಕಳ ಶಿಕ್ಷಣದೆಡೆಗೆ ವಿಶೇಷ ಗಮನ ಸೆಳೆದ ಮತ್ತು ಪರಿಣಾಮಕಾರಿ ಶಿಕ್ಷಣದ ಒಂದು ಕುತೂಹಲಕರ ಕಾರ್ಯ ಯೋಜನೆಯನ್ನು ತಯಾರಿಸಿದವರಲ್ಲಿ ಫ್ರೋಬೆಲ್ ಮೊದಲಿಗನಾಗಿದ್ದಾನೆ.
- ಶಾಲೆಯ ವಾತಾವರಣವು ಮನೆಯಂತೆ ಇರಬೇಕು. ಆಗ ಮಕ್ಕಳು ಪರಕೀಯತೆಯನ್ನು ಅನುಭವಿಸಲಾರರು ಮತ್ತು ಸಂತೋಷದಿಂದ ಶಾಲೆಗೆ ಹೋಗುವರು ಹಾಗೂ ಇಡೀ ದಿನವನ್ನು ಅಲ್ಲೇ ಕಳೆಯಲು ಇಷ್ಟಪಡುವರು. ಅವರಲ್ಲಿ ಸಹಕಾರ, ಸಹಾನುಭೂತಿ, ಕರ್ತವ್ಯಪಾಲನೆ ಇತ್ಯಾದಿ ಸಾಮೂಹಿಕ ಗುಣಗಳನ್ನು ಬೆಳೆಸಲು ಇದು ಸಹಕಾರಿಯಾಗಿದೆ.
- ಮಕ್ಕಳಿಗೆ ಸ್ವತಃ ಮಾಡಿ ಕಲಿಯಲು ಮತ್ತು ಪ್ರಾಯೋಗಿಕ ತರಬೇತಿ ಹೊಂದಲು ಸಾಕಷ್ಟು ಅವಕಾಶ ಒದಗುತ್ತದೆ.
- ಮಕ್ಕಳು ದಣಿವರಿಯದೆ ಆಟೋಟಗಳಲ್ಲಿಯೇ ಆಸಕ್ತಿ ವಹಿಸಿ, ಗಮನ ಮತ್ತು ತನ್ಮಯತೆಯಿಂದ ಹಲವು ವಿಷಯಗಳನ್ನು ಕಲಿತುಬಿಡುತ್ತಾರೆ.

• ಅಭಿನಯದ ಆಟಗಳ ಮುಖಾಂತರ ದೈನಂದಿನ ಜೀವನದ ಹಲವು ಕೆಲಸ ವಿಧಿ-ವಿಧಾನ, ಶಿಷ್ಟಾಚಾರ, ಅಚ್ಚುಕಟ್ಟುತನ ಇತ್ಯಾದಿಗಳನ್ನು ಕಾರ್ಯತಃ ಅರಿತುಕೊಳ್ಳುತ್ತಾರ

• ಕೊಡುಗೆ, ಆಟ ಮತ್ತು ಆಸಕ್ತಿದಾಯಕ ಹವ್ಯಾಸ-ಚಟುವಟಿಕೆಗಳ ಸಹಾಯದಿಂ ಮಕ್ಕಳ ವ್ಯಕ್ತಿತ್ವದ ವಿವಿಧ ಮಗ್ಗುಲುಗಳ ಸರ್ವತೋಮುಖ ತರಬೇತಿಯಾಗುತ್ತದೆ.

ನ್ಯೂನತೆಗಳು

ಈ ವಿಧಾನದಲ್ಲಿ ಹಲವು ಉಪಯೋಗಗಳಿರುವಂತೆಯೇ ಕೆಲವ ನ್ಯೂನತೆಗಳೂ ಇವೆ. ಉದಾ:

• ಶಿಕ್ಷಣದ ಖರ್ಚು-ವೆಚ್ಚಗಳು ಬಹಳ ಹೆಚ್ಚುತ್ತವೆ. ಆದ್ದರಿಂದ ಕೇವಲ ಶ್ರೀಮಂತ ಮಕ್ಕಳು ಮಾತ್ರವೇ ಇದರಿಂದ ಪ್ರಯೋಜನ ಪಡೆಯಬಲ್ಲರು.

• ಪುಟ್ಟ ಮಕ್ಕಳಿಗೆ ಆಟಗಳಲ್ಲಿ ಸ್ವಾತಂತ್ರ್ಯವಿರಬೇಕು. ಇಲ್ಲಿ ಆಟಗಳಲ್ಲೂ ಶಿಕ್ಷಣ ಉದ್ದೇಶವು ಆವರಿಸಿರುವುದರಿಂದ ಆ ಸ್ವಾತಂತ್ರ್ಯವು ಹೊರಟು ಹೋಗುತ್ತದೆ.

• ಪುಟ್ಟ ಮಕ್ಕಳಿಗೆ ಆಟದೊಂದಿಗೆ ಶಿಕ್ಷಣ ನೀಡುವುದಕ್ಕೆ ಮಹತ್ವ ಖಂಡಿತ ಇದೆ ಮತ ಹಲವು ಸಂಗತಿಗಳನ್ನು ಆ ಮೂಲಕ ಕಲಿಸಬೇಕಾಗಿದೆ. ಆದರೆ ಶಾಲೆಯಲ್ಲಿ ಸದಾ ಆಟ ವಾತಾವರಣ ಆವರಿಸಿರುವುದು ಒಳ್ಳೆಯದಲ್ಲ, ಇದರಿಂದ ಶಿಕ್ಷಣ-ತರಬೇತಿಯ ಮೂಲಭೂ ಉದ್ದೇಶವೇ ಮರೆಯಾಗಿ ಬಿಡುತ್ತದೆ. ಆಟವನ್ನಂತೂ ಮಕ್ಕಳು ಎಲ್ಲಿ ಬೇಕಾದರೂ ಆಡುತ್ತಾರ ಹಾಗಿರುವಾಗ ಶಾಲೆಯ ಅಗತ್ಯವೇನು?

• ಸಾಮೂಹಿಕತೆಗೆ ನೀಡುವ ಅತಿಯಾದ ಮಹತ್ವದಿಂದಾಗಿ ಮಕ್ಕಳ ವೈಯಕ್ತಿಕತೆಯು ಪ್ರಭಾವಿತವಾಗುತ್ತದೆ. ಪುಟ್ಟ ಮಕ್ಕಳಲ್ಲಿ ಸಾಮೂಹಿಕ ಪ್ರಜ್ಞೆಯನ್ನು ಬೆಳೆಸುವುದೇ ಅವಧಿಪೂರ್ವ ಕಾರ್ಯವಾಗಿದೆ. ಆದರಿಂದ ಅವರ ಸ್ವಾತಂತ್ರ್ಯ ಮನೋಭಾವದ ಮೇಲೆ ಒಂದ ರೀತಿಯಲ್ಲಿ ಅನ್ಯಾಯ ಮಾಡಿದಂತಾಗುತ್ತದೆ.

• ಆಟ ಮತ್ತು ಕೊಡುಗೆಗಳ ಮೂಲಕ ನಿಸ್ಸಂಶಯವಾಗಿಯೂ ಹಲವು ವಿಷಯಗಳನ ಕಲಿಸಬಹುದಾಗಿದೆ. ಆದರೆ ಯಾವ ನೈತಿಕ ಮತ್ತು ಆಧ್ಯಾತ್ಮಿಕ ಗುಣಗಳನ್ನು ಬೆಳೆಸಲ ಫ್ರೋಬೆಲ್ ನಿರೀಕ್ಷಿಸುತ್ತಾನೋ ಮತ್ತು ವಾದಿಸುತ್ತಾನೋ ಅದು ಮಾತ್ರ ಕಾಲ್ಪನಿಕವಾಗಿಯೆ ಉಳಿದುಬಿಡುತ್ತದೆ.

ಅದೇನಿದ್ದರೂ ಒಟ್ಟಾರೆಯಾಗಿ, ಫ್ರೋಬೆಲ್ ಪುಟ್ಟ ಮಕ್ಕಳ ಶಿಕ್ಷಣ-ತರಬೇತಿಯ ಆಟ, ಸೃಜನಾತ್ಮಕ ಹವ್ಯಾಸ ಮತ್ತು ಸ್ವಾಭಾವಿಕ ಆಸಕ್ತಿಗಳನ್ನು ಪರಿಗಣಿಸುವುದರ ಕಡೆ ವಿಶೇಷ ಗಮನ ಸೆಳೆಯುವ ಮೂಲಕ ಮಕ್ಕಳಿಗೆ ಬಹಳ ಸಹಾಯ ಮಾಡಿರುವನು ಪ್ರಾಥಮಿಕ ತರಗತಿಗಳಲ್ಲಿ ಈ ಕುರಿತು ಸಂಪೂರ್ಣ ಗಮನ ಹರಿಸಬೇಕಾಗಿದೆ.

ಮಾಂಟೆಸ್ಸೋರಿ ವಿಧಾನ

ಈ ವಿಧಾನವನ್ನು ಇಟೆಲಿಯ ಮೇರಿಯಾ ಮಾಂಟೆಸ್ಸೋರಿ ಎಂಬ ಶಿಶುವೈದ್ಯೆ ಕಂಡು ಹಿಡಿದಳು. 1870ರಲ್ಲಿ ಜನಿಸಿದ ಈಕೆ, ವೈದ್ಯಕೀಯ ಶಿಕ್ಷಣ ಗಳಿಸಿ ಆಸ್ಪತ್ರೆಯೊಂದರಲ್ಲಿ ಪುಟ್ಟ ಮಕ್ಕಳಿಗೆ ಚಿಕಿತ್ಸೆ ನೀಡುತ್ತಿದ್ದಳು. ಈಕೆಗೆ ಅಂಗವಿಕಲ ಮಕ್ಕಳ ಬಗ್ಗೆ ವಿಶೇಷ ಅನುಕಂಪವಿತ್ತು. ಈ ಅನುಕಂಪದ ಕಾರಣವಾಗಿಯೇ ಈಕೆ ಮೂರರಿಂದ ಏಳು ವರ್ಷಗಳ ವರೆಗಿನ ಮಕ್ಕಳ ಶೈಕ್ಷಣಿಕ ಯೋಜನೆಯನ್ನು ರೂಪಿಸಿದಳು. ಫ್ರೋಬೆಲ್‌ನಂತೆ ಈಕೆಯೂ ಪಠ್ಯಪುಸ್ತಕಗಳ ಬದಲು ಆಟ-ಆಟಿಕೆಗಳ ಮುಖಾಂತರ ಶಿಕ್ಷಣ ನೀಡುವುದಕ್ಕೆ ಮಹತ್ವ ನೀಡಿದ್ದಳು. ಇದು ವಸ್ತುತಃ ಕಿಂಡರ್‌ಗಾರ್ಟನ್‌ನದ್ದೇ ಪರಿಷ್ಕೃತ ರೂಪವಾಗಿ ಗುರುತಿಸಿಕೊಂಡಿದೆ. ಇವೆರಡರಲ್ಲಿ ನಾಮ ಮಾತ್ರದ ವ್ಯತ್ಯಾಸವಿದೆ. ಈ ಮಾಂಟೆಸ್ಸೋರಿ ಯೋಜನೆಯಡಿ ನಮ್ಮ ದೇಶದಲ್ಲೂ ಹಲವು ಶಾಲೆ ಗಳನ್ನು ನಡೆಸಲಾಗುತ್ತಿದೆ. ಈಕೆ ನಮ್ಮ ದೇಶದ ಪ್ರವಾಸವನ್ನೂ ಕೈಗೊಂಡಿದ್ದಳು. 1952ರಲ್ಲಿ ಈಕೆ ನಿಧನ ಹೊಂದಿದಳು. ಈ ಯೋಜನೆಯನ್ನು ಈಗ 12 ವರ್ಷ ಪ್ರಾಯಕ್ಕೆ ವಿಸ್ತರಿಸಲಾಗಿದೆ.

ಮೂಲಭೂತ ತತ್ವಗಳು

ಮಾಂಟೆಸ್ಸೋರಿ ಈ ಕೆಳಗಿನ ತತ್ವಗಳನ್ನು ಹೊಂದಿದೆ.

- ಮಕ್ಕಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು. ಅದರ ಹೊರತು ಆಂತರಿಕ ಪ್ರತಿಭೆಗಳ ಬೆಳವಣಿಗೆ ಅಸಾಧ್ಯ.
- ಮಕ್ಕಳಿಗೆ ಸ್ವಯಂ ಮಾಡಿ ಕಲಿಯುವ ಅವಕಾಶ ಒದಗಿಸಬೇಕು.
- ಜ್ಞಾನೇಂದ್ರಿಯಗಳಿಗೆ ಅನುಸಾರ ತರಬೇತಿ ನೀಡಬೇಕು. ವಿಶೇಷತಃ ಸ್ಪರ್ಶೇಂದ್ರಿಯದ ಮೂಲಕ. ಏಕೆಂದರೆ ಪ್ರಾರಂಭದ ವರ್ಷಗಳಲ್ಲಿ ಇದುವೇ ಮೂಲಭೂತ ಇಂದ್ರಿಯವಾಗಿರುತ್ತದೆ. ಇಂದ್ರಿಯಗಳೇ ಜ್ಞಾನದ ಮೂಲಗಳಾಗಿವೆ. ಬಾಹ್ಯ ಜಗತ್ತಿನ ಕುರಿತಾದ ಎಷ್ಟೆಲ್ಲ ಜ್ಞಾನವು ನಮ್ಮ ಮೆದುಳಿಗೆ ತಲುಪಿದೆಯೋ ಅದೆಲ್ಲವೂ ಈ ದಾರಿಯಾಗಿಯೇ ತಲುಪಿವೆ. ಆದ್ದರಿಂದ ಇಂದ್ರಿಯಗಳ ಎಷ್ಟು ಉತ್ತಮ ತರಬೇತಿ ನಡೆಯುವುದೋ ಅಷ್ಟೇ ಸ್ಪಷ್ಟವಾದ ಜ್ಞಾನವು ಲಭಿಸುವುದು. ಇಂದ್ರಿಯವು ದುರ್ಬಲವಾಗಿದ್ದರೆ ಮಾಹಿತಿ, ಜ್ಞಾನವೂ ಅಪೂರ್ಣವಾಗಿರುತ್ತದೆ.
- ಮಕ್ಕಳಿಗೆ ಸ್ವಂತ ಕಾರ್ಯಗಳನ್ನು ಸ್ವತಃ ಮಾಡಲು ಅಭ್ಯಾಸವಾಗಬೇಕು. (ಮಾಂಟೆಸ್ಸೋರಿ ಶಾಲೆಗಳಲ್ಲಿ ಇದನ್ನು ಸಂಪೂರ್ಣವಾಗಿ ಪಾಲಿಸಲಾಗುತ್ತದೆ. ಮಕ್ಕಳು ಸ್ವತಃ ಸ್ವಚ್ಛತೆ ಪಾಲಿಸುತ್ತಾರೆ, ಕೈಕಾಲು, ಮುಖ ತೊಳೆಯುತ್ತಾರೆ, ಸ್ವಯಂ ಸ್ನಾನ ಮಾಡುತ್ತಾರೆ, ತಮ್ಮ ಸಾಮಾನುಗಳನ್ನು ಸ್ವಯಂ ಅಚ್ಚುಕಟ್ಟಾಗಿ ಇರಿಸುತ್ತಾರೆ, ಶೈಕ್ಷಣಿಕ ವಸ್ತುಗಳನ್ನು ಮತ್ತು ಕುರ್ಚಿಗಳನ್ನು ಸ್ವಯಂ ಎತ್ತುತ್ತಾರೆ, ತಮ್ಮ ವಸ್ತ್ರಗಳನ್ನು ಸ್ವತಃ ಬದಲಾಯಿಸುತ್ತಾರೆ ಮತ್ತು ತಮ್ಮ ಯಾವುದೇ ಕಾರ್ಯಕ್ಕೂ ಇತರರನ್ನು ಅವಲಂಬಿಸುವುದಿಲ್ಲ. ಈ

ಕೆಲಸಗಳನ್ನು ಯಾವುದೇ ಒತ್ತಡದ ಮೂಲಕ ಅಲ್ಲ, ಬದಲಾಗಿ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವ ಮೂಲಕ ಮಾಡಿಸಲಾಗುತ್ತದೆ.)

- ಮಕ್ಕಳಿಗೆ ದೈಹಿಕ ಶಿಕ್ಷೆಯನ್ನು ಎಂದಿಗೂ ನೀಡಬಾರದು.
- ಆಟದೊಂದಿಗೇ ಶಿಕ್ಷಣ ನೀಡಬೇಕು.
- ನೈತಿಕ ತರಬೇತಿ ನೀಡಬೇಕು. ಆದರೆ ಈ ವಿಷಯದಲ್ಲಿ ಎಂದಿಗೂ ಕಠೋರತೆಯನ್ನು ಪಾಲಿಸಬಾರದು. ಬದಲಾಗಿ ಆಹ್ಲಾದಕರ ಮತ್ತು ಸ್ವತಂತ್ರವಾಗಿರಿಸುತ್ತ ಆತ್ಮ ನಿಯಂತ್ರಣವನ್ನು ಕಲಿಸುವ ಬಗ್ಗೆ ಚಿಂತಿಸಬೇಕು.

ಮಾಂಟೆಸ್ಸೊರಿ ಶಾಲೆ

ಶಾಲೆಯ ಕಟ್ಟಡವು ಸಾಮಾನ್ಯವಾಗಿ ಸಾಕಷ್ಟು ಗಾಳಿಯಾಡುವಂತಹ ತೆರೆದ ವಾತಾವರಣದಲ್ಲಿರುತ್ತದೆ. ಹತ್ತಿರದಲ್ಲೇ ನೆರಳಿನ ಮರ ಮತ್ತು ಜಗುಲಿಯಲ್ಲಿ ಹೂಗಿಡಗಳು ಇರುತ್ತವೆ. ಕೋಣೆಯ ಗೋಡೆಗಳು ರಂಗುರಂಗಿನ ಚಿತ್ರಗಳು ಮತ್ತಿತರ ವಸ್ತುಗಳಿಂದ ತುಂಬಿರುತ್ತದೆ. ಬಚ್ಚಲುಕೋಣೆ ಮತ್ತು ಊಟದಕೋಣೆ ಹೀಗೆ ಪ್ರತ್ಯೇಕ ಕೋಣೆಗಳಿರುತ್ತವೆ. ಮಧ್ಯದಲ್ಲಿ ಒಂದು ದೊಡ್ಡ ಕೋಣೆಯಿರುತ್ತದೆ. ಅಲ್ಲಿ ಸಣ್ಣ ಸಣ್ಣ ಕುರ್ಚಿಗಳಿರುತ್ತವೆ. ಅವು, ಮಕ್ಕಳು ಸ್ವತಃ ಎತ್ತಿ ಅತ್ತಿತ್ತ ಇರಿಸಲು ಸಾಧ್ಯವಾಗುವಷ್ಟು ಹಗುರವಾಗಿರುತ್ತವೆ. ಕೋಣೆಗಳಲ್ಲಿ ಸಣ್ಣ ಸಣ್ಣ ಕರಿಹಲಗೆ (Black Board)ಗಳು ಇರುತ್ತವೆ. ಅದರಲ್ಲಿ ಮಕ್ಕಳು ತಮಗಿಷ್ಟವಾದ ಚಿತ್ರಗಳನ್ನು ಬಿಡಿಸಬಹುದಾಗಿದೆ. ಕಪಾಟುಗಳಲ್ಲಿ ಮಕ್ಕಳ ಕೈಗೆ ಎಟುಕುವಷ್ಟು ಎತ್ತರದ ವರೆಗೆ ಆಟಿಕೆ, ಗೊಂಬೆಗಳನ್ನು ಇರಿಸಲಾಗುತ್ತದೆ. ಒಂದು ಕೋಣೆಯನ್ನು ಅವರ ಮನೋರಂಜನೆಗಾಗಿ ಮೀಸಲಿರಿಸಲಾಗಿರುತ್ತದೆ. ಅದನ್ನು ವಿಶೇಷವಾಗಿ ಅಲಂಕರಿಸಲಾಗಿರುತ್ತದೆ. ಅಲ್ಲಿ ಮಕ್ಕಳ ಆಸಕ್ತಿಯ ಹಲವು ವಸ್ತುಗಳು ಇರುತ್ತವೆ. ಅಲ್ಲಿ ಮಕ್ಕಳು ಮುಕ್ತವಾಗಿ ಮಾತುಕತೆಯಲ್ಲಿ ನಿರತರಾಗಬಲ್ಲರು, ನಕ್ಕು ನಲಿಯಬಲ್ಲರು, ಹಾಡಿ ಕುಣಿಯ ಬಲ್ಲರು. ಸಾಮಾನ್ಯವಾಗಿ ಅಧ್ಯಾಪಕಿಯರಿಂದ ಕೆಲಸ ಮಾಡಿಸಲಾಗುತ್ತದೆ. ಅಧ್ಯಾಪಕಿಯು ಮಕ್ಕಳಿಗೆ ಕಥೆ ಹೇಳುತ್ತ, ಅವರ ಮನರಂಜಿಸುತ್ತ ಇರುತ್ತಾಳೆ. ಈ ಕೋಣೆಯಲ್ಲಿ ಸೋಫಾಗಳು ಮತ್ತು ಕುಶನ್ ಇರುವ ಸ್ಟೂಲ್‌ಗಳಿರುತ್ತವೆ. ಅದರಲ್ಲಿ ಮಕ್ಕಳು ಮುಕ್ತವಾಗಿ ಮಲಗುತ್ತ, ಕೂರುತ್ತ, ಆಟವಾಡುತ್ತ ಇರಬಲ್ಲರು. ತಿನ್ನುವ, ಮಲಗುವ, ಆಟವಾಡುವ ಇತ್ಯಾದಿ ಎಲ್ಲ ತರದ ಸೌಲಭ್ಯಗಳನ್ನು ಅವರಿಗೆ ಒದಗಿಸಿ ಕೊಡಲಾಗುವುದು. ಮಕ್ಕಳು ಶಾಲೆಯನ್ನು ತಮ್ಮ ಮನೆಯಂತೆಯೇ ಭಾವಿಸ ತೊಡಗುತ್ತಾರೆ.

ಶೈಕ್ಷಣಿಕ ಸಾಮಗ್ರಿಗಳು

ಮಾಂಟೆಸ್ಸೊರಿ ಶಾಲೆಗಳಲ್ಲಿ ಶೈಕ್ಷಣಿಕ ಸಾಮಾನುಗಳ ಅಗತ್ಯ ಬಹಳ ಇರುತ್ತದೆ. ಅಲ್ಲಿ ಕಟ್ಟಿಗೆಯ ತರತರದ ತುಂಡುಗಳು ಮತ್ತು ಆಟಿಕೆಗಳನ್ನು ಬಳಸಲಾಗುತ್ತದೆ. ವಸ್ತುಗಳ ಸಂಕ್ಷಿಪ್ತ ಪಟ್ಟಿ ಹೀಗಿದೆ:

1. ತರತರದ ಬಣ್ಣದ ಕಟ್ಟಿಗೆಯ ತುಂಡುಗಳು, ಗುಂಡು, ಆಯತ, ತ್ರಿಕೋನ, ಚೌಕ ಮತ್ತು ಲಟ್ಟಣಿಗೆಯ ರೂಪದ ಕಟ್ಟಿಗೆ ತುಂಡುಗಳು.

2. ವಿವಿಧ ಭಾರದ ಮರದ ತುಂಡುಗಳು.

3. ಕಾರ್ಡುಗಳ ಸೆಟ್ (ಅದರ ಸಹಾಯದಿಂದ ವರ್ಣಮಾಲೆ, ಪದ ಮತ್ತು ಲೆಕ್ಕ ಇತ್ಯಾದಿಗಳನ್ನು ಕಲಿಸಲಾಗುತ್ತದೆ.)

4. ತರತರದ ಗಂಟೆಗಳು ಇತ್ಯಾದಿ.

ಈ ವಸ್ತುಗಳ ಮುಖಾಂತರ ಮಕ್ಕಳ ಪ್ರಜ್ಞೆಯ ತರಬೇತಿ ನೀಡಲಾಗುತ್ತದೆ. ಅವರಿಗೆ ನಯ-ದೊರಗು, ಮೃದು-ಕಠಿಣ, ಬಿಸಿ-ತಂಪು, ಭಾರ-ಹಗುರ ಇತ್ಯಾದಿಗಳನ್ನು ತಿಳಿಸಿ ಕೊಡಲಾಗುತ್ತದೆ. ವಿವಿಧ ಬಣ್ಣ ಮತ್ತು ರೂಪಗಳ ಪರಿಚಯ ಮಾಡಿಸಲಾಗುತ್ತದೆ. ವಿವಿಧ ರೀತಿಯ ಶಬ್ದಗಳಲ್ಲಿ ವ್ಯತ್ಯಾಸ ತಿಳಿಯಲು ಕಲಿಸಲಾಗುತ್ತದೆ.

ಮಾಂಟೆಸ್ಸೊರಿಯ ಗಮನವು ಮೊದಲು ಓದು-ಬರೆಹ ಕಲಿಸುವುದರ ಕಡೆಗಿರಲಿಲ್ಲ, ಆದರೆ ನಂತರ ಈ ವಸ್ತುಗಳನ್ನು ಸೇರಿಸಲಾಯಿತು. ಹಾಗಾಗಿ ಇಂದು ಈ ಸ್ಕೀಮಿನಲ್ಲಿ ಸಣ್ಣ ಮಕ್ಕಳಿಗೆ ಆಸಕ್ತಿದಾಯಕ ವಿಧಾನ ಮತ್ತು ಶೈಕ್ಷಣಿಕ ವಸ್ತುಗಳ ಸಹಾಯದಿಂದ ಓದು, ಬರೆಹ, ಮಾತು, ಲೆಕ್ಕ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ತೋಟಗಾರಿಕೆ ಮತ್ತು ದೈನಂದಿನ ಚಟುವಟಿಕೆಗಳ ಮೂಲಕ ಪ್ರಾಯೋಗಿಕ ತರಬೇತಿಯನ್ನೂ ನೀಡಲಾಗುತ್ತದೆ.

ಉಪಯೋಗಗಳು

ಈ ವಿಧಾನದಲ್ಲಿ ಹಲವು ಉಪಯೋಗಗಳಿವೆ. ಉದಾ:

- ವಿದ್ಯಾರ್ಥಿಯ ಬಗ್ಗೆ ವೈಯಕ್ತಿಕ ಗಮನ ನೀಡಲಾಗುತ್ತದೆ.
- ಸಣ್ಣ ಮಕ್ಕಳ ಶಿಕ್ಷಣ-ತರಬೇತಿಯ ನಿಟ್ಟಿನಲ್ಲಿ ಈ ವಿಧಾನವು ಹೆಚ್ಚು ಪ್ರಯೋಜನಕಾರಿ ಮತ್ತು ಲಾಭದಾಯಕವಾಗಿದೆ ಎಂದು ಅನುಭವಗಳಿಂದ ಸಾಬೀತಾಗಿದೆ.
- ಪ್ರಜ್ಞೆಯ ತರಬೇತಿಯ ಬಗ್ಗೆ ತುಸು ಹೆಚ್ಚೇ ಗಮನವೀಯಲಾಗುತ್ತದೆ.
- ದೈಹಿಕ, ಪ್ರಾಯೋಗಿಕ ಮತ್ತು ನೈತಿಕ ತರಬೇತಿಯ ಸೂಕ್ತ ವ್ಯವಸ್ಥೆಯೂ ಆಗುತ್ತದೆ.
- ಮಕ್ಕಳು ಶಾಲೆಯಲ್ಲಿ ಮನೆಯ ವಾತಾವರಣವನ್ನೇ ಅನುಭವಿಸುತ್ತಾರೆ ಮತ್ತು ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ದಿನವಿಡೀ ವಿವಿಧ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ.
- ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ. ಅವರು ಆರಂಭದಿಂದಲೇ ತಮ್ಮ ಕೆಲಸಗಳನ್ನು ಸ್ವತಃ ಮಾಡಲು ಕಲಿಯುತ್ತಾರೆ.
- ಸೃಜನಾತ್ಮಕ ಪ್ರತಿಭೆಗಳ ಪೋಷಣೆಯ ಸೂಕ್ತ ವ್ಯವಸ್ಥೆಯಾಗುತ್ತದೆ.
- 'ಆಟದೊಂದಿಗೆ ಶಿಕ್ಷಣ' ಮತ್ತು 'ಮಾಡಿ ಕಲಿ'ಯುವಂತಹ ಹಲವು ವಿಶೇಷತೆಗಳು ಇದರಲ್ಲಿಯೂ ಕಾಣಸಿಗುತ್ತವೆ.

ನ್ಯೂನತೆಗಳು

- ಈ ವಿಧಾನವು ತೀರಾ ದುಬಾರಿ ಮತ್ತು ಹೆಚ್ಚಿನವರಿಂದ ಭರಿಸಲಾಗದ ರೀತಿಯಲ್ಲಿರುತ್ತದೆ.
- ಮಕ್ಕಳಿಗೆ ಆಟದ ನೈಜ ಸಂತೋಷದಿಂದ ಒಂದು ಹಂತದ ವರೆಗೆ ವಂಚಿತರಾಗಿರಬೇಕಾಗುತ್ತದೆ. ಏಕೆಂದರೆ ಶೈಕ್ಷಣಿಕ ಉದ್ದೇಶಗಳು ಪ್ರಮುಖವಾಗಿರುವ ಕಾರಣ, ಆಟವೂ ಅವರ ಮಟ್ಟಿಗೆ ಒಂದು ಕೆಲಸವೇ ಆಗಿ ಕಾಣುತ್ತದೆ.
- ಮಕ್ಕಳ ಮೇಲೆ ಅವಧಿ ಪೂರ್ವವಾಗಿ ಹೊಣೆಗಾರಿಕೆಗಳ ಭಾರವನ್ನು ಹೇರಲಾಗುತ್ತದೆ.
- ವಿಚಾರಶಕ್ತಿಯ ತರಬೇತಿಯ ಕಡೆಗೆ ಯಾವುದೇ ಗಮನ ನೀಡಲಾಗುವುದಿಲ್ಲ.
- ವೈಯಕ್ತಿಕ ಪ್ರಗತಿಯ ಕಡೆಗೆ ನೀಡುವ ಆಸಕ್ತಿಯ ಭರದಲ್ಲಿ ಸಾಮೂಹಿಕ ಗುಣಗಳು ಗೌಣವಾಗುತ್ತವೆ. ಹೀಗಾಗಿ ಮಕ್ಕಳಲ್ಲಿ ಸಾಮಾನ್ಯವಾಗಿ ಸ್ವಾರ್ಥ ಬೆಳೆದು ಬರುತ್ತದೆ.

ಆದಾಗಿಯೂ ಪುಟ್ಟ ಮಕ್ಕಳ ಶಿಕ್ಷಣವನ್ನು ಸುಲಭ ಮತ್ತು ಪರಿಣಾಮಕಾರಿಯಾಗಿ ಮಾಡುವ ಹಾಗೂ ಅವರಿಗೆ ಪ್ರಜ್ಞೆಯ ಸೂಕ್ತ ತರಬೇತಿ ನೀಡುವ ನಿಟ್ಟಿನಲ್ಲಿ ಮಾಂಟೆಸ್ಸೊರಿಯ ಸೇವೆಗಳನ್ನು ಕಡೆಗಣಿಸಲಾಗದು.

ಶಿಕ್ಷಣ-ತರಬೇತಿಯಲ್ಲಿ ಶೈಕ್ಷಣಿಕ ವಸ್ತುಗಳ ಅಪಾರ ಅಗತ್ಯತೆಯ ಪ್ರಜ್ಞೆಯನ್ನು ಎಲ್ಲರಿಗಿಂತ ಹೆಚ್ಚಾಗಿ ನೀಡಿರುವುದೇ ಮಾಂಟೆಸ್ಸೊರಿ. ಅಲ್ಲದೆ, ಪ್ರಜ್ಞೆಯ ತರಬೇತಿಯ ಕುರಿತು ಸರ್ವ ಪ್ರಥಮವಾಗಿ ಗಮನ ಹರಿಸಿದ್ದೂ ಈಕೆಯೇ.

ಕಿಂಡರ್‌ಗಾರ್ಟನ್ ಮತ್ತು ಮಾಂಟೆಸ್ಸೊರಿ ವಿಧಾನಗಳ ತುಲನೆ

ಸಾಮ್ಯತೆಗಳು

1. ಇವೆರಡರಲ್ಲೂ ಪುಟ್ಟ ಮಕ್ಕಳ (3-7ವರ್ಷ) ಶಿಕ್ಷಣದ ವಿಸ್ತೃತ ಶೈಕ್ಷಣಿಕ ರೂಪುರೇಷೆಯನ್ನು ನೀಡಲಾಗಿದೆ.
2. ಮಕ್ಕಳ ಸುಪ್ತ ಪ್ರತಿಭೆಗಳನ್ನು ಹೊರ ತರುವ ನಿಟ್ಟಿನಲ್ಲಿ ಇವೆರಡರಲ್ಲೂ ಅಪಾರ ಗಮನವನ್ನು ಹರಿಸಲಾಗಿದೆ.
3. ಶಿಕ್ಷಣ-ತರಬೇತಿಯಲ್ಲಿ ಶೈಕ್ಷಣಿಕ ಸಾಮಾನುಗಳಿಂದ ಸಹಾಯ ಪಡೆಯುವ ಕುರಿತು ಇವೆರಡೂ ವಿಧಾನಗಳಲ್ಲಿ ಹೆಚ್ಚು ಒತ್ತು ನೀಡಲಾಗುತ್ತದೆ.
4. ಪ್ರಜ್ಞೆಯ ತರಬೇತಿಯ ಕಡೆಗೆ ಇವೆರಡರಲ್ಲೂ ಸಾಕಷ್ಟು ಗಮನವೀಯಲಾಗುತ್ತದೆ. ಆದರೆ ಮಾಂಟೆಸ್ಸೊರಿಯು ಅದರ ಉತ್ತಮ ವ್ಯವಸ್ಥೆಯನ್ನು ರೂಪಿಸಿರುವಳು.
5. ಮುಕ್ತ ಮತ್ತು ಆಹ್ಲಾದಕರ ವಾತಾವರಣದಲ್ಲಿ ಶಿಕ್ಷಣ ನೀಡುವುದಕ್ಕೆ ಇವೆರಡರಲ್ಲೂ ಹೆಚ್ಚು ಮಹತ್ವ ನೀಡಲಾಗಿದೆ.

5. ಸ್ವತಃ ಮಾಡಿ ಕಲಿಯುವ ಮತ್ತು ಆಟದೊಂದಿಗೆ ಶಿಕ್ಷಣದ ಬಗ್ಗೆ ಇವೆರಡರಲ್ಲೂ ಹೆಚ್ಚು ಒತ್ತು ನೀಡಲಾಗಿದೆ.
7. ಶಾಲೆಯ ವಾತಾವರಣವನ್ನು ಆಸಕ್ತಿಕರ ಮತ್ತು ಆಹ್ಲಾದಕರವಾಗಿ ಮಾಡಲು ಹಾಗೆಯೇ ಮನೆಯಂತಹ ವಾತಾವರಣವನ್ನು ನೀಡುವುದಕ್ಕೆ ಇವೆರಡೂ ವಿಧಾನಗಳಲ್ಲಿ ಚಿಂತಿಸಲಾಗಿದೆ.

ವ್ಯತ್ಯಾಸಗಳು.

ಕಿಂಡರ್‌ಗಾರ್ಟನ್	ಮಾಂಟೆಸ್ಸೊರಿ
1. ಸಾಮೂಹಿಕ ಗುಣ ಬೆಳೆಸಲು ಒತ್ತು ನೀಡಲಾಗಿದೆ.	1. ವೈಯಕ್ತಿಕ ಪ್ರಗತಿಗೆ ಹೆಚ್ಚು ಗಮನ ನೀಡಲಾಗುತ್ತದೆ.
2. ಆಧಾರವು ತಾತ್ವಿಕವಾಗಿದೆ. ಏಕೆಂದರೆ ಫ್ರೋಬೆಲ್ ತತ್ವಜ್ಞಾನಿಯಾಗಿದ್ದ.	2. ಮೂಲವು ವೈಜ್ಞಾನಿಕವಾಗಿದೆ. ಏಕೆಂದರೆ ಮಾಂಟೆಸ್ಸೊರಿ ಓರ್ವ ವೈದ್ಯೆಯಾಗಿದ್ದಳು.
3. ಸಾಮೂಹಿಕ ರೂಪದಲ್ಲಿ ಶಿಕ್ಷಣ ನೀಡಲಾಗುತ್ತದೆ.	3. ಸಾಮೂಹಿಕತೆಗೆ ಬದಲಾಗಿ ಹೆಚ್ಚು ವೈಯಕ್ತಿಕ ರೂಪದಲ್ಲಿ ಶಿಕ್ಷಣ ನೀಡಲಾಗುತ್ತದೆ.
4. ಪ್ರಜ್ಞೆಯ ತರಬೇತಿಯನ್ನು ಉಡುಗೊರೆ ಮತ್ತು ಆಟಿಕೆಗಳ ಮೂಲಕ ನೀಡಲಾಗುತ್ತದೆ.	4. ಪ್ರಜ್ಞೆಯ ತರಬೇತಿಗೆ ಶೈಕ್ಷಣಿಕ ವಸ್ತುಗಳಿಂದ ಸಹಾಯ ಪಡೆಯಲಾಗುತ್ತದೆ.
5. ಉಡುಗೊರೆಗಳಿಲ್ಲದೆಯೂ ಶಿಕ್ಷಣ ನೀಡಬಹುದಾಗಿದೆ. ಆದ್ದರಿಂದ ಶಾಲೆಗಳು ಮೂಲಭೂತ ಬದಲಾವಣೆಯೊಂದಿಗೆ ತಮ್ಮದೇ ರೀತಿಯಲ್ಲಿ ಕಲಿಸಬಹುದು.	5. ಶೈಕ್ಷಣಿಕ ವಸ್ತುಗಳ ಹೊರತು ಶಿಕ್ಷಣ ನೀಡಲಾಗದು. ಆದ್ದರಿಂದ ಈ ವಿಧಾನವನ್ನು ಅನುಸರಿಸಲು ಸಾಮಾನ್ಯವಾಗಿ ಕಷ್ಟವೆನಿಸುತ್ತದೆ.
6. ಕೈ ಕೆಲಸ ಮತ್ತು ಆಟಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ.	6. ಪ್ರಾಯೋಗಿಕ ಜೀವನಕ್ಕೆ ಸಂಬಂಧಿಸಿ ಕೆಲಸಕ್ಕೆ ಹೆಚ್ಚು ಗಮನ ನೀಡಲಾಗುತ್ತದೆ.

ಯೋಜನಾ ವಿಧಾನ (Project Method)

ಯೋಜನೆ ಎಂದರೆ ವ್ಯಾಪಕ ರೂಪದಲ್ಲಿ ಪ್ರಾರಂಭಿಸಬೇಕಾದ ಕೆಲಸದ ಒಂದು ರೂಪು-ರೇಷೆಯನ್ನು ತಯಾರಿಸುವುದಾಗಿದೆ. ಉದಾ: ಭಾಕ್ರಾ-ನಂಗಲ್ ಪ್ರೊಜೆಕ್ಟ್.

ಶೈಕ್ಷಣಿಕ ಪಾರಿಭಾಷಿಕದಲ್ಲಿ ಯೋಜನೆಯೆಂದರೆ ಒಂದು ಪರಿಹಾರ ಯೋಗ್ಯ ಸಮಸ್ಯೆಯಾಗಿದೆ. ಅದರಲ್ಲಿ ಪ್ರಾಯೋಗಿಕವಾದ ಕೆಲಸ ಇರುವುದು ಮತ್ತು ಅದರ ಪಾಲನೆಗೆ ಕಾರಣ ಮತ್ತು ಅವಕಾಶವೂ ಇರುವುದು. ಉದಾಹರಣೆಗೆ- ಈದ್‌ನಂದು

ಮಕ್ಕಳು ಒಟ್ಟು ಸೇರಿ ಸಂತೋಷಾಚರಿಸುವುದು, ರೋಗ ತಡೆಗೆ ತೋಡುಗಳನು ಸ್ವಚ್ಛಗೊಳಿಸುವುದು ಇತ್ಯಾದಿ.

ಈ ಯೋಜನಾ ಬದ್ಧ ಶೈಕ್ಷಣಿಕ ವಿಧಾನದ ಶ್ರೇಯವು ಅಮೇರಿಕಕ್ಕೆ ಸಲ್ಲುತ್ತದೆ. ಇದನ್ನು ಅಮೇರಿಕದ ರಿಚರ್ಡ್‌ಸನ್ ಎಂಬವನು 1889ರಲ್ಲಿ ಆರಂಭಿಸಿದನು. ನಂತರ ಕೀಲ್ ಪ್ಯಾಟ್ರಿಕ್ ಎಂಬವನು ಇದರಲ್ಲಿ ಕೆಲವು ಮೂಲಭೂತ ಪರಿಷ್ಕರಣೆಯನ್ನು ಮಾಡಿದನು. ಆ ಮೇಲೆ ಸ್ಟೀವನ್ಸ್ ಎಂಬವನು 1921ರಲ್ಲಿ ಇದಕ್ಕೆ ಒಂದು ಅಂತಿಮ ರೂಪವನು ನೀಡಿದನು. ಈ ವಿಧಾನವು ಪ್ರಾಥಮಿಕ ತರಗತಿಗಳಿಗೆ ಸೂಕ್ತ.

ಈ ಯೋಜನೆಯ ವಿಧಾನವನ್ನು ಹೇಗೆ ಅನುಸರಿಸಲಾಗುತ್ತದೆ?

ಈ ಕೆಳಗಿನ ರೀತಿಯಲ್ಲಿ ಇದನ್ನು ಅನುಸರಿಸಲಾಗುತ್ತದೆ.

1. ನಿರ್ದಿಷ್ಟ ವಿದ್ಯಮಾನವನ್ನು ಉಂಟು ಮಾಡುವುದು: ಮೊತ್ತ ಮೊದಲ ಅಧ್ಯಾಪಕನು ಯಾವುದಾದರೂ ಶೀರ್ಷಿಕೆಯಲ್ಲಿ ಮಾತುಕತೆ ಅಥವಾ ಚರ್ಚೆ-ಸಂವಾದದ ಮೂಲಕ ಮಕ್ಕಳ ಮುಂದೆ ನಿರ್ದಿಷ್ಟ ವಿದ್ಯಮಾನವನ್ನು ಇರಿಸುತ್ತಾನೆ. ಉದಾ: ರಜೆಯನ ಎಲ್ಲಿ ಮತ್ತು ಹೇಗೆ ಕಳೆಯುವುದು, ಹಬ್ಬ ಅಥವಾ ಸಂಭ್ರಮಾಚರಣೆಯನ್ನು ಯಾಕಾ ಮಾಡುವುದು, ವಿಹಾರವನ್ನು ಕೈಗೊಳ್ಳುವ ವಿಧಾನವೇನು; ಜನರನ್ನು ರೋಗ ಮು ಗೊಳಿಸಲು, ಅಸಹಾಯಕರಿಗೆ ಸಹಾಯ ಮಾಡಲು, ಜನರನ್ನು ನಮಾಝ್‌ಗೆ ಪ್ರೇರೇಪಿಸಲು ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಯಾವೆಲ್ಲ ಕ್ರಮ ಕೈಗೊಳ್ಳುವುದು ಇತ್ಯಾದಿ

2. ಸೂಕ್ತ ಯೋಜನೆಯ ಆಯ್ಕೆ: ವಿದ್ಯಮಾನವು ಮುಂದೆ ಬಂದಾಗ ವಿದ್ಯಾರ್ಥಿಗಳೊಡನೆ ಚರ್ಚೆ-ಸಂವಾದ ನಡೆಸಿ, ಪರಸ್ಪರ ಸಲಹೆ-ಸೂಚನೆಗಳ ಮುಖಾಂತ ಯೋಜನೆಯನ್ನು ಆಯ್ಕೆ ಮಾಡಲಾಗುವುದು. ಮಕ್ಕಳ ಆಸಕ್ತಿ, ಇಚ್ಛೆ ಮತ್ತು ಇರಾದೆಯ ಶಾಮೀಲಾಗಿರಬೇಕೆಂದೂ ಅವರು ಸಂಪೂರ್ಣ ಮಗ್ನತೆಯೊಂದಿಗೆ ಕೆಲಸ ಮಾಡಲು ಈ ಆಯ್ಕೆಯಲ್ಲಿ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಲಾಗುತ್ತದೆ. ಆಯ್ಕೆಯ ಆಧಾರ-ಕಾರಣಗಳನ್ನು ಒಬ್ಬನಿಂದ ಬರೆಸಲಾಗುತ್ತದೆ.

3. ಪೂರ್ತಿಗೊಳಿಸುವ ವಾಗ್ದಾನ: ಆಯ್ಕೆಯ ಬಳಿಕ ಆ ಯೋಜನೆಯನ ಸುಸೂತ್ರವಾಗಿ ಪೂರ್ತಿಗೊಳಿಸುವುದಾಗಿ ವಿದ್ಯಾರ್ಥಿಗಳಿಂದ ವಾಗ್ದಾನ ಪಡೆಯಲಾಗುತ್ತದ

4. ರೂಪರೇಷೆ ತಯಾರಿಸುವುದು: ಯೋಜನೆಗೆ ಕಾರ್ಯರೂಪವನ್ನು ನೀಡಲಿಕ್ಕಾ ಒಂದು ರೂಪರೇಷೆಯನ್ನು ತಯಾರಿಸಲಾಗುವುದು. ಈ ಕಾರ್ಯವನ್ನು ಅಧ್ಯಾಪಕ ಮೇಲ್ನೋಟದಲ್ಲಿ ವಿದ್ಯಾರ್ಥಿಗಳೇ ನೆರವೇರಿಸುತ್ತಾರೆ. ವಿದ್ಯಾರ್ಥಿಗಳಿಂದ ಸಲಹೆಗಳನ ಕೇಳಲಾಗುತ್ತದೆ. ಪ್ರತಿಯೋರ್ವನನ್ನೂ ಸಕ್ರಿಯ ಆಸಕ್ತಿ ವಹಿಸಲು ಪ್ರೇರೇಪಿಸಲಾಗುತ್ತದ ಆ ಸಲಹೆಗಳ ಬಗ್ಗೆ ಅವಲೋಕನ ನಡೆಸಲಾಗುತ್ತದೆ. ತರುವಾಯ ಒಂದು ಅಂತಿಮ ರೂಪರೇಷೆಯನ್ನು ತಯಾರಿಸಿ, ಅದನ್ನು ಬರೆಸಲಾಗುತ್ತದೆ.

5. ಕಾರ್ಯರೂಪಕ್ಕೆ ತರುವುದು: ಇದು ಯೋಜನೆಯ ಅತಿಪ್ರಧಾನ ಭಾಗವಾಗಿದೆ. ಇದರಲ್ಲಿ ವಿವಿಧ ರೀತಿಯ ಕೆಲಸ-ಕಾರ್ಯಗಳಿರುತ್ತವೆ. ಉದಾ: ಮಾಹಿತಿ ಒದಗಿಸುವುದು, ಓದು-ಬರೆಹ, ವಿವಿಧ ಸ್ಥಳಗಳಿಗೆ ಭೇಟಿ, ನಕ್ಷೆ ಮತ್ತು ಗ್ರಂಥ ಅಧ್ಯಯನ, ವಿಭಿನ್ನ ಜನರೊಡನೆ ಪತ್ರವ್ಯವಹಾರ, ಮಾರುಕಟ್ಟೆಯ ದರಗಳನ್ನು ತಿಳಿದುಕೊಳ್ಳುವುದು, ಖರ್ಚು-ವೆಚ್ಚಗಳನ್ನು ಅಂದಾಜಿಸುವುದು ಮತ್ತು ಇಡೀ ಯೋಜನೆಯನ್ನು ಪೂರ್ಣಗೊಳಿಸಲು ಪ್ರಯತ್ನಿಸುವುದು. ರೂಪರೇಷೆ ತಯಾರಾದ ಬಳಿಕ ವಿದ್ಯಾರ್ಥಿಗಳಿಗೆ ವೈಯಕ್ತಿಕ ಮತ್ತು ಸಾಮೂಹಿಕ ಹೀಗೆ ವಿಭಿನ್ನ ಹೊಣೆಗಾರಿಕೆಗಳನ್ನು ವಹಿಸಿಕೊಡಲಾಗುತ್ತದೆ. ಅಧ್ಯಾಪಕ ತನ್ನ ಮೇಲ್ನೋಟದಲ್ಲಿ ಇಡೀ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಲು ಸಹಕರಿಸುತ್ತಾನೆ. ಅಗತ್ಯಾನುಸಾರ ರೂಪರೇಷೆಯಲ್ಲಿ ಬದಲಾವಣೆಗೆ ಮುಕ್ತ ಅವಕಾಶ ಇರಿಸಲಾಗುತ್ತದೆ. ಪ್ರತಿಯೊಂದು ಮಗುವಿಗೂ ಸಕ್ರಿಯ ಆಸಕ್ತಿ ವಹಿಸಲು ಮತ್ತು ಯೋಜನೆಯಲ್ಲಿ ಸಹಕಾರ ನೀಡಲು ಪ್ರೇರೇಪಿಸಲಾಗುತ್ತದೆ. ಅದಕ್ಕೆ ಅವಕಾಶವನ್ನೂ ನೀಡಲಾಗುತ್ತದೆ. ಸಾಧ್ಯವಾದಷ್ಟರ ಮಟ್ಟಿಗೆ ಮಕ್ಕಳಿಗೇ ಸ್ವಯಂ ಮಾಡಿ ಕಲಿಯಲು ಅವಕಾಶ ನೀಡಲಾಗುತ್ತದೆ.

6. ಅವಲೋಕನ: ಕೆಲಸ ಪೂರ್ಣಗೊಂಡ ಬಳಿಕ ಇಡೀ ಕೆಲಸದ ಅವಲೋಕನ ನಡೆಸಲಾಗುತ್ತದೆ. ಈ ಅವಲೋಕನದಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ತಪ್ಪು ಮತ್ತು ಕೊರತೆಗಳನ್ನು ತಿಳಿಯಲು ಸಹಕಾರಿಯಾಗುತ್ತದೆ. ಈ ಪ್ರಕಾರ ಅವರು ಮುಂದಿನ ದಿನಗಳಲ್ಲಿ ಜಾಗ್ರತೆ ಪಾಲಿಸುವರು.

7. ದಾಖಲೆ ಇರಿಸುವುದು: ವಿದ್ಯಾರ್ಥಿಗಳು ಒಂದು ಕಾಪಿ ಪುಸ್ತಕದಲ್ಲಿ ಇಡೀ ಯೋಜನೆಯ ದಾಖಲೆಯನ್ನು ಬರೆದಿಡುವರು. ಉದಾ: ಏನೆಲ್ಲ ಚರ್ಚೆ ನಡೆಯಿತು, ಯಾವೆಲ್ಲ ಸಲಹೆಗಳು ಬಂದುವು, ಯಾವ ರೀತಿ ಮತ್ತು ಎಂತಹ ರೂಪರೇಷೆಯನ್ನು ಸಿದ್ಧಪಡಿಸಲಾಯಿತು, ಹೇಗೆ ಅದನ್ನು ಕಾರ್ಯರೂಪಕ್ಕೆ ತರಲಾಯಿತು, ಯಾವೆಲ್ಲ ಕೃತಿಗಳನ್ನು ಅಭ್ಯಸಿಸಲಾಯಿತು, ಯಾವ ರೀತಿ ಕೆಲಸಗಳ ವಿಂಗಡನೆಯಾಯಿತು, ಯಾರಿಂದೆಲ್ಲ ಸಹಕಾರ ಪಡೆಯಲಾಯಿತು ಇತ್ಯಾದಿ.

ಉಪಯೋಗಗಳು

ಪ್ರೈಮರಿ ತರಗತಿಯ ಮಕ್ಕಳಿಗೆ ಈ ವಿಧಾನವು ವಿವಿಧ ಮಗ್ಗುಲುಗಳಿಂದ ಪ್ರಯೋಜನಕಾರಿ ಮತ್ತು ಪರಿಣಾಮಕಾರಿಯಾಗಿದೆ. ಏಕೆಂದರೆ,

- ಇದು ಮನಃಶಾಸ್ತ್ರೀಯ ತತ್ವಗಳಿಗೆ ಪೂರಕವಾಗಿದೆ. ಮಕ್ಕಳ ಮುಂದೆ ಯೋಜನೆಯ ಇಡೀ ಉದ್ದೇಶವನ್ನು ಇಡಲಾಗುತ್ತದೆ. ಅವರು ಅದನ್ನು ಸ್ವತಃ ಮಾಡಿ ಪೂರ್ಣಗೊಳಿಸುತ್ತಾರೆ. ಅವರಿಗೆ ಕೆಲಸ ಮಾಡಲು ಸಂಪೂರ್ಣ ಅವಕಾಶವೊದಗುತ್ತದೆ. ಶೈಕ್ಷಣಿಕ ಕೆಲಸಗಳಲ್ಲಿ ಅವರ ಇಂಗಿತಕ್ಕೆ ಮಾನ್ಯತೆ ಇರುತ್ತದೆ. ಆದ್ದರಿಂದ ಅವರು ಸಂಪೂರ್ಣ ಶ್ರದ್ಧೆ, ಮಗ್ನತೆ ಹಾಗೂ ಆಸಕ್ತಿಯಿಂದ ಕಲಿಯುತ್ತಾರೆ.

- ವಿದ್ಯೆಗೆ ಜೀವನದೊಂದಿಗೆ ಗಾಢ ಸಂಬಂಧವಿರುತ್ತದೆ. ಹಾಗೆಯೇ ಇಡೀ ಜ್ಞಾನ ಮನಸ್ಸಿನಲ್ಲಿ ಅಚ್ಚೊತ್ತಲ್ಪಟ್ಟಿರುತ್ತದೆ.
- ಬೋಧನೆಯ ವೇಳೆ ಮಕ್ಕಳು ನಿಷ್ಕ್ರಿಯ ಕೇಳುಗರಾಗಿರುವುದರ ಬದಲು, ಸಕ್ರಿಯ ಕಾರ್ಯಕರ್ತರ ಸ್ಥಾನಮಾನವನ್ನು ಪಡೆಯುತ್ತಾರೆ.
- ಪ್ರಗತಿಯ ವೇಗವು ಮಕ್ಕಳಿಗೆ ಸ್ವತಃ ಅಂದಾಜಾಗುತ್ತದೆ ಮತ್ತು ಇತರರೂ ಸುಲಭದ ಅವರ ಪ್ರತಿಭೆಯನ್ನು ಅಂದಾಜಿಸ ತೊಡಗುತ್ತಾರೆ.
- ಮಕ್ಕಳಿಗೆ ತಮ್ಮ ಅಭಿಪ್ರಾಯಗಳ ಮೌಲ್ಯ ತಿಳಿಯುತ್ತದೆ.
- ವಿದ್ಯೆ-ಕೌಶಲ್ಯವನ್ನು ಕಲಿಯುವಲ್ಲಿ ಶೀಘ್ರತೆ, ಶ್ರೇಷ್ಠತೆ ಮತ್ತು ಪಕ್ವತೆಯು ಬೆಳೆಯುತ್ತ
- ವೀಕ್ಷಕರಾಗುವ ಬದಲು ಮಕ್ಕಳು ಕ್ರಿಯಾಶೀಲ ವ್ಯಕ್ತಿಗಳಾಗಿ ಬೆಳೆಯುತ್ತಾರೆ.
- ಹೊಣೆಗಾರಿಕೆಗಳನ್ನು ವಹಿಸುವ ತರಬೇತಿಯಾಗುತ್ತದೆ ಮತ್ತು ಮಕ್ಕಳಲ್ಲಿ ಆತ್ಮವಿಶ್ವಾ ಬೆಳೆದು ಬರುತ್ತದೆ.
- ಸತತ ಪರಿಶ್ರಮ ಪಡುವ ಮತ್ತು ಕೆಲಸವನ್ನು ಪೂರ್ತಿಗೊಳಿಸುವ ಅಭ್ಯಾ ಬೆಳೆದು ಬರುತ್ತದೆ.
- ಸಾಮೂಹಿಕ ಯೋಜನೆ ಮತ್ತು ಇತರರ ಜತೆ ಸೇರಿ ಕೆಲಸ ಮಾಡುವುದ ಅನುಭವವಾಗುತ್ತದೆ.
- ಸ್ಮರಣ ಶಕ್ತಿಯ ಮೇಲೆ ಕಡಿಮೆ ಒತ್ತಡ ಬೀಳುತ್ತದೆ. ಬೌದ್ಧಿಕ ಮತ್ತು ಸೃಜನಾ ಶಕ್ತಿಯ ಬೆಳವಣಿಗೆಯಾಗುತ್ತದೆ.
- ಅಧ್ಯಯನದಲ್ಲಿ ಆಸಕ್ತಿ ಮತ್ತು ಸಮಸ್ಯೆಗಳನ್ನು ಸ್ವಯಂ ಪರಿಹರಿಸುವ ಹುಮ್ಮ ಬೆಳೆಯುತ್ತದೆ.

ನ್ಯೂನತೆಗಳು

- ಮಕ್ಕಳು ಕಲಿತುದರ ಪುನರಾವರ್ತನೆಗೆ ಅವಕಾಶ ಇರುವುದಿಲ್ಲ.
- ಹೆಚ್ಚಿನ ವಿಷಯಗಳು ಅಂದಿನ ಅಗತ್ಯಗಳಿಗೆ ಸಂಬಂಧಿಸಿರುತ್ತವೆ. ಅವುಗಳಿಗೆ ಯಾವು ನಿರಂತರ ಮೌಲ್ಯ ಇರುವುದಿಲ್ಲ.
- ಕೈ ಕೆಲಸ ಹೆಚ್ಚು ಮತ್ತು ಶೈಕ್ಷಣಿಕ ಕೆಲಸ ಕಡಿಮೆ ಇರುತ್ತದೆ.
- ಶೈಕ್ಷಣಿಕ ವಸ್ತುಗಳು ಕ್ರಮಬದ್ಧವಾಗಿರುವುದಿಲ್ಲ. ಸೂಚಿತ ಪಠ್ಯ ಏರುಪೇರಾಗುತ್ತಿರುತ್ತದೆ.
- ಪಠ್ಯದ ಕೆಲವು ವಿಷಯಗಳಿಗೆ ಅಗತ್ಯಕ್ಕಿಂತ ಹೆಚ್ಚು ಸಮಯ ವ್ಯಯವಾಗುತ್ತದೆ. ಇ ಕೆಲವು ವಿಷಯಗಳು ಕಡೆಗಣಿಸಲ್ಪಡುತ್ತವೆ.
- ಸೂಕ್ತ ಪಠ್ಯ ಪುಸ್ತಕದ ತಯಾರಿ ಮತ್ತು ಅಧ್ಯಾಪಕರುಗಳನ್ನು ಒದಗಿಸುವುದ ಬಹಳ ತೊಂದರೆಯುಂಟಾಗುತ್ತದೆ.

ಆದರೆ ಪ್ರಸ್ತುತ ವಿಧಾನದಿಂದ ಪ್ರಯೋಜನ ಪಡೆಯಬಾರದು ಎಂದು ಇದರರ್ಥ ಅಲ್ಲ. ಒಂದು ವೇಳೆ ರಜಾಕಾಲದಲ್ಲಿ ಅಥವಾ ದಿನನಿತ್ಯ ಒಂದಿಷ್ಟು ಸಮಯ ಈ ವಿಧಾನದಲ್ಲಿ ಶಿಕ್ಷಣ ನೀಡಿ, ಉಳಿದಂತೆ ಸಾಮಾನ್ಯ ವಿಧಾನದಲ್ಲಿ ಪಠ್ಯವನ್ನು ಪೂರ್ಣಗೊಳಿಸಿದರೆ, ಅದು ನಿಜವಾಗಿಯೂ ಮಕ್ಕಳ ಮಟ್ಟಿಗೆ ಬಹಳ ಉತ್ತಮವಾದೀತು. ಶಾಲೆಯ ಕಾರ್ಯಕ್ರಮಗಳು, ಸಂಸ್ಥೆ ಮತ್ತು ಪರಿಸರದ ಸ್ವಚ್ಛತೆ, ಶೈಕ್ಷಣಿಕ ಪ್ರವಾಸ ಇತ್ಯಾದಿಗಳಿಗೆ ಸಂಬಂಧಿಸಿ ಈ ವಿಧಾನವನ್ನು ಅಗತ್ಯವಾಗಿಯೂ ಅನುಸರಿಸಬೇಕಾಗಿದೆ. ಇದರಿಂದ ವಿದ್ಯಾರ್ಥಿಗಳು ಆಸಕ್ತಿಯಿಂದ ಕೆಲಸ ಮಾಡುವರು ಮತ್ತು ಸಾಕಷ್ಟು ಪ್ರಯೋಜನವೂ ಆಗುವುದು.

ಡಾಲ್ಟನ್ ಪ್ಲಾನ್

ಸಾಮೂಹಿಕ ಶಿಕ್ಷಣದ ಕೊರತೆಗಳ ಕುರಿತು ಈಗಾಗಲೇ ಪ್ರಸ್ತಾಪಿಸಲಾಗಿದೆ. ಈ ಕೊರತೆಗಳನ್ನು ದೂರ ಮಾಡಲು ಆಧುನಿಕ ಕಾಲದಲ್ಲಿ ಹಲವಾರು ಪ್ರಯತ್ನಗಳನ್ನು ಮಾಡಲಾಗಿದೆ. ಆ ಪೈಕಿ ಡಾಲ್ಟನ್ ಪ್ಲಾನ್ ಅತಿ ಪ್ರಮುಖವಾದ್ದಾಗಿದೆ. ಇದನ್ನು ಅಮೇರಿಕದ ಮಿಸ್ ಪಾರ್ಕ್ ಹೆರಿಸ್ಟ್ ಎಂಬಾಕೆ ರೂಪಿಸಿದ್ದಳು. ಇವಳು 1920ರಲ್ಲಿ ಡಾಲ್ಟನ್ ಪ್ರೌಢಶಾಲೆಯಲ್ಲಿ ಈ ವಿಧಾನವನ್ನು ಪ್ರಯೋಗಿಸಿದಳು. ಈ ವಿಧಾನವು ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗೆ ಉತ್ತಮವಾಗಿದೆ. ಇದರ ವಿಶೇಷತೆಯೇನೆಂದರೆ,

- ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸಣ್ಣಪುಟ್ಟ ಬದಲಾವಣೆ ಮತ್ತು ಸಾಮಾನ್ಯವಾದ ಖರ್ಚಿನಿಂದ ಕೆಲಸ ನಡೆಯುತ್ತದೆ.
- ಪಠ್ಯಕ್ರಮದಲ್ಲಿ ಯಾವುದೇ ಬದಲಾವಣೆಯ ಅಗತ್ಯವಿರುವುದಿಲ್ಲ.
- ವಿದ್ಯಾರ್ಥಿಗಳನ್ನು ಅವರ ಸ್ವಾಭಾವಿಕ ವೇಗದೊಂದಿಗೆ ಮುಂದುವರಿಸಲು ಸಹಾಯಕವಾಗಿದೆ. ಈ ಮೂಲಕ ವೈಯಕ್ತಿಕತೆ ಸುರಕ್ಷಿತವಾಗಿರುತ್ತದೆ.
- ಶಿಕ್ಷಣ ವಿಧಾನವು ಅತ್ಯಂತ ಸರಳವಾಗಿದೆ.

ಯೋಜನೆಯ ಪರಿಚಯ

ಈ ವಿಧಾನದಲ್ಲಿ,

- ಪ್ರತಿ ಪಠ್ಯದ ವಿಷಯ ಮತ್ತು ಅದಕ್ಕೆ ಸಂಬಂಧಿಸಿ ಅಧ್ಯಾಪಕರು ಏನೆಲ್ಲ ಮಾಡುವರು ಎಂಬುದು ವಿದ್ಯಾರ್ಥಿಗಳಿಗೆ ತಿಳಿಯುವ ರೀತಿಯಲ್ಲಿ ಇಡೀ ವರ್ಷದ ಕೆಲಸವನ್ನು ಅಧ್ಯಾಯಗಳ ರೂಪದಲ್ಲಿ ವಿಂಗಡಿಸಲಾಗುತ್ತದೆ.
- ಇಡೀ ವರ್ಷದ ಕೆಲಸವನ್ನು ತಿಂಗಳುಗಳ ಅವಧಿಯಲ್ಲಿ ವಿಂಗಡಿಸಲಾಗುತ್ತದೆ.
- ಸಾಮಾನ್ಯ ನಿಯಮಗಳನ್ನು ತಿಳಿಸಿ, ವಿದ್ಯಾರ್ಥಿಗಳಿಂದ ವರ್ಷದ ಕೆಲಸವನ್ನು ಪೂರ್ತಿಗೊಳಿಸುವ ಒಪ್ಪಂದ ಮಾಡಲಾಗುತ್ತದೆ.

- ಈ ಅವಧಿಯಲ್ಲಿ ಕಲಿಕೆಗೆ ಎದುರಾಗುವ ಕಷ್ಟ-ತೊಂದರೆಗಳನ್ನು ದೂರ ಮಾಡಲು ಸಾಮೂಹಿಕ ಮತ್ತು ವೈಯಕ್ತಿಕ ಸಹಾಯ ನೀಡಲಾಗುತ್ತದೆ.
- ಒಂದು ಅವಧಿಯಲ್ಲಿ ಮಾಡಲು ಕೊಟ್ಟ ಕೆಲಸವು ಪೂರ್ತಿಯಾದ ಮೇಲೆ ಇನ್ನೊಂದು ಕೆಲಸವನ್ನು ನೀಡಲಾಗುತ್ತದೆ.
- ವಿದ್ಯಾರ್ಥಿಗಳ ಸಹಾಯಕ್ಕೆ ಪ್ರತಿ ಪಠ್ಯಕ್ಕೆ ಪ್ರತ್ಯೇಕ ಅಧ್ಯಾಪಕರು ಮತ್ತು ಗ್ರಂಥಾಲಯಗಳಿರುತ್ತವೆ. ಪುಸ್ತಕ, ಚಾರ್ಟ್, ಶೈಕ್ಷಣಿಕ ಸಲಕರಣೆಗಳು ಇತ್ಯಾದಿಗಳು ಹೇರಳವಾಗಿರುತ್ತವೆ. ಹಾಗಾಗಿ ಇಡೀ ತರಗತಿಯು ಏಕಕಾಲದಲ್ಲಿ ಅವುಗಳಿಂದ ಪ್ರಯೋಜನ ಪಡೆಯುವಂತಾಗುತ್ತದೆ.
- ದಿನನಿತ್ಯ ಅರ್ಧದಷ್ಟು ಸಮಯ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ತಮ್ಮಿಷ್ಟದಂತೆ ಶೈಕ್ಷಣಿಕ ಕೆಲಸಗಳನ್ನು ಮಾಡುತ್ತಾರೆ. ಉಳಿದರ್ಧ ಸಮಯವನ್ನು ಸಾಮೂಹಿಕ ಸಮಸ್ಯೆಗಳನ್ನು ದೂರೀಕರಿಸಲು ಮತ್ತು ಹೊಸ ನೀತಿಗಳನ್ನು ಕಲಿಸಲು ಮೀಸಲಿಡಲಾಗುತ್ತದೆ.
- ತರಗತಿಯನ್ನು ಕಾನ್ಫರೆನ್ಸ್‌ನ ಹೆಸರಲ್ಲಿ ಕರೆಯಲಾಗುತ್ತದೆ. ವಿದ್ಯಾರ್ಥಿಗಳನ್ನು ಕಾನ್ಫರೆನ್ಸ್‌ನ ಸದಸ್ಯರೆಂದೂ ತರಗತಿಯನ್ನು ಪ್ರಯೋಗಾಲಯವೆಂದೂ ಹೇಳಲಾಗುತ್ತದೆ. ಕೆಲಸವನ್ನು ಸುಪುರ್ದಿ ಎಂದೂ ಕೆಲಸದ ಪೂರ್ತೀಕರಣದ ವಾಗ್ದಾನವನ್ನು ಒಪ್ಪಂದವೆಂದೂ ಕೆಲಸ ಪೂರ್ತೀಕರಿಸುವ ಸಮಯವನ್ನು ಅವಧಿ ಎಂದೂ ಹೇಳಲಾಗುತ್ತದೆ.
- ಒಂದು ಕೆಲಸ ಪೂರ್ತಿಯಾದ ಮೇಲೆ ಮಕ್ಕಳು ಇನ್ನೊಂದು ಕೆಲಸವನ್ನು ಕೈಗೆತ್ತಿಕೊಳ್ಳಬಹುದು. ಆದರೆ ಅಧ್ಯಾಪಕರಿಗೆ ಅವರ ಕೆಲಸದಿಂದ ಸಮಾಧಾನವಾಗಿರಬೇಕಾದುದು ಅಗತ್ಯ.
- ಮಕ್ಕಳು ಪ್ರತ್ಯಪ್ರತ್ಯೇಕವಾಗಿ ಅಥವಾ ಒಟ್ಟು ಸೇರಿ ಹೇಗೆ ಬೇಕಾದರೂ ಕೆಲಸ ಮಾಡಬಹುದು. ಇದು ಅವರವರ ಇಚ್ಛೆಗೆ ಬಿಟ್ಟ ವಿಷಯ.
- ಕೆಲಸ ಮತ್ತು ಪ್ರಗತಿಯ ವೇಗವನ್ನು ಅರಿಯಲು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೀರ್ವರ ಬಳಿಯೂ ಚಾರ್ಟ್‌ಗಳಿರುತ್ತವೆ. ವಿದ್ಯಾರ್ಥಿಗಳ ಬಳಿ ಒಂದು ಚಾರ್ಟ್ ವಿಷಯಾಧಾರಿತವಾಗಿರುತ್ತದೆ. ಮತ್ತೊಂದು ಒಟ್ಟು ವಿಷಯಗಳಿಗೆ ಸಂಬಂಧಿಸಿರುತ್ತದೆ.

ಪ್ರಯೋಜನಗಳು

ಪ್ರಸ್ತುತ ಯೋಜನೆಯಿಂದ ಈ ಕೆಳಗಿನ ಪ್ರಯೋಜನಗಳನ್ನು ನಿರೀಕ್ಷಿಸಬಹುದಾಗಿದೆ:

- ಪ್ರತಿಯೋರ್ವ ವಿದ್ಯಾರ್ಥಿಯೂ ತನ್ನದೇ ವೇಗದಲ್ಲಿ ಮುಂದುವರಿಯುತ್ತಾನೆ. ಆದ್ದರಿಂದ ಬುದ್ಧಿವಂತ ಮತ್ತು ಮಂದ ಬುದ್ಧಿಯ ಮಕ್ಕಳಿಗೆ ತಮ್ಮದೇ ಆದ ಪ್ರಯೋಜನಗಳಿರುತ್ತವೆ.

- ಹೊಣೆಗಾರಿಕೆ ವಹಿಸುವುದರಿಂದ ಮತ್ತು ಪೂರ್ತೀಕರಣದ ಒಪ್ಪಂದ ಮಾಡುವುದರಿಂದ ಮಂದಗತಿಯ ವಿದ್ಯಾರ್ಥಿಗಳೂ ಕಠಿಣ ಪರಿಶ್ರಮ ಪಟ್ಟು ತಮ್ಮ ಕೆಲಸವನ್ನು ಪೂರ್ತೀಕರಿಸುತ್ತಾರೆ.
- ವಿದ್ಯಾರ್ಥಿಗಳು ಕೇವಲ ಅಧ್ಯಾಪಕರನ್ನು ಅವಲಂಬಿಸಿರುವುದಿಲ್ಲ, ಬದಲಾಗಿ ಪುಸ್ತಕ, ಚಾರ್ಟ್, ಪೋಸ್ಟರ್ ಇತ್ಯಾದಿಗಳಿಂದಲೂ ಸ್ವತಃ ಉಪಯೋಗ ಪಡೆಯುವ ಸಾಮರ್ಥ್ಯ ಅವರಲ್ಲಿ ಬೆಳೆದು ಬರುತ್ತದೆ.
- ಸಂಶೋಧನೆಯ ಆಸಕ್ತಿ ಬೆಳೆದು ಬರುತ್ತದೆ.
- ಒಪ್ಪಂದದ ಕಾರಣವಾಗಿ ವಿದ್ಯಾರ್ಥಿಯು ಶ್ರದ್ಧೆ ಮತ್ತು ಆಸಕ್ತಿಯಿಂದ ಕೆಲಸ ಮಾಡುತ್ತಾನೆ. ಏಕೆಂದರೆ ಈ ಶೈಕ್ಷಣಿಕ ವಿಧಾನದಲ್ಲಿ ಸ್ವಯಂ ವಿದ್ಯಾರ್ಥಿಯ ಇಚ್ಛೆಯೂ ಸೇರ್ಪಡೆಗೊಂಡಿರುತ್ತದೆ.
- ವಿದ್ಯಾರ್ಥಿಗಳ ಸ್ಥಿತಿಯು ಜಡತ್ವದ ಬದಲು ಕ್ರಿಯಾಶೀಲವಾಗಿರುತ್ತದೆ. ಅವರು ನಿಷ್ಕ್ರಿಯ ಶ್ರೋತೃಗಳಾಗಿರುವ ಬದಲು ಸ್ವತಃ ಮಾಡಿ ಕಲಿಯುವವರಾಗಿರುತ್ತಾರೆ.
- ಅಧ್ಯಾಪಕ ಮತ್ತು ವಿದ್ಯಾರ್ಥಿಗಳೀರ್ವರಿಗೂ ಪ್ರಗತಿಯ ವೇಗದ ಬಗ್ಗೆ ಸರಿಯಾದ ಅಂದಾಜು ಇರುತ್ತದೆ.
- ಪ್ರತಿಯೊಂದು ಪಾಠಕ್ಕೂ ಅಗತ್ಯಾನುಸಾರ ಸಮಯ ದೊರೆಯುತ್ತದೆ. ಹಾಗಾಗಿ ದುರ್ಬಲ ವಿಷಯದ ಕುರಿತು ಸೂಕ್ತ ಗಮನ ಹರಿಸುವ ಮೂಲಕ ದೌರ್ಬಲ್ಯ ದೂರೀಕರಿಸಬಹುದಾಗಿದೆ.
- ಬಾಹ್ಯ ಒತ್ತಡವಿಲ್ಲದೆಯೇ ತನ್ನ ಹೊಣೆಗಾರಿಕೆಯನ್ನು ಪೂರ್ತೀಕರಿಸುವ ತರಬೇತಿಯುಂಟಾಗುತ್ತದೆ.
- ತನಗಿಷ್ಟ ಬಂದಾಗ, ತನಗಿಷ್ಟ ಬಂದಷ್ಟು ಸಮಯ ಕಲಿಯಲು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯವಿರುತ್ತದೆ. ಹೋಮ್‌ವರ್ಕ್‌ನ ಅಗತ್ಯವಿರುವುದಿಲ್ಲ.
- ಪ್ರತಿಯೋರ್ವನೂ ತನ್ನದೇ ಕೆಲಸದಲ್ಲಿ ಮಗ್ನನಾಗಿರುವ ಕಾರಣ ಶಿಸ್ತು ಪಾಲನೆಯ ಸಮಸ್ಯೆ ಇರುವುದಿಲ್ಲ.
- ತನ್ನ ಮೇಲೆ ಭರವಸೆಯನ್ನಿರಿಸಲಾಗುತ್ತದೆ ಎಂದು ಮಕ್ಕಳು ಅರಿಯುತ್ತಾರೆ. ಹಾಗಾಗಿ ಅವರು ಆ ಭರವಸೆಯನ್ನು ಮುರಿಯಲು ಬಿಡುವುದಿಲ್ಲ. ಆ ಮಕ್ಕಳನ್ನು ಗಂಟೆ ಬಾರಿಸುತ್ತಲೇ ಕೆಲಸದಲ್ಲಿರಿಸಲು, ಹೊಸ ಕೆಲಸದಲ್ಲಿ ತೊಡಗಲು ಅಥವಾ ಸಮಯದ ವ್ಯವಸ್ಥೆಯನ್ನು ಪಾಲಿಸಲು ನಿರ್ಬಂಧಿಸಲಾಗುವುದಿಲ್ಲ.
- ಸೀಮಿತ ಅವಧಿಯ ಪರೀಕ್ಷೆಯ ಮುಖಾಂತರ ಅವಲೋಕನ ಪಡೆಯುವುದರ ಬದಲು ಗ್ರಾಫ್ ಮತ್ತು ದೈನಂದಿನ ಕೆಲಸದ ವಿವರಣೆಯ ಮುಖಾಂತರ ಪ್ರಗತಿಯ ವೇಗವನ್ನು ಅಂದಾಜಿಸುವುದು ಸುಲಭವಾಗುತ್ತದೆ.

ನ್ಯೂನತೆಗಳು

ಈ ಯೋಜನೆಯನ್ನು ಅನುಸರಿಸುವುದರಿಂದ ಕೆಲವು ತೊಡಕುಗಳೂ ಎದುರಾಗುತ್ತವೆ. ಉದಾ:

- ಸಣ್ಣ ಪ್ರಾಯದ ಮಕ್ಕಳು ಸ್ವಯಂ ಉಪಯೋಗಿಸುವಂತಹ ಪುಸ್ತಕಗಳು ಅಪರೂಪ ಮಾತ್ರವಲ್ಲ, ವಿರಳವಾಗಿರುತ್ತವೆ.
- ಹೆಚ್ಚಿನ ಅಧ್ಯಾಪಕರು ಹೊಸ ವಿಧಾನವನ್ನು ಅನುಸರಿಸಲು ಸಿದ್ಧರಾಗುವುದಿಲ್ಲ, ಅವರಿಗೆ ವಿದ್ಯಾರ್ಥಿಗಳ ಸ್ವಾತಂತ್ರ್ಯವು ರುಚಿಸುವುದಿಲ್ಲ, ಹಾಗಾಗಿ ಅವರು ಈ ವಿಧಾನವನ್ನು ಸ್ವೀಕರಿಸಲು ಹಿಂಜರಿಯುತ್ತಾರೆ.
- ಬಹಳ ದೊಡ್ಡ ಲೈಬ್ರೆರಿ ಮತ್ತು ಹೇರಳ ಶೈಕ್ಷಣಿಕ ವಸ್ತುಗಳ ಅಗತ್ಯವಿರುತ್ತದೆ. ಅದನ್ನು ಕೆಲವೇ ಕೆಲವು ಸಂಸ್ಥೆಗಳು ಒದಗಿಸಬಲ್ಲವು.
- ಸೂಕ್ತ ವಿಷಯಗಳನ್ನು ವಹಿಸಿ ಕೊಡಲು ಉತ್ತಮ ಬುದ್ಧಿವಂತಿಕೆ, ಪ್ರತಿಭೆ, ಸಂಶೋಧನಾಸಕ್ತಿ ಮತ್ತು ಅನುಭವದ ಅಗತ್ಯವಿರುತ್ತದೆ. ಅವು ಹೆಚ್ಚಿನ ಅಧ್ಯಾಪಕರಲ್ಲಿ ಇರುವುದಿಲ್ಲ.
- ಹೆಚ್ಚಿನ ಪಠ್ಯ ಮತ್ತು ಅಭ್ಯಾಸಗಳನ್ನು ಸಾಮೂಹಿಕವಾಗಿಯೇ ನೀಡಬೇಕಾಗುತ್ತದೆ. ಉದಾ: ಪದ್ಯ, ಕಂಠಪಾಠ, ಪಠ್ಯೇತರ ಚಟುವಟಿಕೆಗಳು, ಡ್ರಿಲ್ ಇತ್ಯಾದಿ.
- ಕೆಲವು ಮಕ್ಕಳು ಸ್ವಾತಂತ್ರ್ಯ ಪಡೆದು ಕೆಲಸವನ್ನೇ ಮಾಡುವುದಿಲ್ಲ.

ಈ ಎಲ್ಲ ನ್ಯೂನತೆಗಳ ಹೊರತಾಗಿಯೂ ಈ ಯೋಜನೆಯಿಂದ ಪ್ರಯೋಜನ ಪಡೆಯಲು ಈ ರೀತಿಯೂ ಮಾಡಬಹುದಾಗಿದೆ- ಪ್ರತಿಯೊಂದು ಅಧ್ಯಾಯವನ್ನು ಕಲಿಸಿದ ಬಳಿಕ ಮಕ್ಕಳಿಗೆ ವೈಯಕ್ತಿಕವಾಗಿ ಮಾಡಲು ಕೆಲವು ಲಿಖಿತ ಅಥವಾ ಪ್ರಾಯೋಗಿಕ ಕೆಲಸಗಳನ್ನು ವಹಿಸಿ ಕೊಡುವುದು. ರೂಪುರೇಷೆ ನೀಡಿ ಅಥವಾ ಶೀರ್ಷಿಕೆ ನೀಡಿ ಪ್ರಬಂಧ ಬರೆಯಲು ಅಥವಾ ಭಾಷಣ ತಯಾರಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದು. ಈ ಪ್ರಕಾರ ಮಕ್ಕಳು ಪುಸ್ತಕಗಳಿಂದ ತಮ್ಮದೇ ಆದ ರೀತಿಯಲ್ಲಿ ಪ್ರಯೋಜನ ಪಡೆಯುವರು.

◆ ◆ ◆

ಅಧ್ಯಾಯ-33

ವಾರ್ಧಾ (ಬೆಸ್ಕ್) ಯೋಜನೆ

ಈ ಯೋಜನೆಯ ರೂವಾರಿ ಗಾಂಧೀಜಿಯಾಗಿದ್ದರು. ಅವರು 'ಹರಿಜನ್'(1937) ಪತ್ರಿಕೆಯಲ್ಲಿ ರಾಷ್ಟ್ರೀಯ ಮೂಲಭೂತ ಶಿಕ್ಷಣದ ರೂಪುರೇಷೆಯೊಂದನ್ನು ಮಂಡಿಸಿದ್ದರು. ಅದರ ಸಾರ ಹೀಗಿತ್ತು- ''ಶಿಕ್ಷಣವು ಒಂದು ಕೌಶಲ್ಯದ ಸಹಾಯದಿಂದ ಮಾತೃಭಾಷೆಯಲ್ಲಿರಬೇಕು ಮತ್ತು ಸ್ವಾಯತ್ತವಾಗಿರಬೇಕು.'' ಆಗ ಕಾಂಗ್ರೆಸ್ ನಾಲ್ಕು ಪ್ರಾಂತ್ಯಗಳಲ್ಲಿ ಆಡಳಿತ ನಡೆಸುತ್ತಿತ್ತು. ಆ ಪ್ರಾಂತ್ಯಗಳ ಶಿಕ್ಷಣ ಸಚಿವರುಗಳು 1937 ಅಕ್ಟೋಬರ್ 22-23ರಂದು ವಾರ್ಧಾದಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾದ ಸಮಾವೇಶದಲ್ಲಿ ಕೆಲವು ಮೂಲಭೂತ ತತ್ವಗಳನ್ನು ರೂಪಿಸಿದರು ಮತ್ತು ಡಾ| ಝೂಕಿರ್ ಹುಸೈನ್ ಖಾನ್‌ರ (ಉಪ ರಾಷ್ಟ್ರಪತಿ) ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಯು ಪ್ರಸ್ತುತ ಯೋಜನೆಯ ವಿಸ್ತೃತ ರೂಪರೇಷೆಯನ್ನು ತಯಾರಿಸಿತು. ಶಿಕ್ಷಣ ಸಚಿವರುಗಳು ರೂಪಿಸಿದ ಮೂಲಭೂತ ತತ್ವಗಳು ಈ ಕೆಳಗಿನಂತಿದ್ದುವು.

- ಏಳರಿಂದ ಹದಿನಾಲ್ಕು ವರ್ಷಗಳ ವರೆಗೆ ಎಲ್ಲ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣದ ವ್ಯವಸ್ಥೆ ಮಾಡಬೇಕು.
- ಶಿಕ್ಷಣದ ಮಾಧ್ಯಮವು ಮಾತೃ ಭಾಷೆಯಲ್ಲಿರಬೇಕು.
- ಯಾವುದಾದರೂ ಮೂಲಭೂತ ವೃತ್ತಿಯನ್ನು ಕೇಂದ್ರೀಕರಿಸಿ ಶಿಕ್ಷಣ ನೀಡಬೇಕು. ಇತರ ಎಲ್ಲ ವಿಷಯಗಳನ್ನು ಸಾದ್ಯಂತ ಅದರೊಂದಿಗೆ ಸೇರಿಸಿ ಕಲಿಸಬೇಕು.
- ಶಿಕ್ಷಣವು ಸ್ವಾಯತ್ತವಾಗಿರಬೇಕು. (ಅಂದರೆ ವಿದ್ಯಾಭ್ಯಾಸದ ಸಂದರ್ಭದಲ್ಲಿ ವಿವಿಧ ವೃತ್ತಿಪರ ಬೋಧನೆಗಳಡಿ ಮಕ್ಕಳ ಪರಿಶ್ರಮದಿಂದ ಬರುವ ಆದಾಯದಿಂದ ಶೈಕ್ಷಣಿಕ ವೆಚ್ಚಗಳು ಭರಿಸುವಂತಾಗಬೇಕು. ಎಲ್ಲಿಯ ವರೆಗೆಂದರೆ ಅಧ್ಯಾಪಕರ ಸಂಬಳವೂ ಅದರಿಂದಲೇ ಪೂರೈಕೆಯಾಗಬೇಕು. ಹಾಗೆಯೇ ಏಳು ವರ್ಷ ಶಿಕ್ಷಣ ಪೂರ್ಣಗೊಂಡ ಬಳಿಕ ವಿದ್ಯಾರ್ಥಿಗಳು ತಮ್ಮ ಕಾಲ ಮೇಲೆ ಸ್ವತಃ ನಿಲ್ಲುವಂತಾಗಬೇಕು ಮತ್ತು ತಮ್ಮ ಜೀವನಾಧಾರವನ್ನು ಸ್ವತಃ ಗಳಿಸಲು ಶಕ್ತರಾಗಬೇಕು.)

- ಶಿಕ್ಷಣವು ಭಯಮುಕ್ತವಾಗಿರಬೇಕು.

ಸಮಿತಿಯು ವಿಶದೀಕೃತ ಯೋಜನೆಯಲ್ಲಿ ಪ್ರಸ್ತುತ ಸಂಗತಿಗಳನ್ನು ದೃಷ್ಟಿಯಲ್ಲಿರಿಸುವುದರ ಜತೆಗೇ ಈ ಕೆಳಗಿನ ಅಂಶಗಳ ಬಗ್ಗೆಯೂ ಗಮನ ಹರಿಸಿತು-

- ಶಿಕ್ಷಣದ ಮುಖಾಂತರ, ಸಮಾಜಕ್ಕೆ ಹೊರೆಯಾಗುವ ಬದಲು, ತನ್ನ ಪ್ರಯತ್ನದಿಂದ ಸಮಾಜಸೇವೆ ಮಾಡಬಲ್ಲ ಮತ್ತು ನಾಗರಿಕ ಹಕ್ಕು-ಕರ್ತವ್ಯಗಳ ಮೌಲ್ಯ ತಿಳಿದಿರುವಂತಹ ಸತ್ಪ್ರಜೆಯನ್ನು ರೂಪಿಸಬೇಕು.
- ಶಿಕ್ಷಣವು ಮಕ್ಕಳ ದೈನಂದಿನ ಜೀವನಕ್ಕೆ ಸಂಬಂಧಿಸಿರಬೇಕು. ಪ್ರತಿಯೊಂದು ಹೊಸ ವಿಷಯವನ್ನು ವೃತ್ತಿ ಸಂಬಂಧಿ ಅಥವಾ ಸ್ವಾಭಾವಿಕ ಮತ್ತು ಸಾಮಾಜಿಕ ಪರಿಸರಕ್ಕೆ ಸಂಬಂಧ ಕಲ್ಪಿಸಿ ಕಲಿಸಬೇಕು.
- ಬಾಲ್ಯ ಶಿಕ್ಷಣವನ್ನು (ಏಳು ವರ್ಷಕ್ಕೆ ಮುಂಚೆ) ಪೋಷಕರ ಮತ್ತು ಖಾಸಗಿ ಸಂಸ್ಥೆಗಳಿಗೇ ಬಿಟ್ಟು ಬಿಡಬೇಕು. ಆದರೂ ಸರಕಾರವು ಬಾಲ್ಯ ಶಿಕ್ಷಣಕ್ಕೆ ಕೆಲವು ಮಾದರಿ ಶಾಲೆಗಳನ್ನು ಸ್ಥಾಪಿಸಬೇಕು.
- ಶಿಕ್ಷಣದ ಮಟ್ಟವು ಏಳು ವರ್ಷಗಳಲ್ಲಿ ಇಂಗ್ಲಿಷನ್ನು ಹೊರತು ಪಡಿಸಿ, ಹೈಸ್ಕೂಲಿಗೆ ಸಮಾನವಾಗಿರಬೇಕು.
- ವಿದ್ಯಾರ್ಥಿಗಳು ತಯಾರಿಸಿದ ವಸ್ತುಗಳ ಖರೀದಿ-ಮಾರಾಟದ ಹೊಣೆಯು ಸರಕಾರದ ಮೇಲಿರುವುದು.
- ಓದಿಗಿಂತ ಪ್ರಾಯೋಗಿಕ ಕಲಿಕೆಯೆಡೆಗೆ ಆದಷ್ಟು ಹೆಚ್ಚು ಗಮನ ಹರಿಸಬೇಕು.
- ಈ ಯೋಜನೆಗೆ ಕಾರ್ಯರೂಪ ನೀಡಲು ಅರ್ಹ ಅಧ್ಯಾಪಕರುಗಳನ್ನು ಸಿದ್ಧಗೊಳಿಸಬೇಕು. ತರಬೇತಿಯ ಕೋರ್ಸ್ ಎರಡು ರೀತಿಯದ್ದಾಗಿರಬೇಕು. ಒಂದು ಜೂನಿಯರ್, ಇನ್ನೊಂದು ಸೀನಿಯರ್.
- ಪರೀಕ್ಷೆಗಳ ಪ್ರಸಕ್ತ ವ್ಯವಸ್ಥೆಯನ್ನು ಕೊನೆಗೊಳಿಸಿ ಪ್ರಗತಿ ಚಾರ್ಟನ್ನು ಇರಿಸಬೇಕು ಹಾಗೂ ಆಧುನಿಕ ವಿಧಾನದಲ್ಲಿ ಪರೀಕ್ಷೆಗಳನ್ನು ನಡೆಸಬೇಕು.
- ಪಠ್ಯ, ಶಿಕ್ಷಣ ವಿಧಾನ ಮತ್ತು ಪರಿಶೀಲನೆಯ ಯುಕ್ತ ವಿಧಾನ ಇತ್ಯಾದಿಗಳ ಪ್ರಯೋಗ ನಡೆಸುವಂತಹ ಒಂದು ಶಿಕ್ಷಣ ಮಂಡಳಿ ಇರಬೇಕು.
- ಪ್ರಸಕ್ತ ಪರಿಶೀಲನಾ ಅಧಿಕಾರಿಗಳ ಬದಲಿಗೆ ಶಿಕ್ಷಣದಲ್ಲಿ ಆಸಕ್ತಿ ಇರುವಂತಹ ಮತ್ತು ಅಧ್ಯಾಪಕರಿಗೆ ಕಾಲಕಾಲಕ್ಕೆ ಮಾರ್ಗದರ್ಶನ ನೀಡುವಂತಹ ಸುಪರ್‌ವೈಸರ್‌ಗಳನ್ನು ನೇಮಿಸಬೇಕು.

ಇದನ್ನು ಬೇಸ್ಕ್ (ಮೂಲಭೂತ) ಯೋಜನೆ ಎನ್ನುವುದೇಕೆಂದರೆ,

- ಯಾವ ಸ್ಥಿತಿಯಲ್ಲೂ ಧರ್ಮ-ಜನಾಂಗ ಭೇದವಿಲ್ಲದೆ ಪಡೆಯುವಷ್ಟು ಶಿಕ್ಷಣವು ಪ್ರತಿಯೋರ್ವ ನಾಗರಿಕನ ಮೂಲಭೂತ ಅಗತ್ಯವಾಗಿದೆ.

- ಇದರಲ್ಲಿ ಮೂಲಭೂತ ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿ ವಿದ್ಯಾಭ್ಯಾಸ ನೀಡುವ ವ್ಯವಸ್ಥೆ ಇದೆ.
- ವಿದ್ಯಾರ್ಥಿಗಳ ಮೂಲಭೂತ ಅಗತ್ಯ ಮತ್ತು ಆಸಕ್ತಿಗಳನ್ನು ಇದರಲ್ಲಿ ಪರಿಗಣಿಸಲಾಗಿದೆ.

ಪಠ್ಯ ಮತ್ತು ವೇಳಾಪಟ್ಟಿ

ಏಳು ವರ್ಷಗಳ ಪಠ್ಯಕ್ರಮವು ಈ ಕೆಳಗಿನ ವಿಷಯಗಳು ಮತ್ತು ಚಟುವಟಿಕೆಗಳನ್ನು ಹೊಂದಿದೆ-

1. ಮೂಲಭೂತ ವೃತ್ತಿ (ಹೊಲಿಗೆ, ನೇಯ್ಗೆ, ತೋಟಗಾರಿಕೆ, ಮರದ ಅಥವಾ ಚರ್ಮದ ಕೆಲಸ ಇತ್ಯಾದಿ).
2. ಮಾತೃಭಾಷೆ.
3. ಗಣಿತ.
4. ಸಾಮಾಜಿಕ ಶಾಸ್ತ್ರ (ಇತಿಹಾಸ, ಭೂಗೋಳ ಮತ್ತು ಸಾಂಸ್ಕೃತಿಕ ಶಿಕ್ಷಣ).
5. ಸಾಮಾನ್ಯ ವಿಜ್ಞಾನ (ಪರಿಸರ ಅಧ್ಯಯನ, ಆರೋಗ್ಯ ರಕ್ಷಣೆ, ಅಂಗಾಂಗ ಕ್ರಿಯೆಗಳು, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ ಇತ್ಯಾದಿ).
6. ಕಲೆ (ಪೈಂಟಿಂಗ್, ಡ್ರಾಯಿಂಗ್).
7. ಸಂಗೀತ (ರಾಗ ಮತ್ತು ಹಾಡು).
8. ಹಿಂದುಸ್ತಾನಿ ಭಾಷೆ (ಉತ್ತರ ಭಾರತದಲ್ಲಿ ಮಾತನಾಡುವ ಸರಳ ಭಾಷೆ, ದೇವನಾಗರಿ ಲಿಪಿಯಲ್ಲಿ ಹಿಂದಿ ಮತ್ತು ಫಾರ್ಸಿ ಲಿಪಿಯಲ್ಲಿ ಉರ್ದು ಎನ್ನಲಾಗುತ್ತದೆ).

ಈ ಪಠ್ಯದ ಕೆಲವು ಪ್ರಮುಖ ಅಂಶಗಳು

- ಆಂಗ್ಲಭಾಷೆಯನ್ನು ಪಠ್ಯದಿಂದ ಸಂಪೂರ್ಣ ಕೈಬಿಡಲಾಗಿದೆ.
- ಭಾರತೀಯ ಭಾಷೆಯನ್ನು ದೇಶದ ರಾಷ್ಟ್ರೀಯ ಭಾಷೆಯಾಗಿ ಅಂಗೀಕರಿಸಲಾಯಿತು ಮತ್ತು ಇತರ ಭಾಷೆಗಳನ್ನಾಡುವ ಪ್ರಾಂತ್ಯಗಳಲ್ಲಿಯೂ ಐದು-ಆರನೇ ತರಗತಿಯಿಂದ ರಾಷ್ಟ್ರೀಯ ಭಾಷೆಯನ್ನು ಕಡ್ಡಾಯಗೊಳಿಸಲಾಯಿತು.
- ಹನ್ನೊಂದು ವರ್ಷಗಳ ತನಕ ಸಹ ಶಿಕ್ಷಣ ಪದ್ಧತಿ ಮತ್ತು ಹುಡುಗ-ಹುಡುಗಿಯರಿಗೆ ಸಮಾನ ಪಠ್ಯವನ್ನು ಸೂಚಿಸಲಾಯಿತು. ಕೊನೆಯ ಎರಡು ತರಗತಿಗಳಲ್ಲಿ ಹುಡುಗರಿಗೆ ಸಾಮಾನ್ಯ ವಿಜ್ಞಾನ ಮತ್ತು ಹುಡುಗಿಯರಿಗೆ ಗೃಹ ಕೃತ್ಯಗಳನ್ನು ಪಠ್ಯದಲ್ಲಿ ಇರಿಸಲಾಯಿತು.
- ಧಾರ್ಮಿಕ ಶಿಕ್ಷಣಕ್ಕೆ ಆಸ್ಪದವನ್ನಿರಿಸಲಾಗಿಲ್ಲ, ಆದರೆ ಎಲ್ಲ ಅಧ್ಯಾಪಕರೂ ಸರ್ವಧರ್ಮಗಳ 'ಸಮನ್ವಿತ ತತ್ವ'ಗಳನ್ನು ತಮ್ಮ ಕರ್ಮರಂಗದಲ್ಲಿ ಪ್ರದರ್ಶಿಸಬೇಕೆಂಬ

ಒತ್ತು ನೀಡಲಾಯಿತು. ಈ ಮೂಲಕ ವಿದ್ಯಾರ್ಥಿಗಳು ಅಧ್ಯಾಪಕರನ್ನು ಅನುಸರಿಸುವಂತಾಗಬೇಕು ಮತ್ತು ಪುಸ್ತಕಗಳಿಗಿಂತ ಹೆಚ್ಚಾಗಿ ಅಧ್ಯಾಪಕರು ತಮ್ಮ ಕರ್ಮಗಳ ಮೂಲಕ ಅದರ ಶಿಕ್ಷಣ ನೀಡುವಂತಾಗಬೇಕು.

ವೇಳಾ ಪಟ್ಟಿ

ಸೂಚಿತ ವೇಳಾ ಪಟ್ಟಿ ಈ ರೀತಿ ಇದೆ-

1. ಮೂಲಭೂತ ವೃತ್ತಿ	: ದಿನನಿತ್ಯ 3 ಗಂಟೆ 20 ನಿಮಿಷ.
2. ಗಣಿತ, ಕಲೆ, ಸಂಗೀತ	: ದಿನನಿತ್ಯ 40 ನಿಮಿಷ
3. ಮಾತೃಭಾಷೆ	: ದಿನನಿತ್ಯ 40 ನಿಮಿಷ
4. ಸಮಾಜಶಾಸ್ತ್ರ ಮತ್ತು ಸಾಮಾನ್ಯ ವಿಜ್ಞಾನ	: ದಿನನಿತ್ಯ 30 ನಿಮಿಷ
5. ದೈಹಿಕ ತರಬೇತಿ	: ದಿನನಿತ್ಯ 10 ನಿಮಿಷ
6. ಬಿಡುವು	: ದಿನನಿತ್ಯ 10 ನಿಮಿಷ
ಒಟ್ಟು	: 5 ಗಂಟೆ 30 ನಿಮಿಷ ನಿತ್ಯ.

ಮೂಲಭೂತ ಯೋಜನೆಯಲ್ಲಿ ಕೆಲವು ಬದಲಾವಣೆಗಳು

ವಿವಿಧ ಹಂತಗಳನ್ನು ದಾಟಿದ ಬಳಿಕ ಮೂಲ ಯೋಜನೆಯಲ್ಲಿ ಈ ಕೆಳಗಿನ ಬದಲಾವಣೆಗಳನ್ನು ಮಾಡಲಾಯಿತು:

- ಸಣ್ಣ ಮಕ್ಕಳ ಶಿಕ್ಷಣವನ್ನೂ ಈ ಯೋಜನೆಯಲ್ಲಿ ಸೇರಿಸಲಾಯಿತು. ಆರರಿಂದ ಹದಿನಾಲ್ಕು ವರ್ಷಗಳ ವರೆಗೆ (ಎಂಟು ತರಗತಿಗಳಲ್ಲಿ) ಶಿಕ್ಷಣ ನೀಡಲಾಗುವುದು. ಐದು ವರ್ಷ ಪ್ರಾಯದ ಮಕ್ಕಳನ್ನು ಮೊದಲನೆಯ ತರಗತಿಯಲ್ಲಿ ಸೇರಿಸಬಹುದಾಗಿದೆ. ಈ ಅವಧಿಯನ್ನು ಎರಡು ಹಂತಗಳಲ್ಲಿ ವಿಂಗಡಿಸಲಾಯಿತು.

  (i) ಒಂದರಿಂದ ಐದರ ವರೆಗೆ ಕಿರಿಯ ಬೇಸ್ಕ್ ಸ್ಕೂಲ್

  (ii) ಆರರಿಂದ ಒಂಬತ್ತರ ವರೆಗೆ ಹಿರಿಯ ಬೇಸ್ಕ್ ಸ್ಕೂಲ್.
- ಶಿಕ್ಷಣ ವ್ಯವಸ್ಥೆಯನ್ನು ಆಡಳಿತವು ತನ್ನ ಖರ್ಚಿನಲ್ಲಿ ನಡೆಸುವುದು. ಸ್ವಾಯತ್ತತೆಯ ಶರ್ತವನ್ನು ಕೈಬಿಡಲಾಯಿತು.
- ಆರನೆಯ ತರಗತಿಯಿಂದ ಇಂಗ್ಲಿಷನ್ನು ಕಲಿಸುವ ಅವಕಾಶವನ್ನಿರಿಸಲಾಯಿತು.
- ಹಿಂದುಸ್ತಾನಿ ಭಾಷೆ ಕಡ್ಡಾಯವಾಗಿ ಉಳಿಯಲಿಲ್ಲ.
- ಕಿರಿಯ ತರಗತಿಗಳಲ್ಲಿ ಒಂದಕ್ಕಿಂತ ಹೆಚ್ಚು ವೃತ್ತಿ ಶಿಕ್ಷಣದ ವ್ಯವಸ್ಥೆಯನ್ನಿರಿಸಲಾಯಿತು ಮತ್ತು ಹಿರಿಯ ತರಗತಿಗಳಲ್ಲಿ ಯಾವುದಾದರೂ ಒಂದು ವೃತ್ತಿಯಲ್ಲಿ ಅನುಭವ ಗಳಿಸಲು ಅವಕಾಶ ಕಲ್ಪಿಸಲಾಯಿತು.

ವಿಶೇಷತೆಗಳು

ಪ್ರಸ್ತುತ ಯೋಜನೆಯಲ್ಲಿ ಈ ಕೆಳಗಿನ ವಿಶೇಷತೆಗಳನ್ನು ಗುರುತಿಸಲಾಗಿದೆ:

- ಮಕ್ಕಳಿಗೆ ಸ್ವತಃ ಮಾಡಿ ಕಲಿಯಲು ಆದಷ್ಟು ಹೆಚ್ಚು ಅವಕಾಶ ಲಭಿಸುತ್ತದೆ. ಹಾಗಾಗಿ ಅವರು ಶಿಕ್ಷಣದಲ್ಲಿ ಸಂಪೂರ್ಣ ಆಸಕ್ತಿ ವಹಿಸುತ್ತಾರೆ ಮತ್ತು ಸ್ವತಃ ಕಲಿಯುತ್ತಾರೆ ಕೂಡ. ಅದನ್ನು ಜೀವನದಲ್ಲಿ ಪ್ರಯೋಗಿಸಿಯೂ ನೋಡುತ್ತಾರೆ. ಹಾಗೆಯೇ ಅವರ ಜ್ಞಾನವು ಸ್ಥಿರ ಮತ್ತು ಪ್ರಬಲವಾಗಿರುತ್ತದೆ.
- ವೀಕ್ಷಕರಾಗುವ ಬದಲು ಕ್ರಿಯಾಶೀಲರಾಗುತ್ತಾರೆ ಮತ್ತು ಸ್ವಂತ ಕೈಯಿಂದ ಕೆಲಸ (ಕೈ ಕೆಲಸ) ಮಾಡುವುದರಲ್ಲಿ ಅವರು ಸಂಕೋಚ ಪಡಲಾರರು.
- ಇದರಿಂದ ಮೈಗಳ್ಳತನ ಮತ್ತು ನಿರುದ್ಯೋಗ ಎರಡೂ ನಿವಾರಣೆಯಾಗುತ್ತದೆ.
- ಈ ಮೂಲಕ ಸಾಮೂಹಿಕ ಮತ್ತು ನಾಗರಿಕ ಗುಣಗಳು ಬೆಳೆದು ಬರುತ್ತವೆ. ಒಟ್ಟು ಸೇರಿ ಕೆಲಸ ಮಾಡುವ ಪ್ರತಿಭೆ ಬೆಳೆದು ಬರುತ್ತದೆ.
- ಮನ-ಮಸ್ತಿಷ್ಕ, ಕಣ್ಣು ಮತ್ತು ಕೈಗಳೆಲ್ಲದಕ್ಕೂ ಒಟ್ಟಿಗೆ ಹಾಗೂ ಸಂತುಲಿತ ತರಬೇತಿಯಾಗುತ್ತದೆ. ಯಾವುದೇ ಮಗ್ಗುಲು ಕಡೆಗಣಿಸಲ್ಪಡುವುದಿಲ್ಲ.
- ವಿದ್ಯಾರ್ಥಿಗಳನ್ನು ತಮ್ಮ ಕುಲಕಸುಬು ಅಥವಾ ಇನ್ನಿತರ ಪ್ರಯೋಜನಕಾರಿ ಉದ್ಯೋಗದ ಮುಖಾಂತರ ರಾಷ್ಟ್ರೀಯ ಸಂಪತ್ತಿನಲ್ಲಿ ಹೆಚ್ಚಳವನ್ನುಂಟು ಮಾಡಲು ಅರ್ಹರನ್ನಾಗಿಸುತ್ತದೆ.
- ದೇಶದ ಕೈಗಾರಿಕಾ ಪ್ರಗತಿಯಲ್ಲಿ ಸಹಾಯಕವಾಗಿದೆ.
- ಮಾತೃಭಾಷೆಯಲ್ಲಿ ಶಿಕ್ಷಣ ನೀಡಲಾಗುತ್ತದೆ. ಹಾಗಾಗಿ ಶಿಕ್ಷಣವು ಹೆಚ್ಚು ಪ್ರಭಾವಶಾಲಿಯಾಗುತ್ತದೆ.
- ನಗರ ಮತ್ತು ಗ್ರಾಮೀಣ ಶಿಕ್ಷಣದಲ್ಲಿ ಏಕರೂಪತೆ ಇರುತ್ತದೆ. ಮೂಲಭೂತ ಶಿಕ್ಷಣದ ಮಟ್ಟದ ವರೆಗೆ ಇಡೀ ದೇಶದಲ್ಲಿ ಒಂದೇ ಶೈಕ್ಷಣಿಕ ವ್ಯವಸ್ಥೆ ಚಾಲ್ತಿಯಲ್ಲಿರುತ್ತದೆ.
- ಕೈ ಕೆಲಸಗಳ ಮೌಲ್ಯ ಮತ್ತು ಘನತೆಯ ಅರಿವು ಉಂಟಾಗುತ್ತದೆ.
- ಮಕ್ಕಳ ಮಾನಸಿಕತೆ, ಶಿಕ್ಷಣ ನೀತಿ ಮತ್ತು ರಾಷ್ಟ್ರೀಯ ಮಹತ್ವಾಕಾಂಕ್ಷೆಗೆ ಪೂರಕವಾಗಿದೆ ಇತ್ಯಾದಿ.

ಟೀಕೆ ಟಿಪ್ಪಣಿಗಳು

ಈ ಯೋಜನೆಯು ಇಂದು ಸಣ್ಣಪುಟ್ಟ ಭಿನ್ನಾಭಿಪ್ರಾಯಗಳೊಂದಿಗೆ ಇಡೀ ದೇಶದಲ್ಲಿ ಜಾರಿಯಾಗಿದೆ ಮತ್ತು ಪ್ರತಿ ರಾಜ್ಯವು ಪ್ರಾಥಮಿಕ ಶಿಕ್ಷಣದ ಮಟ್ಟಿಗೆ ಇದನ್ನು ಅಂಗೀಕರಿಸಿ ಕಾರ್ಯ ರೂಪಕ್ಕಿಳಿಸಿವೆ. ಆದರೂ ಇದು ಸದಾ ಟೀಕೆಗಳಿಗೂ ಗುರಿಯಾಗುತ್ತಿದೆ ಹಾಗೂ

ಇಷ್ಟೆಲ್ಲ ಪರಿಷ್ಕರಣೆಯ ಹೊರತಾಗಿಯೂ ಇದರ ಬಗ್ಗೆ ಈಗಲೂ ಹಲವು ರೀತಿಯಲ್ಲಿ ಆಕ್ಷೇಪಗಳನ್ನೆತ್ತಲಾಗುತ್ತಿದೆ. ಉದಾ:

- ಮಕ್ಕಳಿಗೆ ಕೇಂದ್ರೀಯ ಸ್ಥಾನ ನೀಡುವ ಬದಲು, ಇದರಲ್ಲಿ ವೃತ್ತಿಗೆ ಕೇಂದ್ರೀಯ ಸ್ಥಾನ ನೀಡಲಾಗಿದೆ.
- ಧಾರ್ಮಿಕ ಶಿಕ್ಷಣವನ್ನು ಪಠ್ಯದಿಂದ ಹೊರಗಿಡುವ ಮೂಲಕ ಧರ್ಮ ಮತ್ತು ನೈತಿಕತೆಯಿಂದ ನವಪೀಳಿಗೆಯ ಸಂಬಂಧವನ್ನೇ ಕಡಿಯಲಾಗಿದೆ.
- ಧಾರ್ಮಿಕ ಶಿಕ್ಷಣದ ಅವಕಾಶವನ್ನು ಪಠ್ಯದಲ್ಲಿ ನೀಡಲಾಗಿಲ್ಲದಿದ್ದರೂ ಸಂಸ್ಕೃತಿಯ ಹೆಸರಲ್ಲಿ ಒಂದು ನಿರ್ದಿಷ್ಟ ಧರ್ಮದ ಆಚಾರ-ವಿಚಾರಗಳನ್ನು ಎಲ್ಲರ ಮೇಲೆ ಹೇರುವ ಪ್ರಯತ್ನ ಮಾಡಲಾಗಿದೆ.
- ಆರಂಭಿಕ ಶಿಕ್ಷಣವು ಸ್ವಾಯತ್ತವಾಗಿರಬೇಕು ಎಂಬ ಅಂಶವೇ ಅಸಾಧ್ಯವಾದುದು. ಅದನ್ನು ಅನುಸರಿಸಿದರೆ, ವಿದ್ಯಾರ್ಥಿಗಳ ಸಮಯವೆಲ್ಲ ಅಧ್ಯಾಪಕರಿಗೆ ಆಹಾರದ ವ್ಯವಸ್ಥೆ ಮಾಡುವುದರಲ್ಲೇ ಕಳೆದು ಹೋಗಬಹುದು. ಮಕ್ಕಳ ಮೇಲೆ ಈ ರೀತಿಯ ಹೊಣೆ ಹೊರಿಸುವುದು ತರವಲ್ಲ.
- ಹದಿನಾಲ್ಕು ವರ್ಷಗಳ ವರೆಗೆ ಉಚಿತ ಕಡ್ಡಾಯ ಶಿಕ್ಷಣದ ವ್ಯವಸ್ಥೆಯು ರಾಜ್ಯ ಸರಕಾರಗಳ ಹೊಣೆಯೆಂದು ಭಾರತೀಯ ಸಂವಿಧಾನವು ಸಾರಿದೆ. ಈ ಪರಿಚ್ಛೇದದ ಉಪಸ್ಥಿತಿಯಲ್ಲಿ ಪ್ರಸ್ತುತ ಅಂಶವು ನಿರರ್ಥಕವಾಗಿಯೇ ಉಳಿದಿದೆ.
- ಈ ಯೋಜನೆಯ ಕಾರಣವಾಗಿ, ಮಕ್ಕಳ ಮೂಲಕ ಕಚ್ಚಾ ವಸ್ತುಗಳು ವ್ಯಾಪಕವಾಗಿ ವ್ಯರ್ಥವಾಗುತ್ತವೆ.
- ಶಾಲೆಗಳು ಕಾರ್ಖಾನೆಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಏಕೆಂದರೆ ವೃತ್ತಿಗೇ ಅಪಾರವಾದ ಮಹತ್ವವನ್ನು ನೀಡಲಾಗಿದೆ ಮತ್ತು ಶಾಲೆಗಳ ಯಶಸ್ಸನ್ನು ಅವುಗಳಿಂದಲೇ ಅಳೆಯಲಾಗುತ್ತದೆ. ಹಾಗಾಗಿ ಪ್ರಾಯೋಗಿಕ ಅಂಶವು ತುಸು ಹೆಚ್ಚೇ ಕಡೆಗಣಿಸಲ್ಪಡುತ್ತದೆ.
- ಈ ವಿಧಾನವನ್ನು ಉತ್ತಮವಾಗಿ ನಡೆಸಬೇಕಾದರೆ, ಅದಕ್ಕೆ ಸೂಕ್ತವಾದ ಅಧ್ಯಾಪಕರು ಮತ್ತು ಪಠ್ಯ ಪುಸ್ತಕಗಳನ್ನು ಒದಗಿಸುವುದು ಬಹಳ ಕಷ್ಟ.
- ಮಕ್ಕಳ ವೈಯಕ್ತಿಕ ವ್ಯತ್ಯಾಸವನ್ನು ಈ ಯೋಜನೆಯಲ್ಲಿ ಕಡೆಗಣಿಸಲಾಗಿದೆ ಮತ್ತು ಎಲ್ಲರಿಗೂ ಏಕರೂಪದ ಪಠ್ಯವನ್ನು ಸೂಚಿಸಲಾಗಿದೆ.
- ಕೈಗಾರಿಕೆ-ವೃತ್ತಿಗೆ ಅಸಾಮಾನ್ಯ ಮಹತ್ವ ನೀಡುವ ಮೂಲಕ ಭೌತಿಕತೆಗೆ ಇಂಬು ಕೊಡಲಾಗಿದೆ ಮತ್ತು ಸಾಂಸ್ಕೃತಿಕ ಪ್ರಗತಿ, ನೈತಿಕತೆ, ಆಧ್ಯಾತ್ಮಿಕತೆಯನ್ನು ಕಡೆಗಣಿಸಲಾಗಿದೆ.
- ಯಂತ್ರಗಳ ಈ ಕಾಲದಲ್ಲಿ ಗುಡಿಕೈಗಾರಿಕೆ ಅಥವಾ ಸಾಧಾರಣವಾದ ವೃತ್ತಿಗೆ ಇಷ್ಟು ಮಹತ್ವ ನೀಡುವುದು ಸ್ವತಃ ಕೈಗಾರಿಕಾ ಪ್ರಗತಿಗೆ ಮಾರಕವಾಗಬಹುದು. ಅಲ್ಲದೆ

ಜಗತ್ತಿನ ಪ್ರಗತಿಶೀಲ ರಾಷ್ಟ್ರಗಳಿಗೆ ಸರಿಸಮಾನವಾಗಿ ನಡೆಯುವಲ್ಲಿ ನಾವು ವಿಫಲರಾಗುವೆವು.

- ಸರ್ವಧರ್ಮ ಸಮಭಾವ ಮತ್ತು ಭಯ ಮುಕ್ತತೆಯನ್ನು ವಿಶ್ವಾಸದ ರೂಪದಲ್ಲಿ ಉಚಿತ ಕಡ್ಡಾಯ ಶಿಕ್ಷಣದ ಆತ್ಮವಾಗಿದೆ ಎಂದು ಪರಿಗಣಿಸುವುದು ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಆತ್ಮಸಾಕ್ಷಿಯ ಹಕ್ಕಿಗೆ ವಿರುದ್ಧವಾಗಿದೆ.

◆ ◆ ◆

ಅಧ್ಯಾಯ-34

ನಾನಾ ವಿಧದ ಸಮಸ್ಯೆಗಳು

ಶಿಕ್ಷಣ ಸಂಸ್ಥೆಗಳಿಗೆ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಾನಾ ವಿಧದ ಸಮಸ್ಯೆಗಳನ್ನು ಎದುರಿಸಬೇಕಾಗಿ ಬರುತ್ತದೆ. ಆ ಪೈಕಿ ಕೆಲವು ಪ್ರಮುಖ ಸಂಗತಿಗಳನ್ನು ಇಲ್ಲಿ ಚರ್ಚೆಗೆತ್ತಿಕೊಳ್ಳಲಾಗಿದೆ.

ಹಾಜರಿಯ ಸಮಸ್ಯೆ

ಇದು ಬಹುತೇಕ ಎಲ್ಲ ಶಿಕ್ಷಕ ಸಂಸ್ಥೆಗಳಿಗೂ ಎದುರಿಸಬೇಕಾಗಿ ಬರುವ ಮೂಲಭೂತ ಸಮಸ್ಯೆಗಳಾಗಿದೆ. ಸರಕಾರೇತರ ಪ್ರಾಥಮಿಕ ಶಾಲೆಗಳಲ್ಲಂತೂ ಈ ಸಮಸ್ಯೆಯು ಇನ್ನಷ್ಟು ಚಿಂತೆಗೀಡು ಮಾಡುತ್ತದೆ. ಹಾಜರಿ ಮತ್ತು ಸಮಯ ಪಾಲನೆಯ ವಿಷಯದಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೀರ್ವರಿಂದಲೂ ಪ್ರಮಾದಗಳು ಸಂಭವಿಸುತ್ತವೆ. ಇದರಿಂದ ಶಿಕ್ಷಣ-ತರಬೇತಿಯ ಮೇಲೆ ಬಹಳ ಕೆಟ್ಟ ಪ್ರಭಾವವುಂಟಾಗುತ್ತದೆ. ಅಧ್ಯಾಪಕರ ಗೈರು ಹಾಜರಿ ಅಥವಾ ತಡ ಹಾಜರಿಯಿಂದ ಶಿಕ್ಷಣದ ನಷ್ಟವಂತೂ ಆಗುತ್ತದೆ. ಜತೆಗೆ ತರಗತಿ ಮತ್ತು ಶಾಲೆಯ ಶಿಸ್ತು ಪಾಲನೆಯ ಮೇಲೂ ಕೆಟ್ಟ ಪ್ರಭಾವವುಂಟಾಗುತ್ತದೆ. ಮಕ್ಕಳು ತರಗತಿಯಲ್ಲಿ ಜಗಳ, ಹ್ಯೊಕ್ಕೈ ಮತ್ತು ಗುಲ್ಲು-ಗಲಾಟೆಯನ್ನು ರೂಢಿಸಿಕೊಳ್ಳುತ್ತಾರೆ. ತರಗತಿ ಮತ್ತು ಶಾಲೆಯಿಂದ ಗಾಂಭೀರ್ಯವು ಹೊರಟುಹೋಗುತ್ತದೆ. ಜಗಳ ಕೊನೆಗೊಳಿಸಲಿಕ್ಕಾಗಿ ಸಾಕಷ್ಟು ಸಮಯ ವ್ಯಯವಾಗುತ್ತದೆ ಮತ್ತು ಶಿಸ್ತನ್ನು ಕಾಯ್ದುಕೊಳ್ಳಲು ಬೆತ್ತದ ಪ್ರಯೋಗ ಮಾಡಬೇಕಾಗಿ ಬರುತ್ತವೆ. ಬಟ್ಟೆಗಳು ಹರಿಯುತ್ತವೆ, ಶಾಯಿಯ ಬಾಟಲಿ ಉರುಳಿ ಬೀಳುತ್ತದೆ ಮತ್ತು ಸಾಮಾನುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಹಾಳಾಗಿ ಬಿಡುತ್ತವೆ. ಒಂದು ಮಗು ಗೈರು ಹಾಜರಾದರೆ ಕೇವಲ ಆ ಮಗುವಿಗೆ ನಷ್ಟ, ಅದೇ ವೇಳೆ ಅಧ್ಯಾಪಕನೋರ್ವ ಗೈರು ಹಾಜರಾದರೆ, ತಡವಾಗಿ ಬಂದರೆ ಅಥವಾ ತರಗತಿ ತೆಗೆದುಕೊಳ್ಳಲು ತಡಮಾಡಿದರೆ ಮೂವತ್ತು-ನಲ್ವತ್ತು ಮಕ್ಕಳನ್ನೊಳಗೊಂಡ ಇಡೀ ತರಗತಿಗೇ ನಷ್ಟವುಂಟಾಗುತ್ತದೆ. ಧಾರ್ಮಿಕ ಶಿಕ್ಷಣ ಸಂಸ್ಥೆ(ಮದ್ರಸ)ಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಂದ ಇಂತಹ ತಪ್ಪುಗಳು ಸಂಭವಿಸುವುದು ಅಪಾಯಕಾರಿಯೂ ಹೌದು ಮತ್ತು ಖೇದಕರವೂ ಹೌದು. ಏಕೆಂದರೆ

ದಿನನಿತ್ಯ ಐದು ಹೊತ್ತಿನ ನಮಾಝ್ ಸಮಯ ಪಾಲನೆಯೊಂದಿಗೆ ಕಡ್ಡಾಯವಾಗಿರುವ, ಏಳು ವರ್ಷ ಪ್ರಾಯದಿಂದಲೇ ನಮಾಝ್ ನಿರ್ವಹಿಸಲು ನಿರ್ಬಂಧಿತವಾಗಿರುವ, ಸಮಯವನ್ನು ಅಲ್ಲಾಹನ ಅಮಾನತ್ ಎಂದು ಭಾವಿಸುವ ಮತ್ತು ಜೀವನದ ಪ್ರತಿಯೊಂದು ಕ್ಷಣದ ಲೆಕ್ಕವನ್ನು ಅಲ್ಲಾಹನಿಗೆ ನೀಡಬೇಕಾಗುವುದೆಂಬ ವಿಶ್ವಾಸವನ್ನಿರಿಸಿರುವ ಒಂದು ಸಮುದಾಯದ ಜನರು ಸಮಯ ಪಾಲನೆಯ ವಿಷಯದಲ್ಲಿ ಇಡೀ ಜಗತ್ತಿನ ಮುಂದೆ ಅತ್ಯುತ್ತಮ ಮಾದರಿಯಾಗಿ ತೋರಿಸಬೇಕಷ್ಟೇ. ಶರಈ ಕಾರಣಗಳ ಹೊರತು ಅವರ ಗೈರು ಹಾಜರಿ ಅಥವಾ ತಡಹಾಜರಿಯು ಯಾವುದೇ ಸ್ಥಿತಿಯಲ್ಲಿ ಅವರಿಗೆ ಅನುವದನೀಯವಲ್ಲ. ಹೀಗಿರುವಾಗ ಇಂತಹ ಪ್ರಮಾದಗಳು ಒಂದು ಮೂಲಭೂತ ಕೊರತೆಯೆಡೆಗೆ ಬೊಟ್ಟು ಮಾಡುತ್ತದೆ. ಅದರ ನಿವಾರಣೆಗೆ ಆದಷ್ಟು ಪ್ರಯತ್ನಿಸಬೇಕಾಗಿದೆ.

ಅಧ್ಯಾಪಕರ ಗೈರು ಹಾಜರಿಯಲ್ಲಿ ಸಾಮಾನ್ಯವಾಗಿ ಈ ಕೆಳಗಿನ ಕಾರಣಗಳಿರುತ್ತವೆ-

1. ಅನಾರೋಗ್ಯ ಅಥವಾ ಕಾಯಿಲೆ.

2. ಅನಿವಾರ್ಯ ಅಗತ್ಯಕ್ಕಾಗಿ ಮನೆಯಲ್ಲಿ ನಿಬಿಡತೆ.

3. ಬಂಧು ಮಿತ್ರರ ಸಭೆಯಲ್ಲಿ ಪಾಲ್ಗೊಳ್ಳುವಿಕೆ ಅಥವಾ ಸಹಾಯದಲ್ಲಿ ತೊಡಗುವುದು.

4. ಸೋಮಾರಿತನ ಮತ್ತು ಆಲಸ್ಯ ಅಥವಾ ಹೊಣೆಗಾರಿಕಾ ಪ್ರಜ್ಞೆ ಮತ್ತು ಕರ್ತವ್ಯ ನಿಷ್ಠೆಯಲ್ಲಿ ಕೊರತೆ.

5. ಸಂಸ್ಥೆಯ ರೂಢಿ ಮತ್ತು ನೀತಿ-ನಿಯಮಗಳ ಪಾಲನೆಯ ಬಗ್ಗೆ ನಿರ್ಲಕ್ಷ್ಯ ಧೋರಣೆ.

ಮೊದಲ ಮತ್ತು ಎರಡನೆಯ ಕಾರಣಗಳಿಗೆ ಸಂಬಂಧಿಸಿ ಹೇಳುವುದಾದರೆ, ಅವು ಯುಕ್ತ ಕಾರಣಗಳೆನ್ನಬಹುದಾಗಿದೆ. ಇಂತಹ ಗೈರು ಹಾಜರಿಯನ್ನು ಎಲ್ಲ ಸಂಸ್ಥೆಗಳೂ ಮನ್ನಿಸುತ್ತವೆ. ಆದರೆ ಕಡೆಗಣಿಸಬಹುದಾದಂತಹ ಸಾಮಾನ್ಯ ಅನಾರೋಗ್ಯ ಅಥವಾ ತಾತ್ಕಾಲಿಕ ಅಗತ್ಯಗಳನ್ನು ಗೈರು ಹಾಜರಿಗೊಳಿಸದಂತಹ ಮತ್ತು ಶಾಲೆಯ ಹಾಜರಿಗೇ ಹೆಚ್ಚು ಮಹತ್ವ ಕಲ್ಪಿಸುವಂತಹ ಸ್ಫೂರ್ತಿಯು ಅಧ್ಯಾಪಕರಲ್ಲಿ ಬೆಳೆದು ಬರಬೇಕಾಗಿದೆ.

ಸಭೆಗಳಿಗೆ ಸಂಬಂಧಿಸಿ ಹೇಳುವುದಾದರೆ, ಅದಕ್ಕೆ ಮೊದಲೇ ದಿನ ನಿಗದಿಯಾಗಿರುತ್ತದೆ ಮತ್ತು ಶಾಲೆಯಲ್ಲಿ ಸಣ್ಣ-ದೊಡ್ಡ ಹಲವು ರಜೆಗಳಿರುತ್ತವೆ. ಹಾಗಾಗಿ ಆ ಸಭೆಗಳನ್ನೆಲ್ಲ ಸುಲಭದಲ್ಲಿ ರಜಾ ಕಾಲಕ್ಕೆ ಮುಂದೂಡಬಹುದಾಗಿದೆ. ಏನಿದ್ದರೂ ಗೈರು ಹಾಜರಿಗೆ ಇದು ಸೂಕ್ತ ಕಾರಣವಾಗದು.

ಇನ್ನೂ ಕೊನೆಯ ಎರಡು ಕಾರಣಗಳು. ಅವು ವಸ್ತುತಃ ತೀರಾ ಮೂಲಭೂತ ಕೆಡುಕುಗಳೆಡೆಗೆ ಬೊಟ್ಟು ಮಾಡುತ್ತವೆ. ಇಂತಹ ಕೊರತೆಗಳನ್ನು ಎಂದಿಗೂ ಸಹಿಸಬಾರದು. ಇಂತಹ ಕೆಟ್ಟ ಗುಣ ಇರುವಂತಹ ಅಧ್ಯಾಪಕರು ತೀವ್ರವಾದ ಸುಧಾರಣೆಗೆ ಅರ್ಹರಾಗಿದ್ದಾರೆ.

ಎಚ್ಚರಿಕೆ ಕೊಟ್ಟೂ ಸುಧಾರಣೆಯಾಗದಿದ್ದರೆ, ಸಂಸ್ಥೆಯ ಹಿತವನ್ನು ದೃಷ್ಟಿಯಲ್ಲಿರಿಸಿ ಅಂತಹವರನ್ನು ವಜಾಗೊಳಿಸುವುದೇ ಉತ್ತಮ.

ವಿದ್ಯಾರ್ಥಿಗಳ ಗೈರು ಹಾಜರಿಗೆ ಹಲವು ಕಾರಣಗಳಿರುತ್ತವೆ.

- ಅನಾರೋಗ್ಯ: ಸಾಮಾನ್ಯವಾಗಿ ಸಣ್ಣ ಮಕ್ಕಳು ಆಗಾಗ ಅನಾರೋಗ್ಯಕ್ಕೆ ತುತ್ತಾಗುತ್ತಾರೆ ಮತ್ತು ಶಾಲೆಗೆ ಗೈರು ಹಾಜರಾಗುತ್ತಾರೆ. ಇದರಿಂದ ಅವರ ಶಿಕ್ಷಣದ ಮೇಲೆ ಬಹಳ ಪ್ರಭಾವವುಂಟಾಗುತ್ತದೆ.
- ಮನೆಯ ನಿಬಿಡತೆ: ವಿಶೇಷವಾಗಿ ಮನೆ ಮಂದಿಯ ಅನಾರೋಗ್ಯ, ಅತಿಥಿಗಳ ಆಗಮನ, ಅಂಗಡಿ ಇತ್ಯಾದಿಗಳಲ್ಲಿ ಸಹಾಯ ಮಾಡಬೇಕಾದ ಅನಿವಾರ್ಯತೆ, ಹೆಣ್ಮಕ್ಕಳಿಗೆ ಸಾಮಾನ್ಯವಾಗಿ ಮನೆಯ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡಬೇಕಾಗಿ ಬರುತ್ತದೆ.
- ಹೆತ್ತವರ ನಿರ್ಲಕ್ಷ್ಯ ಮತ್ತು ಮಕ್ಕಳ ಶಿಕ್ಷಣದ ಬಗ್ಗೆ ಅಲಕ್ಷ್ಯ.
- ಮನೆಯಿಂದ ಶಾಲೆಯು ದೂರವಿರುವುದು ಮತ್ತು ದಾರಿಯಲ್ಲಿ ಕುತೂಹಲಕರ ಘಟನೆಗಳು ಕಾಣುವುದು.
- ಕೆಟ್ಟ ಹವಾಮಾನ, ಮಳೆ ಅಥವಾ ತೀವ್ರತರ ಚಳಿ.
- ಮನೆಗೆಲಸ (Home work) ಮಾಡದಿರುವುದು.
- ಮನೆಯಲ್ಲಿ, ಸಂಬಂಧಿಕರಲ್ಲಿ ಅಥವಾ ನೆರೆಕರೆಯಲ್ಲಿ ಸಭೆಗಳಿರುವುದು.
- ಸಹಪಾಠಿಗಳ ಅಥವಾ ಅಧ್ಯಾಪಕರ ಅಪ್ರಿಯ ಕೃತ್ಯಗಳು.

ಹಾಜರಿ ಪಾಲಿಸುವಂತೆ ಮಾಡುವ ಉಪಾಯಗಳು

- ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮತ್ತು ಪೋಷಕರಿಗೆ ಹಾಜರಿ ಹಾಗೂ ಸಮಯ ಪಾಲನೆಯ ಮಹತ್ವವನ್ನು ಚೆನ್ನಾಗಿ ಮನವರಿಕೆ ಮಾಡಿಸಿ ಕೊಡಬೇಕು. ಅಂತೆಯೇ ಅಂತಹ ತಪ್ಪೆಸಗಿದರೆ ಆಗಲೇ ತಕ್ಕ ಕ್ರಮ ಕೈಗೊಳ್ಳಬೇಕು.
- ಸಂಸ್ಥೆಯ ಹೊಣೆಗಾರರು ಹಾಜರಿ ಮತ್ತು ಸಮಯ ಪಾಲನೆಯ ನಿಟ್ಟಿನಲ್ಲಿ ಉನ್ನತ ಮಾದರಿಯನ್ನು ಪ್ರದರ್ಶಿಸಬೇಕು.
- ಸಮಯಕ್ಕೆ ಸರಿಯಾಗಿ ಗಂಟೆ ಬಾರಿಸುವ ವ್ಯವಸ್ಥೆ ಮಾಡಬೇಕು. ಇದು ವಿದ್ಯಾರ್ಥಿಗಳನ್ನು ಎಚ್ಚರಿಸಲಿಕ್ಕಾಗಿದೆ. ಗಂಟೆ ಬಾರಿಸುವುದಕ್ಕೆ ಮುಂಚೆಯೇ ತಲುಪುವ ಅಭ್ಯಾಸ ಅಧ್ಯಾಪಕರಿಗಿರಬೇಕು.
- ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೀರ್ವರ ಹಾಜರಿಯ ದಾಖಲೆಯನ್ನಿರಿಸುವ ಪುಸ್ತಕವಿರಬೇಕು. ಅಧ್ಯಾಪಕರು ಹಾಜರಿ ಪುಸ್ತಕದಲ್ಲಿ ಸಹಿ ಹಾಕಿ, ತಲುಪಿದ ಸಮಯವನ್ನು ಬರೆಯಬೇಕು.

- ತರಗತಿಯ ಹಾಜರಿಗೆ ಮುಂಚೆ ಸಾಮೂಹಿಕ ಹಾಜರಿಯ ವ್ಯವಸ್ಥೆ ಮಾಡಬೇಕು. ಅದರಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಹಾಜರಿಯು ಕಡ್ಡಾಯವಾಗಿರಬೇಕು. ವಿದ್ಯಾರ್ಥಿಗಳನ್ನು ತರಗತಿಯ ಆಧಾರದಲ್ಲಿ ಎತ್ತರಕ್ಕೆ ತಕ್ಕಂತೆ ನಿಲ್ಲಿಸಬೇಕು. ಇಲ್ಲಿ ಹಾಜರಿಯನ್ನು ರಿಜಿಸ್ಟರ್‌ನಲ್ಲಿ ನಮೂದಿಸಬೇಕಾದ ಅಗತ್ಯ ಇಲ್ಲ. ಕ್ಲಾಸ್ ಟೀಚರ್‌ಗಳು ಸ್ಥೂಲ ಅವಲೋಕನ ನಡೆಸಿದರೆ ಸಾಕು. ಆಲಸ್ಯ ಅಥವಾ ನಿರ್ಲಕ್ಷ್ಯ ವಹಿಸುವ ಮತ್ತು ತಡವಾಗಿ ಬರುವವರ ಸುಧಾರಣೆಗೆ ಇದು ಅತ್ಯುತ್ತಮ ವಿಧಾನವಾಗಿದೆ. ಪ್ರತಿಯೋರ್ವನೂ ಸಾಮೂಹಿಕ ಒತ್ತಡವನ್ನು ಅನುಭವಿಸುತ್ತಾನೆ ಮತ್ತು ತನ್ನ ಕೊರತೆಯ ಬಗ್ಗೆ ವಿಚಾರಿಸದೆಯೇ ಲಜ್ಜಿತನಾಗುತ್ತಾನೆ. ಹೀಗೆ ಮುಂದಕ್ಕೆ ಜಾಗರೂಕತೆ ಪಾಲಿಸುತ್ತಾನೆ.
- ಮನವಿ ಮತ್ತು ಅನುಮತಿ ಪತ್ರದ ಮುಖೇನ ಹೊರ ಹೋಗುವ ಅಭ್ಯಾಸ ಮಾಡಸಬೇಕು. ಮನವಿ ಅಥವಾ ಅನುಮತಿಯ ಹೊರತು ಗೈರು ಹಾಜರಿ ಅಥವಾ ತಡ ಹಾಜರಿಯ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕು.
- ಹಾಜರಿಯಲ್ಲಿ ಮುಂಚೂಣಿಯಲ್ಲಿರುವ ವಿದ್ಯಾರ್ಥಿಗಳನ್ನು ಅಥವಾ ತರಗತಿಯನ್ನು ಪ್ರೋತ್ಸಾಹಿಸಬೇಕು. ಅದಕ್ಕಾಗಿ ಅಂಕ, ಸನದು, ಸ್ಮರಣಿಕೆ ಅಥವಾ ಬಹುಮಾನವನ್ನಿರಿಸಬಹುದಾಗಿದೆ. ಅದೇ ರೀತಿ ಸೂಕ್ತ ಕಾರಣವಿಲ್ಲದೆ ಗೈರು ಹಾಜರಾಗುವುದಕ್ಕೆ ಶಿಕ್ಷೆ, ದಂಡ ವಿಧಿಸಬಹುದು ಮತ್ತು ಪರೀಕ್ಷೆಗೆ ಹಾಜರಾಗದಂತೆ ಅಥವಾ ಫಲಿತಾಂಶವನ್ನು ತಡೆಹಿಡಿಯಬಹುದಾಗಿದೆ.
- ಕಾಲಕಾಲಕ್ಕೆ ವಿದ್ಯಾರ್ಥಿಗಳ ವೈದ್ಯಕೀಯ ತಪಾಸಣೆ ಮಾಡಿಸಬೇಕು. ಈ ಮೂಲಕ ಅವರ ಆರೋಗ್ಯ ಸ್ಥಿತಿಯ ಬಗ್ಗೆ ಅವರ ಹೆತ್ತವರ ಗಮನ ಸೆಳೆಯುತ್ತಿರಬಹುದಾಗಿದೆ.

ಪುಕ್ಕಲುತನದ ಮಕ್ಕಳು

ಕೆಲವು ಮಕ್ಕಳು ಶಿಕ್ಷಣದಿಂದಲೇ ದೂರ ಓಡುತ್ತಾರೆ. ಇದಂತೂ ಅತಿ ದೊಡ್ಡ ದೌರ್ಭಾಗ್ಯವಾಗಿದೆ. ಶಿಕ್ಷಣದಿಂದ ದೂರ ಓಡುವುದರ ಹಿಂದೆ ಈ ಕೆಳಗಿನ ಕಾರಣಗಳಿರುತ್ತವೆ-

- ಅಧ್ಯಾಪಕರ ಒರಟುತನ, ಉಪೇಕ್ಷೆ ಅಥವಾ ದುರ್ವರ್ತನೆ. ಅಧ್ಯಾಪಕನು ಸಹೃದಯಿಯಾಗಿದ್ದು ಮಕ್ಕಳ ವ್ಯಕ್ತಿತ್ವವನ್ನು ಗೌರವಿಸಿದರೆ, ಮಕ್ಕಳು ವಿದ್ಯಾರ್ಜನೆಯ ಹಾದಿಯಲ್ಲಿ ಎದುರಾಗುವ ಅನೇಕ ಸಂಕಷ್ಟಗಳನ್ನು ಸಂತೋಷದಿಂದ ಸಹಿಸುವರು. ಆದರೆ ಅಧ್ಯಾಪಕನ ವರ್ತನೆ ಉತ್ತಮವಿಲ್ಲದಿದ್ದರೆ, ಆ ದಾರಿಯನ್ನು ಬಹಳ ತ್ರಾಸದಿಂದಲೇ ಕ್ರಮಿಸುವರು.
- ಮಕ್ಕಳ ಮುಂದೆ ಅಧ್ಯಾಪಕರ ಅಥವಾ ಸಂಸ್ಥೆಯ ಕುಂದು ಕೊರತೆಗಳನ್ನು ಹೇಳುವುದು.
- ಶಾಲೆಯ ಅಸ್ವಾರಸ್ಯಕರ ಪರಿಸರ. ಮಕ್ಕಳಿಗೆ ಆಟ-ವಿನೋದ, ಸೃಜನಾತ್ಮಕ ಹವ್ಯಾಸ ಮತ್ತು ಶೈಕ್ಷಣಿಕ ಪ್ರವಾಸಗಳಿಗೆ ಅವಕಾಶವಿಲ್ಲದಿರುವುದು.

- ಸಹಪಾಠಿಗಳ ಅನುಚಿತ ವರ್ತನೆ. ಹೊಡೆತ, ಕೀಟಲೆ, ಅಣಕ, ಅವಮಾನ ಇತ್ಯಾದಿ. ಈ ವರ್ತನೆಗಳು ದೈಹಿಕ ಮತ್ತು ನೈತಿಕ ಕೊರತೆಯ ಕಾರಣದಿಂದಾಗಿರಬಹುದು ಅಥವಾ ಹೆತ್ತವರ ದಾರಿದ್ರ್ಯ ಮತ್ತು ಸಂಪನ್ಮೂಲಗಳ ಕೊರತೆಯಿಂದಾಗಿರಬಹುದು.
- ಮನೆ ಅಥವಾ ನೆರೆಕರೆಯಲ್ಲಿ ಸದಾ ಆಟ-ವಿನೋದ, ಪಟ್ಟಾಂಗ ಮತ್ತು ಸುತ್ತಾಟದಲ್ಲಿಯೇ ತಲ್ಲೀನರಾಗಿರುವಂತಹ ಗೆಳೆಯರ ಉಪಸ್ಥಿತಿ.
- ಅನಾರೋಗ್ಯ ಅಥವಾ ದೀರ್ಘ ಗೈರುಹಾಜರಿಯಿಂದಾಗಿ ತರಗತಿಯಲ್ಲಿ ಹಿಂದುಳಿಯುವುದು.
- ಬೌದ್ಧಿಕ ಅಥವಾ ದೈಹಿಕ ದೌರ್ಬಲ್ಯದ ಕಾರಣ ತರಗತಿಯಲ್ಲಿ ಏನೂ ನಡೆಯದಿರುವುದು.
- ಮಕ್ಕಳ ಶಿಕ್ಷಣ-ತರಬೇತಿಯ ಕುರಿತು ಪೋಷಕರ ನಿರ್ಲಕ್ಷ್ಯ ಧೋರಣೆ.
- ಬುದ್ಧಿವಂತ ಮಕ್ಕಳಿಗೆ ಅವರ ವೇಗಕ್ಕೆ ತಕ್ಕಂತೆ ತರಗತಿಯಲ್ಲಿ ಕೆಲಸ ದೊರೆಯದಿರುವುದು.
- ಅಲಕ್ಷ್ಯ ಅಥವಾ ಮನೆಯ ನಿಬಿಡತೆ ಇತ್ಯಾದಿಗಳಿಂದಾಗಿ ಹೋಮ್‌ವರ್ಕ್ ಮಾಡಲು ಅಥವಾ ಓದಿದ ಪಾಠವನ್ನು ಪುನರವಲೋಕಿಸುವಲ್ಲಿ ಪ್ರಮಾದವುಂಟಾಗುವುದು.

ಸರಿಯಾದ ಕಾರಣಗಳನ್ನು ಕಂಡುಹಿಡಿದು, ಸುಧಾರಣೆಗೆ ಸಾಧ್ಯಂತ ಪ್ರಯತ್ನಿಸಬೇಕು. ಮಗುವೊಂದು ಅಧ್ಯಾಪಕರ ಅಥವಾ ಸಂಸ್ಥೆಯ ಪ್ರಮಾದ-ದೌರ್ಬಲ್ಯದ ಕಾರಣವಾಗಿ ಶಿಕ್ಷಣ-ತರಬೇತಿಯಿಂದ ದೂರ ಓಡಿದರೆ ಅದೆಷ್ಟು ದೊಡ್ಡ ವಿಪತ್ತಾದೀತು!

ಹಿಂದುಳಿಯುವಿಕೆ

ಪ್ರತಿಯೊಂದು ತರಗತಿಯಲ್ಲಿ, ತರಗತಿಯ ಜತೆಗೇ ನಡೆಯಲಾಗದ ಕೆಲವು ಮಕ್ಕಳು ಇರುತ್ತಾರೆ. ಇದನ್ನು ಹಿಂದುಳಿಯುವಿಕೆ ಎನ್ನಲಾಗುತ್ತದೆ. ಬಹುತೇಕ ಎಲ್ಲ ಮಕ್ಕಳೂ ತಾತ್ಕಾಲಿಕವಾಗಿ ಯಾವುದಾದರೊಂದು ವಿಷಯದಲ್ಲಿ ಸೋಮಾರಿತನ ತೋರಿಸುತ್ತಾರೆ. ಇದು ಸ್ವಾಭಾವಿಕ. ಈ ಬಗ್ಗೆ ಹೆಚ್ಚು ಕಳವಳ ಪಡಬೇಕಾಗಿಲ್ಲ, ಇದು ಸಣ್ಣ ಮಟ್ಟಿನ ಗಮನದಿಂದ ತ್ವರಿತವಾಗಿ ಅಥವಾ ತಡವಾಗಿಯಾದರೂ ಸ್ವತಃ ದೂರವಾಗುತ್ತದೆ. ಜತೆಗೆ ಮಗುವನ್ನು ಆದರ ಅಧ್ಯಾಪಕರು, ಸಹಪಾಠಿಗಳು ಅಥವಾ ಮನೆಮಂದಿಯ ಮೂದಲಿಕೆ ಮತ್ತು ಅನುಚಿತ ವರ್ತನೆ ಅಥವಾ ಬೇರಾವುದಾದರೂ ಕಾರಣದಿಂದಾಗಿ ಕೀಳರಿಮೆ ಅಥವಾ ಹತಾಶೆಗೆ ತುತ್ತಾಗುವುದರಿಂದ ರಕ್ಷಿಸಲು ಸಾಧ್ಯಂತ ಪ್ರಯತ್ನಿಸಬೇಕು. ಅದೇ ವೇಳೆ ಕೆಲವು ಮಕ್ಕಳು ಸ್ವಭಾವತಃ ಮಂದಬುದ್ಧಿ ಮತ್ತು ಹೇಡಿಗಳಾಗಿರುತ್ತಾರೆ. ಶೈಕ್ಷಣಿಕ ಪಠ್ಯಗಳಲ್ಲಿ ಇತರ ಮಕ್ಕಳಂತೆ ಅವರು ಮುಂದುವರಿಯಲಾರರು. ಇನ್ನು ಕೆಲವು ಮಕ್ಕಳು ಬೌದ್ಧಿಕವಾಗಿ ಉತ್ತಮವಾಗಿದ್ದೂ ಕೆಲವು ಪಠ್ಯಗಳಲ್ಲಿ ಹಿಂದುಳಿದು ಬಿಡುತ್ತಾರೆ. ಇಂತಹ ಮಕ್ಕಳು ನಮ್ಮ ವಿಶೇಷ ಗಮನಕ್ಕೆ ಅರ್ಹರಾಗಿರುತ್ತಾರೆ.

ಮಂದ ಬುದ್ಧಿಯ ಮತ್ತು ಸೋಮಾರಿ ಮಕ್ಕಳ ಹಿಂದುಳಿಯುವಿಕೆಯೇನಿದ್ದರೂ ಅವರ ಬೌದ್ಧಿಕ ದೌರ್ಬಲ್ಯ ಮತ್ತು ಅರಿವಿನ ಕೊರತೆಯಿಂದಾಗಿರುತ್ತದೆ. ಅವರನ್ನು ಅವರದೇ ವೇಗದಲ್ಲಿ ನಡೆಸಿಕೊಂಡು ಹೋಗುವುದು ಉತ್ತಮ. ಅದಕ್ಕಾಗಿ ಪಠ್ಯ, ಶಿಕ್ಷಣ ವಿಧಾನ ಮತ್ತು ಸಮಯ ಪಾಲನೆ ಎಲ್ಲದರಲ್ಲೂ ರಿಯಾಯಿತಿಯನ್ನಿರಿಸಬೇಕಾಗುತ್ತದೆ. ಇನ್ನು ಬೌದ್ಧಿಕವಾಗಿ ಸರಿ ಇದ್ದೂ ಯಾವುದೋ ಕಾರಣಕ್ಕಾಗಿ ಹಿಂದುಳಿದಿರುವ ಮಕ್ಕಳು. ಮೊತ್ತಮೊದಲು ಅದರ ಕಾರಣಗಳನ್ನು ತಿಳಿಯ ಬೇಕಾಗಿದೆ. ಅದನ್ನು ಅನುಸರಿಸಿಯೇ ಅವರ ಹಿಂದುಳಿಯುವಿಕೆಯನ್ನು ದೂರ ಮಾಡಲು ಪ್ರಯತ್ನಿಸಬೇಕು.

ಹಿಂದುಳಿಯುವಿಕೆಗೆ ಕಾರಣಗಳು

ಹಿಂದುಳಿಯುವಿಕೆಗೆ ಸಾಮಾನ್ಯವಾಗಿ ಈ ಕೆಳಗಿನ ಕಾರಣಗಳಿರುತ್ತವೆ:

- ಮಕ್ಕಳು ಸರಿಯಾಗಿ ಶಾಲೆಗೆ ಹೋಗದಿರುವುದು. ಗೈರು ಹಾಜರಿ, ತಡಹಾಜರಿ ಅಥವಾ ಗಂಟೆಬಾರಿಸುತ್ತಲೇ ಓಡಿಹೋಗುವ ಅಭ್ಯಾಸ. ಅದಕ್ಕೆ ಕಾರಣ ಏನೇ ಇದ್ದರೂ ಸರಿಯೆ.
- ಅಧ್ಯಾಪಕನ ಅನುಚಿತ ವರ್ತನೆ, ಅಪೂರ್ಣ ಶಿಕ್ಷಣ ವಿಧಾನ ಮತ್ತು ಶೈಕ್ಷಣಿಕ ಸಾಮಗ್ರಿಗಳ ಕೊರತೆಯ ಕಾರಣವಾಗಿ ಯಾವುದಾದರೂ ಪಠ್ಯ ವಿಷಯದಲ್ಲಿ ಮಗುವಿಗೆ ದ್ವೇಷ ಅಥವಾ ಹತಾಶೆಯುಂಟಾಗುವುದು.
- ಮಕ್ಕಳ ಪ್ರಾಯ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ಪರಿಗಣಿಸದೆ, ಅವರಿಂದ ಬಹಳಷ್ಟು ನಿರೀಕ್ಷೆಯನ್ನಿರಿಸುವುದು ಹಾಗೂ ಅವರ ಶಕ್ತಿಗೆ ಮೀರಿದ ಕೆಲಸದ ಹೊರೆಯನ್ನು ನೀಡುವುದು ಅಥವಾ ಯಾವುದಾದರೂ ಪಾಠವನ್ನು ಬೋಧಿಸಲು ತ್ವರೆ ಮಾಡುವುದು ಅಥವಾ ಸಮಯ ಉಳಿಸಲಿಕ್ಕಾಗಿ ಮಗುವಿನ ಸಾಮರ್ಥ್ಯಕ್ಕಿಂತ ಮೇಲಿನ ತರಗತಿಯಲ್ಲಿ ಸೇರಿಸುವುದು.
- ತೇರ್ಗಡೆಗೊಳಿಸುವಲ್ಲಿ ಬಹಳ ತ್ವರೆ ಮಾಡುವುದು ಅಥವಾ ಬಹಳ ತಡ ಮಾಡುವುದು.
- ಪೋಷಕರ ವರ್ಗಾವಣೆ, ಆರ್ಥಿಕ ಅಸ್ಥಿರತೆ ಅಥವಾ ಬೇರಾವುದಾದರೂ ಕಾರಣಕ್ಕೆ ಒಂದೇ ಶಾಲೆಯಲ್ಲಿ ಕಲಿಸುವ ಬದಲು ಆಗಾಗ ಶಾಲೆ ಬದಲಿಸುತ್ತ ಇರುವುದು.
- ಶಾಲೆ ಮತ್ತು ಮನೆಯ ನಡುವೆ ಸಂವಹನ ಮತ್ತು ಸಹಕಾರದ ಕೊರತೆ.
- ತರಗತಿ ಅಥವಾ ಶಾಲೆಯ ಅಹಿತಕರ ಪರಿಸರ. ಅದರಿಂದಾಗಿ ಶಾಲೆಯಲ್ಲಿ ಇರಲು ಮನಸ್ಸು ಬಾರದೆ ಇರುವುದು.
- ಮನೆಯ ಅನನುಕೂಲಕರ ಪರಿಸರ. ಉದಾ: ಮಾತಾಪಿತರ ಸಂಬಂಧದಲ್ಲಿ ಬಿರುಕು, ಅನಾರೋಗ್ಯ, ಅಜ್ಞಾನ, ಚಿಂತೆ-ಕಳವಳ, ದಾರಿದ್ರ್ಯ, ನಿರುದ್ಯೋಗ, ತಂದೆಯ ಅನುಪಸ್ಥಿತಿ ಅಥವಾ ಸಂಪನ್ಮೂಲಗಳ ಕೊರತೆಯಿಂದಾಗಿ ಮಕ್ಕಳ ಶಿಕ್ಷಣ-ತರಬೇತಿಯ

ಬಗ್ಗೆ ಗಮನವೀಯಲು ಆಗದಿರುವುದು ಅಥವಾ ಮಕ್ಕಳ ಜತೆ ಉತ್ತಮ ವ್ಯವಹಾರವನ್ನಿರಿಸದಿರುವುದು.

- ಕೆಟ್ಟ ಆರೋಗ್ಯದ ಕಾರಣ ಮಕ್ಕಳು ಶಿಕ್ಷಣದ ಬದಲು ಇತರ ಚಟುವಟಿಕೆಗಳಲ್ಲಿ ತಮ್ಮ ಬುದ್ಧಿ ಮತ್ತು ಶಕ್ತಿಯನ್ನು ವ್ಯಯಿಸುವುದು.
- ಮಗುವಿನ ಶ್ರವಣ ಅಥವಾ ದೃಕ್ಶಕ್ತಿಯಲ್ಲಿ ಕೊರತೆ ಇರುವುದು.

ಹಿಂದುಳಿಯುವಿಕೆಗೆ ಚಿಕಿತ್ಸೆ

ಹಿಂದುಳಿಯುವಿಕೆ ಎಂಬುದು ಒಂದು ಮಾರಕ ರೋಗದಂತೆ. ಅದಕ್ಕೆ ಸೂಕ್ತ ಸಮಯದಲ್ಲಿ ಚಿಕಿತ್ಸೆಯಾಗದಿದ್ದರೆ ಮಕ್ಕಳು ಶಿಕ್ಷಣದಿಂದ ವಂಚಿತವಾಗುತ್ತಾರೆ ಮತ್ತು ಅವರ ಭವಿಷ್ಯವು ಅಂಧಕಾರಮಯವಾಗುತ್ತದೆ. ಹೆತ್ತವರು ಮತ್ತು ಅಧ್ಯಾಪಕರ ಪ್ರಮಾದಗಳಿಂದಾಗಿ ಕೆಲವೊಮ್ಮೆ ಉತ್ತಮ ಮಕ್ಕಳೂ ಈ ಮಾರಕ ರೋಗಕ್ಕೆ ತುತ್ತಾಗಿ ಕ್ರಮೇಣ ತಮ್ಮನ್ನು ತಾವೇ ನಾಶಪಡಿಸುತ್ತಾರೆ. ಮಕ್ಕಳನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸುತ್ತ ಇರಬೇಕಾಗಿದೆ ಮತ್ತು ಹಿಂದುಳಿಯುವಿಕೆಯ ಲಕ್ಷಣ ಕಾಣುತ್ತಲೇ ಸರಿಯಾದ ಕಾರಣವನ್ನು ಪತ್ತೆಹಚ್ಚಿ, ಅದನ್ನು ದೂರೀಕರಿಸಲು ಪ್ರಯತ್ನಿಸಬೇಕು. ಪೋಷಕರ ಅಥವಾ ಅಧ್ಯಾಪಕರ ಅನುಚಿತ ವರ್ತನೆಯು ಅದಕ್ಕೆ ಕಾರಣವೆಂದಾದರೆ, ತಮ್ಮ ವರ್ತನೆಯನ್ನು ಸುಧಾರಿಸಬೇಕು. ಮನೆ ಅಥವಾ ಶಾಲೆಯ ಪರಿಸರವು ಅಹಿತಕರವಾಗಿದ್ದರೆ, ಅದನ್ನು ಹಿತಕರಗೊಳಿಸಲು ಪ್ರಯತ್ನಿಸಬೇಕು. ಶ್ರವಣ ಅಥವಾ ದೃಷ್ಟಿದೋಷವಿದ್ದರೆ, ಅದಕ್ಕೆ ಚಿಕಿತ್ಸೆ ಕೊಡಿಸಬೇಕು. ಹೀಗೆ ಕಾರಣ ಏನೇ ಇದ್ದರೂ ಅದನ್ನು ದೂರೀಕರಿಸಲು ಆದಷ್ಟು ಶೀಘ್ರ ಪ್ರಯತ್ನಿಸಬೇಕು. ಹಾಗಾದಾಗ, ಸೂಕ್ತ ಸಮಯದಲ್ಲಿ ಉದ್ದೇಶ ಕೈಗೂಡುವುದು. ಆದರೆ ಒಂದು ವೇಳೆ ಪ್ರಸ್ತುತ ರೋಗವು ಹಳತಾಗಿದ್ದರೆ, ಈ ಕೆಳಗಿನ ಉಪಾಯಗಳನ್ನು ಅನುಸರಿಸಬೇಕಾಗಿದೆ.

- ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪ್ರತ್ಯೇಕ ಗುಂಪನ್ನು ರಚಿಸಿ, ಅವರನ್ನು ಅವರ ವೇಗದಂತೆ ನಡೆಸಲಿಕ್ಕಾಗಿ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಬೇಕು. ಅಂತಹ ಮಕ್ಕಳಿಗೆ ಪ್ರತ್ಯೇಕ ತರಗತಿ ಮಾಡಲು ಸಾಧ್ಯವಾದರೆ, ಅದು ಇನ್ನಷ್ಟು ಉತ್ತಮ. ಅಲ್ಲದಿದ್ದರೆ ಇತರ ಮಕ್ಕಳಿಗಿಂತ ಹೆಚ್ಚು ಗಮನ ಈ ಮಕ್ಕಳ ಮೇಲೆ ನೀಡಬೇಕು ಹಾಗೂ ಸಾಧ್ಯವಾದಷ್ಟರ ಮಟ್ಟಿಗೆ ವೈಯಕ್ತಿಕ ಸಹಾಯ-ಸಹಕಾರ ನೀಡುವ ಮೂಲಕ ಅವರನ್ನು ಜತೆಯಲ್ಲಿ ನಡೆಸಲು ಪ್ರಯತ್ನಿಸಬೇಕು.
- ಅವರಿಗೆ ಪುನರಾವರ್ತಿಸಲು ಹೆಚ್ಚೆಚ್ಚು ಅವಕಾಶ ಕಲ್ಪಿಸಬೇಕು. ಅಲ್ಲದೆ ಶಾಲಾ ಸಮಯದ ಹೊರತಾಗಿಯೂ ಅವರಿಗಾಗಿ ಕೊಂಚ ಸಮಯ ವ್ಯಯಿಸಬೇಕು.
- ಅವರಿಗೆ ಸಣ್ಣ ಮಟ್ಟಿನ ಪ್ರಯತ್ನದಿಂದ ಪರಿಹರಿಸಬಹುದಾದಂತಹ ಪ್ರಶ್ನೆಗಳನ್ನು ನೀಡಬೇಕು. ಈ ಮೂಲಕ ಅವರಿಗೆ ಪ್ರೋತ್ಸಾಹವೂ ದೊರೆಯುವುದು ಮತ್ತು ಅವರು ಹೆಚ್ಚು ಆಸಕ್ತಿ ಹಾಗೂ ಶ್ರದ್ಧೆಯಿಂದ ಕೆಲಸ ಮಾಡುವರು.

- ಪಠ್ಯದ ವಿವರಣೆಗೆ ಹೆಚ್ಚೆಚ್ಚು ಶೈಕ್ಷಣಿಕ ಸಾಮಗ್ರಿ, ನಕ್ಷೆ, ಮಾದರಿ, ಚಾರ್ಟ್ ಇತ್ಯಾದಿಗಳನ್ನು ಬಳಸಬೇಕು. ಹಾಗೆಯೇ ಸ್ವತಃ ಮಾಡಿ ಕಲಿಯಲು ಹೆಚ್ಚೆಚ್ಚು ಅವಕಾಶವನ್ನು ನೀಡಬೇಕು.
- ಪಠ್ಯೇತರ ಚಟುವಟಿಕೆ ಮತ್ತು ಹವ್ಯಾಸಗಳು, ಆರ್ಟ್-ಕ್ರಾಫ್ ಮತ್ತಿತರ ಕಾರ್ಯಗಳಲ್ಲಿ ಇಂತಹ ಮಕ್ಕಳು ಸಾಮಾನ್ಯವಾಗಿ ಹೆಚ್ಚು ಆಸಕ್ತಿ ಹಾಗೂ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ಅಂತಹವುಗಳಲ್ಲಿ ಅವರನ್ನು ಪ್ರೋತ್ಸಾಹಿಸುತ್ತಾ, ಅವರಲ್ಲಿ ಆತ್ಮವಿಶ್ವಾಸವನ್ನುಂಟು ಮಾಡಬೇಕು. ಇದರಿಂದಾಗಿ ಅವರಲ್ಲಿರುವ ಕೀಳರಿಮೆ ಮತ್ತು ಹತಾಶ ಭಾವನೆಯು ದೂರವಾಗ ತೊಡಗುತ್ತದೆ. ಹೀಗೆ ಶಿಕ್ಷಣದ ಬಗೆಗಿರುವ ಅವರ ದ್ವೇಷವು ಕ್ರಮೇಣ ದೂರವಾಗುವುದು. ಅಂತಹ ಪಾಠಗಳನ್ನು ಹೆಚ್ಚು ಪ್ರೀತಿ-ಅನುನಯದಿಂದ ಕಲಿಸುವ ಅಧ್ಯಾಪಕರಿಗೆ ನೀಡಿದರೆ ಇನ್ನೂ ಉತ್ತಮವಾದೀತು.
- ಇಂತಹ ಮಕ್ಕಳಿಗೆ ಓದಿಸುವ ಮತ್ತು ಕಲಿಸುವ ವಿಷಯಗಳ ಅಗತ್ಯ ಹಾಗೂ ಪ್ರಯೋಜನವನ್ನು ಅವರಿಗೆ ಸ್ಪಷ್ಟವಾಗಿ ಮನವರಿಕೆ ಮಾಡಿಸಿ ಕೊಡಬೇಕು.

ಒಟ್ಟಿನಲ್ಲಿ ಕಲಿಕೆಯಲ್ಲಿ ಹಿಂದುಳಿಯುವ ಮಕ್ಕಳು ನಮ್ಮ ಹೆಚ್ಚು ಕಾಳಜಿಗೆ ಅರ್ಹರಾಗಿದ್ದಾರೆ. ಅವರನ್ನು ಹತಾಶೆ ಮತ್ತು ವೈಫಲ್ಯದಿಂದ ರಕ್ಷಿಸಲು ಸಾಧ್ಯವಿರುವ ಎಲ್ಲ ಉಪಾಯಗಳನ್ನು ಪ್ರಯೋಗಿಸಬೇಕು ಮತ್ತು ಹಿಂದುಳಿಕೆಯನ್ನು ದೂರೀಕರಿಸಲು ನಮ್ಮಿಂದಾದಷ್ಟು ಪ್ರಯತ್ನಿಸಬೇಕಾಗಿದೆ. ಆದಷ್ಟು ನಾವು ಅದಕ್ಕೆ ಕಾರಣರಾಗದಂತೆ ನೋಡಿಕೊಳ್ಳಬೇಕು.

ದಣಿವು

ಹೆಚ್ಚು ಹೊತ್ತು ಓದು-ಬರೆಹ ಅಥವಾ ದೈಹಿಕ ಪರಿಶ್ರಮದಲ್ಲಿ ತೊಡಗಿಕೊಳ್ಳುವಾಗ ದೇಹದಲ್ಲಿ ಸುಸ್ತು ಕಾಣಿಸಿಕೊಳ್ಳತೊಡಗುತ್ತದೆ ಮತ್ತು ಕ್ರಮೇಣ ಮೆದುಳು ಸರಿಯಾಗಿ ಕೆಲಸ ಮಾಡುವುದಿಲ್ಲ, ದೇಹದಲ್ಲಿಯೂ ಕೆಲಸ ಮಾಡುವ ಶಕ್ತಿ ಉಳಿಯುವುದಿಲ್ಲ. ಇದನ್ನು ದಣಿವು ಎನ್ನಲಾಗುತ್ತದೆ. ದಣಿವು ಎಂಬುದು ಒಂದು ಎಚ್ಚರಿಕೆಯಾಗಿದೆ. ಅಂದರೆ ಕೊಂಚ ವಿರಮಿಸದೆ ಇನ್ನಷ್ಟು ಕೆಲಸ ಮಾಡಬಾರದು. ಅನ್ಯಥಾ ದೇಹಕ್ಕೆ ಬಹಳ ತೊಂದರೆಯುಂಟಾಗುತ್ತದೆ.

ದಣಿವಿಗೆ ಕಾರಣಗಳು

ಕೆಲಸ ಮಾಡುವಾಗ ಶಕ್ತಿಯು ವ್ಯಯವಾಗುತ್ತದೆ. ಈ ಶಕ್ತಿಯು ದೇಹದ ಕೆಲವು ಅಂಗಾಂಶಗಳು ಉರಿಯುವ ಮೂಲಕ ಉತ್ಪತ್ತಿಯಾಗುತ್ತದೆ. ಈ ಅಂಗಾಂಶಗಳನ್ನು ಉರಿಸಿ ಅವುಗಳನ್ನು ಶಕ್ತಿಯ ರೂಪದಲ್ಲಿ ಮಾರ್ಪಡಿಸುವ ಕಾರ್ಯವನ್ನು ರಕ್ತದಲ್ಲಿ ಸೇರಿರುವ ಆಮ್ಲಜನಕವು ವಹಿಸಿಕೊಳ್ಳುತ್ತದೆ.

ಹಾಗಾಗಿ ನಾವು ಬಹಳ ಹೊತ್ತಿನ ತನಕ ಕೆಲಸ ಮಾಡುವಾಗ...

- ಶಕ್ತಿಯಾಗಿ ಪರಿವರ್ತಿತಗೊಳ್ಳುವ ಅಂಗಾಂಶಗಳು ದಹನಗೊಳ್ಳುತ್ತವೆ.
- ರಕ್ತದಲ್ಲಿ ಸೇರಿರುವ ಆಮ್ಲಜನಕದ ಅಂಶವು ಕಡಿಮೆಯಾಗುತ್ತದೆ. ಇನ್ನಷ್ಟು ಶಕ್ತಿ ಉತ್ಪಾದಿಸಲು ಆಗತ್ಯಾನುಸಾರ ಆಮ್ಲಜನಕವು ದೊರೆಯುವುದಿಲ್ಲ.
- ದಹಿಸಲ್ಪಟ್ಟ ವಿಷಯುಕ್ತ ತ್ಯಾಜ್ಯಾಂಶವು ರಕ್ತದಲ್ಲಿ ಸೇರಿ ಇಡೀ ದೇಹಕ್ಕೆ ಹರಡುತ್ತದೆ. ಹೀಗಾಗಿ ದೇಹದೊಂದಿಗೆ ಮೆದುಳು ಕೂಡ ಪ್ರಭಾವಿತಗೊಳ್ಳುತ್ತದೆ ಮತ್ತು ಈ ತ್ಯಾಜ್ಯವು ಶೇಖರಗೊಂಡ ಸಂದುಗಳಲ್ಲಿ ನೋವುಂಟಾಗ ತೊಡಗುತ್ತದೆ.

ಇದನ್ನು ನಿವಾರಿಸದೆ ಇನ್ನಷ್ಟು ಕೆಲಸ ಮಾಡುವುದು ದುಸ್ತರ ಎಂಬುದು ಸ್ಪಷ್ಟ. ಆದರೆ ದಣಿವಿಗೆ ಹೆದರಿ ಹೆಚ್ಚು ಪರಿಶ್ರಮ ಪಡುವುದರಿಂದ ದೂರವುಳಿಯಬೇಕೆಂದು ಇದರ ಅರ್ಥ ಖಂಡಿತ ಅಲ್ಲ. ದಣಿವಿಗೆ ಬಹಳ ಪ್ರಾಮುಖ್ಯತೆ ಮತ್ತು ಉಪಯೋಗಗಳಿವೆ. ಮಕ್ಕಳು ಪರಿಶ್ರಮ ಪಟ್ಟಷ್ಟೂ ಅವರಿಗೆ ಹಸಿವಾಗುತ್ತದೆ, ಆಹಾರ ಚೆನ್ನಾಗಿ ಪಚನವಾಗುತ್ತದೆ, ಗಾಢ ನಿದ್ರೆಯೂ ಆವರಿಸುತ್ತದೆ ಮತ್ತು ಶಕ್ತಿ ಉತ್ಪಾದನೆಗೆ ದಹಿಸಲ್ಪಟ್ಟ ಅಂಗಾಂಶಗಳ ಜಾಗದಲ್ಲಿ ಹೊಸ ಅಂಗಾಂಶಗಳು ಹುಟ್ಟಿಕೊಳ್ಳುತ್ತವೆ. ಅವು ಹಿಂದಿಗಿಂತ ಹೆಚ್ಚು ಶಕ್ತಿಯುತವಾಗಿರುತ್ತವೆ ಮತ್ತು ಬೆಳವಣಿಗೆಯಲ್ಲಿ ಸಹಕಾರಿಯೂ ಆಗುತ್ತವೆ.

ದಣಿವಿನ ವಿಧಗಳು

ದಣಿವು ಎರಡು ರೀತಿಯದ್ದಾಗಿರುತ್ತದೆ. (1) ಮಾನಸಿಕ ಮತ್ತು (2) ದೈಹಿಕ.

ಬುದ್ಧಿಗೆ ಹೆಚ್ಚು ಕೆಲಸ ಕೊಟ್ಟರೆ ಮೆದುಳು ದಣಿಯುತ್ತದೆ ಮತ್ತು ಮಾನಸಿಕ ದಣಿವು ಉಂಟಾಗುತ್ತದೆ. ದೈಹಿಕ ಪರಿಶ್ರಮ ಪಡುವುದರಿಂದ ಅಥವಾ ಆಟೋಟಗಳಲ್ಲಿ ತೊಡಗುವುದರಿಂದ ದೇಹವು ದಣಿಯುತ್ತದೆ. ದೈಹಿಕ ದಣಿವು ಹೆಚ್ಚಾದಷ್ಟು ಮಾನಸಿಕವಾದ ದಣಿವು ತನ್ನಿಂತಾನೇ ಆವರಿಸಿ ಬಿಡುತ್ತದೆ. ಹಾಗೆಯೇ ಮಾನಸಿಕ ದಣಿವು ಹೆಚ್ಚಾದಷ್ಟೂ ದೈಹಿಕ ದಣಿವು ಆವರಿಸುತ್ತದೆ. ದೇಹವು ದಣಿದು, ಬಳಲಿ ಬೆಂಡಾಗಿರುವಾಗ ಮನಸ್ಸು ಸರಿಯಾಗಿ ಕೆಲಸ ಮಾಡುವುದಿಲ್ಲ.

ಮಾನಸಿಕ ದಣಿವಿನಲ್ಲೂ ಎರಡು ವಿಧವಿದೆ. (1) ನೈಜ ದಣಿವು ಮತ್ತು (2) ಕೃತಕ ದಣಿವು ಅಥವಾ ಬೇಸರಿಕೆ.

ಕೃತಕ ದಣಿವು ವಾಸ್ತವದಲ್ಲಿ ದಣಿವಾಗಿರುವುದಿಲ್ಲ, ಬದಲಾಗಿ ಕೆಲಸವು ಅಸ್ವಾರಸ್ಯಕರವಾಗಿದ್ದರೆ ಅದರಲ್ಲಿ ಏಕಾಗ್ರತೆಯಿರುವುದಿಲ್ಲ ಮತ್ತು ದಣಿವಿನ ಅನುಭವವಾಗ ತೊಡಗುತ್ತದೆ. ಕೆಲಸದಲ್ಲಿ ಆಸಕ್ತಿಯನ್ನು ಹುಟ್ಟಿಸಿದರೆ ಈ ದಣಿವು ತನ್ನಿಂತಾನೇ ಹೊರಟು ಹೋಗುತ್ತದೆ.

★ 'ಆಮ್ಲಜನಕ'(Oxygen)ವು ಸ್ವಚ್ಛ ಗಾಳಿಯ ಐದನೇ ಅಂಶವಾಗಿದೆ. ವಸ್ತುಗಳನ್ನು ಉರಿಯಲು ಸಹಾಯಕವಾಗುವುದು ಅದರ ವಿಶೇಷತೆಯಾಗಿದೆ. ಶ್ವಾಸದ ಮೂಲಕ ದೇಹದೊಳಗೆ ಸೇರುವ ಆಮ್ಲಜನಕವು ರಕ್ತದಲ್ಲಿ ಸೇರಿ ದೇಹವನ್ನು ಬೆಚ್ಚಗಿರಿಸುತ್ತದೆ.

ದಣಿವಿನ ಲಕ್ಷಣಗಳು

ಈ ಕೆಳಗಿನ ಲಕ್ಷಣಗಳು ಕಂಡುಬಂದರೆ, ಮಗು ದಣಿದಿದೆ ಎಂದು ತಿಳಿದು ಕೊಳ್ಳಬೇಕು. ಆಗ ದಣಿವನ್ನು ದೂರಮಾಡುವ ಉಪಾಯ ಹೂಡಬೇಕಾಗಿದೆ.

ದೈಹಿಕ ಲಕ್ಷಣಗಳು

- ದೇಹದಲ್ಲಿ ಚುರುಕುತನ, ಚಟುವಟಿಕೆಯ ಕೊರತೆ ಮತ್ತು ಸೋಮಾರಿತನ.
- ಮುಖ ಪೇವಲವಾಗಿರುವುದು, ಬಾಡಿರುವುದು.
- ಸಂದು ನೋವು, ಆಗಾಗ ಮೈಮುರಿಯುವುದು ಅಥವಾ ಆಕಳಿಕೆ, ತೂಕಡಿಕೆ.
- ಅನಿರೀಕ್ಷಿತ ಕ್ರಿಯೆ ಸಂಭವಿಸುಸುವುದು.
- ತಲೆ ವಾಲಿರುವುದು, ಸೊಂಟ ಬಾಗಿರುವುದು, ದೃಷ್ಟಿ ಒಂದೇ ಕಡೆ ನೆಡಲಾಗದಿರುವುದು, ಏಳುವಾಗ ಆಧಾರಕ್ಕೆ ಪ್ರಯತ್ನಿಸುವುದು.

ಮಾನಸಿಕ ಲಕ್ಷಣಗಳು

- ಗಮನ ಆಗಾಗ ತಪ್ಪುವುದು
- ನೆನಪಿನ ಶಕ್ತಿಯ ಕೊರತೆ
- ಪ್ರಶ್ನೆ ಪರಿಹರಿಸುವಲ್ಲಿ ಅಥವಾ ಉತ್ತರ ನೀಡುವಲ್ಲಿ ಆಗಾಗ ತಪ್ಪುಗಳನ್ನೆಸಗುವುದು.
- ತಿಳಿ ಹೇಳಿದರೂ ಅರ್ಥವಾಗದಿರುವುದು, ಚಿಂತನೆ ಮತ್ತು ಸ್ಮರಣಶಕ್ತಿಯ ಕೊರತೆ.
- ಆಗಾಗ ಸಿಡಿಮಿಡಿಗೊಳ್ಳುವುದು ಅಥವಾ ಶಬ್ದಕ್ಕೆ ಬೆಚ್ಚಿ ಬೀಳುವುದು ಇತ್ಯಾದಿ.

ಬೇಗ ದಣಿಯುವಂತಹ ಪರಿಸ್ಥಿತಿ

ಒಂದು ಕೆಲಸವನ್ನು ಯಾವ ಪರಿಸ್ಥಿತಿಯಲ್ಲಿ ಮಾಡಲಾಗುವುದೋ ಆ ಪರಿಸ್ಥಿತಿಯ ಪ್ರಭಾವವು ಆ ಕೆಲಸದ ಮೇಲೆ ಖಂಡಿತ ಉಂಟಾಗುತ್ತದೆ. ವಾತಾವರಣವು ಆಹ್ಲಾದಕರ ಮತ್ತು ಪರಿಸರವು ಪ್ರಶಾಂತವಾಗಿದ್ದರೆ ಕೆಲಸವು ಆಸಕ್ತಿದಾಯಕವಾಗುತ್ತದೆ. ಅಂತೆಯೇ ಮನಸ್ಸು ಕೆಲಸಕ್ಕೆ ಪ್ರೇರಿತವಾಗುತ್ತಿದ್ದರೆ ಕೆಲಸವೂ ಅತ್ಯಂತ ಶ್ರದ್ಧೆಯೊಂದಿಗೆ ನಡೆಯುತ್ತದೆ. ಅಲ್ಲದೆ ಬಹಳ ಹೊತ್ತಿನ ವರೆಗೆ ದಣಿವಿನ ಅನುಭವವೂ ಆಗುವುದಿಲ್ಲ. ತದ್ವಿರುದ್ಧವಾಗಿ ಈ ಕೆಳಗಿನ ಪರಿಸ್ಥಿತಿಗಳಿದ್ದರೆ ಮಕ್ಕಳು ಬೇಗ ದಣಿಯುತ್ತಾರೆ; ಅವರು ಗಮನ, ಶ್ರದ್ಧೆ ಮತ್ತು ಆಸಕ್ತಿಯಿಂದ ಕೆಲಸ ಮಾಡುವುದರ ಬದಲು ಆಯಾಸ ಮತ್ತು ಬೇಸರ ವ್ಯಕ್ತವಾಗತೊಡಗುತ್ತದೆ.

- ವಾತಾವರಣದ ತೀವ್ರತೆ, ತೀವ್ರಚಳಿ, ತೀವ್ರಸೆಖೆ, ಸುಡು ಬಿಸಿಲು, ಮಬ್ಬುಗತ್ತಲು ಇತ್ಯಾದಿ.
- ಸ್ವಚ್ಛ ಮತ್ತು ಮುಕ್ತಗಾಳಿಯ ಕೊರತೆ ಅಥವಾ ಮಂದ ಬೆಳಕು.

- ಬಹಳ ಹೆಚ್ಚು ಅಥವಾ ನಿರಂತರ ಗುಲ್ಲು-ಗದ್ದಲ ಮತ್ತು ಗದರಿಕೆ ಅಥವಾ ಶಿಕ್ಷೆ.
- ಹದಗೆಟ್ಟ ಆರೋಗ್ಯ, ಅಪೌಷ್ಟಿಕತೆ, ಸೂಕ್ತವಲ್ಲದ ವಸ್ತ್ರ ಸಂಕೀರ್ಣ ತರಗತಿಯ ಅಥವಾ ಕೋಣೆಯ ಅತೃಪ್ತಿಕರ ವಾತಾವರಣ.
- ಪ್ರಾಕೃತಿಕ ಮತ್ತು ಸ್ವಾಭಾವಿಕ ಬೇಡಿಕೆಗಳು ಈಡೇರದಿರುವುದು.
- ಮಕ್ಕಳಲ್ಲಿ ಆಸಕ್ತಿ ಹುಟ್ಟಿಸದೆಯೇ ಪಾಠವನ್ನು ಆರಂಭಿಸುವುದು ಅಥವಾ ಪಾಠವು ಕ್ಲಿಷ್ಟಕರ, ಅನಾಸಕ್ತಿಕರವಾಗಿರುವುದು ಮತ್ತು ಅರ್ಥವಾಗದಿರುವುದು.
- ಒಂದೇ ರೀತಿಯ ಕೆಲಸವನ್ನು ಒಂದೇ ವಿಧಾನ ಅಥವಾ ಸ್ಥಿತಿಯಲ್ಲಿ ಮಾಡುವುದು-ಏಕೆಂದರೆ ಇದರಿಂದ ದೇಹದ ಒಂದು ಭಾಗದ ಅಂಗಾಂಗಗಳ ಶಕ್ತಿ ಮಾತ್ರ ಬಳಕೆಯಾಗುತ್ತದೆ. ಹೀಗೆ ಬೇಗನೆ ಮಕ್ಕಳು ದಣಿದು ಬಿಡುತ್ತಾರೆ.

ಈ ಕಾರಣಗಳನ್ನು ದೂರೀಕರಿಸಲು ಪ್ರಯತ್ನಿಸಿದಷ್ಟೂ ಫಲಿತಾಂಶವು ಉತ್ತಮಗೊಳ್ಳುವುದು.

ದಣಿವಿನ ಚಿಕಿತ್ಸೆ

ಮಕ್ಕಳು ನಿಜವಾಗಿಯೂ ದಣಿದಿದ್ದಾರೆಂದು ಕಂಡರೆ, ಅವರಿಗೆ ದಣಿವಾರಿಸಿಕೊಳ್ಳಲು ಬಿಡುವು ನೀಡಬೇಕು ಮತ್ತು ತಿನ್ನಲು ಸಿಹಿಯಾದ ಪದಾರ್ಥಗಳನ್ನು ನೀಡಬೇಕು. ಇದರಿಂದ ಮಕ್ಕಳು ಮತ್ತೊಮ್ಮೆ ಲವಲವಿಕೆಯಿಂದ ಕಲಿಯಲು ಸಿದ್ಧರಾಗುವರು. ಆದರೆ ದಣಿವು ಅಸಾಮಾನ್ಯವಾಗಿದ್ದರೆ ಸಣ್ಣ ಪುಟ್ಟ ವಿಶ್ರಾಂತಿಯಿಂದ ಪ್ರಯೋಜನವಾಗಲಾರದು. ಬದಲಾಗಿ ಸಂಪೂರ್ಣ ವಿಶ್ರಾಂತಿ ಮತ್ತು ಗಾಢನಿದ್ರೆಯು ಅಗತ್ಯವಾಗುತ್ತದೆ. ಏಕೆಂದರೆ ಶಕ್ತಿ ಉತ್ಪಾದಿಸುವಲ್ಲಿ ದಹಿಸಲ್ಪಟ್ಟ ಅಂಗಾಂಶಗಳ ಜಾಗದಲ್ಲಿ ಹೊಸ ಅಂಗಾಂಶಗಳು ಈ ಮೂಲಕ ಮಾತ್ರವೇ ಹುಟ್ಟಿ ಬರುತ್ತವೆ. ಚಹಾ ಮತ್ತು ಕಾಫಿಗಳಿಂದ ತಾತ್ಕಾಲಿಕವಾಗಿ ಲವಲವಿಕೆಯು ಅನುಭವವಾಗುತ್ತದೆಯಾದರೂ ಇದು ದಣಿವಿಗೆ ನೈಜ ಚಿಕಿತ್ಸೆಯಲ್ಲ, ಬದಲಾಗಿ ಅವುಗಳನ್ನು ಸೇವಿಸುವುದು ಮತ್ತು ಅವುಗಳ ಆಧಾರದಲ್ಲಿ ಬಹಳ ಹೊತ್ತು ಕೆಲಸ ಮಾಡುವುದು ಮಕ್ಕಳಿಗಷ್ಟೇ ಅಲ್ಲ, ಹಿರಿಯರಿಗೂ ಹಾನಿಕರವಾಗಿದೆ. ಅವುಗಳ ಬದಲು ಮಕ್ಕಳಿಗೆ ನೆನೆಸಿಟ್ಟ ಕಡಲೆ ಅಥವಾ ಬೆಲ್ಲ ಮತ್ತು ಸೌಲಭ್ಯವಿದ್ದರೆ ಹಾಲು, ಗಿಣ್ಣು ಹಣ್ಣುಹಂಪಲು ಇತ್ಯಾದಿಗಳನ್ನು ನೀಡಿದರೆ ದಣಿವಾರಿಸಿಕೊಳ್ಳಲು ಬಹಳ ಉತ್ತಮವಾಗಿದೆ.

ಅದೇನಿದ್ದರೂ ದಣಿವು ಸಾಮಾನ್ಯದ್ದಾಗಿರಲಿ ಅಥವಾ ಬೇಸರಿಕೆಯ ಕಾರಣದಿಂದಾಗಿರಲಿ, ಮಕ್ಕಳು ದಣಿದಿದ್ದಾರೆಂದು ಕಂಡುಬಂದ ಕೂಡಲೇ ಈ ಕೆಳಗಿನ ವಿಧಾನಗಳನ್ನು ಅನುಸರಿಸಬೇಕು.

- ವಿವಿಧ ಉಪಾಯಗಳಿಂದ ಪಾಠವನ್ನು ಆಸಕ್ತಿದಾಯಕ ಮತ್ತು ಅರ್ಥಪೂರ್ಣಗೊಳಿಸಲು ಪ್ರಯತ್ನಿಸಬೇಕು.

- ಸಿದ್ಧತೆ, ಪ್ರಶಾಂತ ಮನಸ್ಸು ಮತ್ತು ಹುಮ್ಮಸ್ಸಿನ ವಾತಾವರಣದಲ್ಲಿ ಪಾಠ ಮಾಡಬೇಕು.
- ಕೆಲಸದ ವಿಧಾನದಲ್ಲಿ ಬದಲಾವಣೆ ಮಾಡಬೇಕು. ಅಂದರೆ ಬೌದ್ಧಿಕದ ಬಳಿಕ ದೈಹಿಕ, ಮೌಖಿಕದ ಬಳಿಕ ಪ್ರಾಯೋಗಿಕ, ಕಲಿಕೆಯ ಬಳಿಕ ಬರವಣಿಗೆ ಇತ್ಯಾದಿ.
- ವಿವಿಧ ಉಪಾಯಗಳಿಂದ ಹಂತಹಂತವಾಗಿ ಮಕ್ಕಳನ್ನು ಬಹಳ ಹೊತ್ತು ಕುಳಿತು ಕಲಿಯಲು ಅಭ್ಯಾಸ ಮಾಡಿಸಬೇಕು. ಮಕ್ಕಳ ಗಮನವು ಬಹಳ ಬೇಗನೇ ಅತ್ತಿತ್ತ ಹೊರಳುತ್ತಾ ಇರುತ್ತದೆ. ಆರಂಭದಲ್ಲಿ ಅವರು ಒಂದು ವಿಷಯದ ಮೇಲೆ ಹೆಚ್ಚು ಹೊತ್ತು ಗಮನ ಹರಿಸಲಾರರು. ಆದರೆ ಪರಿಶ್ರಮಕ್ಕೆ ಒಗ್ಗಿಕೊಂಡಷ್ಟೂ ಹೆಚ್ಚು ಹೊತ್ತಿನ ತನಕ ದಣಿವು ಅನುಭವಿಸಲಾರರು.

ವೇಳಾಪಟ್ಟಿಯಲ್ಲಿ ದಣಿವಿಗೆ ವಿನಾಯಿತಿ

ವೇಳಾಪಟ್ಟಿ ರಚಿಸುವ ಸಂದರ್ಭದಲ್ಲಿ ಈ ಕೆಳಗಿನ ವಿಷಯಗಳನ್ನು ದೃಷ್ಟಿಯಲ್ಲಿರಿಸಬೇಕು.

1. ಸಣ್ಣ ಮಕ್ಕಳು ದೊಡ್ಡವರಿಗಿಂತ ಬೇಗ ದಣಿಯುತ್ತಾರೆ. ಸ್ವಲ್ಪ ಸಮಯದಲ್ಲಿಯೇ ಬೇಸರಿಕೆಯನ್ನು ಅನುಭವಿಸ ತೊಡಗುತ್ತಾರೆ. ಆದ್ದರಿಂದ ಆರಂಭದ ತರಗತಿಗಳಲ್ಲಿ ಪಾಠದ ಸಮಯವನ್ನು ಸೆಖೆಗಾಲದಲ್ಲಿ ಮೂವತ್ತು ನಿಮಿಷ ಮತ್ತು ಚಳಿಗಾಲದಲ್ಲಿ ಮೂವತ್ತೈದು ನಿಮಿಷಕ್ಕಿಂತ ಹೆಚ್ಚು ಉದ್ದ ಇರಿಸಬಾರದು.

2. ಸೆಖೆಗಾಲದಲ್ಲಿ ಶಾಲಾ ಸಮಯವನ್ನು ಬೆಳಿಗ್ಗೆ ಬೇಗನೇ ಇರಿಸಬೇಕು. ಮಧ್ಯಾಹ್ನದ ವೇಳೆಗೆ ತರಗತಿಗಳು ಮುಗಿದು ಹೋಗಬೇಕು. ಆದರೆ ಚಳಿಗಾಲದಲ್ಲಿ ಎಂದಿನಂತೆ ಬೆಳಿಗ್ಗೆ ಹತ್ತು ಗಂಟೆಯಿಂದ ಸಂಜೆ ನಾಲ್ಕು ಗಂಟೆಯ ವರೆಗಿನ ಸಮಯವೇ ಸೂಕ್ತವಾಗಿದೆ.

3. ಆರಂಭದ ಸಮಯದಲ್ಲಿ ಮಕ್ಕಳು ಲವಲವಿಕೆಯಿಂದ ಇರುತ್ತಾರೆ. ಆದ್ದರಿಂದ ಕಷ್ಟದ ವಿಷಯಗಳಾದ ಗಣಿತ, ಭಾಷೆ ಇತ್ಯಾದಿಗಳನ್ನು ಮೊದಲ ಅವಧಿಯಲ್ಲಿಯೇ ಇರಿಸಬೇಕು. ಆರಂಭದಲ್ಲಿ ಮಕ್ಕಳು ದಣಿಯುವುದಿಲ್ಲವಾದರೂ ಅವರ ಗಮನ ಪಾಠದಲ್ಲಿರುವುದಿಲ್ಲ ಮತ್ತು ಕೊನೆಯ ಸಮಯಕ್ಕಾಗುವಾಗ ಅವರನ್ನು ದಣಿವು ಆವರಿಸತೊಡಗುತ್ತದೆ. ಹಾಗಾಗಿ ಮಧ್ಯದ ತರಗತಿಗಳಲ್ಲಿ ಕಷ್ಟದ ಪಾಠಗಳನ್ನು ಇರಿಸಬೇಕು. ಬಿಡುವಿನಲ್ಲಿ ಮಕ್ಕಳು ಕೊಂಚ ಮಟ್ಟಿಗೆ ದಣಿವಾರಿಸಿಕೊಂಡಿರುತ್ತಾರೆ. ಆದ್ದರಿಂದ ಎರಡನೆಯ ಅವಧಿಯ ಮಧ್ಯದ ಸಮಯದಲ್ಲಿ ಕೊಂಚ ಕಡಿಮೆ ಕಷ್ಟದ ವಿಷಯಗಳನ್ನು ಇರಿಸಬೇಕು. ಉದಾ: ಸಮಾಜಶಾಸ್ತ್ರ, ವಿಜ್ಞಾನ ಇತ್ಯಾದಿ. ಇತರ ಸಮಯಗಳಲ್ಲಿ ಸುಲಭದ ಮತ್ತು ಆಸಕ್ತಿಕರವಾದ ವಿಷಯಗಳನ್ನೂ ಪ್ರಾಯೋಗಿಕ ಹಾಗೂ ಬರವಣಿಗೆಯ ಕೆಲಸಗಳನ್ನೂ ಇರಿಸಬೇಕು. ಉದಾ: ಇಸ್ಲಾಮಿಯಾತ್, ಆರ್ಟ್-ಕ್ರಾಫ್ಟ್ ಇತ್ಯಾದಿ.

4. ವಿವಿಧ ಸಮಯಗಳಲ್ಲಿ ಕೆಲಸದ ವಿಧಾನವು ಬದಲಾಗುವಂತೆ ಮತ್ತು ನಿರಂತರವಾಗಿ ಒಂದೇ ರೀತಿಯ ಕೆಲಸಗಳು ಸಿಗದಂತೆ ಪಾಠಗಳನ್ನು ಇರಿಸಬೇಕು. ಉದಾ:

ಮೌಖಿಕದ ಬಳಿಕ ಲಿಖಿತ, ಬೌದ್ಧಿಕದ ಬಳಿಕ ದೈಹಿಕ ಮತ್ತು ಓದಿನ ಬಳಿಕ ಪ್ರಾಯೋಗಿಕ. ಹೀಗೆ ಮಾಡಿದರೆ ಮಕ್ಕಳು ಕಡಿಮೆ ದಣಿಯುತ್ತಾರೆ.

5. ವಿಶ್ರಾಂತಿಯು ದಣಿವನ್ನು ಕಡಿಮೆಗೊಳಿಸುತ್ತದೆ. ಆದ್ದರಿಂದ ಮೂರನೆಯ ಒಂದು ಭಾಗ ಪಾಠ ಮಾಡಿದ ಬಳಿಕ ಹತ್ತು ನಿಮಿಷ ವಿರಾಮ ಮತ್ತು ಮೂರನೆಯ ಎರಡು ಭಾಗ ಕಲಿಸಿಯಾದ ಬಳಿಕ ಒಂದಿಷ್ಟು ದೀರ್ಘ ಸಮಯ ವಿರಾಮ ನೀಡಬೇಕು. ಸಣ್ಣ ಮಕ್ಕಳಿಗೆ ಒಂದು ವೇಳೆ ಪ್ರತಿ ತರಗತಿಯ ಬಳಿಕ ಮೂರ್ನಾಲ್ಕು ನಿಮಿಷಗಳ ವಿರಾಮ ನೀಡಿದರೆ ಹೆಚ್ಚು ಉತ್ತಮ. ಮೈಮುರಿಯುವುದು, ಸ್ವಲ್ಪ ಸಮಯ ಜಿಗಿಯುವುದು, ನಿಂತಲ್ಲಿಯೇ ಓಡುವುದು, ಇತ್ಯಾದಿಗಳಿಂದ ದೇಹದಲ್ಲಿರುವ ರಕ್ತ ಸಂಚಲನ ಯಾಗುತ್ತಿರುವಂತೆಯೇ ಶೇಖರಣೆಗೊಂಡಿರುವ ಹಾನಿಕಾರಕ ತ್ಯಾಜ್ಯವು ವಿಸರ್ಜಿಸಲ್ಪಡುತ್ತದೆ. ಹಾಗೆಯೇ ದೀರ್ಘ ಶ್ವಾಸೋಚ್ಛ್ವಾಸ ಮಾಡುವುದರಿಂದ ಆಮ್ಲಜನಕದ ಕೊರತೆಯೂ ನಿವಾರಣೆಯಾಗುತ್ತದೆ.

6. ದಣಿವು ಮತ್ತು ಗಮನದಲ್ಲಿ ಏರುಪೇರು ದಿನನಿತ್ಯ ಆಗುವಂತೆಯೇ ಸಾಪ್ತಾಹಿಕ ಮತ್ತು ವಾರ್ಷಿಕವೂ ಆಗುತ್ತದೆ. ವಾರದ ರಜೆಯ ಬಳಿಕ ಮಕ್ಕಳು ಶಾಲೆಗೆ ಬರುವಾಗ ರಜೆಯ ಕಾರಣದಿಂದಾಗಿ ಲವಲವಿಕೆಯಿಂದ ಇರುತ್ತಾರೆ. ಆದರೆ ರಜೆಯ ನೆನಪಿನ ಕಾರಣವಾಗಿ ಶಿಕ್ಷಣದ ಕಡೆಗೆ ಹೆಚ್ಚು ಗಮನ ಇರುವುದಿಲ್ಲ ಮತ್ತು ಸಾಮಾನ್ಯವಾಗಿ ಮೊದಲ ದಿನ ಮಕ್ಕಳು ಶಾಲೆಗೆ ಬರುವುದೇ ಒಲ್ಲದ ಮನಸ್ಸಿನೊಂದಿಗೆ. ಆದ್ದರಿಂದ ಮೊದಲ ದಿನ ಬೋಧನೆಯ ಕಾರ್ಯವು ಸರಳ ಮತ್ತು ಆಸಕ್ತಿದಾಯಕವಾಗಿರಬೇಕು. ವಾರದ ಮಧ್ಯದಲ್ಲಿ ಗಮನ, ತನ್ಮಯತೆ ಯಲ್ಲಿ ಹೆಚ್ಚಳವುಂಟಾಗುತ್ತದೆ. ದಣಿವೂ ಹೇಳಿಕೊಳ್ಳುವಷ್ಟು ಇರುವುದಿಲ್ಲ. ಆದರೆ ಕೊನೆಯ ದಿನಗಳಲ್ಲಿ ದಣಿವು ಹೆಚ್ಚಾಗುವ ಕಾರಣದಿಂದಾಗಿ ಗಮನವೂ ಪಾಠದಲ್ಲಿ ನಿಲ್ಲುವುದಿಲ್ಲ. ಹಾಗೆಯೇ ಪರಿಶ್ರಮ ಅಗತ್ಯವಿರುವ ಕೆಲಸಗಳಲ್ಲಿ ಆಸಕ್ತಿ ಇರುವುದಿಲ್ಲ. ಆದ್ದರಿಂದ ಕೊನೆಯ ದಿನಗಳಲ್ಲಿಯೂ ಹಗುರ ಮತ್ತು ಆಸಕ್ತಿಕರ ಪಾಠಗಳಿರಬೇಕು. ಉದಾ: ವಿದ್ಯಾರ್ಥಿಗಳ ಸಭೆ, ಶಾಲೆಯ ಯಾವುದಾದರೂ ಸಮಾರಂಭ, ಪಿಕ್‌ನಿಕ್, ಶೈಕ್ಷಣಿಕ ಪ್ರವಾಸ, ಜನಸೇವೆ, ಸ್ವಚ್ಛತೆ ಇತ್ಯಾದಿಗಳಿಗೆ ಸಂಬಂಧಿಸಿದ ಕೆಲಸಗಳು ಹಾಗೂ ಪುನರಾವರ್ತನೆ. ಇದೇ ಅವಸ್ಥೆಯು ಶೈಕ್ಷಣಿಕ ವರ್ಷದ ಆರಂಭದಲ್ಲಿರುತ್ತದೆ. ರಜೆಯಲ್ಲಿ ಮಕ್ಕಳ ಮೇಲೆ ಶಿಕ್ಷಣದ ಹೊರೆ ಇರುವುದಿಲ್ಲ. ಹಾಗಾಗಿ ಮೊದಮೊದಲು ಶಾಲೆಗೆ ಬರುವಾಗ ದೇಹದಲ್ಲಿ ಬಹಳ ಲವಲವಿಕೆ ಇರುತ್ತದೆ. ಆದರೆ ಶಿಕ್ಷಣದೆಡೆಗೆ ಗಮನವಿರುವುದಿಲ್ಲ. ಆದ್ದರಿಂದ ಆರಂಭದ ಕೆಲವು ದಿನ ಹಗುರವಾದ ಕೆಲಸಗಳನ್ನು ನೀಡಬೇಕು ಮತ್ತು ಹಿಂದಿನ ಪಠ್ಯದ ಕೊಂಚ ಪುನರಾವರ್ತನೆ ಮಾಡಿಸಿದ ಬಳಿಕ ಹೊಸ ಪಾಠ ವನ್ನು ಆರಂಭಿಸಬೇಕು. ಬಳಿಕ ಕೆಲವು ತಿಂಗಳು ಚೆನ್ನಾಗಿ ಪರಿಶ್ರಮದಿಂದ ಕಲಿಸಿ, ಪುನರಾವರ್ತನೆ ಯನ್ನು ಮಾಡಿಸಬೇಕು ಮತ್ತು ಅರ್ಧ ವಾರ್ಷಿಕ ಪರಿಶೀಲನೆ ನಡೆಸಬೇಕು. ಈ ನಡುವೆಯೂ ಸಣ್ಣ ಸಣ್ಣ ವಿರಾಮದ ರೂಪದಲ್ಲಿ ಕೆಲವೊಮ್ಮೆ ರಜೆಯನ್ನು ನೀಡಬೇಕು ಅಥವಾ ಪಿಕ್‌ನಿಕ್

ಮತ್ತು ಪ್ರವಾಸಕ್ಕೆ ಕರಕೊಂಡು ಹೋಗಬೇಕು. ಹಾಗೆಯೇ ಅರ್ಧವಾರ್ಷಿಕ ಪರೀಕ್ಷೆಯ ಬಳಿಕ ದೊಡ್ಡ ಬಿಡುವಿನ ರೂಪದಲ್ಲಿ ಒಂದೆರಡು ವಾರಗಳ ರಜೆಯನ್ನು ನೀಡಬೇಕು. ಅದೇ ರೀತಿ ಎರಡನೆಯ ಅವಧಿಯನ್ನು ಪೂರ್ಣಗೊಳಿಸಿದ ಬಳಿಕ ದೀರ್ಘ ರಜೆಯನ್ನು ನೀಡಬೇಕು. ರಜೆಗಳಿಗೆ ಸಂಬಂಧಿಸಿದಂತೆ ಕೆಲವು ಸಂಸ್ಥೆಗಳು ತೀರಾ ಜಿಪುಣತೆ ತೋರಿದರೆ, ಇನ್ನು ಕೆಲವು ಸಂಸ್ಥೆಗಳು ತೀರಾ ಉದಾರಿಯಾಗಿರುತ್ತವೆ. ಈ ಎರಡೂ ಸ್ಥಿತಿಗಳು ಮಾರಕವಾಗಿವೆ. ರಜೆಯಲ್ಲಿ ಜಿಪುಣತೆಯೂ ಸರಿಯಲ್ಲ, ಹೆಚ್ಚು ರಜೆ ನೀಡುವುದೂ ಸಲ್ಲ, ರಜೆಗೆ ವಿವಿಧ ಕಾರಣಗಳಿಂದಾಗಿ ಬಹಳ ಮಹತ್ವ ಇದೆ. ಆದರೆ ಸಮತೋಲನ ಕಾಪಾಡಬೇಕಾದುದೂ ಅಷ್ಟೇ ಅಗತ್ಯ.

ವೇಳಾಪಟ್ಟಿ

ಅಗತ್ಯ ಮತ್ತು ಪ್ರಯೋಜನಗಳು

ಮಕ್ಕಳ ಶಿಕ್ಷಣ-ತರಬೇತಿಯು ಹೆಚ್ಚಾಗಿ ವೇಳಾಪಟ್ಟಿಯನ್ನು ಅವಲಂಬಿಸಿರುತ್ತದೆ. ಏಕೆಂದರೆ ವೇಳಾಪಟ್ಟಿಯ ಕಾರಣದಿಂದಾಗಿ,

- ಶಿಕ್ಷಣ-ತರಬೇತಿಯ ವ್ಯವಸ್ಥೆಯು ಶಿಸ್ತುಬದ್ಧ ಮತ್ತು ಅಚ್ಚುಕಟ್ಟಾಗಿರುತ್ತದೆ.
- ಸಮಯ ಪೋಲಾಗುವುದಿಲ್ಲ, ಸೀಮಿತ ಅವಧಿಯಲ್ಲಿ ಸಾಕಷ್ಟು ಕೆಲಸಗಳು ಆಗುತ್ತವೆ.
- ಪ್ರತಿಯೊಂದು ಅಗತ್ಯದ ಪಾಠ ಮತ್ತು ಚಟುವಟಿಕೆಗೆ ಸೂಕ್ತ ಸಮಯಾವಕಾಶ ದೊರೆಯುತ್ತದೆ. ಯಾವ ವಿಷಯವೂ ಕಡೆಗಣಿಸಲ್ಪಡುವುದಿಲ್ಲ,
- ಅಧ್ಯಾಪಕರ ಸಾಮರ್ಥ್ಯದ ಅನುಸಾರ ಕೆಲಸದ ವಿಂಗಡಣೆಯಾಗುತ್ತದೆ. ಹಾಗಾಗಿ ಅವರ ಪ್ರತಿಭೆಗಳಿಂದ ಸಾದ್ಯಂತ ಪ್ರಯೋಜನ ಪಡೆಯಬಹುದಾಗಿದೆ.
- ಕೆಲಸವು ಸಂತುಲಿತವಾಗಿರುತ್ತದೆ. ಏಕೆಂದರೆ ಇದರಿಂದಾಗಿ ಅಧ್ಯಾಪಕರ ಆಸಕ್ತಿ ಮತ್ತು ಒಲವುಗಳಿಗೆ ಅಗತ್ಯದ ಕಡಿವಾಣ ಬೀಳುತ್ತದೆ. ಅನ್ಯಥಾ ಇಡೀ ಸಮಯವನ್ನು ಅವರಿಗೆ ಒಪ್ಪಿಸಿ ಬಿಟ್ಟರೆ, ಅಧ್ಯಾಪಕರು ತಮಗೆ ಆಸಕ್ತಿ, ಒಲವು ಇರುವ ವಿಷಯಗಳಿಗೇ ಹೆಚ್ಚು ಸಮಯ ವ್ಯಯಿಸುವ ಸಾಧ್ಯತೆ ಇದೆ. ಹೀಗೆ ಇತರ ವಿಷಯಗಳು ಕಡೆಗಣಿಸಲ್ಪಡಬಹುದು.
- ಸಮಯಪಾಲನೆ, ಅದರ ಮಹತ್ವದ ಪ್ರಜ್ಞೆ, ಪರಿಶ್ರಮ ಮತ್ತು ಮಗ್ನತೆ ಹಾಗೂ ಅಚ್ಚುಕಟ್ಟಾಗಿ ಕೆಲಸ ಮಾಡುವ ಗುಣ ಬೆಳೆಯುತ್ತದೆ.
- ವಿದ್ಯಾರ್ಥಿಗಳು ಎಲ್ಲ ಸಮಯದಲ್ಲೂ ನಿಬಿಡರಾಗುತ್ತಾರೆ. ಹೀಗಾಗಿ ಶಿಸ್ತು ಪಾಲನೆಯು ಜಾರಿಯಲ್ಲಿರುತ್ತದೆ. ನಿಬಿಡತೆಯ ಕಾರಣವಾಗಿ ಕೀಟಲೆಗೆ ಅವಕಾಶವಿರುವುದಿಲ್ಲ, ಹಾಗಾಗಿ ಶಿಕ್ಷೆ ನೀಡುವ ಅವಕಾಶವೂ ಇರುವುದಿಲ್ಲ.
- ಯಾವ ಸಮಯದಲ್ಲಿ ಯಾವ ಕೆಲಸ ಇರುತ್ತದೆ ಎಂಬುದು ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ತಿಳಿದಿರುತ್ತದೆ. ಹಾಗಾಗಿ ಮೊದಲೇ ಅಗತ್ಯದ ತಯಾರಿಗೆ ಅವಕಾಶವಿರುತ್ತದೆ.

- ಯಾವ ಅಧ್ಯಾಪಕ ಅಥವಾ ಯಾವ ತರಗತಿಯ ವಿದ್ಯಾರ್ಥಿಗಳು ಎಲ್ಲಿ ಮತ್ತು ಯಾವ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಾರೆ ಎಂಬುದು ಮುಖ್ಯೋಪಾಧ್ಯಾಯರಿಗೆ ಮತ್ತು ಇತರ ಹೊಣೆಗಾರರಿಗೆ ಸದಾ ತಿಳಿದಿರುತ್ತದೆ.

ಗಮನಾರ್ಹ ವಿಷಯಗಳು

ಪ್ರತಿಯೊಂದು ಸಂಸ್ಥೆಯಲ್ಲೂ ಯಾವುದಾದರೊಂದು ರೂಪದಲ್ಲಿ ವೇಳಾಪಟ್ಟಿ ಇದ್ದೇ ಇರುತ್ತದೆ. ಅದರಂತೆ ಆಯಾ ಸಂಸ್ಥೆಗಳಲ್ಲಿ ಶಿಕ್ಷಣ-ತರಬೇತಿಯ ಕೆಲಸಗಳು ನಡೆಯುತ್ತ ಇರುತ್ತವೆ. ಆದರೆ ಅವುಗಳ ಪೈಕಿ ಮಾದರಿ ಯೋಗ್ಯವಾದ ವೇಳಾಪಟ್ಟಿಯು ತೀರಾ ವಿರಳವಾಗಿರುತ್ತದೆ. ಹಾಗಾಗಿ ಅವುಗಳ ಪೈಕಿ ಹೆಚ್ಚಿನವುಗಳ ಸಂಪೂರ್ಣ ಪಾಲನೆಯು ಕಷ್ಟಕರವಾಗಿರುತ್ತದೆ.

- ಬಹಳ ಕಡಿಮೆ ಶಾಲೆಗಳಲ್ಲಿ ಅಗತ್ಯ ಮತ್ತು ಪ್ರತಿಭೆಗಳ ಆಧಾರದಲ್ಲಿ ಸಿಬ್ಬಂದಿಗಳ ನೇಮಕ ಪೂರ್ಣಗೊಂಡಿರುತ್ತದೆ.
- ಸಾಮಾನ್ಯವಾಗಿ ಹೆಚ್ಚಿನ ಶಾಲೆಗಳಲ್ಲಿ ಅಧ್ಯಾಪಕರ ವರ್ಗಾವಣೆ, ರಾಜಿನಾಮೆ, ಉಚ್ಚಾಟನೆ, ದೀರ್ಘ ರಜೆ, ನೇಮಕ ಇತ್ಯಾದಿಗಳು ಶೈಕ್ಷಣಿಕ ವರ್ಷದ ಮಧ್ಯೆಯೂ ನಡೆಯುತ್ತಿರುತ್ತವೆ.
- ವೇಳಾಪಟ್ಟಿ ತಯಾರಿಸುವಾಗ ಅರಿವಿಲ್ಲದೆ ಅಥವಾ ಅಲಕ್ಷ್ಯದ ಕಾರಣವಾಗಿ ಪರಿಗಣಿಸಲರ್ಹವಾದ ವಿಷಯಗಳೆಲ್ಲವೂ ಕಡೆಗಣಿಸಲ್ಪಡುತ್ತವೆ.

ಈ ಋಣಾತ್ಮಕ ವಿಷಯಗಳನ್ನೆಲ್ಲ ಆದಷ್ಟು ಕಡಿಮೆಗೊಳಿಸಬೇಕು ಮತ್ತು ಈ ಕೆಳಗಿನ ಗಮನಾರ್ಹ ವಿಷಯಗಳನ್ನು ಮುಂದಿರಿಸಿ ಸಾಧ್ಯಂತ ಮಾದರಿ ವೇಳಾಪಟ್ಟಿಯನ್ನು ತಯಾರಿಸಬೇಕು ಹಾಗೂ ಅದರಂತೆ ಕೆಲಸ ನಡೆಯಬೇಕು. ಈ ಮೂಲಕ ಶಿಕ್ಷಣ-ತರಬೇತಿಯು ಹೆಚ್ಚು ಪರಿಣಾಮಕಾರಿಯಾಗುವುದೆಂದು ನಿರೀಕ್ಷಿಸಬಹುದು.

1. ಮೊತ್ತ ಮೊದಲು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಬೇಕು. ಆಮೇಲೆ ಅವುಗಳ ಮೌಲ್ಯ, ಮಹತ್ವ ಮತ್ತು ಪ್ರಯೋಜನಗಳು; ಹಾಗೆಯೇ ಅವುಗಳ ಕಷ್ಟ-ಸುಲಭ, ಕುತೂಹಲಕರ-ಶುಷ್ಕ ಆಗಿರುವ ನೆಲೆಯಲ್ಲಿ ಅವುಗಳನ್ನು ಪ್ರತ್ಯಪ್ರತ್ಯೇಕ ಗುಂಪುಗಳಾಗಿ ಮಾಡಬೇಕು. ಉದಾ: ಇಸ್ಲಾಮಿಯಾತ್ ಎಲ್ಲಕ್ಕಿಂತ ಪ್ರಮುಖ ಮತ್ತು ಮೂಲಭೂತ ಪಠ್ಯ ವಿಷಯವಾಗಿದೆ. ಇತರೆಲ್ಲ ಪಠ್ಯ ಮತ್ತು ಚಟುವಟಿಕೆಗಳಲ್ಲಿ ಇದರ ಛಾಪು ಇರಬೇಕು. ಸ್ವತಃ ಈ ಪಠ್ಯವೂ ವಿಶಾಲ ಮತ್ತು ವ್ಯಾಪಕವಾಗಿದೆ. ಏಕೆಂದರೆ ಇದರಲ್ಲಿ ಪವಿತ್ರ ಕುರ್‌ಆನಿನ ಪಠಣ ಮತ್ತು ಕಂಠಪಾಠ, ಕರ್ಮಶಾಸ್ತ್ರ-ವಿಶ್ವಾಸ, ಪ್ರವಾದಿ ಚರಿತ್ರೆ, ಸಹಾಬಿ ಚರಿತ್ರೆ, ನೀತಿ ಪಾಠ, ಸಮಾಜಶಾಸ್ತ್ರ ಇತ್ಯಾದಿಗಳಿಗೆ ಸಂಬಂಧಿಸಿ ಅಗತ್ಯದ ಮಾಹಿತಿ ಮತ್ತು ಸೂಕ್ತ ತರಬೇತಿಯು ಸೇರಿದೆ. ಆದ್ದರಿಂದ ಅದಕ್ಕೆ ಹೆಚ್ಚು ಸಮಯ ಮತ್ತು

ಗಮನವನ್ನು ಮೀಸಲಿರಿಸಬೇಕು. ಆದರ ಬಳಿಕದ ಸ್ಥಾನವು ಮಾತೃಭಾಷೆ ಮತ್ತು ಗಣಿತಕ್ಕೆ ಇದೆ. ಪ್ರೈಮರಿ ತರಗತಿಗಳಲ್ಲಿ ಈ ಎರಡೂ ಪಠ್ಯಗಳ ಮೇಲೆ ಹಿಡಿತ ಸಾಧಿಸಿದರೆ, ಇತರ ಪಠ್ಯಗಳು ಸುಲಭವೆನಿಸುತ್ತವೆ. ಹಾಗಾಗಿ ಇವುಗಳಿಗೆ ಆದಷ್ಟು ಹೆಚ್ಚು ಸಮಯವನ್ನು ಮೀಸಲಿರಿಸಬೇಕು.

2. ಅಧ್ಯಾಪಕರ ಸಂಖ್ಯೆ, ಅವರ ಬುದ್ಧಿವಂತಿಕೆ, ಅರ್ಹತೆ, ಅವರ ಅನುಭವ ಹಾಗೂ ಇಷ್ಟದ ಪಠ್ಯ ಮತ್ತು ಹವ್ಯಾಸಗಳನ್ನು ಪರಿಗಣಿಸಬೇಕು. ಅಧ್ಯಾಪಕರಿಗೆ ಕೆಲಸವನ್ನು ವಿಂಗಡಿಸಿ ಕೊಡುವಾಗ, ಅವರ ಪ್ರತಿಭೆಗಳಿಂದ ವಿದ್ಯಾರ್ಥಿಗಳಿಗೆ ಅತ್ಯಧಿಕ ಪ್ರಯೋಜನವುಂಟಾಗಬೇಕೆಂಬುದನ್ನು ಗಮನದಲ್ಲಿರಿಸಬೇಕು. ಕೆಲಸವನ್ನು ವಿಂಗಡಿಸುವಾಗ ಅವರು ತಮಗೆ ವಹಿಸಿ ಕೊಟ್ಟ ಹೊಣೆಗಾರಿಕೆಯಲ್ಲಿ ನಿಷ್ಠೆ ಮತ್ತು ಆತ್ಮ ಸಂತೋಷದಿಂದ ಕೆಲಸ ಮಾಡುವಂತಾಗಲು, ಸಾಧ್ಯವಾದಷ್ಟರ ಮಟ್ಟಿಗೆ ಅವರ ಸಲಹೆಯನ್ನು ಪಡೆಯಬೇಕು. ಪ್ರೈಮರಿ ತರಗತಿಯಲ್ಲಿ ತರಗತಿಯ ಹೊಣೆಯನ್ನು, ಮೇಲ್ಪಟ್ಟ ತರಗತಿಯಲ್ಲಿ ಪಠ್ಯಗಳ ಹೊಣೆಯನ್ನು ವಿಂಗಡಿಸುವುದು ಒಳಿತು. ಆರಂಭದ ಎರಡ್ಮೂರು ತರಗತಿಗಳನ್ನು ಮಕ್ಕಳೊಡನೆ ಸ್ವಾಭಾವಿಕವಾಗಿಯೇ ಪ್ರೀತಿ ಇರುವ, ಅನುಭವಿ ಮತ್ತು ಶಾಂತ ಸ್ವಭಾವದ ಅಧ್ಯಾಪಕರಿಗೆ ಒಪ್ಪಿಸಬೇಕು. ಪ್ರೈಮರಿ ತರಗತಿಗಳ ಅಧ್ಯಾಪಕರಿಗೆ ಒಂದೇ ದರ್ಜೆಯ ಹೆಚ್ಚಿನೆಲ್ಲ ಪಠ್ಯಗಳನ್ನು ಕಲಿಸುವ ಪ್ರೌಢಿಮೆ ಇರಬೇಕು. ಅಲ್ಪ ಮಟ್ಟಿನ ಪ್ರಯತ್ನದಿಂದ ಪ್ರತಿಯೋರ್ವ ಅಧ್ಯಾಪಕನೂ ಇಷ್ಟು ಪ್ರತಿಭೆಯನ್ನು ಹೊಂದಬಲ್ಲನು. ತರಗತಿಯು ಬಹಳ ದೊಡ್ಡದಾಗಿರಬಾರದು. ಅನ್ಯಥಾ ವಿದ್ಯಾರ್ಥಿಗಳ ಬಗ್ಗೆ ವೈಯಕ್ತಿಕ ಗಮನವನ್ನು ಹರಿಸಲು ಸಾಧ್ಯವಾಗಲಾರದು. ಆರಂಭದ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಇಪ್ಪತ್ತೈದು-ಮೂವತ್ತು ಮೀರಬಾರದು. ಅಧ್ಯಾಪಕರ ಸಂಖ್ಯೆಯು ಕನಿಷ್ಠವೆಂದರೂ ತರಗತಿಗಳಿರುವಷ್ಟೇ ಸಂಖ್ಯೆಯಷ್ಟು ಇರಬೇಕು. ಏಕೆಂದರೆ ಓರ್ವ ಅಧ್ಯಾಪಕನು ಒಂದು ಸಮಯದಲ್ಲಿ ಒಂದೇ ತರಗತಿಯನ್ನು ನೋಡಿಕೊಳ್ಳುವಂತಾಗಬೇಕು. ಅನಿವಾರ್ಯ ಪರಿಸ್ಥಿತಿಯಲ್ಲಿ ಒಬ್ಬ ಅಧ್ಯಾಪಕನಿಗೆ ಎರಡೆರಡು ತರಗತಿಗಳನ್ನು ನೀಡಬೇಕಾಗಿ ಬಂದರೆ, ಪ್ರಾಯ ಮತ್ತು ಸಾಮರ್ಥ್ಯದಲ್ಲಿ ಸ್ವಲ್ಪವೇ ವ್ಯತ್ಯಾಸವಿರುವಂತಹ ತರಗತಿಗಳನ್ನು ಸೇರಿಸಿಕೊಡಬೇಕು. ಆಗ ಒಟ್ಟಿಗೆ ಸಾಗುವಾಗ ತೊಂದರೆ ಎನಿಸುವುದಿಲ್ಲ, ಆದರೆ ಆರಂಭದ ಎರಡು ತರಗತಿಗಳನ್ನು ಜಂಟಿಯಾಗಿ ಕಲಿಸಲೇ ಬಾರದು. ಏಕೆಂದರೆ ಆ ತರಗತಿಗಳು ನಿರಂತರ ಗಮನ ಮತ್ತು ಚಟುವಟಿಕೆಯನ್ನು ಬಯಸುತ್ತವೆ.

3. ದಣಿವು* ಮತ್ತು ಗಮನವನ್ನು ಪರಿಗಣಿಸಬೇಕು. ಶಾಲೆ ಆರಂಭವಾಗುವ ಹೊತ್ತಿನಲ್ಲಿ ಮಕ್ಕಳು ದಣಿದಿರುವುದಿಲ್ಲವಾದರೂ ಅವರ ಗಮನ ಮಾತ್ರ ಅತ್ತಿತ್ತ ಹೊರಳುತ್ತಿರುತ್ತದೆ. ಹಾಗಾಗಿ ತಕ್ಷಣವೇ ಪಾಠವನ್ನು ಆರಂಭಿಸುವುದು ಅಷ್ಟು

* ದಣಿವು ಮತ್ತು ಗಮನದ ಬಗ್ಗೆ ಈಗಾಗಲೇ ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಅವುಗಳೆಡೆಗೆ ಒಮ್ಮೆ ಕಣ್ಣೋಡಿಸಿರಿ.

ಪರಿಣಾಮಕಾರಿಯಾಗಲಾರದು. ಆದ್ದರಿಂದ ಆರಂಭದ ಸುಮಾರು 30 ನಿಮಿಷಗಳನ್ನು ಈ ಕೆಳಗಿನ ಅಗತ್ಯ ಕಾರ್ಯಗಳಲ್ಲಿ ವ್ಯಯಿಸುವುದು ಒಳ್ಳೆಯದು-

ಎಲ್ಲ ಮಕ್ಕಳೂ ಜಾಗ್ರತರಾಗುವಂತಾಗಲು ಮೊತ್ತ ಮೊದಲು ಸಿದ್ಧತೆಯ ಗಂಟೆ ಬಾರಿಸಬೇಕು. ಆಗ ಅವರು ತಮ್ಮ ಕೆಲಸ ಕಾರ್ಯಗಳನ್ನು ನಿಲ್ಲಿಸಬೇಕು. ಐದು ನಿಮಿಷ ಕಳೆದು ಎರಡನೆಯ ಗಂಟೆ ಬಾರಿಸುವಾಗ ಎತ್ತರದ ಆಧಾರದಲ್ಲಿ ಮಕ್ಕಳೆಲ್ಲ ಶಾಲೆಯ ವರಾಂಡದಲ್ಲಿ ಬಂದು ನಿಲ್ಲಬೇಕು. ಎಲ್ಲ ಅಧ್ಯಾಪಕರೂ ಆಗ ಉಪಸ್ಥಿತರಿರಬೇಕು. ಓರ್ವ ಅಧ್ಯಾಪಕನು ಸರಳವಾದ ಡ್ರಿಲ್ ಮಾಡಿಸಬೇಕು. ತರುವಾಯ ತರಗತಿಯ ಅಧ್ಯಾಪಕರು ತಂತಮ್ಮ ತರಗತಿಯ ಮಕ್ಕಳ ದೇಹ ಮತ್ತು ವಸ್ತ್ರದ ಸ್ವಚ್ಛತೆಯ ಅವಲೋಕನ ನಡೆಸಬೇಕು. ಆಮೇಲೆ ದೇವಕೀರ್ತನೆ(ಹಮ್ದ್) ಅಥವಾ ಶಾಲೆಯ ಗೀತೆಯನ್ನು ಸಾಮೂಹಿಕವಾಗಿ ಉಚ್ಚ ಸ್ವರದಲ್ಲಿ ಹಾಡಿಸಬೇಕು. ಕೊನೆಯಲ್ಲಿ ಅಗತ್ಯದ ಮಾರ್ಗದರ್ಶನ ಮತ್ತು ಘೋಷಣೆ ಇತ್ಯಾದಿಗಳ ಬಳಿಕ ತರಗತಿಯಾಧಾರದಲ್ಲಿ ಸರತಿ ಸಾಲಿನಲ್ಲಿ ಸಾವಧಾನವಾಗಿ ಮಕ್ಕಳನ್ನು ಅವರವರ ತರಗತಿಗೆ ಕಳುಹಿಸಬೇಕು. ಅಲ್ಲಿ ಕ್ಲಾಸ್ ಟೀಚರ್‌ಗಳು ಅವರ ಹಾಜರಿಯನ್ನು ಪಡೆದು ತರಗತಿ ಆರಂಭಿಸಬೇಕು. ಈ ಪ್ರಕಾರ ಈ ಅಗತ್ಯದ ಕೆಲಸವೂ ನಡೆಯುವುದು ಮತ್ತು ಗಮನದ ಸಮಸ್ಯೆಯೂ ನೀಗುವುದು.

ಪ್ರೈಮರಿ ತರಗತಿಯ ಮಕ್ಕಳ ಗಮನವು ಬಲು ಬೇಗನೇ ಬೇರೆಡೆಗೆ ಹೊರಳುತ್ತದೆ ಮತ್ತು ಅವರು ಬೇಗನೇ ದಣಿಯುತ್ತಾರೆ ಕೂಡ. ಆದ್ದರಿಂದ ತರಗತಿಗಳು(Periods) ಸೆಖೆಗಾಲದಲ್ಲಿ 30 ನಿಮಿಷ ಮತ್ತು ಚಳಿಗಾಲದಲ್ಲಿ 35 ನಿಮಿಷಗಳಿಗಿಂತ ದೀರ್ಘವಾಗಬಾರದು. ಮೊದಲ ಮೂರು ತರಗತಿಗಳಲ್ಲಿ ಮಕ್ಕಳು ಲವಲವಿಕೆಯಿಂದ ಇರುತ್ತಾರೆ. ಆ ಸಮಯದಲ್ಲಿ ಪ್ರಮುಖ ಪಾಠಗಳಾದ ಇಸ್ಲಾಮಿಯಾತ್, ಮಾತೃಭಾಷೆ ಮತ್ತು ಗಣಿತವನ್ನಿರಿಸಬೇಕು. ಬಳಿಕ ಸಂಕ್ಷಿಪ್ತವಾದ ಬಿಡುವು ನೀಡಿ ಮಕ್ಕಳಿಗೆ ದಣಿವಾರಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಆಮೇಲೆ ಎರಡು ತರಗತಿ ಕಲಿಸಿ ದೀರ್ಘ ಬಿಡುವು ನೀಡಬೇಕು. ಈ ಮೂಲಕ ಮಕ್ಕಳು ಏನಾದರೂ ತಿಂದುಂಡು, ಝುಹರ್ ನಮಾಝ್ ನಿರ್ವಹಿಸಿಯಾದ ಮೇಲೆ, ಮತ್ತೊಮ್ಮೆ ಲವಲವಿಕೆಯಿಂದ ಮಧ್ಯಾಹ್ನದ ತರಗತಿಗೆ ತಯಾರಾಗುತ್ತಾರೆ.

4. ಬದಲಾವಣೆಯನ್ನು ಪರಿಗಣಿಸಬೇಕು. ಕೆಲಸವು ಒಂದೇ ರೀತಿಯಲ್ಲಿದ್ದರೆ ಮನಸ್ಸಿಗೆ ಬೇಗನೇ ಆಯಾಸವಾಗುತ್ತದೆ. ಆದ್ದರಿಂದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಒಲವುಗಳನ್ನಾಧರಿಸಿ ಕೆಲಸದಲ್ಲಿ ಬದಲಾವಣೆಯನ್ನುಂಟು ಮಾಡುವ ವ್ಯವಸ್ಥೆಯಾಗಬೇಕು. ಓರ್ವ ಅಧ್ಯಾಪಕನಿಗೆ ಒಂದೇ ತರಗತಿಯಲ್ಲಿ ನಿರಂತರ ಮೂರು ಪೀರಿಯಡ್‌ಗಿಂತ ಹೆಚ್ಚು ಕೆಲಸ ಇರಬಾರದು. ಅದೇ ರೀತಿ ಒಂದೇ ವಿಷಯ ಅಥವಾ ಒಂದೇ ರೀತಿಯ ಪಠ್ಯ ವಿಷಯಗಳನ್ನು ನೀಡಬಾರದು. ಬದಲಾಗಿ ಓದುವುದರ ಜತೆ ಬರೆಹ ಮತ್ತು ಕಂಠಪಾಠದ

ಜತೆಗೆ ಪ್ರಾಯೋಗಿಕ ಕೆಲಸ ಮತ್ತು ಕಷ್ಟದ ಬಳಿಕ ಸುಲಭದ ವಿಷಯ ಹೀಗೆ ಇರಿಸಬೇಕು. (ಕಷ್ಟ ಮತ್ತು ಸುಲಭದ ಪರಿಗಣನೆಯಲ್ಲಿ ಪಠ್ಯಕ್ರಮ ಈ ರೀತಿ ಇರಬೇಕು: ಗಣಿತ, ಅರಬಿ ಭಾಷೆ, ಮಾತೃಭಾಷೆ, ವಿಜ್ಞಾನ, ಇತಿಹಾಸ, ಭೂಗೋಳ, ಬರವಣಿಗೆ, ಆರ್ಟ್ಸ್-ಕ್ರಾಫ್ಟ್) ಮಕ್ಕಳಿಗೆ ಜಾಗ ಮತ್ತು ದಿಕ್ಕು ಬದಲಿಸುವ ಅವಕಾಶ ನೀಡಬೇಕು. ಒಂದೇ ವಿಧಾನದಲ್ಲಿ ಬಹಳ ಹೊತ್ತು ಕುಳಿತುಕೊಳ್ಳುವುದರಿಂದ ಗಂಟುಗಳಲ್ಲಿ ನೋವು ಮತ್ತು ದಣಿವುಂಟಾಗುತ್ತದೆ. ಆರ್ಟ್-ಕ್ರಾಫ್ಟ್, ಕಿರಾಅತ್ ಇತ್ಯಾದಿಗಳಿಗೆ ಪ್ರತ್ಯೇಕ ಕೋಣೆಗಳಿದ್ದರೆ, ವಿವಿಧ ತರಗತಿಗಳ ಮಕ್ಕಳು ತಮ್ಮ ತರಗತಿ ಕೋಣೆಗಳನ್ನು ಬಿಟ್ಟು ಅಲ್ಲಿಗೆ ಹೋಗುವಾಗ, ದೇಹದಲ್ಲಿ ಉಂಟಾಗುವ ಚಟುವಟಿಕೆಯಿಂದಾಗಿ ಅವರಲ್ಲಿ ಲವಲವಿಕೆ ಮತ್ತು ಸಂತೋಷ ಹುಟ್ಟಿಕೊಳ್ಳುತ್ತದೆ. ಅದೇ ರೀತಿ ಪರಿಸರ ಅಧ್ಯಯನ, ಡ್ರಿಲ್ ಮತ್ತು ಪ್ರಾಯೋಗಿಕ ಕೆಲಸಗಳಿಗಾಗಿ ಮೈದಾನಕ್ಕೆ ಹೋಗುವುದರಿಂದಲೂ ಆನಂದದ ಅನುಭವವಾಗುತ್ತದೆ.

5. ಪ್ರತಿಯೋರ್ವ ಅಧ್ಯಾಪಕನಿಗೆ ದಿನದ ಕೆಲಸಗಳ ಮಧ್ಯೆ ಒಂದು ಪಿರಿಯಡ್‌ನಷ್ಟು ಬಿಡುವು ಇರಿಸಲು ಪ್ರಯತ್ನಿಸಬೇಕು. ಇದರಿಂದ ಹಲವು ಪ್ರಯೋಜನಗಳಿವೆ.

1) ಯಾರಾದರೊಬ್ಬ ಅಧ್ಯಾಪಕನು ಅನಿರೀಕ್ಷಿತವಾಗಿ ಹೊರಗೆ ಹೋಗಬೇಕಾಗಿ ಬಂದರೆ, ಖಾಲಿ ಇರುವ ಅಧ್ಯಾಪಕನಿಂದ ಕೆಲಸ ಮಾಡಿಸಬಹುದು. ಇದರಿಂದಾಗಿ ವಿದ್ಯಾರ್ಥಿಗಳು ಗದ್ದಲವೆಬ್ಬಿಸುವುದು ತಪ್ಪುತ್ತದೆ ಮತ್ತು ಶಿಸ್ತು ಪಾಲನೆಯೂ ಆಗುತ್ತದೆ.

2) ಮಕ್ಕಳ ಬರವಣಿಗೆ ಕೆಲಸದ ಪರಿಶೀಲನೆ ಮತ್ತು ಅವರಿಗೆ ಸಂಬಂಧಿಸಿದ ವಿವಿಧ ಪ್ರಕಾರದ ದಾಖಲೆಗಳನ್ನು ಸಿದ್ಧಪಡಿಸಲು ಅಧ್ಯಾಪಕನಿಗೆ ಅವಕಾಶ ಒದಗುತ್ತದೆ. ಸಿಬ್ಬಂದಿಗಳ ಕೊರತೆಯಿದ್ದರೆ ಪ್ರಾಯೋಗಿಕ ಕೆಲಸ, ಆಟ, ಆರ್ಟ್-ಕ್ರಾಫ್ಟ್ ಇತ್ಯಾದಿಗಳಲ್ಲಿ ಎರಡು ತರಗತಿಗಳನ್ನು ಸೇರಿಸಿ ಓರ್ವ ಅಧ್ಯಾಪಕನ ಮೇಲ್ನೋಟದಲ್ಲಿ ಬಿಡಬಹುದಾಗಿದೆ. ಪ್ರಥಮ ಮತ್ತು ದ್ವಿತೀಯ ತರಗತಿಗಳ ಕೊನೆಯ ಪಿರಿಯಡ್‌ಗಳಲ್ಲಿ ಬಿಡುವು ನೀಡುವ ಮೂಲಕ ಮತ್ತು ಮುಖ್ಯೋಪಾಧ್ಯಾಯರಿಗೆ ಕೆಲವು ತರಗತಿಗಳನ್ನು ನೀಡುವ ಮೂಲಕ ಅಧ್ಯಾಪಕರಿಗೆ ಒಂದು ಪಿರಿಯಡ್ ಖಾಲಿ ಇರಿಸಲು ಪ್ರಯತ್ನಿಸಬೇಕಾಗಿದೆ.

6. ಗುಲ್ಲು-ಗದ್ದಲಕ್ಕೆ ಅವಕಾಶ ನೀಡಬಾರದು. ಬೇರೆ ಬೇರೆ ತರಗತಿಗಳಿಗೆ ಪ್ರತ್ಯಪ್ರತ್ಯೇಕ ಕೋಣೆಗಳಿದ್ದರೆ ಚೆನ್ನ. ಆಗ ಶಬ್ದ ಹೆಚ್ಚಾಗುವ ಅವಕಾಶವಿರುವುದಿಲ್ಲ. ಆದರೆ ಅನಿವಾರ್ಯತೆ ಇದ್ದರೆ, ವಿವಿಧ ತರಗತಿಗಳಲ್ಲಿ ಉಚ್ಚಸ್ವರದಲ್ಲಿ ಕಲಿಸಬೇಕಾದ ಪಾಠಗಳನ್ನು ಒಂದೇ ಸಮಯದಲ್ಲಿ ಸಿಗದ ಹಾಗೆ ವೇಳಾಪಟ್ಟಿ ತಯಾರಿಸಬೇಕು. ಉದಾ: ಪಠಣ, ಕಿರಾಅತ್, ಮಾತೃಭಾಷೆ, ಇತಿಹಾಸ, ಭೂಗೋಳ ಇತ್ಯಾದಿ. ಅನ್ಯಥಾ ಶಬ್ದ ಹೆಚ್ಚಾಗುವುದಲ್ಲದೆ, ಮಕ್ಕಳ ಗಮನವೂ ತಪ್ಪುತ್ತ ಇರುವುದು. ಇಂತಹ ಸ್ಥಿತಿಯಲ್ಲಿ ಒಂದು ತರಗತಿಗೆ ಉಚ್ಚ ಸ್ವರದಲ್ಲಿ ಪಾಠ ಮಾಡುತ್ತಿರುವಾಗ, ಇನ್ನೊಂದು ತರಗತಿಗೆ ಗಣಿತ, ಡ್ರಾಯಿಂಗ್ ಅಥವಾ ಬರವಣಿಗೆಯ ಕೆಲಸ ನೀಡಬೇಕು.

7. ಪುನರಾವರ್ತನೆ ಮತ್ತು ಪರಿಶೀಲನೆಗೆ ಪ್ರತ್ಯೇಕ ಸಮಯ ಇರಿಸಬೇಕು. ಪುನರಾವರ್ತನೆಗೆ ವಾರಾಂತ್ಯ ಸೂಕ್ತ. ಏಕೆಂದರೆ ವಾರದ ಕೊನೆಯಲ್ಲಿ ದಣಿವು ಹೆಚ್ಚಿರುತ್ತದೆ ಮತ್ತು ಹೊಸ ಪಾಠಕ್ಕೆ ಮನಸ್ಸು ಸಿದ್ಧವಾಗಿರುವುದಿಲ್ಲ. ಪರಿಶೀಲನೆಯನ್ನು ಸದಾ ವಾರದ ಆರಂಭದಲ್ಲಿ ಇರಿಸಬೇಕು. ಇದರಿಂದ ವಾರದ ರಜೆಯಲ್ಲಿ ಮಕ್ಕಳಿಗೆ ಸಿದ್ಧತೆ ನಡೆಸಲು ಅವಕಾಶ ದೊರೆಯುತ್ತದೆ.

8. ವೇಳಾಪಟ್ಟಿಯನ್ನು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ಸುಲಭವಾಗಿ ನೆನಪಿನಲ್ಲಿ ಉಳಿಯುವ ರೀತಿಯಲ್ಲಿ ರಚಿಸಬೇಕು. ಅದು ದಿನನಿತ್ಯ ಮತ್ತು ಪ್ರತಿ ಪೀರಿಯಡ್ ಬಳಿಕ ನೋಡುವ ಅಗತ್ಯ ಬೀಳದಂತಿರಬೇಕು. ಒಂದು ವಿಷಯವನ್ನು ಮೊದಲ ದಿನ ಯಾವ ಪೀರಿಯಡ್‌ನಲ್ಲಿ ಇರಿಸಲಾಗುತ್ತದೋ ವಾರದ ಎಲ್ಲ ದಿನಗಳಲ್ಲೂ ಅದನ್ನು ಅದೇ ಸಮಯದಲ್ಲಿ ಇರಿಸಬೇಕು. ಇನ್ನು ಯಾವುದಾದರೂ ವಿಷಯವನ್ನು ವಾರದಲ್ಲಿ ಎರಡು ಅಥವಾ ಮೂರು ದಿನ ಮಾತ್ರ ಕಲಿಸುವುದಾದರೆ ಅದನ್ನು ನಿರಂತರ ಎರಡ್ಮೂರು ದಿನಗಳಲ್ಲಿ ಇರಿಸಬಾರದು. (ಉದಾಹರಣೆಗೆ ಭೂಗೋಳ, ವಿಜ್ಞಾನ ಇತ್ಯಾದಿ) ಅನ್ಯಥಾ ಪುನಃ ಅವುಗಳ ಸರದಿ ಬರುವಾಗ ಹೆಚ್ಚು ಸಮಯ ಕಳೆದಿರುತ್ತದೆ ಮತ್ತು ಅದನ್ನು ಮಕ್ಕಳು ಮರೆಯುವ ಸಾಧ್ಯತೆಯೂ ಇದೆ. ಆದ್ದರಿಂದ ಅಂತಹ ಪಠ್ಯ ವಿಷಯಗಳನ್ನು ಒಂದು ಅಥವಾ ಎರಡು ದಿನಗಳ ಅಂತರದಲ್ಲಿ ಇರಿಸಬೇಕು.

9. ಸಂಸ್ಥೆಗೆ ಅದರದೇ ಆದ ದಿನಚರಿ ಇರುತ್ತದೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ತಮ್ಮನ್ನು ಆ ದಿನಚರಿಗೆ ಬದ್ಧಗೊಳಿಸಬೇಕು. ಆದರೂ ವೇಳಾಪಟ್ಟಿ ತಯಾರಿಸುವಾಗ, ಹೆಚ್ಚಿನವರಿಗೆ ಅದರ ಪಾಲನೆ ಸುಲಭವಾಗುವಂತೆ ಮತ್ತು ಉಪಹಾರ, ಊಟ, ನಮಾಝ್, ಆಟ, ಪಠ್ಯೇತರ ಚಟುವಟಿಕೆ ಹಾಗೂ ವಿಶ್ರಾಂತಿ ಇತ್ಯಾದಿಗಳಿಗೆ ಸಾಕಷ್ಟು ಸಮಯ ದೊರೆಯುವಂತೆ ನೋಡಿಕೊಳ್ಳಬೇಕು. ಈ ರೀತಿ ಪವಿತ್ರ ಕುರ್‌ಆನಿನ ಬೋಧನೆಯನ್ನು ದಿನದ ಮೊದಲ ಪೀರಿಯಡ್‌ನಲ್ಲಿ ಅಥವಾ ಮಧ್ಯಾಹ್ನದ ಬಿಡುವಿನ ನಂತರದ ಮೊದಲ ಪೀರಿಯಡ್‌ನಲ್ಲಿ ಇರಿಸಬೇಕು. ಇದರಿಂದ ಮಕ್ಕಳಿಗೆ ವುಝೂ ಮಾಡಲು ಸಾಕಷ್ಟು ಸಮಯ ದೊರೆಯುತ್ತದೆ ಮತ್ತು ಪವಿತ್ರ ಕುರ್‌ಆನನ್ನು ವುಝೂ ಸಹಿತ ಕಲಿಯುವ ಅಭ್ಯಾಸವಾಗುತ್ತದೆ.

10. ಮಕ್ಕಳ ಸಭೆ, ಶೈಕ್ಷಣಿಕ ಪ್ರವಾಸ ಮತ್ತು ಪಿಕ್‌ನಿಕ್ ಇತ್ಯಾದಿಗಳಿಗೂ ವಾರದ ಕೊನೆಯ ದಿನ ಸೂಕ್ತವಾಗಿದೆ. ಸಭೆಗಾಗಿ ತರಗತಿಗಳ ಸಮಯವನ್ನು ಐದೈದು ನಿಮಿಷ ಕಡಿತಗೊಳಿಸಬೇಕು ಹಾಗೂ ಕೊನೆಯ ಪೀರಿಯಡನ್ನು ರದ್ದುಗೊಳಿಸಿ ಸುಮಾರು ಒಂದೂವರೆ ಗಂಟೆಯ ಕಾರ್ಯಕ್ರಮವನ್ನು ಇರಿಸಬೇಕು. ಅದರಲ್ಲಿ ಮಕ್ಕಳು ಭಾಷಣ, ಹಾಡು, ಕಥೆ ಹಾಸ್ಯ ಇತ್ಯಾದಿಗಳಲ್ಲಿ ತೊಡಗಬಹುದು. ಅದೇ ರೀತಿ ಹೊರಗೆ ಕರಕೊಂಡು ಹೋಗಲು ಇದೇ ದಿನ ಒಳ್ಳೆಯದು. ಏಕೆಂದರೆ ಆ ಬಳಿಕ ವಿಶ್ರಾಂತಿಗೆ ಮರುದಿನ ವಾರದ ರಜೆ ಇರುತ್ತದಷ್ಟೇ

11. ಸಂಸ್ಥೆಯ ಪರಿಸ್ಥಿತಿಗಳನ್ನು ಪರಿಗಣಿಸಬೇಕು. ಇತರ ಸಂಸ್ಥೆಯ ವೇಳಾಪಟ್ಟಿ ಎಷ್ಟೇ ಉತ್ತಮವಾಗಿದ್ದರೂ ಅದನ್ನು ಇದಮಿತ್ತಂ ನಕಲು ಮಾಡುವುದು ಒಂದು ಸಂಸ್ಥೆಗೆ ಒಳ್ಳೆಯದಲ್ಲ, ಪ್ರತಿಯೊಂದು ಸಂಸ್ಥೆಗೂ ತನ್ನ ಪರಿಸ್ಥಿತಿ, ಅಗತ್ಯ, ಅಧ್ಯಾಪಕರ ಸಂಖ್ಯೆ, ಅವರ ಪ್ರತಿಭೆ-ಸಾಮರ್ಥ್ಯ, ಕಟ್ಟಡದ ಸ್ಥಳಾವಕಾಶ ಇತ್ಯಾದಿಗಳನ್ನು ದೃಷ್ಟಿಯಲ್ಲಿರಿಸಿಯೇ ತನ್ನ ವೇಳಾಪಟ್ಟಿಯನ್ನು ಸ್ವಯಂ ತಯಾರಿಸಬೇಕು.

ವೇಳಾಪಟ್ಟಿಯು ಮೂರು ರೀತಿಯದ್ದಾಗಿರಬೇಕು:

1) ಇಡೀ ಸಂಸ್ಥೆಯ ಒಟ್ಟು ವೇಳಾಪಟ್ಟಿ: ಅದರ ಒಂದು ಪ್ರತಿ ಮುಖ್ಯೋಪಾಧ್ಯಾಯರ ಬಳಿ ಇರಬೇಕು. ಇನ್ನೊಂದು ಪ್ರತಿಯನ್ನು ನೋಟಿಸ್ ಬೋರ್ಡ್‌ನಲ್ಲಿ ಅಂಟಿಸಿರಬೇಕು. ಇದು ಸ್ಪಷ್ಟ ಮತ್ತು ಸುವ್ಯಕ್ತವಾಗಿರಬೇಕು. ಈ ವೇಳಾಪಟ್ಟಿಯು ನೋಡುವವರಿಗೆ, ಯಾವ ತರಗತಿಯಲ್ಲಿ ಯಾವ ಅಧ್ಯಾಪಕನು, ಯಾವ ಸಮಯದಲ್ಲಿ ಯಾವ ವಿಷಯವನ್ನು ಕಲಿಸುತ್ತಾನೆ ಎಂಬುದು ಸರಿಯಾಗಿ ತಿಳಿಯುವಂತಿರಬೇಕು. ಅಂತೆಯೇ ತರಗತಿಯ ಕ್ಲಾಸ್ ಟೀಚರ್ ಯಾರು ಮತ್ತು ಸಂಸ್ಥೆಯಲ್ಲಿ ಯಾವೆಲ್ಲ ಕೆಲಸ ನಡೆಯುತ್ತಿದೆ ಎಂಬುದೂ ತಿಳಿಯುವಂತಿರಬೇಕು.

2) ತರಗತಿಯ ವೇಳಾಪಟ್ಟಿ: ಪ್ರತಿ ತರಗತಿಯ ಕ್ಲಾಸ್ ಟೀಚರ್ ಸಂಸ್ಥೆಯ ಒಟ್ಟು ವೇಳಾಪಟ್ಟಿಯಿಂದ ತನ್ನ ತರಗತಿಯ ವಿಷಯಗಳನ್ನು ಪ್ರತ್ಯೇಕವಾಗಿ ಬರೆದು ತರಗತಿಯ ಗೋಡೆಗೆ ಅಂಟಿಸಬೇಕು ಮತ್ತು ಅದನ್ನು ವಿದ್ಯಾರ್ಥಿಗಳಿಂದ ಅವರ ಕಾಪಿಗಳಲ್ಲಿ ಬರೆಸಬೇಕು. ಮಾಡಿದ ಪಾಠಗಳ ಪರಿಶೀಲನೆ, ಹೋಮ್‌ವರ್ಕ್ ಪರಿಶೀಲನೆ ಮತ್ತು ಪಠ್ಯೇತರ ವಿಷಯ–ಚಟುವಟಿಕೆಗಳನ್ನು ಇದರಲ್ಲಿ ಸೇರಿಸಬೇಕು.

3) ಅಧ್ಯಾಪಕರ ಡೈರಿ: ಪ್ರತಿಯೋರ್ವ ಅಧ್ಯಾಪಕನೂ ಒಂದಿಡೀ ವಾರದ ವಿವಿಧ ಪೀರಿಯಡ್‌ಗಳಲ್ಲಿ, ಯಾವ ತರಗತಿಯಲ್ಲಿ, ಯಾವ ಪಾಠವನ್ನು ಕಲಿಸುತ್ತಾನೆ ಮತ್ತು ಯಾವ ಪೀರಿಯಡ್‌ನಲ್ಲಿ ಖಾಲಿ ಇರುತ್ತಾನೆ ಎಂಬುದನ್ನು ಇದರಲ್ಲಿ ನಮೂದಿಸಲಾಗಿರುತ್ತದೆ. ಇದೂ ಕೂಡ ಮುಖ್ಯೋಪಾಧ್ಯಾಯರ ಕಚೇರಿಯಲ್ಲಿ ಇರಬೇಕು ಮತ್ತು ಪ್ರತಿಯೋರ್ವ ಅಧ್ಯಾಪಕನೂ ತನಗೆ ಸಂಬಂಧಿಸಿರುವ ವಿಷಯವನ್ನು ತನ್ನ ಡೈರಿಯಲ್ಲಿ ಬರೆದಿಡಬೇಕು.

ವೇಳಾಪಟ್ಟಿಗಳ ಮಾದರಿಯು ಈ ಕೆಳಗಿನಂತಿದೆ:

ರಿಜಿಸ್ಟರ್ ಮತ್ತಿತರ ದಾಖಲೆಗಳು

ಪ್ರತಿಯೊಂದು ಸಂಸ್ಥೆಗೂ ಹಲವು ರೀತಿಯ ರಿಜಿಸ್ಟರ್ ಮತ್ತು ಫೈಲುಗಳನ್ನು ಇರಿಸಬೇಕಾಗಿ ಬರುತ್ತದೆ. ಅವುಗಳಲ್ಲಿ ಸಂಸ್ಥೆಗೆ ಸಂಬಂಧಿಸಿದ ವಿವಿಧ ದಾಖಲೆಗಳನ್ನು ಸುರಕ್ಷಿತವಾಗಿರಿಸಲಾಗುತ್ತದೆ. ಅವುಗಳನ್ನು ಜೋಪಾನವಾಗಿರಿಸುವುದು ಹಲವು ಕಾರಣಗಳಿಂದ ತೀರಾ ಅಗತ್ಯವಾಗಿದೆ.

ಬಿಸ್ಮಿಲ್ಲಾಹಿ ರ್ರಹ್ಮಾನಿರ್ರಹೀಮ್

ಶಾಲೆಯ ಸಮಗ್ರ ವೇಳಾಪಟ್ಟಿ

ತಯಾರಿಯ ಗಂಟೆ ಮೊದಲ ಅವಧಿ- 9:55 | ಶಾಲೆಯ ಹೆಸರು: .... | ಹಾಜರಿ ಗಂಟೆ ದ್ವಿತೀಯ ಅವಧಿ- 1:45

ತರಗತಿಗಳು	ಕ್ಲಾಸ್ ಟೀಚರ್	10:00-10:15	10:15-10:20	I (10:20-10:50)	II (10:50-11:20)	III (11:20-11:50)	IV (11:50-12:20)	V (12:20-12:50)	12:50-1:45	1:45-1:50	VI (1:50-2:20)	VII (2:20-2:50)	VIII (2:50-3:20)	IX (3:20-3:50)	3:50-4:00	ಷರಾ
ಮೊದಲನೇ	ಅಬ್ದುಲ್ ವಹ್ಹಾಬ್ ಸಹಾಯಕ ಶಿಕ್ಷಕರು	ಸಾಮೂಹಿಕ ಹಾಜರಿ	ತರಗತಿಯ ಹಾಜರಿ	ಕುರ್‌ಆನ್ ಅಬ್ದುಲ್ ವಹ್ಹಾಬ್	ಉರ್ದು ಕಾದಿರ್ ಅಲಿ	ಗಣಿತ ಕಾದಿರ್ ಅಲಿ	ಉರ್ದು ಅಬ್ದುಲ್ ವಹ್ಹಾಬ್	ಉರ್ದು ಅಬ್ದುಲ್ ವಹ್ಹಾಬ್	ನಮಾಝ್ ಮತ್ತು ಊಟದ ವಿರಾಮ	ಎರಡನೇ ಹಾಜರಿ	ಆರ್ಟ್/ಕ್ರಾಫ್ಟ್ ಅಬ್ದುಲ್ ಗಫ್ಫಾರ್	ಭೂಗೋಳ/ ವಿಜ್ಞಾನ ಅಬ್ದುಲ್ ವಹ್ಹಾಬ್	ವುದುಊ/ ನಮಾಝ್ ಕಾದಿರ್ ಅಲಿ	ಆಟ ಅಬ್ದುಲ್ ವಹ್ಹಾಬ್	ವಿದ್ಯಾರ್ಥಿಗಳೊಂದಿಗೆ ಅಧ್ಯಾಪಕರ ವೈಯಕ್ತಿಕ ಭೇಟಿ	
ಎರಡನೇ	ಕಾದಿರ್ ಅಲೀ ಸಹಾಯಕ ಶಿಕ್ಷಕರು			ಕುರ್‌ಆನ್ ಕಾದಿರ್ ಅಲಿ	ಉರ್ದು ಅಬ್ದುಲ್ ವಹ್ಹಾಬ್	ಉರ್ದು ಅಬ್ದುಲ್ ವಹ್ಹಾಬ್	ಗಣಿತ ಕಾದಿರ್ ಅಲಿ	ಗಣಿತ ಕಾದಿರ್ ಅಲಿ			ಆರ್ಟ್/ಕ್ರಾಫ್ಟ್ ಕಾದಿರ್ ಅಲಿ	ಭೂಗೋಳ/ ವಿಜ್ಞಾನ ಕಾದಿರ್ ಅಲಿ	ವುದುಊ/ ನಮಾಝ್ ಕಾದಿರ್ ಅಲಿ	ಆಟ ಅಬ್ದುಲ್ ವಹ್ಹಾಬ್		
ಮೂರನೇ	ಅಬ್ದುಲ್ ಗಫ್ಫಾರ್ ಸಹಾಯಕ ಶಿಕ್ಷಕರು			ಕುರ್‌ಆನ್ ಅಬ್ದುಲ್ ಗಫ್ಫಾರ್	ಗಣಿತ ಮುಹಮ್ಮದ್ ಅಮೀನ್	ಗಣಿತ /ಉರ್ದು ಅಮೀನ್/ ಗಫ್ಫಾರ್	ಉರ್ದು ಅಬ್ದುಲ್ ಗಫ್ಫಾರ್	ಆರ್ಟ್/ಕ್ರಾಫ್ಟ್ ಅಬ್ದುಲ್ ಗಫ್ಫಾರ್			ಹಿಂದಿ ಮುಹಮ್ಮದ್ ಅಮೀನ್	ಭೂಗೋಳ/ ವಿಜ್ಞಾನ ಅಬ್ದುಲ್ ಗಫ್ಫಾರ್	ಇಸ್ಲಾಮಿಯಾತ್ ಅಬ್ದುಲ್ ಮಜೀದ್	ಪಿ.ಟಿ./ ತೋಟಗಾರಿಕೆ ಮುಹಮ್ಮದ್ ಅಮೀನ್		
ನಾಲ್ಕನೇ	ಮುಹಮ್ಮದ್ ಅಮೀನ್ ಸಹಾಯಕ ಶಿಕ್ಷಕರು			ಕುರ್‌ಆನ್ ಮುಹಮ್ಮದ್ ಅಮೀನ್	ಉರ್ದು ಅಬ್ದುಲ್ ಗಫ್ಫಾರ್	ಗಣಿತ /ಉರ್ದು ಅಮೀನ್/ ಗಫ್ಫಾರ್	ಗಣಿತ ಮುಹಮ್ಮದ್ ಅಮೀನ್	ಗಣಿತ ಮುಹಮ್ಮದ್ ಅಮೀನ್			ಇಸ್ಲಾಮಿಯಾತ್ ಅಬ್ದುಲ್ ಮಜೀದ್	ಭೂಗೋಳ/ ವಿಜ್ಞಾನ ಮುಹಮ್ಮದ್ ಅಮೀನ್	ಆರ್ಟ್/ಕ್ರಾಫ್ಟ್ ಅಬ್ದುಲ್ ಗಫ್ಫಾರ್	ಪಿ.ಟಿ./ ತೋಟಗಾರಿಕೆ ಮುಹಮ್ಮದ್ ಅಮೀನ್		
ಐದನೇ	ಅಬ್ದುಲ್ ಮಜೀದ್ ಖಾನ್ ಮುಖ್ಯೋ-ಪಾಧ್ಯಾಯರು			ಕುರ್‌ಆನ್ ಅಬ್ದುಲ್ ಮಜೀದ್	ಗಣಿತ ಅಬ್ದುಲ್ ಮಜೀದ್	ಗಣಿತ /ಉರ್ದು ಅಬ್ದುಲ್ ಮಜೀದ್	ಉರ್ದು ಅಬ್ದುಲ್ ಮಜೀದ್	ಇಸ್ಲಾಮಿಯಾತ್ ಅಬ್ದುಲ್ ಮಜೀದ್			ಭೂಗೋಳ/ ವಿಜ್ಞಾನ ಅಬ್ದುಲ್ ವಹ್ಹಾಬ್	ಹಿಂದಿ ಅಬ್ದುಲ್ ಮಜೀದ್	ಆರ್ಟ್/ಕ್ರಾಫ್ಟ್ ಅಬ್ದುಲ್ ಗಫ್ಫಾರ್	ಪಿ.ಟಿ./ ತೋಟಗಾರಿಕೆ ಮುಹಮ್ಮದ್ ಅಮೀನ್		
ಅಧ್ಯಾಪಕರ ಖಾಲಿ ಸಮಯ													ಅಬ್ದುಲ್ ವಹ್ಹಾಬ್ ಮುಹಮ್ಮದ್ ಅಮೀನ್	ಕಾದಿರ್ ಅಲಿ ಅಬ್ದುಲ್ ಗಫ್ಫಾರ್ ಅಬ್ದುಲ್ ಮಜೀದ್		

ತಯಾರಿಯ ಗಂಟೆ - 9:55 | ಮೂರನೇ ತರಗತಿಯ ವೇಳಾಪಟ್ಟಿ, ಶಾಲೆ : .... | ದಿನಾಂಕ : 1 ಜುಲೈ 20 ....

ದಿನಗಳು	10:00-10:15	10:15-10:20	I (10:20-10:50)	II (10:50-11:20)	III (11:20-11:50)	IV (11:50-12:20)	V (12:20-12:50)	12:50-1:45	1:45-1:50	VI (1:50-2:20)	VII (2:20-2:50)	VIII (2:50-3:20)	IX (3:20-3:50)	3:50-4:00	ಷರಾ
ಸೋಮವಾರ	ಸಾಮೂಹಿಕ ಹಾಜರಿ	ತರಗತಿಯ ಹಾಜರಿ	ಕುರ್‌ಆನ್ ಪಠಣ ಅಬ್ದುಲ್ ಗಫ್ಫಾರ್	ಗಣಿತ(ಲಿಖಿತ) ಮುಹಮ್ಮದ್ ಅಮೀನ್	ಗಣಿತ(ಮೌಖಿಕ) ಮುಹಮ್ಮದ್ ಅಮೀನ್	ಉರ್ದು (ಪಠಣ) ಅಬ್ದುಲ್ ಗಫ್ಫಾರ್	ಆರ್ಟ್ ಅಬ್ದುಲ್ ಗಫ್ಫಾರ್	ನಮಾಜ್ ಮತ್ತು ಊಟದ ವಿರಾಮ	ಎರಡನೇ ಹಾಜರಿ	ಹಿಂದಿ (ಪಠಣ) ಮುಹಮ್ಮದ್ ಅಮೀನ್	ಭೂಗೋಳ ಅಬ್ದುಲ್ ಗಫ್ಫಾರ್	ಫಿಕ್ಹ್/ಅಕಾಯಿದ ಅಬ್ದುಲ್ ಮಜೀದ್	ತೋಟಗಾರಿಕೆ ಮುಹಮ್ಮದ್ ಅಮೀನ್	ವೈಯಕ್ತಿಕ ಫೈಲು	
ಮಂಗಳವಾರ			ಕುರ್‌ಆನ್ ಪಠಣ ಅಬ್ದುಲ್ ಗಫ್ಫಾರ್	ಗಣಿತ(ಲಿಖಿತ) ಮುಹಮ್ಮದ್ ಅಮೀನ್	ಉರ್ದು(ನಕಲು) ಅಬ್ದುಲ್ ಗಫ್ಫಾರ್	ಉರ್ದು (ಪಠಣ) ಅಬ್ದುಲ್ ಗಫ್ಫಾರ್	ಕ್ರಾಫ್ಟ್ ಅಬ್ದುಲ್ ಗಫ್ಫಾರ್			ಹಿಂದಿ (ಪಠಣ) ಮುಹಮ್ಮದ್ ಅಮೀನ್	ವಿಜ್ಞಾನ ಅಬ್ದುಲ್ ಗಫ್ಫಾರ್	ಫಿಕ್ಹ್/ಅಕಾಯಿದ ಅಬ್ದುಲ್ ಮಜೀದ್	ಆಟ / ಪಿ.ಟಿ. ಮುಹಮ್ಮದ್ ಅಮೀನ್		
ಬುಧವಾರ			ಹಿಫ್ಜ್ ಅಬ್ದುಲ್ ಗಫ್ಫಾರ್	ಗಣಿತ(ಲಿಖಿತ) ಮುಹಮ್ಮದ್ ಅಮೀನ್	ಗಣಿತ(ಮೌಖಿಕ) ಮುಹಮ್ಮದ್ ಅಮೀನ್	ಉರ್ದು (ಪಠಣ) ಅಬ್ದುಲ್ ಗಫ್ಫಾರ್	ಆರ್ಟ್ ಅಬ್ದುಲ್ ಗಫ್ಫಾರ್			ಹಿಂದಿ (ಬರವಣಿಗೆ) ಮುಹಮ್ಮದ್ ಅಮೀನ್	ಭೂಗೋಳ ಅಬ್ದುಲ್ ಗಫ್ಫಾರ್	ಇತಿಹಾಸ ಪಾಠ ಅಬ್ದುಲ್‌ಮಜೀದ್	ತೋಟಗಾರಿಕೆ ಮುಹಮ್ಮದ್ ಅಮೀನ್		
ಗುರುವಾರ			ಕುರ್‌ಆನ್ ಪಠಣ ಅಬ್ದುಲ್ ಗಫ್ಫಾರ್	ಗಣಿತ(ಲಿಖಿತ) ಮುಹಮ್ಮದ್ ಅಮೀನ್	ಉರ್ದು ಬರವಣಿಗೆ ಅಬ್ದುಲ್ ಗಫ್ಫಾರ್	ಉರ್ದು (ಪಠಣ) ಅಬ್ದುಲ್ ಗಫ್ಫಾರ್	ಕ್ರಾಫ್ಟ್ ಅಬ್ದುಲ್ ಗಫ್ಫಾರ್			ಹಿಂದಿ (ಪಠಣ) ಮುಹಮ್ಮದ್ ಅಮೀನ್	ವಿಜ್ಞಾನ ಅಬ್ದುಲ್ ಗಫ್ಫಾರ್	ಫಿಕ್ಹ್/ಅಕಾಯಿದ ಅಬ್ದುಲ್ ಮಜೀದ್	ಆಟ / ಪಿ.ಟಿ. ಮುಹಮ್ಮದ್ ಅಮೀನ್		
ಶುಕ್ರವಾರ			ಕುರ್‌ಆನ್ ಪಠಣ ಅಬ್ದುಲ್ ಗಫ್ಫಾರ್	ಗಣಿತ(ಲಿಖಿತ) ಮುಹಮ್ಮದ್ ಅಮೀನ್	ಗಣಿತ(ಲಿಖಿತ) ಮುಹಮ್ಮದ್ ಅಮೀನ್	ಉರ್ದು (ಪಠಣ) ಅಬ್ದುಲ್ ಗಫ್ಫಾರ್	ಆರ್ಟ್ ಅಬ್ದುಲ್ ಗಫ್ಫಾರ್			ಹಿಂದಿ (ಪಠಣ) ಮುಹಮ್ಮದ್ ಅಮೀನ್	ಭೂಗೋಳ/ ವಿಜ್ಞಾನ ಅಬ್ದುಲ್ ಗಫ್ಫಾರ್	ಫಿಕ್ಹ್/ಅಕಾಯಿದ ಅಬ್ದುಲ್ ಮಜೀದ್	ತೋಟಗಾರಿಕೆ ಮುಹಮ್ಮದ್ ಅಮೀನ್		
ಶನಿವಾರ			ಪುನರಾವರ್ತನೆ ಅಬ್ದುಲ್ ಗಫ್ಫಾರ್	ಗಣಿತ(ಲಿಖಿತ) ಮುಹಮ್ಮದ್ ಅಮೀನ್	ಉರ್ದು (ಉಕ್ತಲೇಖನ) ಅಬ್ದುಲ್ ಗಫ್ಫಾರ್	ಉರ್ದು (ಪಠಣ) ಅಬ್ದುಲ್ ಗಫ್ಫಾರ್	ಕ್ರಾಫ್ಟ್ ಅಬ್ದುಲ್ ಗಫ್ಫಾರ್			ಹಿಂದಿ (ಬರವಣಿಗೆ) ಮುಹಮ್ಮದ್ ಅಮೀನ್	ಭೂಗೋಳ/ ವಿಜ್ಞಾನ ಅಬ್ದುಲ್ ಗಫ್ಫಾರ್	ಇತಿಹಾಸ ಪಾಠ ಅಬ್ದುಲ್ ಮಜೀದ್	ಸಾಪ್ತಾಹಿಕ ಸಭೆಗಳು ಅಬ್ದುಲ್ ಗಫ್ಫಾರ್		

ದಿನಾಂಕ :- 1 ಜುಲೈ 20 .... | ಸಹಿ : ಅಬ್ದುಲ್ ಗಫ್ಫಾರ್(ಕ್ಲಾಸ್ ಟೀಚರ್)

ಅಗತ್ಯ ಮತ್ತು ಮಹತ್ವ

- ಅವುಗಳ ಮುಖಾಂತರ ಸಂಸ್ಥೆಯ ಪ್ರಗತಿಯ ವೇಗವನ್ನು ಅಂದಾಜಿಸಬಹುದಾಗಿದೆ.
- ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಮಾಹಿತಿ ದೊರೆಯುತ್ತದೆ.
- ಸಂಸ್ಥೆಯ ಅಗತ್ಯಗಳನ್ನು ಅಂದಾಜಿಸಬಹುದಾಗಿದೆ.
- ಸಂಸ್ಥೆಯ ಆಯ-ವ್ಯಯಗಳ ಮಾಹಿತಿ ಪಡೆಯಬಹುದಾಗಿದೆ.
- ಸಂಸ್ಥೆಯ ಹೊಣೆಗಾರರು, ಅಧ್ಯಾಪಕರು ಮತ್ತು ಮಕ್ಕಳ ಹೆತ್ತವರಿಗೆ ವಿದ್ಯಾರ್ಥಿಗಳ ಹಾಜರಿ, ಪರೀಕ್ಷಾ ಫಲಿತಾಂಶ, ಪ್ರಗತಿ ಇತ್ಯಾದಿಗಳ ಬಗ್ಗೆ ನಿಖರವಾಗಿ ತಿಳಿಯಬಹುದಾಗಿದೆ.
- ಸಂಸ್ಥೆಗೆ ಸಂಬಂಧಿಸಿದಂತೆ ಹೊಣೆಗಾರರ ಅಭಿಪ್ರಾಯ, ಆದೇಶ, ಮಾರ್ಗದರ್ಶನಗಳ ಬಗ್ಗೆ ಅರಿಯಬಹುದು.
- ಸಂಸ್ಥೆಯ ಅಭ್ಯುದಯದ ಬಗ್ಗೆ ಚಿಂತಿಸಲು ಮತ್ತು ಮುಂದಿನ ಯೋಜನೆ ರೂಪಿಸಲು ಸಹಾಯಕವಾಗುತ್ತದೆ.
- ವಿದ್ಯಾರ್ಥಿಗಳ ಸಂತುಲಿತ ಶಿಕ್ಷಣ-ತರಬೇತಿ, ಪ್ರಗತಿ ಮತ್ತು ತರಗತಿ ರಚನೆಯು ಸುಲಭವಾಗುತ್ತದೆ.

ಗಮನಾರ್ಹ ವಿಷಯಗಳು

ರಿಜಿಸ್ಟರ್, ಫೈಲು ಇತ್ಯಾದಿಗಳನ್ನು ಇರಿಸುವ ನಿಟ್ಟಿನಲ್ಲಿ ಈ ಕೆಳಗಿನ ವಿಷಯಗಳನ ಗಮನದಲ್ಲಿರಿಸಬೇಕು.

- ಕಚೇರಿಯ ಕೆಲಸವು ಆದಷ್ಟು ಕಡಿಮೆಯಾಗುವ ರೀತಿಯಲ್ಲಿ ರಿಜಿಸ್ಟರ್‌ಗಳನ ದಾಖಲಿಸಬೇಕು.
- ಅಗತ್ಯವಿರುವ ದಾಖಲೆಯನ್ನಷ್ಟೇ ಇರಿಸಬೇಕು. ಯಾವ ವಸ್ತು ಇಲ್ಲದೆ ಕೆಲ ನಡೆಯುತ್ತದೆಯೋ ಅದಕ್ಕಾಗಿ ಸಮಯ ಮತ್ತು ಶಕ್ತಿ ವ್ಯಯಿಸುವುದು ವ್ಯರ್ಥ ಕೆಲವು ಸಂಸ್ಥೆಗಳು ಪ್ರದರ್ಶನದ ಹೊರತು ಬೇರಾವುದೇ ಪ್ರಯೋಜನಕ್ಕೆ ಬಾರದಂತ ಕೆಲಸಗಳಲ್ಲಿಯೇ ಅಧ್ಯಾಪಕರ ಸಮಯವನ್ನು ಪೋಲು ಮಾಡುತ್ತವೆ. ಆ ಸಮಯವನ ದುರ್ಬಲ ವಿದ್ಯಾರ್ಥಿಗಳ ಬಗ್ಗೆ ವೈಯಕ್ತಿಕ ಗಮನ ನೀಡಲು ಬಳಸಿದರೆ ಹೆಚ ಪ್ರಯೋಜನಕಾರಿಯೆನಿಸುವುದು.
- ರೆಕಾರ್ಡ್‌ಗಳನ್ನು ಬಹಳ ಜೋಪಾನವಾಗಿರಿಸಬೇಕು. ಅಚ್ಚುಕಟ್ಟಾಗಿ ಅಗತ್ಯದ ವಿವ ಗಳನ್ನು ನಮೂದಿಸುವ ವ್ಯವಸ್ಥೆಯಾಗಬೇಕು. ಮಾಹಿತಿಗಳು ಅಪೂರ್ಣವಾಗಿರಬಾರದ ಮತ್ತು ಅದರ ಬಗ್ಗೆ ಸಂಪೂರ್ಣ ಭರವಸೆಯನ್ನು ಇರಿಸುವಂತಿರಬೇಕು.

- ದಾಖಲೆಗಳನ್ನು ಇರಿಸುವ ಭರದಲ್ಲಿ ಅಧ್ಯಾಪಕರ ಬೋಧನಾ ಕಾರ್ಯದಲ್ಲಿ ಚ್ಯುತಿಯುಂಟಾಗಬಾರದು. ಇಂತಹ ಕೆಲಸಗಳಿಗೆ ಪ್ರತಿಯೋರ್ವ ಅಧ್ಯಾಪಕನಿಗೆ ದಿನನಿತ್ಯ ಕನಿಷ್ಠ ಒಂದು ಪೀರಿಯೆಡ್ ಬಿಡುವು ಇದ್ದರೆ ಉತ್ತಮ. ಮಾಸಿಕ ದಾಖಲೆ ಬರೆಯಲು ಮತ್ತು ರಿಜಿಸ್ಟರ್ ಇತ್ಯಾದಿಗಳನ್ನು ಪೂರ್ತಿಗೊಳಿಸಲು ತಿಂಗಳ ಕೊನೆಯ ತಾರೀಕಿನಂದು ಮಧ್ಯಾಹ್ನದ ನಂತರ ಮಕ್ಕಳಿಗೆ ರಜೆ ನೀಡುವುದು ಉತ್ತಮ.
- ಪ್ರತಿಯೊಂದು ಕೆಲಸಕ್ಕೂ ಸಾಧ್ಯವಾದಷ್ಟರ ಮಟ್ಟಿಗೆ ಪ್ರತ್ಯೇಕ ಫೈಲು, ರಿಜಿಸ್ಟರ್ ಇರಿಸಬೇಕು. ಇದರಿಂದ ಅಗತ್ಯಾನುಸಾರ ಮಾಹಿತಿಗಳನ್ನು ಸುಲಭದಲ್ಲಿ ಪಡೆಯಬಹುದಾಗಿದೆ.
- ದಾಖಲೆಯು ಪರಿಪೂರ್ಣವಾಗಿರಬೇಕಾದರೆ ವಿಷಯವನ್ನು ಕೂಡಲೇ ನಮೂದಿಸುವ ವ್ಯವಸ್ಥೆಯಾಗಬೇಕು. ಇದರಲ್ಲಿ ವಿಳಂಬ ಮಾಡಬಾರದು. ಅನ್ಯಥಾ ಅಪೂರ್ಣ ದಾಖಲೆಯಿಂದ, ಅದರ ಉದ್ದೇಶವೇ ಈಡೇರದು.

ಪ್ರತಿಯೊಂದು ಸಂಸ್ಥೆಯೂ ಈ ಕೆಳಗಿನ ದಾಖಲೆಗಳನ್ನು ಇರಿಸಬೇಕಾದುದು ಅಗತ್ಯ-

1. ದಾಖಲಾತಿ ರಿಜಿಸ್ಟರ್

ಇದು ಅತಿ ಪ್ರಮುಖವಾದ ರಿಜಿಸ್ಟರ್ ಆಗಿದೆ. ಶಾಲೆಗೆ ದಾಖಲಾಗುವ ವಿದ್ಯಾರ್ಥಿಯ ಸಂಪೂರ್ಣ ಮಾಹಿತಿಯೂ ಇದರಲ್ಲಿರುತ್ತದೆ. ಉದಾ: ದಾಖಲಾತಿ ನಂಬ್ರ, ವಿದ್ಯಾರ್ಥಿಯ ಹೆಸರು, ಜನ್ಮ ದಿನಾಂಕ, ಪೂರ್ಣ ವಿಳಾಸದೊಂದಿಗೆ ಮಾತಾಪಿತರ ಹೆಸರು, (ಅವರ ಅನುಪಸ್ಥಿತಿಯಲ್ಲಿ) ಪೋಷಕರ ಹೆಸರು, ಧರ್ಮ, ಮಾತಾಪಿತರ ಆದಾಯ ಮೂಲ, ದಾಖಲಾದ ತರಗತಿ, ಉತ್ತೀರ್ಣತೆಯ ತಾರೀಖು, ಶಾಲೆ ತೊರೆದ ದಿನಾಂಕ ಮತ್ತು ಕಾರಣ, ನಡತೆ ಇತ್ಯಾದಿ.

ಈ ರಿಜಿಸ್ಟರ್‌ನಲ್ಲಿ ತಕ್ಕ ಸಮಯಕ್ಕೆ ಅತ್ಯಂತ ಜಾಗರೂಕತೆಯಿಂದ ಮಾಹಿತಿ ದಾಖಲಿಸಬೇಕು.

2. ವಿದ್ಯಾರ್ಥಿಗಳ ಹಾಜರಿ ಪುಸ್ತಕ

ಇದು ಎರಡನೆಯ ಪ್ರಮುಖ ರಿಜಿಸ್ಟರ್ ಆಗಿದೆ. ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದ್ದರೆ ಒಂದೇ ರಿಜಿಸ್ಟರ್ ಸಾಕಾಗಬಹುದು. ಅನ್ಯಥಾ ಪ್ರತಿ ತರಗತಿಗೂ ಪ್ರತ್ಯೇಕ ರಿಜಿಸ್ಟರ್ ಇರಿಸಬೇಕು. ಹಾಜರಿ ಪುಸ್ತಕವನ್ನು ಇರಿಸುವ ಮತ್ತು ನಿಯಮಿತವಾಗಿ ಹಾಜರಿ ಪಡೆಯುವ ಹೊಣೆಯು ಕ್ಲಾಸ್ ಟೀಚರ್‌ರದ್ದಾಗಿದೆ. ಹಾಜರಿಯನ್ನು ತಕ್ಕ ಸಮಯದಲ್ಲಿ ಪಡೆಯಬೇಕಾಗಿದೆ. ಗೈರು ಹಾಜರಾಗುವ ಅಥವಾ ತಡವಾಗಿ ಹಾಜರಾಗುವ ವಿದ್ಯಾರ್ಥಿಗಳ ವಿಚಾರಣೆ ನಡೆಸಬೇಕು. ರಜೆ ಬೇಕಿದ್ದರೆ ವಿದ್ಯಾರ್ಥಿಗಳಿಗೆ ಪೋಷಕರ ಮುಖಾಂತರವೇ

ರಜೆ ಅರ್ಜಿ ಸಲ್ಲಿಸುವ ಅಭ್ಯಾಸ ಮಾಡಿಸಬೇಕು. ಕೆಲವು ಶಾಲೆಗಳಲ್ಲಿ ಮಾಸಿಕ ಶುಲ್ಕವನ್ನು ಇದೇ ರಿಜಿಸ್ಟರ್‌ನಲ್ಲಿ ಬರೆಯಲಾಗುತ್ತದೆ. ಇದನ್ನು ಬಹಳ ಜಾಗರೂಕತೆಯಿಂದ ಬರೆಯಬೇಕಾಗಿದೆ. ಈ ಹಣವು ದೊರೆತ ಕೂಡಲೇ ಖಜಾಂಚಿಗೆ ನೀಡಬೇಕು. ಪ್ರತಿ ತಿಂಗಳಾಂತ್ಯದಲ್ಲಿ ಇಡೀ ತಿಂಗಳ ಹಾಜರಿಯನ್ನು ಒಟ್ಟುಗೂಡಿಸಿ ಹಿಂದಿನ ತಿಂಗಳುಗಳ ಹಾಜರಿಯನ್ನು ಸೇರಿಸಿ, ಶುಲ್ಕದ ಸಾರಾಂಶವನ್ನು ಬರೆದು ಮುಖ್ಯೋಪಾಧ್ಯಾಯರ ಸಹಿಯನ್ನು ಪಡೆದುಕೊಳ್ಳಬೇಕು. ದಿನನಿತ್ಯ ಹಾಜರಿ ಪಡೆದ ಬಳಿಕವೂ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಬರೆದು ಸಹಿ ಹಾಕಬೇಕು.

3. ಅಧ್ಯಾಪಕರ ಹಾಜರಿ ಪುಸ್ತಕ

ಇದು ಕೂಡ ಅತಿ ಅಗತ್ಯದ ರಿಜಿಸ್ಟರ್ ಆಗಿದೆ. ಅಧ್ಯಾಪಕರ ಸಂಖ್ಯೆ ಕಡಿಮೆಯಿದ್ದರೆ ರಿಜಿಸ್ಟರ್ ಪುಸ್ತಕದ ಬದಲು ಕಾಪಿ ಪುಸ್ತಕದಲ್ಲಿ ಬರೆಯಬಹುದಾಗಿದೆ. ಈ ರಿಜಿಸ್ಟರನ್ನು ಸ್ಟಾಫ್ ರೂಮಲ್ಲಿ ಇರಿಸಬೇಕು. ಅಧ್ಯಾಪಕರು ಹಾಜರಿಯ ಗಂಟೆಗಿಂತ ಕನಿಷ್ಠ ಒಂದು ಗಂಟೆ ಮುಂಚೆ ತಲುಪಿ, ಈ ರಿಜಿಸ್ಟರ್‌ನಲ್ಲಿ ತಮ್ಮ ಹೆಸರಿನ ಮುಂದೆ ಸಹಿ ಹಾಕಿ ಆಗಮನದ (ಅಗತ್ಯವಿದ್ದರೆ ನಿರ್ಗಮನದ) ಸಮಯವನ್ನು ನಮೂದಿಸಬೇಕು. ಈ ರಿಜಿಸ್ಟರ್‌ನಲ್ಲಿ ರಜೆಗಳ ವಿವರ ಮತ್ತು ಪ್ರತಿಯೋರ್ವ ಅಧ್ಯಾಪಕನ ನಿರ್ಗಮನದ ಕಾರಣವನ್ನು ಬರೆಯಬೇಕು. ಅಧ್ಯಾಪಕರು ಲಿಖಿತ ಅರ್ಜಿಯನ್ನು ನೀಡಿಯೇ ರಜೆ ಪಡೆಯುವ ಅಭ್ಯಾಸ ಮಾಡಿಕೊಳ್ಳಬೇಕು. ಇದನ್ನು ಸಂಸ್ಥೆಯ ಹೊಣೆಗಾರರಿಗೆ ನೀಡಿ ಅನುಮತಿ ಪಡೆಯಬೇಕು ಅನಿವಾರ್ಯ ಪರಿಸ್ಥಿತಿ ಇದ್ದಾಗ ಇದರಲ್ಲಿ ವಿನಾಯಿತಿ ಇರಬಹುದು. ಈ ರಜೆಯ ವಿನಾಯಿತಿಯನ್ನು ತನ್ನ ಹಕ್ಕೆಂದೂ ಈ ವಿಶೇಷ ಅವಕಾಶವನ್ನು ಬಳಸಿಯೇ ತೀರಬೇಕೆಂದೂ ಯಾವತ್ತಿಗೂ ಭಾವಿಸಬಾರದು. ಬದಲಾಗಿ ಇದನ್ನೊಂದು ಅನಿವಾರ್ಯ ಪರಿಸ್ಥಿತಿಯಲ್ಲಿ ಬಳಸಲಿಕ್ಕಿರುವ ವಿನಾಯಿತಿ ಎಂದೇ ಭಾವಿಸಬೇಕು. ತಿಂಗಳಾಂತ್ಯದಲ್ಲಿ ಇಡೀ ತಿಂಗಳ ರಜೆಗಳ ಒಟ್ಟು ಮೊತ್ತವನ್ನು ಬರೆಯಬೇಕು. ಜತೆಗೆ ಶೈಕ್ಷಣಿಕ ವರ್ಷಾರಂಭದಿಂದ ಆ ವರೆಗೆ ಪಡೆದ ರಜೆಗಳ ಒಟ್ಟು ಮೊತ್ತವನ್ನು ಆದ್ಯತಾಕ್ರಮದಲ್ಲಿ ಬರೆಯಬೇಕು. ಉದಾ: ಸಾಂದರ್ಭಿಕ ರಜೆ, ಅನಾರೋಗ್ಯ ನಿಮಿತ್ತ ಇತ್ಯಾದಿ. ಮಂಜೂರಾದ ಅಥವಾ ಮಂಜೂರಾಗದ ಅರ್ಜಿಗಳನ್ನು ಕಚೇರಿಯಲ್ಲಿ ಬಲು ಜಾಗರೂಕತೆಯಿಂದ ಇರಿಸಬೇಕು.

4. ವೇತನ ದಾಖಲೆ

ಪ್ರತಿಯೊಂದು ಸಂಸ್ಥೆಯಲ್ಲೂ ಒಂದು ವೇತನ ದಾಖಲೆ ಇರಬೇಕಾದುದು ಅಗತ್ಯ ಅದರಲ್ಲಿ ಸಂಸ್ಥೆಯ ಸಿಬ್ಬಂದಿಗಳೆಲ್ಲರ ಹೆಸರು, ಸ್ಥಾನ, ಸಂಬಳ, ಭತ್ಯೆ, ಕಡಿತ ಇತ್ಯಾದಿ

ನಮೂದಿಸಲ್ಪಡಬೇಕು. ಸಂಬಳ ನೀಡುವಾಗ ಅವರಿಂದ ಹಸ್ತಾಕ್ಷರವನ್ನು ಪಡೆಯಬೇಕು. ಸಿಬ್ಬಂದಿಗಳು ಕಡಿಮೆ ಇದ್ದಲ್ಲಿ ರಿಜಿಸ್ಟರ್‌ನ ಬದಲು ಸಾಮಾನ್ಯ ಕಾಪಿ ಪುಸ್ತಕದಲ್ಲೂ ದಾಖಲೆಯಿರಿಸಬಹುದು.

5. ಆಯವ್ಯಯ ದಾಖಲೆ (Cash Book)

ಸಂಸ್ಥೆಯಲ್ಲಿ ದಿನನಿತ್ಯ ನಡೆಯುವ ಕೊಡು-ಕೊಳ್ಳುವಿಕೆಯನ್ನು ತಪ್ಪದೆ ರಿಜಿಸ್ಟರ್‌ನಲ್ಲಿ ಬರೆದಿಡುವುದು ಒಳ್ಳೆಯದು. ಶುಲ್ಕ, ದೇಣಿಗೆ, ಚಂದಾ ಇತ್ಯಾದಿಗಳನ್ನು ಆದಾಯದ ಕಾಲಮಿನಲ್ಲಿ ಮತ್ತು ಸಂಬಳ, ಮಾಸಾಶನ, ಖರೀದಿಸಿದ ವಸ್ತುಗಳ ಬೆಲೆ ಇತ್ಯಾದಿಗಳನ್ನು ಖರ್ಚಿನ ಕಾಲಮಿನಲ್ಲಿ ಬರೆಯಬೇಕು. ಬರುವ ಆದಾಯವೆಲ್ಲವೂ ರಸೀದಿಯ ಮುಖಾಂತರವಿರಬೇಕು. ಖರ್ಚುಗಳೆಲ್ಲವೂ ವೋಚರ್‌ಗಳಲ್ಲಿ ನಮೂದಿಸಿರಬೇಕು. ಯಾರಿಗೂ ಯಾವುದೇ ರೀತಿಯ ಸಂಶಯಕ್ಕೆ ಎಡೆಗೊಡದ ರೀತಿಯಲ್ಲಿ ಈ ಲೆಕ್ಕಾಚಾರವನ್ನು ಸ್ಪಷ್ಟ ಮತ್ತು ಪ್ರಾಮಾಣಿಕವಾಗಿರಿಸಬೇಕು. ಸಂಸ್ಥೆಗೆ ಬಂದ ಮೊತ್ತವನ್ನು ಆದಷ್ಟು ಬೇಗ ಖಜಾಂಚಿಗೆ ಒಪ್ಪಿಸಬೇಕು. ಯಾರೂ ತಮ್ಮ ಬಳಿ ಅದನ್ನು ಇರಿಸಲೇ ಬಾರದು.

6. ಸರಕು ದಾಖಲೆ (Stock Register)

ಶಾಲೆಯಲ್ಲಿರುವ ಸಾಮಗ್ರಿಗಳ ದಾಖಲೆಯನ್ನಿರಿಸುವ ಒಂದು ಸ್ಟಾಕ್ ರಿಜಿಸ್ಟರ್ ಇರಿಸಬೇಕಾದುದು ಅಗತ್ಯ. ಅದರಲ್ಲಿ ಶಾಲೆಯ ಸರಕುಗಳ ವಿವರ ನಮೂದಿಸಿರಬೇಕು. ಶಾಲೆಗಾಗಿ ಯಾವುದಾದರೊಂದು ವಸ್ತುವನ್ನು ಖರೀದಿಸಿದರೆ ಅಥವಾ ದೇಣಿಗೆಯಾಗಿ ಪಡೆದರೆ ಅದನ್ನು ಸ್ಟಾಕ್ ರಿಜಿಸ್ಟರ್‌ನಲ್ಲಿ ತಕ್ಷಣವೇ ಬರೆದಿಡಬೇಕು. ಉದಾ: ಮೇಜು, ಕುರ್ಚಿ, ಕಪಾಟು, ಲೋಟ, ಕರಿಹಲಗೆ, ಆಟದ ಸಾಮಾನು, ಸಂದೂಕ ಇತ್ಯಾದಿ. ವಸ್ತುವಿನ ಹೆಸರು ಮತ್ತು ಸಂಖ್ಯೆಯ ಜತೆಗೆ ಖರೀದಿಸಿದ ದಿನಾಂಕ ಮತ್ತು ಬೆಲೆಯನ್ನು ನಮೂದಿಸಬೇಕು. ಶಾಲೆಯ ಎಲ್ಲ ವಸ್ತುಗಳ ಪರಿಶೀಲನೆ, ಸುರಕ್ಷೆ, ಸ್ಟಾಕ್ ರಿಜಿಸ್ಟರ್‌ನ ಅವಲೋಕನ ಕಾಲಕಾಲಕ್ಕೆ ನಡೆಯುತ್ತ ಇರಬೇಕು. ಯಾವುದಾದರೂ ವಸ್ತು ಒಡೆದುಹೋದರೆ ಅಥವಾ ಕಡಿಮೆಯಾದರೆ ಅದನ್ನು ಸಂಸ್ಥೆಯ ಹೊಣೆಗಾರರಿಗೆ ತಿಳಿಸಿ, ಆ ಬಳಿಕ ಅದರ ರಿಪೇರಿ ಅಥವಾ ಬದಲಿಗೆ ಪ್ರಯತ್ನಿಸಬೇಕು.

7. ಅವಲೋಕನಾ ದಾಖಲೆ

ಪ್ರತಿಯೊಂದು ಸಂಸ್ಥೆಯಲ್ಲಿ ಒಂದು ಅವಲೋಕನಾ ಪುಸ್ತಕ ಇರಬೇಕಾದುದು ಅಗತ್ಯ. ಅದರಲ್ಲಿ ಸಂಸ್ಥೆಯ ಹೊಣೆಗಾರರು ಮತ್ತು ಗಣ್ಯರ ಅಭಿಪ್ರಾಯ, ಮಾರ್ಗದರ್ಶನ ಮತ್ತು ಸಲಹೆಗಳನ್ನು ಬರೆದಿಡಬೇಕು.

8. ಗ್ರಂಥಾಲಯದ ದಾಖಲೆ

ಶಾಲೆಯ ಗ್ರಂಥಾಲಯಕ್ಕೂ ಒಂದು ರಿಜಿಸ್ಟರ್ ಇರಬೇಕು. ಅದರಲ್ಲಿ ಕ್ರಮ ಸಂಖ್ಯೆ, ಪುಸ್ತಕದ ಹೆಸರು, ಅದರ ಲೇಖಕರ ಹೆಸರು, ಖರೀದಿಸಿದ ದಿನಾಂಕ, ಬೆಲೆ ಇತ್ಯಾದಿಗಳನ್ನು ಬರೆದಿಡಬೇಕು. ಗ್ರಂಥಾಲಯವು ದೊಡ್ಡದಾಗಿದ್ದರೆ, ಪುಸ್ತಕಗಳನ್ನು ವಿಷಯಾಧಾರಿತವಾಗಿ ನಮೂದಿಸುವ ಒಂದು ರಿಜಿಸ್ಟರ್ ಇಡಬೇಕು. ಉದಾ: ತಫ್ಸೀರ್, ಹದೀಸ್, ಫಿಕ್ಹ್ ಇಸ್ಲಾಮೀ ಇತಿಹಾಸ, ಉರ್ದು ಸಾಹಿತ್ಯ, ಗಣಿತ, ಚರಿತ್ರೆ, ಭೂಗೋಳ ಇತ್ಯಾದಿ ಶೀರ್ಷಿಕೆಗಳಡಿಯಲ್ಲಿ ಪುಸ್ತಕಗಳ ದಾಖಲೆ ಬರೆದಿಡಬೇಕು. ಇದರಿಂದ ಮಕ್ಕಳಿಗೆ ಮತ್ತು ಅಧ್ಯಾಪಕರಿಗೆ ತಮಗೆ ಬೇಕಾದ ಪುಸ್ತಕವನ್ನು ಹುಡುಕುವುದು ಸುಲಭವಾಗುತ್ತದೆ.

9. ಆದೇಶಗಳ ದಾಖಲೆ

ಮುಖ್ಯೋಪಾಧ್ಯಾಯರು ಅಥವಾ ಸಂಸ್ಥೆಯ ಹೊಣೆಗಾರರ ವತಿಯಿಂದ ಕಾಲಕಾಲಕ್ಕೆ ದೊರೆಯುವ ಮಾರ್ಗದರ್ಶನ, ಆದೇಶ, ಮಾಹಿತಿ (Notice) ಇತ್ಯಾದಿಗಳನ್ನು ದಾಖಲಿಸುವಂತಹ ರಿಜಿಸ್ಟರ್ (orders Register) ಇರಬೇಕಾದುದು ಕೂಡ ಅಗತ್ಯವಾಗಿದೆ. ಪ್ರತಿಯೊಂದು ಆದೇಶದ ಕೆಳಗೆ ಸಂಬಂಧಿತರ ಹಸ್ತಾಕ್ಷರ ಪಡೆಯ ಬೇಕಾಗಿದೆ. ನೋಟಿಸು ವಿದ್ಯಾರ್ಥಿಗಳಿಗೆ ಸಂಬಂಧಿಸಿದ್ದಾದರೆ, ತರಗತಿಯಲ್ಲಿ ಅದನ್ನು ಓದಿ ಕೇಳಿಸುವ ಅಧ್ಯಾಪಕರ ಹಸ್ತಾಕ್ಷರ ಮತ್ತು ತರಗತಿಯ ಹೆಸರು ಬರೆಸಬೇಕು.

10. ಪತ್ರ ವ್ಯವಹಾರಗಳ ದಾಖಲೆ

ಸಂಸ್ಥೆಗೆ ಬರುವ ಅಥವಾ ಸಂಸ್ಥೆಯ ವತಿಯಿಂದ ಇತರರಿಗೆ ಕಳುಹಿಸುವ ಪತ್ರಗಳ ಕುರಿತ ಅಗತ್ಯದ ದಾಖಲೆಗಳನ್ನಿರಿಸಲು ಒಂದು ರಿಜಿಸ್ಟರ್ ಇರಬೇಕಾದುದು ಅಗತ್ಯ. ಅದರಲ್ಲಿ ಪತ್ರ ಕಳುಹಿಸಿದ ಅಥವಾ ಬಂದ ದಿನಾಂಕ, ಪತ್ರ ಬರೆದವರ ಅಥವಾ ಕಳುಹಿಸಿದವರ ಹೆಸರು ಮತ್ತು ಪತ್ರದ ಸಾರಾಂಶವು ಬರೆದಿಡಬೇಕು. ಇದು ಅಗತ್ಯಾನುಸಾರ ಬಳಸಲು ಉಪಯುಕ್ತವಾಗಿದೆ.

ಈ ರಿಜಿಸ್ಟರ್‌ಗಳಲ್ಲದೆ, ಸಂಸ್ಥೆಯ ಪ್ರತಿಯೋರ್ವ ಸಿಬ್ಬಂದಿಯಲ್ಲಿಯೂ ಒಂದೊಂದು ಕಡತ ಇರಬೇಕು. ಅದರಲ್ಲಿ ಆತನಿಗೆ ಸಂಬಂಧಿಸಿದ ಅಗತ್ಯದ ಕಾಗದ ಪತ್ರಗಳನ್ನು ಸುರಕ್ಷಿತವಾಗಿ ಇರಿಸಬೇಕು. ಉದಾ: ನೇಮಕದ ಆದೇಶ, ಶರ್ತಗಳು, ಶೈಕ್ಷಣಿಕ ಸಾಮರ್ಥ್ಯ, ಗ್ರೇಡ್, ಸಾಧನೆಯ ವರದಿ, ಪ್ರಗತಿ-ಅವನತಿ, ವಿಶೇಷ ರಿಯಾಯಿತಿ ಇತ್ಯಾದಿ.

ಇವಲ್ಲದೆ ಪ್ರತಿಯೋರ್ವ ಅಧ್ಯಾಪಕನ ಬಳಿಯೂ ಒಂದೊಂದು ಡೈರಿ ಇರಬೇಕು. ಅದರಲ್ಲಿ ಕಾಲಕಾಲಕ್ಕೆ ಮಾಡಬೇಕಾದ ಮತ್ತು ಮಾಡಿದ ಕೆಲಸಗಳನ್ನು ನಮೂದಿಸಬೇಕು.

ಅದನ್ನು ಮುಖ್ಯೋಪಾಧ್ಯಾಯರು ಸಂದರ್ಭಾನುಸಾರ ಪರಿಶೀಲಿಸುತ್ತಿರಬೇಕು. ಡೈರಿಯಲ್ಲಿ ಸಂಬಂಧಿತ ಪಠ್ಯದ ಸಾರಾಂಶ, ಇಡೀ ವರ್ಷದ ಬೋಧನೆಯ ನೀಲನಕ್ಷೆ, ಬೋಧನಾ ವಿಧಾನದ ಬಗ್ಗೆ ಸಂಕ್ಷಿಪ್ತ ವಿವರ ಇತ್ಯಾದಿ ಇರಬೇಕಾಗಿದೆ.

ಪಠ್ಯೇತರ ಚಟುವಟಿಕೆಗಳು

ಮಕ್ಕಳು ಓದು-ಬರೆಹದಲ್ಲಿ ಮುಂದಿರಬೇಕು ಮತ್ತು ಪರಿಶ್ರಮ ಪಟ್ಟು ಪಠ್ಯಪುಸ್ತಕದ ಜ್ಞಾನವನ್ನು ಗಳಿಸಬೇಕು ಎಂಬುದು ಅಧ್ಯಾಪಕರು ಮತ್ತು ಹೆತ್ತವರ ಆಗ್ರಹವಾಗಿರುತ್ತದೆ. ಅವರ ಈ ಆಗ್ರಹವು ಸರಿಯೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಅದರ ಗಳಿಕೆಯ ಕುರಿತ ಸಂಪೂರ್ಣ ಪ್ರಯತ್ನವೂ ನಡೆಯಬೇಕಾಗಿದೆ. ಆದರೆ ಕೇವಲ ಪುಸ್ತಕದ ಜ್ಞಾನದಿಂದ ಶಿಕ್ಷಣದ ಸಾರ್ವತ್ರಿಕ ಉದ್ದೇಶ ಖಂಡಿತ ಗಳಿಸಲು ಸಾಧ್ಯವಿಲ್ಲ. ಆದಕ್ಕಾಗಿ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಂಡು ತಮ್ಮ ವ್ಯಕ್ತಿತ್ವದ ವಿಭಿನ್ನ ಮಗ್ಗುಲುಗಳನ್ನು ಅಭಿವ್ಯಕ್ತಗೊಳಿಸಲು ವ್ಯವಸ್ಥೆ ಮಾಡಿಕೊಡಬೇಕಾದ ಅಗತ್ಯವಿದೆ. ಈ ಪಠ್ಯೇತರ ಚಟುವಟಿಕೆಗಳ ಪ್ರಾಮುಖ್ಯತೆ ಮತ್ತು ಪ್ರಯೋಜನವು ಪಠ್ಯ ಪುಸ್ತಕದ ಶಿಕ್ಷಣಕ್ಕಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲ. ಹಾಗಾಗಿ ಇಂದು ಶಾಲೆಗಳಲ್ಲಿ ಇದರ ಬಗ್ಗೆ ಅಪಾರ ಗಮನ ಹರಿಸಲಾಗುತ್ತಿದೆ.

ಚಟುವಟಿಕೆ ಮತ್ತು ಹವ್ಯಾಸಗಳು

ಶಾಲೆಗಳಲ್ಲಿ ಈ ಕೆಳಗಿನ ಚಟುವಟಿಕೆಗಳ ವ್ಯವಸ್ಥೆ ಮಾಡಿದರೆ ಮತ್ತು ಮಕ್ಕಳಿಗೆ ಅವುಗಳಲ್ಲಿ ಸಕ್ರಿಯ ಪಾತ್ರ ವಹಿಸಲು ಸಂಪೂರ್ಣ ಅವಕಾಶ ದೊರೆತರೆ ಅವರ ತರಬೇತಿ ಬಹಳ ಸುಲಭವಾಗುವುದು.

• ಮಕ್ಕಳ ಸಭೆಯನ್ನು ಆಯೋಜಿಸಬೇಕು. ಪ್ರತಿ ವಾರಾಂತ್ಯದಲ್ಲಿ ತರಗತಿಯ ಸಮಯವನ್ನು ಕಡಿಮೆಗೊಳಿಸಿ ಅದಕ್ಕಾಗಿ ಸಮಯ ಮಾಡಿಕೊಳ್ಳಬೇಕು. ತಿಂಗಳಲ್ಲಿ ಮೂರು ಸಾಪ್ತಾಹಿಕ ಸಭೆಗಳು ಕ್ಲಾಸ್ ಟೀಚರ್‌ರ ಮೇಲ್ನೋಟದಲ್ಲಿ ತರಗತಿಯಲ್ಲೇ ನಡೆಯಬೇಕು. ಒಂದನೆಯದು ವ್ಯವಸ್ಥೆ ಮತ್ತು ತರಬೇತಿ ಸಭೆ. ಅದರಲ್ಲಿ ತರಗತಿಯ ಸ್ವಚ್ಛತೆ, ಅಲಂಕಾರ, ವ್ಯವಸ್ಥೆ, ಪ್ರಗತಿ ಇತ್ಯಾದಿಗಳಿಗೆ ಸಂಬಂಧಿಸಿ ಯೋಜನೆ ರೂಪಿಬೇಕು ಮತ್ತು ವೈಯಕ್ತಿಕ ಮತ್ತು ಸಾಮೂಹಿಕವಾದ ಕೆಲವು ಹೊಣೆಗಾರಿಕೆಗಳನ್ನು ವಿದ್ಯಾರ್ಥಿಗಳ ನಡುವೆ ಹಂಚಬೇಕು. ಎರಡನೆಯ ಸಭೆಯಲ್ಲಿ ಭಾಷಣ, ಚರ್ಚೆ, ಕಥೆ, ಪದ್ಯ, ಚುಟುಕು, ಹಾಸ್ಯ ಇತ್ಯಾದಿಗಳನ್ನು ಅಭ್ಯಾಸ ಮಾಡಿಸಬೇಕು. ತರಗತಿಯ ಪ್ರತಿಯೋರ್ವ ಮಗುವೂ ಕನಿಷ್ಠ ಒಂದು ಬಾರಿ ಏನಾದರೊಂದು ಅಭಿವ್ಯಕ್ತಪಡಿಸುವಂತೆ ನೋಡಿಕೊಳ್ಳಬೇಕು. ಕೊನೆಯ ಸಭೆಯು ಇಡೀ ಸಂಸ್ಥೆಯ ಮಾಸಿಕ ಸಭೆಯಾಗಿರಬೇಕು. ಅದರಲ್ಲಿ ಎಲ್ಲ ಮಕ್ಕಳೂ ಪಾಲ್ಗೊಳ್ಳಬೇಕು. ಪ್ರತಿ ತರಗತಿಯ ಪ್ರತಿನಿಧಿ ಮಕ್ಕಳು ಈ ಸಭೆಯಲ್ಲಿ ಸಕ್ರಿಯ ಪಾತ್ರ ವಹಿಸಬೇಕು. ಈ ಸಭೆಯಲ್ಲಿ ವೇದಿಕೆಯ ಅಲಂಕಾರದಿಂದ ಸಭೆ ಮುಕ್ತಾಯವಾಗುವ ವರೆಗಿನ ಎಲ್ಲ ಕೆಲಸಗಳನ್ನು

ಅಧ್ಯಾಪಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳೇ ನೆರವೇರಿಸಬೇಕು. ಅಧ್ಯಕ್ಷ, ಕಾರ್ಯದರ್ಶಿ ಎಲ್ಲರೂ ಮಕ್ಕಳೇ ಆಗಿರಬೇಕು. ಅವರ ನೇತೃತ್ವದಲ್ಲಿಯೇ ಕಾರ್ಯಕ್ರಮ ಜರುಗಬೇಕು.

• ಶಾಲೆಯ ಸಭೆ, ಪೋಷಕರ ಸಭೆ, ಅತಿಥಿ ಸತ್ಕಾರ, ಬಹುಮಾನ ವಿತರಣಾ ಸಭೆ, ಶೈಕ್ಷಣಿಕ ಸಪ್ತಾಹ ಇತ್ಯಾದಿಗಳ ವಿವಿಧ ಕಾರ್ಯಕ್ರಮಗಳು ಮತ್ತು ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕು.

• ವಿದ್ಯಾರ್ಥಿಗಳ ವಿವಿಧ ತಂಡಗಳನ್ನು ರಚಿಸಬೇಕು. ಅವುಗಳ ಸುಪುರ್ದಿಗೆ ಈ ಕೆಳಗಿನ ಕೆಲಸಗಳನ್ನು ವಹಿಸಿಕೊಡಬೇಕು. ಈ ಕೆಲಸಗಳ ಉತ್ತಮ ನಿರ್ವಹಣೆಗೆ ಅಧ್ಯಾಪಕರು ಮಾರ್ಗದರ್ಶನವನ್ನು ನೀಡುತ್ತಿರಬೇಕು.

1) ಆರೋಗ್ಯ ಮತ್ತು ಸ್ವಚ್ಛತೆಯ ಮೇಲ್ನೋಟ, ಆಟ, ಪಿ.ಟಿ. ಮತ್ತು ವಿವಿಧ ರೀತಿಯ ಸ್ಪರ್ಧೆಗಳ ವ್ಯವಸ್ಥೆ.

2) ಪಿಕ್‌ನಿಕ್, ಶೈಕ್ಷಣಿಕ ಪ್ರವಾಸ, ಕೈ ಬರಹದ ನಿಯತಕಾಲಿಕ, ವಾಚನಾಲಯ, ನೂತನ ದುರ್ಬಲ ಮತ್ತು ಬಡ ವಿದ್ಯಾರ್ಥಿಗಳಿಗೆ ಸಹಾಯ, ಮಕ್ಕಳ ಅಂಗಡಿ, ಸಾಮೂಹಿಕ ಭೋಜನದ ವ್ಯವಸ್ಥೆ.

3) ವಸ್ತು ಪ್ರದರ್ಶನ ಮತ್ತು ಶಾಲೆಯ ಸಂಗ್ರಹಾಲಯಕ್ಕೆ ಅಪರೂಪದ ವಸ್ತುಗಳನ್ನು ಶೇಖರಿಸುವುದು ಹಾಗೂ ವಸ್ತುಗಳನ್ನು ತಯಾರಿಸುವುದು, ಅತಿಥಿ ಸತ್ಕಾರ, ರೋಗಿಗಳ ಸಂದರ್ಶನ, ರೋಗಿಯ ಉಪಚಾರ ಇತ್ಯಾದಿ.

4) ವಿದ್ಯಾರ್ಥಿಗಳಿಗೆ ವಿವಿಧ ಸಾಮಾಜಿಕ ಶಿಷ್ಟಾಚಾರ ಮತ್ತು ರೀತಿ-ನೀತಿಗಳನ್ನು ಕಲಿಸಲು, ನಿಯಮ ಪಾಲನೆಗೆ ಬದ್ಧವಾಗಿಸಲು, ತುಂಟಾಟ-ಕೆಡುಕುಗಳಿಂದ ದೂರವಿರಿಸಲು, ನಮಾಝ್ ಸಂಸ್ಥಾಪಿಸಲು ಸಹಾಯ ಮಾಡುವುದು.

ಮಹತ್ವ ಮತ್ತು ಪ್ರಯೋಜನಗಳು

ಈ ಚಟುವಟಿಕೆಗಳಿಗೆ ಬಹಳ ಮಹತ್ವವಿದೆ. ಈ ಮೂಲಕ,

- ಮಕ್ಕಳ ವ್ಯಕ್ತಿತ್ವದ ವಿವಿಧ ಮಗ್ಗುಲುಗಳ ಸರ್ವತೋಮುಖ ತರಬೇತಿಯಾಗುತ್ತದೆ.
- ಪಠ್ಯ ಪುಸ್ತಕದಿಂದ ಕಲಿತುದನ್ನು ಜೀವನದಲ್ಲಿ ಅಳವಡಿಸುವ ಅವಕಾಶ ಒದಗುತ್ತದೆ ಮತ್ತು ಅವರು ಪುಸ್ತಕದ ಹುಳುವಾಗುವ ಬದಲು ಕ್ರಿಯಾಶೀಲ ಮಾನವರಾಗಿ ಬೆಳೆಯುವರು.
- ಹೊಣೆಗಾರಿಕೆಯ ಪ್ರಜ್ಞೆ, ನಿಯಮ ಪಾಲನೆ, ಕಾರ್ಯ ಮಗ್ನತೆ, ಸಹಕಾರ, ತ್ಯಾಗ, ಸೇವೆ ಇತ್ಯಾದಿ ಸಾಮೂಹಿಕ ಗುಣ ಮತ್ತು ಸೃಜನಾತ್ಮಕ ನೈತಿಕತೆ ಬೆಳೆಯಲು ಸಹಕಾರಿಯಾಗುತ್ತದೆ.
- ಬಿಡುವಿನ ವೇಳೆಯನ್ನು ಆಸಕ್ತಿದಾಯಕ ಮತ್ತು ಪ್ರಯೋಜನಕಾರಿ ಹವ್ಯಾಸ ಹಾಗೂ ಸಾಮೂಹಿಕ ಹಿತದ ಕೆಲಸಗಳಲ್ಲಿ ತೊಡಗಿಕೊಳ್ಳಲು ತರಬೇತಿಯಾಗುತ್ತದೆ.

- ಶಾಲೆ, ಮನೆ ಮತ್ತು ಸಮಾಜದಲ್ಲಿ ಎದುರಾಗುವಂತಹ ಸವಾಲುಗಳನ್ನು ನಿಭಾಯಿಸುವಲ್ಲಿ ಸಹಾಯವೊದಗುತ್ತದೆ.
- ಮಕ್ಕಳ ಸ್ವಾಭಾವಿಕ ಪ್ರತಿಭೆಗಳನ್ನು ಬೆಳೆಸುವ ಅವಕಾಶವೊದಗುತ್ತದೆ.
- ಎಲ್ಲ ಸ್ವಭಾವ, ಗುಣ ಮತ್ತು ಸಾಮರ್ಥ್ಯದ ಮಕ್ಕಳೂ ಶಾಲೆಯ ಸಂತುಲಿತ ಜೀವನದಲ್ಲಿ ಆಸಕ್ತಿಯನ್ನು ಹೊಂದತೊಡಗುವರು. ಹೀಗೆ ಅವರು ಶಿಕ್ಷಣದಿಂದ ದೂರ ಓಡುವುದು ತಪ್ಪುವುದು.

ಆದರೆ ಈ ಎಲ್ಲ ಪ್ರಯೋಜನಗಳು ಫಲಕಾರಿಯಾಗಬೇಕಾದರೆ...

- ಪ್ರತಿಯೊಂದು ಮಗುವಿಗೂ ಅದರ ಸಾಮರ್ಥ್ಯಕ್ಕೆ ತಕ್ಕಂತೆ ಸಕ್ರಿಯ ಪಾತ್ರ ವಹಿಸುವ ಅವಕಾಶ ದೊರೆಯಬೇಕು. ಯಾರೂ ಅದರಿಂದ ವಂಚಿತರಾಗಬಾರದು. ದುರ್ಬಲ, ಸಂಕೋಚ ಸ್ವಭಾವದ ಮತ್ತು ಅಂಜುಬುರುಕ ಮಕ್ಕಳನ್ನೂ ಪಾಲುಗೊಳ್ಳಲು ಪ್ರೇರೇಪಿಸಬೇಕು.
- ಪ್ರತಿಯೊಂದು ಕಾರ್ಯಕ್ರಮವೂ ಸದುದ್ದೇಶ, ಪ್ರಯೋಜನಕಾರಿ ಮತ್ತು ಸಂಸ್ಥೆಯ ಮೂಲಭೂತ ಉದ್ದೇಶಕ್ಕೆ ಪೂರಕವಾಗಿರಬೇಕು. ಅಲ್ಲದೆ ಮಕ್ಕಳ ವ್ಯಕ್ತಿತ್ವದ ಯಾವುದಾದರೊಂದು ಅಂಗದ ತರಬೇತಿಯೊಂದಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಸಂಬಂಧಿಸಿರಬೇಕು.
- ವಿದ್ಯಾರ್ಥಿಗಳು ಸಂಪೂರ್ಣ ತನ್ಮಯತೆ ಮತ್ತು ಕ್ರಿಯಾಶೀಲತೆಯೊಂದಿಗೆ ಪಾಲುಗೊಳ್ಳುವಂತಾಗಲು ಅವರ ಆಸಕ್ತಿ, ಇಚ್ಛೆ ಮತ್ತು ಒಲವುಗಳನ್ನು ಸಾಧ್ಯಂತ ಪರಿಗಣಿಸಬೇಕು.
- ಅರ್ಹ ಮೇರೆಯೊಳಗೆ ಸ್ವಾತಂತ್ರ್ಯ ನೀಡಬೇಕು. ಒತ್ತಡ ಮತ್ತು ಅನಗತ್ಯ ಹಸ್ತಕ್ಷೇಪದಿಂದ ದೂರವಿರಬೇಕು.
- ಪ್ರತಿಯೋರ್ವ ಮಗುವೂ ತನ್ನ ಆಸಕ್ತಿ ಮತ್ತು ಇಷ್ಟದ ಚಟುವಟಿಕೆಯಲ್ಲಿ ಪಾಲುಗೊಳ್ಳುವಂತಾಗಲು, ಸಂಸ್ಥೆಯ ಸ್ಥಳಾವಕಾಶ, ಸಾಮರ್ಥ್ಯ, ಅಧ್ಯಾಪಕರ ಪ್ರತಿಭೆಗಳನುಸಾರ ವಿವಿಧ ರೀತಿಯ ಹಾಗೂ ಹೆಚ್ಚೆಚ್ಚು ಚಟುವಟಿಕೆಗಳ ವ್ಯವಸ್ಥೆ ಮಾಡಬೇಕು.
- ಒಂದು ಮಗು ಒಂದಕ್ಕಿಂತ ಹೆಚ್ಚು ಚಟುವಟಿಕೆಗಳಲ್ಲಿ ಪಾಲುಗೊಳ್ಳುವಂತೆ ಕಾರ್ಯಕ್ರಮ ರೂಪಿಸಬೇಕು.
- ಕೆಲವು ಮಕ್ಕಳು, ಕೆಲವೊಂದು ಚಟುವಟಿಕೆಗಳಲ್ಲಿ ಎಷ್ಟು ಆಸಕ್ತಿ ವಹಿಸುತ್ತಾರೆಂದರೆ, ಅವರಿಂದಾಗಿ ಇತರ ಮಕ್ಕಳಿಗೆ ಅವಕಾಶವೂ ದೊರೆಯುವುದಿಲ್ಲ, ಸ್ವತಃ ಸಮಯ ಮತ್ತು ಗಮನವೆಲ್ಲ ಅದಕ್ಕೇ ಮೀಸಲಾಗಿ ಬಿಡುತ್ತದೆ. ಮಾತ್ರವಲ್ಲ ಅವರು ತಮ್ಮ ಪಠ್ಯ ವಿಷಯಗಳನ್ನೇ ಕಡೆಗಣಿಸಿ ಬಿಡುತ್ತಾರೆ. ಹಾಗಾಗದಂತೆ ನೋಡಿಕೊಳ್ಳಬೇಕು.

- ಪಠ್ಯ ಮತ್ತು ಪಠ್ಯೇತರ ವಿಷಯಗಳು ಪರಸ್ಪರ ಪೂರಕವಾಗಿರುವಂತೆಯೂ ಅವೆರಡರ ಮಧ್ಯೆ ನ್ಯಾಯ ಮತ್ತು ಸಂತುಲನೆ ಇರುವಂತೆಯೂ ನೋಡಿಕೊಳ್ಳಬೇಕು. ಒಂದು ಚಟುವಟಿಕೆಯಿಂದಾಗಿ ಇನ್ನೊಂದು ಚಟುವಟಿಕೆ ಕಡೆಗಣಿಸಲ್ಪಡಬಾರದು.
- ಖರ್ಚು ವೆಚ್ಚಗಳು ಹೆಚ್ಚಾಗುವಂತಹ ಮತ್ತು ವಿದ್ಯಾರ್ಥಿಗಳ ಪೋಷಕರಿಗೆ ಹೊರೆಯಾಗುವಂತಹ ಕಾರ್ಯಕ್ರಮಗಳನ್ನು ಎಂದಿಗೂ ಆಯೋಜಿಸಬಾರದು.
- ಮಕ್ಕಳ ಪ್ರತಿಭೆಗಳು ತಪ್ಪುದಾರಿಗೆ ಇಳಿಯದಂತೆ ನೋಡಿಕೊಳ್ಳಲು ಮತ್ತು ಅವರಲ್ಲಿ ಉನ್ನತ ಗುಣಗಳ ಬದಲು ಕೆಡುಕು ಬೆಳೆಯುವುದರಿಂದ ತಡೆಯಲು ಅವರ ಮೇಲ್ನೋಟ ಮತ್ತು ಮಾರ್ಗದರ್ಶನದ ವ್ಯವಸ್ಥೆಯನ್ನು ಮಾಡಬೇಕು.

ಮಕ್ಕಳ ಶಿಕ್ಷಣ-ತರಬೇತಿಯಲ್ಲಿ ಮನೆ ಮತ್ತು ಶಾಲೆಯ ಸಹಕಾರ

ಶಾಲೆಯು ಮಕ್ಕಳ ಶಿಕ್ಷಣ-ತರಬೇತಿಯ ವ್ಯವಸ್ಥಿತ ಸಂಸ್ಥೆಯಾಗಿದೆ, ಶಾಲೆಯಲ್ಲಿ ಪ್ರತಿಭಾವಂತ ಅಧ್ಯಾಪಕರ ತಂಡವು ಈ ಕರ್ತವ್ಯವನ್ನು ಉತ್ತಮ ರೀತಿಯಲ್ಲಿ ಪಾಲಿಸುವಲ್ಲಿ ಸದಾ ಸನ್ನದ್ಧವಾಗಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸಮಾಜ ಸುಧಾರಣೆಯ ಕೇಂದ್ರಗಳಲ್ಲಿ ಶಾಲೆಯೂ ಸೇರಿರುತ್ತದೆ. ಹಾಗಾಗಿ ಶಾಲೆಗಳ ಮೇಲೆ ಅಪಾರ ನಿರೀಕ್ಷೆ ಇರುವುದು ಸಹಜ. ಸಾಮಾನ್ಯವಾಗಿ ಹೆತ್ತವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದ ಬಳಿಕ ಅವರ ಶಿಕ್ಷಣ-ತರಬೇತಿಯ ಕಡೆ ಅಲಕ್ಷ್ಯರಾಗಿ ಬಿಡುತ್ತಾರೆ. ಇನ್ನು ಈ ಕೆಲಸವನ್ನು ಶಾಲೆಯು ವಹಿಸಿಕೊಂಡಿತು ಎಂದವರು ಕೈತೊಳೆದು ಬಿಡುತ್ತಾರೆ. ಅಧ್ಯಾಪಕರೂ ವಿದ್ಯಾರ್ಥಿಗಳ ಪೋಷಕರ ನಿಬಿಡತೆ ಅಥವಾ ಅಜ್ಞಾನದ ಕಾರಣವಾಗಿ ಅವರನ್ನು ಅಸಹಾಯಕರೆಂದು ಭಾವಿಸುತ್ತಾರೆ ಮತ್ತು ಅವರ ಸಂಪೂರ್ಣ ಸಹಕಾರವನ್ನು ಪಡೆಯುವ ಪ್ರಯತ್ನವನ್ನೇ ಮಾಡುವುದಿಲ್ಲ, ಹಾಗಾಗಿ ಪರಸ್ಪರ ಸಹಕಾರದಿಂದ ಹೊರಬೇಕಾಗಿದ್ದ ಶಿಕ್ಷಣ-ತರಬೇತಿಯ ಭಾರವೆಲ್ಲವೂ ಕೇವಲ ಶಾಲೆಯ ಮೇಲೆ ಬೀಳುತ್ತದೆ. ಆದರೆ ಶಾಲೆಯು ತನ್ನ ಸೀಮಿತ ಅವಧಿಯಿಂದಾಗಿ ಇಡೀ ಹೊಣೆಯನ್ನು ಹೊರಲು ಸಮರ್ಥವಾಗುವುದಿಲ್ಲ, ಹಾಗಾಗಿ ಶಾಲೆಯ ಮೇಲೆ ಸಾಮಾನ್ಯವಾಗಿ ಇರಿಸಲಾಗುವ ನಿರೀಕ್ಷೆಗಳು ಈಡೇರುವುದಿಲ್ಲ, ಆದ್ದರಿಂದ ತಮ್ಮ ಕರ್ತವ್ಯಗಳು ಸಂಪೂರ್ಣವಾಗಿ ಈಡೇರಬೇಕಾದರೆ, ಅಧ್ಯಾಪಕರು ವಿದ್ಯಾರ್ಥಿಗಳ ಹೆತ್ತವರ, ವಿಶೇಷತಃ ಮಾತೆಯಂದಿರ ಸಹಕಾರವನ್ನು ಪಡೆಯಲು ಪ್ರಯತ್ನಿಸಬೇಕಾಗಿದೆ.

ಪೋಷಕರ ಸಹಕಾರವನ್ನು ಪಡೆಯಬೇಕಾದರೆ...

- ಅಧ್ಯಾಪಕರು ಸಚ್ಚಾರಿತ್ರ್ಯವಂತರೂ ಸ್ನೇಹಮಯಿಗಳೂ ಆಗಿರಬೇಕು. ಸಂಪರ್ಕ ಸಾಧಿಸಲು ಸಮಯ ತೆಗೆದುಕೊಳ್ಳಬೇಕು. ವಿಶಾಲ ಮನಸ್ಸಿನೊಂದಿಗೆ ಭೇಟಿಯಾಗಬೇಕು ಮತ್ತು ಗೌರವಯುತವಾಗಿ ವ್ಯವಹರಿಸಬೇಕು.
- ಪೋಷಕರ ಆಕ್ಷೇಪ, ದೂರು ಅಥವಾ ಸಲಹೆಗಳನ್ನು ಮುಗುಳ್ನಗೆಯಿಂದ ಆಲಿಸಬೇಕು.

- ಅವರ ಮಕ್ಕಳ ಶಿಕ್ಷಣ-ತರಬೇತಿ ಮತ್ತು ಒಳಿತು-ಕಲ್ಯಾಣದಲ್ಲಿ ಸಂಪೂರ್ಣ ಆಸಕ್ತಿಯನ್ನು ವಹಿಸಬೇಕು.
- ಅವರ ಮಕ್ಕಳ ಪ್ರಗತಿ ಮತ್ತಿತರ ವಿಷಯಗಳ ಬಗ್ಗೆ ಅವರ ಗಮನ ಸೆಳೆಯಬೇಕು.
- ಶಿಕ್ಷಣ-ತರಬೇತಿಗೆ ಸಂಬಂಧಿಸಿ ಅವರ ಹೊಣೆಗಾರಿಕೆಗಳನ್ನು ಉತ್ತಮ ಪದಗಳಿಂದ ನೆನಪಿಸುತ್ತಲಿರಬೇಕು.
- ಶಾಲೆಯ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಅವರನ್ನು ಆಹ್ವಾನಿಸಬೇಕು ಮತ್ತು ಕಾರ್ಯಕ್ರಮಗಳಲ್ಲಿ ಅವರ ಆಸಕ್ತಿಯನ್ನು ಸಾದ್ಯಂತ ಪರಿಗಣಿಸಬೇಕು.
- ಕಾಲಕಾಲಕ್ಕೆ ಪೋಷಕರ ಸಭೆಯನ್ನು ಆಯೋಜಿಸುತ್ತಿರಬೇಕು.

ಪೋಷಕರ ಸಭೆ

ಪ್ರತಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಎರಡು ಬಾರಿ ಪೋಷಕರ ಸಭೆಯನ್ನು ಆಯೋಜಿಸಬೇಕು. ಒಂದು ಸಭೆಯನ್ನು ಶೈಕ್ಷಣಿಕ ವರ್ಷಾರಂಭದಲ್ಲಿ ದಾಖಲಾತಿಯ ನಂತರ ಆಯೋಜಿಸಿದರೆ, ಇನ್ನೊಂದು ಸಭೆಯನ್ನು ವರ್ಷದ ಮಧ್ಯೆ ಶೈಕ್ಷಣಿಕ ಸಪ್ತಾಹ ಇತ್ಯಾದಿ ಸಂದರ್ಭದಲ್ಲಿ ನಡೆಸಬೇಕು.

ಮೊದಲ ಸಭೆಯ ಕಾರ್ಯಕ್ರಮಗಳು ಈ ರೀತಿ ಇರಲಿ-

1. ಮೊತ್ತ ಮೊದಲು ಮನಮುಟ್ಟುವ ಶೈಲಿಯಲ್ಲಿ ಸಂಕ್ಷಿಪ್ತವಾಗಿ ಸಂಸ್ಥೆಯ ಮೂಲಭೂತ ಉದ್ದೇಶ, ಧೋರಣೆ ಮತ್ತು ಕಾರ್ಯಕ್ರಮಗಳನ್ನು ತಿಳಿಸಿಕೊಡಬೇಕು.
2. ತರುವಾಯ ಮಕ್ಕಳ ಶಿಕ್ಷಣ-ತರಬೇತಿ ಮತ್ತು ಶಾಲೆಯ ಅಭ್ಯುದಯಗಳ ನಿಟ್ಟಿನಲ್ಲಿ ಅವರ ಸಹಕಾರದ ಅಗತ್ಯ ಹಾಗೂ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಸಿಕೊಡಬೇಕು.
3. ಬಳಿಕ ಸಹಕಾರದ ಕೆಲವು ರೂಪಗಳನ್ನು ಹೇಳಬೇಕು. ಉದಾ:

   ಅ) ಮನೆಯ ವಾತಾವರಣವನ್ನು ಶಿಕ್ಷಣ-ತರಬೇತಿಗೆ ಪೂರಕಗೊಳಿಸುವುದು ಮತ್ತು ಮನೆ ಹಾಗೂ ಶಾಲೆಯ ಜೀವನದ ನಡುವಿನ ಅಂತರವನ್ನು ಕಡಿಮೆಗೊಳಿಸಲು ಪ್ರಯತ್ನಿಸುವುದು.

   ಆ) ಸಂಸ್ಥೆಯ ನೀತಿ-ನಿಯಮ ಹಾಗೂ ಮಾರ್ಗದರ್ಶನಗಳನ್ನು ಪಾಲಿಸುವುದು.

   ಇ) ಹಾಜರಿಯನ್ನು ಪಾಲಿಸುವಂತೆ ಮಗುವನ್ನು ಪ್ರೋತ್ಸಾಹಿಸುವುದು, ಕಲಿಸಿದ್ದ ವಿಷಯಗಳನ್ನು ಅವಲೋಕಿಸುವುದು ಮತ್ತು ಹೋಂವರ್ಕ್ ಪೂರ್ತಿಗೊಳಿಸಲು ವ್ಯವಸ್ಥೆ ಕಲ್ಪಿಸುವುದು.

   ಈ) ಮಗುವಿನ ತರಬೇತಿಯ ನಿಟ್ಟಿನಲ್ಲಿ, ತಮ್ಮ ಬಿಡುವಿನ ವೇಳೆ ಶಾಲೆಯ ಕಾರ್ಯಕ್ರಮಗಳ ಅಭ್ಯಾಸ ಮಾಡಿಸುವುದು.

ಉ) ಕೆಟ್ಟ ಸಹವಾಸದಿಂದ ದೂರವಿರಿಸಲು ಪ್ರಯತ್ನಿಸುವುದು.

ಊ) ಪಠ್ಯೇತರ ಚಟುವಟಿಕೆಗಳಿಂದ ಪ್ರಯೋಜನ ಪಡೆಯಲು ಸಹಾಯ ಮಾಡುವುದು.

ಋ) ನಮಾಝ್ ಸಂಸ್ಥಾಪಿಸಲು, ಉತ್ತಮ ಅಭ್ಯಾಸಗಳನ್ನು ಮೈಗೂಡಿಸಲು ಮತ್ತು ಮನೆಯ ಕೆಲಸಕಾರ್ಯಗಳಲ್ಲಿ ಸಹಕರಿಸಲು ನಿರಂತರ ಪ್ರೇರೇಪಿಸುತ್ತಿರುವುದು.

ಎ) ಮಕ್ಕಳ ಮುಂದೆ ಶಾಲೆಯ ಘನತೆ ಕುಂದುಂಟಾಗದಂತೆ ನೋಡಿಕೊಳ್ಳುವುದು.

ಏ) ಸಂಸ್ಥೆಯ ಒಳಿತು, ಅಭ್ಯುದಯ ಮತ್ತು ಪ್ರಗತಿಗಾಗಿ ಸಲಹೆ ಹಾಗೂ ಸಹಕಾರವನ್ನು ನೀಡುತ್ತಾ ಇರುವುದು.

4. ಕೊನೆಯಲ್ಲಿ ಮಕ್ಕಳ ಶಿಕ್ಷಣ-ತರಬೇತಿ ಮತ್ತು ಶಾಲೆಯ ಅಭ್ಯುದಯಕ್ಕೆ ಸಂಬಂಧಿಸಿ ಪೋಷಕರಿಂದ ಸಲಹೆಗಳನ್ನು ಕೇಳಬೇಕು ಹಾಗೂ ಅವುಗಳ ಬಗ್ಗೆ ಸಮಾಧಾನ ಚಿತ್ತದಿಂದ ಅವಲೋಕನ ನಡೆಸಬೇಕು.

ಎರಡನೆಯ ಸಭೆಯಲ್ಲಿ ಶಾಲೆಯ ವಿವಿಧ ಕಾರ್ಯಕ್ರಮ ಹಾಗೂ ಮಕ್ಕಳ ಸಾಧನೆಗಳನ್ನು ತೋರಿಸಬೇಕು. ಬಳಿಕ ಶಾಲೆ ಮತ್ತು ಮನೆಯ ಪರಸ್ಪರ ಸಹಕಾರದ ಬಗ್ಗೆ ಸಾವಕಾಶವಾಗಿ ಅವಲೋಕಿಸಬೇಕು. ಗಮನಾರ್ಹ ವಿಷಯಗಳ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕು.

ಈ ಸಭೆಗಳ ಪ್ರಾಮುಖ್ಯತೆ ಮತ್ತು ಪ್ರಯೋಜನಗಳು

ಉಪಯುಕ್ತ ಕೆಲಸಗಳನ್ನು ಸರಿಯಾಗಿ ನಿಭಾಯಿಸಿದರೆ ಈ ಕೆಳಗಿನ ಪ್ರಯೋಜನಗಳನ್ನು ಕಾಣಬಹುದಾಗಿದೆ:

- ಮಕ್ಕಳ ಶಿಕ್ಷಣ-ತರಬೇತಿಯಲ್ಲಿ ಪೋಷಕರ ಸಂಪೂರ್ಣ ಸಹಕಾರ ದೊರೆಯುವುದು.
- ಶಾಲೆಯ ಉದ್ದೇಶಗಳ ಬಗ್ಗೆ ಸಹಾನುಭೂತಿ ಮತ್ತು ಆಸಕ್ತಿ ಹುಟ್ಟುವುದು.
- ಮನೆ ಮತ್ತು ಶಾಲೆಯ ವಾತಾವರಣದಲ್ಲಿ ಸಾಮರಸ್ಯವುಂಟಾಗುವುದು.
- ಮಕ್ಕಳ ಜತೆ ಅವರ ಮನೆಗಳ ಸುಧಾರಣೆಯಲ್ಲಿಯೂ ಸಹಾಯವೊದಗುವುದು.
- ಶಾಲೆಯು ತನ್ನ ಕರ್ತವ್ಯವನ್ನು ಇನ್ನೂ ಉತ್ತಮ ರೀತಿಯಲ್ಲಿ ಪಾಲಿಸುವುದು.
- ಶುಭ ಚಿಂತಕರ ಪರಿಧಿಯು ವಿಶಾಲವಾಗುವುದು. ಇದು ಶಾಲೆಯ ವಿಸ್ತರಣೆ ಮತ್ತು ಜನಪ್ರಿಯತೆಯಲ್ಲಿ ಸಾಕಷ್ಟು ಸಹಾಯಕವಾಗುವುದು.
- ಪೋಷಕರಲ್ಲಿರಬಹುದಾದ ತಪ್ಪುಕಲ್ಪನೆಯು ದೂರವಾಗುವುದು ಮತ್ತು ಅವರಲ್ಲಿ ತಮ್ಮ ಕರ್ತವ್ಯಗಳ ಪ್ರಜ್ಞೆ ಬೆಳೆಯುವುದು.

ಒಟ್ಟಿನಲ್ಲಿ ಪೋಷಕರ ಸಭೆಗಳಲ್ಲಿ ಈ ಎಲ್ಲ ಪ್ರಯೋಜನಗಳು ದೊರೆಯುವಂತೆ ಪ್ರಯತ್ನಿಸಬೇಕಾಗಿದೆ.

ಶೈಕ್ಷಣಿಕ ಸಪ್ತಾಹ ಅಥವಾ ವಾರ್ಷಿಕ ಸಮಾರಂಭ

ಪ್ರತಿಯೊಂದು ಶಾಲೆಯೂ ವರ್ಷದಲ್ಲಿ ಒಮ್ಮೆ ದೊಡ್ಡ ಸಮಾರಂಭವನ್ನು ಆಯೋಜಿಸಬೇಕಾಗಿದೆ. ಇದರಿಂದ ಹಲವು ರೀತಿಯ ಪ್ರಯೋಜನಗಳಿವೆ.

- ಜನರಿಗೆ ಸಂಸ್ಥೆಯ ಸೇವೆಗಳ ಪರಿಚಯವಾಗುತ್ತದೆ. ಆದರ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ಅಂದಾಜಿಸುವ ಅವಕಾಶ ಅವರಿಗೆ ದೊರೆಯುತ್ತದೆ.
- ಜನತೆಯಲ್ಲಿ ಪ್ರಭಾವ ಮತ್ತು ಜಾರಿಯ ಅವಕಾಶ ದೊರೆಯುವುದು. ಜನರ ಸಹಕಾರ ಮತ್ತು ಸಹಾನುಭೂತಿಯನ್ನು ಗಳಿಸಲಿಕ್ಕಾಗಿ ದಾರಿ ಸುಗಮಗೊಳ್ಳುತ್ತದೆ. ಅಲ್ಲದೆ ಸಂಸ್ಥೆಯ ವಿಸ್ತರಣೆ ಮತ್ತು ಅಭ್ಯುದಯದಲ್ಲಿ ಆಸಕ್ತಿಯುಳ್ಳವರ ಸಂಖ್ಯೆ ಹೆಚ್ಚುವುದು.
- ವಿದ್ಯಾರ್ಥಿಗಳ ಪ್ರಾಯೋಗಿಕ ತರಬೇತಿಗೆ ಸಾಕಷ್ಟು ಅವಕಾಶ ದೊರೆಯುತ್ತದೆ. ಸಂಸ್ಥೆಯೊಂದಿಗಿನ ಅವರ ಸಾಮಾನ್ಯ ಆಸಕ್ತಿಯಲ್ಲಿ ಹೆಚ್ಚಳವುಂಟಾಗುವುದು.
- ಜನರಲ್ಲಿ ತಮ್ಮ ಮಕ್ಕಳ ಉತ್ತಮ ಶಿಕ್ಷಣ-ತರಬೇತಿಯ ಪ್ರಜ್ಞೆ ಬೆಳೆದು ಬರುತ್ತದೆ ಮತ್ತು ಧಾರ್ಮಿಕ ಶಿಕ್ಷಣದ ಸ್ಥಾಪನೆ ಮತ್ತು ಪ್ರಸಾರದಲ್ಲಿ ಸಹಾಯವೊದಗುವುದು.
- ಪರಿಸರದಲ್ಲಿ ಸಾಮಾಜಿಕ ಸುಧಾರಣೆ ಮತ್ತು ಜನರಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಸಲು ಅವಕಾಶ ಒದಗಿ ಬರುವುದು.

ಕಾರ್ಯಕ್ರಮ

ಈ ಸಮಾರಂಭದ ಕಾರ್ಯಕ್ರಮಗಳಲ್ಲಿ ಈ ಕೆಳಗಿನ ಶೀರ್ಷಿಕೆಗಳನ್ನು ಇರಿಸಬಹುದಾಗಿದೆ. ಸಂಸ್ಥೆಯು ತನ್ನ ಪರಿಸ್ಥಿತಿ, ಅಗತ್ಯ ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಅದರಲ್ಲಿ ಪರಿಷ್ಕರಣೆ ಮಾಡಬಹುದಾಗಿದೆ. ಒಂದು ವೇಳೆ ಒಂದು ಸಂಸ್ಥೆಯು ಸ್ವಯಂ ಯಾವುದೇ ಪರಿಣಾಮಕಾರಿ ಮತ್ತು ಯಶಸ್ವೀ ಕಾರ್ಯಕ್ರಮವನ್ನು ಆಯೋಜಿಸಲು ಶಕ್ತವಾಗಿಲ್ಲದಿದ್ದರೆ, ಪರಿಸರದ ಕೆಲವು ಸಂಸ್ಥೆಗಳ ಜತೆ ಸೇರಿ ಸರದಿ ಪ್ರಕಾರ ಒಂದೊಂದು ಶಾಲೆಯಲ್ಲಿ ಕಾರ್ಯಕ್ರಮ ಆಯೋಜಿಸಬಹುದಾಗಿದೆ.

- ಧರ್ಮದ ಬೇಡಿಕೆ ಮತ್ತು ಧಾರ್ಮಿಕ ಶಿಕ್ಷಣದ ಮಹತ್ವ ಇತ್ಯಾದಿ ವಿಷಯಗಳಲ್ಲಿ ಗಣ್ಯ ವ್ಯಕ್ತಿಗಳಿಂದ ಭಾಷಣದ ವ್ಯವಸ್ಥೆ ಮಾಡುವುದು. ಭಾಷಣವು ಸಂಕ್ಷಿಪ್ತ, ಸಮಗ್ರ, ಗಂಭೀರ ಮತ್ತು ಪ್ರಭಾವಶಾಲಿಯಾಗಿರಬೇಕು. ಒಂದು ಅಧಿವೇಶನದಲ್ಲಿ ಎರಡಕ್ಕಿಂತ ಹೆಚ್ಚು ಭಾಷಣಗಳಿರಬಾರದು.
- ಶೈಕ್ಷಣಿಕ ಪ್ರದರ್ಶನಾಲಯ. ಇದರಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ತಯಾರಿಸಿದ ವಸ್ತುಗಳು ಅವರು ಒದಗಿಸಿದ ಅಪರೂಪದ ವಸ್ತುಗಳು,

ಶಿಕ್ಷಣ-ತರಬೇತಿಗೆ ಸಂಬಂಧಿಸಿದ ಪೋಸ್ಟರ್, ಧಾರ್ಮಿಕ ಮಾಹಿತಿ ಚಾರ್ಟ್, ವಿವಿಧ ಪಠ್ಯ ವಿಷಯಗಳಿಗೆ ಸಂಬಂಧಿಸಿ ಬಳಕೆಯಾಗುವ ವಿವರಣಾ ವಸ್ತುಗಳು, ಆರೋಗ್ಯ-ಸ್ವಚ್ಛತೆ ಮತ್ತು ಸಾಮಾನ್ಯ ಜ್ಞಾನಗಳಿಗೆ ಸಂಬಂಧಿಸಿದ ನಕ್ಷೆ ಮತ್ತು ಮಾದರಿ ಇತ್ಯಾದಿಗಳನ್ನು ಅಚ್ಚುಕಟ್ಟಾಗಿ ಇರಿಸಬೇಕು. ತರುವಾಯ ಸಮಾಧಾನದಿಂದ ಅವುಗಳನ್ನು ತೋರಿಸಿ, ಚೆನ್ನಾಗಿ ವಿವರಿಸಿ ಕೊಡುವ ವ್ಯವಸ್ಥೆಯಾಗಬೇಕು. ಪ್ರದರ್ಶನವು ಸುರಕ್ಷಿತ ಸ್ಥಳದಲ್ಲಿ ಆಗಿರಬೇಕು. ಒಂದು ದಾರಿಯಿಂದ ಒಳ ಬಂದು ಇಡೀ ಪ್ರದರ್ಶನವನ್ನು ನೋಡಿ ಇನ್ನೊಂದು ದಾರಿಯಲ್ಲಿ ಹೊರ ಹೋಗುವಂತೆ ವ್ಯವಸ್ಥೆ ಮಾಡಬೇಕು. ವೀಕ್ಷಕರು ಪ್ರದರ್ಶನ ವಸ್ತುಗಳನ್ನು ಸ್ಪರ್ಶಿಸುವುದರಿಂದ ತಡೆಯಲಿಕ್ಕಾಗಿ ದಾರಿಯ ಬದಿಯಲ್ಲಿ ತಡೆಬೇಲಿಯನ್ನು ಹಾಕಿರಬೇಕು. ಸೂಕ್ತ ಬೆಳಕಿನ ವ್ಯವಸ್ಥೆಯಿದ್ದರೆ ಇಂತಹ ಪ್ರದರ್ಶನಗಳನ್ನು ರಾತ್ರಿ ವೇಳೆ ಇರಿಸಿದರೆ ಇನ್ನೂ ಉತ್ತಮ ಹಾಗೂ ಪರಿಣಾಮಕಾರಿಯಾಗಿರುತ್ತದೆ.

- ಆಟದ ಸ್ಪರ್ಧೆ, ಪಿ.ಟಿ., ಪ್ರಥಮ ಚಿಕಿತ್ಸೆ (First Aid), ಕುಸ್ತಿ ಮತ್ತಿತರ ತಾಲೀಮುಗಳ ಪ್ರದರ್ಶನ. ಆಟದಲ್ಲಿ ಫುಟ್‌ಬಾಲ್, ಕಬಡ್ಡಿ, ಹಗ್ಗ ಜಗ್ಗಾಟ, ಉದ್ದ ಮತ್ತು ಎತ್ತರ ಜಿಗಿತ, ಸಣ್ಣ ಮಕ್ಕಳ ಕುರ್ಚಿಯಾಟ, ಲಿಂಬೆ-ಜಿಲೇಬಿ-ಚಮಚಾ ಓಟ, ಒಂಟಿ ಕಾಲಿನ ಓಟ ಇತ್ಯಾದಿ ಎಲ್ಲರಿಗೂ ಬಹಳ ಇಷ್ಟವಾಗುತ್ತದೆ.
- ಹಾಡುಗಾರಿಕೆ, ಭಾಷಣ, ಪ್ರಬಂಧ ಇತ್ಯಾದಿಗಳ ಸ್ಪರ್ಧೆ.
- ಸಾಹಿತ್ಯ ಸಮ್ಮೇಳನ ಅಥವಾ ಮಕ್ಕಳ ಕವಿಗೋಷ್ಠಿ. ಇದರಲ್ಲಿ ಮಕ್ಕಳನ್ನು ವಿಖ್ಯಾತ ಕವಿಗಳ ಆಸಕ್ತಿದಾಯಕ ಮತ್ತು ಪಾಠಬೋಧಕ ಪದ್ಯಗಳನ್ನು ಅಚ್ಚುಕಟ್ಟಾಗಿ ಪಠಿಸಲು ತರಬೇತುಗೊಳಿಸುವುದು.
- ಮಕ್ಕಳ ವತಿಯಿಂದ ಸಾರ್ವಜನಿಕ ಸಭೆ. ಇದರಲ್ಲಿ ಮಕ್ಕಳು ಜನತೆಯ ಮುಂದೆ ಸಂಕ್ಷಿಪ್ತ ಭಾಷಣ, ಸಂವಾದ, ಹಾಸ್ಯಚಟಾಕಿ, ಪರಿಣಾಮಕಾರಿ ಕವನ ವಾಚನ, ಪಾಠಬೋಧಕ ಕಥೆ ಇತ್ಯಾದಿಗಳನ್ನು ವಿವಿಧ ಭಾಷೆಗಳಲ್ಲಿ ಪ್ರಸ್ತುತ ಪಡಿಸಬೇಕು.
- ಬಹುಮಾನ ವಿತರಣಾ ಸಮಾರಂಭ. ವಿವಿಧ ಸ್ಪರ್ಧೆಗಳಲ್ಲಿ ಜಯಿಸಿದ, ತಮ್ಮ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನೆರವೇರಿಸಿದ, ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ, ಪ್ರದರ್ಶನಕ್ಕೆ ಉತ್ತಮ ವಸ್ತುಗಳನ್ನು ಒದಗಿಸಿದ ಮಕ್ಕಳಿಗೆ ಬಹುಮಾನ ನೀಡುವ ಪ್ರಕ್ರಿಯೆ ಇದರಲ್ಲಿ ನಡೆಯಬೇಕು. ಬಹುಮಾನದಲ್ಲಿ ಉಪಯುಕ್ತ, ಆಸಕ್ತಿಕರ ಮತ್ತು ಅರ್ಥಪೂರ್ಣ ಪುಸ್ತಕಗಳು; ಓದು-ಬರೆಹದ ಸಾಮಗ್ರಿಗಳು, ಸರ್ಟಿಫಿಕೇಟ್, ಶೈಕ್ಷಣಿಕ ಆಟಿಕೆಗಳಿತ್ಯಾದಿ ನೀಡಬೇಕು. ಬಹುಮಾನ ಏನಿದ್ದರೂ ಬಹುಮಾನವೇ. ಅದು ದುಬಾರಿಯಾಗಿರಲೇಬೇಕೆಂಬ ಅಗತ್ಯವೇನಿಲ್ಲ.

ಗಮನಾರ್ಹ ವಿಷಯಗಳು

ಈ ಕಾರ್ಯಕ್ರಮಗಳನ್ನು ಪರಿಣಾಮಕಾರಿ ಮತ್ತು ಉಪಯುಕ್ತವಾಗಿಸಬೇಕಾದರೆ-

- ಕಾರ್ಯಕ್ರಮಗಳನ್ನು ಆಹ್ಲಾದಕರ ಋತುವಿನಲ್ಲಿ ಇರಿಸಬೇಕು. ಅಗತ್ಯದ ಕಾರ್ಯಕ್ರಮಗಳನ್ನು ಜನರಿಗೆ ಹೆಚ್ಚು ಬಿಡುವಿರುವ ಮತ್ತು ಸುಲಭದಲ್ಲಿ ಪಾಲ್ಗೊಳ್ಳಬಹುದಾದ ಸಂದರ್ಭದಲ್ಲಿಯೇ ಇರಿಸಬೇಕು. ಉದಾ: ಸಾರ್ವಜನಿಕ ಸಭೆ, ಸಾಹಿತ್ಯ ಸಭೆ, ಮಕ್ಕಳ ಕವಿಗೋಷ್ಠಿ, ಪ್ರದರ್ಶನ ಇತ್ಯಾದಿಗಳನ್ನು ರಾತ್ರಿ ಹೊತ್ತಿನಲ್ಲೂ, ವಿವಿಧ ರೀತಿಯ ಸ್ಪರ್ಧೆಗಳನ್ನು ಹಗಲಿನಲ್ಲೂ ನಡೆಸಬೇಕು. ಋತುಮಾನವು ಉತ್ತಮವಿದ್ದರೆ ಮಧ್ಯಾವಧಿ ಮತ್ತು ವಾರ್ಷಿಕ ಪರೀಕ್ಷೆಯ ಬಳಿಕ ಈ ಕಾರ್ಯಕ್ರಮ ನಡೆಸಿದರೆ ಒಳ್ಳೆಯದು. ಇದರಿಂದ ಬೋಧನೆಗೆ ಹೆಚ್ಚು ಬಾಧಕವಾಗುವುದಿಲ್ಲ ಮತ್ತು ಅಭ್ಯಾಸಕ್ಕೆ ಸಾಕಷ್ಟು ಅವಕಾಶವೂ ದೊರೆಯುತ್ತದೆ.
- ವಿವರಣಾ ಕಾರ್ಯಕ್ರಮಗಳನ್ನು ಚೆನ್ನಾಗಿ ವ್ಯಾಖ್ಯಾನಿಸಬೇಕು.
- ಎಲ್ಲರೂ ಇದರಲ್ಲಿ ಭಾಗವಹಿಸುವಂತಾಗಬೇಕಾದರೆ ಸಂಸ್ಥೆಯನ್ನು ಯಾವುದೇ ಗುಂಪುಗಾರಿಕೆ ಅಥವಾ ರಾಜಕೀಯ ಪಕ್ಷಗಳಿಂದ ಮುಕ್ತವಾಗಿರಿಸಬೇಕು.
- ತಪ್ಪು ಅಭಿಪ್ರಾಯ ಹರಡಲು ಅಥವಾ ಹರಡಿಸಲು ಅವಕಾಶವೊದಗದಿರಬೇಕಾದರೆ ಭಾಷಣಗಳಲ್ಲಿ ಆಂಶಿಕ ಭಿನ್ನಾಭಿಪ್ರಾಯಗಳನ್ನು ಕೆದಕದಂತೆ ನೋಡಿಕೊಳ್ಳಬೇಕು. ಸಮಾಜ ಸುಧಾರಣಾ ಕಾರ್ಯಕ್ರಮವೂ ಸಾರ್ವತ್ರಿಕ ವಿಷಯಗಳನ್ನು ಅವಲಂಬಿಸಿರಬೇಕು. ಮಕ್ಕಳಿಂದ ಯಾವತ್ತಿಗೂ ಹಿರಿಯರನ್ನು ವಿಮರ್ಶೆಗೊಳಪಡಿಸಬಾರದು.
- ಮಕ್ಕಳು ಚೆನ್ನಾಗಿ ಸಿದ್ಧತೆ ನಡೆಸಿರುವ ಮತ್ತು ಸಾಕಷ್ಟು ಅಭ್ಯಾಸ ನಡೆಸಿರುವಂತಹ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
- ಕಿರಿಯರ, ಹಿರಿಯರ, ಸ್ತ್ರೀ-ಪುರುಷರಾದಿ ಎಲ್ಲರ ಆಸಕ್ತಿಗಳನ್ನೂ ಪರಿಗಣಿಸಿರಬೇಕು.
- ಆಹ್ವಾನ ಪತ್ರಿಕೆಯ ಪ್ರಕಟನೆಯಲ್ಲಿ ಹೃದಯ ವೈಶಾಲ್ಯ ಮೆರೆಯಬೇಕು.
- ಪ್ರತಿಯೋರ್ವ ವಿದ್ಯಾರ್ಥಿಯೂ ತನ್ನ ಪ್ರಾಯ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಯಾವುದಾದರೊಂದು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು.
- ಎಲ್ಲ ವ್ಯವಸ್ಥೆಗಳನ್ನೂ ಅಧ್ಯಾಪಕರು ತಮ್ಮ ಮೇಲ್ನೋಟದಲ್ಲಿ ಸಾದ್ಯಂತ ವಿದ್ಯಾರ್ಥಿಗಳಿಂದಲೇ ಮಾಡಿಸಬೇಕು. ಇದರಿಂದ ಮಕ್ಕಳಿಗೆ ಎಲ್ಲ ರೀತಿಯ ಕೆಲಸಗಳ ಪ್ರಾಯೋಗಿಕ ತರಬೇತಿಯಾಗುತ್ತದೆ.
- ಸಭಿಕರನ್ನು ಗೌರವಿಸಬೇಕು ಮತ್ತು ಅವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು.

ವಸತಿ ಶಾಲೆ (Boarding House)

ಹೆತ್ತವರು ತಮ್ಮ ನಿಬಿಡತೆ ಅಥವಾ ತರಬೇತಿಯ ಕಲೆ ತಿಳಿದಿಲ್ಲದ ಕಾರಣ ಮಕ್ಕಳೆಡೆಗೆ ಸಂಪೂರ್ಣ ಗಮನವನ್ನು ಹರಿಸುವಲ್ಲಿ ವಿಫಲರಾಗುತ್ತಾರೆ. ಇತ್ತ ಕೈಗಾರಿಕಾ ಕ್ರಾಂತಿಯು ಕೌಟುಂಬಿಕ ವ್ಯವಸ್ಥೆಯನ್ನು ಛಿದ್ರಛಿದ್ರಗೊಳಿಸಿಬಿಟ್ಟಿದೆ. ಸಮಾಜವು ದಿನೇ ದಿನೇ ಭೌತಿಕತೆ, ನಾಸ್ತಿಕತೆ ಮತ್ತು ಧರ್ಮಬಾಹಿರತೆಯ ಕಡೆಗೆ ಸಾಗುತ್ತಿದೆ. ಧರ್ಮ ಮತ್ತು ನೈತಿಕತೆಯ ನಿಯಂತ್ರಣವು ಸಡಿಲವಾಗುತ್ತಿದೆ. ಪರಿಸರವು ವ್ಯಾಪಕವಾಗಿ ಕಲುಷಿತಗೊಂಡಿದ್ದು ತರತರವಾದ ಕೆಡುಕುಗಳ ಆಡುಂಬೊಲವಾಗಿ ಮಾರ್ಪಟ್ಟಿದೆ. ಇಂತಹ ಸ್ಥಿತಿಯಲ್ಲಿ ಶಾಲೆಯು ಸಾದ್ಯಂತ ವಸತಿ ಶಾಲೆಯಾಗಿ ಮಾರ್ಪಡುವುದೇ ಉತ್ತಮ ಅಥವಾ ಕಡೇ ಪಕ್ಷ ಮಕ್ಕಳ ಹೆಚ್ಚಿನ ಸಮಯವು ಅಧ್ಯಾಪಕರ ಮೇಲ್ನೋಟ ಮತ್ತು ಮಾರ್ಗದರ್ಶನದಲ್ಲಿ ಕಳೆಯುವಂತಹ ವ್ಯವಸ್ಥೆಯಾಗಬೇಕು. ಇದರಿಂದ ಅವರ ಉತ್ತಮ ಪೋಷಣೆ, ಬೆಳವಣಿಗೆ ಮತ್ತು ತರಬೇತಿಯು ಸಾಧ್ಯವಾಗುತ್ತದೆ. ಅವರು ಕೆಟ್ಟ ಸಹವಾಸದಿಂದ ಸುರಕ್ಷಿತವಾಗಿರುತ್ತಾರೆ. ಅವರಿಗೆ ಸ್ವತಂತ್ರ ಅಧ್ಯಯನ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸಾಕಷ್ಟು ಸಮಯಾವಕಾಶ ಒದಗುತ್ತದೆ.

ಇವಿಷ್ಟಲ್ಲದೆ ಹಾಸ್ಟೆಲ್‌ನ ಜೀವನದಿಂದ-

- ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ, ಅವರು ಬಲು ಬೇಗನೇ ಸ್ವಂತ ಕಾರ್ಯಗಳನ್ನು ಸ್ವಕರಗಳಿಂದಲೇ ಮಾಡಲು ಕಲಿಯುತ್ತಾರೆ ಮತ್ತು ಎಲ್ಲದಕ್ಕೂ ಹಿರಿಯರನ್ನು ಅವಲಂಬಿಸುವುದು ತಪ್ಪುತ್ತದೆ.
- ವಿಭಿನ್ನ ರೀತಿಯ ಸ್ವಭಾವ ಮತ್ತು ಸಾಮಾಜಿಕ ಸ್ತರಗಳಲ್ಲಿರುವ ಮಕ್ಕಳೊಡನೆ ಬಾಳುವ ಹಾಗೂ ಕೊರತೆ ಮತ್ತು ದೈನ್ಯತೆಯನ್ನು ನಿಭಾಯಿಸುವ ವಿಧಾನಗಳನ್ನು ಕಲಿಯುತ್ತಾರೆ.
- ಉತ್ತಮ ಅಭ್ಯಾಸಗಳನ್ನು ಮೈಗೂಡಿಸಲು, ಸಾಮಾಜಿಕ ಶಿಷ್ಟಾಚಾರ ಕಲಿಯಲು ಮತ್ತು ಚಾರಿತ್ರ್ಯ ನಿರ್ಮಾಣಕ್ಕೆ ಅನುಕರಣೀಯ ಮಾದರಿ ಹಾಗೂ ಸೂಕ್ತ ಅವಕಾಶ ಒದಗಿ ಬರುತ್ತಿರುವುದು.
- ಜೀವನದಲ್ಲಿ ಶಿಸ್ತು ಪಾಲನೆಯ ಅಭ್ಯಾಸವಾಗುತ್ತದೆ. ಭಾವನೆಗಳನ್ನು ನಿಯಂತ್ರಿಸುವ ಮತ್ತು ನೀತಿ ನಿಯಮಗಳನ್ನು ಪಾಲಿಸುವ ಸಾಮರ್ಥ್ಯ ಬೆಳೆಯುತ್ತದೆ.
- ತಂಡರೂಪದಲ್ಲಿ ಕೆಲಸ ಮಾಡಲು, ಇತರರಿಗೆ ಸಹಾಯ ಮಾಡಲು, ಪ್ರೀತಿ-ಹಿತ ಚಿಂತನೆ ಮತ್ತು ತ್ಯಾಗ-ಬಲಿದಾನಗಳನ್ನು ಪ್ರದರ್ಶಿಸಲು ಅಥವಾ ರೋಗಿಯ ಆರೈಕೆ, ಅತಿಥಿ ಸತ್ಕಾರ, ಸೇವೆ, ಅನುಸರಣೆ ಮತ್ತು ನೇತೃತ್ವದ ಹೇರಳ ಅವಕಾಶ ಒದಗಿ ಬರುವುದು.
- ಹೃದಯ ವೈಶಾಲ್ಯತೆ, ಮಾಹಿತಿಯಲ್ಲಿ, ಹೆಚ್ಚಳ ಮತ್ತು ಸ್ಫೂರ್ತಿಯಲ್ಲಿ ಔನ್ನತ್ಯ ಹುಟ್ಟುತ್ತದೆ.

- ಎಲ್ಲಕ್ಕಿಂತಲೂ ಮಿಗಿಲಾಗಿ ಜೀವನ ಸಾಗಿಸಲು ಪರಿಶುದ್ಧ ವಾತಾವರಣ ಮತ್ತು ಉತ್ತಮ ಸ್ನೇಹಿತರ ಸಾಂಗತ್ಯ ದೊರೆಯುತ್ತದೆ. ಇದು ಜೀವನದಲ್ಲಿ ದೂರಗಾಮೀ ಪ್ರಭಾವವನ್ನು ಬೀರುತ್ತದೆ. ಮಾತ್ರವಲ್ಲ, ಜೀವನ ಪೂರ್ತಿ ಇದು ಸ್ಮರಣೆಯಲ್ಲಿ ಉಳಿಯುತ್ತದೆ.

ಗಮನಾರ್ಹ ವಿಷಯಗಳು

ಹಾಸ್ಟೆಲ್ ಜೀವನದಿಂದ ನಿರೀಕ್ಷಿತ ಪ್ರಯೋಜನ ಪಡೆಯಬೇಕಾದರೆ, ಈ ಕೆಳಗೆ ನೀಡಿರುವ ವಿಷಯಗಳನ್ನು ಗಮನದಲ್ಲಿರಿಸಬೇಕಾದ ಅಗತ್ಯವಿದೆ-

- ಹಾಸ್ಟೆಲ್‌ಗಳು ಜನನಿಬಿಡ ಪ್ರದೇಶದಿಂದ ದೂರ, ಶಾಲೆಗೆ ಹತ್ತಿರ, ಪ್ರಶಾಂತ ಮತ್ತು ಮುಕ್ತ ವಾತಾವರಣದಲ್ಲಿರಬೇಕು.
- ವಾಸದ ಕೋಣೆಗಳಲ್ಲಿ ಸಾಕಷ್ಟು ಗಾಳಿ, ಬೆಳಕು ಹರಿಯುತ್ತಿರಬೇಕು ಮತ್ತು ಹತ್ತರಿಂದ ಹದಿನೈದು ಮಂದಿ ಮಕ್ಕಳು ಒಟ್ಟಿಗೇ ಇರಬಲ್ಲಷ್ಟು ದೊಡ್ಡದಿರಬೇಕು.
- ಕೋಣೆಯಲ್ಲಿ ಅಗತ್ಯದ ಸಾಮಗ್ರಿಗಳನ್ನು ಜೋಡಿಸಿಟ್ಟಿರಬೇಕು. ಮಕ್ಕಳ ಖಾಸಗಿ ವಸ್ತುಗಳನ್ನು ಸುರಕ್ಷಿತವಾಗಿ, ಸ್ವಚ್ಛವಾಗಿ ಮತ್ತು ಅಚ್ಚುಕಟ್ಟಾಗಿ ಇರಿಸುವ ವ್ಯವಸ್ಥೆಯಾಗಬೇಕು.
- ಹಾಸ್ಟೆಲ್ ಕಟ್ಟಡವು ಸಾದ್ಯಂತ ಶಿಕ್ಷಣ ಸಂಸ್ಥೆಯದ್ದೇ ಆಗಿರಬೇಕು. ಅದು ಆರೋಗ್ಯ ಸಂರಕ್ಷಣೆಯ ನೀತಿ ಮತ್ತು ಹಾಸ್ಟೆಲ್‌ನ ಆಗತ್ಯಗಳನ್ನು ಪರಿಗಣಿಸಿಯೇ ಕಟ್ಟಿಸಿರಬೇಕು. ಬಾಡಿಗೆಯ ಕಟ್ಟಡಗಳು ಸಾಮಾನ್ಯವಾಗಿ ಹಾಸ್ಟೆಲ್‌ಗಳ ಮಟ್ಟಿಗೆ ಒಳ್ಳೆಯದಲ್ಲ.
- ಮಕ್ಕಳಿಗೆ ಮನೆಯ ನೆನಪು ಹೆಚ್ಚು ಕಾಡದಿರಬೇಕಾದರೆ, ಪ್ರೀತಿ, ಅನುನಯ, ಅನುಕಂಪ, ಸಹಾನುಭೂತಿ ಇತ್ಯಾದಿಗಳಲ್ಲಿ ಮಾತಾಪಿತರಿಗೆ ಪರ್ಯಾಯವಾಗಿರುವಂತಹ ಮತ್ತು ಹೆತ್ತವರಂತೆಯೇ ಸಹಾಯ-ಸಹಕಾರ ನೀಡಬಲ್ಲಂತಹ ವ್ಯಕ್ತಿಗಳನ್ನೇ ಬೋರ್ಡಿಂಗ್‌ನ ಮೇಲ್ವಿಚಾರಕರನ್ನಾಗಿ ಮಾಡಬೇಕು. ಮಕ್ಕಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ, ಅವರ ತರಬೇತಿ ಮತ್ತು ಪೋಷಣೆ ಮಾಡುವ ಹಾಗೂ ಅವರ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯಗಳಲ್ಲಿ ಸಮತೋಲನವನ್ನು ಪಾಲಿಸುವವರಾಗಿರಬೇಕು. ಹಾಸ್ಟೆಲ್‌ನ ಒಂದು ಭಾಗದಲ್ಲಿಯೇ ಮೇಲ್ವಿಚಾರಕನ ವಸತಿಯ ವ್ಯವಸ್ಥೆ ಮಾಡಬೇಕು.
- ಮೇಲ್ವಿಚಾರಕನು ಈ ಕೆಳಗಿನ ವಿಷಯಗಳ ಬಗ್ಗೆ ವಿಶೇಷವಾಗಿ ಆಸ್ಥೆ ವಹಿಸಬೇಕು- 1) ಆರೋಗ್ಯ ಮತ್ತು ಸ್ವಚ್ಛತೆ 2) ಊಟ ಮತ್ತು ಉಪಹಾರ 3) ಅಧ್ಯಯನ 4) ಆಟ 5) ಬಿಡುವಿನ ವೇಳೆಯ ಚಟುವಟಿಕೆಗಳು 6) ನಡತೆ ಮತ್ತು ಪರಸ್ಪರ ಸಂಬಂಧ 7) ನಮಾಝ್ ಪಾಲನೆ 8) ಸಾಮಾಜಿಕ ಶಿಷ್ಟಾಚಾರಗಳ ಪಾಲನೆ 9) ಹೊಣೆಗಾರಿಕೆಯ

ನಿಭಾವಣೆಯಲ್ಲಿ ಮಗ್ನತೆ ಮತ್ತು ಅಚ್ಚುಕಟ್ಟುತನ 10) ವಸ್ತುಗಳ ಸಂರಕ್ಷಣೆ, ಜೋಪಾನ.

- ಬೋರ್ಡಿಂಗ್‌ನಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದ್ದಲ್ಲಿ ಪಾಠ ಮಾಡುವುದರ ಜತೆಗೇ ಮೇಲ್ವಿಚಾರಣೆಯ ಹೊಣೆಯನ್ನು ಹೊರಲು ಸಿದ್ಧರಾಗುವ ಅಧ್ಯಾಪಕರಿಗೇ ಆ ಕೆಲಸ ನೀಡಬಹುದು. ಅನ್ಯಥಾ ಪೂರ್ಣಕಾಲಿಕ ಹೊಣೆಗಾರರನ್ನೇ ನೇಮಿಸಬೇಕು. ಅವರಿಗೆ ಪಾಠ ಅಥವಾ ಬೇರಾವುದೇ ಹೊಣೆಗಾರಿಕೆಯನ್ನು ನೀಡಬಾರದು. ವಿದ್ಯಾರ್ಥಿಗಳ ತರಬೇತಿ ಮತ್ತು ಪೋಷಣೆಯಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳಲು ಈ ಮೂಲಕ ಸಾಧ್ಯವಾಗಬಹುದು.
- ಸ್ವಚ್ಛತೆಯಲ್ಲಿ ವಿಶೇಷತಃ ಮಕ್ಕಳ ವಸ್ತ್ರ, ಹಾಸಿಗೆ, ವಾಸ್ತವದ ಕೋಣೆ, ಅಡುಗೆ ಮನೆ, ಊಟದ ಕೋಣೆ, ಬಚ್ಚಲ ಕೋಣೆ, ಶೌಚಾಲಯ, ಮೂತ್ರದೊಡ್ಡಿ, ಚರಂಡಿ, ವರಾಂಡ, ಹಿತ್ತಲು ಇತ್ಯಾದಿಗಳ ಸ್ವಚ್ಛತೆಯ ಬಗ್ಗೆ ಬಹಳ ಹೆಚ್ಚು ಗಮನ ಹರಿಸಬೇಕು. ಫಿನಾಯಿಲ್ ಬಳಕೆ, ಸುಣ್ಣ ಬಳಿಯುವುದು, ಕೆಲವೊಮ್ಮೆ ಕೋಣೆಗಳನ್ನು ತೊಳೆಯಿಸುವುದು, ಗಂಧ-ಲೋಬಾನದ ಹೊಗೆ ಹಾಕಿಸುವುದು ಇತ್ಯಾದಿಗಳ ವ್ಯವಸ್ಥೆ ಮಾಡಬೇಕು.
- ಕಾಲ ಕಾಲಕ್ಕೆ ಮಕ್ಕಳ ವೈದ್ಯಕೀಯ ತಪಾಸಣೆ ಮಾಡಿಸಬೇಕು. ಅಂಟು ರೋಗಗಳ ನಿಯಂತ್ರಣಕ್ಕಾಗಿ ಚುಚ್ಚು ಮದ್ದು ಹಾಕುವ ಅಗತ್ಯವಿದ್ದರೆ ಅದನ್ನು ಮಾಡಬೇಕು. ಸಾಮಾನ್ಯವಾದ ವೈದ್ಯಕೀಯ ಚಿಕಿತ್ಸೆಯನ್ನು ಬೋರ್ಡಿಂಗ್‌ನಲ್ಲಿಯೇ ಕೊಡಿಸಬೇಕು. ಅನಾರೋಗ್ಯ ಪೀಡಿತ ಮಕ್ಕಳಿಗೆ ಪ್ರತ್ಯೇಕ ಕೋಣೆಯ ವ್ಯವಸ್ಥೆ ಮಾಡಬೇಕು.
- ಸಣ್ಣ ಮತ್ತು ದೊಡ್ಡ ಮಕ್ಕಳನ್ನು ಪ್ರತ್ಯೇಕವಾಗಿರಿಸಬೇಕು. ಒಂದು ಕೋಣೆಯಲ್ಲಿ ಸಾಧ್ಯವಾದಷ್ಟರ ಮಟ್ಟಿಗೆ ಒಂದೇ ಪ್ರಾಯದ ಮತ್ತು ಸಮಾನ ಸಾಮರ್ಥ್ಯದ ಮಕ್ಕಳನ್ನು ಇರಿಸಬೇಕು. ದೊಡ್ಡ ಮಕ್ಕಳನ್ನು ಹಾಸ್ಟೆಲ್‌ಗೆ ಸೇರಿಸುವಾಗ ಅವರ ಗುಣ ನಡತೆಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬೇಕು. ಹೆಚ್ಚು ಕೆಟ್ಟ ಮಕ್ಕಳನ್ನು ಬೋರ್ಡಿಂಗ್‌ಗೆ ಸೇರಿಸದಿರುವುದೇ ಉತ್ತಮ. ಅನ್ಯಥಾ ಒಂದು ಕೆಟ್ಟ ಮೀನು ಇಡೀ ಕೆರೆಯನ್ನು ಕೆಡಿಸಿ ಬಿಡಬಹುದು.
- ಪ್ರತಿ ಕೋಣೆಯಲ್ಲಿ ಓರ್ವ ಮಾನಿಟರ್ ಇರಬೇಕು. ಅವನು ಕೋಣೆಯ ಸ್ವಚ್ಛತೆ, ವಸ್ತುಗಳ ಸಂರಕ್ಷಣೆ-ಜೋಡಣೆ, ಕೋಣೆಯ ಶಿಸ್ತುಪಾಲನೆ ಇತ್ಯಾದಿಗಳಲ್ಲಿ ಹಾಸ್ಟೆಲ್‌ನ ಹೊಣೆಗಾರನಿಗೆ ಸಹಾಯ ಮಾಡುವವನಾಗಿರಬೇಕು.
- ವಿದ್ಯಾರ್ಥಿಗಳ ವಿವಿಧ ತಂಡಗಳನ್ನು ರಚಿಸಬೇಕು. ಪ್ರತಿಯೊಂದು ತಂಡಕ್ಕೂ ಸರದಿ ಪ್ರಕಾರ ತನ್ನ ಮಾನಿಟರ್ ಅಥವಾ ನಾಯಕನ ಮೇಲ್ನೋಟದಲ್ಲಿ ಹಾಸ್ಟೆಲ್‌ನ ಸ್ವಚ್ಛತೆ, ಆಹಾರ ಬಡಿಸುವ, ಅಸ್ವಸ್ಥ ವಿದ್ಯಾರ್ಥಿಗಳ ಆರೈಕೆ, ಕಲಿತ ಪಾಠಗಳ ಪರಿಶೀಲನೆ, ಹೋಂವರ್ಕ್ ಮಾಡಿಸುವುದು ಮತ್ತು ವಾಚನಾಲಯದಿಂದ ಪ್ರಯೋಜನ

ಪಡೆಯುವ ವ್ಯವಸ್ಥೆ, ನಮಾಝ್‌ನ ವ್ಯವಸ್ಥೆ, ಅತಿಥಿಗಳ ಸೇವೆ, ನೂತನ ವಿದ್ಯಾರ್ಥಿಗಳಿಗೆ ಸಹಾಯ, ಆಟ, ಅಡುಗೆ ಮನೆಗಳ ಮೇಲ್ನೋಟ ಇತ್ಯಾದಿ ಹೊಣೆಗಾರಿಕೆಗಳನ್ನು ನಿಭಾಯಿಸುವ ಅವಕಾಶ ಮಾಡಿಕೊಡಬೇಕು.

- ಹಾಸ್ಟೆಲ್‌ಗೆ ಒಂದು ವೇಳಾಪಟ್ಟಿ ಇರಬೇಕು. ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿ ಸಂಕ್ಷಿಪ್ತ ನಿಯಮ-ನಿಬಂಧನೆಗಳನ್ನು ರಚಿಸಿ, ಅವುಗಳ ಪಾಲನೆಯ ಬಗ್ಗೆ ನಿಗಾ ವಹಿಸಬೇಕು. ವಿವಿಧ ಸಂದರ್ಭಗಳ ಶಿಷ್ಟಾಚಾರವನ್ನು ಕಲಿಸಿಕೊಡಬೇಕು.
- ಸಮಯಕ್ಕೆ ಸರಿಯಾಗಿ ಶುದ್ಧ, ಸರಳ ಮತ್ತು ಸಂತುಲಿತ ಆಹಾರದ ವ್ಯವಸ್ಥೆ ಮಾಡಬೇಕು. ಆಹಾರ-ಪಾನೀಯದ ವ್ಯವಸ್ಥೆಯಲ್ಲಿ ಸಂಸ್ಥೆಯು ಸ್ವಯಂ ಮೇಲ್ನೋಟ ವಹಿಸಬೇಕು. ಈ ಹೊಣೆಯನ್ನು ಯಾರಿಗೂ ಗುತ್ತಿಗೆ ನೀಡಬಾರದು. ಅನ್ಯಥಾ ವ್ಯವಸ್ಥೆ ಸರಿ ಇರಲಾರದು. ಮಕ್ಕಳ ಆರೋಗ್ಯ ಮತ್ತು ಅವರ ಸಮಾಧಾನಕ್ಕಾಗಿ ಆಹಾರ ಪಾನೀಯದ ಸೂಕ್ತ ವ್ಯವಸ್ಥೆ ಮಾಡುವ ಬಗ್ಗೆ ಬಹಳ ಕಾಳಜಿ ವಹಿಸಬೇಕಾದ ಅಗತ್ಯವಿದೆ.
- ಮಕ್ಕಳಿಗೆ ಶ್ರಮ ಪಡುವ ಮತ್ತು ಸರಳ ಜೀವನ ನಡೆಸುವ ಜತೆಗೆ ಎಲ್ಲ ರೀತಿಯ ಕೆಲಸಗಳನ್ನೂ ಸ್ವತಃ ಮಾಡುವ ಅಭ್ಯಾಸವನ್ನು ಹಂತಹಂತವಾಗಿ ಮಾಡಿಸಬೇಕು. ಅದಕ್ಕಾಗಿ ವೈಯಕ್ತಿಕ ಮತ್ತು ಸಾಮೂಹಿಕ ಹೊಣೆಗಾರಿಕೆಗಳನ್ನು ನೀಡಬೇಕು. ಅವುಗಳನ್ನು ನಿಭಾಯಿಸಲು ಪ್ರೇರೇಪಿಸುತ್ತ ಇರಬೇಕು.
- ಬಿಡುವಿನ ವೇಳೆಯಲ್ಲಿ ಉತ್ತಮ ಚಟುವಟಿಕೆ, ಅರ್ಹ ಮೇರೆಯೊಳಗೆ ಮಕ್ಕಳ ಆಸಕ್ತಿಯನ್ನು ಪರಿಗಣಿಸುತ್ತ ಆಟ ಮತ್ತು ಮನರಂಜನೆಯ ವ್ಯವಸ್ಥೆ ಮಾಡಬೇಕು. ಈ ವಿಷಯದಲ್ಲಿ ಅಲಕ್ಷ್ಯ ತೋರಿದರೆ ತರತರವಾದ ಕೆಡುಕುಗಳಿಗೆ ದಾರಿಯಾಗುತ್ತದೆ. ಮಕ್ಕಳ ಮನರಂಜನೆಗಾಗಿಯೇ ಇದನ್ನೆಲ್ಲ ಮಾಡಬೇಕಾಗಿದೆ. ಅನ್ಯಥಾ ಹಾಸ್ಟೆಲನ್ನು ಮಕ್ಕಳು ಸೆರೆಮನೆಯೆಂದು ಭಾವಿಸಬಹುದು.
- ಮಕ್ಕಳ ನಡತೆಯ ಬಗ್ಗೆ ಚೆನ್ನಾಗಿ ನಿಗಾ ವಹಿಸಬೇಕು. ಅನ್ಯಥಾ ಹಾಸ್ಟೆಲ್ ಜೀವನದಲ್ಲಿ ಹಲವು ರೀತಿಯ ಪ್ರಯೋಜನಗಳಿರುವಂತೆಯೇ ಮಕ್ಕಳಲ್ಲಿ ನಡತೆಗೆಡುವ, ಪುಂಡಾಟಿಕೆಗಿಳಿಯುವ, ಕಳ್ಳತನ, ದುಂದುವೆಚ್ಚ, ಕೀಳರಿಮೆ, ಇತರ ಮಕ್ಕಳ ಬಗ್ಗೆ ಅಸೂಯೆ, ಹೊಣೆಗೇಡಿತನ ಇತ್ಯಾದಿಗಳು ಸಂಭವಿಸುವ ಸಾಧ್ಯತೆಯಿದೆ. ಮಕ್ಕಳ ಜೇಬು ಖರ್ಚಿನ ಹಣವು ವಾರ್ಡನ್‌ನ ಬಳಿಯೇ ಇರಬೇಕು. ಆದರೆ ಅಗತ್ಯಾನುಸಾರ ಅವರಿಗೆ ಸುಲಭದಲ್ಲಿ ದೊರೆಯುವಂತಾಗಬೇಕು.
- ಉತ್ತಮ ಗುಣ ನಡತೆಯನ್ನು ಬೆಳೆಸುವ ಮತ್ತು ಶಿಷ್ಟಾಚಾರ ಕಲಿಸುವ ನಿಟ್ಟಿನಲ್ಲಿ ವಿವಿಧ ರೀತಿಯಲ್ಲಿ ಸಪ್ತಾಹಾಚರಣೆಗಳನ್ನು ಆಯೋಜಿಸಬೇಕು. ಹುಡುಗರ ಸಾಪ್ತಾಹಿಕ ತರಬೇತಿ ಸಭೆಗಳನ್ನು ಆಯೋಜಿಸಿ, ಗಮನಾರ್ಹ ವಿಷಯಗಳೆಡೆಗೆ ಅವರ ಗಮನವನ್ನು

ಸೆಳೆಯುತ್ತಲಿರಬೇಕು. ಅಂತೆಯೇ ಹಾಸ್ಟೆಲ್ ಜೀವನಕ್ಕೆ ಅಗತ್ಯವಿರುವ ವಿಷಯಗಳನ್ನು ವಿವರವಾಗಿ ತಿಳಿಸಿ ಕೊಡಬೇಕು ಹಾಗೂ ಅವುಗಳನ್ನು ಪಾಲಿಸುವುದಾಗಿ ಅವರಿಂದ ವಾಗ್ದಾನ ಪಡೆಯಬೇಕು. ಕೆಲವೊಮ್ಮೆ ವಿದ್ಯಾರ್ಥಿಗಳೊಡನೆ ವೈಯಕ್ತಿಕ ಭೇಟಿ ನಡೆಸುವ ಮೂಲಕ ಅವರಿಗೆ ಸಹಾಯ ಮತ್ತು ಮಾರ್ಗದರ್ಶನ ನೀಡಬೇಕು.

- ಬೋರ್ಡಿಂಗ್‌ನಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ಈ ಕೆಳಗಿನ ವಿವರಗಳನ್ನು ನಮೂದಿಸುವ ವ್ಯವಸ್ಥೆಯಿರಬೇಕು:

  (ಅ) ಮಗುವಿನ ಹೆಸರು, ಕೋಣೆಯ ನಂಬ್ರ, ತಂದೆಯ ಹೆಸರು, ಜನ್ಮ ದಿನಾಂಕ, ಮನೆಯ ಪೂರ್ಣ ವಿಳಾಸ, ದಾಖಲಾತಿಯ ದಿನಾಂಕ.

  (ಆ) ಪ್ರತಿಯೊಂದು ಮಗುವಿನ ಸಾಮಾನುಗಳ ಸಂಪೂರ್ಣ ವಿವರ ಪಟ್ಟಿ, ಅದರಲ್ಲಿ ಹೆಚ್ಚಳ, ಕಡಿಮೆ ಇತ್ಯಾದಿಗಳ ವಿವರವನ್ನು ಬರೆಯುತ್ತ ಇರಬೇಕು. ವಸ್ತ್ರ ಹಾಸಿಗೆ, ಮತ್ತಿತರ ಸಾಮಗ್ರಿಗಳಲ್ಲಿ ಮಗುವಿನ ಹೆಸರನ್ನು ಬರೆಯಬೇಕು. ಗುರುತಿಸಲು ಇದರಿಂದ ಸುಲಭವಾಗುತ್ತದೆ.

  (ಇ) ಲೆಕ್ಕಪತ್ರ ಮತ್ತು ಖರ್ಚಿನ ವಿವರಗಳ ದಾಖಲೆ.

- ನಿತ್ಯ ಮಕ್ಕಳ ಹಾಜರಿಯನ್ನು ಪಡೆಯಬೇಕು. ಅನುಮತಿಯಿಲ್ಲದೆ ಹಾಸ್ಟೆಲ್‌ನಿಂದ ಹೊರಹೋಗಲು ಬಿಡಬಾರದು ಮತ್ತು ಹೊರಗೆ ರಾತ್ರಿ ಕಳೆಯಲೂ ಅನುಮತಿಸಬಾರದು. ಮಕ್ಕಳು ಮಲಗಿದ ಮೇಲೂ ಒಮ್ಮೆ ಅವರ ಅವಲೋಕನ ನಡೆಸಬೇಕಾದುದು ಅಗತ್ಯ.

- ಮಕ್ಕಳ ಮಿತ್ರರು, ಬಂಧುಗಳು ಮತ್ತು ನಿಕಟವರ್ತಿಗಳು ಅಥವಾ ಇತರ ಅತಿಥಿಗಳು ಮತ್ತು ಸಂಬಂಧ ಪಡದವರನ್ನು ಮಕ್ಕಳೊಡನೆ ಬೋರ್ಡಿಂಗ್‌ನಲ್ಲಿ ತಂಗಲು ಅನುಮತಿಸಬಾರದು. ಬದಲಾಗಿ ಅವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕು. ಅನ್ಯಥಾ ವಿವಿಧ ರೀತಿಯ ಕ್ಷೋಭೆಗಳಿಗೆ ಅದು ಕಾರಣವಾದೀತು.

◆ ◆ ◆

ಅಧ್ಯಾಯ-35

ಪಾಠ ಮತ್ತು ಬೋಧನೆಯ ವಿಧಾನ

ಪತ್ಯದ ಯಶಸ್ಸು ಮೂರು ವಿಷಯಗಳನ್ನು ಅವಲಂಬಿಸಿದೆ.

1. ಅಧ್ಯಾಪಕನು ಶ್ರಮ ಪಟ್ಟು ಪಾಠ ತಯಾರಿಸುವುದು.
2. ತರಗತಿಯ ಮುಂದೆ ಅಚ್ಚುಕಟ್ಟಾಗಿ ಪಾಠವನ್ನು ಮಂಡಿಸುವುದು.
3. ವಿದ್ಯಾರ್ಥಿಗಳು ಗಮನಗೊಟ್ಟು ಪಾಠ ಕೇಳುವುದು.

ಪಾಠದ ತಯಾರಿ

ಕಲಿಸುವುದಕ್ಕೆ ಮುಂಚೆ ಪಾಠವನ್ನು ಚೆನ್ನಾಗಿ ಸಿದ್ಧಪಡಿಸಬೇಕು. ಸಿದ್ಧತೆಯ ಹೊರತು ಪಾಠ ಮಾಡುವುದು ಅಧ್ಯಾಪಕನ ಘನತೆಗೆ ವಿರುದ್ಧವಾಗಿದೆ ಮಾತ್ರವಲ್ಲ, ವಿದ್ಯೆಯ ಅವಮಾನವೂ ಆಗಿದೆ. ಇಂತಹ ತಪ್ಪನ್ನೆಸಗುವವರು ಪಾಠದ ಹಕ್ಕನ್ನೂ ತೀರಿಸುವುದಿಲ್ಲ ಮತ್ತು ಕೆಲವೊಮ್ಮೆ ಬೋಧನೆಯೇ ಅರ್ಥಹೀನವಾಗಿ ಬಿಡುತ್ತದೆ.

ಸಿದ್ಧತೆಯ ಮಹತ್ವ

ಸಿದ್ಧತೆಯ ಹೊರತು ಬೋಧನೆಯು ಎಂದಿಗೂ ಯಶಸ್ವಿಯಾಗಲಾರದು ಮತ್ತು ಪರಿಣಾಮಕಾರಿಯೂ ಆಗಲಾರದು. ಪಾಠವು ಸುಲಭವಿದ್ದಿರಲಿ ಅಥವಾ ಕಷ್ಟದ್ದಾಗಿರಲಿ, ಉನ್ನತದ್ದಾಗಿರಲಿ ಅಥವಾ ಕೆಳಮಟ್ಟದ್ದಾಗಿರಲಿ, ಸಿದ್ಧತೆಯು ಅತ್ಯಗತ್ಯವಾಗಿದೆ. ಏಕೆಂದರೆ,

- ಪಾಠವನ್ನು ತಯಾರಿಸುವುದರಿಂದ ಅಧ್ಯಾಪಕನಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ.
- ಅವನು ವಿದ್ಯಾರ್ಥಿಗಳ ಮುಂದೆ ತನ್ನ ಮಾತನ್ನು ದೃಢವಾಗಿ, ಆತ್ಮವಿಶ್ವಾಸ ಮತ್ತು ಕ್ರಮಬದ್ಧತೆಯೊಂದಿಗೆ ಇರಿಸಬಲ್ಲನು.
- ಬೋಧನೆಯ ಅತ್ಯುತ್ತಮ ವಿಧಾನವನ್ನು ಬಳಸುವನು. ಹಾಗಾಗಿ ಅದರಿಂದ ವಿದ್ಯಾರ್ಥಿಗಳಿಗೆ ಪರಿಪೂರ್ಣ ಪ್ರಯೋಜನ ಒದಗುತ್ತದೆ.
- ವಿದ್ಯಾರ್ಥಿಗಳನ್ನು ಚೆನ್ನಾಗಿ ಸಂತೃಪ್ತ ಪಡಿಸಬಲ್ಲನು.

ಕೆಲವೊಮ್ಮೆ ಅನುಭವಿ ಮತ್ತು ಹಿರಿಯ ಅಧ್ಯಾಪಕರು, ನಿರ್ದಿಷ್ಟ ಪಾಠಗಳನ್ನು ನಾವು ಈಗಾಗಲೇ ಕಲಿಸಿಯಾಗಿರುವುದರಿಂದ ಇದರಲ್ಲಿ ಸಿದ್ಧತೆ ನಡೆಸಬೇಕಾದ ಅಗತ್ಯವಿಲ್ಲವೆಂದು ಭಾವಿಸಿ ಯಾವುದೇ ಸಿದ್ಧತೆಯಿಲ್ಲದೆಯೇ ಕಲಿಸಲು ಮುಂದಾಗುತ್ತಾರೆ. ಆದರೆ ಅದು ಅವರ ಬಹುದೊಡ್ಡ ಪ್ರಮಾದವಾಗುತ್ತದೆ. ಅನುಭವವು ಯಶಸ್ವೀ ಬೋಧನೆಯಲ್ಲಿ ಸಹಾಯಕವಾಗುತ್ತದೆನ್ನುವುದು ಸರಿ. ಆದರೆ ಅದು ಸಿದ್ಧತೆಯಿಂದ ನಿರಪೇಕ್ಷನಾಗಲು ಖಂಡಿತ ಕಾರಣವಾಗಲಾರದು. ಏಕೆಂದರೆ ಪ್ರತಿವರ್ಷವೂ ತರಗತಿಗೆ ಹೊಸ ವಿದ್ಯಾರ್ಥಿಗಳು ಬರುತ್ತಾರೆ. ಅವರ ಬುದ್ಧಿಮಟ್ಟವು ಹಿಂದಿನ ವಿದ್ಯಾರ್ಥಿಗಳಿಗಿಂತ ಸಂಪೂರ್ಣ ಭಿನ್ನವಾಗಿರುತ್ತದೆ. ಹಾಗಾಗಿ ಕೆಲವೊಮ್ಮೆ ಪಾಠದ ಇಡೀ ಚೌಕಟ್ಟನ್ನೇ ಬದಲಿಸಬೇಕಾಗುತ್ತದೆ. ಹಿಂದಿನ ಬೋಧನಾ ವಿಧಾನವೂ ಕೆಲಸಕ್ಕೆ ಬಾರದು. ಪೀಠಿಕೆ ಮತ್ತು ಪ್ರಶ್ನೆಗಳನ್ನು ಹೊಸದಾಗಿ ಆಲೋಚಿಸಬೇಕಾಗಿ ಬರುತ್ತದೆ. ಅಷ್ಟೇ ಅಲ್ಲ, ಅಧ್ಯಾಪಕನಿಗೆ ಯಾವಾಗಲೂ ಬೋಧನೆಗೆ ಪೂರಕ ಸಾಮಗ್ರಿಗಳು ಸಿಗುತ್ತವೆ ಎನ್ನುವಂತೆಯೂ ಇಲ್ಲ, ಇನ್ನು ಪಾಠದ ಯಾವುದಾದರೂ ಭಾಗವು ಮರೆತು ಹೋಗಿರಬಹುದು. ಇಂತಹ ಸ್ಥಿತಿಯಲ್ಲಂತೂ ತರಗತಿಯ ಮುಂದೆ ಲಜ್ಜಿತನಾಗಬೇಕಾಗಿ ಬರುವುದು. ಆದ್ದರಿಂದ ಸಿದ್ಧತೆಯು ಅಧ್ಯಾಪಕನ ಮಟ್ಟಿಗೆ ತೀರಾ ಅಗತ್ಯವಾಗಿದೆ.

ಸಿದ್ಧತೆಯಲ್ಲಿ ಗಮನಿಸಬೇಕಾದ ಅಂಶಗಳು

- ಮೊತ್ತಮೊದಲು ಯಾವ ತರಗತಿಗೆ, ಯಾವ ಪೀರಿಯಡ್‌ನಲ್ಲಿ ಏನನ್ನು ಕಲಿಸಲಿಕ್ಕಿದೆ ಮತ್ತು ಎಷ್ಟು ಸಮಯದಲ್ಲಿ ಪಾಠವನ್ನು ಮುಗಿಸಬೇಕು ಎಂಬುದನ್ನು ನೋಡಬೇಕು. ಅಂತೆಯೇ ಯಾವ ಮಕ್ಕಳಿಗೆ ಕಲಿಸಲಿಕ್ಕಿದೆಯೋ ಅವರ ಪ್ರಾಯ, ಸಾಮರ್ಥ್ಯ ಮತ್ತು ಆಸಕ್ತಿಗಳೇನು ಹಾಗೂ ಈ ವಿಷಯದಲ್ಲಿ ಅವರು ಮೊದಲಿನಿಂದಲೇ ಏನೆಲ್ಲ ತಿಳಿದುಕೊಂಡಿದ್ದಾರೆ ಎಂಬುದನ್ನು ಅರಿಯಬೇಕಾದುದು ಅಗತ್ಯ. ನಂತರ ಕಲಿಸಲಿಕ್ಕಿರುವ ವಿಷಯದಲ್ಲಿ ಸ್ವಯಂ ತನಗೆಷ್ಟು ಗೊತ್ತಿದೆಯೆಂಬುದನ್ನು ಅರಿತುಕೊಂಡು, ಕೊರತೆಗಳಿದ್ದರೆ ಅದನ್ನು ಸರಿಪಡಿಸಬೇಕು.
- ಅಗತ್ಯದ ವಿಷಯಗಳನ್ನು ಒಟ್ಟುಗೂಡಿಸಿದ ಬಳಿಕ, ಅದನ್ನು ಎರಡ್ಮೂರು ವಿಭಾಗಗಳಾಗಿ ವಿಂಗಡಿಸಬೇಕು. ಪ್ರತಿ ವಿಭಾಗಕ್ಕೂ ಉಪಶೀರ್ಷಿಕೆಯನ್ನು ಮತ್ತು ಒಟ್ಟು ವಿಷಯಕ್ಕೆ ಶೀರ್ಷಿಕೆಯನ್ನು ನೀಡಬೇಕು. ಬಳಿಕ ಪ್ರತಿ ವಿಭಾಗವನ್ನು ಕಲಿಸುವ ವಿಧಾನದ ಬಗ್ಗೆ ಆಲೋಚಿಸಬೇಕು.
- ಪಾಠದಲ್ಲಿ ವಿದ್ಯಾರ್ಥಿಗಳ ಆಸಕ್ತಿಯನ್ನು ಕೆರಳಿಸಲಿಕ್ಕಾಗಿ, ಸೂಕ್ತ ಪೀಠಿಕೆಯನ್ನು ಆಲೋಚಿಸಬೇಕು. ಹಿಂದಿನ ತಿಳಿವಳಿಕೆಯನ್ನು ಅರಿಯಲು ಕೆಲವು ಪ್ರಶ್ನೆಗಳನ್ನು ಕೇಳಬೇಕು.

- ಪ್ರತಿ ಭಾಗದ ಬಳಿಕ ಅಥವಾ ಪಾಠದ ಬಳಿಕ ಕೊನೆಯಲ್ಲಿ ಕೇಳಬೇಕಾದ ಪ್ರಶ್ನೆಗಳನ್ನೂ ಸಿದ್ಧಪಡಿಸಬೇಕು.
- ವಿದ್ಯಾರ್ಥಿಗಳ ಕಷ್ಟ ಮತ್ತು ತೊಂದರೆಗಳನ್ನು ಮೊದಲೇ ಅಂದಾಜಿಸಿರಬೇಕು. ಅವುಗಳನ್ನು ದೂರ ಮಾಡುವ ವಿಧಾನಗಳನ್ನು ಆಲೋಚಿಸಬೇಕು.
- ಪಾಠವನ್ನು ಚೆನ್ನಾಗಿ ಮನವರಿಕೆ ಮಾಡಿಸಿ ಕೊಡಲಿಕ್ಕಾಗಿ ಅಗತ್ಯವಿರುವ ಶೈಕ್ಷಣಿಕ ಮತ್ತು ವಿವರಣಾ ಸಾಮಗ್ರಿ, ನಕ್ಷೆ, ಚಾರ್ಟ್ ಇತ್ಯಾದಿಗಳನ್ನು ಸಿದ್ಧಪಡಿಸಬೇಕು ಅಥವಾ ಗಳಿಸಿ ಕೊಳ್ಳಬೇಕು.
- ವಿದ್ಯಾರ್ಥಿಗಳಿಗೆ ಬರೆಸಲು ಅಥವಾ ಕರಿಹಲಗೆಯಲ್ಲಿ ಬರೆಯಲು ಪಾಠದ ಸಾರಾಂಶವನ್ನು ತಯಾರಿಸಿಟ್ಟಿರಬೇಕು.
- ಪಾಠಕ್ಕೆ ಸಂಬಂಧಿಸಿದ ಹೋಂ ವರ್ಕ್ ಅಥವಾ ಬೇರೇನಾದರೂ ಬರೆಯಲು ಕೊಡುವುದಿದ್ದರೆ ಅದನ್ನು ಮೊದಲೇ ಆಲೋಚಿಸಿರಬೇಕು.
- ವಿದ್ಯಾರ್ಥಿಗಳಿಗೆ ಪರಿಹರಿಸಲು ನೀಡುವ ಪ್ರಶ್ನೆಗಳಿಗೆ ಉತ್ತರವನ್ನು ಮೊದಲೇ ಕಂಡುಕೊಂಡಿರಬೇಕು. ವಿದ್ಯಾರ್ಥಿಗಳ ಮುಂದೆ ವಿಜ್ಞಾನದ ಯಾವುದಾದರೂ ಪ್ರಯೋಗವನ್ನು ಮಾಡಿ ತೋರಿಸಲಿಕ್ಕಿದ್ದರೆ, ಅದರಲ್ಲಿ ತಪ್ಪು ಸಂಭವಿಸದಿರಲಿಕ್ಕಾಗಿ, ಅದನ್ನು ಮೊದಲೇ ಸ್ವತಃ ಪ್ರಯೋಗ ಮಾಡಿ ನೋಡಬೇಕು.
- ನೂತನ ಅಧ್ಯಾಪಕರು ಸಂಕ್ಷಿಪ್ತವಾಗಿ ಪಾಠದ ಬಗ್ಗೆ ಲಿಖಿತ ಅನುಕ್ರಮಣಿಕೆಯನ್ನು ತಯಾರಿಸಿಡಬೇಕು. ಅನುಭವಿ ಅಧ್ಯಾಪಕರೂ ಅಗತ್ಯದ ವಿಷಯಗಳನ್ನು ನೋಟ್ ಮಾಡಿಡುವುದು ಉತ್ತಮ.

ಪಾಠದ ವಿಷಯ ಸೂಚಿ

- ಪಾಠದ ವಿಷಯ ಸೂಚಿಯು ಸಾಧ್ಯವಾದಷ್ಟರ ಮಟ್ಟಿಗೆ ಲಿಖಿತ ರೂಪದಲ್ಲಿರಬೇಕು ಮತ್ತು ಈ ಕೆಳಗಿನ ಶೀರ್ಷಿಕೆಗಳಡಿ ಅದರ ಮಾಹಿತಿಗಳು ನಮೂದಿಸಲ್ಪಟ್ಟಿರಬೇಕು. 1) ಬರೆದಿಡುವುದು. 2) ತರಗತಿ. 3) ಸರಾಸರಿ ಪ್ರಾಯ. 4) ಪೀರಿಯಡ್ ಮತ್ತು ಸಮಯ. 5) ವಿಷಯ. 6) ಶೀರ್ಷಿಕೆ ಮತ್ತು ಉಪಶೀರ್ಷಿಕೆ. 7) ಸಾಮಾನ್ಯ ಉದ್ದೇಶ. 8) ಸಂಪರ್ಕ. 9) ಅಗತ್ಯ ಸಾಮಗ್ರಿಗಳ ಪಟ್ಟಿ ಕ್ರಮಬದ್ಧವಾಗಿ. 10) ಹಿಂದಿನ ಅರ್ಹತೆ. 11) ಪೀಠಿಕೆ. 12) ಬೋಧನಾ ವಿಧಾನದೊಂದಿಗೆ ವಿಷಯವನ್ನು ನೋಡುವುದು. 13) ಅಭ್ಯಾಸ ಮತ್ತು ಪುನರಾವರ್ತನೆಗೆ ಪ್ರಶ್ನೆಗಳು. 14) ಕರಿಹಲಗೆಯಲ್ಲಿನ ಸಾರಾಂಶ. 15) ಕೆಲಸ ಕೊಡುವುದು.
- ಪ್ರತಿಯೊಂದು ಪಾಠದ ಹಿಂದೆ ಎರಡು ಉದ್ದೇಶಗಳಿರುತ್ತವೆ. 1) ಸಾರ್ವತ್ರಿಕ ಉದ್ದೇಶ ಮತ್ತು 2) ಖಾಸಗಿ ಉದ್ದೇಶ. ವಿಷಯ ಸೂಚಿಯಲ್ಲಿ ಇವೆರಡೂ ನಮೂದಿಸಲ್ಪಟ್ಟಿರಬೇಕು.

- ಹೊಸ ಪಾಠವು ಹಿಂದಿನ ಅನುಭವವನ್ನು ಆಧರಿಸಿಯೇ ಇರುತ್ತದೆ. ಆದ್ದರಿಂದ ಸಂಕ್ಷಿಪ್ತವಾಗಿ ಅದರ ಪ್ರಸ್ತಾಪವಾಗಬೇಕು. ಅಧ್ಯಾಪಕನು ಹೊಸ ಪಾಠವನ್ನು ಎಷ್ಟರ ಮಟ್ಟಿಗೆ ಅದರೊಂದಿಗೆ ಜೋಡಿಸಿಕೊಂಡಿದ್ದಾನೆ ಎಂಬುದು ಈ ಮೂಲಕ ಸ್ವಯಂ ಆತನಿಗೇ ತಿಳಿಯುತ್ತದೆ.
- ಪೀಠಿಕೆಯು ಸಂಕ್ಷಿಪ್ತ, ಆದರೆ ಪ್ರಬಲವಾಗಿರಬೇಕು ಮತ್ತು ಅದರಲ್ಲಿ ಹಿಂದಿನ ಮಾಹಿತಿಗಳನ್ನು ಅರಿಯಲು ಹಾಗೂ ಮುಂದಿನ ಪಾಠಕ್ಕೆ ಮಕ್ಕಳನ್ನು ಪ್ರೇರೇಪಿಸಲು ಕೆಲವು ಪ್ರಶ್ನೆಗಳಿರಬೇಕು.
- ಉಲ್ಲೇಖಿಸಲಿಕ್ಕಿರುವ ವಿಷಯವನ್ನು ಸಂಕ್ಷಿಪ್ತವಾಗಿ ಮತ್ತು ಕ್ರಮಬದ್ಧವಾಗಿ ನಮೂದಿಸಿರಬೇಕು. ಅದನ್ನು ಕಲಿಸುವ ವಿಧಾನವನ್ನೂ ಬರೆಯಬೇಕು.
- ಪ್ರತಿಯೊಂದು ಭಾಗದ ಕೊನೆಯಲ್ಲಿ ಕೇಳಬೇಕಾದ ಪ್ರಶ್ನೆಯನ್ನು ಅಗತ್ಯವಾಗಿ ಬರೆಯಬೇಕು.
- ಕೊನೆಯಲ್ಲಿ ಎರಡ್ಮೂರು ಅಭ್ಯಾಸ ಅಥವಾ ಪುನರಾವರ್ತನೆಯ ಪ್ರಶ್ನೆಗಳನ್ನಿರಿಸಬೇಕು. ಅವು ಇಡೀ ಪಾಠವನ್ನು ಆವರಿಸಿರಬೇಕು.
- ಪಾಠದ ಮಧ್ಯೆ ಕರಿಹಲಗೆಯಲ್ಲಿ ಬರೆಯಬೇಕಾದವುಗಳನ್ನು ಅಥವಾ ಚಿತ್ರಿಸಬೇಕಾದವುಗಳನ್ನು ಬರೆದಿಡಬೇಕು.
- ಕೊನೆಗೆ ಮನೆಯಲ್ಲಿ ಮಾಡಲು ಅಥವಾ ತರಗತಿಯಲ್ಲಿಯೇ ಪೂರ್ತಿಗೊಳಿಸಲು ನೀಡಬೇಕಾದ ಕೆಲಸವನ್ನು ನೋಟ್ ಮಾಡಿಡಬೇಕು.

ಪಾಠದ ಸಿದ್ಧತೆಯಲ್ಲಿ ಅಗತ್ಯವಿರುವ ಶರ್ತಗಳು

ಮೇಲಿನ ಕೆಲಸವು ಉತ್ತಮವಾಗಿ ನಡೆಯಬೇಕಾದರೆ-

- ಅಧ್ಯಾಪಕನು ತಾನು ಕಲಿಸಬೇಕಾಗಿರುವ ವಿಷಯದಲ್ಲಿ ಮೊದಲೇ ಪರಿಣತಿಯನ್ನು ಹೊಂದಿರಬೇಕು. ವಿದ್ಯಾರ್ಥಿಗಳೊಂದಿಗೆ ಅವನಿಗೆ ಗಾಢ ಸಂಬಂಧವಿರಬೇಕು. ಏಕೆಂದರೆ ಈ ಮೂಲಕ ಅವರ ಹಿಂದಿನ ಅರ್ಹತೆ, ಅವರ ಸ್ವಾಭಾವಿಕ ಸಾಮರ್ಥ್ಯ, ಅವರ ಮಾನಸಿಕ ಅವಸ್ಥೆ ಮತ್ತು ಅವರ ವೈಯಕ್ತಿಕ ವಿಶೇಷತೆಯನ್ನು ಚೆನ್ನಾಗಿ ತಿಳಿಯಲು ಸಾಧ್ಯವಾಗುತ್ತದೆ.
- ವಿವಿಧ ಬೋಧನಾ ವಿಧಾನಗಳ ಅರಿವು ಇರಬೇಕು.
- ಶಿಕ್ಷಣದ ಮೂಲಭೂತ ಉದ್ದೇಶ ಮತ್ತು ಪ್ರತಿಯೊಂದು ಪಾಠದ ಮೌಲ್ಯಗಳ ಪ್ರಜ್ಞೆ ಇರಬೇಕು.
- ಸೂಕ್ತ ಪ್ರಶ್ನೆಗಳನ್ನು ತಯಾರಿಸುವ ಜಾಣ್ಮೆಯಿರಬೇಕು.

- ವಿವರಣಾ ಮತ್ತು ಶೈಕ್ಷಣಿಕ ಸಾಮಗ್ರಿಗಳನ್ನು ತಯಾರಿಸುವ ಪ್ರತಿಭೆ ಅಥವಾ ಒದಗಿಸುವಷ್ಟು ಜಾಣತನವಿರಬೇಕು.
- ಪಾಠಗಳ ಸಿದ್ಧತೆಯ ಆಗತ್ಯ ಮತ್ತು ಪ್ರಯೋಜನಗಳ ಪ್ರಜ್ಞೆ ಇರಬೇಕು ಹಾಗೂ ಅದಕ್ಕಾಗಿ ಸಮಯ ಮೀಸಲಿರಿಸುವ ಚಿಂತೆಯೂ ಇರಬೇಕು.

ಪಾಠದ ವಿಧಗಳು

ಪಾಠವು ಸಾಮಾನ್ಯವಾಗಿ ಮೂರು ವಿಧಗಳಲ್ಲಿರುತ್ತದೆ:

1. ಜ್ಞಾನವರ್ಧಕ: ಇದರ ಉದ್ದೇಶ ಮಕ್ಕಳ ಜ್ಞಾನದಲ್ಲಿ ಹೆಚ್ಚಳವನ್ನುಂಟು ಮಾಡುವುದಾಗಿರುತ್ತದೆ. ಉದಾ: ಫಿಕ್ಹ್, ಸೀರತ್, ಇತಿಹಾಸ, ಭೂಗೋಳ, ವಿಜ್ಞಾನ ಇತ್ಯಾದಿ ಪಾಠಗಳು.

2. ಪ್ರಾಯೋಗಿಕ ಅಥವಾ ಪಾಂಡಿತ್ಯಪೂರ್ಣ: ಇದರ ಉದ್ದೇಶ ಯಾವುದಾದರೂ ಕಲೆಯಲ್ಲಿ ಪಾಂಡಿತ್ಯವನ್ನು ಬೆಳೆಸುವುದಾಗಿರುತ್ತದೆ. ಉದಾ: ಆರ್ಟ್, ಕ್ರಾಫ್ಟ್, ಹೊಲಿಗೆ, ಬರವಣಿಗೆ ಇತ್ಯಾದಿ.

3. ವಿಮರ್ಶಾತ್ಮಕ: ಇದರ ಉದ್ದೇಶ ಒಳಿತು-ಕೆಡುಕುಗಳ ವ್ಯತ್ಯಾಸವನ್ನು ಅರಿಯುವ ಸಾಮರ್ಥ್ಯ ಬೆಳೆಸುವುದು ಮತ್ತು ನಿರ್ಮಲ ಭಾವನೆಯನ್ನು ಉದ್ದೀಪಿಸುವುದಾಗಿದೆ. ಉದಾ: ಇಸ್ಲಾಮಿಯಾತ್, ಸಾಹಿತ್ಯ, ಕಿರಾಅತ್, ಕವನ ವಾಚನ ಇತ್ಯಾದಿ ಪಾಠಗಳು. ಈ ಪಾಠಗಳಲ್ಲೂ ಎರಡು ವಿಧಗಳಿವೆ.

1) ನೂತನ 2) ಅಭ್ಯಾಸ ಅಥವಾ ಪುನರಾವರ್ತನೆ

ನೂತನ ಪಾಠ: ಈ ಮೂಲಕ ಹೊಸ ವಿಷಯಗಳನ್ನು ಕಲಿಸಲಾಗುವುದು. ಉದಾ: ಗಣಿತ ಅಥವಾ ವ್ಯಾಕರಣದ ಸೂತ್ರಗಳು ಅಥವಾ ಹೊಸ ವಿಷಯಗಳನ್ನು ತಿಳಿಸಿಕೊಡುವುದು. ಉದಾ: ಇತಿಹಾಸ, ಭೂಗೋಳ, ವಿಜ್ಞಾನ ಇತ್ಯಾದಿಗಳ ಮುಖಾಂತರ ಹೊಸ ವಿಷಯಗಳು.

ಅಭ್ಯಾಸ ಅಥವಾ ಪುನರಾವರ್ತನೆಯ ಪಾಠ: ಇದರ ಉದ್ದೇಶವು ಈಗಾಗಲೇ ಕಲಿಸಿಕೊಟ್ಟ ಸೂತ್ರ, ವ್ಯಾಕರಣಗಳ ಅಭ್ಯಾಸ ಮಾಡಿಸುವುದು ಅಥವಾ ಹಿಂದಿನ ಪಾಠಗಳ ಪುನರಾವರ್ತನೆ ಮಾಡುವುದಾಗಿದೆ.

ಜ್ಞಾನವರ್ಧಕ ಪಾಠಗಳನ್ನು ಕಲಿಸುವ ವಿಧಾನ:

ಜ್ಞಾನವರ್ಧಕ ಪಾಠಗಳನ್ನು ಚೆನ್ನಾಗಿ ಮನವರಿಕೆ ಮಾಡಿಸಬೇಕಾದರೆ ಪ್ರತಿಯೊಂದು ಅಧ್ಯಾಯದಲ್ಲೂ ಈ ಕೆಳಗಿನ ಐದು ವಿಷಯಗಳು ಅತ್ಯವಶ್ಯಕವಾಗಿವೆ-

1) ಪೀಠಿಕೆ 2) ಪಾಠವನ್ನು ಒಪ್ಪಿಸುವುದು 3) ವಿವರಣೆ ಮತ್ತು ಹೋಲಿಕೆ

4) ಸಾಮಾನ್ಯೀಕರಿಸುವುದು ಅಥವಾ ಸಾಮಾನ್ಯ ನಿಯಮಗಳನ್ನು ಸ್ವೀಕರಿಸುವುದು

5) ಬಳಕೆ ಅಥವಾ ಅಭ್ಯಾಸ.

1. ಪೀಠಿಕೆ

ಪ್ರತಿಯೊಂದು ಪಾಠಕ್ಕೂ ಒಂದು ಪೀಠಿಕೆ ಇರಬೇಕಾದುದು ಅಗತ್ಯ. ಮಕ್ಕಳ ಮನಸ್ಸನ್ನು ಒಂದು ಹೊಸ ಅಧ್ಯಾಯಕ್ಕೆ ಸಿದ್ಧಗೊಳಿಸುವುದೇ ಇದರ ಉದ್ದೇಶವಾಗಿದೆ. ಪೀಠಿಕೆಯು ತೀರಾ ಸಂಕ್ಷಿಪ್ತ ಮತ್ತು ಪ್ರಭಾವ ಪೂರ್ಣವಾಗಿರಬೇಕು. ಏಕೆಂದರೆ ಹೆಚ್ಚು ಸಮಯ ವ್ಯಯವಾಗದೆಯೇ ಹೊಸ ವಿಷಯವನ್ನು ಅರಿಯುವ ಕುತೂಹಲ ಮಕ್ಕಳಲ್ಲಿ ಬೆಳೆದು ಬರಬೇಕು ಮತ್ತು ಅವರ ಮನಸ್ಸು ಹೊಸ ಅಧ್ಯಾಯಕ್ಕೆ ಸಂಪೂರ್ಣವಾಗಿ ಸಿದ್ಧಗೊಳ್ಳಬೇಕು. ವಿಷಯಕ್ಕೆ ಸಂಬಂಧಿಸಿ ಸಣ್ಣ ಮಟ್ಟಿನ ಚರ್ಚೆ, ಯಾವುದಾದರೂ ಕಿರುಗತೆ, ಚಿತ್ತಾಕರ್ಷಕ ಚಿತ್ರ ಅಥವಾ ಮಾದರಿ, ಹಿಂದಿನ ಮಾಹಿತಿಯನ್ನು ಪರಿಶೀಲಿಸಲು ಮತ್ತು ಹಿಂದಿನ ಪಾಠಗಳೊಂದಿಗೆ ಸಂಪರ್ಕ ಸಾಧಿಸಲು ಕೆಲವು ಸೂಕ್ತ ಪ್ರಶ್ನೆಗಳು ಉತ್ತಮ ಪೀಠಿಕೆಯಾಗಬಲ್ಲುವು.

ಪೀಠಿಕೆಯ ಪ್ರಶ್ನೆಗಳು, ಪ್ರತಿಯೋರ್ವ ಮಗುವೂ ಸುಲಭದಲ್ಲಿ ಉತ್ತರಿಸಬಹುದಾದಷ್ಟು ಸರಳವಾಗಿರಬೇಕು. ಪ್ರತಿಯೊಬ್ಬರೂ ಮುಕ್ತವಾಗಿ ಅಭಿಪ್ರಾಯ ವ್ಯಕ್ತ ಪಡಿಸಲಿಕ್ಕಾಗಿ ಆಹ್ಲಾದಕರ ವಾತಾವರಣದಲ್ಲಿ ಪ್ರಶ್ನೆಗಳನ್ನು ಕೇಳಬೇಕು. ಆಲೋಚನೆಗಳನ್ನು ನಿರಂತರವಾಗಿರಿಸಲು ಪ್ರಶ್ನೆಗಳು ಪರಸ್ಪರ ಪೂರಕವಾಗಿರಬೇಕು. ಪಾಠದ ಉದ್ದೇಶವು ಮಕ್ಕಳ ಮುಂದೆ ಸ್ಪಷ್ಟವಾಗುವಂತೆಯೂ ಅವರ ಮನಸ್ಸನ್ನು ಹೊಸ ವಿಷಯದ ಅಗತ್ಯವನ್ನು ಗ್ರಹಿಸಲು ಪ್ರೇರೇಪಿಸುವಂತೆಯೂ ಕೊನೆಯ ಪ್ರಶ್ನೆ ಇರಬೇಕು.

2. ಪಾಠವನ್ನು ಮಂಡಿಸುವುದು

ವಿದ್ಯಾರ್ಥಿಗಳನ್ನು ಹೊಸ ಪಾಠಕ್ಕೆ ಸಿದ್ಧಗೊಳಿಸಿದ ಬಳಿಕ ಮೂಲ ಪಾಠವನ್ನು ಕಲಿಸಬೇಕು. ಇಡೀ ಪಾಠವನ್ನು ಒಂದೇ ಬಾರಿಗೆ ಒಪ್ಪಿಸುವ ಬದಲು, ಎರಡ್ಮೂರು ಭಾಗಗಳಾಗಿ ವಿಂಗಡಿಸಿ ವಿವರಿಸಬೇಕು. ಒಂದೊಂದು ಭಾಗವನ್ನೂ ಕ್ರಮಬದ್ಧವಾಗಿ ತೆಗೆದುಕೊಳ್ಳಬೇಕು. ಪಾಠದ ಮಧ್ಯದಲ್ಲಿ ಅಥವಾ ಪ್ರತಿಭಾಗವು ಕೊನೆಗೊಂಡಾಗ ಪ್ರಶ್ನೆಗಳನ್ನು ಕೇಳಬೇಕು. ಪ್ರತಿಯೊಂದು ಭಾಗದ ಕೊನೆಯ ಪ್ರಶ್ನೆಯು ಮುಂದಿನ ಭಾಗಕ್ಕೆ ಮನಸ್ಸನ್ನು ಪ್ರೇರೇಪಿಸುವಂತಿರಬೇಕು. ಕರಿಹಲಗೆಯಲ್ಲಿ ಪಾಠದ ಸಾರಾಂಶವನ್ನು ನೋಟ್ ಮಾಡಬೇಕು. ಕೊನೆಯಲ್ಲಿ ಇಡೀ ಪಾಠದ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳುವ ಮೂಲಕ ಆ ಭಾಗಗಳನ್ನು ಪರಸ್ಪರ ಜೋಡಿಸಬೇಕು. ಮೊದಲು ಸುಲಭ ಮತ್ತು ಸರಳ ವಿಷಯಗಳನ್ನು ಕಲಿಸಿ, ಕ್ರಮೇಣ ಕ್ಲಿಷ್ಟಕರ ವಿಷಯಗಳೆಡೆಗೆ ಸಾಗಬೇಕು. ಈ ರೀತಿ ಇಡೀ ಪಾಠವು ಸುಲಭವಾಗಿ ಅರ್ಥವಾಗುತ್ತದೆ.

3. ವಿವರಣೆ ಮತ್ತು ಹೋಲಿಕೆ

ಪಾಠದ ಯಾವುದೇ ಭಾಗವನ್ನು ಕಲಿಸುವಾಗಲೂ ಅದನ್ನು ಸಂಪೂರ್ಣವಾಗಿ ಸ್ಪಷ್ಟಪಡಿಸಿದ ಬಳಿಕ ಮಕ್ಕಳ ಹಿಂದಿನ ಅನುಭವದೊಂದಿಗೆ ಸಂಬಂಧ ಕಲ್ಪಿಸಬೇಕು. ಹೊಸ ಮಾಹಿತಿಗಳಿಗೆ ಹೋಲಿಕೆಯಾಗುವ ಅಥವಾ ಅವುಗಳಿಗೆ ವಿರುದ್ಧವಿರುವ ವಿಷಯಗಳು ಮಕ್ಕಳಿಗೆ ಮೊದಲೇ ತಿಳಿದಿದ್ದರೆ, ಅವುಗಳೊಡನೆ ಹೋಲಿಸುತ್ತ ವಿವರಣೆ, ಉದಾಹರಣೆಗಳನ್ನು ನೀಡಬೇಕು. ಹೆಚ್ಚಿನ ವಿವರಣೆಗಳಿಗಾಗಿ ಚಿತ್ರ, ನಕ್ಷೆ, ಚಾರ್ಟ್ ಇತ್ಯಾದಿ ಬಳಸಬೇಕು ಅಥವಾ ಪ್ರಯೋಗ ಮಾಡಿ ತೋರಿಸಬೇಕು. ಈ ಪ್ರಕಾರ ಹೊಸ ವಿಷಯಗಳು ಚೆನ್ನಾಗಿ ಮನವರಿಕೆಯಾಗಬಲ್ಲುದು.

4. ಸಾಮಾನ್ಯೀಕರಿಸುವುದು

ಇಡೀ ಪಾಠವನ್ನು ಅಚ್ಚುಕಟ್ಟಾಗಿ ಕಲಿಸಿ, ಚೆನ್ನಾಗಿ ವಿವರಿಸಿಕೊಟ್ಟ ಬಳಿಕ, ಸೂಕ್ತ ಪ್ರಶ್ನೆಗಳ ಮುಖಾಂತರ ಸೂತ್ರ, ನಿಯಮ, ತತ್ವ ಅಥವಾ ಫಲಿತಾಂಶವನ್ನು ಪಡೆಯಬೇಕು. ಉದಾ: ಗಣಿತದ ಯಾವುದಾದರೂ ಸೂತ್ರ, ವಿಜ್ಞಾನದ ನಿಯಮ ಇತ್ಯಾದಿ. ಫಲಿತಾಂಶ ಪಡೆಯಲು ವಿದ್ಯಾರ್ಥಿಗಳಿಗೆ ಅಗತ್ಯಾನುಸಾರ ಸಹಕರಿಸಬೇಕು. ಒಂದು ವೇಳೆ ಅವರು ಸಂಪೂರ್ಣ ವಿಫಲರಾದಲ್ಲಿ ಪಾಠವನ್ನು ಪುನಃ ಕಲಿಸಬೇಕು. ಫಲಿತಾಂಶವನ್ನು ಕರಿಹಲಗೆಯಲ್ಲಿ ಬರೆದು ವಿದ್ಯಾರ್ಥಿಗಳೊಡನೆ ಅದನ್ನು ನೋಟ್ ಮಾಡಲು ಹೇಳಬೇಕು.

5. ಬಳಕೆ ಅಥವಾ ಅಭ್ಯಾಸ

ಮಕ್ಕಳಿಗೆ ತಾವು ಕಲಿತುದರ ಅವಲೋಕನ ನಡೆಸಲು, ಅದನ್ನು ಉಪಯೋಗಕ್ಕೆ ತರಲು ಮತ್ತು ಅದರ ಅಭ್ಯಾಸ ನಡೆಸಲು ಅವಕಾಶ ಒದಗಬೇಕು. ಅದಕ್ಕಾಗಿ ಪಾಠದ ಕೊನೆಯಲ್ಲಿ ಕೆಲವು ಮೌಖಿಕ ಪ್ರಶ್ನೆಗಳನ್ನು ಕೇಳಬೇಕು ಅಥವಾ ಯಾವುದಾದರೂ ಬರೆಯುವ ಮತ್ತು ಪ್ರಾಯೋಗಿಕ ಕೆಲಸ ನೀಡಬೇಕು. ಇದರಿಂದ, ಮಕ್ಕಳು ಏನೆಲ್ಲ ಕಲಿತರು ಮತ್ತು ಅಧ್ಯಾಪಕನು ಪಾಠದಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾದನು ಎಂಬುದು ತಿಳಿದು ಬರುತ್ತದೆ. ಅಲ್ಲದೆ ಅದನ್ನು ಉಪಯೋಗಕ್ಕೆ ತಂದ ಮೇಲೆ ಮಕ್ಕಳಿಗೆ ಚೆನ್ನಾಗಿ ನೆನಪಿನಲ್ಲಿ ಉಳಿಯುವುದು. ಉದಾ: ಗಣಿತದ ಯಾವುದಾದರೂ ಸೂತ್ರವನ್ನು ಕಲಿಸಿದ ಬಳಿಕ ಅಥವಾ ವಿಜ್ಞಾನದ ನಿಯಮವನ್ನು ಕಲಿಸಿದ ಬಳಿಕ ಅದರ ಬಗ್ಗೆ ಎರಡ್ಮೂರು ಪ್ರಶ್ನೆಗಳನ್ನು ಕೇಳಬೇಕು. ಅಂದರೆ ಆ ನಿಯಮ, ಸೂತ್ರದ ಮುಖಾಂತರ ಪರಿಹರಿಸಬಲ್ಲ ಸಮಸ್ಯೆಗಳನ್ನು ನೀಡಬೇಕು. ಮಕ್ಕಳು ಪರಿಹರಿಸಿದರೆ ಪಾಠ ಯಶಸ್ವಿಯಾಯಿತೆಂದರ್ಥ. ಉಪಯೋಗದಲ್ಲಿ ತರುವುದರಿಂದ ಅಥವಾ ಅಭ್ಯಾಸ ಮಾಡುವುದರಿಂದ ಸೂತ್ರ, ನಿಯಮಗಳು ಚೆನ್ನಾಗಿ ಸ್ಮರಣೆಯಲ್ಲಿ ಉಳಿಯುತ್ತವೆ.

ಈ ಐದು ವಿಷಯಗಳನ್ನು ಗಮನದಲ್ಲಿರಿಸಿ ಪಾಠ ಮಾಡಿದರೆ ಉಪಯುಕ್ತ ಮತ್ತು ಪ್ರಭಾವಪೂರ್ಣವೆನಿಸುವುದು. ಇನ್ನೊಮ್ಮೆ ಅವುಗಳ ಸಾರಾಂಶವನ್ನು ನೋಡೋಣ....

1) ಸೂಕ್ತ ಪೀಠಿಕೆಯ ಮೂಲಕ ವಿದ್ಯಾರ್ಥಿಗಳನ್ನು ಪಾಠಕ್ಕೆ ಸಿದ್ಧಗೊಳಿಸುವುದು.

2) ಆಸಕ್ತಿದಾಯಕ ವಿಧಾನದಲ್ಲಿ ಹೊಸ ವಿಷಯಗಳನ್ನು ತಿಳಿಸುವುದು.

3) ವಿವರಣೆಯ ಮೂಲಕ ಪಾಠವನ್ನು ಸ್ಪಷ್ಟಪಡಿಸುವುದು. ಅಲ್ಲದೆ ವಿದ್ಯಾರ್ಥಿಗಳ ಹಿಂದಿನ ಜ್ಞಾನ, ಅನುಭವ ಮತ್ತು ವೀಕ್ಷಣೆಗಳೊಡನೆ ಹೊಸ ವಿಷಯವನ್ನು ತುಲನೆ ಮಾಡುವ ಮೂಲಕ ಹಾಗೂ ದೈನಂದಿನ ಜೀವನದಿಂದ ಹೊಸ ವಿಷಯಕ್ಕೆ ಸಂಬಂಧ ಕಲ್ಪಿಸುವ ಮೂಲಕ ಪಾಠವನ್ನು ಅವರಿಗೆ ಅರ್ಥಪೂರ್ಣವಾಗಿಸುವುದು.

4) ಇಡೀ ಪಾಠದ ವಿಷಯವನ್ನು ಸಾರಾಂಶ, ಸಾಮಾನ್ಯ ನಿಯಮ, ಸೂತ್ರದ ಮುಖಾಂತರ ಮಂಡಿಸುವುದು.

5) ವಿದ್ಯಾರ್ಥಿಗಳಿಗೆ ಈ ನಿಯಮಗಳ ಅಭ್ಯಾಸ ಮಾಡಲು ಅಥವಾ ಆಚರಣೆ ತರಲು ಅವಕಾಶ ಕಲ್ಪಿಸಿ ಸಮಾಧಾನ ಪಡುವುದು.

ನಿಸ್ಸಂಶಯವಾಗಿಯೂ ಯುಕ್ತಿ ಮತ್ತು ಅನುಭವದ ಬೆಳಕಿನಲ್ಲಿ ಈ ಪಂಚಸೂತ್ರಗಳು ಬಹಳ ಪ್ರಯೋಜನಕಾರಿ ಮತ್ತು ಪರಿಣಾಮಕಾರಿಯಾಗಿವೆ. ಆದರೆ ಈ ವಿಧಾನದಲ್ಲಿ ವಿದ್ಯಾರ್ಥಿಗಳಿಗೆ ಸ್ವತಃ ಮಾಡಿ ಕಲಿಯುವ ಅವಕಾಶ ಬಹಳ ಕಡಿಮೆ ಸಿಗುತ್ತದೆ ಎಂಬ ಆರೋಪವೂ ಇದೆ. ಸಾಮಾನ್ಯವಾಗಿ ಇವುಗಳಲ್ಲಿ ವಿದ್ಯಾರ್ಥಿಗಳು ಜಡ ಕೇಳುಗರಾಗಿ ಬಿಡುತ್ತಾರೆ. ಆದ್ದರಿಂದ ಅವರು ಪಾಠದಲ್ಲಿ ಬಹಳ ಕಡಿಮೆಯೇ ಆಸಕ್ತಿ ವಹಿಸುತ್ತಾರೆನ್ನಲಾಗುತ್ತದೆ. ಒಂದು ವೇಳೆ ಕೆಲವು ಮಾಹಿತಿ ಪೂರ್ಣ ಪಾಠಗಳಲ್ಲಿ (ವಿಶೇಷತಃ ಗಣಿತ, ವಿಜ್ಞಾನ ಮತ್ತು ಭೂಗೋಳ ಇತ್ಯಾದಿಗಳಲ್ಲಿ) ಪ್ರಸ್ತುತ ವಿಧಾನದ ಬದಲು ಈ ಕೆಳಗಿನ ಕ್ರಮಗಳನ್ನು ಕೈಗೊಂಡರೆ ಹೆಚ್ಚು ಪರಿಣಾಮಕಾರಿ ಮತ್ತು ಪ್ರಯೋಜನಕಾರಿಯಾಗುತ್ತವೆ.

1) ಹೊಸ ಪಾಠಕ್ಕೆ ಸಂಬಂಧಿಸಿ, ವಿದ್ಯಾರ್ಥಿಗಳ ಮುಂದೆ ಯಾವುದಾದರೂ ಸಮಸ್ಯೆಯನ್ನು ಕೊಟ್ಟು ಪರಿಹರಿಸಲು ತಿಳಿಸಬೇಕು. ಅವರನ್ನು ಅದು ಚಿಂತೆಗೀಡು ಮಾಡುತ್ತದೆ ಮತ್ತು ಅವರು ಗೊಂದಲಕ್ಕೀಡಾಗುತ್ತಾರೆ. ಹೀಗೆ ಅವರು ಅದನ್ನು ಪರಿಹರಿಸಲು ತಮ್ಮ ಎಲ್ಲ ಶಕ್ತಿಯನ್ನು ಬಳಸುತ್ತಾರೆ.

2) ಆ ಸಮಸ್ಯೆಯ ಪರಿಹಾರಕ್ಕೆ ವಿದ್ಯಾರ್ಥಿಗಳಿಂದ ಸಲಹೆ ಕೇಳಬೇಕು.

3) ವಿವಿಧ ಸಲಹೆಗಳನ್ನು ಪರಿಶೀಲಿಸಬೇಕು ಮತ್ತು ಕೆಲವನ್ನು ಬಳಸಿ ಪರಿಹರಿಸಲು ಪ್ರಯತ್ನಿಸಬೇಕು.

4) ಸೂಕ್ತ ಮಾರ್ಗದರ್ಶನವೀಯುವ ಮೂಲಕ ಸರಿಯಾದ ಪರಿಹಾರಕ್ಕೆ ತಲುಪಬೇಕು.

5) ಆ ಪರಿಹಾರವನ್ನು ಖಾತರಿ ಪಡಿಸಲಿಕ್ಕಾಗಿ ಇನ್ನಷ್ಟು ಪ್ರಯೋಗ ಮಾಡಿಸಬೇಕು.

ಹೀಗೆ ಮಕ್ಕಳು ಸಂಪೂರ್ಣ ಕ್ರಿಯಾಶೀಲ ಆಸಕ್ತಿಯನ್ನು ತೋರಿಸುವರು ಮತ್ತು ಅವರ ಜ್ಞಾನವು ಇನ್ನಷ್ಟು ದೃಢಗೊಳ್ಳುವುದು. ಅಲ್ಲದೆ ಚಿಂತನೆ ಮತ್ತು ನಿರ್ಧಾರ ಶಕ್ತಿಯ ಬೆಳವಣಿಗೆಗೆ ಸಹಕಾರಿಯಾಗುವುದು. ಗಣಿತದಲ್ಲಿಯಂತೂ ಪ್ರತಿಯೊಂದು ಸವಾಲೂ ಪರಿಹಾರವನ್ನು ಬೇಡುತ್ತದೆ. ವಿಜ್ಞಾನ ಮತ್ತು ಭೂಗೋಳದಲ್ಲಿಯೂ ಈ ವಿಧಾನದಿಂದ ಹೆಚ್ಚು ಪ್ರಯೋಜನ ಪಡೆಯಬಹುದಾಗಿದೆ.

ಪ್ರಾಯೋಗಿಕ ಪಾಠಗಳನ್ನು ಕಲಿಸುವ ವಿಧಾನ

ಆರ್ಟ್, ಕ್ರಾಫ್ಟ್, ಕ್ಯಾಲಿಗ್ರಾಫಿ ಅಥವಾ ಇತರ ಪಾಠಗಳಲ್ಲಿ ಈ ಕೆಳಗಿನ ವಿಷಯಗಳು ಅಡಕವಾಗಿರಬೇಕು.

- ವಿದ್ಯಾರ್ಥಿಗಳಿಗೆ ಈ ಕಲೆಯನ್ನು ಕಲಿಯುವುದರ ನೈಜ ಅಗತ್ಯವನ್ನು ಮನದಟ್ಟು ಮಾಡಿಸಬೇಕು. ಕಲಿಯಲು ಇದು ಪ್ರಬಲ ಕಾರಣವಾಗುತ್ತದೆ.
- ಕಲಿಕಾ ವಿಷಯವು ಮಕ್ಕಳಿಗೆ ನಿರಾಶೆಯಾಗುವಷ್ಟು ಕ್ಲಿಷ್ಟಕರವಾಗಿರಲೂ ಬಾರದು ಮತ್ತು ಅವರು ಬೇಸತ್ತು ಹೋಗುವಷ್ಟು ದೀರ್ಘವೂ ಆಗಿರಬಾರದು.
- ಮಕ್ಕಳ ಕೆಲಸದಲ್ಲಿ, ಅವರು ಸಾಮಾನ್ಯವಾದ ಪರಿಶ್ರಮದಿಂದ ಗಳಿಸಬಲ್ಲಷ್ಟು ಆರೋಗ್ಯಪೂರ್ಣ ಮಾನದಂಡದ ನಿರೀಕ್ಷೆಯನ್ನಿರಿಸಬೇಕು. ನೆನಪಿರಲಿ, ಬಹಳ ದಿನಗಳ ನಿರಂತರ ಪರಿಶ್ರಮ ಹಾಗೂ ಅಭ್ಯಾಸದ ಬಳಿಕವೇ ಕುಶಲಕಲೆಗಳಲ್ಲಿ ಪ್ರಾವೀಣ್ಯತೆ ಹುಟ್ಟಿ ಬರುವುದು. ಮಕ್ಕಳಿಂದ ಇಂತಹ ಸೂಕ್ಷ್ಮ ಕೆಲಸವನ್ನು ನಿರೀಕ್ಷಿಸುವುದೇ ಅವಧಿಪೂರ್ಣವೆನಿಸುವುದು.

ಈ ಪಾಠಗಳ ಕ್ರಮವು ಈ ರೀತಿ ಇರಬೇಕು–

1. ಪೀಠಿಕೆ: ಮಕ್ಕಳ ಮುಂದೆ ಯಾವುದಾದರೂ ಒಂದು ಮಾದರಿಯನ್ನು (Model) ಇರಿಸಿ, ಅದರ ಪ್ರತಿಕೃತಿಯನ್ನು ತಯಾರಿಸಲು ಪ್ರೇರೇಪಿಸಬೇಕು. ಅವರು ಯಾವುದಾದರೊಂದು ವಿಷಯದಲ್ಲಿ ಪರಿಣತಿಯನ್ನು ಗಳಿಸುವ ಅಗತ್ಯವನ್ನು ಮನಗಾಣುವಂತಹ ಸ್ಥಿತಿಗೆ ತಂದು ನಿಲ್ಲಿಸಬೇಕು. ಉದಾ: ಈದ್‌ನ ಸಂದರ್ಭದಲ್ಲಿ ಬಂಧು ಮಿತ್ರರಿಗೆ ಕಳುಹಿಸಲು ಸ್ವತಃ ಈದ್ ಕಾರ್ಡ್ ಮತ್ತು ಲಕೋಟೆಯನ್ನು ಮಾಡುವ ಅಗತ್ಯ, ತನ್ನ ಪುಸ್ತಕಕ್ಕೆ ಸ್ವಯಂ ಹೊದಿಕೆ ತಯಾರಿಸುವ ಮತ್ತು ಅದನ್ನು ಕ್ರಮಬದ್ಧವಾಗಿರಿಸುವ ಅಗತ್ಯ ಇತ್ಯಾದಿ.

2. ಸಮರ್ಪಣೆ: ಮೊದಲೇ ತಯಾರಿಸಿಟ್ಟಿರುವ ಮಾದರಿಯನ್ನು ಉತ್ತಮವಾಗಿ ಪ್ರದರ್ಶಿಸಬೇಕು ಮತ್ತು ಅದರ ಒಂದೊಂದು ಅಂಗದ ಗಾತ್ರ, ರೂಪ ಇತ್ಯಾದಿಗಳನ್ನು ಚೆನ್ನಾಗಿ ಮನದಟ್ಟು ಮಾಡಿಸಿ ಕೊಡಬೇಕು ಅಥವಾ ಕರಿಹಲಗೆಯಲ್ಲಿ ಅದರ ಸ್ಪಷ್ಟವಾದ ರೇಖಾಚಿತ್ರವನ್ನು ಮಾಡಿ ತೋರಿಸಬೇಕು. ಅಗತ್ಯವಿದ್ದರೆ ಇಡೀ ಮಾದರಿಯನ್ನು ಮಕ್ಕಳ

ಮುಂದೆ ಮತ್ತೊಮ್ಮೆ ತಯಾರಿಸಿ ತೋರಿಸಬೇಕು. ಮಾದರಿಯನ್ನು ಹಿಡಿದು ಇಡೀ ತರಗತಿಯಲ್ಲಿ ಒಂದು ಸುತ್ತು ಬರಬೇಕು. ಹೀಗೆ ಪ್ರತಿಯೋರ್ವ ಮಗುವೂ ಅದನ್ನು ಹತ್ತಿರದಿಂದ ನೋಡುವಂತಾಗಬೇಕು.

3. ನೀತಿ-ನಿಯಮ: ಆ ಮಾದರಿಯನ್ನು ತಯಾರಿಸಲು ಸಹಾಯಕವಾಗಲು, ಸಂಕ್ಷಿಪ್ತವಾಗಿ ಅದರ ತಯಾರಿಯ ವಿಧಾನ, ನೀತಿ, ನಿಯಮಗಳನ್ನು ತಿಳಿ ಹೇಳಬೇಕು.

4. ಕ್ರಿಯೆ: ಅಗತ್ಯದ ವಸ್ತುಗಳನ್ನು ಒದಗಿಸಿದ ಬಳಿಕ ವಿದ್ಯಾರ್ಥಿಗಳನ್ನು ಕೆಲಸಕ್ಕೆ ಹಚ್ಚಬೇಕು. ಮಕ್ಕಳು ಕೆಲಸದಲ್ಲಿ ಮಗ್ನರಾಗಿರುವಾಗ, ಅಧ್ಯಾಪಕನು ತರಗತಿಯಲ್ಲಿ ನಿಧಾನವಾಗಿ ಸುತ್ತುತ್ತಾ, ಈ ಕೆಳಗಿನ ವಿಷಯಗಳನ್ನು ಅವಲೋಕಿಸುತ್ತ ಇರಬೇಕು-

- ವಿದ್ಯಾರ್ಥಿಗಳು ಕೂರುವ ರೀತಿ ಸರಿಯಿದೆಯೇ? ಕಣ್ಣು ಮತ್ತು ಕಾಪಿಯ ನಡುವಿನ ಅಂತರ ಸರಿಯಿದೆಯೇ? ಸೊಂಟ ನೇರವಾಗಿದೆಯೇ?
- ಲೇಖನಿ, ಬ್ರಶ್ ಮತ್ತಿತರ ಸಲಕರಣೆಗಳನ್ನು ಸರಿಯಾಗಿ ಹಿಡಿಯುತ್ತಾರೆಯೇ?
- ಸಾಮಗ್ರಿಗಳನ್ನು ಸರಿಯಾದ ರೀತಿಯಲ್ಲಿ ಬಳಸುತ್ತಿದ್ದಾರೆಯೇ?
- ಕೆಲಸವನ್ನು ಸ್ವಚ್ಛವಾಗಿ ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆಯೇ?
- ಯಾರ್‍ಯಾರಿಗೆ ವೈಯಕ್ತಿಕ ಸಹಕಾರದ ಅಗತ್ಯವಿದೆ?

ಮಕ್ಕಳಿಗೆ ಎಲ್ಲಿ ಮತ್ತು ಯಾವ ರೀತಿಯ ಸಹಾಯದ ಅಗತ್ಯವಿದೆಯೋ, ಅಲ್ಲೇ ಸಹಾಯ ಮಾಡಬೇಕು. ನೆನಪಿರಲಿ, ಮೇಲ್ನೋಟ ಮತ್ತು ವೈಯಕ್ತಿಕ ಸಹಾಯವು ಸರಿಯಾಗಿ ದೊರೆತಷ್ಟೂ ವಿದ್ಯಾರ್ಥಿಗಳಿಗೆ ಪರಿಣತಿ ಹೊಂದಲು ಸುಲಭವಾಗುತ್ತದೆ ಕೆಲಸವು ಸ್ವಚ್ಛವಾಗಿ ಮುಗಿಯುತ್ತದೆ ಮತ್ತು ಸಾಮಗ್ರಿಗಳೂ ವ್ಯರ್ಥವಾಗುವುದು ತಪ್ಪುತ್ತದೆ ಮೇಲ್ನೋಟದಲ್ಲಿ ಅಲಕ್ಷ್ಯವು ತರತರವಾದ ನಷ್ಟಗಳಿಗೆ ಹೇತುವಾಗುತ್ತದೆ..

5. ಕೆಲಸ ವಹಿಸಿಕೊಡುವುದು: ಕಲಿತ ವಿದ್ಯೆಯನ್ನು ಉಪಯೋಗಕ್ಕೆ ತರಲಿಕ್ಕಾ ಹೆಚ್ಚಿನ ಅಭ್ಯಾಸವಾಗುವಂತಹ ಆಸಕ್ತಿದಾಯಕ ಕೆಲಸವನ್ನು ವಹಿಸಿಕೊಡಬೇಕು. ಉದಾ ಡಿಸೈನ್ ಅಥವಾ ಸೀನರಿ ತಯಾರಿಸುವುದನ್ನು ಕಲಿಸಿದ ಬಳಿಕ ಯಾವುದಾದರೂ ವಾಕ್ಯವನ ಬರೆದು ತೂಗುಹಾಕಲು ಹೇಳುವುದು.

ವಿಮರ್ಶಾತ್ಮಕ ಪಾಠ ಕಲಿಸುವ ವಿಧಾನ

ಇದರಲ್ಲಿ ಸಾಹಿತ್ಯ, ನೀತಿಕತೆ, ಪ್ರಭಾವಪೂರ್ಣ ಪದ್ಯ ಮತ್ತು ಪಾಠಬೋಧ ಘಟನೆಗಳುಳ್ಳ ಪಠ್ಯಗಳಿರುತ್ತವೆ. ಇವು ಮಕ್ಕಳಿಗೆ ಭಾವನಾತ್ಮಕ ಮತ್ತು ನೈತಿಕ ತರಬೇ ನೀಡಲು, ಅವರಲ್ಲಿ ಸಚ್ಚಾರಿತ್ರ್ಯವನ್ನು ಬೆಳೆಸಲು, ಅವರ ಕಲ್ಪನೆ ಮತ್ತು ಪರಮೋದ್ದೇಶವನ ಉನ್ನತ ಗಳಿಸಲು ಸಹಾಯಕವಾಗುತ್ತವೆ. ಇಂತಹ ಪಠ್ಯಗಳನ್ನು ಯಶಸ್ವಿಯಾಗಿ ಕಲಿಸಲ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ.

- ಅಧ್ಯಾಪಕನು ಸ್ವಯಂ ದಯಾಳು, ಸೂಕ್ಷ್ಮಗ್ರಾಹಿ ಮತ್ತು ಒಳಿತನ್ನು ಬಯಸುವವನಾಗಿರಬೇಕು.
- ಒಳಿತು-ಕೆಡುಕುಗಳ ವ್ಯತ್ಯಾಸವನ್ನು ಅರಿಯುವವನಾಗಿರಬೇಕು.
- ಇತರರನ್ನು ಪ್ರಭಾವಿತಗೊಳಿಸುವ ಸಾಮರ್ಥ್ಯ ಹೊಂದಿರಬೇಕು.
- ಮಕ್ಕಳ ಪ್ರಾಯ, ಆಸಕ್ತಿ ಮತ್ತು ಮಾನದಂಡಗಳ ಆಧಾರದಲ್ಲಿ ಸಾಮಗ್ರಿಗಳನ್ನು ಒದಗಿಸಬಲ್ಲವನಾಗಿರಬೇಕು.

ಈ ರೀತಿಯ ಪಾಠಗಳನ್ನು ಕಲಿಸಲು ಇಲ್ಲಿ ನೀಡಲಾಗಿರುವ ಪಂಚ ಸೂತ್ರಗಳನ್ನು ಅಳವಡಿಸಬೇಕಾಗುತ್ತದೆ.

1. ಉತ್ತಮ ಪರಿಸರ: ಸೂಕ್ತ ಪೀಠಿಕೆಯ ಮುಖಾಂತರ ಪಾಠಕ್ಕೆ ಉತ್ತಮ ಪರಿಸರವನ್ನು ತಯಾರುಗೊಳಿಸಬೇಕು. ಪರಿಸರವು ಉತ್ತಮ ಹಾಗೂ ಪ್ರಶಾಂತವಾಗಿದ್ದಷ್ಟೂ ಮತ್ತು ಮಕ್ಕಳು ಗಮನ ಚದುರುವುದರಿಂದ ಸುರಕ್ಷಿತರಾದಷ್ಟೂ ಇಂತಹ ಪಾಠಗಳಿಂದ ಪ್ರಯೋಜನ ಪಡೆಯುತ್ತಾರೆ.

2. ವಿಷಯ ಮಂಡನೆ: ಪಾಠವು ಬಹಳ ದೊಡ್ಡದಿದ್ದರೆ ಎರಡ್ಮೂರು ಭಾಗಗಳಾಗಿ ಅಥವಾ ಇಡೀ ಪಾಠವನ್ನು ಮಂಡಿಸಿ, ವಿದ್ಯಾರ್ಥಿಗಳಲ್ಲಿ ಉದ್ದೇಶಿತ ಅವಸ್ಥೆಯುಂಟಾಗುವಂತೆ ಪ್ರಯತ್ನಿಸಬೇಕು.

3. ಹೋಲಿಕೆ ಮತ್ತು ವಿವರಣೆಗಳ ಮುಖಾಂತರ ಪಾಠವನ್ನು ಅರ್ಥಮಾಡಿ ಕೊಡುವುದು.

4. ಪ್ರಶ್ನೆಗಳನ್ನು ನೀಡಿ ವಿದ್ಯಾರ್ಥಿಗಳಿಗೆ ಸ್ವಯಂ ಕಲಿಯಲು ಮತ್ತು ಚಿಂತಿಸಲು ಅವಕಾಶ ಕಲ್ಪಿಸಬೇಕು.

5. ಸೂಕ್ತ ಪ್ರಶ್ನೆಗಳ ಮೂಲಕ ಚಿಂತನೆ, ಭಾವನೆಯನ್ನು ಪ್ರಕಟಿಸಲು ಹಾಗೂ ವಿಮರ್ಶೆ, ಪುನರಾವಲೋಕನ ಮಾಡಿಸಿ ಸರಿಯಾದ ಫಲಿತಾಂಶಕ್ಕೆ ತಲುಪಲು ಸಹಾಯ ಮಾಡಬೇಕು.

ಪುನರಾವರ್ತನೆ ಅಥವಾ ಅಭ್ಯಾಸದ ಪಾಠಗಳನ್ನು ಕಲಿಸುವ ವಿಧಾನ

ಇಂತಹ ಪಾಠಗಳಲ್ಲಿ ಕೇವಲ ಮೂರು ಕ್ರಮಗಳಿರುತ್ತವೆ.

1. ಪೀಠಿಕೆ: ಕಲಿಸಲಾದ ಸೂತ್ರ ಮತ್ತು ನಿಯಮಗಳಿಗೆ ಸಂಬಂಧಿಸಿ, ಮಕ್ಕಳು ಮೌಖಿಕವಾಗಿಯೇ ಉತ್ತರ ನೀಡಬಲ್ಲಂತಹ ಎರಡ್ಮೂರು ಪ್ರಶ್ನೆಗಳನ್ನು ಕೇಳಬೇಕು.

2. ಅಭ್ಯಾಸ: ಪುನರಾವರ್ತನೆ ಮತ್ತು ಅಭ್ಯಾಸಕ್ಕೆ, ಈಗಾಗಲೇ ಕಲಿಸಲಾಗಿರುವ ಸೂತ್ರಗಳಿಂದಲೇ ಉತ್ತರಿಸಬಲ್ಲಂತಹ ಪ್ರಶ್ನೆಗಳನ್ನು ಕೇಳಬೇಕು. ಆದರೆ ಅವುಗಳನ್ನು ಪರಿಹರಿಸಲು ಚಿಂತನೆ ಮತ್ತು ಪರಿಶ್ರಮವೂ ಅಗತ್ಯವಿರಬೇಕು. ಮಕ್ಕಳು ಪ್ರಶ್ನೆಗಳಿಗೆ ಉತ್ತರ

ಹುಡುಕುತ್ತಿರುವಾಗ ಅಧ್ಯಾಪಕನು ತರಗತಿಯಲ್ಲಿ ಸುತ್ತಾಡುತ್ತ ಮಕ್ಕಳ ಮೇಲ್ನೋಟ ವಹಿಸಿಕೊಳ್ಳಬೇಕು ಮತ್ತು ಅಗತ್ಯದ ಸಹಾಯ-ಸಹಕಾರವನ್ನೂ ನೀಡುತ್ತಿರಬೇಕು. ದುರ್ಬಲ ವಿದ್ಯಾರ್ಥಿಗಳ ಬಗ್ಗೆ ವಿಶೇಷ ಗಮನ ಹರಿಸಬೇಕು. ಬುದ್ಧಿವಂತ ಮಕ್ಕಳು ಬೇಗನೇ ಉತ್ತರ ಕಂಡುಕೊಂಡರೆ ಅವರಿಗೆ ಇನ್ನಷ್ಟು ಕೆಲಸ ನೀಡಬೇಕು. ಏಕೆಂದರೆ ಅವರು ನಿಬಿಡರಾಗಿದ್ದರೆ ಇತರರ ಕೆಲಸಕ್ಕೆ ತೊಂದರೆಯಾಗದು. ಒಂದು ವೇಳೆ ಹೆಚ್ಚು ಮಕ್ಕಳಿಗೆ ಉತ್ತರ ಹೊಳೆಯದ ಹೋದರೆ, ಅಧ್ಯಾಪಕನೇ ಕರಿಹಲಗೆಯಲ್ಲಿ ಸ್ವತಃ ಉತ್ತರ ಬರೆಯಬೇಕು ಅಥವಾ ಸರಿ ಉತ್ತರವನ್ನು ಕಂಡುಕೊಂಡ ಮಕ್ಕಳಿಂದ ಬರೆಸಿ ಅದನ್ನು ಬಾಯಿಪಾಠ ಮಾಡಿಸಬೇಕು.

3. ವಹಿಸಿ ಕೊಡುವುದು: ಕೊನೆಯಲ್ಲಿ ಕಲಿತ ಸೂತ್ರ ಮತ್ತು ನಿಯಮಕ್ಕೆ ಅನುಸಾರ ಮಕ್ಕಳಿಗೆ ಸಣ್ಣ ಮಟ್ಟಿನ ಪರಿಶ್ರಮದಿಂದ ಸ್ವಯಂ ಪರಿಹರಿಸಬಹುದಾದ ಸಮಸ್ಯೆಗಳನ್ನು ನೀಡಬೇಕು. ಈ ಕೆಲಸವನ್ನು ತರಗತಿಯಲ್ಲಿಯೂ ಮಾಡಿಸಬಹುದಾಗಿದೆ ಮತ್ತು ಮನೆಗೆಲಸವಾಗಿಯೂ ನೀಡಬಹುದಾಗಿದೆ.

◆ ◆ ◆

ಅಧ್ಯಾಯ-36

ಪ್ರಮುಖ ಪಠ್ಯಗಳ ಬೋಧನಾ ವಿಧಾನ

ಬೋಧನೆ ಮತ್ತು ಬೋಧನಾ ವಿಧಾನದ ಬಗ್ಗೆ ತಾತ್ವಿಕ ಚರ್ಚೆಯ ಬಳಿಕ, ಇದೀಗ ಪ್ರಮುಖ ಪಠ್ಯಗಳ ಬೋಧನಾ ವಿಧಾನದ ಬಗ್ಗೆ ಸಂಕ್ಷಿಪ್ತವಾಗಿ ಕೆಲವು ಅಗತ್ಯದ ಮಾಹಿತಿಗಳನ್ನು ನೀಡುವುದು ಉಚಿತವೆನಿಸುತ್ತದೆ.

ಇಸ್ಲಾಮಿಯಾತ್

ಇದು ಇಸ್ಲಾಮೀ ಶಿಕ್ಷಣ ವ್ಯವಸ್ಥೆಯ ಜೀವಾಳವಾಗಿದೆ. ಎಲ್ಲ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಮಟ್ಟಿಗೆ ಚಾಲಕ ಶಕ್ತಿಯಾಗಿದೆ. ಆದ್ದರಿಂದ ಇಡೀ ಸಂಸ್ಥೆಯು ಸಮಗ್ರವಾಗಿ ಮತ್ತು ಪ್ರತಿಯೋರ್ವ ಅಧ್ಯಾಪಕನು ಸ್ವಂತ ನೆಲೆಯಲ್ಲಿ ಸಕಲ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಈ ಪಾಠಕ್ಕೆ ಕೇಂದ್ರೀಯ ಸ್ಥಾನಮಾನ ನೀಡಬೇಕಾಗಿದೆ. ಅಂತೆಯೇ ಸಂಸ್ಥೆಯು ತನ್ನ ನಿತ್ಯದ ಚಟುವಟಿಕೆಗಳಲ್ಲಿ ಮತ್ತು ಅಧ್ಯಾಪಕರು ತಮ್ಮ ಮಾತು-ಕೃತಿ ಹಾಗೂ ಚಾರಿತ್ರ್ಯಗಳಲ್ಲಿ ಅದರ ನೈಜ ಸಾಕ್ಷಿಗಳಾಗಬೇಕಾಗಿದೆ. ಶಾಲೆ, ಹಾಸ್ಟೆಲು ಮತ್ತು ಹತ್ತಿರದ ಪರಿಸರದಲ್ಲಿ ಇಸ್ಲಾಮೀ ಮೌಲ್ಯಗಳಿಗೆ ಸ್ಥಿರತೆ ಹಾಗೂ ಔನ್ನತ್ಯ ದೊರೆಯುವಂತಹ, ವಿದ್ಯಾರ್ಥಿಗಳಿಗೆ ಅರಿತೋ ಅರಿಯದೆಯೋ ಅನುಸರಿಸಲು ಉತ್ತಮ ಮಾದರಿ ದೊರೆಯುವಂತಹ ವಾತಾವರಣವನ್ನುಂಟು ಮಾಡಲು ಪ್ರಯತ್ನಿಸಬೇಕು. ಉತ್ತಮ ಅಭ್ಯಾಸಗಳನ್ನು ಬೆಳೆಸುವ ಮತ್ತು ಅಪ್ರಿಯ ಗುಣಗಳನ್ನು ತೊರೆಯುವ ವ್ಯವಸ್ಥೆ ಮತ್ತು ಪ್ರೇರಣೆ ಮಕ್ಕಳಿಗೆ ಒದಗಬೇಕು. ಅಂತೆಯೇ ಪರಿಸರದಲ್ಲಿ ಒಳಿತುಗಳನ್ನು ಹರಡುವ ಮತ್ತು ಕೆಡುಕಿನಿಂದ ದೂರವುಳಿಯುವ ಚಿಂತೆ ಬೆಳೆಸಬೇಕು.

ಆರಂಭದ ತರಗತಿಗಳಲ್ಲಿ ಇಸ್ಲಾಮಿಯಾತ್ ಈ ಕೆಳಗಿನ ಪಠ್ಯ ಮತ್ತು ಚಟುವಟಿಕೆಗಳನ್ನು ಹೊಂದಿರಬೇಕು.

1. ಕುರ್‌ಆನ್ ಪಠಣ-ಸರಿಯಾದ ಉಚ್ಚಾರದೊಂದಿಗೆ ಇಡೀ ಪವಿತ್ರ ಕುರ್‌ಆನಿನ ಪಠಣ. ಆಯ್ದ ಅಧ್ಯಾಯ ಮತ್ತು ರುಕೂಅ್‌ಗಳ ಕಂಠಪಾಠ.
2. ಸಂಕ್ಷಿಪ್ತವಾಗಿ ಪ್ರವಾದಿಚರಿತ್ರೆ; ಪೂರ್ವ ಪ್ರವಾದಿಗಳು, ಸಹಾಬಿಗಳು, ಸಮುದಾಯ

ಸುಧಾರಕರು, ನೇತಾರರ ಪ್ರಮುಖ ಘಟನೆಗಳು; ನೀತಿ ಕತೆ, ವಿಶ್ವಾಸಾಚಾರ ಮತ್ತು ಆರಾಧನೆಗಳಿಗೆ ಸಂಬಂಧಿಸಿ ಅಗತ್ಯದ ಬೋಧನೆ.

3. ನೈತಿಕ ಮತ್ತು ಸಾಮಾಜಿಕ ತರಬೇತಿ.

4. ವುಝೂ, ನಮಾಝ್, ಉಪವಾಸ ಇತ್ಯಾದಿಗಳ ಪ್ರಾಯೋಗಿಕ ತರಬೇತಿ.

ಪ್ರಸ್ತುತ ಶಿಕ್ಷಣದಲ್ಲಿ ಮಕ್ಕಳ ಮಾತು-ಕೃತಿ, ವಿದ್ಯೆ-ಕರ್ಮ ಮತ್ತು ವಿಶ್ವಾಸ-ಚಿಂತನೆಗಳು ಇಸ್ಲಾಮೀ ಶಿಕ್ಷಣದಂತಿರಬೇಕೆಂಬುದೇ ಪರಮೋದ್ದೇಶವಾಗಿರಬೇಕು. ಅಲ್ಲಾಹನ ಸಂಪ್ರೀತಿ ಗಳಿಸುವ ಮತ್ತು ಅವನ ಇಚ್ಛೆಯಂತೆ ವೈಯಕ್ತಿಕ, ಕೌಟುಂಬಿಕ, ಸಾಮೂಹಿಕ ಜೀವನವನ್ನು ನಡೆಸುವ ಪ್ರವೃತ್ತಿ ಬೆಳೆಯಬೇಕು. ಅಂತೆಯೇ ಈ ನಿಟ್ಟಿನಲ್ಲಿ ಹೊಣೆಗಾರಿಕೆಗಳನ್ನು ನಿಭಾಯಿಸುವ ಪ್ರಾಯೋಗಿಕ ತರಬೇತಿ ದೊರೆಯಬೇಕು. ಗಳಿಸಿದ ವಿದ್ಯೆಯಂತೆ ಸ್ವಯಂ ಪ್ರವರ್ತಿಸುವ ಮತ್ತು ಅದನ್ನು ಇತರರಿಗೂ ತಲುಪಿಸುವ ಕಾರ್ಯ ನಡೆಯಬೇಕು.

ಬೋಧನಾ ವಿಧಾನಕ್ಕೆ ಸಂಬಂಧಿಸಿ ಕೆಲವು ಮಾರ್ಗದರ್ಶನಗಳು

1. ಸಾಮಾನ್ಯ ಕುರ್‌ಆನಿನ ಕಾಯಿದಗಳಿಂದ ಪ್ರಾರಂಭಿಸಬಾರದು. ಇವು ಮಕ್ಕಳ ಮಟ್ಟಿಗೆ ತೀರಾ ಶುಷ್ಕವಾಗಿ ಪರಿಣಮಿಸುತ್ತವೆ. ಅಕ್ಷರಮಾಲೆಯ ಪರಿಚಯ, ಅಕ್ಷರ ಜೋಡಣೆ, ಪದಗಳ ಜೋಡಣೆ ಮತ್ತು ಅರಬಿ ಲಿಪಿಯಲ್ಲಿ ಬರೆಯಲಾಗಿರುವ ಸುಲಭ ಭಾಷೆಯನ್ನು ಕಲಿಸುವ ಆಧುನಿಕ ವಿಧಾನವನ್ನು ಅನುಸರಿಸಬೇಕು. ಅರ್ಥ, ವಿವರಣೆಗಳು ಮಾತೃಭಾಷೆಯಲ್ಲಿರಬೇಕು. ಮಕ್ಕಳಿಗೆ ಇದರಿಂದ ಗ್ರಹಿಸಲು ಸುಲಭವಾಗುತ್ತದೆ.

2. ಅಕ್ಷರಮಾಲೆಯ ಚಾರ್ಟ್, ಮುನ್ನಿ ಕಿತಾಬ್, ಕಾಇದ ನಸ್ಖ್ (ಮಕ್ತಬಾ ಇಸ್ಲಾಮೀ-ದೆಹಲಿ) ಇತ್ಯಾದಿಗಳಿಂದ ಪಾಠ ಆರಂಭಿಸಬೇಕು. ಅವುಗಳಲ್ಲಿ ನೀಡಲಾಗಿರುವ ಮಾರ್ಗದರ್ಶನಗಳನ್ನು ಅನುಸರಿಸಬೇಕು. ಕರಿಹಲಗೆಯನ್ನು ಬಳಸಿದರಂತೂ ಮಕ್ಕಳು ಸುಲಭದಲ್ಲಿ ಉರ್ದುವನ್ನೂ ಕಲಿಯಬಲ್ಲರು ಮತ್ತು ಆಸಕ್ತಿಯಿಂದ ಅರಬಿ ಪದಗಳನ್ನೂ ಅರಿಯಬಲ್ಲರು. ಹೀಗಾಗಿ ಆರಂಭದಲ್ಲಿ ಉರ್ದುವಿಗೆ ಮತ್ತು ಅರಬಿಗೆ ಪ್ರತ್ಯಪ್ರತ್ಯೇಕ ಪುಸ್ತಕಗಳ ಹೊರೆ ಇರಲಾರದು.

3. ಅಕ್ಷರ ಮತ್ತು ಪದಗಳ ಉಚ್ಚಾರದಲ್ಲಿ ಕ್ರಮಬದ್ಧತೆಯನ್ನು ಆರಂಭದಲ್ಲಿಯೇ ಪರಿಗಣಿಸಬೇಕು.

4. ಎರಡನೆಯ ವರ್ಷ ಯಸ್ಸರ್‌ನಲ್ ಕುರ್‌ಆನ್ ಅಥವಾ ಅಂತಹ ಇತರ ಆಸಕ್ತಿದಾಯಕ ಪಠ್ಯಪುಸ್ತಕಗಳ ಸಹಾಯದಿಂದ ನಿರರ್ಗಳವಾಗಿ ಕುರ್‌ಆನ್ ಪಠಿಸಲು ಅಗತ್ಯವಿರುವ ಪ್ರಮುಖ ಸೂತ್ರಗಳನ್ನು ಕರಿಹಲಗೆಯ ಮುಖಾಂತರ ಕಲಿಸಬೇಕು. ಎಲ್ಲ ಸೂತ್ರಗಳನ್ನೂ ಇದೇ ರೀತಿ ಕಲಿಸಬೇಕೆಂದೇನಿಲ್ಲ. 'ಅಮ್ಮ ಜುಝ್'ನಿಂದ ಪ್ರಾರಂಭಿಸಿ,

ಕಲಿಸುವುದರ ಮಧ್ಯೆ ನಿರ್ದಿಷ್ಟ ನಿಯಮ, ಲಿಪಿ ಮತ್ತು ಸೂಕ್ತ ನಿಲುಗಡೆ ಇತ್ಯಾದಿಗಳನ್ನು ಅಗತ್ಯ ಮತ್ತು ಸಂದರ್ಭಾನುಸಾರ ತಿಳಿಸುತ್ತ ಇರಬೇಕು.

5. ಅಧ್ಯಾಪಕನು ಸರಿಯಾದ ಉಚ್ಚಾರದೊಂದಿಗೆ ಸುಶ್ರಾವ್ಯವಾಗಿ ಪಠಿಸುವುದಕ್ಕೆ ಸ್ವತಃ ಮಾದರಿಯಾಗಬೇಕು. ಮಕ್ಕಳಿಂದಲೂ ವೈಯಕ್ತಿಕ ಮತ್ತು ಸಾಮೂಹಿಕ ರೂಪದಲ್ಲಿ ಓದಿಸಬೇಕು. ಕಾ-ಗುಣಿತಕ್ಕೆ ಹೆಚ್ಚು ಒತ್ತು ಕೊಟ್ಟರೆ ನಿರಂತರತೆಗೆ ಭಂಗವಾಗುತ್ತದೆ. ಆದ್ದರಿಂದ ಮಕ್ಕಳು ಪಠಣದಲ್ಲಿ ತಪ್ಪೆಸಗಿದಾಗಷ್ಟೇ ತಡೆದು ಕಾ-ಗುಣಿತವನ್ನೂ ಸರಿಪಡಿಸಬೇಕು.

6. ಪವಿತ್ರ ಕುರ್‌ಆನಿನ ಘನತೆ-ಗೌರವದ ಬಗ್ಗೆಯೂ ಆರಂಭದಿಂದಲೇ ತಿಳಿಹೇಳುತ್ತ ಇರಬೇಕು. ಸ್ವತಃ ಕೂಡಾ ಅನುಸರಣಾರ್ಹ ಮಾದರಿಯಾಗಬೇಕು.

7. ಕುರ್‌ಆನ್ ಕಲಿಸುವ ವೇಳೆ ತರಗತಿಯ ವಾತಾವರಣವನ್ನು ಆಹ್ಲಾದಕರವಾಗಿರಿಸಬೇಕು. ಪ್ರೀತಿ-ಕರುಣೆಯನ್ನು ಪ್ರದರ್ಶಿಸಬೇಕು. ಈ ಗ್ರಂಥದ ಜತೆ ಆಹ್ಲಾದಕರ ಭಾವನೆಯಿರಬೇಕಾದರೆ ಕಠೋರತೆ, ಗದರಿಕೆ ಇತ್ಯಾದಿಗಳಿಂದ ಸಾಧ್ಯಂತ ದೂರವಿರಬೇಕು.

8. ಧಾರ್ಮಿಕ ಜ್ಞಾನದ ವಿಷಯದಲ್ಲಿ ಹಂತಹಂತವಾಗಿ ಅಲ್ಲಾಹನ ಗುಣವಿಶೇಷಗಳ ಸ್ಪಷ್ಟ ಕಲ್ಪನೆಯನ್ನು ಮನವರಿಕೆ ಮಾಡಿಸುತ್ತ ಇರಬೇಕು. ಅಲ್ಲಾಹನ ಅನುಗ್ರಹಗಳನ್ನು ತಿಳಿಸುತ್ತಿರಬೇಕು. ಅವನ ಇಚ್ಛೆಯಂತೆ ಬಾಳುವ ವಿಧಾನವನ್ನು ಕಲಿಸುತ್ತ ಇರಬೇಕು. ಈ ಸಂಬಂಧವಾಗಿ ಪ್ರವಾದಿವರ್ಯರ(ಸ), ಸಹಾಬಿಗಳ ಮತ್ತು ಸಮುದಾಯ ಸುಧಾರಕರ ಚರ್ಯೆಯನ್ನು ತಿಳಿಸುತ್ತ ಇರಬೇಕು.

9. ಆರಾಧನೆಗಳು, ವ್ಯವಹಾರಗಳು, ನೈತಿಕತೆ ಮತ್ತು ಸಮಾಜಕ್ಕೆ ಸಂಬಂಧಿಸಿ ಮೌಖಿಕ ಭಾಷಣ ನೀಡುವುದರ ಬದಲು ಅಥವಾ ನೀತಿ-ನಿಯಮಗಳನ್ನು ಹೇಳಿಕೊಡುವ ಬದಲು ಪ್ರಾಯೋಗಿಕವಾಗಿ ವ್ಯವಹರಿಸುವ ವಿಧಾನಗಳನ್ನು ಕಲಿಸಿ ಕೊಡಬೇಕು. ಅದಕ್ಕಾಗಿ ಐತಿಹಾಸಿಕ ನೀತಿ ಕತೆಗಳ ಸಹಾಯ ಪಡೆಯಬಹುದಾಗಿದೆ. ಒಟ್ಟಿನಲ್ಲಿ ಕರ್ಮಕ್ಕೆ ಹೆಚ್ಚು ಅವಕಾಶ ನೀಡಬೇಕು. ದೇಹ-ವಸ್ತ್ರದ ಶುದ್ಧಿ, ಸ್ನಾನ ಅಥವಾ ವುಝೂ, ನಮಾಝ್ ನಿರ್ವಹಿಸುವ ಸಂಪೂರ್ಣ ವಿಧಾನವನ್ನು ಪ್ರಾಯೋಗಿಕವಾಗಿ ಕಲಿಸಬೇಕು. ಅವುಗಳ ಅಂಗಗಳನ್ನು ಕಡ್ಡಾಯ, ವಾಜಿಬ್, ಸುನ್ನತ್, ಮುಸ್ತಹಬ್ ಇತ್ಯಾದಿಗಳಲ್ಲಿ ವಿಂಗಡಿಸಿ ಅವುಗಳ ದೀರ್ಘ ಪಟ್ಟಿಯನ್ನು ಗಿಳಿಪಾಠ ಒಪ್ಪಿಸುವಂತೆ ಮಕ್ಕಳನ್ನು ನಿರ್ಬಂಧಿಸಬಾರದು. ಅನ್ಯಥಾ ವಿದ್ಯಾರ್ಥಿಗಳ ಮೇಲೆ ಅವಧಿಪೂರ್ವವಾಗಿ ಭಾರ ಹೇರಿದಂತಾಗುವುದು ಮತ್ತು ಅವರಿಗೆ ಕಲಿಕೆಯಲ್ಲಿ ಆಸಕ್ತಿ ಹೊರಟುಹೋಗುವುದು. ಈ ದೀರ್ಘ ಪಟ್ಟಿಗಳು ಮಕ್ಕಳಲ್ಲಿ ಇಂತಹ ಪಠ್ಯಗಳ ಮೇಲೆ ದ್ವೇಷವನ್ನು ಹುಟ್ಟಿಸುತ್ತವೆ. ಸಂಪೂರ್ಣ ವಿಧಾನವನ್ನು ಪ್ರಾಯೋಗಿಕವಾಗಿ ತಿಳಿಸುವುದರಿಂದ ಅವರು ಸುಲಭದಲ್ಲಿ ಮತ್ತು ಸಂತೋಷದಿಂದ ಕಲಿಯುವರು ಮತ್ತು ಸರಿಯಾಗಿ ಅವುಗಳನ್ನು

ಪಾಲಿಸುವರು. ನಮಾಝ್‌ನ ದಿಕ್ರ್, ದುಆಗಳನ್ನು ಕಂಠಪಾಠ ಮಾಡಿಸಲಿಕ್ಕಾಗಿ ಆರಂಭದ ಎರಡ್ಮೂರು ತರಗತಿಗಳಲ್ಲಿ ವಿದ್ಯಾರ್ಥಿಗಳಿಂದ ಇಡೀ ನಮಾಝನ್ನು ಉಚ್ಚಸ್ವರದಲ್ಲಿ, ಇತರ ಮಕ್ಕಳಿಗಿಂತ ಹೆಚ್ಚು ಕಂಠಪಾಠ ಮಾಡಿರುವ ಹುಡುಗನ ಇಮಾಮತ್‌ನಲ್ಲಿ ಮಾಡಿಸಬೇಕು. ಅಧ್ಯಾಪಕನು ನಮಾಝ್‌ನ ಕ್ರಮಬದ್ಧತೆ ಮತ್ತು ಉಚ್ಚಾರದ ಸ್ಪಷ್ಟತೆಯನ್ನು ಗಮನಿಸುತ್ತಾ ಇರಬೇಕು.

10. ಶಾಲೆಯಲ್ಲಿ ಗಂಭೀರ ಧಾರ್ಮಿಕ ವಾತಾವರಣವನ್ನುಂಟು ಮಾಡಲು ಈ ಕೆಳಗಿನ ಕ್ರಮಗಳ ಸಹಾಯ ಪಡೆಯಬೇಕು.

i) ವಿವಿಧ ಸಂದರ್ಭಗಳ ಇಸ್ಲಾಮೀ ಶಿಷ್ಟಾಚಾರಗಳನ್ನು ಕಲಿಸಿ ಅವುಗಳನ್ನು ಪಾಲಿಸುವಂತೆ ಮಾಡಬೇಕು.

ii) ನಮಾಝ್ ಮತ್ತು ಮಸೀದಿಯನ್ನು ತರಬೇತಿಯ ಕೇಂದ್ರವನ್ನಾಗಿ ಮಾಡಬೇಕು. ಗಂಭೀರ ವಾತಾವರಣ, ಸಾಮೂಹಿಕ ಪ್ರಜ್ಞೆ, ಪರಿಶುದ್ಧತೆ ಮತ್ತು ಭಯ-ಭಕ್ತಿಯ ಅವಸ್ಥೆಯನ್ನು ಹುಟ್ಟಿಸಲು ಇವುಗಳಿಂದ ಬಹಳ ಸಹಾಯವಾಗುತ್ತದೆ.

iii) ಸಾಮೂಹಿಕ ಹಾಜರಿಯಲ್ಲಿ ದೇವ ಕೀರ್ತನೆ, ಪ್ರವಾದಿಯ ಪ್ರಶಂಸಾ ಗೀತೆಗಳನ್ನು (ನಅತ್) ಉಚ್ಚಸ್ವರದಲ್ಲಿ ಸುಶ್ರಾವ್ಯವಾಗಿ ಹಾಡಿಸಬೇಕು. ಅವುಗಳ ಪದಗಳು ಸುಲಭದಲ್ಲಿ ಅರ್ಥವಾಗುವಂತಿರಬೇಕು. ಒಂದೇ ಹಮ್ದ್ ಅಥವಾ ನಅತ್ ದಿನಾಲೂ ಪುನರಾವರ್ತಿಸುತ್ತಿರಬಾರದು.

iv) ಧಾರ್ಮಿಕ ಸಭೆಗಳನ್ನು ಆಯೋಜಿಸುವ ವ್ಯವಸ್ಥೆ ಮಾಡುತ್ತಿರಬೇಕು. ಅವುಗಳ ಮೂಲಕ ಧಾರ್ಮಿಕ ಜ್ಞಾನದಲ್ಲಿ ಹೆಚ್ಚಳ ಮತ್ತು ಧರ್ಮದೊಂದಿಗೆ ಭಾವನಾತ್ಮಕ ಸಂಬಂಧವನ್ನು ಹುಟ್ಟಿಸಲು ಬಹಳ ಸಹಕಾರಿಯಾಗುತ್ತದೆ.

v) ಅಲ್ಲಲ್ಲಿ ಕುರ್‌ಆನ್ ವಚನ, ಹದೀಸ್ ವಚನ, ಮುತ್ತಿನಂಥ ಮಾತು (ಹೇಳಿಕೆ), ದೀನೀ ಪೋಸ್ಟರ್ ಇತ್ಯಾದಿಗಳನ್ನು ಅಚ್ಚುಕಟ್ಟಾಗಿ ಅಂಟಿಸಬೇಕು. ಅವುಗಳ ಭಾಷೆ ಸರಳ, ಅಕ್ಷರ ಸ್ಪಷ್ಟ ಮತ್ತು ಸುಂದರ ಹಾಗೂ ಚಿತ್ತಾಕರ್ಷಕವಾಗಿರಬೇಕು.

vi) ಚರ್ಚಾಗೋಷ್ಠಿಗಳನ್ನು ಆಯೋಜಿಸಬೇಕು ಅಥವಾ ಭಾಷಣಗಳ ವ್ಯವಸ್ಥೆ ಮಾಡಬೇಕು.

vii) ಧಾರ್ಮಿಕ ಗ್ರಂಥ, ಪತ್ರಿಕೆ ಮತ್ತು ನಿಯತಕಾಲಿಕಗಳನ್ನು ತರಿಸಬೇಕು.

viii) ಧಾರ್ಮಿಕ ಪ್ರಚಾರ ಸಭೆಗಳಲ್ಲಿ ಭಾಗವಹಿಸಲು ಅವಕಾಶ ನೀಡಬೇಕು.

ix) ಜನಕಲ್ಯಾಣ ಕಾರ್ಯ ಮತ್ತು ಸಮಾಜ ಸೇವೆಯ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಹಾಗೂ ಅವುಗಳನ್ನು ಕಾರ್ಯರೂಪಕ್ಕಿಳಿಸುವಂತೆ ಪ್ರೇರೇಪಿಸಬೇಕು.

x) ಒಳಿತುಗಳ ಸಂಸ್ಥಾಪನೆ ಮತ್ತು ಕೆಡುಕುಗಳ ನಿವಾರಣೆಗೆ ಸಪ್ತಾಹಾಚರಣೆಯನ್ನು ನಡೆಸಬೇಕು.

ಮಾತೃಭಾಷೆ (ಉರ್ದು)

ಮಾತೃಭಾಷೆಯಾಗಿರುವ ಕಾರಣದಿಂದ ಉರ್ದುವಿನ ಪಠ್ಯಕ್ರಮಕ್ಕೆ ಅತಿ ಹೆಚ್ಚು ಮಹತ್ವವಿದೆ. ಈ ಭಾಷೆಯು ತನ್ನ ಮಾತನ್ನು ತಿಳಿಹೇಳಲು ಮತ್ತು ಇತರರ ಮಾತನ್ನು ಅರ್ಥೈಸಲಿಕ್ಕಿರುವ ಸ್ವಾಭಾವಿಕ ಮತ್ತು ಪರಿಣಾಮಕಾರಿ ಮಾಧ್ಯಮವಾಗಿದೆ. ನಮ್ಮ ಹೆಚ್ಚಿನ ಶೈಕ್ಷಣಿಕ ಭಂಡಾರ ಮತ್ತು ಧಾರ್ಮಿಕ ಕೃತಿಗಳು ಇದೇ ಭಾಷೆಯಲ್ಲಿರುವುದು. ಇತರ ಭಾಷೆಗಳಿಗೆ ಹೋಲಿಸಿದರೆ, ಪವಿತ್ರ ಕುರ್‌ಆನ್ ಮತ್ತು ಪ್ರವಾದಿವಚನಗಳಿಂದ ಪ್ರಯೋಜನ ಪಡೆಯುವುದರಲ್ಲಿಯೂ ಈ ಭಾಷೆ ಹೆಚ್ಚು ಸಹಾಯಕವಾಗಿದೆ. ಏಕೆಂದರೆ ಲಿಪಿ, ವಿವಿಧ ಪದಗಳು, ನುಡಿಗಟ್ಟುಗಳು, ಉಲ್ಲೇಖಗಳು, ಉಪಮೆಗಳು, ಚಿಂತನೆ-ಭಾವನೆಗಳು, ರೀತಿ-ನೀತಿ, ಶಿಷ್ಟಾಚಾರ ಇತ್ಯಾದಿಗಳು ಈ ಭಾಷೆಯ ಮುಖಾಂತರವೇ ವಿದ್ಯಾರ್ಥಿಗಳಿಗೆ ಪರಿಚಯವಾಗುತ್ತದೆ. ತಮ್ಮ ಮಾತೃಬಾಷೆ ಮತ್ತದರ ಸಾಹಿತ್ಯದ ಮೇಲೆ ವಿದ್ಯಾರ್ಥಿಗಳಿಗೆ ಸ್ವಾಭಾವಿಕವಾಗಿಯೇ ಇರುವ ಪ್ರೀತಿಯ ಬಂಧವು ಬೇರಾವುದೇ ಭಾಷೆಯೊಂದಿಗೆ ಇರಲಾರದು. ಮಾತೃಭಾಷೆಯಾಗಿರುವ ಕಾರಣ, ಎಲ್ಲ ಪಠ್ಯಗಳಿಗೂ ಶಿಕ್ಷಣ ಮಾಧ್ಯಮ ಇದುವೇ ಆಗಿರುತ್ತದೆ. ಹಾಗಾಗಿ ಇದರ ಮೇಲಿನ ಹಿಡಿತವೇ ಇತರ ಪಠ್ಯಗಳಲ್ಲಿನ ಪ್ರಗತಿಗೆ ಪೂರಕವಾಗಿರುತ್ತದೆ.

ಇದರ ಬೋಧನೆಯಲ್ಲಿ ಈ ಕೆಳಗಿನ ಉದ್ದೇಶಗಳನ್ನು ಪರಿಗಣಿಸಬೇಕಾಗಿದೆ-

- ವಿದ್ಯಾರ್ಥಿಗಳಿಗೆ ಮೌಖಿಕ ಹಾಗೂ ಲಿಖಿತವಾಗಿ ತಮ್ಮ ಅಭಿಪ್ರಾಯ ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗಬೇಕು. ಇತರರ ಚಿಂತನೆ, ಭಾವನೆಗಳನ್ನೇ (ಅವು ಮೌಖಿಕವಾಗಿರಲಿ, ಲಿಖಿತವಿರಲಿ) ವಿದ್ಯಾರ್ಥಿಗಳು ಸುಲಭದಲ್ಲಿ ಅರ್ಥೈಸಬೇಕು. ಹಾಗೆಯೇ ಅವರ ಪದಗಳ ಭಂಡಾರದಲ್ಲಿ ಹೆಚ್ಚಳವಾಗಬೇಕು.
- ಮಾತೃಭಾಷೆಯ ಕಲಿಕೆಯಲ್ಲಿ ಮಾತು, ಓದು, ಬರೆಹ-ಇವು ಮೂರರಲ್ಲೂ ಏಕಪ್ರಕಾರ ಪರಿಣತಿಯನ್ನು ಗಳಿಸುವುದು ಸೇರಿದೆ. ಇವುಗಳಲ್ಲಿ ಯಾವುದಾದರೊಂದರ ಬಗ್ಗೆಯೂ ಅಜಾಗರೂಕರಾದರೆ ಅಥವಾ ಯಾವುದಾದರೊಂದನ್ನು ಕಡೆಗಣಿಸಿದರೆ, ಶಿಕ್ಷಣವು ಅಪೂರ್ಣವಾಗುಳಿಯುವುದು.

ಮಾತು ಕಲಿಸುವ ವಿಧಾನ

ಇದು ಭಾಷೆಯ ಅತಿ ಪ್ರಮುಖವಾದ ಅಂಗವಾಗಿದೆ. ಅಭಿಪ್ರಾಯ ಮತ್ತು ಭಾವನೆಗಳನ್ನು ಪ್ರಕಟಿಸಲು ಪ್ರತಿಯೋರ್ವನೂ ಅತಿ ಹೆಚ್ಚಾಗಿ ಇದನ್ನು ಅವಲಂಬಿಸುತ್ತಾನೆ. ಆದ್ದರಿಂದ ಇದನ್ನು ಕಲಿಸುವ ನಿಟ್ಟಿನಲ್ಲಿ ಹೆಚ್ಚು ಮುತುವರ್ಜಿ ವಹಿಸಬೇಕಾಗಿದೆ. ನಮ್ಮ ಶಾಲೆಗಳು ಸಾಮಾನ್ಯವಾಗಿ ಈ ವಿಷಯದಲ್ಲಿ ಅಸಡ್ಡೆ ವಹಿಸುತ್ತಿವೆ. ಕೇವಲ ಓದು-ಬರೆಹ ಕಲಿಸುವುದಷ್ಟಕ್ಕೇ ಸಂತೃಪ್ತವಾಗಿವೆ. ವಸ್ತುತಃ ಎಲ್ಲಕ್ಕೂ ಮೊದಲು ಮತ್ತು ಅತಿ ಹೆಚ್ಚಾಗಿ ಈ

ವಿಷಯದ ಬಗ್ಗೆ ಗಮನ ಹರಿಸಬೇಕಾಗಿದೆ. ಈ ಸಂಬಂಧವಾಗಿ ಅನುಸರಿಸಬೇಕಾದ ಕೆಲವು ಕ್ರಮಗಳನ್ನು ಇಲ್ಲಿ ನೀಡುತ್ತಿದ್ದೇವೆ.

- ಮಕ್ಕಳು ಮುಕ್ತವಾಗಿ ಯಾವುದೇ ಅಳುಕಿಲ್ಲದೆ ತಮ್ಮ ಅಭಿಪ್ರಾಯಗಳನ್ನು ತಿಳಿಸುವಂತಾಗಲು ಅವರೊಡನೆ ಮುಕ್ತವಾಗಿ ಬೆರೆಯಬೇಕಾಗಿದೆ.
- ಮಕ್ಕಳ ಮಾತಾಪಿತರು, ಸೋದರ-ಸೋದರಿಯರು, ಮೊಹಲ್ಲ-ನೆರೆಕರೆ, ಮನೆಯ ಜೀವನ; ಅವರ ಇಷ್ಟದ ಆಟ-ಆಟಿಕೆ, ತಿಂಡಿ, ವಸ್ತ್ರ ಸಾಕು ಪ್ರಾಣಿಗಳು ಇತ್ಯಾದಿ ವಿಷಯಗಳಲ್ಲಿ ಅವರೊಡನೆ ಚರ್ಚಿಸುತ್ತಿರಬೇಕು. ಆಗ ಅವರು ಬಹಳ ಬೇಗನೇ ಬೆರೆತುಕೊಳ್ಳುತ್ತಾರೆ. ಆದರೆ ಆ ವಿಷಯಗಳಲ್ಲಿ ಹೆಚ್ಚು ಆಳವಾಗಿ ಕೆದಕಲು ಹೋಗಬಾರದು. ಕೇವಲ ಮಕ್ಕಳಿಗೆ ಆಸಕ್ತಿ, ಒಲವು ಇರುವಂತಹ ಸಂಗತಿಗಳ ಬಗ್ಗೆ ಮಾತ್ರವೇ ಚರ್ಚಿಸಿದರೆ ಸಾಕೆನಿಸುವುದು.
- ತನ್ನ ಜಾಗದಲ್ಲಿ ಎದ್ದು ನಿಂತು, ತರಗತಿಯ ಮುಂದೆ ನಿಂತು ಮತ್ತು ಸಭೆಯಲ್ಲಿ ನಿಂತು ಏನನ್ನಾದರೂ ಹೇಳುವಂತೆ ಪ್ರೇರೇಪಿಸಬೇಕು. ಉದಾ: ಯಾವುದಾದರೂ ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ನೀಡುವುದು, ಪ್ರಶ್ನೆ ಕೇಳುವುದು, ಘೋಷಣೆ ಹೊರಡಿಸುವುದು ಅಥವಾ ಸಂದೇಶ ನೀಡುವುದು; ಹಾಡು, ಕಿರಾಅತ್, ಕಲಿತ ಪ್ರಾಸಬದ್ಧ ವಾಕ್ಯಗಳನ್ನು ಹೇಳುವುದು; ಪ್ರಾಣಿಗಳ ಸ್ವರ ಮತ್ತು ಚಲನವಲನವನ್ನು ಅನುಕರಿಸುವುದು ಇತ್ಯಾದಿಗಳು ಮಕ್ಕಳಿಂದ ಅಳುಕು ದೂರ ಮಾಡಲು ಸಹಕಾರಿಯಾಗುತ್ತವೆ.
- ವಿವಿಧ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು ವಿಶೇಷತಃ ಆರ್ಟ್, ಕ್ರಾಫ್ಟ್ ವುರ್ಝೂ, ನಮಾಝ್, ಕಥೆ, ಆಟ ಇತ್ಯಾದಿಗಳು ಮಾತನಾಡಲು ಸಾಕಷ್ಟು ಅವಕಾಶಗಳನ್ನು ಒದಗಿಸಿಕೊಡುತ್ತವೆ. ಅವುಗಳಿಂದ ಆದಷ್ಟು ಪ್ರಯೋಜನ ಪಡೆಯಬಹುದಾಗಿದೆ.
- ಮಕ್ಕಳ ಮಾತುಗಳಲ್ಲಿ ಅನೌಪಚಾರಿಕವಾದ ಮತ್ತು ಸ್ವಾಭಾವಿಕವಾದ ವಿಷಯಗಳಿರುವಂತೆ ನೋಡಿಕೊಳ್ಳಬೇಕು. ಶೈಲಿ ಆಕರ್ಷಕ, ಸಭ್ಯ ಮತ್ತು ಹಿತಕರವಾಗಿರಬೇಕು. ಸ್ಪಷ್ಟವಾಗಿ ಮತ್ತು ಆರೋಗ್ಯಪೂರ್ಣವಾಗಿ ಮಾತನಾಡಲು, ಇಡೀ ಉತ್ತರವನ್ನು ನೀಡಲು ಹಾಗೂ ಸೂಕ್ತವಾದ ವಿಧಾನವನ್ನು ಅನುಸರಿಸುವ ಕಡೆಗೆ ಹೆಚ್ಚು ಗಮನ ಹರಿಸಬೇಕು.
- ಮಾತಿನ ಮಧ್ಯೆ ಮಕ್ಕಳ ತಪ್ಪುಗಳನ್ನು ಸುಧಾರಿಸಬೇಕು. ಆದರೆ ಅವರಲ್ಲಿ ಕೀಳರಿಮೆ ಬೆಳೆಯಲು ಬಿಡಬಾರದು. ತಪ್ಪಾದ ಪದ, ವಾಕ್ಯ ಅಥವಾ ಮಾತಿನ ಶೈಲಿಯ ಸುಧಾರಣೆಗೆ ಸ್ವತಃ ಆರೋಗ್ಯಪೂರ್ಣವಾಗಿ ಹೇಳಿಕೊಟ್ಟು ಕಲಿಸುವುದು ಉತ್ತಮ.
- ತರುವಾಯ ಸುತ್ತಮುತ್ತಲಿನ ವಸ್ತುಗಳು, ಜೀವಿಗಳು, ಜೀವನದ ದೈನಂದಿನ ಘಟನೆಗಳು

ಮತ್ತು ದೃಶ್ಯಗಳ ಬಗ್ಗೆ ಕ್ರಮೇಣ ಗಂಭೀರ ಚರ್ಚೆ ನಡೆಸಬೇಕು. ಇದರಿಂದ ಮಾತು ಉತ್ತಮಗೊಳ್ಳಲು ಸಹಾಯಕವಾಗುವುದು.

- ಕೊನೆಯಲ್ಲಿ ಕಥೆ, ಹೇಳಿಕೆ, ಹಾಸ್ಯ ಚಟಾಕಿ, ಸಂಕ್ಷಿಪ್ತ ವಾಕ್ಯಗಳನ್ನು ಕಂಠಪಾಠ ಮಾಡಿಸಿ ಸಭೆಗಳಲ್ಲಿ ವ್ಯಕ್ತಪಡಿಸಲು ಕಲಿಸಬೇಕು. ವಿಧಾನವು ಪುಸ್ತಕ ಓದುವ ಹಾಗಿರಬಾರದು, ಬದಲಾಗಿ ಭಾಷಣ ಮಾಡುವಂತಿರಬೇಕು.

ಓದು ಕಲಿಸುವ ವಿಧಾನ

ಸಾಮಾನ್ಯವಾಗಿ ರೂಢಿಯಲ್ಲಿರುವ ಸ್ವರಾಕ್ಷರಗಳಿಂದ ಕಲಿಕೆ ಆರಂಭಿಸುವುದರ ಬದಲು, ಮಿಶ್ರ ವಿಧಾನದಿಂದ ಓದಲು ಕಲಿಸಬೇಕು. ವಿವರಣೆಗಳಿಗೆ 'ಮುನ್ನಿ ಕಿತಾಬ್', 'ಕಾಇದ ನಸ್ಖ್'ನಿಂದ ಸಹಾಯ ಪಡೆಯಬಹುದು. ಪದ್ಯ-ಗದ್ಯಗಳನ್ನು ಓದಿಸಲು 'ಹಮಾರೀ ಕಿತಾಬ್'ನ ಸೆಟ್‌ನಲ್ಲಿ ನೀಡಲಾಗಿರುವ ಮಾರ್ಗದರ್ಶನ ಮತ್ತು ಅಭ್ಯಾಸಗಳಿಂದ ಪ್ರಯೋಜನ ಪಡೆಯಬಹುದು.

ಪ್ರಾರಂಭದ ತರಗತಿಗಳಲ್ಲಿ ಅಂಕಲಿಪಿಯನ್ನು ಪ್ರತ್ಯೇಕವಾಗಿ ಓದಿಸಬಾರದು. ಬದಲಿಗೆ, ಹೇಳುವಲ್ಲಿ ಅಥವಾ ಬರೆಯುವಲ್ಲಿ ಎಸಗುವ ತಪ್ಪುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸರಿಯಾದ ಭಾಷೆಯನ್ನು ಹೇಳುವ ಅಥವಾ ಬರೆಯುವ ಯಾವ ನಿಯಮದ ಉಲ್ಲಂಘನೆಯಾಗಿದೆಯೋ ಅದನ್ನು ತಿಳಿಸಿಕೊಟ್ಟರೆ ಸಾಕು.

ಬರವಣಿಗೆ ಕಲಿಸುವ ವಿಧಾನ

ಡ್ರಾಯಿಂಗ್‌ನಿಂದ ಆರಂಭಿಸಬೇಕು. ಸರಳರೇಖೆ, ಚೌಕ, ತ್ರಿಕೋನ, ವೃತ್ತಗಳನ್ನು ಬರೆಸುವುದು ಮತ್ತು ಅವುಗಳಲ್ಲಿ ಕ್ರಮೇಣ ಬದಲಾವಣೆ ತರುವುದು, ಬಳಪವನ್ನು ಹಿಡಿಯಲು ಮತ್ತು ಕಣ್ಣು, ಮೆದುಳು, ಕೈಗಳಿಂದ ಏಕಕಾಲಕ್ಕೆ ಕೆಲಸ ಮಾಡುವ ಅಭ್ಯಾಸ ಮಾಡಿಸುವುದು ಇತ್ಯಾದಿ. ಈ ಕೆಲಸವನ್ನು ಬಣ್ಣದ ಕಡ್ಡಿಗಳಿಂದ ಸ್ಲೇಟ್‌ಗಳಲ್ಲಿ ಬರೆಸುವ ಮೂಲಕ ಅಥವಾ ಚಾಕ್‌ಗಳಿಂದ ಕರಿಹಲಗೆಯಲ್ಲಿ ಬರೆಯುವ ಮೂಲಕ ಪ್ರಾರಂಭಿಸಬೇಕು.

ಬಳಿಕ ಹಂತಹಂತವಾಗಿ ಅಕ್ಷರ ಮತ್ತು ಪದಗಳ ರಚನೆಯೆಡೆಗೆ ತರಬೇಕು. ಆರಂಭದಲ್ಲಿ ಓದಿಸಿದ್ದನ್ನು ಮಾತ್ರವೇ ಬರೆಸಬೇಕು. ಇದು ಸ್ವರ, ವ್ಯಂಜನ ಮತ್ತು ಶುದ್ಧಬರಹದಲ್ಲಿಯೂ ಸಹಾಯಕವಾಗುವುದು. ಅಲ್ಲದೆ ಮಕ್ಕಳಿಗೆ ಪಾಠವೂ ಸುಲಭದಲ್ಲಿ ಮನನವಾಗುವುದು. ಬರೆಯುವಾಗ ಬಳಪದ ಹಿಡಿತ ಮತ್ತು ಕುಳಿತುಕೊಳ್ಳುವ ಭಂಗಿಯ ಬಗ್ಗೆ ಹೆಚ್ಚು ಗಮನ ನೀಡಬೇಕು. ಮಕ್ಕಳು ಚೆನ್ನಾಗಿ ಕಲಿತಿರುವ ವಿಷಯವನ್ನಷ್ಟೇ ಉಕ್ತಲೇಖನಕ್ಕೆ ಕೊಡಬೇಕು. ಇದರಿಂದ ತಪ್ಪುಗಳು ಸಂಭವಿಸುವ ಸಾಧ್ಯತೆ ಕಡಿಮೆಯಿರುತ್ತದೆ. ಆರಂಭದಲ್ಲಿ ಕೇವಲ ಸ್ಪಷ್ಟವಾಗಿ, ದುಂಡಗೆ ಬರೆಯುವ ಬಗ್ಗೆ ಒತ್ತು ನೀಡಬೇಕು. ಬಳಿಕ ಸುಂದರವಾಗಿ

ವಾಕ್ಯರಚನೆ ಮಾಡುವ ಕಡೆಗೆ ಗಮನ ಹರಿಸಬೇಕು. ಬಿಸ್ಮಿಲ್ಲಾಹ್ ಹೇಳಿ ಆರಂಭಿಸುವುದು, ಸೂಕ್ತ ಮಾರ್ಜಿನ್ ಬಿಡುವುದು, ಅಡ್ಡಗೆರೆ ಹಾಕುವುದು ಮತ್ತು ಸ್ಫುಟವಾಗಿ ಬರೆಯುವುದು ಇತ್ಯಾದಿಗಳ ಕಡೆಗೆ ಹೆಚ್ಚು ಗಮನ ಹರಿಸಲು ಕಲಿಸಬೇಕು. ನಂತರ ಕಾಪಿಗಳಲ್ಲಿ ಬರೆಸುವಾಗ, ಬೆರಳುಗಳಿಗೆ ಶಾಯಿಯಾಗುವುದನ್ನು ಅಥವಾ ಅಲ್ಲಲ್ಲಿ ಶಾಯಿ ಚೆಲ್ಲುವುದನ್ನು, ಗೋಡೆ ಅಥವಾ ಕಾಪಿ ಪಠ್ಯಪುಸ್ತಕದಲ್ಲಿ ಅನಗತ್ಯ ಬರೆಯುವುದನ್ನು ಪ್ರಾರಂಭದಲ್ಲೇ ತಡೆಯಬೇಕು.

ಪ್ರಬಂಧ ಬರೆಯುವ ಅಭ್ಯಾಸ ಮಾಡಿಸುವುದು

- ನಿರ್ದಿಷ್ಟ ವಿಷಯದಲ್ಲಿ ಬರೆಸುವುದಕ್ಕೆ ಮುಂಚೆ ಮೌಖಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಲು ಮತ್ತು ಚರ್ಚಿಸಲು ಸಾಕಷ್ಟು ಅವಕಾಶವನ್ನೀಯಬೇಕು. ಶೀರ್ಷಿಕೆಯ ಆಯ್ಕೆಯಲ್ಲಿ ಮಕ್ಕಳ ಆಸಕ್ತಿಯನ್ನು ಪರಿಗಣಿಸಬೇಕು.
- ಆರಂಭದಲ್ಲಿ ಮಕ್ಕಳಿಗೆ ಅನುಭವ, ವೀಕ್ಷಣೆಗೆ ಸಾಕಷ್ಟು ಅವಕಾಶ ದೊರೆತಿರುವಂತಹ ವಿಷಯದಲ್ಲಷ್ಟೇ ಬರೆಸಬೇಕು. ಏಕೆಂದರೆ ಆ ವಿಷಯದಲ್ಲಿ ಅವರಿಗೆ ಸ್ಪಷ್ಟ ಕಲ್ಪನೆಯಿರುತ್ತದೆ.
- ಪ್ರಬಂಧದ ಮಾದರಿ ಕೃತಿಗಳನ್ನು ತೋರಿಸಬೇಕು.
- ಸಮಯ ಮತ್ತು ಪ್ರಮಾಣವನ್ನು ನಿಗದಿಪಡಿಸಿ ಬರೆಯಲು ವಿಷಯ ನೀಡಬೇಕು.
- ಬರವಣಿಗೆಯಲ್ಲಿ ವಾಕ್ಯಗಳು ಪರಸ್ಪರ ಸಂಬಂಧಿಸಿರುವಂತೆಯೂ ಅಭಿಪ್ರಾಯದಲ್ಲಿ ಶಿಸ್ತು, ಕ್ರಮಬದ್ಧತೆ ಇರುವಂತೆಯೂ ನೋಡಿಕೊಳ್ಳಬೇಕು.
- ಸಂಕ್ಷಿಪ್ತವಾಗಿ ಮತ್ತು ಶೀರ್ಷಿಕೆಗೆ ಸಂಬಂಧಿಸಿಯೇ ಬರೆಯುವ ಕಡೆಗೆ ಗಮನವೀಯಬೇಕು.
- ಆರಂಭದ ತರಗತಿಗಳಲ್ಲಿ ಬಿಟ್ಟ ಪದ ತುಂಬಿಸುವುದು, ಪದ ಬಳಸಿ ವಾಕ್ಯ ರಚಿಸುವುದು, ಸೂಕ್ತ ಪದದ ಆಯ್ಕೆ ಇತ್ಯಾದಿಗಳ ಅಭ್ಯಾಸ ಮಾಡಿಸಬೇಕು. ಬಳಿಕ ನೀಡಿದ ಶೀರ್ಷಿಕೆಗೆ ಸಂಬಂಧಿಸಿ ಕೆಲವು ವಾಕ್ಯಗಳನ್ನು ಬರೆಯಲು ಕಲಿಸಬೇಕು. ಆಮೇಲೆ ಹಂತಹಂತವಾಗಿ ಪ್ರಬಂಧ ಬರೆಸಬೇಕು. ಸಣ್ಣ ಮಕ್ಕಳಿಂದ ದೀರ್ಘ ಪ್ರಬಂಧವನ್ನು ನಿರೀಕ್ಷಿಸಲೇ ಬಾರದು.
- ಬರವಣಿಗೆಯನ್ನು ಕಾಲಕಾಲಕ್ಕೆ ಸುಧಾರಿಸುವ ಕಡೆಗೆ ಗಮನ ಕೊಡಬೇಕು. ಆದರೆ ಎಲ್ಲ ತಪ್ಪುಗಳನ್ನೂ ಒಂದೇ ಬಾರಿಗೆ ಸರಿಪಡಿಸಲು ಹೋಗಬಾರದು. ಬದಲಾಗಿ ತಪ್ಪುಗಳನ್ನು ಹಂತಹಂತವಾಗಿ ಸರಿಪಡಿಸಬೇಕು. ದೊಡ್ಡ ತಪ್ಪುಗಳನ್ನು ಮೊದಲು ತಿದ್ದಬೇಕು. ಆಮೇಲೆ ಸಾಮಾನ್ಯವಾದ ತಪ್ಪುಗಳೆಡೆಗೆ ಗಮನ ಕೊಡಬೇಕು.
- ತಪ್ಪುಗಳು ಹೆಚ್ಚು ಇದ್ದರೆ ಪುನಃ ಬರೆಸಬೇಕು. ಪ್ರಮಾಣಕ್ಕೆ ಬದಲು ವಿಷಯದ ಸ್ಪಷ್ಟತೆಗೆ ಹೆಚ್ಚು ಒತ್ತು ನೀಡಬೇಕು.

- ಉತ್ತಮ ಪ್ರಬಂಧಕ್ಕೆ ಅಂಕ ನೀಡುವುದರೊಂದಿಗೆ ಸೂಕ್ತ ಷರಾ ಬರೆಯಬೇಕು. ಪ್ರತಿಯೊಂದು ಪ್ರಬಂಧಕ್ಕೂ ಏನಾದರೂ ಅಗತ್ಯದ ಮಾರ್ಗದರ್ಶನವನ್ನು ನೀಡಬೇಕು.

ಪತ್ರ ಬರೆಯುವುದು

ಮಕ್ಕಳಿಗೆ ಪತ್ರವ್ಯವಹಾರದ ಅಭ್ಯಾಸವನ್ನೂ ಮಾಡಿಸಬೇಕು. ಬಿಸ್ಮಿಲ್ಲಾಹ್ ಹೇಳಿ ಮತ್ತು ಬಿಸ್ಮಿಲ್ಲಾಹ್ ಎಂದು ಬರೆದೇ ಪತ್ರವನ್ನು ಆರಂಭಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸೂಚಿಸಬೇಕು. ಮೇಲೆ ಎಡಭಾಗದಲ್ಲಿ ಸಂಕ್ಷಿಪ್ತ ವಿಳಾಸ ಮತ್ತು ಬಲಭಾಗದಲ್ಲಿ ದಿನಾಂಕವನ್ನು ಬರೆಯಬೇಕು. ಸಂಕ್ಷಿಪ್ತ ಪದಗಳಿಂದ ಅಭಿಸಂಬೋಧಿಸಬೇಕು. ಬಳಿಕ ಅಸ್ಸಲಾಮು ಅಲೈಕುಮ್ ಎಂದು ಬರೆಯಬೇಕು. ನಂತರದ ಪ್ಯಾರಾದಲ್ಲಿ ವಿಷಯವನ್ನು ಬರೆಯಬೇಕು. ಪತ್ರದ ಕೊನೆಯಲ್ಲಿ ಅಭಿಸಂಬೋಧಿತರೊಂದಿಗೆ ತನಗಿರುವ ಸಂಬಂಧವನ್ನು ವ್ಯಕ್ತಪಡಿಸುವ ಪದಗಳ ಜತೆಗೆ ತನ್ನ ಹೆಸರನ್ನೂ ಬರೆಯಬೇಕು. ಕೋಪಗೊಂಡಿರುವ ಸಂದರ್ಭದಲ್ಲಿ ಪತ್ರ ಬರೆಯಬಾರದು. ಬಂದ ಪತ್ರಕ್ಕೆ ಖಂಡಿತವಾಗಿಯೂ ಉತ್ತರ ಬರೆಯಬೇಕು. ಪತ್ರದ ಒಕ್ಕಣೆಯು ಸಂಕ್ಷಿಪ್ತವಾಗಿರಬೇಕು. ಪ್ರತಿಯೊಂದು ಪತ್ರದಲ್ಲೂ ತನ್ನ ವಿಳಾಸವನ್ನು ಅವಶ್ಯವಾಗಿ ಬರೆಯಬೇಕು. ಸಂಕಷ್ಟದ ವೇಳೆ ಸಹಾನುಭೂತಿ ಮತ್ತು ಸಂತಸದ ವೇಳೆ ಶುಭಾಶಯದ ಪತ್ರ ಬರೆಯಬೇಕು. ಇನ್ನೊಬ್ಬರ ಪತ್ರವನ್ನು ಅನುಮತಿಯಿಲ್ಲದೆ ಓದಬಾರದು. ಪತ್ರವನ್ನು ದುಂಡಗೆ, ಸ್ಪಷ್ಟ ಅಕ್ಷರಗಳಲ್ಲಿ ಬರೆಯಬೇಕು. ಪತ್ರ ಕಳುಹಿಸುವುದಕ್ಕೆ ಮುಂಚೆ ಒಮ್ಮೆ ಬರೆದುದನ್ನು ಓದಬೇಕು. ಸಂಬಂಧ ಪಡದ ವ್ಯಕ್ತಿಗಳಿಂದ ಉತ್ತರ ಬೇಕಿದ್ದರೆ, ಪತ್ರದ ಜತೆಗೆ ಕಾರ್ಡು ಅಥವಾ ಅಗತ್ಯದಷ್ಟು ಸ್ಟಾಂಪನ್ನು ಲಗತ್ತೀಕರಿಸಬೇಕು. ಅಂಚೆಗೆ ಹಾಕಲು ಯಾರಾದರೂ ಪತ್ರ ನೀಡಿದರೆ ಅದನ್ನು ಅವಶ್ಯವಾಗಿ ಹಾಕಬೇಕು. ಇವಿಷ್ಟನ್ನು ಪತ್ರ ವ್ಯವಹಾರಕ್ಕೆ ಸಂಬಂಧಿಸಿ ಮಕ್ಕಳಿಗೆ ಕಲಿಸಿಕೊಡುವುದು ಒಳ್ಳೆಯದು.

ಗಣಿತ

ನಮ್ಮ ದೈನಂದಿನ ಜೀವನದಲ್ಲಿ ಗಣಿತಕ್ಕೆ (ಲೆಕ್ಕಾಚಾರಕ್ಕೆ) ಬಹಳ ಮಹತ್ವವಿದೆ. ಯಾವ ವ್ಯಕ್ತಿಯೂ ಎಂತಹುದೇ ವ್ಯಾಪಾರ ಮಾಡುತ್ತಿದ್ದರೂ ಗಣಿತದ ಹೊರತು ಅವನ ಕೆಲಸ ನಡೆಯಲಾರದು. ಸರಕುಗಳ ಖರೀದಿ ಉಶ್ರ್-ಝುಕಾತ್, ಕೊಡು-ಕೊಳ್ಳುವಿಕೆ, ವಾರೀಸು ಹಕ್ಕು ಮತ್ತು ಕರ್ತವ್ಯಗಳು ಎಲ್ಲದರಲ್ಲೂ ಇದರ ಅಗತ್ಯ ಇರುತ್ತದೆ. ಇಸ್ಲಾಮಿಯಾತ್ ಮತ್ತು ಮಾತೃಭಾಷೆಯ ನಂತರ ಪಠ್ಯಕ್ರಮದ ಪ್ರಮುಖ ವಿಷಯ ಇದುವೇ ಆಗಿದೆ. ಇತರ ಪಠ್ಯ ವಿಷಯಗಳಲ್ಲಿ ವಿದ್ಯಾರ್ಥಿಗೆ ಇರುವ ದೌರ್ಬಲ್ಯವನ್ನು ಸಣ್ಣ ಮಟ್ಟಿನ ಗಮನದೊಂದಿಗೆ ನಂತರವೂ ಸರಿಪಡಿಸಬಹುದಾಗಿದೆ. ಆದರೆ ಓದು-ಬರೆಹ ಅಥವಾ ಲೆಕ್ಕದಲ್ಲಿ ಮೂಲಭೂತ ಕೊರತೆಯಿದ್ದರೆ ಅದನ್ನು ದೂರ ಮಾಡುವುದು ತೀರಾ ದುಸ್ತರ. ಮಾತ್ರವಲ್ಲ, ಆ

ದೌರ್ಬಲ್ಯದೊಂದಿಗೆ ಮುಂದುವರಿಯುವುದೂ ಅಸಾಧ್ಯವಾಗುತ್ತದೆ. ಉದಾಹರಣೆಗೆ: ಲೆಕ್ಕ ಮಾಡುವುದಕ್ಕೆ ಓದಲು, ಬರೆಯಲು ಬರದಿದ್ದರೆ, ಸಂಕಲನ-ವ್ಯವಕಲನವನ್ನು ಕಲಿಸಲಿಕ್ಕಾಗದು. ನಾಲ್ಕು ಮೂಲಭೂತ ಸೂತ್ರಗಳಲ್ಲಿ (+, -, /, x) ಪರಿಣತಿಯಿಲ್ಲದಿದ್ದರೆ ಮುಂದಿನ ಸೂತ್ರ-ನಿಯಮಗಳನ್ನು ಕಲಿಸಲಿಕ್ಕಾಗದು. ಆದ್ದರಿಂದ ಆರಂಭದಲ್ಲಿಯೇ ಇವುಗಳನ್ನು ಕಲಿಸುವ ಮತ್ತು ಈ ಮೂಲ ಬುನಾದಿಯನ್ನು ಗಟ್ಟಿಗೊಳಿಸುವ ಬಗ್ಗೆ ಚಿಂತಿಸಬೇಕಾಗಿದೆ.

ಗಮನಾರ್ಹ ವಿಷಯಗಳು

- ಪ್ರಾರಂಭದ ತರಗತಿಗಳಲ್ಲಿ ಗಣಿತ ಕಲಿಸುವುದರ ಉದ್ದೇಶವು ವಸ್ತುತಃ ದೈನಂದಿನ ಜೀವನ ಮತ್ತು ವಿವಿಧ ಪಠ್ಯ ಮತ್ತು ಚಟುವಟಿಕೆಗಳಲ್ಲಿ ಎದುರಾಗುವ ಗಣಿತ ಸಂಬಂಧೀ ಸಮಸ್ಯೆಗಳನ್ನು ಅರಿಯಲಿಕ್ಕಾಗಿದೆ. ಹಾಗೆಯೇ ಆರೋಗ್ಯಪೂರ್ಣವಾಗಿ ಅವುಗಳನ್ನು ಪರಿಹರಿಸುವ ಕೌಶಲ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದಕ್ಕಾಗಿದೆ. ಆದ್ದರಿಂದ ಅಂಕಿ-ಅಂಶ ಮತ್ತು ಸಮಸ್ಯೆ ಇತ್ಯಾದಿಗಳು ಮಕ್ಕಳ ದೈನಂದಿನ ಜೀವನಕ್ಕೆ ಸಂಬಂಧಿಸಿರಬೇಕಾಗಿದೆ.
- ಗಣಿತದ ಯಾವ ಸೂತ್ರ ಅಥವಾ ನಿಯಮವನ್ನು ಕಲಿಸಲಿಕ್ಕಿರುವುದೋ ಅದರ ಪ್ರಾಮುಖ್ಯತೆ ಮತ್ತು ಅಗತ್ಯವನ್ನು ಮಕ್ಕಳು ಸ್ವಯಂ ಗ್ರಹಿಸಿಕೊಳ್ಳುವಂತಹ ಸ್ಥಿತಿಗೆ ಮಕ್ಕಳನ್ನು ತಂದು ನಿಲ್ಲಿಸಬೇಕು. ಇದರಿಂದ ಪಾಠದಲ್ಲಿ ಆಸಕ್ತಿಯೂ ಹುಟ್ಟಿಕೊಳ್ಳುತ್ತದೆ ಮತ್ತು ಸಂಪೂರ್ಣ ಶ್ರದ್ಧೆಯಿಂದ ಅದನ್ನು ಅರ್ಥಮಾಡಿಕೊಳ್ಳಲು ಮತ್ತು ನೆನಪಿನಲ್ಲಿಟ್ಟುಕೊಳ್ಳಲು ಅವರು ಪ್ರಯತ್ನಿಸುವರು.
- ಸಂಖ್ಯೆಗಳನ್ನು ಕಲಿಸಲು ಅಥವಾ ಸಂಕಲನ-ವ್ಯವಕಲನ ಇತ್ಯಾದಿ ಕಲಿಸಲು ಮೊದಲು ವಸ್ತುಗಳ ಸಹಾಯ ಪಡೆಯಬೇಕು. ಉದಾ: ಬಾಲ್‌ಫ್ರೇಮ್, ಗೋಲಿಗಳು, ಹುಣಸೆ ಬೀಜ, ಬೆರಳುಗಳು, ಸಾಮಾನ್ಯ ಬಳಕೆಯ ವಸ್ತುಗಳು, ಆಟಿಕೆ ಇತ್ಯಾದಿಗಳ ಸಹಾಯದಿಂದ ಸಂಖ್ಯೆಗಳನ್ನು ಕಲಿಸಬೇಕು. ಆ ಬಳಿಕ ಅಂಕೆಗಳ ಮೂಲಕ ಕಲಿಸಬೇಕು.
- ಹೊಸ ಸೂತ್ರ ಮತ್ತು ನಿಯಮಗಳನ್ನು ಕಲಿಸಲು ತ್ವರೆ ಮಾಡಬಾರದು. ಒಂದು ಸೂತ್ರದಲ್ಲಿ ಮಕ್ಕಳು ಚೆನ್ನಾಗಿ ನಿಪುಣರಾಗದೇ ಇನ್ನೊಂದು ಸೂತ್ರವನ್ನು ಕಲಿಸಲು ಹೋಗಬಾರದು.
- ಪ್ರತಿಯೊಂದು ಸೂತ್ರವನ್ನೂ ಪದೇ ಪದೇ ಅಭ್ಯಾಸ ಮಾಡಿಸುತ್ತಿರಬೇಕು. ಪುನರಾವರ್ತನೆಯಿಂದಲೇ ಆರೋಗ್ಯಪೂರ್ಣವಾಗಿ ಸವಾಲುಗಳನ್ನು ಪರಿಹರಿಸುವ ಸಾಮರ್ಥ್ಯ ಬೆಳೆದು ಬರುವುದು. ಗಣಿತವು ಬಹಳ ಪರಿಶ್ರಮವನ್ನು ಅಪೇಕ್ಷಿಸುತ್ತದೆ. ಸಾಕಷ್ಟು ಅಭ್ಯಾಸ ಮಾಡದೆ ಗಣಿತ ತಲೆಗೆ ಹತ್ತಲಾರದು. ಆದರೆ ಮಕ್ಕಳನ್ನು ಬೇಸರಿಕೆಯಿಂದ ಮುಕ್ತವಾಗಿರಿಸಲು ಕುತೂಹಲ, ಸಕ್ರಿಯತೆ ಮತ್ತು ಸನ್ನದ್ಧತೆಯನ್ನು ಪರಿಗಣಿಸುತ್ತಿರಬೇಕು. ಒಂದು ಪೀರಿಯೆಡ್‌ನಲ್ಲಿ ಪುನರಾವರ್ತನೆಗೆ ಸ್ವಲ್ಪ ಸಮಯವನ್ನು ಮೀಸಡಲಿರಿಸಬೇಕು.

• ಸ್ವಚ್ಛ ಮತ್ತು ಆರೋಗ್ಯಪೂರ್ಣವಾಗಿ ಅಂಕೆಗಳನ್ನು ಬರೆಯುವುದರ ಕಡೆಗೆ ಪ್ರಾರಂಭದಲ್ಲೇ ಗಮನವೀಯಬೇಕು. ಎರಡಂಕೆ ಅಥವಾ ಅದಕ್ಕಿಂತ ಹೆಚ್ಚು ಅಂಕೆಗಳ ಪೈಕಿ ಪ್ರತಿ ಅಂಕೆಯ ಮೌಲ್ಯವನ್ನು ಸರಿಯಾಗಿ ಮನವರಿಕೆ ಮಾಡಿಸಿ ಕೊಡಬೇಕು. ಉದಾ: ಇಪ್ಪತ್ತೇಳು. ಇದರಲ್ಲಿ 2 ದಶಕ ಮತ್ತು 7 ಏಕ ಸಂಖ್ಯೆಗಳಾಗಿವೆ. ಬರೆಯುವಾಗಲೂ ಎರಡು ಅಥವಾ ಹೆಚ್ಚು ಅಂಕೆಗಳಿದ್ದರೆ ಅವುಗಳನ್ನು ಎಡದಿಂದ ಬಲಕ್ಕೆ ಬರೆಸಬೇಕು. ಉದಾ: 27 ಬರೆಯುವಾಗ 2 ಮೊದಲು, 7 ನಂತರ ಬರೆಯಲು ಕಲಿಸಿ ಕೊಡಬೇಕು.

• ಸಣ್ಣ ತರಗತಿಗಳಲ್ಲಿ ವಿವಿಧ ಉದಾಹರಣೆಗಳನ್ನು ನೀಡುವ ಮೂಲಕ ಸೂತ್ರವನ್ನು ಕಲಿಸಿ ಕೊಡಬೇಕು. ಸೂತ್ರ ಚೆನ್ನಾಗಿ ಮನನವಾದ ಮೇಲೂ ಸಾಕಷ್ಟು ಅಭ್ಯಾಸ ಮಾಡಿಸಬೇಕು.

• ನಿರಂತರವಾಗಿ ಅಭ್ಯಾಸ, ಪುನರಾವರ್ತನೆ ಮಾಡಿಸಬೇಕು. ಎಲ್ಲಿಯ ವರೆಗೆಂದರೆ ಸಂಕಲನ, ವ್ಯವಕಲನ ಅಥವಾ ಮಗ್ಗಿಯ ಪ್ರಶ್ನೆಗಳಿಗೆ ಮಗುವಿಗೆ ಒಮ್ಮೆಲೇ ಉತ್ತರ ಹೊಳೆಯುವಂತಾಗಬೇಕು. ಅವುಗಳನ್ನು ಒಂದೊಂದಾಗಿ ಎಣಿಕೆ ಮಾಡುವ ಹಾಗಾಗಬಾರದು. ಉದಾ: ಏಳು ಮತ್ತು ಐದು ಅನ್ನುವಾಗ ಹನ್ನೆರಡು ಎಂಬ ಉತ್ತರ ಥಟ್ಟನೆ ಬರಬೇಕು. ಎಂಟೇಳ್ಲಿ ಎಷ್ಟೆನ್ನುವಾಗ ಐವತ್ತಾರೆಂದು ಬಿಡಬೇಕು. ಅದರ ಹೊರತು ಬೆರಳುಗಳಿಂದ ಏಳು, ಎಂಟು, ಒಂಭತ್ತು, ಹತ್ತು, ಹನ್ನೊಂದು, ಹನ್ನೆರಡು ಅನ್ನಲೋ ಎಂಟೊಂದ್ಲಿ ಎಂಟರಿಂದ ಆರಂಭಿಸಿ ಎಂಟೇಳ್ಲಿ ಐವತ್ತಾರು ಎನ್ನುವಂತೆಯೋ ಆಗಬಾರದು.

• ಗುಣಾಕಾರದ ಮಗ್ಗಿ ಅಥವಾ ಪ್ರಮೇಯ/ಸೂತ್ರಗಳನ್ನು ಕಲಿಸುವಾಗ ಅದು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಮೊದಲು ಮನವರಿಕೆ ಮಾಡಿಸಿ ಕೊಡಬೇಕು.

• ಜೀವನದಲ್ಲಿ ತೀರಾ ವಿರಳವಾಗಿ ಉಪಯೋಗಕ್ಕೆ ಬರುವ ಅಥವಾ ಸಣ್ಣ ಪ್ರಾಯದಲ್ಲಿ ಕಲ್ಪಿಸಲೇ ಸಾಧ್ಯವಾಗದಂತಹ ದೊಡ್ಡ ದೊಡ್ಡ ಅಂಕೆ-ಸಂಖ್ಯೆಗಳನ್ನು ಅಭ್ಯಾಸದಲ್ಲಿ ಎಂದಿಗೂ ಸೇರಿಸಬಾರದು. ಸಾಮಾನ್ಯವಾಗಿ ಸಣ್ಣ ತರಗತಿಗಳಲ್ಲಿಯೇ 'ಗಣಸಂಖ್ಯೆ'ಯನ್ನು ಅಭ್ಯಾಸ ಮಾಡಿಸುವಷ್ಟರ ಮಟ್ಟಿಗೆ ಇಂದು ಶಿಕ್ಷಣ ಸಂಸ್ಥೆಗಳು ತಲುಪಿಬಿಟ್ಟಿವೆ.

• ಒಂದೇ ವಾಸ್ತವಿಕತೆಯನ್ನು ವಿಭಿನ್ನ ರೀತಿಯಲ್ಲಿ ಮನನ ಮಾಡಿಸಿ ಕೊಡಬೇಕು. ಉದಾ: 3+2=5. 5ಕ್ಕಿಂತ 3 ಎರಡರಷ್ಟು ಕಡಿಮೆ ಇದೆ ಅಥವಾ 3ಕ್ಕಿಂತ 5 ಎರಡರಷ್ಟು ದೊಡ್ಡದಿದೆ ಅಥವಾ 3x5=5x3 ಅಥವಾ 5+3=3+5 ಇತ್ಯಾದಿ.

• ಪ್ರಶ್ನೆಗಳನ್ನು ಕೊಟ್ಟು ಪರಿಹರಿಸಲು ಹೇಳಿ ಕೈ ತೊಳೆದುಕೊಳ್ಳಬಾರದು. ಬದಲಾಗಿ ಸರಿಯಾದ ಪರಿಹಾರವನ್ನು ಪರಿಶೀಲಿಸುವ ವಿಧಾನವನ್ನೂ ಕಲಿಸಿಕೊಡಬೇಕು ಮತ್ತು ವಿದ್ಯಾರ್ಥಿಗಳಿಂದ ಪರಿಶೀಲನೆ ಮಾಡಿಸುತ್ತಲೂ ಇರಬೇಕು. ಕೆಲವೊಮ್ಮೆ ವಿದ್ಯಾರ್ಥಿಗಳಿಗೂ ಪ್ರಶ್ನೆ ತಯಾರಿಸಲು ಸೂಚಿಸಬೇಕು.

• ಲಿಖಿತದ ಜತೆಗೆ ಮೌಖಿಕ ಪ್ರಶ್ನೆಗಳನ್ನು ಪರಿಹರಿಸುವ ಬಗ್ಗೆಯೂ ವಿಶೇಷ ಗಮನವೀಯಬೇಕು. ದೈನಂದಿನ ಜೀವನದಲ್ಲಿ ಜನಸಾಮಾನ್ಯರಿಗೆ ಪೆನ್ನು, ಪುಸ್ತಕ ಹಿಡಿದು

ಲೆಕ್ಕ ಮಾಡುವಂತಹ ಸಂದರ್ಭಗಳು ಬಹಳ ಕಡಿಮೆ ಒದಗುತ್ತವೆ. ಹೆಚ್ಚಾಗಿ ಮೌಖಿಕ ಲೆಕ್ಕಾಚಾರದಿಂದಲೇ ಕೆಲಸ ಮಾಡಬೇಕಾಗಿ ಬರುತ್ತದೆ. ಆದ್ದರಿಂದ ಸಮಸ್ಯೆಗಳಿಗೆ ಸಾಮಾನ್ಯವಾಗಿ ಮೌಖಿಕ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯವನ್ನು ಕಲಿಸಬೇಕು. ಈ ಮೌಖಿಕ ಅಭ್ಯಾಸವು ಲಿಖಿತ ಸವಾಲುಗಳನ್ನು ಆರೋಗ್ಯಪೂರ್ಣವಾಗಿ ಮತ್ತು ಸುಲಲಿತವಾಗಿ ಪರಿಹರಿಸಲು ಸಹಾಯಕವಾಗುವುದು. ಪ್ರತಿಯೊಂದು ಪಾಠದ ಕೆಲವು ಆರಂಭಿಕ ನಿಮಿಷಗಳನ್ನು ಮೌಖಿಕ ಸವಾಲುಗಳಿಗೆಂದೇ ಮೀಸಲಿರಿಸಬೇಕು. ಕೆಲವೊಮ್ಮೆ ಅದಕ್ಕಾಗಿ ಇಡೀ ಪೀರಿಯೆಡನ್ನು ಬಳಸಬಹುದಾಗಿದೆ. ಪ್ರಾರಂಭದ ತರಗತಿಗಳಲ್ಲಂತೂ ಪೀರಿಯೆಡ್‌ನ ಅರ್ಧ ಸಮಯವನ್ನು ಅದಕ್ಕಾಗಿ ಮೀಸಲಿಡಬೇಕಾಗಿದೆ.

• ವಾಕ್ಯಗಳಲ್ಲಿ ಕೇಳಲಾಗುವ ಪ್ರಶ್ನೆಯು ಚುಟುಕಾಗಿಯೂ ಸುಲಭವಾಗಿ ಅರ್ಥವಾಗುವಂತೆಯೂ ಇರಬೇಕು. ಮಕ್ಕಳು ಸ್ವಲ್ಪ ಮಟ್ಟಿನ ಪ್ರಯತ್ನದಿಂದ ಪರಿಹರಿಸುವಂತೆ ಇರಬೇಕು. ಕ್ರಮೇಣ ಕ್ಲಿಷ್ಟತೆ ತರಬೇಕು.

ಎಣಿಕೆ ಕಲಿಸುವುದು

• ಶಾಲೆಗೆ ಸೇರುವ ಮುನ್ನವೇ ಮಕ್ಕಳು ಅನೌಪಚಾರಿಕವಾದ ಎಣಿಕೆಯನ್ನು ಕಲಿತಿರುತ್ತಾರೆ. ಅವರು ಸಾಮಾನ್ಯವಾಗಿ ವಸ್ತುಗಳ ಪ್ರಮಾಣದಿಂದ ಅಂದಾಜಿಸುತ್ತಾರೆ. ಒಂದು ವಸ್ತುವಿನ ಬಗ್ಗೆ ಕಡಿಮೆ ಅಥವಾ ಹೆಚ್ಚು ಎಂಬ ಕಲ್ಪನೆಯನ್ನು ಅವರು ಹೊಂದಿರುತ್ತಾರೆ ಮತ್ತು ಅದರಲ್ಲಿಯೇ ಅವರು ತೃಪ್ತಿಪಟ್ಟಿರುತ್ತಾರೆ.

• ಮಕ್ಕಳು ಸ್ಪರ್ಶಿಸಬಲ್ಲ ಅಥವಾ ಅತ್ತಿತ್ತ ಹೊರಳಿಸಬಲ್ಲ ವಸ್ತುಗಳ ಸಹಾಯದಿಂದ ಎಣಿಕೆ ಆರಂಭಿಸಬೇಕು. ಉದಾ: ಹುಣಸೆ ಬೀಜಗಳು, ಗೋಲಿಗಳು ಇತ್ಯಾದಿ.

• ಎಣಿಕೆಯ ಪದ್ಯಗಳಿಂದಲೂ ಸಹಾಯ ಪಡೆಯಬಹುದು. ಉದಾ: ಒಂದು ಎರಡು-ಬಾಳೆಲೆ ಹರಡು, ಮೂರು ನಾಕು-ಅನ್ನ ಹಾಕು, ಐದು ಆರು-ಬೇಳೆಯ ಸಾರು ಹೀಗೆ...

• ಮೊದಲು ಐದರ ತನಕ, ನಂತರ ಹತ್ತರ ತನಕ ನೇರ ಮತ್ತು ವಿರುದ್ಧ ಎಣಿಕೆ ಮಾಡಿಸಿ ಬರೆಯಲು ಕಲಿಸಬೇಕು. ಕ್ರಮೇಣ ಹಂತಹಂತವಾಗಿ ಮುಂದುವರಿಯಬೇಕು. ಕ್ರಮಬದ್ಧವಾಗಿ ಬರೆಸಿದ ಬಳಿಕ, ಕ್ರಮ ತಪ್ಪಿಸಿಯೂ ಬರೆಯಲು ಅಭ್ಯಾಸ ಮಾಡಿಸಬೇಕು.

ನಾಲ್ಕು ಪ್ರತ್ಯೇಕ ಸೂತ್ರಗಳು

• ಎಣಿಕೆ ಕಲಿಸುವುದರ ಜತೆಗೆ ಹಂತಹಂತವಾಗಿ ಮೊತ್ತ, ವ್ಯತ್ಯಾಸಗಳನ್ನು ಕಲಿಸಿ ಕೊಡಬೇಕು. ವಸ್ತುಗಳ ಸಹಾಯವಿಲ್ಲದೆಯೂ ಲೆಕ್ಕ ಮಾಡಲು ಸಾಧ್ಯವಾಗುವಷ್ಟರ ವರೆಗೆ ಅಭ್ಯಾಸ ಮಾಡಿಸಬೇಕು. ಉದಾ: ಮೂರಕ್ಕಿಂತ ಎರಡು ಒಂದರಷ್ಟು ಕಡಿಮೆಯಿದೆ ಮತ್ತು ಎರಡಕ್ಕಿಂತ ಮೂರು ಒಂದರಷ್ಟು ದೊಡ್ಡದಿದೆ.

- ಸಂಕಲನ, ವ್ಯವಕಲನದಲ್ಲಿ ಬೆರಳುಗಳಿಂದ ಎಣಿಸಿ ಕಲಿಸಬೇಕು. ಆದರೆ ಕ್ರಮೇಣ ಈ ಅಭ್ಯಾಸವನ್ನು ಬಿಡಿಸಬೇಕು.
- ಬೆಂಕಿ ಪೊಟ್ಟಣದಿಂದ ಅಥವಾ ಖಾಲಿ ಡಬ್ಬಿಗಳಲ್ಲಿ ಹತ್ತು-ಹತ್ತು ಹುಣಸೆ ಬೀಜಗಳನ್ನು ಹಾಕಿ ದಶಕದ ಕಲ್ಪನೆಯನ್ನು ಮೂಡಿಸಬೇಕು. ಆಮೇಲೆ ಅವುಗಳಲ್ಲಿ ಒಂದೊಂದು ಸೇರಿಸುತ್ತ ಮುಂದಿನ ಎಣಿಕೆಯನ್ನು ಕಲಿಸಬೇಕು. ಬಾಲ್‌ಫ್ರೇಮ್‌ನ ಸಹಾಯದಿಂದಲೂ ಬಿಡಿ, ಹತ್ತುಗಳ ಕಲ್ಪನೆಗಳನ್ನು ಮೂಡಿಸಬಹುದು ಮತ್ತು ಅವುಗಳನ್ನು ಅಂಕೆಗಳಲ್ಲಿ ವ್ಯಕ್ತಪಡಿಸುವ ವಿಧಾನವನ್ನೂ ಕಲಿಸಬೇಕು.
- ಇಪ್ಪತ್ತರ ವರೆಗೆ ಎಣಿಕೆಯನ್ನು ಕಲಿಸಿದ ಬಳಿಕ ಎರಡೆರಡರ ಜೋಡಿಗಳನ್ನು ಮಾಡಿ ಎರಡರ ಮಗ್ಗಿಯನ್ನೂ ಹೇಳಿಕೊಡಬೇಕು ಮತ್ತು ಗುಣಿಸುವುದರ ಸುಲಭವಾದ ಉಪಾಯ ಮಗ್ಗಿಯಾಗಿದೆ ಎಂಬುದನ್ನು ವಿವಿಧ ಉದಾಹರಣೆಗಳ ಮುಖಾಂತರ ತಿಳಿಸಿ ಕೊಡಬೇಕು.
- ಹತ್ತು ಅಥವಾ ಕಡಿಮೆ ವಸ್ತುಗಳನ್ನು ತೆಗೆದು 2ರ, 3ರ, 4ರ ಗುಂಪುಗಳನ್ನಾಗಿ ಮಾಡಬೇಕು ಅಥವಾ ಅಷ್ಟು ಮಕ್ಕಳಲ್ಲಿ ವಿಂಗಡಿಸುವ ಮೂಲಕ ವಿಂಗಡನೆಯ ವಿಧಾನವನ್ನು ಕಲಿಸಿಕೊಡಬೇಕು. ಆದರೆ ಸಂಖ್ಯೆಯು ಸಂಪೂರ್ಣವಾಗಿ ವಿಂಗಡಿಸಲ್ಪಡುವಷ್ಟು ಇರಬೇಕು.
- ಮೊದಲ ವರ್ಷ ಈ ರೀತಿಯಾಗಿ 50ರ ವರೆಗಿನ ಎಣಿಕೆ, 5ರ ವರೆಗಿನ ಮಗ್ಗಿ, ಅದರೊಳಗಿನ ಸಂಕಲನ ಮತ್ತು ವ್ಯವಕಲನಗಳ ಪ್ರಶ್ನೆಗಳನ್ನು ಚೆನ್ನಾಗಿ ಅಭ್ಯಾಸ ಮಾಡಿಸಬೇಕು.
- ಜೋಡಿಯಲ್ಲಿ ಇಪ್ಪತ್ತರೊಳಗಿನ ಮತ್ತು ಇತರವುಗಳಲ್ಲಿ ಹತ್ತರೊಳಗಿನ ಪಟ್ಟಿ ರಚಿಸಿ ಕಂಠಪಾಠ ಮಾಡಿಸಬೇಕು. ಉದಾ: 1+1=2, 1+2=3, 1+3=4 ಇತ್ಯಾದಿ ಅಥವಾ 1-1=0, 2-1=1 ಇತ್ಯಾದಿ.
- ನಾಲ್ಕೂ ಸೂತ್ರಗಳನ್ನು ಎರಡನೆಯ ವರ್ಷದಲ್ಲಿ ಚೆನ್ನಾಗಿ ಕಲಿಸಬೇಕು. ಆದರೆ ಈ ಅಭ್ಯಾಸವನ್ನು ನಂತರದ ತರಗತಿಗಳಲ್ಲೂ ಜಾರಿಯಲ್ಲಿರಿಸಬೇಕು.

ಭಾಗಾಕಾರದ ಕಲ್ಪನೆ

ಹಣ್ಣು, ಚೌಕಾಕೃತಿಯ ಕಾಗದದ ತುಂಡು, ಕಟ್ಟಿಗೆಯ ತುಂಡು ಇತ್ಯಾದಿಗಳನ್ನು ಸಮಭಾಗದಲ್ಲಿ ತುಂಡರಿಸಿ $^1/_2$, $^1/_4$, 1 $^1/_2$ ಇತ್ಯಾದಿ ಪ್ರಮಾಣಗಳನ್ನು ಸುಲಭದಲ್ಲಿ ಕಲಿಸಬಹುದಾಗಿದೆ. ಕ್ರಮೇಣ ಹತ್ತರ ವರೆಗಿನ ಭಾಗಾಕಾರದ ಮಗ್ಗಿಯನ್ನು ಮಾಡಿ ಕಲಿಸಬೇಕು.

- ಕಾಗದದಲ್ಲಿ ಉದ್ದ ಮತ್ತು ಅಡ್ಡ ಗೆರೆಗಳನ್ನೆಳೆದು ಸಣ್ಣ ಕೋಷ್ಟಕವನ್ನು ಮಾಡಬೇಕು. ಅದರಲ್ಲಿ $^1/_2$, $^1/_4$, $^1/_8$ ಇತ್ಯಾದಿ ಕೋಣೆಗಳಾಗಿ ವಿಂಗಡಿಸಬೇಕು. ತರುವಾಯ ಆ ಕೋಣೆಗಳ ಆಧಾರದಲ್ಲಿ 1) $^1/_2+^1/_4=^3/_4$, 2) $^1/_2=^2/_4=^4/_8$, 3) $^1/_2$ ದ $^1/_2=^1/_4$, 4) $^1/_2/2=^1{}_4$ ಇತ್ಯಾದಿಗಳನ್ನು ಬರೆದು ಕಲಿಸಬೇಕು.

ಭೂಗೋಳ ಶಾಸ್ತ್ರ

ಅಲ್ಲಾಹ್ ಸಕಲ ವಿಶ್ವದ ಸೃಷ್ಟಿಕರ್ತ, ಪಾಲಕ, ಪ್ರಭುವಾಗಿದ್ದಾನೆ. ಅವನು ತನ್ನ ಅಪರಿಮಿತವಾದ ಸಾಮ್ರಾಜ್ಯದಲ್ಲಿನ ತೀರಾ ತುಚ್ಛ ಭಾಗವಾದ ಪೃಥ್ವಿಯಲ್ಲಿ ಮಾನವರನ್ನು ತನ್ನ ಪ್ರತಿನಿಧಿಗಳನ್ನಾಗಿ ಮಾಡಿದ್ದಾನೆ. ಭೂಮಿಯ ಮಣ್ಣಿನಿಂದಲೇ ಮಾನವನ ಸೃಷ್ಟಿಯಾಯಿತು. ಈ ಭೂಮಿಯಲ್ಲಿಯೇ ಮಾನವ ತನ್ನ ಜೀವಮಾನವಿಡೀ ಕಳೆಯುತ್ತಾನೆ. ಇದರ ಸಂಪನ್ಮೂಲಗಳಿಂದ ಪ್ರಯೋಜನ ಪಡೆಯುತ್ತಾನೆ. ತರತರವಾಗಿ ಉಪಯೋಗಿಸುತ್ತಾನೆ. ಕೊನೆಗೆ ಮರಣಹೊಂದಿದ ಬಳಿಕ ಇದರಲ್ಲಿಯೇ ದಫನವಾಗುತ್ತಾನೆ. ಒಟ್ಟಿನಲ್ಲಿ, ಪ್ರತಿನಿಧಿ ಎಂಬ ನೆಲೆಯಲ್ಲಿ ಈ ಪೃಥ್ವಿಯೇ ಮಾನವನ ಕರ್ಮಭೂಮಿಯಾಗಿದೆ. ಹಾಗಾಗಿ ಈ ಪೃಥ್ವಿಯ ಕುರಿತಾದ ಜ್ಞಾನ ಇರಬೇಕಾದುದು ಪ್ರತಿಯೊರ್ವನ ಅಗತ್ಯವಾಗಿದೆ.

ಭೂಗೋಳ ಶಾಸ್ತ್ರದ ಮುಖಾಂತರ ಪೃಥ್ವಿಯ ಸ್ಥಿತಿಗತಿಗಳನ್ನು ತಿಳಿಯಬಹುದಾಗಿದೆ. ವಿಶೇಷತಃ ಒಂದು ನಿರ್ದಿಷ್ಟ ಪರಿಸರದಲ್ಲಿ ಮಾನವನ ಜೀವನಕ್ರಮದ ಜ್ಞಾನ ದೊರೆಯುತ್ತದೆ. ಮಾನವನ ಜೀವನದ ಮೇಲೆ ಅಲ್ಲಿನ ಪ್ರಾಕೃತಿಕ ಪರಿಸರ, ನೆಲದ ವಿಸ್ತಾರ, ಹವಾಗುಣ, ಸಸ್ಯಗಳು, ಉತ್ಪಾದನೆಗಳು, ಪ್ರಾಣಿಗಳು ಇತ್ಯಾದಿ ಪ್ರಭಾವ ಬೀರಿರುತ್ತವೆ. ಭೂಗೋಳ ಶಾಸ್ತ್ರದಿಂದ ಇವುಗಳ ಜ್ಞಾನವೂ ದೊರೆಯುತ್ತದೆ.

ವಿವಿಧ ಕಲೆ, ಕೌಶಲ್ಯಗಳ ಸಹಾಯದಿಂದ ಮಾನವನು ತನ್ನ ಪರಿಸರದಲ್ಲಿ ತರತರವಾದ ಪರಿವರ್ತನೆಗಳನ್ನುಂಟು ಮಾಡಿದ್ದಾನೆ. ಮಾನವನ ಜೀವನಕ್ರಮದ ಮೇಲೆ ಅವನ ಪರಿಸರದ ಪ್ರಭಾವ ಮತ್ತು ಪರಿಸರದ ಮೇಲೆ ಅವನ ಪ್ರಯತ್ನಗಳ ಪ್ರಭಾವಗಳ ಜ್ಞಾನವು ಭೂಗೋಳ ಶಾಸ್ತ್ರದ ಮುಖಾಂತರವೇ ದೊರೆಯಬಲ್ಲುದು. ಆದ್ದರಿಂದ ಭೂಗೋಳದ ಅಧ್ಯಯನ ತೀರಾ ಅಗತ್ಯವಾಗಿದೆ.

ಆರಂಭಿಕ ತರಗತಿಗಳಲ್ಲಿ, ಸ್ಥಾನೀಯ, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಭೌಗೋಳಿಕ ಸ್ಥಿತಿಗತಿಗಳ ಬಗ್ಗೆ; ಜಗತ್ತಿನ ವಿಭಿನ್ನ ಪರಿಸರಗಳಲ್ಲಿ ವಾಸಿಸುವ ಮಕ್ಕಳ ರೂಪ, ವಸ್ತ್ರ ಜೀವನಕ್ರಮ ಇತ್ಯಾದಿಗಳ ಮಾಹಿತಿ ಹಾಗೂ ಯಾತ್ರಿಕರ ಪ್ರವಾಸಕಥನ ಮತ್ತು ಅಭಿಯಾನಗಳ ಮುಖಾಂತರ ಇರುವ ಜಗತ್ತಿನ ಸಂಕ್ಷಿಪ್ತ ಪರಿಚಯ ಇತ್ಯಾದಿಗಳು ಪಠ್ಯದಲ್ಲಿರುತ್ತವೆ.

ಬೋಧನಾ ವಿಧಾನ

- ಪರಿಸರದ ಭೌಗೋಳಿಕ ಸ್ಥಿತಿಗತಿ, ಭೂಮಿಯಲ್ಲಿ ಪ್ರಕೃತಿಯ ಪ್ರಭಾವ, ಅಂತೆಯೇ ಪರಿಸರವನ್ನು ಅನುಕೂಲಕರಗೊಳಿಸುವ ನಿಟ್ಟಿನಲ್ಲಿ ಮಾನವನ ಪ್ರಯತ್ನಗಳ ಬಗ್ಗೆ ತಿಳಿಸಲಿಕ್ಕಾಗಿ, ಕೆಲವೊಮ್ಮೆ ಮಕ್ಕಳನ್ನು ಹೊರಗೆ ಕರಕೊಂಡು ಹೋಗಬೇಕು. ನದಿ-ನಾಲೆ, ಹೊಲ-ಗದ್ದೆ, ಮಾರುಕಟ್ಟೆ, ಮಿಲ್ಲು-ಕಾರ್ಖಾನೆ ಇತ್ಯಾದಿಗಳನ್ನು ತೋರಿಸಬೇಕು.
- ವಿಷಯವನ್ನು ಸ್ಪಷ್ಟಪಡಿಸಲು ಚಿತ್ರ, ಚಾರ್ಟ್, ಗೋಳ, ನಕ್ಷೆ, ಮಾಡೆಲ್ ಮತ್ತು

ಉಪಲಬ್ಧವಿದ್ದರೆ ಮ್ಯಾಜಿಕ್ ಲ್ಯಾಂಟರ್ನ್ ಇತ್ಯಾದಿಗಳಿಂದಲೂ ಸಹಾಯ ಪಡೆಯಬಹುದು.

- ಜಗತ್ತಿನ ವಿವಿಧ ಪ್ರದೇಶಗಳ ಮಕ್ಕಳಿಗೆ ಸಂಬಂಧಿಸಿದ ಸಂಗತಿಗಳನ್ನು ಭೌಗೋಳಿಕ ಕಥೆಗಳ ಮುಖಾಂತರ ತಿಳಿಸಿ ಕೊಡಬೇಕು.
- ಪ್ರವಾಸ ಕಥನ ಮತ್ತು ನೆಲ-ಜಲ-ವಾಯುಯಾನ, ಪರ್ವತಾರೋಹಣ ಇತ್ಯಾದಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಮಾತುಕತೆಯ ರೂಪದಲ್ಲಿ ಹೇಳಿಕೊಡಬೇಕು.
- ಆತ್ಮಕತೆಯ ರೂಪದಲ್ಲಿ ವಿವಿಧ ಉತ್ಪನ್ನಗಳು, ಪ್ರಕೃತಿ ದೃಶ್ಯಾವಳಿಗಳು, ನದಿ-ನದ ಇತ್ಯಾದಿಗಳಿಗೆ ಸಂಬಂಧಿಸಿದ ಸಂಗತಿಗಳನ್ನು ತಿಳಿಸಿ ಕೊಡಬೇಕು. ಕೊನೆಗೆ ಖಂಡಗಳ ಆಧಾರದಲ್ಲಿ ಇಡೀ ಜಗತ್ತಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಸಂಕ್ಷಿಪ್ತವಾಗಿ ಹೇಳಬೇಕು.
- ವಿವಿಧ ಲೋಹ-ಖನಿಜಗಳು, ಧಾನ್ಯಗಳು, ಬೀಜಗಳು ಮತ್ತಿತರ ವಿವಿಧ ಉತ್ಪನ್ನಗಳ ಮಾದರಿಗಳನ್ನು ಹಾಗೂ ದೇಶ-ವಿದೇಶಗಳ ಅಂಚೆಚೀಟಿಗಳನ್ನು ಸಂಗ್ರಹಿಸುವ ವ್ಯವಸ್ಥೆ ಮಾಡಬೇಕು.
- ಕೋಣೆಯನ್ನು ಭೂಗೋಳಶಾಸ್ತ್ರಕ್ಕೆ ಸಂಬಂಧಿಸಿದ ಚಿತ್ರ, ದೃಶ್ಯಾವಳಿ, ಚಾರ್ಟ್, ಭೂಪಟ ಇತ್ಯಾದಿಗಳಿಂದ ಅಲಂಕರಿಸಬೇಕು. ಅಗತ್ಯಾನುಸಾರ ಅವುಗಳಿಂದಲೂ ಸಹಾಯ ಪಡೆಯಬಹುದು.

ವಿಜ್ಞಾನ

ಇದರಲ್ಲಿ (1) ಆರೋಗ್ಯ ರಕ್ಷಣೆ (2) ಅಂಗಾಂಗ ರಚನೆ/ಕ್ರಿಯೆಗಳು (3) ಪ್ರಕೃತಿ ಅಧ್ಯಯನ (4) ಭೌತಶಾಸ್ತ್ರ (5) ಭೂಗರ್ಭಶಾಸ್ತ್ರ (6) ಖಗೋಳಶಾಸ್ತ್ರ (7) ರಸಾಯನ ಶಾಸ್ತ್ರ ಇತ್ಯಾದಿಗಳ ಕುರಿತ ಅಗತ್ಯದ ಮಾಹಿತಿಗಳು ಸೇರಿವೆ. ಇವುಗಳಿಂದ ಮಕ್ಕಳಿಗೆ ತಮ್ಮ ದೇಹ, ಪ್ರಾಕೃತಿಕ ಪರಿಸರ-ದೃಶ್ಯಾವಳಿಗಳು, ಆರೋಗ್ಯಪೂರ್ಣ ಅಭ್ಯಾಸಗಳು ಮತ್ತು ಮುಂಜಾಗ್ರತಾ ಕ್ರಮ ಇತ್ಯಾದಿಗಳ ಬಗ್ಗೆ ಮಾಹಿತಿ ದೊರೆಯುತ್ತದೆ.

ಉದ್ದೇಶಗಳು

ಉಪಯುಕ್ತ ವಿಷಯವನ್ನು ಬೋಧಿಸುವಾಗ ಈ ಕೆಳಗೆ ನೀಡಲಾಗಿರುವ ಉದ್ದೇಶಗಳನ್ನು ಗಮನದಲ್ಲಿರಿಸಬೇಕು.

1. ಪ್ರಕೃತಿಯಲ್ಲಿ ಕಾಣಬರುವ ವಿಭಿನ್ನ ರೀತಿಯ ದೃಷ್ಟಾಂತಗಳನ್ನು ತೋರಿಸಿ ವಿಶ್ವದ ಸೃಷ್ಟಿಕರ್ತನ ಗುಣವಿಶೇಷಗಳನ್ನು ವಿದ್ಯಾರ್ಥಿಗಳಿಗೆ ಮನನ ಮಾಡಿಸುವುದು.

2. ಸುತ್ತಮುತ್ತಲ ಜೀವಿಗಳು, ಸಸ್ಯಗಳು, ಜಡವಸ್ತುಗಳು, ಪ್ರಾಕೃತಿಕ ದೃಶ್ಯಾವಳಿ ಇತ್ಯಾದಿಗಳನ್ನು ವೀಕ್ಷಿಸುವ ಅಭ್ಯಾಸ ಮಾಡಿಸುವುದು. ಅವುಗಳಿಗೆ ಸಂಬಂಧಿಸಿದ ಅಗತ್ಯ ಮಾಹಿತಿಗಳನ್ನು ಒದಗಿಸುವುದು. ಊಹನೆ ಮತ್ತು ಅಜ್ಞಾನಜನ್ಯ ವಿಶ್ವಾಸಗಳಿಂದ ದೂರವಿರಿಸಲಿಕ್ಕಾಗಿ, ವಿದ್ಯಾರ್ಥಿಗಳಿಗೆ ಪ್ರಕೃತಿಯ ನಿರ್ಮಾತೃ ನಿಶ್ಚಯಿಸಿರುವ ಕಾನೂನುಗಳನ್ನು ತಿಳಿಸಿ ಕೊಡುವುದು.

3. ದೇಹರಚನೆ, ಅಂಗಾಂಗಗಳ ಕೆಲಸಗಳು, ಆರೋಗ್ಯ ರಕ್ಷಣೆಯ ಸೂತ್ರಗಳು, ಪ್ರಥಮ ಚಿಕಿತ್ಸಾ ಸಹಾಯ ಮತ್ತು ಮುಂಜಾಗ್ರತಾ ಕ್ರಮಗಳನ್ನು ತಿಳಿಸಿ ಕೊಡುವುದು.

4. ವಿಶ್ವದ ಸೃಷ್ಟಿಕರ್ತನು ದಯಪಾಲಿಸಿರುವ ಅಪರಿಮಿತ ಕೊಡುಗೆಗಳ ಮೌಲ್ಯ-ಮಹತ್ವಗಳನ್ನು ಅರಿಯಲು ಮತ್ತು ಅವುಗಳನ್ನು ಬಳಸಿ ಮಾನವ ಕುಲಕ್ಕೆ ಲಾಭ-ನಷ್ಟಗಳನ್ನು ತಂದೊಡ್ಡುವಂತಹ ಮಾನವೀಯ ಪ್ರಯತ್ನಗಳ ಸಮಗ್ರ ಅವಲೋಕನ ನಡೆಸಲು ಯೋಗ್ಯರನ್ನಾಗಿಸುವುದು.

5. ವಿದ್ಯಾರ್ಥಿಗಳ ಸ್ವಾಭಾವಿಕ ಕುತೂಹಲವನ್ನು ಕೆರಳಿಸುವುದು ಮತ್ತು ಅದರ ಸಾಂತ್ವನಕ್ಕೆ ಅವಕಾಶವೊದಗಿಸುವುದು. ವಿವಿಧ ವಸ್ತುಗಳಿಗೆ ಸಂಬಂಧಿಸಿ ಏನು, ಏಕೆ, ಹೇಗೆ ಎಂಬಿತ್ಯಾದಿ ಪ್ರಶ್ನೆಗಳ ಪರಿಹಾರ ಈ ಮೂಲಕ ದೊರೆಯಬಲ್ಲುದು.

ಬೋಧನಾ ವಿಧಾನ

- ವಿಜ್ಞಾನ ಪಾಠಗಳಲ್ಲಿ ಸಾಧ್ಯವಿರುವ ಮಟ್ಟಿಗೆ ವೀಕ್ಷಣೆ-ಅನುಭವ ಅಥವಾ ಪ್ರಯೋಗ ಮಾಡುವ ಮೂಲಕ ಒಂದು ಫಲಿತಾಂಶಕ್ಕೆ ತಲುಪಲು ಹೆಚ್ಚೆಚ್ಚು ಅವಕಾಶ ನೀಡಬೇಕು. ಕೇವಲ ಮೌಖಿಕ ಪಾಠ ಕಲಿಸುವುದಕ್ಕೆ ಸೀಮಿತವಾಗಬಾರದು.
- ಯಾವ ವಸ್ತುಗಳ ವೀಕ್ಷಣೆ-ಪ್ರಯೋಗ ಸಾಧ್ಯವಿಲ್ಲವೋ ಅವುಗಳ ಮಾದರಿ, ಚಾರ್ಟ್, ಚಿತ್ರ ಇತ್ಯಾದಿಗಳನ್ನು ಒದಗಿಸಿಕೊಡಬೇಕು. ಇದರಿಂದ ಅವುಗಳ ಕುರಿತಾದ ಸ್ಪಷ್ಟಕಲ್ಪನೆ ಬೆಳೆಯಬಹುದು.
- ವೀಕ್ಷಣೆಗಾಗಿ ಕೆಲವೊಮ್ಮೆ ವಿದ್ಯಾರ್ಥಿಗಳನ್ನು ಹೊರಗೆ ಹೊಲ-ಗದ್ದೆ, ತೋಟ, ನದಿ ಇತ್ಯಾದಿಗಳೆಡೆಗೆ ಕರೆದುಕೊಂಡು ಹೋಗಬೇಕು. ಪ್ರೇಕ್ಷಣೀಯ ಅಂಶಗಳೆಡೆಗೆ ವಿಶೇಷ ಗಮನವನ್ನು ಸೆಳೆಯಬೇಕು.
- ದೇಹರಚನೆ, ಅಂಗಾಂಗಗಳ ಕಾರ್ಯ ವೈಖರಿ ಮತ್ತು ಆರೋಗ್ಯ ಸಂರಕ್ಷಣೆಯ ನೀತಿಗಳನ್ನು ಚೆನ್ನಾಗಿ ಮನವರಿಕೆ ಮಾಡಿಸಿ ಕೊಟ್ಟ ಮೇಲೆ ಆರೋಗ್ಯಪೂರ್ಣ ಅಭ್ಯಾಸಗಳ ಪಾಲನೆ, ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಮತ್ತು ಪ್ರಥಮ ಚಿಕಿತ್ಸೆಗೆ ಸಂಬಂಧಿಸಿ ಪ್ರಾಯೋಗಿಕ ತರಬೇತಿ ನೀಡಬೇಕು.

- ಪ್ರತಿಯೊಂದು ಶಾಲೆಯಲ್ಲೂ ಸಣ್ಣದಾದ ವಸ್ತು ಸಂಗ್ರಹಾಲಯವಿರಬೇಕು. ಅದರಲ್ಲಿ ಕ್ರಮೇಣ ವಿದ್ಯಾರ್ಥಿಗಳ ಸಹಾಯದಿಂದ ಕಪ್ಪೆಚಿಪ್ಪು, ಬಸವನಹುಳದ ಚಿಪ್ಪು, ಹಕ್ಕಿಪುಕ್ಕ, ಹೂವು, ಎಲೆ, ತರತರವಾದ ಬೀಜ, ಲೋಹಗಳ ತುಂಡು ಅಥವಾ ಜಾನುವಾರುಗಳ ಅಸ್ಥಿಪಂಜರ, ಅಪರೂಪದ ವಸ್ತುಗಳ ಮಾದರಿ, ಪೋಸ್ಟರ್, ಚಿತ್ರ ಇತ್ಯಾದಿಗಳನ್ನು ಸೇರಿಸಿ, ಅವುಗಳನ್ನು ಓರಣವಾಗಿ ಇಡಬೇಕು. ವಸ್ತು ಸಂಗ್ರಹಾಲಯಕ್ಕೆ ಪ್ರತ್ಯೇಕವಾದ ಕೋಣೆ ಇದ್ದರೆ ಉತ್ತಮ. ಅನ್ಯಥಾ ತರಗತಿ ಕೋಣೆಗಳ ಶೆಲ್ಫ್, ಕಪಾಟು ಇತ್ಯಾದಿಗಳಲ್ಲಿ ಅವುಗಳನ್ನು ಇರಿಸಬೇಕು. ಇದು ನೋಡಿ ಕಲಿಯಲು ಸುಲಭ ಸಾಧನವಾಗಿದೆ.
- ಪ್ರತಿಯೊಂದು ಶಾಲೆಗೂ ಒಂದು ಹೂದೋಟವಿದ್ದರೆ ಚೆನ್ನ. ಅದರಲ್ಲಿ ತರತರದ ಹೂಗಿಡಗಳನ್ನು ಬೆಳೆಸುವ ಮತ್ತು ಸಾಕುಪ್ರಾಣಿ-ಪಕ್ಷಿಗಳನ್ನು ಇರಿಸುವ ವ್ಯವಸ್ಥೆಯಾಗಬೇಕು. ಅವುಗಳನ್ನು ನೋಡಿಕೊಳ್ಳುವ ಹೊಣೆ ಹೆಚ್ಚಿನ ಪಾಲು ವಿದ್ಯಾರ್ಥಿಗಳಿಗಿರಬೇಕು.
- ಪ್ರಯೋಗಗಳಿಗೆ ಅಗ್ಗದ ಕೆಲವು ಸಾಮಗ್ರಿಗಳನ್ನು ಒದಗಿಸಿ ಕೊಡಬೇಕು.

◆ ◆ ◆

ಅಧ್ಯಾಯ-37

ಶಿಕ್ಷಣ-ತರಬೇತಿ ಮತ್ತು ಇಸ್ಲಾಮೀ ಚಿಂತಕರು

ಶಿಕ್ಷಣ-ತರಬೇತಿಗೆ ಸಂಬಂಧಿಸಿ ಹಲವು ಮಂದಿ ಇಸ್ಲಾಮೀ, ಚಿಂತಕರ ಹೇಳಿಕೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡುತ್ತಿದ್ದೇವೆ:

- ವಿದ್ಯೆಯು ಪ್ರವಾದಿಗಳ ವಾರೀಸಾಗಿದೆ ಮತ್ತು ಸಂಪತ್ತು ನಿಷೇಧಿಗಳ, ಫಿರ್‌ಔನ್, ಕಾರೂನ್ ಮತ್ತಿತರರ ಸೊತ್ತು. -ಖಲೀಫ ಅಬೂಬಕರ್(ರ)
- ಲೋಕಾರಾಧಕನಿಗೆ ವಿದ್ಯೆ ನೀಡುವುದೆಂದರೆ ಡಕಾಯಿತನ ಕೈಗೆ ಖಡ್ಗ ಕೊಟ್ಟಂತೆ.- ಖಲೀಫಾ ಉಮರ್(ರ)
- ಕರ್ಮವಿಲ್ಲದ ವಿದ್ಯೆಯು ವ್ಯರ್ಥ -ಖಲೀಫಾ ಉಸ್ಮಾನ್(ರ)
- ಸಜ್ಜನಿಕೆಯು ಜ್ಞಾನ ಮತ್ತು ಶಿಷ್ಟಾಚಾರದಲ್ಲಿದೆ, ಸಂಪತ್ತು ಹಾಗೂ ವಂಶಗಳಲ್ಲಿಲ್ಲ. - ಖಲೀಫಾ ಅಲೀ(ರ)
- ಪ್ರಶ್ನಿಸುವ ನಾಲಗೆ ಮತ್ತು ಆಲೋಚಿಸುವ ಮನ-ಮಸ್ತಿಷ್ಕಗಳಿಂದ ನಾನು ವಿದ್ಯೆ ಗಳಿಸಿರುವೆನು. -ಇಬ್ನು ಅಬ್ಬಾಸ್(ರ)
- ನಾನು ಒಂದು ವಿಷಯವನ್ನು ಅರ್ಥ ಮಾಡಿಕೊಂಡಾಗ ಮತ್ತು ಅದರ ಸೂಕ್ಷ್ಮತೆ ಹಾಗೂ ಯುಕ್ತತೆಯನ್ನು ಅರಿತಾಗ ಅಲ್‌ಹಮ್ದುಲಿಲ್ಲಾಹ್ ಎನ್ನುತ್ತೇನೆ. ಹಾಗಾಗಿ ನನ್ನ ಜ್ಞಾನದಲ್ಲಿ ಪ್ರಗತಿಯುಂಟಾಗಿದೆ. -ಇಮಾಮ್ ಅಬೂ ಹನೀಫಾ(ರ)
- ಏಕಾಂತದಲ್ಲಿ ಉಪದೇಶಿಸುವುದು ಮತ್ತು ತಿಳಿ ಹೇಳುವುದು ಸಜ್ಜನಿಕೆಯ ಲಕ್ಷಣ ಹಾಗೂ ಸುಧಾರಣೆಯ ಆಧಾರವಾಗಿದೆ. -ಇಮಾಮ್ ಶಾಫಿಈ(ರ)
- ಇತರರ ಮೂಲಕ ವಿದ್ಯೆಗಳಿಸುವುದರಿಂದ ಮತ್ತು ಇತರರಿಗೆ ವಿದ್ಯೆ ಕಲಿಸುವುದರಿಂದ ಹಿಂಜರಿಯದಿರುವ ಮೂಲಕ ನಾನು ಜ್ಞಾನವನ್ನು ಗಳಿಸಿದೆ. -ಇಮಾಮ್ ಅಬೂಯೂಸುಫ್(ರ)
- ನಮ್ಮ ಈ ಕಾರ್ಯವು (ವಿದ್ಯಾರ್ಜನೆಯು) ಬಾಲ್ಯದಿಂದ ಮರಣದ ವರೆಗಿರುತ್ತದೆ. ಯಾರಾದರೂ ಇದನ್ನು ಕ್ಷಣದ ಮಟ್ಟಿಗಾದರೂ ತೊರೆಯ ಬಯಸಿದರೆ, ಆ ಕ್ಷಣವೇ

ಆವನನ್ನು ತೊರೆಯಲಿ (ಅಂದರೆ ಮರಣ ಹೊಂದಿದರೆ ಉತ್ತಮ)

–ಇಮಾಮ್ ಮುಹಮ್ಮದ್(ರ)

- ಅಲ್ಲಾಹನಾಣೆ! ನನಗೆ ಆಹಾರ ಸೇವಿಸುವಷ್ಟು ಸಮಯ ವಿದ್ಯಾರ್ಜನೆಯು ತಪ್ಪುವುದರ ಬಗ್ಗೆ ಖೇದವಿದೆ. ಏಕೆಂದರೆ ಬಿಡುವಿನ ಸಮಯವು ಬಹಳ ಮಹತ್ವ ಪೂರ್ಣವಾಗಿರುತ್ತದೆ. –ಇಮಾಮ್‌ರಾಝೀ(ರ)
- ಪಾಠದ ಪ್ರಮಾಣವು ಆರಂಭದಲ್ಲಿ ಕೇವಲ ಎರಡು ಬಾರಿ ಹೇಳಿಕೊಡುವುದರಿಂದ ಮನನವಾಗುವಷ್ಟು ಸಂಕ್ಷಿಪ್ತವಾಗಿರಬೇಕು. –ಇಮಾಮ್ ಝುರಂಜೀ(ರ)

ಇಮಾಮ್ ಗಝ್ಝಾಲಿ ರಹ್ಮತುಲ್ಲಾಹಿ ಅಲೈಹಿ

- ಮಗುವಿನ ಶಿಕ್ಷಣ-ತರಬೇತಿಯು ಅತ್ಯಂತ ಪ್ರಮುಖ ಕರ್ತವ್ಯವಾಗಿದೆ. ಮಗು ಮಾತಾಪಿತರ ಬಳಿ ಇರುವ ಅಮಾನತಾಗಿದೆ. ಅದರ ಹೃದಯವು ಉತ್ಕೃಷ್ಟ ರತ್ನದಂತೆ ಸ್ವಚ್ಛ, ಸರಳ ಹಾಗೂ ಮುಗ್ಧವಾಗಿರುತ್ತದೆ. ಎತ್ತ ತಿರುಗಿಸಿದರೂ ಅತ್ತ ಒಲವು ಹೊಂದುತ್ತದೆ. ಉದಾ: ಒಳಿತಿನ ಶಿಕ್ಷಣ ನೀಡಿದರೆ ಮತ್ತು ಒಳಿತನ್ನೇ ಅಭ್ಯಾಸ ಮಾಡಿಸಿದರೆ, ಮಗು ಬೆಳೆದು ಹಾಗೆಯೇ ಆಗುತ್ತದೆ ಮತ್ತು ಇಹಪರಗಳಲ್ಲಿ ಯಶಸ್ಸನ್ನು ಹೊಂದುತ್ತದೆ. ಈ ಪ್ರತಿಫಲದಲ್ಲಿ ಮಾತಾಪಿತರು, ಅಧ್ಯಾಪಕರು ಮತ್ತು ಮಾರ್ಗದರ್ಶಕರು ಎಲ್ಲರೂ ಶಾಮೀಲಾಗುತ್ತಾರೆ. ಒಂದು ವೇಳೆ ಕೆಡುಕನ್ನು ಅಭ್ಯಾಸ ಮಾಡಿಕೊಂಡರೆ ಮತ್ತು ಜಾನುವಾರುಗಳಂತೆ ಬೇಕಾಬಿಟ್ಟಿಯಾಗಿ ತಿರುಗಲು ಬಿಟ್ಟರೆ, ಆತ ನಾಶವಾಗಿ ಬಿಡುತ್ತಾನೆ. ಆದರ ಕೇಡು ಆತನ ಮಾರ್ಗದರ್ಶಕರೆಲ್ಲರ ಮೇಲಿರುವುದು.
- ಮಗು ಏನಾದರೂ ಒಳಿತನ್ನು ಮಾಡಿದರೆ ಅದಕ್ಕೆ ಪ್ರತಿಯಾಗಿ ಬಹುಮಾನ ನೀಡಬೇಕು ಮತ್ತು ಜನರ ಮುಂದೆ ಮಗುವನ್ನು ಪ್ರಶಂಸಿಸಬೇಕು. ಇದರಿಂದ ಮಗುವಿಗೆ ಸಂತೋಷವಾಗುತ್ತದೆ. ಎಂದಾದರೂ ತಪ್ಪು ಸಂಭವಿಸಿ ಬಿಟ್ಟರೆ ಅದನ್ನು ಮರೆಮಾಚಬೇಕು. ಅದನ್ನು ಎಲ್ಲರ ಮುಂದೆ ಹೇಳಬಾರದು. ವಿಶೇಷತಃ ಮಗು ಸ್ವಯಂ ಆ ಕಾರ್ಯವನ್ನು ಮರೆಮಾಚಲು ಪ್ರಯತ್ನಿಸಿದಾಗ. ಏಕೆಂದರೆ, ಒಂದು ವೇಳೆ ತನ್ನ ತಪ್ಪು ಎಲ್ಲರಿಗೆ ತಿಳಿದ ಬಳಿಕವೂ ಏನೂ ಸಂಭವಿಸದು ಎಂದು ಮಗುವಿಗೆ ಮನವರಿಕೆಯಾಗಿ ಬಿಟ್ಟರೆ, ಮುಂದೆಯೂ ಅಂತಹ ತಪ್ಪನ್ನು ಎಸಗುವುದರಿಂದ ಹಿಂಜರಿಯಲಾರದು. ಇತರರಿಗೆ ತಿಳಿದು ಬಿಡುವುದೋ ಎಂಬ ಭಯವೂ ಇರುವುದಿಲ್ಲ, ಹಾಗಾಗಿ ಎರಡನೆಯ ಬಾರಿ ಅಂತಹ ತಪ್ಪು ಸಂಭವಿಸುವಾಗ, ಏಕಾಂತದಲ್ಲಿ ಆ ಬಗ್ಗೆ ಗದರಿಸಬೇಕು ಮತ್ತು ಇನ್ನೊಮ್ಮೆ ಹಾಗೆ ಮಾಡಿದರೆ ಎಲ್ಲರ ಮುಂದೆ ಅವಮಾನಿಸುತ್ತೇನೆ ಎಂದು ಹೆದರಿಸಬೇಕು.
- ಮಗುವನ್ನು ಯಾವಾಗಲೂ ಗದರಿಸುತ್ತಾ, ಹೊಡೆಯುತ್ತಾ ಇರಬಾರದು. ಏಕೆಂದರೆ ಮಗುವಿಗೆ ಈ ಗದರಿಕೆ, ಹೊಡೆತವು ಅಭ್ಯಾಸವಾಗಿ ಬಿಡುತ್ತದೆ. ಕೆಟ್ಟ ಕೃತ್ಯಗಳನ್ನು

ಬಹಿರಂಗವಾಗಿ ಮಾಡಲು ತೊಡಗುತ್ತದೆ ಮತ್ತು ಉಪದೇಶದಿಂದ ಯಾವುದೇ ಪ್ರಭಾವವನ್ನು ಪಡೆಯುವುದಿಲ್ಲ.

• ಮಗುವನ್ನು ಮದ್ರಸಕ್ಕೆ ಕಳುಹಿಸಿ ಕುರ್‌ಆನ್, ಹದೀಸ್ ಮತ್ತು ಸಜ್ಜನರ ವೃತ್ತಾಂತಗಳ ಶಿಕ್ಷಣ ನೀಡಬೇಕು. ಇದರಿಂದ ಸಜ್ಜನಿಕೆಯ ಮೇಲೆ ಪ್ರೀತಿ ಹುಟ್ಟಿಕೊಳ್ಳುತ್ತದೆ.

• ತರಗತಿ ಮತ್ತು ಬಿಡುವಿನ ಶಿಷ್ಟಾಚಾರವನ್ನು ಕಲಿಸಿಕೊಡಬೇಕು. ಹೆಚ್ಚು ಮಾತನಾಡುವುದಿರಿಂದ ತಡೆಯಬೇಕು.

• ಎಲ್ಲರಿಗಿಂತ ಮೊದಲು ಹೇಳದೆ, ಇತರರ ಮಾತನ್ನು ಗಮನವಿಟ್ಟು ಆಲಿಸುವ, ತನಗಿಂತ ಹಿರಿಯರನ್ನು ಎದ್ದುನಿಂತು ಗೌರವಿಸುವ ಹಾಗೂ ಅವರಿಗೆ ಜಾಗ ಕಲ್ಪಿಸಿ ಕೊಡುವ ಅಭ್ಯಾಸ ಮಾಡಿಸಬೇಕು.

• ಪಾಠಶಾಲೆಯಿಂದ ಬಂದ ಬಳಿಕ ಮಕ್ಕಳಿಗೆ ಉತ್ತಮ ಆಟದ ಅವಕಾಶ ನೀಡಬೇಕು. ಇದರಿಂದ ಕಲಿಕೆಯ ದಣಿವಿನಿಂದ ಸುಧಾರಿಸಿಕೊಳ್ಳಲು ಸಮಯ ದೊರೆಯುತ್ತದೆ. ಅನ್ಯಥಾ ದಣಿವು ಅವರ ಮನಸ್ಸನ್ನು ಬಾಧಿಸಬಹುದು. ಒಂದು ವೇಳೆ ಆಟಕ್ಕೆ ಅವಕಾಶ ನೀಡದೆ, ಕೇವಲ ಕಲಿಕೆಯಲ್ಲಿಯೇ ಮುಳುಗಿಸಿ ಬಿಟ್ಟರೆ ಮಗುವಿನ ಮನಸ್ಸು ಮುದುಡಿಕೊಳ್ಳುತ್ತದೆ. ಅದರ ಬುದ್ಧಿಯು ಮಂದವಾಗುತ್ತದೆ. ಜೀವನವು ದುರ್ಭರವಾಗುತ್ತದೆ. ಎಲ್ಲಿಯ ವರೆಗೆಂದರೆ, ಮಗು ಶಿಕ್ಷಣದಿಂದ ದೂರ ಓಡುವ ಮತ್ತು ಪಲಾಯನದ ದಾರಿಯನ್ನು ಹುಡುಕ ತೊಡಗುತ್ತದೆ.

• ಮಕ್ಕಳಿಗೆ ಮಾತಾಪಿತರ, ಅಧ್ಯಾಪಕರ ಅನುಸರಣೆಯನ್ನು ಅಭ್ಯಾಸ ಮಾಡಿಸಬೇಕಾದುದು ಅಗತ್ಯವಾಗಿದೆ. ಅಲ್ಲದೆ ತನಗಿಂತ ಹಿರಿಯರನ್ನು ಗೌರವಿಸಲು ಕಲಿಸಬೇಕು. ಅವರು ತಮ್ಮವರಿರಲಿ, ಅನ್ಯರಿರಲಿ.

• ಬಾಲ್ಯದಲ್ಲಿಯೇ ಮಕ್ಕಳಿಗೆ ತರಬೇತಿ ನೀಡುವುದು ತೀರಾ ಅಗತ್ಯವಾಗಿದೆ. ಏಕೆಂದರೆ ಬಾಲ್ಯಕಾಲದಲ್ಲಿ ಮಕ್ಕಳ ಮನಸ್ಸು ಎಲ್ಲ ತರದ ಪ್ರತಿಭೆಯನ್ನು ಹೊಂದಿರುತ್ತದೆ. ಒಳಿತು-ಕೆಡುಕು ಎರಡನ್ನೂ ಕಲಿಯುತ್ತಾರೆ. ಹಾಗಾಗಿ ಮಕ್ಕಳನ್ನು ಯಾವ ದಿಕ್ಕಿನಲ್ಲಿ ಕೊಂಡೊಯ್ಯಬೇಕು ಎಂಬುದು ಮಾತಾಪಿತರ ಕೈಯಲ್ಲಿದೆ.

• ಒಂದು ವೇಳೆ ವೈದ್ಯನೋರ್ವನು ಎಲ್ಲ ರೀತಿಯ ರೋಗಗಳಿಗೂ ಒಂದೇ ಮದ್ದನ್ನು ನೀಡಿದರೆ ಮತ್ತು ಒಂದೇ ರೀತಿಯ ಚಿಕಿತ್ಸೆ ನೀಡಿದರೆ, ಆತ ಹೆಚ್ಚಿನವರ ನಾಶಕ್ಕೆ ಹೇತುವಾಗುತ್ತಾನೆ. ಅಧ್ಯಾಪಕ ಮತ್ತು ಮಾರ್ಗದರ್ಶಕನ ಅವಸ್ಥೆಯೂ ಅದುವೇ ಆಗಿದೆ. ಆತನು ತನ್ನ ಅಧೀನ ತರಬೇತಿಯಲ್ಲಿರುವ ಎಲ್ಲ ವಿದ್ಯಾರ್ಥಿಗಳ ಜತೆಗೂ ಏಕಪ್ರಕಾರವಾಗಿ ನಡೆದುಕೊಂಡರೆ, ಅವರನ್ನು ನಾಶ ಪಡಿಸುತ್ತಿದ್ದಾನೆ ಎಂದೇ ಅರ್ಥ. ಅವರ ಹೃದಯಗಳೇ ಸತ್ತು ಹೋಗಬಹುದು. ತನ್ನ ತರಬೇತಿಯಲ್ಲಿರುವ ವಿದ್ಯಾರ್ಥಿಗಳ ಪೈಕಿ ಪ್ರತಿಯೋರ್ವನ ಸ್ಥಿತಿ, ಪ್ರಾಯ ಮತ್ತು ಸ್ವಭಾವದ ಪ್ರಕಾರ ಅವರಿಗೆ ದಾರಿ ತೋರಿಸುವ ಮೂಲಕ

ಅವರವರಿಗೆ ಸಾಧ್ಯವಿರುವಷ್ಟೇ ಕೆಲಸವನ್ನು ನೀಡಬೇಕಾದುದು ತರಬೇತುದಾರನಾದ ಅಧ್ಯಾಪಕನ ಕರ್ತವ್ಯವಾಗಿದೆ.

ಹ. ಮುಆವಿಯಾರಿಗೆ(ರ) ಅಹ್‌ನಫ್ ಬಿನ್ ಕೈಸ್‌ರ ಉಪದೇಶ

• ಮಕ್ಕಳು ನಮ್ಮ ಆಧಾರ ಸ್ಥಂಭವಾಗಿದ್ದಾರೆ. ಅವರಿಂದ ನಮ್ಮ ಬೆನ್ನು ಆಧಾರ ಕಂಡು ಕೊಳ್ಳುತ್ತದೆ. ಅವರು ನಮ್ಮ ಹೃದಯಗಳ ಪ್ರೀತಿಯ ಫಲವಾಗಿದ್ದಾರೆ. ಅವರು ನಮ್ಮ ಕಣ್ಣನಗಳ ತಂಪಾಗಿದ್ದಾರೆ. ಅವರಿಗಾಗಿಯೇ ನಾವು ವೈರಿಗಳ ಮೇಲೆ ಆಕ್ರಮಣ ನಡೆಸುತ್ತೇವೆ. ಅವರೇ ನಮ್ಮ ಬಳಿಕ ನಮ್ಮ ಸ್ಥಾನವನ್ನು ತುಂಬುತ್ತಾರೆ. ಆದ್ದರಿಂದ ನೀನು ಮಕ್ಕಳ ಪಾಲಿಗೆ ನಯವಾದ ಮೆತ್ತಗಿನ ಭೂಮಿಯಾಗು. ಅವರು ನಿನ್ನಿಂದ ಏನಾದರೂ ಬಯಸಿದರೆ ಅವರಿಗೆ ನೀಡು, ಅವರು ನಿನ್ನ ಸಂತೋಷವನ್ನು ಬಯಸಿದರೆ ನೀನು ಸಂತೋಷಪಡು, ಅವರನ್ನು ನಿನ್ನ ಪ್ರೀತಿ ಯಿಂದ ವಂಚಿತಗೊಳಿಸಬೇಡ, ಅನ್ಯಥಾ ಅವರು ನಿನ್ನ ಸಾಮಿಪ್ಯದಿಂದ ರೊಚ್ಚಿಗೇಳುವರು, ನಿನ್ನ ಜೀವನದಿಂದ ಕಿರಿಕಿರಿ ಅನುಭವಿಸುವರು ಮತ್ತು ನಿನ್ನ ಮರಣವನ್ನು ಬಯಸುವರು.

ಇಬ್ನು ಖಲ್ದೂನ್

• ವಿದ್ಯಾರ್ಜನೆಯ ಸಮಯ ವಿದ್ಯಾರ್ಥಿಗಳಿಗೆ ಹೊಡೆಯುವುದು, ಬಡಿಯುವುದು ಒಳ್ಳೆಯದಲ್ಲ, ವಿಶೇಷವಾಗಿ ಸಣ್ಣ ಪ್ರಾಯದ ಮಕ್ಕಳ ಮೇಲೆ ರೇಗಲೇ ಬಾರದು. ಮಕ್ಕಳ ಮೇಲೆ ಕಾಠಿಣ್ಯ ತೋರುವವನು, ಅವರ ಹೃದಯಗಳಿಂದ ಸಂತೋಷವನ್ನು ಕಿತ್ತುಕೊಳ್ಳುವನು. ಅವರನ್ನು ನಿರುಪಯೋಗಿಯನ್ನಾಗಿ ಮಾಡುವನು. ಅವರನ್ನು ಸುಳ್ಳುಗಾರರನ್ನಾಗಿಯೂ ಮಾರ್ಪಡಿಸುವನು. (ಅಂದರೆ ಅವರ ಮನಸ್ಸುಗಳಲ್ಲಿ ಕಾಪಟ್ಯದ ಕ್ರಿಮಿಗಳು ಬೆಳೆಯತೊಡಗುವವು). ಅವರು ತಮ್ಮ ಅಂತರ್ಯದಲ್ಲಿ ಇಲ್ಲದ ವಿಷಯಗಳನ್ನು ಬಹಿರಂಗದಲ್ಲಿ ವ್ಯಕ್ತಪಡಿಸುವರು. ಏಕೆಂದರೆ ಆ ರೀತಿ ಮಾಡದೆ ಇದ್ದರೆ, ಅಧ್ಯಾಪಕನ 'ಕ್ರೋಧ'ಕ್ಕೆ ತುತ್ತಾಗಬೇಕಾಗುತ್ತದೆ. ಹೀಗೆ ಅವರು ಮೋಸವನ್ನು ಅಭ್ಯಾಸ ಮಾಡಿಕೊಳ್ಳ ತೊಡಗುವರು. ಏಕೆಂದರೆ ಅದರ ಹೊರತು ಯಾವುದೇ ಕೆಲಸ ನಡೆಯದು. ಕೊನೆಗೆ ಈ ಅಭ್ಯಾಸ, ಗುಣಗಳು ಅವರ ಚಾರಿತ್ರ್ಯದ ಅಂಗವಾಗಿ ಮಾರ್ಪಡುತ್ತದೆ.

• ಆದ್ದರಿಂದ ಅಧ್ಯಾಪಕನು ತನ್ನ ವಿದ್ಯಾರ್ಥಿಗಳ ಮೇಲೆ ಮತ್ತು ತಂದೆಯು ತನ್ನ ಮಕ್ಕಳ ಮೇಲೆ ಕ್ರೋಧವನ್ನು ಪ್ರಕಟಿಸಬಾರದು ಹಾಗೂ ಬಲವಂತದಿಂದ ತರಬೇತುಗೊಳಿಸಲೂ ಪ್ರಯತ್ನಿಸಬಾರದು.

ಮೌಲಾನಾ ಅಶ್ರಫ್ ಅಲೀ ಥಾನವೀ(ರ)

• ಇಂದು ಧಾರ್ಮಿಕ ವಿದ್ಯಾಲಯಗಳ ಅಸ್ತಿತ್ವವು ಮುಸ್ಲಿಮರ ಮಟ್ಟಿಗೆ ಒಂದು ದೊಡ್ಡ ಅನುಗ್ರಹವಾಗಿದೆ ಮತ್ತು ಜಗತ್ತಿನಲ್ಲಿ ಇಸ್ಲಾಮಿನ ಅಭ್ಯುದಯವು ಈ

ಮದ್ರಸಗಳಿಂದಲೇ ಸಾಧ್ಯ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಅದರ ಜತೆಗೇ ಈ ಮದ್ರಸಗಳಲ್ಲಿ ಕೆಲವು ಸುಧಾರಣಾರ್ಹ ಅಂಶಗಳೂ ಕಾಣಸಿಗುತ್ತವೆ. ಒಂದು ವೇಳೆ ಅವುಗಳ ಸುಧಾರಣೆ ಆಗದಿದ್ದರೆ, ವಿದ್ಯಾವಂತರ ಸಮೂಹವು ಟೀಕೆಗೆ ಗುರಿಯಾಗಬೇಕಾಗುತ್ತದೆ ಮತ್ತು ಮದ್ರಸಾ ಸ್ಥಾಪನೆಯ ಉದ್ದೇಶವಾಗಿರುವ 'ಜ್ಞಾನವಂತೆ ಕರ್ಮವೆಸಗುವ' ಕಲ್ಪನೆಯೂ ದುರ್ಬಲವಾಗ ತೊಡಗುತ್ತದೆ. ಜನರು ಧಾರ್ಮಿಕ ವಿದ್ಯಾಭ್ಯಾಸವನ್ನೇ ಭಯಪಡುವ ಅಥವಾ ದ್ವೇಷಿಸುವ ಹಂತಕ್ಕೆ ತಲುಪುವ ಸಾಧ್ಯತೆಯಿದೆ. ಈ ಪ್ರಕಾರ, ಈ ವಿದ್ಯಾವಂತ ಸಮೂಹವು 'ಯಸುದ್ದೂನ ಅನ್ ಸಬೀಲಿಲ್ಲಾಹ್' (ದೇವ ಮಾರ್ಗದಿಂದ ತಡೆಯುವವರು) ಆಗಿ ಪರಿಗಣಿಸಲ್ಪಡುವರೋ ಎಂಬ ಸಂಶಯ ಕಾಡುತ್ತದೆ.

- ಇದುವರೆಗಿನ ಶಿಕ್ಷಣ ವಿಧಾನ ಯಾವ ರೀತಿ ಇದೆಯೆಂದರೆ, ಮೊದಲು ವಿದ್ಯಾರ್ಥಿಯು ಒಂದು ವಾಕ್ಯವನ್ನು ಓದುತ್ತಾನೆ. ನಂತರ ಅಧ್ಯಾಪಕನು ಅದರ ಅರ್ಥವನ್ನು ಹೇಳಿಕೊಡುತ್ತಾನೆ. ಯಾರಿಗಾದರೂ ಸಂಶಯವುಂಟಾದರೆ, ಅದನ್ನು ವ್ಯಕ್ತಪಡಿಸುತ್ತಾನೆ. ಇಲ್ಲದಿದ್ದರೆ ಓದು ಮುಂದುವರಿಸಲಾಗುತ್ತದೆ. ಈ ವಿಧಾನವು ಕಲಿಕೆ ಆರಂಭಿಸುವವರಿಗೆ ತೀರಾ ನಿಷ್ಪ್ರಯೋಜಕವಾಗಿದೆ. ಇದರಲ್ಲಿ ಸುಧಾರಣೆಯ ಅಗತ್ಯವಿದೆ. ಅದು ಹೇಗೆಂದರೆ, ಸ್ವಯಂ ವಿದ್ಯಾರ್ಥಿಗಳ ಸಾಮರ್ಥ್ಯದಿಂದಲೇ ಕೆಲಸ ಪಡೆಯಬೇಕು. ಅನಗತ್ಯವಾಗಿ ಅವರಿಗೆ ಸಹಾಯ ಮಾಡಬಾರದು. ಸ್ವಯಂ ಅವರಿಂದಲೇ ಅರ್ಥವನ್ನು ಓದಿಸಬೇಕು. ಹೀಗೆ ಎಲ್ಲವನ್ನೂ ನಿರಂತರ ಓದಿಸುವ ಮೂಲಕ ಅಭ್ಯಾಸ ಮಾಡಿಸಬೇಕು.

ಮೌಲಾನಾ ಸಯ್ಯದ್ ಅಬುಲ್ ಆಲಾ ಮೌದೂದಿ

- ನಾಯಕತ್ವವು ಸದಾ ವಿದ್ಯೆಯನ್ನೇ ಅವಲಂಬಿಸಿರುತ್ತದೆ. ಮಾನವನಿಗೆ ಒಂದು ಜನಾಂಗವೆಂಬ ನೆಲೆಯಲ್ಲಿ ಜಗತ್ತಿನ ಪ್ರತಿನಿಧಿತ್ವ ದೊರೆತಿದೆ. ಅವನಿಗೆ ಶ್ರವಣಶಕ್ತಿ, ದೃಕ್‌ಶಕ್ತಿ ಮತ್ತು ಬುದ್ಧಿಶಕ್ತಿಗಳನ್ನು ನೀಡಲಾಗಿದ್ದು, ಇವು ಇತರ ಜೀವಿಗಳಲ್ಲಿ ನಾಸ್ತಿ ಅಥವಾ ಸೀಮಿತವಾಗಿದೆಯೆನ್ನಬಹುದು. ಹಾಗಾಗಿ ಮಾನವನು ಇತರ ಜೀವಿಗಳ ಮೇಲೆ ಸೃಷ್ಟಿಕರ್ತನ ಪ್ರತಿನಿಧಿಯ ಸ್ಥಾನ ಪಡೆದಿದ್ದಾನೆ. ಇನ್ನು ಈ ಜನಾಂಗದ ಪೈಕಿ ವಿದ್ಯೆ-ಗುಣದಲ್ಲಿ ಇತರ ಕೂಟಗಳಿಗಿಂತ ಮುಂದುವರಿದಿರುವ ಕೂಟವು ಉಳಿದ ಕೂಟಗಳ ಪ್ರತಿನಿಧಿಯಾಗುತ್ತದೆ. ಮಾನವನು ಇತರ ಜೀವಿಗಳಿಗೆ ಪ್ರತಿನಿಧಿಯಾಗಿರುವಂತೆ.

- ಶ್ರವಣಶಕ್ತಿ ಎಂದರೆ, ಇತರರಿಂದ ದೊರೆತ ಮಾಹಿತಿಗಳನ್ನು ಸ್ವೀಕರಿಸುವುದಾಗಿದೆ. ದೃಕ್‌ಶಕ್ತಿ ಅಂದರೆ ಸ್ವತಃ ಅನುಭವಿಸಿ/ವೀಕ್ಷಿಸಿ ವಾಸ್ತವಿಕಾಂಶಗಳನ್ನು ಅರಿಯುವುದಾಗಿದೆ. ಇನ್ನು ಬುದ್ಧಿಶಕ್ತಿ ಎಂದರೆ ಈ ಎರಡೂ ಮಾಧ್ಯಮಗಳಿಂದ ಗಳಿಸಿರುವ ಮಾಹಿತಿಗಳನ್ನು ಒಟ್ಟುಗೂಡಿಸಿ ಒಂದು ತೀರ್ಮಾನವನ್ನು ಪಡೆದುಕೊಳ್ಳುವುದಾಗಿದೆ. ಈ ಮೂರು

ವಿಷಯಗಳು ಸೇರಿಯೇ ಮಾನವನನ್ನು ಪ್ರತಿನಿಧಿತ್ವಕ್ಕೆ ಅರ್ಹಗೊಳಿಸುವ ಜ್ಞಾನ ಹುಟ್ಟುತ್ತದೆ. ಈ ಮೂರು ಶಕ್ತಿಗಳಿಂದ ಕಡಿಮೆ ಕೆಲಸ ಪಡೆಯುವ ಮಾನವರು ಹಿಂದುಳಿಯುತ್ತಾರೆ, ಪರಾಜಿತರಾಗುತ್ತಾರೆ. ಅವರು ಇತರರಿಗೆ ಅಧೀನ ಮತ್ತು ವಿಧೇಯರಾಗಿ ಇರಬೇಕಾಗಿ ಬರುತ್ತದೆ. ಅವರ ಕಾರ್ಯವು ಹಿಂದೆ ನಡೆಯುವುದಾಗುತ್ತದೆ. ತದ್ವಿರುದ್ಧವಾಗಿ, ಈ ಮೂರು ಶಕ್ತಿಗಳಿಂದ ಹೆಚ್ಚು ಕೆಲಸ ಪಡೆಯುವವರು ಉನ್ನತರೂ ವಿಜಯಿಗಳೂ ಆಗುತ್ತಾರೆ; ಸರದಾರ ಮತ್ತು ವಿಧಾಯಕರಾಗುತ್ತಾರೆ. ಮಾರ್ಗದರ್ಶನ ಮತ್ತು ಅಧಿಕಾರ ಬಲವು ಅವರ ಕೈಯಲ್ಲಿರುತ್ತದೆ.

- ಚಿಂತನೆಯ ರಂಗದಲ್ಲಿ ನಾಯಕತ್ವ ವಹಿಸಿರುವ ಕೂಟವು ವಿಶ್ವದ ಪ್ರಾಕೃತಿಕ ಶಕ್ತಿಗಳನ್ನು ತನ್ನ ವಿದ್ಯಾಶಕ್ತಿಯ ಅಧೀನಗೊಳಿಸಿ ಅದರಿಂದ ಕೆಲಸ ಪಡೆಯುತ್ತದೆ. ಆ ಕೂಟದ ನಾಯಕತ್ವವು ಕೇವಲ ಚಿಂತನೆಯ ಸ್ಥಿತಿಗಷ್ಟೇ ಸೀಮಿತವಾಗಿರುವುದಿಲ್ಲ, ಬದಲಾಗಿ ಜೀವನದ ಎಲ್ಲ ರಂಗಗಳನ್ನೂ ಆವರಿಸುತ್ತದೆ. ಭೂಮಿಯಲ್ಲಿ ಅದಕ್ಕೆ ಪ್ರಾಬಲ್ಯವು ದೊರೆಯುತ್ತದೆ. ಜೀವನಾಧಾರದ ಕೀಲಿಕೈಯು ಅದರ ವಶದಲ್ಲಿರುತ್ತದೆ. ಆಡಳಿತಾಧಿಕಾರವು ಲಭಿಸುತ್ತದೆ. ಹೀಗೆ ಈ ಕೂಟವು ತನ್ನ ಮನಃಸ್ಥಿತಿ ಮತ್ತು ದೃಷ್ಟಿಕೋನದ ಪ್ರಕಾರ ನಡೆಸಿದಂತೆಯೇ ಮಾನವ ಜೀವನದ ಎಲ್ಲ ವ್ಯವಹಾರಗಳೂ ನಡೆಯುತ್ತವೆ.
- ಕ್ರಾಂತಿಕಾರಿ ನಾಯಕತ್ವಕ್ಕೆ ಕ್ರಾಂತಿಕಾರಿ ಶಿಕ್ಷಣವು ಅನಿವಾರ್ಯವಾಗಿದೆ.
- ದೇವನನ್ನು ಅರಿಯದ ನಾಯಕತ್ವದಡಿ ಇರುತ್ತಾ ದೇವನನ್ನು ಅರಿಯುವ ಮತ್ತು ದೇವಾರಾಧಕ ಪದ್ಧತಿಯು ಜೀವಂತವಿರಲಾರದು. ಹಾಗಾಗಿ ಈ ಪದ್ಧತಿಯಲ್ಲಿ ವಿಶ್ವಾಸವನ್ನಿರಿಸುವವರು ಪ್ರಸ್ತುತ ನಾಯಕತ್ವವನ್ನು ಅಳಿಸಿ ಹಾಕಿ, ಅದರ ಜಾಗದಲ್ಲಿ ದೇವನೊಲುಮೆಯ ನಾಯಕತ್ವವನ್ನು ಸ್ಥಾಪಿಸುವುದು ವಿಶ್ವಾಸಿಗಳ ವಿಶ್ವಾಸದ ಬೇಡಿಕೆಯಾಗಿದೆ.
- ಕೇವಲ ಹಳೆಯ ಪ್ರವಚನ ಶಿಕ್ಷಣಕ್ಕೆ ಸೀಮಿತವಾಗಿರುವ ವ್ಯವಸ್ಥೆಯಲ್ಲಿ ನಿಮ್ಮನ್ನು ದೊಡ್ಡ ಕ್ರಾಂತಿ ತರಬಲ್ಲ ನಾಯಕರಾಗಿ ಬೆಳೆಸುವ ಶಕ್ತಿ ಇಲ್ಲ.
- ಇಸ್ಲಾಮೀ ಶಿಕ್ಷಣದ ಜತೆ ಹೊಸ ಶಿಕ್ಷಣವನ್ನೂ ಸೇರಿಸುವಂತಹ ಶಿಕ್ಷಣ ಸುಧಾರಣಾ ನೀತಿಯು ಕೂಡ ನಿಮ್ಮನ್ನು ನಾಯಕತ್ವದಲ್ಲಿ ಕ್ರಾಂತಿ ತರಲು ತಯಾರುಗೊಳಿಸಲಾರದು. ಏಕೆಂದರೆ ನಿಮಗೆ ಕ್ರೋಢೀಕೃತ ರೂಪದಲ್ಲಿ ದೊರೆಯುವ ತತ್ವಶಾಸ್ತ್ರ, ವಿಜ್ಞಾನ, ಇತಿಹಾಸ, ರಾಜಕೀಯ, ಅರ್ಥಶಾಸ್ತ್ರ ಮತ್ತಿತರ ಪಠ್ಯವಿಷಯಗಳೆಲ್ಲವೂ ದೇವ ವಿರೋಧಿಗಳ ಚಿಂತನೆ-ಸಂಶೋಧನೆಗಳ ಫಲಗಳಾಗಿವೆ. ಅವುಗಳ ಕ್ರೋಢೀಕರಣದಲ್ಲಿ ಆ ಜನರ ದೃಷ್ಟಿಕೋನವು ಯಾವ ರೀತಿ ಸಮ್ಮಿಳಿತವಾಗಿದೆಯೆಂದರೆ, ವಾಸ್ತವಿಕಾಂಶಗಳನ್ನು ಊಹೆಗಳು, ಪಕ್ಷಪಾತ, ಸ್ವಾರ್ಥ ಹಿತಾಸಕ್ತಿಗಳನ್ನು ದೇವಭಕ್ತ ದೃಷ್ಟಿಕೋನದಿಂದ ಸೋಸಿ ತೆಗೆಯಲು ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಸ್ವತಃ ಅಧ್ಯಾಪಕರಿಗೂ ಸಾಧ್ಯವಿಲ್ಲದ ಮಾತು.

ಉದ್ದೇಶಿತ ಶಿಕ್ಷಣ ವ್ಯವಸ್ಥೆಯ ವಿಶೇಷತೆಗಳು

• ಧಾರ್ಮಿಕ ಮತ್ತು ಲೌಕಿಕ ವಿದ್ಯೆಯ ಪ್ರತ್ಯೇಕತೆಯನ್ನು ಅಳಿಸಿ, ಅವೆರಡನ್ನೂ ಒಂದುಗೂಡಿಸಬೇಕಾಗಿದೆ.

• ಧರ್ಮ ಬೇರೆ, ಲೋಕ ಬೇರೆ ಎಂಬ ಕಲ್ಪನೆಯಿಂದಾಗಿಯೇ ವಿದ್ಯೆಯನ್ನು ಧಾರ್ಮಿ ಮತ್ತು ಲೌಕಿಕವೆಂದು ಎರಡು ಬೇರೆ ಬೇರೆ ವಿಧಗಳಾಗಿ ವಿಂಗಡಿಸಲಾಗಿದೆ. ಈ ಕಲ್ಪನೆಯೇ ಮೂಲಭೂತವಾಗಿ ಅನಿಸ್ಲಾಮಿಕವಾಗಿದೆ. ಇಸ್ಲಾಮ್ ಯಾವುದನ್ನು ದೀನ್ ಎನ್ನುತ್ತದೋ ಅದು ಲೋಕಕ್ಕಿಂತ ಭಿನ್ನವೇನಲ್ಲ, ಬದಲಾಗಿ ಲೋಕವನ್ನು ಅಲ್ಲಾಹನ ಸಾಮ್ರಾಜ್ಯವೆಂಬ ದೃಷ್ಟಿಯಲ್ಲಿ ನೋಡುವುದು, ತನ್ನನ್ನು ಅಲ್ಲಾಹನ ಪ್ರಜೆ ಎಂದು ಭಾವಿಸುವುದು ಮತ್ತು ಲೌಕಿಕ ಜೀವನದಲ್ಲಿ ಅಲ್ಲಾಹನ ಸಂಪ್ರೀತಿ ಹಾಗೂ ಅವನ ಮಾರ್ಗದರ್ಶನದಂತೆ ಬಾಳುವುದೇ ದೀನ್ ಆಗಿದೆ. ಹಾಗಾಗಿ ಎಲ್ಲ ಲೌಕಿಕ ವಿದ್ಯೆಗಳನ್ನೂ ಧಾರ್ಮಿಕಗೊಳಿಸುವುದೇ ಈ ಧಾರ್ಮಿಕ ಕಲ್ಪನೆಯ ಬೇಡಿಕೆಯಾಗಿದೆ.

• ಆರಂಭಿಕ ಹಂತದಲ್ಲಿಯಂತೂ ಇತರ ದೃಷ್ಟಿಕೋನಗಳು ವಿದ್ಯಾರ್ಥಿಗಳ ಮುಂದ ಬರಲೇ ಬಾರದು. ಆನಂತರದ ಹಂತಗಳಲ್ಲಿ ಮಾಹಿತಿಗಳ ಕ್ರಮಬದ್ಧತೆ ಮತ್ತು ವಾಸ್ತವಿಕಾಂಶಗಳ ರೂಪುರೇಷೆ ಹಾಗೂ ಘಟನೆಗಳ ವಿವರಣೆಯನ್ನು ಸಂಪೂರ್ಣ ಇಸ್ಲಾಮೀ ದೃಷ್ಟಿಕೋನದಲ್ಲಿ ನೀಡಬೇಕು. ಆದರೆ ಅದಕ್ಕೆ ಭಿನ್ನವಾಗಿರುವ ಎಲ್ಲ ದೃಷ್ಟಿಕೋನಗಳನ್ನು ವಿಮರ್ಶಾತ್ಮಕವಾಗಿ ಮಕ್ಕಳ ಮುಂದಿರಿಸಬೇಕು ಮತ್ತು ಅವುಗಳು ಪಥಭ್ರಷ್ಟರು ರಚಿಸಿರುವ ಕೃತಿಗಳೆಂಬುದನ್ನು ಮನವರಿಕೆ ಮಾಡಿಸಿ ಕೊಡಬೇಕು.

• ಪ್ರತಿಯೋರ್ವ ವಿದ್ಯಾರ್ಥಿಯನ್ನು ವಿದ್ಯೆಯ ಸಮಗ್ರತೆಯನ್ನಾಗಿ ಮಾಡುವ ಮತ್ತು ವಿದ್ಯಾರ್ಜನೆ ಪೂರ್ಣಗೊಂಡ ಮೇಲೆ ಪ್ರತಿಯೋರ್ವನನ್ನೂ 'ಮೌಲಾನಾ' ಹಾಗೂ ಸಕಲ ಸಮಸ್ಯೆಗಳಿಗೆ ಫತ್ವಾ ನೀಡುವಷ್ಟು ಸಮರ್ಥನನ್ನಾಗಿ ಮಾಡುವ ಪ್ರಚಲಿತ ವಿಧಾನವನ್ನು ಕೈಬಿಡಬೇಕು. ಅದರ ಜಾಗದಲ್ಲಿ, ವರ್ಷಗಳ ಅನುಭವ/ಪ್ರಯೋಗದಿಂದ ಪ್ರಯೋಜನಕಾರಿಯೆಂದು ಕಂಡುಕೊಂಡು ರೂಪಿಸಲ್ಪಟ್ಟ ವಿಶೇಷ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಮಾನವನ ಜ್ಞಾನವು ಇಂದು ಎಷ್ಟು ಪ್ರಗತಿ ಹೊಂದಿದೆ ಮತ್ತು ಎಷ್ಟೆಲ್ಲ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆಯೆಂದರೆ, ಒಬ್ಬ ವ್ಯಕ್ತಿಯು ಅವೆಲ್ಲವುಗಳನ್ನು ಕಲಿಯುವುದು ಅಸಾಧ್ಯವಾಗಿ ಬಿಟ್ಟಿದೆ. ಒಂದು ವೇಳೆ ಆ ಎಲ್ಲ ವಿದ್ಯೆಗಳ ಸಾಮಾನ್ಯವಾದ ಅರಿವನ್ನು ನೀಡಿದರೂ ಅವನು ಯಾವುದೇ ವಿದ್ಯೆಯಲ್ಲಿ ಪರಿಪೂರ್ಣನಾಗಲಾರನು. ಅದಕ್ಕೆ ಬದಲಾಗಿ ಮೊದಲ ಎಂಟು-ಹತ್ತು ವರ್ಷಗಳಲ್ಲಿ, ಒಬ್ಬ ವಿದ್ಯಾರ್ಥಿಗೆ ಜಗತ್ತು ಹಾಗೂ ಮಾನವ ಜೀವನಕ್ಕೆ ಸಂಬಂಧಿಸಿ ಕನಿಷ್ಠ ಎಷ್ಟು ಜ್ಞಾನ ದೊರೆಯಬೇಕೋ ಅಷ್ಟನ್ನು ಕೇವಲ ಇಸ್ಲಾಮೀ ದೃಷ್ಟಿಕೋನದಂತೆ ದೊರಕಿಸಿ ಕೊಡುವ ವ್ಯವಸ್ಥೆಯಾಗಬೇಕು. ಅವರ ಮನಸ್ಸಿನಲ್ಲಿ ವಿಶ್ವದ

ಬಗ್ಗೆ ಓರ್ವ ಮುಸ್ಲಿಮನಲ್ಲಿರಬಹುದಾದ ಕಲ್ಪನೆಯನ್ನು ಬಿತ್ತಬೇಕು. ಮುಸ್ಲಿಮನ ಜೀವನದಲ್ಲಿ ಇರಬೇಕಾದಂತಹ ಜೀವನ ಪದ್ಧತಿಯನ್ನು ಕಲಿಸಿಕೊಡಬೇಕು. ಕರ್ಮರಂಗದಲ್ಲಿ ಒಬ್ಬ ವ್ಯಕ್ತಿಗೆ ಅಗತ್ಯವಿರುವಷ್ಟು ಮಾಹಿತಿ ದೊರೆಯುವಂತೆ ನೋಡಿಕೊಳ್ಳಬೇಕು. ಆ ಎಲ್ಲ ವಿಷಯಗಳನ್ನು ಅವರು ಓರ್ವ ಮುಸ್ಲಿಮನಂತೆ ಪರಿಶೀಲಿಸುವವರಾಗಬೇಕು. ಅವರು ತಮ್ಮ ಮಾತೃಭಾಷೆಯನ್ನೂ ಕಲಿಯುವಂತಾಗಬೇಕು. ಮುಂದೆ ಹೆಚ್ಚಿನ ಅಧ್ಯಯನ ನಡೆಸುವಾಗ ಸಹಾಯಕವಾಗುವಷ್ಟು ಅರಬಿ ಭಾಷೆಯನ್ನೂ ಕಲಿಸಿಕೊಡಬೇಕು. ಒಂದು ಯುರೋಪಿಯನ್ ಭಾಷೆಯಲ್ಲಿಯೂ ಹಿಡಿತ ಉಂಟಾಗುವಷ್ಟು ಅದನ್ನು ಕಲಿಸಿ ಕೊಡಬೇಕು. ಏಕೆಂದರೆ ಆ ಭಾಷೆಗಳಲ್ಲಿ ಇರಬಹುದಾದ ಜ್ಞಾನ ಭಂಡಾರದಿಂದಲೂ ಪ್ರಯೋಜನ ಪಡೆಯುವಂತಾಗಬೇಕು. ಆ ಬಳಿಕ ವಿಶೇಷ ಶಿಕ್ಷಣದ ಪ್ರತ್ಯೇಕ ಕೋರ್ಸ್‌ಗಳನ್ನು ಕಲಿಸುವ ವ್ಯವಸ್ಥೆಯಾಗಬೇಕು. ಆ ಪೈಕಿ ಯಾವುದಾದರೂ ಒಂದು ವಿಷಯದಲ್ಲಿ ಆರೇಳು ವರ್ಷಗಳ ಸಂಶೋಧನಾತ್ಮಕ ಅಧ್ಯಯನ/ತರಬೇತಿ ಪಡೆದು, ಓರ್ವ ವಿದ್ಯಾರ್ಥಿಯು ಆಯಾ ಪ್ರಕಾರದಲ್ಲಿ ತಜ್ಞನಾಗಿ ಮೂಡಿ ಬರುವಂತಾಗಬೇಕು.

- ಈ ಹೊಸ ವ್ಯವಸ್ಥೆಯಲ್ಲಿ, ಇಂದು ಭಾರತದಲ್ಲಿ ನೀಡಲಾಗುವಂತಹ ಉದ್ದೇಶರಹಿತ ಶಿಕ್ಷಣ ಇರಲಾರದು. ಬದಲಾಗಿ ಶಿಕ್ಷಣ ಪಡೆಯುವ ಮತ್ತು ಶಿಕ್ಷಣ ನೀಡುವ ಈರ್ವರ ಮುಂದೆಯೂ ಒಂದು ನಿರ್ದಿಷ್ಟ ಹಾಗೂ ಸ್ಪಷ್ಟವಾದ ಜೀವನೋದ್ದೇಶ ಮತ್ತು ಪರಿಪೂರ್ಣ ಪರಿಶ್ರಮವು ಕಾರ್ಯಾಚರಿಸಬೇಕು. ಅಂದರೆ, ಅವರೆಲ್ಲರೂ ದೇವಾರಾಧನೆಯ ಪದ್ಧತಿಯ ನಾಯಕತ್ವವನ್ನು ಜಗತ್ತಿನಲ್ಲಿ ಸ್ಥಾಪಿಸುವುದಕ್ಕೆ ಪರಿಶ್ರಮ ಪಡಬೇಕಾಗಿದೆ. ಮಾನವ ದೇಹದ ಪ್ರತಿಯೊಂದು ನರ ಮತ್ತು ಪ್ರತಿಯೊಂದು ಕ್ರಿಯೆಯಲ್ಲಿಯೂ ಅವನ ಆತ್ಮವು ಕಾರ್ಯಾಚರಿಸುವ ರೀತಿಯಲ್ಲಿ ಈ ಉದ್ದೇಶವು ಶಿಕ್ಷಣ ವ್ಯವಸ್ಥೆಯ ಎಲ್ಲ ವಿಭಾಗದಲ್ಲೂ ಶ್ರಮಪಡಬೇಕು. ವಿದ್ಯಾರ್ಥಿಗಳ ವೈಯಕ್ತಿಕ ಜೀವನ, ಅವರ ಸಭೆಗಳು, ಅವರ ಆಟ ಮತ್ತು ವಿನೋದ ವಿಹಾರಗಳು, ಅವರ ಶಾಲೆ ಮತ್ತು ಬೋಧನೆ ಹಾಗೂ ಅಧ್ಯಯನ-ಸಂಶೋಧನೆಯ ಎಲ್ಲ ಚಟುವಟಿಕೆಗಳಲ್ಲೂ ಈ ಉದ್ದೇಶವು ಕಾರ್ಯಾಚರಿಸುವಂತಿರಬೇಕು. ಅದರ ಆಧಾರದಲ್ಲಿಯೇ ಅವರ ಚಾರಿತ್ರ್ಯವನ್ನು ರೂಪಿಸಬೇಕು ಹಾಗೂ ಇಡೀ ಪರಿಸರವನ್ನು ಯಾವ ರೀತಿ ಪರಿವರ್ತಿಸಬೇಕೆಂದರೆ, ಪ್ರತಿಯೋರ್ವನನ್ನೂ ದೇವಮಾರ್ಗದಲ್ಲಿ ಹೋರಾಡುವವನಾಗಿ ರೂಪಿಸುವಂತಿರಬೇಕು.